ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿ. ಧಾರವಾಡ

ಹೆಡ್ ಆಫೀಸ್ ಧಾರವಾಡ

★ ನಿಮ್ಮ ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಭರದಿಂದ ಬೆಳೆಯುತ್ತಿರುವ ಈ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!

★ ಮೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಪಂಚುವುದಲ್ಲದೆ, ಹೊಸ ವಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.

★ ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಲಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸಿರುವುದ ರಿಂದ, ಎಲ್ಲರ ನಂಬಿಗೆಗೂ ತಕ್ಕುದಾಗಿದೆ.

★ ಕರ್ನಾಟಕದ ಏಳ್ಗೆಗಾಗಿ ಪಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲೇಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ಮ್ಯಾನೇಜಿಂಗ್ ಡಾಯರೆಕ್ಟರ್
ಎ. ಎಸ್. ಕಿಣಿ

ಮ್ಯಾನೇಜರ್
ಎಮ್. ಗೋವರ್ಧನರಾವ

ಸುದೃಢಕಾಯರೂ ಆನಂದವೃತ್ತಿಯುವರೂ ಆದ ಬಾಲಕರೆಂದರೆಯೇ
ಗೃಹರಾಜ್ಯದಲ್ಲಿಯ ಪ್ರತ್ಯಕ್ಷಪಾದ ಆನಂದ!

ತಮ್ಮ ಮನೆಯಲ್ಲಿಯ ಬಾಲಕನು ಇದಕ್ಕೆ ಅಪವಾದವಾಗಿ ಇದ್ದರೆ,
ಆಯುರ್ವೇದಾಶ್ರಮ ಫಾರ್ಮಸಿ ಲಿಮಿಟೆಡ್ ಅವರ
ಕುಮಾರೀ ಆಸವ ನಂ. ೩
(೭೦ ತೊಲೆಗೆ ಒಂದೂಕಾಲು ರೂಪಾಯಿ)

ಈ ಔಷಧಿಯನ್ನು ಅವನಿಗೆ ಕೊಡಿರಿ. ಕೆಮ್ಮು, ದಮ್ಮು, ಜ್ವರಗಡ್ಡೆ, ಯಕೃತ್ತಿನ ವಿಕಾರ, ಪಾಂಡುರೋಗ— ಮೊದಲಾದ ಬಾಲರೋಗಗಳನ್ನು ಹೊಡೆದುಹಾಕುವುದಲ್ಲದೆ ಮೈಕೈಯ ಶಕ್ತಿಯನ್ನೂ ಹೆಚ್ಚಿಸುವುದು

ಆಯುರ್ವೇದಾಶ್ರಮ ಫಾರ್ಮಸಿ ಲಿಮಿಟೆಡ್, ಅಹಮ್ಮದನಗರ
ಹುಬ್ಬಳ್ಳಿ ಶಾಖೆ—ಸ್ಟೇಶನ್ ರೋಡ್, ಹುಬ್ಬಳ್ಳಿ

Printed by Mr. V. Y. Jathar at the Karnatak Printing Works, Dharwar, and Published for the Proprietc Jayanti Publications, by M. V. Melligatti at the Jayanti Office, Dharwar.—9169-46-1300.

ಶಂಖ

ಸಂಪಾದಕರು :
ಬೆಟಗೇರಿ ಕೃಷ್ಣಶರ್ಮ

ಸಂಪುಟ
೯

ಸಂಚಿಕೆ
೯

ಜನಸಾಮಾನ್ಯರನ್ನೂ ದುರುಷ್ಟರ ಅದರ್ಶದ ಕಡೆಗೆ ತಿರುಗಿಸುವಂತಹ
ವಚನರಚನಾ ಶಕ್ತಿಯುಳ್ಳ ದಿವಂಗತ ಹರ್ಡೇಕರ ಮಂಜಪ್ಪನವರು.

ಪ್ರವರಿ

ಬೆಲೆ

ಮುಖ್ಯ ವಿಷಯಗಳು

ಪ್ರಾರ್ಥನೆ (ಗದ್ಯಕವನ) ೨೫೭
'ಅಂಬಿಕಾತನಯದತ್ತ'

ಕಾರ್ಯವಾಡಬೇಕೆನ್ನುವ ಕನ್ನಡ ತರುಣರು (ಸಂ.) ೨೫೮
ಸಂಪಾದಕರು

ಬೀರಣ್ಣನ ಬಡಿನುಡಿಗಳು (ವ್ಯಂಗ್ಯಚಿಪ್ಪಣಿ) ೨೫೯
'ಗುಡದಪ್ಪ'

ಆಹ್ವಾನ (ಕವನ) ೨೬೦
ಶ್ರೀ ಗಂಗಾಧರ ಚಿತ್ತಾಲ ಬಿ. ಎ. ಮುಂಬಯಿ

ರಾಜಾ (ಸ್ವತಂತ್ರ ಸಣ್ಣ ಕತೆ) ೨೬೧
ಶ್ರೀ. ಕೃಷ್ಣಮೂರ್ತಿ ಪುರಾಣಿಕ ಬಿ.ಎ.,ಬಿ.ಟಿ. ಗೋಕಾಕ

ಎಚ್ಚರಿಯೊ ತಂಡ! (ಕವನ) ೨೬೪
ಶ್ರೀ. ಸಿ. ಕೆ ದೀಕ್ಷಿತ ಕ. ಕಾಲೇಜ್, ಧಾರವಾಡ

ಕನ್ನಡದಲ್ಲಿ ಪೋರ್ಚುಗೀಸ್ ಶಬ್ದಗಳು (ಭಾಷಾವಿಚಾರ) ೨೬೫
ಪ್ರೊ ಎಂ. ಮರಿಯಪ್ಪಭಟ್ಟರು ಎಂ. ಎ. ಮದರಾಸು

ಅನ್ಯವಹಾರ್ಯ ಪಾಕಸ್ಥಾನ (ಲೇಖಾಂಕ ೧) ೨೬೭
ಡಾ ಎಚ್. ಬಿ. ಕೊಣ್ಣೂರ ಎಲ್.ಸಿ ಪಿ ಎಸ್. ಗದಗು

ಕಡಲ ತೀರದಲ್ಲಿ (ಕವನ) ೨೬೮
ಶ್ರೀ. ಎ. ಎನ್. ರಾಮಕೃಷ್ಣ, ಉಡುಪಿ

ಚಾವಡಿ (ಲಲಿತ ಪ್ರಬಂಧ) ೨೬೯
ಶ್ರೀ. ಬಿ. ಜರ್. ವಾಡಪ್ಪ ಎಂ, ಎ. ಧಾರವಾಡ

ಮಿನುಗುವ ತಾರೆಗೆ (ಕವಿತೆ) ೨೭೧
ಶ್ರೀ. ದೇವೆಂದ್ರ 'ಮಿತ್ರಸಂಘ' ತಿಗಡೊಳ್ಳಿ

ಬಯಸಿದ ಬಣ್ಣ (ವಿಜ್ಞಾನಪ್ರಪಂಚ) ೨೭೨
ಶ್ರೀ. ಎನ್. ಎಲ್. ಹಳ್ಳೆಪ್ಪನವರ ಬಿ. ಎಸ್‌ಸಿ. (ಆಗ್ರಿ)

ದೇವನೊಡನೆ (ಒಂದು ಬಾಳನೋಟ) ೨೭೫
ಶ್ರೀ. ಮಿರ್ಜಿ ಅಣ್ಣಾರಾಯರು, ಧಾರವಾಡ

ಮಗು (ಅನುವಾದಿತ ಕಥೆ) ೨೭೬
ಶ್ರೀ. ಅಶ್ವತ್ಥ ಎನ್. ರಾವ್. ಎಂ. ಎ. ಜೆಳ್ಳಕೆರೆ

ಶಾಂತಿನಿಕೇತನದ ಯಾತ್ರೆ (ಪ್ರವಾಸ ಪ್ರಬಂಧ) ೨೭೯
ಶ್ರೀ. ಕೆ. ಎಮ್. ರಾವ್, ಸಿರಸಿ

ಮಹಾನುಭಾವ ಮಂಜಣ್ಣನವರು (ವ್ಯಕ್ತಿ-ವಿಚಾರಪರಿಚಯ) ೨೮೨
ಶ್ರೀ. 'ಹು'

ಪುಸ್ತಕ ವಿಮರ್ಶೆ (ಸೂಚಿಶಿಲ್ಪಶಾಸ್ತ್ರ, ಎ. ಆ. ವಿಶಯ) ೨೮೬
ಸರ್ವಮಂಗಳಾಂಬಾ, ಮತ್ತು ಬಿ. ಪಿ. ಎಸ್. ರಾವ್

ಸಾದರಸ್ವೀಕಾರ (ಕ್ರಮಾಂಕ ೧೧೬ರಿಂದ ಮುಂದೆ) ೨೮೮

ಅಭಿನಂದನೆ :

ವಿದಂಗತ ಹರಡೇಕರ ಮಂಜಪ್ಪನವರ ಸಡಿಯಚ್ಚನ್ನು ಹೊಸತಾಗಿ ಮಾಡಿಸಿ ಸರಕಾರದಲ್ಲಿ ಒದಗಿಸಿಕೊಟ್ಟುದಕ್ಕಾಗಿ, ಧಾರವಾಡದ ಲಿಂಗರಾಜ ಆರ್ಟ್ಸ್ ಪೆಸ್ಪಿಸ ಒಡೆಯರಾದ ಶ್ರೀ. ಜೀಳಗಿ ಬಂಧುಗಳಿಗೆ ಕೃತಜ್ಞತೆಯ ಅಭಿನಂದನೆಗಳು. —ಸಂ ಜಯಂತಿ.

ಮೂರು ಉತ್ಕೃಷ್ಟ ಪುಸ್ತಕಗಳು !

೧. ಸಂಗೀತಾಚಾರ್ಯ— Music Master

ಇನೆಯಭಾಗ: ಲೇಖಕರು ಶ್ರೀ. ಎಸ್. ಎನ್. ರಾವ್, ಹರಿದಾಸ

ಶಾಸ್ತ್ರೋಕ್ತ ಸಂಗೀತಹಾಗೂ ಹಾರ್ಮೋನಿಯಂ ಕಲಿಯುವವರಿಗೆ ಕೈದೀವಿಗೆಯಿದು. ಇದರಲ್ಲಿ ೨೦೦ಕ್ಕಾಗಿಗಳ ಪರಿಚಯವಿದ್ದು, ಪ್ರತಿಯೊಂದು ರಾಗಕ್ಕೆ ಉದಾಹರಣೆಯಾಗಿ ಕನ್ನಡ ಪದಗಳವ ೧೫೦ಪುಟ; ಬೆಲೆ ೧-೪-೦.

೨. ಸಂಸಾರಸುಖ—The Pleasures of live

ಲೇಖಕರು: ಶ್ರೀ. ಹನುಮಂತರಾವ ದೇಶಪಾಂಡೆ

ಜೀವನಕಲೆ, ಸಾಹಿತ್ಯಕಲೆ, ಶಿಕ್ಷಣ-ಸಂಗೀತ-ಚಿತ್ರಕಲೆ, ರಾಜಕೀಯ ಮುಂತಾದ ೨೩ ಸರ್ವೋತ್ಕೃಷ್ಟ ಪ್ರಬಂಧಗಳ ಸಂಗ್ರಹ. ೨೦೦ ಪುಟಗಳು. ಬೆಲೆ ೧-೪-೦.

೩. ವೀರ್ಯವಿಜಯ ಅಥವಾ ಬ್ರಹ್ಮಚರ್ಯವ್ರತ ಬಲಿಷ್ಠ ಸೃಷ್ಟಿ

ಲೇಖಕರು: ಡಾ. ಸ್ವಾಮಿ ಚಂದ್ರಶೇಖರ ಅವರು

ವೈಂಗಿಕ ವಿಜ್ಞಾನದ ಹಲವು ಉಪಯುಕ್ತ ವಿಚಾರಗಳನ್ನು ಒಳಗೊಂಡ ಪುಸ್ತಕ. ೧೧೮ ಪುಟಗಳು. ಬೆಲೆ ೧-೪-೦.

ಈ ಮೂರು ಪುಸ್ತಕಗಳಿಗಾಗಿ ಒಟ್ಟು ೩-೧೨-೦ ಮು. ಆ. ನಿಂದ ಕಳುಹಿಸಿದಲ್ಲಿ, ನಮ್ಮ ವೆಚ್ಚದಿಂದ ರಜಿಸ್ಟರ್ ಮಾಡಿ ಕಳುಹಿಸಲಾಗುವುದು. ವ್ಯಾಪಾರಿಗಳಿಗೆ ಕಮಿಶನ್.

ಬೇರೆ ಯಾವ ಪುಸ್ತಕ ಬೇಕಾದರೂ ನಮಗೆ ಬರೆಯಿರಿ.

ರಾಮಾಶ್ರಯ ಬುಕ್‌ಡಿಪೊ, ಧಾರವಾಡ

ಸಣ್ಣಕತೆಗಳ ಮೇಲಾಟ

ನಿರ್ಣಯವು ಮಾರ್ಚ್ ಸಂಚಿಕೆಯಲ್ಲಿ

☆

೧. ಈ ಸಲದ ಮೇಲಾಟಕ್ಕೆ ಒಟ್ಟು ೧೨೦ ಕತೆಗಳು ಬಂದಿವೆ. ನಾಡಿನ ಎಲ್ಲ ಭಾಗದ ಲೇಖಕರೂ ಹೊರನಾಡಿನ ಕನ್ನಡ ಲೇಖಕರೂ ಉತ್ಸಾಹದಿಂದ ಮೇಲಾಟದಲ್ಲಿ ಭಾಗವಹಿಸಿದ್ದುದು ಸಮಾಧಾನದ ಸಂಗತಿ.

೨. ಸಂಪಾದಕ ಸಮಿತಿಯ ಪ್ರತಿನಿಧಿಗಳ ವಾಚನವು ಮುಗಿದು, ಇನ್ನಿಬ್ಬರು ಹೊರಗಿನ ಪರೀಕ್ಷಕರ ಕಡೆಗೆ ಕತೆಗಳು ಹೋಗಿ ಬರಬೇಕಾಗಿರುವುದರಿಂದ, ಈ ಮೊದಲು ತಿಳುಹಿದಂತೆ ನಿರ್ಣಯವನ್ನು ಫೆಬ್ರುವರಿ ಸಂಚಿಕೆಯಲ್ಲಿ ಪ್ರಕಟಿಸಲಿಕ್ಕೆ ಸಾಧ್ಯವಾಗಲಿಲ್ಲ. ಮಾರ್ಚ್ ಸಂಚಿಕೆಯಲ್ಲಿ ಖಂಡಿತವಾಗಿ ಪ್ರಕಟಿಸಲಾಗುವುದು.

೩. ಜಯಂತಿಯ ಏಪ್ರಿಲ್ (೧೯೪೭) ಸಂಚಿಕೆಯು ಸ್ಪರ್ಧೆಯಲ್ಲಿ ಬಹುಮಾನ ಪಡೆದ ಕತೆಗಳನ್ನೊಳಗೊಂಡು ಕಥಾಸಂಚಿಕೆಯಾಗಿ ಪ್ರಕಟವಾಗುವುದು. ಕಾಗದದ ಅನುಕೂಲತೆ ದೊರೆತರೆ ಆ ಸಂಚಿಕೆಗೆ ಹೆಚ್ಚು ಪುಟಗಳನ್ನು ಕೊಡಬೇಕೆಂದು ಅಪೇಕ್ಷೆಯಿದೆ.

೪. ಕಥಾಸಂಚಿಕೆಯ ಹೆಚ್ಚು ಪ್ರತಿಗಳನ್ನು ಬಯಸುವ ವಿಜಂಟರು, ಮಾರ್ಚ್ ೩೧ನೆಯ ತಾರೀಖಿನೊಳಗಾಗಿ ಕಾರ್ಯಾಲಯಕ್ಕೆ ಬರೆದು ತಿಳುಹಬೇಕು.

ವ್ಯವಸ್ಥಾಪಕ 'ಜಯಂತಿ' ಧಾರವಾಡ

ವಾರ್ಷಿಕ ಚಂದಾ
೪—೪—೦

ಪ್ರತಿತಿಂಗಳ ೧ನೆಯ ತಾರೀಖಿಗೆ
ಪ್ರಕಟವಾಗುವುದು.

ಸಂಪುಟ ೯ | ೧ನೆಯ ಫೆಬ್ರುವರಿ ೧೯೪೭ | ಸಂಚಿಕೆ ೯

ಒಂದು ಪ್ರಾರ್ಥನೆ

'ಅಂಬಿಕಾತನಯ ದತ್ತ'

ಭೂಮಿಯು ಅನಂತ ಸೌಂದರ್ಯಶಾಲಿನಿ;
ಎಲ್ಲವನ್ನೂ ನೋಡುವೆನೆಂಬುದು ನನ್ನಳವೆ?
ಕಾಲವು ಕ್ಷಣಕ್ಷಣಕ್ಕೂ ಸಾಯುತ್ತಿದೆ;
ಅದನ್ನು ನಾನು ತಡೆದು ನಿಲ್ಲಿಸಬಲ್ಲೆನೆ?
ಆಗಬೇಕಾದ ಕಾರ್ಯ ಅನಂತವಾಗಿದೆ;
ಅದನ್ನು ಮಾಡಲು ಬಂದ ಜೀವಿಗಳು ಅನಂತವಾಗಿವೆ.
ನಾನೊಬ್ಬನೆ ಅಲ್ಲ; ನನ್ನ ಜೀವಮಾನದೊಳಗಾಗಿಯೆ
ಎಲ್ಲವೂ ಆಗಬೇಕಾಗಿಲ್ಲ!

ಜೀವ-ಜಗತ್ತುಗಳನ್ನು ತುಂಬಿ ತುಳುಕಿ ಸೂಸುವ
ಒಂದು ಶಕ್ತಿ, ನಾನೆಂದು ಕಾಣುವ ಈ ಪಾತ್ರವನ್ನೂ
ತನ್ನ ಮಹಾನಾಟಕಕ್ಕಾಗಿ ಸಜ್ಜುಗೊಳಿಸಿದೆ.
ಈ ಪಾತ್ರದಿಂದ ಆಗತಕ್ಕಷ್ಟೆ ಕೆಲಸವಾದೀತು.
ಎಲ್ಲ ಕೆಲಸಕ್ಕೂ ನನ್ನನೆ ಎಳೆವುದು ಸೂಕ್ತವಲ್ಲ.
ನೋಡತಕ್ಕಷ್ಟೇ ನೋಡೇನು, ಮಾಡತಕ್ಕಷ್ಟೆಮಾಡೇನು!
ಅಹಂಕಾರದ ಹೆಚ್ಚುಗಾರಿಕೆ ರಸಕ್ಕೆ ಅನುಚಿತ, ವಸ್ತುವಿಗೆ
ಅಧಿಕಪ್ರಸಂಗ.

ಪ್ರೇಕ್ಷಕರ ಜಿಪ್ಪಾಳೆಗಾಗಿ ಪಾತ್ರ ಅಪಾತ್ರಕಾರ್ಯ
ಮಾಡಿಸುವುದು ಒಳ್ಳೆಯ ವಿನೋದವಲ್ಲ.

ಅಪಹಾಸ-ಉಪಹಾಸನು, ಪಾತ್ರವನ್ನೂ ಪ್ರೇಕ್ಷಕರನ್ನೂ
ಇಬ್ಬರನ್ನೂ ಹದಗೆಡಿಸುವುದು.

ಕಾವ್ಯದಂತೆ ಕವಿಯ ಆತ್ಮವೂ ರಸ; ಪ್ರೇಕ್ಷಕರ ಆತ್ಮವೂ
ರಸವೆ; ಆ ರಸದ ಮಾರ್ಗದಿಂದ ನಾವು ಸೂತ್ರಧಾರಶಕ್ತಿಗೆ
ಅಧೀನರಾಗುವ! ಈ ಪರಾಧೀನತೆಯಲ್ಲಿ ಸ್ವಾತಂತ್ರ್ಯವಿದೆ.

ನನ್ನ ಚಿತ್ತಪುರುಷನು ಪರಾಶಕ್ತಿಗೆ ಶಕ್ತನಾಗಿರುವ;
ಪುರುಷೋತ್ತಮನ ಪಾದರೇಣುವಾದರೂ ಆಗಿರುವ.
ಅರಿವಿನ ಆನಂದ ಪಡೆಯಲು, ಆ ಆನಂದದಲ್ಲಿ ನಿಜೆಯಲು,
ನಿರಂತರದಲ್ಲಿ ಉನ್ಮುಖವಾಗಿದೆ, ಸರ್ವತೋಮುಖವಾಗಿದೆ.

ನಿನ್ನ ಬೆಳಕಿನಲ್ಲಿ ನನ್ನನು ಬಚ್ಚುಕಿಸು ತಾಯೇ,
ಓ ಮಹಾ ಮಾತೆ, ಆದಿಶಕ್ತಿ!
ಈ ಮಣ್ಣಿನ ಒಡಲಲ್ಲಿ
ಈ ಗಾಳಿಯ ಎಳೆಯಲ್ಲಿ
ಈ ಮಿಂಚಿನ ಸುಳಿಯಲ್ಲಿ
ನಿನ್ನ ಮಗ ಪೊಂದು ತನ್ನ ಜೀವನವಷ್ಟೇ ಕಣ್ಣಾಗಿ ಮಾಡಿ
ನಿನ್ನನ್ನೇ ನೋಡುತ್ತಿನೆ, ನಿನ್ನನ್ನೇ ಜೇಡುತ್ತಿದೆ:
'ಈ ವಿಕಲಪ್ರಾಣಿಯನ್ನು
ಸಕಲಜೀವಿಯನ್ನಾಗಿ ಮಾಡು' ಎಂದು!

ಹರಿಹರ ತಾ. ೩-೧-೧೯೪೭ (ಮುಂದೆಗು)

ಕಾರ್ಯಮಾಡಬೇಕೆನ್ನುವ ಕನ್ನಡ ತರುಣರು

ಕರ್ನಾಟಕ ಪ್ರಾಂತದ ನಳಿಗೆಯ ದೃಷ್ಟಿಯಿಂದ ವಿವಿಧಮುಖವಾಗಿ ನಮ್ಮಲ್ಲಿ ಕಾರ್ಯಗಳು ನಡೆಯಬೇಕಾಗಿವೆ; ಅದಕ್ಕಾಗಿ ಅನೇಕ ಜನ ಕಾರ್ಯಕರ್ತರೂ ಬೇಕಾಗಿದ್ದಾರೆ. ಭಾರತದ ಸ್ವಾತಂತ್ರ್ಯ ಸಾಧನೆಗಾಗಿ ನಿಮ್ಮ ಪ್ರಾಂತದ ಕಾರ್ಯಕರ್ತರೊಂದಿಗೆ ಜೊತೆಗೂಡಿ ನಿಂತು, ಸ್ವಾತಂತ್ರ್ಯಯುದ್ಧದಲ್ಲಿ ಭಾಗವಹಿಸುವ ಬಲಾಬಂಟರು ನಮಗೆ ಬೇಕು. ಹರಿದು ಹಂಚಿಹೋದ ಕನ್ನಡ ನಾಡನ್ನು—ಭಾರತಕ್ಕೆ ಬಲವನ್ನೊದಗಿಸುವ ಉದ್ದೇಶವಿರಿಸಿಕೊಂಡು—ಒಂದೆ ಪ್ರಾಂತವನ್ನಾಗಿ ಬೆಸೆಯುವ ಕಾರ್ಯದ ಹೊಣೆಯನ್ನು ಹೊರುವ ದೀರತರುಣರು ನಮಗೆ ಬೇಕು. ನಾಡಿನ ಬಹುಸಂಖ್ಯಾಕರಾದ ಹಳ್ಳಿಗರನ್ನು ಆವರಿಸಿರುವ ಅಜ್ಞಾನದ ಕಾರ್ಗತ್ತಲನ್ನು ಕಳೆಯಲು, ಅಲ್ಲಲ್ಲಿ ಜ್ಞಾನದ ದೀವಟಿಗೆ ಹಚ್ಚಿ ಬೆಳಕನ್ನು ಹರಡಿಸುವ ಬೆಳಕಿಗರ ಬಳಗ ನಮಗೆ ಬೇಕು. ನಾಡಿನ ಜನತೆಯ ಕೊರಳನ್ನು ನೆಟ್ಟನಿಂತಿದ್ದ ಬಡತನದ ಭೂತವನ್ನು ಹೊಡೆದೊಡಿಸಲು ಶಕ್ತರಾದ ತರುಣತಾಂತ್ರಿಕರ ದಂಡ ನಮಗೆ ಬೇಕು. ನಾಡಿನಲ್ಲಿ ಆರೋಗ್ಯದ ಅಭಿವೃದ್ಧಿಯಾಗಿಸಿ, ನಾಡಿಗರನ್ನು ದೀರ್ಘಾಯುಗಳನ್ನಾಗಿ ಮಾಡುವ ಕಾರ್ಯ ಕೈಕೊಂಡ ಆಧುನಿಕ ಅಶ್ವಿನಿಕುಮಾರರ ಬಳಗವು ನಮಗೆ ಬೇಕು. ಕೊಳೆ ತೊಳೆವವರು ಬೇಕು; ಕಳೆ ಕೀಳುವವರು ಬೇಕು. ಹೊಲಸು ಕಳೆವವರು ಬೇಕು; ನುಳ್ಳು ಬೇಲಿ ಮುರಿವವರು ಬೇಕು. ಕೈಹಿಡಿದೆಬ್ಬಿಸುವವರು ಬೇಕು; ಕೋಲು ಕೊಟ್ಟು ನಡೆಯಿಸುವವರು ಬೇಕು. ನೆಲೆಯರನ್ನು ಪಡೆವವರು ಬೇಕು; ಹಗೆ-ಹಗಣಿಗರನ್ನು ಜಡಿವವರು ಬೇಕು. ಮಾಡಬೇಕಾದ ಕೆಲಸ ಎಣಿಕೆಯಿರದಷ್ಟಿವೆ; ಅಷ್ಟು ಕೆಲಸಗಳನ್ನೂ ಮಾಡಲಿಕ್ಕೆ, ಎಣಿಕೆಯಿಲ್ಲದಷ್ಟು ಹುರಿಯಾಳುಗಳಿಂದು ನಮಗೆ ಬೇಕಾಗಿದ್ದಾರೆ.

ಇದುವರೆಗೆ ನಮ್ಮ ನಾಡಿದಲ್ಲಿ, ಕೆಲಸಗಾರರೇ ಇಲ್ಲವೆಂಬ ನಿಟ್ಟುಸಿರು ಎಲ್ಲೆಲ್ಲಿಯೂ ಕೇಳಬರುತ್ತಿತ್ತು. ಇಂದಿನ ಯುದ್ಧೋತ್ತರ ಕಾಲದ ಜಾಗೃತಿ, ನಮ್ಮ ಕನ್ನಡ ತರುಣರನ್ನೂ ಕಾರ್ಯೋತ್ಸಾಹಿಗಳನ್ನಾಗಿ ಮಾಡಿದ ಸುಚಿಹ್ನೆಗಳು ಕಂಡುಬರತೊಡಗಿದುದು, ಕನ್ನಡದ ಅಭಿಮಾನಿಗಳಿಗೆಲ್ಲ ಸಮಾಧಾನವನ್ನುಂಟುಮಾಡುವ ಪರಾಕು. ಕಾರ್ಯೋತ್ಸಾಹ ಎಲ್ಲರಿಗೂ ಬೇಕಾಗಿದೆ; ಅದರ ಅದು ಯಶಸ್ವಿಯಾಗಿ ನಾಡಿನ ಉನ್ನತಿಗೆ ಕಾರಣವಾಗಬೇಕಾದರೆ, ಅದಕ್ಕೆ ಸುತ್ತುನೋಟದ ಕಣ್ಣುಗಳ ಅಗತ್ಯವಿದೆ. 'ಮನೆ-ಮಕ್ಕಳ-ಲೋಕ ಒಳಗೆ ತುಂಬಟ್ಟುಕೊಂಡ'ವರ ಕಾರ್ಯೋತ್ಸಾಹದಿಂದ ದೇಶಕ್ಕೆ ಯಾವ ಬಗೆಯ ಪ್ರಯೋಜನವೂ ಇರದು.

ಕಾರ್ಯಮಾಡಬೇಕೆಂದು ಹೊರಡಲಿರುವ ನಮ್ಮ ತರುಣರು, ಮೊದಲು ಆ ಕಾರ್ಯಕರ್ತೃತ್ವಕ್ಕೆ ತಕ್ಕ ಅಧಿಕಾರವನ್ನು ಪಡೆದವರಾಗಿರಬೇಕು. ಕೇವಲ ಮಾನವನ ಮೂಲಭೂತ ಹಕ್ಕುಗಳ ದೃಷ್ಟಿಯಿಂದ ಜನತೆಯೊಂದಿಗೆ ವ್ಯವಹರಿಸುವುದು ಈ ಅಧಿಕಾರದ ಮೊದಲನೆಯ ಲಕ್ಷಣವಾಗಿದೆ. ಸ್ವಾರ್ಥದ ಸಂಪೂರ್ಣವಾದ ಹೋಳಿ ಎರಡನೆಯ ಪ್ರಮುಖ ಲಕ್ಷಣ. ಯಾವುದೊಂದು ರಾಜಕೀಯ ಇಲ್ಲವೆ ಸಾಮಾಜಿಕ ಅಧಿಕಾರಲೋಭವಿಲ್ಲದಿರುವುದು ಮೂರನೆಯ ಲಕ್ಷಣ. ತನ್ನ ಸಾಮರ್ಥ್ಯವನ್ನರಿತು ಕಾರ್ಯದ ಕ್ಷೇತ್ರ-ಕಾಲಗಳನ್ನಾರಿಸುವುದು ನಾಲ್ಕನೆಯ ಲಕ್ಷಣ. ಕಾರ್ಯ ಮಾಡುತ್ತಿರುವಾಗ ಜಾತಿ-ಮತ-ಪಂಥ-ಕುಲ-ಪಂಗಡಗಳ ವರ್ತುಲಗಳಿಂದ ಕಟ್ಟುವಡೆಯದಿರುವುದು ಐದನೆಯ ಲಕ್ಷಣ. ಜನರೆಲ್ಲರ ಪ್ರೀತಿ-ವಿಶ್ವಾಸಗಳನ್ನು ಪಡೆಯುವುದು ಆರನೆಯ ಲಕ್ಷಣ.

ಪ್ರತಿಯೊಬ್ಬ ಕಾರ್ಯಕರ್ತನಿಗೂ ತನ್ನ ಕಾರ್ಯದ ಗುರಿಯ ಸ್ಪಷ್ಟ ಕಲ್ಪನೆಯಿರಬೇಕು. ತನ್ನ ಮಾತು-ಮುಂದುವರಿತಗಳ ಪರಿಣಾಮ ಹೇಗಾಗುತ್ತಿದೆಯೆಂಬುದನ್ನು ಕಾಣಬಲ್ಲ ಸೂಕ್ಷ್ಮವಾದ ಬುದ್ಧಿಬೇಕು. ಇನ್ನೊಬ್ಬರು ಮಾಡುತ್ತಾರೆಂದು ತಾವು ಮಾಡಬೇಕೆನ್ನುವ ಮೇಲಾಟದ ತಾಮಸದೃಷ್ಟಿ ಸಫಲತೆಯನ್ನು ಪಡೆಯದು, ಲೋಕಕಲ್ಯಾಣಕ್ಕೂ ಕಾರಣವೆನಿಸದು.

ಮಹಾತ್ಮಾ ಗಾಂಧಿಯವರಿಗೆ ಲೋಕದ ಶಾಂತಿ-ಪುಷ್ಟಿ-ತುಷ್ಟಿಗಳು ಗುರಿಯಾಗಿವೆ. ಸರ್ವಜನ ಕ್ಷೇಮ ಅವರು ಬಯಸುತಿರುವ ಫಲ. ವೈಷಮ್ಯದಿಂದ ಕೂಡಿದ ಜನತ್ತಿನಲ್ಲಿ, ಪ್ರಕೃತಿಸಹಜವಾದ ಮಾನವನ ಸ್ವಾರ್ಥ ಬಲಿಷ್ಠರಿಂದ ಬಲಹೀನರನ್ನು ತುಳಿಯಲು ಹಚ್ಚಿರುತ್ತದೆ. ದುರುದ್ದೇಶದ ಇಂತಹ ಬಲುಮೆ-ಬಲಾತ್ಕಾರಗಳನ್ನು ಮಹಾತ್ಮಾಜಿಯವರಿಗೆ ಆಗಾಗ ಅಲ್ಲಲ್ಲಿ ವಿರೋಧಿಸಬೇಕಾಗುತ್ತದೆ. ಈ ಬಗೆಯ ವಿರೋಧಕ ಕಾರ್ಯಗಳನ್ನೂ ಸಮಾಜಸುಖ ಪೋಷಕವಾದ ವಿಧಾಯಕ ಕಾರ್ಯಗಳನ್ನೂ ಮಾಡಲು ಅವರು ಕಾರ್ಯಕರ್ತರನ್ನು ಅಪೇಕ್ಷಿಸುವರು. ಅವರೆಲ್ಲ ಸತ್ಯಾಗ್ರಹಿಗಳಾಗಿರಬೇಕೆಂಬುದು ಅವರ ನಿಶ್ಚಿತವಾದ ಅಭಿಪ್ರಾಯ. ಸತ್ಯಾಗ್ರಹಿಯು ಹೇಗಿರಬೇಕೆಂಬುದರ ಬಗೆಗೆ ಅವರು ಅವನ ಜೀವನನಿಯಮಗಳನ್ನೂ ಕಾರ್ಯಸಂಕೇತಗಳನ್ನೂ ಸ್ಪಷ್ಟವಾತುಗಳಿಂದ ಹೇಳಿರುವರು. ಸತ್ಯಾಗ್ರಹಿಯ ಹೊರತು ಇನ್ನೊಬ್ಬನಿಂದ ಸಮಾಜಸೇವೆಯ ಕಾರ್ಯ ಸರಿಯಾಗಿ ನಡೆಯದೆಂಬುದು ಅವರ ಖಂಡಿತವಾದ ಮತ.

ಕನ್ನಡ ನಾಡಿನಲ್ಲಿ ಕೆಲಸಮಾಡಬೇಕೆನ್ನುವ ತರುಣರೂ, ಮಹಾತ್ಮರ ಸತ್ಯಾಗ್ರಹಿಗಳಂತೆ ಅಹಿಂಸಾ-ಸತ್ಯ-ಅಸ್ತೇಯ-ಬ್ರಹ್ಮಚರ್ಯ-ನಿರ್ಭಯಗಳನ್ನು ಸಾಧಿಸಿಕೊಂಡು ಮುಂದುವರಿಯುವುದು ಅತ್ಯಗತ್ಯದ ಸಂಗತಿ. ಕನ್ನಡನಾಡನ್ನು ಅವರು ತಮ್ಮ ಕಾರ್ಯಕ್ಷೇತ್ರವನ್ನಾಗಿರಿಸಿಕೊಳ್ಳುವುದರ ಕಾರಣ, ಇನ್ನೊಂದು ಪ್ರಾಂತದ ದ್ವೇಷ-ತಾಮಸ ಸ್ಪರ್ಧೆ

(೩೦ ನೆಯ ಪುಟ ನೋಡಿರಿ)



ಪ್ರಶ್ನೆಗೆ ಉತ್ತರಗಳು

ಪ್ರಶ್ನೆ :—ಜಿನ್ನಾ ಸಾಹೇಬರು ಇತ್ತೀಚೆಗೆ ಕರಾಚಿಯಲ್ಲೆ ಏಕೆ ಹೆಚ್ಚಾಗಿ ಇರಲು ತೊಡಗಿದ್ದಾರೆ?

ಉತ್ತರ:—ಇದಿ ಹಿಂದುಸ್ತಾನದಲ್ಲಿ ನಿಜವಾದ ಮುಸ್ಲಿಂ ಲೀಗಿನ ಮಂತ್ರಿಮಂಡಳವಿದ್ದುದೆಂದರೆ ಸಿಂಧಪ್ರಾಂತ ಒಂದರಲ್ಲಿ. ಜಿನ್ನಾ ಸಾಹೇಬರು ಬರು ಬಯಸುವ ಸುರಕ್ಷಿತತೆ ಅಲ್ಲಿಯೆ ಸಿಕ್ಕುವುದು ಸಿಮ್ಲಾ ಪರಿಷತ್ತಿನ ಕಾಲದಲ್ಲಿ ಸೀಪ್ ಡ್ರೈವರನಿದ್ದ ಮೋಟಾರಿನಲ್ಲಿ ಕೂಡಲು ಬೆದರಿದವರು, ಇಂದಿನ ಗೊಂದಲದ ಕಾಲದಲ್ಲಿ ಪಿಕ್ಕೆ ಪ್ರಾಂತಗಳಲ್ಲಿರಲು ಮನಸ್ಸು ಮಾಡ್ಯಾರೆ?

* * *

ಪ್ರಶ್ನೆ :—ಸಾಕಿಸ್ತಾನದ ಹೃದಯವಾದ ಸಂಜಾಬದಲ್ಲಿಯೆ ಲೀಗಿನ ಧುರೀಣರ ಬಂಧನವೆ? ಇದೆಂಥ ಆಶ್ಚರ್ಯ?

ಉತ್ತರ :—ಮುಂದೆ ನೋಡೀರ್ರಣ್ಣಾ! ಮುಂದೆ ಕೇಳೀರ್ರಪ್ಪಾ! ಸಾಕಿಸ್ತಾನ ಬೇಡವೇ ಬೇಡವೆಂಬ ಕಂಜಾಬವನ್ನೂ ನೋಡೀರಿ; ಪಾಕಿಸ್ತಾನ ಕೂಡದೇ ಕೂಡದೆನ್ನುವ ಬಂಗಾಲವ ನೋಕನ್ನೂ ಕೇಳೀರಿ! ಮುಸ್ಲಿಂಲೀಗಿನ ದ್ವೇಷದ ಮಾತು ಮುಗಿಲಿಗೆ ಬಿದ್ದು, ಮಾನವತೆಯ ತೋಷದ ಮಾತು ತಲೆಯೆತ್ತಿ ನಿಂತೀತಣ್ಣಾ! ಜಿನ್ನಾ ಸಾಹೇಬರ ಜಗಳದ ನುಡಿಗಳು ಅಡಗಿ ಸೋಗಿ ಅಣ್ಣ-ತಮ್ಮರ ಚೆನ್ನುಡಿಗಳೇ ಹಸೆಯಲ್ಲಿ ಹರಿದಾಡ್ಯಾವಣ್ಣಾ! ನನ್ನ ವೀರಪಸಂತ—ಕೈಬಡಿಗೆಯ ಗಾಂಧಿಯ— ಪೂರ್ವಬಂಗಾಲದ ಕಾರ್ಯ,ಹಾವನ್ನೇ ಹಾರವಾಗಿಸೀತು ಕಾಣಯ್ಯಾ!

* * *

ಪ್ರಶ್ನೆ :—ಮೊನ್ನೆ ಮೊನ್ನೆ ಮೈಸೂರಿನ ಮಹಾರಾಜರು ತಮ್ಮ ಸರಕಾರಕ್ಕೆ ಏನೇನೋ ಆಜ್ಞೆ,ದೇಶವಾಡಿದ್ದಾರಲ್ಲಾ; ಅದರ ಪರಿಣಾಮ ಮೈಸೂರಿನ ಇಂದಿನ ಸರಕಾರದ ವೇಲೆ ಏನಾದರೂ ಆದೀತೆ? ಜನರಿಗೆ ಸ್ವಾತಂತ್ರ್ಯ ಸಿಕ್ಕೀತೆ?

ಉತ್ತರ—ಬ್ರಿಟಿಷರು ನನಗೆ ಇನ್ನೇನನೂ ಕೊಟ್ಟಿಲ್ಲವಾದರೂ 'ಡಿಪ್ಲೊಮ್ಯಾಟಿಕ್' ಆಗಿ ಮಾತನಾಡುವ ವೈಖರಿಯನ್ನು ಕೊಟ್ಟಿದ್ದಾರೆ. ಆಟ್ಲಿ ಸಾಹೇಬರ ಸರಕಾರದಂತಹ ಉದಾರ ಸರಕಾರವೂ ಹಿಂದುಸ್ತಾನದ ಸ್ವಾತಂತ್ರ್ಯದ ಬಗ್ಗೆ ಕೊಟ್ಟ ವಚನದ ಅರ್ಥವನ್ನು ಬೇರೆಮಾಡುವಾಗ, ರಾಮುಸ್ವಾಮಿ ಮುದಲಿಯಾರರಂತರ ಚರ್ಚಿಲ್ರಂ ಬಾಯಿಂದ ಬಿಟ್ಟಿ ಬಿದ್ದ ಬಂಟರು ಏನು ಮಾಡಲಾರರು? ಸ್ವಾತಂತ್ರ್ಯ ಎಂದೂ ಸಿಕ್ಕುವುದಿಲ್ಲ; ಸಿಕ್ಕಿಸಿಕೊಳಬೇಕಾಗುವುದು!

ಪ್ರಶ್ನೆ :—ಬೆಳಗಾಂವಿಯಲ್ಲಿ ವಾಲೀಪಕ್ಷ-ಹೂಲಿ ಪಕ್ಷಗಳು ಕೂಡಿವೆಯಂತೆ; ಇದರ ಪರಿಣಾಮವೇನಾದೀತು?

ಉತ್ತರ:—ಇನ್ನೇನಾಗುವುದು? ಜಿಲ್ಲೆಯ ರಾಜಕಾರ್ಯದಲ್ಲಿ ಇನ್ನೊಮ್ಮೆ ಸಮುದ್ರಮಂಥನವಾದೀತು; ಕಾಲಕೂಟ ಹೊರಕ್ಕೆ ಬಂದೀತು. ಇಲ್ಲವೆ, ತಿಲೋತ್ತಮೆಯನ್ನು ಅಶಿಸುವ ಅಣ್ಣ-ತಮ್ಮ ಸುಂದೋಪಸುಂದರ ಕತೆಯು ಹೊಸ ಆವೃತ್ತಿಯೊಂದು ಹೊರಟೀತು ಚುನಾವಣೆಯು ಮನೋವೃತ್ತಿ ಇನ್ನೇನು ಕೆಲಸಮಾಡಬಲ್ಲದು?

* * *

ಪ್ರಶ್ನೆ :—ಧಾರವಾಡದಲ್ಲಿ ನೇರದ ತರುಣ ಕಾರ್ಯಕರ್ತರ ಸಮ್ಮೇಳನದಲ್ಲಿ, ಪ್ರೊ. ಜಾಗಿರದಾರರನ್ನು ನಿಷೇಧಿಸುವ ನಿರ್ಣಯವೊಂದು ಬಂದಿದ್ದಿತಂತೆ. ಇದರ ರಹಸ್ಯವೇನು?

ಉತ್ತರ:—ಕರ್ನಾಟಕ ಕಾಲೇಜಿನ ಪ್ರೊಫೇಸರರ ಕ್ಲಬ್ಬಿನಲ್ಲಿ ಹೋಗಿ ಕೇಳಿದರೆ ಇದರ ರಹಸ್ಯ ಚೆನ್ನಾಗಿ ಗೊತ್ತಾಗುತ್ತೀತು. ಬರೀ ಊಹೆಯಿಂದ ಹೇಳಬೇಕಾದರೆ, ತರುಣರು ತಾವೇ ಮಾಡಬೇಕಾಗಿದ್ದ ಕರ್ನಾಟಕ ಏಕೀಕರಣ ಕಾರ್ಯವನ್ನು ಮೊದಲೇ ಕೈಕೊಂಡು ನಡೆಯಿಸಿದ ಪ್ರೊ. ಜಾಗಿರದಾರರ ಕಾರ್ಯ, ತರುಣರಿಗೆ ಅಧಿಕಪ್ರಸಂಗತನದ್ದೆಂದು ತೋರಿರಬೇಕು. ಅದರೂ ಸಂಗಮನಾಥನೆ ಬಲ್ಲ—ಈ ಗೊತ್ತುವಳಿಯ ಮೂಲವನೆಲ್ಲ.

* * *

ಪ್ರಶ್ನೆ :— ಧಾರವಾಡ ನಗರಸಭೆಯು ತರುಣ ಕನ್ನಡ ಪ್ರಾದೇಶಿಕ ಲೈಬ್ರರಿಯನ್ನು ನಡೆಯಿಸಬೇಕೆಂಬ ಹವಣಿಕೆಯಲ್ಲಿ ಇದ್ದರು. ದರಿದ್ರ ಕರ್ನಾಟಕ ವಿದ್ಯಾವರ್ಧಕ ಸಂಘವೇಕೆ ನಡುವೆ ಬರಬೇಕು? ನಗರ ಸಭೆಯು ಯೋಗ್ಯತೆ ಕ. ವಿ. ವ. ಸಂಘಕ್ಕೆ ಇದೆಯೆ?

ಉತ್ತರ:—ಛೇ ಛೇ ಛೇ! ನಗರ ಸಭೆಯೆಂದರು ವಿದ್ಯಾವರ್ಧಕ ಸಂಘದ ಯೋಗ್ಯತೆಯೆ! ಒಬ್ಬ ಅಧ್ಯಕ್ಷನನ್ನು ಆರಿಸಬೇಕಾದರೆ ನಗರ ಸಭೆ ಒಂದೊಂದು ಪರ್ವ ಜಗಳ—ಅಲ್ಲ, ವಿಚಾರದಲ್ಲಿ ಕಳೆಯುತ್ತದೆ; ಕ. ವಿ. ವ. ಸಂಘ ಎಂದಾದರೂ ಹೀಗೆ ಮಾಡಿದೆಯೆ? ದೊಡ್ಡವರ ಯೋಗ್ಯತೆ ದೊಡ್ಡದು! ಈ ತಾರತಮ್ಯವನ್ನು ಅರಿತುಕೊಂಡೇ ಮುಂಬಯಿ ಸರಕಾರದವರು, ಈ ಲೈಬ್ರರಿಯ ಸಣ್ಣಕೆಲಸವನ್ನು ಕ. ವಿ. ವ. ಸಂಘದಂತಹ ಸಣ್ಣ ಯೋಗ್ಯತೆಯ ಸಂಸ್ಥೆಯ ಕಡೆಗೆ ಒಪ್ಪಿಸಿ ಎವರೇನೋ!

* * *

ಪ್ರಶ್ನೆ :—ಮೈಸೂರು ಕಡೆಯ ಪತ್ರಿಕೆಗಳಲ್ಲಿ ಆಧುನಿಕ ಸಾಹಿತ್ಯದ ಸಾಹಿತ್ಯಿಕರ ಪರಿಚಯಾತ್ಮಕ ಲೇಖನಗಳು ಬರುತ್ತಿರುತ್ತವೆ. ಆದರೆ ಆ ಲೇಖನಗಳಲ್ಲಿ ಬರಿಮೈಸೂರ ಕಡೆಯ ಲೇಖಕರ ಯಾದಿಗಳನ್ನೇ ಕೊಡುತ್ತಾರಲ್ಲಾ! ಉತ್ತರಕರ್ನಾಟಕದ ಸಾಹಿತ್ಯಿಕರ ಹೆಸರುಗಳನ್ನು ಬಿಟ್ಟೇ ಬಿಡುವರಲ್ಲಾ! ಆದೇಕೆ ಹೀಗೆ?

ಉತ್ತರ:—ನೀವೂ ಆ ಪತ್ರಿಕೆಗಳನ್ನು ಓದುವುದನ್ನು ಬಿಟ್ಟುಬಿಡಿ; ಆಗ ಅವರು ಏನೇನು ತಪ್ಪು ಬರೆಯುವುದೆಂಬುದು ನಿಮಗೂ ಗೊತ್ತಾಗುವುದಿಲ್ಲ. ಇಷ್ಟೆ ಅಲ್ಲ, 'ಆ ಪತ್ರಿಕೆಗಳಿವೆಯೆಂಬ ಸಂಗತಿಯೂ ಗೊತ್ತಾಗುವುದಿಲ್ಲ.

* * *

ಪ್ರಶ್ನೆ:—ಪನಪ್ಪನ ಹಳ್ಳಿಯಲ್ಲಿ ನೇರಲಿದ್ದ ಕನ್ನಡ ಸಾಹಿತ್ಯ ಸಮ್ಮೇಳನ ಈ ಸಲ ನೇರಲಿಲ್ಲವೇಕೆ?

ಉತ್ತರ:—ನೀವು ಈ ವಿಷಯವನ್ನು ಹರಿಯಪ್ಪನ ಹಳ್ಳಿಗೆ ಬರೆದು ತಿಳಿದುಕೊಳ್ಳಬೇಕು.

* * *

(೨೫೮ ನೆಯ ಪುಟದಿಂದ ಮುಂದೆಸಾಗಿದುದ್ದು.)

ಗಳಾಗಿರ ಕೂಡದು. ಭಾರತ ಸ್ವಾತಂತ್ರ್ಯ ಸುಖಸಾಧನೆಯ ಕಾರ್ಯದಲ್ಲಿ, ತಾನಿರುವ ಕನ್ನಡನಾಡನ್ನು ಸಂಘಟಿಸಿ ಬಲಗೊಳಿಸುವುದು ಮೊದಲನೆಯ ಮೆಟ್ಟಿಲನ್ನೇರಿ ನಿಲ್ಲುವುದಾಗಿದೆಯೆಂಬುದನ್ನು ನಮ್ಮ ತರುಣರು ಗಟ್ಟಿಮುಟ್ಟಾಗಿ ತಿಳಿದುಕೊಳ್ಳಬೇಕಾಗಿದೆ. ಈ ಕಾರ್ಯಸಾಧಿಸುವುದಕ್ಕೆ ದೇಶ-ವಿದೇಶದ ಕೆಲವು ಸ್ವಾರ್ಥಶಕ್ತಿಗಳಿಂದ ಒದಗುವ ವಿರೋಧಗಳು ತೊಂದರೆಕೊಡಬಹುದು. ಇಂತಹ ತೊಂದರೆಗಳನ್ನು ನಿವಾರಿಸುವಾಗ, ಇಲಿಯನ್ನು ಬಡಿಯಲು ಹೋಗಿ ಗಣಪತಿಗೆ ಏಟನ್ನು ಹಾಕುವಂತಹ ಕೆಲಸಗಳನ್ನು ನಮ್ಮ ತರುಣರು ಮಾಡಲಾಗದು. ನಮ್ಮ ಹಿರಿಯ ಗುರಿ ಆಸೇತು ಹಿಮಾಚಲ ಭಾರತದ ಸುಖ-ಶಾಂತಿಗಳು ಆಗಿರುವಾಗ, ಅದನ್ನು ಸಾಧಿಸುವ ಉದ್ದೇಶದಿಂದಲೆ ಕರ್ನಾಟಕ ಏಕೀಕರಣವನ್ನು ಬಯಸುವ ನಾವು, ತಪ್ಪುತಪ್ಪಾದ ಕಾರ್ಯಪದ್ಧತಿಯಿಂದ, ಪ್ರಾಂತ-ಪ್ರಾಂತಗಳಲ್ಲಿ ದ್ವೇಷ-ಮತ್ಸರಗಳನ್ನು ಬಳೆಯಿಸಿ, ಭಾರತದ ಹೃದಯವನ್ನು ಒಡೆಯುವಂತಹ ನಡೆ-ನುಡಿಗಳಿಂದ ದೂರವಾಗಿರಬೇಕಾಗುವುದು. ನಮ್ಮ ವಿರೋಧ, ಮಾನವನ ಮೂಲಭೂತ ಹಕ್ಕುಗಳ ಮೇಲಿನ ಆಘಾತಕ ಶಕ್ತಿಯ ಬಗೆಗೆ ಇರಬೇಕಲ್ಲದೆ, ಯಾವ ವ್ಯಕ್ತಿಗಳ ಬಗೆಗೂ ಯಾವ ತಾತ್ಪ್ರತಿಕ ಭಿನ್ನಾಭಿಪ್ರಾಯಗಳ ಬಗೆಗೂ ಇರಲಾಗದು.

ಇದನ್ನೆಲ್ಲ ಬಿಟ್ಟು ಕೆಲವು ರಾಜಕೀಯ ಸಾಮಾಜಿಕ ಸ್ಥಾನ-ಮಾನಗಳನ್ನು ಪಡೆವ ಸಂಕುಚಿತ ಬುದ್ಧಿಯಿಂದ ನಮ್ಮ ಕನ್ನಡ ತರುಣರು ಕಾರ್ಯಸನ್ನದ್ಧರಾದರೆ, ಅದರಿಂದ ಕನ್ನಡನಾಡಿಗೂ ಸುಖವಿಲ್ಲ; ಇಂತಹ ಕನ್ನಡ ನಾಡನ್ನು ಕೊರಳಿಗೆ ಕಟ್ಟಿಕೊಂಡು ಹೊರಡಬೇಕಾಗಿರುವ ಭಾರತಕ್ಕೂ ಸುಖವಿಲ್ಲ. ನಮ್ಮ ರಾಜಕಾರಣವು ಇಂದು ಅಡುತ್ತಿರುವುದು ವಿಶ್ವಬಂಧುತ್ವದ ಮಾತನ್ನು; ಆದರೆ ಮಾಡುತ್ತಿರುವುದು ಭುರೀಣರೆನ್ನಿಸಿಕೊಳ್ಳುವ ಕೆಲವು ವ್ಯಕ್ತಿಗಳ ಸ್ವಾರ್ಥವನ್ನು ಸಾಧಿಸಿಕೊಡುವ ಕಾರ್ಯವನ್ನು. ನಮ್ಮ ತರುಣರು ರಾಜಕಾರಣದ ಈ 'ಆಡಿಯೂ ಮಾಡದು' ಅಧಮಮತನದ ಪರಂಪರೆಯಿಂದ ಅಲಿಪ್ತರಾಗಿ ಉಳಿದು, ಹೊಸದಾರಿಯಿಂದ ಗುರಿಯ ಹಾದಿಯನ್ನು ತುಳಿಯಬೇಕು. ಎಂದರೆಯೆ ನಮ್ಮ ನಾಡು ಮುಂದುವರಿದೀತು; ಕನ್ನಡಿಗರ ಆತ್ಮತೇಜ ಲೋಕವನ್ನು ಬೆಳಗೀತು

—ಸಂಪಾದಕರು.

ಆಹ್ವಾನ

ಶ್ರೀ. ಗಂಗಾಧರ ಚಿತ್ತಾಲ, ಬಿ. ಎ. ಮುಂಬಯಿ

ಜೈತ್ರಯಾತ್ರೆಗೆಂದೊ ಏನೊ ಬಂದೆ ಜನ್ಮತಾಳಿ—
ಬೆನ್ನೆ ಭಾನು-ಉದಯವೆತ್ತು ಅಭಯವೆಂದು ಸಾರಿ—
ವಿಶ್ವ ಕರೆಯುತಿತ್ತು ವಿಜಯರಂಗದಂತೆ ತೋರಿ:
" ಕಾಲಗರ್ಭದಲ್ಲಿ ಬಾಲತೇಜ ಬೆಳೆವುದೊಂದು,
ಅದುವೆ ನಿನ್ನ ಧ್ಯೇಯದೋಜವದುವೆ ಭಾಗ್ಯವಿಂದು!
ಜೀವಪಥವ ತೆರೆಯೊ ಈ ದಿವ್ಯ ದಿಶೆಯಲಿಂದು."
" ದಿನವು ಬಾನ ಬಸಿರಿನಿಂದ ಬೆಳಕು ಬೆಳೆವ ವೈಭವ
ಸಂಧ್ಯೆ ಇಂದ್ರಮಾಯೆಯಿಂದ ಬರೆವ ಸ್ವರ್ಣರಾಗವ-
ನಿಶೆಯು ನೀಲವಾಗಿ ತೆರೆವ ತಾರಾಂಕಿತ ಶಾಂತಿಯು
ಉಷೆಯು ಮೋಹಮುಗ್ಧೆಯಂತೆ ತಳೆವ ಅರುಣ ಕಾಂತಿಯು
ಭಾಷೆ-ಭಾವವೇನಿದಾವ ಚೈತನ್ಯಲೀಲೆಯೋ ?
ಕಂಡಕಡೆಗು ಜೆಲುವ ಜಲವ ನಲವ ಮಾಲೆಮಾಲೆಯೋ!
ಜೀವಮಾಯೆ ಮೋಹಕಾಯೆ ಚಿರನೂತನ ಚೇತನೆ
ದಿನವು ಈ ಧರಿತ್ರಿಮಾತೆ ಒರೆಯುವಳಾ ಮಾತನೆ.

ಜಾನ ನೀಲಧ್ಯಾನವದನೆ ಕಂಡು ನಿತ್ಯ ನಲಿವುದೊ
ತನ್ನ ಹರ್ಷದಮೃತಸ್ಪರ್ಶವದಕೆ ಗಾಳಿ ತರುವುದೊ!
ಪಾರವಾರದಂತಪಾರವಿಲ್ಲದಂಥ ಹಾಸವು—
ಕಾಲ ಮಾಸ-ಮಾಸ ಕುಣಿವ ಋತುವಿಲಾಸರಾಸವು
ಎಂಥ ಭವ್ಯ ರಂಗವಿದೋ
ದಿನವು ದಿವ್ಯ ಸಂಗವಿದೋ
ಬೆಳೆ ಅಘಾಂಗ ಬಲವನು!;
ನಡೆಯೊ ಮುಂದೆ, ಪಡೆಯೆ ಬಂದೆ ಸಿದ್ಧಿಯುಮರಫಲವನು!"
ಎಂದು ಜೀವದಾಳದಿಂದ ಮಾರ್‌ಮೊಳಗಿ ಬಂದುದೊ
ಅವುದೇನೊ ಶಕ್ತಿ ದೇವಶಕ್ತಿಯಂತೆ ನಿಂದುದೊ!
ಆತೆಯೋಘ ಸೆಳೆಯುತಿತ್ತು ನುಗಿಲಗಂಗೆಯುದರಕೆ
ಎದೆಯ ಬಯಕೆ ಬೆಳೆಯುತಿತ್ತು ಬಿದಿಗೆ ಬಿಂಬದಧರಕೆ.
ಪ್ರಾಣ ಜೇತರಿಸಿ ನಿಂತು ಧೀರವೀರುವಂದದಿ
" ಎಂದು ಬಹುದೊ? " ಎಂದು ಕಾಯುತಿತ್ತು ದಿಗ್ದಿಗಂತದಿ.

ರಾಜಾ

ಶ್ರೀ. ಕೃಷ್ಣಮೂರ್ತಿ ಪುರಾಣಿಕ ಬಿ ಎ., ಬಿ.ಟಿ. ಗೋಕಾಕ

★

ಪ್ರೀತಿ-ದ್ವೇಷಗಳು ಮಾನವನಲ್ಲಿಯ ಎರಡು ವಿಚಿತ್ರ ಭಾವನೆಗಳು. ಪ್ರೀತಿ ಪ್ರಾಣಿ-ಪ್ರಾಣಿಗಳೊಂದಿಗೂ ಹಿಂಗದ ಕೆಳೆಯನ್ನು ಬಳೆಯಿಸಲು ಹಚ್ಚುವುದು. ದ್ವೇಷ ಹತ್ತಿ ಹೊಂದಿದ ಬಂಧು ಜನರನ್ನೂ ಹಿಂಸಿಸ ಹಚ್ಚುವುದು. ಸಾಕಿದ ನಾಯೊಂದರ ವಿಯೋಗಕ್ಕಾಗಿ ಡಾಕ್ಟರರಂತಹರೂ ದುಃಖಿಸಬೇಕೇಕೆ ?

★

ಪಂಡಿತ ಡಾಕ್ಟರರ ನಾಯಿಯ ಹೆಸರು ರಾಜಾ. ರಾಜಾ ಹೆಸರಿಗೆ ತಕ್ಕಂತಹ ನಾಯಿ. ಸ್ವಲ್ಪ ಉದ್ದವಾದ ಗಂಭೀರ ಮುಖ. ಹೊಳೆಯುವ ಕಣ್ಣುಗಳು. ಮೈಮೇಲೆಲ್ಲ ನಸು ಕಂದೀ ಬಣ್ಣದಲ್ಲಿ ಕರಿಛಾಯೆ ಕೂಡಿದ ಗುಂಗುರುಗೂದಲು. ನಡೆಯುವ ಠೀವಿಯಲ್ಲಿ ದರ್ಪದ ರೀತಿ. ಜೊಗಳುವಾಗ ಕೂಡ ರಾಜಾನದೇ ಒಂದು ವೈಶಿಷ್ಟ್ಯ. ಮನೆಯ ಮೇಲ್ವಿಚಾರಣೆಯೆಲ್ಲ ತನ್ನದೆಂಬ ಅಹಂಕಾರ. ರಾಜಾ ಡಾಕ್ಟರರ ಮನೆಯವರಿಗೆಲ್ಲ ಕಣ್ಣುಗೊಂಬೆ. ಮಕ್ಕಳಿಗೆ ಆಟದ ಗೊಂಬೆಯಾಗಿದ್ದರೆ ಹಿರಿಯರಿಗೆಲ್ಲ ಜೀವದ ಕಣ್ಣು.

ಜೆಮಿ ರಾಜಾನ ತಾಯಿ. ಜೆಮಿ ಎಂಬುದು ನಿಜವಾದ ಹೆಸರಲ್ಲವೆಂಬುದು ಮೊನ್ನೆ ತಾನೆ ತಿಳಿಯಿತು. ನಾಮಪಲ್ಲಟದಲ್ಲಿ ಸ್ವರಸಂಯೋಜನೆಯು ಕೆಲಸಮಾಡಿತೋ, ಡಾಕ್ಟರರ ಆಂಗ್ಲ ಪದ್ಧತಿಯನ್ನು ಚ್ಚರಿಸುವ ಬಾಯಿ ಆ ಕೆಲಸ ಮಾಡಿತೋ—ತಿಳಿಯದು. 'ಜಮುನೆ' ಎಂದಿದ್ದುದು ಹೆಣ್ಣುಮಕ್ಕಳ ಬಾಯಿಯಲ್ಲಿ 'ಜಮ್ನಿ' ಎಂದಾಗಿ ಮಾರ್ಪಟ್ಟು, ಚಿಕ್ಕಮಕ್ಕಳ ಬಾಯಲ್ಲಿ 'ಜಮ್ಮಿ' ಯಾಗಿ ತೇಲಿಬಂದು, ಡಾಕ್ಟರರ ಬಾಯಿಂದ 'ಜೆಮಿ' ಯಾಗಿ ಹೊರಬಿದ್ದಿತು. ಈ ಹೆಸರೇ ಉಚ್ಚರಿಸಲು ಅನುಕೂಲವಾಯಿತೇನೋ; ಎಲ್ಲರ ಬಾಯಲ್ಲಿಯೂ ಜಮುನೆ ಈಗ ಜೆಮಿಯೇ.

ಈ ತಾಯಿ-ಮಕ್ಕಳು ಡಾಕ್ಟರರ ಮನೆಯಲ್ಲಿ ಬಂದುನಿಂತದ್ದು ಕಾರಣವಾಡದಲ್ಲಿ. ಅದಕ್ಕೊಂದು ಚಿಕ್ಕ ಇತಿಹಾಸವಿದೆ. ಡಾಕ್ಟರರು ನಿರವಾಡ ಆಸ್ಪತ್ರೆಯಲ್ಲಿ ಕೆಲಸಮಾಡುವಾಗ, ಒಡಲೈತನೊಬ್ಬನು ತಾಲಿಗೆ ಅಸಪನೀಯವಾದ ಹುಣ್ಣನ್ನು ಮಾಡಿಕೊಂಡು ಆಸ್ಪತ್ರೆಗೆ ಬಂದು, ಒಂದು ತಿಂಗಳ ತನಕ ಆಸ್ಪತ್ರೆಯಲ್ಲಿಯೆ "ಆಸ್ಪತ್ರೆಯ ರೋಗಿ"ಯಾಗಿರಬೇಕಾಯಿತು. ಆಗ ಡಾಕ್ಟರರು ತನಗೆ ಮಾಡಿದ ಶುಶ್ರೂಷೆಗೆ ಪ್ರತಿಫಲವಾಗಿ ಅವರಿಗೆ ಏನುಮಾಡಬೇಕೆಂಬುದು ರೈತನಿಗೆ ತಿಳಿಯಲಿಲ್ಲ. ಒಂದು ದಿವಸ ಡಾಕ್ಟರರು ತಮ್ಮ ದಿನದ ಕರ್ತವ್ಯಪಾಲನೆಗೆಂದು ಇವನ ಕೋಣೆಗೆ ಬಂದಾಗ ಹೇಳಿದರು: "ಏನಯ್ಯಾ! ನಿನ್ನ ಹುಣ್ಣು ಮಾಯ್ದಿತು! ನಾಳೆನ ದಿನ ನಿಮ್ಮೂರಿಗೆ ಹೋಗಬಹುದು." ರೈತ ಮುಖ ಮೇಲೆತ್ತಲಿಲ್ಲ. ಕೃತಜ್ಞತಾಭಾವದಿಂದ ಅವನ ಕಣ್ಣುಗಳಲ್ಲಿ ನೀರೂರಿತ್ತು. ಗದ್ಗದಿತನಾಗಿ ಹೇಳಿದ:

"ನಿಮ್ಮ ದಯೆ ನನ್ನೊಡೆಯಾ! ಕಾಲಲ್ಲಿ ಹುಳುಬಿದ್ದು ಕೊಳೆತು ಹೋಗುತ್ತಿದ್ದ; ಬದುಕಿಸಿದಿರಿ. ನಾನು ಬಡವ; ನಿಮಗೆ ನಾನೇನು ಕೊಡಬಲ್ಲೆ?".....

"ನೀನೇತಕ್ಕೆ ಕೊಡಬೇಕಪ್ಪಾ? ಸರಕಾರ ಸಂಬಳ ಕೊಡುವುದು ಏತಕ್ಕೆ? ನೀನೇನೂ ಕೊಡುವ ಕಾರಣವಿಲ್ಲ ತಿಳಿಯಿತ್ತೇ?"

"ಸರಕಾರ ನಿಮ್ಮ ಕೆಲಸಕ್ಕೆ ಹೆಣಾ ಕೊಡುತ್ತಿರಬಹುದು, ನನ್ನೊಡೆಯಾ! ನಿಮ್ಮ ಗುಣಕ್ಕೆ ಕೊಡುವ ಮೆಚ್ಚುಜ....."

ಡಾಕ್ಟರರಿಗೆ ಇವನ ಮಾತಿನ ರೀತಿಯಲ್ಲಿ ಒಂದು ಬಗೆಯ ಅಭಿಮಾನ ಹುಟ್ಟಿತು. ತಮ್ಮ ಹೊಸ ಜೀವನದ ಉಜ್ಜುಗೊಡೆಗೆ ಅವರು ಹಾತೊರೆಯುದಿದ್ದರೂ, ರೈತನ ಹೃದಯದಿಂದ ಹೊಮ್ಮುವ ಕೃತಜ್ಞತಾಭಾವರಸವನ್ನು ಇನ್ನೂ ಸವಿಯಬೇಕೆಂದು ತಾವಾಗಿಯೇ ಕೇಳಿದರು:

"ನನ್ನ ಗುಣಕ್ಕೆ ಮೆಚ್ಚಿ ನೀನು ಹಣ ಸುರಿಯುವವನೇನು ಪಾಗಾದರೆ?" ಎಂದು ವಿನೋದ ಬೆರೆತ ಧನಿಯಲ್ಲಿ ಡಾಕ್ಟರು ಕೇಳಿದರು.

"ಎಷ್ಟು ಹಣಾ ಕೊಟ್ಟರೂ ಆದು ನಿಮ್ಮ ಗುಣದ ತೂಕಕ್ಕೆ ಇಳಿಯಲಾರದು ಒಡೆಯಾ! ಮೇಲಾಗಿ ಹಣವಿಲ್ಲದ ಹೆಣಾ ನಾನು...."

"ಹಾಗಾದರೆ ನೀನು ಕೊಡುವುದಾದರೂ ಏನು?" ಡಾಕ್ಟರರು ಆಶ್ಚರ್ಯದಿಂದ ಕೇಳಿದರು.

"ನೀವು ನನ್ನ ಸೇವೆ ಮಾಡಿದ್ದೀರಿ ನನ್ನೊಡೆಯಾ! ನಿಮ್ಮ ಸೇವೆ ಮಾಡೋಕೆ ನನ್ನ ಹತ್ತರ ಒಂದು ಪಸಂದ್ ಜಾತಿದು ನಾಯಿ ಐತ್ತೆ. ನಾನು ಇಸ್ಪತ್ರೇ ಸೇರುವಾಗ ಒಂದು ಗಂಡು ಕುನ್ನಿ ಇಕ್ಕೀತೆ. ಜಾತ ಜೆಲೋ ಜಾತೀ ನಾಯಿ. ಆವ್ರು ನಿಮ್ಮಂಥವರ ಮನೆಯಲ್ಲಿರಬೇಕು. ಕೊಡ್ತೀನಿ ಒಡೆಯಾ.. ಸಲ್ಲಿಸಿಕೊಂಡು ನನ್ನ ಉದ್ಧಾರ ಮಾಡ್ರಿ!" ಹೀಗೆನ್ನುತ್ತ ರೈತ ಡಾಕ್ಟರರ ಪಾದದ ಮೇಲೆ ಬಿದ್ದ. ಡಾಕ್ಟರರ ಕಣ್ಣು ಹನಿಯಿತು. ಅವರಿಗೂ ಬಹಳ ದಿನಗಳಿಂದ ಮನೆಯಲ್ಲಿ ಒಂದು "ನಾಕು-ನಾಯಿ" ಇರಬೇಕೆಂಬ ಆಶೆಯಿತ್ತು. ಆ ಆಶೆ ಕೂಡಿಬಂದಿತೆಂದು "ಆಗಲಿ, ತಂದುಕೊಡು!" ಎಂದರು. ಹೀಗೆ ಕಾರವಾಡ ಜಿಲ್ಲೆಯ ಹಳ್ಳಿಯೊಂದರ ನಾಯಿ-ಮಕ್ಕಳು ಡಾಕ್ಟರ ಮನೆ ಸೇರಿ, ನಮ್ಮೂರಿಗೆ ಒಂದಾಗಿ 'ರಾಜಾ' ಒಂದು ಏರ್ಪಡದ ನಾಯಿ.

ಆ ಕುನ್ನಿ ಬೆಳೆದು ದೊಡ್ಡದಾಗುವ ವೇಳೆಗೆ, ಡಾಕ್ಟರರ ಜೀವನ ಅದರೊಂದಿಗೆ ಬೆಸೆದು ಬಿಟ್ಟಿತು. ಈಗ ರಾಜಾ ಡಾಕ್ಟರರ ಪರಿಯಮಗ. ಒಂದು ನಿಮಿಷ ಕೂಡ ರಾಜಾ ಕಣ್ಮರೆಯಾಗ ಕೂಡದು. ಅಷ್ಟು ಅನ್ಯೋನ್ಯವಾಗಿ ಬೆಳೆದಿದೆ ಗೆಳೆತನ. ಪ್ರಾಣಿ-ಸಂಬಂಧದ ಗೆಳೆತನದ ಮಾದರಿ ಬೇಕಾದವರು ಇಲ್ಲಿ ಅದನ್ನು ಸಂಪೂರ್ಣವಾಗಿ ಕಾಣಬಹುದು. ಗೆಳೆತನದ ಜೆಸುಗೆ ಹೊಂದಲು ಮಾನವನೇನು, ಪ್ರಾಣಿಯೇನು?

೨

ಡಾಕ್ಟರರು ಏಳುವುದಕ್ಕೆ ಮೊದಲೇ ಏಳುವುದು ರಾಜಾನ ಪದ್ಧತಿ. ಎದ್ದು ಕುಂಯಿಗುಡುತ್ತ ಮನೆಯೆಲ್ಲಾ ಓಡಾಡಿ ಎಲ್ಲರನ್ನೂ ಎಚ್ಚರಿಸುವುದು. ಅಮೇಲೆ ತನ್ನ ಕರ್ತವ್ಯ ಮುಗಿಯಿತೆಂಬಂತೆ ಡಾಕ್ಟರರ ಕೋಣೆಯಲ್ಲಿ ಸುಮ್ಮನೆ ಒರಗಿ ಬಿಡುವುದು. ಡಾಕ್ಟರರು ಎದ್ದು ಸ್ನಾನ ಮುಗಿಸಿ ರಾಜಾನಿಗೆ ಬಿಸ್ಕತ್ತು ತಿನ್ನಿಸಿ ಆಸ್ಪತ್ರೆಗೆ ಹೊರಡುವಾಗ, ಅವರ ಮುಂದೆ ರಾಜಾ. ಹಾದಿಯಲ್ಲಿ ಡಾಕ್ಟರರು ಹೋಗಬೇಕಾದ ರೋಗಿಗಳ ಮನೆ ರಾಜಾನಿಗೆ ಗೊತ್ತು. ಈ ನಾಯಿಯನ್ನು ದೂರದಿಂದ ನೋಡಿಯೆ ಎಷ್ಟೋ ರೋಗಿಗಳಿಗೆ ಡಾಕ್ಟರರು ಬಂದರೆಂಬ ಸಮಾಧಾನ. ಆಸ್ಪತ್ರೆಯಲ್ಲಿ ಡಾಕ್ಟರರ ಮೀಜಿನ ಬುಡದಲ್ಲಿ ರಾಜಾ ಮಲಗಿತೆಂದರೆ, ಡಾಕ್ಟರರು ಹೊರಬೀಳುವ ವರೆಗೆ ಅಲ್ಲಿಯೆ. ಒಮ್ಮೊಮ್ಮೆ ಡಾಕ್ಟರರಿಗೆ "ಪೋಸ್ಟ್‌ಮಾರ್ಟಮ್" ಮಾಡುವ ಸಂದರ್ಭ ಬಂದಾಗ, ಅವರಿಗೆ ಮನೆಗೆ ಹೋಗಲು ಸಂಜೆಯಾಗುತ್ತಿತ್ತು. ಅಲ್ಲಿಯವರೆಗೆ ರಾಜಾ ಉಪವಾಸ. ಆಸ್ಪತ್ರೆಯ ಸೇವಕರು ರಾಜಾನಿಗೆ ಏನು ತಿನ್ನಲಿಕ್ಕೆ ಕೊಟ್ಟರೂ, ಡಾಕ್ಟರರು ತಿನ್ನದ್ದರಿಂದ ರಾಜಾ ಅದನ್ನು ಮುಟ್ಟುತ್ತಿರಲಿಲ್ಲ. ಹೀಗೆ ರಾಜಾನ ಜೀವನವು ಡಾಕ್ಟರರ ಜೀವನದೊಂದಿಗೆ ಹುರಿಗೊಂಡು ಧೀರಗಮನದಿಂದ ಸಾಗಿತ್ತು. ಡಾಕ್ಟರರು ಕೂಡ ರಾಜಾನ ಸ್ನೇಹಪಾಶದಲ್ಲಿ ಬಂಧಿತರಾಗಿ, ಒಂದು ನಿಮಿಷದ ವಿರಹವನ್ನು ಕೂಡ ಸಹನಮಾಡದಷ್ಟು ಮಮತೆಯ ಮೂರ್ತಿಯಾಗಿ ಬಿಟ್ಟರು. ಬಿಡುವಿನ ದಿನ ಮುಂಜಾವಿನಿಂದ ಸಂಜೆಯವರೆಗೆ ರಾಜಾನ ಮಾತೇ ಮಾತು; ಅವನ ಕತೆಯೇ ಕತೆ.

ಡಾಕ್ಟರರ ತಾಯಿ ಸುಶಿವಂತೆ. ರಾಜಾನ ಬರುವಿಕೆ ಅವರಿಗೆ ಮೊದ-ಮೊದಲು ತುಂಬಾ ತೊಂದರೆಯದಾಗಿ ಕಂಡಿತು. ನಿತ್ಯವೂ ಒಂದೆರಡು ಹೆಚ್ಚಿನ ಸ್ನಾನಗಳು ತಪ್ಪಲಿಲ್ಲ. ಆದರೆ ದಿನ ಕಳೆದ ಹಾಗೆ ಅವರಿಗೂ ರಾಜಾನ ನಂಬಂಧದ ರಕ್ತವು ಪ್ರೀತಿಯ ನಾಡಿಯಲ್ಲಿ ಪರಿಯಿತು. ಈಗ ರಾಜಾನಿಗೆ ಅಡಿಗೆಯ ಮನೆಯ ವರೆಗೂ ಪ್ರವೇಶ. ಅವರು ಕೆಲಸ ಮಾಡುತ್ತಲೆ ನಾಯಿಯನ್ನು ಮಾತನಾಡಿಸುವುದೂ ಉಂಟು. ಪ್ರೀತಿ-ವಿಶ್ವಾಸಗಳು ಕೇವಲ ಮಾನವನ ಹಕ್ಕುಗಳಲ್ಲವಷ್ಟೆ!

ತನ್ನ ಮಗನನ್ನು ಇಷ್ಟು ಜನ ಮುದ್ದಾಡುವುದು ಜೆನಿಯ ಮನಸ್ಸಿಗೆ ಬಂದಂತೆ ತೋರಲಿಲ್ಲ. ತನ್ನ ತಾಯ್ತನದ ಪ್ರೀತಿಯಲ್ಲಿ ಅನೇಕರು ಭಾಗಿಯಾಗಿರುವುದು ಅದಕ್ಕೆ ಬೇಕಾಗಿರಲಿಲ್ಲವೆಂದು ತೋರುತ್ತದೆ. ಅದಕ್ಕಾಗಿ ಜೆನಿ ಆಗಾಗ ಸಿಡಿಸಿಡಿಮಾಡಿ ಗೊಂದಲವೆಬ್ಬಿಸುವುದು. ರಾಜಾ 'ನಾನು ನಿನ್ನ ಮಗನಲ್ಲವೇ?' ಎಂಬ ಮುಖಭಾವ ತೋರಿಸುತ್ತ ಬರಲು, ಜೆನಿಗೆ ಅಷ್ಟೇ ಸಾಕಾಗಿ ಮೂಲೆಯಲ್ಲಿ ಮುದುಡಿಕೊಂಡು ಬಿದ್ದು ಬಿಡುವುದು. ಒಮ್ಮೊಮ್ಮೆ ಅದಕ್ಕೆ ತನ್ನ ಮಗನ ಬಗ್ಗೆ ವಿಶೇಷ ಅಭಿಮಾನವೆನಿಸುವುದೂ ಉಂಟು. ಆಗ ಅದು ತನ್ನ ಮಗನ ಸುದ್ದಿಯನ್ನು ಎಲ್ಲರೆದುರಿಗೂ ಹೇಳುವಂತೆ, ಸುತ್ತಲೂ ಸುಮ್ಮನೆ ಸುಮ್ಮನೆ ಜಿಗಿದಾಡುವುದು. ಕುಂಯಿಗುಡುತ್ತ ಎಲ್ಲರ ಕಾಲ ಬುಡದಲ್ಲಿ ಸುಳಿದಾಡುವುದು. ವಿಲಕ್ಷಣ ಅಭಿಮಾನದ ನೋಟದಿಂದ ರಾಜಾನನ್ನು ನೋಡುವುದು, ಮುದ್ದಿಸುವುದು. ಪ್ರೇಮ-ಭರದಲ್ಲಿ ಒಮ್ಮೊಮ್ಮೆ ಅದನ್ನು ಮೃದುವಾಗಿ ಕಚ್ಚುವುದೂ ಉಂಟು. ತಾಯಿ ಪ್ರೇಮ ಮಾನವನಿಗೇನು? ಪ್ರಾಣಿಗಳಿಗೇನು?

ಈ ಮಧ್ಯೆ ಡಾಕ್ಟರರು ಒಮ್ಮೆ ಮಲೇರಿಯಾ ಜ್ವರದಿಂದ ಮೂರು ದಿನ ಹಾಸಿಗೆ ಹಿಡಿದರು. ಆ ಅವಧಿಯಲ್ಲಿ ರಾಜಾ ಅನುಭವಿಸಿದ ಸಂಕಟ ಹೇಳತೀರದು. ಬಾಯಲ್ಲಿ ಒಂದು ತುತ್ತು ಅನ್ನಹಾಕಲಿಲ್ಲ; ಒಂದು ಗುಟುಕು ನೀರು ಕುಡಿಯಲಿಲ್ಲ. ಡಾಕ್ಟರರು ತಮ್ಮ ಜ್ವರದಲ್ಲಿಯೆ "ರಾಜಾ! ಊಟ ಮಾಡುವುದಿಲ್ಲವೇ?" ಎಂದು ಕೇಳಿದಾಗ, ಅವರ ಭಾವಗ್ರಹಿಸಿ "ನಿಮ್ಮ ಜಡ್ಡು ಕಡಿಮೆಯಾಗುವವರೆಗೆ ಆ ಮಾತೇ ಇಲ್ಲ" ಎಂಬ ಸೂಚನೆಯನ್ನು ಕೊಟ್ಟಿತು. ಡಾಕ್ಟರರಿಗೆ ಈ ವಿಲಕ್ಷಣ ಪ್ರಾಣಿಗೆ ಏನುಮಾಡಬೇಕೆಂಬುದು ತಿಳಿಯದಾಯಿತು. ನಾಲ್ಕನೆಯ ದಿನ ಡಾಕ್ಟರರು ತುಸು ಅನ್ನ ಗ್ರಹಿಸಿದಾಗ, ರಾಜಾನಿಗೆ ಆದ ಆನಂದ ಅಷ್ಟಿಷ್ಟಲ್ಲ. ಮನೆಯ ತುಂಬ ಓಡಾಡಿ ಡಾಕ್ಟರರ ಜಡ್ಡು ಕಡಿಮೆಯಾದ ಸಂದೇಶವನ್ನು ಬೀರಿತು. ತಾನೂ ತಿಂದು ತೇಗಿತು, ಕುಣಿದಾಡಿತು, ಕುಂಯಿಗುಟ್ಟಿತು. ಡಾಕ್ಟರರಿಗೆ ಎಂತಹ ಸಮಾಧಾನ!

ಬರು-ಬರುತ್ತ ರಾಜಾನ ಪ್ರೇಮರಜ್ಜು ಮನೆಯವರನ್ನೆಲ್ಲ ಬಿಗಿಯಾಗಿ ಬಂಧಿಸಿತು. ಇದಕ್ಕೆ ರಾಜಾನ ಗುಣಗಳೇ ಕಾರಣ. ಡಾಕ್ಟರರ ಚಿಕ್ಕ ಮಗು ಮಾಲತಿಯಂತೂ ರಾಜಾನೊಡನೆಯೆ ಬೆಳೆದವಳು. ಅವರ ಪ್ರೀತಿ ಒಂದೇ ಹೊಟ್ಟೆಯ ಅಣ್ಣ-ತಂಗಿಯರ ಪ್ರೀತಿಯಂತೆ ಬೆಳೆದುಬಿಟ್ಟಿತು. ಡಾಕ್ಟರರು ರಾಜಾನೊಡನೆ ನಿಂತ ಮಾಲತಿಯ "ಫೋಟೋ"ವನ್ನು ಕಟ್ಟುಹಾಕಿಸಿ ತಮ್ಮ ಕೋಣೆಯಲ್ಲಿ ಹಾಕಿದಾಗ, ಅವರಿಬ್ಬರ ಸಂಭ್ರಮಕ್ಕೆ ಎಣೆಯಿರಲಿಲ್ಲ. ಮಾಲತಿ ರಾಜಾನಿಗೆ ಫೋಟೋ ತೋರಿಸಿ ಕುಣಿಯುವಳು. ರಾಜಾ ಅವಳ ಕುಣಿತದ ಹೆಜ್ಜೆಯಲ್ಲಿ ತಾಳ ಹಾಕುವಂತೆ ಕುಣಿದು ತನ್ನ ಸಂತೋಷವನ್ನು 'ಕುಂಯಿ ಕುಂಯ್' ರಾಗದಲ್ಲಿ ವ್ಯಕ್ತಪಡಿಸುವುದು. ಮಾಲತಿ ತನ್ನ ಗೆಳತಿಯರನ್ನೆಲ್ಲ ಕರೆದು ತಂದು ಆ ಫೋಟೋವನ್ನು ತೋರಿಸು

ತ್ರಿರುವಾಗ, ರಾಜಾನಿಗೆ ಎನಿಸುತ್ತಿರುವ ಅಭಿಮಾನ ಅಷ್ಟಿಷ್ಟಲ್ಲ. ಆಗಾಗ ರಾಜಾ ಯಾರೂ ಇಲ್ಲದ ಹೊತ್ತಿನಲ್ಲಿ, ಆ ಫೋಟೋವನ್ನು ಒಂದೇಸವನೆ ನೋಡುತ್ತ ನಿಲ್ಲುವುದೂ ಉಂಟು. ಹೀಗೆ ಅದು ಮಾಡುತ್ತಿರುವಾಗ ಮೂಲತಿ, ಮನೆಯವರನ್ನೆಲ್ಲ ಸದ್ದಿಲ್ಲದೆ ಕರೆದು ತಂದು ತೋರಿಸುವಳು. ಎಲ್ಲರಿಗೂ ರಾಜಾನ ಈ ರೀತಿ, ಆಶ್ಚರ್ಯವನ್ನು ಉಂಟು ಮಾಡುತ್ತಿತ್ತು. ಭಾವಗ್ರಹಣ ಶಕ್ತಿ ಪ್ರಾಣಿಗಳಿಗೂ ಇರುವುದೆಂಬ ಮಾತಿನ ಸತ್ಯತೆಗೆ ರಾಜಾ ಉದಾಹರಣೆ.

೩

ಮಾನವ ಜೀವನದಲ್ಲಿ ಸುಖದ ಸೆಳಿತಗಳು ಒಮ್ಮೊಮ್ಮೆ ದುಃಖದ ಅಸ್ತಿತ್ವವನ್ನು ಕೂಡ ಮರೆಯಿಸುವುವು. ದುಃಖ. ಜೀವನವು ಅಪ್ರಿಯವಾಗಿ ಪರಿಣಮಿಸುವುದರಿಂದ, ಅದನ್ನು ಮರೆಯುವುದರಲ್ಲಿಯೇ ಸುಖದ ಸವಿಯು ಹೆಚ್ಚುತ್ತಿದ್ದರೂ, ಡಾಕ್ಟರರ ಮಾತೇ ಬೇರೆ. ಅವರಿಗೆ ದುಃಖದ ನೆರಳಿನ ಕಲ್ಪನೆ ಕೂಡ ಇರಲಿಲ್ಲ. ಕೈತುಂಬ ಸಂಬಳ. ಮನೆತುಂಬ ಬಂಧುಗಳು. ಸದ್ಗುಣಿಗಳಾದ ಅವರಿಗೆ ಊರತುಂಬಾ ಸ್ನೇಹಿತರು. ಯಾವುದರ ಕೊರತೆ? ದುಃಖದ ಬೀಜವು ಕೊರತೆಯ ಗರ್ಭದಲ್ಲಿರುವುದೆಂದು ಗ್ರಹಿಸುವವರಿಗೆ ಡಾಕ್ಟರರು ಪರಮ ಸುಖಿಗಳಲ್ಲದೆ ಮತ್ತೇನು? ಇತ್ತೀಚೆಗೆ ಅವರು, ರಾಜಾನ ಸಾನ್ನಿಧ್ಯದಿಂದ ಇಲ್ಲದ ಆನಂದ ಹೊಂದುತ್ತಿದ್ದರು. ಅವರ ಸ್ನೇಹಿತರು ಒಮ್ಮೊಮ್ಮೆ ಅವರಿಗೆ ಈ ರೀತಿಯ ಪ್ರೇಮಕ್ಕಾಗಿ ಎಚ್ಚರಿಸಿದುದೂ ಉಂಟು: "ಎಷ್ಟೆಂದರೂ ಅದು ಸಾಕಿದ ಪ್ರಾಣಿ ಡಾಕ್ಟರರೆ! ನಿಮ್ಮ ಪ್ರೇಮವು ನಿಮ್ಮ ಮನಸ್ಸಿನ ದುರ್ಬಲತೆಯನ್ನು ತೋರಿಸುವ ಮಟ್ಟಿಗೆ ಇಳಿದಿದೆ. ಇದು ಅಷ್ಟೊಂದು ಒಳ್ಳೆಯದಲ್ಲ!" ಎಂದು ಹೇಳಿದಾಗ—ಅವರು ರಾಜಾನ ಜೆನ್ನು ಜೆಪ್ಪರಿಸಿ ನಕ್ಕು ಬಿಡುತ್ತಿದ್ದರು. ರಾಜಾನ ಬಗ್ಗೆ ಡಾಕ್ಟರರು ಇಟ್ಟುಕೊಂಡ ಪ್ರೀತಿಯ ರೀತಿಯು ಇಷ್ಟರ ಮಟ್ಟಿಗೆ ಇಳಿದಿದ್ದುದು ನಿಜ: ಅವರಿಗೆ ರಾಜಾನನ್ನು ಬಿಟ್ಟರೆ ಒಂದು ಕ್ಷಣ ಸಪ ಸವಾಧಾನವಾಗುತ್ತಿರಲಿಲ್ಲ. ಇದಕ್ಕೆ ಯಾರು ಹೊಣೆ? ಪ್ರೀತಿ ಪ್ರವಾಹದ ಹುಚ್ಚು ಹೊಳೆಯಲ್ಲಿ ತೇಲುತ್ತಿರುವ ಡಾಕ್ಟರರು ಹೊಣೆಯೆ—ಆ ಪ್ರವಾಹದ ರಭಸಕ್ಕೆ ಈಡಾದ ರಾಜಾನೋ?—ಹೇಳಲಿಕ್ಕಾಗದು. ಡಾಕ್ಟರರ ಪ್ರೀತಿ ಒಂದೇಸವನೆ ಸಾಗಿತು. ಪ್ರೀತಿಪ್ರವಾಹದ ಹೆದ್ದೊರೆಯಲ್ಲಿ ಹೊಯ್ದಾಡುವ ಹರಗೋಲಿಗೆ ಹೊಯ್ದಾಟವೇ ಸುಖವಲ್ಲವೆ? ಈ ಹೊಯ್ದಾಟದ ತೀಲಾಟದಲ್ಲಿ ಡಾಕ್ಟರರು ತುಂಬಾ ಸುಖಿಗಳು. ರಾಜಾ ಪರಮ ಸುಖಿಯಾಗಿದ್ದರೆ ಡಾಕ್ಟರರು ಸಂಪೂರ್ಣ ಸುಖಿಗಳು.

ಡಾಕ್ಟರರ ಈ ಸುಖಕ್ಕೆ ಯಾವ ದುಷ್ಟದೃಷ್ಟಿ ತಾಗಿತೊ. ರಾಜಾನಿಗೆ ಈಗ ಮೂರು ದಿನಗಳಿಂದ ಮೈಯಲ್ಲಿ ನೆಟ್ಟಗಿಲ್ಲ. ಡಾಕ್ಟರರ ಅವ್ಯಾಹತವಾದ ಔಷಧೋಪಚಾರಗಳಿಗೆ—ಪರಿಶ್ರಮಕ್ಕಾದರೂ—ಬೇನೆ ಸರಿಯ ಬೇಕಾಗಿದ್ದಿತು. ನಾಲ್ಕನೆಯ ದಿನ ರಾಜಾ ನ್ಯುಮೋನಿಯಾದಿಂದ ಬಳಲತೊಡಗಿದ. ಡಾಕ್ಟರರಿಗೆ ತುಂಬಾಗಾಬರಿ. ಕೂಡಲೆ ಪಶುವೈದ್ಯರನ್ನು ಕರೆಯಿಸಿ ಚಿಕಿತ್ಸೆ ಮಾಡಿಸಿದರು. ಔಷಧೋಪಚಾರವಾಯಿತು. ಆದರೂ ಸಂಜೆಯಾಗುತ್ತ ನಡೆಸಂತೆ ಬೇನೆ ಸರಿಯದೆ ವಿಕೋಪಕ್ಕೆ ಹೋಯಿತು. ರಾಜಾ ಯಾವಾಗಲಾದರೂ ಒಮ್ಮೆ ಕಣ್ಣು ತೆರೆದು ಸುತ್ತಲೂ ಹೊರಳಿಸಿ ಮತ್ತೆ ಮುಚ್ಚುವುದು. ಒಮ್ಮೊಮ್ಮೆ ಮೈ ನಡುಗಿಸುವುದು. ಒಮ್ಮೆ ಏಳಲಿಕ್ಕೆ ಪ್ರಯತ್ನ ಮಾಡುವುದು.

ರಾತ್ರಿ ಎಂಟು ಗಂಟೆಯ ಸುಮಾರಿಗೆ ಡಾಕ್ಟರರು ಮತ್ತೆ ಪಶುವೈದ್ಯರನ್ನು ಕರೆಯಿಸಿದರು. ಅವರು ಒಳಕ್ಕೆ ಬರುತ್ತಲೂ ಜೀವಿ ಕೆಟ್ಟ ದನಿಯಲ್ಲಿ ಚೀರಿ ಡಾಕ್ಟರರ ಕಾಲಬುಡದಲ್ಲಿ ಓಡಾಡುತ್ತ ಕುಂಯಿಗುಡಲು ತೊಡಗಿತು. ಮಗನನ್ನು ಬದುಕಿಸೆಂದು ಬಿನ್ನವಿಸುತ್ತಿದ್ದಿತೇನೊ!

"ಡಾಕ್ಟರರೆ! ನಿಮ್ಮ ನಾಯಿಯನ್ನು ಬದುಕಿಸುವ ಭಾಗ್ಯ ನನಗಿಲ್ಲವೆಂಬಂತೆ ಕೋರುತ್ತದೆ" ಪಶುವೈದ್ಯರು ಸೊಂದ ದನಿಯಲ್ಲಿ ನುಡಿದರು.

"ಏನು ಹೇಳುವಿರಿ? ನನ್ನ ರಾಜಾ ಬದುಕಲೇ ಬೇಕು!" ಡಾಕ್ಟರರು ದಿಗ್ಗನೇ ಎದ್ದು, ಹುಚ್ಚನಂತೆ ರಾಜಾ ಮಲಗಿದ ಸ್ಥಳಕ್ಕೆ ಹೋದರು. ಅಲ್ಲಿ ರಾಜಾ ನಿತ್ರಾಣವಾಗಿ ಬಿದ್ದಿದೆ, ಮನೆಯವರೆಲ್ಲ ಕಣ್ಣೀರು ತುಂಬಿ ನಿಂತಿದ್ದಾರೆ. ಮೂಲತಿಯು ಬಿಕ್ಕಿ ತುಟಿಯ ತುದಿಗೆ ಬಂದಿದೆ. ಜೀವಿ ಭಯಗ್ರಸ್ತಳಾದ ವಿದುಷಿಯಂತೆ ನೆಟ್ಟಬಿಟ್ಟಯಲ್ಲಿ ರಾಜಾನನ್ನು ನೋಡುತ್ತ ನಿಂತಿದೆ.

ರಾಜಾ ಮತ್ತೊಮ್ಮೆ ಕಣ್ಣು ತೆರೆದು ಸುತ್ತಲೂ ನೋಡಿತು. ರಾಜಾನ ದೃಷ್ಟಿ ಡಾಕ್ಟರರ ನೋಟದಲ್ಲಿ ಸಿಕ್ಕಾಗ, ಡಾಕ್ಟರರು ಒಮ್ಮೆಲೆ ಬಿಕ್ಕಿದರು. ರಾಜಾ ಚೀರಿತು, ತಿರುಗಿ ಅದು ಕಣ್ಣು ಹೊರಳಿಸಲಿಲ್ಲ.

* * *

ಈಗ ಎಂಟು ದಿನಗಳಿಂದ ಡಾಕ್ಟರರು ದವಾಖಾನೆಗೆ ಕೂಡ ಹೋಗಿಲ್ಲ. ಅವರ ಅನೇಕ ಗೆಳೆಯರು ಅವರನ್ನು ಮಾತನಾಡಿಸಲಿಕ್ಕೆ ಬಂದು ತಮಗೆ ತಿಳಿದ ವೇದಾಂತದ ಬುದ್ಧಿವಾದ ಹೇಳುವರು. ಡಾಕ್ಟರರು ಮಾತ್ರ ಮೌನ. ಆ ದಿನ ಪಶುವೈದ್ಯರು ಬಂದು ಹೇಳಿದರು:

"ಡಾಕ್ಟರರೇ! ಈ 'ಸಾಕು ಪ್ರಾಣಿ'ಗಳ ಹಣೆಬರಹವೇ ಹೀಗೆ. ಸಾಕಿದವರ ಮುಂದೆ ಸಾಯುವುದೇ ಅವುಗಳ ಬದುಕು. ಮಾಡುವುದೇನು? ಹೀಗೆಲ್ಲ ನೀವು ಹಚ್ಚಿಕೊಂಡರೆ ಹೇಗೆ?" ಪಶುವೈದ್ಯರು ಹೀಗೆ ಹೇಳುವಾಗ ಡಾಕ್ಟರರ ಕಣ್ಣೊಳಗಿಂದ ಒಂದೇ ಸವನೆ ನೀರು ಸುರಿಯುತ್ತಿದ್ದುವು. ಅವರು ಯಾವಾಗಲೂ ನೋಡುತ್ತಿರುವುದು ಆ ಫೋಟೋದ ಕಡೆಗೆ. ರಾಜಾ ತುಂಬುಮುಖದ ಚಿತ್ರದ ಕಡೆಗೆ.

"ಹುಚ್ಚರ ಹಾಗೆ ಮಾಡಬೇಡಿರಿ ಡಾಕ್ಟರರೇ.... ಬೇಕಾದರೆ ನನಗೆ ಇನ್ನೊಂದು ಕುನ್ನಿಯನ್ನು ದೊರಕಿಸಿ ಕೊಡುತ್ತೇನೆ!" ಪಶುವೈದ್ಯರೆಂದರು.

ಡಾಕ್ಟರರಿಗೆ ಈ ಯಾವ ಮಾತುಗಳ ಅರಿವೂ ಇದ್ದಂತೆ ಕಾಣಲಿಲ್ಲ. ಅವರು ದಿಗ್ಗನೇ ಎದ್ದವರೇ 'ರಾಜಾ! ರಾಜಾ" ಎನ್ನುತ್ತ ಆಫೋಟೋದ ಎದುರು ನಿಲ್ಲಲು ಹವಣಿಸುತ್ತಿರುವಾಗ, ಒಳಗಿನಿಂದ ಮಾಲತಿ 'ರಾಜಾ' ಎನ್ನುತ್ತ ಓಡಿ ಬರಲು, ಜೆಮಿ ಧಡಪಡಿಸುತ್ತ ಅತ್ತಿಂದಿತ್ತ ಓಡಾಡಹತ್ತಿತು.

ಡಾಕ್ಟರರ ತಾಯಿ ಒಂದು ತಟ್ಟೆಯಲ್ಲಿ ಹಾಲನ್ನು ತಂದು ಕಣ್ಣೀರು ತುಂಬಿದವರಾಗಿ "ಜೆಮಿ! ಇದೋ ಕುಡಿ" ಎಂದು ಅದರ ಮುಂದಿಟ್ಟರು. ಜೆಮಿ ಡಾಕ್ಟರರ ಕಡೆಗೆ ನೋಡಿತು. ಡಾಕ್ಟರರ ಕಂಠ ಬಿಗಿದು ಬಂದರೂ ಅದನ್ನು ತೋರಗೊಡದೆ, ಜೆಮಿಯ ಬೆನ್ನನ್ನು ಚಪ್ಪರಿಸುತ್ತ "ಕುಡಿ ಜೆಮಿ" ಎಂದು ಮೈಮೇಲೆ ಒಕ್ಕರಿಕೆಯಿಂದ ಕೈಯಾಡಿಸಿದರು. ಜೆಮಿ 'ಲೊಚ್ ಲೊಚ್' ಎಂದು ಅರ್ಧ ಕುಡಿಯುವಾಗಲೆ ಓಡಿಹೋಯಿತು.

ಡಾಕ್ಟರರ ತಾಯಿ ನುಡಿದರು:

"ಎಷ್ಟೆಂದರೂ ತಾಯಿಯ ಕರುಳು!"

ಕಳೆದ ಹನ್ನೆರಡು ವರ್ಷಗಳಿಂದ ಕನ್ನಡದ ಸೇವೆ ಮಾಡುತ್ತಿರುವ
ದಕ್ಷಿಣ ಕನ್ನಡ ಜಿಲ್ಲೆಯ ಒಂದೆ ಒಂದಾದ
ಸಾಹಿತ್ಯಕ—ಲೋಕಪ್ರಿಯ—ಪ್ರಗತಿಪರವಾದ ಎಂದು ಹೆಸರಾದ

ಕನ್ನಡ ಮಾಸಪತ್ರಿಕೆ

ವಾ.ಚಂ. ಅಂ.ವೆ. ಸೇರಿ ೨.೪.೦ | ಧುರೀಣ | ಪ್ರತಿಸಂಚಿಕೆಗೆ ೦-೩-೦

ಸಂಪಾದಕರು

ಶ್ರೀ ಆರ್. ಎಸ್. ಶೆಣೈ ....
ಶ್ರೀ. ಬನ್ನಂಜೆ ರಾಮಾಚಾರ್ಯ

ಕನ್ನಡನಾಡಿನ ಸಮರ್ಥ ಬರೆಹಗಾರರ ಕತೆ, ಕವನ, ಲೇಖನಗಳಿಂದ ತುಂಬಿದ ಸಂಚಿಕೆಗಳು. ಜಾಹೀರಾತು ಕೊಡಬೇಕೆನ್ನುವವರಿಗೆ ಅತ್ಯುತ್ತಮ ಸಾಧನ.

ಮ್ಯಾನೇಜರ್:—
ಧುರೀಣ ಉಡುಪಿ (ದ. ಕ. ಜಿಲ್ಲಾ)

ಎಚ್ಚರಿಯೊ ತಂದೆ

ಶ್ರೀ. ಸಿ. ಕೆ. ದೀಕ್ಷಿತ, ಧಾರವಾಡ

೧

ಅದೊ, ನೋಡು ದಂಡು: ಶಾನಗಳ ಹಿಂಡು;
ಹೊಡೆ, ಬೀಸು, ಕವಣೆಗಲ್ಲು.
ನಿನ್ನೆದೆಯ ಗಂಡು - ಮುಸೆದು, ಸಿಡಿಗಂಡು
ಬಡಿದೊತ್ತು ಕೆರಳಿ ನಿಲ್ಲು!

೨

ದುಡಿವಣ್ಣ ನೀನು; ಒಡಲು ಬರಿದೇನು?
ಹರಿಯುತಿದೆ ನಿನ್ನ ಹೊಟ್ಟೆ.
ಈ ಅತಿಥಿ ದಂಡು, ಕಣಜವನೆ ಉಂಡು,
ಬೆಳಿಸುವರು ತಮ್ಮ ಮೊಟ್ಟೆ.

೩

ನೀ ಕೊಟ್ಟೆ ಜಾನ; ಮರೆತರಾ ದಾನ;
ತಲೆತಲೆಗೆ ಒಂದು ಬಿರುದು.
ಮಣಿಮಾಲೆ ಕೊರಳ ಬಿಗಿದೊಮ್ಮೆ ಉರುಳ
ತರುವುದೋ ಮಾನ ಹಿರಿದು!

೪

ಮೆರೆವಣಿಗೆ ಕೇಕೆ, ತಂದೆಯನೆ ನೂಕೆ!
ಏಂತೀನು ಮೆಯ್ಯ ಕೊಬ್ಬೆ?
ಹೆಂಬೀಡಿ ಲೋಕ; ಮೆದುಳೆಲ್ಲ ಮೂಕ;
ಒರಲುವರು: 'ಅಯ್ಯೊ ಅಬ್ಬೆ!'

೫

ಗೌರವದ ರೊಜ್ಜು ಮುಳುಮುಳುಗಿ ಕಜ್ಜ
ಕೆಡಹಿತೋ ಎದೆಯ ಕೆಚ್ಚು.
ಮರೆಸಲಾ ಕೊಂಕು, 'ನಿನ್ನಡಿಯ ಸೊಂಕು
ದಯೆಮಾಡು' ಎಂಬ ಹುಚ್ಚು!

೬

ಏನೆಂಥ ವೇಷ; ಮಾಡುವರು ಮೋಸ;
ಎಚ್ಚರಿಯೊ ಮೊದಲು ತಂದೆ!
ನಿನ್ನ ಬಿಡುಗಣ್ಣು, ತೆರೆದು ಉರಿಸಣ್ಣ;
ಮೈ ತಳೆದ ಸೊಕ್ಕು ಇಂದೆ!

ಕನ್ನಡ ನುಡಿಯಲ್ಲಿ ಬಳಕೆಗೆ ಬಂದಿರುವ ★ ಕೆಲವು ಪೋರ್ತುಗೀಸ್ ಶಬ್ದಗಳು

ಪ್ರೊ. ಎಂ. ಮರಿಯಪ್ಪ ಭಟ್ಟ ಎಂ.ಎ. ಮದರಾಸ್ ವಿಶ್ವವಿದ್ಯಾನಿಲಯ

★

ಜೀವಂತ ಭಾಷೆಯ ನದಿಗಳು ತುಂಬಿ ಹರಿಯುತ್ತಿರುವುದು, ಹಲವು ಪರಭಾಷಾ ಪ್ರವಾಹಗಳ ಬಿರಕೆಯ ನೆರವಿನಿಂದ. ಕನ್ನಡಕ್ಕೆ ಅನ್ಯದೇಶ್ಯ ಶಬ್ದಗಳು ಹಲವು ಕಡೆಯಿಂದ ಬಂದು, ಕನ್ನಡ ಮುದ್ರೆಯನ್ನೊತ್ತಿಸಿಕೊಂಡು ಕೆಲಸಮಾಡುತ್ತಲಿವೆ.

★

ಕನ್ನಡದ ಶಬ್ದಭಂಡಾರವನ್ನು ಪರೀಕ್ಷಿಸುವವರು ಶಬ್ದಗಳನ್ನು ದೇಶ್ಯ, ಅನ್ಯದೇಶ್ಯ, ತತ್ಸಮ, ತದ್ಭವ ಇತ್ಯಾದಿಗಳಾಗಿ ವರ್ಗೀಕರಿಸುವುದು ವಾಡಿಕೆಯಾಗಿದೆ. ಇವುಗಳಲ್ಲಿ ಇಂಗ್ಲಿಷು, ಪೋರ್ತುಗೀಸ್, ಅರಬ್ಬೀ, ಪರ್ಶಿಯನ್ ಮುಂತಾದ ಪರದೇಶಗಳ ನುಡಿಗಳಿಂದ ಬಂದುವುಗಳನ್ನು "ಅನ್ಯದೇಶ್ಯ"ಗಳೆನ್ನುವರು. ಅನ್ಯದೇಶ್ಯಗಳಲ್ಲಿ ಪೋರ್ತುಗೀಸ ನುಡಿಯಿಂದಲೂ ಕೆಲವು ಮನೋಹರವಾದ ಪದಗಳು ಕನ್ನಡಕ್ಕೆ ಬಂದುದುಂಟು. ಅವುಗಳ ಪ್ರಯೋಗ ಕನ್ನಡದಲ್ಲಿ ಎಷ್ಟು ಸ್ವಾಭಾವಿಕವಾಗಿ ಬಿಟ್ಟಿದೆ ಎಂದರೆ, ಇಂದು ಅನೇಕರು ಅವುಗಳು ಕನ್ನಡ ಮೂಲದಿಂದ ಬಂದುವುಗಳಲ್ಲವೆಂಬುದನ್ನೂ ನಂಬದಿರಬಹುದು; ಆದರೆ ಅವುಗಳ ಮೂಲವನ್ನು ಪೋರ್ತುಗೀಸಿನಲ್ಲಿ ಕಂಡಾಗ ವಿಷಯವು ಮಂದಟ್ಟಾದೀತು. ಮಾತ್ರವಲ್ಲ, ಅವುಗಳಲ್ಲಿ, ಹೆಚ್ಚಿನವು ಸೂಚಿಸುವ ವಸ್ತುಗಳು ಮೊದಲು ನಮ್ಮ ನಾಡಿನವಲ್ಲ, ಪೋರ್ತುಗೀಸರ ಆಗಮನದ ಮೇಲೆ ನಮ್ಮಲ್ಲಿಗೆ ಬಂದುವು ಎಂಬುದರ ಅರಿವೂ ಉಂಟಾಗುವುದು.

೧. **ಜಂಗಾಲ್**:— ಎತ್ತಿನ ಬಂಡಿ, ಮೋಟಾರುಬಂಡಿ ಮುಂತಾದುವುಗಳನ್ನು ಕಡವುಗಳಲ್ಲಿ (ferry) ಒಂದೇ ದೋಣಿಯಲ್ಲಿಟ್ಟು, ಹೊಳೆಯ ಒಂದು ದಡದಿಂದ ಇನ್ನೊಂದು ದಡಕ್ಕೆ ದಾಟಿಸಲಾಗುವುದಿಲ್ಲ. ಎರಡು ಅಥವಾ ಹೆಚ್ಚಿಗೆ ದೋಣಿಗಳನ್ನು ಜೋಡಿಸಿ, ಮೇಲೆ ಹಲಗೆಗಳನ್ನಿಟ್ಟು, ಅವುಗಳ ಮೇಲೆ ಒಯ್ಯಬೇಕಾದ ಬಂಡಿಗಳನ್ನೊ ಅಥವಾ ಇತರ ಭಾರವಾದ ವಸ್ತುಗಳನ್ನೊ ಇಡುತ್ತಾರೆ. ಈ ವ್ಯವಸ್ಥೆಯನ್ನು "ಜಂಗಾಲ್" ಎನ್ನುತ್ತಾರೆ. ಇದು ಪೋರ್ತುಗೀಸಿನಲ್ಲಿ ಜಂಗಡ. (Jungada = raft, floats for conveying burdens do n a river.)

೨. **ಮೇಜು**:— ಇದು ನಮ್ಮ ಜೀವನದಲ್ಲಿ ಅತ್ಯುಪಯುಕ್ತವಾದ ಒಂದು ಸಾಮಾನು. ನಮ್ಮಲ್ಲಿ ಮೊದಲು ಆ ಸ್ಥಾನದಲ್ಲಿ 'ಪುಸ್ತಿ' (ಬರೆಯುವಾಗ ಒತ್ತಡಂತೆ ಅಡಿಯಲ್ಲಿಡುವ ಪುಸ್ತಕ. ದಂತಹ ಒಂದು ಹಲಗೆ, ಅಥವಾ ಪುಸ್ತಕ), 'ಒತ್ತು' ಪೀಠ, ಮಣೆ ಮುಂತಾದುವಿದ್ದುವು. ಆದರೆ ಸುಂದರಾಕೃತಿಯ ಮೇಜನ್ನೂ ಆ ಶಬ್ದವನ್ನೂ ನಮ್ಮಲ್ಲಿಗೆ ತಂದವರು ಪೋರ್ತುಗೀಸರು. ಅವರ ನುಡಿಯಲ್ಲಿ ಅದಕ್ಕೆ "ಮೇಸ" (mesa).

೩. **ಬಟಾಟೆ**:— ಪೂರಿಯ ಪ್ರಿಯತಮನೆನಿಸಿದ ಬಟಾಟೆ (ಆಲುಗಡ್ಡೆ) ಯನ್ನೂ ಇಲ್ಲಿಗೆ ಮೊದಲು ತಂದವರು ಅವರೇ. ಅವರ ನುಡಿಯಲ್ಲಿ ಅದನ್ನು 'ಬಟಾಟ' (Batata) ಎಂದು ಕರೆಯುತ್ತಾರೆ. ಇದು ನಮ್ಮ ನುಡಿಯಲ್ಲಿ ಬಳಕೆಯಲ್ಲಿರುವ 'ಬಟಾಟೆ' ಶಬ್ದಕ್ಕೆ ಎಷ್ಟು ಸಮೀಪವಾಗಿದೆ.

೪. **ತಂಬಾಕು**:— ಹೊಗೆಸೊಪ್ಪಿಗೆ ಇದೊಂದು ಹೆಸರು. ಇದು ಪೋರ್ತುಗೀಸಿನಿಂದ ಹಿಂದುಸ್ಥಾನೀ ಮರಾಠೀ ಭಾಷೆಗಳ ಮೂಲಕ, ಕನ್ನಡಕ್ಕೆ ಬಂದಂತಿದೆ. ಪೋರ್ತುಗೀಸಿನಲ್ಲಿ ಟಬಾಕೋ (tabaco) ಎನ್ನುತ್ತಾರೆ.

೫. **ಪಪ್ಪಾಯಿ (ಬಪ್ಪಂಕಾಯಿ)**:— ಇದೂ ನಮಗೆ ದೊರೆತದ್ದು ಪೋರ್ತುಗೀಸರಿಂದ. ಅವರು ನಮ್ಮಲ್ಲಿಗೆ ಇದನ್ನು ತರುವವರೆಗೆ ನಮ್ಮಲ್ಲಿ ಇದು ಇರಲಿಲ್ಲ, ಆದುದರಿಂದ ಈ ಶಬ್ದವೂ ಇರಲಿಲ್ಲ. ಅವರ ನುಡಿಯಲ್ಲಿ ಇದಕ್ಕೆ 'ಪಪಾಯ' (Carica papaya) ಎನ್ನುತ್ತಾರೆ.

೬. **ಅನನಾಸು**— ಈ ರುಚಿಕರವಾದ ಮತ್ತು ಆರೋಗ್ಯಕರವಾದ ಹಣ್ಣನ್ನು ನಮ್ಮ ನಾಡಿಗೆ ತಂದ ಕೀರ್ತಿಯು ಪೋರ್ತುಗೀಸರಿಗೆ ಸಲ್ಲತಕ್ಕುದು. ಇದಕ್ಕೆ 'ಫರಂಗಿ ಹಲಸಿನ ಕಾಯಿ' ಅಥವಾ 'ಫರಂಗಿ ಚಕ್ಕೆ' ಎಂದೂ ಹೇಳುವುದುಂಟು. (ಚಕ್ಕೆ ಎಂದರೆ ಮಲೆಯಾಳದಲ್ಲಿ ಹಲಸಿನಕಾಯಿ. ಈ

'ಚಕ್ಕ'ಯೇ, ಇಂಗ್ಲಿಷಿನಲ್ಲಿ Jack-fruit ಆಯಿತು.) ಫರೆಂಗಿಯವರು ತಂದ ವಿಶೇಷವಸ್ತುವಾದುದರಿಂದ ಅದಕ್ಕೆ ಹಾಗೆ ನಾಮಕರಣಮಾಡಿರ ಬೇಕು. ಆದರೆ ಈಗ ಅನನಾಸು ಎಂಬ ಪದವೂ ಬಹಳ ಪ್ರಸಿದ್ಧವಾಗಿದೆ ಪೋರ್ತುಗೀಸಿನಲ್ಲಿ ಇದನ್ನು ಅನನಾಸ್ (Ananas) ಎಂದು ಹೇಳುತ್ತಾರೆ.

೭. ಶಾಲಂ—ಮೈಮೇಲೆ ಹಾಕಿಕೊಳ್ಳುವ ವಸ್ತ್ರವಿಶೇಷಕ್ಕೆ ಶಾಲು ಎನ್ನುತ್ತಾರೆ. ಇದೂ ಪೋರ್ತುಗೀಸಿನ 'ಚಾಲೆ' Chale) ಎಂಬ ಶಬ್ದದಿಂದ ಬಂದುದೆಂದು ಕೆಲವರು ವಿದ್ವಾಂಸರು ಅಭಿಪ್ರಾಯಪಟ್ಟಿರುತ್ತಾರೆ. (Chale = Shawl)

೮. ಚಬುಕು—ಬಂಡಿಹೊಡೆಯುವವರಿಗೆ ಬೇಕಾದ ಮುಖ್ಯಸಾಧನವಿದು. ವ್ಯಾಯಶಃ ನಮ್ಮಲ್ಲಿ ಮೊದಲು ಕೋಲಿನಿಂದ ಹೊಡೆಯುತ್ತಿದ್ದರು. ಪೋರ್ತುಗೀಸರು ಚಬುಕಿನಿಂದ ಹೊಡೆಯಲು ಹೇಳಿಕೊಟ್ಟರು. ಅಂತು ಹೊಡೆತವಿಲ್ಲದೆ ಕಾರ್ಯವು ಸಾಗುವ ಉಪಾಯ ಅವರಲ್ಲೂ ಇರಲಿಲ್ಲ. ಅವರ ನುಡಿಯಲ್ಲಿ ಇದಕ್ಕೆ "ಚಬುಕೋ" (Chabuco = whip) ಎಂದು ಹೆಸರು.

೯. ಸಾಬೂನು (ಸಬ್ಬು)—ಪೋರ್ತುಗೀಸಿನಲ್ಲಿ ಇದನ್ನು 'ಸಬಾಒ' (Sabao = soap) ಎನ್ನುತ್ತಾರೆ. ಸಬಾಒ—ಸಾಬೂನು ಅಥವಾ ಸಬ್ಬು ಎಂದಾಯಿತು. (ನಮ್ಮಲ್ಲಿಗೆ ಸಬ್ಬು ಬಂದುದು ಪರದೇಶದವರ ಆಗಮನದ ಮೇಲೆಂದಾದರೂ, ನಮಗೆ ತೊಳೆಯುವುದನ್ನು ಕಲಿಸಿದವರು ಅವರಲ್ಲ. ಸೀಗೆ, ನೊರೆಕಾಯಿ, ಜಾಗೆ ಮುಂತಾದ ಅನೇಕ ಸಸ್ಯೋತ್ಪತ್ತಿಗಳು ತೊಳೆಯುವಲ್ಲಿ ಉಪಯೋಗವಾಗುತ್ತಿದ್ದುವು. ಕೆಲವು ಬೇಳೆ ಈ ಸೀಗೆ-ಜಾಗೆಗಳು ಸಾಬೂನಿನಿಂದಾಗದ ನಿರ್ಮಲಕಾರ್ಯಗಳನ್ನು ಮಾಡುತ್ತವೆ.)

೧೦ ಟುವಾಲು (ಟವೆಲು) :— ಪೋರ್ತುಗೀಸರು ಇದನ್ನು ಟೊಅಲ್ಹಾ (Toalha = towel) ಎನ್ನುತ್ತಾರೆ. ಮೈ ಒರಸಿಕೊಳ್ಳಲು ಅನುಕೂಲವಾದ ಅಳತೆಯ ಮತ್ತು ನೆಯ್ಗೆಯ ಬಟ್ಟೆಯ ತುಂಡು. ಈಗ ನಮ್ಮಲ್ಲಿ ಸ್ನಾನಕ್ಕೆ ಹೋಗುವಾಗ ಕೇಳುವುದು "ಟವೆಲ್ ಎಲ್ಲಿದೆ?", ಎಂಬುದಾಗಿ. ಹಳೆಯವುಗಳಾದ—ನೀರುಡೆ, ತೋರತ್ತು, ಪಾಣಿಪಂಚೆ ಇತ್ಯಾದಿಗಳು ಕಣ್ಮರೆಯಾಗಿವೆ. ಈ 'ಟವೆಲ್ಲಿ'ನ ಹಿಡಿತವು ಎಷ್ಟರ ಮಟ್ಟಿಗೆ ಬಂದು ಬಿಟ್ಟಿದೆ ಎಂದರೆ, ಹಳ್ಳಿಗಳಲ್ಲಿ ಕೆಲವರು ಕೈಚೌಕವನ್ನು (Hand-kerchief) 'ಟುವಾಲು' ಎಂಬುದಾಗಿ ಕರೆಯುತ್ತಾರೆ. ಮೇಲೆ ಕೊಟ್ಟವು ಕೆಲವು ಉದಾಹರಣೆಗಳು. ಇನ್ನೂ ಪರಿಶೀಲಿಸಿದರೆ, ಕನ್ನಡದಲ್ಲಿ ಇತರ ಪೋರ್ತುಗೀಸ್ ಪದಗಳು ಸಿಕ್ಕಬಹುದು. ಕೆಲವು ಶಬ್ದಗಳು ಇತರ ದ್ರಾವಿಡ ನುಡಿಗಳಿಗೆ ಬಂದುದುಂಟು, ಕನ್ನಡಕ್ಕೆ ಬರಲಿಲ್ಲ. "ಜನೆಲ್ಲ" (Janella = window) ಎಂಬ ಪೋರ್ತುಗೀಸ್ ಶಬ್ದವು ತಮಿಳಿಗೆ "ಜನಲ್" (ಕಿಟಿಕಿ) ಎಂಬುದಾಗಿ ಬಂದು ರೂಢಿ ಪಡೆದಿದೆ. ಆದರೆ ಇದು ಕನ್ನಡದಲ್ಲಿಲ್ಲ.

ಇಂತಹ ವಿಚಾರದಿಂದ ಹೇಗೆ ಒಂದು ನುಡಿಯ ಶಬ್ದಭಂಡಾರವು ಬೆಳೆಯುತ್ತದೆಂಬುದು ಸ್ವಲ್ಪವಾದರೂ ತಿಳಿದುಬರುವುದು. ಬೇರೆ ಬೇರೆ ಸಂಸ್ಕೃತಿಯ ಜನಾಂಗಗಳು ಸಂಧಿಸುವುದರಿಂದ ಮಪತ್ತ್ವದ ಪರಿಣಾಮಗಳುಂಟಾಗುತ್ತವೆ. ಪರಸ್ಪರಕೊಳ್ಳುವುದೂ ಕೊಡುವುದೂ ನಡೆಯುತ್ತದೆ. ಆಚಾರ, ನೀತಿ, ಆಹಾರ, ಉಡಿಗೆತೊಡಿಗೆ ಮುಂತಾದ ಜೀವನಕ್ಕೆ ಸಂಬಂಧಿಸಿದ ಅಂಶಗಳಲ್ಲಿ ಬದಲಾವಣೆಗಳು ತಲೆದೋರುತ್ತವೆ ಆ ಬದಲಾವಣೆಗಳೊಂದಿಗೆ ಅವುಗಳನ್ನು ಸೂಚಿಸುವ ನೂತನ ಶಬ್ದಗಳೂ ಬಂದುಬಿಡುತ್ತವೆ. ಹೀಗಾಗುವುದು ಜೀವಂತ ಸಮಾಜದ ಆರೋಗ್ಯ ಲಕ್ಷಣ.

ಬಡತನದ ಬಾಳು

★

'ಆನಂದಕಂದ'ರ ಕಥಾಸಂಗ್ರಹ.

ಕನ್ನಡ ಜನತೆಯ ಜೀವನದ ಸಜೀವವಾದ ಚಿತ್ರ
ಇದರಲ್ಲಿ ಮೂಡಿದೆ.
ಬೇಕಾದವರು
'ಜಯಂತಿ' ಕಾರ್ಯಾಲಯಕ್ಕೆ
ಬರೆಯಿರಿ.

೫೦ ವರ್ಷಗಳಿಂದ ಅನುಭವಪಟ್ಟ
ಕರ್ಕ ಮತ್ತು ಕಂಪನಿಯ
ಜ್ವರಗಡ್ಡೆಯ ಗುಳಿಗೆಗಳು.

ಬಾಟ್ಲಿಗೆ ೧-೮-೦

ಎಂಥಹ ಜ್ವರಗಡ್ಡೆಯನ್ನೂ ಕಳೆಯುವುದು.

ಏಳಾಸು:—
ಗಣೇಶ ರಾಮಚಂದ್ರ ಕರ್ಕ ಮತ್ತು ಕಂಪನಿ
ಗಿರಗಾಂವ, ಮುಂಬಯಿ.

ಅವ್ಯವಹಾರ್ಯ ಪಾಕಿಸ್ತಾನ ★ ಲೇಖಾಂಕ (೧)

ಡಾ. ಎಚ್. ಬಿ. ಕೊಣ್ಣೂರ ಎಲ್.ಸಿ.ಪಿ.ಎಸ್. ಗದಗ

★

ಕೇವಲ ಮತಧರ್ಮದ ತಳಹದಿಯಮೇಲೆ ಕಟ್ಟುವ ರಾಜ್ಯಗಳು ಎಂದೂ ಯಶಸ್ವಿಯಾಗಿ ಬಾಳವು. ಮತಧರ್ಮ ವ್ಯಕ್ತಿತ್ವದ ವಿಕಾಸಕ್ಕೆ ಬೇಕು; ರಾಜ್ಯ ಸಮಾಜದ ಸಂರಕ್ಷಣೆಗಾಗಿ ಇರಬೇಕು. ರಾಜ್ಯಗಳು ಬಲಾತ್ಕಾರದಿಂದ ವ್ಯಕ್ತಿಗಳ ಮೇಲೆ ಮತಧರ್ಮದ ಹೊರೆ ಹೊರಿಸುತ್ತಹೋದರೆ, ಸಮಾಜದಲ್ಲಿ ಶಾಂತಿ-ಸಮಾಧಾನಗಳು ಉಳಿಯಬಹುದೆ !

★

ಪಾಕಿಸ್ತಾನದ ಹುಯಿಲು ಈಗ ಅತಿರೇಕವನ್ನು ಮುಟ್ಟಿದೆ. ಜನತೆಯನ್ನು ಆದಲು ಬದಲು ಮಾಡುವ ಹುಚ್ಚು-ಮಾತುಗಳೂ ಮೊರೆಯು ತೊಡಗಿವೆ. ಇದೀಗ ಈ ಪ್ರಶ್ನೆಯನ್ನು ಹಿಂದುಸ್ತಾನದಲ್ಲಿಯ ಪ್ರತಿಯೊಬ್ಬ ಮುಸಲ್ಮಾನ್ ಗೃಹಸ್ಥನೂ ಕೂಲಂಕಷವಾಗಿ ವಿಚಾರಿಸುವ ಸಮಯ ಬಂದಿದೆ.

ಪಾಕಿಸ್ತಾನವೆಂದರೆ ಕೇವಲ ಧರ್ಮದ ತಳಹದಿಯ ಮೇಲೆಯೇ ಕಟ್ಟಲ್ಪಡತಕ್ಕ ಮುಸಲ್ಮಾನ್ ರಾಜ್ಯವೆಂಬುದು ಮೇಲೆಯೇ ಕಾಣುತ್ತದೆ. ಏಕೆಂದರೆ ಪಾಕಿಸ್ತಾನವೇ ತನ್ನ ಅಂತಿಮ ಗುರಿಯೆಂದು ಸಾರಿಹೇಳುವ ಲೀಗು, ಕೇವಲ ಜಾತಿ-ಪ್ರಧಾನ ಸಂಸ್ಥೆ; ಅಲ್ಲದೆ ಅದರ ಅಧ್ಯಕ್ಷರಾದ ಬ್ಯಾ. ಜಿನ್ನಾ ಅವರು ಕೂಡ 'ಪ್ರಜಾಸತ್ತಾತ್ಮಕ ರಾಜ್ಯವು ಹಿಂದೀ ಜನತೆಗೆ ಬಗ್ಗತಕ್ಕಂತಹ ಪದ್ಧತಿಯಲ್ಲ'ಎಂದು ಒಂದಡೆ ಹೇಳಿದ್ದಾರೆ. ಆದರೆ ಹೀಗೆ ಧಾರ್ಮಿಕ ತಳಹದಿಯ ಮೇಲೆ ಕಟ್ಟಲ್ಪಟ್ಟ ಯಾವ ರಾಜ್ಯವೂ ಬಹುದಿವಸ ಬದುಕಿ ಬಾಳಿಲ್ಲವೆಂಬುದನ್ನು ಇತಿಹಾಸವು ಸಾರಿ ಹೇಳುತ್ತದೆ. ಇಷ್ಟೇ ಅಲ್ಲ, ಇಂತಹ ರಾಜ್ಯವು ಅನೇಕ ತರದ ಕಷ್ಟ-ನಷ್ಟಗಳಿಗೆ ಮಾತ್ರ ಎಡೆಮಾಡಿ ಕೊಟ್ಟಿದೆ. ಧರ್ಮದ ಹೆಸರಿನಲ್ಲಿ ರಾಜ್ಯಗಳಿಸುವ ಧೋರಣೆಯನ್ನು ಸ್ವೀಕರಿಸಿದ ಅರಸರೂ ಸಂಸ್ಥೆಗಳೂ ಕಡೆಗೆ ತಮ್ಮ ಧ್ಯೇಯ ಸಾಧಿಸಲಾರದೆ ನಿರ್ನಾಮವಾಗಿವೆ.

ಇಂಗ್ಲಂಡಿನಲ್ಲಿ ರೋಮನ್ ಕ್ಯಾಥೋಲಿಕ್ ಚರ್ಚು ತನ್ನ ವರ್ಚಸ್ಸನ್ನು ರಾಜ್ಯದಾಡಳಿತದ ಮೇಲೆ ಇಡಲು ಹೋಗಿ ಪರಾಭವ ಹೊಂದಿದೆ. ಈಗ ಅಲ್ಲಿ ಧರ್ಮವು ರಾಜ್ಯದಾಡಳಿತದಲ್ಲಿ ಕೈಹಾಕುವುದಿಲ್ಲ; ಆದರೆ ಆದಕ್ಕೆ ಅಲ್ಲಿ ಹಿರಿಗೆ ಮಾತ್ರ ಮಾನವಿದೆ. ಪಾಲಿಸ್ತೈನವನ್ನು ಗೆಲ್ಲಲು ಮುಸಲ್ಮಾನರ ಮೇಲೆ ಮಾಡಿದ ಕ್ರಿಶ್ಚನ್ ಧರ್ಮದ ದಂಡಯಾತ್ರೆಗಳು ನಿಷ್ಫಲವಾದವನ್ನು ಮುಸಲ್ಮಾನ್ ಬಾಂಧವರು ಅರಿತುಕೊಳ್ಳಬೇಕು. ಹಿಂದೂ ಅರಸರು ಕೂಡ ಧರ್ಮಪ್ರಸಾರಾರ್ಥವಾಗಿ ಯುದ್ಧ ಮಾಡಿದ ಉದಾಹರಣೆಗಳಿವೆ; ಆದರೆ ಅವು ಪರರಾಜ್ಯಗಳ ಆಕ್ರಮಣಕ್ಕಾಗಿಯಲ್ಲ; ಎಲ್ಲವೂ ಹಿಂದುಸ್ತಾನದಲ್ಲಿಯೆ ನಡೆದ ಕಾಳಗಗಳವು. ಆಶೋಕ ಸಮ್ರಾಟನೊಬ್ಬ ಮಾತ್ರ ಧರ್ಮ ಪ್ರಸಾರಾರ್ಥ ಅದೂ ಹಿಂದುಸ್ತಾನದಲ್ಲಿಯೆ—ಎರಡನೆಯ ಪ್ರಾಂತಗಳನ್ನು ಗೆಲ್ಲಲು ಹೊರಟಿದ್ದನು.

ವಿಜಯನಗರದ ಅರಸರೂ, ಶ್ರೀಶಿವಾಜಿ ಮಹಾರಾಜನೂ ಮಾಡಿದ ಯುದ್ಧಗಳು ಕೇವಲ ಹಿಂದೂ ಧರ್ಮ ಸಂರಕ್ಷಣಾರ್ಥವಾಗಿ ಇದ್ದುವು. ತಮ್ಮ ಧರ್ಮದ ಮೇಲೆ ಆಗುತ್ತಿರುವ ಪರಕೀಯರ ದಾಳಿಯನ್ನು ತಡೆಯುವುದಷ್ಟೆ ಅವರ ಉದ್ದೇಶವಿದ್ದಿತಲ್ಲದೆ, ತಮ್ಮ ಧರ್ಮವನ್ನು ಎರಡನೆಯವರ ಮೇಲೆ ಹೇರಲು ಯುದ್ಧ ಮಾಡಲಿಲ್ಲ. 'ಹಾಗಾದರೆ ಹಿಂದೂ ಧರ್ಮವು ಪರದೇಶಗಳಲ್ಲಿ ಕೂಡ ಹಬ್ಬಿದೆಯಲ್ಲಾ ?' ಎಂಬ ಪ್ರಶ್ನೆಗೆ ಉತ್ತರ ಏಷ್ಟೇ : ಹಿಂದುಗಳು ಕೇವಲ ತಮ್ಮ ಬೌದ್ಧಿಕ ಶ್ರೇಷ್ಠತೆಯಿಂದ ಇದನ್ನು ಸಾಧಿಸಿದ್ದಾರೆ. ಪಂಜಾಬದಲ್ಲಿ ಸಿಖರು ಮುಸಲ್ಮಾನರ ದಬ್ಬಾಳಿಕೆಯನ್ನು ಯಶಸ್ವಿಯಾಗಿ ಎದುರಿಸಿದುದು ಕೇವಲ ಧರ್ಮ ಸಂರಕ್ಷಣಾರ್ಥವಾಗಿಯೆ. ಅವರ ಶೂರತನ, ಜಿಗುಟುತನದಿಂದ ಮಾತ್ರ ಹಿಂದೂ ಧರ್ಮವು ಅಲ್ಲಿ ಉಳಿಯಲು ಶಕ್ಯವಾಯಿತು. ಧರ್ಮಪ್ರಸಾರಾರ್ಥವಾಗಿ ಸಂಚಾರ ಕೈಕೊಂಡ ಶ್ರೀಶಂಕರಾಚಾರ್ಯ, ಶ್ರೀಮಧ್ವಾಚಾರ್ಯ, ಶ್ರೀಬಸವೇಶ್ವರಾದಿ ಮಹಾಪುರುಷರ ಜೊತೆಗೆ ಸೈನ್ಯವಿರಲಿಲ್ಲ ! ಇದರ ಕರ್ತೃಯ ಬಲಾತ್ಕಾರದಿಂದಾದರೂ ತಮ್ಮ ಧರ್ಮಪ್ರಸಾರ ಮಾಡಲು ಹೊರಟ ಮುಸಲ್ಮಾನ ಅರಸರುಗಳ ಉದಾಹರಣೆಗಳು ಧಾರಳವಾಗಿವೆ. ಹೀಗೆ ಹಿಂಸಾಮಾರ್ಗದಿಂದ ಧರ್ಮಪ್ರಸಾರ ಮಾಡಲು ಕುರಾಣದಲ್ಲಿ ಎಲ್ಲಿಯೂ ಹೇಳಿಲ್ಲ. ಕೆಲವು ವಾಕ್ಯಗಳ ಅಪಾರ್ಥವೇ ಈ ಧರ್ಮಾಂತರದ ಪ್ರಯತ್ನಕ್ಕೆ ಎಡೆಮಾಡಿ ಕೊಟ್ಟಿದೆ. ಹೊರಗಿನಿಂದ ಹಿಂದುಸ್ತಾನಕ್ಕೆ ಬಂದು ಯುದ್ಧ ಮಾಡಿ, ಮೂರ್ತಿಗಳನ್ನು ಒಡೆದು, ಬಲಾತ್ಕಾರದಿಂದ ಗೋಮಾಂಸ ತಿನ್ನಿಸಿ ಧರ್ಮಾಂತರಗೊಳಿಸಲು ಪ್ರಯತ್ನಿಸಿದ ಮುಸಲ್ಮಾನರು, ತಮ್ಮ ಯತ್ನದಲ್ಲಿ ಯಶಸ್ವಿಯಾಗಲಿಲ್ಲ ; ಇಷ್ಟೇ ಅಲ್ಲ

ತಾವೇ ಇಲ್ಲಿ ನೆಲಸಿಬಿಟ್ಟರು! ಹಿಂದುಸ್ತಾನವೇ ತಮ್ಮದೆಂದು ಭಾವಿಸಿಕೊಂಡು ಈಗ ಸಾವಿರ ವರುಷಗಳಿಂದ ಬಾಳುತ್ತಲಿದ್ದಾರೆ! ಹಿಂದೂ ಧರ್ಮದ ಮೇಲೆ ಅನೇಕರು, ಅನೇಕ ಸಲ, ಅನೇಕ ತರದ ದಾಳಿಮಾಡಿದ್ದರೂ, ಅದಿನ್ನೂ ಅಜರಾಮರವಾಗಿಯೇ ಇದೆ. ಅದಕ್ಕೆ ಕಾರಣ ಅದರ ಹೃದಯವೈಶಾಲ್ಯ ಹಾಗು ಸಹಿಷ್ಣುತೆ. ಈಗ ಮುಸಲ್ಮಾನ್ ಜನರು ಹಿಂದುಸ್ತಾನವು ತಮ್ಮ ಮಾತೃಭೂಮಿ ಎಂದು ತಿಳಿಯುವಷ್ಟರ ಮಟ್ಟಿಗೆ ಹಿಂದೂ ಜನರೊಂದಿಗೆ ಅನ್ಯೋನ್ಯರಾಗಿ ಬಿಟ್ಟಿದ್ದಾರೆ! ಈ ಮಾತನ್ನು ಅಸಾಮಾನ್ಯಪಂಡಿತರಾದ ಮೌಲಾನಾ ಅಬುಲ್ ಕಲಮ್ ಅಝಾದ್‌ರವರೇ ಹೇಳಿದ್ದಾರೆ:— "ಅನೇಕ ತರದ ಧರ್ಮ, ಮತಗಳ ಆಶ್ರಯಸ್ಥಾನವಾಗುವ ಭಾಗ್ಯ ಹಿಂದುಸ್ತಾನಕ್ಕಿದೆ. ತೀರ ಇತ್ತೀಚೆಗೆ ಹೊರಗಿನಿಂದ ಬಂದು ಶಾಶ್ವತ ಆಶ್ರಯಪಡೆದ ಧರ್ಮವೆಂದರೆ ಇಸ್ಲಾಮ್. ಈ ಹಿಂದೂ ಮತ್ತು ಇಸ್ಲಾಂ ಜನಾಂಗಗಳು ಗಂಗಾ-ಯಮುನಾ ನದಿಗಳಂತೆ— ಮೊದಲು ಬೇರೆಬೇರೆಯಾಗಿ ಹರಿದರೂ ಕಡೆಗೆ ಸಂಗಮದಲ್ಲಿ ಲೀನವಾದಂತೆ, ಈ ಸಾವಿರ ವರ್ಷಗಳ ಅವಧಿಯಲ್ಲಿ ಈ ಎರಡೂ ಜನಾಂಗಗಳು ಸಮಾನ ರಾಷ್ಟ್ರೀಯತೆಯನ್ನು ಪಡೆದಿವೆ!" ಈ ಅವಧಿಯಲ್ಲಿ ಇಸ್ಲಾಮ್ ತನ್ನದೇ ಆದ ವೈದ್ಯಕೀಯ ಜ್ಞಾನ, ಸಂಗೀತ, ಜ್ಯೋತಿಷ, ಗಣಿತ ಇತ್ಯಾದಿ ಶಾಸ್ತ್ರಗಳನ್ನು ಭಾರತಕ್ಕೆ ನೀಡಿದೆ.

ಇದೀಗ ರಾಜಕಾರಣದ ತಿಪ್ಪೆಯೊಳಗಿಂದ 'ನಾವು ಬೇರೆ, ನೀವು ಬೇರೆ' ಎಂಬ ದುರ್ವಾಸನೆ ಹೊರಟಿದೆ. ಈ ವಾಸನೆ ಅತಿಯಾಗಿ ಬುದ್ಧಿ ಮಸಣಿಸಿದೆ! ಪುನಃ ಕತ್ತಿಯಿಂದಲೇ ತನ್ನ ಧರ್ಮದ ತಳಹದಿಯ ಮೇಲೆ ಇಲ್ಲಿಯೇ ರಾಜ್ಯಕಟ್ಟಬೇಕೆಂಬ ವಿಚಾರದ ಹುಚ್ಚು ಜೊಳೆ ಹರಿಯತೊಡಗಿದೆ. ಅದರ ಇತ್ತೀಚಿನ ಪ್ರಥಮ ಪ್ರಯತ್ನ ಕಲಕತ್ತಾ, ನವಖಾಲಿ, ತಿಪ್ಪೇರಾಗಳಲ್ಲಿಯಾದ ಹಿಂದೂ ಜನರ ಮೇಲಿನ ದಾಳಿ.

ಇಡೀ ಹಿಂದುಸ್ತಾನವನ್ನೆ ಗೆದ್ದುಕೊಂಡ ಅಕಬರ, ಔರಂಗ್‌ಜೇಬರ ಕಾಲದಲ್ಲಿ ಕೂಡ ಹಿಂದೂಧರ್ಮವು ತನ್ನ ತಲೆಯೆತ್ತದೆ ಬಿಟ್ಟಿಲ್ಲ. ಬಾದಶಹಾ ಅಕಬರನು 'ದಿನ್ ಇಲಾಹಿ' ಯಲ್ಲಿಯೂ ಮತ್ತು ಔರಂಗಜೇಬನು ತನ್ನದೊಂದು 'ಫರ್ಮಾನ್'ನಲ್ಲಿಯೂ ಧರ್ಮದ ವಿಷಯಕ್ಕೆ ತಾವು ತಟಸ್ಥ ಭಾವ ತಳಿಸುವ ಧೋರಣೆ ಹಿಡಿದಿದ್ದೇವೆಂದು ಹೇಳಿದ್ದಾರೆ. ಹೀಗಿರುವಾಗ ಈಗ ವ್ಯಕ್ತಿಸ್ವಾತಂತ್ರ್ಯ, ಪ್ರಜಾಸತ್ತೆಗಳ ತತ್ವಗಳು ಜಗತ್ತಿನಲ್ಲಿಯೇ ಅಂಗೀಕೃತವಾದಾಗ, ಧರ್ಮವು ಕೇವಲ 'ವ್ಯಕ್ತಿ ಮತ್ತು ವ್ಯಕ್ತಿ ನಂಬಿದ ದೇವರು' ಎಂಬಷ್ಟರ ಮಟ್ಟಿಗೆ ಉಳಿದಾಗ, ಈ ಧರ್ಮದ ತಳಹದಿಯ ಮೇಲೆ ಪಾಕಿಸ್ತಾನ ನಿರ್ಮಿಸಬೇಕೆಂಬ ಮುಸ್ಲಿಂ ಲೀಗಿನ ಹಾರಯಿಕೆ ಈಡೇರಬಹುದೆ? ಎಂದಿಗೂ ಶಕ್ಯವಿಲ್ಲ. ಇನ್ನು ಪಾಕಿಸ್ತಾನದ ಶಕ್ಯಾಶಕ್ಯತೆಯ ಇತರ ಸಮಸ್ಯೆಗಳನ್ನು ಮುಂದಿನ ಲೇಖಾಂಕಗಳಲ್ಲಿ ವಿಚಾರಿಸೋಣ.

ಕಡಲ ತೀರದಲ್ಲಿ

ಶ್ರೀ. ಎ. ಎಸ್. ರಾಮಕೃಷ್ಣ, ಉಡುಪಿ

೧

ಬಾಳ ಸೆಣಸಾಟದೊಳು ಮನವು ಬಲು ಕೆದರಿರಲು
ಕಡಲ ತೀರವೆ ಎನ್ನ ಎದೆ ತಣಿಪ ತಾಣ;
ಗಂಭೀರತಮ ಶಾಂತಿ ಮನ್ನನೋ ವಿಶ್ರಾಂತಿ,
ಅತ್ತಣಿಗೆ ಹರಿಯುವುದು ನನ್ನ ಪ್ರಾಣ. ೧

೨

ಯೋಜನೆಗಳೊಂದಿರದೆ ದಿಙ್ಮೋಹನಾಗಿರಲು,
ಬಿರುಬಿಸಿಲ ತಿರುವಳೆಗಳಿಗೆ ಮನವು ಶರಣಾರ್ತಿ—
ಬಂಜರದ ಮನದಲ್ಲಿ ಸುವಿಚಾರದಲೆಗಳನು
ಎಬ್ಬಿಸುತ ಜಗದೋರಲವ್ರಗಳದೆ ಸ್ಫೂರ್ತಿ. ೨

೩

ಸೋಲೊಂದಕಾಗಿ ಮನ ಪರಿತಪಿಸುತಿರುವಲ್ಲಿ
ಎದೆಗುಂದದಿರಲೆನಗೆ ಕಡಲಿರವೆ ನೀತಿ—
ಏರು ಇಳಿತಗಳನುವ ದ್ವಯದ ನಿಯಮವ ತೋರಿ
ಸೋಲುಳಿದು ಗೆಲುವಿಲ್ಲವೆನುವುದರ ಗೀತಿ. ೩

೪

ಈ ಎಲ್ಲ ನೀತಿ ನೀಡಿ ಸ್ಫೂರ್ತಿಗಳಲಿಂಗದಿರೆ
ಎನ್ನೊಲವು ಸುಣ್ಣವಿರುವ ಈ ಬೆಂಕಿ-ಚಿಂತೆ—
ಭೋರ್ಗರೆವ ರವದಲ್ಲಿ ಮುಳುಗಿತು ನಾ ನನ್ನನ್ನೆ
ಬದವಾಗಿ ಕುಳಿತೆನಿಗೊ ನಿರ್ವಿಣ್ಣನಂತೆ! ೪

ಚಾವಡಿ

(ಲಲಿತ ಪ್ರಬಂಧ)

ಶ್ರೀ. ಬಿ. ಆರ್. ವಾಡಪ್ಪಿ ಎಂ. ಎ. ಧಾರವಾಡ

★

ಹಳ್ಳಿಯೂರ ಚಾವಡಿಯೆಂದರೆ ಅನಾದ್ಯನಂತ ಸೃಷ್ಟಿಯ ಒಂದು ಸಣ್ಣ ಪ್ರತೀಕ. ಬೇರೆ ಬೇರೆ ಜೀವಗಳು ಅಲ್ಲಿ ಬರುತ್ತವೆ—ಆಳಿಸಿಕೊಳ್ಳುತ್ತವೆ. ಹೊಡೆದಾಡುತ್ತವೆ, ಒಂದು-ಗೂಡುತ್ತವೆ. ಹುಟ್ಟುತ್ತವೆ, ಸಾಯುತ್ತವೆ. ಚಾವಡಿ ಎಲ್ಲವನ್ನೂ ನೋಡುತ್ತ ಸರ್ವಸಾಕ್ಷಿ ಪರಮಾತ್ಮನಂತೆ ನಿಂತಿರುವುದು!

★

ಊರು ಎನ್ನಿಸಿಕೊಳ್ಳುವದಕ್ಕೆ ಒಂದು 'ಚಾವಡಿ' ಇರಬೇಡವೆ? ಪ್ರತಿಯೊಂದು ಊರಿಗೂ ಚಾವಡಿಯೊಂದು ಬೇಕೇ ಬೇಕು. ಸಾರ್ವಭೌಮ ಸರಕಾರದ ಪ್ರತೀಕವದು. ಮೂರು-ಮನೆಯ ಹಳ್ಳಿಯಿರಲಿ; ಆಲ್ಲೊಂದು ಚಾವಡಿ ಕಾಣಲೇ ಬೇಕು. ಪರವೂರಿನವರು ಯಾರಾದರೂ ಹೊಸತಾಗಿ ಊರಿಗೆ ಬಂದಲ್ಲಿ, ಮೊದಲು ಚಾವಡಿಗೆ ಬರುತ್ತಾರೆ. ಆ ಮೇಲೆ ಅವರಿಗೆ ಏನು ಬೇಕೋ ಆದರ ಶೋಧನೆ—ಸರಕಾರದ ಪ್ರತೀಕವಾದ—ಚಾವ-ಡಿಯ ಮುಖಾಂತರ ಆಗಿಯೆ ಆಗುತ್ತದೆ. 'ಏನು ಚಾವಡಿ?' ಎಂದು ನಾವು ಹಳಿಯುವಂತಿಲ್ಲ. ಆದರಲ್ಲಿ ಕುಳಿತು ಅಧಿಕಾರ ನಡೆಯಿಸುವ ಗೌಡ-ಕುಲಕರ್ಣಿಯವರ ದರ್ಪವೇನು ಸಣ್ಣದಲ್ಲ! ಹೊಸತಾಗಿ ಪಾರ್ಲಿಮೆಂಟಿಗೆ ಆರಿಸಿ ಬಂದ ಮೇಂಬರನ ಆ ಗಾಂ-ಭೀರ್ಯ, ಉತ್ಸಾಹ ಹಳ್ಳಿಯ ಗೌಡನಿಗೂ ಉಂಟು; ಅವನ ಚಾವಡಿ ಅವನಿಗೆ ಪಾರ್ಲಿಮೆಂಟ್ ಇದ್ದಹಾಗೆ! ಗಂಭೀರವಾಗಿ ಚಾವಡಿಗೆ ಬಂದು ತನ್ನ ಆಸನದಲ್ಲಿ ಮಂಡಿಸಿದಾಗ, ಅವನಿಗೆ ಇದಿರು ವಾದಿಸುವ ಸಾಮರ್ಥ್ಯ ಯಾರಿಗಾದೀತು? ಚಾವಡಿಯ ಪುಟುಮೆ ಅಂತಹದು. ಗೌಡನೆಂಬ ವಿಭೂತಿಪುರುಷನ ಲೀಲಾ-ನಾಟಕ ರಂಗವದು.

'ಚಾವಡಿ' ಎಂದಾಕ್ಷಣ ಅದು ಒಂದು ದೊಡ್ಡ ಸುಂದರವಾದ ಕಟ್ಟಡವೆಂದಾಗಲಿ, ಮೋಜಿನ ಮಲ್ಲಕಾಳೆಯೆಂದಾಗಲಿ ಯಾರೂ ತಿಳಿಯುವ ಹಾಗಿಲ್ಲ. ಒಂದೊಂದು ಕಡೆ ಊರ ಮಧ್ಯೆ ಇರುವ ಹನುಮನ ಗುಡಿಯೊ ಅಥವಾ ದ್ಯಾಮವ್ವನ ಗುಡಿಯೊ ಚಾವಡಿ ಯಾಗಿರುತ್ತದೆ. ಕೆಲವು ಗ್ರಾಮಗಳಿಗೆ ಚಾವಡಿಯೆನ್ನಿಸಿಕೊಳ್ಳುವ ಪ್ರತ್ಯೇಕ ಕಟ್ಟಡವೂ ಇರಬಹುದು. ಯಾರೇ ಅಪರಿಚಿತರು ಊರಿಗೆ ಬಂದರೆ, ಇದೇ ಚಾವಡಿಯೆಂದು ಹೇಳಲು ಬರುವಂತಿ-ರುತ್ತದೆ. ಹಳೆಯ ನೋಟೀಸುಗಳನ್ನು ಹೊರಗೆ ಕಂಬಕ್ಕೆ ಗೋಡೆಗೆ ಅಂಟಿಸಿದ ಕುರುಹುಗಳು ನಿಮ್ಮ ಕಣ್ಣನ್ನು ಕುಕ್ಕುವವು. ತುಸು ಮುಂದಕ್ಕೆ ಬಂದು ಹಣೆಯಿಕ್ಕಿ ನೋಡಿದರೆ, ಇದ್ದ ತನ್ನ ಒಂದೆ ಒಂದು ಜರದ ರುಮಾಲನ್ನು, ಕೆಲಸದ ಗಡಿಬಿಡಿಯಲ್ಲಿ ಹೇಗೋ ಸುತ್ತಿಕೊಂಡು, ನಾಲ್ಕಾಣೆಯ ಕನ್ನಡಕ ಏರಿಸಿ, ಲೆಕ್ಕಣಿಕೆ ಹಿಡಿದು, ತನ್ನ ದಫ್ತರನ್ನು ಬರೆಯುವ ಕುಲಕರ್ಣಿ ಅಲ್ಲಿ ಕಾಣುವ. ನಮಸ್ಕಾರ ಮಾಡಿದವರಿಗೆ ಮೇಲೆ ಜಂತಿಯನ್ನೊಮ್ಮೆ ನೋಡಿ, ಪರಿಚಿತರಲ್ಲದ ನಿಮಗೆ ಗಾಂಭೀರ್ಯದಿಂದ ಕೂಡಲು ಹೇಳುವ. ಕೂಡಲೆ ಓಲೆಕಾರನನ್ನೊಂದರಿ ಏಲೆ-ಅಡಿಕೆ ತರಿಸಲು ಕಳಿಸುವ. ಆಗ್ತಿನಿಮ್ಮ ಕೆಲಸದ ಆತುರತೆ ನಿಮಗಿದ್ದಲ್ಲಿ, ನೀವು ನಿಮ್ಮ ವಿಚಾರವನ್ನು ಕೂಡಲೆ ಮಾಡಿಕೊಳ್ಳಬೇಕು!

ಊರ ಹೊಲೆಯ ತನ್ನ ಪುನೆಯ ಮುಂದಿನ ಕಸಗೂಡಿಸುವ ಮೊದಲು ಚಾವಡಿಯ ಮುಂದಿನ ಕಸಗೂಡಿಸುವನು. ಅವನಿಗೆ ಚಾವಡಿಯ ಸೇವೆಯೆಂಬದು ದೇವಸೇವೆಯಿದ್ದಂತೆ. ಅದೊಂದು ಹೆಮ್ಮೆಯ ಅಧಿಕಾರ ಅವನಿಗೆ. ನೀರಿಗೆ ಹೋಗುವ ನಾರಿಯರು ಚಾವಡಿಯ ಬಳಿ ಬಂದಾಗ, ತಲೆಯ ಮೇಲಿನ ಸೆರಗನ್ನು ಸರಿ-ಪಡಿಸಿಕೊಳ್ಳುತ್ತಾರೆ. ಚಾವಡಿಯಲ್ಲಿ ಯಾರಾದರೂ ಇರಲಿ ಅಥವಾ ಬಿಡಲಿ, ಚಾವಡಿಯ ದರ್ಶನ ಅವರಿಗೆ ಆಂಜಿಕೆ ಹುಟ್ಟಿ-ಸುತ್ತದೆ. ಹಾಳು ಸುರಿಯುವ ಆ ಗೋಡೆಗಳು, ಗುಬ್ಬಿಗಳು ಗೂಡು

ಕಟ್ಟಿಕೊಂಡು ಮಣ್ಣು ಉದುರಿಸುವ ಆ ಅಂದಗೇಡಿ ಜಪ್ಪರ, ಜಂತೆಗೆ ಕಟ್ಟಿದ ಕಳ್ಳಿಯ ಕೊಂಗೆ—ನೊರಜುಗಳ ಕಾಟ ತಪ್ಪಿಸಲಿಕ್ಕೆಂದು—ಇವೆಲ್ಲವುಗಳ ನಡುಲಕ್ಕ, ಎಲ್ಲರಿಗೂ ಬೇಡವಾದರೂ ಬೇಕೇ ಬೇಕೆನ್ನುವಂತಹ ಪ್ರಯೋಜನಕಾರಿ ನಮ್ಮ ಚಾವಡಿ.

ನಿಮ್ಮ ಕಣ್ಣುಗಳನ್ನು ಚಾವಡಿಯಲ್ಲಿ ಸ್ವಲ್ಪ ಅತ್ತಿತ್ತ ಹೊರಳಿಸಿ ನೋಡಿರಿ ಬೇಕಾದರೆ. ಗೋಡೆಗಳಿಗೆ ಮಲೇರಿಯಾ ನಿವಾರಣೆಯ ಪಟ ತೂಗುಬಿಟ್ಟಿರುತ್ತಾರೆ. ಏನು ರಮ್ಯ ಚಿತ್ರ? ಒಕ್ಕಲಿಗನ ಮಡದಿ. ಮಕ್ಕಳು ಪಾಗು ಭೀತಿಯಿಂದ ಬಳಲಿದ ಒಕ್ಕಲಿಗ, ನಿಮ್ಮ ಕಡೆಗೇ ನೋಡಿದಂತೆ ಭಾಸವಾಗುತ್ತದೆ. ಮತ್ತೊಂದೆಡೆಯಲ್ಲಿ ಎಲ್ಲಕ್ಕೂ ಮೇಲೆ ಸಾರ್ವಭೌಮನ ಚಿತ್ರ ಕಾಣುತ್ತದೆ. "ಧಾನ್ಯ ಬೆಳೆದು ಧನವಂತರಾಗಿರಿ" "ಸತ್ತು ಬಿತ್ತಿ ಹಾಳಾಗಬೇಡಿರಿ" ಎಂಬ ಸರಸ ವಾಕ್ಯಗಳು ನಿಮ್ಮಕಣ್ಣಿಗೆ ಕಂಡು ಕುಣಿಯುತ್ತವೆ. ಚಾವಡಿಯು ಜೊಕ್ಕಟವಾಗಿರಲಿ ಅಥವಾ ಬಿಡಲಿ, ಅದರ ಮುಖಮಂಟಪ ಒಲು ದೊಡ್ಡದು. ಎಂತಹ ದೊಡ್ಡ ದೈತನಿರಲಿ, ಅವನ ಮನೆತುಂಬ ಕಾಳು ತುಂಬಿರಲಿ, ಅವನಿಗೆ "ಇವನನ್ನು ಚಾವಡಿಯಲ್ಲಿ ಕುಳ್ಳಿರಿಸು" ಎಂಬ ಮಾತು ಕಿವಿಗೆ ಬಿದ್ದರೆ, ಅವನು ನಾವ್ ಒಂದಂತೆ ತತ್ತರಿಸುತ್ತಾನೆ. ಚಾವಡಿ ಮುನಿದರೆ ಮಾರಿಯಾಗುವುದು ತಳ್ಳಿಯ ದೈತರಿಗೆ.

ಮುಂಜಾವಿನಿಂದ ಸಾಯಂಕಾಲದ ವರೆಗೆ ಚಾವಡಿಯಲ್ಲಿ ನಡೆಯುವ ಕಾರ್ಯಕ್ರಮ ಒಂದೇ ಎರಡೇ; ಎಣಿಸಲು ಬರುವಂತಿಲ್ಲ. ನಸುಕಿನಲ್ಲಿದ್ದೆ ಎದ್ದು ಬಂದು, ಕಟ್ಟಿಗಳೆಲ್ಲ ಉದುರಿ ಹೋದ ಕಸಬರಿಕೆಯಿಂದ ಚಾವಡಿಯ ಕಸಗೂಡಿಸಿ, ಮಸಿಮಣ್ಣಗಳಲ್ಲಿ ಬೆಳ್ಳಿಮಣ್ಣ ಮೆತ್ತಿಸಿದ—ಮೂಡುತಲೆ ಮಾರಿ ನಿಂದ ಒಂದೆ—ಗುಡಾರ ಹಾಸಿ ಹೋಗುವ ಓಲೇಕಾರನ ರಾಜಛತ್ರಿ, ನಿಮಗೆ ಆಜ್ಞಾಪಯನ್ನುಂಟು ಮಾಡಬಹುದು. ಸೂರ್ಯನು ಮೇಲೇರಿದಂತೆ ಚಾವಡಿಯ ಕಾರ್ಯಕಲಾಪಗಳಿಗೆ ರಂಗು ಏರುತ್ತದೆ. ಗೌಡರ ಗರ್ಜನೆ ದೂರದಲ್ಲಿ ಹಾಯ್ದು ಹೋಗುವ ಪಥರಲ್ಲಿಯೂ ಪೆದರಿಕೆ ಹುಟ್ಟಿಸುತ್ತದೆ. ಕುಲಕರ್ಣಿಯ ಸಮಯೋಚಿತ ಸಾಹಿತ್ಯಗಾರಿಕೆ, ನಡುನಡುವೆ "ಕೆಲವಂ ಒಬ್ಬರಿಂದ ಕಲ್ತು ಕೆಲವಂ ಶಾಸ್ತ್ರಂಗಳಂ ಕೇಳುತ"ಎಂದು ನೀತಿ ಹೇಳುವ ಶಾಲೆಯ ಅಧ್ಯಾಪಕನ ನುಡಿಗಳು ಕೇಳಿಬರುತ್ತವೆ. ಅಷ್ಟರಲ್ಲಿಯೆ ಕೌಟುಂಬಿಕ ಕಲಹ, ನೆರೆಹೊರೆಯವರ ಜಗಳ, ಅಣ್ಣತಮ್ಮರ ಹೊಡೆದಾಟ ಮೊದಲಾದುವುಗಳ ನಿರ್ಣಾಯಗಳು ಒರುವುವು. ಜಗಳ ತೀರಿಸಲೆಂದು ಒಂದು ನೆರೆದ ಪಂಚರ ಪರಿವಾರ, ತಾವು ತಪ್ಪುಗಾರರಾದರೂ ಒಪ್ಪದೆ ಕುಳಿತುಕೊಂಡ ಪಳ್ಳಿಯ ತುಂಟರ ನೆರವಿ ಇವೆಲ್ಲ ಕಾಣುವುದು. ಚಾವಡಿಯಲ್ಲಿ ಏನಿದೆ, ಏನಿಲ್ಲ?

ಸರಕಾರಿ ಅಧಿಕಾರಿಗಳ ಆಗಮನವು ಚಾವಡಿಗೆ ಒಮ್ಮೊಮ್ಮೆ ಹೆಚ್ಚಿನ ಕೆಲಸ ತಂದು ಕೊಡುತ್ತದೆ. ವಾರಕ್ಕೊಮ್ಮೆ ಪೋಸ್ಟ್‌ಮನ್ ಚಾವಡಿಗೆ ಬಂದು ಓಪಾಲಸ್ಸಿತ್ತು ರಾತ್ರಿ ಅಲ್ಲಿದ್ದು ತಂಗುತ್ತಾನೆ. ಅವನು ಊರ ಪ್ರಮುಖ ಜನರ ಆದರಕ್ಕೆ ಪಾತ್ರನಾದ ವ್ಯಕ್ತಿ. ಯಾರಲ್ಲಿಯಾದರೂ ಅವನ ಭೋಜನ ಸಾಗುವುದು. ಒಮ್ಮೊಮ್ಮೆ ಗ್ರಾಮಾಧಿಕಾರಿಗಳು ತಮ್ಮ ಸರಕಾರಿ ಕೆಲಸಕ್ಕೋಸ್ಕರ ತಾಲೂಕಿನ ಸ್ಥಳಕ್ಕಾಗಲಿ ಜೀರೊಂದು ಊರಿಗಾಗಲಿ ಹೋದಾಗ, ಚಾವಡಿಯ "ಚಾರ್ಜು" ಓಲೆಕಾರನ ಕಡೆಗೆ ಇರುವುದು! ತನ್ನ 'ರಾಜದಂಡ' ಹಿಡಿದುಕೊಂಡು ಚಾವಡಿಯ ಕಟ್ಟೆಯ ಮೇಲೆ ಕುಳಿತು,ಸರಕಾರಿ ಅಧಿಕಾರಿಗಳ ಬರವನ್ನು ಅತಕಾಯುತ್ತಿರುತ್ತಾನೆ. ನಿರುದ್ಯೋಗದ ಬೇಸರು ತಲೆಯೆತ್ತಿದಾಗ ಯಾರನ್ನಾದರೂ ಕರೆದು ಹರಟುತ್ತಾನೆ; ಅಥವಾ 'ಹುಲಿಹಳ್ಳಿ' ಆಡುತ್ತ ಕಾಲ ಕಳೆಯುತ್ತಾನೆ. ಅಕಸ್ಮಾತ್ ಸರ್ಕಲ್ ಇನಸ್ಪೆಕ್ಟರು ಬಂದರೆ, ಕೂಡಲೆ ಎದ್ದು ಬಾಗಿ ಮುಜುರೆ ಮಾಡಿ, ಗಡಿಬಿಡಿಯಿಂದ ಹೋಗಿ ಅಲ್ಲಿಯೆ ಹತ್ತಿರದಲ್ಲಿದ್ದ ಜಪ್ಪರದ ಜಹದ ಅಂಗಡಿಯಲ್ಲಿ ಚಹಾಪಾರ್ಟಿಯ ಏರ್ಪಾಡು ಮಾಡುತ್ತಾನೆ. ಜಪ್ಪರದ ಜಹದ ಅಂಗಡಿಯೆ ಅವನಿಗೆ 'ತಾಜಮಹಾಲ್' ಹೊಟೆಲ್ಲು. ಸರಕಲ್ ಇನಸ್ಪೆಕ್ಟರು ಹೋದನೋ ಇಲ್ಲೋ ಎನ್ನುವುದರಲ್ಲಿ ಪೈಲೀ ಕಾರಕೂನರ ಆಗಮನವಾಗುತ್ತದೆ: ಯಾವಾಗಲೂ ಚಾವಡಿಯಲ್ಲಿ ಸರಕಾರಿ ಅಧಿಕಾರಿಗಳ ಗದ್ದಲ ತಪ್ಪಿದ್ದಲ್ಲ. ಅಧಿಕಾರಿಗಳ ಅವತಾರ ಕ್ಷೇತ್ರ ಹಳ್ಳಿಯ ಚಾವಡಿ.

ಸಣ್ಣ ಪುಟ್ಟ ಅಪುಲದಾರರು ವಾರಕ್ಕೊಮ್ಮೆ, ತಿಂಗಳಿಗೊಮ್ಮೆ ಬಂದರೆ, ಮಾಮಲೇದಾರರು ಕಲೆಕ್ಟರ್ ಸಾಹೇಬರು ವರ್ಷಕ್ಕೊಮ್ಮೆ ಎರಡು ವರ್ಷಕ್ಕೊಮ್ಮೆ ದಯೆಮಾಡಿಸುತ್ತಾರೆ! ಆಗ ಚಾವಡಿಯಲ್ಲಿ ಗದ್ದಲ ಹೇಳತೀರದು. ಗೌಡ-ಕುಲಕರ್ಣಿಯರಿಗೆ ಪೈತುಂಬ ಕೆಲಸ. ಗುಡಾರ, ಹಾಲು, ಮೊಸರು, ಬೆಣ್ಣೆ ಮೊದಲಾದುವುಗಳಿಗಾಗಿ ಓಲೆಕಾರರನ್ನು ಮೇಲಿಂದ ಮೇಲೆ ಓಡಾಡಿಸುವುದನ್ನು ನೋಡಿದರೆ, ಅಧಿಕಾರಿಗಳ ಆಗಮನದ ಸೂಚನೆ ತಾನೆ ತಿಳಿಯುವುದು. ತಮ್ಮ ಲೆಕ್ಕಪತ್ರವನ್ನು ಹಗಲು-ರಾತ್ರಿಯೆನ್ನದೆ ಕುಳಿತು ಹೊಂದಿಸಿಕೊಳ್ಳುತ್ತಾರೆ. ಜಂತೆ-ತೊಲೆಗಳಿಗೆ ಏರಿದ ಜೇಡಗಳನ್ನು ಪೊದಲು ಮಾಡಿ ಸ್ವಚ್ಛಗೊಳಿಸಿ, ಚಾವಡಿಗೆ ಸುಣ್ಣ-ಹುರುಪುಂಜು ಹಚ್ಚಿಸುತ್ತಾರೆ. ಅದುವರೆಗೆ ಮುದುಕನ ಹಾಗಿದ್ದ ಮುರುಕುಚಾವಡಿ, ಅಂದು ಮದುಮಗನ ಹಾಗೆ ಕಾಣಹತ್ತುತ್ತದೆ. ಮೇಲಧಿಕಾರಿಗಳಿಗೆ ಆನಂದವಾಗಬೇಡವೆ? ಹಳ್ಳಿಯ ರಾಜ್ಯ ಹರ್ಷವಾಗಿ ಸಾಗಿದೆಯೆಂದು 'ರಿಪೋರ್ಟ್' ಬೇಕಲ್ಲ. ಹತ್ತಿರವೇ ಇರುವ ಶಾಲೆಯ ವಿದ್ಯಾರ್ಥಿಗಳಿಂದ ಸುಸ್ವಾಗತ ಪದ ಕೂಡಲೆ ಸಿದ್ಧವಾಯಿತೆ! ಪ್ರತಿದಿನ ಗದ್ದಲ ಹಾಕುವ ಹಳ್ಳಿಯ ವಿದ್ಯಾರ್ಥಿಗಳು, ಚಾವಡಿಯಲ್ಲಿ ನಡೆದ ಕಚೇರಿಗೆ ಅಂದು ಅಂಜುತ್ತಾರೆ. ಕೇವಲ ಕಣ್ಣು ಮೂಗಿನಿಂದ ಸನ್ನೆಮಾಡುವುದೊಂದೇ ಅವರಿಗೆ ಆಗ ಸಾಧ್ಯವಾದೀತು. ವರಿಷ್ಠ ಅಧಿಕಾರಿಗಳ ಆಗಮನದಿಂದ ಚಾವಡಿಯು ಮುಖಗ್ರಹಣ ಬಿಟ್ಟ ಚಂದ್ರನಂತಾಗುವುದು.

ವರ್ಷಕ್ಕೊಮ್ಮೆ ತಿಂಗಳೆರಡು ತಿಂಗಳು ಚಾವಡಿಯಲ್ಲಿ ಏಕಪ್ರಕಾರವಾಗಿ 'ಹಪ್ತೇ ವಸೂಲಿ' ಕೆಲಸ ಸಾಗುತ್ತದೆ. ಆಗ

ಹಗಲು-ರಾತ್ರಿ ಚಾವಡಿಯನ್ನು ಹಳಬ ಕಾಯ್ದುಕೊಂಡು ಬಿದ್ದಿರುತ್ತಾನೆ. ಗೌಡ-ಕುಲಕರ್ಣಿಗಳು ಜೊತೆಯಾಗಿ ಹಪ್ತೆ ವಸೂಲಿ ನಡೆಯಿಸುತ್ತಾರೆ. ರೈತರನ್ನು ಓಡಿದು ತರಿಸಿ ಬೆದರಿಕೆ ಹಾಕುವುದು, ನೀರಿಗೆ ಹೋಗುವ ರೈತನನ್ನು ತರುಬಿ ಚಾವಡಿಯಲ್ಲಿ ಕುಳ್ಳಿರಿಸಿ "ಹಪ್ತೆ ಕೊಟ್ಟು ಹೋಗು" ಎಂದು 'ಧಮಕಿ' ಕೊಡುವುದು—ಹೀಗೆ ಚಾವಡಿಯಲ್ಲಿ ಗದ್ದಲವೇ ಗದ್ದಲ! ರೈತ ಹಾಗೂ ಸರಕಾರಿ ಅಧಿಕಾರಿಗಳ ನಡುವೆ ಒಂದು ಸಂಬಂಧವನ್ನು ತಂದೊಡ್ಡುವ ಕಾಲವದು. ಊರ ಮುದುಕರು ಹೊತ್ತು ಹೋಗುವುದೆಂದು ಚಾವಡಿಯ ಕಟ್ಟೆಯನ್ನು ಆಶ್ರಯಿಸುತ್ತಾರೆ. ಅವರು ತಮ್ಮ ಹಿಂದಿನ ನೆನಪುಗಳನ್ನು ಹೇಳಿ, ಚಾವಡಿಯಲ್ಲಿ ಕೆಲಸ ಮಾಡುವವರನ್ನು ಹರ್ಷದ ಹೊಳೆಯಲ್ಲಿ ಈಸುವಂತೆ ಮಾಡುತ್ತಾರೆ. ಅಂಥವರ ಅನುಭವ, ನೆನಪು ಕೇಳಬೇಕು ಎನ್ನಿಸುತ್ತದೆ. ಇಂತಹ ಅನೇಕ ಕೆಲಸಗಳಿಗೆ ಹಾಗು ಜನರಿಗೆ ಚಾವಡಿ ಎಷ್ಟು ಅವಶ್ಯ ಎನ್ನುವ ಮಾತು ಹೇಳತೀರದು.

ಮಾನವನು ಕಾಡುಸ್ಥಿತಿಯಿಂದ ಸುಧಾರಿಸುತ್ತ ಸುಧಾರಿಸುತ್ತ ಕೊನೆಗೆ ಗುಂಪು ಕಟ್ಟಿಕೊಂಡು ಇರುವುದಕ್ಕೆ ಪ್ರಾರಂಭಿಸಿದನಂತೆ! ಗೌಡನೇ ಅವರ ನಾಯಕ. ಅಂದಿನಿಂದಲೇ ಚಾವಡಿಯ ಜನ್ಮವಾಗಿರಬಹುದೆ? ಹಾಗಿದ್ದಲ್ಲಿ ಸಂಶೋಧಕರಿಗೆ ಎಂತಹ ಮಹತ್ವದ ವಿಷಯವಿದೆಯಲ್ಲ ಸಂಶೋಧನೆಗೆ! 'ಚಾವಡಿ' ಎಂಬ ಹೆಸರು ಹೇಗೆ ಬಂದಿತೊ? ಅದರ ಗೊಡವೆ ನಮಗೆ ಬೇಡ ಪುರಾತನಕಾಲದಿಂದ ನಡೆದು ಬಂದ ಚಾವಡಿಯ ಹುಟ್ಟನ್ನು ಶೋಧಿಸುವುದೆಂದರೆ ನದಿಯ ಮೂಲವನ್ನೂ ಋಷಿಯ ಕುಲವನ್ನೂ ಕೇಳಿದಂತೆಯೇ ಆದೀತು. ಎಂದಿನಿಂದಲೋ ಚಾವಡಿ ಮಾತ್ರ ಹಳ್ಳಿಹಳ್ಳಿಗೂ ತಲೆಯೆತ್ತಿ ಕಾಲವನ್ನು ಆಣಕಿಸುವಂತೆ ಅನೇಕ ಕಾರ್ಯಗಳ ಪ್ರತಿನಿಧಿಯಾಗಿ ನಿಂತುಕೊಂಡಿದೆ. ಎಷ್ಟು ಜನ ಗೌಡ-ಕುಲಕರ್ಣಿಗಳು ಗತಿಸಿ ಹೋಗಿದ್ದಾರೊ, ಎಷ್ಟು ಅಧಿಕಾರಿಗಳು ಬಂದು ಹೋಗಿದ್ದಾರೊ ಆದರೂ ಮುರುಕು—ಅಂದಗೇಡಿ—ಚಾವಡಿ ಮಾತ್ರ "ಮುನ್ನ ಶತಕೋಟಿ ರಾಯರುಗಳಾಳಿದ ಭೂಮಿ ತನ್ನದೆಂದೆನುತ ಶಾಸನವ ಹೊಯ್ಸಿ" ಎಂದು ದಾಸರು ಹೇಳುವಂತೆ "ಯಾರು ಒಂದರೇನು ಯಾರು ಹೋದರೇನು!" ಎಂದು ತತ್ವಜ್ಞಾನ ಹೇಳುತ್ತ ನಿಂತುಕೊಂಡಿದೆ!

ಮಿನುಗುವ ತಾರೆಗೆ

★

ಶ್ರೀ. ದೇವೇಂದ್ರ 'ನಿಶ್ಶಸಂಘ' ತಗಡೊಳ್ಳಿ

೧

ಮಿನಿ ಮಿನಿ ಮಿನುಗುತ ಮೆರೆಯುವ ತಾರೆಯೆ,
ನಿನ್ನಂತೆನ್ನೆದೆ ಮಿನುಗುತಲಿ—
ಏಳುವ ಬೀಳುವ ಜಾಳದು ನಿರುತವು;
ಹೃದಯದೆ ಹೊಳಪನು ತಳೆದಿರಲಿ!

೨

ವಿಶ್ವದ ಮುಕುಟದಿ ಮೆರೆಯುವ ರನ್ನವೆ,
ನಿನ್ನಾಕಾರವು ಜಿಕ್ಕದಿದೆಂ?
ವಿಶ್ವಕೆ ಮೀರಿದ ಕಲ್ಲಿನ ಸಡೆಯಿರೆ,
ಬೆಳಕನು ಬೀರುತ ಹೊಳೆಯುವುದೇ?

೩

ನಿನ್ನಯ ಜೀವನ ಸುಸ್ಥಿರವಿಹುದದು,
ಎನ್ನಯ ಜೀವನವಸ್ಥಿರವು!
ನಿಮಿಷ ನಿಮಿಷದೊಳು ಕಳೆಯುವ ಕಾಲದ
ಗಾಳಿಗೆ ಹಾರುವ ತರಗೆಲೆಯು!

೪

ಸೂರ್ಯನ ಪ್ರಭೆಯಲಿ ಜಿಗುವ ಗ್ರಹಗಳ
ಪರತಂತ್ರತೆಗೇಂ ನಗುತಿಹೆಯಾ?
ಸ್ವದೇಶಸೇವೆಯ ಸ್ವತಂತ್ರ ಜಾಳ್ವೆಯು
ಮರೆದಿಹ ನನಗೇನಣಕಿಪೆಯಾ?

೫

ಪ್ರಚಂಡ ತಮವನು ಛೇದಿಪ ನಿನ್ನಯ,
ಕಿರಣದ ಶಕ್ತಿಯದೆನಗಿರಲಿ;
ಜೀವನ ರಂಗದೊಳೊದಗುವ ಸಂಕಟ-
ವಿಸರವನೆದುರಿಸೆ ನೆರವಿರಲಿ;

೬

ಸ್ವಾತಂತ್ರ್ಯದಿ ನಿಂ ಸ್ವಾಭಿಮಾನದಿಂ,
ನೀಲಾಕಾಶದಿ ಮೆರೆಯುವೆಯಾ?
ಜೆಲುವಿನ ಚಿಕ್ಕೆಯೆ! ಚಿನ್ನದ ಚುಕ್ಕೆಯೆ!
ವಿಶ್ವಕೆ ಜ್ಯೋತಿಯ ಗೆಯ್ಯುವೆಯಾ?

ಬಯಸಿದ ಬಣ್ಣ

(Adoptive Colouration)

ಶ್ರೀ. ಎನ್. ಎಲ್. ಹಳ್ಳಿಪ್ಪನವರ್, ಬಿ. ಎಸ್‌ಸಿ. (ಆಗ್ರಿ)

★

ಬಯಸಿದುದನ್ನು ಕೊಡುವ ಗುಣವು ನಿಸರ್ಗದಲ್ಲಿ ಉಂಟು; ಆದರೆ ಬಯಕೆ ಉತ್ಪನ್ನವಾಗಿರಬೇಕು. ಈ ವೈಷಮ್ಯಪೂರ್ಣ ನಿಸರ್ಗದಲ್ಲಿ ಬಲಿಷ್ಠರಿಂದ ತಪ್ಪಿಸಿ ಬದುಕಿಕೊಳ್ಳಬೇಕೆನ್ನುವ ಬಲಹೀನ ಜೀವಿಗಳು, ಹಲವು ಹಂಚಿಕೆಗಳನ್ನು ಮಾಡಬೇಕಾಗುತ್ತದೆ. ಬಯಸಿದ ಬಣ್ಣ ಇವೆಲ್ಲವುದೂ ಇಂತಹದೊಂದು ಸುಪ್ರಸಿದ್ಧ ಹಂಚಿಕೆ.

★

ನಿಜವಾಗಿಯೂ ಜಾಳೊಂದು ಜೋರಾಟವೇ. ಎಲ್ಲ ಜೀವಿಗಳಿಗೂ ತಾವು ಜಾಳಿನಲ್ಲಿ ವಿಜಯಿಗಳಾಗಬೇಕೆಂಬ ಬಯಕೆ ಇದ್ದುದೇ; ಜಾಳ ಕಾಳೆಗದಲ್ಲಿ ಮುನ್ನಡೆಯಲು, ಸತತವಾದ ಹೆಣಗಾಟವನ್ನು ಎಲ್ಲ ಜೀವಿಗಳಲ್ಲಿಯೂ ನಾವು ಕಾಣುತ್ತಲೇ ಇದ್ದೇವೆ. ಮಾನವನು ತನ್ನ ಬುದ್ಧಿಯ ಬಲದಿಂದ ನಾನಾ-ತೆರವ ಹಂಚಿಕೆಗಳನ್ನು ಹಾಕಿ, ವಿಶ್ವದಲ್ಲಿ ಎಲ್ಲ ಜೀವಿಗಳಿಗಿಂತ ಶ್ರೇಷ್ಠನಾಗಿದ್ದಾನೆ! ಹಲವು ಸಂದರ್ಭಗಳಲ್ಲಿ ಅವುಗಳನ್ನು ತನ್ನ ಅಂಕಿತದಲ್ಲಿಟ್ಟುಕೊಂಡು, ತನಗೆ ಬೇಕಾದ ಕಾರ್ಯ ಸಾಧಿಸಿ-ಕೊಳ್ಳುತ್ತಾನೆ. "ಬಲವಿದ್ದವನೇ ಬದುಕುವನು (Survival of the fittest) ಎಂಬ ನುಡಿಯು ಸಂಪೂರ್ಣವಾಗಿ ಸತ್ಯ-ವಾಗಿದ್ದರೂ, ಹಲವು ಸಲ ದುರ್ಬಲರೂ ಬದುಕಿದುದನ್ನು ನಾವು ಕಾಣುತ್ತೇವೆ. ಮೊದಲು ವಿಜ್ಞಾನಿಗಳು ಬಲವಿದ್ದವರಷ್ಟೇ ಬದುಕುವರೆಂದು ತಿಳಿದಿದ್ದರು; ಏಕೆಂದರೆ ಅವರ ಎದುರಿನಲ್ಲಿ ಆ ಬಗೆಗೆ ದೃಷ್ಟಾಂತಗಳು ಎಷ್ಟೋ ಇದ್ದುವು. ಕಾಡಿನಲ್ಲಿ ಸಿಂಹವೊ, ಹುಲಿಯೊ, ಇಲ್ಲವೆ ಇನ್ನಿತರ ಹಿಂಸ್ರಪ್ರಾಣಿಗಳೊ ತಮ್ಮ ಬಲದಿಂದ ಅಬಲಪ್ರಾಣಿಗಳನ್ನು ಮುಟ್ಟಿದು ತಿಂದು ಬದುಕುತ್ತಿದ್ದುದು ಎಲ್ಲರಿಗೂ ತಿಳಿದ ಮಾತು. ಆದರೂ ಅಬಲ ಪ್ರಾಣಿಗಳು ಅದೇ ಕಾಡಿನಲ್ಲಿ ಇಲ್ಲವೆ ಇಲ್ಲ. ಅಬಲಪ್ರಾಣಿಗಳೂ ಸಬಲ ಪ್ರಾಣಿಗಳಂತೆ ವಿಶ್ವದಲ್ಲಿ ಬದುಕಿದುದು ಕಾಣಬರುತ್ತವೆ. ಅವುಗಳ ರಕ್ಷಣೆಗಾಗಿ ನಿಸರ್ಗವು ಕೆಲವೊಂದು ತಂತ್ರಗಳನ್ನು ಹೂಡಿರುವುದು. ದೃಷ್ಟಾಂತಕ್ಕೆ ಚಿಗರೆ ಅಬಲವಾಗಿದ್ದರೂ, ಅದು ತನಗಿರುವ ಉದ್ದವಾದ ಕಾಲುಗಳಲ್ಲಿಯ ಅಸಮಾನ ಬಲದಿಂದ, ಜಿನ್ನಟ್ಟಿದ ವೈರಿಯ ಬಲೆಯಿಂದ ಪಾರಾಗಿಹೋಗ-ಬಲ್ಲುದು. 'ಬಲವಿದ್ದವನೇ ಬದುಕುವನು' ಎಂಬ ನುಡಿಯು ಮನುಷ್ಯನು ಅನಾಗರಿಕನಾಗಿದ್ದಾಗ ಸರಿಹೋಗಬಹುದಾಗಿತ್ತು! ಆಗಲೂ ಕೆಲವು ತೆರನಾದ ಕುಜೀವ್ಟೆಗಳು ನಡೆಯುತ್ತಿದ್ದುವು. ಈಗ ಕಾಲ ಬದಲಾಗಿದೆ. ಬಲವಿಲ್ಲದವನನ್ನು ಕಾಯಿದೆ-ಕಾನೂನು ಇತ್ಯಾದಿಗಳು ರಕ್ಷಿಸುತ್ತವೆ! ಬಲವಿದ್ದವನಂತೆ, ಬುದ್ಧಿ ಇದ್ದ-ವನು ಬದುಕಲು ಈಗಿನ ಜಗತ್ತಿನಲ್ಲಿ ಅವಕಾಶವಿದೆ. ಬಲದಷ್ಟೇ ಏಕೆ, ಹಲವು ಸಲ ಅದಕ್ಕಿಂತಲೂ ಹೆಚ್ಚಾಗಿ— ಬುದ್ಧಿ ಇದ್ದವನೂ ಸುಖರೂಪವಾಗಿ ಬಾಳನ್ನು ಸಾಗಿಸಬಲ್ಲನು! ಮತ್ತೆ ಹಲವು ಸಲ ಬಲವೂ ಬುದ್ಧಿಯೂ ಬೇಕಾದಷ್ಟಕ್ಕಿಂತ ಹೆಚ್ಚಾದರೂ ನಿರುಪಯೋಗವಾಗುವುದುಂಟು! ಅವನ ಬಲ, ಬುದ್ಧಿಗಳಿಗೆ ತಕ್ಕುದಾದ ಸ್ಥಾನ, ವಾತಾವರಣಗಳು ಬೇಕೇ ಬೇಕು! ಅಂದ-ರೇನೇ ಅವುಗಳಿಂದ ಅವನು ರಕ್ಷಣೆಗೊಳ್ಳಲು ಸುಲಭವಾಗುವುದು! ಇದಕ್ಕೆ ಕೆಲವರು ದೈವವಿರಬೇಕೆನ್ನುತ್ತಾರೆ! ಅಂತೆಯೆ ದೈವ-ವಾದವೊಂದು ಬಾಳಮುನ್ನಡೆಯಲ್ಲಿ ಇಣಿಕಿ ಹಾಕುತ್ತದೆ: ಇದೇನು ಸಂಪೂರ್ಣ ಅಲ್ಲಗಳೆಯುವ ಮಾತಲ್ಲ : ತುಂಬಿ-ಕೊಂಡು ಧಷ್ಟಪುಷ್ಟವಾದ ಕಾಳುಗಳಲ್ಲಿ, ಒಂದನ್ನು ಒಣ ನೆಲದ ಮೇಲೆ, ಒಂದನ್ನು ಹದವಾದ ನೆಲದಲ್ಲಿ (ನೆಲದಲ್ಲಿ ಆದರ ಬೆಳೆಗೆ ತಕ್ಕ ಗೊಬ್ಬರ ಮತ್ತು ನೀರು ಇರುವ ಸ್ಥಿತಿ) ಮತ್ತೊಂದನ್ನು ಕಲ್ಲುಮೇಲೆ ಬಿತ್ತಿದರೆ, ಎಲ್ಲವೂ ಸಮಾನ ಬಲ-ಗಳುಳ್ಳವುಗಳಾಗಿದ್ದರೂ ಯಾವುದು ಹೆಚ್ಚು ಪುಷ್ಟವಾಗಿ ಬೆಳೆ-ಯುವುದೆಂಬುದು ಸ್ಪಷ್ಟವೇ ಇದೆ. ಇದು ಸಸ್ಯಶಾಸ್ತ್ರಜ್ಞರು ಕೊಡುವ ದೃಷ್ಟಾಂತ! ಇದೇ ಬಗೆಯಾಗಿ ಪ್ರಾಣಿಶಾಸ್ತ್ರಜ್ಞರು ಎಷ್ಟೋ ದೃಷ್ಟಾಂತಗಳನ್ನು ಕೊಡುವುದುಂಟು. ಆಗ ದೈವಕ್ಕೂ ಬಾಳಮುನ್ನಡೆಯಲ್ಲಿ ಸ್ಥಾನವಿರುವ ಮಾತು ಸತ್ಯವಾಗಿ ತೋರುವುದು. ಒಂದು ಕಡೆಯಿಂದ ಮನುಷ್ಯರು ಇನ್ನೊಂದು ಕಡೆಗೆ ಹೋಗುತ್ತಾರೆ. ಕೆಲವು ದಿನಗಳಲ್ಲಿ ಅದೇ ಭಾಗದ ಪ್ರಭಾವವು ಅವರ ಮೇಲೆ ಆಜ್ಞೊತ್ತಿದಂತೆ ಬಿದ್ದು ಬಿಡುವುದನ್ನು ನಾವು ಕಾಣುತ್ತೇವೆ. ತಮ್ಮ ಪೊದಲಿನ ಉಡಿಗೆ-ತೊಡಿಗೆ ಬಿಟ್ಟು ಅವರಂತೆ ಅನುಕರಣ ನಡೆಯಿಸುತ್ತಾರೆ. ಕೂಡುವುದು, ನಿಲ್ಲು-ವುದು, ಕೂನಲು ಕತ್ತರಿಸುವುದು, ನಡೆಯುವುದು, ಹಾವಭಾವ ಮಾಡುವುದು, ಮಾತನಾಡುವುದು ಇತ್ಯಾದಿಗಳು ಅವರಂತೆಯೆ ನಡೆದು ಬಿಡುತ್ತವೆ. ಇದಕ್ಕೆಲ್ಲ ಕಾರಣ, ಅವರು ಅನುಕರಿಸುವು-ವುಗಳೆಲ್ಲ ಅವರಿಗಿಂತ ಶ್ರೇಷ್ಠವಾಗಿರುವುವೆಂದಲ್ಲ; ಆದರೆ ಅಲ್ಲಿ ಸುಖಮಯವಾಗಿ ಜೀವಿಸಲಿಕ್ಕೆಂದು ಈ ಬಗೆಯ ಅನುಕರಣ-ವನ್ನು— ಎಲ್ಲ ಜೀವಿಗಳಲ್ಲಿಯೂ— ನಾವಿಂದು ಕಾಣಬಹುದಾ-ಗಿದೆ. ನಾನೀಗ ಇಲ್ಲಿ ಚರ್ಚಿಸಲಿದ್ದುದು ಬರಿಯ ಕ್ರಿಮಿ, ಕೀಟಕಗಳಲ್ಲಿ ಕಂಡುಬರುವ ಬಯಸಿದ ಬಣ್ಣದ ಬಗೆಗಾಗಿ:

ಲೋಕದಲ್ಲಿ ಜೀವಿಸಿರುವ ಪ್ರಾಣಿಗಳಲ್ಲೆಲ್ಲ ಕ್ರಿಮಿ-ಕೀಟಕ-ಗಳು ಅಸಂಖ್ಯಾತವಾಗಿವೆ. ಇವು ಭೂಮಿಯಲ್ಲಿ, ಭೂಮಿಯ ಮೇಲೆ, ನೀರಿನಲ್ಲಿ, ಹವೆಯಲ್ಲಿ—ಎಲ್ಲೆಡೆಯಲ್ಲಿಯೂ ಕಂಡು-

ಬರುತ್ತವೆ. ಅವುಗಳಲ್ಲಿ ಕೆಲವು ದೊಡ್ಡವಾಗಿ ಬರಿಗಣ್ಣಿಗೆ ಸ್ಪಷ್ಟವಾಗಿ ಕಾಣುತ್ತಿದ್ದರೆ, ಮತ್ತೆ ಕೆಲವನ್ನು ಸೂಕ್ಷ್ಮದರ್ಶಕ ಯಂತ್ರದ ನೆರವಿನಿಂದ ಮಾತ್ರ ನೋಡಬಹುದಾಗಿದೆ. ಎಷ್ಟೋ ಕ್ರಿಮಿ-ಕೀಟಕಗಳನ್ನು ಅವುಗಳಿಗಿಂತಲೂ ಒಲಶಾಲೆಯಾದ ಶ್ರೇಷ್ಠತರಗತಿಯ ಕ್ರಿಮಿ-ಕೀಟಕಗಳೇ ತಿನ್ನುತ್ತವೆ. ಮತ್ತೆ ಕೆಲವು ಮೇಲ್ಮಟ್ಟದ ಪ್ರಾಣಿಗಳಂತೂ ಈ ಹುಳು-ಹುಪ್ಪಡಿಗಳ ಮೇಲೆಯೆ ತಮ್ಮ ಸಂಸಾರ ನಡೆಯಿಸಿವೆ. ಹುಳು-ಹುಪ್ಪಡಿಗಳ ಮುಖ್ಯವಾದ ವೈರಿಗಳೆಂದರೆ ಪಕ್ಷಿಗಳು. ಪಕ್ಷಿಗಳಿಂದ ರಕ್ಷಿಸಿಕೊಳ್ಳುವುದಕ್ಕಾಗಿ ಇವು ಹಲವು ತೆರನಾದ ಹಂಚಿಕೆಗಳನ್ನು ಹುಡುಕಬೇಕಾಗುತ್ತದೆ. ಇದಲ್ಲದೆ ಇವುಗಳಿಗೂ ಅನ್ನಬೇಕು; ಎಷ್ಟೋ ಹುಳು-ಹುಪ್ಪಡಿ, ಕ್ರಿಮಿ-ಕೀಟಕಗಳು ಸಸ್ಯಗಳ ಮೇಲೆ ಜೀವಿಸುವುವು; ಮತ್ತೆ ಹಲವು ಮೇಲೆ ಹೇಳಿದಂತೆ ಮಾಂಸಭಕ್ಷಕಗಳಾಗಿರುವುವು. ಆದುದರಿಂದ ತಮ್ಮ ಅನ್ನವನ್ನು ಅರಸುವುದಕ್ಕಾಗಿ ಉಪಯೋಗವಾಗಬೇಕೆಂದು ಎಷ್ಟೋ ಬಗೆಯ ಹಂಚಿಕೆ ಹಾಕಬೇಕಾಗುವುದು. ಹುಲಿಯ ಮೈಮೇಲೆ ತೆರತೆರನಾದ ಪಟ್ಟೆಗಳಿರುತ್ತವೆ; ಅವು ಅದರ ಸೌಂದರ್ಯವನ್ನು ಹೆಚ್ಚಿಸುವುದಕ್ಕಲ್ಲ; ಆದರೆ ಅದಕ್ಕೆ ಬೇಕಾಗುವ ಮೃಗಗಳನ್ನು ಹಿಡಿಯಲಿಕ್ಕೆ ಅನುಕೂಲವಾಗಬೇಕೆಂದು. ಗಿಡಗಂಟಿಗಳಲ್ಲಿ ಅಡಗಿದ ಹುಲಿಯು, ಮೈಮೇಲೆ ಪಟ್ಟೆಗಳಿರುವುದರಿಂದ ಕೀವ್ರ ತೋರಿಬರುವುದಿಲ್ಲ; ಆದುದರಿಂದ ಮೈಮೇಲಿನ ಪಟ್ಟೆಗಳು ಹೊಂದುವುದಕ್ಕೆ ನೆರವಾಗುವುವು. ಅದರಂತೆ ಎಷ್ಟೋ ಕೀಟಕಗಳ ಬಣ್ಣ, ಆಕಾರ, ಸ್ವರೂಪಗಳು ಅವುಗಳ ಆನ್ನಾನ್ವೇಷಣೆಗೆ ನೆರವೀಯುವುವುಗಳಾಗಿವೆ. ಹುಳು-ಹುಪ್ಪಡಿ, ಕ್ರಿಮಿ-ಕೀಟಕಗಳು ತಮ್ಮನ್ನು ರಕ್ಷಿಸಿಕೊಳ್ಳಲಿಕ್ಕೆ ಹಲವಾರು ಹಂಚಿಕೆಗಳನ್ನು ಹುಡುಕಬೇಕಾಗುತ್ತದೆಂದು ಹಿಂದೆ ಹೇಳಿದೆಯಷ್ಟೇ! ಅವುಗಳಲ್ಲಿ ಹುಳುಗಳಿಗಿರುವ ದುರ್ವಾಸನೆ, ಹುಳುಗಳಲ್ಲಿರುವ ವಿಷಮಿಶ್ರಿತ ಪದಾರ್ಥ, ಹುಳುಗಳ ಮೈಮೇಲಿರುವ ಕೂದಲು, ಮುಳ್ಳು, ಹುಳುಗಳಿಗಿರುವ ಆಕಾರ, ಬಣ್ಣಗಳು ಮುಖ್ಯವಾದುವುಗಳು. ಇವೆಲ್ಲವುಗಳಲ್ಲಿ ಬಣ್ಣವೇ ಮುಖ್ಯವಾದುದು.

ನಿಸರ್ಗದಲ್ಲಿ ತೆರತೆರನಾದ ಬಣ್ಣಗಳ ಕ್ರಿಮಿ-ಕೀಟಕ, ಹುಳು-ಹುಪ್ಪಡಿಗಳಿವೆ. ನಿತ್ಯ ನಮ್ಮೆದುರಿನಲ್ಲಿ ಬಗೆಬಗೆಯ ಹುಳುಗಳು ಹಾರಾಡುತ್ತವೆ; ಜಿಟ್ಟೆಗಳು ಜಿಗಿಯುತ್ತವೆ; ದೀಪದ ಹುಳುಗಳು ತೊನೆದಾಡುತ್ತವೆ; ಪಾತರಗಿತ್ತಿಗಳು ಪಕ್ಕವಿಚ್ಚಿ ನಲಿದಾಡುತ್ತವೆ. ಅವುಗಳಿಗಿರುವ ಬಣ್ಣದಿಂದ ನಿಸರ್ಗಕ್ಕೊಂದು ತೆರನಾದ ಸೌಂದರ್ಯವೇ ಬಂದುಬಿಟ್ಟಿದೆ. ಆ ಬಣ್ಣವೆಲ್ಲವೂ ನಿರರ್ಥಕವಾದುದಲ್ಲ, ಅದಕ್ಕೊಂದು ಅರ್ಥವಿದೆ. ಅದೆಂ ಅವು ಜಯಸಿದ ಬಣ್ಣ! ಆ ಬಣ್ಣದ ನೆರವಿನಿಂದಲೇ ಅವು, ತಮ್ಮ ವೈರಿಗಳಿಗಿಂತ ಎಷ್ಟೇ ಅಬಲವಾಗಿದ್ದರೂ ಬಾಳ ಸಂಗ್ರಾಮದಲ್ಲಿ ಮುನ್ನುಗ್ಗುತ್ತವೆ. ಪಕ್ಷಿಗಳು ಇವುಗಳ ಮುಖ್ಯವಾದ ವೈರಿಗಳು!

ಜಯಸಿದ ಬಣ್ಣಗಳು ಇವುಗಳಿಗೆ ಎರಡು ತೆರನಾಗಿ ನೆರವನ್ನು ನೀಡುತ್ತವೆ. ಮೊದಲನೆಯದಾಗಿ ವೈರಿಗಳಿಂದ ರಕ್ಷಿಸಿಕೊಳ್ಳುವುದರಲ್ಲಿ ಅತಿ ಪ್ರಾಮುಖ್ಯವಾದ ಸ್ಥಾನ ಅಕ್ರಮಿಸಿವೆ. ಎಷ್ಟೋ ಕೀಟಗಳ ಬಣ್ಣ ಅವು ವಾಸಿಸುವ, ತಂಗುವ, ಹಾರಾಡುವ ಸ್ಥಳಗಳಲ್ಲಿಯ ಪದಾರ್ಥಗಳಂತೆಯೆ ಇರುತ್ತವೆ. ಈ ತೆರದ ಬಣ್ಣವು ಸಂರಕ್ಷಕ ಬಣ್ಣವು (Protective Colour). 'ಕಲ್ಲಮಾ' ಜಾತಿಯ ಪಾತರಗಿತ್ತಿಗಳು ಪಕ್ಕ ಬಿಚ್ಚಿಕೊಂಡು ಹಾರುವಾಗ, ಒಂದು ತೆರನಾದ ಅಪೂರ್ವವಾದ ಬಣ್ಣದಿಂದ ಮೆರುಗುಗೊಂಡಿರುತ್ತವೆ; ಆದರೆ ಅವು ಪಕ್ಕಮುಚ್ಚಿಕೊಂಡು ಗಿಡಗಳ ಟೊಂಗೆಯ ಮೇಲೆ ಕುಳಿತಾಗ, ಅವುಗಳನ್ನು ಗುರುತಿಸಲು ಸಾಧ್ಯವಿಲ್ಲ. ಆಗ ಅವು ಟೊಂಗೆಯಿಂದ ಚಿಗಿತು ನಿಂತ ಎಲೆಗಳಂತೆ ತೋರುವುವು. ಅವುಗಳ ಪಕ್ಕಗಳಲ್ಲಿದ್ದ ಗೆರೆಗಳು ಎಲೆಯ ನರಗಳಂತೆ ತೋರುವುವು. ಪಕ್ಕಗಳ ಮೇಲಿನ ಚಿಕ್ಕೆಗಳು ಎಲೆಯು ಹುಳಿತು ತೂತು ಬಿದ್ದುತೋರುವಂತೆ ಗೋಚರಿಸುವುವು. ಮತ್ತೆ ಕೆಲವು ಕಟ್ಟಿಗೆ ಹುಳು (Stick insects) ಗಳು ಗಿಡಗಳ ಟೊಂಗೆಗೆ ಅಂಟಿಕೊಂಡರೆ, ಅವೂ ಗಿಡದ ಭಾಗದಂತೆಯೇ ಕಾಣುವುವು. ಅವು ಉದ್ದವಾಗಿ ಕಟ್ಟಿಗೆಯ ಬಣ್ಣದುವೇ ಆಗಿರುತ್ತವೆ. ಕೆಲವು ದೀಪದ ಹುಳುಗಳು (Moths) ಬಣ್ಣದಲ್ಲಿ ಮರಗಳ ಚೊಪ್ಪೆಗಳಂತೆಯೆ ಇರುತ್ತವೆ. ಕೆಲವು ಕೀಟಕಗಳು ಪಸರಾಗಿದ್ದು, ಅವುಗಳ ಮೈಮೇಲೆ ಕವಿಯ ಗೆರೆಗಳಿರುತ್ತವೆ. ಅವು ಹರಿದ ಎಲೆಗಳ ಅಂಚಿನಲ್ಲಿ ಕುಳಿತರೆ, ಎಲೆಯ ಒಂದು ಭಾಗದಂತೆಯೆ ತೋರುವುವು. ಎಷ್ಟೋ ಕೀಟಕಗಳು ಅವು ವಾಸಿಸುವ ಸ್ಥಳದಲ್ಲಿಯ ಮಣ್ಣಿನ ಬಣ್ಣದುವುಗಳಾಗಿರುತ್ತವೆ. ವೈರಿಗಳಿಂದ ಅಪಾಯವೆಂದು ತೋರಿದಾಗ, ಅವು ಪಕ್ಕಮುಚ್ಚಿಕೊಂಡು ನೆಲದಲ್ಲಿ ಕುಳಿತುಬಿಡುತ್ತವೆ. ಸಮುದ್ರದಂಡೆಯಲ್ಲಿ ಹಾರಾಡುವ ಕೆಲವು ಹುಳುಗಳು ಉಸುಕಿನ ಬಣ್ಣದುವೇ ಇರುತ್ತವೆ. ಹಲವು ಹುಳುಗಳು ಬಂಡೆಗಲ್ಲುಗಳ ಬಣ್ಣದುವುಗಳಾಗಿರುವವು; ಅವು ಕಲ್ಲುಮೇಲೆ ಕುಳಿತಾಗ ಅವನ್ನು ಗುರುತಿಸಲು ಯಾರಿಂದಲೂ ಸಾಧ್ಯವಿಲ್ಲ. ಹಲವು ಸಲ ಬಣ್ಣವು ಅವು ತಿನ್ನುವ ಆಹಾರ ವಸ್ತು ಮತ್ತು ಅವು ವಾಸಿಸುವ ಸ್ಥಳದ ವಾತಾವರಣ (ಬೆಳಕು) ಇತ್ಯಾದಿಗಳ ಮೇಲೂ ಬರುವುದುಂಟು. ಉದಾಹರಣೆಗಾಗಿ, ಕೆಲವು ಹುಳುಗಳು ಎಲೆಗಳನ್ನು ತಿನ್ನುತ್ತವೆ; ಎಲೆಯಲ್ಲಿಯ ಪತ್ರಹರಿತ್ (Chlorophyes) ಅವುಗಳ ದೇಹದಲ್ಲಿ ಹೋಗುವುದು; ದೇಹದ ಮೇಲಿನ ಚರ್ಮವು ಪಾರದರ್ಶಕವಿರುವುದರಿಂದ ಹಸಿರುಬಣ್ಣ ಬರುವುದು ಇಲ್ಲಿ ಆ ಹಸಿರು ಬಣ್ಣ ರಕ್ಷಣಾ ಬಣ್ಣವಲ್ಲ; ಆದರೂ ಅದು ಹಲವು ಸಲ ರಕ್ಷಣೆಗೆ ಉಪಯೋಗ ಬೀಳುವುದು. ಯಾವುದೇ ತೆರನಾಗಿ ಅವುಗಳಿಗೆ ಬಣ್ಣ ಬಂದಿರಲಿ, ಆ ಬಣ್ಣ ಅವುಗಳ ಬಾಳ ಸಂಗ್ರಾಮದಲ್ಲಿ ಹೋರಾಡಲಿಕ್ಕೆ ಉಪಯೋಗವಾದರೇನೇ ಅವುಗಳು ಸಾರ್ಥಕವಾದಂತಾದುವು. ಇಷ್ಟೊಂದು ತೆರನಾಗಿ ನಿಸರ್ಗದ ಕೈವಾಡವಿದ್ದರೂ, ಹುಳು-

ಹುಳ್ಪಡಿಗಳು ತಮ್ಮ ಅನುಭವದಿಂದ ರಕ್ಷಣೆಗಳನ್ನು ಹುಡುಕಿದ್ದರೂ, ಹಲವು ವೈರಿಗಳು ಮೋಸಹೋಗುವುದಿಲ್ಲ. ಅವೂ ತಮ್ಮ ಅನ್ನವಸ್ತ್ರವನ್ನು ಅರಸುವುದರಲ್ಲಿ ಪ್ರವೀಣತೆಯನ್ನು ಪಡೆದಿರುತ್ತವೆ.

ಇದು, ಸುತ್ತಲಿನ ವಸ್ತುಗಳಂತೆಯೆ ಬಣ್ಣ ಬದಲುಮಾಡಿಕೊಳ್ಳುವ ಹುಳುಗಳ ಬಗೆಗಾಗಿ ಹೇಳಿದಂತಾಯಿತು. ಕೆಲವು ಇದಕ್ಕೆ ವಿರುದ್ಧವಾಗಿ ಸುತ್ತಲಿನ ವಸ್ತುಗಳಿಗಿಂತ ಅಧಿಕ ಬಣ್ಣದಿಂದ ಕೂಡಿರುತ್ತವೆ. ವೈರಿಗಳಿಗೆ ಇವು ತಕ್ಷಣವೆ ಕಂಡು ಬರುತ್ತವೆ; ಆದರೂ ವೈರಿಗಳು ಅವುಗಳನ್ನು ಕೆಣಕುವುದಿಲ್ಲ. ಯಾಕೆಂದರೆ ಅವು ಕಹಿಯಾಗಿರುತ್ತವೆ.

ರಕ್ಷಣಾನುಕರಣ (Protective mimicry), ಇದೂ ಒಂದು ಅದ್ಭುತವಾದ ಜಗತ್ಕಾರವೇ! ಲೋಕದಲ್ಲಿ ದುರ್ಬಲರು ಹಲವು ಸಲ ಸಬಲರಂತೆ ವರ್ತಿಸುತ್ತಾರೆ. ಉದಾಹರಣೆಗೆ ಜಾತೀಯ ಜೊಂಪೆ ನಡೆಸುತ್ತವೆಂದಿಟ್ಟುಕೊಳ್ಳೋಣ: ಅದರಲ್ಲಿ ದುರ್ಬಲರಾದವರು, ತಮ್ಮ ಕೈಸಾಗದಾಗ, ಎದುರಾಳಿಗಳಿಂದ ಪಾರಾಗಲು ಎದುರಾಳಿಗಳಂತೆಯೆ ವೇಷಭೂಷಣ ಮಾಡುವರು; ಇದು ಸ್ವಲ್ಪಮಟ್ಟಿಗಾದರೂ ಪಾರಾಗಲು ಅನುಕೂಲವಾಗುವುದು; ಮತ್ತೆ ಕೆಲವರು ಗಟ್ಟಿಗರಂತೆ ನಟಿಸಿ ಅವರಂತೆ ಉಡಿಗೆ ತೊಡಿಗೆ ಮಾಡುವರು; ಅಂಥವರನ್ನೂ ಯಾರೂ ತಡಹುವುದಿಲ್ಲ. ಇದೇ ರೀತಿ ದುರ್ಬಲವಾದ ಹುಳುಗಳು ಸರಿಯಾಗಿ ರಕ್ಷಿಸಲ್ಪಟ್ಟ ಬೇರೆಜಾತಿಯ ಹುಳುಗಳ ಅನುಕರಣ ಮಾಡುತ್ತವೆ. ಕೆಲವು ಕ್ರಿಮಿ-ಕೀಟಕಗಳನ್ನು (Insects) ಪಕ್ಷಿಗಳು ತಿನ್ನುತ್ತವೆ; ಮತ್ತೆ ಕೆಲವನ್ನು ತಿನ್ನುವುದಿಲ್ಲ. ಮೊದಲನೆಯವು ಪಕ್ಷಿಗಳಿಂದ ಪಾರಾಗಲು ಎರಡನೆಯವುಗಳಂತೆಯೆ ಮಾರ್ಪಡಿಸಿಕೊಂಡು ಬಿಡುತ್ತವೆ. ಅನುಕರಣಕ್ಕೆ ಅನುಕೂಲವಾದ ಪರಿಸ್ಥಿತಿಗಳು ಜೇಕಾಗುತ್ತವೆ. ಅನುಕರಣೀಯ ಮತ್ತು ಅನುಕರಿಸುವ ಹುಳುಗಳು ಒಂದೇ ತಾಣದಲ್ಲಿ ವಾಸಿಸ ಬೇಕಾಗುತ್ತದೆ. ಅನುಕರಿಸುವ ಹುಳುಗಳು ಯಾವಾಗಲೂ ಅಬಲವಾಗಿರುತ್ತವೆ ಅನುಕರಿಸುವ ಜೀವಿಗಳು ಅಲ್ಪಸಂಖ್ಯಾಕವಾಗಿರುತ್ತವೆ ಅನುಕರಿಸಿದ ಹುಳುಗಳು ತಮ್ಮ ಜಾತಿಯ ಇನ್ನಿತರ ಜಾತಿಯ ಹುಳುಗಳಿಗಿಂತ ತೀರ ಭಿನ್ನವಾಗಿರುತ್ತವೆ. ಇಲ್ಲಿ ಹೆಚ್ಚಾಗಿ ಹೆಣ್ಣು ಹುಳುಗಳೇ ಭಾಗವಹಿಸುತ್ತವೆ. ಆಗ ಅವು ಸ್ವಜಾತಿಯ ಗಂಡುಗಳಿಗಿಂತ ತೀರ ಬೇರೆಯಾಗಿ ಬಿಡುತ್ತವೆ. ಅನುಕರಣವು ಬರಿ ಬಾಹ್ಯ ಬದಲಾವಣೆಯು; ಆಂತರಿಕ ಕ್ರಿಯೆಗಳ ಮೇಲೆ ಅದರ ಕ್ರಿಯೆಯು ನಡೆಯಲಾರದು ಆದರೂ ಹಲವು ಹುಳು, ಕೀಟಕಗಳಲ್ಲಿ ಆಂತರಿಕ ಕ್ರಿಯೆಗಳು ಬದಲಾದುದೂ ಕಂಡುಬರುತ್ತದೆ; ಆದರೆ ಅದು ತೀರ ಕ್ವಚಿತ್ತಾಗಿ.

ಎರಡನೆಯದಾಗಿ ಬದುಸಿದ ಬಣ್ಣ ರಕ್ಷಣೆಗಾಗಿ ಉಪಯೋಗ ಬೀಳುವಂತೆ ಭಕ್ಷ್ಯಾನ್ವೇಷಣೆಗೂ ಉಪಯೋಗ ಬೀಳುವುದು. ಕೆಲವು ಕೀಟಕಗಳು ನೋಡಲಿಕ್ಕೆ ಹುಲ್ಲು, ಹಸಿರು ಎಲೆಗಳಂತೆಯೆ ತೋರುವುವು; ಅವು ಹುಲ್ಲು ಎಲೆಗಳಲ್ಲಿ ಅಡಗಿಕುಳಿತು, ಇನ್ನಿತರ ಹುಳು-ಹುಪ್ಪಡಿ ಅಳವಿನಲ್ಲಿ ಬಂದಾಗ ನುಂಗಿಬಿಡುತ್ತವೆ. ಕೆಲವು ನೋಡಲಿಕ್ಕೆ ಹೂವಿನ ಭಾಗಗಳಂತೆಯೆ ಇರುತ್ತವೆ. ಮಕರಂದವನ್ನು ಈಂಟಲು ಬಂದ ಜೀವಿಗಳು ಇವುಗಳ ಗಂಟಲಲ್ಲಿಯೆ ನೇರವಾಗಿ ಸಿಲುಕಿ ಬಿಡುವುವು. ಇಲ್ಲಿ ಕೀಟಕಗಳಿಗಿರುವ ಬಣ್ಣವು ರಕ್ಷಣಾ ಬಣ್ಣದಂತಿದ್ದರೂ, ಅದು ರಕ್ಷಣೆಗಾಗಿ ಅಲ್ಲ; ಭಕ್ಷ್ಯಾನ್ವೇಷಣೆಗೆ. ಈ ಜಾತಿಯಲ್ಲಿ ಎಷ್ಟೋ ಸಂಪನ್ನ ಕುದುರೆಗಳು ಹಸಿರು ಕೀಟಕಗಳು, ಎಲೆ ಕೀಟಕಗಳು ಸೇರುತ್ತವೆ.

ಕ್ರಿಮಿ-ಕೀಟಕ, ಹುಳು ಹುಪ್ಪಡಿಗಳು ಬಣ್ಣ, ಆಕಾರ, ನಡತೆ, ನಡಿಗೆ, ತಾಣಗಳಲ್ಲಿ ಮಾರ್ಪಾಡನ್ನು ಮಾಡಿಕೊಳ್ಳುವುದು ಹೊಟ್ಟೆ ಹೊರೆಯಲಿಕ್ಕೆಂದಿರಬಹುದು; ಸುತ್ತಲಿನ ವಾತಾವರಣದ ನಿಯಮಕ್ಕನುಗುಣವಾಗಿರಬಹುದು; ಅದೊಂದು ಬೆಳಿಗೆಯ ಕಟ್ಟಳೆಯಾಗಿರಬಹುದು; ಇಲ್ಲವೆ ಲೈಂಗಿಕ ಆಯ್ಕೆಯ ಪರಿಣಾಮವಾಗಿರಬೇಕು. ಆದರೆ ಇವೆಲ್ಲವುಗಳಿಗಿಂತಲೂ ಮುಖ್ಯವಾದುದು ಬಾಳ ಸಂಗ್ರಾಮದಲ್ಲಿ ಯೋಧನ ಪಾತ್ರವನ್ನು ವಹಿಸುವುದಕ್ಕಾಗಿ! 'ತಾನು ಬೆಳೆದು ದೊಡ್ಡದಾಗಿ, ತನ್ನಂತಹವುಗಳನ್ನೇ ಲೋಕದ ಮುನ್ನಡೆಗೆ ಉತ್ಪತ್ತಿ ಮಾಡುವುದೇ ಲೋಕದಲ್ಲಿಯ ಜೀವಿಯ ಕರ್ತವ್ಯ' ಎಂಬ ನಿಸರ್ಗ ನಿಯಮಿಸಿದ ಕರ್ತವ್ಯ ಮತ್ತು ಋಣದಲ್ಲಿಯೆ ಪ್ರತಿಯೊಂದು ಜೀವಿಯ ಜೀವನದ ಕೊನೆಯಿದೆ. ಅವುಗಳಿಗನುಗುಣವಾಗಿಯೆ ಕ್ರಿಮಿ-ಕೀಟಕಗಳಾದರೂ, ಎಷ್ಟೋ ತೊಂದರೆಗಳು ಅಡ್ಡ ಬಂದರೂ ಹಲವಾರು ತೆರನಾದ ಹಂಚಿಕೆ ಹಾಕಿ, ಹಲವು ಸಲ ಉಪವಾಸ ಬಿದ್ದೂ, ಹಲವು ಸಲ ದೂರ ನಾಡಿಗೆ ಹಾರಿಹೋಗಿಯೂ ತಮ್ಮ ಸಂತತಿಯನ್ನು ಉಳಿಸಿ ಬೆಳೆಯಿಸುತ್ತವೆ!

ಬೈಲಹೊಂಗಲದಲ್ಲಿ ನಮ್ಮ ಏಜಂಟರು
ಶ್ರೀ. ಎಸ್. ಕೆ. ಕಾಮಂಕರ
ನೆಹರೂ ಸ್ಟೋರ್ಸ್.

ಚಿಕ್ಕಮಗಳೂರದಲ್ಲಿ ನಮ್ಮ ಏಜಂಟರು
ಶ್ರೀ ಎಮ್. ಎಸ್. ವಾಸು
ನ್ಯೂಜ್ ಏಜಂಟ್ಸ್.

ದೇವನೊಡನೆ

(ಒಂದು ಬಾಳನೋಟ)

ಶ್ರೀ. ಮಿಜಿ ಅಣ್ಣಾರಾಯರು, ಧಾರವಾಡ

★

ದೇವಾ! ಅನಾಥನಾಥಾ! ದಯಾನಿಧಿ! ಭಕ್ತವತ್ಸಲಾ! ಭಕ್ತನಿಗೊಂದಿಷ್ಟು ವರವ ನೀಡುವೆಯಾ? ಬೆದರ ಬೇಡ ದೇವಾ! ನಾನೇ ನು ಹಿರಣ್ಯಕಶಿಪು-ರಾವಣರಂತಹ ಮಹಾಭಕ್ತನಲ್ಲ. ನಿನ್ನನ್ನು ಮಾತಿನ ಮಲಕಿನಲ್ಲಿ ಕೆಡವಿಕೊಂಡು ಮನಬಂದಂತೆ ನಡೆಯುವ ವಂಚಕ ಭಕ್ತನಲ್ಲ. ಅಲ್ಪಭಕ್ತ ನನ್ನದು. ಅದಕ್ಕಿಂತ ನನ್ನ ಬಯಕೆಯೂ ಅಲ್ಪ, ತೀರ ಅಲ್ಪ. ಅದನ್ನು ದಯೆಪಾಲಿಸಿ ಎರುಗಿ ಕಸಿದುಕೊಳ್ಳಲು ನೀನು ಅವತರಿಸುವ ಪ್ರಸಂಗವನ್ನೂ ತರಲಾರೆ....ಆದರೆ....?

ಇಂದೊಂದು ದಿನ ನನ್ನೊಡನೆ ತಿರುಗಾಡಲು ಬರುತ್ತೀಯಾ? ಸುತ್ತಲಿನ ಜನಜೀವನವನ್ನು ನೋಡುವಾ. ನೀನೇ ನಿರ್ಮಿಸಿದ ಜಗವಿದು! ನೀನೆಲ್ಲದರಲ್ಲಿಯೂ ಇರುತ್ತೀ, ನಿನ್ನೊಳಗೆಲ್ಲವೂ ಇದೆ—ಎಂಬುದನ್ನು ನೀನೇ ಹೇಳಿರುತ್ತೀಯಲ್ಲ!

೧

ಹೊರಗೆ ಬಂದೆಯಾ? ಅಗೋ, ನೋಡು! ಎತ್ತರದಲ್ಲಿ ಹೊಗೆಯನ್ನು ಕಾರುತ್ತಿರುವ ಬಂಬು ಏನದು? ಜಗವನ್ನೆಲ್ಲ ಕಪ್ಪುಗೊಳಿಸುತ್ತಿದೆ. ಅಲ್ಲಿಂದ—ಆ ಗಿರಣಿ ಮನೆಗಳಿಂದ ಇರುವೆಗಳ ಸಾಲಿನಂತೆ ಹೊರಬರುವುವು ಕ್ರಿಮಿಗಳೋ? ಅಲ್ಲಲ್ಲ, ತುತ್ತು ಕೂಳಿಗಾಗಿ ಹಗಲಿರುಳೂ ದುಡಿಯುವ ಕೂಲಿಗಳು, ಬಡಜೀವಿ.

ಅಯ್ಯೋ! ಸತ್ಯಕ್ಕೆ ಸಾವಿಲ್ಲವಯ್ಯಾ, ಅಹುದು ಸತ್ಯಕ್ಕೆ ಜಾಯೂ ಇಲ್ಲ, ಬಾಯ್ದೆರೆದರೆ ಅದಕ್ಕೆ ಉಳಿವೂ ಇಲ್ಲ, ಈ ಸಮಾಜದಲ್ಲಿ. ದೇವಾ, ಈ ಮೂಕಜೀವಿಗಳ ಶ್ರಮದ ಫಲವನ್ನು ಕುಳಿತು ಉಣ್ಣುವವರಾರು ಗೋತ್ತೆ? ಆ ಸಿರಿವಂತರು. ಕೊಬ್ಬಿದ ಧನವಂತರು, ಗಿರಣಿಯ ಒಡೆಯರು. ಹಾ! ಜಿಗಣೆಗಳಂತೆ ತಮ್ಮ ಬಂಧುಗಳ ನೆತ್ತರವನ್ನೇ ಹೀರುವ ಈ ಭಾಂಡವಲುದಾರರಲ್ಲಿ ಮಾನವತೆಯಾದರೂ ಇದೆಯೆ? ಪರಮಾತ್ಮಾ! ಈ ಮನುಜರಿಗೆ ನಿಷ್ಠೆಯನು ನೀಡೈ ಮೂಕ ಜೀವಿಗಳ! ನಿಷ್ಠೆಯೇತಕಿಲ್ಲ?

ಅಲ್ಲಿ ನೋಡು! ಆ ಆವಾರದಲ್ಲಿ ಕಣ್ಣು ಕೋರೈಯಿಸುವ ಬಣ್ಣಬಣ್ಣದ ಸಾಲ್ಮನೆಗಳು! ಯಾರು ಕಟ್ಟಿದವರವನ್ನು? ಏಕೆ ಕಟ್ಟಿರಬೇಕಿಲ್ಲ? ಓಹೋ, ಹೆಬ್ಬಾಗಿಲಿನ ಮೇಲೆ ಬರೆದಿದೆಯಲ್ಲ: 'ಜಮುನಾದಾಸರ ಧರ್ಮಶಾಲೆ"! ಅಹುದು. ಬಡಜನತೆಗಾಗಿ ಜಮುನಾದಾಸರು ಕಟ್ಟಿಸಿದ ಧರ್ಮಶಾಲೆಯ ಕೋಣೆಗಳವು! ಪುಣ್ಯಾತ್ಮರು ಎಂತಹ ಉದಾರ ಜೀವಿಗಳವರು!

ಬಾಗಿಲಲ್ಲಿ ಕುಳಿತವನಾರು? ಕಾವಲುಗಾರ! ಅಲ್ಲಲ್ಲ. ಧರ್ಮಶಾಲೆಯಲ್ಲಿ ಇಳಕೊಳ್ಳುವವರ ವ್ಯವಸ್ಥೆಗಾಗಿ ಒಡೆಯರಿಂದ ಇಡಲ್ಪಟ್ಟ ಸೇವಕ. ಏನೆಲ್ಲ ವ್ಯವಸ್ಥೆಯಿದು! ದೇವಾ, ನಿನ್ನ ಸ್ವರ್ಗದಲ್ಲಾದರೂ ಇಂತಹ ವ್ಯವಸ್ಥೆ ಇದೆಯೆ? ಇಲ್ಲ. ದೇವತೆಗಳಿಗೆಲ್ಲಿ ಈ ನಿಸ್ವಾರ್ಥ ಬುದ್ಧಿ ಬಂದೀತು? ಸ್ವಾರ್ಥಿಗಳವರು! ತಮ್ಮ ಪುಣ್ಯದ ಫಲವನ್ನು ತಾವೇ ಭೋಗಿಸಲು ಬಂದವರು! ಸಾವುಕಾರರಿಂದ ಭುವಿಯು ದಿವವಾಗಿದೆ.

ಇರಲಿರಲಿ. ಆ ಸೇವಕನ ಮಗ್ಗುಲಲ್ಲಿರುವ ಪೆಟ್ಟಿಗೆಯೇನದು? ಧರ್ಮಾರ್ಥ ಪೆಟ್ಟಿಗೆಯೇನೋ. ಅಲ್ಲಿ ಇಳಿಯುವವರಿಗೆ ದಾನದ ನೆಲೆಯಿದು. ಧರ್ಮಕ್ಕೆ ದುಡ್ಡೊಗೆಯುವ ತಾಣವದು. ಪಹವ್ವಾ! ಎಂಥ ಕಲ್ಪನೆಯಿದು! ಧರ್ಮದ ದಾರಿ ತೋರಿಸುವ ಕೈಗಂಬವದು! ಕಾಸು ಪಡದವರ ಕೈಯಿಂದಲೂ ಸಹಜ ದುಡ್ಡುಚ್ಚುವ ಸುಲಭೋಪಾಯ! ಅದರ ಬೀಗದ ಕೈ!—ಛೇ! ಇಂಥ ಅಲ್ಪ ವಿಚಾರವನ್ನೇ ಎತ್ತಕೂಡದು. ಈ ಭವ್ಯ ಧರ್ಮಶಾಲೆಯನ್ನೇ ಕಟ್ಟಿಸಿದ ದಯಾಳು... ದಾನಶೂರರಲ್ಲಿಯೆ.. ಇರತಕ್ಕುದು!

ಆಹಾ! ಅಂಗಹೀನರಾದ ಭಿಕ್ಷುಕರಿಗೂ ಆಶ್ರಯಸ್ಥಾನವಾಗಿದೆಯಲ್ಲ, ಈ ಧರ್ಮಶಾಲೆಯು ಹೊರನೆರಳು! ಅಲ್ಲಿ ನೋಡಿದೆಯಾ ದೇವಾ? ಕುಂಟಕಾಲಿನ ಭಿಕ್ಷುಕ ಬಾಯ್ಬಿಟ್ಟು ಬೇಡುತ್ತಿರುವ. ಧರ್ಮಶಾಲೆಯಲ್ಲಿ ಬಂದು ಹೋಗುವವರ ಕೊಡುಗೈದಾನದ ಮೇಲೆಯೆ ಆ ಬಡಜೀವಿಯ ಹೊಟ್ಟೆ ತುಂಬುವುದು. ದಯಾನಿಧಿ! ಮಾನವರಲ್ಲಿ ಜಮುನಾದಾಸನೆಂದರೆ ನೀನೇ ಅಲ್ಲವೆ? ಒಳಗೆ ಹೋಗಿ ಧರ್ಮಶಾಲೆ ನೋಡೋಣವೆ?

ಕೇಳು! ದೇವಾ, ಕವಿದೆರೆದು ಕೇಳು! ಆ ದೀನ—ಕಾಲಿಲ್ಲದ ಬಡಜೀವ— ಏನು ಒರಲುತ್ತಿದೆ ಕೇಳು; 'ಕಾಲಿಲ್ಲದವರಿಗೆ ನೀವೆ ಸಿವಾ! ಬಡವರೇ ತಾಯಿ ತಂದೆ ಸಿವಾ!!'

ಏನು ಹುಚ್ಚಿದು? ಬಡವರೇ ತಾಯಿ-ತಂದೆಯಂತೆ! ಇವರಿಂದೇನಾದೀತು? ತಮ್ಮ ಹೊಟ್ಟೆಗಿದ್ದರಲ್ಲವೆ ನಿನಗೆ ನೀಡುವುದು? ಸಿರಿವಂತರೇ ತಾಯಿ-ತಂದೆಯೆನ್ನು. ಅವರ ಧರ್ಮಶಾಲೆಯ ಜನಗಳಿಂದಲ್ಲವೆ ನಿನಗೆ ಭಿಕ್ಷೆ ಸಿಗುವುದು?

"ಎಲೋ ಮೂರ್ಖಾ, ಜಮುನಾದಾಸರಂಥವರೇ ತಾಯಿ ತಂದೆಯೆನ್ನು!" "ಅಪ್ಪಾ, ಜಮುನಾದಾಸನೆ? ಅಯ್ಯೋ ಅವನ ಹೆಸರನ್ನು ಕೂಡ ಉಚ್ಚರಿಸಬಾರದಯ್ಯಾ, ಪಾಪಿ! ಅವನ ಗಿರಣಿಯಲ್ಲಿಯೇ ದುಡಿದು ದುಡಿದು ಮುಪ್ಪಾದೆನೆಯ್ಯಾ! ಅವನ ಗಿರಣಿಯಲ್ಲಿಯೆ ನನ್ನ ಕಾಲು ಕಳಕೊಂಡೆನೆಯ್ಯಾ. ಅಂದೇ ನನ್ನನ್ನು ಕೆಲಸದಿಂದ ಹೊರದೂಡಿದರು ಔಷಧವಿಲ್ಲ. ಉಪಚಾರವಿಲ್ಲ. ಗತಿಗೇಡಿಯನ್ನಾಗಿಸಿದರು ಪುಣ್ಯಾತ್ಮರು.."

ದೇವಾ, ಕವಿಯ ಮೇಲೇಕೆ ಕೈಯಿಟ್ಟುಕೊಂಡಿರುವೆ? ಹೆಗೆ. ಕವಿಗೊಟ್ಟು ಕೇಳು! ಕಣ್ದೆರೆದು ನೋಡು!

ಮಗು

(ಅನುವಾದಿತ ಕಥೆ)

ಶ್ರೀ. ಆಕ್ಟವ್ ಎನ್. ರಾನ್ ಎಂ. ಎ. ಚೆಳ್ಳಕೆರೆ

★

ಹೆಣ್ಣು-ಗಂಡುಗಳ ಮನಸ್ಸಿನ ಪ್ರತಿಬಿಂಬಗಳನ್ನು ಈ ಕತೆಯಲ್ಲಿ ಕಾಣಬಹುದು. ಗಂಡು ಹತ್ತು ಹೆಣ್ಣುಗಳಿಗೆ ತನ್ನ ಪ್ರೀತಿಯನ್ನು ತೋಡಿಕೊಂಡಾಡಬಹುದು; ಆದರೆ ಹೆಣ್ಣಿಗೆ ಹೃದಯ ಏನೆಂದೆ ಸಮರ್ಪಿತವಾದರೆ, ಎಂತಹ ಸಂಕಟವನ್ನೂ ಎದುರಿಸುವ ಸ್ಥೈರ್ಯದಿಂದ ತುಂಬಿ, ನಿಂತಲ್ಲಿಯೆ ನಿಲ್ಲುವುದು.

★

ಆದೆಷ್ಟೋ ವರ್ಷಗಳಿಂದ ಲಗ್ನವಾಗುವುದಿಲ್ಲವೆಂದು ಪಣ ತೊಟ್ಟಿದ್ದ ಜಾಕಿಸ್ ಬೋರ್ಡಿಲೇರ್, ಒಮ್ಮೆಲೆ ಮನಸ್ಸು ಬದಲಾಯಿಸಿದ. ಇಷ್ಟಕ್ಕೆಲ್ಲಾ ಕಾರಣ ಸಾಗರತೀರದಲ್ಲಾದ ಅನಿರೀಕ್ಷಿತ ಘಟನೆಯೊಂದು.

ಬೆಳಗಿನ ಹೊತ್ತು. ಸಾಗರದಿಂದ ಈಜಿ ಬರುವ ಹೆಂಗಳೆಯರನ್ನೇ ನೋಡುತ್ತ ಮರಳ ಮೇಲೆ ಉರುಡಿಕೊಂಡಿದ್ದ ಜೋರ್ಡಿಲೇರ್. ಲಗ ಜಿಮ್ಮಿಂದೊಮ್ಮೆ ಕೋಮಲ ಪಾದಗಳು ಕಂಡುವು. ಹಾಗೆಯೆ ದೃಷ್ಟಿಯನ್ನು ಮೇಲೇರಿಸಿದ. ಒಳ್ಳೇ ಮೋಹಕ ವ್ಯಕ್ತಿ ಆಕೆ. ಹಾಗೆ ಅವನಿಗೆ ಕಂಡದ್ದಾದರೂ ಹೊಂಡೆಯವರೆಗೆ. ಎಚ್ಚರಿಕೆಯಿಂದ ತಲೆಗೆ ಕಟ್ಟಿದ್ದ ಸ್ನಾನದ ಬಿಳಿಯ ಉಣ್ಣೆಟೋಪಿ. ವಿಷಯಾಸಕ್ತ, ದುಂದುಗಾರನೆನ್ನಿಸಿಕೊಂಡಿದ್ದ ಅವನ ಮನಸ್ಸು ಮೊದಲು ನೋತದ್ದು—ಆಕೆಯ ಮೋಹನಾಕೃತಿಗೆ. ಮುಂದೆ, ಆ ಹುಡುಗಿಯ ರೂಪಕ್ಕೆ, ಸಕ್ಕರೆಯಂಥ್ಗುಣಕ್ಕೆ, ಆ ಕೆನ್ನೆ-ತುಟಿಗಳಂತೇ ಮುಗ್ಧ ಮನೋಹರವಾದ ಸರಳತೆಗೆ—ಮಾರು ಹೋದ.

ಆಕೆಯ ಮನೆಯವರ ಪರಿಚಯವಾಯ್ತು; ಅವರೂ ಇವನನ್ನು ವಿಶ್ವಾಸದಿಂದ ಕಂಡರು. ಅವಳ ಪ್ರೇಮದಲ್ಲೇ ಮುಳುಗಿ ಹೋದ. ಹಿಂದೆ ವಿಸ್ತಾರವಾದ, ಹಳದಿಯುಸುಕಿನ ಮೈದಾನದಲ್ಲಿ ದೂರದಿಂದ ಬೆರ್ಥೆ ಬ್ಯಾಸಿಸ್‌ಳನ್ನು ಕಂಡಾಗ, ಅಪಾರ ಮಸ್ತಕವಾಗಿ ಮೈ ತುಳುಕಿತ್ತು. ಈಗ ಆಕೆಯು ಸನಿಯದಲ್ಲಿ ಮೂಕನಾದ, ಆಲೋಚನಾ ಶೂನ್ಯನಾದ. ಹೃದಯದಲ್ಲೇನೋ ಉಕ್ಕುಕ್ಕಿ ಬರುತ್ತಿತ್ತು. ಕವಿಯಲ್ಲಾವ್ಯದೋ ರಾಗ ಝೇಂಕರಿಸುತ್ತಿತ್ತು, ಮನಸ್ಸೇಕೋ ತಬ್ಬಿಬ್ಬಾಗಿತ್ತು. ಇದೇ ಪ್ರೇಮವೆ? ಅವನಿಗೆ ತಿಳಿಯದು, ಅರ್ಥವೂ ಆಗದು. ಆದರೂ, ಅವಳನ್ನೇ ಪತ್ನಿಯಾಗಿ ಸ್ವೀಕರಿಸಬೇಕೆಂದು ಸ್ಥಿರಸಂಕಲ್ಪವಾಯಿತು.

ಯುವಕನ ಅಪಕೀರ್ತಿಯನ್ನು ಕೇಳಿದ್ದ ಆಕೆಯ ತಾಯ್ತಂದೆಯರು ಹಿಂದೆಮುಂದೆ ನೋಡುವುದರಲ್ಲೇ ಕಾಲ ನೂಕಿದರು. ಯಾವಳನ್ನೋ ಇಟ್ಟುಕೊಂಡಿದ್ದ ನಂತೆ—ಪರಿಜಯ ಹಳೆಯದು. ಈಗ ಆ ಸಂಬಂಧವಿಲ್ಲವೆಂದರೂ, ಇನ್ನೂ ಇದ್ದೇ ಇರುವಂತಹ ಹಲವುಗಳಲ್ಲಿ ಇದೊಂದು. ಇದಲ್ಲದೆ, ತುಟಿಗೆ ತುಟಿ ಸೇರಿಸಿದ ಪ್ರತಿ ಹೆಣ್ಣಿನೊಡನೆಯೂ ಈತ ಕೆಲಕಾಲ ಕೂಡಿದ್ದವನೇ.

ಆದರೆ, ಈಗ ತನ್ನ ಜೀವನದಲ್ಲೇ ಒಂದು ಹೊಸ ಹಾಳೆ ತಿರುವಿದ್ದ. ಇಷ್ಟು ದಿನಗಳಿದ್ದ ಹೆಣ್ಣನ್ನು ಒಮ್ಮೆ ಕಣ್ಣಿಂದ ನೋಡಲೂ ಒಪ್ಪಲಿಲ್ಲ. ಗೆಳತಿಯೊಬ್ಬಳು ತನ್ನ ಜೀವನಾಂಶವನ್ನು ಗೊತ್ತು ಮಾಡಿಕೊಂಡಿದ್ದಳು: ಹಣವನ್ನು ಕೊಟ್ಟು ಬಿಟ್ಟ ಜಾಕೆಸ್. ಆದರೆ, ಈಗವಳ ಹೆಸರನ್ನೂ ಸಹ ಉಸುರಲಾಗದು. ಅಂದಿನಿಂದ ಅವಳು ಯಾರು, ಎಂಬುದು ಕೂಡ ತನಗೆ ತಿಳಿಯದು. ಅವಳು ಬರೆದ ಪತ್ರಗಳನ್ನೂ ಒಡೆಯುತ್ತಿರಲಿಲ್ಲ ಕೂಡ. ಪ್ರತಿದಿನ ತಾ ತೊರೆದ ಹೆಣ್ಣಿನ ವಕ್ರ ಹಸ್ತಾಕ್ಷರ ಕಾಣುವುದು. ಹಾಗೇ ಅದನ್ನು ಹರಿದು ಜೆಲ್ಲಿ ಬಿಡುವನು. ಅದರಲ್ಲಿರುವುದಾದರೂ ಏನು, ಬರೀ ಮೂದಲಿಕೆಗಳು—ಎಂದು ಅವನಿಗೆ ಮುನ್ನವೇ ಗೊತ್ತು.

ಅವನ ಈ ನಿಶ್ಚೆಯಲ್ಲಿ ಅವರಿಗಷ್ಟು ನಂಬಿಕೆಯಿಲ್ಲ. ಆ ತಿಂಗಳುಗಳೆಲ್ಲಾ ಈ ಪರೀಕ್ಷೆಯಲ್ಲಿ ಕಳೆಯಬೇಕಾಯ್ತು. ವಸಂತ ಋತು ಆರಂಭವಾದ ಮೇಲೆಯೆ ಅವನ ಕೋರಿಕೆಗೆ ಮನ್ನಣೆ ಸಿಕ್ಕಿದ್ದು.

ಮೇ ತಿಂಗಳ ಮೊದಲ ದಿನಗಳಲ್ಲಿ ಪ್ಯಾರಿಸ್ಸಿನಲ್ಲಿ ಲಗ್ನವಾಯ್ತು. ರೂಢಿಯ ವಸಂತ ಯಾತ್ರೆಗೆ (Honey – moon) ಹೋಗಕೂಡದೆಂದಾಯ್ತು. ಸಾಧಾರಣ ನರ್ತನಕೂಟವೂ, ಹನ್ನೊಂದರ ಮೇಲೆ ನಡೆಯಕೂಡದು. ಅದುಕೂಡ, ವಧುವಿನ ಅಪ್ತೇಷ್ಟರ ಸಂತುಷ್ಟಿಗೆಂದು ಮಾತ್ರ. ಪ್ರಥಮರಾತ್ರಿ ಅವಳ ಮನೆಯಲ್ಲೇ ಇರಬೇಕು. ಮಾರನೆಯ ದಿನ, ಅವರ ಪ್ರೇಮವು ಅರಳಿದ ಸಾಗರತೀರಕ್ಕೆ ಹೋಗಿ ಬರಬೇಕು.

ರಾತ್ರಿಯಾಯಿತು. ದೊಡ್ಡದಾದ ನಡುಮನೆಯಲ್ಲಿ ಅತಿಥಿಗಳೆಲ್ಲ ನರ್ತನದಲ್ಲಿದ್ದರು. ನವೀನ ದಂಪತಿಗಳು ಒಳಮನೆ ಸೇರಿದರು. ಧಳ ಧಳ ಹೊಳೆವ ರೇಷ್ಮೆ ಪರದೆಗಳು ಇಳಿಬಿದ್ದಿದ್ದುವು. ತೊಲೆಗೆ ನೇತುಹಾಕಿದ ಅಂಡಾಕಾರದ ದೀಪದ ಮಂದ ಪ್ರಕಾಶವನ್ನಾ, ಬೇರೆ ಬೆಳಕಿರಲಿಲ್ಲ. ಉದ್ದವಾದ ಕಿಟಕಿ ತೆರೆದಿತ್ತು, ಅದರಾಚೆಯಿಂದ ಹೊಸ ವಸಂತನ ಮಂದಮಾರುತ ಅವರ ಮುಖಕ್ಕೆ ಮೇಲೆ ಸುಯ್ಯುತ್ತಿತ್ತು.

" ಕೈಯಲ್ಲಿ ಕೈ ಹಾಕಿ, ಇಬ್ಬರೂ ಮೌನವಾಗಿ ನಿಂತಿದ್ದರು. ಹಸ್ತಗಳು ಒಮ್ಮೊಮ್ಮೆ ಬಿಗಿಯಾಗಿ ಒತ್ತುತ್ತಿದ್ದುವು. ತನ್ನ ಜೀವನದ ಈ ಬೃಹತ್ತಾದ ಬದಲಾಣೆಯಿಂದ ಅವಳು ತುಸು

ಅಪ್ರತಿಭಳಾಗಿದ್ದಳು. ಕಣ್ಣು ಕನಸು ಕಾಣುತ್ತಿತ್ತು: ತುಟಿಯಲ್ಲಿ ಮುಗುಳ್ನಗೆ ಮೂಡಿತ್ತು. ಪುಚ್ಚೆದ್ದ ಸಂತೋಷದಿಂದ ಅತ್ತು ಬಿಡುವಂತಿದ್ದಳು; ಅಮಿತಾನಂದದಿಂದ ಮೂರ್ಛೆ ಹೋಗುವವಳಂತಿದ್ದಳು. ತನಗಾದ ಈ ಬದಲಾವಣೆಯಿಂದಾಗಿ, ಅವಳಿಗೆ ಪ್ರಪಂಚವೇ ಬೇರೆ ರೀತಿಯಾಗಿ ಕಾಣುತ್ತಿತ್ತು. ಕಾರಣ ಕಾಣದ ವ್ಯಥೆ, ದೇಹದಲ್ಲಾವುದೋ ಸಂಚಾರ, ಮತ್ತಿನ ಅಲಸಿಕೆಗೆ ಈಡಾದ ಮೈ.

"ಅವನಾದರೋ, ಸಂತತ ಮುಗುಳ್ನಗೆಯಿಂದ ಅವಳನ್ನೇ ನೋಡುತ್ತಿದ್ದ. ಮಾತನಾಡಿಸಬೇಕೆಂಬ ಬಯಕೆ; ಆದರೆ ಏನೂ ತೋಚದು. ಅವನ ಉದ್ವೇಗ ಕಾಣುತ್ತಿದ್ದುದು ಹಸ್ತಗಳನ್ನು ಅದುಮುವುದರಲ್ಲಿ; ಆಗಾಗ ಮೆಲ್ಲಮೆಲ್ಲನೆ 'ಬಿಡ್ಡೆ!' ಎಂದು ಉಸುರುವನು; ಉತ್ತರವಾಗಿ, ಸುಕೋಮಲ ದೃಷ್ಟಿ ಬೀರುವಳು ಆಕೆ. ಒಂದು ಘಳಿಗೆ ಒಬ್ಬರನ್ನೊಬ್ಬರು ನೋಡುವರು. ಅವಳ ನೋಟಕ್ಕೆ ತುತ್ತಾದಾಗ ಅವನು ಅಧೋಮುಖನಾಗುವನು. ತಾವು ಒಟ್ಟಿಗೆ ಮಾತಾಡಬಹುದಾದ ವಿಷಯವೇ ಅವನಿಗೆ ಹೊಳೆಯದು. ಅವರು ಪ್ರತ್ಯೇಕವಾಗಿದ್ದರು. ನರ್ತನದಲ್ಲಿಯ ದಂಪತಿಗಳು ಒಮ್ಮೊಮ್ಮೆ, ಯಾವುದೋ ಅಂತರ್ಯದ ಗೋಪ್ಯಕ್ಕೆ ತಾವು ಮಾತ್ರವೇ ಸಾಕ್ಷಿಗಳೆಂಬಂತೆ, ಕಳ್ಳ ದೃಷ್ಟಿ ಬೀರುವರು.

ನೆರೆಯಲ್ಲಿಯ ಸಣ್ಣ ಕದ ಸರಿಯಿತು; ಆಳೊಬ್ಬ ತಂದಿತ್ತಿದ್ದ ಆತುರದ ಪತ್ರವನ್ನೂ ತಟ್ಟೆಯನ್ನೂ ಮುಂದಿಟ್ಟು, ಕಾವಲುಗಾರ ಹೊರಟು ಹೋದ. ಆನಿರೀಕ್ಷಿತ ಆಘಾತದಿಂದೆಂಬಂತೆ ಜ್ಯಾಕಿಸ್ ಬೆದರಿದ; ಪತ್ರವನ್ನು ತೆಗೆದುಕೊಳ್ಳುವಾಗ ಬೆರಳುಗಳು ಅದುರುತ್ತಿದ್ದುವು

ಅದನ್ನೇ ಬಹಳ ಹೊತ್ತು ನೋಡುತ್ತಿದ್ದ; ಬರೆಹ ಯಾರದೆಂಬುದು ತಿಳಿಯಲಿಲ್ಲ. ಓದಲು ಧೈರ್ಯಬಾರದು. ಓದದಿರಲಾರದೆಂದು ಮನಸ್ಸು; "ಅದರ ವಿಷಯವೇ ಈಗ ಒತ್ತಟ್ಟಿಗಿರಲಿ, ಜೀವಿನಲ್ಲಿ ಗಿಡಿಗಿ! ನಾಳೆ, ನಾಳೆ, ದೂರ ಹೊರಟು ಹೋಗುತ್ತೇನೆ, ಆ ಮೇಲೇನಾದರೂ ಪರವಾಗಿಲ್ಲ!" ಎಂದೆಂದುಕೊಳ್ಳುವ ಪರಿಸ್ಥಿತಿ.

'Very Urgent' ಎಂಬ ಶಬ್ದಗಳನ್ನು ಕಂಡು ದಿಗಿಲಾಯ್ತು ಲಕೋಟೆ ಹರಿದು, ಪತ್ರವನ್ನೋದಿದ; ಬೆದರಿಕೊಂಡವರಂತೆ ಅವನ ಮುಖ ಜೋಕು ಬಿತ್ತು; ಪ್ರತಿ ಅಕ್ಷರವನ್ನೂ ಬಿಡಿಬಿಡಿಸಿ ಹೇಳುವವನಂತೆ ಮತ್ತೊಮ್ಮೆ ನಿಧಾನವಾಗಿ ಪತ್ರವನ್ನೋದಿದ.

ಮತ್ತೆ ತಲೆ ಎತ್ತಿದಾಗ ಮುಖ ವಿವರ್ಣವಾಗಿತ್ತು. ತನ್ನ ಹೊಸ ಪೆಂಡತಿಗೆ ಹೇಳಿದ: "ನನ್ನ ಆಪ್ತ ಗೆಳೆಯನೊಬ್ಬನಿಗೆ ಏನೋ ಅಪಘಾತವಾಗಿದೆ. ಕೇವಲ ಇಪ್ಪತ್ತು ನಿಮಿಷಗಳ ಅವಕಾಶ ಕೊಡು; ಕೂಡಲೆ ಹಿಂತಿರುಗುತ್ತೇನೆ!"

ಹದರಿದ ಜಾಲೆ, ಕಂಪಿತಳಾಗಿ ನುಡಿದಳು:

"ಹೋಗಿಬನ್ನಿ ಪ್ರಿಯತಮ!" ಕಾರಣವನ್ನು ಕೇಳುವಷ್ಟು ಅಧಿಕಾರ ಆಕೆಗಿನ್ನೂ ಬಂದಿಲ್ಲ. ಅವನು ಹೊರಟೇ ಹೋದ. ನೃತ್ಯಗೀತವನ್ನು ಕೇಳುತ್ತ, ಕೊಠಡಿಯಲ್ಲಿ ಒಬ್ಬಳೇ ಉಳಿದಳು. ಕೈಗೆ ನಿಲುಕಿದ ಹ್ಯಾಟು-ಕೋಟನ್ನು ಹಾಕಿಕೊಂಡ, ಸರಸರನೆ ಮೆಟ್ಟಿಲಿಳಿದ. ರಸ್ತೆಯ ದೀಪದಡಿ ಮತ್ತೆ ಕಾಗದವನ್ನು ನೋಡಿಕೊಂಡ.

"ಸ್ವಾಮಿ, ಹಿಂದೆ ತನ್ನವಳಾಗಿದ್ದ ರೇವಟ್ ಹೆಸರಿನಾಕೆ ಹೆತ್ತಿದಾಳೆ. ಮಗು ನಿನ್ನದೇ ಎಂದು ಆಕೆಯ ಹಟ ಒಡಿದ ವಾದ. ಸಾಯುವಂತಿದ್ದಾಳೆ, ನಿನ್ನನ್ನು ನೋಡಲು ಕಾತರಳಾಗಿದ್ದಾಳೆ. ಮರುಳ ಹುಟ್ಟಿಸುವಂತಿರುವ ಈ ಹೆಣ್ಣಿನ ಅಂತ್ಯಕಾಲದ ಆಶೆಯನ್ನು ಈಡೇರಿಸಬೇಕೆಂದು, ನಾನು ಸ್ವಾತಂತ್ರ್ಯವಹಿಸಿ ಬರೆದಿದ್ದೇನೆ.

ನಿನ್ನ

ಡಾ. ಬೋನಾರ್ಡ್"

ಮೃತ್ಯುಮುಖದ ಆ ಹೆಣ್ಣಿನ ಮನೆಗೆ ಅವನು ಬಂದಾಗ ಆಕೆ ತೀರ ಅಂತಿಮ ದೆಸೆಯಲ್ಲಿದ್ದಳು. ಮೊದಮೊದಲು ಆಕೆಯ ಗುರುತೇ ಹತ್ತಲಿಲ್ಲ. ವೈದ್ಯರು, ಇಬ್ಬರು ದಾದಿಯರು ಆಕೆಯ ಆರೈಕೆಯಲ್ಲಿ ನಿರತರಾಗಿದ್ದರು. ನೆಲದ ಮೇಲೆಲ್ಲ ಮಂಜು ತುಂಬಿದ್ದ ಪಾತ್ರೆಗಳು, ರಕ್ತಸಿಕ್ತ ಹತ್ತಿಯ ತುಂಡುಗಳು.

ನೆಲದ ಮೇಲೆ ನೀರು ಚೆಲ್ಲಿತ್ತು; ಮೇಜಿನ ಮೇಲೆರಡು ಮೇಣದ ಬತ್ತಿಗಳು ಉರಿಯುತ್ತಿದ್ದುವು. ಹಾಸಿಗೆಯ ಹಿಂಬದಿಯಲ್ಲಿಯ ಸಣ್ಣ ಬೆಕ್ಕದ ಕೊಟ್ಟಿಲಲ್ಲಿ ಕೂಸು ಅಳುತ್ತಿತ್ತು; ಕಂದನ ಕೂಗನ್ನು ಕೇಳಿದಾಗೆಲ್ಲಾ, ಮಂಜಿನ ಆವರಣದಲ್ಲಿದ್ದ ತಾಯಿ, ನರಳುತ್ತಲೇ ಹೊರಳಿ ನೋಡಲು ಯತ್ನಿಸುತ್ತಿದ್ದಳು.

ಆಕೆಯ ಮೈಯಿಂದ ರಕ್ತ ಸೋರುತ್ತಿತ್ತು. ಮೃತ್ಯು-ಜನನ ಆದು; ಜೀವ ಅರುತ್ತಿತ್ತು. ಮಂಜಿನ ಉಪಚಾರವು, ಇನ್ನಿಲ್ಲದಷ್ಟು ಎಚ್ಚರಿಕೆಯ ಅರಯಿಕೆ ನಡೆಯುತ್ತಿದ್ದರೂ ರಕ್ತ ಕಾರುತ್ತಲೇ ಇತ್ತು; ಸಾವಿನ ಘಳಿಗೆಯತ್ತ ನೂಕುತ್ತಿತ್ತು.

ಜಾಕೆಸ್‌ನ ಗುರುತು ಹತ್ತಿತು; ಕೈಯೆತ್ತಲು ಪ್ರಯತ್ನಿಸಿದಳು. ನಿಶ್ಯಕ್ತಿಯಿಂದ, ಹಾಗೆ ಮಾಡಲು ಸಾಧ್ಯವಾಗಲಿಲ್ಲ. ಬೆಚ್ಚನೆಯ ಕಣ್ಣೀರು ಕೆನ್ನೆಯ ಮೇಲೆ ಹರಿಯುತ್ತಿತ್ತು.

ಜ್ಯಾಕೆಸ್ ಮೊಣಕಾಲೂರಿ ಕುಳಿತು, ಹುಚ್ಚನಂತೆ ಅವಳ ಕೈಯನ್ನು ಹಿಡಿದುಕೊಂಡ. ನಿಧಾನವಾಗಿ ತನ್ನ ಸ್ಪರ್ಶದಿಂದ ಮೈ ನವಿರೇಳುತ್ತಿದ್ದ ಆಕೆಯ ಸನಿಯಕ್ಕೆ ಜರುಗಿದ. ದಾದಿಯ ಕೈಯಲ್ಲಿಯ ಮೇಣದ ಬತ್ತಿಯ ಬೆಳಕು ಅವರ ಮೇಲೆ ಹೆಲ್ಲಿತ್ತು. ಕೊಠಡಿಯ ಒಂದು ಮೂಲೆಯಲ್ಲಿ ಅವರನ್ನೇ ವೈದ್ಯ ನೋಡುತ್ತಿದ್ದ.

ಎಲ್ಲಿಂದಲೋ ತೂರಿ ಬಂದಂತಿದ್ದ ಧ್ವನಿ. ಮೇಲುಸಿರಿನಲ್ಲಿ ಅವಳು ಹೇಳಿದಳು: "ಪ್ರಿಯತಮ, ನಾನು ಸಾಯುತ್ತೇನೆ. ಕೊನೆಯವರೆಗೂ ಕೈಬಿಡುವುದಿಲ್ಲವೆಂದು ಮಾತುಕೊಡು! ನನ್ನನ್ನೀಗ ತೊರೆದಿರು; ಈ ಕೊನೆಯ ಘಳಿಗೆಯಲ್ಲಿ ದೂರವಾಗಬೇಡ!"

ಅವಳ ಕಣ್ಣು, ಜಣೆಗಳಿಗೆ ಮುತ್ತಿಡುತ್ತಲೇ ಹೇಳಿದ: "ನೀನೇನೂ ಚಿಂತಿಸಬೇಡ, ನಾನೇ ಇರುತ್ತೇನೆ."

ನಿಶ್ಯಕ್ತಿ-ಬಳಲಿಕೆಗಳಿಂದ, ಕೂಡಲೆ ಮಾತನಾಡಲಾಗಲಿಲ್ಲ. ಬಹಳ ಹೊತ್ತಾದ ಮೇಲೆ ಹೇಳಿದಳು: "ನಿನ್ನದು ಈ ಕಂದ. ದೇವರ ಸಾಕ್ಷಿಯಾಗಿ, ಆತ್ಮ ಸಾಕ್ಷಿಯಾಗಿ, ಸಾವಿನ ಸಮಯದಲ್ಲಿ ಆಣೆಯಿಟ್ಟು ಹೇಳುತ್ತೇನೆ; ನಿನ್ನನ್ನಲ್ಲದೆ ಮತ್ತಾರನ್ನೂ ನಾನು ಪ್ರೀತಿಸಲಿಲ್ಲ. ಇದನ್ನು ಕೈಬಿಡುವುದಿಲ್ಲವೆಂದು ಮಾತು ಕೊಡು..." ದೇಹಶಕ್ತಿ ಸೋರಿಹೋಗಿದ್ದ ಆ ದುರ್ಬಲ ದೇಹವನ್ನು ತನ್ನ ತೋಳಲ್ಲೆತ್ತಿಕೊಳ್ಳಲು ಮುಂದೆ ಜಾಜಿದ; ದುಃಖ ತುಂಬಿ ಬಂತು. ಧ್ವನಿ ಗದ್ಗದವಾಯಿತು. ಹೇಳಿದ: "ನಿನ್ನೆದುರು ಪ್ರಮಾಣಮಾಡುತ್ತೇನೆ. ಇವನನ್ನು ಪ್ರೀತಿಸುತ್ತೇನೆ; ಬೆಳೆಸುತ್ತೇನೆ. ನನ್ನಿಂದಿದು ಎಂದಿಗೂ ದೂರವಾಗದು!" ಆಗವಳು ಜಾಕಿಸ್‌ನನ್ನು ಅಪ್ಪಿದಳು. ತಲೆಯೆತ್ತಲು ಕಸುವು ಸಾಲದೆ, ರಕ್ತಹೀನವಾದ ಬಿಳಿಯ ತುಟಿಗಳನ್ನು ಮುಂದೆ ಮಾಡಿದಳು. ಇದೇ ಮುತ್ತಿನ ಸ್ವೀಕಾರಕ್ಕೆ ಅವನೂ ಧಾವಿಸಿದ.

ಸ್ವಲ್ಪ ಸ್ಥಿರಳಾಗಿ ಹೇಳಿದಳು: "ಎತ್ತಿಕೋ, ನೀನದನ್ನು ಪ್ರೀತಿಸುವಯೆಂಬುದನ್ನು ನಾನು ಕಣ್ಣಿಂದ ನೋಡಬೇಕು!"

ತೊಟ್ಟಿಲಿಗೆ ಹೋಗಿ, ಮಗುವನ್ನೆತ್ತಿಕೊಂಡು, ಪಾಸಿಗೆಯ ಮೇಲೆ ತಮ್ಮಿಬ್ಬರ ನಡುವೆ ಅದನ್ನು ಮಲಗಿಸಿದ. ಮಗುವಿನ ಅಳು ನಿಂತಿತು. ಮೆಲ್ಲನುಸುರಿದಳು: "ಕದಲಬೇಡ!" ನಿಶ್ಚಲನಾದ. ಕೇವಲ ಒಂದೇ ಗಂಟೆಯ ಹಿಂದೆ ಪ್ರೇಮಸ್ಪರ್ಶದಿಂದ ಕಂಪಿಸುತ್ತಿದ್ದ ಹೆಣ್ಣನ್ನು ಹಿಡಿದವ, ಅದೇ ಹಸ್ತದಲ್ಲೀಗ ಮೃತ್ಯುಸ್ಪರ್ಶನದಿಂದ ನಡುಗುತ್ತಿದ್ದ ಹೆಣ್ಣಿನ ಕೈ ಹಿಡಿದು ಕುಳಿತ. ಗಡಿಯಾರವನ್ನು ಆಗಾಗ ನೋಡುತ್ತಿದ್ದ. ಮಧ್ಯರಾತ್ರಿ ಮುಗಿದು ಬಂದಾಯ್ತು, ಎರಡಾಯ್ತು.

ನಿದ್ದೆ ಹೋಗಿದ್ದ ವೈದ್ಯ; ಕೆಲಹೊತ್ತು ಅಲ್ಲಲ್ಲೇ ಸುಳಿಯುತ್ತಿದ್ದು, ದಾದಿಯರಿಬ್ಬರೂ ಕುರ್ಚಿಗಳಲ್ಲೇ ನಿದ್ದೆ ಹೋದರು. ಮಗುವೂ ನಿದ್ದೆ ಹೋಗಿತ್ತು; ರೆಪ್ಪೆ ಮುಚ್ಚಿ ಮಲಗಿದ್ದ ತಾಯಿಯೂ ವಿಶ್ರಾಂತಿಯಲ್ಲಿದ್ದವಳಂತೆ ಕಾಣುತ್ತಿದ್ದಳು.

ಹಂದಿದ್ದ ಪಂಚೆಯಿಂದ ಮುಂಜಾವದ ಬೆಳಕು ಸೂಸಿ ಬರುತ್ತಿತ್ತು. ಬೆದರಿ ಬೀಸಿತು ಆಕೆಯ ಕೈ. ಕೈಯೆತ್ತಿದರಭಸಕ್ಕೆ ಮಗು ನೆಲದ ಮೇಲೆ ಉರುಳುವಂತಾಗಿತ್ತು. ಗಂಟಲಲ್ಲಿ ಗೊರಗೊರ ಶಬ್ದವಾಯ್ತು; ಆ ಮೇಲೆ, ನಿಶ್ಚಲಳಾದಳು, ಪ್ರಾಣರಹಿತಳಾದಳು.

ಅವಳ ಪಕ್ಕಕ್ಕೆ ಓಡಿ ಬಂದ ದಾದಿ ಕೂಗಿದಳು: "ಸತ್ತು ಹೋದಳು."

ತನ್ನ ಪ್ರಣಯದ ಸ್ತ್ರೀಯನ್ನೊಮ್ಮೆ ನೋಡಿದ; ನಾಲ್ಕರ ಅಂಕೆಯನ್ನು ಕೋರುತ್ತಿದ್ದ ಗಡಿಯಾರದ ಮುಳ್ಳನ್ನೊಮ್ಮೆ ನೋಡಿದ. ಮಗುವನ್ನೆತ್ತಿಕೊಂಡು ಇದ್ದ ಬಟ್ಟೆಯಲ್ಲೇ ಓಡಿದ.

ಅವನ ವಧು ಶಾಂತಮನಸ್ಸಿನಿಂದ ಅವನ ಬರವನ್ನೇ ಕಾಯುತ್ತಿದ್ದಳು. ಬೇಗನೆ ಹಿಂತಿರುಗದಿರಲು, ಒಳಗೆ ಹೋದಳು. ಹೊರಹೊರಗೆ ಏನೆನೂ ಆಗದವಳಂತೆ ಕಂಡು ಬಂದರೂ, ಮನಸ್ಸು ಮಾತ್ರ ಹೆದರಿ ಗೊಂದಲದಲ್ಲಿ ಬಿದ್ದಿತ್ತು. ಒಬ್ಬಳೇ ಇದ್ದ ಮಗಳು, ತಾಯಿ ಪತಿರಾಯನೆಲ್ಲೆಂದು ಕೇಳಲು "ರೂಮಿನಲ್ಲಿದ್ದಾನೆ, ಈಗ ಬಂದಾನು!" ಎಂದು ಉತ್ತರವಿತ್ತಳು.

ಸುಮಾರು ಘಂಟೆಕಾಲ ಹೋಯಿತು. ಪ್ರತಿಯೊಬ್ಬರೂ ಅವನ ವಿಚಾರವನ್ನೇ ಕೇಳುವವರಾದರು. ಆಗ, ಪತ್ರ ಬಂದದ್ದು, ಅದನ್ನೋದುವಾಗ ಅವನ ಮುಖದಲ್ಲಾದ ಬದಲಾವಣೆ, ಎನೋ ಆಪತ್ತೊದಗಿರಬಹುದೆಂಬ ತನ್ನ ಎಣಿಕೆ—ಎಲ್ಲಾ ಹೇಳಿದಳು.

ಅವರೂ ಎದುರು ನೋಡುತ್ತ ನಿಂತರು. ಅತಿಥಿಗಳೆಲ್ಲಾ ತಿರಳಿದರು. ತಾಯಿ, ತಂದೆ, ತೀರ ಸನಿಯದ ಆಪ್ತೇಷ್ಟರು ಮಾತ್ರ ಉಳಿದರು. ನಡುರಾತ್ರಿ ಸರಿಯಿತು, ದುಗುಡದಿಂದ ನಡುಗುತ್ತಿದ್ದ ವಧುವನ್ನು ಒಳಕೋಣೆಗೊಯ್ದರು; ಅವಳ ರೋದನ ಕೇಳುತ್ತಲೇ ಕುಳಿತರು ತಾಯಿ, ಚಿಕ್ಕಮ್ಮ. ಐದು ಘಂಟೆಯ ಹೊತ್ತಿಗೆ ವರಾಂಡದಿಂದ ಏನೋ ಸಪ್ಪಳ ಕೇಳಿಸಿತು. ಮೆಲ್ಲನೆ ಕದ ಸರಿದು ಮತ್ತೆ ಮುಚ್ಚಿತು. ಬೆಕ್ಕು ಕೂಗಿದಂತೆ ಒಂದು ಶಬ್ದ ಮನೆಯ ನೀರವತೆಯನ್ನು ಭೇದಿಸಿತು.

ಒಂದೇ ಹಾರಿಕೆಗೆ ನಿಂತರು ಅವರು. ಶಯನವಸ್ತ್ರದ ವಧು, ತಾಯಿ, ಚಿಕ್ಕಮ್ಮ ಅಲ್ಲೇ ಇದ್ದರು. ಪತ್ನಿ ಪತಿಯ ಬಳಿಗೆ ಹಾರಿ ಹೋದಳು.

ಮುಖ ಕೆಂಪೇರಿ, ತೋಳಲ್ಲಿ ಮಗುವನ್ನು ಹಿಡಿದು, ಮೇಲುಸಿರಿಡುತ್ತಾ ರೂಮಿನ ಮಧ್ಯದಲ್ಲಿ ಜಾಕಿಸ್ ನಿಂತಿದ್ದನು.

ಪೌಹಾರಿದ್ದ ನಾಲ್ವರು ಹೆಂಗುಸರು ಅವನನ್ನೇ ನೋಡುತ್ತ ನಿಂತರು. ಧೈರ್ಯ ತಂದುಕೊಂಡು ಬೆರ್ಥೆ ಕೇಳಿದಳು: "ಏನದು? ನನಗೆ ಹೇಳಿ! ಇದೇನು?"

ಪ್ರಜ್ಞೆಯಿಲ್ಲದವನಂತೆ, ಗದ್ಗದ ಕಂಠದಲ್ಲಿ ಹೇಳಿದ:

"ಇದು .... ಇದು .... ನನ್ನ ಮಗು. ಈಗ ತಾನೆ ತಾಯಿ ತೀರಿಕೊಂಡಳು!" ಅರಚುತ್ತಿದ್ದ ಪುಟ್ಟ ಕಂದನನ್ನು ಅವಳ ಕೈಯಲ್ಲಿಟ್ಟನು.

ಮರುಮಾತಿಲ್ಲದೆ, ತೋಳನ್ನು ನೀಡಿ, ಮಗುವನ್ನು ಎದೆಗಪ್ಪಿಕೊಂಡಳು ಬೆರ್ಥೆ. ಕಂಬನಿದುಂಬಿದ ಕಣ್ಣುಗಳಿಂದ ಗಂಡನನ್ನು ನೋಡಿ ಕೇಳಿದಳು: "ತಾಯಿ ತೀರಿಕೊಂಡಳೆಂದು ಹೇಳಿದಿರಾ?" ಅವನು ಉಚ್ಚರಿಸಿದ: "ಹೌದು— ಈಗ ತಾನೆ .... ನನ್ನ ತೋಳಲ್ಲೆ .... ನನಗೇನೂ ತಿಳಿದಿರಲಿಲ್ಲ .... ವೈದ್ಯರು ಕರೆಕಳಿಸಿದರು .... ಮತ್ತೆ ...."

ಬೆರ್ಥೆ ಹೇಳಿದಳು:

"ಸರಿ, ಈ ಸಣ್ಣ ಜೀವವನ್ನು ನಾವೇ ಸಾಕೋಣ!"

---

*ಪ್ರಖ್ಯಾತ ಫ್ರೆಂಚ್ ಕತೆಗಾರ ಗಾಯ್—ದ ಮಾಪಾಸಾ ಅವರ 'ದಿ ಚೈಲ್ಡ್' ಎಂಬ ಕತೆಯ ಅನುವಾದವಿದು. —ಲೇ.

ಶಾಂತಿನಿಕೇತನದ ಯಾತ್ರೆ

ಶ್ರೀ. ಕೆ. ಎನ್. ರಾವ್, ಸಿರಸಿ.

(ಪ್ರವಾಸಪ್ರಬಂಧದ ಪೂರ್ವಾರ್ಧ)

★

ಶಾಂತಿನಿಕೇತನದ ಯಾತ್ರೆಗೆ ಹೊರಟಾಗ, ಬಿಹಾರವನ್ನು ಬಿಟ್ಟು ಬಂಗಾಲಕ್ಕೆ ಹೊರಟ ಮುಸ್ಲಿಂ ಗೂಳಿಕಾರರೂ ನೋಡಲು ದೊರೆತರು. ಎಂತಹ ಕರುಣಾಜನಕ ಪರಿಸ್ಥಿತಿ ಅವರದು? ಶಾಂತಿನಿಕೇತನವು ವಿಶ್ವಬಾಂಧವ್ಯದ ಲೀಲಾರಂಗ. ಮಾನವತೆಯ ವಿಕಾಸಕ್ಕೆಂದೇ ಹೊರಟ ವಿಶ್ವವಿದ್ಯಾಕ್ಷೇತ್ರ.

★

ಪ್ರಯಾಣ ಪ್ರಾರಂಭ

ಶಾಂತಿನಿಕೇತನವು ಯಾವುದೊಂದು ಪ್ರಸಿದ್ಧ ಧಾರ್ಮಿಕ ದೇವಸ್ಥಾನವಾಗಿರದಿದ್ದರೂ, ಇಂದು ಜಗತ್ತಿನ ಯಾತ್ರಾಸ್ಥಾನವಾಗಿರುವುದು. ಅದು ಗುರುದೇವ ರವೀಂದ್ರರ ತಪಸ್ಸಿನ ಫಲ. ಅದೊಂದು ಆರ್ಯತ್ವದ ಪುನರಾಗಮನ ಕ್ಷೇತ್ರವೆಂದರೂ ಸರಿ. ಶಾಂತಿನಿಕೇತನಕ್ಕೆ ಯಾರು ಹೋದರೂ, ತಿರುಗಿ ಬಂದಮೇಲೆ "ಏನು ನೋಡಿದೆ?" ಎಂದರೆ "ಏನೂ ಇಲ್ಲ" ಎಂಬ ಮಾತನ್ನು ಸ್ವಾಭಾವಿಕವಾಗಿ ಹೇಳುತ್ತಾರೆ; ಆದರೆ ಅಲ್ಲಿ ನೋಡಿದುದನ್ನು ಹೊರಗೆ ಹೇಳುವ ಯೋಗ್ಯತೆ ನಮ್ಮಲ್ಲಿರುವುದಿಲ್ಲ. ಏಕೆಂದರೆ ನಾವಿರುವ ಸಮಾಜಜೀವನಕ್ಕೂ ಅಲ್ಲಿಯ ನಡೆ-ನಡಾವಳಿಗೂ ತುಂಬ ತಾರತಮ್ಯ ಉಂಟು. ನಮ್ಮ ಮಿತ್ರಮಂಡಲಿಯವರು ಹಲವು ಸಾರೆ ಹೋಗಿ ಬಂದರು; ಆಗ ನನಗೂ ಒತ್ತಾಯ ಮಾಡಿದರು; ನನಗೆ ಅದೊಂದು "ಏನು ಮಹಾ" ಎನಿಸಿ ಹೋಗಿರಲಿಲ್ಲ.

ತಾ. ೨೫-೩೬ನೆಯ ದಶಂಬರು ರಜಾದಿನಗಳಾದುದರಿಂದ, ಎಲ್ಲಿಗಾದರೂ ಹೋಗಬೇಕೆಂಬ ಹಂಬಲವಿತ್ತು. ಎಲ್ಲಿಗೆಂಬ ನಿರ್ಧಾರವಿರಲಿಲ್ಲ. ಮೇಲಾಗಿ ಸಂಗಡಿಗರಲ್ಲಿ ಎಲ್ಲರೂ ಬನಾರಸಕ್ಕೆ ಹೋಗಿದ್ದರು. ಮೈಸೂರಿನ ಪುಟ್ಟುಸ್ವಾಮಿ ದಕ್ಷಿಣೇಶ್ವರಕ್ಕೆ ಹೋಗಿದ್ದ. ಕೊನೆಗೆ ಬನಾರಸಿನ ಒಬ್ಬ ಪರಿಚಿತ ಮನುಷ್ಯ ಗಂಗಾ ಎಂಬವನೊಡನೆ, ಬೇಲೂರ (Belur) ಮಠಕ್ಕೆ ಹೋಗುವ ಏರ್ಪಾಡು ಮಾಡಿದೆವು. ರೈಲುನಿಲ್ದಾಣಕ್ಕೆ ಹೋದೆವು. ಹೊತ್ತಿಗೆ ಸರಿಯಾಗಿ ಬರುವ ರೈಲು ೬ ಗಂಟೆ ತಡವಾಗಿ ಬರಲಿದ್ದುದರಿಂದ, ಬೇಲೂರನ್ನು ಬಿಟ್ಟು ಶಾಂತಿನಿಕೇತನಕ್ಕೆ ಹೊರಟೆವು. ಥರ್ಡ್‌ಕ್ಲಾಸು ಟಿಕೆಟ್ಟು ಕೊಂಡನಂತರ ಸೀದಾ ಕ್ಲಾಸಿಗೆ ಹೋಗಲಿಕ್ಕೆ ಸಾಧ್ಯವೇ? ಅಂತೂ ನಾವು ನಿಂತಲ್ಲಿಗೆ ಸರಿಯಾಗಿ 'ಥರ್ಡ್‌ಕ್ಲಾಸ್' ಎಂಬ ಬೋರ್ಡು ಹಾಕಿದ ಸಾಗಿಲು ಬಂದು ನಿಂತಿತು. ಒಳಗೆ ಹೋಗಲಿಕ್ಕೆ ಎಡೆ ಇರಲಿಲ್ಲ; ಹೊರಗೆ ಬರುವವರಿಗೂ ಅಸ್ಪದವಿಲ್ಲ. ಆಗ ಶ್ರೀ. ಶ್ರೀರಂಗರ ಬರೆಹದ ನೆನಪಾಗಿ, ಎಂಟಾಣೆ ಪಾವಲಿಯನ್ನು ಕಿಸೆಯಲ್ಲಿ ಹಾಕಿಕೊಂಡೆ. ಎಷ್ಟು ಇಕ್ಕಟ್ಟಿನಲ್ಲಿ ತುರುಕಿ ನುಗ್ಗಿದರೂ ಅದು ರೂಪಾಯಿ ಆಗಲೇ ಇಲ್ಲ. ಶ್ರೀರಂಗರ ನಾಲ್ಕಾಣೆಯ ಪಾವಲಿ ರೂಪಾಯಿ ಆಗಿತ್ತಂತೆ; ಅದು ಹೇಗೋ! ಅಂತೂ ಒಳಕ್ಕೆ ನುಗ್ಗಿದರೆ, ನಿಲ್ಲಲಿಕ್ಕೆ ಸ್ಥಳವಿಲ್ಲದಲ್ಲಿ ಕುಳಿತುಕೊಳ್ಳುವುದು ಹೇಗೆ? ಮೇಲಾಗಿ ಬೆಳಿಯ ಟೋಪಿಗೆ ಅಲ್ಲಿ ಬೆಲೆಯೇ ಇರಲಿಲ್ಲ. ಏಕೆಂದರೆ ಬಿಹಾರದಿಂದ ಬಂಗಾಲಕ್ಕೆ ವರ್ಗಾಯಿಸಲ್ಪಡುವ ಮುಸಲ್ಮಾನರೆಲ್ಲರೂ, ತಮ್ಮ ಮಕ್ಕಳು-ಮರಿಗಳೊಂದಿಗೆ ಅದರಲ್ಲೆ ಕಿಕ್ಕಿರಿದಿದ್ದರು.

ಕಲ್ಕತ್ತಾದಂತಹ ಒಂದು ನಗರದಲ್ಲಿ ಹೋಗಿ ಇವರೆಲ್ಲ ಏನು ಮಾಡಬೇಕೆಂಬ ಶಂಕೆ ಮನಸ್ಸಿನಲ್ಲಿ ಮೂಡುವಾಗಲೆ, ಪಾಟಣಾದ ಒಬ್ಬ "ಶರ್ಮಾ" ಎಂಬವರು "ಇದು ಬಂಗಾಲ ಸರಕಾರದವರು ಇವರಿಗೆ ಒದಗಿಸಿಕೊಟ್ಟ ಅನುಕೂಲತೆ" ಎನ್ನುತ್ತ, ಅವರೆಲ್ಲ ತಮ್ಮ ಊರವರೆಂದೂ "ಲೀಗಿನ" ಉಪದೇಶದಿಂದ ಊರು ಬಿಡುತ್ತಾರೆಂದೂ ಮುಂತಾಗಿ ತಿಳಿಸಿದರು.

ತಕ್ಷಣ ನಾನು ಆ ಜನರೊಂದಿಗೆ 'ಪಾಟ್ನಾದಲ್ಲಿ ಏನು ಕೊರತೆ ಇದೆ? ಏಕೆ ಊರು ಬಿಡುತ್ತೀರಿ?' ಎಂದು ಕೇಳಿದೆ. ಅದಕ್ಕೇನೂ ಅವರು ಸಮಂಜಸ ಉತ್ತರ ಕೊಡಲಿಲ್ಲ. ಆದರೆ ಅವರಲ್ಲಿಯ ಅವರ ಮುಂದಾಳೊಬ್ಬ— "ನೋಡಿ ಸ್ವಾಮಿ! ಹಿಂದುಗಳು ನಮ್ಮನ್ನು ಕೊಲ್ಲುತ್ತಾರೆ; ಅವರೇ ಅಲ್ಲಿ ಹೆಚ್ಚು; ಹೆದರಿ ನಾವು ಊರು ಬಿಡುತ್ತೇವೆ!" ಎಂದ. ಆಗ ನಾನು ಅವನಿಗೆ ನವಾಕಾಲಿ, ತಿಪ್ಪೇರಾಗಳ ವಿಷಯ ಕೇಳಿದೆ. ಆದೊಂದೂ ಅವನಿಗೆ ತಿಳಿದಂತೆನಿಸಲಿಲ್ಲ. ಕೊನೆಗೆ ನನ್ನ ದೃಷ್ಟಿ "Do not discuss Political affairs" ಎಂದಿದ್ದ ಬೋರ್ಡಿನ ಕಡೆಗೆ ಬಿತ್ತು. ಸುಮ್ಮನಾದೆ. ಆದರೆ ಯಾರೊಬ್ಬರಲ್ಲಿಯೂ ತಾವು ಏಕೆ ಊರು ಬಿಡುತ್ತೇವೆಂಬುದರ ಬಗೆಗೆ ನಿರ್ಧಾರವಿರಲಿಲ್ಲ. 'ಮುಂದೇನು?' ಎಂಬ ಪ್ರಶ್ನೆಯು ಎಲ್ಲರಲ್ಲಿಯೂ ಒಡೆದು ಮೂಡಿತ್ತು. ಹುಡುಗರು ಮಾತ್ರ

ಹಸಿವೆಯಾದಾಗ ಬೇರುಸ್ವಿನ್ನುವು. ತಾಯಂದಿರು ಕಟ್ಟಿತಂದ ಬುತ್ತಿಯಲ್ಲಿದ್ದುದನ್ನು ಕೊಡುಸ್ವಿನ್ನರು. ಯಾವುದೊಂದೂ ಚಿಂತೆಯಿಲ್ಲದೆ, ರೈಲು ಬರವ್ವಾನೆಳೆ ಬಂತು.

ಬಿಹಾರನವರೆಲ್ಲರೂ ಒಬ್ಬರ ಜಮ್ಮೆ ಮೇಲೆಗೆ ಕೆಳಗಿಳಿದರು. "ಗಂಗಾ" ಕೇಳಿದ "ಜನ್ಮ ಏನು ಕತೆ?" ಎಂದು. ಗಂಗಾ ಹೆಬ್ಬೆಟ್ಟಿನ Graduate ಅನುಭವದಿಂದ, ತುಟುಕಿನಲ್ಲಿ ಎಲ್ಲವನ್ನೂ ತಿಳಿಸಿದ. ಅವನೂ ತಿಳಿದುಕೊಂಡು "ಇದು ತಪ್ಪಲ್ಲವೆ?" ಎಂದ. "ಹೌದು! ಮಾಡುವ್ವೇನು?" ಎಂದೆ. ನಾವು ಬೋಲ್‌ಪುರಕ್ಕೆ ಗಾಡಿ ಬದಲಾಯಿಸಬೇಕಾದುದರಿಂದ ಇಳಿದೆವು. ಎದುರಿನಲ್ಲಿ ಹಿಂದೂ ಮುಸಾಸಭೆಯವರ ಧ್ವಜ ಹಿಡಿದು ಕೆಲವರು ಊರ ಜನರು, ಯಾರನ್ನೋ ಸ್ವಾಗತಿಸುತ್ತಿದ್ದರು! ನಮ್ಮ ಗಾಡಿಗೂ ತಡವಿದ್ದುದರಿಂದ, ನಾವೂ ಆ ಪಂಗಡ ಸೇರಿದೆವು. ಡಾ. ಮುಂಜೆ ಯವರು ಗೋರಖಪುರಕ್ಕೆ ಹೋಗಲು ಬರುವರೆಂದು ತಿಳಿದು, ನಿಂತೆವು. ದೂರದಿಂದಲೆ ಗಾಡಿಯ ಒಂದು ಡಬ್ಬಿಗೆ ಏರಿಸಿದ ಹಿಂದೂ ಮಹಾಸಭೆಯ ಧ್ವಜವು ಕಾಣಬಂತು. ಎಲ್ಲರೂ "ವಂದೇ ಮಾತರಂ" ಘೋಷಿಸಿದರು. "ಹಿಂದೂ ಹಿತಾಯ, ಹಿಂದೂ ಸುಖಾಯ ಹಿಂದೂಸ್ಥಾನ" ಘೋಷಣೆಗಳಾದುವು. ಬರದ್‌ವಾನ್ ಮಹಾರಾಜರಿಗೆ ಸಂಬಂಧಿಸಿದ ಯಾರೋ ಒಬ್ಬ ಪ್ರತಿನಿಧಿಗಳು ರೈಲನ್ನು ಸೇರಿದರು. ಶ್ರೀ. ಮುಂಜೆಯವರು ಅಲ್ಲಿ ನೆರೆದ ಮಂದಿಗೆಲ್ಲ ಧನ್ಯವಾದಗಳನ್ನಿತ್ತು ಬೀಳಸೇರಿದರು. ರೈಲು ಹೊರಟಿತು.

ಒಂದು ತಮಾಷೆ ಎಂದರೆ, ಗಿನೆಯ ನಂಬರಿನ ಪ್ಲ್ಯಾಟ್‌ಫಾರ್ಮಿನಲ್ಲಿ ಅಖಿಲ ಭಾರತ ಹಿಂದೂ ಸಮಾಜ ಸಂಘಟನೆಯ ಹುರುಪಿನ ತರುಣರೂ ರಾಷ್ಟ್ರೀಯತೆಯೂ ಒಂದು ಕಡೆ. ಎದುರಿನ ತೆನೆಯ ಪ್ಲ್ಯಾಟ್‌ಫಾರಮಿನಲ್ಲಿ ಲೀಗಿನವರ ದುರ್ಯೋಧನೆಯಿಂದ ಮನೆ-ಮಾರುಗಳನ್ನು ಬಿಟ್ಟು ದಿಕ್ಕುಗಾಣದೆ ಕಂಗೆಟ್ಟ ಬಿಹಾರಿ ಮುಸಲ್ಮಾನ್ ಬಂಧುಗಳು ಬಂದು ಕಡೆ. ರೈಲಿನಿಂದ ಬಿಹಾರಿಗಳು ಸ್ಟೇಶನ್ನಿನಿಂದ ಇಳಿದೊಡನೆ, ಕೈಗೆ ಹಸುರು ಬಟ್ಟೆಯಲ್ಲಿ ಬಿಳಿಯ ಚಂದ್ರನ ಸಂಕೇತದ ವಾಲಂಟಿಯರರು (ಸ್ವಯಂ ಸೇವಕರಲ್ಲ) ಅವರ ಊರು, ಹೆಸರು ಮತ್ತು ಜನರ ಸಂಖ್ಯೆಗಳನ್ನು ಆಸ್ಥೆಯಿಂದ ಬರೆದುಕೊಳ್ಳುತ್ತಿದ್ದರು. ಇದರೆ ಅವರ ಊಟ, ಉಡುಗೆ, ಇರುವಿಕೆ ಮುಂತಾದುದನ್ನು ಯಾರೂ ಕೇಳುತ್ತಿರಲಿಲ್ಲ. ಒಂದು ಕಡೆ ೮ ಜನರಿಗೆ ಟಿಕೆಟ್ಟು ಮಾಡಿಸಿ ೧೨ ಜನರು ಬಂದಿರುವರೆಂದು T. T. C. ಗಳು ಓಡಾಡುತ್ತಿದ್ದರು.

ಒತ್ತಾಯದ ಬಲುಮೆಯಿಂದ ಊರು-ಮನೆಗಳನ್ನು ಬಿಟ್ಟರೆ, ಹಸಿವೆ ಎಷ್ಟುದಿನ ತಡೆಯಲು ಸಾಧ್ಯ! ಕಟ್ಟಿತಂದ ಬುತ್ತಿ ಎಷ್ಟು ದಿನ ಉಣ್ಣಬಹುದು? ಸಾಲದಿದ್ದರೆ ಬಂದೊಡನೆ ಲೀಗಿನವರು ಮನೆ ಕಟ್ಟಿದ್ದಾರೆಯೆ? ಏನೂ ಇಲ್ಲ. ನಾವು ಕೆಲವು ಮಿಠಾಯಿ ತೆಗೆದುಕೊಂಡು ತಿನ್ನುತ್ತ ಕುಳಿತಾಗ, ಮುಸ್ಲಿಂ ಲೀಗಾಶ್ರಿತ ಕುಟುಂಬಗಳ ಕೆಲವು ಮಕ್ಕಳು ತಿಂಡಿಯನ್ನು ಬೇಡಿದರು ನಾವು ಕೊಂಡದ್ದನ್ನೆಲ್ಲ ಅವರಿಗೆ ಕೊಟ್ಟು ಬೀರೆ ತರಿಸಿಕೊಂಡೆವು. ಅಷ್ಟರಲ್ಲಿ ನಮ್ಮ ಗಂಗಾ ಆ ಹುಡುಗರ ಅಕ್ಕ, ತಂಗಿ, ತಾಯಂದಿರೊಡನೆ, ತನ್ನ ಜಳ್ಳಿ ಮಾತಿನಿಂದ ಅವರ ಇತಿಹಾಸ ಕೇಳಲಾರಂಭಿಸಿದ. ನನಗೆ ಹಿಂದಿ ಬರುತ್ತಾದರೂ "ದೇಹಾತಿ" (ಹಳ್ಳಿಹಿಂದಿ) ಬರುವುದಿಲ್ಲ. ಅವನ ಸಂಭಾಷಣೆಯಿಂದ ಸಾಕಷ್ಟು ಸತ್ಯಗಳು ತಿಳಿದು ಬಂದುವು:

ಒಬ್ಬಳು ತಾಯಿ, ನಾಲ್ವರು ಮಕ್ಕಳು, ತಂದೆಇಲ್ಲ. ಊರು ಪಾಟ್ನಾ. ಹಿರಿಯ ಹುಡುಗನಿಗೆ ೧೪ ವಯಸ್ಸು. ಲೀಗ ವಾಲಂಟಿಯರೊಡನೆ ಮುಂದಿನ ಸ್ಥಿತಿ ಏನೆಂದು ವಿಚಾರಿಸಹೋಗಿದ್ದಾನೆ. ಮನೆ ಬಿಟ್ಟು ೫ ದಿನಗಳಾದುವು. ಒಂದು ದಿನ ಪಾಟ್ನಾ ಸ್ಟೇಶನ್. ಒಂದು ದಿನ ರೈಲಿನಲ್ಲಿ. ಮೂರು ದಿನ ಬರದ್ವಾನ ಸ್ಟೇಶನಿನಲ್ಲಿ. ತಾಯಿಯು ನೀರೇ ಆಹಾರವೆಂದು ತಿಳಿದು ಒಂದುವರೆ ದಿನ ವಾಗಿತ್ತು. ಹಿರಿಯ ಹುಡುಗನಿಗೆ ವಾಲಂಟಿಯರ್ "ಚಾ" ಕೊಡುತ್ತಾರೆ. ಸಣ್ಣ ಹುಡುಗರ ಬುತ್ತಿ ಮುಂಜಾನೆ ಮುಗಿದಿತ್ತು. ಸಂಜೆಯ ಹಸಿವನ್ನು ನಮ್ಮ ಮಿಠಾಯಿ ತಣಿಸಿತ್ತು. ಮುಂದೆ? ಜಿನ್ನಾರೇ ಗತಿ!

* * *

ಒಬ್ಬ ಅಣ್ಣ, ವಯಸ್ಸು ೭ಳ. ಮುದುಕ ತಂದೆ ಹುಡುಗರೊಂದಿಗೆ ಇದ್ದಾನೆ. ಇಬ್ಬರು ತಮ್ಮಂದಿರು. ತಾಯಿಯಿಲ್ಲ. ಊರಿನಲ್ಲಿ ಸುಗ್ಗಿಯ ಕಾಳು ಬರುವ ಹೊತ್ತು. ಮನೆಯ ದನ-ಕರುಗಳನ್ನು ಲೀಗ್ ಮುಂದಾಳುಗಳು ವಶ ಮಾಡಿಕೊಂಡಿದ್ದಾರೆ. ಇಲ್ಲಿ ಇರಲು ಠಾವಿಲ್ಲ. ಒಂದೆರಡು ದಿನಗಳಲ್ಲಿ ವ್ಯವಸ್ಥೆಯಾದರೆ ಒಳ್ಳೆಯದು; ಇಲ್ಲವಾದರೆ ವಾಪಸ್ ಮೊಂಗ್ಹೀರಿಗೆ ಹೋಗುವುದು—ಎಂದರು. ಹೀಗೆ ೬ ಪ್ಲಾಟ್‌ಫಾರಂಗಳಲ್ಲಿ ೬೦೦ ಕತೆಗಳನ್ನು ಕೂಡಿಸುವಂತಿತ್ತು ದೃಶ್ಯ.

* * *

ಬೋಲ್‌ಪುರ ಗಾಡಿ ಬಂತು ನಾವೂ ಹೊರಟೆವು. ಗಂಗಾನ ದೃಷ್ಟಿ ಪರಿಜಯದ ಕಡೆಗೆ ಹಿಡಿತು. ನೋಡಿದ. ತನ್ನೂರ ನೆರೆಯವರೆಲ್ಲ ಅಲ್ಲಲ್ಲಿ ಮರದ ಕೆಳಗೋ, ಬಯಲಿನಲ್ಲೋ, ಸಿಕ್ಕಿದ್ದನ್ನು ಜೇಯಿಸುತ್ತ ಹಾಳು ಜೀವನವನ್ನು ಅಪ್ಪಿಕೊಂಡ ಅವರ ಸ್ಥಿತಿ-ಗತಿಗಾಗಿ ಕಣ್ಣೊರಸಿ ಕೊಂಡನು. "ದ್ವೇಷಾಹೈ ಜಾಹೈ ಸಾಥ್" ಎಂದು ಎಂದು ನಿಟ್ಟುಸಿರುಗರೆದ. ಅವನ ಅಭಿಪ್ರಾಯವೆಂದರೆ "ಇದ್ದಲ್ಲಿಯೇ ಇದ್ದು ಇದುವರೆಗೆ ನಡೆದು ಬಂದ ರೀತಿಯಲ್ಲೇ ಮುಂದೆಯೂ ಏಕೆ ಇರಜಾರದು? ನಿತ್ಯೋಪವಾಸಿ ಬಂಗಾಲದಲ್ಲಿ ಇವರಿಗೆ ಯಾರು ಕೂಳು ಹಾಕುವವರು? ನಮ್ಮೂರಲ್ಲಿ ತುರುಕರಿಲ್ಲವೇ, ನಾವು ಹೊಡೆಯುತ್ತೇವೆಯೆ? ಹುಜ್ಜು ಇವರಿಗೆ. ಈ ದೇಶಕ್ಕೆ ಇವರು ಬಂದರೆ, ಇವರಿಗೆ ಬಂಗಾಲಿ ಭಾಷೆ ಬರುತ್ತದೆಯೆ? ನಮ್ಮ ಮತ್ತು ಬಂಗಾಲಿಗಳ ರೀತಿ-ನೀತಿ-ನಡತೆಗಳಲ್ಲಿ ಭೇದವಿಲ್ಲವೆ? ಅದನ್ನು ಕಲಿಯಬೇಕಾದರೆ ಎಷ್ಟು ಕಷ್ಟವಿದೆ?" ಎಂದು ಕಳವಳಿಸಿದ. ಆದರೆ ಅವನ ಕಳವಳ ಲೀಗಿನವರ ಪಾಕಿಸ್ಥಾನಕ್ಕೆ ಎಂದೆಂದೂ ಅರ್ಥವಾಗಲಿಕ್ಕಿಲ್ಲ.

ಇನ್ನೂ ಒಂದು ವಿಷಯವೆಂದರೆ: ಬಂಗಾಲದ ಪೋಲೀಸರು ವಿಶೇಷವಾಗಿ ತಮ್ಮ ಸೇವೆಯವರೆಂದೂ, ತಮ್ಮ ಸೇವೆಯು ಸಶಕ್ತ ಆಳುತನದ್ದೆಂದೂ, ಬಂಗಾಲಿಗಳು ಕೃಶರೆಂದೂ, ಅದಕ್ಕೆ ಬರಿಯ ಅಕ್ಕಿ ಆಹಾರವೇ ಕಾರಣವೆಂದೂ, ತಮ್ಮ ಗೋದಿಯು ಶಕ್ತಿ ಕೊಡುವ ವಸ್ತುವೆಂದೂ ಎಲ್ಲ ವರ್ಣನೆ ಮಾಡುತ್ತಿರುವಾಗ, ರೈಲು ಖಾನಾ ಜಂಕ್ಷನ್ ಸವಿಾಪಿಸಿತು. ಅಷ್ಟರಲ್ಲಿ ಗಾಡಿಯಲ್ಲಿದ್ದ ೬-೮ ಜನ ಬಂಗಾಲಿಗಳು "ಪೋಶುಪತೇ" "ಪೋಶುಪತೇ" ಎಂದು ಒಂದೇಸವನೆ ಕೂಗಲಾರಂಭಿಸಿದರು. ಅದೇನು ಯಾತ್ರಾಸ್ಥಳವೇ—ದೇವರ ಹೆಸರು ಕೂಗುತ್ತಿರುವರೇ—ಒಂದೂ ತಿಳಿಯದಾಯ್ತು. ಕೊನೆಗೆ ೮ ಕೂಗು, ರೈಲುನಿಲ್ದಾಣದಲ್ಲಿ ಸಾಮಾನು ಒಯ್ಯುವುದಕ್ಕೆ ಕಾದು ನಿಂತ ನಾಕರನಿಗಾಗೆಂದು ಆ ಮೇಲೆ ತಿಳಿದು ಬಂತು. "ಬಂಗಾಲಿಗಳು ಮಾತಿನಲ್ಲಿ ಬಲು ಮುಂದೆ, ಕೆಲಸದಲ್ಲಿ ಹಿಂದೆ!" ಎಂತಂದ ಗಂಗಾ.

ಬೋಲ್‌ಪುರ್ ಸ್ಟೇಶನ್ನಿನಲ್ಲಿಳಿದು ಶಾಂತಿನಿಕೇತನದ ವ್ಯವಸ್ಥೆ ಕೇಳಿದೆವು. ಒಬ್ಬ ಸದ್ಗೃಹಸ್ಥರು ಧರ್ಮಾರ್ಥ ಸರ್ವೀಸಿನ ವಿಷಯ ಹೇಳಿದರು. ಪ್ಲಾಟ್‌ಫಾರ್ಮಿನಿಂದ ಹೊರಗೆ ಬಂದು ನೋಡಿದೆವು: "ವಿಶ್ವಭಾರತಿ" ಎಂದು ಬೋರ್ಡು ಹಾಕಿದ ಮೋಟರು ನಿಂತಿತ್ತು. ಡ್ರೈವರನನ್ನು ಕೇಳಿ ಒಳಸೇರಿದೆವು. ಮೋಟರು ಸಾಗಿ, ಶಾಂತಿನಿಕೇತನದ 'ಅತಿಥಿಶಾಲೆ'ಯ ಮುಂದೆ ನಿಂತಿತು. ಕೆಳಗಿಳಿಯುತ್ತಲೆ "ತಲಾ ಎಂಟಾಣೆ ಸ್ವಾಮಿಾ" ಎಂದ ಡ್ರೈವರು. 'Free Service' ಎಂದರೆ ಅವರ ಭಾಷೆಯಿಂದ ಎಂಟಾಣೆಯಿರಬಹುದೆಂದು, ಕೊಟ್ಟೆವು.

ತಾ. ೫೫-೩೭-೧೨-೪೭ ಎಂದರೆ ಶಾಂತಿನಿಕೇತನದಲ್ಲಿ ಹಬ್ಬವೇ ಸರಿ. ಸಾವಿರಾರು ಜನರು ಬಂದಿದ್ದರು. ಶ್ರೀ. ಸಿ. ರಾಜಗೋಪಾಲಾಚಾರ್ಯ, ಸರೋಜಿನಿ ನಾಯುಡು, ಮುಂತಾದ ದೊಡ್ಡ ದೊಡ್ಡ ಜನರು ಬಂದುದರಿಂದ "ಅತಿಥಿಶಾಲೆ"ಯಲ್ಲಿ ಸುಮಾರು ೪೦೦-೫೦೦ ಜನರಿದ್ದರು. ನೋಟೀಸು ಬೋರ್ಡುಗಳನ್ನು ನೋಡಿದೆವು: "MIDDAY MEALS at 12 Noon, Tickets to be obtained before 11-30" ಎಂದೂ, "C. R's convocational address." ಎಂದೂ, "Sister Sarojinis Presidencial address" ಎಂದೂ ಬರೆದಿತ್ತು.

ಓದಿ ತಿರುಗುವಷ್ಟರಲ್ಲಿ ಮೂವರು ಸಮಸ್ಯಾಯದ ಹುಡುಗರು "ಮೆನೇಜರ್ ಸ್ವಲ್ಪ ದೊಡ್ಡ ಮನುಷ್ಯನಸ್ವಾ" ಎಂದು ಕನ್ನಡದಿಂದ ಮಿ. ಚಂದ್ರಶೇಖರನನ್ನು ಕರೆಯುತ್ತಿದ್ದರು. ಸರಿ, ರೋಗಿ ಬಯಸಿದ್ದೂ ಹಾಲು, ವೈದ್ಯ ಕೊಟ್ಟಿದ್ದೂ ಹಾಲು ಆಯಿತು. 'ಈ ಬಂಗಾಲದ ಕೊನೆಯಲ್ಲಿ ಕನ್ನಡ ಎಲ್ಲಿಂದ ಬಂತು?' ಎಂದು ಆಶ್ಚರ್ಯದಿಂದ ಅವರ ಹತ್ತಿರ ಹೋಗಿ "ನಮಸ್ಕಾರ ಸ್ವಾಮಿಾ" ಎಂದೆ. ಅವರಿಗೂ ಏನೇನಾಗಬೇಕೋ ಎಲ್ಲ ಆಯ್ತು. ಒಂದೆರಡು ವಾಕ್ಯಗಳಲ್ಲಿ ಅವರ ನಮ್ಮ ಪರಿಚಯವಾಗಿ, ಅವರು ಒಂದು ದಿನ ಮೊದಲು ಬಂದವರೆಂದೂ, ಚಂದ್ರಶೇಖರನು ವಿಶ್ವಭಾರತಿಯ ವಿದ್ಯಾರ್ಥಿಯೆಂದೂ ಊರು ಬಸವನಗುಡಿ ಎಂದೂ ತಿಳಿಯಿತು. ಚಂದ್ರಶೇಖರರು ಅವರಿಗೆ ಇರಲಿಕ್ಕೆ ಜಾಗದ ವ್ಯವಸ್ಥೆ ಮಾಡಿದ್ದರು. ಎಲ್ಲರೂ ಸೇರಿ ಊಟಕ್ಕೆ ಹೋದೆವು.

ಊಟದ ಮನೆ

ಆದೊಂದು ನಂದನವನ. ಅಲ್ಲಿ ತನ್ನವರು ಇತರರು ಎಂಬ ಭೇದಭಾವವಿಲ್ಲ. ಎಲ್ಲರೂ ಸಮ. ಬಾಂಧವ್ಯ--ಸರಿಸಮಾನತೆ-ಸತ್ಕಾರಗಳನ್ನು ಅಲ್ಲಿಂದ ಕಲಿತು ಬರಬೇಕು. ಎಷ್ಟೋ ಭಾಷೆಯ ಎಷ್ಟೋ ನಡತೆಯ ನೂರಾರು ಜನರು ಅಲ್ಲಿರುತ್ತಾರೆ. ಊಟಕ್ಕೆ ಇಕ್ಕುವವರು ತಮ್ಮ ಪವಿತ್ರತೆಯನ್ನೂ ತಾಯ್ತನದ ಹೊಣೆಯನ್ನೂ ಅರಿತು ನೀಡುತ್ತಾರೆ. (ಪ್ರತಿಯೊಂದು ಜೀವವಸ್ತುವಿಗೆ ಮೊದಲು ಆಹಾರ ನೀಡುವವಳು ತಾಯಿಯಾದುದರಿಂದಲೂ, ತಾಯಿಗೆ ಮಕ್ಕಳ ಹಸಿವಿನ ಅಳತೆ ತಿಳಿದಿರುವುದರಿಂದಲೂ, "ತಾಯ್ತನದ ಹೊಣೆ"ಯೆಂದು ಹೇಳಿದ್ದೇನೆ.) ವಿಶ್ವಭಾರತಿಯ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಸೇರಿ ಅಡಿಗೆ ಮಾಡುತ್ತಾರೆ, ನೀಡುತ್ತಾರೆ. ಸಾರಿಸುವ, ಬಳಿಯುವ ಎಲ್ಲ ಕೆಲಸಗಳನ್ನೂ ಮಾಡುತ್ತಾರೆ. ತನ್ನದನ್ನು ತಾನೇ ಮಾಡಬೇಕೆಂಬ ಮಾದರಿಯನ್ನು ಹೇಳಿಕೊಡುವ ಸ್ಥಾನವದು. ಸತ್ಕಾರವು ಮನುಷ್ಯನ ಕರ್ತವ್ಯವೆಂದು ತಿಳಿದು ಅಲ್ಲಿ ದುಡಿಯುತ್ತಾರೆ. ಈ ರೀತಿ ಭೋಜನಶಾಲೆಯ ವ್ಯವಸ್ಥೆಯು ನಿತ್ಯನಿಯಮವಂತೆ. ಇತರ ಕಾಲೇಜುಗಳ ಕಲ್ಪನೆ ಕೂಡ ಅಲ್ಲಿ ಬರುವುದಿಲ್ಲ. ಅದೊಂದು ಮನೆ. ಬಂಧು-ಭಗಿನಿತ್ವವು ಅಲ್ಲಿ ಮೂರ್ತ ರೂಪುಗೊಂಡಿದೆ. ಚಂದ್ರಶೇಖರರೂ ಒಂದು ಭಾಗದಲ್ಲಿ ನೀಡಲು ನಿಂತಿದ್ದರು. ತಮ್ಮ ಕರ್ತವ್ಯ ಮುಗಿಸಿ ಅವರು ನಮ್ಮೊಡನೆ ಬರಲು, ಊಟಕ್ಕೆ ಕುಳಿತೆವು. ಊಟ ಮುಗಿಸಿ ಪುನಃ ಸಂಚಾರ.

ಅಲ್ಲಿಯ ಹವೆ, ಅಲ್ಲಿಯ ಮರ-ಗಿಡಗಳ ಗುಂಪು, ಒಬ್ಬರೊಬ್ಬರ ನಡಾವಳಿ ಆತ್ಮೀಯವಾಗಿತ್ತು. ನೋಡುತ್ತ ಹೋಗೋಣವೆಂದರೆ ರಾಜಾಜಿಯವರ ಭಾಷಣ ಕೇಳಬೇಕೆಂಬ ಕುತೂಹಲ ಬೇರೆ. ಅಲ್ಲಲ್ಲಿ ವಿಶಾಲವಾದ ಮರಗಳು. ಅಡಿಗೆ ಬೀರಿದ ಕೆಮ್ಮಣ್ಣು. ಸುತ್ತುಗಟ್ಟಿದ ಅರ್ಧಜಂಡಾಕೃತಿಯ ಅವರಣ. ಮರದ ಬುಡಕ್ಕೆ ತಾಗಿ ಎತ್ತರವಾದ ಪೀಠ. ಪೀಠದಲ್ಲಿ ಉಪಾಧ್ಯಾಯರು ಕುಳಿತು, ಸುತ್ತಲೂ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಸೇರಿ ಕುಳಿತು ಕೊಳ್ಳುತ್ತಾರೆ. ಅದೇ ಕ್ಲಾಸು, ಅದೇ ಶಿಕ್ಷಣ ವಿಚಿರ. ಒಬ್ಬ ಉಪಾಧ್ಯಾಯರು ೧೦-೧೫ ಹುಡುಗರನ್ನು ಕಲಿಸುತ್ತಾರೆ. ಶಾಂತಿನಿಕೇತನದಲ್ಲಿ ೫೦೦ ಹುಡುಗರಿಗೆ ೧೫೦ ಉಪಾಧ್ಯಾಯರಿದ್ದಾರೆ; ಅದರಿಂದ ಪ್ರತಿಯೊಬ್ಬ ವಿದ್ಯಾರ್ಥಿಗೂ ತನ್ನ ವಿಚಾರಗಳನ್ನು ಸಂಪೂರ್ಣ ಅನುಭವಕ್ಕೆ ತಂದುಕೊಡಬಹುದು. ಕಲಿಸುತ್ತಿರುವಾಗ ಆಗಾಗ ಬೇರೆ ಬೇರೆ ಪಕ್ಕಿಗಳು ಕೂಗುತ್ತಿರುವವು. ಆ ಕ್ಲಾಸಿಗೆ ಕುರ್ಚಿ, ಡೆಸ್ಕುಗಳಿಲ್ಲ. ಮೇಜು-ಬೆತ್ತಗಳಿಲ್ಲ. ನೆಲವೇ ಕುರ್ಚಿ! ಮರವೇ ಮನೆ.

(೨೬೩ನೆಯ ಪುಟ ನೋಡಿರಿ)

ಮಹಾನುಭಾವ- ಮಂಜಣ್ಣ

ಶ್ರೀ. "ಹು"

★

ಮಂಜಪ್ಪನವರು ಕನ್ನಡನಾಡನ್ನೂ ಕನ್ನಡಿಗರನ್ನೂ ಕಂಡ ದೃಷ್ಟಿ ಎಂತಹದು? ದೇವರ ಅಸ್ತಿತ್ವದ ಬಗೆಗೆ ಈ ಸಾಧಕರ ತಿಳಿವಳಿಕೆ ಯಾವ ಬಗೆಯದು? ವಿಶ್ವಬಂಧುತ್ವದ ಇವರ ಹಾರಯಿಕೆ ಯಾವ ತರ್ಕವನ್ನು ಬೆಂಬತ್ತಿ ಹೊರಟಿದ್ದಿತು?

★

"ತಮ್ಮೀ!"

"ಏನು?" ಅಂದು ೧೯೪೩ನೆಯ ಡಿಸೆಂಬರ ೨೮ನೆಯ ತಾರೀಖಿನ ಸಂಜೆ; ಆಲಮಟ್ಟಿಯ ಏರಕೈವ ವಿದ್ಯಾಲಯದ ಆಶ್ರಮ.

"ಸ್ವಲ್ಪ ತಿರುಗಾಡಿಕೊಂಡು ಬರೋಣವೆ?"

"ಆಗಲಿ!" ನನ್ನ ಆನಂದಕ್ಕೆ ಪಾರವೇ ಇಲ್ಲವಾಯಿತು. ಯಾಕೆಂದರೆ ೧೯೩೦ರಿಂದ ನಾನಿನ್ನೂ ವಿದ್ಯಾರ್ಥಿ; "ಏಕಲವ್ಯ"ನ ಕಥೆಯಿಂದ ಹೊದಲ್ಗೊಂಡು "ಬಸವ ಜ್ಯೋತಿ" "ಬಾದೀನಿಜಯ" "ಉದ್ಯೋಗ" "ಶರಣ ಸಂದೇಶ"ದ ಸಂಚಿಕೆಗಳ ಮುಖಾಂತರ ಪರಿಚಯವಾಗಿದ್ದ ಅಣ್ಣ ಮಂಜಣ್ಣನನ್ನು ತಿಳಿದುಕೊಳ್ಳಬೇಕೆಂಬ ಆಕಾಂಕ್ಷೆ ಆಜೆಗೆ, ಇಂದು ಪುಟಕೊಟ್ಟಂತಾಯಿತು. ಸಂದರ್ಭ ಸಿಕ್ಕಿತು. ಆ ಹೊದಲು ಅವರನ್ನು ನೋಡಿದ್ದಿಲ್ಲವೆಂದಲ್ಲ. ಗುಳೇದ ಗುಡ್ಡದ ಶ್ರೀದತ್ತಾತ್ರೇಯ ವ್ಯಾಯಾಮ ಶಾಲೆಯ ವಾರ್ಷಿಕೋತ್ಸವಕ್ಕೋ ಬಸವಜಯಂತಿಗೋ ಮುಖ್ಯ ಅತಿಥಿಗಳಾಗಿ ಬಂದು, ಉದ್ಬೋಧಕ ಭಾಷಣಮಾಡಿ, "ಇನ್ನೂ (ನನ್ನನ್ನು) ತಿಳಿದುಕೊಳ್ಳಿ" ಎಂದು ಸ್ಯಾಂಪಲ್ ಡೋಸ್ ಕೊಟ್ಟು ಹೋದಂತಾಗುತ್ತಿತ್ತು, ಅವರ ಅಮೃತವಾಣಿ. ಹೀಗಿದ್ದರೂ, ನಾನು ಹೋಗಿ ಅಂದಿಗೆ ಎರಡು ದಿನಗಳಾಗಿದ್ದರೂ, ನನ್ನೊಡನೆ ಸಲುಗೆಯ ಮಾತನ್ನಾಡದ ಅಣ್ಣನವರೇ ಈ ಮೇಲಿನ ಕರೆಯಿಂದ ನನಗೆ ಹೇಗೆ ಆಗಿರಬೇಕು ನೀವೇ ಊಹಿಸಿ.

ರಕ್ತಾವರಣ ರಂಜಿತ ನಭೋಮಂಡಲ; ಸೂರ್ಯದೇವನು ಇನ್ನೇನು—ತನ್ನ ಕೆಲಸ ಮುಗಿಸಿಕೊಂಡು ತಾಯಮಡಿಲಲ್ಲಿ ಆಶ್ರಯಕ್ಕಾಗಿ ಎರಗುವ ವೇಳೆ; ವಿದ್ಯಾಲಯದಿಂದೂರು ಸ್ಟೇಶನ್ನಿಗೆ ಹೋಗುವ ದಾರಿ. ಅಲ್ಲಿಗೆ ನಮ್ಮ ಮಾತಿನ ಕುದುರೆಯು ಒಡೆಯಿತು:

"ನಾನು ಬರೆದ 'ಶ್ರೀಮದ್ ಬಸವಣ್ಣನವರು' ಎಂಬುದನ್ನು ಓದಿದಿರಾ!" ನಾನು ಕೇಳಿದೆ.

"ಓದಿದೆ; ಇನ್ನೂ ಪರಿಶೋಧಕ ಬುದ್ಧಿ ಬೆಳೆಯಬೇಕು. ವಿಷಯ ಮಂಡಿಸಿದ ರೀತಿ ಶ್ಲಾಘನೀಯ!" ಎಂದರು ಅಣ್ಣನವರು.

"ಕವನಗಳನ್ನು ನೋಡಿ ಆಯಿತೇ?"

"ಓದಿದ್ದೇನೆ, ಪತ್ರಿಕೆಗಳಿಗೆ ಕಳುಹಿರಿ. ಪ್ರಚಾರವಾಗಲಿ!"

"ಈ ಜಾತೀಯತಾ ವಾದದಲ್ಲಿ ಇನ್ನೂ 'ತೆರೆಯ ಮರೆಯಲ್ಲಿ'ಯೇ ಬರೆದಿಟ್ಟುಕೊಳ್ಳಬೇಕೆಂದಿದ್ದೇನೆ." ನನ್ನ ಮನದಲ್ಲಿ ಅವರನ್ನು ಕೆಣಕುವ ಮೊನೆಯಿದ್ದಿತು. ಇದನ್ನರಿತ ಅವರು ಕೇಳಿದರು:

"ಅಯ್ಯೋ ಹೀಗೆ ಅಂಜಿ ಕುಳಿತರೆ ಪ್ರಸಿದ್ಧಿಗೆ ಬರುವುದು ಹೇಗೆ?"

"ಪ್ರಸಿದ್ಧಿಗೆ ಬರುವುದೇ ಬೇಡವಾಗಿದೆ!" ನಿರಾಸಕ್ತಿಯ ಧ್ವನಿಯಲ್ಲಿ ನಾನೆಂದೆ.

"ಜಗತ್ತು ಪ್ರಚಾರದತ್ತ ಭರದಿಂದ ಸಾಗಿದಾಗ, ಈ ಗಾಳಿಗೋಪುರವನ್ನು ಕಟ್ಟಬೇಡ!" ಎಂದರು ಅಣ್ಣನವರು—ಎಚ್ಚರಿಕೆ ಕೊಡಲೋಸುಗ.

"ನೀವು ಸಮಗ್ರ ಕಾಲು ಶತಮಾನ ಲೇಖನ, ಭಾಷಣ, ವಿಧಾಯಕ ಕಾರ್ಯಕ್ರಮಗಳ ಮುಖಾಂತರ ಪ್ರಚುರಗೊಳ್ಳುತ್ತಿದ್ದರೂ, ಕನ್ನಡ ಜನತೆ ಆದೆಷ್ಟು ಸನ್ಮಾನ ಕೊಟ್ಟಿದೆ? ವೀರಶೈವರು ಆದೆಷ್ಟು ಸಲ ಮಾನಕೊಟ್ಟಿದ್ದಾರೆ?" ನಾಗರಹಾವಿನ ಬಾಲ ತುಳಿದೆನೆಂದು ಸನಗೆನಿಸಿತು. ಆದರೂ ಅವರು ಶಾಂತಭಾವದಲ್ಲಿ "ಈಗ ಕೊಟ್ಟ ಮತ್ತು ಕೊಡುತ್ತಿರುವ ಮಾನ ನನ್ನ ಮನಸ್ಸಿಗೆ ತೃಪ್ತಿಯನ್ನುಂಟುಮಾಡಿದೆ. ಸರಿ, ಇನ್ನೇನು ಬೇಕು? ಸುಮ್ಮನೆ ಜನತೆಯ ಮೇಲೆ ಕೋಪಿಸಿಕೊಳ್ಳಬಾರದು!" ಎಂದರು. ಟಂಗಿನ ಕಾಯಿಯ ಚಿಪ್ಪು ಇನ್ನೂ ಒಡೆಯಲೆ ಇಲ್ಲ. 'ಒಳ್ಳೇದು, ಹೆಡೆಯನ್ನಷ್ಟು ಮುಟ್ಟಿ ನೋಡೋಣ' ಎಂದುಕೊಂಡು ಕೇಳಿದೆ:

"ಅಣ್ಣಾ ಇದೇನು ಹೇಳುವಿರಿ? ನೀವು ಮಂಜಪ್ಪನಾಗದೆ ಮಂಜರಾಯನಾಗಿದ್ದರೆ??? ಅಖಿಲ ಕರ್ನಾಟಕದ ಏಕಮೇವಾದ್ವಿತೀಯ ಮುಖಂಡನಾಗುತ್ತಿದ್ದಿರಿ. ಏನೋ ದುರ್ದೈವ!"

ಅವರು ಮುಂದುವರಿಸಿದರು: "ಮಹಾತ್ಮಾಜಿಯವರಿದ್ದಾರೆ ಮುಖಂಡರು; ಸುಭಾಸಚಂದ್ರಬೋಸರು ರಾಜಕಾರಣಪಟುಗಳು. ಆಂಗ್ಲ ಸರಕಾರಕ್ಕೆ ಕೊನೆಯೆಚ್ಚರಿಕೆ ಕೊಡಬೇಕೆಂಬ ಬೋಸರ ಮಾತು ಮುಸ್ಸದ್ದಿತನದ್ದು; ಆದರೆ ಮಹಾತ್ಮರು ತುಳಿದ ಹಾದಿ ಸಾದಾ ಮನುಷ್ಯನದು. ಜನತೆ ಯಾರ ಬೆನ್ನು ಪತ್ತಿತು? ಮಹಾತ್ಮರದೇ ತಾನೆ? ಯಾಕೆ ಗೊತ್ತೆ? ಜನತೆಯ ಮನಸ್ಸಿನ ಮಟ್ಟ ಗಾಂಧೀಜಿಯವರ ಮನಸ್ಸಿನ ಮಟ್ಟ ಸರಿಹೋಲುತ್ತವೆ. ಅರ್ಥಾತ್ ಗಾಂಧೀಜಿಯವರು ಹೇಳಿದ್ದನ್ನು ತಿಳಿದುಕೊಳ್ಳುವ ಮಟ್ಟದಲ್ಲಿದೆ ಹಿಂದು ಸ್ಥಾನದ ಜನಮನ. ಅದಕ್ಕೂ ಒಂದು ಕಜ್ಜಿಯನ್ನು ಮುಂದಿಡೋಣ ಎನ್ನುವ

ಸುಭಾಷಬಾಬುವನ್ನು ಹೇಗೆ ದಂಡಿಸಿತು ಗೊತ್ತೇ? ಇಲ್ಲಿ ಒಂದು ಮಾತನ್ನು ನೀವು ನೆನಪಿಟ್ಟುಕೊಳ್ಳಬೇಕಾದುದು!" ಎಂದು ಮೊದಲುಮಾಡಿದರು, ನಾನು ತಂದುಕೊಟ್ಟ ಸಂದರ್ಭಸಾಗರದಲ್ಲಿ ಈಜಲನುವಾಗಿ: "ಸಮಾಜಸುಧಾರಕನು ಯಾವಾಗಲೂ ಜನಮನದ ನಾಡಿಯನ್ನು ನೋಡಿ ಮುದ್ದು ಕೊಡಬೇಕಷ್ಟೆ? ನಾನು ಹೇಳುತ್ತಿರುವ ಮಾತು ಜನರ ಮನಸ್ಸನ್ನು ಹಿಡಿದಿರಲಿಕ್ಕಿಲ್ಲ, ಅಥವಾ ಅಷ್ಟು ಜಾಣ್ಮೆಯಿಂದ್ದ್ಹೇಳುವಷ್ಟು ಬುದ್ಧಿ ಇನ್ನೂ ಹದಕ್ಕೆ ಬಂದಿರಲಿಕ್ಕಿಲ್ಲ. ವೀಕಕ್ಕೆಯ ಸಮಾಜ ಅಜ್ಞಾ ಸಮಾಜ; ನೂರಕ್ಕೆ ಮೂರೋ ನಾಲ್ಕೋ ಜನ ಕಲಿತವರಿರುವಾಗ, ಹೆಚ್ಚಿನದನ್ನವೇಕ್ಷಿಸುವುದು ಮೂರ್ಖತನವಾದ್ದಾದೀತು. ಅಲ್ಪ. ಸಂಖ್ಯಾಕರು, ಬಹುಸಂಖ್ಯಾಕರು ಉಪಭೋಗಿಸುವ ಸುಖ-ಸೌಲಭ್ಯಗಳನ್ನೆಲ್ಲಾ ಉಪಭೋಗಿಸುತ್ತಿರುವುದು ಅವರಲ್ಲಿರುವ ಜಾಣ್ಮೆಯ ಪ್ರಗತಿಯ ದ್ಯೋತಕವೇ ಹೊರತು ಇನ್ನೊಂದಲ್ಲ. ಅವರು ಮಾಡುವ ತಪ್ಪುಗಳನ್ನು ನಾವೂ ಮಾಡುವುದು ಬೇಡ. ಮುಂದಾಗಲು ಓಡಿಹೋಗುತ್ತಿರುವವನು ಎಡವಬೀಳುತ್ತಿರುವನೆಂದು ನಾವೂ (ಸಾವಕಾಶ ನಡೆಯುತ್ತಿರುವವರು) ಬೀಳುವುದೆಂದರೆ ನಗೆಗೇಡು. ಅವರಲ್ಲಿರುವ ಬುದ್ಧಿಕೌಶಲ, ಜಾಣ್ಮೆ, ಪ್ರಗತಿಪರ ನಡೆವಳಿಕೆಯನ್ನು ಕಲಿಯಿರಿ. ಉದಾಹರಣೆಗೆ ಶ್ರೀ. ವಾಳವೇಕರ ಗುರುರಾಯರಿದ್ದಾರೆ; ಅರ್ಥಶಾಸ್ತ್ರಪಟುಗಳು. ಅದನ್ನೇ ತಮ್ಮ ಜೀವನದ ಗುರಿಯನ್ನಾಗಿಟ್ಟುಕೊಂಡಿದ್ದಾರೆ. ಇಡಿಯ ಕನ್ನಡನಾಡಿನಲ್ಲಿ ಅವರ ಪಸರೊಂದೇ ಕೇಳಬರುತ್ತಿದೆ; ನಿಮ್ಮಲ್ಲಾರಿಗಾದರೂ ಅರ್ಥಶಾಸ್ತ್ರವನ್ನು ಕುರಿತ ಆಳವಾದ ಅಭ್ಯಾಸಮಾಡಲು ಅವರೇನು ಆಕ್ಷೇಪಣೆಕಾರರೆಯೇ? ಶ್ರೀಯುತ ರಾಜಪುರೋಹಿತರಿದ್ದಾರೆ; ಐತಿಹಾಸಿಕ ಸಂಶೋಧನೆಯನ್ನೇ ತಮ್ಮಗುರಿಯನ್ನಾಗಿಟ್ಟುಕೊಂಡು ಮುಂದೆ ಸಾಗಿದ್ದಾರೆ. ಬೇಕಾದಷ್ಟು ಎಡರು-ತೊಡರುಗಳನ್ನು ಎದುರಿಸಿಯೂ ಮುಂದೆಸಾಗುತಿದ್ದಾರೆ. ಅವರಿಗೆ ಬೇಡವೆನ್ನುವುದೇ? ನಿಮ್ಮಲ್ಲಾರೂ ಐತಿಹಾಸಿಕ ಸಂಶೋಧನೆ ಮಾಡಬೇಡವೆಂದು ಹೇಳುತ್ತಾರೆಯೇ? ನಿಮ್ಮ ಸಮಾಜದಲ್ಲಿ ಎಷ್ಟು ಜನ ಅರ್ಥಶಾಸ್ತ್ರಪಟುಗಳನ್ನು ತಂದು ಕೊಡುತ್ತೀರಯೇ? ಸಂಶೋಧನೆ ಮಾಡಿದವರೆಷ್ಟು ಜನ? ಸಮಾಜಶಾಸ್ತ್ರದ ಅಭ್ಯಾಸಿಗಳೆಷ್ಟು? ವಿಜ್ಞಾನಿಗಳೆಷ್ಟು? ಗಣಿತಜ್ಞರಾರು? ರಾಜಕಾರಣವನ್ನು ಆಳವಾಗಿ ಅಭ್ಯಾಸ ಮಾಡುವವರೆಷ್ಟು? ಇಲ್ಲವೇ ಇಲ್ಲವೆಂದಲ್ಲ, ಬೆರಳಿನಿಂದ ಎಣಿಸುವಷ್ಟು ಇದ್ದಾರೆ. ಈ ದೃಷ್ಟಿಯಿಂದ ಮಹಾರಾಷ್ಟ್ರ ಬಹಳ ಮುಂದುವರೆದಿದೆ. ನೀವು ಪುಣೆಗೆ ಹೋದರೆ ತಿಳಿಯುತ್ತದೆ: ನಮ್ಮಲ್ಲಿಯ ಶ್ರೀ. ವಾಳವೇಕರ, ರಾಜಪುರೋಹಿತರಂಥವರು ಅಲ್ಲಿ ಹಣಿಗೊಬ್ಬರು ಸಿಕ್ಕುತ್ತಾರೆ. ಹೀಗೆಂದೇ ಅಲ್ಲಿ ಮುಖಂಡರು ತಯಾರಾಗುತ್ತಾರೆ. ಈ ದೃಷ್ಟಿಯಿಂದ ನಮ್ಮ ನಾಡು ಕಡುಬಡವಾಗಿದೆ. ಇದಕ್ಕೆ ನಮ್ಮ ಅಜ್ಞಾನವನ್ನೇ ಹಳಿಯಬೇಕೆ ಹೊರತು 'ಅಯ್ಯೋ! ಹೀಗಾಯಿತಲ್ಲ!' ಎಂದು ಬೊಬ್ಬೆಹೊಡೆಯುವುದು ನನಗೇಕೋ ಸರಿಕಾಣದು!" ಎಂದು ನಿಡಿದಾದ ತಮ್ಮ ನೋಟವನ್ನು ನನ್ನೆಡೆಗೆ ಬೀರಿ, ತಮ್ಮ ಮಾತಿನ ಸರಣಿಯು ನನ್ನ ಮೇಲೆ ಅದೆಷ್ಟು ಕಾರ್ಯವೆಸಗಿತು ಎಂದು, ಒಂದು ನಿಮಿಷ ನೋಡಿದರು. ನಾನು ಅಚಲನಾಗಿದ್ದೆ. ಮುಗಿಸುವ ದೃಷ್ಟಿಯಿಂದ ಮತ್ತೆ ಮುಂದುವರೆದರು:

"ವೀರಶೈವಸಮಾಜಕ್ಕೆ ಬರಿಯ ಮುಖಂಡತ್ವ ಬೇಕು; ಆದರೆ ವಿಧಾಯಕ ಕಾರ್ಯಕ್ರಮಗಳೆಂದರೆ ತಲೆಬೇನರು. ಹೀಗಾಗಿ ಅವರು ಬರಿಯ ಉತ್ಸವಮೂರ್ತಿಗಳಾಗಿ ಉಳಿಯುವುದು ಸಹಜ. ಅನಾಯಾಸವಾಗಿ ಸಿಕ್ಕ ಹಣ್ಣನ್ನು ತಿಂದವನಿಗೂ ಕಷ್ಟ-ನಷ್ಟಗಳನ್ನು ಸೋಸಿತಂದ ಹಣ್ಣನ್ನು ತಿಂದವನಿಗೂ ಮಹದಂತರ-

---

(೨೪ನೆಯ ಪುಟದಿಂದ ಮುಂದೆಸಾಗಿದುದು.)

ಸಂಗೀತ, ನೃತ್ಯ, ಅಭಿನಯ, ಚಿತ್ರ, ಯೋಗ, ವ್ಯಾಯಾಮ, ಸರಳಭಾಷೆ, ಶಾಸ್ತ್ರೀಯವಿಚಾರ, ಯಾಂತ್ರಿಕ, ವೈದ್ಯಕ. ಮುಂತಾದ ನೂರಾರು ಶಾಖೆಗಳಿವೆ. ಎಲ್ಲವಕ್ಕೂ ನಿಯಮ—ವೇಳೆಗಳ ಕ್ಲಪ್ತತೆ ಇದೆ. ಭಾರತೀಯ ಕಲೆಯ ನಿಜಸ್ವರೂಪವನ್ನು ಗುರು ರವೀಂದ್ರರು ಶಾಂತಿನಿಕೇತನದಲ್ಲಿ ಮೂರ್ತಿಮತ್ತಾಗಿಸಿದ್ದಾರೆ. ಪ್ರತಿಯೊಂದು ಬದಲಾವಣೆಗೂ ಗಂಟೆಯ ಸಂಕೇತವಿದೆ. ಒಂದು ಮರದ ಒಂದು ಕಟ್ಟೆ! ಆದೇ ದೇವೇಂದ್ರನಾಥ ಟಾಗೋರರ ತಪೋವನ. ಗುರು ರವೀಂದ್ರರ ಗುರುಕುಲ. ಜಗತ್ತಿನ ವಿದ್ಯಾರ್ಥಿಗಳನ್ನು ತನ್ನೆಡೆಗೆ ಕರೆದ "ವಿಶ್ವಭಾರತಿ"

ಉತ್ತರಾಯಣ.

ಉತ್ತರಾಯಣವು ಒಂದು ಗಾಜಿನ ಮಂದಿರ. ಒಳಗಡೆ ಚಂದ್ರಕಾಂತ ಶಿಲೆಯ ಮೂರು ನಿರ್ಮಾಣಗಳು (Desks). ಅಲ್ಲಿಯೇ ಗುರುದೇವನು ಗೀತಾಂಜಲಿಯನ್ನು ಬರೆದದ್ದು. ಈ ಮಂದಿರವು ಪೂರ್ವಕ್ಕೆ ಮುಖವಾಗಿ ದಕ್ಷಿಣೋತ್ತರ ಕಟ್ಟಲ್ಪಟ್ಟಿದೆ. ಸೂರ್ಯನ ಪ್ರಾತಃಕಾಲದ ಸ್ವರ್ಣಕಿರಣಗಳು ನೇರವಾಗಿ ಗುರುದೇವನ ವರ್ಮಣಿಯನ್ನು ಇಂದಿಗೂ ವಿಾಯಿಸುತ್ತಿವೆ. ಎದುರುಗಡೆಯಲ್ಲಿ ಎಂದೂ ನೀರಾರದ ಕೊಳ. ಸುತ್ತಲೂ ಹೂವಿನ ಗಿಡಗಳು. ಕೊಳದ ಸುತ್ತಲೂ ತಾಲ, ಆಲ, ಮಾವು, ನುಗರು, ಹೊಂಗೆ, ನಂದಿ ಮರಗಳು. ಕಿರಣಗಳು ಮರದ ಸಂದಿಗಳಿಂದ ನೀರನ್ನು ಸೇರಲು ತವಕದಿಂದ ಓಡುತ್ತಿರುತ್ತವೆ... ಅಲ್ಲೆಲ್ಲಾದರೂ ಗುರುದೇವನು ಸಿಗುತ್ತಿರುವನೋ ಎಂದು ನೋಡಲಿಕ್ಕೆ. ಆದೂ ಒಂದು ಆಶ್ರಮ.

ಭಾಷಣಸಮಿತಿಗಳಿಗೆ ಒಂದು ಅಲಬೆ ಮರದಡಿಯಲ್ಲಿ ಎತ್ತರವಿರುವ ಪೀಠ. ಸಮಚೌಕು ವಿಶಾಲವಾದ ಅಂಗಳ. ನಾಲ್ಕೂ ಕಡೆಗಳಲ್ಲಿ ಸಾಲಾಗಿ ಮರಗಳು. ಯಾವ ಹಾಲೂ (Hall) ಇದನ್ನು ಮೀರಲಾರದು. ಇದೆಲ್ಲ ಶಾಂತಿನಿಕೇತನ.

ವಿರುತ್ತದೆ. ಮೊದಲಿನವನಿಗೆ ರುಚಿಯಷ್ಟೇಗೊತ್ತು; ಎರಡನೆಯವನಿಗೆ ರುಚಿಯ ಜೊತೆಗೆ ಅದರ ಬೆಲೆಯೂ ಗೊತ್ತಿರುವುದರಿಂದ, ಆ ಸುಖವನ್ನು ಹೇಗೆ ಉಪಭೋಗಮಾಡಿಕೊಳ್ಳಬೇಕೆಂಬ ಮರ್ಮ ತಿಳಿದಿರುತ್ತದಾದ್ದರಿಂದ, ಅದರ ಯೋಗ್ಯತೆಗೆ ತಕ್ಕಂತೆ ಬಲು ಮಾರ್ಮಿಕವಾಗಿ ಅದನ್ನು ಉಪಯೋಗಿಸಿಕೊಳ್ಳುವುದರಿಂದ, ನಪ್ಪಾಂಶ ಕಡಿಮೆ.—ಇದನ್ನರಿಯಬೇಕು ನಮ್ಮ ಜನ!" ಎಂದು ಮಾತನ್ನು ಮುಗಿಸಿದರು. ಸಂದರ್ಭ ಬದಲಿಸಿ ಮುತ್ತಿ ಮಾತಿಗೆ ಮೊದಲುಮಾಡಿದೆ:

"ನನಗೇಕೋ ಈಗ ದೇವಪ್ಪದಲ್ಲಿಯೆ ನಂಬಿಕೆ ಹುಟ್ಟಲೊಲ್ಲದು. ನೀವೋ ಜಸ್ತಿಕರಾಗಿಯೆ ಇರುವತ್ತರ ಇಟ್ಟಪತ್ತಿದವರು. ನಿಮಗೆ ಏನು ಎನಿಸುತ್ತದೆ?"

"ನಾನ್ಹೇನೂ ನಿನಗೆ ಹೊರತಾಗಿಲ್ಲ. ನೀನಿಷ್ಟೊಂದು ವ್ಯಸನ ಪಡಬೇಕಾಗಿಲ್ಲ. ಯಾಕೆಂದರೆ ನನಗೂ ಈ ಅವಸ್ಥೆ ಬಂದು ಹೋಯಿತು, ಆದರೂ ನಣ್ಣ ಪ್ರಮಾಣದಲ್ಲಿ. ಅದು ಎಲ್ಲರಿಗೂ ಬರಬೇಕಾದ ಒಂದು ಅವಸ್ಥೆಯೆಂದೇ ನನ್ನ ಭಾವನೆ. ಭಾರವಾದ ಕೊಡಪನ್ನುಹೊತ್ತುಕೊಳ್ಳುವಾಗ ಮನುಷ್ಯನ ದೇಹ ಸ್ವಲ್ಪ ಹಿಂದಕ್ಕೆ ಬಗ್ಗುತ್ತದೆ. ಹಾಗೆ ಹಿಂದಕ್ಕೆ ಬಗ್ಗುವ ನಾಸ್ತಿಕಭಾವನೆಗೆ ನಾವು ಬೆದರಬೇಕಾಗಿಲ್ಲ. ಇನ್ನು ನಿನ್ನ ವಿಷಯದತ್ತ ಹೊರಳಿದರೆ ಇದು ವಾದಗಮ್ಯವಲ್ಲ, ತರ್ಕಗಮ್ಯವಲ್ಲ, ಅನುಭವಗಮ್ಯವಾದುದು. ಅಲ್ಲಮಪ್ರಭುದೇವರು ತಮ್ಮ ವಚನದಲ್ಲಿ ಮುತ್ತಿನಂತಹ ಮಾತನ್ನೊಂದು ಹಾಕಿದ್ದಾರೆ: "ಅರಿಯೆವೆಂಬಿರಿ, ಅರಿದ ಪರಿ ಎಂತು ಹೇಳಿರೇ? ಅರಿದವರು ಅರಿವೆವೆಂಬರೆ? ಅರಿಯಬಾರದ ಘನವನರಿದವರು ಅರಿಯದಂತಿರ್ಪರು ಗುಹೇಶ್ವರಾ!" ಹೀಗೆಂದ ಕೂಡಲೇ ನಿಮ್ಮಂಥವರಿಗೆ ಪ್ರಬಲವಾದ ಒಂದು ಸಂಶಯ ಬರುವುದು ಸಹಜ: "ಮುಚ್ಚಿದ ಕೈಯಲ್ಲಿ ಏನಿದೆ? ಬರಿಗ್ಯೆಯಿರಲೂ ಸಾಧ್ಯ." ಎಂದು. "ಹಸಿವು" ಒಂದು ಶಕ್ತಿ. ಊಟಮಾಡಬೇಕೆಂಬ ಕ್ರಾಂಕ್ಷೆಯನ್ನು ಹುಟ್ಟಿಸುತ್ತದೆ. ಊಟವಾದಮೇಲೆ "ತೃಪ್ತಿ" ಯಾಗಿಯಿತು ಎಂಬ ಭಾವನೆ ಬರುತ್ತದೆ. ಎರಡೂ ಕಾಣದ ವಸ್ತುಗಳೇ; ಆದರೂ ಅನುಭವಗಮ್ಯವಾದುವು. ಒಂದು ಶಕ್ತಿಯನ್ನು ಪ್ರಜೋದಿಸಲು ಒಂದು ವಸ್ತು ಅನಿವಾರ್ಯ. ಹೊಟ್ಟೆಯಲ್ಲಿ ಹಸಿವೇಕಾಗಬೇಕು? ನಿಸರ್ಗನಿಯಮ. ನಿಸರ್ಗದತ್ತ ಶಕ್ತಿಯನ್ನು ಪ್ರಜೋದಿಸುವ ಮಹಾಕಾರ್ಯವನ್ನೆಸಗುವ ಕೇಂದ್ರೀಕರಣವಸ್ತು ನಾವು ದೇವರೆಂದುಕೊಳ್ಳುತ್ತೇವೆ. ಅದು ಪ್ರಜೋದಿಸುವ ಕಾರ್ಯದಲ್ಲಿ ಎಷ್ಟು ತನ್ಮಯವಾಗಿದೆಯೆಂದರೆ, ದೇಹ-ಜೀವಗಳನ್ನು (ಸಂಬಂಧ) ನಮ್ಮಷ್ಟಕ್ಕೆ ನಾವೇ ನೆನೆದುಕೊಂಡಾಗ, ಗೋಚರಿಸದಿರದು. ಇನ್ನು ನಮಗೆ ಆ ಜ್ಞಾನ ಹೇಗಾಗಬೇಕು? ಆ ಅನುಭವವನ್ನು ಹೇಗೆ ಹೊಂದಬೇಕು?—ಎಂಬ ಸಮಸ್ಯೆಯನ್ನು ಬಿಡಿಸುವುದೊಂದುಳಿಯಿತು. ಇದಕ್ಕೆ ಸತ್ಪುರುಷರ ನಡೆ-ನುಡಿಗೆ ಶರಣು ಹೊಡೆಯದೆ ಗತ್ಯಂತರವಿಲ್ಲ. ಅವರ ಆಚಾರ-ವಿಚಾರ, ಕೃತಿ-ಕಾರ್ಯಗಳ ನಿರೀಕ್ಷಣೆಯೆ ಒಂದು ಮಹಾಪಾಠ. ಅದನ್ನು ಅಭ್ಯಸಿಸಿದಲ್ಲದೆ ಈ ಪರೀಕ್ಷೆಯಲ್ಲಿ ಪಾಸಾಗಲಾರ. 'ಗಾಂಧೀಜಿಯವರ ದರ್ಶನಕ್ಕೆ ಹೋಗಿದ್ದೆ' 'ಅರವಿಂದರ ದರ್ಶನಕ್ಕೆ ಹೋಗಿದ್ದೆ' ಎಂದು ಹೇಳಿಕೊಳ್ಳುವುದುಂಟು. ಆ ಮಹಾಸಮುದ್ರದಲ್ಲಿ ನಮನಮಪಗೆ ಬೇಕಾದಷ್ಟು ನೀರು ತಂದುಕೊಳ್ಳುವುದೇ ಆ ದರ್ಶನದ ಉದ್ದೇಶ. ಅವರು ನಿಂತ ನಿಲುವು, ನೋಡುವ ನೋಟ, ಆಡುವ ಮಾತು ಒಂದೊಂದರಲ್ಲೂ ಒಂದು ಮಹಾಕಾವ್ಯದಷ್ಟು ಅರ್ಥಗರ್ಭಿತತೆಯುಂಟು!" ಎಂದು ನನ್ನನ್ನು ಹುಳು ಹುಳು ನೋಡತೊಡಗಿದರು.

ತುಂಟನಂತೆ ನಡುವೆ ಬಾಯಿಹಾಕಿದೆ: "ನಿಮ್ಮ ಹುಟ್ಟಿದೂರು ಯಾವುದು?" "ಬನವಾಸಿ; ಏಕೆ? ಪತ್ರಿಕಾ ಪ್ರತಿನಿಧಿಯೋ ನೀನು? ಎಲ್ಲಿ ನಿನ್ನ ಪರಿಚಯ ಪತ್ರ?" ಎಂದು ನಗೆಯಾಡಿದರು.

"ಬನವಾಸಿ ಹುಟ್ಟೂರು; ಆಲಮಟ್ಟಿ ಇರುವ ಊರು. ಮಾಡುವುದು ಜಂಗಮವೇವೆ. ಇಷ್ಟನ್ನು ನೋಡಿಯೋ ಏನೋ, ಆಲಮಟ್ಟಿ ಜಂಗಮರೆಂದರೆ ಬಲು ಪ್ರಸಿದ್ಧರೆಂಬ ನಾಣ್ನುಡಿ ಬಳಕೆಯಲ್ಲಿ ಬಂದಿರಬೇಕು, ಅಲ್ಲವೇ!" ಎಂದು ನನ್ನ ಸವಾಲು ಹೋಯಿತು. ಮೌನವಾಗಿ ನಕ್ಕುದೇ ನನಗೆ ಮಾರುತ್ತರವಾಯಿತು. ಅಷ್ಟಕ್ಕೇ ಸ್ಟೇಶನ್ ಸಮೀಪ ಬಂದುದರಿಂದ:

"ಇನ್ನು ತಿರುಗೋಣವೇ?" ಎಂದರು ಅಣ್ಣನವರು.

"ಆಗಲಿ!" ಎಂದೆ ನಾನು. ಆಶ್ರಮದತ್ತ ಹೆಜ್ಜೆ ಹಾಕುತ್ತಲೇ ಮಾತಿಗೆ ಮೊದಲು ಮಾಡಿದೆ:

"ಐತಿಹಾಸಿಕ ದೃಷ್ಟಿಯಿಂದ ಈಗ ಜಗತ್ತು ಎಲ್ಲಿಗೆ ಬಂದಿದೆ? ಎತ್ತ ಸಾಗುತ್ತ ನಡೆದಿದೆ?"

"ಜಗತ್ತು ಒಂದುಗೂಡುವ ಹಂತದಲ್ಲಿದೆ. ಅದು ಹೇಗೆ ಎಂದು ಕೇಳಬಹುದು. ಮೊದಮೊದಲು ರಾವಣನದೋ ರಾವಣನನದೋ ಒಂದು ಪಕ್ಷ ಕಟ್ಟಿ, ಒಬ್ಬನ ಸುಖದ ದೃಷ್ಟಿಯಿಂದ ಅವನ ಕೈಕೆಳಗಿನ ಅನೇಕರು ವ್ಯೆತ್ಯುಮಾರಿಗೆ ಬಲಿಯಾಗುತ್ತಿದ್ದರು. ಅಲೆಕ್ಸಾಂಡರ್, ನೆಪೋಲಿಯನ್‌ರಂಥ ಒಂದೇ ಒಂದು ವ್ಯಕ್ತಿಯ ಮಹತ್ವಾಕಾಂಕ್ಷೆಗಾಗಿ ಅದೆಷ್ಟು ನರಮೇಧಯಜ್ಞ ನಡೆಯಿತು? ಆ ಕಾಲ ಹಿಂದಾಗಿ, ನಾವೀಗ ಮಧ್ಯಯುಗದಲ್ಲಿದ್ದೇವೆ. ಒಂದು ಸಮಾಜ ಅಥವಾ ಒಂದು ಜನಾಂಗದ ಹಿತದ ದೃಷ್ಟಿಯಿಂದ ಯುದ್ಧಗಳಾಗುವುವು ಈಗ. ಇಂದು ಹಿಟ್ಲರನ ಹೆಸರು ಕೇಳಬರುತ್ತಿದ್ದರೂ ಅದು ಜರ್ಮನ್ ಪಂಗಡದ ಅಥವಾ ಜನಾಂಗದ ಪ್ರತಿಬಿಂಬವೇ ಮೈವೆತ್ತು ನಿಂತಿದೆ. ಇದರ ಸಮಯವನ್ನವಯವನ್ನು ಸ್ವಲ್ಪ ಹಚ್ಚು-ಕಡಿಮೆ ರಚಿಯಾದಲ್ಲಿ ನೋಡಬಹುದು. ಸಾಂಘಿಕ ಶಕ್ತಿಯೆದುರು ವ್ಯಕ್ತಿ ಸ್ವಾತಂತ್ರ್ಯ ಕುಳ್ಳಾಗಿ ಸಾಗಿದೆ. ಆದುದರಿಂದ ಈಗಿನ ಯುದ್ಧ ಸಾಂಘಿಕ ಯುದ್ಧವೆಂದೆನ್ನಬಹುದು. ಬಹುತರ ಈ ಯುದ್ಧದ ಪರಿಣಾಮವಾಗಿಯೂ ವಿಜ್ಞಾನದ ಪ್ರಭಾವದಿಂದಲೂ ಜಗತ್ತು ತೀರ ಹತ್ತಿರಕ್ಕೆ ಬಂದಿದೆ. ಈ ಯುದ್ಧ ಮುಗಿದ ಬಳಿಕ ಮುಂದಾಗಬಹುದಾದ ಯುದ್ಧಗಳ

ಖಂಡ-ಖಂಡಗಳ ನಡುವೆ ಆಗಬಹುದು; ಆಗ ಈ ಜಗತ್ತು ಇನ್ನೂ ಹತ್ತಿರಕ್ಕೆ ಸರಿದು ಒಂದೇ ಎಂಬ ಭಾವನೆ ಇನ್ನಷ್ಟು ಗಟ್ಟಿಗೊಳ್ಳಬಹುದು." ಎಂದು ನುಡಿದರು. ಹೀಗೆ ಅಂದಿನ ಮಾತು ಕತೆಗಳು ಒಳ್ಳೇ ಸರಸವಾಗಿಯೂ ವೈವಿಧ್ಯಪೂರ್ಣವಾಗಿಯೂ ಸಾಗಿದುವು.

ಮುಂದೆ ಮರುದಿನ ನಾನು ಹೋಗಲೇಬೇಕಾಗಿದ್ದುದರಿಂದ, ಊಟ-ಉಡುಗೆ ತೀರಿಸಿಕೊಂಡು ಹೊರಡಲನುವಾದಾಗ, ಅವರು ಅದೇ ಜಳಕಮಾಡಿ ಲಿಂಗಾರ್ಚನೆಗೆ ಕುಳಿತಿದ್ದರು. ನಾನು ಅನುಮಾನಿಸತೊಡಗಿದೆ: 'ಹೇಗೆ ಮಾಡುವದು?' ಎಂದು. ಒಡನೆಯೆ ನನ್ನೆಡೆಗೆ ದೃಷ್ಟಿಬೀರಿ "ಹೋಗುವಿರಾ? ಬಿಡು. ವಿದ್ದಾಗ ಅವಶ್ಯ ಬನ್ನಿರಿ. ನಾನು ಕೂಡುವಲ್ಲಿ ಮೇಜಿನ ಮೇಲೆ ನಿಮಗಾಗಿ "ವಚನಕಾರರ ಸಮಾಜರಚನೆ" "ಸುಬೋಧಸಾರ"ದ ಪ್ರತಿಗಳನ್ನು ಇಟ್ಟಿದ್ದೇನೆ. ತೆಗೆದುಕೊಳ್ಳಿರಿ. ಒಳ್ಳೇದು, ನಮಸ್ಕಾರ!" ಎಂದವರೇ ಶಿವಪೂಜೆಯಲ್ಲಿ ನಿರತರಾದರು. ಅವರಿಟ್ಟಿದ್ದ ಪುಸ್ತಕಗಳನ್ನು ತೆಗೆದುಕೊಂಡು ನನ್ನೂರನು ಸೇರಿದೆನು.

ಆ ಮಾತೀಗ ಸಂದು ಮೂರು ವರುಷಗಳಾದುವು. ಈ ಮಧ್ಯೆ ಒಂದು ಸಲ ಬಾಗಿಲುಕೋಟೆಯಲ್ಲಿ ನೆರೆದ ನಿ. ಕ. ಆಯುರ್ವೇದ ಪರಿಷತ್ತಿನ ಉದ್ಘಾಟನೆ ಮಾಡಿದಾಗ, ಮತ್ತೊಮ್ಮೆ ಶ್ರೀಮಾನ್ ಪಿ. ಜಿ. ಹಳಕಟ್ಟಿಯವರ ಹುಟ್ಟುಹಬ್ಬದ ನಿಮಿತ್ತದಲ್ಲಿ ಭಾಷಣ ಮಾಡಿದಾಗ—ನೋಡಿದ್ದು ಅವರನ್ನು. ಆದರೂ, ನಿಕಟವಾಗಿ, ಹತ್ತಿರ ನಿಂತು ಮಾತನಾಡಿದ್ದು ಅಂದು. 'ಅದೇ ಮೊದಲ ಸಲ, ಅದೇ ಕೊನೆಯ ಸಲ' ಎಂದು ಇಂದು ಒಪ್ಪಿಕೊಳ್ಳಬೇಕಾಗಿಬಂದಿದೆ. ಅವರು ಅಂದು ಹೇಳಿದ ಮಾತುಗಳನ್ನು ಇಂದಿಗೂ ಮೆಲಕುಹಾಕುತ್ತಿದ್ದೇನೆ. ಕನ್ನಡ ನಾಡಿನ ಈ ಸಂಕ್ರಮಣ ಕಾಲದಲ್ಲಿ, ಅವರನ್ನು ಕಂಡು ಕೇಳಿದ ಬಂಧುಗಳಿಗೆ ಉಪಯುಕ್ತವಾಗಲೆಂದು ನೆನಸಿ, ಅಂದಿನ ನೆನಹನ್ನು ಎಲ್ಲರ ಮುಂದಿಟ್ಟಿದ್ದೇನೆ. ಅವರನ್ನು ಹೊಗಳದೆ ತೆಗಳದೆ, ನನ್ನ ಆವರ ನಡುವೆ ಆದ ಸಂಭಾಷಣೆಯನ್ನು ಯಥಾವತ್ತಾಗಿ—ಏನೂ ಸಂಕೋಚವಿಲ್ಲದೆ—ಮುಂದಿಸಿದ್ದೇನೆ. ಹೊಗಳಿ ಹೊನ್ನ ಶೂಲಕ್ಕಿಕ್ಕುವುದು ಬೇಡ, ತೆಗಳಲು ತಕ್ಕ ಸಂದರ್ಭ ಸೂಚ್ಯವಿಲ್ಲ. ವಿಮರ್ಶಿಸಿ ಬರೆಗಲ್ಲಿಗೆ ಹಚ್ಚುವ ಕರ್ಮವೊಂದೇ ಇನ್ನುಳಿದ ಮಾತು. 'ಸಾಯುವ ಮನುಷ್ಯನ ತುಟಿಯ ಮೇಲೆ ಸತ್ಯ ನವಡಿಸಿರುತ್ತದೆ' ಎಂದು ಆಂಗ್ಲ ನಾಣ್ನುಡಿಯಿದೆ. ಸಾಯುವಾಗ ಶ್ರೀ ನುಸೆ. ಮಹ. ವಿಂಡಕ್ಕಿಪರನ್ನು ನೆನೆಯಲಿಲ್ಲ. . ಕನ್ನಡ ದೇವಿಗೆ ವಂದನೆ ಸಲ್ಲಿಸಿದರು. ಕನ್ನಡಬಂಧು ತರುಣರಿಗೆ ಪ್ರೇಮದ ಕೊನೆಯ ಮಾತು ಹೇಳಿದರು. ಏನೆಂದು? 'ಧೀರರಾಗಿರಿ, ಪವಿತ್ರರಾಗಿರಿ, ಸ್ವತಂತ್ರ ರಾಷ್ಟ್ರವೀರರಾಗಿರಿ!' ಇದು ಅವರ ಕೊನೆಯ ಬೇಡಿಕೆ. ಆ ಮಹಾಸುಭಾವಿಯ ಬೇಡಿಕೆ ಎಷ್ಟು ಮಹತ್ವಪೂರ್ಣವಾಗಿದೆ? ಪಂಪನ ಗಂಡುಮೆಟ್ಟಾದ ಬನವಾಸಿಯ ಇವರು, ಅವನೆಂದಂತೆ "ಹೋರು, ಬೀಳ್ವನ್ನೆಗಂ!" 'ಮಾಡಿ ಮಡಿದವರು' ಎಂದು ನೆನೆದುಕೊಂಡಾಗ, ಆವರ ಮೇಲಿನ ಮಾತು ಇನ್ನೂ ಹೆಚ್ಚು ಅರ್ಥಗರ್ಭಿತವಾಗುತ್ತದೆ. ಸಕ್ಯುವಾಸುಸ್ತದೆ. ಅನುಭವಪೂರ್ಣವಾಗುತ್ತದೆ. ಅವರ ಸ್ಮಾರಕದ ಚಾಲಕರು ಈ ಮಾತನ್ನು ಲಕ್ಷ್ಯದಲ್ಲಿಟ್ಟುಕೊಂಡು, ಅದಕ್ಕೆ ಸರಿಹೋಲುವ ಸ್ಮಾರಕದ ಏರ್ಪಾಡನ್ನು ಮಾಡುವರೆಂದೂ, ಕನ್ನಡ ಜನತೆ ಅದಕ್ಕೆ ತಕ್ಕ ಮನ್ನಣೆಕೊಡುತ್ತದೆಂದೂ ಆಶಿಸಿದ್ದೇನೆ.

ಕೊನೆಯಲ್ಲಿ ಒಂದೆರಡು ಮಾತು

ಶ್ರೀಮಾನ್ ಹರ್ಡೀಕರ ಮಂಜಪ್ಪನವರ ಬಗೆಗೆ ಜಯಂತಿಯಲ್ಲಿ ಸಂಪಾದಕೀಯ ಲೇಖನವನ್ನೇ ಬರೆಯಬೇಕೆಂದಿದ್ದವು. ಆದರೆ ಅವರ ಜೀವನ ರಹಸ್ಯವನ್ನು ಪ್ರದರ್ಶಿಸಬಹುದಾದ ಈ ವ್ಯಕ್ತಿಪರಿಚಯಾತ್ಮಕ ಲೇಖನವು (ಶ್ರೀ. ವಿರ್ಜ ಅಣ್ಣಾರಾಯರ ಮುಖಾಂತರ) ನಮ್ಮ ಕಡೆಗೆ ಬಂದುದರಿಂದ, ಅವನ್ನೇ ಲೇಖಕರಿಗೆ ಅಭಿನಂದನೆಗಳನ್ನರ್ಪಿಸಿ ಇಲ್ಲಿ ಪ್ರಕಟಿಸಿದ್ದೇನೆ. ಸತ್ತವರಿಗಾಗಿ ದುಃಖಪ್ರದರ್ಶಿಸುವುದು ನಮ್ಮ ಶೀಲವಲ್ಲ; ಆವರ ಚಾರಿತ್ರ್ಯದ ನೆನಹನ್ನು ಜಾಗೃತಗೊಳಿಸಿ, ಕನ್ನಡಿಗರನ್ನು ಮಾನವತೆಯತ್ತ ತಿರುಗಿಸುವುದು ನಮ್ಮ ಕೆಲಸ. ಜಯಂತಿ ಮುಂಕಾಸ್ತವನ್ನು ಮುನ್ನಿಸುವುದಿಲ್ಲ; ಕರ್ಮಯೋಗಿಗಳನ್ನು ಮುನ್ನಿಸುವದು. ಎಂದೂ ಕರ್ಮಯೋಗಿಗಳು ವಿರಾಮವನ್ನು ಬಯಸುವವರಲ್ಲವಾದುದರಿಂದ, ಶ್ರೀಮಾನ್ ಮಂಜಪ್ಪನವರಂತಹ ಕರ್ಮಯೋಗಿಗಳು, ಈಗ ಆಗಲಿದ್ದರೂ ಮತ್ತೆ ಕನ್ನಡನಾಡನ್ನೇ ತಮ್ಮ ಕಾರ್ಯರಂಗವನ್ನಾಗಿ ಆಯ್ದುಕೊಂಡು ಮರಳಿ ಬರಲಿ—ಎಂದು ನಿರಂತರ ಹಾರೈಸುತ್ತಿರುವೆವು.

—ಸಂ. ಜಯಂತಿ.

ನೆಲ್ಲೂರಿನಲ್ಲಿ ನಮ್ಮ ಏಜಂಟರು
ಶ್ರೀ. ಪಿ. ವ್ಹಿ. ಅಡಿಗಳ್
ಎನ್.ಸಿ.ಟಿ ಆರ್.ಲಿಡ್. ನೆಲ್ಲೂರ.

ರಾಯಚೂರಿನಲ್ಲಿ ನಮ್ಮ ಏಜಂಟರು
ಶ್ರೀ ಜಿ. ವೆಂಕಟೇಸ್ವಾಮಿ ಶೆಟ್ಟಿ
ಹಿಂದೂ ಎಜನ್ಸಿ.



೬೩. ಎಚ್ಚತ್ತ ಆಗ್ನೇಯ ಏಶಿಯ

ಲೇಖಕರು ಶ್ರೀ ಎಂ. ಹರಿದಾಸ ಆವರು, ವಿಶ್ವಸಾಹಿತ್ಯಮಾಲೆಯ ಗಣಿಯ ಕುಸುಮ ಪ್ರಕಾಶಕರು ಸಾಹಿತ್ಯ ಭಾಂಡಾರ, ಹುಬ್ಬಳ್ಳಿ.

'ಆಗ್ನೇಯ ಏಶಿಯಾ' ಎಂದರೆ ನಮ್ಮ ಭಾರತದ ಪೂರ್ವ ಮತ್ತು ಆಗ್ನೇಯದಲ್ಲಿರುವ ಬ್ರಹ್ಮದೇಶ, ಸಯಾಂ, ಇಂಡೋಚೀನಾ, ಮಲಯಾ, ಇಂಡೋನೇಶಿಯ ಮೊದಲಾದ ರಾಷ್ಟ್ರಗಳು. ಇವೆಲ್ಲ ಒಂದಿಲ್ಲೊಂದು ಪಶ್ಚೀಮದೇಶೀಯ ಸಾಮ್ರಾಜ್ಯಗಳ ಅಧೀನಪ್ರದೇಶಗಳಾಗಿದ್ದು, ಇದುವರೆಗೆ ಸ್ವಸ್ವರೂಪದ ಚಾರಿತ್ರಿಯಿಲ್ಲದೆ ಬಿದ್ದುಕೊಂಡಿದ್ದುವು. ಮೊನ್ನೆ ಮೊನ್ನೆ ಮುಗಿದ ಮಹಾಯುದ್ಧ, ಈ ರಾಷ್ಟ್ರಗಳನ್ನು ಎಚ್ಚರುಗೊಳಿಸುವ ಒಂದು ಒಳ್ಳೆಯ ಕೆಲಸವನ್ನು ಮಾಡಿತು. ಈ ರಾಷ್ಟ್ರಗಳ ಮೇಲೆ ಅಧಿಕಾರ ನಡೆಯಿಸುತ್ತಿದ್ದ ಬ್ರಿಟಿಷ್-ಫ್ರೆಂಚ್-ಡಚ್ಚರನ್ನು ಜಪಾನರು ತಮ್ಮ ಮೊದಲನೆಯ ಹಾರಿಕೆಯಲ್ಲಿಯೆ ಹಾರಿಸಿಬಿಟ್ಟು, ತಮ್ಮ ಅಡಳಿತದಲ್ಲಿ ಈ ಕ್ಷೇತ್ರಗಳನ್ನು ಸೇರಿಸಿಕೊಂಡು, ತಮ್ಮ ಧ್ಯೇಯಸಾಧನೆಗಾಗಿ — ಇಲ್ಲಿಯ ಸುಪ್ತವಾಗಿದ್ದ — ಕ್ಷಾತ್ರಶಕ್ತಿಯನ್ನೂ ದೇಶಾಭಿಮಾನವನ್ನೂ ಸ್ವಾತಂತ್ರ್ಯಪ್ರೀತಿಯನ್ನೂ ಎಚ್ಚರಿಸಿದರು. ಈ ಎಚ್ಚರು, ಬ್ರಿಟಿಷ್-ಡಚ್-ಫ್ರೆಂಚರ ಅಧಿಕಾರದ ಬಗೆಗೆ ಅಲ್ಲಿಯ ಜನರಲ್ಲಿ ಬೇಸರವನ್ನು ಹುಟ್ಟಿಸಿತಲ್ಲದೆ, ಜಪಾನಿಗಳ ಅಧಿಕಾರಾಪೇಕ್ಷೆಯ ಸ್ವಾರ್ಥಬುದ್ಧಿಯನ್ನೂ ಮನವರಿಕೆಮಾಡಿಕೊಟ್ಟಿತು. ಜಪಾನಿನ ಪತನದೊಂದಿಗೆ ಈ ರಾಷ್ಟ್ರಗಳು ತಂತಮ್ಮ ರೀತಿಯಲ್ಲಿ ಸ್ವತಂತ್ರವಾಗಿ, ತಂತಮ್ಮ ಸರಕಾರಗಳನ್ನು ರಚಿಸಿಕೊಂಡು ನಡೆಯಿಸಿ ಇವೆ. ಆದರೆ ಆಕ್ಷಯಸಂಪತ್ತಿನಿಂದ ಕೂಡಿದ ಈ ಪ್ರದೇಶಗಳನ್ನು ಕಳೆದುಕೊಳ್ಳುವುದೆಂದರೆ, ಪಶ್ಚಿಮದ ಸಾಮ್ರಾಜ್ಯಸಿಪ್ಸು ಸ್ಪೋಗಪ್ರಿಯ ರಾಷ್ಟ್ರಗಳಿಗೆ ಸ್ವಲ್ಪವೂ ಮನಸ್ಸಿಲ್ಲ. ಹಿಂದುಸ್ತಾನ್, ಬ್ರಹ್ಮದೇಶ, ಮಲಯಾಗಳನ್ನು ತನಗೆ ಉಳಿಸಿಕೊಳ್ಳಬೇಕಾದ ಬ್ರಿಟಿಷ್ ಸಾಮ್ರಾಜ್ಯ, ಇಂಡೋನೇಶಿಯಾವನ್ನು ಡಚ್ಚರಿಗೂ ಇಂಡೋಚೀನವನ್ನು ಫ್ರೆಂಚರಿಗೂ ಉಳಿಸಿಕೊಡಬೇಕಾಗಿದೆ. ಡಚ್ಚರೊಂದಿಗೂ ಫ್ರೆಂಚರೊಂದಿಗೂ ಆ ಪ್ರದೇಶದ ವ್ಯಾಪಾರವ್ಯವಸಾಯಗಳಲ್ಲಿ ಬ್ರಿಟನ್ನು ನೂರಾರು ಕೋಟಿ ಬಂಡವಾಳ ತೊಡಕಿಸಿದುದರಿಂದ, ಯುರೋಪಿನ ರಾಷ್ಟ್ರಗಳ ಬಗೆಗೆ ಸ್ವಾತಂತ್ರ್ಯ, ಸಮತೆ, ಬಂಧುಭಾವಗಳ ಪ್ರಜ್ಞಾವಾದವನ್ನು ಬಳಸುವ ಬ್ರಿಟಿಷ್ ಸಾಮ್ರಾಜ್ಯವು, ಆಗ್ನೇಯ ಏಶಿಯದ ಈ ರಾಷ್ಟ್ರಗಳನ್ನು ಬಿಗಿಯಾಗಿ ಬಂಧಿಸುವುದರಲ್ಲಿದೆ; ಬಂಧಿಸಲೆಳಸುವ ಮಿತ್ರ ರಾಷ್ಟ್ರಗಳಿಗೆ ಸಹಾಯ ಮಾಡಲಿಕ್ಕೆ ಮುಂದಾಗಿದೆ. ಸದ್ಯ ಇಂಡೋನೇಶಿಯದ ಮೇಲೆ ಡಚ್ ಜನರ ದಾಳಿನಡೆದಿದೆ. ಇಂಡೋಚೀನ ಸ್ವತಂತ್ರ ಸರಕಾರದ ಮೇಲೆ ಫ್ರೆಂಚ್ ಜನರು ದಾಳಿ ಮಾಡುತ್ತಿದ್ದಾರೆ. ಬ್ರಿಟಿಷರು ಈ ದಾಳಿಗಾರರಿಗೆ ಪ್ರತ್ಯಕ್ಷವಾಗಿ ನೆರವನ್ನು ಕೊಡುತ್ತಲಿದ್ದಾರೆ.

ಇಪ್ಪೆಲ್ಲ ಮಾತೂ ಕನ್ನಡಿಗರಿಗೆ ಜೆನ್ನಾಗಿ ತಿಳಿಯುವಂತೆ ವಿಷಯಗಳನ್ನು ಸಂಗ್ರಹಿಸಿ, ಶ್ರೀ. ಹರಿದಾಸರು ಈ ಪುಸ್ತಕವನ್ನು ಬರೆದು ಪ್ರಕಟಿಸಿದ್ದಾರೆ. ಇಂಡೋನೇಶಿಯ, ಬ್ರಹ್ಮದೇಶ, ಥಾಯಿಲಂಡ್, ಮಲಯಾ, ಇಂಡೋಚೀನಗಳ ಎಲ್ಲ ಪ್ರಾಚೀನ-ಅರ್ವಾಚೀನ ಇತಿಹಾಸವೂ, ಪ್ರದೇಶ ಪರಿಚಯವೂ, ವರ್ತಮಾನ ಪರಿಸ್ಥಿತಿಯೂ ಮನವರಿಕೆಯಾಗುವಂತೆ — ತಿಳಿಗನ್ನಡದಲ್ಲಿ — ಬರೆದ ಈ ಪುಸ್ತಕ ಸಕಾಲದಲ್ಲಿಯೆ ಪ್ರಕಟವಾಗಿದೆಯೆಂದು ಹೇಳಬೇಕಾಗಿದೆ. ಏಕೆಂದರೆ ಈ ಆಗ್ನೆಯ ಏಶಿಯಾ ರಾಷ್ಟ್ರಗಳ ಸಂಪೂರ್ಣ ಪರಿಚಯ ಭಾರತೀಯರಿಗಿಸಿಕೊಳ್ಳುವವರಿಗೆಲ್ಲ ಇರಬೇಕಾದುದು ಅತ್ಯಗತ್ಯದ ಮಾತಾಗಿದೆ. ಈ ರಾಷ್ಟ್ರಗಳ ಸ್ವಾತಂತ್ರ್ಯಯುದ್ಧ ಭಾರತೀಯರ ಸ್ವಾತಂತ್ರ್ಯಯುದ್ಧಕ್ಕೆ ಬಲವನ್ನು ಕೊಡುವಂತಹದಾಗಿದೆ. ಇವುಗಳ ಸೋಲು ಭಾರತೀಯ ಸ್ವಾತಂತ್ರ್ಯವನ್ನು ದೂರಕ್ಕೆ ಒಯ್ಯಬಹುದಾಗಿದೆ; ಗೆಲವು ಭಾರತೀಯರ ಪರಾಧೀನಪಾಶವನ್ನು ಹರಿಯಬಹುದಾಗಿದೆ.

ಇಂತಹ ಪುಸ್ತಕಗಳ ಬಾಹ್ಯ ಸೌಂದರ್ಯದ ಬಗೆಗೆ ಹೆಚ್ಚು ಲಕ್ಷ್ಯ ಕೊಡಬೇಕಾದುದು ಆವಶ್ಯಕವಾದರೂ, ಈಗಿನ ನಿಯಂತ್ರಣದ ಕಾಲದಲ್ಲಿ ಹೇಗಾದರೂ ಪುಸ್ತಕ ಬೆಳಕಿಗೆ ಬಂದರೆ ಅದೇ ಒಂದು ದೊಡ್ಡ ಮಾತಾಗಿದೆ. ಶ್ರೀ ಹರಿದಾಸರು ಕನ್ನಡಿಗರಿಗೆ ಇದೊಂದು ಉಪಯುಕ್ತ ಪುಸ್ತಕವನ್ನು ಒದಗಿಸಿಕೊಟ್ಟು ಉಪಕಾರ ಮಾಡಿದ್ದಾರೆ. ಅಲ್ಲರ್ಯೂ ಓದಬೇಕಾದ ಪುಸ್ತಕ.

—ಪಿ. ಪಿ. ಎಸ್. ರಾವ್

೯೮. ಸೂಜಿ-ಶಿಲ್ಪಕಲೆ

(ಸಚಿತ್ರ)

ಬರೆದವರು ಶ್ರೀ. ಹಳಪೇಟಿ ಚಿಂತಾಮಣರಾಯರು. 'ಸೂಚಿ ಶಿಲ್ಪವಿಶಾರದ.' ಪ್ರಕಾಶಕರು ಡಾ. ಕಮಲಾಪುರ ಕಾಂತರಾಯರು. ಕ. ವಿ. ನ. ಸಂಘ, ಧಾರವಾಡ. ಬೆಲೆ ಸಾದಾ ಪ್ರತಿಗೆ ೩-೪-೦. ಒಳ್ಳೆಯ ಪ್ರತಿಗೆ ೩-೦-೦.

ಹಳ್ಳಿಗೊಂದು ಹನುಮನ ಗುಡಿ, ಆಗಸೆ ಇದ್ದೇ ಇರುವಂತೆ ಸ್ತ್ರೀಯಿದ್ದ ಮನೆಗೊಂದು ಸೂಜಿ ಇರುವುದು ಖಂಡಿತ. ಅಳಪಿಗೆಟ್ಟಿದ್ದಾದರೂ ಸರಿ, ಇರುವುದಂತು ನಿಜ. ಸೂಜಿಯಿಲ್ಲದ ಮನೆಗಳ ಸಂಖ್ಯೆ ಊರಿನ ಕುರುಡರ ಸಂಖ್ಯೆಯಷ್ಟೇ ಎನ್ನು-

ಬಹುದು. ಈ ಸೂಜಿ, ದಾರ ಇದ್ದ ಮನೆಗಳಿಗೆ ಅವುಗಳ ಚಾತುರ್ಯವನ್ನು ಸೂಚಿಸುವ ಪುಸ್ತಕ ಒಂದು ಅತ್ಯಗತ್ಯವೆಂದು ತಿಳಿದುಕೊಂಡು "ಸೂಚಿ ಶಿಲ್ಪಕಲೆ" ಎಂಬ ಉಪಯುಕ್ತವಾದ ಹೊತ್ತಿಗೆಯನ್ನು ನಾಡಿನ "ಅಕ್ಕರೆಯ ಅಕ್ಕತಂಗಿಯರಿಗೆ" ಒದಗಿಸಿಕೊಟ್ಟಿದ್ದಾರೆ ಶ್ರೀ. ಹಳಪೇಟೆ ಚಿಂತಾಮಣಿ ಅವರು. ಶ್ರಮವಹಿಸಿ ಈ ಹೊತ್ತಿಗೆಯನ್ನು ಒದಗಿಸಿಕೊಟ್ಟ ಉಪಕಾರಕ್ಕೆ ನಾಡಿನ ಅಕ್ಕ-ತಂಗಿಯರು ತಲೆಬಾಗುವರಲ್ಲದೆ ಅಕ್ಕರೆಯ ಆಶೀರ್ವಾದವು ಅವರಿಗಿದೆ ಎಂದು ಹೇಳದಿರಲಾರೆ.

ಕಸುಬು, ಕೆಲಸ, ಕೈಗಾರಿಕೆ ಎಂದು ಕೂಗಿಡುವ ಈ ಕಾಲದಲ್ಲಿ ಇಂತಹ ಹೊತ್ತಿಗೆಗಳು ಹೊರಡಲೆಬೇಕು ಎಂದು ಯಾರೂ ಹೇಳಬಹುದಾಗಿದೆ. ಕನ್ನಡ ಪುಸ್ತಕ ಪ್ರಪಂಚದಲ್ಲಿ ಇಲ್ಲಿಯವರೆಗೂ ಇಂತಹ ಪುಸ್ತಕವನ್ನು ಹೊರಡಿಸುವ ಪಾಪಕ್ಕೆ ಯಾರೂ ಹೊಣೆಗಾರರಾಗಿರಲಿಲ್ಲ. ಶ್ರೀ. ಹಳಪೇಟೆ ಅವರೇ ಮೊದಲಿಗರಾಗಿ ಈ ಹೊಣೆಗಾರಿಕೆಯ ಹೊತ್ತಿಗೆಯನ್ನು ಹೊರಡಿಸಿ ಪಾಪಕ್ಕೆ ಪರಿಹಾರ ತಂದದ್ದಲ್ಲದೆ ಪೂಗಣ್ಣಿಗೆ ಹೊಳಪನ್ನು ಕೊಟ್ಟಿದ್ದಾರೆ ಎನ್ನಬಹುದು.

ಹೊಲಿಗೆಯ ಕೆಲಸ ಹೇಳಿಕೊಡುವುದೆಂದರೆ ತೂಕಡಿಸುವ ಮಗುವಿಗೆ ತುತ್ತುಣಿಸುವಂತಹ ತಾಳ್ಮೆಯ ಕೆಲಸ. ಎದುರಿಗೆ ಕುಳಿತು ಹೇಳುವುದೆಂದರೇನೇ ತಲೆಚಿಟ್ಟುಬರುವ ಕಸುಬು. ಇಂತಹ ಕೈಗಾರಿಕೆಯನ್ನು ಅಕ್ಷರಗಳ ಮುಖಾಂತರವೇ ಹೇಳಿ, ಕತ್ತರಿಯನ್ನು ಹುಡುಕಿಸುವ ಕುತೂಹಲವನ್ನು ಕೆರಳಿಸಿದ್ದಾರೆ. ಈ ಸಾಹಸವು ಕತ್ತರಿ, ಲೇಖನಿ ಎರಡನ್ನೂ ವಶಪಡಿಸಿಕೊಂಡ ಅಸಾಮಿಗೇ ಸಹಜ. ಅಲ್ಲದೆ "ಶಾಸ್ತ್ರ ಶುದ್ಧ ಸೂಚಿ ಶಿಲ್ಪಕಲೆ" "ಶರೀರ ಶಾಸ್ತ್ರ" "ಅನುರೂಪ ಉಡುಪು" "ಕಸೂತಿಯ ಕಲೆ" ಮುಂತಾದ ಭಾಗಗಳಲ್ಲಿ, ಶ್ರೀ ಹಳಪೇಟೆಯವರ ಕೈಯ ಕತ್ತರಿಯಷ್ಟೇ ಸರಳವಾಗಿ ಲೇಖನಿಯು ಪಳಗಿದೆ.

ಸಂಪಿಗತನದ ನಿಪುಣತೆಯನ್ನು ತೋರ್ಪಡಿಸಲು ಅತಿರೇಕವಾದ ಹಲವು ವಿಷಯಗಳು ವಿಶದವಾಗಿವೆ "ಶಾಸ್ತ್ರಶುದ್ಧ ಸೂಚಿ ಶಿಲ್ಪಕಲೆ" ಎಂಬ ಭಾಗದಲ್ಲಿ. ಅಳತೆ ತೆಗೆದುಕೊಳ್ಳುವ ಬಗ್ಗೆ ಮಾನವನಿಗೂ ಸೂಚಿ ಶಿಲ್ಪಿಗತನಕ್ಕೂ ಸಂಬಂಧಿಸಿದ ಇತಿಹಾಸವೇ ಅಡಗಿದೆ "ಶರೀರ ಶಾಸ್ತ್ರ" ಎಂಬ ಅಂಶದಲ್ಲಿ. 'ಮಾನವನ ರೂಪಕ್ಕೆ ಹೆಚ್ಚು ಸೌಂದರ್ಯವನ್ನು ತರುವ ಹೊಣೆ ಸೂಚಿ ಶಿಲ್ಪಿಯದು' ಎಂಬ ಸತ್ಯದ್ರಜವೇ ಹಾರಿದೆ "ಅನುರೂಪ ಉಡುಪು" ಎಂಬ ಭಾಗದಲ್ಲಿ. ಇದನ್ನು ಯಾರೂ ಅಲ್ಲೆನ್ನುವಂತಿಲ್ಲ. (ಕುರುಬನು ರಾಜಕುವರಿಗೆ ತಕ್ಕವರನಂತೆ ಕಂಡದ್ದು ಸಿಂಪಿಗನ ಕೈಪಾಡದಿಂದಲೇ ಎಂದು ಹೇಳಬೇಕೇ!) ಶಿಸ್ತನ್ನು ಒತ್ತಿ ಹೇಳಿರುವ "ಸಾಧನಸಾಮಗ್ರಿಗಳು" ಎಂಬ ಭಾಗವು ಮನೆಯ ಅಚ್ಚುಯಂತಿದೆ. ಬಟ್ಟೆಗಳ ಹನ್ನೆಲೆ, ಅದಕ್ಕೆ ಆಂಟಿಕೊಂಡು ಬಂದ ಹೆಸರು, ಹೆಸರಿಗೆ ತಕ್ಕ ವಸ್ತ್ರ 'ಆಯುದೋ ಅಲ್ಲವೋ!' ಎಂಬ ಸಂಶಯವನ್ನು ನಿವಾರಣೆಮಾಡಿಕೊಳ್ಳುವ ಬಗೆ ಇವೆಲ್ಲವು ಅಡಗಿವೆ "ಬಟ್ಟೆಯ ಪರಿಚಯ"ದಲ್ಲಿ. ಹೊಲಿಗೆಗಾಗಿ ಉಪಯೋಗಿಸುವ ಯಂತ್ರದ ಸಲಕರಣೆಗಳನ್ನು ನೋಡಿಕೊಳ್ಳುವ ರೀತಿ, ಅದು ತೊಂದರೆಕೊಡುತ್ತಿದ್ದರೆ ಅದನ್ನು ಕಂಡು ಹಿಡಿದು ನಿವೃತ್ತಿಮಾಡಿಕೊಳ್ಳುವ ಕ್ರಮ ಅಡಕವಾಗಿವೆ "ಯಂತ್ರದ ಪರಿಚಯ"ದಲ್ಲಿ. ಅಲ್ಲದೆ ಗೃಹದ ಶೋಭೆಗೂ ಗೃಹಿಣಿಯ ಬೆಡಗಿಗೂ ಮಗುವಿನ ಅಂದಕ್ಕೂ, ಮಕ್ಕಳ ಜೀವನಕ್ಕೂ ಬೇಕಾಗುವ ಹಲಕೆಲವು ಉಡಿಗೆ-ತೊಡಿಗೆಗಳನ್ನು ಹೊಲಿಯುವ ವಿಧಾನಗಳ ವಿವರಗಳು ಹೇಳಲ್ಪಟ್ಟಿವೆ ಇನ್ನು ಚಿತ್ರಿಸಿಕೊಳ್ಳುವ, ಮಡಿಕೆಮಾಡಿಕೊಳ್ಳುವ, ಕತ್ತರಿಸುವ ನಿಯಮಗಳು ಒಳಗೊಂಡಿವೆ. ಬಟ್ಟೆಗಳಿಗಾದ ಕಲೆ ಮತ್ತು ಕೊಳೆಯನ್ನು ತೆಗೆಯುವುದರ ಕ್ರಮ, ತೆಗೆಯುವುದಕ್ಕೆ ಉಪಯೋಗಿಸುವ ವಸ್ತುಗಳ ಪಟ್ಟಿ, ಹೆಸರುಹಾಕುವ ವಿಧಾನ ಎಲ್ಲವೂ ವಿವರವಾಗಿವೆ. "ಸೂಚಿ ಶಿಲ್ಪಕಲೆ"ಯಲ್ಲಿ.

"ಇದಿಷ್ಟೆ ಇದೆಯಲ್ಲ, ಮತ್ತಷ್ಟು ಹೊಲಿಗೆಗಳನ್ನು ಹೇಳಿದ್ದರೆ ಮೇಲಿತ್ತು" ಎಂಬ ಕೊನೆಗಾಣದ ಆಶೆ ಕೊನರುತ್ತದೆ. ಆಶೆಯ ಕುಡಿಗೆ ಇಲ್ಲಿ ಕತ್ತರಿಬಿದ್ದಿದ್ದರೂ, ಮುಂದೆ ಟಿಸಿಲೊಡೆಸುವ ಸದುದ್ದೇಶ "ಕೃತಜ್ಞತೆ"ಯಲ್ಲಿ ಕಂಡುಬರುತ್ತದೆ. ಶ್ರೀಯುತ ಚಿಂತಾಮಣಿಯವರ ಸದುದ್ದೇಶವು ಆದಷ್ಟು ಬೇಗ ಮೂಡಿಬರಲಿ; ಇವರಂತೆ ಇನ್ನೂ ಹಲವರು ಈ ಕಲಾವಾಜ್ಮಯವನ್ನು ವಿಶಾಲಪಡಿಸಲಿ; ಆದರ ಲಾಭ ಆದಷ್ಟು ಬೇಗ ಕನ್ನಡಿಗರ ಕೈ ಸೇರಲಿ.

ಈ "ಸೂಚಿ ಶಿಲ್ಪಕಲೆ"ಯು ಸಲಿಗೆಯ ಉಪಾಧ್ಯಾಯಿನಿಯಂತೆ ಇರುವುದರಿಂದ ಸೂಜಿ, ದಾರ ಹಿಡಿದುಲು ಬಂದ ಇಡೀ ಕನ್ನಡಿತಿಯರ ಗೃಹಗಳಲ್ಲಿ ಆವಶ್ಯಕವಾಗಿ ಇರಬೇಕಾದ ಹೊತ್ತಿಗೆ ಎಂದು ಹೇಳದಿರಲಾರೆ.

—ತೊಗರಿ ಸರ್ವಮಂಗಳಾಂಬಾ.

ಸೊಲ್ಲಾಪುರದಲ್ಲಿ ನಮ್ಮ ಏಜಂಟರು

ಶ್ರೀ. ವಿ. ಎಲ್. ಬರಾಜದಾರ

ನ್ಯೂಜ್ ಏಜಂಟ್

ಸಾಗರದಲ್ಲಿ ನಮ್ಮ ಏಜಂಟರು

ನೇ. ಜಲಂದರ ನ್ಯೂಜ್ ಏಜನ್ಸಿ

ಸಾಗರ (ಶಿವಮೊಗ್ಗಾ)

ಸಾದರ ಸ್ವೀಕಾರ

★

೧೧೬. **ಸಮ್ರಾಟ್ ಹರ್ಷವರ್ಧನ** (ಐತಿಹಾಸಿಕ ಕಾದಂಬರಿ). ಲೇಖಕರು ಶ್ರೀಮಾನ್ 'ನಾಗೇಶ'. ಧಾರವಾಡದ 'ಪ್ರತಿಭಾ' ಗ್ರಂಥಮಾಲೆಯ ೩ನೆಯ ವರ್ಷದ ೬ನೆಯ ಕಿರಣ. ಕ್ರೌ. ಅ. ೧೬೨ ಪುಟಗಳು ಬೆಲೆ ೨-೦-೦.

೧೧೭. **ಶ್ರೀಜಗದ್ಗುರು ವಿಶ್ವಾರಾಧ್ಯಾಷ್ಟೋತ್ತರ ಶತನಾಮಾವಲಿ** (ಸಂಸ್ಕೃತ ಸ್ತೋತ್ರಗ್ರಂಥ). ಶ್ರೀಜಗದ್ಗುರು ವೀರಭದ್ರ ಶಿವಾಚಾರ್ಯ ಮಹಾಸ್ವಾಮಿ ವಿರಚಿತಾ. ಪ್ರಕಾಶನ ಸ್ಥಳ ಜಂಗಮವಾಡಿ ಮಠ, ಕಾಶಿ. ಡೆ. ಗ್ರೈದ ೩೪ ಪುಟಗಳು. ಬೆಲೆ ೦-೩-೦.

೧೧೮. **ನಾಕ್ಟೆತ್ರ** (ಮಾಸಪತ್ರಿಕೆಯ ದೀಪಾವಳಿಯ ವಿಶೇಷ ಸಂಚಿಕೆ). ಸಂಪಾದಕರು ಶ್ರೀ. ಮಾ. ನಾ. ಚೌಡಪ್ಪನವರು. ೧೨೧ ಸುಲ್ತಾನ್ ಪೇಟೆ—ಬೆಂಗಳೂರು ನಗರ. ಕ್ರೌ. ೧೪ ದ ೬೮ ಪುಟಗಳು. ಬೆಲೆ ೦-೬-೦.

ಪತ್ರಿಕೆಯ ಉದ್ದೇಶವನ್ನು ಸರಿಯಾಗಿ ಅರಿತುಕೊಂಡು, ಅದನ್ನು ಸಾಧಿಸಲು ಹೊರಟ ಸಂಪಾದಕರಲ್ಲಿ ಶ್ರೀಮಾನ್ ಚೌಡಪ್ಪನವರು ನಿಪುಣರಾದವರು. ಕಣ್ಣು ಮನಗಳನ್ನು ಸೆಳೆದು-ಕೊಳ್ಳಬಲ್ಲ ಆಂತರಂಗ-ಬಹಿರಂಗಗಳನ್ನುಳ್ಳ ಉತ್ತಮ ಸಂಚಿಕೆ.

೧೧೯. **ಕರ್ನಾಟಕ ಕಲಾಲರು** (ಕಲಾಲರ ಮೂಲವನ್ನು ತಿಳುಹಲು ಬರೆದ ಗ್ರಂಥ.) ಲೇಖಕರು ಶ್ರೀಮಾನ್ ಕಲಾಲ ಚೂಡಾಮಣಿರಾವ್. ಪ್ರಕಾಶಕರು: ಸೂರ್ಯವಂಶ ಕ್ಷತ್ರಿಯ ಸಮಾಜ, ಸಿಗ್ಗಾಂವ, ಜಿ ಧಾರವಾಡ. ಕ್ರೌ.ಅ. ೯೬ ಪುಟಗಳು. ಬೆಲೆ ೧-೦-೦.

ಕಲಾಲರ ಪವಿತ್ರ ಹಿಂದುತ್ವವನ್ನು ಐತಿಹಾಸಿಕ ಕಥೆಗಳ ಆಧಾರದಿಂದ ಸಿದ್ಧಮಾಡಿ ತೋರಿಸಿದ ಲೇಖಕರ ಈ ಕೆಲಸವು ಹಿಂದೂ ಸಮಾಜದ ಸಂಘಟನೆಗೆ ಪ್ರಯೋಜನಕಾರಿಯಾಗಿ ಪರಿಣಮಿಸದಿರದು ಲೇಖಕರ ಬಯಕೆ ಪ್ರಶಂಸನೀಯ.

೧೨೧. **ತೊದಲ್ನುಡಿ** (ಕೈಬರೆಹದ ವಾಣ್ಮಾಸಿಕ ಪತ್ರಿಕೆ) ವಿಜಾಪುರ ಜಿಲ್ಲೆಯ ಬಬಲೇಶ್ವರದ ಮೂಲಶಿಕ್ಷಣ ಶಾಲೆಯಿಂದ ಪ್ರಕಟವಾಗುವುದು. ಸಂಪಾದಕರು ಶ್ರೀ. ಪ್ರ ವಿ. ಕರ್ಜಗಿ. ಸಹ ಸಂಪಾದಕರು ಶ್ರಿ.ಗಳಾದ.ಗು. ಹೊ.ಕಾಖಂಡಿಕಿ ಮತ್ತು ವೆ. ರಾ. ಕುಲಕರ್ಣಿ ಅವರು. ಸಲಹೆಗಾರರು ಶ್ರೀ. ಕೃ. ಭಿ. ಒಡೆಯರ; ಬರೆದು ಜೆಳಕಿಗೆ ತಂದವರು ಶ್ರೀ. ಸಿ. ಮೇ. ಕೋಟ್ಯಾಳ ಮತ್ತು ಶ್ರೀ. ಸಂ. ರಾ. ಬಿರಾದಾರ.

ಶಾಲೆಯ ಅಧ್ಯಾಪಕರೂ ವಿದ್ಯಾರ್ಥಿಗಳೂ ಬರೆದ ಪ್ರಬಂಧ, ಕಥೆ, ಕವಿತೆ ಜನಪದಸಾಹಿತ್ಯಸಂಗ್ರಹ ಮೊದಲಾದುವು ಒಳ್ಳೆಯ ರೀತಿಯಲ್ಲಿ ಸಂಪಾದಿತವಾಗಿವೆ ಇದರಲ್ಲಿ. ಸಂಪಾದಕೀಯದಲ್ಲಿ ಹೇಳಿದ ಐದೂ ಉದ್ದೇಶಗಳು ಮನನೀಯವಾಗಿವೆ. ಇದೇ ಉದ್ದೇಶಗಳನ್ನಿರಿಸಿಕೊಂಡು, ಪ್ರತಿಯೊಂದು ಪ್ರಾಥಮಿಕ ಶಾಲೆಯಲ್ಲಿಯೂ ಇಂತಹ ಕೈಬರೆಹದ ಪತ್ರಿಕೆಗಳು ಹೊರಡತೊಡಗಿದರೆ, ವಿದ್ಯಾರ್ಥಿಗಳಲ್ಲಿ ಬಹುಶ್ರುತತೆ ಹೆಚ್ಚಬಹುದಲ್ಲದೆ, ಆ ಆ ಹಳ್ಳಿಗಳಲ್ಲಿಯ ಸಾಹಿತ್ಯ, ಗಾದೆಮಾತು, ಪಡೆಮಾತುಗಳನ್ನು ಸಂಗ್ರಹಿಸಲಿಕ್ಕೂ ಅನುಕೂಲವಾಗುವುದು. ನಮ್ಮ ಪ್ರಾಥಮಿಕ ಶಿಕ್ಷಕರು ಆದರ್ಶದ ಕಡೆಗೆ ಮನಸ್ಸಿರಿಸಿ ಕೆಲಸಮಾಡಲು ತೊಡಗಿದರೆ, ಹಳ್ಳಿಗಳನ್ನೂ ಸಂಸ್ಕೃತಿಯ ಸಾಗರಗಳನ್ನಾಗಿಸಬಲ್ಲರು. ಬಬಲೇಶ್ವರದ ಶಿಕ್ಷಕರ ಈ ಕಾರ್ಯಾರಂಭವು, ಎಲ್ಲ ಹಳ್ಳಿಯ ಶಾಲೆಗಳಿಗೆ ಮಾದರಿಯೆನಿಸಲಿ.

೧೨೨. **ಕತೆಗಾರ** (ಮಾಸಪತ್ರಿಕೆಯ ೧೪ನೆಯ ವರ್ಷದ ವಿಶೇಷ ಸಂಚಿಕೆ). ಸಂಪಾದಕರು ಶ್ರೀಮಾನ್ ಜಿ.ಎ. ನರಸಿಂಹ ಮೂರ್ತಿ ಬಿ.ಎಸ್.ಸಿ. ಪ್ರಕಾಶಕರು ಶ್ರೀ. ಬಿ. ಟಿ. ಶ್ರೀಕಂಠಯ್ಯ. ಆರ್. ಎನ್. ನ್ಯೂಜ್ ಏಜನ್ಸಿ, ಚಿಕ್ಕಪೇಟೆ—ಬೆಂಗಳೂರು ಸಿಟಿ. ಕ್ರೌ. ೧೪ ದ ೧೧೨ ಪುಟಗಳು. ಬೆಲೆ ೦-೧೪-೦.

ರಸವತ್ತಾದ ಕತೆಗಳಿಂದಲೂ ಸುಂದರವಾದ ಹೊರರೂಪದಿಂದಲೂ ಸಂಚಿಕೆ ಕಣ್ಮನಗಳನ್ನು ಸೆಳೆಯುವಂತಿದೆ.

೧೨೩. **ಎತ್ತಿದ ಕೈ** (ಜಪ್ತು ಏಕಾಂಕ ನಾಟಕಗಳ ಸಂಗ್ರಹ) ಬರೆದವರು ಶ್ರೀಮಾನ್ ರಂ. ಶ್ರೀ. ಮುಗಳಿ ಅವರು. ಧಾರವಾಡದ ಮನೋಹರ ಗ್ರಂಥಮಾಲೆಯ ೭೮ನೆಯ ಪ್ರಕಟನೆ. ಕ್ರೌ. ಅ. ೧೬೦ ಪುಟಗಳು. ಬೆಲೆ ೧-೧೪-೦.

೧೨೪. **ದತ್ತವಾಣಿ** (ಕವಿ-ಕೃತಿ ಪರಿಚಯ). ಲೇಖಕರು ಶ್ರೀ. ಮಿರ್ಜಿ ಅಣ್ಣಾರಾಯರು. ಧಾರವಾಡದ ಮನೋಹರ ಗ್ರಂಥ ಪ್ರಕಾಶನ ಸಮಿತಿಯ 'ಜ್ಞಾನಪ್ರಸಾರಕ' ಗ್ರಂಥಮಾಲೆಯ ೧೧ನೆಯ ಕುಸುಮ. ಕ್ರೌ.ಅ. ೧೧೬ ಪುಟ.|ಬೆಲೆ ೧-೪-೦.

೧೨೫. **ಭಗ್ನ ಮಂದಿರ** (ಸ್ವತಂತ್ರ ಸಾಮಾಜಿಕ ಕಾದಂಬರಿ). ಬರೆದವರು 'ಹೇಮಂತ'. ಧಾರವಾಡದ ಮನೋಹರ ಗ್ರಂಥಮಾಲೆಯ ೭೯-ಅಂನೆಯ ಕುಸುಮ. ಕ್ರೌ.ಅ. ೩೫೦ ಪುಟಗಳು. ಬೆಲೆ ೩-೧೨-೦.

೧೨೬. **ವಿವೇಕ ಚೂಡಾಮಣಿ** (ಅನುವಾದಿತ—ಪದ್ಯಮಯ ಆಧ್ಯಾತ್ಮಿಕ ಗ್ರಂಥ). ಅನುವಾದಕರು ಶ್ರೀ. ಎಂ. ಎಸ್. ಸುಬ್ಬಣ್ಣ ಬಳ್ಳಾರಿ. ಪ್ರಕಾಶಕರು ಎಸ್. ಎಸ್ಸ್ ಎನ್. ಬುಕ್‌ಡಿಪೊ, ಬೆಂಗಳೂರು ನಗರ. ಕ್ರೌ. ಅ. ೧೬೦ ಪುಟ. ಬೆಲೆ ೧-೮-೦.

೧೨೭ **ಮಾತ್ರೆಗಳು** (ಕಿರುಗತೆಗಳ ಸಂಕಲನ). ಬರೆದವರು 'ಬೀಜಿ—ಬಳ್ಳಾರಿ.' ಪ್ರಕಾಶಕರು ಶ್ರೀ. ಭಾಲಚಂದ್ರ ಘಾಣೇಕರ್, ಸಮಾಜ ಪುಸ್ತಕಾಲಯ, ಧಾರವಾಡ. ಕ್ರೌ. ಅ. ೬೪ ಪುಟ. ಬೆಲೆ ೦-೧೨-೦.

೧೨೮. **ಬೆಳಗಾಂವಿಯಲ್ಲಿ ಕನ್ನಡ ಚಳವಳಿ ಸಮಸ್ಯೆ** ವಿವೇಚನಾತ್ಮಕ ಕಿರುಹೊತ್ತಗೆ). ಬರೆದವರು ಶ್ರೀಮಾನ್

ಹಾರನಹಳ್ಳಿ ರಾಮಸ್ವಾಮಿ. ಬಿ. ಕೆ. ಮಾಡೆಲ್ ಹೈಸ್ಕೂಲ್ ಬೆಳಗಾಂವಿ. ಲೇಖಕರೇ ಪ್ರಕಾಶಕರು. ಕ್ರೌ. ಅ. ೩೬ ಪುಟಗಳು. ಬೆಲೆ ೦-೫-೦.

೧೫೯. ಚಂದ್ರಗುಪ್ತ (ನಾಟಕ). ಲೇಖಕರು ಶ್ರೀಮಾನ್ ಮಾ. ನಾ ಚೌಡಪ್ಪ. ಬೆಂಗಳೂರು. ಪ್ರಕಾಶಕರು ಚಿತ್ರಾ ಏಜೆನ್ಸೀಜ್, ೧೨೧ ಸುಲ್ತಾನ್‌ಪೇಟೆ— ಬೆಂಗಳೂರು ನಗರ. ಕ್ರೌ. ಅ. ೨೨೯೦ ಪುಟಗಳು. ಬೆಲೆ ೧-೦-೦.

೧೬೦. ಪುಸ್ತಕ ಪ್ರಪಂಚ (ಮಾಸಪುಸ್ತಕ). ಸಂಪಾದಕರು ಶ್ರೀಮಾನ್ ಜಿ. ಹನುಮಂತರಾವ್ ಎಂ ಎ. ಪ್ರಕಾಶಕರು ಶ್ರೀ. ಎಸ್. ಬಿ. ಶ್ರೀನಿವಾಸರಾವ್. ಮೈಸೂರು ಸ್ಪೇಟ್ ಅಡಲ್ಟ್ ಎಜ್ಯುಕೇಶನ್ ಕೌನ್ಸಿಲ್, ಮೈಸೂರು. ಕ್ರೌ. ಅ. ೭೪ ಪುಟಗಳು. ವಾರ್ಷಿಕ ಚಂದಾ ೪-೦-೦. ಪ್ರತಿಸಂಚಿಕೆಗೆ ೦-೬-೦.

ಮೈಸೂರಿನಲ್ಲಿ ಹೊಸತಾಗಿಯೆ ಹೊರಟಿರುವ ಅತ್ಯುತ್ತಮ ಮಾಸಪುಸ್ತಕವಿದು. ಇಂಗ್ಲಿಷಿನಲ್ಲಿ ಪ್ರಕಟವಾಗುವ 'ಲಿಟರರಿ ಡೈಜೆಸ್ಟ್' 'ರೀಡರ್ಸ್ ಡೈಜೆಸ್ಟ್' ಮಾದರಿಯನ್ನಿರಿಸಿಕೊಂಡು ಸಂಚಾಲಕರು ಕನ್ನಡದಲ್ಲಿ ಇದನ್ನು ಪ್ರಾರಂಭಿಸಿದ್ದಾರೆ. ಸಾಹಿತ್ಯವಿಜ್ಞಾನಗಳ ಹೊಸ ಹೊಸ ರೀತಿಗಳನ್ನು ಅರಿತುಕೊಳ್ಳಬೇಕೆಂದು ಅಪೇಕ್ಷಿಸುವವರು ತಪ್ಪದೆ ಈ ಪತ್ರಿಕೆಯನ್ನು ತರಿಸಿಕೊಳ್ಳಬೇಕು. ಸುಂದರವಾದ ಮುದ್ರಣ. ಉತ್ತಮವಾದ ಕಾಗದ. ಅಂದವಾದ ಸಂದರ್ಭ ಚಿತ್ರಗಳು ೪ ರೂಪಾಯಿ ಚಂದಾಹಣವೆಂದರೆ ತೀರ ಸುಲಭ ಬೆಲೆಯೆಂದು ಯಾರೂ ಕೇಳಬಹುದು. ಸಂಪಾದಕರ ಇಂದಿನ ಈ ಪ್ರಾರಂಭಪ್ರಯತ್ನ ಯಶಸ್ವಿಯಾಗಲಿ! ಪತ್ರಿಕೆ ಬಹುಕಾಲ ಬಾಳಿ ಜನರಲ್ಲಿ ಸಂಸ್ಕೃತಿಯನ್ನು ಹರಡಲಿ!

೧೬೧. ಲಂಚಪ್ರಪಂಚ (ಐದು ಕತೆಗಳ ಸಂಕಲನ) ಬರೆದವರು ಶ್ರೀ. ಮು ಶ್ರೀಧರಮೂರ್ತಿ. ಚಿತ್ರದುರ್ಗದ ಸಾಹಿತ್ಯಾಲಯದ ೨೯ನೆಯ ಗ್ರಂಥ. ಪೂ. ಅ ೬೪ ಪುಟ. ಬೆಲೆ. ೦-೮-೦.

೧೬೨. ಮಕ್ಕಳ ಬಸವಣ್ಣನವರು (ಜೀವನ ಚರಿತ್ರೆ). ಲೇ. ಶ್ರೀಮಾನ್ ಬಟಗೇರಿ ಕೃಷ್ಣಶರ್ಮ. ಪ್ರಕಾಶಕರು ಕಾರ್ಯದರ್ಶಿ ಕರ್ನಾಟಕ ಶಿಕ್ಷಣಸಮಿತಿ, ಹುಬ್ಬಳ್ಳಿ. ಕ್ರೌ. ಅ. ೪೦ ಪುಟಗಳು. ಬೆಲೆ ೦-೮-೦.

೧೬೩. ನನ್ನ ಮುಂಡುಪು (ಹುಬ್ಬಳ್ಳಿಯ ಸಾಹಿತಿಗಳಿಂದ ಕೃತ ಸಂಕಲನ). ಧಾರವಾಡ ಜಿಲ್ಲೆಯ ೬ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸ್ವಾಗತಸಮಿತಿಯವರ ಪ್ರಕಟನೆ. ಮುಖ್ಯ ಸಂಪಾದಕರು ಶ್ರೀಮಾನ್ ಗು. ಮ. ಮಿರ್ಜಿ ಬಿ. ಎ., ಎಲ್ ಎಲ್. ಬಿ. ವಕೀಲರು, ಹುಬ್ಬಳ್ಳಿ- ಕ್ರೌ. ಅ. ೮೮ ಪುಟಗಳು ಬೆಲೆ. ?

೧೬೪. ಕೀರ್ತಿಕಿರಣ (ಮಾಸಪತ್ರಿಕೆ). ಸಂಪಾದಕರು ಶ್ರೀಮಾನ್ ತಿ. ಸಿದ್ದಪ್ಪ. ಪ್ರಕಾಶಕರು ಬ್ರದರ್ಸ್ ಸಂಸ್ಥೆ ೯. ಹಾಸ್ಪಿಟಲ್ ರೋಡು, ಬೆಂಗಳೂರು ನಗರ. ಕ್ರೌ. ಅ. ೪೦ ಪುಟಗಳು. ಮೊದಲು ಬೆಂಗಳೂರಿನ ಆರ್. ಎನ್. ನ್ಯಾಯ ವಿಜಿನ್ಸಿಯಿಂದ ಪ್ರಕಟವಾಗುತ್ತಿದ್ದುದು ಈಗ ಕೈಬದಲಾಗಿದೆ.

೧೬೫. ದೇವತಾಮನುಷ್ಯ (ಸ್ವತಂತ್ರ ಸಾಮಾಜಿಕ ಕಾದಂಬರಿ). ಬರೆದವರು ಶ್ರೀಮಾನ್ ಕಡೆಂಗೋಡ್ಲು ಶಂಕರ ಭಟ್ಟರು. ಧಾರವಾಡದ ಮನೋಹರ ಗ್ರಂಥಮಾಲೆಯ ೮೧-ಅ ನೆಯ ಪುಸ್ತಕಗಳು. ಕ್ರೌ. ಅ. ೨೭೪ ಪುಟಗಳು. ಬೆಲೆ ೨-೧೨-೦

DECEMBER 1946
1947 JANUARY
FEBRUARY 1947
ಗಂಡಾಂತರದ ತಿಂಗಳುಗಳು!
ಇದೀಗ ನೀವು ಆರೋಗ್ಯವನ್ನು ಪೂರಕಿಸಬೇಕಾದ ಚಳಿಗಾಲ. ಆದರೆ ತೊಂದರೆಯನ್ನು ಕರೆತರುವ ಕೆಮ್ಮು ನಿಮ್ಮ ಆರೋಗ್ಯವನ್ನು ಕೆಡಿಸಿಬಿಡುವುದು. ಈ ವರ್ಷ ಹೀಗೆ ಆಗದಂತೆ ಎಚ್ಚರ ತೆಗೆದುಕೊಳ್ಳಿ! ಕೆಮ್ಮನ್ನು ವಿಚಿತ್ರರೀತಿಯಲ್ಲಿ ಗುಣಪಡಿಸಲಲ್ಲ ಕಾಸ್ಕೊ ಮಕ್ಕಳನ್ನು ನೋಡಿರಿ!
Kasko
COUGH-CURE TABLETS
AYURVEDASHRAM PHARMACY LTD., AHMEDNAGAR
AYD 6
ರುಚಿಕರ, ತೀವ್ರಗುಣಕಾರಿ, ಎಲ್ಲ ಕಡೆಗೂ ಸಿಕ್ಕುವದು!

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿ. ಧಾರವಾಡ

ಹೆಡ್ ಆಫೀಸ್

ಧಾರವಾಡ

★ ನಿಮ್ಮ ನೂಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಭರದಿಂದ ಬೆಳೆಯುತ್ತಿರುವ ಈ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!

★ ಮೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.

★ ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಳಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸಿರುವುದರಿಂದ, ಎಲ್ಲರ ನಂಬಿಗೆಗೂ ತಕ್ಕುದಾಗಿದೆ.

★ ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲೇಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ಮ್ಯಾನೇಜಿಂಗ್ ಡಾಯರೆಕ್ಟರ್
ಎ. ಎಸ್. ಕಿಣಿ

ಮ್ಯಾನೇಜರ್
ಎಮ್. ಗೋವರ್ಧನರಾವ

ರೀಟಾ: ತಲೆಯ ಕೂದಲನ್ನು ಬೆಳೆಸುವುದು.

ರೀ
ಟಾ

ರೀಟಾ ಮೆದುಳಿಗೆ ಶಕ್ತಿಯನ್ನು ಕೊಟ್ಟು, ಮಿರುಗುವ ನೀಳವಾದ ಕೂದಲನ್ನು ಬೆಳೆಸಲು ಅದ್ಭುತವಾದ ಹೇರ್ ಟಾನಿಕ್.

ತಲೆಯ ಕೂದಲು ಉದುರುವುದು, ನೆರೆಯುವುದು, ಹೊಟ್ಟು, ಉದುರುವುದು, ಪಟ್ಟೆತಲೆ, ಹೇನಿನ ಬಾಧೆ, ಇವೇ ಮೊದಲಾದ ತಲೆಯ ಕೂದಲಿಗೆ ಸಂಬಂಧಿಸಿದ ಸಮಸ್ತ ವ್ಯಾಧಿಗಳಿಗೂ ರೀಟಾ ಅಮೋಘವಾದ ಗುಣಕಾರಿ.

ಈಗಾಗಲೆ ಸಾವಿರಾರು ಜನ ಉಪಯೋಗಿಸಿ ಗುಣವನ್ನು ಹೊಂದಿದ್ದಾರೆ. ನೀವು ಕೂಡ ಇಂದಿನಿಂದಲೇ ರೀಟಾವನ್ನು ಉಪಯೋಗಿಸಿರಿ.

RITA
HAIR TONIC

ರೀಟಾ ಹಿಂದುಸ್ತಾನದಲ್ಲೆಲ್ಲಾ ದೊರಕುವುದು. ಬೆಲೆ:— ಸೀಸೆ ೧ಕ್ಕೆ ೧೫ ಆಣೆ.

Printed by Mr. V. Y. Jathar at the Karnatak Printing Works, Dharwar, and Published for the Proprietors Jayanti Publications, by M. V. Melligatti at the Jayanti Office, Dharwar.—9266-46-1300.



ಸಂಪಾದಕರು :
ಬೆಟಗೇರಿ ಕೃಷ್ಣಶರ್ಮ

'ಜಯಂತಿ'

ಸಣ್ಣಕತೆಗಳ ಮೇಲಾಟದಲ್ಲಿ

ವಿಜಯಶಾಲಿಗಳು

೧. ಶ್ರೀ. ಕೆ. ಅಶ್ವತ್ಥನಾರಾಯಣರಾವ್, ಬನಾರಸ
"ಧರ್ಮಕೊಂಡದ ಕತ್ತೆ"

ಬಹುಮಾನ ೨೦–೦–೦

೨. ಶ್ರೀ. ಎಸ್.ಕೆ. ಐರಣಿ, ವಿಲಿಂಗ್ಡನ್ ಕಾಲೇಜ್, ಸಾಂಗಲಿ
"ತಿಮ್ಮಯ್ಯನವರ ಅಕಾರಣ ಮರಣ"

ಬಹುಮಾನ ೧೫–೦–೦

೩. ಶ್ರೀ. ಎಸ್. ಕೃಷ್ಣ ಸೆಂಟ್ ಎಲೋಸಿಯಸ್ ಕೊಲೇಜ್, ಮಂಗಳೂರು
"ಧರ್ಮರಕ್ಷಣೆ"

ಬಹುಮಾನ ೧೦–೦–೦

ವಿಜಯಶಾಲಿಗಳಾದ ಕತೆಗಾರರಿಗೆ ಜಯಂತಿಯ
ಹೃತ್ಪೂರ್ವಕ ಅಭಿನಂದನೆಗಳು.
ಲಾಟದ ವಿವರಗಳನ್ನೊಳಗೊಂಡ ವರದಿ ಮುಂದಿನ
'ಕಥಾಂಕ'ದಲ್ಲಿ ಪ್ರಕಟವಾಗುವುದು.

ಮುಖ್ಯ ವಿಷಯಗಳು

ಪಶ್ಚಾತ್ತಾಪ (ಕವನ)
ಶ್ರೀ. ಎಲ್. ನಾರಾಯಣಸ್ವಾಮಿ, ವಿಲಿಂಗ್ಡನ್ ಕಾಲೇಜ್, ಸಾಂಗಲಿ ೨೮೯

ಆಹಾರ ಪದಾರ್ಥಗಳ ಭೀಕರ ಆಭಾವ (ಸಂಪಾದಕೀಯ)
ಸಂಪಾದಕರು ೨೯೦

ಬೀರಣ್ಣನ ಬಡಿಸುಡಿಗಳು (ವ್ಯಂಗ್ಯಚಿಪ್ಪಣಿ)
'ಗೂಡಪ್ಪ' ೨೯೧

ನಾನೆಲ್ಲಾ ಒಂದೇ (ಕವನ)
ಪ್ರೊ. ವಿ. ಕೃ. ಗುಪ್ತೆ, ಎಂ. ಎ., ಬಿ. ಟಿ. ಸಾಂಗಲಿ ೨೯೨

ಆಹುತಿ (ಸಣ್ಣ ಕತೆ)
ಶ್ರೀ. ಎಚ್. ಕೇಶವಮೂರ್ತಿ, ಬಿ. ಎಸ್ಸಿ. ಹೊಸಕೋಟೆ ೨೯೫

ಬದುಕಲಿಬೆಸ್ಪು, ಬದುಕಲಿಬೆಸ್ಪು ! (ಕವನ)
ಶ್ರೀ. ಕೆ. ಮಂಜುನಾಥ, ಹೊಸಪೇಟೆ ೨೯೫

ಶಿಕ್ಷಣದಲ್ಲಿ ಕ್ರಾಂತಿ (ವಿಚಾರಪ್ರಬಂಧ)
ಶ್ರೀ. ಕರ್ಪೂರಕಲಾ ರಾಘವಾಚಾರ್ಯ, ಬಿ.ಎಸ್ಸಿ. ಸೇವಾಗ್ರಾಮ ೨೯೬

ನಿರ್ಭಿಕ್ಷೆಯಂ ನಿರ್ಮಾಲಯಂ (ಒಂದು ದೃಶ್ಯ)
ಶ್ರೀ. ಎನ್. ಎಸ್. ಗದಗಕರ, ಬಿ. ಎ ಧಾರವಾಡ ೨೯೯

ಪುಸ್ತಕ ಮಂತ್ರ ಭೋಜನ (ಜವಸರದ ವಿಚಾರಗಳು)
ಶ್ರೀ ಸೋಮಪುರಿಯರ ಕಾರ್ಯದರ್ಶಿಯು, ಕಾಶಿ ೩೦೧

ನವ್ಯ ಊಟದಲ್ಲಿ ಪಾಲು (ಆಹಾರ ವಿಜ್ಞಾನ)
ಶ್ರೀ. ಬಿದರಳ್ಳಂದಿ ನಂಜುಂಡಾಯರು ಎಚ್. ಎ. ಮದಭಾಂವಿ ೩೦೨

ಶಾಂತಿನಿಕೇತನದ ಯಾತ್ರೆ (ಪ್ರವಾಸ ಪ್ರಬಂಧ)
ಶ್ರೀ. ಕೆ. ಎನ್. ರಾವ್, ಸಿರಸಿ ೩೦೬

ಯೋಗಾಭ್ಯಾಸ (ಸಣ್ಣ ಕತೆ)
ಶ್ರೀ. ಕೆ. ಎ. ಎನ್. ರಾವ್, ಹಿಂ ವಿ. ವಿ. ನಿಲಯ ಕಾಶಿ ೩೦೮

ಭಾಷಾಬಾಂಧವ್ಯ (ಭಾಷಾಶಾಸ್ತ್ರ ವಿಚಾರ)
ಶ್ರೀ ಎಂ. ಗೋವಿಂದರಾಯರು ಎಂ. ಎ. ಮದ್ರಾಸ್ ೩೧೨

ಅಮೃತಹಾರ್ಮೆ ಪಾಕಿಸ್ತಾನ (ಲೇಖಾಂಕ ೨)
ಡಾ. ಎಚ್. ಬಿ. ಕೊಣ್ಣೂರ ಎಲ್. ಸಿ. ಪಿ. ಎಸ್. ಗದಗ ೩೧೫

ಪುಸ್ತಕ ವಿಮರ್ಶೆ (ಭಗ್ನಮಂದಿರ)
ಶ್ರೀ. ಜಿ. ಡಿ. ನಾಡಕರ್ಣಿ ಬಿ.ಎ. (ಆನರ್ಸ್) ಸಾಂಗಲಿ ೩೧೮

ಪೂರ್ವ ಜರ್ನಾಟಸ್ಕರ ಮಹಾಪರಿಷತ್ತು
ಪ್ರಕಟನಾ ಶಾಖೆಯ ಕಾರ್ಯದರ್ಶಿ ೩೧೯

ಸಾಹಿತ್ಯಸ್ವೀಕಾರ (ನಂ. ೧೩೬ರಿಂದ ನಂ. ೧೫೧ರ ವರೆಗೆ) ೩೨೦

* * * *

ವಿ. ಸೂ :— ೩೦೧ ರಿಂದ ೩೦೫ರ ವರೆಗೆ ಪುಟಸಂಖ್ಯೆಯ ಕ್ರಮಸೂಚಕಗಳು ತಪ್ಪಾಗಿ ಪ್ರಕಟವಾಗಿವೆ. ದಯೆಯಿಟ್ಟು ತಿದ್ದಿ ಸರಿಯಾಗಿ ಕೊಳ್ಳಬೇಕಾಗಿ ಬಿನ್ನಹ.

ಸಂ. ಜ.

ಜಯಂತಿಯ ಕಥಾಸಂಚಿಕೆ

ಏಪ್ರಿಲ್ (೧೯೪೭) ಸಂಚಿಕೆಯೆ ಕಥಾಸಂಚಿಕೆಯಾಗಿ ಪ್ರಕಟವಾಗುವುದು.

ಮೇಲಾಟದಲ್ಲಿ ಬಹುಮಾನ ಪಡೆದ ಅತ್ಯುತ್ತಮ ಕಥೆಗಳೆಲ್ಲ ಇದರಲ್ಲಿ ಪ್ರಕಟವಾಗುವವಲ್ಲದೆ, ಮೇಲಾಟದ ವಿಶದನಾದ ವರದಿಯೂ ಸಣ್ಣ ಕಥೆಗೆ ಸಂಬಂಧಿಸಿದ ಲೇಖನಗಳೂ ಇದರಲ್ಲಿ ಬರುವವ. ಶಕ್ಯವಿದ್ದಷ್ಟು ಕಚ್ಚಿಗೆ ಪುಟಗಳನ್ನು ಕೊಡಲಾಗುವುದಲ್ಲದೆ, ಆಕರ್ಷಕವಾದ ಮೇಲೊಲೆಯಿಂದ ಸಂಚಿಕೆ ಕೂಡಿರುವುದು. ಮನೆಮನೆಯಲ್ಲಿಯೂ ಸಂಗ್ರಹಿಸಬೇಕಾದ ಸಂಚಿಕೆ.

ಬೆಲೆ ಎಂಟು ಆಣೆಗಳು ಮಾತ್ರ

ನಿಯಮಿತ ಸಂಖ್ಯೆಯಲ್ಲಿ ಪ್ರತಿಗಳನ್ನು ಹೊರಡಿಸಲಾಗುವುದರಿಂದ, ಬೇಕಾದವರು ಮೊದಲೇ ಬೇಡಿಕೆ ಕಳುಹಿಸಬೇಕು. ಏಜಂಟರು ಮಾರ್ಚ್ ೧೦ನೆಯ ತಾರೀಖಿನೊಳಗಾಗಿಯೆ ತಮಗೆ ಬೇಕಿರುವ ಸಂಚಿಕೆಗಳ ಸಂಖ್ಯೆಯನ್ನು ನುರೆಯದೆ ಬರೆದು ತಿಳುಹಬೇಕು. ಆ ಮೇಲೆ ಕೇಳಿದರೆ ಸಿಕ್ಕಲಿಕ್ಕಿಲ್ಲ. ಕಥಾಸಂಚಿಕೆಯಲ್ಲಿ ಜಾಹೀರಾತನ್ನು ಕೊಡಬೇಕೆನ್ನುವವರೂ ಕೂಡಲೆ ಬರೆದು ಕೇಳಿಕೊಳ್ಳಬೇಕು.

ಮ್ಯಾನೇಜರ್ 'ಜಯಂತಿ' ಕಾರ್ಯಾಲಯ, ಧಾರವಾಡ



ವಾರ್ಷಿಕ ಚಂದಾ
೪—೪—೦

ಪ್ರತಿತಿಂಗಳ ೧ನೆಯ ತಾರೀಖಿಗೆ
ಪ್ರಕಟವಾಗುವುದು.

ಸಂಪುಟ ೯ | ೧ ನೆಯ ಮಾರ್ಚ್ ೧೯೪೭ | ಸಂಚಿಕೆ ೧೦

ಪಶ್ಚಾತ್ತಾಪ ★

ಶ್ರೀ. ಎಲ್. ನಾರಾಯಣಸ್ವಾಮಿ,
ಸಾಂಗಲಿ

(ಸ್ವತಂತ್ರ ರಾಜನೊಬ್ಬನು ಪರರಾಜನಿಗೊಬ್ಬನಿಗೆ ಸಮರದಲ್ಲಿ ಸೋತು ಶರಣುಹೋಗಿ, ಅವನ ಅಧೀನ ಮಾಂಡಲಿಕನಾಗಿ ಬೇರೆ ಕಡೆಗೆ ಹೋಗುವನು. ಆಗಿನ ಕಾಲದ ಆತನ ಮನಸ್ಸಿನ ಯಾತನೆ ಹೀಗೆಯೆ ಇರಬಹುದೆಲ್ಲವೆ?)

ಬಿಸಿಲಿನಲಿ ಹೊಳೆಯುತಿಹ ನೀರಗುಳ್ಳೆಯ ಕಂಡು
ನವರತ್ನಗಳು ಎಂದು ಓಡಿ ಬಂದೆ—
ಕೆನ್ನೀರ ಮೋಹದಲಿ ಉಳಿಗಾಲವಿರದೆಂದು
ಭಯಗೊಂಡು ಶರಣೆಂದೆ, ಬದುಕಿನಿಂದೆ!

ಉಳಿದವನು ಸೆರೆಗಿಂತ ಸಿರಿಯೆ ಹಿರಿದೆಂದರಿತು
ಅಲ್ಪನವ ಬಿಸುಟು ಕೀಲ್ಪನವ ಹಿಡಿದೆ—
ಪರದೇವತೆಯಾದರೂ ಪರರಾಜನಾಶ್ರಯದಿ,
ಅರಸನೆಂದೆನಿಸಿ ನಾ ಮೆರೆವೆನೆಂದೆ!

ಕೈಗೆ ತೊಡಿಸುವ ಮುನ್ನ ಹೊನ್ನ ಕಂಕಣವೆಂದು
ಸ್ವರ್ಣಶೃಂಖಲೆಯಿಂದ ಬಿಗಿದುಕೊಂಡೆ;
ತೊಡಲಾರೆ ಬಿಡಲಾರೆ, ದೈನ್ಯ ಜೀವನದಿಂದ
ಶೂನ್ಯಮನವನು ತಳೆದು ಬವಣೆಗೊಂಡೆ!

ರತ್ನ ಮಿನುಗುತ್ತಲಿವೆ ಸ್ವರ್ಣಸಿಂಹಾಸನದಿ,
ಒರೆಯಿಹುದು ಸೊಂಟದಲಿ, ಸುರಗಿಯಿಲ್ಲ!
ಸುತ್ತು ಸಾವಿರ ಜನರು ಛತ್ರ-ಚಾಮರವೆತ್ತಿ
ಓಲಯಿಸುವರು ನನ್ನ— ಒಲುಮೆಯಿಲ್ಲ!

ಒಳಗೊಳಗೆ ದ್ವೇಷದಲಿ ಹೊರಗೆ ಬಹು ವೇಷದಲಿ
ಕವಡುಮನ್ನಣೆಯನ್ನು ತೋರುತಿಹರು;
ಜೀತದಾಳಿಗು ಕೀಳು ಜೀತದವನಿವನೆಂದು
ಕರುಮುಕ್ಕಳೂ ಕೆಲೆದು ತೆಗಳುತಿಹರು.

ಮಾನ-ಸನ್ಮಾನಗಳು ಪ್ರೀತಿ-ಅಭಿಮಾನಗಳು
ಎಂಥ ದುಮ್ಮಾನವನು ದೂಡಬಹುದು;
ಪ್ರೀತಿಯಿಲ್ಲದ ನಾಡು ಜನರಿದ್ದರೂ ಕಾಡು!
ಕೆಡುಗಾಲಕೇ ಕೆಟ್ಟ ಬುದ್ಧಿಯಹುದು!

ನನ್ನಾತ್ಮ ನನ್ನ ಮನೆ ನನ್ನೊಡವೆ ನನ್ನ ಜನ
ಅನ್ನಿಗರಧೀನದಲಿ ನೇರಿಸಿಹನು;
ಅನ್ಯರಾಳಾಗಿ ಅಳುವ ದೊರೆಯು ನಾನೊಬ್ಬ
ನನ್ನ ಬದುಕನೆ ಮಾರಿ ಬದುಕಿ ಇಹೆನು!

ನಾ ಸೋತರೂ ನನ್ನ ಎಂಟೆದೆಯ ಬಂಟರದೊ,
ಸಾವನೆಣಿಸದೆ ಸೆಣಸಿ ಮಡಿದರಲ್ಲಿ;
ಅನ್ಯರಿಗೆ ಆಳಾಗಿ ಇರುವ ನನ್ನನು ಕಂಡು
ಎನಿತು ಹಳಿವರೊ ಏನೊ, ಸ್ವರ್ಗದಲ್ಲಿ!

ನನ್ನ ಅರಸುನೆಯಲ್ಲಿ ಅನ್ನಿಗರ ನಲಿದಾಟ
ನನ್ನ ಒಲಸಿನ ನಾಡು ಮಸಣ ಕಾಡು!
ಸಣ್ಣ ನಾಡಾದರೂ ನನ್ನ ಶಕ್ತಿಯ ನೆಲೆಯು
ಇಂದು ಆಗಿಹುದಯ್ಯೊ, ಕೋಳಿಗೂಡು!

ಭಯಗೊಂಡು ಶರಣೆಂದೆ, ಬದುಕಿ ಬಂದೆ—
ಅರಸನೆಂದೆನಿಸಿ ನಾ ಮೆರೆದು ನಿಂದೆ;
ಸ್ವರ್ಣಶೃಂಖಲೆಯಿಂದ ನಾನೇ ಬಿಗಿದುಕೊಂಡೆ!
ಜೀವ-ಸಾವಿನ ನಡುವೆ ಜೋಲುತಿಹೆನಿಂದೆ!

ಆಹಾರ ಪದಾರ್ಥಗಳ ಭೀಕರ ಅಭಾವ

ಜನರಿಗೆ ಹಿತವಾದೀತೆಂಬ ಕಲ್ಪನೆಯಿಂದ ಸರಕಾರವು ಜೀವನೋಪಯುಕ್ತ ಪದಾರ್ಥಗಳ ವಿಷಯದಲ್ಲಿ ನಿಯಂತ್ರಣ ಶಾಸನಗಳನ್ನು ಹೊರಡಿಸುತ್ತಿದೆ; ಆದರೆ ರಾಷ್ಟ್ರೀಯತೆಯ—ಜನಹಿತದ—ಕಲ್ಪನೆ ಸ್ವಲ್ಪವೂ ಇರದ ನಮ್ಮಲ್ಲಿಯ ಬಂಡವಾಳಗಾರರು, ಲಾಭದಾಶೆಯಿಂದ ಈ ನಿಯಂತ್ರಣಾದಿ ಶಾಸನಗಳು ಪ್ರಯೋಜನವಿಲ್ಲದುವುಗಳಾಗುವಂತೆ ಕಾರ್ಯ ನಡೆಸುತ್ತಿದ್ದಾರೆ. ಸ್ವಾರ್ಥದ ಲೋಭದಿಂದ ವ್ಯಕ್ತಿಗಳು ಸಮಾಜವನ್ನು ಬರಬರದಂತೆ ಮಾಡಿಕೊಳ್ಳುತ್ತಾರೆಂದರೆ, ದೇಶದಲ್ಲಿ ಸುಖ-ಶಾಂತಿಗಳಿಗೆ ಅವಕಾಶ ಹೇಗಿರೀತು?

ಜೀವನೋಪಯುಕ್ತ ಪದಾರ್ಥಗಳ ಉತ್ಪಾದನೆ ಒಂದೊಂದರದು ಒಂದೊಂದು ಕಡೆಗೆ ಅಗತ್ಯವಿರುತ್ತದೆ. ಅವುಗಳನ್ನು ಅವಶ್ಯಕತೆಯನ್ನರಿತು ಎಲ್ಲ ಕಡೆಯ ಜನರಿಗೂ ಅನುಕೂಲ ದರದಿಂದ ಹಂಚುವುದು ದೇಶದ ವ್ಯಾಪಾರಿಗಳ ಕರ್ತವ್ಯ. ಈ ಕರ್ತವ್ಯವನ್ನವರು ಪ್ರಾಮಾಣಿಕ ಧನದಿಂದ ಮಾಡುತ್ತ ಹೋದರೆ, ಸರಕಾರಗಳು ಅವರ ಕ್ಷೇತ್ರದಲ್ಲಿ ಕೈ ಹಾಕುವ ಕಾರಣವೇ ಇಲ್ಲ. ಆದರೆ ನಮ್ಮ ವ್ಯಾಪಾರಿಧುರೀಣರು ಇಂದು ಯಾವ ಬಗೆಯ ಅದರವೂ ಇಲ್ಲ. ದೇಶದ ಜನರು ಸತ್ತು ಹೋದರೂ ಸರಿ, ತಮಗಾಗುವ ಲಾಭದಲ್ಲಿ ಹಿಂದು ರುಪಾಯನ್ನೂ ಕಳೆದುಕೊಳ್ಳಲಿಕ್ಕೆ ಅವರು ಸಿದ್ಧರಿಲ್ಲ. ಜನರು ಸುಖ-ಶಾಂತಿಗಳಿಂದ ಇದ್ದರೆಯೆ ತಮ್ಮ ವ್ಯಾಪಾರ ಶಾಶ್ವತವಾಗಿ ಉಳಿದೀತೆಂಬ ಕಲ್ಪನೆ, ಲಾಭದಾಶೆಯಿಂದ ಜಡ್ಡುಗಟ್ಟಿದ ಅವರ ಮೆದುಳಿನಲ್ಲಿ ಸುಳಿಯುತ್ತಿಲ್ಲ. ಅದು ದರಿಂದಲೇ ಒಮ್ಮೆಲೇ ಲಾಭ ಪಡೆಯಬೇಕೆಂಬ ಲೋಭದಿಂದ ತನ್ನ ಎಮ್ಮೆಯ ಕೆಚ್ಚಲನ್ನು ಕೊಯ್ದುಗವಳಗನಂತೆ, ಜನತೆಯ ಜೀವನವನ್ನೇ ಕೊಯ್ದು ಕಡೆಗೆ ತೆಗೆಯುತ್ತಲಿದ್ದಾರೆ—ವ್ಯಾಪಾರಿಗಳು.

ನಮ್ಮ ವ್ಯಾಪಾರಿಗಳಿಗಿಂದು ದೇವರ ಹೆದರಿಕೆಯಿಲ್ಲ; ಧರ್ಮದ ಹೆದರಿಕೆ ಇಲ್ಲ. ಸರಕಾರದ ಶಾಸನಗಳು ಹೆದರಿಸಬಹುದಾದರೂ, ಶಾಸನಸೂತ್ರಗಳನ್ನು ಅಧೀನವಲ್ಲಿಟ್ಟುಕೊಂಡ ಅಲ್ಲಲ್ಲಿಯ ಪ್ರಾದೇಶಿಕ ಅಧಿಕಾರಿವರ್ಗ, ವೈಯಕ್ತಿಕ ಲಾಭದ ಆಶೆಯಿಂದ ನಿಯಂತ್ರಣ ಶಾಸನಗಳನ್ನು ಮೂಲೆಯಲ್ಲಿರಿಸಿ, ವ್ಯಾಪಾರಸ್ಥರಿಗೆ ಬೇಕಾದ ನೆರವನ್ನು ಕೊಡುವುದು. ಹೀಗೆ ಅಡಿಕಿಶಬಂಡವಾಳ ಸಹಕಾರಿ ದುಶ್ಚೇಷ್ಟೆ ನಡೆಯಿಸಿ, ಸಾಮಾನ್ಯ ಜನರ ಬಾಳನ್ನು ಬೀಸರಕ್ಕೆ ಗುರಿಮಾಡಿರುವುದು. ಕಾಯಲಿರುವ ಬೇಲಿಯೆ ಮೇಯಲು ತೊಡಗಿದರೆ ಯಾರಿಂದ ನಿನು ಮಾಡಲಾದೀತು?

ಇಂದಿನ ಆಹಾರಧಾನ್ಯದ ಸಂಗ್ರಹವಿಭಾಗವನ್ನೇ ನೋಡೋಣ: ರೈತ ಬೆಳೆದ ಕಾಳಿನಲ್ಲಿ ಹೆಚ್ಚಿನ ಭಾಗವೆಲ್ಲ—ಯೋಗ್ಯ ಹಂಚಿಕೆಗಾಗಿ—ಸರಕಾರದ ಸಂಗ್ರಹಾಲಯಕ್ಕೆ ಬರಬೇಕು. ಯೋಗ್ಯ ದರವನ್ನು ಕೊಡಲು ಸರಕಾರ ಗೊತ್ತುಮಾಡಿಕೊಂಡಿದೆ. ವೈತನ ಲಾಭದಾಶೆ ಮೊದಲನೆಯದಾಗಿ ಸರಕಾರದ ಸಂಗ್ರಹಾಲಯಗಳಿಗೆ ಒಳ್ಳೆಯ ಧಾನ್ಯವನ್ನು ಒದಗಿಸುವುದಿಲ್ಲ, ಲಂಚದಾಶೆಯ ಅಧಿಕಾರಿಗಳು ಮುಗ್ಗಿದ ಕಸಗಾಳುಗಳನ್ನೇ ಮೊದಲನೆಯ ತರಗತಿಯ ದರ ಕೊಟ್ಟು ಕೊಂಡರೆ ಹಣ ಖರ್ಚುಹಾಕುವರು. ಇದ್ದುದುಗಳಲ್ಲಿ ಒಳ್ಳೆಯದು ತಮಗೆ, ಕಮ್ಮೆ ಜನರಿಗೆ—ಪುಕ್ಕಟೆಯಾಗಿ ಸಿಕ್ಕಬೇಕು. ಈ ಕೊರತೆಯನ್ನು ತುಂಬಲಿಕ್ಕೆ ಇನ್ನಿಷ್ಟು ಕಸ-ಕಲ್ಲು ಸಂಗ್ರಹದ ಧಾನ್ಯಗಳಲ್ಲಿ ಸೇರಿಕೊಳ್ಳುವುದು. ಕಿರುಕುಳ ವ್ಯಾಪಾರಿಯ ಕಡೆಗೆ ಬಂದಾಗ ಅವನೂ ತನ್ನ ಕೈಚಳಕ ತೋರಿಸುವನು. ಹೀಗಾಗಿ ಗುಣ, ಪ್ರಮಾಣ ಎರಡು ದೃಷ್ಟಿಯಿಂದಲೂ ಹೀನವಾದ ಆಹಾರಧಾನ್ಯ ನಮ್ಮ ಜನಸಾಮಾನ್ಯರಿಗೆ ಸಿಕ್ಕುತ್ತಲಿದೆ. ಧಾನ್ಯ ಸಂಗ್ರಹಿಸುವ ರೀತಿ ನಮ್ಮಲ್ಲಿಯ ಅಧಿಕಾರಿ ವರ್ಗಕ್ಕೆ ಗೊತ್ತಿರುವುದರಿಂದ, ಇದ್ದಷ್ಟು ಒಳ್ಳೆಯ ಆಹಾರವೂ ಜನರಿಗೆ ಸಿಕ್ಕುವಾಗ ಕೊಳಕು ಹುಳುಕು ಆಗಿರುವುದು. ನಾವಿನ್ನಲ್ಲಿ ಎಲ್ಲೆಲ್ಲಿಯೂ ಹಬ್ಬಿ ಹರಡಿರುವ ಹುಳುಕು—ಕಚ್ಚಿ—ಪರಿಗಳು ಈ ಅಯೋಗ್ಯ ಆಹಾರದ ಪರಿಣಾಮಗಳು. ಕೈತುಂಬ ಹಣ ಕೊಟ್ಟರೂ ಕೆಲ್ಲ ಕೂಳೇ ಜನರಿಗೆ ಗತಿ. ಇಂತಹ ಕೂಳಿನಿಂದ ದೇಹದ ಶಕ್ತಿ ಹೇಗಾಗುತ್ತಲಿದೆ. ಸ್ವಾತಂತ್ರ್ಯ ಸಾಧನೋದ್ಯಮದಲ್ಲಿಯೂ ಸ್ವರಾಜ್ಯ ಸರಕ್ಷಣ ಕಾರ್ಯದಲ್ಲಿಯೂ ಉತ್ಸಾಹದಿಂದ ಭಾಗವಹಿಸಬೇಕಾದ ನಮ್ಮ ತರುಣವರ್ಗ, ಇಂತಹ ನಿಸ್ಸತ್ವ-ಸಾರಹೀನ ಆಹಾರದಿಂದ ಎಂತಹ ಉತ್ಸಾಹವನ್ನು ಪಡೆದೀತು?

ಸರಕಾರಕ್ಕೆ ಕೊಟ್ಟು ಉಳಿದ ಒಳ್ಳೆಯ ಪದಾರ್ಥಗಳನ್ನು, ಸರಕಾರದ ಕಟ್ಟಳೆಯನ್ನು ಮೀರಿಯೂ ನಮ್ಮ ವ್ಯಾಪಾರಿಗಳು ಸಂಗ್ರಹಿಸಿ, ಕಳ್ಳ ಪೇಟೆಯನ್ನು ಪ್ರಾರಂಭಿಸಿರುವರು. ಹಣವಿದ್ದ ಜನರು ಒಂದಕ್ಕ ಹತ್ತು ಬೆಲೆ ಕೊಟ್ಟು ಈ ಕಳ್ಳಪೇಟೆಯ ಗಿರಾಕಿಗಳಾಗುವರು. ನೈಮಿತ್ತಿಕ ಅನಿಶ್ಚಿತಕಗಳ ಮೂಲಕ ಮಧ್ಯಮ ತರಗತಿಯವರೂ ಜನಸಾಮಾನ್ಯರೂ ಈ ಕಳ್ಳಪೇಟೆಯ ಸುಲಿಗೆಗೆ ಒಳಗಾಗಿ ಬಾಯಿ ಬಾಯಿ ಬಿಡಬೇಕಾಗುತ್ತಲಿದೆ. ಈ ರೀತಿ ಬೀಗುವ ನಡೆವಳಿಕೆ, ಭಾರತದಲ್ಲಿ ಎರಡೇ ಎರಡು ವರ್ಗಗಳು ಸ್ಪಷ್ಟವಾಗಿ ರೂಪುಗೊಳ್ಳುವುದರಲ್ಲಿ ಸಂದೇಹವಿಲ್ಲ: ಒಂದನೆಯ ವರ್ಗ ಹಣದ ರಾಶಿಯ ಯಜಮಾನರದು. ಎರಡನೆಯ ವರ್ಗ ಬರಿಮನೆಯ ಬಂಟರದು. ಮಧ್ಯದ ಮಟ್ಟಿಲುಗಳಾಗಿರುವ ವಿವಿಧ ವರ್ಗಗಳಿಗೆ ಅಸ್ತಿತ್ವವಿಲ್ಲದೆ ಹೋದರೆ, ನಾವಿನ ಸಂಸ್ಕೃತಿಯೇ ನಾಶವಾಗಿ ಹೋಗುವುದು. ಸಂಸ್ಕೃತಿಯಿಲ್ಲದಲ್ಲಿ ಸುಖವೆಲ್ಲಿಯದು, ಶಾಂತಿಯೆಲ್ಲಿಯದು?

ಈ ದುಸ್ಥಿತಿ ಅಳಿಯಬೇಕಾದರೆ, ನಮ್ಮ ಜನರಲ್ಲಿ ಸಾಮಾನ್ಯಪ್ರಜ್ಞೆ ಜಾಗೃತವಾಗಬೇಕು. ರಾಷ್ಟ್ರೀಯತೆಯ ಆದರ್ಶ ಕಾರ್ಯ ನಡೆಯತೊಡಗಬೇಕು. ಸಾಮಾಜಿಕ ಕರ್ತವ್ಯದ ಜಾಗೃತಿಯುಂಟಾಗಬೇಕು. ಸರಳತೀಕ್ಷ್ಣ ಉಪಾಯಗಳನ್ನು ಕೈಕೊಳ್ಳಬೇಕು. —ಸಂಪಾದಕರು



ಹಸಿ-ಬಿಸಿ ಸುದ್ದಿಗಳು

ಧಾರವಾಡದ ಹೋಟೆಲ್ ಮಾಲಕರಿಲ್ಲಿ ಫೆಬ್ರುವರಿ ೨೫ ನೆಯ ತಾರೀಖಿನಿಂದ ತಮ್ಮ ಹೋಟೆಲುಗಳ ಬಾಗಿಲನ್ನು ಮುಚ್ಚಬಿಟ್ಟಿದ್ದಾರೆ. ಏಕೆಂದು ಕಾರಣ ಹುಡುಕುವಾಗ ವೀರಣ್ಣನಿಗೆ ಗೊತ್ತಾದ ಸಂಗತಿ ಇದು:

"ಧಾರವಾಡದ ಸರಕಾರಿ ಧಾನ್ಯ ಸಂಗ್ರಹಾಲಯದಿಂದ ಹೋಟೆಲಿನ ಮಾಲಕರಿಗೆ ದೋಸೆ-ಇಡ್ಲಿಗಳನ್ನು ಮಾಡಲಿಕ್ಕೆ ಅಕ್ಕಿಯ ನುಚ್ಚಿನ ರೇಶನ್ ಏರಿಯಾಗಿತ್ತಿತ್ತು. ಈ ಅಕ್ಕಿಯ ನುಚ್ಚಿಂದ ಉಸುಬಿನ ರಾಶಿಯಿಂದ ದೋಸೆ-ಇಡ್ಲಿಗಳನ್ನು ಮಾಡಲಿಕ್ಕೆ ಸಾಧ್ಯವಾಗದೆ, ಹೋಟೆಲುಗಳ ಬಾಗಿಲನ್ನು ಮುಚ್ಚಬಿಟ್ಟಿದ್ದಾರಂತೆ. ಅಲ್ಲದೆ ತನಗೆ ದೊರೆತ ಅಕ್ಕಿಯ ನುಚ್ಚಿನಿಂದ ಹೀಗೆಂಟೆಲ್ ಕಯಾರಿಸಬಹುದೇ ಎಂಬ ವಿಚಾರ ಬಂದು, ಅದಕ್ಕಾಗಿ ತಜ್ಞ ಸಮಿತಿಯೊಂದನ್ನು ನಿಯಮಿಸಿರುವರಂತೆ. ಧಾರವಾಡದ ನಾಗರಿಕರು ಇನ್ನು ಧಾರವಾಡದ ಫ್ಯಾಕ್ಟರಿಯಿಂದಲೇ ಹೀಗೆಂಟು ಪಡೆಯುವ ಸಂಭವವಿದೆ!"

* * *

ಕರ್ನಾಟಕದ ಬೆಳವಲ ಹೀಗೆಯು ಹಳ್ಳಿಗಳಲ್ಲಿ ಶಾಲೆಯ ಮಕ್ಕಳಿಗೆ ಅಕ್ಕಿ ಹೇಗಿರುತ್ತದೆಂಬುದನ್ನು ತಿಳಿಸಿಕೊಡುವ ಯೋಜನೆಯಿಂದ, ವಿದ್ಯಾ ಇಲಾಖೆಯವರು ಬೇರೆ ಬೇರೆ ಶಾಲೆಗಳಿಗೆ ಅಕ್ಕಿಯ ಚೀಟುಗಳನ್ನು ಪೂರಯಿಸಲಿರುವರಂತೆ. ಸಣ್ಣ ಶಾಲೆಗಳ ಹುಡುಗರು, ಚೀಟುಗಳನ್ನು ಪೂರಯಿಸಿದ ದೊಡ್ಡ 'ಶಾಲೆಗಳಿಗೆ ಹೋಗಿ ನೋಡಿಕೊಂಡು ಬರಬೇಕಂತೆ. ಕಳುಹುವ ಚೀಟುಗಳಲ್ಲಿ ಐದು ಅಕ್ಕಿಯಾಳು ಇರಬೇಕೋ ಮುಕ್ಕೇ ಇರಬೇಕೋ ಎಂಬುದು ಇನ್ನೂ ನಿರ್ಣಯವಾಗಿಲ್ಲವಂತೆ.

* * *

ಮಾರ್ಚ್ ೧೯೪೬

ಹೋಳಿಯ ಹುಣ್ಣಿಮೆಗೆ ಹೋಳಿಗೆ ಬೇಕು. ಹೋಳಿಗೆಗೆ ಗೋದಿ ಬೇಕು. ಗೋದಿಯನ್ನು ಪೂರಯಿಸುವುದು ಸಾಧ್ಯವಿಲ್ಲದುದರಿಂದ, ಪಂಚಾಂಗದಿಂದ ಹೋಳಿಹುಣ್ಣಿಮೆಯನ್ನೆ ತೆಗೆದು ಹಾಕಬೇಕೆಂದು ಸರಕಾರದ ಪರಿತ್ರಪ್ತೋಂದು ಎಲ್ಲ ಪಂಚಾಂಗಕಾರರ ಕಡೆಗೂ ಹೋಗಲಿದೆಯೆಂಬ ಸುದ್ದಿಯು ಸಂಶಯದ್ದಂತೆ.

* * *

ಸರಕಾರದ ಅಲ್ಲಲ್ಲಿಯ ಧಾನ್ಯಸಂಗ್ರಹಾಲಯಗಳಿಗೆ ಇಲಿಗಳ ಕಾಟ ಬಹಳವಾಗಿದೆಯಂತೆ. ಇವನ್ನರಿತ ಸರಕಾರದ ಮೇಲಧಿಕಾರಿಗಳು ಇಲಿಗಳನ್ನು ತೀಕ್ಷ್ಣ ಉಪಾಯಗಳಿಂದ ಸಂಹರಿಸುವ ಹುಕುಮನ್ನು ಹೊರಡಿಸಲಿರುವರಂತೆ. ಅದಕ್ಕಾಗಿ ಸಂಗ್ರಹಾಲಯದ ಅಧಿಕಾರಿಗಳು ಇಷ್ಟನ್ನು ಮಾಡಬೇಕೆಂಬ ಯೋಚನೆಯಿಂದ ಮುಂಜಾ ಹಿಡಿದು ಕುಳಿತಿದ್ದಾರಂತೆ.

* * *

ಬಟ್ಲೇ ಸಾಹೇಬರು ಹಿಂದುಸ್ಥಾನವನ್ನು ಬಿಟ್ಟು ಹೋಗುವೆವೆಂದು ಹೇಳಿದ ಮಾತು, ಪಾಪ, ಚರ್ಚಿಲ್ ಪ್ರೆಂಚರಿಗೂ ಗೋಪುಮಾಂಕದ ಪೋರ್ಟ್ ಗೀಡರಿಗೂ ಬರಸಿಡಿಲ ದನಿಯಂತೆ ಕೇಳಿ, ಹೃದಯದ ಹಾರಿಕೆಯನ್ನು ಕಲವೇಳೆ ನಿಲ್ಲಿಸಿ ಬಿಟ್ಟಿದ್ದಿತಂತೆ. ಮತ್ತೆ ಬ್ರಿಟಿಷರ ಸರಿಬುದ್ಧಿ ಜ್ಞಾಪಕಕ್ಕೆ ಬರಲು, ಹೃದಯದ ಹಾರಿಕೆ ಸರಿಯಾಗಿ ನಡೆಯತೊಡಗಿತಂತೆ.

ಪ್ರಶ್ನೆಗೆ ಉತ್ತರ

ಪ್ರಶ್ನೆ:— ಪ್ರಾಥಮಿಕ ಶಿಕ್ಷಕರು ಮತ್ತೆ ಸಂಪನ್ನು ಪ್ರಾರಂಭಿಸಲಿದ್ದಾರಂತೆ; ಅದಕ್ಕಾಗಿ ನನ್ನ ಜೀವ ತಳಮಳಿಸುತ್ತಲಿದೆ. ನನ್ನ ಐದು ಮಕ್ಕಳು ಪ್ರಾಥಮಿಕ ಶಾಲೆಗೆ ಹೋಗುತ್ತಲಿವೆ. ಅವೆಲ್ಲ ಮನೆಯಲ್ಲಿ ಉಳಿದುಬಿಟ್ಟರೆ ನಮ್ಮ ಮನೆ ಉಳಿಯುವ ಉಪಾಯವೇನು ವೀರಣ್ಣಾ!

ಉತ್ತರ:— ನೀವು ಸ್ವಲ್ಪವೂ ಯೋಚನೆ ಮಾಡಬೇಡಿರಿ. ಒಬ್ಬೊಬ್ಬ ಪ್ರಾಥಮಿಕ ಶಿಕ್ಷಕನಿಗೂ ನಿಮಗಿಂತ ಹೆಚ್ಚಾಗಿಯೆ ಮಕ್ಕಳಿರುವರು. ಅವರಿಗೂ ನಿಮ್ಮ ಈ ಸಮಸ್ಯೆ ಇದ್ದೇ ಇದೆ. ಅವರಿಗೂ ತಮ್ಮ ಮನೆಯನ್ನು ಉಳಿಸಿಕೊಳ್ಳಬೇಕೆಂಬ ಆಶೆ ಇದೆ. ಆದುದರಿಂದ ಸಂಪಿನ ಮಾತು ಸತ್ಯವಾಗುವ ವರೆಗೂ ಸಹನೆಯಿಂದ ಇದ್ದು ಬಿಡಿರಿ.

* * *

ಪ್ರಶ್ನೆ:— ಧಾರವಾಡದಲ್ಲಿ ಒಕ್ಕಲುತನದ ಕಾಲೇಜು ಪ್ರಾರಂಭವಾಗಲಿದೆಯಂತೆ; ಇದರಿಂದ ಕನ್ನಡಿಗರಿಗೆ ಏನಾದರೂ ಲಾಭವಿದೆಯೆ? ಕನ್ನಡ ನಾಡಿನಲ್ಲಿ ಒಕ್ಕಲುತನದ ಮೇಲೆ ಏನಾದರೂ ವಿಶೇಷ ಪರಿಣಾಮವಾಗಬಹುದೇ ಇದರಿಂದ?

ಉತ್ತರ:— ನಿಮ್ಮ ಮೊದಲನೆಯ ಪ್ರಶ್ನೆಗೆ ಉತ್ತರ-ಲಾಭವಾಗುವುದು. ಏನೆಂದರೆ ನಾಳಿನ ಆಶೆಯಿಂದ ಕಾಲೇಜಿಗೆ ಹೋಗುವ ವಿದ್ಯಾರ್ಥಿಗಳಿಗೆ, ಕರ್ನಾಟಕದಿಂದ ಪುಣೆಯ ವರೆಗೆ ಹೋಗಿ ಬರುವಷ್ಟೇ ಪೈಸೆ ಖರ್ಚಾಗುವುದು. ನಾಳಿನ ಆಶೆಯಿಂದ ತಲೆಯಿಟ್ಟು ಗೊಳಿಸಲಿರುವ ಒಕ್ಕಲುತನದ ಕಾಲೇಜಿಗೂ ಬೇರೆ ಒಕ್ಕಲುತನಕ್ಕೂ ಯಾವ ಬಗೆಯ ಸಂಬಂಧವೂ ಇರುವುದಿಲ್ಲ — ಇದು ನಿಮ್ಮ ಇನ್ನೊಂದು ಪ್ರಶ್ನೆಗೆ ಉತ್ತರ. ಬಹಳವಾದ ಪ್ರಯೋಗಕ್ಷೇತ್ರಗಳಲ್ಲಿ ವಿದ್ಯಾರ್ಥಿಗಳ ಪ್ರಯೋಗ ನಡೆಯುವುದರಿಂದ, ಅದಷ್ಟು ಕ್ಷೇತ್ರದ ಬೆಳೆ ಕಡಿಮೆಯಾದೀತು.

* * *

ಪ್ರಶ್ನೆ:— ನೇಪಲ್ಸರು ಹಿಂದುಸ್ಥಾನಕ್ಕೆ ಒಳ್ಳೆಯದನ್ನು ಮಾಡಿದರೋ ಕೆಡುಕನ್ನು ಮಾಡಿದರೋ? ಅವನ್ನು ಇಡಿಮ ಮಾಡಿ ಮಾಂಟ್ಗೊಮ್ಯಾರಿಯನ್ನು ನೈಸರ್ಗಾಂಯವನ್ನಾಗಿ ನಿಯಮಿಸಲಿಕ್ಕೆ ಕಾರಣವೇನು? ಅವರಲ್ಲಿರುವ ಅಂತಹ ವಿಶೇಷಗುಣಗಳೇನು?

ಉತ್ತರ:— ನೇಪಲ್ಸರ ಕೈಯಲ್ಲಿ ಹಿಂದುಸ್ಥಾನಕ್ಕೆ ಒಳ್ಳೆಯದನ್ನು ಮಾಡುವ ಅಧಿಕಾರವೂ ಇರಲಿಲ್ಲ; ಕೆಡುಕನ್ನು ಮಾಡುವ ಅಧಿಕಾರವೂ ಇರಲಿಲ್ಲ. ಬ್ರಿಟಿಷ್ ಪಾರ್ಲಿಮೆಂಟಿನ ರಾಜಕಾರ್ಯದ ಪ್ರಯೋಗದ ಯಶಾಪಯಶಗಳಿಗೆ ಕೆಲವು ಬಲಿಗಳು ಅನಾಗ ಬೇಕಾಗುವವು. ನೇಪಲ್ಸರು ಒಂದು ಒಲಿಯ ಪಕ್ಷ ಈಗ ಪಾರ್ಲಿಮೆಂಟಿಗೆ ಇನ್ನೊಂದು ರಾಜಕಾರ್ಯದ ಪ್ರಯೋಗ ಹೋಮ ನಡೆಯಿಸಬೇಕಾಗಿದೆ. ಅದಕ್ಕೆ ಬಲಿ ಪೂಜೆಗೆಂದು ಮಾಂಟ್ಗೊಮ್ಯಾರಿಯನ್ನು ಆರಿಸಿಕೊಂಡಿದ್ದಾರೆ—ಇನ್ನೇನೂ ವಿಶೇಷವಿಲ್ಲ.

ನಾವೆಲ್ಲಾ ಒಂದೇ!

ಶ್ರೀ. ರಂ. ಶ್ರೀ. ಮುಗಳಿ, ಎಂ.ಎ, ಬಿ.ಟಿ. ಸಾಂಗಲಿ

ನಾವೆಲ್ಲಾ ಒಂದೇ!

೧

ಹಿಂದೀಯರು ನಾವೆಲ್ಲಾ ಒಂದೇ
ಈ ಹೊಸ ರಾಷ್ಟ್ರದ ತಾಯ್‌ತಂದೇ,
ಹಿಂದೆಂದೂ ತಲೆದೋರದ ಭವ್ಯ ಭ-
ವಿಷ್ಯವು ಇದೆ ನಮ್ಮುಂದೇ—
ನಾವೆಲ್ಲಾ ಒಂದೇ!

೨

ಬೀರೆಯೆ ಎಂಬುದ ಗಾಳಿಗೆ ತೂರುತ
ಒಂದರ ತರತರವೆಂದೇ ಸಾರುತ,
ಬಾಳಿರಿ ಬಾಂಧವ್ಯವು ನಾವಾಗಿರೆ
ಏಗಿಲೇ ಮುಗಿಲಿದು ನಮ್ಮುಂದೇ—
ನಾವೆಲ್ಲಾ ಒಂದೇ!

೩

ಮೂರೆಡೆ ನೀರಿನ ಕಂದಕವಿರಿಸಿ
ಮೇಗಡೆ ಪುಲಿಗಳ ಕೊತ್ತಳ ನಿಲಿಸಿ,
ಪ್ರಕೃತಿಯು ನೀಡಿದೆ ನದಿಗಳು ಹರಿಯುವ
ನೆಲದಗಲವ ನಮಗೆಂದೇ—
ನಾವೆಲ್ಲಾ ಒಂದೇ!

೪

ಬೇಡಿದ ಬೆಳೆಯನು ಜಸುರಿನ ಕಳೆಯನು
ಚಿನ್ನದ ರಾಶಿಯ ಖನಿಜದ ಕೋಶವ
ಸೊಗದಲಿ ಬಾಳಿರಿ ಎಂದೊರೆಯುತ ನಿರಿ-
ಸಿದೆ ನಮ್ಮಿರಲಿ ತಂದೇ—
ನಾವೆಲ್ಲಾ ಒಂದೇ!

೫

ಹೊರದಾಳಿಗೆ ಕದತೆರೆಯುತ ನೆರೆದೆವು
ಹೋರಾಡಿದೆವೆಮ್ಮೊಳು ನಾಣ್ ಕೊರೆದೆವು;
ಹಿರಿರಾಳಿಕೆಯಾಳಾಗುತ ನಾಡನು
ಗೈದೆವು ನೆರೆಮನೆಯೆಂದೇ—
ನಾವೆಲ್ಲಾ ಒಂದೇ!

೬

ಜಗದೆಲ್ಲಾ ಜನ ಜಾತ್ರೆಯು ನೆರಸಿ
ಮತ-ಪಂಥದ ಮೇಲಾಟವ ಮೆರಸಿ
ಕಲಿತಾ ತಾಳ್ಮೆಯ ತುಳಿಯುತ ನಿಂದವು
ಬಿಂಧುಗಳನು ನಾವ್ ಕೊಂದೇ
ನಾವೆಲ್ಲಾ ಒಂದೇ!

೭

ಮುಗಿಲೆತ್ತರಕೇರಿದ ಮಾ ಪುರುಷರ
ಪಡೆದೆವು; ಪಾತಾಳದಿ ಬಿದ್ದಿರುವರ
ಮೇಲೇಳಿಸಲಾಗದೆ ನಾವ್ ಒದುಕನು
ನರಕವ ಮಾಡಿದೆವಿಂದೇ—
ನಾವೆಲ್ಲಾ ಬಂದೇ!

೮

ಹೋಗಲಿ ಹಳಕತೆ ಮರೆವಿನ ಕೊಳ್ಳಕೆ
ಸಾಗಲಿ ಬಾಳುವೆ ಹೊಸ ನಿರ್ಮಾಣಕೆ;
ನಾಡಿನ ಬಿಡುಗಡೆ ಎಲ್ಲರ ಏಳಿಗೆ,
ಇದೆ ಗುರಿಯಾಗಿಸಿ ಮುಂದೇ—
ನಾವೆಲ್ಲಾ ಒಂದೇ!

೯

ಹಲ ಶತಮಾನದಿ ಬಲಿದಿಹ ಚೀನೆಯ
ಕಳೆಯಲು ತ್ಯಾಗದ ತಾಳ್ಮೆಯ ಸೋನೆಯ
ಸುರಿಯಲು ಕಿರುಮನ-ಸೆರೆಯನು ಹರಿದೇ-
ಳುವ ಹಿರಿತನದಿಂದೆ—
ನಾವೆಲ್ಲಾ ಒಂದೇ!

೧೦

ಎಲ್ಲಾ ಮತವೆಲ್ಲಾ ನುಡಿಗಡಣವು
ಸಲ್ಲುವ ಸ್ವಾತಂತ್ರ್ಯದಿ ನಿಲೆ ತಾವು
ಎಲ್ಲರ ನಲುವೆಯೆ ಎಲ್ಲರ ನಂಟೇ
ನಮ್ಮಯ ಮಂತ್ರವು ಒಂದೇ!
ನಾವೆಲ್ಲಾ ಒಂದೇ!

೧೧

ಮಾನವ್ಯದ ಮಾಸಾಧನೆ ನಡೆದಿದೆ
ಸಂಮೇಳದ ಗೀತವು ಸವಿಪಡೆದಿದೆ;
ನಮ್ಮಯ ನಾಡಿನ ವಿಧವಿಧ ಸ್ವರಗಳ
ಸಮರಸ ಗಾಯನದಿಂದೇ
ನಾವೆಲ್ಲಾ ಒಂದೇ!

೧೨

ಹಿಂದೀಯರು ನಾವೆಲ್ಲಾ ಒಂದೇ
ಈ ಹೊಸ ರಾಷ್ಟ್ರದ ತಾಯ್-ತಂದೇ
ಹಿಂದೆಂದೂ ತಲೆದೋರದ ಭವ್ಯ ಭ-
ವಿಷ್ಯವು ಇದೆ ನಮ್ಮುಂದೇ
ನಾವೆಲ್ಲಾ ಒಂದೇ!

*ಚೀನಾದ ಪ್ರತಿಭಟನಾಗಲಿನಿಂದ ಆನ್ನ' ಕಾಡಂಬರಿಯಲ್ಲಿಯ ಒಂದು ಗೀತವಿದು.

ಆಹುತಿ

ಶ್ರೀ. ಎಚ್. ಕೇಶವಮೂರ್ತಿ, ಬಿ. ಎಸ್‌ಸಿ., ಹೊಸಕೋಟೆ

★

ಆತ್ಮಹತ್ಯೆ ಪಾಪವಂತೆ; ಆದರೆ ರಂಗಸೆಟ್ಟಿಯ ಹೆಂಡತಿ
ನೇಣು ಹಾಕಿಕೊಂಡು ಸತ್ತುದು ಪಾಪವೆನಿಸ-
ಬಹುದೆ? ಆದರೂ ಕಾಯಿದೆಯೆಂದರೆ ಕಾಯಿದೆ!
ಸೆಟ್ಟಿಯ ಹೆಂಡತಿ ಬದುಕಿ ಉಳಿದಿದ್ದರೆ,
ಕಾಯಿದೆ ಅವಳನ್ನು ಶಿಕ್ಷಿಸುತ್ತಿತ್ತು—
ಆತ್ಮಹತ್ಯೆಯ ಪ್ರಯತ್ನಕ್ಕಾಗಿ.

★

ಬ್ರಿಟಿಷರು ಮೊದಲು ಇಂಡಿಯಾ ದೇಶಕ್ಕೆ ಬಂದುದು ವ್ಯಾಪಾರಿಗಾರರಾಗಿ. ನಮ್ಮ ದೇಶದಲ್ಲಿ ಹಿಂದಿನಿಂದಲೂ ವ್ಯಾಪಾರಿಗಾರರು ವೈಶ್ಯರು. ಈಗ ಅವರಿಗೆ ವ್ಯಾಪಾರದಲ್ಲಿ ಧೈರ್ಯಸಾಲದೆ ಮತ್ತು ತಮ್ಮ ಹಳೆಯ ಪದ್ಧತಿಗಳನ್ನು ಅನುಕೂಲಿಸುವಂತೆ ಮಾರ್ಪಡಿಸದಿರುವುದರಿಂದ ತಾನೇ ನಮ್ಮ ದೇಶದ ಮುಖ್ಯ ವ್ಯಾಪಾರವೆಲ್ಲಾ ಗುಜರಾತಿಗಳ ಕೈಯಲ್ಲಿರುವುದು!

ಸಂಧ್ಯಾಸಮಯ. ರಂಗಸೆಟ್ಟಿಯು ಮನೆಯ ಹತ್ತಿರ ಬರುತ್ತಿದ್ದಾನೆ. ಅವನ ಭಂಟನಾದ ಅವನ ನೆರಳು, ಅವನಿಗಿಂತಲೂ ಮೊದಲೇ ಮನೆಯನ್ನು ತಲುಪಿದೆ. ಭುಜದ ಮೇಲೆ ಒಂದು ಕಾಳಿರುವ ಹಸುಬೆ ಇದೆ. ಬಲದ ಕೈಯಲ್ಲಿ ಒಂದು ಬರಿಯ ಚೀಲ ಇದೆ. ಭುಜದ ಮೇಲಿನ ಹಸುಬೆಯು ಕಾಳನ್ನು ಕಂಡು ಬಹು ದಿನಗಳಾಗಿತ್ತು. ಸೆಟ್ಟಿಯು ತೆಗೆದುಕೊಂಡು ಹೋದ ಸಾಮಾನುಗಳು ಸೆಟ್ಟಿಯೊಂದಿಗೇ ಮರಳುತ್ತಿದ್ದುವು. ಆದರೆ ಇಂದು— ಏನು ಕಾರಣವೋ ತಿಳಿಯದು— ಸಾಮಾನುಗಳೆಲ್ಲವೂ ಬಿರ್ಚಾಗಿನೆ. ಈ ದಿನದ ವ್ಯಾಪಾರವನ್ನು ನೋಡಿ ಸೆಟ್ಟಿಗೆ ಹಿಡಿಸಲಾರದ ಆಶ್ಚರ್ಯ, ಸಂತೋಷ; ಜೊತೆಗೆ ಹೊಟ್ಟೆಯಲ್ಲೆ ಏನೋ ಜುರ್ ಜುರ್ ಎನ್ನುತ್ತಿದೆ. ಹೊಟ್ಟೆಯನ್ನು ಎತ್ತಲಾರದೆ ಮೆಲ್ಲಮೆಲ್ಲನೆ ಹೆಜ್ಜೆಯ ಮೇಲೆ ಹೆಜ್ಜೆಯನ್ನಿಡುತ್ತಾ ಸೆಟ್ಟಿ ಬರುತ್ತಿದ್ದಾನೆ. ಹೊಟ್ಟೆಯ ಭಾರವನ್ನು ಸರಿದೂಗುವುದಕ್ಕೋ ಎಂಬಂತೆ, ಸೆಟ್ಟಿಯ ತಲೆ ಸ್ವಲ್ಪ ಮುಂದಕ್ಕೆ ಬಾಗಿದೆ; ತನ್ನ ಜೊತೆಗೆ ಭುಜಗಳನ್ನೂ ಮುಂದಕ್ಕೆ ಎಳೆದುಕೊಂಡಿದೆ.

ಮನೆಗೆ ಬರುತ್ತಲೂ ಬಾಗಿಲನ್ನು ತಳ್ಳಿದನು; ಜಿಲಕವನ್ನು ಹೊಗೆ ಹಾಕಿದ್ದುದು ತಿಳಿಯಿತು. ಬಾಗಿಲು ತೆಗೆದು ನೆಲದ ಮೇಲೆ ಏನನ್ನೋ ಹುಡುಕಿ, ಅದು ಸಿಕ್ಕದಿರಲು, 'ಲೇ,' ಎಂದು ರಾಗ ತೆಗೆದು, 'ಕೈಕಾಲಿಗೆ ನೀರಿಡುವುದು ಮರೆತೆಯಾ?' ಎಂದನು. ಒಳಬಾಗಿಲನ್ನು ಮುಂದಕ್ಕೆ ನೂಕಿ ಒಳಕ್ಕೆ ಹೋದನು. ಹೆಂಡತಿಯ ಸುಳುವು ಕಾಣಲಿಲ್ಲ, ಸ್ವಲ್ಪ ದೂರದಲ್ಲಿ ಅಕೆಯು ನಿಂತಿದ್ದಂತೆ ಭಾಸವಾಯಿತು. ಆ ಹೆಚ್ಚುಕತ್ತಿದ್ದ ಸಂಜೆಯ ಕತ್ತಲೆಯಲ್ಲಿ ಹತ್ತಿರ ಹೋಗಿ, 'ಲೇ,' ಎಂದನು. ಉತ್ತರ ಬರಲಿಲ್ಲ. ಕೈಹಿಡಿದು ಅಲ್ಲಾಡಿಸಿದನು; ಕೈ ತಣ್ಣಗಿತ್ತು. ಕೈ ಜೊತೆಗೆ ಕಾಲುಗಳೂ ಹಿಂದಕ್ಕೆ ಮುಂದಕ್ಕೆ ಬಂದುವು. ತಲೆಯ ಮೇಲೆ ಹೊಡೆದಂತಾಯಿತು. 'ಹಾ!' ಎಂದು ಚೀರಿ ಬಿದ್ದುಬಿಟ್ಟನು.

ಆ ವಿಕಾರಧ್ವನಿಯನ್ನು ಕೇಳಿ ಅನೇಕರು ಮನೆಯೊಳಕ್ಕೆ ಬಂದರು. ಅನಂತರ ಒಬ್ಬನು ಒಂದು ದೀಪವನ್ನು ತಂದನು.

ಭಯಂಕರ ದೃಶ್ಯವು ಕಂಡಿತು. ಸಂಗಮ್ಮನು ನೇಣು ಹಾಕಿಕೊಂಡಿದ್ದಾಳೆ. ಅವಳ ಕಾಲುಗಳು ನೆಲಕ್ಕೆ ತಗುಲುತ್ತಲಿವೆ. ಕಾಲಹತ್ತಿರ ಸೆಟ್ಟಿಯು ಮೂರ್ಛಿತನಾಗಿ ಬಿದ್ದಿದ್ದಾನೆ.

ಬುದ್ಧಿಯು ಕಡಿಮೆ ಇದ್ದವರು ಆ ಗುಂಪಿನಲ್ಲಿ— ಗುಂಪು ಹೆಚ್ಚುತಲೇ ಇದ್ದಿತು— ಶಾನುಭೋಗ ಶಾಮಣ್ಣ ಒಬ್ಬಾತ. ಸೆಟ್ಟಿಯನ್ನು ಹೊರಕ್ಕೆ ತಂದು, ಗುಂಪು ಸುತ್ತು ಸೇರದಂತೆ ಮಾಡಿ ಉಪಚರಿಸಲು ಪ್ರಾರಂಭಿಸಿದನು.

ಸ್ವಲ್ಪ ಹೊತ್ತಿನಲ್ಲಿ ಪೋಲೀಸ್ ಸಬ್‌ಇನ್‌ಸ್ಪೆಕ್ಟರು ಮತ್ತು ಡಾಕ್ಟರು ಬಂದರು. ಡಾಕ್ಟರು ಪರೀಕ್ಷೆ ಮಾಡಿದ ನಂತರ ಶವವನ್ನು ಕೆಳಗೆ ಇಳಿಸಿದರು. ಡಾಕ್ಟರು 'ಆತ್ಮಹತ್ಯೆ' ಎಂದು ತೀರ್ಮಾನಿಸಿದ್ದರು.

ಇನ್‌ಸ್ಪೆಕ್ಟರಿಗೆ ತಮ್ಮ ಅನುಮಾನವನ್ನು ಪೂರ್ತಿ ಮುಚ್ಚಿಡಲು ಸಾಧ್ಯವಾಗಿರಲಿಲ್ಲ.

ಮೊದಲು ಯಾರು ಮನೆಗೆ ನುಗ್ಗಿದವರೆಂದು ವಿಚಾರಿಸಲು, ಯಾರೂ ಮುಂದೆ ಬರಲಿಲ್ಲ. ನಿಂತಲ್ಲೇ ಒಬ್ಬನು ಹೇಳಿದನು: 'ಸ್ವಾಮೀ, ಸೆಟ್ಟಿ ಬಲು ಜಿಪುಣ. ಹೊಟ್ಟೆತುಂಬ ಒಂದು ದಿನ ವಾದರೂ ತಿಂದವನಲ್ಲ. ಕೂಡಿಟ್ಟ ಹಣದ ಜಗಳದಿಂದ ಇದಾಗಿರಬಹುದು,' ಎಂದು.

ಕೆಲವರು 'ಛೇ, ಛೇ,' ಎಂದರು. ಅನೇಕರು 'ಉಹೂ' ಗುಟ್ಟಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಇಪ್ಪರಲ್ಲಿ ಸೆಟ್ಟಿಯು ಚೇತರಿಸಿಕೊಳ್ಳಲು ಎಲ್ಲರ ಗಮನವೂ ಅವನ ಮೇಲೆ ಹೋಯಿತು. 'ಅಯ್ಯೋ, ಅಯ್ಯೋ, ದೇವರೇ,' ಎನ್ನುತ್ತಾ ಎದ್ದುಕುಳಿತನು.

ಸೆಟ್ಟಿಗೆ ತನಗೆ ತಿಳಿದುದನ್ನು ಹೇಳಬೇಕೆಂದು ಅಪ್ಪಣೆಯಾಯಿತು. 'ನನ್ನ ಕೇಳಬೇಡಿ, ನನಗೇನೂ ತಿಳಿಯದು,' ಎಂದು ಸೆಟ್ಟಿ ಕಷ್ಟಪಟ್ಟು ಹೇಳಿದನು. ಪುನಃ ಅಪ್ಪಣೆಯಾಯಿತು. ಸೆಟ್ಟಿಯು ತಾನು ಬಂದಾಗಿನಿಂದ ನಡೆದುದನ್ನು ಹೇಳಿದನು. ಇನ್‌ಸ್ಪೆಕ್ಟರು 'ಬಾಗಿಲು ಹೊರಗಡೆ ಜಿಲಕಹಾಕಿತ್ತು,' ಎಂದು ಮುಗುಳುನಗೆ ನಗುತ್ತಾ ಡಾಕ್ಟರ ಕಡೆ ನೋಡಿದರು.

'ಜಿಲಕ ಹಾಕಿದ್ದುದನ್ನು ನಾನು ನೋಡಿದೆ.' ಎಂಬ ಶಬ್ದವೊಂದು ಧ್ವನಿ. ಎಲ್ಲರೂ ಆಕಡೆ ತಿರುಗಿದರು. ಆ ಧ್ವನಿಯು ಒಡೆಯ ಹೇಳಿದನು: "ಕುರಿ ಕಾಯುವ ಬೋರ, ಬೆಳಿಗ್ಗೆ ಕುರಿ ಬಿಡುವ ಮುಂಜೆ ಜಿಲಕ ಹಾಕಿದ್ದುದನ್ನು ನಾನು ನೋಡಿದೆ. 'ಯಾಕೊ?'

ಎಂದೆ. 'ಸಂಗಮ್ಮ ನನ್ನ ಹೋಗುವಾಗ ಬಾಗಿಲು ಹಾಕಿ ಕೊಂಡು ಹೋಗು ಅಂದಳು,' ಎಂತ ಹೇಳಿದ. ನನ್ನ ಕೆಲಸಕ್ಕೆ ನಾನು ಹೊರಟೆ."

"ಖಾಸಿಮ್," ಎಂದರು ಇನ್‌ಸ್ಪೆಕ್ಟರು. ಖಾಸಿಮ್ ಆಗಲೇ ಚೋರನನ್ನು ಕರೆತರಲು ಹೊರಟಿದ್ದನು. ಚೋರನು ಮನೆಯಲ್ಲಿ ನಡುಗುತ್ತ ಪುಲಗಿದ್ದನು. ಕಾನ್‌ಸ್ಟೇಬಲ್ ಹೋದ ಕೂಡಲೇ 'ಹೋ,' ಎಂತ ಅಳುವುದಕ್ಕೆ ಪ್ರಾರಂಭಿಸಿದನು. ಉಪಾಯ ಮಾಡಿ ಅವನನ್ನು ಕರೆದುಕೊಂಡು ಬರಬೇಕಾಯಿತು. ಬಂದ ಕೂಡಲೇ ಇನ್‌ಸ್ಪೆಕ್ಟರಿಗೆ ಅಡ್ಡಬಿದ್ದು ಅವರ ಕಾಲು ಹಿಡಿದು ಅಳುತ್ತಾ, 'ಬುದ್ಧಿ, ನಂದೇನೂ ತಪ್ಪಿಲ್ಲಾ, ಬುದ್ಧೀ, ಉಳಿಸ್ಬೇಕು ಬುದ್ಧೀ,' ಎಂದು ಜಾಯಿ ಜಾಯಿ ಬಿಡುತ್ತಾ ಅಂಗಲಾಚಿದನು. ಖಾಸಿಮ್ ಅವನನ್ನು ಅಷ್ಟರಲ್ಲಿಯೇ ಎತ್ತಿ ನಿಲ್ಲಿಸಿದ್ದನು.

'ನೀನೇಕೆ ಬಾಗಿಲು ಬಲಕ ಹಾಕಿದೆ?'

'ಯಾರ್ಗೂ ಏಳ್ಯಾಡಾಂತ ಸೆಟ್ಟಮ್ಮ ಏಳವಳೆ, ಬುದ್ಧೀ, ಎಂದು ಕಾಲು ಹಿಡಿಯಲು ಜಾರಿದನು.

'ಅಲ್ಲಿ ನೋಡು ಸಂಗಮ್ಮನನ್ನು,' ಎಂದು ಇನ್‌ಸ್ಪೆಕ್ಟರು ಹೆಣದ ಕಡೆ ಬೆರಳು ನೀಡಿದರು. 'ಅವಳಿಂದ ನಿನಗೇನೂ ಪದರಿಕೆ ಇಲ್ಲ. ಹೇಳದಿದ್ದರೆ ಸ್ಟೇಷನ್—'

'ಬುದ್ಧೀ, ಖ್ಯಾಡ, ಬುದ್ಧೀ,' ಎಂದು ನಡುಬೆ ಚೋರನು ಜಾಯಿ ಹಾಕಿದನು.

'ಹೇಳು ಹಾಗಾದರೆ,' ಎಂದು ಇನ್‌ಸ್ಪೆಕ್ಟರು ಮುಂದು ಪಡಿಸಿದರು.

'ಒತ್ತಾರೆ, ಬುದ್ಧೀ, ನಾ ಕುರೀ ಬುಟ್ಕೊಂಡು ಓಕಿದ್ದೆ,' ಚೋರನು ಕೆಳಕ್ಕೆ ನುಸುಳದಂತೆ ಖಾಸಿಮ್ ಪಕ್ಕದಲ್ಲಿ ನಿಂತಿದ್ದನು. 'ಸೆಟ್ಟಿಮ್ಮ ನನ್ನ ಕರ್ದು, ಅಟ್ಟೀಗೆ ಕರ್ಕೊಂಡೋಗಿ, ಎಲೆ ಅಡಿಕೆ ಎಳ್ತಾಣೆ ಕೊಟ್ಟು, 'ಚೋರ, ನಂಗೊಂದು ಒಸೀ ಕೆಲ್ಸಾ ಮಾಡ್ತೀಯಾ?' ಅಂದ್ಲು. 'ಏನತ್ತಾಯೀ ಅದೂ, ಕಟ್ಟೀಗೇ ಸೀಳ್ಬೇಕಾ?' ಅಂದೆ 'ಅಲ್ಲಾ ಚೋರ, ಅದು ನೀನೇ ಮಾಡ್ಬೇಕು,' ಅಂತ ಬೇಗೆ ನೋಡಿದ್ಲು 'ನಂ ಕೈಲಿ ಆಗ್ತದಾ ಅಕ್ಕಸ್ನ?' ಅಂದೆ. 'ನೋಡು ಚೋರ, ನಾನೊಂದು ಪೂಜೇ ಮಾಡ್ಬೇಕು. ಯಾರೂ ನನ್ನ ಮಾತಾಡಿಸ್ಬಾರ್ದು. ಅದ್ಕೆ ನೀನು ಒರಗೆ ಸಿಲ್ಕ್ಯಾ ಆಕ್ಕೊಂಡು ಓಗು. ಜೋ ಪುಣ್ಣಯ ಬರ್ತದೆ. ನಂಜೆ ನಿಂಗೆ ಸೆಟ್ಟಿ ಸಿಕ್ಕರೆ ಏಳು 'ಮಗನ್ ಮನೇಗೆ ಓಗ್ಬೇಕಂತೆ' ಅಂತ ಅಂದ್ಲು. 'ನೀನೇನೇನೋ ಏಳ್ತೀಯಾ. ನಂಗೆ ತಿಳಿಯಾಕಿಲ್ಲಾ,' ಅಂದೆ ಸೆಟ್ಟಮ್ಮ ಕೈ ಇಡ್ಕೊಂಡು ಜೋಡ್ಕೊಂಡ್ಲು ನಂಗೆ ಸಿಸ್ಟಾ ರಾಗಿ 'ಆಗ್ಲಿ,' ಅಂದೆ. ಅಟೀ ಬುದ್ಧೀ ನಂಗೆ ಗೊತ್ತು; ನನ್ನ ಉಳಿಸ್ಬೇಕು ಬುದ್ಧೀ,' ಎಂದು ಅವರ ಕಾಲ ಕಡೆ ಜೈಜಾಚಿದನು.

ಸೆಟ್ಟಿಯು ಸುಸ್ಮನೆ ಕುಳಿತಿದ್ದನು. ಕಣ್ಣು ಬಿಟ್ಟಿದ್ದರೂ ಕನ್ನ ಎದುರಿಗೆ ನಡೆಯುತ್ತಿರುವುದು ಏನೂ ಕಾಣಿಸದು; ಮಾತು ಕೇಳಿದರು; ಮನದಲ್ಲಿ ಇಲ್ಲಿಲ್ಲ.

'ಸೆಟ್ಟಿಯ ವಿಚಾರವನ್ನೆಲ್ಲಾ ಯಾರಾದರೂ ಹೇಳುತ್ತೀರಾ?' ಎಂದರು ರಸಿಕ ಇನ್‌ಸ್ಪೆಕ್ಟರು.

'ಶಾನುಭೋಗರೇ,' 'ಶಾಮಣ್ಣನೋರೇ,' ಗುಂಪಿನಲ್ಲಿ ಗುಜುಗುಜು.

ಶಾನುಭೋಗ ಶಾಮಣ್ಣ ಪ್ರಾರಂಭಿಸಿದನು: 'ಈಗ್ಗೆ ನಲವತ್ತು ವರ್ಷಗಳ ಹಿಂದಿನ ಮಾತು. ಸೆಟ್ಟಿ ಮತ್ತು ಆತನ ಹೆಂಡತಿ ಈ ಹಳ್ಳಿಗೆ ವಲಸೆ ಬಂದರು. ಬಂದು ಒಂದು ಸಣ್ಣ ಅಂಗಡಿ ಇಟ್ಟುಕೊಂಡು ಸಂಸಾರ ಸಾಗಿಸುತ್ತಿದ್ದರು. ಈಚಿನ ಹತ್ತು ವರ್ಷಗಳ ವರೆಗೆ ಸೆಟ್ಟಿ ಸುಖವಾಗಿ ಜೀವನ ಜರುಗಿಸಿದ. ಆದರೆ ಈಚೆಗೆ ಊರಿನಲ್ಲಿ ೪-೫ ಅಂಗಡಿಗಳಾದುವು. ಸಿಕ್ಕಾಪಟ್ಟೆ ಸಾಲ ಕೊಟ್ಟು ಒಂದೊಂದಾಗಿ ಪಾಪರ್ ಆದುವು. ಪಾಪರಾದ ಅಂಗಡಿಗೆ ಬದಲು ಹೊಸ ಅಂಗಡಿ ಬರುತ್ತಿತ್ತು. ಸೆಟ್ಟಿಯನ್ನು ಕೇಳುವವರೇ ಇಲ್ಲ. ದಿನಕ್ಕೆ ಮೂರು ಕಾಸಿನ ವ್ಯಾಪಾರ ಕೂಡ ಇಲ್ಲ. ಜೀವನ ಕಷ್ಟವಾಯಿತು. ಸೆಟ್ಟಿ ಒಂದು ಉಪಾಯ ಮಾಡಿದ. ಬೆಳಿಗ್ಗೆ ಮುದುಕ ಅನ್ನ ಕಟ್ಟಿಕೊಂಡು ಹಳ್ಳಿಗಳ ಮೇಲೆ ಹೊರಡುತ್ತಿದ್ದ. ಅಡಿಕೆ, ಎಲೆ, ಬೀಡಿ, ಕಡ್ಡಿಪುಡಿ ಇವನ್ನೆಲ್ಲಾ ಒಂದು ಚೀಲದಲ್ಲಿ ತೆಗೆದುಕೊಂಡು ಹೋಗುತ್ತಿದ್ದ. ಸಂಜೆಗೆ ಮನೆಗೆ ವ್ಯಾಪಾರ ಮುಗಿಸಿಕೊಂಡು ಬರುತ್ತಿದ್ದ. ಇದೇ ರೀತಿ ಈಗ ೭-೮ ವರ್ಷಗಳಿಂದ ಜೀವನ ಜರುಗಿಸುತ್ತಿದ್ದ. ಈಚೆಗೆ ಮೂರು ತಿಂಗಳಿಂದ ಜೀವನ ಬಹು ಕಷ್ಟವಾಯಿತು. ಸುತ್ತಮುತ್ತಿನ ಹಳ್ಳಿಗಳಲ್ಲೆಲ್ಲಾ ಅಂಗಡಿಗಳಾದುವು—ನಾಲ್ಕು ಮನೆಯ ಹಳ್ಳಿಯಲ್ಲಿಯೂ ಕೂಡ ಒಂದು ಅಂಗಡಿಯಾಯಿತು. ಸೆಟ್ಟಿಯ ವ್ಯಾಪಾರವು ಕಡಿಮೆಯಾಯಿತು. ಒಂದೊಂದು ದಿನ ಕೊಂಚ ವ್ಯಾಪಾರ; ಒಂದೊಂದು ದಿನ ಏನೂ ಇಲ್ಲ. ಇನ್ನೊಬ್ಬರಿಂದ ಏನೂ ತೆಗೆದುಕೊಳ್ಳುವ ಸ್ವಭಾವವಲ್ಲ ಸೆಟ್ಟಿಯದು. ಮಕ್ಕಳಿಲ್ಲ ಮರಿಗಳಿಲ್ಲ. ಒಂದು ಮಗುವು ಆಗಿ ತೀರಿಹೋಗಿತ್ತು. ಸೆಟ್ಟಿ ವರ್ಷಕ್ಕೆ ಒಂದು ಸಲ, ಈಗ ಕೆಲವು ವರ್ಷಗಳಿಂದ ಬಿಂಗಳೂರಿಗೆ ಹೋಗಿಬರುತ್ತಿದ್ದ. ಸೆಟ್ಟಿಯ ತಮ್ಮನ ಮಗ ಅಲ್ಲಿ ಇದ್ದಾನಂತೆ. ಬೀಡಿ, ಸಿಗಾರೇಟ್, ಬಟ್ಟೆ-ಬರೆ ಎಲ್ಲಾ ತರುತ್ತಿದ್ದ.'

'ಮಗನ ಹತ್ತಿರ ಏಕೆ ಹೋಗಲಿಲ್ಲ, ಜೀವನ ಇಲ್ಲಿ ಕಷ್ಟವಾದಾಗ?' ಇನ್‌ಸ್ಪೆಕ್ಟರು ಪ್ರಶ್ನಿಸಿದರು.

'ಸ್ವಾಮೀ, ಇಬ್ಬರು ಹೆಂಗಸರಿಗೆ ಒಂದು ಮನೆಯಲ್ಲಿರಲು ಹೊಂದುತ್ತದೆಯೆ? ಅತ್ತೆ-ಸೊಸೆಯರಿಗೆ ಯಾವಾಗಲೂ ಜಗಳ,' ಎಂದು ಶಾಮಣ್ಣ ನಕ್ಕನು.

'ಮಗನ ಮನೆಗೆ ಹೋಗು ಎಂದುದರ ಅರ್ಥವೇನಿರಬಹುದು?' ಇನ್‌ಸ್ಪೆಕ್ಟರು ಗಟ್ಟಿಯಾಗಿ ಯೋಚಿಸಿದರು.

'ಮಗ ಸತ್ತಿದ್ದಾನೆ, ತಾನೂ ಸತ್ತಳು; ಸೆಟ್ಟಿಯು ಮಗನ ಮನೆಗೆ ಕನ್ನ ಹಿಂದೆ ಒರಲೀ ಎಂತ,' ಎಂದು ಒಬ್ಬನು ಉತ್ತರ ಕೊಟ್ಟನು.

'ಛೇ!' ಎಂದನು ಶಾಮಣ್ಣ, 'ಹಾಗಲ್ಲ, ಸ್ವಲ್ಪ ಯೋಚಿಸಿ

ದರೆ ತಿಳಿಯುತ್ತೆ,' ಎಂದು ಮುಂದುವರೆಸಿದನು. ಜೀವನ ಕಷ್ಟವಾಯ್ತು. ಉಪವಾಸ ಸಾಯುವ ಹೊತ್ತು ಬಂತು. ಸಂಗಮ್ಮ ಗಂಡನಿಗಾಗಿ ಏನು ಮಾಡಲೂ ಹಿಂದೆಗೆಯುವವಳಲ್ಲ. ತಾವಿಬ್ಬರೂ ತಾನು ಹಿಂದೆ ಜಗಳವಾಡಿರುವ ಸೊಸೆಯ ಮನೆಯಲಿ ಇರಲು ಆಗುವುದಿಲ್ಲವೆಂತ, ಸೆಟ್ಟಿಯೊಬ್ಬನೇ ಅವರ ಮನೆಗೆ ಹೋಗಲೆಂತ, ತಾನು ಅಡ್ಡ ಬರದಂತೆ ಹೊರಟು ಹೋಗಿದ್ದಾಳೆ. ಈ ರೀತಿ ತಿಳಿಯದೇ ಹೋದೀತೆಂಬ ಭಯದಿಂದ, 'ಮಗನ ಮನೆಗೆ ಹೋಗು,' ಎಂತ ಹೇಳಿ ಪ್ರಾಣ ಬಿಟ್ಟಿದ್ದಾಳೆ,' ಎಂದು ಶಾಮಣ್ಣ ಮುಗಿಸಿದನು.

'ಹೂ,' 'ಸರಿ, ಸರಿ,' 'ಎಂಥಾ ಮಹಾತ್ಮಳು,' 'ಆಬ್ಬಾ! ಏನು ತ್ಯಾಗ,' ಎಂದಿತು ಗುಂಪು.

* * *

ರಂಗಸೆಟ್ಟಿಯು ಹೆಂಡತಿಯ ದಿನ-ವಾರಗಳನ್ನು ಮಾಡಿದನು. ಬೆಂಗಳೂರಿಗೆ— ಮಗನ ಮನೆಗೆ— ಹೊರಟನು. ಈಗ ರಂಗ ಸೆಟ್ಟಿ ಅವನ ತಮ್ಮನ ಮನೆಯಲ್ಲಿ ಸುಖವಾಗಿದ್ದಾನೆ. ಆಹುತಿಯು ಸಾರ್ಥಕವಾದಂತಾಯಿತು.

"ಬದುಕಲಿಹೆವು! ಬದುಕಲಿಹೆವು"

★

ಶ್ರೀ. ಕೆ. ಮಂಜುನಾಥ, ಹೊಸಪೇಟೆ

೧

ಬದುಕಲಿಹೆವು ಬದುಕಲಿಹೆವು
ಇಹದ ಜಗದ ಇರುಕಿನಲ್ಲಿ,
ಮುಸಗಿ ಬರುವ ಸಾವು-ನೋವು
ಸಂಕಟಗಳ ಬಿರುಕಿನಲ್ಲಿ;
ಸಾಸಿರಾರು ಕಂಟಕಗಳ
ಘೋರ ಹಿಡಿತ ದಿಮ್ಮಿನಲ್ಲಿ
ಮೂಕವಾಗಿ ಬತ್ತುತಿರುವ
ಹೃದಯದಳಲ ಜಿಮ್ಮಿನಲ್ಲಿ
ಬಾಳಿ ಬದುಕಲಿಹೆವು ನಾವು
ತಾಳಿ ಬದುಕಲಿಹೆವು ನಾವು!!

೨

ಬೆವರಾರಿದ ಮಣ್ಣಿನಲ್ಲೆ ಅಡಗುತಿಹೆವು ದುಡಿದು
ಒತ್ತಿಟ್ಟಿಹ ಅಕ್ಕಸದಲೆ ಬೂದಿಗೊಳ್ಳುವೆವು ಮಡಿದು.
ಆತ್ಮ ಹಾರಿ ಹೋದುದೆಂದೋ
ಅದನು ಮರಳಿ ಹೊಂದಲೆಂದೋ?
ಹಾರಯಿಕೆಯಲೇ ಕಣ್ಣ ಮುಚ್ಚಿ ಬದುಕಲಿಹೆವು ನಾವ!
ದುರಿತಸಾಗರದಲಿ ಬಾಳನೆತ್ತಿರುವುದಿದೊಂದೆ ನಾವ!

೩

ಬಯಕೆ ಬಾಳ ಗುಡಿಲಿನಲ್ಲಿ ಮೌನವಾಗಿ
ನಿಂತಿದೆ;
ನಮ್ಮ ಹೊಟ್ಟೆಗಡಲಿನಲ್ಲಿ ಕೀರ್ತಿಕಿರಣ
ಕಂತಿದೆ.
ಎಲ್ಲಿಡೆಯಲಿ ಮುಗಿಲು!
ಬಗೆಬಾನಲಿ ಧಿಗಿಲು!
ನಾಳೆಯನ್ನು ನೆನೆಯಲಾರೆವೆಮ್ಮಗ್ಗಿ ನಿನ್ನೆ ಸೊನ್ನೆ!
ಇಂದು, ಇದೋ ಈ ನಿಮಿಷ ಒಂದೆಯಿರುವ ಚಿನ್ನೆ!
ಅಡಿಗಡಿಗೆ ಏರುತಿರುವ ಭಾರವನ್ನು ಹೊತ್ತು
ನಡೆವುದೊಂದೆ ಗೊತ್ತು!

೪

ಬದುಕಿ ಬದುಕಿ ಬಾಳಿನಲ್ಲಿ
ತಾಪಗಳ ಹುಟ್ಟ ಬೆದಕಿ
ಕಣ್ಣೀರ ಕರೆಯಿಸುತ್ತಲಿದ್ದ
ಗುಳ್ಳೆಗಳನು ಕೆದಕಿ ಕೆದಕಿ
ಸಾಕತಾಳದಲ್ಲಿ ಇಳಿದು
ಬಾಳಬೇಗೆಯೆಲ್ಲ ತಿಳಿದು
ಅದು-ಇದು ಯಾವುದನೊಲ್ಲದೆ
ಇರಲೆಳಸುವ ಬಾಳುವೆಯೊಲ್ಲದೆ
ಬದುಕಲಿಹೆವು ಬದುಕಲಿಹೆವು
ಹರಿಯ ಜಗದ ಹೊರಳಿನಲ್ಲಿ;
ಬದುಕಲಿಹೆವು ಬದುಕಲಿಹೆವು
ಬಾಳನೊಗದ ಉರುಳಿನಲ್ಲಿ!!

ಶಿಕ್ಷಣದಲ್ಲಿ ಕ್ರಾಂತಿ ★

ಶ್ರೀ. ಕನ್ನಮಂಡಲ ರಾಧಾಕೃಷ್ಣನ್
ಸೇವಾಗ್ರಾಮ

ಭಾರತೀಯರಿಗೆ ವರಾಧೀನತೆ ಬಂದು ಒದವಿದುದೂ, ಇದುವರೆಗೆ ಉಳಿದು ಕಾಡುತಿರುವುದೂ ಇನ್ನೇತಕ್ಕೂ ಅಲ್ಲ; ಸರಿಯಾದ ವಿದ್ಯೆಯ ಅಭಾವವೇ ಇದಕ್ಕೆ ಮುಖ್ಯ ಕಾರಣ! ನಮ್ಮ ಬಿಡುಗಡೆಗೆ ಈಗ ಬೇಕಾಗಿರುವ ಪ್ರಮುಖಸಾಧನವೆಂದರೆ ಉಚಿತರೀತಿಯ ಶಿಕ್ಷಣ!

★

ಭಾರತ ಸ್ವರಾಜ್ಯದ ಹೊಸಲಿನಲ್ಲಿ ನಿಂತಿದೆ. ಇಂದಲ್ಲದಿದ್ದರೆ ಇನ್ನು ಎರಡು ನೂರು ವರ್ಷಗಳಾದಾವು ಪೂರ್ಣ ಸ್ವರಾಜ್ಯ ನಮ್ಮ ಕೈಗೆ ಬರಲು. ಸ್ವರಾಜ್ಯ ಎಂದರೆ ಪೂರ್ಣ ಅಧಿಕಾರ. ನಮಗೆ, ನಮ್ಮ ದೇಶಕ್ಕೆ, ನಮ್ಮ ಸಂಪತ್ತಿಗೆ ನಾವೇ ಒಡೆಯರು.

ನಮ್ಮಲ್ಲೇನು ಕಡಿಮೆ ಇದೆ? ಜನಸಂಖ್ಯೆ ೪೦ ಕೋಟಿ. ಭೂಮಿಯ ಮೇಲಿನ ಜನರಲ್ಲಿ ನಾಲು ಭಾರತೀಯರು. ಖನಿಜ, ಸಂಸ್ಕೃತಿ, ಶಾಸ್ತ್ರ, ನೀತಿ, ಧರ್ಮ ಯಾವುದರಲ್ಲಿ ನಾವು ಕಡಿಮೆ? ಯಾರಿಗೆ ಕಡಿಮೆ?

ಹೌದು, ಕೆಲವು ವಿಷಯಗಳಲ್ಲಿ ನಾವು ನಿಜವಾಗಿಯೂ ಹಿಂದೆ ಬಿದ್ದಿದ್ದೇವೆ! ಫಲವತ್ತಾದ ಭೂಮಿ ಇದ್ದರೂ ೧೦ ವರ್ಷಕ್ಕೊಮ್ಮೆ ಕ್ಷಾಮ ಬೀಡಿತರು. ಕೆಲವು ಪ್ರಾಂತಗಳಲ್ಲಂತೂ ಪ್ರತಿವರ್ಷ ಕ್ಷಾಮ ಬರಲೇಬೇಕು. ವಿಶಾಲವಾದ ನಾಡು: ಕೆಲಸವಿಲ್ಲದ ಜನ. ಆದರೂ ನಮ್ಮ ಹೊಟ್ಟೆಬಟ್ಟೆಗಾಗಿ ದುಡಿವ ಶ್ರದ್ಧೆ ಇಲ್ಲ ನಮಗೆ. ನಾವು ತಿನ್ನುವುದು ಆಹಾರವೇನು?

ಇದಕ್ಕೆಲ್ಲ ಕಾರಣವೇನು? ಬರಿಯ ಗುಲಾಮಗಿರಿಯಲ್ಲ! ಇಂಗ್ಲೀಷು ಜನ ನಮ್ಮ ಉದ್ಯೋಗಶೀಲರ ಕೈಯಲ್ಲಿಯ ಕುಶಲತೆ ಕಿತ್ತರು. ಅಷ್ಟೇ ಅಲ್ಲ, ಅಜ್ಞಾನದ ಅಂಧಕಾರದಲ್ಲಿ ಸುಲಭವಾಗಿ ಮುಳುಗಿಸಿದರು. ನಮ್ಮ ವಿದ್ಯೆ, ಬುದ್ಧಿ, ಸಂಸ್ಕೃತಿ ಎಲ್ಲಾ ಅಂದೇ ನಾಶವಾಯಿತು. ಅಜ್ಞಾನದ ಗುಲಾಮರಾದೆವು.

ಹೀಗೆಷ್ಟು ದಿನ ಆದೀತು. ನಾಳೆ ನಮ್ಮ ಸರ್ಕಾರ ಬಂದರೆ, ನಮ್ಮ ಕೈಗೆ ಪೂರ್ಣ ಅಧಿಕಾರ ಬಂದರೆ ನಮ್ಮನ್ನು ನಾವೇ ನಾಶಗೊಳಿಸದಿರಲು ನಮಗೆ ವಿದ್ಯೆ ಬೇಕು. ಕಪಿಯ ಕೈಯಲ್ಲಿ ಕತ್ತರಿ ಕೊಟ್ಟಂತೆ ನಮಗೆ ಅಧಿಕಾರ ಬಂದರೆ ಸಾಲದು. ಅದನ್ನು ದುರುಪಯೋಗ ಮಾಡದ ಶಕ್ತಿ, ಯುಕ್ತಿ ಬೇಕು. ಇಲ್ಲದಿದ್ದರೆ ನಮ್ಮನ್ನು ನಾವೇ ತಿಂದಂತಾದೀತು.

ಇಂದು ನಮಗೆ ಮುಖ್ಯವಾಗಿ ಬೇಕಾದುದು ದೊಡ್ಡ ದೊಡ್ಡ ಯಂತ್ರಶಾಲೆಗಳಲ್ಲ; ಚಿತ್ರಮಂದಿರಗಳಲ್ಲ; ಕಾರ್ಖಾನೆಗಳಲ್ಲ. ನಮಗೆ ಬೇಕಾದುದು ನಮ್ಮ ೪೦ ಕೋಟಿಗೆ ವಿದ್ಯೆ. ಬರಿಯ ಸಹಿ ಹಾಕುವುದರ ಪ್ರಚಾರ ಯಾವ ಮೂಲೆಗೆ? ಅಕ್ಷರ, ಅಂಕಗಣಿತ ಬಂದರೆ ಸಾಲದು. ದೇವರು ಕೊಟ್ಟ ಶಕ್ತಿಯನ್ನು ಯುಕ್ತಿಯಿಂದ ಉಪಯೋಗಿಸಿ, ಪ್ರಯೋಜನಕಾರಿಯಾಗಿ ಬಳಸಲು ಬುದ್ಧಿ ಬೇಕು. ಅಂತಹ ವಿದ್ಯೆ ಬೇಕು. ಅಂತೇ ಅಲ್ಲವೆ ರಾಜಾಜಿ ಮುಂಬಯಲ್ಲಿ ಹೇಳಿದ್ದು: "ಇಂದು ನಮಗೆ ಬೇಕಾದ ಮೂಲ ಉದ್ಯೋಗ— ವಿದ್ಯೆ."

ಅದೆಲ್ಲ ಸರಿ! ಈಗ ವಿದ್ಯೆ ಸಾಗುತ್ತಿಲ್ಲವೆ? ಎಂತೆಂತಹ ದೊಡ್ಡ ದೊಡ್ಡ ಮನುಷ್ಯರು ಇದ್ದಾರೆ ನಮ್ಮಲ್ಲಿ. ವೇದಾಂತಿಗಳಲ್ಲಿ ರಾಧಾಕೃಷ್ಣ, ವಿಜ್ಞಾನಿಗಳಲ್ಲಿ ರಾಮನ್, ಕವಿಗಳಲ್ಲಿ ರವೀಂದ್ರ, ವೈದ್ಯರಲ್ಲಿ ರಾಯ್— ಇನ್ನೇನು ಬೇಕು! ಹೌದಲ್ಲವೇ! ೪೦ ಕೋಟಿಗೆ ಒಂದು ರಾಮನ್, ಒಂದು ರಾಧಾಕೃಷ್ಣ ಸಾಕೇನು! ನಾಚಿಕೆಗೇಡಿನ ಮಾತು! ತಲೆ ತಗ್ಗಿಸಬೇಕಾದೀತು.

"ನಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ" ಎನ್ನುವ ಶ್ರೀಕೃಷ್ಣ "ವಿಜ್ಞಾನಂ ಬ್ರಹ್ಮ ಇತಿ ವ್ಯಜಾನಾತ್" ಎನ್ನುವ ಹಿರಿಯರು ಎಲ್ಲಾ ಇದ್ದು, ವಿದ್ಯೆಗೆ ಚಂಡಾಲಸ್ಥಾನ ಕೊಟ್ಟೆವು. ವಿದ್ಯೆ ನೌಕರಿಗೆಂದಾಯ್ತು— ಜ್ಞಾನಕ್ಕಲ್ಲ, ವಿಕಾಸಕ್ಕಲ್ಲ, ವಿವೇಕಕ್ಕಲ್ಲ. ವಿದ್ಯೆಗೆ ಜಾತಿನ ಜಣ್ಣು ಕಟ್ಟಿ, ಬೀದಿಯಲ್ಲಿ ತಂದಿಟ್ಟು ರೂಪಾಯಿ ಆಣೆ ಬೆಲೆಗೆ ಮಾರಿದೆವು. ಮಾಡಿದ ಪೂಜೆ ಸರಸ್ವತಿಗೆ; ಕಲಿತದ್ದೆಲ್ಲ ವ್ಯರ್ಥದ ವಿದ್ಯೆ. ವಿದ್ಯೆ ಧನಾರ್ಥಿ ಆಯಿತು; ಜ್ಞಾನಾರ್ಥಿ ಅಲ್ಲ.

ಬ್ರಿಟಿಷರ ಕಂಪನಿ ೧೬೦೦ ರಲ್ಲಿ ಸ್ಥಿರವಾಗಿ ನೆಲಸಿದರೂ,

ನಮಗೇನು ಬೇಕು?

ಭಾರತದ ಮಕ್ಕಳಿಗೆಲ್ಲ ಓದು ಕಲಿಸಲು ೨೨ ಲಕ್ಷ ಶಿಕ್ಷಕರು ಬೇಕು!

ಇಂದು ನಮ್ಮಲ್ಲಿರುವವರು ೩ ಲಕ್ಷ ಮಂದಿ; ಅದರಲ್ಲಿ ೬ ಲಕ್ಷ ತರಬೇತಾಗದಿರುವವರು.

ಇದಕ್ಕೆಲ್ಲ ನಮಗೆ ೨೬೬ ಕೋಟಿ ರೂಪಾಯಿ ಬೇಕು. ೧೯೪೦-೪೧ರಲ್ಲಿ ನಾವು ಮಾಡಿದ ವೆಚ್ಚ ೧೭೮ ಕೋಟಿ. ಹೀಗಾದರೆ ಇನ್ನೂ ೧೪೦ ವರ್ಷ ಬೇಕಾದೀತು ಇಂದಿನ ಈ ಯೋಜನೆಯಂತೆ ಪೂರ್ಣ ಸಾಕ್ಷರತೆ ಸಂಪಾದಿಸಲು— ಅಂದಿನವರಿಗೆ?— ?

ಒಂದು ನೂರು ವರ್ಷಗಳ ಕಾಲ ವಿದ್ಯೆಯ ಗೋಜಿಗೆ ಹೋಗಲಿಲ್ಲ. ವ್ಯಾಪಾರ ಬಿಟ್ಟು ಬೇರೆಡೆ ಅವರ ದೃಷ್ಟಿ ಹೋಗಲಿಲ್ಲ. ನೂರು ವರ್ಷಗಳ ನಂತರ ಅವರು ಕೊಟ್ಟ ಶಿಕ್ಷಣ ಭಾರತೀಯರಿಗಲ್ಲ, ಮುಖ್ಯವಾಗಿ ತಮ್ಮ ಸಂಸ್ಥೆಯ ಯುರೋಪಿಯನ್ನರ ಮಕ್ಕಳಿಗೆ. ಕಥೆ ಇಷ್ಟಕ್ಕೆ ಮುಗಿಯಲಿಲ್ಲ! ವ್ಯಾಪಾರಗಾರರಿಗೆ ಶಿಕ್ಷಣದ ಗೊಡವೆ ಏಕೆ? ನಾವು ಬಂದಿರುವುದು ವ್ಯಾಪಾರಕ್ಕೆ! ಭಾರತೀಯರಿಗೆ ಶಿಕ್ಷಣವಿತ್ತರೆ ನಮ್ಮ ವ್ಯಾಪಾರಕ್ಕೆ ಕೊಡಲಿ ಪೆಟ್ಟು ಬಿದ್ದೀತು— ಹೀಗೆ ಯೋಚಿಸಿದ ಮಹಾನುಭಾವರು, ಇವರೊಡನೆ ಕ್ರಿಸ್ತಧರ್ಮ ಸಾರಲು ಹೊರಡಬೇಕೆಂಬ ಪಾದ್ರಿಗಳು—. ಇವರು ಹೋದರೆ ಧರ್ಮದ ಗೊಂದಲ ಆರಂಭವಾಗಿ ವ್ಯಾಪಾರ ಎಲ್ಲಿ ನಶಿಸುವುದೋ ಎಂಬ ವ್ಯಾಪಾರಸ್ಥರು. ಹೀಗೆ ಇನ್ನೂ ನೂರು ವರ್ಷ ನುಂದುವರಿಯಿತು.

೧೮೧೩ ರಲ್ಲಿ ಬ್ರಿಟಿಷರು ಭಾರತೀಯರಿಗೆ ಶಿಕ್ಷಣ ಕೊಡಬೇಕೆಂದು ಮನವರಿತರು.

ಭಾರತೀಯರಿಗೆ ಎಂತಹ ಶಿಕ್ಷಣ ಕೊಡಬೇಕೆಂಬುದು ಭಾರಿ ಪ್ರಶ್ನೆಯಾಯಿತು. ಪಾಶ್ಚಾತ್ಯ ರೀತಿಯಾಗಬೇಕೇ, ಪೌರ್ವಾತ್ಯ ರೀತಿಯೇ? ಈ ಪ್ರಶ್ನೆ ಒಂದು ತೀರ್ಮಾನಕ್ಕೆ ಬರಲು ೪೦ ವರ್ಷಗಳಾದುವು. ಪಾಶ್ಚಾತ್ಯ ಶಾಸ್ತ್ರ, ವಿಜ್ಞಾನ ಕಲಿಸಬೇಕೆಂದು ತೀರ್ಮಾನವಾಯಿತು. ಅಲ್ಲಿಂದ ಆರಂಭವಾಗಿದೆ ಧಾರೆ ಈ ೯೦ ವರ್ಷಗಳಲ್ಲಿ ಭಾರತ ಗಳಿಸಿದ ಸಾಕ್ಷರತೆ—ನೂರಕ್ಕೆ ಹದಿನೈದು! ಎಂತಹ ಹೆಮ್ಮೆಯ ವಿಷಯ! ೧೫೦ ವರ್ಷಗಳ ಆಳ್ವಿಕೆಯಲ್ಲಿ ಬ್ರಿಟಿಷರು ನಮಗೆ ದತ್ತು ಬಿಟ್ಟ ಆಸ್ತಿ—೧೫% ಸಾಕ್ಷರತೆ! ಈ ಅವಮಾನಕ್ಕೆ ಕಿರೀಟ ತೊಡಿಸಿದಂತೆ ಭಾರತದ ಮೂಲೆ ಮೂಲೆಯ ವಿಶ್ವವಿದ್ಯಾಲಯಗಳು. ನಮಗೂ ಅದೇ ಸಾಕೆನಿಸಿತು. ಸರ್ಕಾರಿ ಕಾರಕೂನನಾದರೆ ತೀರಿತು. ಇನ್ನು ಕಚ್ಚಿನ ಗೌರವ ಬರಬೇಕೆಂದರೆ ಇಂಗ್ಲೆಂಡಿಗೆ ಹೋಗಿ ಬಂದರೆ ಆಯಿತಲ್ಲ!

ಇಷ್ಟೆಲ್ಲ ಏಕೆ? ಆ ಶಿಕ್ಷಣದಲ್ಲಿ ಏನು ದೋಷ, ಏನು ತಪ್ಪಿದೆ?—

ಈ ಶಿಕ್ಷಣ ನಮಗಾಗಿ ಆರಂಭವಾಗಲಿಲ್ಲ. ಬ್ರಿಟಿಷ್ ಕಂಪನಿಗಾಗಿ —. ಬ್ರಿಟಿಷ್ ಕಂಪೆನಿಯ ಗುಲಾಮರಿಗೆ, ಕಾರಕೂನರಿಗೆ. ಇಂತಹ ಶಿಕ್ಷಣದ ಬಲೆಗೆ ನಮ್ಮ ಜನ ಸಿಕ್ಕಿಕೊಂಡರು. ಅದಕ್ಕಾಗಿ ಹೂಡಿದ ವ್ಯೂಹ—ಇಂಗ್ಲೀಷ್ ಭಾಷೆಯ ವ್ಯಾಮೋಹ ಭಾರತದಲ್ಲಿ ಬೆಳೆದಷ್ಟು ಮತ್ತೆಲ್ಲಿಯೂ ಬೆಳೆದಿಲ್ಲ; ಬೆಳೆಯಲಾರದು. ನಮ್ಮ ಭಾಷೆ, ಸಂಸ್ಕೃತಿ ಎಲ್ಲ ಮೂಲೆಗೆ ಒತ್ತಿಟ್ಟು ಪಾಶ್ಚಿಮಾತ್ಯ ಸಂಸ್ಕೃತಿಯೇ ಪರಮಾರ್ಥವೆಂಬ ಸ್ಥಿತಿಗೆ ಬಂದುಬಿಟ್ಟೆವ. ಇಂಗ್ಲೀಷ ಭಾಷೆ ನಮ್ಮ ಜೀವನದಲ್ಲಿ ಬೆರೆತುಬಂದು ನಮ್ಮ ಪೂರ್ಣ ನಾಶನಕ್ಕೆ ಕಾರಣವಾಯಿತು. ಇಂದಿಗೂ ನಮ್ಮಲ್ಲಿಯ ಜನಕ್ಕೆ ಆ ಭಾಷೆಯ ವ್ಯಾಮೋಹ ಕಳೆದಿಲ್ಲ.

ಈ ಶಿಕ್ಷಣದಲ್ಲಿ ಮತ್ತೇನು? ಹುಟ್ಟಿದ ಜಾಗ-ಬೆಳೆದ ಮನೆಗಳ ಮಧ್ಯೆ ಒಂದು ದೊಡ್ಡ ಸಮುದ್ರ ಬಂದು ಬಿಟ್ಟಿತು. ತಾಯಿ ಮಕ್ಕಳನ್ನು ಬೇರ್ಪಡಿಸುವ ಶಿಕ್ಷಣ, ಮನೆಯೆಂದರೆ ಬೇಸರ ಹುಟ್ಟಿಸುವ ಶಿಕ್ಷಣ; ನಮ್ಮ ಹಳ್ಳಿ, ನಮ್ಮ ಜನ, ನಮ್ಮ ಸಂಸ್ಕೃತಿ, ನಮ್ಮ ದೇಶ, ನಮ್ಮ ವೇದಾಂತಕ್ಕೆ ಅಸಡ್ಡೆ ಹುಟ್ಟಿಸುವ ಶಿಕ್ಷಣ; ನಮ್ಮ ಜನವನ್ನು ನಮ್ಮ ಜನದಿಂದಲೇ ಬೇರ್ಪಡಿಸುವ ಶಿಕ್ಷಣ— ಈ ಶಿಕ್ಷಣಕ್ಕೆ ನಮಸ್ಕಾರ!

ಧರ್ಮದ ಬೀಡು ಭಾರತ. ದೇಶ-ವಿದೇಶಗಳ ಧರ್ಮಕ್ಕೆಲ್ಲ ಆಸರೆ ಕೊಟ್ಟು ಧರ್ಮಧಾಂದಲೆ ಕಾಣದ ಜನ ನಾವು. ಎಲ್ಲ ಧರ್ಮಕ್ಕೆ ನೆರಳು ಕೊಟ್ಟು ನಮ್ಮ ಧರ್ಮವನ್ನು, ಹರಿದಾಗಿ ಹಿಗ್ಗಿಸಿಕೊಂಡ ಮಂದಿ ನಮ್ಮವರು. ಇಂತಹ ಧರ್ಮದೇಶದಲ್ಲಿ ಧರ್ಮದ ಹೆಸರಿನಲ್ಲಿ ಹೊಡೆದಾಟ ನಡೆಯುವುದೇಕೆಂದರೆ ನಾಚಿಕೆಗೇಡಿನ ಮಾತು. ಭಾರತೀಯ ಸಂಸ್ಕೃತಿಗೆ ಧರ್ಮ ತಳಹದಿ; ಆದರೆ ನಮ್ಮ ಶಿಕ್ಷಣಕ್ಕೆ ಧರ್ಮಕ್ಕೆ ಏನೂ ಸಂಬಂಧವಿಲ್ಲ. ನಮ್ಮ ಶಿಕ್ಷಣದಲ್ಲಿ ಧರ್ಮಸಹನೆ, ಸಹಿಷ್ಣುತೆ ಇದ್ದದ್ದೇ ಆದರೆ, ಈ ನವ ಕಲಿ, ಈ ರಕ್ತಪಾತ ನಡೆಯುವುದಕಾದ ಅವಶ್ಯಕತೆಯೇ ಇರಲಿಲ್ಲ. ಅಧರ್ಮದ ತಾಂಡವನೃತ್ಯ ನಡೆಯಲು ಪರಿಸ್ಥಿತಿಯೇ ಒದಗುತ್ತಿರಲಿಲ್ಲ.

ಡೋಂಗರೆ ಬಾಲಾಮೃತ
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ಮಕ್ಕಳ ಶಿಕ್ಷಣ ಈ ತೆರನಾದರೆ, ವ್ರೌಢಶಿಕ್ಷಣದ ಸುದ್ದಿ ಹೇಳ ಬೇಕಾಗಿಲ್ಲ. ಗೋಖಲೆ ಸ್ರೌಢಶಿಕ್ಷಣ ಆರಂಭವಾಗಬೇಕೆಂದು ಕೂಗಿಟ್ಟಾಗ ಹಣವಿಲ್ಲೆಂದು ಬಂತು ಸರಕಾರದ ಉತ್ತರ. ಆರಂಭವಾದ ಮೇಲೂ, ಓದು-ಬರೆಹದಲ್ಲಿ ಮಾನವ ಸ್ವಭಾವದ ಪರಿಪೂರ್ಣತೆ, ಜೀವಿಯ ಪೂರ್ಣ ವಿಕಾಸ — ಎಲ್ಲ ಮೂಲೆಗೊತ್ತಿದ್ದಾಯಿತು. ಬರಿಯ ಅಕ್ಷರಜ್ಞಾನ, ಅಪ್ರಯೋಜಕ ಅಂಕಗಣಿತ ಇವೇ ಮುಖ್ಯವಾಯಿತು. ಜೀವನಕ್ಕೆ ಸಂಬಂಧಿಸಿದ ವಿಷಯ, ವಿಜ್ಞಾನ ಕಲಿಯಲಿಲ್ಲ. ಜೀವನಕ್ಕೆ ಅವಸರವೆನಿಸಿದ ವಿಷಯ ಕಲಿಯಲಿಲ್ಲ. ವಿದ್ಯೆಗೂ, ಜೀವನಕ್ಕೂ ಏನೂ ಸಂಬಂಧ ಬರಲಿಲ್ಲ. ಕಲಿತದ್ದೊಂದಾದರೆ, ಕೆಲಸ ಬೇರೊಂದು. ಪರೀಕ್ಷೆಗೆಂದು ಭಾರಿ ಭಾರಿ ಪುಸ್ತಕ ಓದಿದ್ದಾಯಿತು; ಉರು ಹಚ್ಚಿದ್ದಾಯಿತು. ಪರೀಕ್ಷೆ ಆದ ಮೇಲೆ ಮರೆತದ್ದು ಆಯಿತು. ವಿದ್ಯೆ ವಿಕಾಸ, ವಿವೇಕವಾಗಲಿಲ್ಲ; ಬರೆ ವಿಷಯಸಂಗ್ರಹಣವಾಯಿತು; ಅಪ್ರಯೋಜಕ ವಿಶ್ವಕೋಶವೆನಿಸಿತು. ಮಾನವ ಜೀವನಕ್ಕೆ ಉಪಕಾರಿಯಾಗಲಿಲ್ಲ. ಜೀವನಕ್ಕೊಂದು ಉದ್ದೇಶ ಕೊಡಲಿಲ್ಲ. ಯಂತ್ರದಂತೆ ಮನುಷ್ಯನನ್ನು ಸಾಣಿ, ಬದುಕಿದ್ದರೂ ಬದುಕಿಲ್ಲದವನಂತೆ ಮನುಷ್ಯನನ್ನು ನಿಸ್ಸಾರವಾಗಿ ಮಾಡಿಬಿಟ್ಟಿತು.

ಶಿಕ್ಷಿತನ ಜೀವನವರ್ಜ್ಯ, ಅಶಿಕ್ಷಿತನ ದರ್ಜೆ, ಭಾರತದ ಸಂಪತ್ತು ಇವೊಂದಕ್ಕೂ ಅನಂತ ಅಂತರ. ಶಿಕ್ಷಿತನಾದನೆಂದರೆ ಜೀವನವೇ ಬದಲಾದಂತಾಯಿತು. ದೃಷ್ಟಿಯೇ ಬೇರೆ ಬಂದೀತು. ರಾಜಾಜಿ ಹೇಳಿದಂತೆ "ಕುಡಿದವ ಕುಡಿತದಿಂದ ಭ್ರಮೆ ಹೋಗಿರುತ್ತಾನೆ. ಶಿಕ್ಷಿತ ಅಕೆಮಿಂದ; ಇವರಲ್ಲಿ ಯಾರು ಹೆಚ್ಚು ಸುಸಂಸ್ಕೃತರೆಂದು ಹೇಳಲಸಾಧ್ಯ. ಕುಡಿತ ಪಾಪವಾದರೆ, ತಪ್ಪಾದರೆ, ಈ ಶಿಕ್ಷಣ ಹೆಚ್ಚಿನ ತಪ್ಪು."

ದೇಹದಾರ್ಢ್ಯದ ಮೇಲೆ ಈ ಶಿಕ್ಷಣದ ನೆಳಲು ಇನ್ನೂ ಹೆಚ್ಚು. ಕೆಲಸಕ್ಕೆ ಅಡ್ಡಿ ಕಲ್ಪಿಸಿತು. ಭೇದಭಾವ ಕೊಡಿಸಿತು. ದೇಶದ ಯುವಕರ ಶಕ್ತಿ ಕೆಡಿಸಿ, ದೇಹದ ಬೆಳವಣಿಗೆಗೆ ಇತಿಶ್ರೀ ಎನಿಸಿತು. ನಾಡಿನ ಆರೋಗ್ಯ ಅಲ್ಲಿಗೇ ಕೊನೆಗಂಡಿತು. ಕೊಳಕು, ರೋಗ, ಅಸ್ವಚ್ಛತೆ, ಸೌಂದರ್ಯ ಮಾಯವಾದುವು. ಮರಣ, ಮೃತ್ಯು ಮನೆಮಾತಾಯಿತು. ಅಸ್ವಚ್ಛತೆಗೆ ನಮ್ಮ ಜನ ಹೊಂದಿಕೊಂಡರು. ಅಂದೇ ನಮ್ಮ ಆರೋಗ್ಯ ನಶಿಸಿತು.

ನಮ್ಮ ನೀತಿ ನಡತೆ ಒದಲಿಸಿತು. ಎಲ್ಲಿಗೆ ಈ ಶಿಕ್ಷಣ ಒಯ್ಯುವುದೆಂದು ನಾವೇ ಅರಿಯದಾದೆವು. ಗುರಿ ಏನು, ನಾವು ಹೋಗುವುದೆಲ್ಲಿಗೆ — ಈ ದೃಷ್ಟಿ ನಶಿಸಿತು. ಕಾಲೇಜು ಕಾರ್ಖಾನೆಯಾಯಿತು, ಮನುಷ್ಯ ಯಂತ್ರವಾದ.

ನಮ್ಮ ಸಂಸ್ಕೃತಿಯ ತಳಹದಿ ಕುಟುಂಬ. ನಮ್ಮ ಶಿಕ್ಷಣ ಕುಟುಂಬವನ್ನು ಒಡೆಯಿತು. ಅಪ್ರಯೋಜಕ ಓದಿಗೆಂದು, ಮಕ್ಕಳಿಗಾಗಿ, ತಂದೆ, ತಾಯಿ ಕಂಗೆಟ್ಟರು, ಉಪವಾಸ ಮಾಡಿದರು. ಏನೋ ಹಿರಿದಾಗಿ ಹೊತ್ತು ತರುವನೆಂದು ನಂಬಿದರೆ, ಮನೆಯನ್ನು ಬಿಟ್ಟು ಓಡಿದ ಸುಪುತ್ರ!

ನಮ್ಮ ವಿದ್ಯೆ ಪಟ್ಟಣದಾಯಿತು. ಬಡ ರೈತನಿಗೆಂದಾಗಲಿಲ್ಲ. ಅಂತೇ ಶಿಕ್ಷಿತ-ಅಶಿಕ್ಷಿತರ ನಡುವೆ ಬ್ರಹ್ಮಾಂಡ ಬಂದುಬಿಟ್ಟಿತು.

ಈ ಶಿಕ್ಷಣದಲ್ಲಿ ಕ್ರಾಂತಿಯಾಗಬೇಕು. ಬರೆ ನಾಲ್ಕು ಸುಧಾರಣೆಗಳಾದರೆ ಏನೂ ಸಾಲದು. ನಮ್ಮ ಶಿಕ್ಷಣದಲ್ಲಿ ಪೂರ್ಣ ಬದಲಾವಣೆಯಾಗಬೇಕು. ತಳಹದಿಯೇ ಬದಲಾಗಬೇಕು.

'ಕ್ರಾಂತಿ' ಎಂದರೆ ಹೆದರಬೇಕಾಗಿಲ್ಲ. ಕ್ರಾಂತಿಯೆಂದರೆ ರಕ್ತಪಾತವಲ್ಲ. ಕುರ್ಚಿ ಮೇಜು ಮುರಿಯಬೇಕಾಗಿಲ್ಲ. ಮಾಸ್ತರನ್ನು ಮಟ್ಟ ಹಾಕಬೇಕಾಗಿಲ್ಲ. ಬಾಪು ಬಂದ ಮೇಲೆ 'ಕ್ರಾಂತಿ'ಯ ಬಣ್ಣ ಬದಲಾಗಿದೆ. ನಮ್ಮ ಸಮಾಜವನ್ನು ಪೂರ್ಣವಾಗಿ ಬದಲಿಸಲು, ಬಾಪು ರಚನಾತ್ಮಕ ಶಿಕ್ಷಣ ದೇಶದ ಮುಂದೆ ಮುಂಡಿಸಿದ್ದಾರೆ! ಈ ರೋಗ, ಈ ಮರಣ, ಈ ಅಂತರ, ಈ ಅಜ್ಞಾನದಲ್ಲೇ ಬೀಳೋಣವೇ! ಶಿಕ್ಷಣದಲ್ಲಿ ಕ್ರಾಂತಿ ನಡೆಸಿ ನಮ್ಮ ಸಮಾಜವನ್ನೆ ಬೇರ್ಪಡಿಸೋಣವೇ? ಇಂದಿನ ಭಾರಿ ಪ್ರಶ್ನೆಯೂ ಇದೇ!

ಬಾಪುವಿನ ಸವಾಲಿಗೆ ನಮ್ಮಜ್ಞೇನು ಉತ್ತರ?

ಭಾರತದ ಪರಿಸ್ಥಿತಿ

ಅನಕ್ಷರಸ್ಥರ ಸಂಖ್ಯೆ ೪೫%.

೫ ರಿಂದ ೧೪ ವಯಸ್ಸಿನ ವರೆಗೆ ಇರುವ ಮಕ್ಕಳ ಸಂಖ್ಯೆ—೬ ಕೋಟಿ.

ಇದರಲ್ಲಿ ೧೦ ಕೋಟಿಯ ಹೆಸರು ಸ್ಕೂಲಿನಲ್ಲಿ ಬರೆದಿದೆ. ಅಂದರೆ

ಸ್ಕೂಲಿಗೆ ಹೋಗಲು ಯೋಗ್ಯರಾಗಿಯೂ ಹೋಗದವರು ೬೦%.

ವಿದ್ಯೆಗೆ ತಲೆಗೆ ಆಗುವ ಖರ್ಚು ೦—೪—೩.

ಮೊದಲನೆಯ ದರ್ಜೆಗೆ ಸೇರಿದ ೧೦೦ ಮಕ್ಕಳಲ್ಲಿ

ದರ್ಜೆ ೪ರ ವರೆಗೆ ಇರುವವರು ೭೦ ಜನ

೫ ..... ೯ —

ಓದಿ ಮರೆತವರು ಬೇರೆ!

ನಿರ್ದೈಯ ವಿದ್ಯಾಲಯ

(ಒಂದು ದೃಶ್ಯ)

ಶ್ರೀ. ಎನ್. ಎಸ್. ಗದಗಕರ, ಬಿ. ಎ. ಧಾರವಾಡ

★

ಪಾತ್ರಗಳು:

ನಾರಾಯಣಶಾಸ್ತ್ರಿಗಳು		ರಮಾಬಾಯಿ—	ಶಾಸ್ತ್ರಿಗಳ ಹೆಂಡತಿ
ಮೂರ್ತಿ—	ಶಾಸ್ತ್ರಿಗಳ ಚಿರಂಜೀವ	ಮನೋಹರ—	ಮೂರ್ತಿಯ ಗೆಳೆಯ
ಸರೋಜಿನಿ—	ಮೂರ್ತಿಯ ತಂಗಿ	ಮೋಹನರಾಯರು—	ನಿವೃತ್ತ ಶಿಕ್ಷಣಾಧಿಕಾರಿ

ಸ್ಥಳ:— ಶಾಸ್ತ್ರಿಗಳ ಮನೆ
ವೇಳೆ:— ಸಂಜೆಯ ೫ ಗಂಟೆ

[ನಡುಮನೆಯ ಜನುಮಾನೆಯ ಮೇಲೆ ಸರೋಜಿನಿ ಕುಳಿತು ಪೇಟೆಯ ಸ್ವರಮೊಡನೆ ನಾಡಗೀತೆಯ ರಂಗತಾಲೀಮು ನಡೆಸಿದ್ದಾಳೆ. ಬೇರೆ ಬೇರೆ ರಾಗದಲ್ಲಿ ಅದನ್ನೇ ಗುಣುಗುಣಿಸುವುದು ನಡೆದಿದೆ.]

ಸರೋಜಿನಿ:— ಉದಯವಾಗಲಿ ನಮ್ಮ ಜಲುವ ಕನ್ನಡ ನಾಡು....

ರಮಾಬಾಯಿ:— ಎಷ್ಟೊತ್ತು ಆತು ಅದನ್ನ ಸುರುವು ಮಾಡಿ. ನಿಮ್ಮ ಸಾಲಿಯೊಳಗ ಸಂಗೀತ ಒಂದಽ ಇಟ್ಟಾರೇನು?

ಸರೋಜಿನಿ:—ಅಲ್ಲವಾ, ನಾಳೆ ನಮ್ಮ ಸಾಲೀ ವಾರ್ಷಿಕೋತ್ಸವ ಅದ. ಅದರ ಸ್ವಾಗತಗೀತಾ ಇದು. ಎಷ್ಟ ಸಾರ ಅಂದೇನು—ಅಷ್ಟು ರಂಗು ಏರೀತು, ಅಂತ ನಡಿಸೇನಿ.

ರಮಾ:— ಹೆಣ್ಣು ಹುಡುಗರ ವ್ಯಾಳ್ಯಾ ಫುಕ್ಕಟ ಕಳೀತಾರ ನೋಡು ಸಾಲ್ಯಾಗ. ಮನಸುಗೊಟ್ಟು ಒಂದು ಕಸೂತಿ ಕಲಸೋದು, ಆದಿಗಿ ಹೇಳಿಕೊಡೋದು. ಮನೆತನದ ಓರಣ, ಆಚ್ಚುಕಟ್ಟುತನ, ಮಿತವ್ಯಯ—ಕಲಸ್ತಾರಂ ಈಗಿನ ಕಾಲದಾಗ? ಗಂಡು ಹುಡುಗರಿಗೆ ಇದ್ದ ವಿಷಯನs ಸ್ವಲ್ಪ ಹೆಚ್ಚು ಕಡಿಮಿ ಆಗಿ ನಿಸುಗ ಇರತಾವ. ನಿರರ್ಥಕ ಶ್ರಮ. ವಯಸ್ಸು ಮಾತ್ರ ಹೋಗತಽದ ತೀರಿತು.

ಸರೋಜಿನಿ:—ಅವ್ವಾ, ನೀ ಸಾಲಿಗ್ಹೋಗೋವಾಗ ಈಗಿನಷ್ಟರs ಸುಧಾರಣಾ ಇತ್ತೇನು? ಒಂದು ಆಟಾ ನೋಟಾ, ಕೇಳಜ್ಯಾತಾ!

ರಮಾ:—ಆಟಾನೋಟಾ, ಚಿತ್ರಾ ತೆಗೆಯೋದು, ವ್ಯವಹಾರಕ್ಕ ಬೇಕಾದಷ್ಟು ಓದು — ಎಲ್ಲಾ ಇತ್ತು. ಈಗೇನು ಸಾಲಿ ಅನ್ನೋವು ಬರೀ ನಾಟಕದ ಮನಿ ಆಗ್ಯಾವ. ಹೆಚ್ಚು ಕಲಸ್ತೇವಿ ಅನ್ನೋ ಸೋಗೇನು ಕಡಿಮಿ ಆಗಿಲ್ಲ. ಮೊದಲ ಯಾರೂ ಅದರ್ಜಗೃಹಿಣಿ ಆಗಿಲ್ಲಽ ಆಗ ವಿದ್ಯಾ ಕಲಿತು?

[ಅಷ್ಟರಲ್ಲಿ ಮೂರ್ತಿ-ಮನೋಹರರು ಹೊರಗಿನಿಂದ ಬರುವ ಸದ್ದನ್ನು ಕೇಳಿ ತಾಯಿ-ತಂಗಿಯರೂ ಅಡಿಗೆಯ ಮನೆಗೆ ಹೋಗುವರು. ಮರುದಿನವೇ ಪ್ರಿಲಿಮಿನರಿ ಪರೀಕ್ಷೆ ಇದ್ದ ಕಾರಣ, ಅಭ್ಯಾಸದ ರಭಸ ಇಬ್ಬರಿಗೂ ಬಹಳ. ಆಲ್ಜಿಯ ಲೆಲ್ಲಿನ ಮೇಲಿನ ಪುಸ್ತಕ ಎಳೆಯುತ್ತ ಮನೋಹರನು ಸಮಾಸದಲ್ಲಿರುವ ಪೇಟೆಯ ಸಹಾಯದಿಂದ— 'ಇಹಲೆ ಜೋ ಮೊಹಬತಸೆ ಇನಕಾರ ಕಿಯಾ ಹೋತಾ....' ಎಂಬ ಸಿನೇಮಾ ಟೀಜನ್ನು ಅನ್ನುತ್ತಿರುವನು.]

ಮೂರ್ತಿ:— (ಜಪದ ಮನಸ್ಥಿಗೆ ಒಳಗೆ ಹೋದವನು ಗೆಳೆಯನ ಕನ್ನಡನಾಡ ಕೇಳಿ) ಏನು ರಾಯರ, ನಿಮ್ಮ ಪ್ರಣಯದ ಪ್ರಪಂಚ ಬಿಟ್ಟು ನಾಳಿನ ಪೇಪರಿನ ಪ್ರಪಂಚಕ್ಕೆ ದಯಮಾಡಿಸತೀರೇನು? ಪಹಾರ್ದಂತೂ ವ್ಯವಸ್ಥಾ ಭವ್ಯ ನಡದದ..ನಿಮ್ಮ ಸಲುವಾಗಿ ಒಳಗ.

ಮನೋಹರ:— ಏನಪಾ, ಒಂದು ಕ್ಷಣ ಆದರೂ ನೀ ನನ್ನ ಕೋಕಿಲ ಸಂಗೀತ ಕೇಳಲಾರಿ ನಾ ನಿನ್ನ ಕ್ರಿಕೆಟ್-ವ್ಹಾಲಿಬಾಲ್ ಆಟ ಹ್ಯಾಂಗ ನೋಡಜೇಕಾಗಿದ್ದೀತು? ನಮಗೇನು ಬಂದಿದ್ದಽ ಬಾರಿಸಿದ್ದಽ?

ಮೂ:—ನಿನ್ನಿಸ ನಿನ್ನ ಆಟಕ್ಕಟಿಕೀಟು ಹಚ್ಚೋಹಾಂಗ ಇತ್ತು. ಇರಲಿ, ಪರೀಕ್ಷಾದ ಮಹಾಸಾಗರದಾಗಂತೂ ಬಿದ್ದೀವಿ ಹರಗೋಲಿಲ್ಲದ ನಾವಿನ ಸಹಾಯದಲೆ. ಆತು, ಏನರ ಮಾಡಜೇಕಲ್ಲಾ ಈ ಚಕ್ರವ್ಯೂಹದಾಗಿಂದ ಪಾರಾಗಲಿಕ್ಕೆ! ಅಬ್ಬಾ, ಏನು ಇಂಗ್ಲೀಷಾ ಪೇಪರು ಹೋದಸಾರೆದ್ದು?

ಮ:— ಏನು Precis ಅಂತೀ ಏನು? ಜರ್ಮನ್‌ನ ಭಾಷಣಾ ಕೊಟ್ಟಾರ ಕೇವಲ ವ್ಯಾಯಾಮದ ಸಲುವಾಗಿ. ಚೆಂದಕ್ಕಷ್ಟು ಮೂಲ್ಯಾಗ ೧೫ ಮಾರ್ಕ್ಸ್.

ಮೂ:— ಉಳಿದ ಪ್ರಶ್ನೇನೂ ನೋಡಲಾ. ಭಾಷಾಂತರಕ್ಕ ಕೊಟ್ಟ ಕನ್ನಡ ಗದ್ಯವಿಭಾಗದಾಗ ಅನಕಾ ಪರೀಕ್ಷಕರು ಸಾಕಷ್ಟು

ಹುಚ್ಚು ಚ್ಚಾರ ಮಾಡಿ, ಅಪದ್ಧ ವಾಕ್ಯರಚನಾ ಮಾಡ್ಯಾರ. ಇದನ್ನ ತಿದ್ದಿರಿ ಅಂತ ಕೊಟ್ಟು ದುಪ್ಪಟ್ಟು ಮಾರ್ಕ್ಸು ಇಟ್ಟಿದ್ದರ ನೆಟ್ಟಗಾಗತ್ತಿತ್ತು.

ಮಃ– ನಿನ್ನೆವು ಶರಾ ಅಂತೂ Overboundary. Referee ತಲೀಮ್ಯಾಲೆ ಹಾಸಿ ಹೋಗೊ ball ಅವು. ವಿಶ್ವವಿದ್ಯಾಲಯದವರು ಕೇಳಿದರ ಎದಿ ಒಡಕೊಂಡಾರು. (ವಿಚಾರಿಸುತ್ತ) ಆ Figure of Speech, Idiom, Preffix Suffix ಅಂತೂ ಹತ್ತು ಸ್ಯಾಟ್ಯಿಂಡರ್ಡ್ ಡಿಕ್ಷನರಿಯೊಳಗ ಪಾತಾಳಗಡೆ ಹಾಕಿ ತಗದ್ಹಾಂಗ ಅವ. ಪರೀಕ್ಷಕ ತಾ ಪರದೇಶಕ್ಕ ಹೋಗಿ ಇಂಗ್ಲಿಷ್ ಕಲಿತೇನಿ ಅಂತ ತೋರಿಸ್ಯಾನ. ಮತ್ತೇನು? ವಿದ್ಯಾರ್ಥಿಗಳಿಗೆ ಅಲ್ಲೇ ಅಲ್ಲ ಅವು ಪೇಪರು.

ಮೂಃ–(ಅಪ್ಪರಲ್ಲಿ ಜಪ ಬರಲು ಇಚ್ಚರೂ ಕುಡಿಯುತ್ತ) ಹೌದಪಾ, ಮನೋಹರ, ಇಂಗ್ಲಿಷನ್ಯಾಗ ಹ್ಯಾಂಗಾದರೂ 'ಕಂಡೋನ' ಆದೀತು ಅಂತ ತಿಳಿದರೂ, ಇತಿಹಾಸ–ಭೂಗೋಲ ಪರೀಕ್ಷಕರ ತಲಿ ಆದರೂ ಸಮಾ ಇರಬಾರದ?

ಮಃ– 'ದೇವರು ವರ ಕೊಟ್ಟರೂ ಪೂಜಾರಿ ವರ ಕೊಡಲಿಲ್ಲಾ' ಅಂದ್ಹಾಂಗ. 'ಡಿಸ್ಟ್ರಿಕ್ಟ ಜೋರ್ಡಿನವರ ಉಪದ್ವ್ಯಾಪ ಬಹಾಳು. Name the natural regions of the world plan a tour round the globe ಅಂತಾರ. ವಿದ್ಯಾರ್ಥಿಗಳ ತಲಿ ಇವರ ಕಾಲಾಗ Encyclopaedia of Britannica ಆಗಬೇಕಾತು.

ಮೂಃ–ಹೌದು. ನಮ್ಮ ಮಾಸ್ತರರಿಗೇನು ಅಂತಿ? ಇಂಗ್ಲೀಷ ಪೇಪರಿಕ್ಕೆ ಇಲ್ಲದ ಉನ್ಮಾದ ಹತ್ತು ಪತ್ಯಪುಸ್ತಕದಾಗಿನ ಚಿತ್ರಣಿಕಾ ಬರಕೊಳಿಕ್ಕೆ ಹೇಳತಾರ. ಹೇನ್ರಿ, ಜೇಮ್ಸು, ಎಲಿಝಾಬೆಥರ ಮ್ಯಾಲೆ ವ್ಯಾಖ್ಯಾನ ಹೂಡಿತಾರ ತಾನು ಆದರ ಅಶೋಕ, ನೂರಜಹಾನ್, ಅಕಬರ ಬಂದಳಿಗ್ಗೆ 'ಹೋದವರ್ಷ ಕಲಿಸಿದ್ದರ ಅಲ್ಲಾ ನೋಡಿ ಕೊಳ್ರಿ ಮನ್ಯಾಗ' ಅಂತಾರ.

ಮಃ– ಕನ್ನಡ ಪೇಪರಿನ ಸೌಭಾಗ್ಯ ಅಷ್ಟರಾಗ, ಆಧುನಿಕ ಕವನ ಕಂಡ ಕಂಡದ್ದೆವು ತುಂಬಿ: ತಾವ ಅಲ್ಲಾ, ಕನಿಷ್ಠ ನೂರು ಪುಟದ್ದು ಒಂದು ಉತ್ತಮಗದ್ಯಪದ್ಯಸಂಗ್ರಹ, ಒಂದು ರಸವತ್ತಾದ ದೊಡ್ಡ ಕಾದಂಬರಿ ಹಚ್ಚಲಿಕ್ಕಿಲ್ಲ–– ವಿಶ್ವವಿದ್ಯಾಲಯದ ಮುಖತ್ವ್ಯದ ಪರೀಕ್ಷಕ್ಕ? ಜ್ಯಾಡಾದ ಆಲ್ಜಿಬ್ರಾ ಜಾಮಿಟ್ರಿ ಹಚ್ಚಿ ವಿದ್ಯಾರ್ಥಿಗಳ ಗೋಳು ಹೊಯಿಸ್ತಾರ!

ಮೂಃ–ನಿನ್ನ ಮನಸಿನ್ಯಾಗಬೇಕಾದ್ದದ. ನಿ ಅಂದ್ಹಾಂಗ ಆಗಬೇಕಲ್ಲಾ ಎಲ್ಲಾ. 'If wishes were horses every one would ride' ಅಂತ ಓದಲಿಲ್ಲಽ ಹೊನ್ನಿನ ಸಂಯುಕ್ತ ಕರ್ನಾಟಕದಾಗ? ಅಂಥಾ ಲೀಡರ್ ಆದರೂ ಒಮ್ಮೊಮ್ಮೆ ಉತ್ತಮ ಗದ್ಯದ ಮಾದರಿ ಅಂತ ಯಾಕ ಹಚ್ಚಬಾರದು? (ನಿರಾಶೆಯಿಂದ) ನಮ್ಮ ಪ್ರಾರಬ್ಧ ಅದ, ಬ್ಯಾಡಾದ ವಿಷಯ ಓದಿ ತಲೀ ಕೆಡಿಸಿಗೊಂಬೋದು!

ಮಃ– ಸ್ವಾಮಿ, ಹೀಂಗ ತಾವು ತಲಿಪರಟಿ ಹೊಡದರ ನಮ್ಮ ಪಾಸಿನ ಆಶಾ ದಿನಕ್ಕ ದಿನಾ ಬಿಸಿಲುಗುದುರಿ ಆಗೋದಽ ಖರೆ. ಆತು, ಗಾಯಿಡ್ ಹುಡುಕು, ಕ್ವೆಶ್ಚನ್ಯಾಗ ಬರಕೊಂಡ ನೋಟ್ಸ್ ತಗಿ ಕಡೀಕ.

ಮೂಃ–ಇರಲಿ. ಇವತ್ತ 'ಕಾಶೀನಾಥ' ಚಿತ್ರಪಟ ನೋಡಿಯೇ ತೀರೋದು. ರಾತ್ರಿ ನಿದ್ದಿ ಕಟ್ಟೋದು ಓದಿನ ಸಲುವಾಗಿ.

[ಹೀಗೆ ಗೆಳೆಯರು ಸಿನೇಮಾಕ್ಕೆಂದು ಹೊರಗೆ ಸಾಗಿದಾಗ 'ಶಾಸ್ತ್ರಿಗಳ' ಎಂದು ಒದರುತ್ತ ಮೋಹನರಾಯರು ದಿನದಂತೆ ಬರುವರು. ಅವರದು ಹಳೆಯ ತೀವಿಯಾದರೂ ಪೋಷಾಕಿನ ಆಚ್ಚುಕಟ್ಟು ಸ್ವಲ್ಪ ಚಮಕಿನದು. ಮೊನ್ನೆ ಮೊನ್ನೆ ದೊಡ್ಡ ಹುದ್ದೆಯಿಂದ ನಿವೃತ್ತರಾದ ಕಳೆ ಮೋರೆಯ ಮೇಲೆ ಕೂರುತ್ತಿದೆ. ಶಾಸ್ತ್ರಿಗಳೂ ರಾಯರೂ ಈ ಪೊದಲೇ ಹಾಸಿದ ಜಮಖಾನೆಯ ಮೇಲೆ ಕುಳಿತು, ಸಂಯುಕ್ತ ಕರ್ನಾಟಕವೋದಾತ್ತಿರವಾಗ]

ಶಾಸ್ತ್ರಿಗಳು :– ಇನ್ನೊಮ್ಮೆ ಚಹ ಆದ ಮ್ಯಾಲ ಆಡ್ಡಾಡಲಿಕ್ಕೆ ಹೊರಡೋಣ.

(ರಾಯರು ಒಲ್ಲೆಂದರೂ ಕೇಳದೆ ಇಬ್ಬರಿಗೂ ಚಹಾಪಾರ್ಟಿ, ತಂಬಾಕಿನ ಕಾರ್ಯಕ್ರಮ ಸಾಗಿದಾಗ)

ಶಾಸ್ತ್ರಿಗಳು:– ಮೋಹನರಾವ್, ತಾವು ಎಮ್. ಎ., ಬಿ. ಟಿ. ಆಗೀರಲ್ಲಾ. ಇಂದಿನ ಶಿಕ್ಷಣದ ಬಗ್ಗೆ ಅಭಿಪ್ರಾಯ ಏನ್ರೆವಾ?

ರಾಯರು:– ಅದೇನು ಬಿತ್ರಿ, ಹೇಳಲಿಕ್ಕೆ ನಾಚಿಗಿ ಬರೋದದ ಇಂದಿನ ವಿದ್ಯಾಲಯಗಳ ಸ್ಥಿತಿ. ಆ Direct Method ನಾವು ಬಿ. ಟಿ. ಕಾಲೇಜಿನ್ಯಾಗ ಕಲಿತರೂ, ಆದರ ಹಾವಳಿಯಿಂದಾ ವಿದ್ಯಾದ ಅವನತಿ ಆಗೇದ—ಆನಸ್ತದ ನನಗ!

ಶಾ:– ಹೌದು ನೋಡ್ರಿ, ಅಮರಕೋಶ, ಶಬ್ದರೂಪಾವಲಿ, ಗೀತಾಗಳನ್ನ ಗೆದ್ದಲಿತಿನ್ನಲಿಕ್ಕೆ ಹತ್ತ್ಯಾವ ಇಂದಿನ ಹೊಸಪದ್ಧತಿಯಿಂದ. ನಮ್ಮ ಹುಡುಗ ಒಂದು ಪುಟ ಓದವಲ್ಲಾ ಅವನ್ನ. ಸೌಟಿನ ಬ್ಯಾಟು, ಸಿನೇಮಾ ಪದ್ಯಾವಲಿ ಕೈಯಾಗ.

ರಾ:– ಒಟೂ ಆಡಲಿ ನಿಮ್ಮ ಹುಡುಗಾ ಯಾರು ಬ್ಯಾಡ ಅಂತಾರ. ಆದರ ಸಾಲಿಯೊಳಗ ಕಲಿಸೋದು ಕೆಟ್ಟಿದ್ದರ ನೀವು ಏನು ಮಾಡೋದದ? ಕಲಿಸೋ ಪದ್ಧತಿ ಎಷ್ಟು ಯಾಂತ್ರಿಕ ಆಗೇದ ವಿಚಾರ ಮಾಡೀರೇನು ಶಾಸ್ತ್ರಿಗಳ?

ಶಾ:– (ಅಪ್ಪರಲ್ಲಿ ತಂಬಾಕು ಉಗುಳಿ ಬಂದು) ನಾನೂ ಅದೇ ವಿಷಯ ಹೇಳೋವ ಇದ್ದೆ ಕೇಳ್ರಿ. ಬಿ. ಟಿ. ಕಾಲೇಜಿನ ನಿವೃತ್ತ ಪ್ರೊಫೆಸರರು ಒಂದು ಸುದ್ದಿ ಹೇಳಿದರು ಮೊನ್ನೆ. ಕೇಳಿ ನಕ್ಕು ನಕ್ಕು ಸತ್ತೆ :

ಒಬ್ಬ ರೋಮೀಶ ಚಂದ್ರ ದತ್ತನ ಒಂದು ಕವನ ಕಲಿಸೋದಿತ್ತಂತ. ಮಾಸ್ತರರು ಕೇಳಿದರಂತ ಪ್ರಶ್ನೆ— ತಮಗೋಳರಾ, ಊಟಕ್ಕ ಕೂಡಬೇಕಾದರೆ ವೈಷ್ಣವರು ಏನು ಅಂತಾರ? 'ಲಕ್ಷ್ಮೀರಮಣ ಗೋವಿಂದಾ' ಅಂದರಂತ ಹುಡುಗರು. 'ಸ್ಮಾರ್ತರು ಏನು ಅಂತಾರ ಊಟಕ್ಕಿಂತ ಬೊದಲು?' ಎಂದು ಮತ್ತೆ ಕೇಳಿದರು. 'ಗುರುದೇವದತ್ತ' ಅಂತ ಅವರು ಉತ್ತರ ಕೊಟ್ಟರು. 'ಹಾಂಗಾದರ ನಾವು ಇವತ್ತ ಇನ್ನೊಬ್ಬ ದತ್ತನ ವಿಷಯಕ್ಕ ಒಂದು ಕವನ ಓದೋಣ' ಅಂತ ಹೇಳಿ ವಿದ್ಯಾರ್ಥಿಗಳ ಕುತೂಹಲ ಕೆರಳಿಸಿದರಂತ. ಏನ ತಲಿ, ಏನ ವಿದ್ಯೆಯ ವಿಷಯಾನ!

ರಾ :- ಪ್ರತ್ಯಕ್ಷ ವಸ್ತುವನ್ನು ತೋರಿಸಿದರೆ ಹುಡುಗರಿಗೆ ನೆಟ್ಟಗ ತಿಳೀತದಂತ ಒಬ್ಬ ಪಂಡಿತರು, Band ಶಬ್ದ ತಿಳಿಸೋದರ ಸಲುವಾಗಿ ೫ ರೂಪಾಯಿ ಖರ್ಚುಮಾಡಿ ಒಂದು ಫಾರ್ಸ್ ಹೇಳಿದ್ದರಂತ. ಏನು ಹಣಿಹಣೇ ಬಡಕೋತೀರಿ ನೋಡ್ರಿ, ಅಂತೇನಿ.

ಶಾ:-ರಾಯರ, ಇಂದಿನ ಶಿಕ್ಷಣಾಲಯಗಳು, ವಿದ್ಯಾರ್ಥಿಗಳನ್ನ ವಾಗ್ಮಿಗಳನ್ನ ಆದರ್ಶ ನಾಗರಿಕರನ್ನ ಸಮಾಜದ ಮುಂದಾಳುಗಳನ್ನ ಮಾಡಬೇಕಂತಾವ. ಇವುಗಳ ಆಕಾಂಕ್ಷೆ ನೋಡಿದರೆ ಆಕಾಶ ಮುಟ್ಟತಾವ. ಕೃತಿಯೊಳಗ ಶ್ರೀರಾಮರಕ್ಷೆ.

ರಾ :- (ಸ್ವಲ್ಪ ವಿಚಾರ ಮಾಡಿ) ಅಲ್ಲಾರೀ ಶಾಸ್ತ್ರಿಗಳ, ಶಿಕ್ಷಣ ಸಂಸ್ಥಾಕ್ಕಾದರೂ ಏನು ಹಿಂದ ಮುಂದ ಅದ? ಏನು ಹಚ್ಚಿನ ಅನುಕೂಲತೆ ದೊರಕೇದದಪಾ? ಸಾರ್ವಜನಿಕರ ಅಳಿಲುಸೇವೆಯು ಚರಿತಾರ್ಥದ ಗುಟ್ಟಿನ ಮ್ಯಾಲೇ ಎಲ್ಲಾ ನಾಗೇದ. ಜ್ಯಾಡಾದ ಹೆಂಡತೀ ಸಂಸಾರಾ—ತೀರಿತು.

ಶಾ:-ಹೌದರೀ, ಒಂದು ವ್ಯಾಖ್ಯಾ ಸರಕಾರದವರು ಸಾವ್ಯ ಆದಷ್ಟು ಹಣಾ ಕೊಟ್ಟರೂ ರಾಜಕೀಯ ಸಂಸ್ಥಾ, ಧಾರ್ಮಿಕ ವಿಚಾರ, ವಿಜ್ಞಾನ ಇವೆಲ್ಲ ನಮ್ಮ ಹುಡುಗ-ಹುಡುಗಿಯರಿಗೆ ತಿಳಿಯಬೇಕಾದರ ಹಲವು ಕನ್ಯಾಗತೆ ಹೋಗಬೇಕು.

ರಾ:- (ತಂಬಾಕಿನ ಬಾಯಿ ಸ್ವಚ್ಛ ಮಾಡಿಕೊಳ್ಳುತ್ತಾ) ಶಾಸ್ತ್ರಿಗಳ, ನೀವು ಅಂದ್ಹಾಂಗ ಸುಧಾರಣಾ ಆಗಬೇಕಾದರ ಒಂದು ಕ್ರಾಂತಿ ಬೇಕು. ರಾಜಕೀಯ ಸಮಸ್ಯೆಗಳ, ರಾಜಕೀಯ ಮಹಾ ಪುರುಷರ ಬಗ್ಗೆ ಮೊದಲು ತಿಳಿಗನ್ನಡದಾಗ ಪುಸ್ತಕ ಬೇಕು. ಧರ್ಮದ್ದು ಏನ್ರೆಪಾ, ಸ್ವಲ್ಪ ಕಠಿಣ ಅನಿಸೀತು.

ಶಾ:-ಅದ್ಯಾಕರೀ, ಮನು, ಯಾಜ್ಞವಲ್ಕ್ಯ, ಕೌಟಿಲ್ಯ, ಮಿತಾಕ್ಷರರ ಗ್ರಂಥಗಳೊಳಗ—ಮಹಾಭಾರತ ಮಹಾಕಾವ್ಯದೊಳಗ ಇಲ್ಲದ್ದೀನು? ಕಥಾರೂಪದಲೆ ಬೇಕಾದಂಥಾ ಮಹತ್ವದ ಧಾರ್ಮಿಕ ತತ್ವ, ಆರ್ಥಶಾಸ್ತ್ರ ಹಾಹಾ ಅನ್ನೋದರೊಳಗಿನ ತಿಳಿಸ್ಯಾರು ಪಂಡಿತರು. ಅದರ ವಿಶ್ವವಿದ್ಯಾಲಯಕ್ಕ ಇಷ್ಟ ಪರಿಶ್ರಮ ತೊಗೊಂಬೋದು ಎಲ್ಲಿ ಬೇಕಾಗೇದ? ಸ್ವಚ್ಛ ಕಾಟಾ ಕಳೆಯೋದು ನಡದದ.

ರಾ:-ಶಾಸ್ತ್ರಿಗಳ, ಇದೆಲ್ಲಾ ವಿಜ್ಞಾನ ಯುಗ ಈಗ. ಧರ್ಮ ಕರ್ಮ ಕನಸು.

ಶಾ:- ರಾಯರ, ವಿಜ್ಞಾನದ ಸ್ಥೂಲ ಕಲ್ಪನಾ ಆದರೂ ಎಷ್ಟು ಹಾಯಸ್ಕೂಲ ವಿದ್ಯಾರ್ಥಿಗಳಿಗೆ ಅದ ಅಂತೀರಿ? ಮೊನ್ನೆ ಅಟಂ ಬಾಂಬು, ರೇನಜೋ, ಪೆರಿಸ್ಕೋಪ, ಲೇಟಿಂಟ್ ಹೀಟ್, ಗೋಲ್ಡ್ ಲೀಫ ಇಲೆಕ್ಟ್ರೊಸ್ಕೋಪ— ಅಂದರೇನು ಅಂತ ಸಹಜ ಕೇಳಿದೆ ನಮ್ಮ ಮೂರ್ತಿಗೆ. ಬೆಲ್ಲಾ ಬಡದ ಕಲ್ಲಿನ್ಹಾಂಗ ಸ್ವಚ್ಛ ಕೈಜೆಲ್ಲಿ ಕೂತುಬಿಟ್ಟಾ. ನನಗs ನಾಚಿಕಿ ಅನಿಸಿ, ಯಾಕ ಪೀಡಿಸಬೇಕು ಅಂತ ಬಿಟ್ಟಿ. ಒಟ್ಟು ನೋಡ್ರಿ, ಇಂದಿನ ವಿದ್ಯಾಲಯಗಳಿಗೆ ನಿರ್ವಿದ್ಯೆಯ ಮೋಹ ಇದ್ದಾಂಗ ಕಾಣಸ್ತದ. ವಿದ್ಯಾರ್ಥಿಗಳದೇನು ಪ್ರಾರಬ್ಧ?

ರಾ:-ಏನರ ಆಗಲಿ ಅವರದು. ನಾವ್ಯ ಮಾತಾಡಿದರ ಆಗೋದೇನು? ಗೊಪ್ಪಕ್ಕ ಆದ. ಅಂತೂ ಆಡ್ಡಾಡಲಿಕ್ಕೆ ಹೋಗೋ ಕಾರ್ಯಕ್ರಮ ತಪ್ಪಜಾರದು. ಮೊದಲ ನಡೀರಿ.

[ಎಂದು ಅವಸರ ಮಾಡುವಾಗ ಮಿಂಚಿನಂತೆ....]

— ತೆರೆ —

ಅವಸರದ ವಿಚಾರಗಳು:—

ಪುಸ್ತಕ ಮತ್ತು ಭೋಜನ

ಶ್ರೀ. ಸೋಮಶೇಖರ ಪಾರ್ವತೀಯ, ಬನಾರಸ

ಜೀವನವು ಚಿಕ್ಕದು, ಪುಸ್ತಕಗಳೋ ಬಹಳ. ಉದ್ದೇಶವಿಲ್ಲದ ಓದು ಜೀವನದ ನಿರರ್ಥಕ್ಯವನ್ನು ತೋರಿಸುತ್ತದೆ. ಜಗತ್ತಿನಲ್ಲಿ ಪ್ರತಿಯೊಬ್ಬನಿಗೂ ಮಾಡಬೇಕಾದ ಕರ್ತವ್ಯವಿದೆ, ಅದನ್ನು ಪೂರ್ತಿಗೊಳಿಸುವುದು ಅವನ ಧ್ಯೇಯವಾಗಿರಬೇಕು. ಕೇವಲ ಮನೋರಂಜನೆಗಾಗಿ ಓದುವುದು ಅದೊಂದು ಬಲಹೀನತೆ.

ಪುಸ್ತಕಗಳನ್ನು ಓದುವುದು ಸಾಧಾರಣ ವಿಷಯವಲ್ಲ, ಅದೊಂದು ಉಪಾಸನೆ. ಓದುತ್ತಾ ಓದುತ್ತಾ ಸಂಸಾರವನ್ನು ಮರೆಯುವುದೆಂದರೆ ಸಾಧಾರಣ ಉಪಾಸನೆಯೂ ಅಲ್ಲ. ಅದರಲ್ಲಿ ಏಕಾಗ್ರತೆ ಬೇಕು, ಮನೋಧೈರ್ಯವೂ ಬೇಕು.

'ಕೈಗೆ ಸಿಕ್ಕ ಪುಸ್ತಕವನ್ನು ಓದಬೇಕೇ?' ಇದರ ಉತ್ತರ ಇನ್ನೊಂದು ಪ್ರಶ್ನೆಯಲ್ಲಿದೆ: "ಅವಸರಕ್ಕೆ ಸಿಕ್ಕದ್ದು ಯಾವುದೇ ಆಗಲಿ ತಿನ್ನಬೇಕೆ?" ಕೆಟ್ಟ ಆಹಾರವು ಯಾರಿಗೂ ಒಪ್ಪದು. ಅದರಂತೆ ಕೆಟ್ಟ (ವಿಚಾರದ) ಪುಸ್ತಕಗಳೂ ನಮ್ಮವೇಕೆ ಆಗಬೇಕು? ಕೆಟ್ಟ ಆಹಾರದ ಸೇವನೆಯಿಂದ ಆರೋಗ್ಯವು ಕೆಡುತ್ತದೆ, ಕೆಟ್ಟ (ವಿಷಯಗಳ) ಪುಸ್ತಕಗಳನ್ನು ಓದುವುದರಿಂದ ಬುದ್ಧಿಯ ವಿವೇಚನಾಶಕ್ತಿಯು ಭ್ರಷ್ಟವಾಗುತ್ತದೆ. ಅತಿಭೋಜನವು ನಿಷಿದ್ಧವಿದೆ. ಅತಿ ಭೋಜನ ಮಾಡುವವರಿಗೆ ಪ್ರಾಯಶಃ ಸಂತಾನವಿರುವುದಿಲ್ಲ. ಹಚ್ಚು ಓದುವುದೂ ನಿಷ್ಪ್ರಯೋಜನವಿದ್ಯೆ; ಅಧಿಕ ಓದುವವರು ತಮ್ಮ ಸ್ವಂತ ವಿಚಾರಗಳನ್ನೇ ಮರೆಯುತ್ತಾರೆ—ಪರರ ವಿಚಾರಗಳಿಗೆ ಗುಲಾಮರಾಗುತ್ತಾರೆ.

ಜೀವನಕ್ಕಾಗಿ ಭೋಜನವು ಅವಶ್ಯಕವಿದೆ. ಜೀವಿಸಿರಲು ನಾವು ಉಣ್ಣುತ್ತೇವೆ. ಉಣ್ಣಲು ನಾವು ಜೀವಿಸಿರುವುದಿಲ್ಲ; ಜೀವಿಸಿದಾರದು ಉಂಡದ್ದು ಶರೀರವನ್ನು ಪೋಷಿಸುತ್ತದೆ; ಅದರಂತೆ ಓದುವುದು ಬುದ್ಧಿಯನ್ನು ಪೋಷಿಸುತ್ತದೆ. ನಾವು ಕೇವಲ ಓದಲು ಜೀವಿಸಿಲ್ಲ, ಜೀವನಕ್ಕಾಗಿ ನಾವು ಓದುತ್ತೇವೆ—ಅದರ ಲಕ್ಷ್ಯಕ್ಕಾಗಿ ಓದುತ್ತೇವೆ.

ತಿಳಿಯದೆ ಓದುವುದು ಮತ್ತು ಊಟ ಮಾಡುವುದು—ಎರಡೂ ನಿಷ್ಪ್ರಯೋಜಕ; ಕೇವಲ ಸಮಯದ ಹಾಳು. ಉಂಡದ್ದನ್ನು ಜೀರ್ಣಿಸಿಕೊಳ್ಳಲು ಕೆಲಸ ಮಾಡಬೇಕು. ಅದೇ ರೀತಿ ಓದಿದ್ದನ್ನು ಜೀರ್ಣಿಸಿಕೊಳ್ಳಲು ವಿವೇಚನೆ ಬೇಕು. ಇಲ್ಲವಾದರೆ ಎರಡರಲ್ಲೂ ರುಚಿ ಇರಲಾರದು.

ನಮ್ಮ ಊಟದಲ್ಲಿ ಹಾಲಿನ ಸ್ಥಾನ

ಶ್ರೀ. ಬಿದರಕುಂದಿ ವೆಂಕಟರಾಯರು, ಎಚ್. ಎ. ಮುದಭಾಂವಿ

★

ಮಥುರೆಯ ಗೌಳಿಗರು ವೀರರಾಗಿ ಕಂಸನಂತಹ ಬಲಾಢ್ಯ ಶತ್ರುವನ್ನು ಸೋಲಿಸಿದುದಕ್ಕೆ ಮೂಲ ಕಾರಣವೇನು? ಅವರು ಕುಡಿದ ಹಾಲು, ತಿಂದ ಬೆಣ್ಣೆ! ಇಂದು ಹಾಲು-ಬೆಣ್ಣೆಗಳ ಅಭಾವವೇ ಭಾರತದ ಬಲಹೀನತೆಗೆ ಕಾರಣವಾಗಿದೆ.

★

ಹಾಲು ಮಾನವಜೀವನಕ್ಕೆ ಅತ್ಯಂತ ಆವಶ್ಯಕವಾದ ಅನ್ನ ವಿರುವುದು. ಎಂತಲೇ ಆಹಾರ ಶಾಸ್ತ್ರಜ್ಞರು ಹಾಲನ್ನು ಪೂರ್ಣಾನ್ನವೆಂದು ಸಂಬೋಧಿಸುವರು.

ಮನುಷ್ಯ ಶರೀರದ ಪೋಷಣೆಗೆ ಮತ್ತು ಸಂವರ್ಧನೆಗೆ ಬೇಕಾಗುವ ಎಲ್ಲ ದ್ರವ್ಯಗಳ ಸಮಾವೇಶವೂ ಹಾಲಿನಲ್ಲಿ ಸಾಕಷ್ಟು ಪ್ರಮಾಣದಿಂದ ಇರುವುದು ಶಾಸ್ತ್ರೀಯ ಪ್ರಮಾಣಗಳಿಂದ ಸಿದ್ಧವಾಗಿದೆ.

ಹಾಲನ್ನೀಯುವ ಪ್ರತಿಯೊಂದು ಪ್ರಾಣಿಗಳ ಕೆಚ್ಚಲಿನಲ್ಲಿ ನಿರ್ಮಾಣವಾಗುವ ಹಾಲು, ಆ ಆ ಪ್ರಾಣಿಗಳ ಸಂವರ್ಧನೆ ಮತ್ತು ಪೋಷಣೆಗಾಗಿಯೆ ಉಂಟಾಗುವುದಲ್ಲದೆ, ನಮಗಾಗಿ ಉತ್ಪನ್ನವಾಗುವುದಿಲ್ಲ. ಆದರೆ ಮನುಷ್ಯನು ತನ್ನ ಬುದ್ಧಿಬಲದಿಂದ ಹಾಲಿನ ಗುಣಧರ್ಮಗಳನ್ನು ಕಂಡು ಹಿಡಿದು, ನಿಸರ್ಗದ ಮೇಲೆ ವಿಜಯವನ್ನು ಸಂಪಾದಿಸಿ, ಎಲ್ಲ ಹೈನದ ದನಗಳ ಹಾಲನ್ನು ಉಪಯೋಗಿಸುತ್ತಿರುವನು.

ಪ್ರಾಮುಖ್ಯವಾಗಿ ಮನುಷ್ಯೋಪಯೋಗಿ ಹಾಲನ್ನೀಯುವ ಪ್ರಾಣಿಗಳೆಂದರೆ ಎಮ್ಮೆ, ಆಕಳು, ಆಡು ಮತ್ತು ಕುರಿ ಇವೇ ಇದ್ದರೂ, ಆ ಆ ಪ್ರಾಣಿಗಳ ಹಾಲನ್ನು ಪರೀಕ್ಷಿಸಲಾಗಿ ಅವು ಯಾವುದೇ ದೃಷ್ಟಿಯಿಂದ ಒಂದನ್ನೊಂದು ಹೋಲಲಾರವು. ಬಣ್ಣ, ಸ್ವಾದ ಮತ್ತು ವಾಸನೆಯಲ್ಲಿಯೂ ವ್ಯತ್ಯಾಸ ಕಂಡು ಬರುವಂತೆ, ಗುಣಧರ್ಮಗಳ ದೃಷ್ಟಿಯಿಂದಲೂ ಹೆಚ್ಚು ಕಡಿಮೆ ತರಗತಿಯುಳ್ಳವುಗಳಾಗಿ ಇರುವುವು. ಎಂತಲೇ ಅವುಗಳ ವಿಷಯವಾಗಿ ತಿಳಿವಳಿಕೆ ಮಾಡಿಕೊಳ್ಳುವುದು ಒಳಿತು.

ಹಾಲಿನ ಘಟಕಾವಯವಗಳು:

ಪ್ರಾಣಿ	ಘನಪದಾರ್ಥ						ಒಟ್ಟು ಘನ-ಪದಾರ್ಥ
	ಜಿಡ್ಡಿನ Density	ನೀರು	ಜಿಡ್ಡಿಲ್ಲದ ಘನಪದಾರ್ಥ	ಸಾರಜನಕ ಪದಾರ್ಥ	ಸಕ್ಕರೆ	ಬೆಲೆ ಜಿಡ್ಡಿನ	
ಆಕಳು-	೧೦೭	೮೫.೫	೩.೪	೩.೦	೪.೫	೨.೦	೧೩.೯
	೧೦೯	೮೩.೬	೪.೦	೩.೭	೫.೩	೧.೫	೧೪.೫
ಎಮ್ಮೆ-	೧೦೩.೭	೫೩	೬.೫	೫.೦	೧೦.೩	೧೪.೦	
	೧೦೫	೮೬.	೬.೪	೬.೮	೫.೪	೩.೯	೩೨.೫
ಕತ್ತೆ-	೧೦೩	೮೯.೩	೧೦.೭	೧೦೩	೬.೨	೦.೪	೯.೫
	೧೦೫	೮೭.೪	೨.೦	೧೦೫	೬.೪	೦.೪	೧೦.೭
ಸ್ತ್ರೀ-	೧೦೭	೮೬.೫	೧೦೦	೨೦	೫೦೪	೧೦೭	೧೩.೬
(ತಾಯಿ)	೧೦೦	೮೬.೫	೧೦೭	೩೭	೬೫	೧೦೬	೧೩.೫
ಆಡು-	೧೦೫.೮೫	೩೬	೫.೦	೪.೭	೪.೦	೧೧.೫	
	೧೦೬.೦೬	೮೫.೦	೬.೬	೩.೯	೫.೩	೦೭	೧೫.೫
ಎಮ್ಮೆ-	೧೦೩.೭	೫೩	೬.೫	೫.೦	೧೦.೩	೧೪.೦	
	೧೦೫	೮೬.	೬.೪	೬.೮	೫.೪	೩.೯	೩೨.೫
ಕತ್ತೆ-	೧೦೩	೮೯.೩	೧೦.೭	೧೦೩	೬.೨	೦.೪	೯.೫
	೧೦೫	೮೭.೪	೨.೦	೧೦೫	೬.೪	೦.೪	೧೦.೭
ಸ್ತ್ರೀ-	೧೦೭	೮೬.೫	೧೦೦	೨೦	೫೦೪	೧೦೭	೧೩.೬
(ತಾಯಿ)	೧೦೦	೮೬.೫	೧೦೭	೩೭	೬೫	೧೦೬	೧೩.೫

ನಮ್ಮ ಹಿಂದುಸ್ತಾನದಲ್ಲಿ ಹೈನದ ಪ್ರಾಣಿಗಳ ಹಾಲಿನ ವೃಥಕ್ಕರಣ ಮಾಡಲಾಗಿ ಮೇಲಿನ ಘಟಕಾವಯವಗಳು ಕಂಡು ಬರುವುವೆಂದು ಶಾಸ್ತ್ರಜ್ಞರು ಕಂಡು ಹಿಡಿದಿರುವರು. ಎಂದರೆ, ಮೇಲಿನ ಸರಾಸರಿ ಮಾನವನ್ನು ನೋಡಿದರೆ, ಬೇರೆ ಬೇರೆ ಪ್ರಾಣಿಗಳಿಂದ ಸಿಕ್ಕುವ ಹಾಲಿನಲ್ಲಿಯ ವ್ಯತ್ಯಾಸವು ಕಂಡು ಬರುತ್ತದೆ.

ಮೇಲಿನ ಕೋಷ್ಟಕಗಳಲ್ಲಿ ಕಂಡು ಹಿಡಿದಿರುವ ಪ್ರಮಾಣಗಳು ಶಾಸ್ತ್ರೀಯ ದೃಷ್ಟಿಯಿಂದ ಗಣಿಸಿದುವುಗಳಾಗಿದ್ದರೂ, ಕಾಲ, ಮಾನ, ಹವೆ, ನೀರು ಅಲ್ಲದೆ ಪರಿಸ್ಥಿತಿಗಳ ಮೇಲಿಂದ ಅವುಗಳಲ್ಲಿ ಹೆಚ್ಚು-ಕಡಿಮೆಯಾಗುವ ಸಂಭವವಿದೆ.

ಜೀವಸತ್ತ್ವ (ವಿಟ್ಯಾಮಿನ್ಸ್):— ಹಾಲಿನಲ್ಲಿ A. B. C. ಮತ್ತು D ಜೀವಸತ್ತ್ವಗಳು ಹೆಚ್ಚಾಗಿದ್ದರೂ, ಇವುಗಳ ಹೆಚ್ಚು ಕಡಿಮೆ ದನಗಳಿಗೆ ಹಾಕುವ ತಿನಿಸಿನ ಮೇಲೆ ಅವಲಂಬಿಸಿರುವುದು. ಇವುಗಳಲ್ಲಿ D ಜೀವಸತ್ತ್ವವನ್ನು ಬಿಟ್ಟು ಬಾಕಿ ಎಲ್ಲ ಸತ್ತ್ವಗಳೂ ಪ್ರಾಣಿಗಳ ಶರೀರದಲ್ಲಿಯೆ ಉತ್ಪನ್ನವಾಗುತ್ತವೆ. ಈ ಜೀವಸತ್ತ್ವಗಳು ಹಾಲಿನಲ್ಲಿ ಕೂಡಿ ಬಂದು ನಮಗೆ ಸಿಕ್ಕುತ್ತವೆ. A. D ಸತ್ತ್ವಗಳು ಮೇದೋದ್ರವ್ಯ (fat-soluble) ವಾಗಿರುವುದರಿಂದ ಅವು ಬೆಣ್ಣೆ-ತುಪ್ಪಗಳಿಂದ ನಮಗೆ ದೊರೆಯುವುವು. B. C. ಸತ್ತ್ವಗಳು ಜಲದ್ರವ್ಯಗಳಿರುವುದರಿಂದ ಹಾಲಿನಲ್ಲಿ C ಸತ್ತ್ವದ ಪ್ರಮಾಣವು ಅತ್ಯಲ್ಪ ವಿರುವುದು. ಅದಕ್ಕಾಗಿ ಬಾಲಕರನ್ನು ಹಾಲಿನ ಮೇಲೆ ಸಂರಕ್ಷಿಸುವ ಪ್ರಸಂಗ ಬಂದಲ್ಲಿ, ಎಲ್ಲ ಜೀವಸತ್ತ್ವಗಳಿಂದ

ಪೋಸುಂಬೆ,—ಟೊಮಾಟೋ. ಇವುಗಳ ತಾಜಾ ರಸವನ್ನು ಬಾಲಕರಿಗೆ ಹಾಕುವುದು ಒಳಿತು.

ಬಣ್ಣ:— ವಾಸ್ತವಿಕವಾಗಿ ಹಾಲಿನ ಬಣ್ಣ ಶುಭ್ರವಾದದ್ದು. ಹಾಲಿನಲ್ಲಿ ಹೆಚ್ಚಾಗಿ ನೀರು ಕೂಡಿಸಿದರೆ ಕಂಚಿತ್ ನೀಲವರ್ಣವಾಗಿ ಕಾಣುವುದು. ಆಕಳ ಹಾಲು ಸ್ವಲ್ಪ ಹಳದಿ ವರ್ಣವಾಗಿರುವುದರಿಂದ ಅದರ ಹಾಲಿನಿಂದುತ್ಪನ್ನವಾಗುವ ಬೆಣ್ಣೆ-ತುಪ್ಪಗಳ ಬಣ್ಣವೂ ಹಳದಿಯಾಗಿ ಕಾಣುವುದು. ಆಕಳ ಹಾಲು ತೆಳುವಾಗಿರುವುದರಿಂದ, ಅದರ ಜಡತ್ವ (Density) ಎಮ್ಮೆಯ ಹಾಲಿಗಿಂತ ಕಡಿಮೆಯಾಗಿರುವುದು; ಎಂತಲೇ ಕಾಹಿಲೆಯಿಂದ ಬಳಲುತ್ತಿರುವವರಿಗೆ, ಆಕಳ ಹಾಲು ಹಿತಕರವು.

ಸಕ್ಕರೆ:— (milk sugar) ಹಾಲಿನಲ್ಲಿರುವ ಸಕ್ಕರೆಗೆ ದುಗ್ಧ ಶರ್ಕರೆಯೆಂದೆನ್ನುವರು ಈ ಶರ್ಕರೆಯು ಶರೀರ ಸಂರಕ್ಷಣೆಗೆ ಅತಿ ಮಹತ್ತ್ವದ್ದಿದ್ದು ಪಚನವಾಗಲು ಹಗುರಾಗಿರುವುದು. ಹಾಲಿನಿಂದ ಮೊಸರನ್ನು ಮಾಡಿದರೆ ಅದರಲ್ಲಿದ್ದ ಸಕ್ಕರೆಯು ಲೆಕ್ಟಿಕ್, ಬ್ಯೂಟರಿಕ್ ಇತ್ಯಾದಿ ಆಮ್ಲಗಳಲ್ಲಿ ರೂಪಾಂತರವಾಗುತ್ತದೆ.

ಪ್ರೋಟಿನ್ಸ್:—(Proteins) ಹಾಲು ಪ್ರಾಣಿಜನ್ಯ ಪದಾರ್ಥವಿರುವುದರಿಂದ, ಅದರಲ್ಲಿ ಪ್ರೊಟೀನಿನ ಅಂಶವು ಹೆಚ್ಚಾಗಿರುವುದು. ಪ್ರೋಟೀನು ನೈಟ್ರೋಜನ್‌ಯುಕ್ತ ಪದಾರ್ಥವಿರುವುದರಿಂದ, ಸ್ನಾಯುಗಳ ಬೆಳವಣಿಗೆಗೆ ಶ್ರೇಷ್ಠವಾಗಿರುವುದು. ಕೂಸುಗಳ ಬೆಳವಣಿಗೆಗೆ ಇದು ನೈಸರ್ಗಿಕವಾಗಿಯೆ ಸಿಕ್ಕುವುದು. ಅದರಿಂದ ಸರಿಯಾಗಿ ಬೆಳೆದ ಕೂಸುಗಳ ತೂಕವು ಹುಟ್ಟಿದಂದಿನಿಂದ ನೊದಲನೆಯ ಹುಟ್ಟುಹಬ್ಬದ ಸುಮಾರಿಗೆ ಇಮ್ಮಡಿಯಾಗುವುದು.

ಹಾಲಿನಲ್ಲಿದ್ದ ಬೇರೆ ಧಾತುಗಳು:— ಹಾಲಿನಲ್ಲಿ ಕ್ಯಾಲ್ಸಿಯಮ್, ಫಾಸ್ಫರಸ್, ಲೋಹ ಧಾತುಗಳ ಪ್ರಮಾಣವು ಸಾಕಷ್ಟು ಇರುವುದು. ಇತ್ತೀಚಿನ ಸಂಶೋಧಕರು, ಹಾಲಿನಲ್ಲಿ ಅಲ್ಯೂಮಿನಿಯಮ್, ಕ್ರೋಮಿಯಮ್, ಮ್ಯಾಂಗನೀಜ್, ಉಕ್ಕು, ಸ್ಟಾನಾಡಿಯಮ್, ಬೆಳ್ಳಿ ಇತ್ಯಾದಿ ಅದೆಷ್ಟೋ ಧಾತುಗಳ ಸೂಕ್ಷ್ಮ ಪ್ರಮಾಣದ ಅಸ್ತಿತ್ವವನ್ನೂ ಕಂಡು ಹಿಡಿದಿದ್ದಾರೆ. ಈ ಸೂಕ್ಷ್ಮ ಪ್ರಮಾಣಗಳಲ್ಲಿರುವ ಧಾತುಗಳ ಕಣಗಳು ಸಹ ಮನುಷ್ಯ ಶರೀರ ಪೋಷಣೆಗೆ ಅತಿ ಉಪಯುಕ್ತವಾದುವುಗಳಿರುವುವು.

ಗಿಣ್ಣದ ಹಾಲು:— ದನಗಳು ಈಡಕೂಡಲೆ ಕರೆಯುವ ಹಾಲನ್ನು ಗಿಣ್ಣದ ಹಾಲೆಂದು ಕರೆಯುವರು. ಈ ಹಾಲಿನ ಬಣ್ಣ ಕೆಂಪುಬಣ್ಣದುದಾಗಿರುವುದು. ಕೆಲವು ದನಗಳ ಹಾಲು ನಸು-ಉಪ್ಪಾಗಿರುವುದು. ಸಾದಾ ಹಾಲಿಗಿಂತ ಗಟ್ಟಿಯಾಗಿದ್ದು, ರುಚಿಯಲ್ಲಿದು ಉಪ್ಪುಪ್ಪಾಗಿ ಹತ್ತುವುದು ಈ ಹಾಲಾದರೂ ತುಂಬ ಪೌಷ್ಟಿಕವುಳ್ಳದ್ದಾಗಿರುವುದು. ಈ ಹಾಲಿನಲ್ಲಿರುವ ದ್ರವ್ಯಗಳ ಪ್ರಮಾಣವು :

ಜಡತ್ವ— (Density) ೧೦೪೦ ರಿಂದ ೧೦೪೮ ವರೆಗೆ—

ಪ್ರೋಟೀನ್— ೨೧೦

ಕಳೆದ ಹನ್ನೆರಡು ವರ್ಷಗಳಿಂದ ಕನ್ನಡದ ಸೇವೆ ಮಾಡುತ್ತಿರುವ

ದಕ್ಷಿಣ ಕನ್ನಡ ಜಿಲ್ಲೆಯ ಒಂದೆ ಒಂದಾದ

ಸಾಹಿತ್ಯಿಕ—ಲೋಕಪ್ರಿಯ—ಪುರೋಗಾಮಿ ಎಂದು ಹೆಸರಾದ

ಕನ್ನಡ ಮಾಸಪತ್ರಿಕೆ

ವಾ. ಚಂ. ೨೦. ವೆ. ಸೇರಿ ೨.೪.೦ | **ಧುರೀಣ** | ಬಿಡಿಸಂಚಿಕೆಗೆ ೦.೩.೦

ಸಂಪಾದಕರು

ಶ್ರೀ. ಆರ್. ಎಸ್. ಶೆಣೈ ....

ಶ್ರೀ. ಬನ್ನಂಜೆ ರಾಮಾಚಾರ್ಯ

ಕನ್ನಡನಾಡಿನ ಸಮರ್ಥ ಬರೆಹಗಾರರ ಕತೆ, ಕವನ, ಲೇಖನಗಳಿಂದ ತುಂಬಿದ ಸಂಚಿಕೆಗಳು. ಜಾಹೀರಾತು ಕೊಡಬೇಕೆನ್ನುವವರಿಗೆ ಅತ್ಯುತ್ತಮ ಸಾಧನ.

ಮ್ಯಾನೇಜರ್ :—

ಧುರೀಣ ಉಡುಪಿ (ದ. ಕ. ಜಿಲ್ಲಾ)

ನೀರು— ೮೧.೭

ಕ್ಷಾರ— ೧.೮

ಸ್ನಿಗ್ಧಪದಾರ್ಥ— ೩.೦

ಸಕ್ಕರೆ— ೪.೫

ಹಾಲಿನಲ್ಲಿರುವ ಶ್ರೇಷ್ಠ ಗುಣಕಾರಿಯಾದ ಪ್ರೋಟೀನ್‌ಯುಕ್ತ ಪದಾರ್ಥವು ಪಚನಕ್ಕೂ ಅತಿ ಹಗುರಾಗಿರುವುದು. ಅಲ್ಲದೆ A ಜೀವಸತ್ತ್ವದ ಪ್ರಮಾಣವು ಹೆಚ್ಚಾಗಿರುವುದರಿಂದ, ಶರೀರ ಬೆಳವಣಿಗೆಯು ಸುಗಮವಾಗಿ ಸಾಗಿ, ಮೈಕಟ್ಟು ಮೆಚ್ಚುವಂತಹದಾಗುವುದು. ಸ್ನಾಯು, ಎಲುಬು, ಹಲ್ಲು ಗಟ್ಟಿಮುಟ್ಟಾಗುವುವು. ಎಂದರೆ ನಮ್ಮ ಊಟದಲ್ಲಿ ಹಾಲನ್ನು ಹೆಚ್ಚಾಗಿ ಬಳಸಿದಲ್ಲಿ, ಮನುಷ್ಯನು ನಿರೋಗಿಯಾಗಿ ದೀರ್ಘಾಯುಷಿಯಾಗುವನು.

ತಾಯಿಯ ಹಾಲು:— ಮೊಲೆಗೂಸುಗಳಿಗೆ ತಾಯಿಯ ಹಾಲಿನಷ್ಟು ಉತ್ತಮವಾದ ಅನ್ನವು ಇನ್ನೊಂದಿಲ್ಲವೆಂದು ಆಹಾರ ಶಾಸ್ತ್ರಜ್ಞರು ಹೇಳುವುದೇಕೆ? ಅನುಭವವೇ ತಕ್ಕ ಸಾಕ್ಷಿಯಾಗಿದೆ. ತಾಯಿಯ ಮೊಲೆಯಲ್ಲಿ ಉತ್ಪನ್ನವಾಗುವ ಹಾಲನ್ನು ಕೇವಲ ಕೂಸುಗಳ ಸಲುವಾಗಿಯೆ ಎಂದು ನಿಸರ್ಗ ಕೊಡುತ್ತದೆ. ಅದು ಅತಿ ಶುದ್ಧ, ಸ್ವಚ್ಛ ಮತ್ತು ತಾಜಾ ಇರುವುದಲ್ಲದೆ, ಹೊರಗಿನಿಂದ ರೋಗಜಂತುಗಳು ಅದರಲ್ಲಿ ಪ್ರವೇಶಿಸುವುದೆಂತು?

ಅಧುನಿಕ ಶಿಕ್ಷಣಪದ್ಧತಿಯ ಮೂಲಕ ಸುಧಾರಕರೆಂದು

ಹೇಳಿಕೊಳ್ಳುವ ಕೆಲ ಕಾಯಂದಿರು, ಮಕ್ಕಳಿಗೆ ಮೊಲೆಯಣ್ಣಿಸುವು ದೆಂದರೆ ಅದೊಂದು ಕಾಡುಜನರ ಪದ್ಧತಿಯೆಂದು ತಿಳಿದಿರುವರು; ಅಲ್ಲದೆ ಇದರಿಂದ ಶರೀರ ಸೌಂದರ್ಯಕ್ಕೂ ಬಾಧೆ ಬರುವುದೆಂಬ ಕಲ್ಪನೆಯೂ ಮನೆಮಾಡಿಕೊಂಡಿರುವುದು. ಆದರೆ ಕೂಸುಗಳ ಪೋಷಣೆಗೆ ತಾಯಿಯ ಹಾಲಿನಿಂದ ಶಿಶುಕರವಾದಷ್ಟು ಎರಡನೆಯ ಯಾವ ಹಾಲಿನಿಂದಲೂ ಆಗಲಾರದು.

ಕೃತ್ರಿಮ ಅನ್ನ ಅಥವಾ ಬೇರೆ ದುಗ್ಧಜನಕ ಪ್ರಾಣಿಗಳ ಹಾಲಿನ ಮೇಲೆ ಉಪಜೀವಿಸುವ ಬಾಲಕರ ಮೃತ್ಯುವಿನ ಸಂಖ್ಯೆಯು, ತಾಯಿಯ ಹಾಲಿನಿಂದ್ಸಸಂರಕ್ಷಿತವಾದ ಬಾಲಕರ ಶೈಶವಮೃತ್ಯುವಿನ ಸಂಖ್ಯೆಗಿಂತ ೫-೬ ಪಟ್ಟು ಹೆಚ್ಚಾಗಿರುವುದೆಂದು, ಅಮೇರಿಕೆಯ ಚಿಕಾಗೋ ನಗರದಲ್ಲಿ ಮಾಡಿದ ಸಂಶೋಧನೆಯ ಸಿದ್ಧಾಂತವು ನಮ್ಮೀ ಸುಶಿಕ್ಷಿತ ಸ್ತ್ರೀ (ತಾಯಿ)ಯರ ಕಾಳ ರೂಢಿಗೆ ಕೈದೀಪವಾಗಿರುವುದು.

ಎಮ್ಮೆ, ಆಕಳುಗಳ ಹಾಲಿಗಿಂತ ತಾಯಿಯ ಹಾಲಿನಲ್ಲಿ ಸಕ್ಕರೆಯ ಅಂಶವು ಹೆಚ್ಚಾಗಿರುವುದರಿಂದ, ಕೂಸುಗಳಿಗೆ ತಾಯಿಯ ಹಾಲೇ ಹೆಚ್ಚಾಗಿ ಸೇರುವುದು. ಎಮ್ಮೆ-ಆಕಳುಗಳ ಹಾಲನ್ನು ಕೂಸುಗಳಿಗೆ ಕುಡಿಸುವ ಪ್ರಯತ್ನ ಮಾಡಿದಾಗ, ಅದರಲ್ಲಿ ಸಕ್ಕರೆಯನ್ನು ಕೂಡಿಸಿದರೆಯೆ ಕುಡಿಯುವುವು. ಇದರಿಂದ, ಮೇಲಿನ ನಿಷ್ಕರ್ಷೆಯು ಸಹಜವಾಗಿ ತಿಳಿದುಬರಬಹುದು.

ದುರ್ದೈವಿಯಾದ ಕೆಲವು ಮಕ್ಕಳಿಗೆ ತಾಯಿ ಹಾಲು ದುರ್ಲಭವಾದಲ್ಲಿ ಮಾತ್ರ ಮಕ್ಕಳ ಪ್ರಕೃತಿಯಂತೆ ದನಗಳ ಹಾಲನ್ನು ಉಪಯೋಗಿಸುವುದೊಳಿತು.

ಹಾಲು ಸಾಧಾರಣವಾಗಿ ಎಲ್ಲ ರೋಗಗಳಿಗೂ ಪಥ್ಯಕರವಾಗಿರುತ್ತದೆ ಬಾಲಕರಿಂದ ವೃದ್ಧರ ವರೆಗೆ ಎಲ್ಲರಿಗೂ ಆರೋಗ್ಯಕರವಾದ ವಸ್ತುವೆಂದರೆ ಅದೊಂದು 'ಹಾಲು.'

ನಮ್ಮ ಪ್ರಕೃತಿಸ್ವಾಸ್ಥ್ಯವು ಚೆನ್ನಾಗಿ ಉಳಿಯಬೇಕಾದರೆ ಪೌಷ್ಟಿಕ ಪದಾರ್ಥ, ಜೀವಸತ್ತ್ವಗಳು ವಿಶೇಷವಾಗಿರಬೇಕು. ಅವು ನಿತ್ಯವೂ ಸಿಕ್ಕಬೇಕಾದರೆ ಹಾಲನ್ನು ಹೆಚ್ಚಾಗಿ ಸೇವಿಸಬೇಕು. ಅದರಂತೆ ದುಗ್ಧಜನ್ಯ ಪದಾರ್ಥಗಳಾದ ಬೆಣ್ಣೆ, ತುಪ್ಪ, ಪೊಸರು ಮತ್ತು ಮಜ್ಜಿಗೆಗಳನ್ನು ನಮ್ಮ ಊಟದಲ್ಲಿ ಹೆಚ್ಚಾಗಿ ಬಳಸಬೇಕು.

ಹುಡುಗರ ಆಹಾರದಲ್ಲಿ ಹಾಲಿನ ಪ್ರಮಾಣವನ್ನು ಹೆಚ್ಚಿಸಿದರೆ ಅವರ ಬೆಳವಣಿಗೆ (ಎತ್ತರ) ಮತ್ತು ತೂಕ ಹೆಚ್ಚಾಗುವುದು. ಇದನ್ನು ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಪ್ರಯೋಗಗಳಿಂದ ನಿರ್ಪ್ರಮಾಣವಾಗಿ ಸಿದ್ಧಮಾಡಿರುವರು.

"ಕೆಲವು ಹುಡುಗರಿಗೆ ದಿನದ ಆಹಾರದ ಜೊತೆಗೆ ಒಂದು ಪಾಯಿಂಟ್ (೪-೫ ಕಪ್ಪು) ಹಾಲು ಕೊಡಹತ್ತಿದರು. ಒಂದು ವರುಷದನಂತರ ಆ ಹುಡುಗರ ಎತ್ತರವು ೭½ ಇಂಚು ಹೆಚ್ಚಾಯಿತು. ತೂಕ ಸುಮಾರು ೬ ಪೌಂಡಿಗೆ ಹೆಚ್ಚಾಯಿತು. ಅಷ್ಟೇ ಹುಡುಗರನ್ನು ಹಾಲಿಲ್ಲದೆ ಅವರ ದಿನದ ಆಹಾರದ ಮೇಲೆಯೆ ಇಟ್ಟರು. ಅವರ ತೂಕ ಬರಿ ೪ ಪೌಂಡು ಹೆಚ್ಚಾಗಿ, ಎತ್ತರ ೧½ ಇಂಚು ಮಾತ್ರ ಬೆಳೆಯಿತು."

ಅಮೃತವೂ-ವಿಷವೂ ಒಂದೇ ಉದಿಯಿಂದ ಹೊರಬಿದ್ದಂತೆ ಹಾಲಿನಲ್ಲಿಯೂ ಅಮೃತತುಲ್ಯ ದ್ರವ್ಯಗಳ ಜೊತೆಗೆ ಅತಿ ಕ್ಷೀಣವಾದ ವಿಷದ್ರವ್ಯಗಳೂ ಅಡಕವಾಗಿರುವುವು. ಇವುಗಳ ವಿಷಯವಾಗಿ ಜ್ಞಾನಮಾಡಿಕೊಳ್ಳುವುದು ಅತ್ಯಾವಶ್ಯಕವು.

ಹಾಲಲ್ಲಿ ಅಡಕವಾಗಿರುವ ಹೊಲಸು:— ಬಿಳಿಯ ಬಣ್ಣವು ತನ್ನಲ್ಲಿ ಕೂಡಿದ ಹೊಲಸನ್ನು ತೆರೆದು ತೋರಿಸುವಂತಹ ಗುಣವಿದ್ದಿದ್ದರೂ, ಹಾಲು ಮಾತ್ರ ತನ್ನಲ್ಲಿ ಅಡಗಿರುವ ಹೊಲಸನ್ನು ಮುಚ್ಚಿಕೊಳ್ಳುವುದರಲ್ಲಿ ಬಹು ಜಾಣವಾಗಿರುವುದು. ಕಣ್ಣಿಗೆ ಸ್ವಚ್ಛ ಮತ್ತು ಉತ್ತಮವೆಂದು ಕಾಣುವ ಹಾಲಿನ ಅಂತರಂಗದಲ್ಲಿ ಎಷ್ಟು ಹೊಲಸಿರುವುದೆಂಬುದು ಪ್ರತ್ಯಕ್ಷ ಪ್ರಯೋಗದ ವಿನಾ ತಿಳಿಯದು.

ಹಾಲಿನಲ್ಲಿ ಕೂಡಿಕೊಂಡಿರುವ ಕೆಲವು ಕೊಳಸು ಪದಾರ್ಥಗಳು ಕರಗಿ ಏಕರೂಪವಾಗುವುವು. ಕೆಲವು ಹಾಲಿನ ಮೇಲ್ಭಾಗದಲ್ಲಿ ಅಲೆದಾಡಿದರೆ, ಕೆಲವು ತಳಹಿಡಿದು ಕೂಡುವುವು. ಆದರೆ ಕಣ್ಣಿಗೆ ಸ್ವಚ್ಛ ಕಾಣುವುವು.

ಶುದ್ಧವಾದ— ಸ್ವಚ್ಛ ಹಾಲು ಸಿಕ್ಕುವುದು ಅಶಕ್ಯ. ಇಂದು ಹೈನದ ದನಗಳ ಉಪಚಾರ, ಹಾಲು ಹಿಂಡುವುದು, ಹಂಚುವುದು (ಮಾರುವುದು) ಯಾವ ಪ್ರಕಾರವಾಗಿ ನಡೆಯುತ್ತಿರುವುದೆಂಬುದನ್ನು ನಿರೀಕ್ಷಿಸಿದರೆ, ತಮ್ಮ ಮನೆಗೆ ಬರುವ ಹಾಲಿನ ಜೊತೆಗೆ ಕೆಲವು ರೋಗಜಂತುಗಳೂ ಬರುವುವೆಂಬುದು ಸಹಜವಾಗಿ ತಿಳಿಯುವುದು.

ಹಾಲು ಮಾರುವವರ ದನಗಳ ಹಕ್ಕೆಯೆಂದರೆ ಅದೊಂದು ಸೊಣಗಳ ಸಂತೆ. ಅಲ್ಲಲ್ಲಿ ಬಿದ್ದಿರುವ ಸೆಗಣಿಗುಂಪು, ಕಂಡಲ್ಲಿ ನಿಂತಿರುವ ಮೂತ್ರ, ಅವುಗಳ ಮೇಲೆ ಅಸ್ತವ್ಯಸ್ತವಾಗಿ ಕಣಿಕೆಯಂತುಂಡು—ಹುಲ್ಲಿನ ತುಕಡಿಗಳು ಬಿದ್ದಿರುವುದು ಕಂಡುಬರುವುದು

ಮನೋರಂಜನ ಗ್ರಂಥಮಾಲಾ

ವರುಷದಲ್ಲಿ ಆರು ಸರಸ ಗ್ರಂಥಗಳು!
ವರುಷದಲ್ಲಿ ಒಟ್ಟು ೬೦೦ರಷ್ಟು ಪುಟಗಳು!!
ವಾರ್ಷಿಕ ಚಂದಾ ೪-೮-೦ (ಅ. ಪೆ. ಬೇರೆ)

ಪ್ರಕಟವಾಗಿವೆ: **ಪರಿತ್ಯಕ್ತೆ**
ಪತ್ತೆದಾರಿ ಕಾದಂಬರಿ

ಅಚ್ಚಿನಲ್ಲಿವೆ: **ಎನ್ನೆ— ಏಕಾಂಕಗಳು**
ಶ್ರೀ. ಎನ್. ಕೆ. ಕುಲಕರ್ಣಿಯವರ ಏಕಾಂಕಗಳ ಸಂಗ್ರಹ
ಕೂಡಲೆ ಚಂದಾದಾರರಾಗಿರಿ!

ಮನೋರಂಜನ ಪ್ರಕಾಶನ ಸಮಿತಿ, ಧಾರವಾಡ

ಹಾಲು ಹಿಂಡುವವರ ಕೈಗಳೂ ಅಸ್ವಚ್ಛವಾಗಿರುವುದರಲ್ಲಿ ಸಂದೇಹವಿಲ್ಲ. ಹಾಲಿನ ಪಾತ್ರೆಗಳನ್ನು ಮುನ್ನಾದಿನವೇ ತೊಳೆದಿದ್ದಿರುವುದು. ಆಗಲೇ ಗಲಬರಿಸಿ ಹಿಂಡಿದರೂ ರೋಗಜಂತುಗಳು ನಾಶವಾಗಲು ಶಕ್ಯವಿಲ್ಲ; ಅವು ತೊಳೆನೀರಿನ ಜೊತೆಗೆ ಹಾಲಿನಲ್ಲಿ ಸಹಜವಾಗಿ ಕೂಡಿಕೊಳ್ಳುವವು. ಅಲ್ಲದೆ ಹಾಲು ಸಂಗ್ರಹಿಸಿಡುವ ಪಾತ್ರೆಗಳ ಮೇಲೆ ಮುಚ್ಚಳ ಇರುವುದಿಲ್ಲ; ಇಷ್ಟೇ ಅಲ್ಲ, ಹಾಲು ಕರೆಯುವಾಗಲೇ ದನಗಳ ಕೊಟ್ಟಿಗೆಯ ಸ್ವಚ್ಛತೆ (ಉಡುಗುವುದು) ನಡೆಯುವುದು. ಆಗ ಹೊರಡುವ ಧೂಳಿಯಲ್ಲಿ ದನಗಳ ಮತ್ತು ಮನುಷ್ಯರ ರೋಗಜಂತುಗಳು ಕೂಡಿಯೆ ಹಾಲಿನಲ್ಲಿ ಮಿಶ್ರಣವಾಗುವವು. ಆದರಿಂದ ಹಾಲಿನ ಜೊತೆಗೆ ರೋಗಜಂತುಗಳು ನಮ್ಮ ಮನೆಗೆ ಹೇಗೆ ಬರುತ್ತವೆಂಬುದು ಸಹಜವಾಗಿ ಕಂಡುಬರುವುದು.

ಅಮೇರಿಕೆಯಲ್ಲಿಯೂ ೩೦-೩೫ ವರುಷಗಳ ಹಿಂದೆ ಇದೇ ಸ್ಥಿತಿಯಿದ್ದಿತ್ತು. ಆದರೆ ಆ ಸ್ವತಂತ್ರದೇಶವು ತನ್ನ ಸ್ಥಿತಿಯನ್ನು ಆರಿತುಕೊಂಡು, ಹಾಲಿನ ವಿಷಯವಾಗಿ ಒಂದು ಕಾನೂನನ್ನೇ ಮಾಡಿ, ಎಲ್ಲ ರೀತಿಯಿಂದ ಸುಧಾರಣೆಯನ್ನು ಮಾಡಿಕೊಂಡಿತು. ಆದರೆ ಹಿಂದುಸ್ತಾನದಲ್ಲಿ ?

ಅಮೇರಿಕೆಯ ಒಬ್ಬ ದುಗ್ಧವಿಶಾರದನು (Daily Expert) ತನ್ನ ಅನುಭವದಿಂದ "ನೀರು ಹಾಲಿನಂತೆಯೆ ಪ್ರಾಣಿಜನ್ಯ ಪೇಯ ಪದಾರ್ಥವಿದ್ದರೆ, ಅದನ್ನು ಹಾಗೆಯೆ ಕುಡಿಯುವ ಧೈರ್ಯವು ನಮಗೆ ಆಗುತ್ತಿದ್ದಿಲ್ಲ" ಎಂದಿರುವನು. ಎಂದರೆ ಸ್ವಚ್ಛ ಹಾಲು ನಮಗೆ ಸಿಕ್ಕುವುದು ಅಸಾಧ್ಯವೆಂದು ಅವನ ಆಶಯ ಶುದ್ಧ ಹಾಲು ಸಿಕ್ಕುವುದು ದುರ್ಮಿಳಜ್ಞಾದ ಇಂದಿನ ದಿವಸಗಳಲ್ಲಿ, ಅವನ್ನು ಕಾಸಿ ಶುದ್ಧಮಾಡುವುದೇ ಉತ್ತಮವಾದ ಮಾರ್ಗ.

ಹಾಲು ಕಾಸುವುದು:— ಹಾಲಿನಲ್ಲಿ ಸಹಜವಾಗಿ ಅಡಗಿ (ಕೂಡಿ) ಕೊಂಡು ಬೆಳೆಯುವ ರೋಗಜಂತುಗಳೆಂದರೆ (ಜಲಜನ್ಯ) ಟಾಯ್‌ಫಾಯಿಡ್ (ವಿಷಮಜ್ವರ), ಕ್ಷಯ ಮತ್ತು ಕಾಲರಾ ಇತ್ಯಾದಿ. ಈ ಜಂತುಗಳು ರೋಗಿಷ್ಠ ದನ, ಹಾಲು ಹಿಂಡುವ ಮತ್ತು ಮನೆಗೆ ತಂದುಕೊಡುವ ಜನರಿಂದ ಹಾಲಿನಲ್ಲಿ ಕೂಡಿ ಪ್ರಸಾರವಾಗುತ್ತವೆ. ಹಾಲಿಗೆ ಎಷ್ಟೋ ಪ್ರಕಾರದ ದನಗಳ ಮತ್ತು ಮನುಷ್ಯರ ಸಂಬಂಧವಿರುವುದರಿಂದ, ಈ ಘಾತಕವು ಎಲ್ಲಿಂದ ಬರುವುದೆಂಬುದನ್ನು ಹೇಳುವುದು ಸಾಧ್ಯವಿಲ್ಲ. ಇದರ ಹೊರತು ಹಾಲಿನಲ್ಲಿ ನೀರು ಕೂಡಿಸಿ ಮಾರುವುದು ನಿತ್ಯನಿಯಮವಾಗಿರುವುದರಿಂದ, ಈ ನೀರಿನ ಸಂಗಡವೂ ಅದೆಷ್ಟೋ ರೋಗ ಜಂತುಗಳು ಪ್ರಾದುರ್ಭವಿಸುವವು. ಹೀಗಾಗಿ ಉತ್ತಮ ಶುದ್ಧವಾದ ಹಾಲು ನಮಗೆ ಸಿಕ್ಕುವುದು ಸಾಧ್ಯವಿಲ್ಲ.

ಹಾಲನ್ನು ಬರಿ ಬೆಚ್ಚಗೆ ಮಾಡಿ ಕುಡಿಯುವ ಸಂಪ್ರದಾಯವು ಅನಿಷ್ಟಕರ. ಜಲಜನ್ಯ ರೋಗಗಳು ಬರಿ ಬೆಚ್ಚಗೆ ಮಾಡಿದರೆ ನಾಶವಾಗಲಾರವು. ನಿದಾನ ೧೪೦° ಫ. ಹೀಟಿನಿಂದ ೧೫೫° ಫ. ಹೀಟಿನ ವರೆಗಿನ ಉಷ್ಣತೆಯಿಂದ ನಿದಾನ ೩೦ ನಿಮಿಷಗಳ ವರೆಗಾದರೂ ಕಾಸಿದರೆ, ಆದರಲ್ಲಿದ್ದ ರೋಗಜಂತುಗಳು ನಾಶವಾಗುವುವೆಂದು ಶಾಸ್ತ್ರಜ್ಞರ ಮತವಿದೆ. ೧೪೦°-೧೫೫° ಈ ಉಷ್ಣತೆಯ ನಡುವಿನ ಅಂತರವಿದ್ದಂತೆ ನಿಮಿಷಗಳನ್ನಾದರೂ ಅದರಂತೆ ಸ್ವಲ್ಪ ಹೆಚ್ಚು ಕಡಿಮೆ ಮಾಡಬಹುದು. ಒಟ್ಟಿನ ಮೇಲೆ ಹೆಚ್ಚಿನ ಉಷ್ಣತೆಯಿಂದ ಹಾಲನ್ನು ಕಾಸಿದರೂ ಕಡಿಮೆಯೆಂದರೆ ೫ ನಿಮಿಷಗಳಿಗಿಂತ ಹೆಚ್ಚು ವೇಳೆ ಹಾಲನ್ನು ಕಾಸಬೇಕು.

ಸುದೈವದಿಂದ ಹಸಿಯ ಹಾಲನ್ನೇ ಕುಡಿಯುವ ಸಂಪ್ರದಾಯವು ನಮ್ಮಲ್ಲಿ ಇಲ್ಲ. ಆದರೂ ಧಾರೋಷ್ಣ ಹಾಲು ಹಿತಕರವೆಂದು ತಜ್ಞರ ಮತವಿದೆ. ಸ್ವಚ್ಛತೆಯ ಬಗ್ಗೆ ಜಾಗರೂಕತೆಯನ್ನು ತಿಗೆದುಕೊಂಡು ಧಾರೋಷ್ಣ ಹಾಲನ್ನು ಸೇವಿಸಲು ಅಡ್ಡಿಯಿಲ್ಲ.

ಬಡತನದ ಬಾಳು

★

'ಆನಂದಕಂದ'ರ ಕಥಾಸಂಗ್ರಹ.

ಕನ್ನಡ ಜನತೆಯ ಜೀವನದ ನಿಜವಾದ ಚಿತ್ರ ಇದರಲ್ಲಿ ಮೂಡಿದೆ.

ಬೇಕಾದವರು

'ಜಯಂತಿ' ಕಾರ್ಯಾಲಯಕ್ಕೆ

ಬರೆಯಿರಿ.

೩೨ ವರ್ಷಗಳಿಂದ ಅನುಭವಪಟ್ಟ

ಕೆರ್ಕ ಮತ್ತು ಕಂಪನಿಯ

ಜ್ವರದ ಗುಳಿಗೆಗಳು.

ಬಾಟ್ಲಿಗೆ ೧-೮-೦

ಎಲ್ಲ ಪ್ರಕಾರದ ಜ್ವರಗಳನ್ನೂ ಕಳೆಯುವುದು.

ವಿಳಾಸ:—

ಗಣೇರ ರಾಮಚಂದ್ರ ಕೆರ್ಕ ಮತ್ತು ಕಂಪನಿ

ಗಿರಗಾಂವ, ಮುಂಬಯಿ.

ಶಾಂತಿನಿಕೇತನದ ಯಾತ್ರೆ

ಶ್ರೀ. ಕೆ. ಎನ್. ರಾವ್, ಸಿರಸಿ

(ಪ್ರವಾಸ ಪ್ರಬಂಧದ ಉತ್ತರಾರ್ಧ)

ರವೀಂದ್ರರು ಸ್ಥಾಪಿಸಿದ ಸಂಸ್ಥೆ 'ವಿಶ್ವಭಾರತಿ'; ಆದರೂ ಅಲ್ಲಿ ಬಂಗಾಲಿ ಭಾಷೆಗೆ ಮೊದಲ ಮನ್ನಣೆ. ನಮ್ಮ ನಾಡಿನ ಕಾರ್ಯಕರ್ತರು ಇದರ ರಹಸ್ಯ ಅರಿತುಕೊಳ್ಳಬೇಕು. 'ಶಾಂತಿನಿಕೇತನ' 'ಶ್ರೀನಿಕೇತನ' ಗಳಿಗೆ 'ಶಿಕ್ಷಾನಿಕೇತನ'ವೊಂದು ಹೊಸತಾಗಿ ಬೆಸುಗೆಯಡೆದುದು ಬಂಗಾಲಿಗಳಿ ಭಾಗ್ಯೋದಯದ ಲಕ್ಷಣ.

ಶ್ರೀನಿಕೇತನ

ಇದು ಶಾಂತಿನಿಕೇತನದಿಂದ ೨ ಮೈಲು ದೂರದಲ್ಲಿದೆ. ಇಲ್ಲಿಯೂ ಶಾಂತಿನಿಕೇತನದಂತೆಯೆ ನಿಯಮ-ನಿಯತಿಗಳಿವೆ. ವಿಶೇಷವೆಂದರೆ ಎಲ್ಲರೂ ಇಲ್ಲಿ ಕೆಲಸಗಾರರು. ಚರ್ಮದ ಹದ, ಬಣ್ಣ, ಕೆತ್ತನೆ, ಹೊಲಿಗೆ ಮುತ್ತು ಚಿತ್ರಗಳನ್ನೂ ಕೈನೂಲು ಕೈಮಗ್ಗ ಬೆತ್ತದ ಕೆಲಸಗಳನ್ನೂ ಕಟ್ಟಿಗೆ ಕೈಗಾರಿಕೆ ಕಬ್ಬಣ ಕೆಲಸಗಳನ್ನೂ ಮಣ್ಣು ಬಿಂಗಾಣಿಗಳ ಕೈಗಾರಿಕೆಯನ್ನೂ (chinese clay) ಇಲ್ಲಿ ಕಲಿಸುತ್ತಾರೆ.

ಇಂದಿನ ನಮ್ಮ ಸರಕಾರದವರು ೪ ಲಕ್ಷ ೭೫ ಸಾವಿರ ರೂ. ಮಂಜೂರು ಮಾಡಿ, ಬೇಸಿಕ್ ಶಿಕ್ಷಣ (Basic education) ಕ್ಕಾಗಿ ಉಪಾಧ್ಯಾಯರ ತರಬೇತಿ ವಿದ್ಯಾಲಯವನ್ನು (Teachers training callege) ತೆರೆಯಲಿದ್ದಾರೆ. ಆದೇ

ಶಿಕ್ಷಾನಿಕೇತನ.

'ಶ್ರೀನಿಕೇತನ' ಮತ್ತು 'ಶಾಂತಿನಿಕೇತನ' ಗಳ ನಡುವೆ ಕೆಲವು "ಮಧುಕುಂಜ" ಮತ್ತು "Soil titovs" ಎಂದು ನೊದಲಾಗಿ ಗುರುತಿಸಲುಗಳವೆ ಆ ಗುರುತಿಸಲುಗಳ ಎದುರಿನ ಮೈದಾನಗಳಲ್ಲಿ ತಾ. ೨೬-೧೨-೪೬ ನೆಯ ದಿನ ಒಂದು ಬಟ್ಟೆಯ ಚಪ್ಪರವನ್ನು ಬಹುದೂರ ಕಂಡೆವು. ಅಲ್ಲಲ್ಲಿ ಬಾಳೆಗಳು ಕಂಡುವು. ಅಲ್ಲೇನೋ "ಸತ್ಯನಾರಾಯಣ" ಇರಬಹುದೆಂದು ಹೋದರೆ "ರಾಜಾಜಿ" ಬರುತ್ತಾರೆಂದು ಗೊತ್ತಾಯಿತು. ರಸ್ತೆಯುದ್ದಕ್ಕೂ ಹರಿಜನ ಬಾಲಕರನ್ನು ತಲೆಗೆ ಕಾವಿ ಕುಲಾವಿ ಸೇರಿಸಿ ನಿಲ್ಲಿಸಿದ್ದರು. ಚಪ್ಪರದಲ್ಲಿ ನಾಲ್ಕೂ ಕಡೆಗೆ ಬಾಳೆಗಳು; ಮಧ್ಯದಲ್ಲಿ ಯಜ್ಞಕುಂಡ. ಚಾಕಟ್ಟಿಯ ಪೂರ್ವಕ್ಕೆ ನಾಲ್ಕಾರು ಹಲಗೆಗಳನ್ನು ಹಾಕಿ ಶ್ರೀನಿಕೇತನದಲ್ಲಿ ಹೆಣೆದ ಜಮಖಾನೆ ಹಾಸಿದ್ದರು ಯಜ್ಞಕುಂಡದ ನಾಲ್ಕೂ ಕಡೆಗಳಲ್ಲಿ ಮಂಗಲಾಕ್ಷತೆ, ಆರತಿ, ಸಿಂಗರಿಸಿದ ಕುಂಬಗಳು (ವೀಣೆ, ವಾಣಿ, ಶಾರದೆ, ಶಕ್ತಿ) ಇರಿಸಿದ್ದರು ಕಂಬಗಳೂ ಆರತಿಗಳೂ ಇಡಲ್ಪಟ್ಟಿದ್ದುವು.

ಪ್ರೇಕ್ಷಕರಲ್ಲಿ ಮೊದಲಿಗರು ನಾವೇ ಆದರೂ, ಅಪೂರ್ವ ಸುಸಂಧಿಯ ಉತ್ಸುಕತೆಯಿಂದ ಒಂಟಿಗತನವನ್ನು ಮರೆತಿದ್ದೆವು. ಕ್ರಮೇಣ ಜನರು ಬರಲಾರಂಭಿಸಿದರು. ಮೈದಾನವು ಜನರಿಂದ ಕಿಕ್ಕಿರಿಯಿತು. ಅಲ್ಲಿ ನಮ್ಮ ಸೀಮೆಯಂತೆ ಹೆಣ್ಣುಸಭೆ, ಗಂಡು ಸಭೆಗಳಿಲ್ಲ. ಎಲ್ಲರೂ ಸೇರಿ ಕೂಡುವುದು. ಭಾಷೆ ಮಾತ್ರ ಬಂಗಾಲಿ. ಗಂಟೆ ೮-೩೦ಕ್ಕೆ ಶ್ರೀ. ರತೀಂದ್ರನಾಥ ಟಾಗೋರರು, ರಾಜಾಜಿ ಮತ್ತು ಸರೋಜಿನಿ ನಾಯುಡುರನ್ನು ಕರೆದುತಂದರು. ಮಂಟಪದ ಎಡಮೂಲೆಯಲ್ಲಿಟ್ಟ "ಶಿಕ್ಷಾನಿಕೇತನ"ದ ನಕಾಶೆಯನ್ನು ನೋಡಿ, ರಾಜಾಜಿಯವರು ಹಲಗೆಯ ಮೇಲೆ ಕುಳಿತರು. ಮಾರು ದೂರದಲ್ಲಿ ಅಕ್ಕ ಸರೋಜಿನಿಯವರು ಕುಳಿತರು. ಮೂಲೆಯಲ್ಲಿ ರತೀಂದ್ರನಾಥರು.

ಬಂಗಾಲಿಯಿಂದ ಮಧುರ ಸಂಗೀತದ ಸ್ವಾಗತ ಗೀತವಾಯಿತು. ವೀಣೆಯೂ ಜೊತೆಗೂಡಿತ್ತು ಸರೋಜಿನಿಯವರು ರಾಜಾಜಿಯವರ ವಿಷಯ ಹೇಳುತ್ತ :—

"ಎಲ್ಲರಿಗೆ ತಿಳಿದಂತೆ, ರಾಜಾಜಿಯವರ ಆದರ್ಶ ವಿದ್ಯಾಪ್ರೇಮವು, ಇಂದು ಅವರನ್ನು ವಿದ್ಯಾಶಾಖೆಯ ಪ್ರತಿನಿಧಿಯನ್ನಾಗಿ ಕೇಂದ್ರ ಸರಕಾರದಲ್ಲಿ ಅವರಿಗೆ ಸ್ಥಾನವಿತ್ತಿದೆ. ಅವರು ತಮ್ಮ ಅಶಕ್ತ ಪ್ರಕೃತಿಯಲ್ಲಿ ಸಶಕ್ತ ಕಾರ್ಯವನ್ನು ಸಾಂಗಗೊಳಿಸುತ್ತಾರೆಂದು ನನ್ನ ನಂಬುಗೆ ಇದೆ. ಒಂದು ವಿಷಯದ ಬಗ್ಗೆ ನಾನು ನಾಚಿಕೊಳ್ಳುವುದೆಂದರೆ ನನಗೆ ಬಂಗಾಲಿ ಬರುವುದಿಲ್ಲ. ಆದುದರಿಂದ ಇಂಗ್ಲೀಷಿನಲ್ಲಿ ಹೇಳಿದ್ದೇನೆ. ಕ್ಷಮಿಸಬೇಕು." ಎಂದು ತಮ್ಮ ಕಾವ್ಯಭಾಷೆಯಲ್ಲಿ ಹೇಳಿದರು.

ರಾಜಾಜಿಯವರನ್ನು ಕಂಡೊಡನೆ ನನಗೆ ಎರಡು ವಿಷಯ ನೆನೆದು ಆನಂದ ಬಾಷ್ಪಗಳುದುರಿದುವು. ಮೊದಲನೆಯದಾಗಿ ರಾಜಾಜಿಯವರು ತಮ್ಮ ಮಗ ರಾಮುಸ್ವಾಮಿಯವರನ್ನು ಕಳೆದು ಕೊಂಡು ಹತ್ತು ದಿನಗಳೂ ಆಗಿರಲಿಲ್ಲ. 'ಮಗನ ಸಮಾನ ವಯಸ್ಕರನ್ನು ಕಂಡು ಅವರೆದೆ ಅಳುಕಬಹುದೇ' ಎಂಬ ನನ್ನ ಸಣ್ಣ ಮನಸ್ಸಿನ ಶಂಕೆಯೊಂದು. ಎರಡನೆಯದಾಗಿ ನನ್ನ ಗುರು ಬಂಟ್ವಾಳ ರಘುನಾಥರಾಯರು ೫೭ ವರ್ಷ ಹೆಡ್ಮಾಸ್ಟರಾಗಿದ್ದು ಬ್ರಹ್ಮಚರ್ಯ ಜೀವನದಿಂದ ತಮ್ಮ ರಕ್ತದ ಪ್ರತಿಬಿಂದುವನ್ನೂ ವಿದ್ಯಾಸೇವೆಗಾಗಿ ಕೊಟ್ಟು, ತಾನು ದುಡಿದ ವಿತ್ತವೆಲ್ಲವನ್ನೂ ಸಾಯುವ ಕಾಲಕ್ಕೆ ಸರಕಾರಕ್ಕೆ ಜಮಾಮಾಡಿ, ಅದರ ಬಡ್ಡಿಯಿಂದ Hindu Higher Elementary School ನಡೆಯುವಂತೆ ಮಾಡಿದ ಪ್ರತಿಜ್ಞೆಯನ್ನು ನೆನೆದುದೊಂದು. ರಾಜಾಜಿಯವರ ಮತ್ತು ನನ್ನ ಗುರುಗಳ ರೂಪರೇಷೆಗಳು ಒಂದೆಯಾಗಿದ್ದುವು. ಅಂತೆಯೆ ನನ್ನೆದೆ ಅಳುಕಿದ್ದು.

ರಾಜಾಜಿಯವರು ವಿದ್ಯೆ ಮತ್ತು ಶಿಕ್ಷಣಗಳನ್ನು ಕುರಿತು ಮಾತಾಡಿದರು :

" ಪ್ರಿಯ ಸಭಿಕರೆ,

ಎಲ್ಲಾ ವಿಷಯವನ್ನು ತಂಗಿ ಸರೋಜಿನಿಯವರು ತಿಳಿಸಿದ್ದಾರೆ. ಇಂದು ನನ್ನ ಕರ್ತವ್ಯವೆಂದರೆ 'ಶಿಕ್ಷಾನಿಕೇತನದ ಉದ್ಘಾಟನೆ', ಹಲವಾರು ಸಂಗತಿಗಳಿಂದ ತಮ್ಮನ್ನು ದಣಿಸಲಾರೆ. ಭಾರತದಲ್ಲಿ ಬ್ರಿಟಿಷರು ಬಂದಾಗಿನಿಂದ ನಮ್ಮ ಶಿಕ್ಷಣಪದ್ಧತಿಯು ಬುಡ ಮೇಲಾಗಿದೆ. ಅದನ್ನು ಸರಿಪಡಿಸಿ, ಶಿಕ್ಷಣ ಮತ್ತು ಜೀವನದ ಹೊಂದಿಕೆಯನ್ನು ಬಿಸೆಯುವುದಕ್ಕಾಗಿ ನಾವು ಕಂಕಣ ತೊಟ್ಟಿದ್ದೇವೆ. ಶಿಕ್ಷಣವು ವಿದ್ಯಾರ್ಥಿಗಳನ್ನು ಹೊಡೆದು ಬಡಿದುದರಿಂದ ಬರುವುದಿಲ್ಲ. ಅದು ಅವರ ಮನವೊಲಿಸಿ ತಿಳಿಸಿ ಹೇಳುವುದರಿಂದ ಮೂಡುತ್ತದೆ. ಆ ರೀತಿ ಹುಡುಗರ ಮನದೊಲವನ್ನು ತಿಳಿಯುವಂತಹ ಉಪಾಧ್ಯಾಯರು ಬೇಕು ಅಂತಹ ಉಪಾಧ್ಯಾಯರನ್ನು ಕೊಡುವ ಮಾತೆಯರು ಬೇಕು. ಪ್ರತಿಯೊಬ್ಬ ಮಾತೆಯೂ ತನ್ನ ಮಗುವಿಗೆ ಉಚ್ಚ ಶಿಕ್ಷಣ ಕೊಡುವ ಯೋಗ್ಯತೆಯವಳಿದ್ದರೆ, ಮುಂದೆ ಶಿಕ್ಷಕರ ನ್ಯೂನತೆಯಿರುವುದಿಲ್ಲ. ಅಂತಹ ಶಿಕ್ಷಕ-ಶಿಕ್ಷಕಿಯರನ್ನು ಸಿದ್ಧಗೊಳಿಸುವುದಕ್ಕಾಗಿ ಈ ಶಾಲೆಯು ತೆರೆಯುತ್ತಿದೆ. ಇಲ್ಲಿ ಹತ್ತು ಜನರು ತಯಾರಾದರೆ ಅವರು ತಂತಮ್ಮ ಊರಲ್ಲಿ ಒಬ್ಬರು ಹತ್ತರಂತೆ ಶಿಕ್ಷಕರನ್ನು ತಯಾರು ಮಾಡಬಹುದು. ಈ ರೀತಿ ಬರಿಯ ಶಿಕ್ಷಕರನ್ನಷ್ಟೇ ತಯಾರು ಮಾಡುವುದರಲ್ಲಿ ಅರ್ಥವಿಲ್ಲ. ಸಂಗಡಲೇ ವಿದ್ಯಾರ್ಥಿಗಳನ್ನೂ ಪ್ರೋತ್ಸಾಹಿಸಬೇಕು. ಇಂದಿನ ವಿದ್ಯಾರ್ಥಿಗಳೇ ಮುಂದಿನ ಮುಂದಾಳುಗಳು. ಭಾರತೀಯ ಪ್ರಾಚೀನ ಶಿಕ್ಷಣವು ಇಂದು ಸಾಧ್ಯವಿವೆ ಹೇಗೆಂದರೆ: ಉದಾಹರಣೆಗಾಗಿ ಎಷ್ಟೊ ಶಾಲೆಗಳಲ್ಲಿ ವಿದ್ಯಾರ್ಥಿಗಳು ಬರಿಕೈಯಲ್ಲಿದ್ದು ಉಪಾಧ್ಯಾಯರ ಕೈಯಲ್ಲಿ ಛಡಿಗಳಿರುತ್ತವೆ; ಆದರೆ ಇಲ್ಲಿ ಆ ಛಡಿಗಳು ವಿದ್ಯಾರ್ಥಿಗಳ ಕೈಯ್ಯಲ್ಲಿವೆ. ಅದಕ್ಕಾಗಿ ಇದನ್ನು ಅಖಿಲ ಭಾರತ ಶಿಕ್ಷಣಕೇಂದ್ರವನ್ನಾಗಿ ಮಾಡುತ್ತೇನೆಂದು ಹೇಳಿದರು. ಮತ್ತೊಂದು ವಿಷಯವೆಂದರೆ ಸರಕಾರದವರು ಲಕ್ಷ ಖರ್ಚುಮಾಡಿ ಮಂಜೂರು ಮಾಡಿದ್ದೇಕೆಂದರೆ : ಒಬ್ಬರೇ ಬಂದು ಕೆಲಸವನ್ನು ಒಂದೇ ಸಾರೆಗೆ ಪೂರ್ಣ ಮಾಡಿದರೆ, ಮುಂದಿನವರಿಗೆ ಆ ವಿಷಯ ಲಕ್ಷ್ಯವಿರುವುದಿಲ್ಲ. ಅಪೂರ್ಣವಾಗಿದ್ದರೆ ಅದನ್ನು ಪೂರ್ಣ ಮಾಡುವುದಕ್ಕಾಗಿ ಅವರು ಪರಿಶ್ರಮ ಪಡುವರು. ಉದಾಹರಣೆಗಾಗಿ ದಕ್ಷಿಣಭಾರತದಲ್ಲಿ ದೇವಸ್ಥಾನದ ಶಿಖರಗಳಲ್ಲಿ ಅಪೂರ್ಣ ಕಲಶಗಳು ಇಂದಿಗೂ ಕಾಣುತ್ತವೆ. ಇದರ ಅರ್ಥವೆಂದರೆ ಶತಮಾನಾಂತರಗಳಲ್ಲಿ ಒಂದು ಮಹಾಕಾರ್ಯದ ಪೂರ್ಣತೆಗಾಗಿ ಎಲ್ಲರೂ ಪರಿಶ್ರಮಿಸುತ್ತಿರಲಿ— ಎಂಬುದೇ ಆಗಿದೆ. ಅದಕ್ಕಾಗಿ ಸರಕಾರವು ಪ್ರತಿ ವರ್ಷಕ್ಕೂ ಈ ಕಾರ್ಯಕ್ಕೆ ೭೫ ಸಾವಿರ ರೂಪಾಯಿ ಕೊಡುವ ನಿರ್ಣಯ ಮಾಡಿದೆ. ಇದಕ್ಕೆ ಎಲ್ಲರೂ ತನು-ಮನ-ಧನಗಳಿಂದ ಪೋಷಣೆ ಕೊಡುವಿರಾಗಿ ನಂಬಿದ್ದೇನೆ" ಎಂದು ಭಾಷಣ ಮುಗಿಸಿದರು. ಇಂಗ್ಲಿಷ್ ಭಾಷಣದ ಸಾರವನ್ನು ಟಾಗೋರರ ಪುರೋಹಿತರು ಭಾಷಾಂತರಿಸಿದರು. ರಾಜಾಜಿಯವರು ಬಂಗಾರದ ಗುದ್ದಲಿಯಿಂದ "ಗೃಹಸ್ಥಾಪನಾ ಕುಂಡ"ದಿಂದ ಮಣ್ಣು ತೆಗೆಯುತ್ತ—

ಇಹೈವ ಧ್ರುವಾಮಿ ಮಿಯೋಮಿ ಶಾಲಾಮ್ ।
ಇಹೈವ ಧ್ರುವಾ ಪ್ರತಿತಿಷ್ಠ ಶಾಲೇ ।
ತಾಂ ತ್ವ ಶಾಲೇ ಸರ್ವವೀರಾ: ಸುವೀರಾ ।
ಅರಿಷ್ಟವೀರಾ ಉಪ ಸಂಚರೇಮ ॥

ಎಂಬ ಮಂತ್ರವನ್ನು ಹಾಡಿ, ಆ ವಿಷಯ ಕೆಲವು ಮಾತುಗಳನ್ನು ಹೇಳಿದರು :

" ಈ ಮಂತ್ರವು ಇಂದು ಬರೆದದ್ದಲ್ಲ. ಯಾವುದೋ ಕಾಲಕ್ಕೆ ಬರೆದಿಟ್ಟ ವಾಕ್ಯವಿದು. ಇಂದು ಈ ಶಾಲೆಯ ಉದ್ಘಾಟನಾ ಕಾರ್ಯಕ್ಕೆ ಅನುವಾಯಿತು. ಇದೇ ರೀತಿ ಈ ಸುಮುಹೂರ್ತದಲ್ಲಿ ನಾವು ಇಡುವ ಅಡಿಗಲ್ಲಿನ ಮೇಲೆ ಕಟ್ಟಲ್ಪಡುವ ಶಾಲೆಯು ಮುಂದಿನ ಸ್ವತಂತ್ರಭಾರತದ ಶಿಕ್ಷಣಕೇಂದ್ರವಾಗಲೆಂದು ಹಾರೈಸುತ್ತೇನೆ" ಎಂದು ರಾಜಾಜಿ ತಮ್ಮ ಮಾತನ್ನು ಮುಗಿಸಿದರು. ರತೀಂದ್ರನಾಥ ಟಾಗೋರರು ಅವರಿಗೆ "ಗುರುದೇವ"ನಿಂದ ಬರೆಯಲ್ಪಟ್ಟ ಪುಸ್ತಕವನ್ನು ಅರ್ಪಿಸಿದರು. ಇಲ್ಲಿ ಕ್ಷಣ ಕ್ಷಣಕ್ಕೆ ಚಪ್ಪಾಳೆ ತಟ್ಟುವ ಹವ್ಯಾಸವಿಲ್ಲದುದೊಂದು ವಿಶೇಷ.

ಗುರುದೇವನ "ನಿಕೇತನ"ದಲ್ಲಿ "ಶಾಂತಿ", "ಶ್ರೀ", ಗಳಿವೆ. "ವಿದ್ಯಾ" ಇಂದಿನಿಂದ ಕೂಡಿದ್ದಾಳೆ. ಈ "ಮುಕ್ಕೂಟ್ಟಿ" ಜಗತ್ತಿನ "ಮುಕುಟ"ವಾಗಲೆಂದು ಹಾರೈಸುತ್ತೇನೆ", ಎಂದು ಮುಗಿಸಿದರು.

"ಶಿಕ್ಷಾನಿಕೇತನ" ತಾತ್ಪರ್ಯಿಕ ಹೆಸರೆಂದೂ ಇದರ ನಿಜವಾದ ಹೆಸರು "ವಿನಯ ಮಂದಿರ" (ವಿನಯ=ವಿದ್ಯಾ, ಮಂದಿರ=ಶಾಲೆ) ವೆಂದೂ ರತೀಂದ್ರರು ಹೇಳಿದರು. ಆ ಮೇಲೆ ವೀಣೆ ಕಂಜರಾಗಗಳಿಂದೊಡಗೂಡಿದ "ತಾಯೆ ಶಾರದೆಯೆ ನೀ ನೆಲಸು" ಎಂಬರ್ಥದ ಬಂಗಾಲಿ ಸ್ತುತಿಯಿಂದ ಸಭೆಯ ಮುಕ್ತಾಯವಾಯಿತು.

ಕಾರ್ಯಕ್ರಮವು ಮುಗಿಸಿ ಪುನಃ ಬಡ್ಸ್ವಾನಕ್ಕೆ ಬಂದಾಗ, ಹೊಸ ಸುದ್ದಿಯೊಂದನ್ನು ಕೇಳಿದೆವು: ಅಲ್ಲಿ "ಹಿಂದೂ ಚಾ" "ಮುಸ್ಲಿಂ ಚಾ" ಎಂದು ಯಾರೂ ಕೂಗಬಾರದೆಂದೂ ಹಾಗೆ ಕೂಗಿದಲ್ಲಿ ಅಲ್ಲಿ ಅವರು ವ್ಯಾಪಾರ ಮಾಡಬಾರದೆಂದೂ ಸ್ಟೇಶನ್ ಮಾಸ್ಟರರು ಅಪ್ಪಣೆ ಮಾಡಿದ್ದರು. ಕೇಂದ್ರ ಸರಕಾರ ಮಾಡಿದ್ದು ಇದೊಂದು ಮಾದರಿಯ ಸೂಚನೆ.

ಅಂತೂ ರೈಲು ತಪ್ಪಿದ್ದಕ್ಕೆ ಬೇಲೂರು ಹೋಗಿ ಶಾಂತಿನಿಕೇತನ ಯಾತ್ರೆಯಾಯಿತು. ಮುಂದಿನ ಯಾತ್ರೆ "ಬೇಲೂರಿಗೆ"



ಯೋಗಾಭ್ಯಾಸ ★

(ಸಣ್ಣಕತೆ)

ಶ್ರೀ. ಕೆ. ಅಶ್ವತ್ಥನಾರಾಯಣರಾಯರು, ಬನಾರಸ

ಮಾನವನ ಮನಸ್ಸಿನಲ್ಲಿ ಮೂಡಿದ ಸದ್ವಿಚಾರಗಳೆಲ್ಲ ಆಚಾರದಲ್ಲಿ ಇಳಿಯತೊಡಗಿದರೆ, ಲೋಕದ ಪರಿಸ್ಥಿತಿಯೆ ಬೇರೆಯಾಗುತ್ತಿತ್ತು. ಮೋಹಾಭಾಯಿಗೆ ಯೋಗಾಭ್ಯಾಸದ ಹುಚ್ಚು ಹಿಡಿದರೂ, ವರು-ವರುಷಕ್ಕೂ ಏರುತ್ತಿರುವ ಮಕ್ಕಳ ಸಂಖ್ಯೆಯಲ್ಲಿ ಸ್ವಲ್ಪವೂ ಕಡಿಮೆಯಾಗಲಿಲ್ಲ!

★

"ಬನ್ನಿ, ರಾಯರೇ! ಬನ್ನಿ! ಬನ್ನಿ!"

ಒತ್ತಿಹೇಳಿದ ಈ ಆಪ್ಯಾನವನ್ನು ನಿರಾಕರಿಸಲಾರದೆ, ರಾಯರು ಪಡಸಾಲೆಯಿಂದ ಮೆಟ್ಟಿಲನ್ನಿಳಿದು ಅಂಗಳಕ್ಕೆ ಬಂದರು. ಆಗಲೇ ಮೋಹಾಭಾಯಿಯು ರಾತ್ರಿಯ ಊಟವನ್ನು ಮುಗಿಸಿ, ಅಂಗಳದ ಒರಗುಬೆಂಚಿನ ಮೇಲೆ ಆರಾಮವಾಗಿ ಕುಳಿತಿದ್ದನು. ರಾಯರು ಹತ್ತಿರ ಬಂದಾಗ ಅವನು "ಇದೇನು, ಇವತ್ತು ಜಷ್ಟೊಂದು ಪುರುಸೊತ್ತು? ಎಂದೂ ಇಲ್ಲದೆ ಇರೋದು?" ಎಂದು ಕೇಳಿದನು. ಅವರು "ಏನೋ ಸ್ವಲ್ಪ; ನಾಳೆ ರಜ" ಎನ್ನುತ್ತ ಅವನ ಬಳಿ ಕುಳಿತರು. ಮೋಹಾಭಾಯಿಯು ದಪ್ಪ ದೇಹದ ಪಕ್ಕ-ದಲ್ಲಿ ಕುಳಿತ ರಾಯರ ಸಣ್ಣ ಕಲೇವರವು ತನ್ನ ವ್ಯಕ್ತಿತ್ವವನ್ನು ಕಳೆದು ಕೊಂಡಿತು.

"ನೋಡಿ, ಬೆಳದಿಂಗಳು, ಗಾಳಿ ಎಷ್ಟು ಹಿತವಾಗಿವೆ?"

"ಹುಂ."

"ಹೇಳಿ, ಏನು ಸಮಾಚಾರ?" ಅವನು ಉತ್ಸಾಹದಿಂದ ಕೇಳಿದನು.

"ಹೆಚ್ಚಿಗೆ ಏನೂ ಕಾಣಲಿಲ್ಲ" ರಾಯರು ಸಾಮಾನ್ಯವಾಗಿ ಹೇಳಿದರು.

"ಕಂಪನಿ ಕೆಲಸ ವಸ್ಕೆರೆ?"

"ಹುಂ. ಎಂದಿನಂತೆ"

"ಮನೆ ಊರು ವಸ್ಕೆರೆ"

"ಹಾಗೆ ಹಾಗೇ"

ಅರೆನಿಮಿಷ ಇಬ್ಬರೂ ಸುಮ್ಮನಿದ್ದರು.

"ಹುಂ. ಇನ್ನೇನು ವಿಶೇಷ?" ಮತ್ತೆ ಅದೇ ಪ್ರಶ್ನೆ, ಅವನಿಂದ.

"ಏನಿರುತ್ತೆ ಹೇಳಿ ಅಂಥಾದ್ದು!" ರಾಯರು ಗೊಣಗಿದರು.

"ಹಾಗಲ್ಲ, ಆದೂ ಇದೂ"

"ನೀವು ಯಾವ ಪತ್ರಿಕೆ ತರಿಸುತ್ತೀರಿ? 'ಸ್ಪೀ ಪ್ರೆಸ್' ಅಲ್ಲವೇ?"

"ಹುಂ. ಆದಲ್ಲದೆ?"

"ಮತ್ತೆ ನಾನೂ ಅದನ್ನೇ ತರಿಸೋದು" ರಾಯರು ನಸು-ನಕ್ಕರು.

"ನೀವು ನನ್ನ ನೆರೆ ಅಂತ. ಆದರೂ ಮಾತು-ಕತೆ ಒಂದಕ್ಕೂ ಸಿಗೋದೇ ಇಲ್ಲವಲ್ಲ. ನೀವಾಯ್ತು ನಿಮ್ಮ ಮನೆ ಆಯ್ತು, ನಿಮ್ಮ ಕೆಲಸ ಆಯ್ತು!"

"ಹುಂ. ಏನೇನೋ ಕೆಲಸ ಇದ್ದೇ ಇರುತ್ತೆ. ಏನು ಮಾಡೋದು!"

"ಇಂಥ ಸೇಕೇಲೂ ಒಳಗೇ ಕೂತುಕೊಂಡು ಏನಾದರೂ ಓದುತ್ತಲೋ ಬರೆಯುತ್ತಲೊ ಇದ್ದು ಬಿಡುತ್ತೀರಿ. ಹೇಗೋ ಏನೋ. ನನಗೆ ಅಂದರೆ ಊಟ ಮಾಡಿದ ತಕ್ಷಣ ಮನೆಯಿಂದ ಹೊರಗೆ ತಳ್ಳಿದ ಹಾಗೆ ಆಗುತ್ತೆ ಸ್ವಾಮಿ.."

ಇಷ್ಟು ಹೊತ್ತಿಗೆ ಮೋಹಾಭಾಯಿಯು ಭಾಗದ ಮನೆಯ ಒಳಗಿನಿಂದ ನಾಲ್ಕಾರು ಎಳೆಯ ಕಂಠಗಳ ಕಿರಿಚುಗಳು ಕೇಳಿ-ದುವು ಅವನು ಕುಳಿತ ಕಡೆಯಿಂದಲೇ ಅಲುಗದೆ "ಲೇ! ಯಾಕರೋ ಜಗಳ ಕಾಯುತ್ತೀರಿ? ನಿಮಗೇನು ಬಂದಿದೆ ಹೊತ್ತು ಕಾಲ? ಒಂದು ಗಳಿಗೆ ಸುಮ್ಮನೆ ಇರೋದಿಲ್ಲ. ಬಂದೆ ತಾಳಿ! ನಿಮಗೆಲ್ಲ ತಕ್ಕ ಹಾಗೆ ಮಾಡುತ್ತೀನಿ. ಒಬ್ಬೊಬ್ಬರಿಗೆ ಒಂದೊಂದು—ಕೊಡುತ್ತೀನಿ—ಬಿಸಿಬಿಸಿಯಾಗಿ!" ಎಂದು ತನ್ನ ಬಾಗಿಲಿನ ಕಡೆಗೆ ಗರ್ಜಿಸಿ "ನೋಡಿ ಸ್ವಾಮಿ, ಏನು ಮಕ್ಕಳೊ; ಮೂರು ಹೊತ್ತೂ ಜಗಳ. ಮನೇಲಿ ಯಾರನ್ನೂ ಇರಗೊಡಿ-ಸೋದಿಲ್ಲ. ನಾವೆಲ್ಲ ಹೀಗೆ ಬೆಳೆಯಲಿಲ್ಲ ಸ್ವಾಮಿ. ನಾವೂ ನಮ್ಮ ತಂದೆ-ತಾಯಿಗಳಿಗೆ ಹದಿಮೂರು ಜನ. ಒಂದು ದಿನ ವಾದರೂ ಜಗಳವೇ, ಕದನವೇ—ಕೇಳಬೇಡಿ. ಎಷ್ಟು ಅನ್ಯೋನ್ಯ; ಏನು ಕತೆ! ಇಲ್ಲದೆ ಇದ್ದರೆ ನಾವು ಬಾಳುತ್ತಾ ಇದ್ದೆವೇ ಹೇಳಿ. ನಮ್ಮ ಅಪ್ಪನಿಗೆ ಒಪಳ ಮುಂಗೋಪ. ಏನಾದರೂ ದಾರಿ ತಪ್ಪಿ ದರೆ ಬಾರಿಸುತ್ತಾ ಇದ್ದರು. ನಾವೆಲ್ಲ ಗಡಗಡ ಅಂತ ನಡುಗು-ತ್ತಿದ್ದವು. ನಂಗೆ ಪಯಸ್ಸಾದ ಮೇಲೂ ಅವರಿಗೆ ಮುಖ ಕೊಟ್ಟು ಮಾತಾಡಿಸೋನಲ್ಲ. ಈಗಿನ ಮಕ್ಕಳಿಗಾದರೆ ಏನು ಬಂದಿ. ಬೆಯೋ ಜನೋ! ಅಣ್ಣ-ತಮ್ಮ ಅಕ್ಕ-ತಂಗಿ ಅಂತ ಪ್ರೀತಿ ಕಂಡೇ ಇಲ್ಲ. ಕಾಲು ಕೆರೀತಾ ಇರುತ್ತಾರೆ—ಏನಾದರೂ ಸಿಕ್ಕಿದರೆ ಸಾಕೂ ಅಂತ. ಇನ್ನು ಅವರಿಗೆ ಹೆದರೋದಂತೂ ಇಲ್ಲವೇ ಇಲ್ಲ. ನಾನಂತೂ ಹೊಡೆದೂ ಬಡಿದೂ ಸಾಕಾಗಿ ಸೋತು ಸುಮ್ಮನಾಗಿ ಬಿಟ್ಟಿದ್ದೇನೆ—ಪ್ರಯೋಜನವಿಲ್ಲಾ ಅಂತ"

"ಹಾಗೇನೂ ಇರಲಾರದು. ಮಕ್ಕಳು ಅಷ್ಟು ಬದಲಾವಣೆ ಆಗಿದಾರೋ ಇಲ್ಲವೋ ಅನುಮಾನ. ಆವರ ಶಿಕ್ಷಣ ಮಾತ್ರ ದಿನೇ ದಿನೇ ಬದಲಾಯಿಸುತ್ತಿದೆ!"

"ಏನು ಹೊಸ ಶಿಕ್ಷಣವೊ. ಅದೆಲ್ಲ ನಿಮ್ಮಂಥೋರು—ಒಂದೇ ಮಗು ಇಟ್ಟುಕೊಂಡಿರೋರು—ಜೇಳಬಹುದು. ಜುಂಬಿದ ಸಂಸಾರದಲ್ಲಿ ಅದೆಲ್ಲ ಬರಿ 'Bunkum'; ನಡೆಯೋದಿಲ್ಲ. ನಾಲ್ಕು ದಿನ ನಡೆಸಿದೋರಿಗೆ ಗೊತಾಗುತ್ತೆ, ಅದರ ಗುಟ್ಟು ಸತ್ಯ ಎಲ್ಲ...."

ಈಗ ಅವನ ಮನೆಯೊಳಗೆ ದೊಡ್ಡ ದೊಂಬಿ. ಮೂರಾಮಾರಿಯಾಗಿ ತಲೆಯ ಮೇಲೆ ತಲೆ ಬಿದ್ದು ಹೋಗುವ ಸೂಚನೆಗಳು ಸ್ಪಷ್ಟವಾಗಿ ಕಂಡು ಕೇಳಿ ಬಂದುವು. ಮೋಕಾಭಾಯಿಯು ಇನ್ನು ತಡೆಯಲಾಗದೆ, ಅನಾಮುತವನ್ನು ನಿಲ್ಲಿಸುವ ಯೋಜನೆಯಿಂದ ಮೆಲ್ಲಗೆ ಎದ್ದು ರಾಯರ ಕಡೆಗೆ ತಿರುಗಿ "ಇಗೋ, ಬಂದುಬಿಟ್ಟೆ. ಇವರನ್ನ ಹಾಗೇ ಬಿಟ್ಟರೆ, ಒಳಗಡೋದನ್ನೆಲ್ಲ ಒಡೆದು ಚೂರು ಮಾಡಿ, ಧೂಳಿಬ್ಬಿಸಿ ಕಡೆಗೆ ಗೋಡೆಗಳನ್ನೂ ಉರುಳಿಸಿ ಬಿಡುತ್ತಾರೋ ಏನೋ—ತಲೆ ಒಡೆಯೋದು, ಕೈಕಾಲು ಮುರಿಯೋದು ಹಾಗಿರಲಿ!" ಎಂದು ಮನೆಯ ಕಡೆಗೆ ತಿರುಗಿ "ಲೇ ಕ್ರೀ, ನಾನೇನೋ ಹೇಳಿದ್ದು? ತಿಂದು ಕೊಬ್ಬು ಹೆಚ್ಚಾಗಿದೆ. ಸುಮ್ಮನೆ ಸದ್ದಿಲ್ಲದೆ ಇರುತ್ತೀರೋ ಇಲ್ಲವೊ? ಪಾಠ ಪಕ್ಕಿ ನೋಡಿಕೊಳ್ಳೋದು ಬಿಟ್ಟು ಹಣಾ ಹಣಿಗೆ ಕಳಿದಿದೀರಾ? ನಿನಗೆ ಸರಿಯಾಗಿ ಮಾಡುತ್ತೀನಿ" ಎಂದುಕೊಂಡು ಒಳಗೆ ಹೋದನು. ಒಡನೆಯೇ "ರಪ್ ರಪ್, ಛಟೀರ್ ಪಟೀರ್, ಧಪ್ ದುಪ್" ಎಂಬ ಶಬ್ದಗಳು ಕೇಳಿದುವು. ಜೆರೆದ ಬಾಗಿಲಿನಿಂದ ರಾಯರಿಗೆ, ಶುಂಭಕರ್ಣನು ಕಪಿಗಳನ್ನು ಎತ್ತಿ ಎಸೆದಾಡಿದಂತೆ ಮೋಕಾಭಾಯಿಯು ಮಕ್ಕಳನ್ನು ಎಳೆದಾಡಿದುದು ಕಂಡಿತು. ಗುಡುಗು. ಸಿಡಿಲುಗಳ ನಂತರ ಭೋರಿಡುವ ಮಳೆಯಂತೆ ಅಳು ಮೊದಲಾಯಿತು. ಇನ್ನೊಂದು ಕ್ಷಣದಲ್ಲಿ ಅದು ಅನೇಕ ಶಾಖೆಗಳಾಗಿ ಒಡೆದು ಪಿಟೀಲು, ಫೀಣೆ, ಏಕತಾರಿ, ಕೊಳಲು ಮೊದಲಾದ ಸಂಗೀತ ವಾದ್ಯಸ್ವರಗಳಿಗೆ ಎಡೆಗೊಟ್ಟುವು.

ದಂಗೆಯನ್ನು ಅಡಗಿಸಿದ ಪೋಲೀಸಿನವನ ತೃಪ್ತಿಯಿಂದ ಮೋಕಾಭಾಯಿಯು ಮುಖದ ಬೆವರನ್ನು ಪಂಜೆಯು ತುದಿಯಿಂದ ಒರಸಿಕೊಳ್ಳುತ್ತ ಹೊರಗೆ ಬಂದನು. ಎಡ ಕೊಂಕುಳಿನಲ್ಲಿ ತಾಂಬೂಲದ ಹಿತ್ತಾಳೆ ಪೆಟ್ಟಿಗೆಯಿದ್ದಿತು. ಎಡಗೈಯನ್ನು ಹಿಡಿದು, ಅವನ ಕಡೆಯ ಮಗು ಒಂದೂವರೆ ವರ್ಷದ 'ಪನ್ನೆ' ಬರುತ್ತಿದ್ದಿತು. ಅವನು ಬಂದು ರಾಯರ ಒಳಿಯಲ್ಲಿ ಕುಳಿತು. ಕಳಿಸುತ್ತ "ಏನು ಹಾಳು ಜಗಳವೋ, ಧಾಂದಲೆಯೋ ಅವಧ್ದು!" ಎಂದುಕೊಂಡನು.

"ಏನು ಕಾರಣ ಗಲಾಟೆಗೆ?" ರಾಯರು ಪ್ರಶ್ನಿಸಿದರು.

"ಏನೊ ಯಾರಿಗೆ ಗೊತ್ತು? ಅದೇ ಒಂದು ಚೂರು ಬಳಪವೋ, ಳಿಯ ಚೂರೋ ಇರಬೇಕು. ಇನ್ನೇನು? ಕೇಳಿಯೇನು ಪ್ರಯೋಜನ? ಕೇಳಿ ಮಾಡಿ ಸಂಜಾಯಿತಿಗೆ ಮೊದಲು ಮಾಡಿಬಿಟ್ಟರೆ ಆ ಭಜೀತಿಗೆ ಕೊನೆ ಇರುತ್ತೆಯೆ? ನನಗೇ ಹುಚ್ಚು ಹಿಡಿಸಿಬಿಡುತ್ತಾರೆ. ಅವರಿಗೆ whole sale ಶಿಕ್ಷೆ ಮಾಡೋದೇ ಸರಿ, ಸಾಧ್ಯ... ಆಗಲೇ ಕೊಂಚ ಹೊತ್ತಾದರೂ ಶಾಂತಿ ಇರಬೇಕಾದರೆ" ಎಂದನು.

ರಾಯರು ಮಗುವಿನ ಕಡೆಗೆ ತಿರುಗಿ "ಏನು ಪನ್ನಾ, ಯಾರಮ್ಮಾ ಗಲಾಟೆ ಮಾಡಿದ್ದು?" ಎಂದು ಮುದ್ದಿಸಿ ಕೇಳಿದರು. ಅದಕ್ಕೆ ಉತ್ತರವಾಗಿ ಮೋಕಾಭಾಯಿಯು "ಇದೂ ಏನು ಸಾಮಾನ್ಯ ಅಂತ ತಿಳಿದುಕೋ ಬೇಡಿ. ತಾನೂ ಸೇರಿಕೊಂಡಿದ್ದಳು. ನೋಡಿ ಅವಳ ತಲೇನ" ಎಂದು ಅವಳ ಕೆದರಿದ ತಲೆಯನ್ನು ಸರಿಮಾಡಿ, ಮಗುವನ್ನು ಎತ್ತಿ ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಂಡು, ತನ್ನ ದಪ್ಪ ಮೊಟ್ಟೆಗೆ ಒರಗಿಸಿಕೊಂಡನು. ಅನಂತರ ಹತ್ತಿರ ಇಟ್ಟಿದ್ದ ತಾಂಬೂಲದ ಪೆಟ್ಟಿಗೆಯನ್ನು ತೆಗೆದು ಪಸಿಯು ಅಡಿಕೆಯನ್ನು ಕತ್ತರಿಸುತ್ತ,

"ಹುಂ, ಇನ್ನೇನು ವಿಶೇಷ ಹೇಳಿ!" ಎಂದನು-ಮತ್ತೆ.

ರಾಯರು 'ಇದು ಒಳ್ಳೆ ಪೀಕಲಾಟ ಬಂತಲ್ಲ.... ಸಮಾಚಾರ ವಿಶೇಷದ್ದು!' ಎಂದುಕೊಂಡು, "ಇವನಲ್ಲಿ 'ರಕ್ಷಣೆ' ಯ ಕಾರ್ಯಕ್ರಮ ಯಶಸ್ವಿಯಾಗುವದಿಲ್ಲ, 'ಪ್ರತಿ ಧಾಳಿ'ಯೇ ಸರಿ" ಎಂದು ನಿರ್ಧರಿಸಿ, ಆತನು ಕೆಲವು ದಿವಸಗಳ ಹಿಂದೆ! ಎಲ್ಲಿಗೋ ಹೋಗಿದ್ದಾಗ ಅನ್ನು ನೆನಪಿಗೆ ತಂದುಕೊಂಡು "ನಾನೇನು ಸಮಾಚಾರ ಕೇಳಬಲ್ಲೆ—ಈ ಯಂತ್ರ ಕೆಲಸದಲ್ಲಿ ಇದ್ದು ಕೊಂಡು ನೀವೇ ಹೇಳಬೇಕು; ಸೊನ್ನೆ ತಾನೆ ನೀವು ಎಲ್ಲಿಗೋ...."

ಮೋಕಾಭಾಯಿಗೆ ಇಷ್ಟೇ ಕೇಳಲು ಸಾಕಾಯಿತು. 'ರಿಕಾರ್ಡು' ತಿರುಗುವುದಕ್ಕೆ ಮೊದಲಾಯಿತು. "ಹುಂ, ನಾಸಿಕಕ್ಕೆ ಹೋಗಿದ್ದೆ. ನಮ್ಮ ಶ್ರೀ ಶ್ರೀ ಗುರುಗಳ ಬಳಿಗೆ. ಆಹಾ! ಏನು ಪಂಚವಟಿ! ಏನು ಗೋದಾವರಿ! ಏನು ಆಶ್ರಮ! ಎಂಥಾ ತಪಸ್ವಿಗಳು! ಮಹಾನುಭಾವರು, ಮಹಾನುಭಾವರು ನ್ಯಾವಿ; ಸಿದ್ಧ ಪುರುಷರು ಅನ್ನಿ! ಇವರಿಗೆ ಷಡ್ವೇದಾಂಗಗಳೆಲ್ಲ ಕರತಲಾಮಲಕವಾಗಿ ಬಿಟ್ಟಿವೆ. ಏನು ಉಪದೇಶ ಮಾಡುತಾರೆ ಅಂತೀರಿ? ಕೇಳಬೇಕು—ಆಗ ತಿಳಿಯುತ್ತೆ ಅದರ ಸೊಗಸು. ಕೇಳುತ್ತ ಇದ್ದರೆ ಅಜ್ಜ! ಹಾಗೇ ಇದ್ದುಬಿಡೋಣ— ಎಲ್ಲಾ ಬಿಟ್ಟು— ಅನ್ನಿಸುತ್ತೆ. ರಾತ್ರಿ ಬೆಳಗೂ ನಡೆಯುತ್ತೆ, ಅವರ ತತ್ತ್ವೋಪದೇಶ."

"ಓಹೋ."

"ಅದನ್ನು ತಿಳಿದುಕೊಂಡೋರಿಗಂತೂ ಜೀವನದಲ್ಲಿ ಜಿಜ್ಞಾಸೆ ಹುಟ್ಟುವ ಇರೋ ಹಾಗಿಲ್ಲ!"

"ಹುಂ."

"ಯಂತ್ರದ [illegible]ಗಳನ್ನು ಜೋಗೆ ಪ್ರಮಾಣಮಾಡಿ ತೋರಿಸಿದಾನೋ ಹಾಗೆ, ಅಷ್ಟೇ ಸ್ಪಷ್ಟವಾಗಿ, ಈ ಜಗತ್ತೆಲ್ಲ ಒಂದು ಮಾಯೆ ಅಂತ ತೋರಿಸಿ, ನಂಬಿಸಿ ಬಿಡುತ್ತಾರೆ ಶ್ರೀ ಶ್ರೀ ಗುರುಗಳು ಅದೇನು ದೃಷ್ಟಾಂತಗಳು! ಅದೇನು ವ್ಯಾಖ್ಯಾನ!

ಅಬ್ಬಬ್ಬಾ! ಅಷ್ಟೊಂದು ಸಿದ್ಧಿ ಪಡೆದೋರಿಗೆ ಮಾತ್ರ ಸಾಧ್ಯ!"

" ಅವರು ಎಲ್ಲಿಯೋರು?"

" ಅವರ ಊರು ಸೂರತ್ತು. ಅವರ ಹೆಂಡತಿ ಮಕ್ಕಳು ಎಲ್ಲಾ ಇದಾರೆ!"

" ಹುಂ. ಮತ್ತೆ ಅವರನ್ನ...."

" ಅದಕ್ಕೇನು, ಭಕ್ತಾದಿಗಳು ಇಲ್ಲವೆ?"

" ಸರಿ."

" ಅವರಾಗಲೇ ಸಂಸಾರ ತೊರೆದು ಎಷ್ಟೋ ವರ್ಷಗಳಾದುವಂತೆ!"

" ಊಹೂಂ!"

" ಆಗಿನಿಂದ ಯೋಗಾಭ್ಯಾಸ ಮಾಡಿ ಸಿದ್ಧಿ ಪಡೆದಿದಾರೆ. ಇದರಿಂದ ಅವರಿಗೆ ಅಸಾಧ್ಯವಾದದ್ದು-ಎನ್ನೋದೇ ಇಲ್ಲ."

" ಓ!"

" ಅವರದ್ದು ಏನೇನು ವಿಚಿತ್ರವಂತೆ ಅನ್ನುತ್ತೀರಿ. ನೀವು ಅವರಿಗೆ ಏನೇ ಕೊಡಿ: ಚಿನ್ನ, ತಿಂಡಿ, ಹಣ್ಣು ಏನೇ ಆಗಲಿ. ಎಲ್ಲಾನ್ನೂ 'ತಾಯಿ ಗೋದಾವರಿ'ಗೇ ಎಸೆದುಬಿಡುತ್ತಾರಂತೆ. ಅವರಿಗೆ ಚಿನ್ನವೂ ಒಂದೇ ಮಣ್ಣೂ ಒಂದೇ. ಈ ದೃಷ್ಟಿ ಬಂದಿದೋದರಿಂದಲೇ ಪ್ರಪಂಚವೇ ಜೇಬಯಾಗಿದೆ. ನಮಗೆ ಕಾಣೋ ಪ್ರಪಂಚವೆಲ್ಲ ಮಾಯೆ. ನಿಮಗೆ ಏನು ಬೇಕು ಅಂತ ಕೇಳಿ, ತಾಯಿ ಕೇಳಿರಿ ಅನ್ನಿ. ಅವರು ಕಣ್ಣು ಮುಚ್ಚಿ ಕಣ್ಣು ಬಿಟ್ಟು 'ತಗೋ ತಗೋ' ಅನ್ನುವಾಗ, ಒಂದು ಮಣ್ಣು ಗಡಿಗೆಯು ತುಂಬ ಮಿಠಾಯಿ ಗೋದಾವರಿಯಲ್ಲಿ ತೇಲಿ ಬರುತ್ತದಂತೆ. ಹಾಗೇ ಏನು ಬೇಕಾದರೂ. ಅಂಥಾ ಮಹಾತ್ಮ್ಯ. ಅವರ ಧ್ಯಾನದ ಮೊತ್ತು ಬಂದಾಗ ಹತ್ತಿರವಿದ್ದವರಿಗೆ 'ಇನ್ನು ಹೋಗಿ' ಅನ್ನುತ್ತಾರಂತೆ. ಮರುಕ್ಷಣದಲ್ಲಿ ಅಂತರ್ಧಾನರಾಗುತ್ತಾರಂತೆ."

" ಹೂಂ!"

" ಇನ್ನೂ ಏನೇನೋ ವಿಚಿತ್ರ-ನೂರೆಂಟು."

" ಹುಂ"

ಯೋಗಾಭ್ಯಾಸಿಯು ಇಲ್ಲಿಯವರೆಗೆ ಮಾತನಾಡುತ್ತಲೇ, ಸಿದ್ಧ ಪಡಿಸಿದ ತಾಂಬೂಲವನ್ನು ಬಾಯಿಗೆ ತುಂಬಿಕೊಂಡು ಅಗಿದನು. ಕೊಂಚ ಕಾಲ ಇಬ್ಬರ ಮಧ್ಯೆ ಮಾತಿರಲಿಲ್ಲ. ಆ ಮೇಲೆ ಹಿಂತಿರುಗಿ ಬಾಯಿ ತುಂಬಿದ ತಾಂಬೂಲವನ್ನು 'ಪಿಚಕ್' ಎಂದು ಉಗುಳಿ, ಬಾಯೊಳಗೆ ನಾಲಗೆಯನ್ನು ಹೊರಳಿಸಿ ಸರಿಮಾಡಿಕೊಂಡು "ನೋಡಿ, ಅಲ್ಲಿಗೆ ಹೋಗಿ ಬಂದಾಗಿನಿಂದ ಜೀವನದಲ್ಲಿ ನನ್ನ ದೃಷ್ಟಿಯೇ ಸಂಪೂರ್ಣವಾಗಿ ಬದಲಾಯಿಸಿ ಹೋಗಿದೆ. ವೈರಾಗ್ಯಮನೋವೃತ್ತಿ ಬಂದುಬಿಟ್ಟಿದೆ. ಪ್ರಾಪಂಚಿಕವಾಗಿರೋದಕ್ಕೆಲ್ಲಾ ದೂರವಾಗಿದ್ದು ವಿಷಜೇಕು ಅನ್ನಿಸುತ್ತೆ...."

ರಾಯರು ತಟ್ಟನೆ ಅವನ ಕಡೆಗೆ ನೋಡಿ, ಹಕ್ಕಿಗಳು ಕುಕ್ಕಲು ಆಶಿಸಬಹುದಾದ ಮಾವಿನ ಹಣ್ಣಿನಂತಿದ್ದ ಅವನ ಕೆನ್ನೆಗಳನ್ನೂ, ತಾಂಬೂಲ ಸೂಸಿ ಕೆಂಪಾಗಿದ್ದ ದಪ್ಪ ತುಟಿಗಳನ್ನೂ, ಬೊಜ್ಜುಮೈಯನ್ನು ಮುಚ್ಚಿದ್ದ 'ಮಲ್ಲು' ಅಂಗಿಯನ್ನೂ, ತೊಡೆಯ ಮೇಲೆ ಕುಳಿತಿದ್ದ ಸಣ್ಣ ಮಗುವನ್ನೂ ಗಮನಕ್ಕೆ ತಂದುಕೊಂಡು, ಆಶ್ಚರ್ಯಪಟ್ಟರು. ಮತ್ತೆ 'ಯಾರಿಗೆ ಯಾವಾಗ ಯಾವ ಕರೆಯು ಹೇಗೆ ಬರುತ್ತೆದೆಯೋ' ಎಂದುಕೊಂಡು, ಇನ್ನೂ ಬೆಳೆಯುತ್ತಿದ್ದ ಆತನ ಸಂಸಾರವನ್ನು ನೆನೆಸಿಕೊಂಡು ಆತಂಕಪಟ್ಟು ಕಳವಳದಿಂದ,

" ಛೆ, ಇನ್ನೂ...." ಎಂದು ಮೊದಲು ಮಾಡಿದಾಗ ಅವನು ತಡೆದು,

" ಹಾಗೆಂದರೇನು ಸ್ವಾಮಿ. ನನಗೂ ಐವತ್ತರ ಹತ್ತಿರವಾಯ್ತು. ನಮ್ಮ ವರ್ಣಾಶ್ರಮ ಧರ್ಮದ ಪ್ರಕಾರ ಈ ವಯಸ್ಸಿಗೆ ನಾನು ವಾನಪ್ರಸ್ಥಾಶ್ರಮದಲ್ಲಿರಬೇಕು. ಏನೋ ನನ್ನ ಮೊದಲ ಎರಡು ಸಂಬಂಧದಲ್ಲೂ ಮಕ್ಕಳಾಗಿ ಉಳಿಯುವ ಅದೃಷ್ಟವಿಲ್ಲದೆ, ದೊಡ್ಡ ಮಕ್ಕಳು ಇಲ್ಲದೆ ಇದ್ದ ಮಾತ್ರಕ್ಕೇ—ಇನ್ನೂ ಚಿಕ್ಕ ಸಂಸಾರ ಅಂದುಕೊಂಡು, ವಯೋಧರ್ಮವನ್ನು ಮರೆಯೋದಕ್ಕೆ ಆಗುತ್ತೆಯೆ? ಇಷ್ಟಕ್ಕೂ ನನಗೂ ಅರು ಮಕ್ಕಳಿವೆ. ಸಾಕು, ಅವರು ಬೆಳೆದು ಬಾಳೋದೊಂದೇ ಜೇಕು. ಅಷ್ಟೆ."

" ಹಾಗಾದರೆ ಸಂತಾನನಿರೋಧ ಮಾಡಿದರಾಯ್ತು."

" ಓ, ಅದರಲ್ಲಿ ನಿಮಗೆ ವಿಶ್ವಾಸವಿರಬಹುದು. ನನಗಿಲ್ಲ, ಅದು ಪ್ರಕೃತಿಗೆ ವಿರುದ್ಧವಾದದ್ದು. ಮಕ್ಕಳು ಆಗದೆ ಇರೋದಕ್ಕೆ ಬ್ರಹ್ಮಚರ್ಯವೇ ಸರಿ. ಮಹಾತ್ಮಾಜಿಯವರೂ ಸಹ ಅದನ್ನೇ ಹೇಳಿದಾರೆ. ನೀವು ಗಾಂಧೀ ಶಿಷ್ಯರಲ್ಲವೆ?"

" ಹುಂ. ಆದರೆ ಎಲ್ಲಾದರಲ್ಲೂ ಅಲ್ಲ."

" ಬ್ರಹ್ಮಚರ್ಯದ ವಿಷಯದಲ್ಲಿ ನಮ್ಮ ಶ್ರೀ ಶ್ರೀ ಗುರುಗಳೂ ಬಹಳವಾಗಿ ಹೇಳುತ್ತಾರೆ. 'ಬ್ರಹ್ಮಚರ್ಯ, ಯೋಗಾಭ್ಯಾಸ, ವೈರಾಗ್ಯ, ದೈವಧ್ಯಾನ' ಇವು ಸಿದ್ಧಿಸೋಪಾನಕ್ಕೆ ಮೆಟ್ಟಲುಗಳಂತೆ."

" ಓ!"

" ಇವನ್ನು ಪಾಲಿಸಿಕೊಂಡು ಬಂದಿರೋದರಿಂದಲೇ ಅವರ ಮುಖದ ಮೇಲೆ ಎಷ್ಟು ವರ್ಚಸ್ಸು ಇದೆ ಅಂತೀರ? ಆ ಕಣ್ಣುಗಳ ಹೊಳಪೋ, ದೇಹಪುಷ್ಟಿಯೋ, ಆರೋಗ್ಯವೊ!....ಆಶ್ಚರ್ಯ."

" ಹೂಂ."

" ಬ್ರಹ್ಮಚರ್ಯವಿಲ್ಲದೆ ಯೋಗಾಭ್ಯಾಸವಿಲ್ಲ. ಯೋಗಾಭ್ಯಾಸವಿಲ್ಲದೆ ಸಾಧನೆ ಯಾವುದೂ ಸಾಧ್ಯವಿಲ್ಲ. ನಾನೂ ಯೋಗಾಭ್ಯಾಸ ಮಾಡಬೇಕೂ ಅಂತ ನಿರ್ಧರಿಸಿದ್ದೀನಿ."

" ಭಲೆ!"

" ಅದಕ್ಕಾಗಿ ಶ್ರೀ ಶ್ರೀ ಗುರುಗಳ ಅಪ್ಪಣೆ-ಉಪದೇಶಗಳನ್ನು ಪತ್ರದಲ್ಲಿ ಪಡೆದುಕೊಂಡಾಗಿದೆ!"

" ಅಷ್ಟು ಬೇಗ ಯೋಗಾಭ್ಯಾಸದ ರೀತಿ ವಿಧಾನಗಳೆಲ್ಲ ತಿಳಿದುಕೊಳ್ಳೋದಕ್ಕೆ ಸಾಧ್ಯವೆ?"

" ಇಲ್ಲ. ಅಷ್ಟು ಸುಲಭವಲ್ಲ. ಉಪದೇಶದ ಜತೆಗೆ ಶ್ರೀ ಶ್ರೀ ಯವರ ಪುಸ್ತಕಗಳನ್ನೂ ಕೊಂಡುಕೊಂಡಿದೀನಿ. ಅಭ್ಯಾಸಕ್ಕೆ

ಅಲ್ಲದೆ ಇನ್ನು ಮುಂದೆ ಸಮಯ ಸಿಕ್ಕಿದಾಗ ನಾಸಿಕಕ್ಕೂ ಹೋಗಿ ಬರುತ್ತಿರುತ್ತೇನೆ. ಮುಖ್ಯವಾಗಿ ಮನಸ್ಸು ಮಾಡೋದೊಂದೇ ತಡ. ಅದು ಆಗಿದೆಯೋ, ಇನ್ನು ಮುಂದಿನವೆಲ್ಲ ನಡೆದೇ ನಡೆಯುತ್ತವೆ— ಎಷ್ಟೇ ಕಷ್ಟವಾಗಲಿ."

"ಅದು ಹೇಗೆ ಅಷ್ಟು ನಿಶ್ಚಲವಾದ ಮನಸ್ಸಿನಿಂದ...."

"ಹುಂ. ಅದು ನಿಜ. ಅದು ಎಲ್ಲರಿಗೂ ಸಾಧ್ಯವಿಲ್ಲ"

"ನನ್ನ ವಿಷಯಕ್ಕಂತೂ ದೇವರೇ ಗತಿ. ನನ್ನಿಂದ ಆವೆಲ್ಲ.."

"ನನ್ನ ವಿಷಯ ಕೊಂಚ ಬೇರೆ. ನನ್ನ ಜಾತಕ ನೋಡಿಕೊಂಡಿದೀನಿ.."

"ಹುಂ. ನೀನೇ ಜ್ಯೋತಿಷ್ಕರು ತಾನೆ?"

"ಅದರಲ್ಲಿ ಸಂನ್ಯಾಸಯೋಗವಿದೆ."

"ಹೂಂ!"

"ಅದು, ಈ ನನ್ನ ಮನೋವೃತ್ತಿಗೆ ಸಹಾಯಮಾಡುತ್ತೆ ಅನ್ನಿ."

"ಹಾಗೋ, ಸರಿ!"

ಯೋಗಾಭಾಯಿಯು ಮಗುವನ್ನು ತೊಡೆಯಿಂದ ಕೆಳಗಿಳಿಸಿ, "ಹೋಗು, ಅಮ್ಮನ ಹತ್ತಿರ ಇನ್ನೆರಡು ಎಲೆ ಇಸಕೊಂಡು ಬಾ!" ಎಂದು, 'ಮಲ್ಲು'ಅಂಗಿಯ ಜೇಬಿನಿಂದ ನಸ್ಯದ ಡಬ್ಬಿಯನ್ನು ತೆಗೆದು, ಒಂದು ಚಿಟಿಕೆಯನ್ನು ಮೂಗಿಗೆ ಏರಿಸಿದನು. ಈ ಕಾಲದಲ್ಲಿ ರಾಯರು ವೈರಾಗ್ಯ, ಬ್ರಹ್ಮಚರ್ಯ, ಯೋಗಾಭ್ಯಾಸಗಳನ್ನು ಮತ್ತೆ ಮತ್ತೆ ನೆನೆದು, ಯೋಗಾಭಾಯಿಯ ಸಂಸಾರದಲ್ಲಿ ಇನ್ನು ಮುಂದೆ ಗಂಡನ, ತಂದೆಯ ಭಾಗವು ಎಷ್ಟು ಕಳಚಿ ಹೋಗುವುದೋ ಎಂದು ಯೋಚಿಸಿಕೊಂಡು ಮರುಗುತ್ತಿದ್ದರು. ಅದರಲ್ಲಿಯೂ ಚಿಕ್ಕವಯಸ್ಸಿನ ಹೆಂಡತಿ ಸುಶೀಲಾಬಾಯಿಯ ಕಡೆಗೆ ಅವರ ಕನಿಕರವು ವಿಶೇಷವಾಗಿ ಹರಿಯಿತು.

ಪನ್ನಾ ಎಲೆಯೊಡನೆ ಹಿಂತಿರುಗಿ ಬರಲಿಲ್ಲ, ಅದಕ್ಕೆ ಬದಲಾಗಿ ಅದು "ಬಾಬಾ! ಬಾಬಾ!" ಎಂದು ಕಿರಿಚಿಕೊಂಡ ಸದ್ದು ಕೇಳಿಸಿತು. ಸುಶೀಲಾಬಾಯಿಯು ಒಳಗಿನಿಂದ "ಆ ಮಗೂನ ಬಿಡಿರೋ ಪಾಪ!" ಎಂದು ಕೂಗಿಕೊಂಡಳು. ಒಂದು ಕಂಠ "ರಮೇಶ ಎಲೆ ಕಿತ್ತುಕೋತಾ ಇದಾನೆ—ತಿಂದುಬಿಟ್ಟ" ಅಂದಿತು. ಇಷ್ಟರೊಳಗೆ ಕಕ್ಷಿ-ಪ್ರತಿಕಕ್ಷಿಗಳಾಗಿ ಜಗಳ ಹತ್ತಿ, 'ದುಬ್ ದುಬ್' ಸದ್ದುಗಳು ಕೇಳಿ ಬಂದುವು. ಯಾರೊ ದೀಪವನ್ನು ಆರಿಸಿದರು. ಯಾರೋ ಪುಸ್ತಕವನ್ನು ಹರಿದರು. ಯಾರೊ ಸ್ಲೇಟನ್ನು ಕುಕ್ಕಿದರು. ಕುರುಕ್ಷೇತ್ರವೇ ಅವತರಿಸಿಹೊಗೆಯಾಡುತ್ತಿವಂತೆ ಕಂಡುಬರಲು ಯೋಗಾಭಾಯಿಯು "ಇವರಿಂದ ಆಗೋದಿಲ್ಲ. ಏನು ಮಾಡಬೇಕೋ ತಿಳೀದು. ರಾಕ್ಷಸರಾಗಿದಾರೆ—ರಾಕ್ಷಸರು! ಇಷ್ಟು ಮಕ್ಕಳು ಯಾತಕ್ಕಾದರೂ ಹುಟ್ಟಿದುವೋ ಏನೋ" ಎಂದುಕೊಂಡು ತನ್ನ ಶಿಸ್ತನ್ನು ಚಲಾಯಿಸುವುದಕ್ಕಾಗಿ ಹೊರಟನು. ರಾಯರೂ ಹಿಂಬಾಲಿಸಿ ತಮ್ಮ ಭಾಗದ ಮನೆಯನ್ನು ಹೊಕ್ಕರು.

ಹೀಗೆ ಮೊದಲಾಯಿತು ಯೋಗಾಭಾಯಿಯ ಯೋಗಾಭ್ಯಾಸ.

'ಭಾಲಚಂದ್ರ ನಿವಾಸ'ದ ವಠಾರದ ಜನರಲ್ಲಿ ರಾಯರೇ ಸಾಮಾನ್ಯವಾಗಿ ಬಹಳ ಹೊತ್ತಾಗಿ ಮಲಗುತ್ತಿದ್ದವರು. ಯೋಗಾಭಾಯಿಯ ಮನೆಯು ನಿತ್ಯನಾಟಕವಾದರೋ ಒಂಬತ್ತುವರೆ ಗಂಟೆಯ ಹೊತ್ತಿಗೆ ಮುಗಿದು ಹೋಗಿರುತ್ತಿತ್ತು. ಆದರೆ ಇತ್ತೀಚೆಗೆ ರಾಯರು ಮಲಗುವ ಹೊತ್ತಿನಲ್ಲೂ ಅವನ ಮನೆಯಲ್ಲಿ ದೀಪವು ಉರಿಯುತ್ತಿರುತ್ತಿದ್ದಿತು. ರಾಯರು 'ಯೋಗಾಭ್ಯಾಸದ ಭರಾಟೆ' ಎಂದುಕೊಳ್ಳುತ್ತಿದ್ದರು. ಒಂದೊಂದು ವೇಳೆ ರಾಯರು ಮಲಗಿ ನಿದ್ರಿಸಿದ ಮೇಲೆ, ಮರದ ಪಾದುಕೆಗಳ 'ಕಟ ಕಟ'ದಿಂದ ಅವರ ನಿದ್ದೆಗೆ ಭಂಗ ಬಂದು, ತಟ್ಟನೆ ಎಚ್ಚರವಾಗುತ್ತಿದ್ದಿತು. ಆಗ ಮನೆಯ ದೀಪ ಹಾಕಿದ ಶಬ್ದ, ಕದಗಳನ್ನು ತೆರೆದು ಹಾಕಲ್ಪಟ್ಟ ಶಬ್ದಗಳು ಕೇಳುತ್ತಿದ್ದುವು. ಹಾಗೇ-ಅನಂತ ಬಚ್ಚಲಮನೆಯ ಕಡೆಯ ಬೆಳಕೂ ರಾಯರ ಹಾಸಿಗೆಯ ಮೇಲೆ ಬೀಳುತ್ತಿತ್ತು. ಆಗ ರಾಯರು ಹುಬ್ಬುಗಂಟಿಕ್ಕಿಕೊಂಡು ಬೇಸರದಿಂದ "ಯಾಕೋ ಈತನ ಯೋಗಾಭ್ಯಾಸ ಸಾಕಾಗಿದೆ. ನೆರೆಯವರಿಗೂ ನಿದ್ದೆ ಕೊಡುವ ಹಾಗಿಲ್ಲ" ಎಂದು ಗೊಣಗಿಕೊಳ್ಳುತ್ತಿದ್ದರು. ಆದರೇನು! ಇನ್ನೂ ಕೊಂಚ ಹೊತ್ತು ಬೆಳಕು, ಸಾತ್ರೆ ಪರಟೆ ಜರುಗಿಸಿದ 'ಜರ ಜರ,' ನೀರು ತುಂಬಿ ಸುರಿದ ಸದ್ದು, ಪಾದುಕೆಯ ಮತ್ತಷ್ಟು 'ಕಟ ಕಟ,' ದೀಪದ ಸ್ವಿಚ್ಚಿನ 'ಟಕ್', ಮನೆಯ ಕದಗಳ 'ಕೀ ಕೀ'. ಇವನ್ನು ಸಹಿಸದೆ ಗತಿಯಿರಲಿಲ್ಲ. ಶಬ್ದಗಳ ಮಧ್ಯೆ ಕ್ಕೆ ಬಳೆಗಳ ಸದ್ದೂ ಆಗಾಗ ಅಲ್ಲಲ್ಲಿ ಕೇಳಿಸಿದಾಗ ರಾಯರು "ಏನು ಸಿದ್ಧಿಯೋ ಇವನದು. ತಾನೊಬ್ಬ ಹೊಯ್ದಾಡುವುದೆ ಅಲ್ಲದೇ ಪಾಪ, ಬೆಳಗಿನ ಜಾವದಿಂದ ಒಂದೇ ಸಮನಾಗಿ ದುಡಿದು ಒದ್ದಾಡಿದ ಹೆಂಡತಿಯನ್ನೂ ಗೋಳು ಹುಯ್ದುಕೊಳ್ಳುತ್ತಾನೆ. ಅಥವಾ ಇದೇನು ಅಳಿಯ ಪತಿಪರಾಯಣತೆಯೋ ಏನೋ!" ಎಂದುಕೊಳ್ಳುತ್ತಿದ್ದರು. ಅಂತೂ ಈ ಸದ್ದುಗಳೆಲ್ಲ ಅಡಗಿ ಮತ್ತೆ ರಾಯರಿಗೆ ನಿದ್ದೆ ಹತ್ತಬೇಕಾದರೆ ಇನ್ನು ಅರ್ಧ ಗಂಟೆಯಾದರೂ ಆಗುತ್ತಿದ್ದಿತು.

* * * *

ತಿಂಗಳುಗಳು ಕಳೆದುವು. ಯೋಗಾಭ್ಯಾಸದ ಒಳಪರಿಣಾಮವು ಹೇಗಿದ್ದಿತೋ ಏನೋ, ರಾಯರಿಗೆ ತಿಳಿಯದಿದ್ದರೂ ಹೊರಗಿನ ದೃಷ್ಟಿಯಿಂದ ಅವರಿಗೆ ಯೋಗಾಭಾಯಿಯು ಕಂದುತ್ತಿದ್ದಂತೆ ತೋರಿತು. ಮೊದಲೇ ನುಂಕಾಗಿದ್ದ ಅವನ ಕಣ್ಣುಗಳು ಈಗ ಮಸಕಾಗಿ ಗುಳಿ ಬಿದ್ದಿದ್ದುವು. ಕೆಣ್ಣಿನ ಸುತ್ತ ಕಪ್ಪು ಉಂಗುರಗಳು ಕಾಣಿಸಿಕೊಂಡುವು. ಕುಂಬಳದ ಹಣ್ಣಿನಂತಿದ್ದ ಅವನ ಮುಖದಲ್ಲಿ ಈಗೀಗ 'ಗ್ಯಾಬೆ' ಕಟ್ಟಿಕೊಂಡಂತಿತ್ತು. ಕ್ರಮಕ್ರಮವಾಗಿ ಹೆಚ್ಚಿ ಈಚೀಚೆಗೆ ಬೆಳ್ಗೆ ಸಂಜೆಗಳಲ್ಲಿ ಮನೆಯನ್ನು ನಡುಗಿಸುವಂತಹ ಆರ್ಭಟದ ಸೀನುಗಳೂ, ಯಂತ್ರದಿಂದ ಹೊರಬರುವಷ್ಟು ಅವಿಯ ರಾಗದ ನಿಶ್ವಾಸವೂ, ಹುಡಿಕೆಮ್ಮಿನ ಶಬ್ದವೂ ತಪ್ಪದೆ ಕೇಳಿಬರುತ್ತಿದ್ದುವು. ಅವನ ಮಕ್ಕಳ

ಚೇಲಿ ಕೇಗುವುದೂ, ಹೆಂಡತಿಯು ಜೋಲಿ ಸಿಡಿಗುಟ್ಟುವುದೂ ದಿನದಿನಕ್ಕೆ ಹೆಚ್ಚುತ್ತಿದ್ದಂತೆ ರಾಯರಿಗೆ ತೋಚಿತು. ಈಚೆಗೆ ರಾಯರು ಅವನ ಮುಖವನ್ನು ನೋಡಿದಾಗಲೆಲ್ಲ, ಹುಬ್ಬು ಗಂಟಿಕ್ಕಿದಂತೆಯೆ ಕಾಣುತ್ತಿತ್ತು.

ಮೋಹಾಭಾಯಿಯು ತನ್ನ ಬಾಗಿಲಿನ ಮುಂದೆ ನಿಂತು ಪಂಚೆಯ ಕೊನೆಯನ್ನು ಮೂಗಿಗಿಟ್ಟು ಸೀನುತ್ತಿದ್ದನು. ರಾಯರು ಅವನನ್ನು ನೋಡುತ್ತ 'ಏನು ಮೈಯಲ್ಲಿ ಜೆನ್ನಾಗಿಲ್ಲವೇ?" ಎಂದು ಕೇಳಿದರು. ಅವನು "ಏನೋ ಸ್ವಲ್ಪ ನೆಗಡಿ" ಎಂದು "ಈ ಮೋಡ, ಮಳೆ, ಚಳಿಗಾಳಿ ಇದರಿಂದ ಏನೋ ಸ್ವಲ್ಪ ವ್ಯತ್ಯಾಸವಾಗಿದೆ. ಹಾಳು ಮುಂಬಯಿಯಲ್ಲಿ ಹವ ತಟ್ಟನೆ ಬದಲಾಯಿಸುತ್ತೆ" ಎಂದ. ರಾಯರು "ಹೂಂ. ಇರಬಹುದು" ಎಂದರು. ಹೀಗೆ ಇನ್ನೆರಡು ಬಾರಿ ಆದ ಮೇಲೆ ರಾಯರು "ಏನು ಮೋಹಾಭಾಯಿ, ನಿಮ್ಮ ಆರೋಗ್ಯ ಈಚೀಚೆಗೆ ಒಂದೇ ಸಮನಾಗಿ ಇದ್ದಹಾಗಿಲ್ಲ!...." ಎಂದು ಕೇಳಿ ಮುಗಿಸುವಷ್ಟರಲ್ಲಿ ಅವನು ಬಾಯಿ ಹಾಕಿ "ಹಾಗೇನೂ ಇಲ್ಲವಲ್ಲ! ಮೊದಲಿಗಿಂತ ಶಕ್ತಿಯಾಗಿದೀನಿ" ಎಂದು ಸಮಾಧಾನ ಹೇಳಿಕೊಂಡನು. ಆವರು "ಹಾಗೇನು? ಯೋಗಾಭ್ಯಾಸದ ಫಲವಿರಬೇಕು" ಎಂದರು. ಅವನು ಗಂಭೀರವಾಗಿ "ಹೂಂ. ಅಭ್ಯಾಸ ಮಾಡುತ್ತ ಇನ್ನೂ ಉತ್ತಮವಾಗುತ್ತೆ" ಎಂದು ಭರವಸೆ ತೋರಿಸಿದನು.

* * *

ಇನ್ನು ಕೆಲವು ತಿಂಗಳುಗಳು ಉರುಳಿದುವು.

ಆ ದಿನ ರಾಯರು ತಮ್ಮ ಪ್ರೈವೇಟ್ ಜೊಲೆಯನ್ನು, ಹೊರಜಾಗಿಲಿನ ಸಂಜೆ ಬೆಳಕಿನಲ್ಲಿಟ್ಟುಕೊಂಡು ಪರಿಪಾಠಮಾಡುತ್ತಿದ್ದರು. ಆಗ ಕಾಲು ಸಪ್ಪಳ ಕೇಳಿಸಿ, ಜೊಲೆಯ ಮೇಲೆ ನೆರಳು ಬಿದ್ದಿತು. ಕಣ್ಣೆತ್ತಿ ನೋಡಿದಾಗ ಮೋಹಾಭಾಯಿಯು ಪೆಟ್ಟಿಲನ್ನು ಸುತ್ತಿ ಬರುತ್ತಿದ್ದನು. ರಾಯರು ಕತ್ತನ್ನು ಬಗ್ಗಿಸಿದೆ "ನಮಸ್ಕಾರ!" ಎಂದರು. ಅದಕ್ಕೆ ಉತ್ತರವಾಗಿ ಅವನು "ಏನು ರಾಯರು, ನೀವಾಯ್ತು ನಿಮ್ಮ ಕೆಲಸವಾಯ್ತು. ನೆರೆಹೊರೆಯಲ್ಲಿ ಏನು ನಡೆಯುತ್ತಿದೆ ಅನ್ನೋದೇ ನಿಮಗೆ ಗೊತ್ತಿಲ್ಲ! ವಿಚಾರಿಸೋದು ಮಾಡೋದು ಇಲ್ಲವೇನೋ, ಜೀಡವೋ?" ಎಂದು ಕೇಳಿದನು. ರಾಯರು ಕಕ್ಕಾಬಿಕ್ಕಿಯಾಗಿ, ಜೊಲೆಯಿಂದ ಕೈತೆಗೆದು, ತಲೆಯನ್ನು ಮೇಲಕ್ಕೆತ್ತಿ "ಏನು ಸಮಾಚಾರ— ಅಂಥಾದ್ದು? ಏನಾದರೂ ನನ್ನಿಂದ...." ಎನ್ನುವಷ್ಟರಲ್ಲಿ ಅವನು "ನಿನ್ನ ಹೆಂಡತಿ ಆಸ್ಪತ್ರೇಲಿದ್ದಾಳೆ ರಾಯರೆ! ಬದುಕಿಕೆದ್ದೇ ಹೋಯ್ತು!" ಎಂದು ಹೇಳಿದನು. ರಾಯರಿಗೆ ಆಶ್ಚರ್ಯ-ಗಾಬರಿಗಳು ಒಂದೇ ಕಾಲದಲ್ಲಿ ಉಂಟಾದುವು. ಅವರು ಆತುರದಿಂದ "ಆಸ್ಪತ್ರೆ! ಯಾವಾಗ ಹೋದರು? ಏನು...." ಎಂದು ಕೇಳುವಾಗಲೇ ಅವನು "ಈ ದಿನ ಬೆಳಗ್ಗೆ. ಖಾರಿನ ರಾಮಕೃಷ್ಣ ಮಿಷನ್ ಆಸ್ಪತ್ರೆ. ಮೈ ಇಳಿದು...."

"ಹ!" ರಾಯರಿಗೆ ಇನ್ನೂ ಆಶ್ಚರ್ಯವಾಯಿತು— ಒಂದಕ್ಕಿಂತ ಹೆಚ್ಚಾದ ಕಾರಣದಿಂದ.

"ಬಹಳ ಕಷ್ಟ ಕೇಸು ಎಂದರು ಡಾಕ್ಟರು. ಏನೋ ದೇವರ ಕೃಪೆ. ಉಳಿದುಕೊಂಡಳು."

"ಎಷ್ಟು ತಿಂಗಳು?"

"ಏಳು."

ರಾಯರ ಮನಸ್ಸು ತಟ್ಟನೆ ಎಂಟು ಒಂಬತ್ತು ತಿಂಗಳ ಹಿಂದಿನ ಆ ಬೆಳದಿಂಗಳ ದಿನಕ್ಕೆ ಹೋಯಿತು 'ವೈರಾಗ್ಯ, ಬ್ರಹ್ಮಚರ್ಯ, ಯೋಗಾಭ್ಯಾಸ' ಇವು ನೆನಪಿಗೆ ಬಂದು, ಅವರ ಮುಖದ ಮೇಲೆ ನಸುನಗುವು ಕಾಣಿಸಿಕೊಳ್ಳುವುದರಲ್ಲಿತ್ತು. ಅಷ್ಟರಲ್ಲೇ ಅವರು ಈಗಿನ ವಿಷಮ ಪರಿಸ್ಥಿತಿಯನ್ನು ಮನಸ್ಸಿಗೆ ತಂದುಕೊಂಡು ಗಂಭೀರ ಮುದ್ರೆಯನ್ನು ಹೊಂದಿ "ಸದ್ಯ ಅಪಾಯ ತಪ್ಪಿತಲ್ಲ!" ಎಂದರು.

"ನಿಮಗೆ ಈ ವರೆಗೆ ಗೊತ್ತಿದೆ ಅಂತ ತಿಳಿದಿದ್ದೆ."

"ಇಲ್ಲ."

"ನೀವೇನು, ನೆರೆಯಾದರೂ ಹೊರಗಿನೋರ ಹಾಗೇ ಇದ್ದು ಇದ್ದು ಬಿಡುತ್ತೀರಿ. ನಿಮ್ಮ ಕೆಲಸವೇ ನಿಮಗೆ. ಅಕ್ಕಪಕ್ಕದಲ್ಲಿ ಏನೂ ಅಂತ...."

"ನಿಜ. ಅದೊಂದು ನನ್ನಲ್ಲಿಯ ಲೋಪ. ಆದರೆ ಅದಕ್ಕೆ ಕಾರಣ: ನೀವು ನಿಮ್ಮ ಸಂಸಾರದ ಯೋಗಕ್ಷೇಮ ನೋಡಿಕೋಜೀಕಾಯೋರು ಹಾಗೆ ಸರಿಯಾಗಿಯೇ ನೋಡಿಕೋತೀರಿ ಅಂತ ಇದ್ದ ಭರವಸೆ—ಅಷ್ಟೆ!"

"ನಿಜ, ನಿಜ. ಆಡ್ತಿಯಿಲ್ಲ. ಸುಮ್ಮನೆ ಹಾಗೆಂದೆ."

ರಾಯರು ಜೊಲೆಯನ್ನು ತೆಗೆದುಕೊಂಡು ಎದ್ದರು. ಭಾಯಿಯು "ಇದೇನು ನಿಮ್ಮ ಕೆಲಸ?" ಎಂದು ಕೇಳಿದನು. ಅವರು "ಏನೋ ತಾಪತ್ರಯ. ಇದ್ದೇ ಇದೆಯಲ್ಲ. ನಮ್ಮೋಳು ಕ್ಯಾರ್ಯುಯಲ್ ರಜೆ ತೆಗೆದುಕೊಂಡಿದ್ದಾಳೆ. ನಾನು ಬದಲಿ ನೋಡಜೀಕಾಗಿದೆ" ಎಂದು ನಸುನಕ್ಕು ಮನೆಯೊಳಕ್ಕೆ ತಿರುಗಿದರು. ಅವನು "ನೀವೇ ಪುಣ್ಯವಂತರಪ್ಪಾ. ಇಷ್ಟರಲ್ಲೇ ನಿಮ್ಮ ಕಷ್ಟ ಕೊನೆಗಾಣುತ್ತಲ್ಲ. ನಮ್ಮ ಮನೆಯಲ್ಲಿ ಪ್ರಿವಿಲೇಜು ರಜದ ಸಮಾಚಾರ!" ಎಂದು ಬಾಯಿ ಸೊಟ್ಟ ಮಾಡಿಕೊಂಡು ತನ್ನ ಬಾಗಿಲಿನ ಕಡೆಗೆ ಹೋದನು.

ಈಗ ಮೋಹಾಭಾಯಿಯ ವಾನರ ಸೇನೆಯ ಸಂಖ್ಯೆ ಎಂಟಕ್ಕೆ ಏರಿದೆ. ಇನ್ನೂ ಅವನ ಯೋಗಾಭ್ಯಾಸ ಭರದಿಂದ ನಡೆಯುತ್ತಲೇ ಇದೆ.

ಭಾಷಾ ಬಾಂಧವ್ಯ ★ (ಭಾಷಾರಾಸ್ತ್ರವಿಚಾರ)

ಶ್ರೀ. ಎಂ. ಗೋವಿಂದರಾವ್, ಎಂ. ಎ., ಯುನಿವರ್ಸಿಟಿ, ಮದ್ರಾಸ

★

ಭಾಷಾಭೇದದ ಮೂಲಕ ನಮ್ಮ ಪ್ರಾಂತಗಳ ಜನರು ಪರಸ್ಪರರನ್ನು ಈರ್ಷೆ, ಮತ್ಸರ, ದ್ವೇಷಗಳಿಂದ ಕಾಣುತ್ತಿದ್ದರೂ, ಭಾಷೆಗಳು ಮಾತ್ರ ಪರಸ್ಪರ ಮೈತ್ರಿಯಿಂದ ಸಹಕಾರ ನೂಡುತ್ತಿರುತ್ತವೆ; ಕೊಡು-ಕೊಳುಗಳನ್ನು ನಡೆಯಿಸಿರುತ್ತವೆ.

★

ಒಂದೇ ದೇಶದಲ್ಲಿ ಹುಟ್ಟಿ, ಒಂದೇ ರಾಷ್ಟ್ರದಲ್ಲಿ ಬೆಳೆದು ಭಿನ್ನ ಭಿನ್ನ ಮತಗಳನ್ನು ಅನುಸರಿಸಿ, ತಮ್ಮ ಹಕ್ಕು-ಬಾಧ್ಯತೆಗಳನ್ನು ಸ್ಥಿರಪಡಿಸಿಕೊಳ್ಳುವುದಕ್ಕಾಗಿ ಹೊಡೆದಾಡಿ, ಎಲ್ಲೆಲ್ಲೂ ಅಶಾಂತಿಯ ಕಾರ್ಮೋಡವನ್ನು ಎಬ್ಬಿಸಿರುವ ಮಾನವರು ತಮ್ಮತಮ್ಮ ಭಾಷೆಗಳ ಶಬ್ದ ಸಂಪತ್ತು, ವ್ಯಾಕರಣಮರ್ಯಾದೆ, ಸಾಹಿತ್ಯ ಸ್ವರೂಪಗಳನ್ನು ಕುರಿತು ಸ್ವಲ್ಪ ವಿಚಾರ ಮಾಡತೊಡಗಿದರೆ, ಕೊಂಚ ಸಮಯದಲ್ಲೆ ಅವರೊಳಗಿನ ದ್ವೇಷಭಾವವು ತೊಲಗಿ, ಪರಸ್ಪರ ಸೌಹಾರ್ದವೂ ಸಹಾನುಭೂತಿಯೂ ಬೆಳೆಯಬಹುದು. ಪ್ರಪಂಚದ ಭಾಷೆಯೊಳಗಿನ ಸಂಬಂಧವು ಅಂತಹ ನೀತಿಯನ್ನು ಬೋಧಿಸತಕ್ಕದ್ದಾಗಿದೆ. ಯಾವುದಾದರೊಂದು ಭಾಷೆಯು ಪ್ರತ್ಯೇಕವಾಗಿರದೆ ಇನ್ನೊಂದು ಅಥವಾ ಹಲವು ಭಾಷೆಗಳೊಡನೆ ಬಂದು ತರದ ಬಾಂಧವ್ಯವನ್ನು ಬೆಳಸಿಕೊಂಡಿರುವುದು ವ್ಯಕ್ತವಾಗುತ್ತದೆ. ಹಲವು ಭಾಷೆಗಳು ಹೀಗೆ ಹುದುವಾಗಿ ನೇರಿ, ಒಂದೊಂದು ಭಾಷಾವರ್ಗಗಳೆನಿಸಿಕೊಂಡಿವೆ ಈ ವರ್ಗೀಕರಣಕ್ಕೆ ಅವುಗಳೊಳಗಿರುವ ಸಮಾನಗುಣಗಳೇ ಕಾರಣವಲ್ಲದೆ ಬೇರೇನೂ ಅಲ್ಲ. ಹೀಗೆ ವರ್ಗೀಕರಿಸಲ್ಪಟ್ಟ ಮೇಲೂ ಅವು ತಮ್ಮೊಳಗಿನ ಪರಸ್ಪರ ಬಾಂಧವ್ಯವನ್ನು ಕಡಿದುಹಾಕುವುದಿಲ್ಲ. ಅವುಗಳೊಳಗೆ ಕೊಳ್ಕೊಡೆಗಳು ನಡೆಯುತ್ತಲೇ ಇರುವುವು. ಒಂದು ಭಾಷೆಯ ಶಬ್ದವು ಇನ್ನೊಂದು ಭಾಷೆಯಲ್ಲಿ ಬಂದು ಸೇರುತ್ತಲೇ ಇರುವುದು. ಜೀವಂತ ಭಾಷೆಯ ಲಕ್ಷಣವೇ ಇದು. ಹೀಗೆ ಬೇರೆ ಭಾಷೆಯಿಂದ ಬಂದ ಶಬ್ದಗಳು ಪಾಕಿಸ್ತಾನಕ್ಕಾಗಿ ಹೋರಾಡುವುದಿಲ್ಲ. ತಾವು ಅಲ್ಪಸಂಖ್ಯಾಕರಾದರೂ ವಿಶೇಷ ಹಕ್ಕು-ಬಾಧ್ಯತೆಗಳನ್ನಪೇಕ್ಷಿಸುವುದಿಲ್ಲ. ತಮ್ಮನ್ನು ಅಲಕ್ಷಿಸುವ ಪ್ರಯತ್ನ ನಡೆದರೂ ಅವು ಶಾಂತವಾಗಿದ್ದು, ಸಮಯ ಬಂದಾಗ ಮತ್ತೆ ತಲೆಯೆತ್ತಿಕೊಳ್ಳುತ್ತವೆ. ಈ ರೀತಿ ಹಲವು ಭಾಷೆಯ ಶಬ್ದಗಳು ಸಮರಸವಾಗಿ ಸೇರಿಕೊಂಡು ಒಂದು ಭಾಷೆಯನ್ನು ಅಭಿವೃದ್ಧಿಗೊಳಿಸುವುದನ್ನು ನೋಡಿದರೆ, ಮಾನವರು ಮಾತ್ರ ಹೀಗೆ ಪರಸ್ಪರ ಅನುಕೂಲರಾಗಿರದೆ, ಏಕೆ ಅಶಾಂತಿಯ ಬೀಜವನ್ನು ಬಿತ್ತಿ ವೈಭವವನ್ನು ಅನುಭವಿಸುತ್ತಿರಬಹುದು, ಇನ್ನೊಬ್ಬರು ತ್ತಿರುವರೋ ಎನಿಸುವುದು. ಇನ್ನಾದರೂ ಭಿನ್ನಭಿನ್ನ ಜಾತಿಯವರ ಈ ಭಾಷಾಮರ್ಯಾದೆಯನ್ನು ಅನುಸರಿಸಿ, ಏಕವಾಗಿದ್ದು, ದೇಶದ ಪ್ರಗತಿಗೆ, ಸ್ವಾತಂತ್ರ್ಯಕ್ಕೆ, ಪ್ರಭವಕ್ಕೆ ಕಾರಣರಾದರೆ ಭಾರತಾಂಬೆಯು ಧನ್ಯಳಾಗುವಳು.

ಕೆಲವು ಸಾಮಾನ್ಯ ಗುಣಗಳನ್ನನುಸರಿಸಿ ಪ್ರಪಂಚದ ಭಾಷೆಗಳು ಕೆಲವು ವರ್ಗಗಳಾಗಿ ವಿಂಗಡಿಸಲ್ಪಟ್ಟಿವೆಯೆಂದು ಹಿಂದೆಯೆ ಹೇಳಿರುವುದಷ್ಟೆ! ಅಂತಹ ವರ್ಗಗಳಲ್ಲಿ 'ಇಂಡೋ ಯುರೋಪಿಯನ್' ಮತ್ತು 'ದ್ರಾವಿಡ' ಭಾಷಾವರ್ಗಗಳು ಪ್ರಸಿದ್ಧವಾಗಿವೆ ಸಂಸ್ಕೃತವು ಮೊದಲನೆಯ ಗುಂಪಿಗೂ ಕನ್ನಡವು ಎರಡನೆಯ ಗುಂಪಿಗೂ ಸೇರಿವೆ. 'ಇಂಡೋ ಯುರೋಪಿಯನ್' ಭಾಷಾವರ್ಗಕ್ಕೆ ಉತ್ತರ ಹಿಂದುಸ್ತಾನದಲ್ಲಿ ಪ್ರಸಿದ್ಧವಾಗಿರುವ ಹಿಂದೀ, ಮರಾಠಿ, ಬಂಗಾಳೀ ಮುಂತಾದ ಭಾಷೆಗಳು ಸೇರುತ್ತವೆ ಈ ಭಾಷೆಗಳಿಗೂ ಸಂಸ್ಕೃತಕ್ಕೂ ಜನ್ಯ-ಜನಕ ಸಂಬಂಧವಿದೆ. ಸಂಸ್ಕೃತದಿಂದಲೇ ಈ ಭಾಷೆಗಳೆಲ್ಲ ಹುಟ್ಟಿವೆಯೆಂದು ತಿಳಿದು ಒಂದಿವೆ. ದ್ರಾವಿಡ ಭಾಷಾವರ್ಗಕ್ಕೆ ಕನ್ನಡವಲ್ಲದೆ ತಮಿಳು, ತೆಲುಗು, ಮಲೆಯಾಳ, ಪಳು ಮತ್ತು ಇನ್ನು ಕೆಲವು ಕ್ಷುಲ್ಲಕ ಭಾಷೆಗಳು ಸೇರುತ್ತವೆ. ಈ ಭಾಷೆಗಳೊಳಗೆ ಜನ್ಯ-ಜನಕ ಸಂಬಂಧವನ್ನು ಕಲ್ಪಿಸುವದಕ್ಕೆ ಮಾಡಿರುವ ಪ್ರಯತ್ನವು ಅಷ್ಟೊಂದು ಫಲಕಾರಿಯಾಗಿರುವುದಿಲ್ಲ. ಕನ್ನಡವು ತಮಿಳಿನಿಂದ ಹುಟ್ಟಿತೆಂಬ ಕೂಗು ತಮಿಳುನಾಡಿನಲ್ಲಿ ಕೇಳುತ್ತಿದೆ. ಕನ್ನಡವು ತೆಲುಗಿನ ಒಂದು ಭೇದವೆಂದು ತೆಲುಗರು ಹೇಳಬಹುದು; ಆದರೆ ಕನ್ನಡವು ಮಾತ್ರ ಈ ಭಾಷೆಗಳೊಳಗೆ 'ಸಹೋದರೀ' ಸಂಬಂಧವನ್ನು ಬೆಳಸಿಕೊಂಡಿರುವುದು ಕಂಡು ಬರುತ್ತದೆ. ಎಲ್ಲವೂ ಒಂದೇ ತಾಯಿಯ ಮಕ್ಕಳಾಗಿದ್ದು, ಒಂದೇ ರೀತಿಯಲ್ಲಿ ಲಭಿಸಿದ್ದರಿಂದ ಹೊಂದಿವೆ ತಮಿಳು ಸ್ವಲ್ಪ ಮುಂಜೆ ಹುಟ್ಟಿರಬಹುದು. ಆದರೆ ಕನ್ನಡವು ಅದರ ಒಪ್ಪಿಗೇ ಹುಟ್ಟಿವೆಯೆಂದು ಹೇಳುವುದಕ್ಕೆ ಆಧಾರವಿಲ್ಲ. ಈ ಅಕ್ಕ-ತಂಗಿಯರಲ್ಲಿ ಒಬ್ಬಳು ಪ್ರೌಢಾವಸ್ಥೆಯ

ಈಗಾಗಲೇ ಮುಗ್ಧಾವಸ್ಥೆಯ ಮೇರೆಯನ್ನು ದಾಟಿರಬಹುದು. ಇಬ್ಬರಲ್ಲಿಯೂ ದ್ವೇಷ, ಅಸೂಯೆ ಮುಂತಾದ ಯಾವ ದುರ್ಗುಣಗಳೂ ಇಲ್ಲ. ತಮಿಳು ಶಬ್ದಗಳು ಕನ್ನಡದಲ್ಲಿಯೂ ಕನ್ನಡ ಶಬ್ದಗಳು ತಮಿಳಿನಲ್ಲಿಯೂ ಸೇರಿರುವುದನ್ನು ಕಂಡು ಯಾರಿಗೆ ತಾನೆ ಆನಂದವಾಗುವುದಿಲ್ಲ? ಎರಡು ಭಾಷೆಯ ಶಬ್ದಗಳು ಹೀಗೆ ಹುದುವಾಗಿರುವಾಗ ಆ ಭಾಷೆಗಳನ್ನಾಡುವ ಮನುಷ್ಯರು ಮಾತ್ರ ಒಬ್ಬರನ್ನೊಬ್ಬರು ದ್ವೇಷಿಸಿ ಬೇಕೆ? ಇದಕ್ಕೆ ಅಂತ್ಯವಿಲ್ಲವೇ?

ಕನ್ನಡ ಭಾಷೆಯಲ್ಲಿ ಬೇರೆ ಭಾಷೆಯ ಶಬ್ದಗಳನ್ನು ಉಪಯೋಗಿಸಬಾರದೆಂದು ತಡೆದವರೂ ಉಂಟು. ಈ ತರದ ವಿಲಿನವು ಒಂದಕ್ಕೊಂದು ಹೊಂದಿಕೆಯಾಗುವುದಿಲ್ಲವೆಂದು ಪ್ರತಿಪಾದಿಸಿದವರೂ ಉಂಟು. ಇವುಗಳನ್ನು ಸೇರಿಸಿದರೆ 'ಮುತ್ತನ್ನೂ ಪೆಣಸನ್ನೂ ಕೋದಂತಾಗುವುದು' ಎಂದು ತಿಗಳಿದವರುಂಟು. 'ತಕ್ಕುದೆ ಬೆರಸಲ್ತೆ ಸ್ವತಮುಮುಂ ತ್ಯಿಲಮುಮುಂ' ಎಂದು ಆಕ್ಷೇಪಿಸಿದವರುಂಟು. ಆದರೂ ಭಾಷಾದೇವಿಯು ಯಾರ ಸಿಡಿಲುಗರ್ಜನೆಗೂ ಕಿವಿಗೊಡದೆ, ತನ್ನ ಇಚ್ಛಾನುಸಾರವಾಗಿ ಮುಂದುವರಿದಿದ್ದಾಳೆ. ತನ್ನಲ್ಲಿ ಶಬ್ದ ಸಂಪತ್ತು ಕಡಿಮೆಯೆಂದು ಕಂಡುಬಂದರೆ, ಹೊಸ ಶಬ್ದಗಳನ್ನು ರೂಪಿಸಿಕೊಳ್ಳುವುದಕ್ಕಾಗಲಿ ಬೇರೆ ಭಾಷೆಯ ಶಬ್ದಗಳನ್ನು ಉಪಯೋಗಿಸಿಕೊಳ್ಳುವುದಕ್ಕಾಗಲಿ ಅವಳು ಹಿಂದೆ ಮುಂದೆ ನೋಡುವುದಿಲ್ಲ. ಒಂದು ವೇಳೆ ಅನ್ಯಭಾಷೆಯ ಶಬ್ದಗಳು ಬೇಡವೆಂದು ಕನ್ನಡದಿಂದ ತಳ್ಳಿಹಾಕಿದರೆ, ನಮ್ಮ ಭಾಷೆಯು ಬಡವಾಗುವುದರಲ್ಲಿ ಸಂದೇಹವಿಲ್ಲ. ಸಂಸ್ಕೃತ ಶಬ್ದಗಳನ್ನು ಕನ್ನಡ ಭಾಷೆಯಿಂದ ಕಿತ್ತೊಗೆದರೆ ಆಚ್ಚ ಕನ್ನಡಿಗರು ದೇವರಿಲ್ಲದ ನಾಸ್ತಿಕರಾಗಬೇಕಾದೀತು; ಸ್ವರ್ಗಬಾಹಿರರಾಗಬಹುದು; ಆಸ್ತಿಕ್ಯಗಳಲ್ಲಿ ನಾಲ್ಕನ್ನು ಕಳೆದುಕೊಳ್ಳುವುದರಲ್ಲಿ ಸಂಶಯವಿಲ್ಲ. ಇನ್ನೆಷ್ಟು ಶಬ್ದಾಭಾವವು ಬಂದೊದಗುವುದೋ ತಿಳಿಯದು. ಅದುದರಿಂದ, ಯಾವ ರೀತಿ ನಮ್ಮ ದೇಶದಲ್ಲಿ ಆಹಾರ ಪದಾರ್ಥಗಳು ಕಡಿಮೆಯಾಯಿತೆಂದು ಬೇರೆ ದೇಶಗಳಿಂದ ತರಿಸಿಕೊಂಡರೋ ಹಾಗೆಯೇ ನಮ್ಮ ಭಾಷೆಯಲ್ಲಿ ಶಬ್ದಸಂಪತ್ತು ಕಡಿಮೆಯಾದರೆ ಬೇರೆ ಭಾಷೆಗಳಿಂದ ಸಹಾಯವನ್ನು ಪಡೆಯುವುದು ಉಚಿತವಾಗಿದೆ. ಅದು ಒಪ್ಪದೆ ಹೋದರೆ ಬೇರೆ ಶಬ್ದಗಳನ್ನಾದರೂ ರಚಿಸಿಕೊಳ್ಳಬೇಕು. ದಿಕ್ಕುಗಳಲ್ಲಿ ನಾಲ್ಕಕ್ಕೆ ಮಾತ್ರ ಕನ್ನಡ ಹೆಸರುಗಳಿವೆ; ಉಳಿದ ನಾಲ್ಕಕ್ಕೆ ಸಂಸ್ಕೃತವೇ ಶರಣು. ಅದು ಹಿತವಾಗದೆ ಹೋದರೆ ತಮಿಳರಂತೆ ನಾವೂ ಇಂಗ್ಲೀಷರನ್ನು ಅನುಕರಿಸಿ ಹೊಸ ಶಬ್ದಗಳನ್ನು ರಚಿಸಬೇಕು. ಸಂಸ್ಕೃತ ಶಬ್ದಗಳಾದ 'ಆಗ್ನೇಯ' 'ನೈಋತ್ಯ' 'ವಾಯವ್ಯ' 'ಈಶಾನ್ಯ' ಎಂಬುವುಗಳಿಗೆ ತಮಿಳಿನಲ್ಲಿ ಕ್ರಮವಾಗಿ 'ತೆನ್‌ಕಿಳಕ್ಕು' 'ತೆನ್‌ಮೇಕ್ಕು' 'ವಡಮೇಕ್ಕು' 'ವಡಕ್ಕಿಳಕ್ಕು' ಎಂಬ ಶಬ್ದಗಳಿವೆ. ಮಲೆಯಾಳದಲ್ಲಿಯೂ ಸ್ವಲ್ಪ ಹೆಚ್ಚು-ಕಡಿಮೆ ಹೀಗಿದೆ. ಕನ್ನಡಿಗರಿಗೆ ಈ ಮಾರ್ಗವು ಅನುಕರಣೀಯವಲ್ಲವೇ?

ಕನ್ನಡವು ಸಂಸ್ಕೃತಕ್ಕೆ ಬಹಳಮಟ್ಟಿಗೆ ಋಣಿಯಾಗಿದೆ. ಆ ವಿಷಯವನ್ನು ಕುರಿತು ಇಲ್ಲಿ ಹೆಚ್ಚಾಗಿ ಹೇಳಬೇಕಾದ ಆವಶ್ಯಕತೆಯಿಲ್ಲ. ದ್ರಾವಿಡ ಭಾಷೆಗಳು ಪರಸ್ಪರ ಹೊಂದಿಕೆಯಿಂದ ತಮ್ಮೊಳಗಿನ ಬಾಂಧವ್ಯವನ್ನು ಹೇಗೆ ಕಾಪಾಡಿಕೊಂಡಿವೆಯೆಂಬುದನ್ನು ಸ್ವಲ್ಪ ವಿಚಾರಿಸಬೇಕಾಗಿದೆ. 'ಇಲ್ಲು' ಎಂಬ ಶಬ್ದವು ತೆಲುಗಿನಲ್ಲಿಯೂ ತುಳುವಿನಲ್ಲಿಯೂ ಮನೆಯೆಂಬ ಅರ್ಥವನ್ನು ಕೊಡುತ್ತದೆ. ಇದೇ ಅರ್ಥದಲ್ಲಿ 'ಇಲ್' ಎಂಬ ಶಬ್ದವು ತಮಿಳಿನಲ್ಲಿಯೂ ಕನ್ನಡದಲ್ಲಿಯೂ ಇದೆ. 'ಕೋವಿಲ್' 'ಪಿಂತಿಲ್' ಎಂಬ ಶಬ್ದಗಳನ್ನು ಪರಿತೀಲಿಸಿದರೆ ಇದು ವಿದಿತವಾಗುವುದು. 'ಕೋವಿಲ್' ಎಂಬ ತಮಿಳುಶಬ್ದವು 'ಕೋ+ಇಲ್' ಎಂಬ ಎರಡು ಶಬ್ದಗಳು ಸೇರಿ ಆಗಿದೆ; 'ದೇವರ ಮನೆ' ಎಂಬ ಅರ್ಥವನ್ನು ಕೊಡುತ್ತದೆ. 'ಪಿಂತಿಲ್' ಎಂಬ ಕನ್ನಡ ಶಬ್ದವು 'ಪಿಂತು+ಇಲ್' ಎಂಬವುಗಳ ಸೇರುವಿಕೆಯಿಂದ ಆಗಿದೆ; ಮನೆಯ ಹಿಂಭಾಗವೆಂಬ ಅರ್ಥವನ್ನು ಕೊಡುತ್ತದೆ. 'ತುಪ್ಪು' ಎಂಬ ಇನ್ನೊಂದು ಶಬ್ದವು ಕನ್ನಡದಲ್ಲಿ ಅಪರೂಪವಾಗಿದೆ. ಜನ್ನನ ಯಶೋಧರ ಚರಿತ್ರೆಯಲ್ಲಿ 'ತುಪ್ಪೇರಿದ ದರ್ಪಣದಂತೆ' ಎಂಬ ಪ್ರಯೋಗವು ಸಿಕ್ಕುತ್ತದೆ ಹೊಸಗನ್ನಡದಲ್ಲಿ 'ತಪ್ಪು' 'ತುಪ್ಪ'ಗಳು ಮಾತ್ರ ಉಂಟು. 'ತುಪ್ಪು' ಎಂದೋ ಮಾಯವಾಗಿದೆ. ತಮಿಳಿನಲ್ಲಿ ಈಗಲೂ ಆ ಶಬ್ದವು ಬಳಕೆಯಲ್ಲಿದೆ. ಕನ್ನಡಿಗರು ಈ ಶಬ್ದವನ್ನು ಏಕೆ ಬಳಕೆಗೆ ತರಬಾರದು? 'ತುಪ್ಪು' ಎಂಬುದಾಗಿ ಈ ಶಬ್ದವು ಇದೇ ಅರ್ಥದಲ್ಲಿ ತೆಲುಗಿನಲ್ಲಿದೆ. 'ಕುಕ್ಕ' ಎಂಬ ತೆಲುಗು ಶಬ್ದವನ್ನು ಕನ್ನಡಿಗರೂ ಉಪಯೋಗಿಸಿರುವುದು ಕಂಡುಬರುತ್ತದೆ. ಕುಕ್ಕನ ಹಳ್ಳಿ, ಕುಕ್ಕನಮುದ್ರು ಮುಂತಾದ ಹೆಸರುಗಳು, ಕನ್ನಡಿಗರೂ ಈ ಶಬ್ದವನ್ನು ಉಪಯೋಗಿಸಿಕೊಂಡಿರುವರೆಂಬುದಕ್ಕೆ ಗುರುತಾಗಿವೆ. 'ಕುಂಬಿಡು' ಎಂಬ ಶಬ್ದವು ಹಳಗನ್ನಡದಲ್ಲಿದ್ದರೂ ಹೊಸಗನ್ನಡದಲ್ಲಿ ಕಂಡುಬರುವುದಿಲ್ಲ. ಆದರೆ ತಮಿಳಿನಲ್ಲಿ ಅದು ನಿತ್ಯವ್ಯವಹಾರದಲ್ಲಿರುವ ಮಾತಾಗಿದೆ. ಹೀಗೆ ದ್ರಾವಿಡ ಭಾಷೆಗಳ ಶಬ್ದಗಳು ಅನ್ಯೋನ್ಯವಾಗಿ ಸೇರಿಕೊಂಡು ತಮ್ಮ ಬಾಂಧವ್ಯವನ್ನು ಕಾಪಾಡಿಕೊಂಡಿವೆ. ಮಾನವರು ಮಾತ್ರ ದೂರವಾಗುವುದಕ್ಕೆ ಪ್ರಯತ್ನಿಸುತ್ತಿದ್ದಾರೆ.

ಇದು ಒಂದಕ್ಕೊಂದು ಸಮೀಪವಾಗಿರುವ ಭಾಷೆಗಳ ಮಾತಾಯಿತು. ಒಂದಕ್ಕೊಂದು ದೂರವಾದ ಫಿನ್ನಿಷ್ ಮತ್ತು ಕನ್ನಡ ಭಾಷೆಗಳಲ್ಲಿ ಕಂಡುಬರುವ ಸಂಬಂಧವು ಎಲ್ಲರನ್ನೂ ಬೆರಗುಗೊಳಿಸದಿರದು. ಕನ್ನಡದ 'ಕಲ್ಲು' ಫಿನ್ನಿಷ್ ಭಾಷೆಯಲ್ಲಿ 'ಕಲ್ಲಿಯೋ' ಆಗಿದೆ. ಹಾಗೆಯೇ ಕನ್ನಡದ 'ನಾರು' ಆ ಭಾಷೆ-

(೩೦೬ನೆಯ ಪುಟ ನೋಡಿರಿ)

ಅವ್ಯವಹಾರ್ಯ ಪಾಕಿಸ್ತಾನ

ಲೇಖಾಂಕ ೨

ಶ್ರೀ. ಡಾ. ಎಚ್. ಬಿ. ಕೊಣ್ಣೂರ, ಎಲ್.ಸಿ.ಪಿ.ಎಸ್. ಗದಗ

★

ಜಾತೀಯ ತಳಹದಿಯ ಮೇಲೆ ರಾಷ್ಟ್ರವು ನಿರ್ಮಾಣವಾಗಬೇಕೆಂಬ ಮಾತು, ಭಾರತದಲ್ಲಿ ಅಲ್ಲದೆ ಜಗತ್ತಿನ ಇನ್ನಾವ ಪ್ರದೇಶದಲ್ಲಿಯೂ ಕೇಳದು. ಈ ಮಾತನ್ನು ಎತ್ತಿಕೊಟ್ಟವರು ಭೇದನೀತಿಯ ಬಂಟರಾದ ಬ್ರಿಟಿಷರೇ ಎಂಬುದನ್ನು ಯಾರೂ ಮರೆಯಲಾಗದು.

★

"ತಮ್ಮ ಧರ್ಮವೇ ಶ್ರೇಷ್ಠ; ಉಳಿದ ಧರ್ಮಗಳು ಕನಿಷ್ಠ" ಎಂಬ ಕುರುಡುತಿಳಿವಳಿಕೆ ಮುಸಲ್ಮಾನ್ ಜನಾಂಗದಲ್ಲಿ ಬೇರೂರಿಬಿಟ್ಟಿದೆ. "ಇಸ್ಲಾಂ ನಾಗರಿಕತೆಯು ಸಂಪೂರ್ಣ ಧರ್ಮದ ತಳಹದಿಯ ಮೇಲೆಯೆ ರಚಿಸಲ್ಪಟ್ಟಿದೆ; ಈ ಮಾತನ್ನು ಇತಿಹಾಸವು ಸಾರಿ ಹೇಳುತ್ತಿದೆ" ಎಂದು ಮುಹಮ್ಮದ್ ಅಸಾದ್ ಎಂಬ—ಮುಸಲ್ಮಾನ್ ಧರ್ಮ ಸ್ವೀಕರಿಸಿದ—ಆಸ್ಟ್ರೀಲಿಯನ್ ಗೃಹಸ್ಥನು ಹೇಳುತ್ತಾನೆ. ದಿವಂಗತ ಇಕ್ಬಾಲರವರು ಈ ಗೃಹಸ್ಥನನ್ನು ಒಳ್ಳೆಯ ವಿಚಾರವಾದಿಯೆಂದು ಕರೆಯುತ್ತಿದ್ದರು.

"ಮುಹಮ್ಮದ್ ಅಬ್ದುಲ್ ಇನಾನ್" ಎಂಬ ಕಾಯರೋದಲ್ಲಿಯ ಗೃಹಸ್ಥರು ತಮ್ಮದೊಂದು ಪುಸ್ತಕದಲ್ಲಿ (Decisive moment in the history of Islamia) ಹೀಗೆ ಬರೆದಿದ್ದಾರೆ: "ಅರಬರ ಧಾರ್ಮಿಕ ನೀತಿ-ರೀತಿಗಳು ಪೂರ್ವಕಾಲದ ಮುಸಲ್ಮಾನರಂತೆಯೆ ಇವೆ; ಎಂದರೆ ಧರ್ಮಪ್ರಸಾರಕ್ಕಾಗಿ 'ಜಿಹಾದ್' ಯುದ್ಧ ಮಾಡುವುದು— ಮುಸಲ್ಮಾನರಲ್ಲದವರನ್ನು ಒತ್ತಾಯದಿಂದ ಧರ್ಮಾಂತರಗೊಳಿಸುವುದು ಇತ್ಯಾದಿ. ಅಲ್ಲದೆ ಮುಸ್ಲಿಮೇತರರನ್ನು ಕೀಳರೆಂದು ಬಗೆಯುತ್ತಾರೆ."

ಈ ತೆರನಾದ ಮುಸಲ್ಮಾನ್ ಮನೋರಚನೆಯಲ್ಲಿ ಹಲವು ಮಾರ್ಪಾಡುಗಳು ಆಗುತ್ತಲಿವೆ. ವಿಚಾರವಂತ ಮುಸಲ್ಮಾನ್ ಗೃಹಸ್ಥರು ಈ ತರದ ಕುರುಡುನಂಬುಗೆಯನ್ನು ಒಪ್ಪುವುದಿಲ್ಲ. ಎಸ್. ಖುದಾಬಕ್ಷ ಎಂಬವರು ತಮ್ಮ (Studis—Indian and Islamic) ಪುಸ್ತಕದಲ್ಲಿ "ಹಿಂದೀ ಮುಸಲ್ಮಾನ್ ಜನಾಂಗವು ಹಿಂದುಸ್ತಾನದ ಯಾವ ವಿಷಯದಲ್ಲಿಯೇ ಆಗಲಿ, ಏಕಮತ-ನಿಷ್ಠೆ ತೋರಿಸಬೇಕು ಹಿಂದು-ಮುಸಲ್ಮಾನ್ ಜನಾಂಗಗಳ **ಸಂಗಮವು ಬಲಿಷ್ಠ**ವಾಗಬೇಕು. ಅಂದರೇನೇ ಅವರ ನಿಜವಾದ ಮತ್ತು ಶಾಶ್ವತ ಹಿತ ಸಾಧಿಸುವುದು." ಎಂದು ಸಾರಿ ಹೇಳಿದ್ದಾರೆ. ಆದರೆ ಈ ಮಾತನ್ನು ನಮ್ಮ ಮುಸಲ್ಮಾನ್ ಬಾಂಧವರು ಮರೆತಂತೆ ಕಾಣುತ್ತದೆ.

ಮಹಮ್ಮದ್ ಪೈಗಂಬರರು ಮಾಡಿದ ಯುದ್ಧಗಳೆಲ್ಲ ಇಸ್ಲಾಂ ಧರ್ಮ ಸಂರಕ್ಷಣಾರ್ಥವಾಗಿ ಮಾತ್ರ ಇದ್ದುವೆಂದು ಶ್ರೀ. ಶಿಬ್ಲಿ ಎಂಬವರು ತಮ್ಮ "ಶಿರಾತ್ ಬಿನ್ ನಬಿ" ಎಂಬ ಪುಸ್ತಕದಲ್ಲಿ ಬರೆಯುತ್ತಾರೆ. ಸರ್ ಮಹಮ್ಮದ್ ಇಕ್ಬಾಲ್‌ರವರು "ಧರ್ಮ ಪ್ರಸಾರಾರ್ಥವಾಗಿ ಯುದ್ಧ ಮಾಡುವುದು ನಾಗರಿಕತೆಯ ಲಕ್ಷಣವಲ್ಲ; ಮುಸಲ್ಮಾನರ ಸಾಮ್ರಾಜ್ಯ ಲಾಲಸೆಯ ಅವರ ಅಧೋಗತಿಗೆ ಕಾರಣವಾಯಿತು" ಎಂದು ಅಭಿಪ್ರಾಯ ಪಟ್ಟಿದ್ದಾರೆ. ಮತ್ತು "ಹೋಗು ಮತ್ತು ಹೋರಾಡು" ಎಂಬ ಕುರಾಣದಲ್ಲಿಯ ವಾಕ್ಯದ ಅರ್ಥವು 'ಯುದ್ಧ ಮಾಡಿ ಧರ್ಮಾಂತರಗೊಳಿಸು' ಎಂಬುದಲ್ಲ; "ಈ ಜಗತ್ತಿನಲ್ಲಿ ಮಾನವನನ್ನು ಕಳಸುತ್ತಲಿರುವ ಅನೇಕ ಶತ್ರುಗಳೊಂದಿಗೆ— ದ್ವೇಷ, ಅಸೂಯೆ, ಅವಿಚಾರ, ಹೇಸಿತನ, ರೋಗ, ಇತ್ಯಾದಿ— ಹೋರಾಡು' ಎಂದು ಆಜ್ಞಾಪಿಸಿದನು ಎಂದು ತಿಳಿಯಬೇಕು." ಹೀಗೆ ಅನೇಕ ಮುಸಲ್ಮಾನ್ ಮಹನೀಯರು ವಿಚಾರಮಾಡುತ್ತಿದ್ದರೂ, ಹಿಂದೀ ಮುಸಲ್ಮಾನ್ ಜನಸಾಮಾನ್ಯರ ಮೇಲೆ ಅವರ ಪ್ರಭಾವವೇನೂ ಬೀಳಲಿಲ್ಲ.

ಬ್ರಿಟಿಶರ ಆಡಳಿತದಲ್ಲಿ ಹಿಂದುಗಳು ಮುಂದುವರಿಯುವುದನ್ನು ನೋಡಿ ಅನೇಕ ಮುಸಲ್ಮಾನ್ ಮುಂದಾಳುಗಳಿಗೆ, ತಾವೂ ಈ ಆಂಗ್ಲ ಶಿಕ್ಷಣ ಪಡೆದು ಮುಂದೆ ಬೀಳದಿದ್ದರೆ ಒಮ್ಮೆಲ್ಲೊಮ್ಮೆ ಬಹುಸಂಖ್ಯಾಕರಾದ ಹಿಂದುಗಳ ಕೈಯಲ್ಲಿ ಕೊಳೆಯಬೇಕಾದೀತು ಎಂಬ ಬೆದರಿಕೆಯ ಭೂತ ಬಡಿಯಿತು. ಅದರ ಫಲವೇ ಅಲೀಗಡ ಮುಸ್ಲಿಂ ವಿಶ್ವವಿದ್ಯಾಲಯದ ಸ್ಥಾಪನೆ. ಈ ಬೆದರಿಕೆಯ ಭೂತವನ್ನು ಎಬ್ಬಿಸಲು ಹಿಂದುಸ್ತಾನದಲ್ಲಿಯ ಆಂಗ್ಲರೂ ಬಹುಮಟ್ಟಿಗೆ ಕಾರಣರು; ಯಾಕೆಂದರೆ ಈ ಎರಡು ಮುಖ್ಯ ಜನಾಂಗಗಳನ್ನು ಪರಸ್ಪರ ಸಂಶಯ ದೃಷ್ಟಿಯಿಂದ ನೋಡುವಂತೆ ಮಾಡುವುದೇ ಅವರಿಗೆ ಬೇಕಾದದ್ದು. ಈ ಅಲೀಗಡ ಸಂಸ್ಥೆಯು ಹಿಂದೀ ರಾಜಕಾರಣದಲ್ಲಿ ಜಾತೀಯ ದ್ವೇಷದ ಬೀಜ ಬಿತ್ತಲು

ತುಂಬ ವ್ಯವಸ್ಥಿತ ರೀತಿಯಿಂದ ಪ್ರಾರಂಭ ಮಾಡಿತು. ಅಲ್ಲದೆ ತನ್ನ ಅಂತಿಮಧ್ಯೇಯವೆಂದು ಹಿಂದುಸ್ಥಾನದ ಮೇಲೆ ಪ್ರಭುತ್ವ ಸ್ಥಾಪಿಸಬೇಕೆಂದು ನಿರ್ಧರಿಸಿತು. ಯಾಕೆಂದರೆ ಬ್ರಿಟಿಶರು ಹಿಂದುಸ್ಥಾನವನ್ನು ಆಕ್ರಮಿಸುವ ಪೂರ್ವದಲ್ಲಿ ಇಲ್ಲಿ ಮುಸಲ್ಮಾನರದೇ ಪ್ರಭುತ್ವವಿತ್ತೆಂದು ಅವರು ಕಾರಣ ಕೊಡುತ್ತಾರೆ! ಹಿಂದೀ ಮುಸಲ್ಮಾನರ ಈ ಕಲ್ಪನೆಯ ಓಟ ಇಲ್ಲಿಗೇ ನಿಂತಿಲ್ಲ; ಅವರು "ಸರ್ವಂ ಮುಸ್ಲೀಂ ಮಯಂ" ರಾಷ್ಟ್ರ ಕಟ್ಟಬೇಕೆಂದು ಹವಣಿಕೆ ಹಾಕಬೇಕೆನ್ನುತ್ತಾರೆ! ಆದರೆ ಆದರ ಇಷ್ಟಾನಿಷ್ಟತೆಯನ್ನಾಗಲಿ ಶಕ್ಯಾಶಕ್ಯತೆಯನ್ನಾಗಲಿ, ವಿಚಾರಿಸಿದಂತೆ ತೋರುವುದಿಲ್ಲ. ಅಲ್ಲದೆ ಅವರಿಗೆ ಈ ವಿಷಯದಲ್ಲಿ ಹಿಂದುಸ್ತಾನದ ಹೊರಗಿನ ಯಾವ ಮುಸಲ್ಮಾನ್ ರಾಷ್ಟ್ರವೂ ಸಹಾಯ, ಪ್ರೋತ್ಸಾಹನ ಕೊಟ್ಟಿಲ್ಲ. ಹಿಂದೀ ಮುಸಲ್ಮಾನರ ಅವನತಿಗೆ ಪರದಾಸ್ಯವೇ ಕಾರಣವೆಂದೂ ಬ್ರಿಟಿಶ್ ಛೇದನೀತಿಯು ಕೈಗೊಂಬೆಯಾಗಿ ಹೇಗೆ ಮುಸಲ್ಮಾನನು ಕುಣಿಯುತ್ತಿದ್ದಾನೆಂದೂ ಎಷ್ಟೋ ವಿಚಾರವಂತ ಮುಸಲ್ಮಾನರು ತಿಳಿದುಕೊಂಡಿದ್ದಾರೆ. ಸರ್ ಮುಹಮ್ಮದ್ ಇಕ್ಬಾಲ್‌ರವರು ತಮ್ಮೊಂದು ಪತ್ರದಲ್ಲಿ:— "ಹಿಂದೀ ಮುಸಲ್ಮಾನನು ಹಿಂದುಸ್ಥಾನಕ್ಕೆ ಬಹಳೇ ಅಂಟಿಕೊಂಡಿದ್ದಾನೆ. ಅವನು ಬೇರೆ ಇದ್ದೇನೆಂದರೂ ಶಕ್ಯವಿಲ್ಲ" ಎಂದಿದ್ದಾರೆ. ಮತ್ತು ಈ ೭೦೦ ವರ್ಷಗಳ ಅವಧಿಯಲ್ಲಿ ಹಿಂದೀ ಮುಸಲ್ಮಾನನ ಬಾಳುವೆ ಹೀನತರದ್ದಾಗುತ್ತಲಿದೆ. ಇದೇನು ನಂಬಲ್ಲ. ಈ ಹೀನ ದಶೆಯು ಬಹುಶಃ ಹಿಂದೂ ಶ್ರೀಮಂತರಿಂದ ತನಗುಂಟಾಯಿತೆಂಬ ತಪ್ಪು ಭಾವನೆ ಅವನಲ್ಲಿದೆ. ಆದರೆ ನರಕೀಯ ದಾಸ್ಯ (Political Slavery) ದಿಂದಲೇ ಹೀಗಾಗಿದೆಯೆಂಬುದರ ಅರಿವು ಅವರಿಗಿನ್ನೂ ಉಂಟಾಗಿಲ್ಲ. ಆದರೆ ಒಮ್ಮಿಲ್ಲೊಮ್ಮೆ ಆ ಅರಿವು ಆಗಿಯೇ ತೀರುವುದು."

ತುರ್ಕ, ಅರಬ, ಇಜಿಪ್ಸಿಯನ್, ಇರಾಣಿ, ಇರಾಕೀ ಜನರು ತಮ್ಮ ರಾಷ್ಟ್ರೀಯತೆಗಾಗಿ ಹೋರಾಡುತ್ತಲಿದ್ದಾರೆ; ಆದರೆ ನಮ್ಮ ಹಿಂದೀ ಮುಸಲ್ಮಾನರು "ಸರ್ವಂ ಮುಸ್ಲಿಂ ಮಯಂರಾಷ್ಟ್ರಂ" ಆಥವಾ 'ಪಾಕಿಸ್ತಾನ'ಕ್ಕಾಗಿ ಹೋರಾಡುತ್ತಿದ್ದಾರೆ. ಪಾಕಿಸ್ತಾನದಲ್ಲಿಯು ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳು ಯಾವ ಬಗೆಯವು ಆಗುವವು ಎಂಬುದನ್ನು ಯಾರು ವಿಚಾರಿಸಿರುವರು? ಅಲ್ಲದೆ ಇನ್ನೂ ಅನೇಕ ಸಮಸ್ಯೆಗಳಿವೆ. ಅವನ್ನೆಲ್ಲ ವಿಚಾರಿಸಿ ಉತ್ತರ ಕೊಡುವ ಧೈರ್ಯ ನಾಲದೆ ಈಗಿನ ನಡುಗಾಲ ಸರಕಾರದ ಮುಸ್ಲಿಂ ಮಂತ್ರಿಗಳೊಬ್ಬರು "ಇಡಿ ಹಿಂದುಸ್ತಾನವೇ ಮುಸಲ್ಮಾನ್ ಧರ್ಮ ಸ್ವೀಕರಿಸಲಿ" ಎಂಬ ಹುಚ್ಚು ಹಾರಯಿಕೆ ಹೊರಪಡಿಸಿದ್ದಾರೆ. ಆದರೆ ಈ ಮಹನೀಯರು ಇತಿಹಾಸವನ್ನು ಮರೆತಂತೆ ಕಾಣುತ್ತದೆ. ಟಾರ್ಟರ್, ಆಫಘಾನ್, ಮೊಗಲ್ ಇತ್ಯಾದಿ ಪ್ರಬಲ ಜನಾಂಗಗಳು ಎಷ್ಟೇ ಪ್ರಯತ್ನ ಪಟ್ಟರೂ ಈ "ಕಾಫೀರ್"ರು ತಮ್ಮ ಧರ್ಮ ಬಿಟ್ಟಿಲ್ಲ. ಆ ಮಾತಂತಿರಲಿ. ಮುಸಲ್ಮಾನರೇ ಈ ದೇಶದ ಸಾಮಾಜಿಕ ಜೀವನದಲ್ಲಿ ಬೆರೆತು ಹೋಗಿದ್ದಾರೆ. ಈ ಮಾತನ್ನು ಸರ್ ಮಹಮ್ಮದ್ ಇಕ್ಬಾಲರಂತಹ ಮಹಾಕವಿ ಪುರುಷರೂ ಒಪ್ಪುತ್ತಾರೆ.



(ಗತಸಂಚಿಕೆಯ ಪುಟದಿಂದ ಮುಂದುವರಿದುದು)

ಯಲ್ಲಿಯೂ ಅದೇ ಅರ್ಥವನ್ನು ಕೊಡುತ್ತವೆ. ಇದು ಆಶ್ಚರ್ಯಕರವಲ್ಲವೇ?

'ಫೌಜು' ಶಬ್ದವನ್ನು ಕನ್ನಡಿಗರೂ, ತಮಿಳರೂ, ಮರಾಠಿಯವರೂ, ಹಿಂದುಸ್ತಾನಿ ಭಾಷೆಯನ್ನಾಡುವವರೂ ಉಪಯೋಗಿಸುತ್ತಾರೆ. 'ಸಿಗರು' 'ದಫ' ಎಂಬ ಶಬ್ದಗಳು ಕನ್ನಡದಲ್ಲಿಯೂ ಹಿಂದುಸ್ತಾನಿಯಲ್ಲಿಯೂ ಇವೆ. 'ಜಬ್ತಿ' 'ಮಾಮೂಲು' ಮುಂತಾದ ಅರಾಬಿಕ್ ಶಬ್ದಗಳು ತಮಿಳು, ಕನ್ನಡ, ಮರಾಠಿ, ಹಿಂದುಸ್ತಾನಿಗಳಲ್ಲಿಯೂ ಇವೆ. 'ಒಂಬೋಬಸ್ತು' 'ಸುಮಾರು' ಮುಂತಾದ ಪರ್ಶಿಯನ್ ಶಬ್ದಗಳೂ ತಮಿಳು, ಕನ್ನಡ, ಮರಾಠಿ, ಹಿಂದುಸ್ತಾನಿ ಭಾಷೆಗಳಲ್ಲಿವೆ. 'ಅಜಾದು' 'ಕಿಲ್ಲೆ' 'ಕೌಲು' 'ಆಟಕಾವ್ಯ' 'ಪಾಸಾ' 'ಖರೀದಿ' 'ಮೊಕದೂಮು' ಮುಂತಾದ ಶಬ್ದಗಳು ಕನ್ನಡ, ಮರಾಠಿ, ಹಿಂದುಸ್ತಾನಿ ಭಾಷೆಗಳಲ್ಲಿ ಸೇರಿಕೊಂಡಿವೆ. ಇಂಗ್ಲಿಷ್ ಶಬ್ದಗಳಂತೂ ಪ್ರತಿಯೊಂದು ಭಾಷೆಯಲ್ಲಿಯೂ ಧಾರಾಳವಾಗಿ ತುಂಬಿಕೊಂಡಿವೆ. ಇಂಗ್ಲಿಷರನ್ನು ಓಡಿಸಿದರೂ ಇಂಗ್ಲಿಷ್ ಶಬ್ದಗಳನ್ನು ಓಡಿಸುವುದಕ್ಕೆ ಸಾಧ್ಯವೇ ಇಲ್ಲ. ಆದುದರಿಂದ ಈ ಭಾಷಾ ಮಯರ್ಯಾದೆಯನ್ನಾದರೂ ಅನುಸರಿಸಿ, ಜನರೆಲ್ಲರೂ ಒಂದಾಗಿ ಪರಸ್ಪರ ದ್ವೇಷಾಸೂಯೆಗಳನ್ನು ಮರೆತುಬಿಟ್ಟು, ದೇಶ ಕಲ್ಯಾಣಕ್ಕಾಗಿ ಪಣತಾಡಿದರೆ ಎಲ್ಲರಿಗೂ ಶಾಂತಿಯೂ ಸುಖವೂ ಉಂಟಾಗುವುದರಲ್ಲಿ ಸಂಶಯವಿಲ್ಲ.



ಗಿಳಿ. ಭಗ್ನ ಮಂದಿರ

(ಸ್ವತಂತ್ರ ಸಾಮಾಜಿಕ ಕಾದಂಬರಿ)

ಬರೆದವರು : 'ಹೇಮಂತ' ಪ್ರಕಾಶಕರು: ಮನೋಹರ ಗ್ರಂಥ ಮಾಲಾ, ಧಾರವಾಡ.

'ಹೇಮಂತ'ರು ಕನ್ನಡ ಓದುಗರಿಗೆ ಅಪರಿಚಿತರಲ್ಲ; ಅಲ್ಲಲ್ಲಿ ಅವರ ಅನೇಕ ಬಿಡಿಲೇಖನಗಳು ಬಂದಿವೆ, ಬರುತ್ತಲಿವೆ. ಇಷ್ಟು ವಿಸ್ತಾರವಾದ ಹೊಸಬಗೆಯ ಸಾಮಾಜಿಕ ಕಾದಂಬರಿಯನ್ನು ಇವರು ಮೊದಲ ಸಲ ಕನ್ನಡ ಓದುಗರೆದುರು ಇಟ್ಟಿದ್ದಾರೆ. ಪ್ರಥಮ ಪ್ರಯತ್ನದಲ್ಲಿ ಬಹುಶಃ ಯಾವ ಕಾದಂಬರಿಕಾರನೂ ಪಡೆಯದ ಯಶಸ್ಸನ್ನು 'ಹೇಮಂತ'ರು ಪಡೆದಿದ್ದಾರೆಂದು ನಿರ್ಭಯವಾಗಿ ಹೇಳಬಹುದು.

ಕನ್ನಡ ಕಾದಂಬರಿ ಅನೇಕ ರೀತಿಯಿಂದ ಮುಂದುವರೆದಿದ್ದರೂ, ಕಾಲೇಜು ಶಿಕ್ಷಣವನ್ನು ಪಡೆದ ಯುವಕ-ಯುವತಿಯರ ಆಶೋಕಾಂಕ್ಷೆಗಳನ್ನು—ಅವರ ಮನಸ್ಸನ್ನು—ತೆರೆದು ತೋರಿಸುವ ಸೂಕ್ಷ್ಮಕೆಲಸದಲ್ಲಿ ಅಷ್ಟು ಯಶಸ್ವಿಯಾಗಿಲ್ಲ. ನಮ್ಮ ದೇಶದಲ್ಲಿ ಈಗ ನಡೆಯುತ್ತಿರುವ ಅಭೂತಪೂರ್ವ ಘಟನೆಗಳ ಬಗ್ಗೆ ಒಬ್ಬ ಪ್ರಗತಿಶೀಲ, ಸುಶಿಕ್ಷಿತ ತರುಣಿಯ ಮನಸ್ಸಿನ ಪ್ರತಿಕ್ರಿಯೆ ಯಾವ ಬಗೆಯದಾಗಿದೆ ಎಂಬುದನ್ನು ಮೊದಲನೆಯ ಸಲ ಯಶಸ್ವಿಯಾಗಿ ಚಿತ್ರಿಸಿದ್ದರಲ್ಲಿಯೇ ಈ ಕಾದಂಬರಿಯ ವೈಶಿಷ್ಟ್ಯವಿದೆ. ಒಂದು ರೀತಿಯಿಂದ ಇಲ್ಲಿ ಎಚ್ಚೆತ್ತ ಹೊಸ ಯುವಪಿನ ತರುಣರ ಮನಸ್ಸೇ ಸೂಕ್ಷ್ಯವಾಗಿ ಚಿತ್ರಿತವಾಗಿದೆಯೆನ್ನಬಹುದು.

ಈ ಕಾದಂಬರಿಯ ತಂತ್ರ ಕನ್ನಡಕ್ಕೆ ಹೊಸದು. ಇದನ್ನು ಮನೋವಿಶ್ಲೇಷಣಾತ್ಮಕ ಕಾದಂಬರಿಯೆಂದು ಕರೆಯಬಹುದು. ಪಾತ್ರಗಳ ಮನೋವಿಶ್ಲೇಷಣೆಯೇ ಈ ಕಾದಂಬರಿಯಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಕಥಾವಸ್ತು ತೀರ ಕಡಿಮೆ: ಶೀಲೆ ಕಾಲೇಜಿನಲ್ಲಿ ಓದುತ್ತಿರುವ ಧ್ಯೇಯನಿಷ್ಠ ವಿದ್ಯಾರ್ಥಿನಿ. ಅದೇ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿರುವ ಜೋಶಿ ಎಂಬ ತರುಣ ತನ್ನ ಶುದ್ಧ ನಡೆವಳಿ, ಬುದ್ಧಿಶಕ್ತಿ, ಧ್ಯೇಯನಾದಿತ್ವಗಳಿಂದ ಶೀಲೆಯ ಮನಸ್ಸನ್ನು ಸೆಳೆಯುತ್ತಾನೆ. ಅವರ ಸ್ನೇಹ ಕ್ರಮೇಣ ಶುದ್ಧ ಪ್ರೇಮದಲ್ಲಿ ಪರಿವರ್ತನೆ ಹೊಂದುತ್ತದೆ. ತಂದೆ-ತಾಯಂದಿರ ಆಗ್ರಹ, ಮನೆಯ ಬಡತನದ ಪರಿಸ್ಥಿತಿ ಇವುಗಳ ಮೂಲಕವಾಗಿ ಜೋಶಿ ಶ್ಯಾಮು, ತನಗೆ ಬೇಡವಾಗಿದ್ದರೂ ತಂದೆ ಹುಡುಕಿದ ಹೆಣ್ಣನ್ನು ವರಿಸಬೇಕಾಗುತ್ತದೆ. ಶ್ಯಾಮನೊಡನೆ ಪ್ರೇಮಭಂಗವಾದ ಮೇಲೆ, ಶೀಲೆಗೆ ಮೊದಲೇ ಪರಿಚಯವಿದ್ದ ಜಾಗಿರದಾರ ಎಂಬ ಯುವಕ ಡಾಕ್ಟರನಲ್ಲಿ ಪ್ರೀತಿ ಬೆಳೆಯಲಾರಂಭಿಸುತ್ತದೆ. ಈ ಪ್ರೀತಿಗೆ ಮೂಲ ಹೆಚ್ಚಾಗಿ ಜಾಗಿರದಾರನ ದೇಹಸೌಂದರ್ಯವೇ ಆಗಿರುತ್ತದೆ. ತಾನು ಮೆಚ್ಚಿದ ಶ್ಯಾಮನಿಂದ ದೂರವಾದ ಅವಳ ಹೆಣ್ಣುಹೃದಯ, ಜಾಗಿರದಾರನಲ್ಲಿಯೇ ಕೆಲವು ಉದಾತ್ತ ಗುಣಗಳನ್ನು ಕಾಣುತ್ತದೆ. ಆದರಂತೆ ಅವಳು ಅವನನ್ನು ವರಿಸುವ ನಿಶ್ಚಯವನ್ನೂ ಮಾಡುತ್ತಾಳೆ. ತನ್ನ ಆದರ್ಶದ ಸಲುವಾಗಿ ದೇಹವನ್ನೇ ತ್ಯೆಯಲು ಹಿಂದುಮುಂದು ನೋಡದ ಆದರ್ಶ ಸ್ತ್ರೀ ಶೀಲೆ. ಆದರೆ ಜಾಗಿರದಾರನದು ತನ್ನ ಐಷಾರಾಮು ಎಲ್ಲ ತೀರಿ ಉಳಿದ ಮೇಲೆಯಲ್ಲಿ ಸಾಧ್ಯವಿದ್ದನ್ನು ತ್ಯಾಗ ಮಾಡುವ ಪ್ರವೃತ್ತಿಯ ಮನಸ್ಸು ಹೀಗೆ ಅವರ ಮನಸ್ಸಿನ ರೀತಿಗಳಲ್ಲಿಯೇ ಮೂಲಭೂತ ಭೇದಗಳಿದ್ದುದರಿಂದ, ಶೀಲೆಗೆ ಅವನೊಡನೆ ಕೂಡಿ ಬಾಳುವುದು ಕೂಡ ಅಸಾಧ್ಯವಾಗುತ್ತದೆ. ಇಷ್ಟೇ ಅಲ್ಲದೆ ಜಾಗಿರದಾರನ ಕಾಮುಲಾಲಸೆಯ ಮೂಲಕ ಇಬ್ಬರಲ್ಲಿಯೇ ಶೀಲೆ ಗರ್ಭವತಿಯಾದ ಲಕ್ಷಣಗಳು ಕಂಡುಬಂದು, ಜನರು ಆಡಿಕೊಳ್ಳುವುದಕ್ಕೂ ಕೂಡ ಆರಂಭವಾಗುತ್ತದೆ. ಇದನ್ನೆಲ್ಲ ತಡೆಯಲಾಗದ ಶೀಲೆಗೂ, ಜಾಗಿರದಾರನಿಗೂ ಮನೆಯಲ್ಲಿ ವಾಗ್ಯುದ್ಧಗಳು ನಡೆಯುತ್ತವೆ. ಇಂತಹ ಒಂದು ಕಲಹದಲ್ಲಿಯೆ ಜಾಗಿರದಾರ ಶೀಲೆಯನ್ನು ಬಿಟ್ಟು ತನ್ನ ಊರಿಗೆ ಹೋಗಿ ಬಿಡುತ್ತಾನೆ ಹೀಗೆ ಎಲ್ಲ ಕಡೆಯಿಂದಲೂ ನಿರಾಶೆ ಶೀಲೆಯನ್ನು ಮುತ್ತುತ್ತದೆ. ಇದೆಲ್ಲ ನಡೆದಾಗ ಶ್ಯಾಮು ಗಡಿಪಾರಿನ ರಾಜಕೀಯ ಆಂದೋಲನದಲ್ಲಿ, ಮನೆಯನ್ನು ತೊರೆದು ಧುಮುಕಿ ಬಿಟ್ಟಿರುತ್ತಾನೆ ಕೊನೆಗೆ ಒಂದು ದಿವಸ, ರಾಜಕೀಯ ಅಪರಾಧಗಳಿಗಾಗಿ ಪೋಲೀಸರಿಂದ ಹಿಂಬಾಲಿಸಲ್ಪಟ್ಟ ಶ್ಯಾಮು, ಶೀಲೆಯ ಮನೆಗೆ ಬಂದು ಅಲ್ಲಿಯೇ ಪ್ರಾಣಬಿಡುತ್ತಾನೆ.

ಇದು ಕಾದಂಬರಿಯ ಕಥಾವಸ್ತು. ಮೇಲೆ ಹೇಳಿದಂತೆ ಕಥಾವಸ್ತುವಿಗಿಂತ ಪಾತ್ರಗಳ ಮನೋವಿಭಜನೆಗೆ ಈ ಕಾದಂಬರಿಯಲ್ಲಿ ಪ್ರಾಧಾನ್ಯ. ಕಾದಂಬರಿಯ ಮುಖ್ಯ ವ್ಯಕ್ತಿ ಶೀಲೆ. ಶೀಲೆಯ ಪಾತ್ರದ ರಚನೆ, ಬೆಳವಣಿಗೆಗಳಲ್ಲಿಯೇ ಕಾದಂಬರಿಕಾರರ ಹಿರಿಮೆ ಕಂಡುಬರುತ್ತದೆ. ಅವಳ ವ್ಯಕ್ತಿತ್ವ ನಮ್ಮ ಮುಂದೆಯೆ ಅರಳುವುದನ್ನು ಚಿತ್ರಿಸುವುದರಲ್ಲಿ ಕಾದಂಬರಿಕಾರರು ಸಂಪೂರ್ಣ ಯಶಸ್ವಿಯಾಗಿದ್ದಾರೆ. ಶೀಲೆ ಭಾವನಾಜೀವಿ. ಚಿಕ್ಕಂದಿನಿಂದಲೂ ಆಕೆಯಲ್ಲಿ ಸ್ವದೇಶಾಭಿಮಾನ, ತ್ಯಾಗಬುದ್ಧಿಗಳು ಮನೆಮಾಡಿರುತ್ತವೆ. ಇದಕ್ಕೆ ಕಾರಣ ಅವಳ ಮನೆಯ ವಾತಾವರಣ. ಶೀಲೆಯ ತಂದೆಯಾದ ಡಾಕ್ಟರ್ ಕೃಷ್ಣರಾಯರು

ಉತ್ಕಟ ಸ್ವದೇಶಾಭಿಮಾನಿಗಳು. ಇವರಿಂದಲೇ ಆಕೆಯಲ್ಲಿ ಧ್ಯೇಯ ಸಾಧನೆಗಾಗಿ ದುಡಿಯಬೇಕೆಂಬ ಹಂಬಲು ಬಲಗೊಳ್ಳುತ್ತದೆ. ಇವಳು ಪ್ರೀತಿಸುವ ಶ್ಯಾಮನಿಂದಲಾದರೂ ಈಕೆಯ ಮನಸ್ಸು ಇನ್ನಿಷ್ಟು, ಸುಸಂಸ್ಕೃತವಾಗುತ್ತದೆ. ಕಾಲೇಜಿನಲ್ಲಿದ್ದು ಇವರಿಬ್ಬರ ಗುರುಗಳಾದ ಪ್ರೊ. ಕಾಮತರೂ ಕೂಡ ಈಕೆಯಲ್ಲಿರುವ ಜ್ಞಾನಲಾಲಸೆ, ಕರ್ತವ್ಯಬದ್ಧಿಗಳನ್ನು ಜಾಗೃತಗೊಳಿಸಲು ಸಹಾಯವಾಗುತ್ತಾರೆ. ಕಾಗಿದ್ದ ಕಾಲೇಜು ಶಿಕ್ಷಣವನ್ನೇ ಸರಿಯಾಗಿ ಉಪಯೋಗಿಸಿಕೊಂಡರೆ, ಯಾವ ಬಗೆಯ ವ್ಯಕ್ತಿತ್ವವನ್ನು ನಮ್ಮ ಸಮಾಜದ ಸ್ತ್ರೀಯರು ಹೊಂದಬಹುದು ಎಂಬುದಕ್ಕೆ ಶೀಲೆ ಉತ್ತಮ ನಿದರ್ಶನ. ಅವಳ ಗೆಳತಿಯಾದ ಸುಧೆಯೊಡನೆ ಹೋಲಿಸಿ ನೋಡಿದರೆ ಶೀಲೆಯ ವ್ಯಕ್ತಿತ್ವದ ಹಿರಿಮೆ ಇನ್ನಿಷ್ಟು ನಿಚ್ಚಳವಾಗುತ್ತದೆ. ತನ್ನ ಪ್ರೇಮಲವಾದ ಸ್ವಭಾವ, ಉದಾತ್ತ ಗುಣಗಳಿಂದ ಶೀಲೆ ಕೊನೆಯವರೆಗೂ ಓದುಗರನ್ನು ಮೆಚ್ಚಿಸುತ್ತಾಳೆ. ಕೊನೆಗೆ ದಾರುಣವಿಧಿ ತನ್ನ ಜೀವನದ ಆಶಯವನ್ನೇ ಭಗ್ನಮಾಡಲು, ಓದುಗರ ಸಹಾನುಭೂತಿಯನ್ನೂ ಕಣ್ಣೀರಿನ ಕಾಣಿಕೆಯನ್ನೂ ಪಡೆಯುತ್ತಾಳೆ.

ಶೀಲೆಗೆ ಪ್ರಿಯನಾದ ಶ್ಯಾಮು ಆದರ್ಶವಾದಿ ತರುಣ. ತನ್ನ ಗುರುಗಳಾದ ಪ್ರೊ. ಕಾಮತರಂಥ ಪ್ರಭಾವಶಾಲಿಯಾದ ವ್ಯಕ್ತಿಯ ನಿಕಟ ನಹವಾಸದಿಂದ ಅವನ ಧ್ಯೇಯವಾದಿತ್ವಕ್ಕೆ ಯೋಗ್ಯ ಪಾದಿ ದೊರೆಯುತ್ತದೆ. ಒಂದು ಕಡೆ ಶೀಲೆಯ ಪ್ರೇಮ; ಇನ್ನೊಂದು ಕಡೆ ಮನೆಯ ಪ್ರತಿರೋಧಕ ವಾತಾವರಣ, — ಇವುಗಳಲ್ಲಿ ಅವನು ಸಿಕ್ಕು ಗಾಸಿಗೊಳ್ಳುವುದು ಬಹು ಸಾರ್ವಕಾಲಿಕವಾಗಿ ಚಿತ್ರಿತವಾಗಿದೆ. ಕೊನೆಗೆ ಒಪುಶಃ ಎಲ್ಲ ಆದರ್ಶವಾದಿ ತರುಣರಂತೆ ತಂದೆ-ತಾಯಂದಿರ ಮಾತನ್ನು ವಿಚಾರಿಸಿ, ಅವರು ಹೇಳಿದ ಹೆಣ್ಣನ್ನು ವರಿಸಬೇಕಾಗುತ್ತದೆ. ತನ್ನ ಪ್ರೇಮ ಭಗ್ನವಾದರೂ ನಿರಾಶನಾಗದೆ, ಸ್ವಾತಂತ್ರ್ಯಸಮರದಲ್ಲಿ ಧುಮುಕಿ ಕೊನೆಗೆ ತನ್ನ ಧ್ಯೇಯಸಾಧನೆಯಲ್ಲಿಯೇ ಆತ್ಮಾರ್ಪಣೆ ಮಾಡುವುದರಿಂದ, ಅವನು ಇಂದಿನ ತರುಣರೆಲ್ಲರಿಗೆ ಆದರ್ಶನಾಗಿದ್ದಾನೆ.

ಕಾದಂಬರಿಯ ಮೊದಲಿನ ಅರ್ಧಭಾಗದಲ್ಲಿ ಶೀಲೆ-ಶ್ಯಾಮರ ನಿಷ್ಕಲ್ಮಷಪ್ರೇಮದ ವಿಕಾಸ ಚಿತ್ರಿತವಾಗಿದೆ. ಇವರ ಪ್ರೇಮ ಕಾಮಪ್ರೇರಿತವಲ್ಲ; ಆದರ ಸುಳುವು ಕೂಡ ಕೊನೆಯವರೆಗೂ ಇಲ್ಲ. ಇವರ ಜೀವನದ ಉದಾತ್ತ ಧ್ಯೇಯ ಇವರ ಹೃದಯಗಳನ್ನು ಬೆಸೆದು ಇವರ ಪ್ರೀತಿಯನ್ನು ಸಾಮಾನ್ಯವಾಗಿ ಕಂಡುಬರುವ ಎತ್ತರಕ್ಕೆ ಒಯ್ಯುತ್ತದೆ. ಇದಕ್ಕೆ ವಿರುದ್ಧವಾಗಿ ಇನ್ನೊಂದು ಕಡೆ ಶೀಲೆ-ಜಾಗಿರದಾರರ ಪ್ರೇಮದ ಮೂಲ ದೈಹಿಕ ಆಕರ್ಷಣೆಯಲ್ಲಿದೆ. ಮುಂದೆ ಇದು ಸ್ವಲ್ಪ ಶುದ್ಧ ಪ್ರೀತಿಯ ಹಂತವನ್ನೇರಿದರೂ ಶೀಲೆ-ಶ್ಯಾಮರ ಉದಾತ್ತಪ್ರೇಮಕ್ಕೆ ಸರಿದೂರೆಯಾಗಲಾರದು. ಹೀಗೆ ಈ ಕಾದಂಬರಿಯಲ್ಲಿ ಪ್ರೀತಿಯ ಎರಡು ರೀತಿಗಳನ್ನು ಒಂದರ ಮಗ್ಗುಲಲ್ಲಿ ಒಂದನ್ನಿಟ್ಟದ್ದರಿಂದ, ಶುದ್ಧ ಪ್ರೇಮದ ಘನತೆ ಎದ್ದು ತೋರುತ್ತದೆ.

ಕಾದಂಬರಿಯ ಉತ್ತರಾರ್ಧದಲ್ಲಿ ಇನ್ನೊಂದು ವಿಷಯ ಓದುಗರ ಮನ ಸೆಳೆಯುತ್ತದೆ ಅದೆಂದರೆ ಗಳತರ ರಾಜಕೀಯ ಆಂದೋಲನ. ಈ ಆಂದೋಲನವೇ ಶ್ಯಾಮನ ಹೊಯ್ದಾಡುವ ಮನಸ್ಸನ್ನು ಕೊನೆಯ ದೃಢನಿರ್ಧಾರಕ್ಕೆ ಒಯ್ಯುತ್ತದೆ. ಇಲ್ಲಿ ಬರುವ ರಾಜಕೀಯ ಹಿನ್ನೆಲೆ ಬಹಳ ಪ್ರಭಾವಶಾಲಿಯಾಗಿದೆ. ಅದು ಶೀಲೆಯ ಮನಸ್ಸಿನ ಮೇಲೆ ಎಷ್ಟು ಪರಿಣಾಮ ಮಾಡುವುದೋ ಅಷ್ಟೇ ಓದುಗರ ಮೇಲೆಯೂ ಮಾಡುತ್ತದೆ. ಈ ಆಂದೋಲನವನ್ನು ಚಿತ್ರಿಸಿರುವ ಪ್ರಖರವಾದ ರೀತಿ, ನಮ್ಮ ಸುತ್ತಮುತ್ತಲಿನ ಪ್ರದೇಶದಲ್ಲಿ ನಡೆದ ವಾಸ್ತವ ಸಂಗತಿಗಳನ್ನು ಹೊಸ ಬೆಳಕಿನಲ್ಲಿ ತೋರಿಸುತ್ತದೆ. ಗಳತರ ರಾಜಕೀಯ ಚಳವಳಿ ಇಷ್ಟೊಂದು ಪ್ರಭಾವಶಾಲಿಯಾಗಿ ಚಿತ್ರಿತವಾದುದು ಕನ್ನಡ ಕಾದಂಬರಿಗಳಲ್ಲಿ ಕಡಮೆ.

'ಹೇಮಂತ'ರು ತರುಣ ಕವಿಗಳು; ಆಂತೆಯೇ ಈ ಕಾದಂಬರಿಯಲ್ಲಿ ಅಲ್ಲಲ್ಲಿ ಸುಂದರ ವರ್ಣನೆಗಳು ಕಂಡುಬರುತ್ತವೆ. ಆದರೆ, ಮನಸ್ಸಿನ ಸೂಕ್ಷ್ಮವಾದ ಪರಿಣಾಮಗಳನ್ನು ಬಿಡಿಬಿಡಿಯಾಗಿ ತೋರಿಸುವುದರಲ್ಲಿಯೆ ಕಾದಂಬರಿಕಾರರ ವರ್ಣನಾ ನೈಪುಣ್ಯವಿದೆ. ಶೀಲೆಯ ಶಪಥವಿಲ್ಲದ ವಿಚಾರವಾಹಿನಿಯನ್ನು, ಶೀಲೆ-ಶ್ಯಾಮರ ಮನಸ್ಸಿನ ತಾಕಲಾಟವನ್ನು ಸೂಕ್ಷ್ಮವಾಗಿ ಚಿತ್ರಿಸುವುದರಲ್ಲಿ ಕಾದಂಬರಿಕಾರರ ಮನೋವಿಶ್ಲೇಷಣಾ ಶಕ್ತಿ ಸ್ಪಷ್ಟವಾಗಿ ತೋರುತ್ತಿದೆ. ಕಾದಂಬರಿಯ ಶೈಲಿ ಸಹಜವಾಗಿ ಸರಳವಾಗಿ, ತೊರೆಯಂತೆ ಕಾದಂಬರಿಯ ಉದ್ದಕ್ಕೂ ಹರಿದಿದೆ. ಒಂದೇ ಸವನೆ ಹರಿಯುತ್ತಿರುವ ವಿಚಾರಪ್ರವಾಹಕ್ಕೆ ಇವರ ಶೈಲಿ ಅನುಗುಣವಾಗಿಯೆ ಇದೆ.

ಇಂತಹ ಸ್ವಾರಸ್ಯಕರವಾದ ಕಾದಂಬರಿಯನ್ನು ಕನ್ನಡಕ್ಕೆ ಒದಗಿಸಿಕೊಟ್ಟ 'ಹೇಮಂತ'ರು ಕನ್ನಡಿಗರ ಅಭಿನಂದನೆಗೆ ಪಾತ್ರರಾಗಿದ್ದಾರೆ. ಇನ್ನೂ ಅನೇಕ ಹೊಸಬಗೆಯ ಕಾದಂಬರಿಗಳನ್ನು ಇವರು ಕನ್ನಡಕ್ಕೆ ನೀಡಲಿ ಎಂದು ಹಾರೈಸಬಹುದಾಗಿದೆ.

—ಜಿ. ಡಿ. ಸಾಡಕರ್, ಬಿ.ಎ. (ಆನರ್ಸ್),
ವಿಲಿಂಗ್ಡನ್ ಕಾಲೇಜ್, ಸಾಂಗಲಿ

ಪೂರ್ವ ಕರ್ನಾಟಕದ ಮಹಾಪರಿಷತ್ತು, ಉರವಕೊಂಡ

(ಪರಿಷತ್ತಿನ ಪ್ರಕಟಣಾಶಾಖೆಯಿಂದ)

ಕರ್ನಾಟಕದ ಪೂರ್ವಮೇರೆಯಾದ ಪೂರ್ವಘಟ್ಟಗಳ ಈಡೆಗೆ ಇರುವ ಪೂರ್ವಕರ್ನಾಟಕಕ್ಕೆ ಒದಗಿರುವ ಶೋಚನೀಯ ಪರಿಸ್ಥಿತಿಯನ್ನು ನಿವಾರಿಸಿಕೊಳ್ಳಲು, ತನ್ನ ಭಾಷೆ-ಸಂಸ್ಕೃತಿ-ಕಲೆಗಳ ಸಂರಕ್ಷಣೆಯ ಉದಾತ್ತ ಉದ್ದೇಶದಿಂದ ಪ್ರೇರಿತರಾದ ಅಲ್ಲಿಯ ಕನ್ನಡಿಗರು, ಇದೇ ಮಾರ್ಚ್ ದಿನಾಂಕ ೨-೩ನೆಯ ಆದಿತ್ಯವಾರ ಸೋಮವಾರಗಳಲ್ಲಿ, ಉರವಕೊಂಡದಲ್ಲಿ, ಅತಿ-ಪೂರ್ವದ ಪುಂಗನೂರು, ಚಂದ್ರಗಿರಿ, ಮದನಪಲ್ಲಿ, ಕಡಪಾ, ಪ್ರದಟೂರು, ನಂದ್ಯಾಲ, ಕರ್ನೂಲು, ಪತ್ತಿಕೊಂಡ, ಮಡಕಸಿರ, ಪೆನುಗೊಂಡ, ಹಿಂದುಪುರ, ಅನಂತಪುರ ಇತ್ಯಾದಿ ಕನ್ನಡ ಪ್ರದೇಶಗಳ ಪ್ರಾತಿನಿಧಿಕ ಪರಿಷತ್ತನ್ನು ಜರುಗಿಸುವುದಾಗಿ ಬಳ್ಳಾರಿಯ ಕನ್ನಡ ಮಹಾಜನರು ನಿರ್ಧರಿಸಿರುವರು.

ನೆರೆಯ ಪ್ರಾಂತದವರಾದ ಆಂಧ್ರರು ತಮ್ಮ ಜೋರಿನ ಜಳವಳಿಯಿಂದ ಈ ಪ್ರದೇಶದಲ್ಲಿ ಕನ್ನಡಿಗರ ಪಕ್ಕು-ಬಾಧ್ಯತೆಗಳನ್ನು ಈಗಾಗಲೆ ಹತ್ತಿಕ್ಕಿಬಿಟ್ಟಿರುವರು. ಪರನಾಡಿನವರ ಆಕ್ರಮಣ ಶೀಲತೆಯ— ಅನ್ಯೈಕ್ಯವನ್ನುಂಟುಮಾಡುವ— ಘೋರಣದಿಂದಾಗಿ, ಈ ಪ್ರದೇಶದ ಕನ್ನಡಿಗರಲ್ಲಿ ಅಂತರಿಕ ಒಕ್ಕಟ್ಟು ಏಕಭಾವ, ಹೊಂದಿಕೆಗಳು ಮಾಯವಾಗಿ, ಯಾವುದೇ ಗೆಲವು ಪ್ರಗತಿಗಳು ಕನ್ನಡಿಗರಿಗೆ ಸಾಧ್ಯವಾಗದೆ ಹೋಗುತ್ತಲಿವೆ. ಮದ್ರಾಸ್ ಪ್ರಾಂತದಲ್ಲಿ ವಿಶೇಷ ಬಡಲಾವಣೆಗಳು ನಡೆಯುತ್ತಿರುವುದರಿಂದ, ಈ ಮಹತ್ತ್ವದ ಸಮಯದಲ್ಲಿ ಪರಿಷತ್ತನ್ನು ರಚಿಸುವ ಆವಶ್ಯಕತೆಯು ಬಂದೊದಗಿದೆ.

ಮದ್ರಾಸ್ ಶಾಸನಸಭೆಯ ೨೧೬ ಜನ ಸದಸ್ಯರಲ್ಲಿ ೫-೬ ಜನ ಮಾತ್ರ ಕನ್ನಡ ಸದಸ್ಯರಿರುವುದರಿಂದ, ಆಳಿತದಲ್ಲಿ ಕನ್ನಡಿಗರು ಅಲ್ಪ ಸಂಖ್ಯಾಕರಾಗಿದ್ದು, ಅವರ ಕಷ್ಟ-ನಷ್ಟಗಳು ಸರಕಾರದ ದೃಷ್ಟಿಗೆ ಬೀಳುವುದಿಲ್ಲ; ಕಿವಿಗೆ ಕೇಳುವುದಿಲ್ಲ. ಬಿದ್ದುಕೇಳಿಯೂ ಕೂಡ ಅವುಗಳನ್ನು ದೂರಮಾಡಬೇಕೆಂದುಮದ್ರಾಸ್ ಸರಕಾರಕ್ಕೆ ಇದುವರೆಗೆ ಎನಿಸಿಲ್ಲ. ಕಾರಣ ಈ ಪರಿಷತ್ತಿನಲ್ಲಿ ನಾವು ಪುರಸ್ಕರಿಸುವ ನಿರ್ಣಯಗಳ ಮೂಲಕ ನಮ್ಮ ಉಜ್ವಲ ಭವಿಷ್ಯವನ್ನು ನಿರ್ಮಾಣ ಮಾಡಿಕೊಳ್ಳಬೇಕಾಗಿದೆ. ಆದರೆ ನೆರೆಯ ಪ್ರಾಂತದವರನ್ನು ದ್ವೇಷಿಸುವ ಬುದ್ಧಿ ನಮ್ಮಲ್ಲಿಲ್ಲ. ಆದರೂ ಪರಿಸ್ಥಿತಿಯು ಅವರಿಂದ ಹದಗೆಡುವುದಾದಾಗ ಮಾತ್ರ ಕನ್ನಡಿಗರು ಯಾವುದಕ್ಕೂ ಸಿದ್ಧರಾಗಬೇಕೆಂದು ನಾವು ಸ್ವಾತಂತ್ರ್ಯದ ಪಣ ತೊಟ್ಟಿದ್ದೇವೆ. ಈ ಗಂಭೀರ ಪರಿಸ್ಥಿತಿಯನ್ನರಿತೇ ಈ ಪರಿಷತ್ತನ್ನು ಕರೆಯಲಾಗಿದೆ. ಇದಕ್ಕೆ ಅಖಿಲ ಕರ್ನಾಟಕಸ್ಥರು ತಮ್ಮ ಆಳವಾದ ಅನುಭವ, ಸಲಹೆ, ಬೆಂಬಲಗಳನ್ನು ನೀಡಿ— ತಮ್ಮ ತಾಯ್‌ನಾಡಿಗೆ ಗೆಲವನ್ನು ತರುವರೆಂದು ನಾವು ನಂಬಿದ್ದೇವೆ.

ಒಂದು ಮಹತ್ತ್ವದ ಸಂಗತಿಯೆಂದರೆ ಉರವಕೊಂಡ ಸಂಸ್ಥಾನದ ನೂತನ ಅಧಿಕಾರವನ್ನು ಉಜ್ವಲ ಕನ್ನಡಿಗರೊಬ್ಬರು ವಹಿಸಿಕೊಳ್ಳುವರೆಂಬ ಸುದ್ದಿ ಪ್ರಕಟವಾದಾಗ, ಪೂರ್ವಕರ್ನಾಟಕದ ಕನ್ನಡಕೋಟೆಯ ಭದ್ರತೆಯನ್ನು ಕುರಿತು ಕನ್ನಡ ಜನಾಂಗವು ಕಂಡ ಹೊಂಗನಸು ಇಷ್ಟು ಬೇಗನೆ ನನಸಾದಂತೆ, ಈಗಿನ ಸಂಸ್ಥಾನಾಧಿಪತಿಗಳಾದ ಶ್ರೀ ಶ್ರೀ ಕರಿಬಸವರಾಜೇಂದ್ರರು ಪರಿಷತ್ತಿನ ವೆಚ್ಚವನ್ನು ಎಲ್ಲಾ ತಾವೇ ವಹಿಸಿಕೊಳ್ಳುವಂತೆ ಅಪ್ಪಣೆ ಯಿತ್ತುದಕ್ಕಾಗಿ, ಕನ್ನಡಿಗರೆಲ್ಲರೂ ಅವರಿಗೆ ಉಪಕೃತರೇ ಸರಿ. ಕನ್ನಡಿಗರೆಲ್ಲರ ಬರವನ್ನು ಹಾರಯಿಸುವೆವು.

ಜೋಳದರಾಶಿ ದೊಡ್ಡಗೌಡ ಕೊಗರಿ ಸರ್ವಮಂಗಳಾಂಬಾ
ಸ್ವಾಗತಾಧ್ಯಕ್ಷ ಬದನೇ ಹಾಳು ರಂಗನಗೌಡ
ಸ್ವಾ. ಸ. ಕಾರ್ಯದರ್ಶಿಗಳು

ಮೂರು ಉತ್ಕೃಷ್ಟ ಪುಸ್ತಕಗಳು !

೧. ಸಂಗೀತಾಚಾರ್ಯ— Music Master

೧ನೆಯಭಾಗ. ಲೇಖಕರು ಶ್ರೀ. ಎಸ್. ಎನ್. ರಾವ್, ಹರಿದಾಸ

ಶಾಸ್ತ್ರೀಕೃತ ಸಂಗೀತ ಹಾಗೂ ಹಾರ್ಮೋನಿಯಂ ಕಲಿಯುವವರಿಗೆ ಕೈದೀವಿಗೆಯಿದು. ಇದರಲ್ಲಿ ೨೦೦ಕ್ಕಾಗಿಯ ಪರಿಚಯವಿದ್ದು, ಪ್ರತಿಯೊಂದು ರಾಗಕ್ಕೆ ಉದಾಹರಣೆಯಾಗಿ ಕನ್ನಡ ಪದಗಳಿವೆ ೧೫೦ಪುಟ; ಬೆಲೆ ೧-೪-೦.

೨. ಸಂಸಾರಸುಖ— The Pleasures of live

ಲೇಖಕರು: ಶ್ರೀ. ಹನುಮಂತರಾವ ದೇಶಪಾಂಡೆ

ಜೀವನಕಲೆ, ಸಾಹಿತ್ಯಕಲೆ, ಶಿಕ್ಷಣ-ಸಂಗೀತ-ಚಿತ್ರಕಲೆ, ರಾಜಕೀಯ ಮುಂತಾದ ೩೩ ಸಮೋತ್ಕೃಷ್ಟ ಪ್ರಬಂಧಗಳ ಸಂಗ್ರಹ. ೨೦೦ ಪುಟಗಳು. ಬೆಲೆ ೧-೪-೦.

೩. ವೀರ್ಯವಿಜಯ ಅಥವಾ ಬ್ರಹ್ಮಚರ್ಯವ್ರತ ಬಲಿಷ್ಠ ಸೃಷ್ಟಿ

ಲೇಖಕರು: ಡಾ. ಸ್ವಾಮಿ ಚಂದ್ರಶೇಖರ ಅವರು

ಲೈಂಗಿಕ ವಿಜ್ಞಾನದ ಹಲವು ಉಪಯುಕ್ತ ವಿಚಾರಗಳನ್ನು ಒಳಗೊಂಡ ಪುಸ್ತಕ. ೧೦೮ ಪುಟಗಳು. ಬೆಲೆ ೧-೪-೦.

ಈ ಮೂರು ಪುಸ್ತಕಗಳಿಗಾಗಿ ಒಟ್ಟು ೩-೧೨-೦ ಮ. ಆ. ನಿಂದ ಕಳುಹಿಸಿದಲ್ಲಿ, ನಮ್ಮ ವೆಚ್ಚದಿಂದ ರಜಿಸ್ಟರ್ ಮಾಡಿ ಕಳುಹುತ್ತೇವೆ. ವ್ಯಾಪಾರಿಗಳಿಗೆ ಕೈತುಂಬ ಕಮಿಶನ್.

ಬೇರೆ ಯಾವ ಪುಸ್ತಕ ಬೇಕಾದರೂ ನಮಗೆ ಬರೆಯಿರಿ

ರಾಮಾಶ್ರಯ ಬುಕ್‌ಡಿಪೊ, ಧಾರವಾಡ

ಸಾದರ ಸ್ವೀಕಾರ

*

೧೩೬. ಋಣಿಯುದ ಹಾದಿಯಲ್ಲಿ (ಸ್ವತಂತ್ರ ಸಾಮಾಜಿಕ ಕಾದಂಬರಿ) ಬರೆದವರು ಶ್ರೀ. ಎಸ್. ಅನಂತನಾರಾಯಣ ಅವರು. ಮೈಸೂರಿನ ಉಷಾ ಸಾಹಿತ್ಯಮಾಲೆಯ ೨ ನೆಯ ಕುಸುಮ. ಕ್ರೌ. ಅ. ೧೫೪ ಪುಟಗಳು. ಬೆಲೆ ೧-೧೭-೦.

೧೩೭. ಕೇಸರಿ (ನೂತನ ಕನ್ನಡ ಮಾಸಪತ್ರಿಕೆ). ಸಂಪಾದಕರು ಮತ್ತು ಪ್ರಕಾಶಕರು: ಶ್ರೀಮಾನ್ ಆರ್. ಎಸ್. ನಾರಾಯಣ, ೧೨ ಕಾಲಪ್ಪನ ಬ್ಲಾಕ್, ಬಸವನಗುಡಿ, ಬೆಂಗಳೂರು ಸಿಟಿ. ಡೆ. ಅ. ೪೦ ಪುಟಗಳು. ವಾ. ಚಂದಾ ೩-೦-೦ ಬಿಡಿ ಸಂಚಿಕೆಗೆ ೦-೪-೦.

ಹೊಳಪಿನ ಹಾಳೆ, ಮುದ್ದಾದ ಮುದ್ರಣ, ರಾಜಕೀಯ ಸಮಾಲೋಚನಾತ್ಮಕ ಮತ್ತು ಸಾಹಿತ್ಯಕ ಲೇಖನ ಇವುಗಳಿಂದ ಪತ್ರಿಕೆ ಎಲ್ಲರಿಗೂ ಮೆಚ್ಚಿಕೆಯಾಗುವಂತಿದೆ. ಕನ್ನಡ ವಾಚಕ ಲೋಕ ಪ್ರೀತಿಯಿಂದ ಸ್ವಾಗತಿಸಿ, ಕೇಸರಿಯ ಕಾರ್ಯವನ್ನು ಪುರಸ್ಕರಿಸಬೇಕು.

೧೩೮. ಸತ್ಯದೇವಚರಿತೆ (ಪದ್ಯಮಯ ಸತ್ಯನಾರಾಯಣ ವ್ರತದ ಕಥೆ). ಬರೆದವರು ಶ್ರೀ. ಗಮಕಿ ಎಂ. ರಾಘವೇಂದ್ರ ರಾವ್, ಬೆಂಗಳೂರು ನಗರ. ಪ್ರಕಾಶಕರು ಶ್ರೀ. ಎಂ. ಎಸ್. ರಂಗಪ್ಪ, ಸರ್ಕಾರಿ ಪುಸ್ತಕ ವ್ಯಾಪಾರಿಗಳು, ಅರ್ಕಾಟ ಶ್ರೀನಿವಾಸಾಚಾರ್ಯರ ಬೀದಿ—ಬೆಂಗಳೂರು ಸಿಟಿ. ಕ್ರೌ. ಅ. ೬೬ ಪುಟಗಳು. ಬೆಲೆ ೦-೬-೦.

೧೩೯. ಶ್ರೀವ್ಯಾಸರಾಯ ಮಹಾತ್ಮೆ (ಕನ್ನಡ ಪದ್ಯ ಕೃತಿ). ಬರೆದವರು ಶ್ರೀ. ಗಮಕಿ ಎಂ. ರಾಘವೇಂದ್ರರಾವ್ ಬೆಂಗಳೂರು ನಗರ. ಪ್ರಕಾಶನ ಸ್ಥಳ: ಶ್ರೀರಘುವರ ನಿಲಯ, ಸವಿಾರಪುರ, ಚಾಮರಾಜ ಪೇಟೆ—ಗುಟ್ಟಹಳ್ಳಿ, ಬಸವನ ಗುಡಿ ಪೋಸ್ಟು, ಬೆಂಗಳೂರು ನಗರ.

೧೪೦. ಅಡ್ಡಾದಿಡ್ಡಿ (ವ್ಯಂಗ್ಯ ಪ್ರಬಂಧ ಸಂಕಲನ). ಬರೆದವರು ಶ್ರಿಮಾನ್ ನಾಡಿಗೇರ ಕೃಷ್ಣರಾಯರು. ಪ್ರಕಾಶಕರು: ಎಸ್. ಎಸ್. ಎನ್. ಬುಕ್‌ಡಿಪೊ, ಹೊಸ ಮಾರ್ಕೆಟ್ — ಬೆಂಗಳೂರು ನಗರ. ರೊಯಲ್ ಅ. ೧೦೦ ಪುಟಗಳು. ಬೆಲೆ ೧-೦-೦.

೧೪೧. ಬೇಬಿ ಮತ್ತು ಇತರ ಚಿತ್ರಗಳು (೧೪ ವ್ಯಂಗ್ಯ ವ್ಯಕ್ತಿ ಚಿತ್ರಗಳು). ಬರೆದವರು ಶ್ರೀಮಾನ ಎನ್. ಸೂರಪ್ಪ ಚಿತ್ರದುರ್ಗ. ಪ್ರಕಾಶಕರು ಎಸ್. ಎಸ್. ಎನ್. ಬುಕ್‌ಡಿಪೊ, ಹೊಸ ಮಾರ್ಕೆಟ್—ಬೆಂಗಳೂರು ನಗರ. ಕ್ರೌ. ಅ. ೯೨ ಪುಟಿ. ತಳುಕಿನ ವೆಂಕಣ್ಣಯ್ಯನವರ ಸ್ಮಾರಕ ಗ್ರಂಥಮಾಲೆ ೩.

೧೪೨. Heritage of Karnataka (in Relation to India). ಬರೆದವರು ಪ್ರೊ. ಆರ್. ಎಸ್. ಮುಗುಳಿ, ಎಂ.ಎ., ಬಿ. ಟಿ. ವಿಲಿಂಗ್ಡನ್ ಕಾಲೇಜ್, ಸಾಂಗ್ಲಿ. ಪ್ರಕಾಶಕರು: ಸತ್ಯಶೋಧನ ಪಬ್ಲಿಷಿಂಗ್ ಹೌಸ್, ಫೋರ್ಟ್—ಬೆಂಗಳೂರು ಸಿಟಿ. ಕ್ರೌ. ಅ. ೨೨೨ ಪುಟಗಳು. ಬೆಲೆ ಸಾದಾ ೪-೦-೦. ಲೈಬ್ರರಿ ಪ್ರತಿಗೆ ೫-೦-೦.

೧೪೩. ಗಾಂಧೀವಾದದ ಪುನರ್ಯೋಚನೆ (ರಾಜಕೀಯ ಚರ್ಚಾತ್ಮಕ ಗ್ರಂಥ). ಮೂಲ ಇಂಗ್ಲಿಷ್ ಲೇಖಕರು ಪ್ರೊ. ಎಂ. ಎಲ್. ದಾತವಾಲಾ ಅವರು. ಭಾಷಾಂತರಕಾರರು ಶ್ರೀಮಾನ್ ತಲ್ಲೂರ ರಾಯನಗೌಡರು ಬಿ. ಎ. ಪುಸ್ತಕ ದೊರೆವ ಸ್ಥಳ: ಜನತಾ ಸೇವಕ ಸಮಾಜ-ಸಾಹಿತ್ಯಮಂಡಳ, ಬೈಲಹೊಂಗಲ; ಜಿಲ್ಲಾ ಬೆಳಗಾಂವಿ. ಕ್ರೌ. ಅ. ೧೮೦ ಪುಟಗಳು. ಬೆಲೆ ೧-೦-೦.

೧೪೪. ವನಿತಾ (ಮಾಸಪತ್ರಿಕೆ) ಸಂಪಾದಕರು ಶ್ರೀಮಾನ್ ಆರ್. ಕೆ. ಐಯಂಗಾರ್, ಶಾಂತಿ ಪ್ರೆಸ್, ಬೆಂಗಳೂರು ಸಿಟಿ. ಸಿಳ್ಳುವ ವಿಳಾಸ. ಸಂಪಾದಕ ಸುಗ್ಗಿಯ ಮೈಸೂರು (ವನಿತಾ ವಿಭಾಗ), ವಿಶ್ವೇಶ್ವರ ಪುರಂ, ಬೆಂಗಳೂರು ನಗರ. ಕ್ರೌ. ಅ. ೩೨ ಪುಟಗಳು. ವಾರ್ಷಿಕ ಚಂದಾ ೧-೪-೦. ಬಿಡಿ ಸಂಚಿಕೆಯ ಬೆಲೆ ೦-೨-೦.

೧೪೫. ಕಿತ್ತೂರ ಚೆನ್ನಮ್ಮ ರಾಣಿ ಇತಿಹಾಸ ಮಂಡಲದ ವರದಿ ಮತ್ತು ಘಟನೆ. ಕಾರ್ಯಾಧ್ಯಕ್ಷರು ಶ್ರೀ. ತಲ್ಲೂರ ರಾಯನಗೌಡರು ಬಿ ಎ. ಕಾರ್ಯದರ್ಶಿ ಶ್ರೀ ಜಿ. ಬಿ. ಹಂಚಿನಮನಿ, ಬೈಲ ಹೊಂಗಲ. ಡೆ. ಅ. ೩೨ ಪುಟಗಳು.

ಕಿತ್ತೂರ ಸಂಸ್ಥಾನಕ್ಕೆ ಸಂಬಂಧಿಸಿದ ಇತಿಹಾಸವನ್ನಲ್ಲದೆ ಇತರ ಲಿಂಗಾಯತ ರಾಜಮನೆತನ, ಸಂಸ್ಥಾನ, ಮತ್ತು ದೇಶಗತ್ತುಗಳ ಇತಿಹಾಸವನ್ನು ಸಂಶೋಧಿಸುವುದೂ, ಚೆನ್ನಮ್ಮ ರಾಣಿಯ ಸ್ಮಾರಕ ಮಾಡುವುದೂ, ಐತಿಹಾಸಿಕ ಅವಶೇಷಗಳನ್ನು ಸುರಕ್ಷಿತಗೊಳಿಸುವುದೂ, ಐತಿಹಾಸಿಕ ಗ್ರಂಥ, ಕಾವ್ಯ, ಜನಪದ ಸಾಹಿತ್ಯಗಳನ್ನು ಪ್ರಕಟಿಸುವುದೂ ಈ ಸಂಸ್ಥೆಯ ಮುಖ್ಯ ಉದ್ದೇಶವಾಗಿದೆ. ಕನ್ನಡಿಗರಲ್ಲಿ ಅಭಿಮಾನ ಹುಟ್ಟಿಸುವ ಎಲ್ಲ ಬಗೆಯ ಇತಿಹಾಸಗಳ ಸಂಶೋಧನೆ-ಸ್ಮಾರಕಗಳನ್ನು ಮಾಡುವುದಕ್ಕೆ ಹೊರಟ ಈ ಸಂಸ್ಥೆಗಳ ಕಾರ್ಯ ನಮಗೆ ಬೇಕಾಗಿದೆಯಾದರೂ, ಜಾತಿ ಮತ ಪಂಥಗಳ ವರ್ತುಲ ಹಾಕಿಕೊಂಡು ಹೊರಡುವ ಸಂಸ್ಥೆಗಳು ಕನ್ನಡಿಗರ ಹೃದಯದ ಹೊಂದಿಕೆಗೆ ಕಾರಣವಾಗವೆಂದು ನಮಗೆನಿಸುವುದು. ಕೊನೆಯ ಪುಟದಲ್ಲಿ 'ನಮ್ಮ ಗುರಿ' ಎಂಬುದರಲ್ಲಿ ೨ ಲಕ್ಷ ರೂಪಾಯಿಗಳನ್ನು ಕೂಡಿಸುವ ಸಂಕಲ್ಪವನ್ನು ಘೋಷಿಸಿದುದು ಸಂತೋಷದ ಸಂಗತಿ

ಅವರ ಪುಸ್ತಕವು ಇವ್ಯ ಜನಿಗಾಗಿ ೫೦೦೦ ರೂಪಾಯಿಗಳಿಂದ ಹಿಡಿದುದನ್ನು ನೋಡಿದರೆ. ಸ್ವಯೋಜನವಾದಿಗಳು ಈ ತೀಕ್ಷ್ಣ ಭಾವನಾವಾದವನ್ನು ಎಂದೂ ಒಪ್ಪಲಾರದಂತಿದೆ. ಇಂದಿನ ನಮ್ಮ ಕಾರ್ಯಕರ್ತರೆಲ್ಲ ಹಜ್ಜಾಗಿ ಪ್ರಯೋಜನವಾದಿಗಳು. ಈ ಮುಂಡಲದ ಕಾರ್ಯಾಧ್ಯಕ್ಷರೂ ಅಂತಹವರಲ್ಲಿ ಒಬ್ಬರು. ಆದುದರಿಂದ ಕೂಡಿಸುವ ತಿ ಲಕ್ಷದ ಪಣವನ್ನು, ದೇಶದ ವರ್ತಮಾನ-ಭವಿಷ್ಯ ಜೀವನದ ದಾರಿಗೆ ಬುತ್ತಿಯನ್ನೂ ಜೊಕನ್ನೂ ಒದಗಿಸಿಕೊಡುವಂತೆ ಮಾಡುವರೆಂದು ನಾವು ಹಾರಯಿಸೋಣ. ಸಂಸ್ಥೆಯ ಸದುದ್ದೇಶ ಸಫಲವಾಗಲಿ.

೧೪೬. ಮದ್ಯಪಾನ ನಿರೋಧಕ (ಮಾಸಪತ್ರಿಕೆಯ ವಿಶೇಷ ಸಂಚಿಕೆ) ಹೈದರಾಬಾದಿನ ಮದ್ಯಪಾನ ನಿರೋಧಕ ಕೇಂದ್ರದಿಂದ ಸಂಪಾದಿತವಾಗಿ ಪ್ರಕಟವಾದುದು. ಕ್ರಾ ೬೦ ಪುಟಗಳು.

ಮದ್ಯಪಾನ ನಿರೋಧನ ಪ್ರಚಾರಾತ್ಮಕವಾದ ಹಲವು ಲೇಖನಗಳೂ ವ್ಯಂಗ್ಯಚಿತ್ರಗಳೂ ಇದರಲ್ಲಿ ಪ್ರಕಟವಾಗಿವೆ. ಈ ಸಂಸ್ಥೆಯು ಕಾರ್ಯನಿರ್ವಾಹಕ ಸಂಸ್ಥೆಯಲ್ಲಿ ನೈಝಾಂ ಪ್ರಾಂತ್ಯದಲ್ಲಿಯು ಪ್ರತಿಷ್ಠಿತವಾಗಿದ್ದು. ಮುಸಲ್ಮಾನ್ ಸದ್ಗೃಹಸ್ಥರಿದ್ದು, ಶ್ರೀ. ಲಕ್ಷ್ಮಣರಾವ ಜಳಗೇರಿ ಎಂಬ ಕನ್ನಡಿಗರು ಕಾರ್ಯದರ್ಶಿಗಳಾಗಿರುವರು. ಅಧಿಪತ್ಯದ ಸಂಪೂರ್ಣ ಸಹಾಯವು ಈ ಸಂಸ್ಥೆಗೆ ಇದೆ. ಈ ಪಾನ ನಿರೋಧನ ಪ್ರಚಾರಕ ಕಾರ್ಯವು ಪ್ರಾಮಾಣಿಕವಾಗಿ ನಡೆದರೆ, ನೈಝಾಂ ರಾಜ್ಯದಲ್ಲಿ ನಿಜವಾಗಿಯೂ ಕುಡುಕರ ಸಂಖ್ಯೆ ಕಡಿಮೆ. ಯಾದೀತು; ಜನತೆಯಲ್ಲಿ ನೀತಿ ಸ್ವಾಸ್ಥ್ಯ ಬೆಳೆದೀತು.

೧೪೭. ನಳಪಾಕ (ಏಕಾಂಕ ನಾಟಕ ಸಂಗ್ರಹ). ಲೇಖಕರು: 'ಶ್ರೀವತ್ಸ'. ಪ್ರಕಾಶಕರು ಎಚ್. ಎನ್. ರಾವ್ ಬ್ರದರ್ಸ್, ಚಿಕ್ಕಪೇಟೆ, ಬೆಂಗಳೂರು ನಗರ. ಕ್ರಾ. ೮. ೬೪ ಪುಟಗಳು; ಬೆಲೆ ೦-೧೬-೦.

೧೪೮. ಗೋವೆಯಿಂದ ಜಲೀಜಾವ್ (ರಾಜಕೀಯ ಪುಸ್ತಕ) ಬರೆದವರು ಶ್ರೀ. ಶಂಕರ ಪಾತಕ. ಪ್ರಕಾಶಕರು ಜನತಾ ಸಾಹಿತ್ಯ, ಮುರಾತಾಗಲ್ಲಿ, ಹುಬ್ಬಳ್ಳಿ. ಕ್ರಾ. ಅ. ೧೨ ಪುಟ. ಬೆಲೆ ೦-೬-೦.

ಭಾರತದ ಮಿಕ್ಕ ಪ್ರದೇಶಗಳಂತೆ, ಪೋರ್ತುಗೀಸರ ಆಡಳಿತದಲ್ಲಿರುವ ಗೋವಾ ಪ್ರದೇಶದಲ್ಲಿಯೂ ಸ್ವಾತಂತ್ರ್ಯಸಾಧನೆಗಾಗಿ ಚಳವಳಿ ನಡೆದಿದೆ. ಈ ಪುಟ್ಟ ಪುಸ್ತಕ ಆ ಚಳವಳಿಯ ಪರಿಚಯ ಮಾಡಿಕೊಡಲು ಮುಂದೆ ಬಂದಿದೆ. ಎಲ್ಲರೂ ಓದಬೇಕು.

೧೪೯. ಎಚ್ಚೆತ್ತ ರೈತ (ಪ್ರಚಾರಾತ್ಮಕ ಪುಸ್ತಕ) ಬಿ. ದವರು ಬಂಧು ಕುಳಕುಂದ ಶಿವರಾಯರು. ಪ್ರಕಾಶಕರು ಜನತಾ ಸಾಹಿತ್ಯ, ಮುರಾತಾಗಲ್ಲಿ, ಹುಬ್ಬಳ್ಳಿ. ಕ್ರಾ. ಅ. ೧೬ ಪುಟಗಳು. ಬೆಲೆ ೦-೩-೦.

ಕಮ್ಯೂನಿಸ್ಟರ ದೃಷ್ಟಿಯಲ್ಲಿ ಭಾರತದ ರೈತರ ಜಾಗೃತಿಯನ್ನು ನಿವೇದಿಸಿದ ಕಿರುಹೊತ್ತಗೆಯಿದು.

೧೫೦. ಸೋವಿಯೆಟ್ ಭೂಮಿ (ಪರಿಚಯಾತ್ಮಕ ಗ್ರಂಥ) ಬರೆದವರು 'ಸಹಾತಿವ' ಪ್ರಕಾಶಕರು ಜನತಾಸಾಹಿತ್ಯ. ಮುರಾತಾಗಲ್ಲಿ, ಹುಬ್ಬಳ್ಳಿ. ಕ್ರಾ. ಅ. ೧೦ ಪುಟಗಳು. ಬೆಲೆ ೧-೪-೦.

೧೫೧. Consentration and Meditation (ಆಧ್ಯಾತ್ಮಿಕ ಗ್ರಂಥ-ಇಂಗ್ಲೀಷಿನಲ್ಲಿ) ಬರೆದವರು ಶ್ರೀಸ್ವಾಮಿ ಶಿವಾನಂದರು. ಪ್ರಕಾಶಕರು ದಿ ಶಿವಾನಂದ ಪಬ್ಲಿಕೇಶನ್ ಲೀಗ್ ಋಷಿಕೇಶ (ಹಿಮಾಲಯ). ಯೋಗಸಾಧನ ಸೀರೀಸ್ ನಂ ೮. ಕ್ರಾ. ಅ. ೪೭೮ ಪು. ಬೆಲೆ ೫—೦—೦.



R. No. B. 4116

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿ. ಧಾರವಾಡ

ಹೆಡ್ ಆಫೀಸ್ ಧಾರವಾಡ

★ ನಿಮೆ ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಭರದಿಂದ ಬೆಳೆಯುತ್ತಿರುವ ಈ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!

★ ಮೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.

★ ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಲಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸಿರುವುದರಿಂದ, ಎಲ್ಲರ ನಂಬಿಗೆಗೂ ತಕ್ಕುದಾಗಿದೆ.

★ ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಸಾಲುಗಳನ್ನೂ ಕೊಂಡುಕೊಳ್ಳಲೇಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ಮ್ಯಾನೇಜರ್
ಎಮ್. ಗೋವರ್ಧನರಾವ

ಮ್ಯಾನೇಜಿಂಗ್ ಡಾಯರೆಕ್ಟರ್
ವಿ. ಎಸ್. ಕಿಣಿ

ರೀಟಾ: ತಲೆಯ ಕೂದಲನ್ನು ಬೆಳೆಸುವುದು.

ರೀಟಾ ಮೆದುಳಿಗೆ ಶಕ್ತಿಯನ್ನು ಕೊಟ್ಟು, ಮಿರುಗುವ ನೀಳವಾದ ಕೂದಲನ್ನು ಬೆಳಸಲು ಅದ್ಭುತವಾದ ಹೇರ್ ಟಾನಿಕ್.

ರೀ ಟಾ

ತಲೆಯ ಕೂದಲು ಉದುರುವದು, ನೆರೆಯುವುದು, ಹೊಟ್ಟು, ಉದುರುವುದು, ಕಟ್ಟಿತಲೆ, ಹೇನಿನ ಬಾಧೆ, ಇವೇ ಮೊದಲಾದ ತಲೆಯ ಕೂದಲಿಗೆ ಸಂಬಂಧಿಸಿದ ಸಮಸ್ತ ವ್ಯಾಧಿಗಳಿಗೂ ರೀಟಾ ಅಮೋಘವಾದ ಗುಣಕಾರಿ.

ಈಗಾಗಲೆ ಸಾವಿರಾರು ಜನ ಉಪಯೋಗಿಸಿ ಗುಣವನ್ನು ಹೊಂದಿದ್ದಾರೆ. ನೀವು ಕೂಡ ಇಂದಿನಿಂದಲೇ ರೀಟಾವನ್ನು ಉಪಯೋಗಿಸಿರಿ.

RITA
HAIR TONIC

ರೀಟಾ ಹಿಂದುಸ್ತಾನದಲ್ಲೆಲ್ಲಾ ದೊರಕುವುದು. ಬೆಲೆ:— ಸೀಸೆ ೧ಕ್ಕೆ ೧ಜ ಆಣೆ.

Printed by Mr. V. Y. Jathar at the Karnatak Printing Works, Dharwar, and Published for the Proprietors Jayanti Publications, by M. V. Melligatti at the Jayanti Office, Dharwar.—9331-47.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಂಡು ಜೈಲುವಾಸ ಅನುಭವಿಸಿದ ಸ್ವಾತಂತ್ರ್ಯ ಹೋರಾಟಗಾರರಿಗೆ ಮಾಸಾಶನ ಮಂಜೂರಾತಿ ಪತ್ರವನ್ನು ಮಾನ್ಯ ಮುಖ್ಯಮಂತ್ರಿಗಳು ಆದ ಶ್ರೀಯುತರಾದ ಬಿ. ಡಿ. ಜತ್ತಿಯವರು ವಿತರಿಸುತ್ತಿರುವುದು

ಜಯಂತಿಯ ಹಿತಚಿಂತಕರಲ್ಲಿ

'ಇನ್ನೇನು ಯುದ್ಧ ನಿಂತಿತು; ಜಯಂತಿಯ ದಾರಿ ಸುಗಮವಾಗಿ ಸಾಗುವುದು' ಎಂದು ನಾವು ಭಾವಿಸಿದ್ದೇವು; ಆದರೆ ಯುದ್ಧಕಾಲದ ಪರಿಸ್ಥಿತಿಗಿಂತ ಇಂದಿನ ಯುದ್ಧೋತ್ತರ ಪರಿಸ್ಥಿತಿ ಭಾರತದಲ್ಲಿ ಘೋರವಾಗಿ ನಿಂತಿದೆ. ಆಹಾರ ಪದಾರ್ಥಗಳ ಬೆಲೆಯ ಮೇಲೆಯೆ ಮಿಕ್ಕೆಲ್ಲವುಗಳ ಬೇಟೆ ಅವಲಂಬಿಸಿರುತ್ತದೆ. ಇಂದು ಆಹಾರ ಪದಾರ್ಥಗಳ ಬೆಲೆ ಗಿಕ್ಕೆ ಳರಷ್ಟು ಏರಿದೆ; ಅದುದರಿಂದಲೆ ಪೇಜಿಯಲ್ಲಿಯ ಎಲ್ಲ ಪದಾರ್ಥಗಳ ಬೆಲೆಯೂ—ಹೆಚ್ಚು ಕಡಿಮೆ—ಇದೇ ಪ್ರಮಾಣದಲ್ಲಿ ಏರಿನಿಂತಿದೆ. ಕೆಲವು ಅತ್ಯಾವಶ್ಯಕ ಪದಾರ್ಥಗಳಂತೂ ಕತ್ತಲೆಯ ಬೇಟೆಯನ್ನೇ ಸೇರಿ ಕುಳಿತುದರಿಂದ, ಅವುಗಳನ್ನು ಪಡೆಯಲು ೧ಕ್ಕೆ ೧೦ರಷ್ಟು ಬೆಲೆ ಕೊಡಬೇಕಾಗುತ್ತಲಿದೆ. ಇಂತಹ ಪರಿಸ್ಥಿತಿಯಲ್ಲಿ ಮನುಷ್ಯ ಬದುಕಬೇಕಾಗಿರುವುದರಿಂದ, ಆತನ ದುಡಿತದ ಪಡೆತವೂ ಹೆಚ್ಚಬೇಕಾದುದು ಅನಿವಾರ್ಯ; ಅದುದರಿಂದ ಎಲ್ಲ ಕೆಲಸಗಾರರ ಸಂಬಳವನ್ನೂ ಹೆಚ್ಚಿಸಬೇಕಾದುದು ಅಗತ್ಯದ ವಿಷಯ.

ಇದರ ಪರಿಣಾಮವಾಗಿ ಧಾರವಾಡದಲ್ಲಿಯ ಮುದ್ರಣಾಲಯಗಳ ಮಾಲಕರು ಮುದ್ರಣದ ದರವನ್ನು ಮೊದಲಿಗಿಂತ ಮುಮ್ಮಡಿಯಷ್ಟು ಹೆಚ್ಚಿಸಿರುವರು. ಕಾಗದವನ್ನು ಸಂಪಾದಿಸಲಿಕ್ಕೂ ಮೊದಲಿಗಿಂತ ಹೆಚ್ಚು ಹಣ ವೆಚ್ಚ ಮಾಡಬೇಕಾಗುತ್ತಲಿದೆ. ಹೀಗಾಗಿ ಜಯಂತಿ, ಹಿಂದಿನ ಸಾಲದ ಹೊರೆಯನ್ನಲ್ಲದೆ ಈ ವರ್ಷದಲ್ಲಿ ಮತ್ತೆ ಅಂದರಿಂದ ೧೦೦೦ದ ವರೆಗೆ ಸುಮಾರು ನಷ್ಟದ ಹೊರೆಯನ್ನು ಹೊರಬೇಕಾಗಿ ಬಂದಿದೆ. ಭರಿಸಿರುವ ವರ್ಷದಲ್ಲಾದರೂ ಕಡಿಮೆ ಪಾತಾವರಣ ತಿಳಿಯಾದೀತೆಂದು ಹೇಳಲು ಬರುವಂತಿಲ್ಲ. ಸ್ವಾತಂತ್ರ್ಯಸಾಧನೆಗಾಗಿ ಭಾರತವು ಮಾಡಬೇಕಾಗಿರುವ ಯುದ್ಧವು ಹೊಗೆ ಇನ್ನೂ ನಮ್ಮನ್ನು ಉಸಿರು ಗಟ್ಟಿಸಬಹುದಾಗಿದೆ.

ಹಿಂದಿನ ನಷ್ಟ ಆದುದು ಆಗಿಹೋಗಿದೆ. ಮುಂದಿನ ದಿನಗಳಲ್ಲಾದರೂ ನಷ್ಟ ಸ್ವಲ್ಪ ಕಡಿಮೆಯಾಗಲೆಂಬ ಇಚ್ಛೆಯಿಂದ, ಜಯಂತಿಯ ಸ್ವೀಕರ್ಯವನ್ನೂ ಗಮನದಲ್ಲಿರಿಸಿಕೊಂಡು,

ನಾಲ್ಕಾಣೆ ಮಾತ್ರ ಚಂದಾ ಹಣ ಹೆಚ್ಚಿಸಲಾಗಿದೆ.

ಬರಲಿರುವ ಬಿಕ್ಕಟ್ಟನ್ನು ಲಕ್ಷ್ಯಿಸಿ ನೋಡಿದರೆ, ಈ ನಾಲ್ಕಾಣೆಯ ಹೆಚ್ಚಿಗೆ ತೀರ ಕಡಿಮೆಯೆಂದು ಯಾರಿಗೂ ತೋರದಿರದು. ಅಲ್ಲದೆ ಒಳಳ ಜನ ಹಿತಚಿಂತಕರ ಸಲಹೆಯಂತೆಯೆ ಈ ನಾಲ್ಕಾಣೆ ಚಂದಾ ಹೆಚ್ಚಿಸಲಾಗಿದೆ ನಮ್ಮ ಎಲ್ಲ ಚಂದಾದಾರರೂ ಇದನ್ನೆಲ್ಲ ಮನದಂದು, ಇನ್ನು ಮೇಲೆ ವಾರ್ಷಿಕ ಚಂದಾ ಹಣವನ್ನು M. O. ಮೂಲಕ ಕಳುಹುವಾಗ ೪ ರೂ. ೮ ಆಣೆಗಳನ್ನು ಕಳುಹಬೇಕಾಗಿ ಬೇಡಿಕೆ. ವಿದರಂತೆಯೆ V. P. ಯನ್ನು ಕಳುಹುವಾಗಲೂ ೪—೯—೦ + ಆಂಚೆಯಿಂ ನೆಚ್ಚ ೦—೪—೦, ಹೀಗೆ ೪ ರೂ. ೧೦ ಆಣೆಗೆ ಕಳುಹಲಾಗುವುದೆಂಬುದನ್ನು ಜ್ಞಾಪಕದಲ್ಲಿ ಇರಿಸಿಕೊಳ್ಳಬೇಕು

ಬೇಟೆಯ ಬಿಗಿತ ಸಡಲಾದರೆ, ಇದೇ ವರ್ಗಣಿಯಲ್ಲಿ ಇನ್ನಿಷ್ಟು ಪುಟಗಳನ್ನು ಹೆಚ್ಚಿಸಿ, ಬಾಹ್ಯಾಂಗವನ್ನು ಇನ್ನೂ ಸುಂದರಗೊಳಿಸಬೇಕೆಂಬ ವಿಚಾರವಿದೆ. ನಮ್ಮ ಹಿತಚಿಂತಕರಾದ ಚಂದಾದಾರರೆಲ್ಲ ಈ ಹೊಸ ವ್ಯವಸ್ಥೆಯನ್ನು ಒಪ್ಪಿಕೊಂಡು, ಎಂದಿನಂತೆ ಪ್ರೀತಿಯಿಂದ ಜಯಂತಿಯನ್ನು ಬರಮಾಡಿಕೊಳ್ಳಬೇಕಾಗಿ ವಿನಂತಿ.

ಸಂಪಾದಕ 'ಜಯಂತಿ' ಧಾರವಾಡ

ಮುಖ್ಯ ವಿಷಯಗಳು

ಸಣ್ಣ ಕತೆಗಳ ಮೇಲಾಟದ ವರದಿ
'ಸಂಪಾದಕ ಮಂಡಲಿಯಿಂದ' ೪೨೯

ಧರ್ಮ ಕೊಂಡಿದ ಕಥೆ
ಶ್ರೀ ಕೆ. ಎ. ಎಸ್. ರಾವ್, ಬನಾರಸ ೪೩೪

ತಿಮ್ಮಯ್ಯನವರ ಅಕಾರಣ ಮರಣ
ಶ್ರೀ ಎಸ್. ಕೆ. ಐಣಿ, ರಸಿಕರ ಬಳಗ, ಧಾರವಾಡ ೪೩೫

ಧರ್ಮರಕ್ಷಣೆ
ಶ್ರೀ ಎಸ್. ಶ್ರೀಕೃಷ್ಣ ಸೆಂಟ್ ಎಲ್ಯೋಶಿಯಸ್ ಕೋಲೇಜ್ ೪೪೦

ಕ್ಷಮೆ
ಶ್ರೀ 'ಕಮಲತನಯ' ಪುಣೆ ೪೪೨

ಹೊಸ ಪುಟ್ಟು
ಶ್ರೀ ವಿ. ಕೆ. ಹಿತ್ತಲಮನೆ, ಅಗ್ರಿ. ಕಾಲೇಜ್, ಪುಣೆ ೪೪೮

ಯಾರೋ ಹುಚ್ಚ!
ಶ್ರೀ ರಾ. ನರಸಿಂಹಮೂರ್ತಿ, ತುಮಕೂರು ೪೫೨

ಆಂದಿನಾ ನಟ್ಟಿರುಳು (ಕವಿತೆ)
ಶ್ರೀ ಕೆ. ಪಾಂಡುರಂಗಭಟ್ 'ವಿದ್ವಾನ್' ಕಾರಕಳ ೪೫೯

ಸಾದರ ಸ್ವೀಕಾರ ೪೬೦

ಅಭಿನಂದನೆ

ಶ್ರೀಮಾನ್ ಸಿ. ಕೆ. ವೆಂಕಟರಾಮಯ್ಯನವರ ಒಳ್ಳೆಯ ಛಾಯಾಚಿತ್ರವನ್ನು ಸಮಯಕ್ಕೆ ಸರಿಯಾಗಿ ನಮಗೆ ಒದಗಿಸಿಕೊಟ್ಟ ಶ್ರೀಮಾನ್ ಎಸ್. ಎಸ್. ಕಟ್ಟಿ, ಆರ್ಟಿಸ್ಟ್ ಬೆಳಗಾಂವ ಅವರಿಗೆ ನಮ್ಮ ಹೃತ್‌ಪೂರ್ವಕ ವಂದನೆಗಳು, ಮತ್ತು ಅಭಿನಂದನೆಗಳು.



ವಾರ್ಷಿಕ ಚಂದಾ
೪—೪—೦

ಪ್ರತಿತಿಂಗಳ ೧ನೆಯ ತಾರೀಖಿಗೆ
ಪ್ರಕಟವಾಗುವುದು.

ಸಂಪುಟ ೯ | ೧ನೆಯ ಏಪ್ರಿಲ್ ೧೯೪೭ | ಸಂಚಿಕೆ ೧೧

ನಮ್ಮ ಮೇಲಾಟದ ವರದಿ

ಸಂಪಾದಕ ಮಂಡಲಿಯಿಂದ

ಮುನ್ಮಾತು

'ಜಯಂತಿ' ಸಣ್ಣ ಕತೆಗಳ ಮೇಲಾಟ ಇದೀಗ ನಾಲ್ಕನೆಯದು. ಜಯಂತಿಯ ೪ನೆಯ ವರ್ಷದಲ್ಲಿ ನಡೆಯಿಸಿದುದು ಮೊದಲನೆಯದು; ೫ನೆಯ ವರ್ಷದಲ್ಲಿ ಎರಡನೆಯದು. ಇವೆರಡೂ ಅಖಿಲ ಕರ್ನಾಟಕದ ಕತೆಗಾರರಿಗಾಗಿ ಇದ್ದುವು. ೮ನೆಯ ವರ್ಷದಲ್ಲಿ ನಡೆಯಿಸಿದ ಮೂರನೆಯ ಮೇಲಾಟವು ಕೇವಲ ಉತ್ತರಕನ್ನಡ ಜಿಲ್ಲೆಯ ಕತೆಗಾರರಿಗಾಗಿ ಮಾತ್ರ ಇದ್ದಿತು. ಯುದ್ಧ ಮೂಲಕ ಉಂಟಾದ ಅನವಸ್ಥೆಯ ಮೂಲಕ, ಮುಂದಿನ ಎರಡು ವರ್ಷಗಳಲ್ಲಿ ಈ ಮೇಲಾಟವನ್ನು ಏರ್ಪಡಿಸಿರಲಿಲ್ಲ. ಇದೀಗ ಮತ್ತೆ ನಾಲ್ಕನೆಯ ಸಲ ಮೇಲಾಟವನ್ನು ನಡೆಯಿಸಲಾಯಿತು.

ಅಖಿಲ ಕರ್ನಾಟಕದ ಕತೆಗಾರರಿಗಾಗಿ ಏರ್ಪಡಿಸಿದ ಮೊದಲನೆಯ ಮೇಲಾಟದಲ್ಲಿ ೪೪ ಜನ ಕತೆಗಾರರು ಭಾಗ ವಹಿಸಿದ್ದರು; ೫೧ ಕತೆಗಳು ಬಂದಿದ್ದುವು. ಎರಡನೆಯ ಮೇಲಾಟದಲ್ಲಿ ೯೩ ಕತೆಗಾರರು ಭಾಗವಹಿಸಿದ್ದರು; ೧೧೩ ಕತೆಗಳು ಬಂದಿದ್ದುವು. ಈ ಸಲದ ಮೇಲಾಟದಲ್ಲಿ ೧೦೮ ಜನ ಕತೆಗಾರರು ಹುರಿಯಾಳಾಗಿ ಇದ್ದಾರೆ; ೧೩೮ ಕತೆಗಳು ಬಂದಿವೆ.

ಈ ಮೇಲಾಟದ ಪ್ರಕಟನೆಯನ್ನು ಮೊದಲನೆಯ ಸಲ ಕೊಟ್ಟುದು ೧೯೪೬ನೆಯ ನವೆಂಬರ್ ಸಂಚಿಕೆಯಲ್ಲಿ; ಅದರೆ ಇಡಿ ನವಂಬರ್ ಡಿಸೆಂಬರ್ ಎರಡು ತಿಂಗಳಲ್ಲಿ ಮೇಲಾಟಕ್ಕಾಗಿ ಬಂದ ಕತೆಗಳೆಂದರೆ ಬರಿ ೨೦ಮಾತ್ರ. ಇದರಿಂದ ಈ ಸಲದ ಮೇಲಾಟದ ಯಶಸ್ವಿತೆಯ ಬಗೆಗೆ ಸಂಪಾದಕ ಮಂಡಲಿ ಸಂದೇಹ ಕ್ಕೊಳಗಾಗಿಯೆ ಇತ್ತು. ಆದರೆ ಕೊನೆಯ ಹದಿನೈದು ದಿನಗಳಲ್ಲಿ ಒಂದು ನೂರು ಕತೆಗಳು ಬಂದುವು. ಅಂಚೆಯಾಳು ಜಯಂತಿ ಕಾರ್ಯಾಲಯದ ಈ ಟಪಾಲನ್ನು ಹೊರಲಾರದೆ ತರುತ್ತಲಿದ್ದ. ಜನವರಿ ೧೫ರ ತರುವಾಯ ಬಂದ ಒಂದು ಕತೆಯನ್ನೂ ಸ್ಪರ್ಧೆಯ ಪಟ್ಟಿಗೆ ಸೇರಿಸಿಕೊಳ್ಳಲಿಲ್ಲ; ಅದರಿಂದ ಬಹುಜನರು ನಿರಾಶೆಗೊಳ-ಗಾಗಬೇಕಾಯಿತು.

ಬಂದ ಕತೆಗಳು

ಎಲ್ಲ ಕತೆಗಳನ್ನು—ಕಾರ್ಯಾಲಯಕ್ಕೆ ಬಂದ ಕ್ರಮದಲ್ಲೆ—ಇಲ್ಲಿ ಕೊಡಲಿರುವೆವು. ಇವುಗಳ ಪಟ್ಟಿ ಸ್ವಲ್ಪ ಹೆಚ್ಚಿಗೆ ಸ್ಥಳವನ್ನು ಆಕ್ರ ಮಿಸಬಹುದಾದರೂ ಕತೆಗಿರಿಸಿದ ಹೆಸರುಗಳನ್ನು ಓದುತ್ತ ಹೋಗುವುದರಲ್ಲಿ ಒಂದು ಬಗೆಯ ಮನೋರಂಜನೆಯಾಗುವು ದೆಂದು ನನ್ನ ಅನುಭವ. ಅಲ್ಲದೆ ಕತೆಗಾರರು ಆರಿಸಿಕೊಂಡ ವಿಷಯ ವೈವಿಧ್ಯದ ಕಲ್ಪನೆಯೂ ಈ ಹೆಸರುಗಳ ಪಟ್ಟಿಯಿಂದ ಉಂಟಾಗಬಹುದಾಗಿದೆ :

೧ ತಂದೆ ತಾಯಿ ಕಳೆದುಕೊಂಡ ಮಕ್ಕಳು, ೨ ಭಾಗ್ಯಲಕ್ಷ್ಮಿ, ೩ ರೇಷನ್ ರಾಜ್ಯವಲ್ಲಿ, ೪ ನಿರಾಶೆ, ೫ ಬಿಳಿಕಾಲ, ೬ ರಾಮಣ್ಣ ಮಾಸ್ತರು, ೭ ಕಾಣದ ದಾರಿ, ೮ ಯಜಮಾನನ ಇಚ್ಛೆ, ೯ ಆಧುನಿಕ ಸಂನ್ಯಾಸಿ, ೧೦ ಶಾರದೆಯ ಆಶೆ.

೧೧ ರಾಚ, ೧೨ ಎರಡನೆಯ ನೌಖಾಲಿ, ೧೩ ಅಂತಿಮ ಪತ್ರ ೧೪ ಬಂಧುನಿಲನ, ೧೫ ಜೋಡುಮೆಣ, ೧೬ ಹಸಿರು ನೋಟು, ೧೭ ಬೆಂದ ಜೀವಿಗಳು, ೧೮ ರೋದನ, ೧೯ ಎರಡು ಜೀವ, ೨೦ ಕಳ್ಳ ಕನಕಪ್ಪ.

೨೧ ವಿವಾಹ ಮತ್ತು ವಿವಾದ, ೨೨ ರತ್ನಳ ಮದುವೆ, ೨೩ ರುದ್ರಪ್ಪ, ೨೪ ದೇವರಮಕ್ಕಳು, ೨೫ ಬಾಳ್‌ಬನ್ನ, ೨೬ ನಾಯ್, ೨೭ ಮಾಟಗಾತಿಯ ಮದುವೆ, ೨೮ ನಮ್ಮ ಸಮಾಜ, ೨೯ ಊಟದ ಮನೆ, ೩೦ ಪ್ರೇಮ, ೩೧ ರಾಯರ ಮಗಳು, ೩೨ ಸುದೈವವನ್ನು ಕಂಡ ಅನಾಥ ಹುಡುಗಿ, ೩೩ ನೂರು ಜೀವಿಗಳು, ೩೪ ಧರ್ಮರಕ್ಷಣೆ, ೩೦ ಬಡವರ ಹುಡುಗಿ,

೩೧ ಆಹುತಿ, ೩೨ ಹಿಟ್‌ಲರ್ ನಂ. ೨, ೩೩ ಅವನ ಆಶೆ, ೩೪ ಪ್ರಾಯಶ್ಚಿತ್ತ, ೩೫ ಜೆಹಾದ್, ೩೬ ಹಣದ ಮಹಿಮೆ, ೩೭ ಹೊಣೆ ಯಾರು?, ೩೮ ಅತ್ತೆಯ ಮಮತೆ, ೩೯ ಪಾಲುಗಾರಿಕೆ, ೪೦ ಏಕೀಕರಣ.

೪೧ ಬಹಿಷ್ಕಾರ, ೪೨ ಗೌಡರ ಔದಾರ್ಯ, ೪೩ ಕನ್ನಡಿಗ, ೪೪ ಗರತಿ, ೪೫ ಸತಿತಾಂಗನೆ ಅಥವಾ ದುರ್ಗಾ, ೪೬ ವರದಕ್ಷಿಣೆ,



ಶ್ರೀ. ಪಟ್ಟಾಭಿ ಕೃಷ್ಣಶರ್ಮರು

ಶ್ರೀ. ವಿ. ಬಿ. ನಾಯಕರು

ಪ್ರೊ. ರಂ. ಶ್ರೀ. ಮುಗುಳಿಯವರು

೪೭ ಪ್ರಮಾಣೀಕರಣದ ಕತೆ, ೪೮ ಇನ್ನೆಲ್ಲಿಯ ಶಾಂತಿ?, ೪೯ ನನ್ನ ಅಕ್ಕ ಮತ್ತು ನಕ್ಷತ್ರ, ೫೦ ಭೀಮಾಚಾರ್ಯ.

೫೧ ಕಳೆದ ಮೊದಲ ಹೂ, ೫೨ ಅರ್ಧಾಂಗಿ, ೫೩ ವೇಶ್ಯಾವತಾರ, ೫೪ ಅಯ್ಯೋ ಅಳಿಯ, ೫೫ ನವಕರಿ, ೫೬ ತೀರ್ಥಾಟನೆ, ೫೭ ಅದರಿಷ್ಟಿ, ೫೮ ಯಾಜಮಾನ್ಯವೋ ಅನ್ಯಾಯವೋ? ೫೯ ಕಳ್ಳ ಸೋಟೆಯಲ್ಲಿಯ ಕಳ್ಳಸೋಟ, ೬೦ ಒಡೆದ ಕನ್ನಡಿ.

೬೧ ಹೂಗಾರ ಹುಡುಗಿ, ೬೨ ಅನ್ನದೇವರ ಮುಂದೆ ಇನ್ನು ದೇವರೆ?, ೬೩ ಸಂಬಂಧ ಹರಿಯಿತು, ೬೪ ದುರ್ದೈವಿ, ೬೫ ಪತಿತೆ, ೬೬ ದೇಶಪ್ರೇಮಿ ಮೂರ್ತಿ, ೬೭ ಶಾಂತಿ, ೬೮ ಬಡತನದ ಬಾಳು, ೬೯ ಸಾಂಟನ ಸಾಹೇಬಕಿ, ೭೦ ಹೊಸಹುಟ್ಟು.

೭೧ ತೊರೆದ ಜೀವಿ, ೭೨ ಸೈತಾನ ವೃತ್ತಿಯ ಸಾವುಕಾರ. ೭೩ ಪದ್ಮಾವತಿ, ೭೦ ಒಂದು ಘಟನೆ.

೭೧ ಕವಿಗಳು? ೭೨ ನಾಗರತ್ನ, ೭೩ ಈ ಜೀವನ, ೭೪ ಕ್ಷಮೆ, ೭೫ ಆಹುತಿ, ೭೬ ಬ್ರಹ್ಮಗಂಟು, ೭೭ ಯೌರೋಹುಚ್ಚ, ೭೮ ನಿಯಂತ್ರಣ, ೭೯ ಮುದುಕನ ಮದುವೆ, ೮೦ ನಂದಿನಿ.

೮೧ ಒಳದನಿ, ೮೨ ಆದರ್ಶ ಪ್ರೇಮ, ೮೩ ಪರಿವರ್ತನೆ, ೮೪ ಮಧ್ಯ ಪ್ರತಿಬಂಧ, ೮೫ ನಿರ್ಬಂಧ, ೮೬ ಸೇವಕ, ೮೭ ವೈಶಾಡಿ, ೮೮ ತಿಮ್ಮಯ್ಯನವರ ಅಕಾರಣ ಮರಣ, ೮೯ ಮರೆಯದ ನೋಟ, ೯೦೦ ರುಕ್ಕಿ.

೯೦೧ ಯಾರು ಹುಚ್ಚು?, ೯೦೨ ಶಾಂತಿ ಎಲ್ಲಿ?, ೯೦೩ ನಾನು

ಸಾಪಿಯೇ, ೧೦೪ ಒಂದು ಕತೆ, ೧೦೫ ಬೆಳದಿಂಗಳ ರಾತ್ರಿಯಲ್ಲಿ, ೧೦೬ ಅವಳ ಸ್ಮಾರಕಕ್ಕಾಗಿ, ೧೦೭ ತಪಸ್ವಿನಿ, ೧೦೮ ಪ್ರೇಮ ಬಲಿ, ೧೦೯ ನಾರೀ ಜೀವನ, ೧೧೦ ಭಾರತೀಯರ ಆವನತಿ.

೧೧೧ ಆದೃಷ್ಟದ ಆಟ, ೧೧೨ ಜೆನ್ನಿ, ೧೧೩ ಗಾರುಡಿ ನಾಗೇಶ, ೧೧೪ ಬೀದಿಯ ಬಿಕಾರಿ, ೧೧೫ ಸಾಹಿತಿ, ೧೧೬ ಗಂಡನ ಪೂಜೆ, ೧೧೭ ಆ ದೈಲು ನಿಲ್ದಾಣದಲ್ಲಿ, ೧೧೮ ಕೊಂದವರು ಯಾರು? ೧೧೯ ಸುಬ್ಬಿವಿ ಶಾರದೆ, ೧೨೦ ಪುಷ್ಪವತಿಯ ಪುನರ್ಜನ್ಮ.

ಕತೆಗಾರರು ಯಾರು ಯಾರು?

೧೦೮ ಜನ ಕತೆಗಾರರಲ್ಲಿ ನಾಲ್ಕು ಜನರು ಮಾತ್ರ ಮಹಿಳೆಯರಿರುವರು. ಕಳೆದ ಮೇಲಾಟದಲ್ಲಿ ೧೬ ಜನ ಮಹಿಳೆಯರು ಭಾಗವಹಿಸಿದ್ದರು. ಮೇಲಾಟಕ್ಕೆ ಯಾರೂ ಕತೆಗಳನ್ನು ಕಳುಹಿಸಬಹುದಾಗಿದ್ದುದರಿಂದ, ಭಾಗವಹಿಸಿದ ಕತೆಗಾರರಲ್ಲಿ ಹೈಸ್ಕೂಲಿನ ಎಳೆಯ ವಿದ್ಯಾರ್ಥಿಗಳಿರುವರು. ವಿಶ್ವವಿದ್ಯಾನಿಲಯಗಳ ತರುಣ ವಿದ್ಯಾರ್ಥಿಗಳಿದ್ದಾರೆ. ಪರಭಾಷಾ ಸಾಹಿತ್ಯದ ಪ್ರಭಾವಕ್ಕೆ ಸಿಲುಕದ ಪ್ರೀಸಿಂಗ್ ಕಾಲೇಜಿನ ವಿದ್ಯಾರ್ಥಿಗಳೂ ಕನ್ನಡ ಶಾಲೆಯ ಉಪಾಧ್ಯಾಯರೂ ಇರುವರು. ವಿಶ್ವವಿದ್ಯಾನಿಲಯಗಳ ಉಚ್ಚಪದವಿಗಳನ್ನು ಪಡೆದುಕೊಂಡವರೂ ಅನೇಕ ಜನರಿದ್ದಾರೆ; ಸರಕಾರಿ ನೌಕರಿ—ಬೇರೆ ಬೇರೆ ಉದ್ಯೋಗಗಳನ್ನು ಕೈಕೊಂಡಿರುವ ಹಿರಿಯ ಸದ್ಗೃಹಸ್ಥರೂ ಕೆಲವು ಜನರಿದ್ದಾರೆ. ಇವಾವುವೂ ಅಲ್ಲದ ಸುಖವಸ್ತು ಜನರೂ ಕೆಲವು ಜನ ಇದರಲ್ಲಿ ಹುರಿಯಾಳಾಗಿದ್ದಾರೆ. ಮಹಿಳೆಯರು ಹೆಚ್ಚಾಗಿ ಭಾಗವಹಿಸದಿದ್ದುದಕ್ಕೆ—ಸಾಹಿತ್ಯದ ಪ್ರಗತಿಯ ದೃಷ್ಟಿಯಿಂದ ವಿಚಾರಮಾಡುವವರಿಗೆ—ಅಸ್ಪೋಂದು ಸಮಾಧಾನವನ್ನುಂಟು ಮಾಡಲಾರದು.

ಎಲ್ಲೆಲ್ಲಿಂದ ಎಷ್ಟೆಷ್ಟು?

ಕರ್ನಾಟಕದ ಎಲ್ಲ ಮೂಲೆಗಳಿಂದಲೂ ಮೇಲಾಟಕ್ಕೆ ಕತೆಗಳು ಬಂದಿರುವುವಲ್ಲದೆ, ಹೊರನಾಡಿನ ಕನ್ನಡಿಗರೂ ಹುರುಪಿನಿಂದ ಮೇಲಾಟದಲ್ಲಿ ಪಾಲುಗಾರರಾಗಿದ್ದಾರೆ. ಎಲ್ಲೆಲ್ಲಿಂದ ಎಷ್ಟೆಷ್ಟು ಕತೆಗಳು ಬಂದಿರುವುವೆಂಬುದನ್ನು ಕೆಳಗಿನ ವಿವರಣೆಗಳಿಂದ ತಿಳಿದುಕೊಳ್ಳಬಹುದು:

ಬಹುಮಾನ ಪಡೆದ ಕತೆಗಾರರು



ಶ್ರೀ. ಕೆ. ಅಶ್ವತ್ಥನಾರಾಯಣರಾಯರು

ಶ್ರೀ. ಎಸ್. ಕೆ. ನರಣಿಯವರು



ಶ್ರೀ. ಎಸ್. ಶ್ರೀಕೃಷ್ಣನು

ಧಾರವಾಡ ಜಿಲ್ಲಾ (೩೧ ಜನ ಕತೆಗಾರರು)

ಧಾರವಾಡ ೧೬, ಹುಬ್ಬಳ್ಳಿ ೭, ಗದಗು ೨, ಹಾವೇರಿ ೧, ಕಲಘಟಗಿ ೧, ನವಲಗುಂದ ೧, ರಾಣೆಬೆನ್ನೂರು ೧, ಹೆಬ್ಬಳ್ಳಿ ೧, ಕೋಣ ೧, ಬ್ಯಾಡಗಿ ೧. ಒಟ್ಟು ೩೪ ಕತೆಗಳು.

ಬೆಳಗಾಂವಿ ಜಿಲ್ಲಾ (೧೬ ಜನ ಕತೆಗಾರರು)

ಬೆಳಗಾಂವಿ ೬, ಸಂಪಗಾಂವ ೧, ಜಘಣಿ ೨, ಚಿಕ್ಕೋಡಿ ೧, ಹಿಡಕಲ್ಲ ೨, ಹಾರೂಗೇರಿ ೨, ಪುಕ್ಕೇರಿ ೧, ಗೋಕಾಕ ಫಾಲ್ಸ್ ೨, ಗೋಕಾಕ ೨, ಉಗರಗೋಳ ೧, ಪಾನಾಪುರ ೧. ಒಟ್ಟು ೨೧ ಕತೆಗಳು.

ಮೈಸೂರು ಸಂಸ್ಥಾನ (೧೪ ಜನ ಕತೆಗಾರರು)

ಮೈಸೂರು ೪, ಬೆಂಗಳೂರು ೩, ತ್ಯಾಮಗೊಂಡ್ಲು ೪, ಶಿವಮೊಗ್ಗ ೧, ಚಿತ್ರದುರ್ಗ ೧, ತುಮಕೂರು ೨, ಗುಬ್ಬಿ ೧. ಒಟ್ಟು ೧೬ ಕತೆಗಳು.

ವಿಜಾಪುರ ಜಿಲ್ಲಾ (೧೦ ಜನ ಕತೆಗಾರರು)

ವಿಜಾಪುರ ೬, ಬಾಗಲಕೋಟೆ ೨, ಹೆಬ್ಬಳ್ಳಿ (ತಾ. ಬಾದಾಮಿ) ೧, ಒಟ್ಟು ೧೦ ಕತೆಗಳು.

ಮಂಗಳೂರು ಜಿಲ್ಲಾ (೬ ಜನ ಕತೆಗಾರರು)

ಮಂಗಳೂರು ೩, ಹೆಬ್ರಿ ೩, ಕಾಸರಕೋಡು ೧, ಉಡುಪಿ ೧. ಒಟ್ಟು ೮ ಕತೆಗಳು.

ಕಾರವಾರ ಜಿಲ್ಲಾ (೬ ಜನ ಕತೆಗಾರರು)

ಬಂಕಿಕೊಡ್ಲು ೧, ಗೋಕರ್ಣ ೧, ಹೊನ್ನಾವರ ೨, ಕಡತೋಕಾ ೧, ಕಾರವಾರ ೧, ಸೋಂದಾ ೧, ಚಿಗಳ್ಳಿ ೧. ಒಟ್ಟು ೮ ಕತೆಗಳು.

ಉ. ಕರ್ನಾಟಕದ ಸಂಸ್ಥಾನಗಳು (೬ ಜನ ಕತೆಗಾರರು)

ಬನಹಟ್ಟಿ ೧, ರಾಮದುರ್ಗ ೧, ಲಕ್ಷ್ಮೇಶ್ವರ ೧, ಶಿರಹಟ್ಟಿ ೧, ಸಾಂಗಲಿ ೨. ಒಟ್ಟು ೬ ಕತೆಗಳು.

ಹೈದರಾಬಾದ್ ಸಂಸ್ಥಾನ (೪ ಜನ ಕತೆಗಾರರು)

ಹೈದರಾಬಾದ ೨, ಮುಂಗಾಪೇಟೆ ೧, ಕುಕನೂರು ೧, ಕೊಪ್ಪಳ ೧. ಒಟ್ಟು ೫ ಕತೆಗಳು.

ಕೊಡಗು (ಒಬ್ಬ ಕತೆಗಾರ)

ಮಡಿಕೇರಿ ೧. ಒಟ್ಟು ೧ ಕತೆ.

ಹೊರನಾಡುಗಳು (೧೬ ಜನ ಕತೆಗಾರರು)

ಪುಣೆ ೬, ಮುಂಬೈ ೨, ಬನಾರಸ ೧, ಮದರಾಸ್ ೧, ಜಬಲ್‌ಪೂರ ೧, ದಾಪೋಲಿ ೧, ಅಹಮ್ಮದಾಬಾದ್ ೧. ಒಟ್ಟು ೧೩ ಕತೆಗಳು.

ಮೇಲಾಟದ ನಿರ್ಣಯ

ಬಂದಿರುವ ಎಲ್ಲ ಕತೆಗಳನ್ನೂ ಜಯಂತಿ ಸಂಪಾದಕ ಮಂಡಲಿಯ ಪ್ರತಿನಿಧಿಯು ವಿಮರ್ಶಾತ್ಮಕ ರೀತಿಯಲ್ಲಿ ಓದಿನೋಡಿ, ಮೇಲಿನ ಪಟ್ಟಿಯಲ್ಲಿ ದಪ್ಪಕ್ಷರಗಳಲ್ಲಿ ತೋರಿಸಿರುವ ೨೧ ಕತೆಗಳನ್ನು ಕೊನೆಯ ನಿರ್ಣಯಕ್ಕೆಂದು ಆರಿಸಿ ತೆಗೆದರು.

ಜಯಂತಿಯ ಸಂಪಾದಕ ಮಂಡಲಿಯ ಪ್ರತಿನಿಧಿಯ ವಿಮರ್ಶೆಯಂತೆ ಬಂದಿರುವ ಎಲ್ಲ ಕತೆಗಳ ಗುಣವಿಭಾಗ ಕೆಳಗೆ ಕಾಣಿಸಿದಂತೆ ಇವೆ (ಇಲ್ಲಿರುವ ಅಂಕೆಗಳು ಮೇಲಿನ ಪಟ್ಟಿಯಲ್ಲಿಯ ಕತೆಯ ಕ್ರಮಾಂಕಗಳು):

೨೦ಕ್ಕಿಂತ ಕಡಿಮೆ ಗುಣಾಂಕದ ಕತೆಗಳು ೨೪.

೧, ೪, ೯, ೧೨, ೨೧, ೨೮, ೩೬, ೩೭, ೩೮, ೪೫, ೪೬, ೪೭, ೪೯, ೫೪, ೫೬, ೬೪, ೭೪, ೭೮, ೭೯, ೮೦, ೮೧, ೮೩, ೮೫, ೮೮, ೮೯, ೯೨, ೯೫, ೯೭, ೯೮.

೨೧ರಿಂದ ೩೦ರ ವರೆಗೆ ಗುಣಾಂಕಗಳನ್ನು ಪಡೆದ ಕತೆಗಳು ೧೮.

೩, ೫, ೭, ೧೦, ೧೩, ೧೪, ೧೫, ೨೨, ೨೩, ೨೪, ೨೫, ೨೬, ೨೭, ೩೧, ೩೩, ೩೪, ೩೫, ೪೨, ೪೩, ೪೪, ೪೮, ೫೦, ೫೧, ೫೨, ೫೩, ೫೪, ೫೫, ೫೭, ೫೮, ೫೯, ೬೦, ೬೧, ೬೨, ೬೩, ೬೪, ೬೫, ೬೬, ೬೭, ೬೮, ೬೯, ೭೦, ೭೧, ೭೨, ೭೩, ೭೫, ೭೬, ೭೭, ೭೮, ೭೯, ೮೨, ೮೪, ೮೭, ೯೦, ೯೧, ೯೩, ೯೪, ೯೬, ೯೯, ೧೦೦, ೧೦೩, ೧೦೪, ೧೦೫, ೧೦೬, ೧೦೭, ೧೦೮, ೧೦೯, ೧೧೦, ೧೧೧, ೧೧೨, ೧೧೩, ೧೧೪, ೧೧೫, ೧೧೬, ೧೧೭, ೧೧೮, ೧೧೯, ೧೨೦.

೩೧ರಿಂದ ೪೦ರ ವರೆಗೆ ಗುಣಾಂಕಗಳನ್ನು ಪಡೆದ ಕತೆಗಳು ೧೮.

೩, ೧೩, ೧೫, ೨೫, ೪೯, ೫೨, ೫೮, ೬೨, ೬೪, ೬೮, ೭೦, ೭೪, ೭೬, ೭೭, ೭೮, ೭೯, ೮೧, ೮೩, ೮೫, ೮೬, ೮೭, ೮೮, ೮೯, ೯೦, ೯೧, ೯೨, ೯೩, ೯೪, ೯೫, ೯೬, ೯೭, ೯೮, ೯೯, ೧೦೦, ೧೦೧, ೧೦೨, ೧೦೩, ೧೦೪, ೧೦೫, ೧೦೬, ೧೦೭, ೧೦೮, ೧೦೯, ೧೧೦, ೧೧೧, ೧೧೨, ೧೧೩, ೧೧೪, ೧೧೫, ೧೧೬, ೧೧೭, ೧೧೮, ೧೧೯, ೧೨೦.

೪೧ರಿಂದ ೫೦ರ ವರೆಗೆ ಗುಣಾಂಕಗಳನ್ನು ಪಡೆದ ಕತೆಗಳು ೧೪.

೪, ೧೨, ೧೭, ೨೩, ೨೯, ೩೨, ೩೮, ೪೨, ೪೪, ೪೬, ೪೮, ೫೦, ೫೧, ೫೩, ೫೪, ೫೫, ೫೭, ೫೮, ೫೯, ೬೦, ೬೧, ೬೨, ೬೩, ೬೪, ೬೫, ೬೬, ೬೭, ೬೮, ೬೯, ೭೦, ೭೧, ೭೨, ೭೩, ೭೪, ೭೫, ೭೬, ೭೭, ೭೮, ೭೯, ೮೦, ೮೧, ೮೨, ೮೩, ೮೪, ೮೫, ೮೬, ೮೭, ೮೮, ೮೯, ೯೦, ೯೧, ೯೨, ೯೩, ೯೪, ೯೫, ೯೬, ೯೭, ೯೮, ೯೯, ೧೦೦, ೧೦೧, ೧೦೨, ೧೦೩, ೧೦೪, ೧೦೫, ೧೦೬, ೧೦೭, ೧೦೮, ೧೦೯, ೧೧೦, ೧೧೧, ೧೧೨, ೧೧೩, ೧೧೪, ೧೧೫, ೧೧೬, ೧೧೭, ೧೧೮, ೧೧೯, ೧೨೦.

೫೧ರಿಂದ ೬೦ರ ವರೆಗೆ ಗುಣಾಂಕಗಳನ್ನು ಪಡೆದ ಕತೆಗಳು ೪.

೨೪, ೪೧, ೪೫, ೪೭.

೬೧ರಿಂದ ೭೦ರ ವರೆಗೆ ಗುಣಾಂಕಗಳನ್ನು ಪಡೆದ ಕತೆಗಳು ೧೦.

೧೬, ೧೯, ೨೨, ೪೮, ೬೦, ೬೯, ೭೫, ೮೨, ೮೪, ೧೦೨.

೭೧ರಿಂದ ೮೦ರ ವರೆಗೆ ಗುಣಾಂಕಗಳನ್ನು ಪಡೆದ ಕತೆಗಳು ೫.

೨೮, ೪೨, ೪೬, ೬೬, ೭೦.

೮೧ರಿಂದ ೯೦ರ ವರೆಗೆ ಗುಣಾಂಕಗಳನ್ನು ಪಡೆದ ಕತೆಗಳು ೪.

೨೯, ೪೪, ೪೭, ೬೪.

೯೦ಕ್ಕಿಂತ ಹೆಚ್ಚಿಗೆ ಗುಣಾಂಕಗಳನ್ನು ಪಡೆದ ಕತೆಯೆಂದರೆ ೨೬ನೆಯ ಕ್ರಮಾಂಕದ್ದೊಂದೇ ಒಂದು. ಅದೇ 'ಧರ್ಮಕೊಂಡದ ಕತೆ'!

೩೫ಕ್ಕಿಂತ ಹೆಚ್ಚಿಗೆ ಗುಣಾಂಕಗಳನ್ನು ಪಡೆದ ೨೧ ಕತೆಗಳನ್ನು ಆಯ್ದು, ಇನ್ನಿಬ್ಬರು ನಿರ್ಣಾಯಕರಾದ ಪ್ರಾ. ರಂ. ಶ್ರೀ. ಮುಗುಳಿ ಎಂ. ಎ. ಬಿ. ಟಿ. ಆವರ ಕಡೆಗೂ ಶ್ರೀಮಾನ್ ವಿ ಬಿ. ನಾಯಿಕ ಎಂ. ಎ., ಎಲ್ ಎಲ್. ಬಿ, ಆವರ ಕಡೆಗೂ ಕಳುಹಿಸಲಾಯಿತು. ಎಲ್ಲರ ವಿಮರ್ಶಾತ್ಮಕ ನಿರ್ಣಯದಂತೆ ಆ ೨೧ ಕತೆಗಳು ಕೆಳಗೆ ಬರೆದಂತೆ ಸ್ಥಾನಾನುಕ್ರಮವನ್ನು ಪಡೆದವು:

೧ ಧರ್ಮಕೊಂಡದ ಕತೆ, ೨ ತಿಮ್ಮಯ್ಯನವರ ಅಕಾರಣ ಮರಣ, ೩ ಧರ್ಮರಕ್ಷಣೆ, ೪ ಕ್ಷಮೆ, ೫ ಹೊಸಹುಟ್ಟು, ೬ ಪಾಲುಗಾರಿಕೆ, ೭ ಜೇಹಾದ್, ೮ ಯಾರೋಹುಚ್ಚ, ೯ ಪತಿತಾಂಗನೆ ಅಥವಾ ಮುಗ್ಧಾ, ೧೦ ದೇವರಮಕ್ಕಳು, ೧೧ ಬೆಳದಿಂಗಳ ರಾತ್ರಿಯಲ್ಲಿ, ೧೨ ಎರಡು ಜೀವ, ೧೩ ಬಡತನದ ಬಾಳು, ೧೪ ಹೊಣೆಯಾರು? ೧೫ ಹಸಿರು ನೋಟು, ೧೬ ಆಹುತಿ, ೧೭ ಸಂದಿಸಿ, ೧೮ ರತ್ನಳ ಮದುವೆ, ೧೯ ಬಡವರ ಹುಡುಗಿ, ೨೦ ನಾನು ಪಾಪಿಯೆ? ೨೧ ಮದ್ಯ ಪ್ರತಿಬಂಧ.

ಮೊದಲಿನಿಂದ ೧೫ ನಂಬರುಗಳ ವರೆಗಿನ ಕತೆಗಳು ಪ್ರಕಟನೆಗೆ ಅರ್ಹವಾಗಿವೆಯೆಂದು ನಿರ್ಣಾಯಕ ಮಂಡಲಿ ಅಭಿಪ್ರಾಯಪಟ್ಟಿದೆ.

೧೨೦ ಕತೆಗಳಲ್ಲಿ ೧೫ ಕತೆಗಳು ಮಾತ್ರ ಪ್ರಕಟಿಸಲು ತಕ್ಕುವೆಗಳಾಗಿ ಹೊರಟುದು ಅಷ್ಟೊಂದು ಸಮಾಧಾನದ ಸಂಗತಿಯಲ್ಲ;

(೨೬ನೆಯ ಪುಟಕ್ಕೆ ಮುಂದುವರಿದಿದೆ.)

ಧರ್ಮಕೂಂಡದ ಕೆಳೆ

(ಸಣ್ಣ ಕತೆ)

ಶ್ರೀ. ಅಶ್ವತ್ಥನಾರಾಯಣರಾವ್,
ಹಿಂದು ವಿ. ವಿ. ನಿಲಯ, ಬನಾರಸ

ಮತಧರ್ಮ ಹೆಚ್ಚಿನದೋ ಮಾನವತೆ ಹೆಚ್ಚಿನದೊ?
ಮಾನವತೆಯನ್ನು ಪರಿಪೋಷಿಸಲು ಹುಟ್ಟಿದುದು
ಮತಧರ್ಮ! ಆದರೆ ಮತಧರ್ಮದ ಸಂರ-
ಕ್ಷಣೆಗಾಗಿ ಮಾನವತೆಯನ್ನು ಆಹುತಿಯಾಗಿ
ಕೊಡುವುದು ಸಮುಂಜಸವೆ?

★

ಆ ರಾತ್ರಿ ಅಮಾವಾಸ್ಯೆಯ ಕತ್ತಲು ಹೊರಗೆಲ್ಲ ಕವಿದಿತ್ತು. ಎಲ್ಲೆಲ್ಲೂ ನಿಶ್ಶಬ್ದವಾಗಿತ್ತು. ಎಲ್ಲೋ ಒಂದೊಂದು ನಾಯಿ ಬೊಗಳುತ್ತಿದ್ದುದು ಮಾತ್ರ ಆಗಾಗ ಕೇಳಿಸುತ್ತಿತ್ತು. ಹಳ್ಳಿಗೆ ಹಳ್ಳಿಯೇ ವಿಶ್ರಾಂತಿಯಲ್ಲಿತ್ತು. ಗಂಟೆ ಹನ್ನೊಂದರ ಮೇಲಾಗಿತ್ತು. ಧರ್ಮಕೊಂಡದ ಶಾನುಭೋಗ ಸೂರಪ್ಪನ ಮನೆಯಲ್ಲೂ, ಅವನ ಹೊರತು ಎಲ್ಲರೂ ಮಲಗಿದ್ದರು. ಆದರೆ ಅವನು ತನ್ನ ಕೋಣೆಯಲ್ಲಿ ಲಾಟೀನಿನ ದೀಪದ ಮುಂದೆ, ದಪ್ಪ ಪುಸ್ತಕದ ದೊಡ್ಡ ಹಾಳೆಗಳನ್ನು ಮೆಲ್ಲಗೆ ತಿರುವಿಹಾಕುತ್ತ ಲೆಕ್ಕವನ್ನು ಬರೆಯುತ್ತಿದ್ದನು. ಜಮಾಬಂದಿ ಹತ್ತಿರವಾಗಿತ್ತು. ಲೆಕ್ಕವೆಲ್ಲ ಬೇಗ ಮುಗಿಯಬೇಕಾಗಿತ್ತು. ಸೂರಪ್ಪನು ಬಹಳ ಮುತುವರ್ಜಿ ವಹಿಸಿ ಕೆಲಸವಾಡುತ್ತಿದ್ದನು. ಲೆಕ್ಕವು ಅಲ್ಲಲ್ಲಿ ಗಂಟಾದಾಗ, ಕೈ ಬೆರಳನ್ನು ತಲೆಯ ಕೂದಲಿನೊಳಕ್ಕೆ ಹಾಕಿ ಕೆರೆಯುತ್ತಿದ್ದನು; ಮತ್ತೆ ಮುಂದುವರೆಯುತ್ತಿದ್ದನು. ಹಜಾರದ ದೊಡ್ಡ ಗಡಿಯಾರವು 'ಢಾಂ' ಎಂದು ಅರ್ಧಗಂಟೆಯನ್ನು ಹೊಡೆಯಿತು. ಸೂರಪ್ಪನು ಅದನ್ನು ಗಣನೆಗೆ ತಾರದೆ, ಇನ್ನೂ ಬರೆಯುತ್ತ ತನ್ನ ಕೆಲಸವನ್ನು ಮುಗಿಸಲು ಮಹಾಪ್ರಯತ್ನ ಮಾಡುತ್ತಿದ್ದನು. ಆದರೂ ಅವನ ಕಣ್ಣುಗಳು ಹಾಗೇ ಮುಚ್ಚಿಕೊಳ್ಳಲು ಒದ್ದಾಡುತ್ತಿದ್ದುವು. ಒಂದೆರಡು ಬಾರಿ ತೂಕಡಿಕೆಯೂ ಬಂದಿದ್ದಿತು.

"ಬಾಗಿಲು!" ಸೂರಪ್ಪನಿಗೆ ಕನಸಿನಲ್ಲಿ ಯಾರೋ ಮೆಲ್ಲನೆಯ ಧ್ವನಿಯಲ್ಲಿ ಕೂಗಿದಂತಾಯಿತು. ಅರ್ಧ ಮುಚ್ಚಿದ್ದ ಕಣ್ಣುಗಳನ್ನು ತೆರೆದು, ಧ್ವನಿಯನ್ನು ಆಲಿಸಿ ಮತ್ತೆ ಕೇಳದೆ, ಅದೆಲ್ಲೊ ತನ್ನ ಭ್ರಾಂತಿಯೆಂದುಕೊಂಡು ಬರವಣಿಗೆಗೆ ಗಮನವನ್ನು ತಿರುಗಿಸಿದನು.

"ಬಾಗಿಲು!" ಮತ್ತೆ ಅದೇ ಒಳಧ್ವನಿಯು ಈಗ ಸ್ಪಷ್ಟವಾಗಿಯೆ ಕೇಳಿಸಿತು. ಹುಂ. ಆದರಲ್ಲೇನು ತಪ್ಪಿರಲಿಲ್ಲ ಈ ಬಾರಿ ಅವನು ಅರೆನಿದ್ರಿಸುತ್ತಲೂ ಇರಲಿಲ್ಲ. ಸೂರಪ್ಪನು ಬಿಗ್ಗನೆದ್ದು ಬಾಟೀನನ್ನು ಹಿಡಿದುಕೊಂಡು, ಸದ್ದಿಲ್ಲದಂತೆ ಮುಂಗಾಲಿನ ಮೇಲೆ ನಡೆಯುತ್ತ ಹಜಾರವನ್ನು ದಾಟಿ ಬೀದಿಯ ಬಾಗಿಲಿಗೆ ಬಂದು, ಅಗಳಿಗೆ ಕೈಹಾಕಿದನು. ಆ ಕ್ಷಣದಲ್ಲಿ ಅವನಿಗೆ ಕೈಬಳೆಗಳ ಸದ್ದು ಹೊರಗೆ ಕೇಳಿಸಿತು. ಸೂರಪ್ಪನು ಚಕಿತನಾಗಿ ಸರ್ರನೆ ಅಗಳಯನ್ನೆಳೆದು ಬಾಗಿಲನ್ನು ತೆರೆದನು. ಲಾಟೀನಿನ ಮಂಕುಬೆಳಕಿನಲ್ಲಿ ಅವನಿಗೆ ಅಲ್ಲೇ ಹೊಸಲಿನ ಬಳಿ ಒಂದು ಸ್ತ್ರೀವ್ಯಕ್ತಿ ಕಾಣಿಸಿತು. ಕಾಂದಹಾರಿ ಹೆಂಗುಸು! ಚೀಟಿನ ಪರಕಾರ, ನೀಲಿಯ ರೇಷ್ಮೆ ಅಂಗಿ ಹಾಕಿದ್ದಳು. ತಲೆಗೆ ಕೆಂಪು ಜೌಕವನ್ನು ಕಟ್ಟಿದ್ದಳು. 'ಕಾರಬಾ' ಮಣಿಯ ಕೊರಳಸರವು ಎದೆಯ ಮೇಲೂ ಬಿದ್ದಿದ್ದಿತು.

ಈ ದೃಶ್ಯವನ್ನು ಕಂಡ ಕ್ಷಣದಲ್ಲಿ ಸೂರಪ್ಪನು ಭ್ರಾಂತನಾಗಿ ಕಲ್ಲಿನ ಪ್ರತಿಮೆಯಂತಾದನು. ಆದರೆ ಅದೇ ಕ್ಷಣದಲ್ಲಿ ಅವಳು "ದೇವರೇ!" ಎಂದು ಪಿಸುಮಾತಿನಲ್ಲಿ ಗಟ್ಟಿಯಾಗಿ ಹೇಳಿ, ಕೆಳಗೆ ಕುಸಿದುಬಿದ್ದು ಅವನ ಕಾಲುಗಳನ್ನು ತನ್ನೆರಡು ಕೈಗಳಿಂದಲೂ ಬಾಚಿ ತಬ್ಬಿಕೊಂಡಳು. ಆ ಮಾತು, ಸ್ವರಗಳನ್ನು ಕೇಳಿದ ಸೂರಪ್ಪನು ಆಶ್ಚರ್ಯ, ಆನಂದ—ಆದರೂ ಕೊಂಚ ಅನುಮಾನದಿಂದ, ತಟ್ಟನೆ ಲಾಟೀನನ್ನು ಅವಳ ಮುಖದ ಬಳಿಗೆ ತಂದು ನೋಡಿದನು. ಅವಳ ಅರಿಯೆತ್ತಿದ ಕಣ್ಣೀರಿನ ದೈನ್ಯದ ಮುಖವು ಕಂಡಿತು.

"ದೇವು!" ಸೂರಪ್ಪನು ಲಾಟೀನನ್ನು ಕೆಳಿಗೆ ಕುಕ್ಕಿ, ತಾನು ಬಗ್ಗಿ ಆ ಹೆಂಗುಸನ್ನು ಎರಡು ಕೈಗಳಿಂದಲೂ ಹಿಡಿದೆತ್ತಿ, ತಬ್ಬಿಕೊಂಡು "ದೇವು! ದೇವು! ನನ್ನ ಚಿನ್ನ!" ಎನ್ನುತ್ತ ಅವಳ ತಲೆಯ ಜೌಕವನ್ನು ತೆಗೆದು ಕುರುಳನ್ನು ನೇವರಿಸಿದನು. ಅವಳಾದರೋ ಏನು ಮಾತನ್ನೂ ಆಡಲಾರದೆ, ಅವನ ಭುಜವನ್ನು ತೊಯಿಸಿದಳು

ಸೂರಪ್ಪನ ಆನಂದವು ಉಕ್ಕಿ ಸುರಿಯಿತು. ಅವನು ಆಶ್ಚರ್ಯದಿಂದ ಅಲ್ಲಿಂದಲೇ ಗಟ್ಟಿಯಾಗಿ "ಅಮ್ಮ! ದೇವು ಬಂದಿದಾಳೆ! ಸಿಕ್ಕಿದಳು!" ಎಂದು ಹಜಾರದ ಕಡೆಗೆ ಕೂಗಿದನು. ಒಳಗೆ ಕೆಮ್ಮಿದ ಶಬ್ದ ಕೇಳಿಸಿತು. ಗಂಡ-ಹೆಂಡಿರು ಬೇರೆಯಾದರು. ಹುಡುಗಿಯು ಹೆಜ್ಜೆಯನ್ನು ಹಿಂದಿಡುವಾಗ ಕುಂಟುತ್ತ "ಹಾ!" ಎಂದು ಕುಳಿತುಬಿಟ್ಟಳು ಅವನು "ಏನಾಯ್ತು? ಏನಾಗಿದೆ?" ಎಂದು ಅವಳ ಕಾಲಿನ ಕಡೆಗೆ ನೋಡಿದನು. ಎರಡು ಪಾದಗಳೂ ಧೂಳಿನಿಂದ ಮುಚ್ಚಿದ್ದುವು, ದಪ್ಪವಾಗಿ ಬಾತುಕೊಂಡಿದ್ದುವು. ಎಡಗಾಲಿನಿಂದ ರಕ್ತವು ಸೋರುತ್ತಿತ್ತು. ಇದನ್ನು ಕಂಡೊಡನೆ ಅವನ ತನ್ನ ಓವಲನ್ನು ಹರಿದು, ವರಾಂಡದಲ್ಲಿ ಹಸುವಿಗೆ ಇಟ್ಟಿದ್ದ ನೀರಿನಲ್ಲಿ ಆ ಜೊಂಪನ್ನು ಒದ್ದೆ ಮಾಡಿ, ಅವಳ ಪಾದಕ್ಕೆ ಕಟ್ಟಿದನು.

•ದೇವಲಾಟದಲ್ಲಿ ಸೂದಲನೆಯ ಬಹುಮಾನವನ್ನು ಪಡೆದುದು.

ಇಷ್ಟರಲ್ಲಿ ಇಳಿವಯಸ್ಸಿನ ಒಬ್ಬರು ಮಡಿ ಹೆಂಗುಸು — ಸೂರಪ್ಪನ ತಾಯಿ ಗಂಗಮ್ಮನವರು— ತಡವರಿಸುತ್ತ ಹೊರಗೆ ಬಂದವರು, ಹುಡುಗಿಯ ಕಡೆಗೆ ನೋಡಿ ಅನುಮಾನದಿಂದ "ಇದೇನೋ ಮಗು! ದೇವಮ್ಮ...." ಎಂದು ಹೇಳುವುದರಲ್ಲೇ ಸೂರಪ್ಪನು ಮುಸ್ಸೆ ಬಾಯಿ ಪಾಕಿ "ಹು ಕಣಮ್ಮ, ಅವಳೆ" ಎಂದು ಹೇಳಿದನು. ಅವರು ಬಗ್ಗಿ ನೋಡಿ ದೇವಮ್ಮನ ಮುಖವನ್ನು ಕಂಡು "ಇದೇನೆ ತಾಯಿ? ಎಲ್ಲಿ ಹೋಗಿದ್ದೆಯಮ್ಮಾ, ಇಷ್ಟು ದಿನ? ಏನು ವೇಷ, ಇದು?" ಎಂದು ಕೇಳಿದರು. ಸೂರಪ್ಪನಿಗೂ ಈಗ ಎಚ್ಚರವಾದಂತಾಗಿ, ಅವನೂ ಉತ್ತರವನ್ನು ನಿರೀಕ್ಷಿಸಿದನು. ಆದರೆ ಈ ಪ್ರಶ್ನೆಗಳನ್ನು ಕೇಳಿದ ದೇವಮ್ಮನಿಗೆ ನೆನಪು ಕವಿದು ಬಂದು ಮತ್ತೆ ಕೊರಳು ಉಬ್ಬಿತು; ಮಾತು ಹೊರಡಲಿಲ್ಲ. ಮತ್ತೆ ಅಳುವು ಒತ್ತಿ ಬಂದಿತು. ಉತ್ತರಕ್ಕೆ ಬದಲಾಗಿ ಅತ್ತಳು. ಈಗ ಒಳಗಿನಿಂದ ಒಬ್ಬ ಸಣ್ಣ ವಯಸ್ಸಿನ ಮಡಿ ಹೆಂಗುಸು— ಸೂರಪ್ಪನ ಅಕ್ಕ, ಗುಂಡಮ್ಮ— ಒಳಗಿನಿಂದ ಬಂದು ನೋಡಿ 'ದೇವಮ್ಮ! .... ಏಗಿದಾಳಲ್ಲಮ್ಮಾ! ಏನಾಯ್ತು, ಇವಳಿಗೆ?" ಎಂದು ಕೇಳಿದಳು. ಸೂರಪ್ಪನೂ ಗಂಗಮ್ಮನವರೂ 'ಸ್ವಲ್ಪ ತಡೆದುಕೊ' ಎನ್ನುವಂತೆ ಕೈಸನ್ನೆ ಮಾಡಿದರು. ಇದೇ ಕ್ಷಣದಲ್ಲಿ ಒಳಗಿನಿಂದ "ಅಮ್ಮಾ!....ಅಜ್ಜಿ!" ಎಂದು ಮಗು. ವಿನ ಧ್ವನಿಯು ಕೇಳಿಬಂದಿತು. ಇದನ್ನು ಕೇಳಿದೊಡನೆ ದೇವಮ್ಮನ ಅಳುವು ನಿಂತಿತು. ಅವಳು ತಟ್ಟನೆ ತಲೆಯನ್ನೆತ್ತಿ "ಅಪ್ಪಾ! ಚಂದೂ! ಬಾಮ್ಮಾ ಇಲ್ಲಿ ಇಲ್ಲಿದೀನಿ" ಎಂದು ಏಳುವಂತೆ ಚಲಿಸಿದಳು. ಅಷ್ಟರಲ್ಲೇ ಎರಡು ವರ್ಷದ ಮಗುವು "ಅಮ್ಮಾ! ಅಮ್ಮಾ!" ಎನ್ನುತ್ತ ಕಣ್ಣುಜ್ಜಿಕೊಳ್ಳುತ್ತ, ಹೊಸಿಲನ್ನು ಎಡವಿಕೊಂಡು ಬೀಳುವುದನ್ನೂ ತಿಳಿಯದೆ, ತಪ್ಪುಹೆಜ್ಜೆ ಹಾಕುತ್ತ ಓಡಿ ಬಂದಿತು. ಆದರೆ ದೇವಮ್ಮನನ್ನು ಸಮೀಪಿಸಿದಾಗ ಅವಳ ಕಡೆಗೆ ದಿಟ್ಟಿಸಿ ನೋಡಿ, ಅನುಮಾನದಿಂದ ಅಜ್ಜಿಯ ಬಳಿಯಲ್ಲೇ ನಿಂತಿತು. ಅವಳು "ಚಂದು! ಯಾಕಮ್ಮಾ? ಬಾ, ಕಂದ!" ಎಂದೊಡನೆ 'ಅಮ್ಮಾ!' ಎಂದು ಓಡಿ ಹೋಗಿ ಅವಳ ಕೊರಳನ್ನು ತನ್ನ ಪುಟ್ಟ ಕೈಗಳಿಂದ ಬಳಸಿ ಅಪ್ಪಿಕೊಂಡಿತು. ಅವಳೂ "ಜನ್ನ! ನನ್ನ ಜಿನ್ನ!" ಎನ್ನುತ್ತ ಮಗುವನ್ನು ಬಾಚಿ ತಬ್ಬಿಕೊಂಡು, ತನ್ನ ಕೆನ್ನೆಯನ್ನು ಅದರ ಕೆನ್ನೆಗೆ ಮತ್ತೆ ಮತ್ತೆ ಒತ್ತುತ್ತ ಅವರ ತಲೆ, ಮೈ, ಕೈ-ಕಾಲುಗಳನ್ನೆಲ್ಲ ಅಂಗೈಯಿಂದ ತಡವರಿಸಿದಳು.

ತಾಯಿ-ಮಕ್ಕಳ ಈ ಪುನರ್ಮಿಲನದ ಸೌಖ್ಯಕ್ಕೆ ಅಡ್ಡಿತರದಂತೆ ಯಾರೂ ಸ್ವಲ್ಪ ಹೊತ್ತು ಮಾತನಾಡಲಿಲ್ಲ. ಅನಂತರ ಗಂಗಮ್ಮನವರೇ ಮಾತನ್ನು ಮೊದಲು ಮಾಡಿದರು:

'ದೇವಮ್ಮಾ, ನಿನಗಾಗಿ ಎಷ್ಟು ಹುಡುಕಿಸಿದೆನಮ್ಮ— ನಿನ್ನ ಗಂಡ ಸುತ್ತಮುತ್ತಿನ ಹಳ್ಳಿಗೆಲ್ಲ ಜನ ಕಳುಹಿಸಿ ಹುಡುಕಿಸಿದ; ಹಳ್ಳಿಯ ಕೆರೆ-ಬಾವಿಗಳನ್ನೂ ಕೂಡ ತೋಡಿಸಿ ನೋಡಿಸಿದ; ಪೋಲೀಸಿನೋರಿಗೂ ಸಮಾಚಾರ ಕೊಟ್ಟಿದ್ದಾಯ್ತು. ಇಷ್ಟಾದರೂ ನಿನ್ನ ಸುಳಿವೇ ತಿಳೀಲಿಲ್ಲ. ಆ ಸಂಜೆ ಸೀನೀರು ತರೋದಕ್ಕೆ ಬಾವಿಗೆ ಹೋದ ಮೇಲೆ, ಮಾಯವಾದ ಹಾಗೇ ಆಗಿತ್ತಲ್ಲ. ನೀರು ತುಂಬಿದ ಕೊಡ ಕೂಡ ಬಾವಿಯ ಕಟ್ಟೇ ಮೇಲೇ ಇತ್ತು. ನೀನು ಎಲ್ಲಿಗೆ ಹೊರಟು ಹೋಗಿದ್ದೆಯೆ, ತಾಯಿ?"

"ನಾನಾಗಿ ಎಲ್ಲಿಗೆ ಹೋಗಲಿ? ಏನು ಕಾರಣ ಇತ್ತು?" ಅವಳು ನಿದಾನವಾಗಿ ಹೇಳಿದಳು.

"ಮತ್ತೆ?" ಸೂರಪ್ಪನು ಆತುರದಿಂದ ಕೇಳಿದನು.

"ಅಪಹರಿಸಿಕೊಂಡು — ಎಳೆದುಕೊಂಡು ಹೋದರು — ದುಷ್ಟರು!"

"ಹ್ಞ! ಯಾರು?"

"ಕಂದಾರಿಗಳು."

"ತೋಟದ ಹತ್ತಿರ ಬಿಡಾರ ಮಾಡಿದ್ದೋರು?"

"ಹುಂ" ದೇವಮ್ಮನು ತಲೆಯಾಡಿಸಿದಳು.

"ಪಾಪಿ ಮುಂಡೇ ಮಕ್ಕಳೇ! ಇವರಿಗೇನು ಬಂದಿತ್ತು ಹೊತ್ತು ಕಾಲ!" ಗಂಗಮ್ಮನವರು ಶಪಿಸಿದರು.

"ಅದು ಹೇಗೆ ಸಾಧ್ಯವಾಯ್ತು ಅಂತ, ಅವರ ಕೈಗೆ ಸಿಕ್ಕೋ ಅಷ್ಟು ಹತ್ತಿರ...." ಸೂರಪ್ಪನು ಅನುಮಾನಿಸಿದ.

"ನಾನು ಹೋಗಲಿಲ್ಲ ಆವೊತ್ತು ನೀನೀರಿಗೆ ಹೋದಾಗ ಮುಚ್ಚಂಜೆಯಾಗಿತ್ತು. ನಾನು ಬೇಗ ಬೇಗ ಒಂದು ಕೊಡ ನೀರು ಸೇದಿಕೊಂಡು, ಇನ್ನೇನು—ತಲೆಯ ಮೇಲೆ ಇಟ್ಟುಕೋತಾ ಇದ್ದೆ. ಅಷ್ಟು ಹೊತ್ತಿಗೆ ಒಬ್ಬ ಕಂದಾರಿ ಗಂಡುಸು ಅಲ್ಲಿಗೆ ಬಂದ. ಯಮನ ಹಾಗಿದ್ದ. ನಂಗೆ ಭಯವಾಯ್ತು. ಕೊಡ ಅಲ್ಲೆ ಬಿಟ್ಟು ಓಡಿ ಬರೋಣ ಎನ್ನಿಸಿತು. ಆದರೆ ಕಾಲೇ ಬರಲಿಲ್ಲ. ಅವನು ಅಷ್ಟು ನೀರು ಕೇಳಿ, ತನ್ನ ದಪ್ಪ ರುಮಾಲನ್ನು ಬಿಚ್ಚಿ ಕೊಂಕುಳಿಗಿಟ್ಟುಕೊಂಡು ಮುಂಡಿಯೂರಿ ಕುಳಿತ. ನಂಗೇನೂ ತೋಚದೆ ಹಾಗೇ ಕಟ್ಟೆಯ ಮೇಲಿನಿಂದ ಕೊಡ ಬಗ್ಗಿಸಿದೆ. ಸಾಕಾದ ಮೇಲೆ ಅವನು ಎದ್ದು ತನ್ನ ರುಮಾಲಿನಿಂದ ಗಡ್ಡ ಬಾಯಿ ಎಲ್ಲ ಒರಸಿಕೊಳ್ಳುತ್ತ, ಅತ್ತಿತ್ತ ತಿರುಗಿ ನೋಡಿ, ಯಾರನ್ನೂ ಕಾಣದೆ, ತಟ್ಟನೆ ಮುಂದೆ ನುಗ್ಗಿ, ತನ್ನ ರುಮಾಲನ್ನು ನನ್ನ ಬಾಯಿಗೆ ಬಿಗಿದ. ನನಗೆ ಕೂಗಿಕೊಳ್ಳಲಾಗಲಿಲ್ಲ. ಅಷ್ಟು ಒದ್ದಾಡಿದೆ. ಬಿಡಾರವನ್ನು ಸೇರಿದ ಕೆಲವು ನಿಮಿಷಗಳಲ್ಲೇ ಅವರ ಗುಂಪು ಪ್ರಯಾಣಕ್ಕೆ ಸಿದ್ಧವಾಗಿ ಹಳ್ಳಿಯನ್ನು ಬಿಟ್ಟಿತು."

"ಎಲ, ಎಲಾ! ಎಷ್ಟು ಬೇಗ! ನಾವು ಹುಡುಕೋದಕ್ಕೆ ಹೋಗುವ ಹೊತ್ತಿಗಾಗಲೇ ಅವರು ಎಲ್ಲೆಲ್ಲೂ ಕಂಡು ಬರಲಿಲ್ಲ. ಯಾವ ದಾರಿಯಲ್ಲೂ ಅವರು ಸಿಕ್ಕಲಿಲ್ಲ. 'ಎಲ್ಲೋ ಮಧ್ಯಾನ್ಹದಲ್ಲೇ ಹೋಗಿಬಿಟ್ಟಿರಬೇಕು, ನಿಂಗೂ ಅವರಿಗೂ ಸಂಬಂಧವೇ ಇರಲಾರದು!' ಅನ್ನೋ ಹಾಗೆ ಅನುಮಾನ ಕೂಡಬಂತು" ಸೂರಪ್ಪ ನೆನಸಿಸಿಕೊಂಡು ಹೇಳಿದ.

"ಅವರು ಯಾವ ದಾರಿಯನ್ನೂ ಹಿಡಿಯಲಿಲ್ಲ. ಕಾಡು-ಮೇಡುಗಳಲ್ಲೇ ರಾತ್ರಿಯೆಲ್ಲ ನಡೆದರು."

"ನೀನೂ ಅವರ ಜೊತೆಯಲ್ಲೇ ಅಲ್ಲೆಲ್ಲ ನಡೆದೆಯೆ?"

"ಹುಂ, ಹಳ್ಳಿಯಿಂದ ಒಂದೆರಡು ಮೈಲಿನಷ್ಟು ಅವನು ನನ್ನನ್ನು ಹಾಗೇ ಹೊತ್ತುಕೊಂಡು ನಡೆದ. ಕಾಡಿನ ಮಧ್ಯದಲ್ಲಿ ನನ್ನ ಕಟ್ಟುಗಳನ್ನು ಬಿಚ್ಚಿ, ನಾಲ್ಕಾರು ಜನ ಸುತ್ತುಗಟ್ಟಿ ದೊಡ್ಡ ಚಾಕುಗಳನ್ನು ತೋರಿಸುತ್ತ 'ಗಪ್ ಚುಪ್!' ಎಂದು ಬಹಳವಾಗಿ ಬೆದರಿಸಿ, ನಡೆಯುವಂತೆ ಸನ್ನೆ ಮಾಡಿದರು. ನಾನು ಪ್ರತಿಭಟಿಸಿದ್ದರೆ, ಮೊಂಡುತನ ಮಾಡಿದ್ದರೆ, ಅವರು ಕೊಂದು ಬಿಡೋದಕ್ಕೂ ಹೇಸುವುದಿಲ್ಲ— ಅಂತ ನಂಗೆ ಖಂಡಿತವಾಯ್ತು. ನಂಗೆ ಸಾಯೋದಕ್ಕೆ ಇಷ್ಟವಿರಲಿಲ್ಲ. ಇಲ್ಲಿಗೆ ಮತ್ತೆ ಹೇಗಾದರೂ ಬರುವ ಆಶೆಯಿತ್ತು. ಏನು ಮಾಡಲಿ? ನಡೆದೆ."

"ಪಾಪ! ಏನು ಅನುಭವಿಸಿದೆಯಮ್ಮಾ" ಗಂಗಮ್ಮನವರು ಕರಗಿ ಹೇಳಿದರು.

"ಧೂರ್ತರಾ! ಅಲ್ಲಿ ಪೋಲೀಸಿನವರು ಗುಮಾನಿಯ ಮೇಲೆ ಅವರನ್ನು ಹಿಡಿದಾಗಲೂ ನೀನು ಅವರೊಡನೆ ಇರಲಿಲ್ಲವಲ್ಲ?" ಸೂರಪ್ಪನು ಕೋಪ, ಆಶ್ಚರ್ಯಗಳಿಂದ ಕೇಳಿದ.

"ಅವರು ಬಹಳ ಎಚ್ಚರಿಕೆಯಿಂದ ನನ್ನ ಕೈಕಾಲು— ಬಾಯಿಗಳನ್ನು ಕಟ್ಟಿ, ನನ್ನನ್ನು ಯಾವುದೋ ಪೊದೆಯೊಳಗೋ, ಬಂಡೆಯ ಸಂದಿನಲ್ಲೋ ಬಚ್ಚಿಟ್ಟು ತಾವು ದೂರವಲ್ಲಿರುತ್ತಿದ್ದರು. ಭಯವು ತಪ್ಪಿ ಹೋಗಿ ರಾತ್ರಿ ಪ್ರಯಾಣ ಮುತ್ತ ಮೊದಲಾದಾಗಲೇ ನಂಗೆ ಬಂಧವಿಮೋಚನೆಯಾಗುತ್ತಿತ್ತು."

"ಅನ್ನ, ಆಹಾರ!"

"ನಾಲ್ಕು ದಿನ ಏನೂ ಇಲ್ಲದೆ ಕಳೆದೆ. ಅವರು ತಂದಿಟ್ಟದ್ದನ್ನು ಮುಟ್ಟಲಿಲ್ಲ. ಆದರೆ ಐದನೆಯ ದಿನ ಹಸಿವು, ನೀರಡಿಕೆ ನಿತ್ರಾಣ ಅಸಾಧ್ಯವಾಗಿ...."

"ತಿಂದು ಬಿಟ್ಟೆಯಾ, ಆ ಮುಸಲ್ಮಾನರ ಅನ್ನ?" ಗುಂಡಮ್ಮನು ಆತುರದಿಂದ ಕೇಳಿದಳು.

ದೇವಮ್ಮನು ತಲೆ ತಗ್ಗಿಸಿ ಸುಮ್ಮನಿದ್ದಳು.

"ಬಡಪಾಯಿ, ಇನ್ನೇನು ಮಾಡುತ್ತಾಳೆ?" ಸೂರಪ್ಪನು ವಹಿಸಿಕೊಂಡನು.

"ಆದರೆ ಜಾತಿ, ಮತ....." ಗುಂಡಮ್ಮನು ಮುಂದು ವರೆಸಿದಳು.

"ಇರಲಿ ಬಿಡಕ್ಕಾ, ಆದೇನು ಮಾತು. ನೋಡೋಣ" ಎಂದು ಅಕ್ಕನಿಗೆ ಹೇಳಿ, ಸೂರಪ್ಪನು ಹೆಂಡತಿಯ ಕಡೆಗೆ ತಿರುಗಿ

"ಆ ಮೇಲೆ? ಹೇಗೆ ಬಂದೆ ಇಲ್ಲಿಗೆ?" ಎಂದು ಕೇಳಿದನು.

"ನಾವಂತೂ ನಿನ್ನ ಆಸೇನೇ ಬಿಟ್ಟು ಬಿಟ್ಟಿದ್ದೆವಮ್ಮಾ" ಗಂಗಮ್ಮನವರು ಹೇಳಿದರು.

"ಐದನೆಯ ಸಂಜೆಯ ಹೊತ್ತಿಗೆ ದೊಡ್ಡ ಊರಿನ ಹತ್ತಿರಕ್ಕೆ ಹೋದೆವು. ಚೆನ್ನಾಗಿ ರಾತ್ರಿ ಆದ ಮೇಲೆ ಊರನ್ನು ಹೊಕ್ಕೆವು. ಅನುವಾನ ಹುಟ್ಟಿದ ಹಾಗೆ ಗುಂಪಿನ ಹೆಂಗುಸರೆಲ್ಲ ಬುರುಕಿ ಹಾಕಿದರು. ನಂಗೂ ಒಂದನ್ನು ಹಾಕಿದರು.

"ಅಬ್ಬಬ್ಬಾ; ಎಂಥಾ ಜನ!....ಆ ಮೇಲೆ?"

"ಅದೇ ರಾತ್ರಿ ಬಹಳ ಹೊತ್ತಾದ ಮೇಲೆ, ನನ್ನನ್ನು ಒಂದು ಮಸೀದಿಗೆ ಕರೆದುಕೊಂಡು ಹೋದರು. ಅಲ್ಲಿ ಒಬ್ಬ ಮುಲ್ಲಾ, ನಂಗೆ ಏನೋ ನುಂಕ್ಕ ಹೇಳುವಂತೆ ಹೇಳಿಕೊಟ್ಟ. ಅದು 'ಕಲ್ಮ' 'ನಮಾಸ್' ಅಂತೆ. ನಾನು ಮೊದಮೊದಲು ವಿರೋಧಿಸಿ, ಆದನ್ನು ಹೇಳಲಿಲ್ಲ."

"ಕಡೆಗೆ ಹೇಳಬಿಟ್ಟಿಯಾ?" ಗುಂಡಮ್ಮನು ಪ್ರಶ್ನಿಸಿದಳು.

"ಹೇಳದಿದ್ದರೆ ಗೋಮಾಂಸವನ್ನು ಬಾಯಿಗೆ ತುರುಕಿ ಜಾತಿ ಕೆಡಿಸುವುದಾಗಿ ಬೆದರಿಸಿದರು. ಅದೇನು ಸುಳ್ಳು ಬೆದರಿಕೆಯಲ್ಲ ಇನ್ನೇನು ಮಾಡಲಿ? ಹಾಗೆ ಜಾತಿ ಕೆಡುವುದಕ್ಕಿಂತ ಅದನ್ನು ಹೇಳೋದೇ ಕಡಿಮೆಯ ಪಾಪ— ಅಂತ ತಿಳಿದು ಹೇಳಿಬಿಟ್ಟೆ. ಅವರೆಲ್ಲರೂ ಸಂತೋಷಪಟ್ಟು 'ಇನ್ನು ನೀನು ನಮ್ಮವಳಾದೆ' ಅಂದರು"

"ಹಾಗಾದರೆ ಜಾತಿ ಹೋಯ್ತು?" ಗುಂಡಮ್ಮನು ಒತ್ತಿ ಕೇಳಿದಳು.

"ಅದೇನೋ ಕಾಣೆ; ಅವರು ಹಾಗಂದರು!"

ಡೋಂಗರೆ ಬಾಲಾಮೃತ
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

"ಏನು ಅನ್ಯಾಯ!" ಗಂಗಮ್ಮನವರು ಮರುಗಿ ಗಂಭೀರರಾದರು.

"ಇದಕ್ಕೇನು ಮಾಡೋದು, ದೇವರೆ!" ಸೂರಪ್ಪನೂ ಗಂಭೀರವಾಗಿ ಆಲೋಚಿಸತೊಡಗಿದ.

ಸ್ವಲ್ಪ ಹೊತ್ತು ಇವರ ಮಧ್ಯೆ ಮಾತಿರಲಿಲ್ಲ. ದೇವಮ್ಮನು ಒಬ್ಬರ ಮುಖದಿಂದ ಇನ್ನೊಬ್ಬರ ಮುಖದ ಕಡೆಗೆ ತನ್ನ ದೈನ್ಯ-ದೃಷ್ಟಿಯನ್ನು ಬೀರುತ್ತ, ಮಗುವನ್ನು ಮತ್ತಷ್ಟು ಬಿಗಿಯಾಗಿ ಅಪ್ಪಿ ಕೊಳ್ಳುತ್ತಿದ್ದಳು.

"ಹಾಗಾದರೆ ಇಷ್ಟೆಲ್ಲ ಆಯ್ತು!" ಸೂರಪ್ಪನು ತನಗೆ ತಾನೇ ಗಟ್ಟಿಯಾಗಿ ಹೇಳಿಕೊಂಡ.

"ಅಷ್ಟಕ್ಕೇ ಮುಗಿಯಲಿಲ್ಲ, ನನ್ನ ಗತಿ!" ನಿಂತಿದ್ದ ಕಣ್ಣೀರು ಮತ್ತೆ ಹರಿಯ ತೊಡಗಿತು.

"ಇನ್ನೂ ಇದೆಯೆ? ಆ? ಹುಂ. ಹೇಗೆ ತಪ್ಪಿಸಿಕೊಂಡು ಬಂದೆ?" ಸೂರಪ್ಪನು ಭಯ, ಆವೇಶಗಳಿಂದ ಕೇಳಿದ.

"ನಾವು ಮುಸಲ್ಮಾನನೊಬ್ಬನ ಮನೆಯಲ್ಲಿ ಉಳಿದುಕೊಂಡೆವು. ಆ ರಾತ್ರಿಯಲ್ಲಿ ನಡೆದ ಮಾತು-ಕತೆಯಿಂದ ಆ ಕಂದಾರಿಗಳು ನನ್ನನ್ನು ಆ ಮನೆಯವನಿಗೆ ಮದುವೆಗೋಸ್ಕರ ಮಾರಿದರೆಂದು ತಿಳಿಯಿತು."

"ಹೆ!"

"ಹುಂ ಹಾಗೇ ಇತ್ತು. ಮೂರನೆಯ ದಿನ ಒಬ್ಬ ಕಾಜಿ ಬಂದ. ನಂಗೆ 'ನಿಕಾ' ಆಗುವುದಾಗಿ ಕಂದಾರಿಗಳು ತಿಳಿಸಿದರು. ನಾನು ಬೇಡವೆಂದು ಅಂಗಲಾಚಿ ಬೇಡಿಕೊಂಡೆ ಅವರು ಕೇಳಲಿಲ್ಲ ನನ್ನ ಎದೆ ಒಡೆಯುವಂತೆ ಅಳುಬಂತು; ಆತ್ತೆ. ಅವರ ಮನಸ್ಸು ಬೇರೆ ಕರಗಲಿಲ್ಲ. ಕಡೆಗೆ ಕೋಪದಿಂದ ಪೊಂಡುತನ ಮಾಡಿ ವಿರೋಧಿಸಿದೆ. ಅವರೇ ಬಗ್ಗುವರು? ಪೊದಲು ಪುಸಲಾಯಿಸಿ ನೋಡಿದರು. ಪ್ರಯೋಜನವಾಗಲಿಲ್ಲ. ಏನೇನೋ ಆಶೆ ತೋರಿಸಿದರು. ನಾನು ಒಪ್ಪಿಕೊಳ್ಳಲಿಲ್ಲ. ಆ ಮೇಲೆ ಬೆದರಿಸಿದರು. ಅಬ್ಬಬ್ಬ, ಎಂಥೆಂಥ ಬೆದರಿಕೆ! ಇಲ್ಲಿ ಹೇಳಲಾರೆ ಆದರೆ ನಾನು ನಾಶಕ್ಕೆ ಸಿದ್ಧಳಾಗಿದ್ದು ಅವನ್ಕೆಲ್ಲ ಸಿದ್ಧಪಡಿಸಿದೆ. ಕಡೆಗೆ ಅವರ ಬಲಾತ್ಕಾರದಿಂದ ಕಾಜಿಯು ಕೆಲಸವನ್ನು ನೆರವೇರಿಸಿದರು."

"ಮದುವೆಯೂ ಆಗಿ ಹೋಯ್ತೆ?" ಗುಂಡಮ್ಮನು ಚುಚ್ಚಿ ಕೇಳಿದಳು.

"ಹುಂ. ಹೊರಾಚಾರ."

"ರಾಮ! ರಾಮ!" ಗಂಗಮ್ಮನವರು ನಿಟ್ಟುಸಿರನ್ನು ಬಿಟ್ಟರು.

ಸೂರಪ್ಪನ ಬಾಯಿ ಕಟ್ಟಿ ಹೋಗಿತ್ತು. ದೇವಮ್ಮನು ಮಾತನ್ನು ಮುಂದುವರಿಸಿದಳು:

"ನನ್ನ ಹಟವನ್ನು ನೋಡಿದ ಮನೆಯವನು, ನಾನು ಸರಿಯಾಗುವವರೆಗೂ ಅವರಿಗೆ ಹಣ ಕೊಡೋದಿಲ್ಲ, ಅವರು ಅಲ್ಲಿಯ ತನಕ ಅಲ್ಲೇ ಇರಬೇಕು—ಅಂತ ಹೇಳಿದ. ಆವರು ತಮ್ಮ ಕೆಲಸ ಆಯ್ತು, ಮುಂದೆ ಅವನೇ ನನ್ನನ್ನು ಹೇಗೆ ಬೇಕಾದರೂ ಸರಿಮಾಡಿಕೋ ಬೇಕು, ಹಣ ಕೊಟ್ಟುಬಿಡಬೇಕು—ಅಂತ ಕೇಳಿದರು. ವ್ಯಾಜ್ಯಕ್ಕೆ ಮೊದಲಾಯ್ತು. ಆಗ ನಾನು, 'ಇವರೇನಾದರೂ ಇವನು ಹೇಳಿದ ಹಾಗೇ ಇದ್ದು ಬಿಟ್ಟರೆ ನಂಗೆ ಉಳಿಗಾಲವಿಲ್ಲ ಅಂತ ಯೋಚಿಸಿಕೊಂಡು, ಹಟಕ್ಕಿಂತ ಉಪಾಯ ಮಾಡಿ ತಪ್ಪಿಸಿಕೋಬೇಕು—ಅಂತ ನಿಶ್ಚಯ ಮಾಡಿದೆ. ನನ್ನ ಗತಿಗೆ ಹೊಂದಿಕೊಂಡವಳ ಹಾಗೆ ನಟಿಸಿ, ನಾನು ಸರಿಯಾಗಿರುವುದಾಗಿ ಒಪ್ಪಿಕೊಂಡೆ. ಇದನ್ನು ಕಂಡು ಅವನಿಗೂ ಅವರಿಗೂ ಸಂತೋಷವಾಯ್ತು. ಅವರು ಹಣವನ್ನು ತೆಗೆದುಕೊಂಡು ಹೋದರು."

"ಹುಂ!"

"ಅವನಲ್ಲಿ ಪ್ರೇಮವನ್ನು ನಟಿಸಿದೆ. ಅವನನ್ನು ಆನಂದಪಡಿಸಿದೆ. ನನ್ನಲ್ಲಿ ನಂಬಿಕೆ ಹುಟ್ಟಿಸಿದೆ. ನನ್ನ ಬಗ್ಗೆ ಧೈರ್ಯ ಹುಟ್ಟಿಸಿದೆ."

"ಹೂಂ."

"ಸಂಜೆಯಲ್ಲಿ ಹೊರಗಾಗಿರುವುದಾಗಿ ತಿಳಿಸಿ ಆ ದಿನ, ಮಾರನೆಯ ದಿನ ಎರಡನ್ನೂ ಕಳೆದೆ. ಮೂರನೆಯ ರಾತ್ರಿ ಅವನು ಶಂಕೆ ಪಡದೆ ಮಲಗಿದ್ದಾಗ ತಪ್ಪಿಸಿಕೊಂಡೆ. ದಿನದಲ್ಲೆಲ್ಲ ಅನಿತಿದ್ದು, ರಾತ್ರಿಯಲ್ಲಿ ಬೆಂಗಳೂರು-ಹರಿಹರದ ರಸ್ತೆಗೆ ಹೆತ್ತಿರವಾಗಿ ಹೊಲಗಳಲ್ಲೇ ನಡೆದು ನಡೆದು, ದಾರಿ ಪತ್ತೆಮಾಡಿಕೊಂಡು ಬಂದೆ."

"ಎಂಥ ಸಾಹಸ ನಿಂದು!" ಗಂಗಮ್ಮನವರು ಆಶ್ಚರ್ಯಪಟ್ಟರು.

"ಅಂತೂ ಮತ್ತೆ ಬಂದೆಯಲ್ಲ!" ಸೂರಪ್ಪನು ತೃಪ್ತಿಯಿಂದ ಹೇಳಿದನು.

"ಆದರೇನು ಜಾತಿ ಕೆಟ್ಟು ಹೋಗಿದ್ದಾಳಲ್ಲ!" ಗುಂಡಮ್ಮನು ಆಕ್ಷೇಪಿಸಿದಳು.

"ಅಕ್ಕ!" ಸೂರಪ್ಪನು ಕಠಿಣವಾಗಿ ಹೇಳಿದನು.

"ಇರೋದು ಹೇಳಿದೆ ಕಣೋ; ಅದಕ್ಕೇನು? ಆದೇನು ಸುಳ್ಳೆ? ಮದುವೆ ಸಹಿತ ಆಗಿದೆ" ಗುಂಡಮ್ಮನು ಸಾಧಿಸಿದಳು.

"ಅತ್ತಿಗೆಮ್ಮಾ, ನಾನೇನು ಬೇಕೂಂತ ತಪ್ಪು ಮಾಡಲಿಲ್ಲವಲ್ಲ!" ದೇವಮ್ಮನು ದೈನ್ಯದಿಂದ ಹೇಳಿದಳು

"ಇರಬಹುದು. ನಾನು ಹಾಗೆ ಹೇಳಲಿಲ್ಲ. ಆದರೆ ಆದದ್ದು ಆಗಿ ಹೋಯ್ತೊ? ಇಲ್ಲ ಅನ್ನೋದಕ್ಕಾಗುತ್ತೆಯೆ?" ಗುಂಡಮ್ಮನು ಕಠಿಣವಾಗಿ ಲೆಕ್ಕ ಹೇಳಿದಳು.

ದೇವಮ್ಮನು ಗಂಡನನ್ನೂ ಅತ್ತೆಯನ್ನೂ ನೋಡಿದಳು. ಅವರು ಪೆಚ್ಚಾಗಿ ಸುಮ್ಮನಿದ್ದರು. ತಾನೂ ತಲೆತಗ್ಗಿಸಿದಳು. ಭುಜದ ಮೇಲೇ ಮಲಗಿ ಮತ್ತೆ ನಿದ್ರಿಸುತ್ತಿದ್ದ ಮಗುವನ್ನು ತೊಡೆಯ ಮೇಲೆ ಮಲಗಿಸಿಕೊಂಡು ತಟ್ಟಿದಳು. ಸ್ವಲ್ಪ ಹೊತ್ತು ಯಾರೂ ಮಾತನಾಡಲಿಲ್ಲ.

"ಈಗೇನು ಮಾಡೋದಮ್ಮಾ?" ಸೂರಪ್ಪನು ಕೇಳಲಾರದೆ ತಾಯಿಯನ್ನು ಪ್ರಶ್ನಿಸಿದ. ಸಿಡಿದು ಹೋಗುವ ತಲೆಯನ್ನ

ಪಿಡಿಯುವಂತೆ ಎರಡು ಕೈಗಳಿಂದಲೂ ತಲೆಯನ್ನು ಹಿಡಿದು ಕೊಂಡು ಕುಳಿತು ಬಿಟ್ಟ.

"ನಂಗೇನೂ ತೋಚದ ಹಾಗಿದೆಯಪ್ಪಾ" ಗಂಗಮ್ಮನವರು ಆಲೋಚಿಸುತ್ತ ಹೇಳಿ, ಇನ್ನೊಂದು ಬಾರಿ ನಿಟ್ಟುಸಿರನ್ನು ಬಿಟ್ಟರು.

"ಯಾಕೆ? ತಪ್ಪು ಮಾಡಿಲ್ಲ. ಆಚಾರ ತಪ್ಪಿದೀನಿ ಅಷ್ಟೆ; ಇನ್ನೇನೂ ಮಾಡಿಲ್ಲ. ಅದೂ ನಿರ್ವಾಹವಿಲ್ಲದೆ.."

"ಹುಂ. ಹುಂ. ಗೊತ್ತು. ಆಧೈರ್ಯ ಪಡಬೇಡ!" ಸೂರಪ್ಪನು ಸಮಾಧಾನದ ಮಾತನ್ನು ಹೇಳಿದನು.

"ಪ್ರಾಯಶ್ಚಿತ್ತ-ಶುದ್ಧಿ ಮಾಡಿ ನನ್ನ.." ಅವಳು ಮಾತನ್ನು ಪೂರ್ತಿ ಮಾಡಲಿಲ್ಲ.

"ಆಗಲಿ. ಆಗಲಿ." ಅವನು ಉತ್ತೇಜನ ಕೊಟ್ಟನು.

"ಏನೋಪ್ಪ. ನಂಗೆ ಅಸುಮಾನ!" ಗುಂಡಮ್ಮನು ಉದ್ಗಾರ ತೆಗೆದಳು.

"ಅಕ್ಕಾ! ನೀನು ಸ್ವಲ್ಪ ಸುಮ್ಮನೆ ಇದ್ದರೆ...." ಸೂರಪ್ಪನು ಬೇಸರದಿಂದ ಗದರಿಸಿದಂತೆ ಹೇಳಿದನು

"ಇದೇಕೆ ಹೀಗನ್ನುತ್ತೀಯೋ? ಅವಳ ಮೇಲೆ ನಂಗೇನು ದ್ವೇಷವೆ? ಹಾಗೇಂತ ಆಚಾರ ವಿಚಾರಿಸದೆ ಇರೋದಕ್ಕಾಗುತ್ತೆಯೆ? ಬಿಡೋದಕ್ಕಾಗುತ್ತೊ? ಸರಿ; ಬಿಡು!"

ಸೂರಪ್ಪನು ಸುಮ್ಮನೆ ಅಸಹಾಯಕತೆಯ ಹಿಂಸೆಯಿಂದ ಕೈ ಒದರಿದನು. ಮತ್ತೆ ಯೋಚಿಸಿಕೊಂಡು "ಅಮ್ಮಾ, ಶುದ್ದಿಯೋಗಿದ್ದಿಯೋ, ಎಲ್ಲ ಆಗುತ್ತೆ. ಈಗ ಇವಳಂತೂ ಸ್ಥಳಕ್ಕೆ ಬರಬೇಕೋ! ನಡೀರಿ ಎಲ್ಲರೂ ಒಳಕ್ಕೆ" ಎಂದು ಒಳಕ್ಕೊಂದು ಹೆಜ್ಜೆಯಿಟ್ಟನು. ದೇವಮ್ಮನು ಮಗುವನ್ನೆತ್ತಿಕೊಳ್ಳಲು ಕೈ ಹಾಕಿದಳು. ಆದರೆ ಆ ಕ್ಷಣದಲ್ಲಿ ಗುಂಡಮ್ಮನು "ಇದೇನೋ ನಾಚಿಕೆಗೇಡು? ಹೇಳದೇ ಕೇಳದೆ ನೀನೇ ಏನೇನೋ ಮಾಡುತೀಯೇ? ಜನ್ಮಾಯ್ತು ಬಿಡು!" ಎಂದಳು ಅವನು "ನೀನು ಸುಮ್ಮನೆ ಇರು. ಸಾಕು" ಎಂದು ಗುಂಡಮ್ಮನಿಗೆ ಹೇಳಿ, ಹೆಂಡತಿಯನ್ನು ನೋಡಿ "ಹುಂ. ಏಳು. ಬಾ!" ಎಂದನು. ಈಗ ತಾಯಿಯು ಬಾಯಿ ಹಾಕಿ "ಅಪ್ಪಾ, ದುಡುಕಬೇಡ, ಸ್ವಲ್ಪ ತಾಳು. ನಿಂಗೆ ನಿನ್ನ ಹೆಂಡತಿಯ ಮೇಲೆ ಹೇಗೋ ನಂಗೂ ನನ್ನ ಸೊಸೆಯ ಮೇಲೆ ಪ್ರೇಮ, ಅಭಿಮಾನ ಎಲ್ಲ ಇವೆ. ಆದರೆ ಇಂಥ ವಿಷಯದಲ್ಲಿ ತಿಳಿದೋರನ್ನು ವಿಚಾರಿಸದೆ ನಮ್ಮ ಇಷ್ಟದಂತೇ ಮಾಡಿಬಿಡಬಾರದು; ಅಲ್ಲವೆ?" ಎಂದು ತಡೆದರು. ಸೂರಪ್ಪನಿಗೆ ಬೇಸರು, ಸಿಟ್ಟು ಎರಡೂ ಮೇಲೆ ಹಾಯ್ದುವು. ಅವನು ಮುಬ್ಬು ಗಂಟಿಕ್ಕಿ "ಇನ್ನು ಯಾರು ಏನು ಹೇಳಬೇಕವ್ವಾ? ನೀನು ಒಪ್ಪಿದರೆ ಆಯ್ತು!" ಅಂದ

"ಹಾಗಲ್ಲ, ಮಗು, ಈ ವಿಚಾರದಲ್ಲಿ ನಮಗಿಂತ ತಿಳಿದೋರಿಲ್ಲವೆ? ಪಕ್ಕದ ಮನೆ..."

"ಹುಂ. ಆಗಲಿ ಕಾಳಪ್ಪ ಶಾಸ್ತ್ರಿಗಳನ್ನೇ ಕರೀತೇನಿ.... ಏನು ಅನುಮಾನವೋ.." ಎಂದು ಸೂರಪ್ಪನು ಜಗುಲಿಯನ್ನು ಇಳಿದನು.

"ಮಗು, ಈಗ ಬೇಡ. ಬೆಳಗ್ಗೆ...." ತಾಯಿಯು ಹೇಳುತ್ತಿದ್ದರು. ಆದರೆ ಅದು ಅವನ ಕಿವಿಗೇ ಬೀಳಲಿಲ್ಲ. ಅವನು ಸರಸರನೆ ಹೋಗಿ ಶಾಸ್ತ್ರಿಗಳ ಮನೆಯ ಬಾಗಿಲನ್ನು ಜೋರಾಗಿ ತಟ್ಟಿ "ಶಾಸ್ತ್ರಿಗಳೆ! ಶಾಸ್ತ್ರಿಗಳೆ!" ಎಂದು ಕೂಗಿದನು.

ಕಾಳಪ್ಪಶಾಸ್ತ್ರಿಗಳು ಎದ್ದು ಬರುವುದು ಕೊಂಚ ಹೊತ್ತಾಯಿತು. ಅಷ್ಟು ಹೊತ್ತಿಗೆ ಸೂರಪ್ಪನು ಇನ್ನೂ ನಾಲ್ಕಾರು ಬಾರಿ ಬಾಗಿಲನ್ನು ತಟ್ಟಿ ಕೂಗಿದನು. ಶಾಸ್ತ್ರಿಗಳು ಬಾಗಿಲನ್ನು ತೆರೆಯುತ್ತ "ಯಾರು? ಇದೇನು ಗಲಾಟೆ?" ಎಂದು ಗದರಿಸಿದರು.

"ಜೋಯಿಸರೆ, ಅವಳು ಮತ್ತೆ ಬಂದಿದಾಳೆ."

"ಯಾರು, ಸೂರಪ್ಪನೇ? ಏನೆಂದೆ ನಿನ್ನ ಹೆಂಡತಿ ಬಂದಳೆ?" ಶಾಸ್ತ್ರಿಗಳು ಕಣ್ಣುಗಳನ್ನು ಉಜ್ಜಿಕೊಳ್ಳುತ್ತ ಕೇಳಿದರು.

"ಹುಂ."

"ಛಲ! ಸದ್ಯ ಸಿಕ್ಕಿದಳಲ್ಲ. ಬಹಳ ಒಳ್ಳೇ ಹುಡುಗಿ, ಪಾಪ! ನೀನು ಅದೃಷ್ಟವಂತ. ಇಷ್ಟು ದಿನ...."

"ಆಡೆಲ್ಲ ಹೇಳುತೀನಿ. ದೊಡ್ಡ ಕತೆ. ಮನೆಗೆ ಬನ್ನಿ!"

"ಈಗ?"

"ಹುಂ, ನಿಮ್ಮನ್ನು ಕೇಳೋ ವಿಚಾರ ಇದೆ."

"ನಡಿ." ಬಾಗಿಲನ್ನು ಮುಂದಕ್ಕೆ ಮಾಡಿಕೊಂಡು ಹೊರಟರು.

ಸೂರಪ್ಪನ ಮನೆಯ ಮೆಟ್ಟಿಲನ್ನು ಹತ್ತುವಾಗಲೇ ಶಾಸ್ತ್ರಿಗಳು ದೂರದಲ್ಲಿ ದೇವಮ್ಮನನ್ನು ನೋಡಿ "ದೇವಮ್ಮಾ, ಬಂದೆಯಾವಮ್ಮಾ. ಕ್ಷೇಮವಾಗಿದೀಯ?" ಎಂದು ಹರ್ಷದಿಂದ ಕೇಳುತ್ತ ಹತ್ತಿರಕ್ಕೆ ಬಂದು, ಅವಳ ಉಡುಪನ್ನು ನೋಡಿ, ಅವರೂ ಗಾಬರಿಯಾಗಿ "ಇದೇನು ಸಮಾಚಾರ?" ಎಂದು ಗಂಭೀರವಾಗಿ ಒಂದು ಹೆಜ್ಜೆ ಹಿಂದೆ ಸರಿದರು.

ಸೂರಪ್ಪನು ಕತೆಯ ಅಂಶಗಳನ್ನು ಸಂಕ್ಷೇಪವಾಗಿ ತಿಳಿಸಿದನು. ಮಧ್ಯೆ ಮಧ್ಯೆ ಗಂಗಮ್ಮನವರು ಅವಳು ಪಟ್ಟ ಕಷ್ಟ, ಮಾಡಿದ ಸಾಹಸದ ಬಗ್ಗೆ ಅನುತಾಪ, ಮೆಚ್ಚಿಕೆಗಳನ್ನು ಸೂಚಿಸಿ ಕೆಲವು ಮಾತುಗಳನ್ನು ಹೇಳುತ್ತಿದ್ದರು ಸೂರಪ್ಪನು ದೇವಮ್ಮನ ಮತಾಸ್ಪಷ್ಟತೆಯು ಭಾಗವನ್ನೆಲ್ಲ ಪಗುರವಾಗಿ ಜೇಲಿಸಿ ಹೇಳಿದಾಗ ಲೆಲ್ಲ, ಶಾಸ್ತ್ರಿಗಳು ತಡೆದು ತಡೆದು ಪ್ರಶ್ನೆಗಳನ್ನು ಕೇಳುತ್ತಿದ್ದರು. ಆಗ ಗುಂಡಮ್ಮನು ಅವಕ್ಕೆಲ್ಲ ಉದ್ದವಾದ ಸ್ಪಷ್ಟವಾದ ಉತ್ತರಗಳನ್ನು ಹೇಳುತ್ತಿದ್ದಳು ದೇವಮ್ಮನಾದರೋ ನ್ಯಾಯಾಸ್ಥಾನದಲ್ಲಿ ತನ್ನ ಮೇಲಿನ ಅಪವಾದನೆಗಳನ್ನು ಕೇಳುವ ಅಪರಾಧಿಯಂತೆ ಮೌನವಾಗಿ ತಲೆ ತಗ್ಗಿಸಿದ್ದಳು. ಕತೆಯನ್ನು ಕೇಳುತ್ತ ಕೇಳುತ್ತ ಶಾಸ್ತ್ರಿಗಳ ಸೌಮ್ಯಮುಖವು ಬಿಗಿದುಕೊಂಡು ಕಠಿಣವಾಯಿತು. ಕೆಂಗಣ್ಣುಗಳು ನೆಟ್ಟ ದೃಷ್ಟಿಯಿಂದ ನೆಲವನ್ನು ನೋಡುತ್ತಿದ್ದುವು. ಮುಬ್ಬುಗಳುಕ್ಕೂಡ ಗಂಟಿಕ್ಕಿದುವು. ತುಟಿಗಳು ಒಂದನ್ನೊಂದು

ಒತ್ತಿದ್ದುವು. ಜೋಯಿಸನು ಕಷ್ಟದಲ್ಲಿ ಸಿಕ್ಕಿದವರಂತೆ ತೀಕ್ಷ್ಣವಾಗಿ ಯೋಚಿಸುತ್ತಿದ್ದರು.

ಕತೆಯು ಮುಗಿದರೂ ಮುಂದಿನ ವಿಷಯವು ಜರ್ಜಿಗೆ ಬರಲಿಲ್ಲ. ಸೂರಪ್ಪನೂ ಗಂಗಮ್ಮನವರೂ ಶಾಸ್ತ್ರಿಗಳ ರೀತಿಯನ್ನು ನೋಡಿ, ಈ ಮಾತನ್ನೆತ್ತುವುದಕ್ಕೇ ಭಯಪಡುತ್ತಿದ್ದರು. ಗುಂಡಮ್ಮನೇನೋ ಆತುರಳಾಗಿದ್ದಳು; ಆದರೆ ಅವಳು ತಮ್ಮನ ಹೆದರಿಕೆಯಿಂದ ಸುಮ್ಮನಿದ್ದಳು. ದೇವಮ್ಮನೆಂದರೆ ಯಜ್ಞಪಶುವಿನ ಸ್ಥಿತಿಯಲ್ಲಿದ್ದು ಮಾತಿನ ಅಧಿಕಾರವನ್ನೇ ಕಳೆದುಕೊಂಡಿದ್ದಳು. ಕಡೆಗೆ, ಜೆಲವು ನಿಮಿಷಗಳಾದ ಮೇಲೆ ಶಾಸ್ತ್ರಿಗಳೇ ಮಾತನ್ನು ಪೊದಲು ಮಾಡಿದರು :

" ಹೂಂ. ಶಾಗಾವದೆ ಪೂರ್ತಿಯಾಗೇ ಜಾತಿ ಕೆಟ್ಟು ಬಿಟ್ಟಿದಾಳೆ!" ದೀರ್ಘವಾಗಿ ಉಸಿರನ್ನು ಬಿಟ್ಟು ತೀರ್ಮಾನವನ್ನು ಹೇಳಿದರು.

" ಶಾಸ್ತ್ರಿಗಳೆ!" ಸೂರಪ್ಪನು ಗಾಬರಿಯಾಗಿ ಆಕ್ಷೇಪಣೆಯ ಸ್ವರದಿಂದ ಹೇಳಿದನು.

" ಹುಂ ಕಣಯ್ಯಾ. ಇರೋ ವಿಷಯ ಮುಚ್ಚೋದಕ್ಕೆ ಆಗುತ್ತೆಯೆ—ಅದೂ ಇಂಥಾ ಮತಧರ್ಮ ವಿಚಾರಗಳಲ್ಲಿ ? "

" ಹಾಗಲ್ಲ. ಆದರೆ ಅವಳೇನು ಬೇಕಾಗಿ ಹಾಗೆಲ್ಲ ಮಾಡಲಿಲ್ಲ. ಬೆದರಿಕೆ—ಬಲಾತ್ಕಾರಗಳಿಗೆ ಸಿಕ್ಕಿ ನಿಸ್ಸಹಾಯಕಳಾಗಿ, ಬೇರೆ ಉಪಾಯವಿಲ್ಲದೆ, ಅವರಿಂದ ತಪ್ಪಿಸಿಕೊಳ್ಳೋ ಉದ್ದಿಶ್ಯದಿಂದ...."

" ಆಬೆಲ್ಲ ಸರಿ. ಆದರೆ ತಪ್ಪು ಹೇಗೆ ಮಾಡಿದರೂ ತಪ್ಪೇ. ದೋಷವಿಲ್ಲ ಅನ್ನೋದಕ್ಕೆ ಹೇಗಾಗುತ್ತೆ ? "

" ಅವಳ ಸಂದರ್ಭದಲ್ಲಿ ಯಾರಾದರೂ ತಾನೇ ಇಸ್ಲೇನು..."

" ನಿಜ, ಒಪ್ಪಿದೆ. ಆದರೆ ನಡೆದದ್ದು ನಡೆದು ಹೋಯ್ತೊ ? ಹಿಂದೂ ಧರ್ಮ ಹೋಯ್ತೊ ? "

" ಹಾಗಾದರೆ ಒಳಕ್ಕೆ ತೆಗೆದುಕೊಳ್ಳೋದಕ್ಕೆ ಮುಂಜೆ ಶುದ್ಧಿ-ಶಾಸ್ತ್ರ ಆಗಲೇ ಬೇಕು ? "

" ಏನಂದೆ ? " ಶಾಸ್ತ್ರಿಗಳು ಆತ್ಯಾಶ್ಚರ್ಯದಿಂದ ಕೇಳಿದರು.

" ಆದೇ, ನ್ಯಾಯಶ್ಚಿತ್ತ...." ಸೂರಪ್ಪನು ವಿವರಿಸಲು ಹೊರಟ.

" ಇದೇನಯ್ಯಾ, ಇಂಥಾ ಕ್ಷೋತ್ರಿಯರ ವಂಶದಲ್ಲಿ ಹುಟ್ಟಿ ಹೀಗೆ ಕೇಳುತ್ತೀಯೆ ? " ಶಾಸ್ತ್ರಿಗಳು ತಮಗೇ ಅಪಮಾನವಾದಂತೆ ಕೇಳಿದರು.

" ಯಾಕೆ ? "

" ಯಾಕೆ! ಪಿನ್ನಾಯ್ತು. ಹಿಂದೂ ಮತದಲ್ಲಿ ಜಾತಿ ಕೆಟ್ಟೋರನ್ನ ಮತ್ತೆ ತೆಗೆದುಕೋತಾರೇನಯ್ಯಾ ? ಅದರಲ್ಲಾಗಿ ನಮ್ಮದು ಬ್ರಾಹ್ಮಣ ಕುಲ! " ಶಾಸ್ತ್ರಿಗಳು ಬಾಂಬು ಹಾಕಿದರು.

" ಆ! " ಸೂರಪ್ಪನು ಗಾಬರಿಯಾದನು.

ದೇವಮ್ಮನಿಗೆ ಬೆಚ್ಚಿದಳು. ದುಃಖವು ಹತ್ತಿ ಬಂದಿತು. ಗಂಗಮ್ಮನವರು " ಅಯ್ಯೋ! " ಅಂದರು. ಗುಂಡಮ್ಮನು "ಹೀಗೇ ಏನಾದರೂ ಇರುತ್ತೇ ಅಂತ ನಂಗೆ ಗೊತ್ತಿತ್ತು. ಅದಕ್ಕೇ ಆಗ ಎಚ್ಚರಿಸಿದ್ದು, ಇವನು ಹೇಳಿದ ಹಾಗೇ ದುಡುಕಿದ್ದರೆ ಏನು ಅನಾಹುತ ಆಗುತ್ತಿತ್ತೊ ! " ಎಂದು ತನ್ನನ್ನು ಸಮರ್ಥಿಸಿಕೊಂಡಳು. ಮಗುವು ಗಾಢನಿದ್ರೆಯಲ್ಲಿತ್ತು.

" ಶಾಸ್ತ್ರಿಗಳೆ, ಹಾಗೆಂದರೆ ಹೇಗೆ ? ಬೇರೆ ದಾರಿ ಇರಬೇಕು!" ಸೂರಪ್ಪನು ಒಪ್ಪಿಕೊಳ್ಳಲಿಲ್ಲ.

" ದಾರಿಯೇನೂ ಇಲ್ಲ—ಮುತ್ತೈ ಹುಟ್ಟೋದನ್ನು ಬಿಟ್ಟು."

" ಇಷ್ಟು ಕಠಿಣವಾಗಬೇಡಿ. ದಯೆ ತೋರಿಸಬೇಕು!" ಅವನು ಅಂಗಲಾಚಿದನು.

" ಅಯ್ಯಾ, ಇದು ನಂಗೇನು ಇಷ್ಟವೆ ? ದೇವಮ್ಮನ ವಿಚಾರ ನೀನು ನಂಗೆ ಹೇಳಬೇಕೆ ? ಇದರಲ್ಲಿ ಕಾರುಣ್ಯ, ದಯೆ ಇವಕ್ಕೇನು ಅವಕಾಶವಿದೆ ? ಇರೋ ವಿಚಾರ ಅದು. ನಾನೇನು ಮಾಡಲಿ ? ಯಾರೇನು ಮಾಡಬಲ್ಲರು, ಹೇಳು ? ಮುತಕ್ಕೆ ವಿರುದ್ಧವಾಗಿ ನಡೆಯೋದು ಹಾಗಿರಲಿ, ಹೇಳೋದೂ ಮಹಾ ಪಾಪ. ಯಾರ ಅನುಕೂಲಕ್ಕೂ ನಾನು ಬೇರೆ ಹೇಳಲಾರೆ. ನನ್ನ ಮಗಳೇ ಆಗಿದ್ದರೂ ಇಷ್ಟೇ. ಏನು ಮಾಡೋದಪ್ಪಾ. ನಂಗೂ ವ್ಯಸನವೆ—ನಿನ್ನಷ್ಟೆ. ಆದರೆ ಇಂಥ ಕಷ್ಟದ, ದುಃಖದ ಸಂದರ್ಭಗಳು ಬಂದಾಗ ಸೈರಿಸಿಕೋ ಬೇಕು. ನಷ್ಟಕ್ಕೆ ಎದೆ ಗಟ್ಟಿಮಾಡಿಕೋ ಬೇಕು. ಬೇರೆ ಗತಿಯಿಲ್ಲ. ಹಾಗಲ್ಲದೆ, ಧರ್ಮಾಂಧರಾಗಿ ನಡೆದು ಮತಹಾನಿ ಮಾಡೋಕ್ಕಾಗುತ್ತೆಯೆ ? ಮಾಡೋದನ್ನ ಯಾರಾದರೂ ಒಪ್ಪುತ್ತಾರೋ, ಅದಕ್ಕೆ ಅವಕಾಶ ಕೊಡುತ್ತಾರೋ ? ಎಲ್ಲ ವಿಧಿವಿಲಾಸ. ಅದೃಷ್ಟ ಇದ್ದ ಹಾಗೆ ನಡೆದು ಹೋಗುತ್ತೆ. ಹಣೆ ಬರಹ.... "

" ಸಾಕು ಶಾಸ್ತ್ರಿಗಳೆ—ಉಪದೇಶ" ಸೂರಪ್ಪನು ಬೇಸರದಿಂದ ತಡೆದ.

"ಅಪ್ಪಾ! ಅವರಿಗೆ ಅವಮಾನ ಮಾಡಬೇಡಪ್ಪಾ. ತಪ್ಪಾಯ್ತು ಅನ್ನು! " ಗಂಗಮ್ಮನವರು ಬೆದರಿ ಹೇಳಿದರು.

" ನಂಗೇನೂ ಅವಮಾನವಿಲ್ಲ ತಾಯಿ. ಅದು ಅನ್ನೋರಿಗೇ ಆಶ್ರೇಯಸ್ಸು ಅಷ್ಟೆ. ಸೂರಪ್ಪನಿಗೆ ಬಹಳ ದುಃಖವಾಗಿದೆ. ಇನೂ ಹುಡುಗ. ದುಡುಕಿನಲ್ಲಿ ಏನಾದರೂ ಆಂತಾನೆ. ಅನ್ನಲಿ ಬಿಡಿ. ವಿವೇಕ ಹೇಳೋದು ನನ್ನ ಕರ್ತವ್ಯ. ಹಾಗೆ ಮಾಡುತ್ತೀನಿ, ಅಷ್ಟೆ."

" ಕ್ಷಮಿಸಬೇಕು ಶಾಸ್ತ್ರಿಗಳೆ—ಅಂದದ್ದನ್ನು; ಆದರೆ ನಾನು ಈ ನಿರ್ಧಾರಕ್ಕೆ ಒಪ್ಪೋದಿಲ್ಲ. ಅವಳನ್ನು ಹೇಗಾದರೂ ಮತ್ತೆ ತೆಗೆದುಕೊಳ್ಳಲೇ ಬೇಕು."

ದೇವಮ್ಮನು ನೀರು ತುಂಬಿದ ಕಣ್ಣುಗಳನ್ನೆತ್ತಿ ಸೂರಪ್ಪನನ್ನು ಕೃತಜ್ಞತೆಯಿಂದ ನೋಡಿದಳು. ಮುಳುಗುವವರಿಗೆ ಸಿಕ್ಕಿದ ಜೊಂಡಿನಂತಿತ್ತು— ಅವನ ಮಾತು, ಅವಳಿಗೆ.

"ಏಲ, ಎಲಾ! ಏನು ಹೇಳುತ್ತೀಯೋ ಸೂರಪ್ಪಾ! ಸ್ವಲ್ಪ ಪ್ರಜ್ಞೆ ತಂದುಕೊಂಡು ಯೋಚಿಸಿ ಮಾತಾಡು. ಆವಳನ್ನು ತೆಗೆದುಕೊಂಡರೆ ನೀವೆಲ್ಲ ಜಾತಿ ಕೆಡಬೇಕಾಗುತ್ತೆ ಗೊತ್ತೆ?" ಶಾಸ್ತ್ರಿಗಳು ಎಚ್ಚರಿಸಿದರು.

"ಹಾಗಾಗೋದಕ್ಕೆ ಆಗುತ್ತೇನಪ್ಪಾ ಮಗು?" ಗಂಗಮ್ಮನವರು ಎಚ್ಚೆತ್ತುಕೊಂಡರು.

"ನಾನು ಬೇರೆ ಇಲ್ಲಿರೋದಿಲ್ಲ; ತಿರುಪೆಯಾದರೂ ಮಾಡಿಕೊಂಡು ಬಾಳುತ್ತೀನಿ" ಗುಂಡಮ್ಮನು ಖಂಡಿತವಾಗಿ ಹೇಳಿದಳು.

"ಏನಾದರೂ ಆಗಲಿ—ನಂಗೆ" ಸೂರಪ್ಪನು ಪಟ್ಟನ್ನು ಬಿಡಲಿಲ್ಲ.

"ಸೂರಪ್ಪಾ, ನಿಂಗೆಲ್ಲೋ ಹುಚ್ಚು ಹಿಡಿದಿದೆ. ನಿದಾನವಾಗಿ ಯೋಚಿಸು. ಸುಮ್ಮನೆ ಹಾಳಾಗಬೇಡ. ನೀನು ದೇವಮ್ಮನ ಜೊತೆಯಲ್ಲಿ ಬಾಳಿದರೆ ಏನೇನಾಗುತ್ತೆ ನೋಡು. ನಿನ್ನ, ಪ್ರಾಯಶಃ ಈ ಸಂಸಾರವನ್ನೆಲ್ಲ ಮರದವರು ಜಾತಿಯಿಂದ ಹೊರಗೆ ಹಾಕುತ್ತಾರೆ. ನಿಮ್ಮ ಬ್ರಾಹ್ಮಣ್ಯ ಹಾಳಾಗುತ್ತೆ—ಹುಂ, ಬ್ರಾಹ್ಮಣ್ಯ ಸಾವಮಾನ್ಯವೆ? ಎಷ್ಟೋ ಸಾವಿರ ಜನ್ಮಗಳಲ್ಲಿ ಒಂದು ಬಾರಿ ಬ್ರಾಹ್ಮಣನಾಗಿ ಹುಟ್ಟೋದು. ತಿಳೀತೆ? ಅದನ್ನೂ ಕಳೆದು ಕೊಂಡು ಚಂಡಾಲನಾಗುತ್ತೀಯೇ. ಇಲ್ಲಿ ನಿನ್ನನ್ನು ಯಾರೂ ಇರಗೊಡಿಸೂದಿಲ್ಲ. ಮನೆ, ಮರ, ಭೂಮಿ, ಕಾಣಿ, ಊರು, ಕೇರಿ ಎಲ್ಲ ಬಿಟ್ಟು ಹೋಗಬೇಕು. ಅಷ್ಟೇ ಅಲ್ಲ. ಇಂಥ ಸದ್ವಂಶಕ್ಕೆ ಕಳಂಕ ತಂದು ನಿರ್ಮೂಲ ಮಾಡಿದ ಅಪಕೀರ್ತಿ ಎಂದೆಂದಿಗೂ ನಿನ್ನದಾಗುತ್ತೆ. ಒಟ್ಟು ಇಲ್ಲಿಯ ಜನಕ್ಕೇ ಹೀನಾಯವಾಗುತ್ತೆ. ಅಮೂ ಹೋಗಲಿ ಅಂದರೆ, ನಿಮ್ಮ ವಂಶವನ್ನಾದರೂ ಜ್ಞಾಪಿಸಿಕೊ. ಎಷ್ಟು ಪುರಾತನ ಕಾಲದಿಂದ ನಡೆದುಕೊಂಡು ಬಂದ ವಂಶ. ನಿಮ್ಮ ಪೂರ್ವಜರು ಎಷ್ಟು ಜನ ಇರಬೇಕು? ಅಂಥ ಶ್ರೇಷ್ಠ ಬ್ರಾಹ್ಮಣರು—ಮಹರ್ಷಿ ಭಾರದ್ವಾಜರ ಗೋತ್ರದವರು. ಆಚಾರವಂತರು. ಕೀರ್ತಿವಂತರು. ಅವರ ಧರ್ಮ ಇಲ್ಲಿಯವರೆಗೂ ಸಂತತವಾಗಿ ನಡೆದುಕೊಂಡು ಬಂದಿದೆ. ಅವರೆಲ್ಲ ಸ್ವರ್ಗದಲ್ಲಿ ಸುಖವಾಗಿದಾರೆ. ಈಗ ನೀನು ಆ ವಂಶವನ್ನು ಕೆಡಿಸಿ ಕೊನೆಗಾಣಿಸುತೀಯೆ? ಹಾಗೆ ಮಾಡಿದರೆ ಮಹಾಯಜ್ಞ ಮಾಡುತ್ತ ಹವಿಸ್ಸನ್ನು ನಾಯಿಗೆ ಇಟ್ಟ ಹಾಗಾಗುತ್ತೆ. ನಿನ್ನ ಯೋಗ್ಯತೆ ಏನಾಯ್ತು? ನಿಂಗೆ ಏನು ಶಿಕ್ಷೆಯಾಗುತ್ತೆ, ಯೋಚಿಸಿಕೊ! ಎಲ್ಲ ಯಾತಕ್ಕಾಗಿ? ಕೇವಲ ಒಂದು ಹೆಣ್ಣು ಜೀವಕ್ಕಾಗಿ. ಹಾಗೆಂದರೆ ಅದನ್ನು ಕಡೆಗಾಣಬೇಕು ಅಂತ ಹೇಳೋದಿಲ್ಲ. ಮನುಷ್ಯಮಾತ್ರಕ್ಕೆ ಸಾಧ್ಯವಾಗಿ ಧರ್ಮವಿರುದ್ಧವಾಗಿರದೇ ಇದ್ದಾಗಲೆಲ್ಲ ಅದನ್ನು ರಕ್ಷಿಸಲೇ ಬೇಕು. ಆದರೆ ಹೀಗೆ ವಿಧಿಯಿಲ್ಲದೆ ಬಂದಾಗ ಏನು ಮಾಡೋದು? ಅದಕ್ಕಾಗಿ ಅಷ್ಟೊಂದು ಪಾಪದ ಹೊರೆ ಹೊತ್ತುಕೊಳ್ಳೋದು, ಕಸ್ಟ ಪರಂಪರೆಗೆ ಒಳಗಾಗೋದು ಸರಿಯೆ? ನ್ಯಾಯಸಮ್ಮತವೆ? ಹೆಚ್ಚು ಯಾವುದು ಅಂತ ನೋಡಿ ಆದಕ್ಕೆ ಪ್ರಾಮುಖ್ಯತೆ ಕೊಡಬೇಡವೆ? ಇಂಥ ಸಂದರ್ಭದಲ್ಲಿ ಹೆಂಡತಿ ಆನ್ನೋ ವ್ಯಾಮೋಹ ಬಿಡಬೇಡವೆ? ಯೋಚಿಸು. ನಿಂಗೇ ಗೊತ್ತಾಗುತ್ತೆ...." ಮೊದಲಾಗಿ ದೀರ್ಘವಾಗಿ ಉಪದೇಶಿಸಿದರು.

ಇದರ ಪರಿಣಾಮು ಮೊದಲು ಗಂಗಮ್ಮನವರ ಮೇಲಾದುದು ಕಂಡಿತು. ಅವರು "ಮಗು, ಶಾಸ್ತ್ರಿಗಳ ಮಾತುಗಳನ್ನು ವಿಚಾರಕ್ಕೆ ತೆಗೆದುಕೋಬೇಕಪ್ಪಾ. ಹಟ ಹಿಡಿಯಬೇಡ" ಎಂದು ಶಾಸ್ತ್ರಿಗಳಿಗೆ ಒತ್ತಾಸೆ ಕೊಟ್ಟರು. ಇಲ್ಲಿಯ ವರೆಗೆ ಅನುತಾಪ ತೋರಿಸುತ್ತ ಆಶೆ ಹುಟ್ಟಿಸಿದ್ದ ಅತ್ತೆಯು ಹೀಗೆ ಮಾರ್ಪಟ್ಟುದು, ದೇವಮ್ಮನಿಗೆ ತನ್ನ ಊರುಗೋಲೊಂದು ಬಿದ್ದು ಹೋದಂತಾಯಿತು. ಅವಳು "ಅಯ್ಯೋ!" ಎಂದುಕೊಂಡು ಬಾಯಿಗೆ ಕೈಗೊಟ್ಟು ಉಕ್ಕಿಬರುವ ದುಃಖವನ್ನು ತಡೆಯುತ್ತಿದ್ದಳು. ತಾಯಿಯ ಮಾತನ್ನು ಕೇಳಿದ ಮೇಲೂ ಕೊಂಚ ಕಾಲ ಸೂರಪ್ಪನು ನಿಶ್ಚೇಷ್ಟಿತನಾಗಿ ಕಲ್ಲಿನ ಪ್ರತಿಮೆಯಂತೆ ನಿಂತಿದ್ದವನು ಕಡೆಗೆ "ಇನ್ನೇನು ಮಾಡೋದಮ್ಮಾ?" ಎಂದು ಕ್ಷೀಣಸ್ವರದಲ್ಲಿ ಕೇಳಿದನು. ತಾನು ನಂಬಿದ್ದ ಗಂಡನೊಬ್ಬನೂ ಹೀಗೆ ಅನಿರ್ಧಾರದ ಮಾತನ್ನು ಹೇಳಿದಾಗ, ಆ ಬಡ ಹುಡುಗಿಗೆ ಬರಸಿಡಿಲು ಬಡಿದಂತಾಯಿತು. ನೀರಿನಲ್ಲಿ ಬಿದ್ದದ್ದರೂ, ಇಲ್ಲಿಯ ವರೆಗೆ ಈ ಜೊಂಡನ್ನು ಹಿಡಿದು ಆವಳು ಒದ್ದಾಡುತ್ತಿದ್ದಳು. ಈಗ ಇದೂ

ಮೂರು ಉತ್ಕೃಷ್ಟ ಸ್ವಸ್ತಕಗಳು!

೧. ಸಂಗೀತಾಚಾರ್ಯ— Music Master

ಗಾನೆಯಭಾಗ. ಲೇಖಕರು ಶ್ರೀ. ಎಸ್. ಎನ್. ರಾವ್, ಹರಿದಾಸ

ಶಾಸ್ತ್ರೋಕ್ತ ಸಂಗೀತಹಾಗೂ ಹಾರ್ಮೋನಿಯಂ ಕಲಿಯುವವರಿಗೆ ಕೈದೀವಿಗೆಯಿದು. ಇದರಲ್ಲಿ ೨೦೦ಕ್ಕಾಗಿಗಳ ಪರಿಚಯವಿದ್ದು, ಪ್ರತಿಯೊಂದು ರಾಗಕ್ಕೆ ಉದಾಹರಣೆಯಾಗಿ ಕನ್ನಡ ಪದಗಳಿವೆ ೧೫೦ ಪುಟ; ಬೆಲೆ ೧-೪-೦.

೨. ಸಂಸಾರಸುಖ— The Pleasures of live

ಲೇಖಕರು: ಶ್ರೀ. ಹನುಮಂತರಾವ ದೇಸಪಾಂಡೆ

ಜೀವನಕಲೆ, ಸಾಹಿತ್ಯಕಲೆ, ಶಿಕ್ಷಣ-ಸಂಗೀತ-ಚಿತ್ರಕಲೆ, ರಾಜಕೀಯ ಮುಂತಾದ ೨೬ ಸರ್ವೋತ್ಕೃಷ್ಟ ಶ್ರಬಂಧಗಳ ಸಂಗ್ರಹ. ೨೦೦ ಪುಟಗಳು. ಬೆಲೆ -೪-೦.

೩ ವೀರ್ಯವಿಜಯ ಅಥವಾ ಬ್ರಹ್ಮಚರ್ಯೆವ್ರತ ಬಲಿಷ್ಠ ಸೃಷ್ಟಿ

ಲೇಖಕರು: ಡಾ. ಸ್ವಾಮಿ ಚಂದ್ರಶೇಖರ ಅವರು

ವೈಜ್ಞಾನಿಕ ವಿಜ್ಞಾನದ ಹಲವು ಉಪಯುಕ್ತ ವಿಚಾರಗಳನ್ನು ಒಳಗೊಂಡ ಪುಸ್ತಕ. ೧೧೮ ಪುಟಗಳು. ಬೆಲೆ ೧-೪-೦.

ಈ ಮೂರು ಪುಸ್ತಕಗಳಿಗಾಗಿ ಒಟ್ಟು ೩-೧೨-೦ ಮು. ಆ. ಸಂದ ಕಳುಹಿಸಿದಲ್ಲಿ, ನಮ್ಮ ಖರ್ಚಿನಿಂದ ರಜಿಸ್ಟರ್ ಮಾಡಿ ಕಳುಹಿಸುತ್ತೇವೆ. ವ್ಯಾಪಾರಿಗಳಿಗೆ ಕೈತುಂಬ ಕಮಿಷನ್.

ಬೇರೆ ಯಾವ ಪುಸ್ತಕ ಬೇಕಾದರೂ ನಮಗೆ ಬರೆಯಿರಿ.

ರಾಮಾಶ್ರಯ ಬುಕ್‌ಡಿಪೋ, ಧಾರವಾಡ

ಕೆತ್ತು ಹೋಗಿ ಅವಳು ನಡುಪ್ರವಾಹದ ರಭಸಕ್ಕೆ ಸಿಕ್ಕಿದಳು. ತನ್ನ ದುಃಖದಲ್ಲಿ ದಿಕ್ಕೇ ತೋಚದೆ ಹುಚ್ಚಳಂತಾಗಿ ಆರ್ತಸ್ವರದಿಂದ "ಕೈ ಬಿಡಬೇಡಿ! ಕಾಪಾಡಿ!" ಎಂದು ಅವನ ಕಡೆಗೆ ಕೈ ನೀಡಿದಳು. ಅವನು ತನ್ನ ಕೈ ಕೊಡಹುತ್ತ "ಛೇ! ಇದೆಂಥ ಸಂಕಟ ಬಂತಲ್ಲ!" ಎಂದು ಒದರಿದ.

"ಕೆಟ್ಟೋಳಂತೂ ಕೆಟ್ಟಳು. ಅಲ್ಲೇ ಆದರೂ ಸರಿಹೋಗಿಸಿಕೊಂಡಿದ್ದರೆ, ಈ ಫಜೀತಿಯಾದರೂ ಯಾರಿಗೂ ಇರುತ್ತಾ ಇರಲಿಲ್ಲ" ಗುಂಡಮ್ಮನು ನಿರ್ದಾಕ್ಷಿಣ್ಯವಾಗಿ ಹೇಳಿದಳು.

"ಅತ್ತಿಗೆಮ್ಮಾ!" ದೇವಮ್ಮನು ಶೂಲದಿಂದ ಎದೆ ಇರಿಯಲ್ಪಟ್ಟ ಪ್ರಾಣಿಯಂತೆ ಹೇಳಿದಳು. "ಹುಂ. ಆಗ ನೀನೂ ಒಂದು ದಾರಿ ಹತ್ತಬಹುದಾಗಿತ್ತು. ಈಗ ನೋಡು. ನಾನು ನಿಷ್ಠುರವಾಗಿ ಹೇಳತೀನಿ ಅಂತ ನೊಂದುಕೋಬೇಡ; ನಮ್ಮಲ್ಲಿ ಜಾತಿ ಕೆಟ್ಟೋನಿಗೆ ಇರೋದು ಎರಡೇ: ಹೊಸ ಜಾತೀಲೇ ಇರೋದು, ಇಲ್ಲ ಸಾಯೋದು!"

"ಅಯ್ಯೋ, ನಾನು ಸಾಯಬೇಕಾಗಿತ್ತು. ಅದೇ ಸುಲಭವಾಗಿತ್ತು. ಮೋಸ ಹೋದೆ. ಇಲ್ಲಿಗೆ ಬರೋ ಆಶೆ ಇಟ್ಟುಕೊಂಡು ಬದುಕೋದಕ್ಕೆ ಇಷ್ಟವಿಲ್ಲ. ಅದಕ್ಕಾಗಿ ಮಾಡಬಾರದ್ದೆಲ್ಲ ಮಾಡಿದೆ, ಸಹಿಸಿದೆ....ಅಯ್ಯೋ" ದೇವಮ್ಮನು ಗೋಳಾಡಿದಳು.

"ಸುಮ್ಮನೆ ಇರಬಾರದೇನೇ ಗುಂಡಿ? ಹೀಗೆ ಕಠಿಣವಾಗಿ ಹೇಳಿ ಹೇಳಿ ಯಾಕೆ ನೋಯಿಸುತ್ತೀಯಾ ಅವಳನ್ನ ಪಾಪ! ಏನಾದರೂ ಒಂದು ಸಮಾಧಾನದ ವಿಚಾರಕ್ಕೆ ಬರೋಣ!" ಗಂಗಮ್ಮನವರು ಏನನ್ನೋ ಯೋಚಿಸಿಕೊಂಡು ಹೇಳಿದರು.

"ಹ್ಞ! ಕೊಂದ ಮೇಲೆ ಒಳ್ಳೇ ಸಮಾಧಾನ!" ನೂರಪ್ಪನು ತಿರಸ್ಕಾರದಿಂದ ಹೇಳಿದನು.

"ಅವ್ವಾ, ಅದೃಷ್ಟ ಕೆಟ್ಟಾಗ ಬೇಕಾದ್ದು ಮಾಡೋದಕ್ಕೆ ಸಾಧ್ಯವೆ ಹೇಳು? ಬೇಗಲ್ಲ ಆಗಬೇಕಾಗುತ್ತೆ. ಬೇಡವಾದ್ದನ್ನೆಲ್ಲ ಮಾಡಬೇಕಾಗುತ್ತೆ. ನನ್ನ ಎಲುಬೂ ಜಿಂದು ಹೋಗತ್ತಾ ಇದೆ, ಗೊತ್ತೆ? ನಿಂಗೆ ಹೆಂಡತಿಯಾದರೆ ನಂಗೆ ಸೊಸೆ ಅಲ್ಲವೆ? ಒಬ್ಬಳೆ ಸೊಸೆ. ಅಂಥ ಸೊಸೆ ನಮ್ಮ ವಂಶ ಉಳಿಸಿಕೋಳು? ನನ್ನ ಮಗಳು ಅಂತ ತಿಳಿದುಕೊಂಡಿದೀನಿ. ಇವಳನ್ನು ಬಿಟ್ಟಿಕೋದು ನಂಗೇನು ಸ್ವಲ್ಪದ ದುಃಖವೆ? ಆದರೇನು ಮಾಡೋದು? ಮುಕ್ಕಧರ್ಮ ಬಿಟ್ಟು ನಾವೆಲ್ಲ ಹಾಳಾಗೋದಕ್ಕಾಗುತ್ತೆಯು? ಆದಕ್ಕೆ ತಲೆ ತಗ್ಗಿಸಲೇ ಬೇಕು. ಬೇಕಾದರೆ ಕಲೀನೂ ಕೊಡಬೇಕು. ಆದೇ ಶ್ರೇಯಸ್ಸು!" ಗಂಗಮ್ಮನವರು ಪೆಚ್ಚನಾಗಿ ಹೇಳಿದರು.

"ನ್ಯಾಯವಾದ ಮಾತುಗಳು!" ಶಾಸ್ತ್ರಿಗಳು ತಲೆದೂಗಿದರು.

"ಏನೂ ನ್ಯಾಯಾನೋ, ಏನು ಧರ್ಮಾನೊ, ಏನು ಮತಾನೋ ನಂಗೆ ಒಂದೂ ತಿಳಿಯೋ ಹಾಗಿಲ್ಲ. ನನ್ನ ಬುದ್ಧಿಯೇ ಕೆಟ್ಟು ಹೋಗಿದೆ. ಏನು ಬೇಕಾದರೂ ಮಾಡಿ; ನನ್ನಿಂದ ಮಾಡಿಸಿಕೊಳ್ಳಿ. ಧರ್ಮ ಕರ್ಮ ಎಲ್ಲಾ ನಿಮ್ಮದು. ಬೇರೆ ನೋಡಿಕೊಳ್ಳಲಿ—ನ್ಯಾಯವನ್ನು. ಅವನೇ ದಯಪಾಲಿಸಬೇಕು, ನಮ್ಮ ಮೇಲೆ!" ನೂರಪ್ಪನು ನಿಸ್ಸಹಾಯಕನಾಗಿ ನುಡಿದು ಸುಮ್ಮನಾದನು.

"ಶಾಸ್ತ್ರಿಗಳೆ, ನಿಮಗೆ ಯಾವ ದಾರಿಯೂ ಹೊಳೆಯೋದಿಲ್ಲವೆ?" ಗಂಗಮ್ಮನವರು ಕೇಳಿದರು.

"ಕಠಿಣವಾಗಿ ಹೇಳಿದರೂ ಗುಂಡಮ್ಮ ಒಂದು ದಾರೀನೇನೋ ತೋರಿಸಿದ್ದಾಳೆ!"

"ಏನು, ಅಲ್ಲಿಗೇ ಹೋಗಿ ಬಾಳೋದೆ? ಶಿವ! ಶಿವ! ನಿಮಗೆ ಹೇಳೋದಕ್ಕಾದರೂ ಮನಸ್ಸು ಹೇಗೆ ಬರುತ್ತೆ? ಎಂದಿಗಾದರೂ ಹೋಬೇನೆ?" ದೇವಮ್ಮನು ತಾಳ್ಮೆ ಮೀರಿ ಕೂಗಿಕೊಂಡಳು.

"ಬರಿ ಹುಚ್ಚು!" ನೂರಪ್ಪನು ರೇಗಿದನು.

"ಹೋಗಬೇಕು ಅಂತಲ್ಲ ನಾನು ಹೇಳಿದ್ದು. ಸಾಧ್ಯವಾದ ದಾರಿ ಒಂದನ್ನು ಸೂಚಿಸಿದೆ ಅಷ್ಟೆ. ಇನ್ನೇನು ಮಾಡಬಹುದು, ಯಾರಾದರೂ ಹೇಳಿ ಮುಕ್ತಿ?" ಶಾಸ್ತ್ರಿಗಳು ತಿದ್ದಿಕೊಂಡು ತಮ್ಮ ಸರದಿಯಲ್ಲಿ ಸಿಟ್ಟಾದರು.

"ಶಾಸ್ತ್ರಿಗಳೆ, ಇವಳು ಇಲ್ಲೇ ಬೇರೆ ಇರೋ ಹಾಗೆ ಏರ್ಪಾಡು ಮಾಡಿದರೋ?" ಗಂಗಮ್ಮನವರು ತಮ್ಮ ಯೋಜನೆಯನ್ನು ಹೇಳಿದರು.

"ಹೂಂ. ಅದೂ ಒಂದು ದಾರಿಯೆ. ಆದರೆ ಇಲ್ಲಿ ಮುಸಲ್ಮಾನರು ಯಾರೂ ಇಲ್ಲ. ಇವಳೇ ಬೇರೆಯ ಕಡೆ ಬೇರೆಯ ಬೀದಿಯಲ್ಲಿ ಇರಬೇಕಾಗುತ್ತೆ!" ಶಾಸ್ತ್ರಿಗಳು ಯೋಚಿಸುತ್ತ ಸಮ್ಮತಿಸುತ್ತ ನಿದಾನವಾಗಿ ಹೇಳಿದರು.

"ಏನು, ಬೇರೆ ನಾನೊಬ್ಬಳೇ, ನಿಮ್ಮನ್ನು ಬಿಟ್ಟು ಈ ಕಂದನನ್ನು ಬಿಟ್ಟು ಈ ಪಾಳು ಬಾಳನ್ನು ಸಾಗಿಸಲೆ? ಬೇಡಿ. ಮತ್ತೆ ನಿಮ್ಮ ಮನೆ ಸೇರೋದಕ್ಕೆ ಆಗದೇ ಇದ್ದರೆ, ನಿಮ್ಮ ಸೇವಕಳಾಗಿ ಆದರೂ ಇಟ್ಟುಕೊಳ್ಳಿ. ಇಲ್ಲೇ ಹೊರಗೆ ಕೂರಗೇ ಇರುತ್ತೀನಿ" ಗಂಡನನ್ನು ದೈನ್ಯದಿಂದ ಬೇಡಿಕೊಂಡಳು.

ಉತ್ತರಕ್ಕಾಗಿ ನೂರಪ್ಪನೂ, ಗಂಗಮ್ಮನವರೂ ಶಾಸ್ತ್ರಿಗಳ ಮುಖವನ್ನು ನೋಡಿದರು.

"ಆದು ಹೇಗಾದೀತು ಗಂಗಮ್ಮನೋರೆ? ಮುಸಲ್ಮಾನರೊಳು—ಮ್ಲೇಚ್ಛರೊಳು, ಮನೆಯ ಸುತ್ತ ಸುತ್ತ ಸುಳಿದಾಡ್ತಾ ಇದ್ದರೆ, ಏನು ಆಚಾರ ಉಳಿಯುತ್ತೆ ಹೇಳಿ? ಈ ಬೀದಿಯೋರಾದರೂ ಒಪ್ಪುತ್ತಾರೋ? ಎಂದಿಗೂ ಇಲ್ಲ" ಶಾಸ್ತ್ರಿಗಳು ಖಂಡಿತವಾಗಿ ಹೇಳಿದರು.

"ಅಯ್ಯೋ, ಆಗಾಗದು. ಆಗದು. ನನ್ನ ಬಿಡಬೇಡಿ. ಹಾಗೆ ಬಾಳಲಾರೆ. ನಂಗೆ ತಾಳಲ್ಲ. ಎಲ್ಲರನ್ನೂ ಕಳಿದುಕೊಂಡ ಅನಾಥೆ ನೀವೇ ಗತಿ!" ದೇವಮ್ಮನು ತೊಡೆಯ ಮೇಲೆ ಮಲಗಿದ್ದ ಮಗುವಿದ್ದಂತೆಯೇ ತೆಗೆಳಿಕೊಂಡು ಗಂಡನ ಕಡೆಗೆ ಸರಿದು ಕೈಮುಗಿದಳು.

ಮುಂದುವರಿಸಿ

ಏನು ಮಾಡು ಅಂತೀಯ? ನಿಂಗಂತೂ ಇಲ್ಲಿ ಸ್ಥಳವಿಲ್ಲ ಅನ್ನೋದು ಖಂಡಿತವಾಯ್ತು. ನಾನೂ ನಿನ್ನ ಜೊತೇಲಿ ಬರ-ಲೇನು? ನಡಿ. ಹಾಗೇ ಆಗಲಿ. ಈ ಹಾಳು ಹಾತಿ, ಮತ, ಧರ್ಮ, ಆಚಾರ—ಮಾನವತೆಗೇ ಅವಕಾಶ ಕೊಡದ ಈ ಗೊಂದಲವೆಲ್ಲ ಹಾಳಾಗಿ ಹೋಗಲಿ! ಯಾರಿಗೆ ಬೇಕು. ಏನು ಬೇಕಾದರೂ ಆಗಲಿ. ನಾನು ಎಲ್ಲಕ್ಕೂ ಸಿದ್ಧ!" ಸೂರಪ್ಪನು ಕಿರಚಿಕೊಂಡನು.

"ಅಪ್ಪಾ! ಅಪ್ಪಾ! ಮಗು! ಇದೇನು ಸ್ವಲ್ಪವೂ ಪರಿಜ್ಞಾನ-ವಿಲ್ಲದೆ ಮಾತಾಡುತ್ತಿದೀಯೆ?" ಗಂಗಮ್ಮನವರು ಗಾಬರಿ-ಯಾದರು.

"ಅವನಿಗೇನೋ ಹುಚ್ಚೇ ಹಿಡಿದಿದೆ— ಹೀಗಾಡುತ್ತಿದ್ದಾನೆ" ಗುಂಡಮ್ಮನು ಗದರಿಸಿಕೊಂಡಳು.

"ಇನ್ನು ನಿಮ್ಮ ನಿಮ್ಮ ಪಾಡು. ನಾನು ಹೇಳಿದ್ದಾಯ್ತು. ಅವಿವೇಕ ಮಾಡಿದರೆ ನೀವೇ ಅನುಭವಿಸುತ್ತೀರಿ. ಎಚ್ಚರವಾಗಿರಿ!" ಶಾಸ್ತ್ರಿಗಳು ಸಿಟ್ಟಾಗಿ, ನಿಲ್ಲದೆ ಹೊರಟೇ ಹೋದರು. ಗಂಗಮ್ಮನವರು ಕೂಗಿದುದು ಪ್ರಯೋಜನವಾಗ-ಲಿಲ್ಲ.

"ಇವನ ಅವಿವೇಕವನ್ನೆಲ್ಲ ಅವರು ಯಾಕೆ ಸೈರಿಸಿಕೊಂಡು ಇಲ್ಲಿರುತಾರೆ? ಹೋದರು. ಇನ್ನು ಇವನು ಸರ್ವನಾಶ ಮಾಡು-ತಾನೆ. ದೇವರೇ ಕಾಪಾಡಬೇಕು!" ಗುಂಡಮ್ಮನು ಆಕ್ರೋಶ-ದಿಂದ ಹೇಳಿದಳು.

ಸ್ವಲ್ಪ ಹೊತ್ತು ಎಲ್ಲರೂ ಸುಮ್ಮನಿದ್ದರು. ಯೋಚಿಸು-ತ್ತಿದ್ದರು. ಅನಂತರ ಗಂಗಮ್ಮನವರು ಸೊಸೆಯ ಕಡೆಗೆ ತಿರುಗಿ:

"ಅಮ್ಮಾ, ನೀನು ಆಗಲೇ ಒಂದು ಸಾರಿ ನಮ್ಮ ವಂಶವನ್ನು ಉಳಿಸಿದ್ದೀಯೆ. ಆದರೆ ಈಗ ಆದಕ್ಕಿಂತ ಹೆಚ್ಚಾದ ರೀತಿಯಲ್ಲಿ ಎರಡನೆಯ ಸಾರಿ ಅದನ್ನು ನೀನೇ ಉಳಿಸೋ ಕಾಲ ಬಂದಿದೆ. ನನ್ನ ಮಗನಂತೂ ನೀನು ಹೇಳಿದ ಹಾಗೆ ಕೇಳುತ್ತಾನೆ. ನ್ಯಾಯ ನಿರಬಹುದು! ಆದರೆ ನೀನು ನಿನ್ನ ವಂಶಕ್ಕೇ ಯಾವುದು ಯೋಗ್ಯ ಅಂತ ಯೋಚಿಸಬೇಕು. ದೊಡ್ಡ ದುರ್ದೈವ ನಿನ್ನನ್ನು ಕವಿದು ಕೊಂಡಿದೆ. ನಿಜ. ಆದರೆ ನಿವಾರಣೆಗೆ ನಮಗೆ ಸಾಧ್ಯವಾದದ್ದ-ನ್ನೆಲ್ಲ ಮಾಡಬೇಕು ಅನ್ನೋದು ನಮ್ಮಿಷ್ಟ. ಆದರೆ ನಿಂಗೆ ಸಂತೋಷವಾಗೋ ಅಷ್ಟು, ನಿನ್ನ ಜೀವನ ಸುಖವಾಗೋ ಅಷ್ಟು ಮಾಡೋದು ನಮ್ಮ ಸ್ಥಿತಿಯಲ್ಲಿ ಆಗೋದಿಲ್ಲ ಅನ್ನೋ ವ್ಯಸನ ನಮ್ಮನ್ನೆಲ್ಲ ತುಂಬಿದೆ. ಆದರೇನು? ನಾವು ಅಸಹಾಯಕರು, ನಿರ್ಬಂಧಕ್ಕೆ ಸಿಕ್ಕಿದೀವಿ ನೀನೇ ನೋಡು. ಹೀಗಿದೆ ಅಂತ ನಿನ್ನ ದುರದೃಷ್ಟವನ್ನು ಈ ಮನೇ ಮೇಲೂ ಹಾಕೋದು ಸರಿಯೆ? ನಿನ್ನ ಕಳೆದುಕೊಂಡ ದುಃಖವೇ ಅದಕ್ಕೆ ಸಾಲದೆ? ಈಗ ನೀನು ಸಹಾಯವಾಗಿ ನಮ್ಮನ್ನು ಉಳಿಸಬೇಕು. ನಾನು ಕೇಳುವ್ದ ಇರೋದು ಬಲು ದೊಡ್ಡದು. ನಂಗೆ ಗೊತ್ತು. ನಾನೂ ದಿಂಡತಿಯಾಗಿ ತಾಯಿಯಾಗಿ ಬಾಳಿದೋಳೇ. ಆದರೆ ನಿನ್ನ ಎದೆಯೂ ದೊಡ್ಡದೆ. ನನ್ನ ಈ ಬೇಡಿಕೆಯನ್ನು ನಡೆಸಿಕೊಟ್ಟು ಪುಣ್ಯ ಕಟ್ಟಿಕೊ! ನನ್ನ ಏರ್ಪಾಡಿಗೆ ಒಪ್ಪಿಕೊ! ಆದಷ್ಟೂ ನಿಂಗೆ ಅನ್ಯಾಯವಾಗದ ಹಾಗೆ ನೋಡಿಕೋತೀವಿ. ನಮ್ಮ ಮನೆ ಉಳಿಸಿದ ದೇವತೆ ಅಂತ ನಿನ್ನ ಹೆಸರಿನಲ್ಲಿ ದೀಪ ಹಚ್ಚಿಡುತ್ತೀವಿ. ನಿನ್ನ ವಂಶವನ್ನು ನೀನೇ ಕಾಪಾಡಬೇಕು" ಎಂದು ಕೇಳಿ-ಕೊಂಡರು.

ಗಂಗಮ್ಮನವರ ಮಾತನ್ನು ಕೇಳಿ ಎಲ್ಲರೂ ಸ್ತಬ್ಧರಾದರು. ದೇವಮ್ಮನು ಅಳುವುದನ್ನು ನಿಲ್ಲಿಸಿ ತೀಕ್ಷ್ಣವಾಗಿ ಯೋಚಿಸ-ತೊಡಗಿದಳು. ಕೆಲವು ನಿಮಿಷಗಳು ಕಳೆದುವು. ಗಂಗಮ್ಮನವರು

"ಒಪ್ಪಿಕೊಳ್ಳುತ್ತೀಯಾ ತಾಯಿ?" ಎಂದು ಕೇಳಿದರು.

"ಅ?"

"ಒಪ್ಪಿಕೊಂಡು ಉದ್ಧಾರ ಮಾಡಮ್ಮಾ!"

"ಅಯ್ಯೋ, ಹೇಗೆ ಒಪ್ಪಿಕೊಳ್ಳಲಿ?"

"ಬಿಡು. ಬೇಡ!" ಸೂರಪ್ಪನು ಹೇಳಿದನು.

"ಇಲ್ಲ.... ಇಲ್ಲ.... ಈ ಮನೆ ಹಾಳಾಗಬಾರದು.... ಆಗಲಿ.... ಹೇಗಾದರೂ ಆಗಲಿ— ನನ್ನ ಗತಿ!" ದೇವಮ್ಮನು ನಿರಾಶಳಾಗಿ ಒಪ್ಪಿಬಿಟ್ಟಳು.

"ಎಲೆ ಹುಚ್ಚಿ! ಇದೇನು, ನಿನ್ನ ಆತ್ಮಹತ್ಯೆ! ನಾನು ಹೇಗೆ ಒಪ್ಪಲಿ ಇದಕ್ಕೆ?" ಸೂರಪ್ಪನು ಆಶ್ಚರ್ಯ, ಖೇದಗಳಿಂದ ಹೇಳಿ-ದನು.

"ಬೇರೆ ಮಾಡೋ ಹಾಗಿಲ್ಲ" ದೇವಮ್ಮನು ನಿರ್ಧಾರವನ್ನು ಹೇಳಿದಳು.

"ತಾಯಿ! ನೀನೇ ನಮ್ಮ ಮನೆ ದೇವರಮ್ಮಾ. ದೇವರು ನಿಂಗೆ ಒಳ್ಳೇದು ಮಾಡಲಿ!" ಗಂಗಮ್ಮನವರು ಆತುರದಿಂದ ಹೇಳಿ ಸಮಾಧಾನ ಹೊಂದಿದರು.

"ಸದ್ಯ ಹೇಗೋ ಅನಾಚಾರ ತಪ್ಪಿತಲ್ಲಾ!" ಗುಂಡಮ್ಮನು ತೃಪ್ತಿ ಹೊಂದಿದಳು.

"ಹುಂ, ನೋಜೋಣ." ಸೂರಪ್ಪನು ಅನಿಚ್ಛೆಯಿಂದ ಸುಮ್ಮನಾದನು.

ಗಂಟೆ ಎರಡಾಗಿತ್ತು. ಮಲಗುವ ಪ್ರಯತ್ನ ನಡೆಯಿತು. ದೇವಮ್ಮನು ಆ ರಾತ್ರಿ ಮಂಟ್ಟಾದವರ ಜೊರಕೋಣೆಯಲ್ಲಿ ಮಲಗಬೇಕೆಂದು ನಿಶ್ಚಯವಾಯಿತು. ಗಂಗಮ್ಮನವರು "ಒಟ್ಟಿ ಬಿಚ್ಚಿ ಮಗು ಕೊಡು" ಅಂದರು. ದೇವಮ್ಮನು "ಇಲ್ಲ. ಹೇಗಿ-ದ್ದರೂ ನನ್ನ ಬಳಿ ಬಂದಿದೆ. ಈ ಒಂದು ರಾತ್ರಿ ನನ್ನ ಹತ್ತಿರದಲ್ಲೇ ಇರಲಿ!" ಎಂದು ಬೇಡಿಕೊಂಡಳು. ಒಪ್ಪಿಗೆ ಸಿಕ್ಕಿತು. ಗಂಗಮ್ಮ-ನವರು ಚಾಪೆ, ಹಳೆಯ ಸೀರೆ, ಕಂಬಳಿಯನ್ನು ಕೊಟ್ಟರು. ದೇವಮ್ಮನು ಮಗುವನ್ನು ಮಲಗಿಸಿಕೊಂಡು ಮಲಗಿದ ಮೇಲೆ, ಉಳಿದವರು ಒಳಗೆ ಮಲಗಿದರು.

ದೇವಮ್ಮನಿಗೆ ನಿದ್ದೆ ಹೇಗೆ ಹತ್ತೀತು? ಯೋಚನೆಗಳು ಅವ-ನ್ನು ಬಾಧಿಸುತ್ತಿದ್ದುವು. ತನ್ನ ಹಿಂದಿನ ಜೀವನವೆಲ್ಲ ಅವಳ ಕಣ್ಣು ಮುಂದೆ ಹಾಯ್ದುಳು. ಆಗ ತಾನೆ ನಡೆದಿದ್ದ ಮಾತು-

ಕತೆಗಳು ಮತ್ತೊಮ್ಮೆ ಮನಸ್ಸಿನಲ್ಲಿ ಹರಿದುವು. ಅವಳು ದೀರ್ಘವಾಗಿ ನಿಟ್ಟುಸಿರೊಂದನ್ನು ಬಿಟ್ಟಳು. ಚಳಿಯ ಗಾಳಿ ಬೀಸಿತು. ಮಗುವು ನಡುಗಿತು. ಅವಳು ಕಂಬಳಿಯನ್ನೂ ಜೋಡಿಸಿದ್ದ ಸೀರೆಯನ್ನೂ ಸರಿಮಾಡಿ ಹೊದ್ದಿಸಿ, ಮಗುವನ್ನು ತನ್ನ ಎದೆಯ ಕಡೆಗೆ ಸರಿಸಿಕೊಂಡಳು. ಹಾಗೇ ಆ ಸೀರೆಯ ನೆನಪು ಬಂತು. ಅದು ತನ್ನ ಗಂಡನು ತನಗೆ ಮೊದಲ ಸಾರಿ ಆರಿಸಿ ತಂದುಕೊಟ್ಟಿದ್ದುದು. ಅದನ್ನು ಅವಳು ಉಟ್ಟಾಗಲೆಲ್ಲ ಅವನು ಬಹಳವಾಗಿ ಮೆಚ್ಚಿಕೊಳ್ಳುತ್ತಿದ್ದನು. ಹುಂ; ಅವನು ಯಾವಾಗಲೂ ಹಾಗೆಯೆ. ಅವಳನ್ನು ಕಂಡರೆ ಹುಚ್ಚನಂತಾಗುತ್ತಿದ್ದನು. ಈಗಲೂ ಹಾಗೇ ಅಲ್ಲವೆ? ಉಹುಂ. ಆ ಹುಚ್ಚಿಗೆ ಇನ್ನು ಆಸ್ಪದ ಕೊಡದಂತೆ ಮಾಡಬೇಕು. ನಿಜ....ಆ ಕಂಬಳಿಯೊ? ಅದನ್ನು ನಿಷೇಕದಲ್ಲಿ ತಂದೆಯವರು ಕೊಟ್ಟಿದ್ದರು. ಹಾ! ಈಗ ತಂದೆಯವರಿದ್ದರೆ? ತಾಯಿ ಇದ್ದರೆ? ಅವರು ಹೀಗೆ ದೂರ ನೂಡುತ್ತಿದ್ದರೆ? ಎಂದಿಗೂ....ಏನೊ, ಯಾರಿಗೆ ಗೊತ್ತು? ಮತದ ಪ್ರಭಾವ ಎಲ್ಲೆಲ್ಲಿಯ ವರೆಗೆ ಹೋಗುವುದೋ! ಹುಂ. ಅದೇಕೆ ಯೋಚನೆ—ಅವರೇ ಇಲ್ಲದಾಗ....ಆ ಕಂಬಳಿ ಎಷ್ಟು ಸುಖವನ್ನು ಕಂಡಿದ್ದಿತು! ಒಂದು ಬಾರಿ ಕಳ್ಳರು ಮನೆಗೆ ಬಿದ್ದಾಗ, ಬಾಕಿಯದರ ಜೊತೆಗೆ ಈ ಕಂಬಳಿಯನ್ನೂ ಹೊತ್ತುಕೊಂಡು ಹೋಗಿದ್ದರು. ಆದರೆ ಅದೂ ಪತ್ತೆಯಾಯಿತು. ಉಣ್ಣೆಗೆ ದೋಷವಿಲ್ಲವೆಂದು ಬಿಸಿಲಿಗೆ ಹಾಕಿ ಮತ್ತೆ ಉಪಯೋಗಿಸಿದರು. ಪುಣ್ಯಶಾಲಿ ಕಂಬಳಿ! ಅಪಾ: ಈ ಕಂಬಳಿಗಿಂತ ತಾನು ಕಡೆಯಾದೆನಲ್ಲ!.. ಹೀಗೇ ಒಂದರಿಂದ ಒಂದು ವಿಷಯಕ್ಕೆ ಹಾರುತ್ತ ಯೋಚಿಸುತ್ತಿದ್ದಳು.

ಗಡಿಯಾರವು ನೂರುಗಂಟೆಯನ್ನು ಹೊಡೆಯಿತು. ಅವಳು ದಿಗ್ಗನೆದ್ದು ಕುಳಿತು "ಹೊತ್ತಾಯ್ತು!" ಎಂದುಕೊಂಡಳು. ಕಟ್ಟಿಕ್ಕಾಗಿ ಅಲಸಿದಳು. ಎಲ್ಲೆಲ್ಲೂ ನಿಶ್ಯಬ್ದವಾಗಿತ್ತು. ಹೊದ್ದಿಕೆಯಿಂದ್ದು ಇನ್ನೊಂದು ಮಡಿಕೆ ಜೋಡಿಸಿ ಮಗುವಿಗೆ ಚೆನ್ನಾಗಿ ಹೊದಿಸಿದಳು. ಆದರೆ ತಲೆ ಸವರಿದಳು. ಮೃದುವಾಗಿ ಮುತ್ತಿಟ್ಟಳು. ಕಣ್ಣೊತ್ತಿದಾಗ ಅವಳ ಕಣ್ಣೀರಿನ ಬಿಸಿ ಹನಿಯೊಂದು ಅದರ ಕೆನ್ನೆಯ ಮೇಲೆ ಬಿದ್ದಿತು. ಅದನ್ನು ಮುಲ್ಲಗೆ ಒರಸಿದಳು. "ಕಂದ! ನಿನ್ನನ್ನು ದೇವರೇ ನೋಡಿಕೊಳ್ಳಲಿ." ಎನ್ನುತ್ತ ಮೆಲ್ಲಗೆದ್ದು ಹಂತ್ತಿ ಬಗ್ಗಿ ತಲೆ ಸವರಿ, ಕೋಣೆಯ ಬಾಗಿಲನ್ನು ಹಾಕಿಕೊಂಡು ಹೊರಬಿದ್ದಳು. ಅವಳು ಮೆಟ್ಟಿಲನ್ನಿಳಿಯುತ್ತಿರುವಾಗ, ಅಲ್ಲೆ ಪಡಾರಿಡಬಲ್ಲಿ ನಿಂತಿದ್ದ ಹಸುವು ಶಬ್ದ ಮಾಡಿತು. ಅವಳು ಅದರ ಬಳಿಗೆ ಹೋಗಿ ನೀರನ್ನು ಹಿತ್ತಿರಿಸಿಟ್ಟು, ಮೈ ದಡವಿದಳು. ಆನಂತರ ಹಿಂದಿರುಗಿ ಬಂದು ಮತ್ತೆ ಮೆಟ್ಟಿಲನ್ನಿಳಿದು ಕೆಳಗಿಳಿಯತ್ತ ಹೊರಟುಹೋದಳು.

* * * *

ಮೂರನೆಯ ದಿನ ಬೆಳಿಗ್ಗೆ ಧರ್ಮಕೊಂಡದಲ್ಲಿ ಗದ್ದಲವೋ ಗದ್ದಲ. ಹಳ್ಳಿಯ ಹೊರಗಿನ ಸಿಹಿನೀರಿನ ಭಾವಿಯಲ್ಲಿ ದೇವಮ್ಮನ ಹೆಣವು ಸಿಕ್ಕಿತು. ಅವಳ ವಿಷಯವು ಹಳ್ಳಿಗೆಲ್ಲ ಗೊತ್ತಾಯಿತು. ಎಲ್ಲರ ಬಾಯಲ್ಲೂ ಅವಳದ್ದೇ ಮಾತು. ಸೂರಪ್ಪನು ತಲೆಯನ್ನು ನೆಲಕ್ಕೆ ಬಡಿದುಕೊಳ್ಳುತ್ತ ಗೋಳಾಡುತ್ತಿದ್ದನು. ಅನೇಕ ಬಾರಿ ತಾನೂ ಪ್ರಾಣ ಕಳೆದುಕೊಳ್ಳುವುದಾಗಿ ಓಡಲು ಯತ್ನಿಸುತ್ತಿದ್ದನು. ಇತರರು ಅನೇಕರು ಹಿಡಿದುಕೊಂಡು ಸಮಾಧಾನ ಹೇಳುತ್ತಿದ್ದರು. ಗಂಗಮ್ಮನವರು ಸುಮ್ಮನೆ ಕಣ್ಣೀರನ್ನು ಸುರಿಸುತ್ತ ಕುಳಿತಿದ್ದರು. ಮಗುವು ಚೀರಡುತ್ತಿತ್ತು. ಗುಂಡಮ್ಮನ ಸುತ್ತ ಅನೇಕ ಹೆಂಗುಸರು ಸೇರಿದ್ದರು. ಅವಳು ಅವರಿಗೆ ವಿಷಯವನ್ನೆಲ್ಲ ವಿಶದವಾಗಿ ವಿವರಿಸುತ್ತ "ಅಂತೂ ಅವಳ ಗೊಂದಲ ಬಗೆಹರಿದಹಾಗಾಯ್ತು. ಈ ಕೆಲಸವನ್ನು ಅವಳು ಆಗಲೇ ಮಾಡಿದ್ದರೆ ಈ ಗೋಳಿಗೆ ಕಾರಣವಿರುತ್ತಿರಲಿಲ್ಲ!" ಎಂದು ಹೇಳುತ್ತಿದ್ದಳು. ಗುಂಪಿನಲ್ಲಿ ಕೆಲವರು "ಛೆ, ಎಂಥಾ ದುರದೃಷ್ಟ!" ಎಂದು ಮರುಗಿದರು. ಕೊಂಚ ಹೊತ್ತಾದ ಮೇಲೆ ಯಾರೋ "ಇದಂತೂ ಸರಿಯಲ್ಲ; ಇನ್ನು ಈ ನೀರು ತೆಗೆಸಿ ಹೊಸ ನೀರು ಬರೋ ತನಕ ಸೀನೀರಿಗೇನು ಗತಿ ಹೇಳಿ" ಎಂದು ಕೇಳುತ್ತಿದ್ದರು. ಎಲ್ಲರೂ ಚಿಂತೆಗೊಳಗಾಗಿದ್ದರು.

ತನಿಖೆ ಕ್ರಮಗಳು ನಡೆದು ಆತ್ಮಹತ್ಯೆಯು ಸ್ಥಾಪಿಸಲ್ಪಟ್ಟ ಮೇಲೆ, ಕಾಳಪ್ಪ ಶಾಸ್ತ್ರಿಗಳು ಶವಸಂಸ್ಕಾರದ ವಿಷಯವನ್ನು ಚರ್ಚಿಸುತ್ತ, ಅವಳು ಅನ್ಯಮತಸ್ಥಳಾದುದರಿಂದ ಆ ಮತದ ಕಟ್ಟಳೆಗೆ ಸರಿಯಾಗಿ ಶವವನ್ನು ಕೇಳು ಜಾತಿಯವರು ಅಷ್ಟು ಜನ ಎಲ್ಲಾದರೂ ಹೂಳಬೇಕೆಂದೂ, ಶ್ರಾದ್ಧ ಮೊದಲಾದುವೆಲ್ಲ ಅನಾಚಾರವಾಗುವುವೆಂದೂ ತೀರ್ಮಾನಿಸಿದರು. ಗಂಗಮ್ಮನವರು ಈ ಅಪಮೃತ್ಯುವಿನ ಒಗ್ಗೆ ಭಯವನ್ನು ಶಾಸ್ತ್ರಿಗಳಿಗೆ ತಿಳಿಸಿದರು. ಇದರ ವಿಚಾರವಾಗಿ ಶಾಸ್ತ್ರಿಗಳು ಮಧ್ಯಾಹ್ನದ ಹೊತ್ತಿಗೆ ಸೂರಪ್ಪನ ಮನೆಯಲ್ಲಿ ಶುದ್ಧಿ, ಪೂಜೆ, ಶಾಂತಿ ಮುಂತಾಗಿ ಅಗತ್ಯವಾದ ಕಾರ್ಯಗಳನ್ನೆಲ್ಲ ನೆರವೇರಿಸಿದರು.

* * *

ಕೆಲವು ವರ್ಷಗಳು ಕಳೆದುವು. ಸೂರಪ್ಪನಿಗೆ ಎರಡನೆಯ ಮದುವೆಯಾಯಿತು. ಬೇರೆ ಮಕ್ಕಳೂ ಆದುವು. ಮೊದಲನೆಯ ಹೆಣ್ಣು ಮಗುವಿಗೆ ಸೂರಪ್ಪನು ದೇವಮ್ಮನೆಂದೇ ಹೆಸರಿಟ್ಟಿದ್ದಾನೆ. 'ದೇವು' ಎಂದು ಕರೆಯುತ್ತಾನೆ. ಗಂಗಮ್ಮನವರು ಇಂದಿಗೂ ದೇವಮ್ಮನ ಹೆಸರಿನಲ್ಲೇ ದೀಪವನ್ನು ಹಚ್ಚುತ್ತಾರೆ. ಗುಂಡಮ್ಮನು ಈಗಲೂ ಈ ಕತೆಯನ್ನು ಸಮಯ ಸಿಕ್ಕಿದಾಗಲೆಲ್ಲ ಅವರವರಿಗೆ ಸವಿಸ್ತಾರವಾಗಿ ತನ್ನ ವ್ಯಾಖ್ಯಾನದೊಂದಿಗೆ ತಿಳಿಸುತ್ತ "ದೇವರೇ ಅವಳಿಗೆ ಒಳ್ಳೇ ಬುದ್ಧಿ ಕೊಟ್ಟು ನಮ್ಮನ್ನು ಆಪತ್ತಿನಿಂದ ಪಾರು ಮಾಡಿಸಿದ!" ಎಂದು ಪೂರ್ತಿ ಮಾಡುತ್ತಾಳೆ.

ತಿಮ್ಮಯ್ಯನವರ ಅಕಾರಣ ಮರಣ.

(ಸಣ್ಣ ಕತೆ)

ಶ್ರೀ. ಎಸ್. ಕೆ. ಐರಣಿ ವಿಲಿಂಗ್ಡನ್ ಕಾಲೇಜ್, ಸಾಂಗಲಿ

★

ದುರತಿಕ್ರಮವಾದ ಕಾಮ ಎಂತಹ ಸುಸಂಸ್ಕೃತ ಮಾನವನನ್ನೂ ಸೋಲಿಸಿ ಸ್ವಾಧೀನ ಪಡಿಸಿಕೊಳ್ಳುವುದು. ಮೊದಲು ಕಾಮುನಿಗೆ ಸೋತ ತಿಮ್ಮಯ್ಯನವರು, ವೃತ್ಯುವಿನ ನೆರವಿನಿಂದ ಆ ಮೇಲೆ ಕಾಮನನ್ನು ಸೋಲಿಸಿದರು.

★

ತುಂಗಭದ್ರೆಯ ದಡದಲ್ಲಿ ಈಗ ಊರೇ ಬಂದು ಸೇರಿದೆ. ಜನ ಗುಂಪುಗುಂಪಾಗಿ ಗುಜುಗುಜು ಮಾತನ್ನು ನಡೆಯಿಸಿದ್ದಾರೆ. ಎಲ್ಲರ ಬಯಕೆಸೋಟ ಹೊಳೆಯಲ್ಲಿ ಏನನ್ನೋ ಹುಡುಕುತ್ತಿದ್ದವರ ಮೇಲೆ. ಅರ್ಧಗಂಟೆಯ ಮೇಲೆ, ಈಜುತ್ತಿದ್ದ ೬-೭ಜನ ಒಂದು ದೇಹವನ್ನು ಹೊತ್ತು ತಂದರು. ಈ ಕಡೆಗೆ ನಿಂತಿದ್ದ ಜನವೆಲ್ಲ, ಊರಿಗೇ ಧರ್ಮರಾಯನಂತಿದ್ದ ತಿಮ್ಮಯ್ಯನವರನ್ನು ಕಾಣಲು ಆ ಕಡೆಗೆ ಓಡಿತು. ಗಾಳಿ ಬೆಳಕುಗಳು, ಸಂದಿ ಗೊಂದಿಗಳಲ್ಲಿ ಕೂಡ ನುಸುಳಿ ಅವರ ದೇಹವನ್ನು ತಬ್ಬದಂತೆ ಜನ ಮುಕುರಿತು.

ಜನಕ್ಕೆ ಇನ್ನೂ ಆಶೆ—ಆ ದೇಹದಲ್ಲಿ ಪ್ರಾಣವಿರಬೇಕೆಂದು. ಬಲ್ಲವರು ನಾಡಿಯನ್ನು ನೋಡಿದರು. ಊರ ವೈದ್ಯರು ದೇಹವನ್ನೆಲ್ಲ ಪರೀಕ್ಷಿಸಿದರು. ಆದರೆ ಜೀವಂತವಾಗಿರುವ ಆಶೆಯನ್ನು ಬಿಡಬೇಕಾಯಿತು ಎಷ್ಟುಹೊತ್ತು ಶವವನ್ನು ಅಲ್ಲಿಯೆ ಬಿಡುವುದು? ಮನೆಗೆ ಹೋಗಲೆಂದು ಅದನ್ನು ಹೊತ್ತುಕೊಂಡು ನಡೆದರು.

ಮನೆಯಲ್ಲಿ ನೀಲಳನ್ನು ಹಿಡಿದು ಕೂಡ್ರಿಸಿಕೊಂಡಿದ್ದರು—ತೆಲೆ ಹೆಂಗಳೆಯರು. ದೂರದಲ್ಲಿ ಜನಸಂದಣಿ ಬರುತ್ತಿರುವುದು ಕಾಣಲು, ಇಲ್ಲದ ಆವೇಶ ಬಂದು ಆಕೆ ಕೊಸರಿಕೊಂಡು ಮುಂದೆ ನುಗ್ಗಲು ಯತ್ನಿಸಿದಳು. ದುಃಖದಿಂದ ಮಂಕಾಗಿದ್ದ ಅವಳ ಕಣ್ಣಲ್ಲಿ ನೀರಿರಲಿಲ್ಲ. ತನಗೆ ತಂದೆಯಂತಿದ್ದ ಮಾವನ ಆಗಮನವನ್ನು ಛಿರಿ ಛಿರಿ ನೋಡುತ್ತಿದ್ದಳು.

ಶವವನ್ನು ತಂದು ಅವರ ಕಟಾಂಜನದ ಕಟ್ಟೆಯ ಮೇಲೆ ಮಲಗಿಸಿಯಾಯಿತು. ನೆರೆದವರಲ್ಲಿ ಒಬ್ಬನೆಂದ:

"ಮುಖದ ಮೇಲೆ ಸಾವಿನ ಕಳೆ ಎಳ್ಳಷ್ಟೂ ಇಲ್ಲ ನೋಡು, ಶಾಂತವಾಗಿ ನಿದ್ದೆ ಮಾಡುತ್ತಿರುವ ಹಾಗಿದೆ!"

"ಹೊನ್ನೆಯ ದಿನವೇ ನಮ್ಮ ಮನೆತನಕ ಬಂದು ಮಾತನಾಡಿಸಿದ್ದರು. ಧರ್ಮದಂತಹ ಮನುಷ್ಯ. ಒಬ್ಬರ ಸಂಗಡಲೂ ಜಗಳ ಕಟ್ಟಿಕೊಂಡವರಲ್ಲ. ಈ ರೀತಿ ಇವರನ್ನು ಮುಳುಗಿಸುವುದಕ್ಕೆ ಯತ್ನಿಸಿದವನಿಗೆ ಏಳೇಳು ಜನ್ಮಕ್ಕೂ ನರಕ ಬಿಡದು!" "ಅವರಿಗೆ ಈ ರೀತಿಯಾಗಿ ಕೇಡು ಬಗೆಯುವಂತಹರು, ನಮ್ಮೂರಲ್ಲಿ ಏಕೆ, ಸುತ್ತಲಿನ ಹಳ್ಳಿಗಳಲ್ಲಿ ಕೂಡ ಇಲ್ಲ. ಹೇಗೋ ಏನೋ ಜಾರಿ ಹೊಳೆಯಲ್ಲಿ ಬಿದ್ದಿರಬೇಕು!"

"ಎನೂ ಗೊತ್ತಿಲ್ಲದವರ ಹಾಗೆ ಮಾತನಾಡುತ್ತೀಯಲ್ಲ! ನಮ್ಮೂರಲ್ಲಿ ಅವರ ಬಲಗೆ ಈಜುವವರು ಯಾರಿದ್ದಾರೆ! ಹೋದ ವರ್ಷ ಇದೇ ದಿನದಲ್ಲಿ, ಜಾತ್ರೆಯ ಮುಂದೆ. ಹೊಸರಿತ್ತಿಯ ಹುಡುಗ ಮುಳುಗಿದಾಗ, ಅಂತಹ ತುಂಬುಹೊಳೆಯಿಂದ ಅವನನ್ನು ಈಜಿ ತೆಗೆದರಲ್ಲ!"

ಮಾತಿಗೆ ಕೊನೆಯಿಲ್ಲ; ತಲೆಗೊಂದು ವಿಚಾರ ನಡೆದಿತ್ತು. 'ನೀರಲ್ಲಿ ತೇಲುತ್ತಿದ್ದುದು ಎಂದು ಕಂಡುಬಂದಿತು?' 'ಯಾರು ನೋಡಿದರು?' 'ಪ್ರಾಣ ಇರಲಿಲ್ಲವೆ?' 'ಹೇಗೆ ದಡಕ್ಕೆ ತಂದರು?' ಇತ್ಯಾದಿಯಾಗಿ ತಮ್ಮತಮ್ಮಲ್ಲಿ ಸಣ್ಣ ಸಣ್ಣ ಗುಂಪಾಗಿ ಚರ್ಚಿಸಿದರು.

ತಿಮ್ಮಯ್ಯನವರ ಆಸರೆಯಿಂದ ಪೋಷಿತರಾಗಿ ಬಳಿದವರೆಷ್ಟೋ ಜನ. ಅನೇಕ ಮನೆತನಗಳಿಗೆ ಅವರು ಜೀವನದ ದಾರಿ ತೋರಿಸಿದ್ದಾರೆ. ಊರಿಗೆ ವೈದ್ಯರಾಗಿ, ಮಕ್ಕಳನ್ನು ದೊಡ್ಡವರನ್ನು ಬದುಕಿಸಿದ್ದಾರೆ. ಎರಡಾಗಿದ್ದವರನ್ನು ಒಂದಾಗಿಸುವ ಹಿಡಿತ ಅವರಲ್ಲಿತ್ತು. ಊರಲ್ಲಿಯ ಧರ್ಮಕಾರ್ಯ ಅವರಿಂದಲೇ ಸಾಗಬೇಕು. ಊರ ಪಂಚಾಯತಿಯ ಅಧ್ಯಕ್ಷರೂ ಅವರೆ. ಅಂತೂ ಇವೆಲ್ಲ ಆಗಿನ ಜನವಾರ್ತೆಗಳ ವಿಷಯವಾಗಿತ್ತು. ಅವರ ಒಂದೊಂದೇ ಸತ್ಕೃತಿಗಳನ್ನು ನೆನಪಿಗೆ ತಂದುಕೊಂಡು, ಜನರು ತಂತಮ್ಮ ನೊಂದಮನಸ್ಸನ್ನು ಸಂತವಿಸುತ್ತಿದ್ದರು. ಅವರ ಗುಣಗಾನ ನೆರೆದ ಜನಕ್ಕೆ ಅನಿವಾರ್ಯವಾಗಿತ್ತು. ಹೆಣ್ಣುಮಕ್ಕಳಂತೂ ಭೋರೆಂದು ಕಣ್ಣೀರು ಕರೆದರು.

ಊರಗೌಡರಾದ ಶ್ರೀಪತಿರಾಯರು ಅಲ್ಲಿಯೇ ಇದ್ದರು. ಹೊಳೆಯಿಂದ ಶವವನ್ನು ಎತ್ತಿ, ೩-೪ ಮೈಲುಗಳ ವರೆಗೆ ಪ್ರವಾಹದ ಎದುರು ಈಸಿ, ತಮ್ಮ ಊರಿನ ದಡಕ್ಕೆ ತಂದವರೇ ಅವರು. ಅವರಿಬ್ಬರ ಆತ್ಮೀಯತೆ ಹಾಗೆ ಮಾಡಿಸಿತ್ತು.

ಹಾ! ಹಾ! ಎನ್ನುವುದರಲ್ಲಿ ಸುದ್ದಿ ಸುತ್ತಲಿನ ಊರಿಗೂ ಹಬ್ಬಿತು. ಅವರನ್ನು ಬಲ್ಲವರು ಅಂತ್ಯದರ್ಶನಕ್ಕಾಗಿ, ಸ್ಮಶಾನಯಾತ್ರೆಗಾಗಿ ಧಾವಿಸಿದರು. ಮಗ್ಗಲು ಊರಿನಲ್ಲಿದ್ದ ಫೌಜದಾರರು ಬಂದರು. ಲೋಕಲ್‌ಬೋರ್ಡ್ ಡಾಕ್ಟರರು ತಮ್ಮ ಹೆಂಡತಿಯನ್ನು ತವರಿಗೆ ಕಳುಹಲೆಂದು ಮೋಟರ್ ಹತ್ತಿದವರು, ಹಾಗೆಯೆ ತಿರುಗಿದರು.

*ಮೇಲಾಟದಲ್ಲಿ ತಿಮ್ಮಯ್ಯ ಬಹುಮಾನ ಪಡೆದುದು.

ಡಾಕ್ಟರರ ಕಣ್ಣಲ್ಲಿ ನೀರೂರಿತ್ತು. ಶವದ ಸಂದಿ-ಗೊಂದಿ ಎಲ್ಲ ಪನ್ನೂ ನಿರುಕಿಸಿದರು. ಜಡ್ಡಾಗಲಿ, ಗಾಯದ ಗುರುತಾಗಲಿ ಏನಿರಲಿಲ್ಲ. ಟೊಂಕಕ್ಕೆ ಕಾತಿಯ ಹುರಿಯನ್ನು ಬಿಗಿಯಾಗಿ ಕಟ್ಟಿಕೊಂಡ ಮೂಲಕ, ಅದರ ಗುರುತು ಮಾತ್ರ ಎದ್ದು ಕಾಣುತ್ತಿತ್ತು.

ಫೌಜದಾರರಿಗೆ, ತಿಮ್ಮಯ್ಯನವರನ್ನು ಈ ರೀತಿ ಕೊನೆಗಾಣಿಸಿದವರ ಮೇಲೆ ತಡೆಯಿಲ್ಲದ ಸಿಟ್ಟು ಬಂತು. ಅವರ 'ತನಿಖೆ'ಯ ಬುದ್ಧಿ ತೆರೆಯಾಗಿ ಹರಿಯಿತು. ಕೈಕಾಲು ಕಟ್ಟಿ ಯಾರಾದರೂ ಒಗೆದರೆ? ಕಪ್ಪಲಿಯ ಮೇಲೆ ನಿಂತಾಗ ಜಾರಿಬಿದ್ದರೆ? ಯಾರಾನ್ನಾದರೂ ಬಮುಕಿನ ಹೋಗಿ ಮುಳುಗಿದರೆ? ಮೊಸಳೆ ಎಳೆದೊಯ್ದಿತ್ತೆ? — ಎಲ್ಲವೂ ಗಾಳಿಮಲ್ಲಿ ತೇಲಿದುವೇ ಹೊರತು ಸತ್ಯವೆಂದು ಎನಿಸಲಿಲ್ಲ.

ಫೌಜದಾರರಿಗೆ ಇನ್ನೊಂದು ನಿಚಾರ ಸುಳಿಯಿತು: ಕೂಡಲೆ ನೀಲವ್ವನ ಹತ್ತಿರ ಬಂದರು—ಅವರು ಮನೆಬಿಟ್ಟು ಹೋದ ಹಿಂದಿನ ಸಂಗತಿ ಕೇಳಿ ತಿಳಿಯಲು. ಆವಳ ರೋದನದಲ್ಲಿ ಯಾವ ಭಾಗವೂ ಚೆನ್ನಾಗಿ ತಿಳಿಯದಾಯಿತು. ಅಂತು ಅವಳನ್ನು ಸಂತವಿಸಿ ಹಿಂದುಮುಂದಾದರೂ ತಿಳಿದುಕೊಂಡದ್ದು ಇಷ್ಟು: ಆ ಸಂಜೆ ತಾವು ಹಳ್ಳಿಯ ಮೇಲೆ ಹೋಗುವುದಾಗಿಯೂ, ರಾತ್ರಿ ತಮ್ಮ ಹಾದಿ ಕಾಯಬಾರದಾಗಿಯೂ ಹೇಳಿ, ಹಾಲನ್ನು ಕುಡಿದು, ದೇವರ ಪಟಕ್ಕೆ ನಮಸ್ಕಾರ ಮಾಡಿದರಂತೆ. ಅನಂತರ ಒಂದು ಕಾಗದ ನನ್ನು ಅವಳ ಕೈಯ್ಯಲ್ಲಿಟ್ಟು,'ಶ್ರೀಪತಿರಾಯರು ಬಂದಾಗ ಕೊಡು' ಎಂದು ಹೇಳಿ ಹೊರಗೆ ನಡೆದರಂತೆ. ಅಂಗಳದಲ್ಲಿ ಒಂದುಕ್ಷಣ ನಿಂತುದನ್ನು ಕಂಡು, ನೀಲವ್ವ 'ಬಡಿಗೆ-ಕಂಬಳಿಗಳನ್ನು ಮರೆತಿರುವಿರಿ' ಎಂದು ಕೊಡಲು ಹೋದಾಗ 'ಬೇಡ' ಎಂದರಂತೆ.

ಶ್ರೀಪತಿರಾಯರು ತಮಗೆ ಕೊಟ್ಟುಹೋದ ಕಾಗದಕ್ಕಾಗಿ ಧಾವಿಸಿದರು. ನೀಲವ್ವನಿಗೆ ಎದ್ದು ಬಂದು ಕೊಡುವಷ್ಟು ಸಹನೆ ಇಲ್ಲ. ಕೊನೆಗೊಮ್ಮೆ ಸಿಕ್ಕಿತು. ನೋಡುತ್ತಾರೆ—ಅದು ತಿಮ್ಮಯ್ಯನವರ ವೃತ್ಯುಪತ್ರ: 'ನಾನು ಸತ್ತಮೇಲೆ ಎಲ್ಲ ಆಸ್ತಿಯ ಹಕ್ಕು ನನ್ನ ಸೊಸೆ ನೀಲವ್ವನಿಗೆ ಸೇರಿಮದು. ಯಾರೇ ದಾಯಾದಿಗಳ ಸೋಗು ಹಾಕಿ ಆಸ್ತಿಯನ್ನು ತಮ್ಮದಾಗಿಸಿಕೊಳ್ಳಲು ಯಾವುದೇ ರೀತಿಯಿಂದ ಬಾಧ್ಯರಲ್ಲ' ಎಂದು ಅದರ ಒಕ್ಕಣಿಕೆ. ಶ್ರೀಪತಿರಾಯರಿಗೆ ನಿರಾಶೆಯಾಯಿತು.

ಪಂಚನಾಮೆಯ ಕೆಲಸವೊಂದು ನಿಂತಿತ್ತು. ಕಪ್ಪಲಿಯ ಮೇಲಿಂದ ಜಿಗಿಯುವಾಗ ಬಿದ್ದರೆಂಬ ಕಾರಣ ಕಾಣಿಸಿ, ಅವಸರದಲ್ಲಿ ಅದನ್ನು ಮುಗಿಸಲಾಯಿತು. ಸ್ಮಶಾನಯಾತ್ರೆಯ ಸಿದ್ಧತೆ ಮುಗಿಯ ಬಂತು.

ನೀಲವ್ವನ ಆಕ್ರಂದನ ಹೇಳತೀರದು. ಅವಳನ್ನು ಹಿಡಿದುಕೊಂಡವರ ತೂಕ ಸ್ವಲ್ಪ ತಪ್ಪಿದರೆ ಸಾಕು, ಮಾವನ ಕಳೇಬರವನ್ನು ಅಪಚಿಕೊಳ್ಳುವಳು. ಹೋದವರುಷ ಇದೇ ತಿಂಗಳಲ್ಲಿ ಮುತ್ತೈದೆತನದ ಗಂಡನನ್ನು ಕಳೆದುಕೊಂಡಳು ತವರ ಬಳಗವಿಲ್ಲ, ಮಕ್ಕಳಿಲ್ಲ, 'ಅವಳ ಸರ್ವಸ್ವವೆಲ್ಲ ಈಗ ಅವಳ ಮಾವ. ಅವರೂ ಕೈಬಿಟ್ಟಮೇಲೆ ಗತಿಯೇನು? ಅದೆಷ್ಟರ ಮಟ್ಟಿಗೆ ಅವಳ ಹೃದಯ ಶೋಕದಿಂದ ತತ್ತರಿಸಿದೆ ಎಂಬುದನ್ನು ಬೇರೆಯವರು ನೆನೆದರೆ ಸಾಕು, ಕಣ್ಣಲ್ಲಿ ನೀರು ಉಕ್ಕುವಂತಿತ್ತು. ಪತ್ತವರಿಗಾಗಿ ಅಲ್ಲದೆ ಇದ್ದು ಅನಾಥಳಾದವಳನ್ನೂ ನೆನೆದು ಜನಸಂದಣಿ ಮಮ್ಮಲನೆ ಮರುಗಿತು.

ರಣಗುಡುವ ಸಾಮೂಹಿಕ ಅಳಲಿನೊಂದಿಗೆ ತಿಮ್ಮಯ್ಯನವರ ಅಂತ್ಯವಿಧಿ ಕೊನೆಗಂಡಿತು. ಹಾವನೂರಿನ ಧರ್ಮದ ದೀಪ ನಂದಿತು!

ಮೇಲಿನ ಸಂಗತಿ ಜರುಗುವುದಕ್ಕೆ ಒಂದುವರ್ಷದ ಹಿಂದೆ, ಇದ್ದೊಬ್ಬ ಮಗನು ಕಣ್ಮರೆಯಾಗಲು, ತಿಮ್ಮಯ್ಯನವರು ಇಳಿವಯಸ್ಸಿನಲ್ಲಿ ಬಹಳ ದುಃಖಿತರಾಗಿದ್ದರು. ಆದರೆ ತಮ್ಮ ಮಗನ ಸಾವಿನಲ್ಲಿ ತಮಗಿಂತಲೂ ಹೆಚ್ಚಾಗಿ—ದುಃಖದಲ್ಲಿ ಹಾನಿಯಲ್ಲಿ ಪಾಲುಗಾರರೊಬ್ಬರಿದ್ದಾರಲ್ಲವೆ? ತಾವು ಒಂದಿಲ್ಲೊಂದು ದಿನ ಮಗನಿಗೆ ಎಲ್ಲವನ್ನೂ ಒಪ್ಪಿಸಿ ಮರೆಯಾಗುವವರೇ! ನೀಲಳು ತಮ್ಮ ಮಗನ ಹೆಮ್ಮಾರದ ನೆರಳಲ್ಲಿ ಬಳೆಯಬೇಕಿದ್ದವಳು. ಆ ಆಸರೆ ತಪ್ಪಿದ ಮೇಲೆ ಅವಳಿಗೆ ಗತಿ ಏನು? ಈಗ ನೀಲವ್ವನನ್ನು ಸಂತವಿಸುವುದು ಅಗತ್ಯದ ಮಾತಾಯಿತು. ತಮ್ಮ ಮನೆಗೆ ಅವಳನ್ನು ಬರಮಾಡಿಕೊಂಡು ಅದರಿಂದ ಅವಳಿಗೆ ಸುಖದೊರೆಯುವಂತೆ ಮಾಡಲಿಲ್ಲ—ಎನ್ನುವುದು ಅನೇಕ ಮೇಳೆ ಅವರ ಜೀವವನ್ನು ಹಿಂಡುತ್ತಿತ್ತು.

ತಿಮ್ಮಯ್ಯನವರ ತಳಮಳಕ್ಕೆ ಇನ್ನೊಂದು ಕಾರಣ, ನೀಲಳ ಸಾತ್ವಿಕ ಮತ್ತು ಪರಿಶುದ್ಧವಾದ ಚೇತನ. 'ಇಂತಹ ಬಾಲಭಾವದವಳಿಗೆ ಮಗನ ಸಾವಿನಿಂದ ಎಂತಹ ವಿಪತ್ತು ಬಂತು?' ಎಂದುಕೊಂಡರು. ಮನೆಯಲ್ಲಿ ಅಳುಗಳನ್ನು ಬಿಟ್ಟರೆ ಮನೆಯವರೆನ್ನಬಹುದಾದ ಬೇರೆಯವರು ಇಲ್ಲ. ಅವಳ 'ಅಪ್ಪಯ್ಯ'ನ ಸೇವೆಯೆ ಅವಳ ದಿನಗೆಲಸ. ಅದನ್ನು ಶ್ರದ್ಧೆಯಿಂದ ಮಾಡುತ್ತಿದ್ದಳು. ಅವರನ್ನು ವಾತ್ಸಲ್ಯದಿಂದ ಕಾಣುತ್ತಿದ್ದಳು. ಇಂತಹಳು ತನ್ನ ದುರ್ವಿಧಿಗೆ ಯಾರನ್ನು ತಾನೇ ಹೊಣೆಮಾಡಿಯಾಳು?

ನೇರವಾಗಿ ಯಾವುದೂ ಬಹಳ ದಿನ ನಡೆಯಲಾರದೆಂಬುದು ಜಗತ್ತಿನ ನಿಯಮವಲ್ಲವೆ? ಇಬ್ಬರ ಪತ್ತಿರದ ಪರಿಚಯ. ದಿನಬಳಕೆಯ ಸಂಬಂಧ, ಕನಿಕರ— ತಿಮ್ಮಯ್ಯನವರ ಮನಸ್ಸಿನ ಮೇಲೆ ಬೇರೊಂದು ವಿಧವಾಗಿ ಪರಿಣಾಮ ಮಾಡಿತು. ಯಾವುದೊ ಒಂದು ವಾಸನೆಯ ಕಡೆಗೆ ಅವರ ಮನಸ್ಸು ಜಗ್ಗುತ್ತಾ ಇದೆ; 'ಅದು ಪಾಪದ ಕೆಲಸ' ಎಂದು ಒಮ್ಮೊಮ್ಮೆ ಎನಿಸುತ್ತದೆ. ಆದರೆ ನಿಗ್ರಹ ಪ್ರತಿಸಲ ಸೋಲುತ್ತ ನಡೆದಿದೆ. ಜವ್ವನೆಯ ಪ್ರತಿಯೊಂದು ಕೆಲಸವನ್ನೂ, ಅವರ ಇಂದ್ರಿಯಗಳು ಕಾಣತೊಡಗಿದುವು. ಅವಳು ಕೊಡವನ್ನು ಹೊತ್ತುಕೊಂಡು ಹೊಳೆಯಿಂದ ಬಳುಕುತ್ತ ಬರುವಾಗ, ದೂರದಿಂದಲೇ ಅವರ ದೃಷ್ಟಿ ಕಿಟಕಿಯನ್ನು ತೂರಿಕೊಂಡು, ಅವಳ ಬಳಿ ಸುಳಿಯುತ್ತಿತ್ತು.

ನೀಲಳ ದನಿಯನ್ನು ಕೇಳುವುದೆಂದರೂ ಅದೊಂದು ಸಂತಸ. ಅವಳು ಒಳಗೆ ಕೆಲಸದಲ್ಲಿ ಮಗ್ನಳಾದಾಗ ತನ್ನಲ್ಲೇ ಗುಂಯ್‌ಗುಡುವಾಗ, ಹೊರಜಗುಲಿಯ ಮೇಲೆ ಕುಳಿತ ಅವರ ಲಕ್ಷ್ಯ ಪೆಲ್ಲ ಒಳಗೇ.

ನ್ಯೂಜಾಮಿ ಕಳೆಯಿತೆಂದರೆ ಹಬ್ಬಗಳ ಸುರಿಮಳೆ. ಎಲ್ಲರೂ ತಂತಮ್ಮ ಮತಾಚಾರಗಳಿಗನುಸರಿಸಿ ಹಬ್ಬ ಪಾಲಿಸುವವರೇ. ಅವುಗಳಲ್ಲಿ ಅಭ್ಯಂಜನ ಸ್ನಾನ ಎಲ್ಲರಿಗೂ ಎಲ್ಲ ಹಬ್ಬಗಳಲ್ಲೂ ಸಾಮಾನ್ಯ ನಿಯಮ.... ಈ ಮನೆಗೆ ಬಂದಂದಿನಿಂದ ಹೆಣ್ಣು ಮಗಳು ಒಬ್ಬಳೇ ಆದ ನೀಲನ್ನ, ಎಂದಿನಿಂದಲೂ ತನ್ನ ಅಪ್ಪಯ್ಯನಿಗೆ ಎಣ್ಣೆಶಾಸ್ತ್ರವನ್ನಾಡಿದ್ದಾಳೆ. ಈಗಲಿಗ 'ಹಬ್ಬ ಎಷ್ಟು ಬೇಗ ಬಂದೀತೊ' ಎಂದು ಅವಳ ಅಪ್ಪಯ್ಯನ ಒಳಮನಸ್ಸು ಎಣಿಕೆ ಹಾಕುತ್ತಿದೆ—ಹೆಚ್ಚಾಗಿ ಅವಳ ಹಸ್ತಸ್ಪರ್ಶ ದೊರೆಯುವುದೆಂದು! ಸುರುಟ್ಟಣ ತಮ್ಮನ್ನನ್ನು ತಾವೇ ಬೈದುಕೊಳ್ಳುತ್ತಾರೆ. ಅದು ಹಾಗಿರಲಿ, ಸೈಯ್ಯಲ್ಲಿ ಎಣ್ಣೆ ಬಟ್ಟಲನ್ನು ಹಿಡಿದು ನೀಲಳು 'ಮಣೆ ಹಾಕಿದೆ' ಎಂದರೆ ತಟ್ಟನೆ ಬಂದು ಕುಳಿತುಕೊಳ್ಳುತ್ತಾರೆ.

ಅಯ್ಯನವರ ಅವಸಾನಕ್ಕೆ ಎರಡು ತಿಂಗಳ ಹಿಂದಿನ ಮಾತು: ಆಗ 'ಪಾನೋನಿ' ಹಬ್ಬ. ಹಬ್ಬದ ಉತ್ಸವಗಳಲ್ಲಿ ಭಾಗಿಯಾಗುವ ಸಂತಸ ಸೊಸೆಗಿಲ್ಲವೆಂದು ನೊಂದುಕೊಂಡೇ ಒಳಗೆ ಕಾಲಿಟ್ಟರು. ಅವಳಿಗಾಗಿ ಇದ್ದೆಲ್ಲ ಸಹಾನುಭೂತಿ—ಪ್ರೀತಿ, ವೈಪರೀತ್ಯ ನಿಂತಿತು. ಜೊತೆಗೆ ಸತ್ತ ಮಗನ ನೆನಪೂ ಕಣ್ಣಲ್ಲಿ ಪನಿಗೂಡಿಸಿತು.

ನಡುಮನೆಗೆ ಬಂದಾಗ ನೀಲಳು ಬಚ್ಚಲುಮನೆಯಲ್ಲೇ ಇದ್ದಳು. 'ಆಗಲಿ' ಎಂದುಕೊಂಡು ಮತ್ತೆ ಹೊರಡುವವರಿದ್ದರು. ಆಷ್ಟರಲ್ಲಿ ಪೆಜ್ಜೆ ಸಪ್ಪಳ ಕೇಳಿ ನೀಲಳು ಹೊರಬಂದಳು. ಹೊಗೆಯಿಂದ ಕಣ್ಣು ಊದಿಕೊಂಡಿದ್ದುವು. ತಿಮ್ಮಯ್ಯನವರಿಗೆ ಆಶ್ಚರ್ಯವಾಯಿತು. ಅವಳು ನಗುತ್ತ ನಿಂತುದನ್ನು ಕಂಡರು. ಹೌದು ಆ ನನಗೆ ಅರ್ಧ ಒತ್ತಾಯದ್ದು, ಅರ್ಧ ತಾನಾಗಿ ಇದ್ದುದು. ಅವಳು ಉಳುವ ಬಾಣಿಯನ್ನು ಅಗಲೆ ಮುಗಿಸಿದ್ದಳು. ತಿಮ್ಮಯ್ಯನವರು ಒಮ್ಮೆ ನೋಡಿದರು. ಅದೇ ತುಂಬುಗಲ್ಲ, ಅದೇ ಮಾಟ, ಅದೇ ಜೆಲುವು. ತಾಯಿ ತನ್ನ ಮಗುವನ್ನು ಕರೆಯುವ ದನಿಯಲ್ಲಿ "ಅಪ್ಪಯ್ಯ, ನೀರು ಕಾದಾಗಿದೆ; ನೀನು ಬರುವುದೇ ತಡ" ಎಂದು ಮಣೆ ಹಾಕಿದಳು. ಅವಳಿಗೇನು ತಿಳಿಯದೇ, ಹೊರಗೆ ಅವರಿಗಾಗಿ ಜನ ಕಾದಿದ್ದಾರೆ—ಎನ್ನುವುದು.

ನೀಲನ್ನ ಎಣ್ಣೆ ಹೂಸಿ ತಲೆಯನ್ನು ತಿಕ್ಕುತ್ತಿದ್ದಾಳೆ. ಮನೆಯ ಕಮತಿಗ ಬಾಗಿಲ ಆಚೆಗೆ ನಿಂತು ಬೇಸಾಯಕ್ಕೆ ಸಂಬಂಧಿಸಿದ ಮಾತನ್ನು ಹೇಳುತ್ತಿದ್ದಾನೆ. ಕಿವಿ ಬೇಕಾದಹಾಗೆ ಕೇಳುತ್ತಿವೆ; ಆದರೆ ಮನಸ್ಸಿನ ವರೆಗೆ ಅವು ಇಳಿಯುತ್ತಿಲ್ಲ. ತಲೆ ತಗ್ಗಿಸಿದವರು ಮೇಲಕ್ಕೆ ಮುಖವೆತ್ತಿದರು, ನೋಡಿದರು. ಅವಳ ತಿಕ್ಕುವ ರಭಸಕ್ಕೆ ಪುಷ್ಪವಾದ ಎಷೆ ಕದಪ್ಪಲಿಸುತ್ತಿದೆ; ಕೊರಳಲ್ಲಿಯ ಎಳ್ಳಸರ ಅದರ ಮೇಲೆ ತೂಗುತ್ತಿದೆ. ಎಷ್ಟೊಂದು ಶ್ರಮ-ಪಡುತ್ತಿದ್ದಾಳೆ ಎನ್ನುವುದನ್ನು ಅವಳ ಜೋರಾದ ಶ್ವಾಸೋಚ್ಛ್ವಾಸ ತೋರಿಸಿತು. ಎರಡು-ಮೂರು ನಿಮಿಷದ ವರೆಗೆ, ಎರಡಕ್ಕೆ ಬದಲು ಹತ್ತು ಕಣ್ಣು ಇದ್ದರೆ ಹೇಗೆ ಹೀರಬಹುದಾಗಿತ್ತೊ ಅಷ್ಟು ಕೂರಾಗಿ ನೋಡಿದರು. ಆದರೆ....ತೃಪ್ತಿಯಿಲ್ಲ. ಅದರಿಂದ ಏನೋ ಒಂದು ಬಗೆಯ ಹೊಯ್ದಾಟ. ಅಷ್ಟರಲ್ಲಿ ಪರಿಚಾರಕ ನಿಂತುದು ನೆನಪಿಗೆ ಬಂತು. ತಮ್ಮ ದುರ್ಬಡತೆಯನ್ನು ಆತ ಕಂಡನೇನೋ—ಎಂದು ನಾಚಿಕೆಯಾಯಿತು. ತಮ್ಮ ಕುರುಡುವಾಸನೆಯ ಮೇಲೆ ಸಿಟ್ಟುಬಂತು. ಒಮ್ಮೆಲೆ ಸೊಸೆಗೆ "ಸಾಕು ಇನ್ನು" ಎಂದು ತಡೆದರು. ಅವಳು ಕೈ ಹಿಂದಕ್ಕೆ ತೆಗೆದುಕೊಂಡಾಗ ಎದ್ದು ನಿಲ್ಲಲು ಹೋದರು, "ಅಪ್ಪಯ್ಯ ಆತು.. ಮುಗಿದೇಹೋಯಿತು; ಕೈಗೆ ಹತ್ತಿದ ಈ ಎಣ್ಣೆ ಅಂಗಾಲಿಗೆ ತಿಕ್ಕಿ ಬಿಡುತ್ತೇನೆ" ಎಂದು ಬಿಡದೆ ಕೂಡ್ರಿಸಿದಳು. ಅವಳ ಸಣ್ಣ ಈ ಆಚರಣೆ ಅವರ ಕರುಳನ್ನು ಮತ್ತಷ್ಟು ಕಿವಿಚಿತು ಇನ್ನು ಮೇಲೆ ಎಂದಿಗೂ. ಹಬ್ಬದ ದಿನಗಳಲ್ಲಿ ಕೂಡ ಮನೆಯಲ್ಲಿ ಜಳಕಮಾಡುವುದಿಲ್ಲವೆಂದು ಪ್ರತಿಜ್ಞೆ ಮಾಡಿಕೊಂಡರು.

ಮತ್ತೆ ಹಲವು ಹಗಲುಗಳು ಉರುಳಿದುವು. ಆ ರಾತ್ರಿ ಬಂತು. ಎಂತಹ ಮಳೆ-ಚಳಿಯೇ ಇರಲಿ, ತಿಮ್ಮಯ್ಯನವರು ಹೊರಜಗುಲಿಯ ಮೇಲೆ ಮಲಗುವರು. ಊಟ ತೀರಿಸಿಕೊಂಡು ಇಂದೂ ಮಲಗಿದ್ದಾರೆ. ನಿದ್ದೆ ಹತ್ತುವ ಬಗೆ ತಿಳಿಯದಾಗಿದೆ. ಒಳಗೆ ಪರ-

ಸ್ವಲ್ಪವೇ ಪ್ರತಿಗಳು ಉಳಿದಿವೆ.

★

ಪಂಡಿತ ಜಗನ್ನಾಥ	..	೧	೦	೦
ಪಂಚೇ ಕರಣ	..	೧	೮	೦
ಸಂಸಾರದಿಂದ ಸದ್ಗತಿ	..	೧	೮	೦
ಸಂತಾನ ಶಾಸ್ತ್ರ	..	೧	೪	೦
ಗರ್ಭಿಣೀ ಶಿಶುಸಂಗೋಪನ	..	೧	೦	೦
ಚಾಲುಕ್ಯರ ಪುಲಕೇಶಿ	..	೧	೪	೦
ಮಹಾತ್ಮಾ ಗಾಂಧಿಯವರ ಚರಿತ್ರೆ		೧	೮	೦
ಹತ್ತಿ ಆರಳಿ ಜಂತ್ರಿ	..	೨	೦	೦
ತರುಣ ಪತ್ನಿ	..	೦	೮	೦
ಕಲಿತರೆ ಹೀಗೆ ಕಲಿಯಬೇಕು	..	೦	೬	೦

ಇದಲ್ಲದೆ ಇಂತಹ ಅನೇಕ ಕತೆ, ಕಾದಂಬರಿಗಳು ಸಿಗುವುವಲ್ಲದೆ ರಾಟೆಗೆ ಬೇಕಾಗುವ ಪ್ರತಿಯೊಂದು ಪುಸ್ತಕಗಳು ಮತ್ತು ಹೊಸವರ್ಷದ ಅನೇಕ ಪಂಚಾಂಗಗಳು ನಮ್ಮಲ್ಲಿ ಸಿಗುವುವು. ಬೇಕಾದರೆ ಬರೆಯಿರಿ.

ವಾಗ್ದೇವಿ ಬುಕ್‌ಡಿಪೋ, ಹುಬ್ಬಳ್ಳಿ

ಚಾರಕ ಹುಡುಗನೊಂದಿಗೆ ನೀಲವ್ವ ಬೀಸುತ್ತಿದ್ದಾಳೆ. ಹಾಡುತ್ತಿರುವ ಅವಳ ಎಳದನಿಗೂ ಅದರೊಡನೆ ಬೆರೆತ ಬೀಸುವ ಕಲ್ಲಿನ ಇಂಪಿಗೂ ಇಡೀ ಮನೆಯೇ ಸೊಂಪಾಗಿ ನಿದ್ರಿಸುವಂತಿದೆ. ಅವಳ ಅಪ್ಪಯ್ಯನಿಗೆ ಮಾತ್ರ ಎಂತೆಂತಹವೋ ಅವ್ಯಕ್ತ ಯೋಚನೆಗಳು. ನೀಲವ್ವನ ವಿಚಾರವನ್ನು ಪ್ರಯತ್ನಪೂರ್ವಕವಾಗಿ ಹೊಡೆದು ಹಾಕುತ್ತಿದ್ದರೂ ಮತ್ತೆಮತ್ತೆ ಅದು ಇಣುಕುತ್ತಿದೆ. ಎದ್ದು ಕುಳಿತರು. ಒಳಗೆ ಹೋಗೋಣ ಎಂದು ಯಾವುದೋ ಶಕ್ತಿ ಬಲವಾಗಿ ಜಗ್ಗುತ್ತಿದೆ. ಹೆದರಿಕೆ ಇನ್ನೊಂದು ಕಡೆ. ಛಿಗ್ಗನೆ ಎದ್ದರು, ಬಾಗಿಲ ಬಳಿ ನಿಂತರು ಒಳಗೆ ಏಕೆ ಹೋಗುವುದು, ಏನೆಂದು ಹೋಗುವುದು?—ಎಂಬ ಪ್ರಶ್ನೆ ಕೆಣಕಿತು. ಅವಳೇನಾದರೂ ತಿಳಿದರೆ? ಈ ಹೊಯ್ದಾಟದಲ್ಲಿರುವಾಗಲೇ ಕೈಬೆರಳುಗಳು ಬಾಗಿಲನ್ನು ತಟ್ಟಿದುವು.

ಜನಸೇನೆಯಲ್ಲಿ ನಿರತಳಾಗಿ ಅಪರಾತ್ರಿಯಲ್ಲಿ ಏಳಬೇಕಾದ ಸಂದರ್ಭ ಅವಳ ಅಪ್ಪಯ್ಯನಿಗೆ ಅರಿದಲ್ಲ ಇಂದೂ ಹಾಗಿರಬೇಕೆಂದು ತಿಳಿದು ಬಾಗಿಲನ್ನು ತೆರೆದರು. ಅವಳ ಅಪ್ಪಯ್ಯನ ದನಿ ಹಿಂಜರಿಯಿತು. 'ನೀರು ಬೇಕು' ಎಂದು ಹೇಳಬೇಕೆಂದರು. ಬಾಯಿಂದ ಉದುರಿದ ನುಡಿ ಹೀಗೆ: "ನೀರು ಬೇಕವ್ವಾ," ನೀಲಳು ಮರುಮಾತಿಲ್ಲದೆ ಅಡುಗೆಯ ಮನೆಕಡೆ ನಡೆದಳು. ಅವರು ಹಿಂಬಾಲಿಸಿದರು. ನೀಲಳು ತಂಬಿಗೆಯನ್ನು ಅವರ ಕೈಯಲ್ಲಿತ್ತಳು. ಅಡುಗೆಯ ಮನೆಯಲ್ಲೇ. ಒಂದು ನಿಮಿಷ ಹಾಗೇ ನಿಂತಿದ್ದರು. ಏನು ಮಾತನಾಡುವುದಕ್ಕೂ ತೋಚದು. ಮತ್ತೇನಾದರೂ ಬೇಕೆ?—ಎಂಬ ಸೂಚನೆಯನ್ನು ಅವಳ ಕಣ್ಣುಗಳು ತೋರಿದುವು. ಅವಳನ್ನು ಬರಿಸೋತುವ ಧೈರ್ಯ ಸಾಲದೆ ಅಯ್ಯನವರು ಹೊರಬಂದರು. ಹೊರಜಗುಲಿಯನ್ನು ತಲುಪುತ್ತಲೂ ಅವಳು ಹೊರಬಾಗಿಲನ್ನು ಮುಂಮೆವಾಡಿದಳು. ಅದರ ಕಿರ್ರೆನ್ನುವ ಸಪ್ಪಳ ಅವರ ಮನೋವೃತ್ತಿಯನ್ನು ಆಣಕಿಸುವಂತಿತ್ತು. ಮನದ ಉಲ್ಬಣ ಮೊದಲಿಗಿಂತಲೂ ಇಮ್ಮಡಿಯಾಯಿತು. ಒಬ್ಬರೇ ಕೂಡುವುದರಿಂದ ಮತ್ತಷ್ಟು ನೋವೆಂದು ಚಾವಡಿಯ ಕಟ್ಟಿಗೆ ನಡೆದರು–ಶ್ರೀಪತಿರಾಯರೊಡನೆ ಹರಟೆಗೆಂದು.

ದಿನಗಳು ಮತ್ತೆ ಉರುಳಿದುವು. ಅವರೊಡನೆ ಈ ಲೋಕದಲ್ಲಿ ಇಲ್ಲದ ಮಗನ ದ್ವಾದ್ದಿನವೂ ಸಮಾಪಿಸಿತು. ಮರುಕಳಿಸಿದ ನೆನಪು ಹೆಚ್ಚೆಚ್ಚಾಗುತ್ತಲಿದೆ. ಈಗ ಬದುಕಿದ್ದವರಲ್ಲಿ ಒಂದನ್ನು ಮುಪ್ಪು ಕರೆಯುತ್ತಿದ್ದರೆ, ಇನ್ನೊಂದು ಎಳತನದ ಹೊಸತಿಲನ್ನು ದಾಟಿದೆ. ಒಬ್ಬರಿಗೊಬ್ಬರು ಅವರವರಿಗೆ ನೋವಾಗಬಾರದೆಂದು ಬೇಕೆಂದೇ ದುಃಖವನ್ನು, ಆದರ ಕಣ್ಣೀರನ್ನು ಹೆತ್ತಿಕ್ಕಿಕೊಳ್ಳುತ್ತಿದ್ದಾರೆ. ಈಚೆಗೆ ಅವರ ಮನಸ್ಸಿನ ಆಸ್ಪಷ್ಟತೆಯನ್ನು ಅವಳು ಗ್ರಹಿಸಿದ್ದಾಳೆ. ಆದರೆ ಸರಿಯಾದ ದಿಕ್ಕಿನಲ್ಲಲ್ಲ. ಅವಕ್ಕೆ ಕಾರಣ 'ಮಗನ ಸಾವು' ಎಂದು ಅವಳ ಸಹಜ ಲೆಕ್ಕ. ಇದರಿಂದಾಗಿ ಅಪ್ಪಯ್ಯನ ಮೇಲಿನ ಅವಳ ವಾತ್ಸಲ್ಯ ಹೆಚ್ಚಾಗಿದೆ.

ಆ ದಿನದ ಕೆಲಸ ಬೇಗೋ ಮುಗಿಯಿತು. ಇಬ್ಬರೂ ದುಃಖಿಗಳೇ; ಆದರೆ ಕಣ್ಣಲ್ಲಿ ನೀರನ್ನು ಕಂಡುದಿಲ್ಲ. ಮುಖಗಳು ಹತ್ತಿರುವ ಕೈದ ನೋವನ್ನು ಸೂಕ್ಷ್ಮದೃಷ್ಟಿಗೆ ಒತ್ತಾಗಿ ತೋರಿಸುವಂತಿವೆ. ಸಂಜೆಯಾಗುತ್ತಲಿದೆ. ಆಗ ಅಯ್ಯನವರು ಪಂಚಾಯತಿಗಾಗಿ ಚಾವಡಿಗೆ ಹೋಗುವುದಾಗಿ ಹೇಳಿ ಹೊರಟಿದ್ದರು. ಹೊತ್ತು ಕಳೆಯಲು ಕೆಲಸವಿಲ್ಲ. ಮಾತಿಗಾಗಿ ಮುಂದಿಯಿಲ್ಲ. ಮಾವ ಹೋಗುವವರೆಗೂ ಹಾಗೇ ನಿಂತಿದ್ದು ನೀಲಳು ಒಳಬಂದಳು. ದಿನವೂ ಪೂಜಿಸುವ ದೇವನ ಪಟದ ಮುಂದೆ ನಿಂತಳು. ಕೈ ಹಿಡಿದಿದ್ದವನ ನೆನಪು ಉಕ್ಕಿಬಂತು. ಅವನೊಡನೆ ಒಂದೇವರ್ಷ ಬಾಳುವೆ ನಡಿಸಿದ್ದರೂ, ಅದು ಅವಳ ಏಳುಬಾಳುಗಳಲ್ಲೂ ಮರೆಯದಂತಹದು. ಇನ್ನೇನನ್ನೋ ನೆನೆದು ಕಣ್ಣೀರು ಉಕ್ಕಿತು. ಗೋಡೆಗೆ ಆತು ಮೌನಳಾಗಿ ರೋದಿಸುತ್ತಿದ್ದಾಳೆ. ಚಿತ್ರದಲ್ಲಿಯ ದೇವರು ಪತ್ನೀಸಮೇತನಾಗಿ ಮೌನಿಯಾಗಿ ಕೇಳುತ್ತಿದ್ದಾನೆ.

ಯಾರೋ ಅವಳ ಭುಜವನ್ನು ಅದುಮಿ ಗದ್ದವನ್ನು ಹಿಡಿದಂತೆನಿಸಿತು. ಕಣ್ಣು ತೆರೆದಾಗ ಮೂರ್ತಿಮಂತವಾಗಿ ಅವಳ ಅಪ್ಪಯ್ಯ!—ಅವಳ ಕಣ್ಣೊಹನಿ ಕಂಡು ಅವರ ಮುಖದಲ್ಲಿ ಸಹಾನುಭೂತಿ ದೈನ್ಯ ತೋರಿದೆ. ಆದರೆ ಆ ಧರ್ಮಜನ ಮನಸ್ಸು ಬೇರೆಯಾಗಿ ಹೇಳುತ್ತಿದೆ. ಇಷ್ಟು ಅವಳ ಸನಿಹಕ್ಕೆ ಎಂದೂ ಬಂದಿರಲಿಲ್ಲ. ಅದೊಂದು ವಿಚಿತ್ರ ಅನುಭವ. ಅದರೂ ಬಾಯಿಂದ ಮಾತು ಹೊರಬಿತ್ತು: "ಅಳಬಾರದವ್ವಾ..ಹೋದವನು ಮರಳುತ್ತಾನೆಯೆ?" ಎಂದರು. ಮುಂದೆ ಏನು ಮಾಡಬೇಕೆಂದಿದ್ದರೋ, ಎರಡೂ ಕೈಗಳಿಂದ ಇನ್ನೂ ಅವಳ ಮುಖವನ್ನು ಹಿಡಿದೇ ಇದ್ದಾರೆ. ನೀಲಳಿಗೆ ಹಾಗೆ ಮಾತನಾಡಿದುದು ತಪ್ಪಾಯಿತು. ಈ ಸಲ ಬಿಕ್ಕಿ ಬಿಕ್ಕಿ ಅಳಲು ಮೊದಲುಮಾಡಿದಳು. ನೀರವತೆಯಲ್ಲಿ ಆ ರೋದನ ಸ್ಪಷ್ಟವಾಗಿತ್ತು; ಎದೆ ಬಿರಿಯುವಂತಿತ್ತು. ಚಿತ್ರದ ದೇವನಿಗೆ ಜೀವ. ವಿದ್ದಿದ್ದರೆ ಅವನೂ ಅಳುತ್ತಿದ್ದನೋ ಏನೋ!

ಅಷ್ಟರಲ್ಲಿ ಹೊರಗೆ ಹೆಜ್ಜೆಯ ಸಪ್ಪಳ! ಚಾವಡಿಯ ಓಲೇಕಾರನ ದನಿ: "ಸಿರಪತಗೌಡರು ಕರೀತಾರಿ ಯಪಾ," ಕೇಳಿ ಛಟ್ಟನೆ ಕೈಬಿಟ್ಟರು. ವ್ಯಸ್ತಚಿತ್ತರಾಗಿ ಅಯ್ಯನವರು ಹೋಗುತ್ತ ಯಾರಿಗೆ ಹೇಳಿದರೋ ಈ ಮಾತನ್ನು—"ಬಡಿಗೆಯನ್ನು ಮರೆತು ಹೋಗಿದ್ದೆ, ಒಯ್ಯಲು ಅರ್ಧದಾರಿಗೇ ತಿರುಗಿ ಬರಬೇಕಾತು!" ಎಂದರು. ಓಲೇಕಾರನ ಸಂಗಡ ಹೊರಟರು.

ಇದಾಗಿ ಎರಡನೆಯ ಸಂಜೆಯೇ ಧೋಧೋ ಎಂದು ಹಿಂಗಾರಿ ಮಳೆ ಸುರಿದ ದಿನ. ದಿನವೂ ಸಂಜೆಗೆ ನೀಲಳು ಆಳುಮಗನೊಂದಿಗೆ ನದಿಗೆ ನೀರುತರಲು ಹೋಗುತ್ತಿದ್ದಳು. ಆ ಸಂಜೆ ಆಳು ಇರಲಿಲ್ಲ. ನೀಲಳು ಒಬ್ಬಳೇ ಕೊಡಹೊತ್ತು ನಿಂತಳು. ತಿಮ್ಮಯ್ಯನವರು ನೋಡಿದರು. ಇನ್ನು ಎರಡು ಸಲ ದೂರದ ನದಿಯಿಂದ ಅವಳೊಬ್ಬಳೇ ನೀರನ್ನು ತರಬೇಕಾಗುತ್ತದೆನ್ನುವ ವಾತ್ಸಲ್ಯಸಂಕಟಕ್ಕೆ ಬಿದ್ದು, ಅವಳ ಅಪ್ಪಯ್ಯನೂ ಒಂದುಕೊಡ ತೆಗೆದುಕೊಂಡು ಬಂದರು. ನೋಡಹಾಕಿತ್ತಾದ್ದರಿಂದ ನೀಲಳು ಬೇಡವೆನ್ನಲಿಲ್ಲ.

ಮಾವ ಸೊಸೆ ಹೊರಟರು. ದಾರಿಯಲ್ಲಿ ನೀರುತುಂಬಿಕೊಂಡು

ಮನೆಗೆ ಹೋಗುತ್ತಿದ್ದವರು ಹೆಜ್ಜೆಹೆಜ್ಜೆಗೆ ಮಾವನನ್ನಾಗಲಿ, ಸೊಸೆಯನ್ನಾಗಲಿ ಮಾತನಾಡಿಸುತ್ತಿದ್ದರು. ಯಾವ ವಿಷಯವೂ ಇಲ್ಲದೆ ಹೋದಾಗ " ಹೊಳೀಗೆ ಹೊಂಟಿರಾ? " ಎಂದು ಕೇಳುತ್ತಿದ್ದರು. ಒಬ್ಬಿಬ್ಬರು " ಕತ್ತಲಾತಲ್ರೀ ಯಪ್ಪಾ, ತಡಾಮಾಡಿ ಹೊಂಟೀರಿ ಹೊಳಗೆ! " ಎಂದರು. ಸಹಜವಾಗಿ ಆಡಿದ ಮಾತು ಅದು. ಅಯ್ಯನವರ ಸಂಶಯಿತ ಮನಸ್ಸಿನಲ್ಲಿ ತರಂಗಗಳನ್ನೆಬ್ಬಿಸಿತು: " ಹೌದು, ಕತ್ತಲಾಗುತ್ತಿರುವಾಗ ಕರೆದುಕೊಂಡು ಹೊರಟಿದ್ದೇನೆ....ಇಲ್ಲ, ಅವಳಾಗಿ ನೀರಿಗೆ ಬಾ ಎಂದಿಲ್ಲ. ನಾನಾಗಿ ಜೊತೆಗೆ ಬಂದಿದ್ದೇನೆ.....ನನ್ನ ಕಲುಷಿತ ಆಚರಣೆ ಊಹಿಸಿದಳೇ?" ಎಂದುಕೊಂಡರು. ಆದರೆ ಜೊತೆಯಾಗಿ ಸಾಗಿದ್ದ ಅವಳು ನಡುವೆ ಮಗುವಿನ ಸೊಲ್ಲಿನಂತೆ ಮುದ್ದಾಗಿ ಮಾತನಾಡುತ್ತ ಹೊರಟಿದ್ದುದು ಅವರ ಸಂಶಯ ನಿವಾರಿಸಿತು.

ನದಿಯ ದಡದಲ್ಲಿ ನೀಲವ್ವ " ಅಪ್ಪಯ್ಯ, ಮುಗಿಲು ಗುಡುಗುತ್ತಾ ಇದೆ. ಮಳೆಯಲ್ಲಿ ಸಿಕ್ಕೇವು, ಬೇಗ ಹೊರಡುವ " ಎಂದಳು. ಬೇಗ ಹೊರಡುವ ಮಾತು ಬಂದಾಗ ಅವೇ ವಿರುದ್ಧಾರ್ಥವೆ ಅವರ ಮನಸ್ಸಿನಲ್ಲಿ. ಅರ್ಥವಿಲ್ಲದೆ ಹೃದಯ ಕಟೆಯುತ್ತಿತ್ತು. ಮುಳುಗಿದ ಸೂರ್ಯನಿಗೆ ನೀರುಬಿಟ್ಟು ಕೈಮುಗಿಮ ಹೊರಟರು.

ಅರ್ಘದಾರಿ ಸವೆದಿತ್ತಷ್ಟೆ. ಕತ್ತಲು ಕವಿಯಿತು. ಮೋಡಗಳ ಅರ್ಭಟೆ ಹೊಯ್ಯುತ್ತಿದೆ. ಫಳಕ್ಕನೆ ಸೆಳೆಮಿಂಚು ! ಸುಯ್ ಸುಯ್ ಎಂದು ಬೀಸುವ ಗಾಳಿಯ ವೇಗಕ್ಕೆ ಹೆಮ್ಮರಗಳ ಟೊಂಗೆಗಳು ಒಂದಕ್ಕೊಂದು ಹೊಯ್ದಾಡುತ್ತವೆ. ನಿಸರ್ಗದ ಕೋಪಕ್ಕೆ ಅಸಹಾಯವಾಗಿ ತಲೆಗೊಟ್ಟು ನಿಂತಂತೆ, ದೂರದ ಊರು ಹೊತ್ತು ಹೊತ್ತಿನ ಸೆಳೆಮಿಂಚುಗಳಿಂದ ಕಾಣುತ್ತಿತ್ತು. ಬಿಚ್ಚು ಗಣ್ಣಿನಿಂದ ನೋಲೆ ಸುತ್ತಲು ಒಮ್ಮೆ ನೋದಿದರೆ ಸಾಕು. ಕೋಮಲ ಪ್ರಕೃತಿ ಯುವರು ಹೆದರಿ ತತ್ತರಿಸುವಂತಿದೆ.

ಸಿಡಿಲುಗಳು ದೂರವಲ್ಲಿ ಸಿಡಿಯುತ್ತಿರುವಂತೆಯೇ ಭಾಸವಾಗಿ, ನೀಲವ್ವನ ಎದೆಗುಂಡಿಗೆಯನ್ನು ಅದು ಬೆಚ್ಚಿ ಬೀಳಿಸಿತು. ಗಿಡದ ಅಡಿಯಲ್ಲಿ ಇಬ್ಬರೂ ನಿಂತಿದ್ದಾರೆ. ನೀಲವ್ವನಿಗೆ ' ಮನೆ ಹೇಗೆ ಕಂಡೇನೋ ' ಎಂದು ಕಳವಳ. ಮರುಕ್ಷಣವಲ್ಲಿ ಇನ್ನೊಂದು ಬರ ಸಿಡಿಲೊಂದರ ಸಪ್ಪಳು–ಅದೂ ೀರ ಪತ್ತಿರವಲ್ಲೇ–ನೀಲವ್ವನ ಕವಿಯನ್ನು ಭೇದಿಸಿತು, ಕಣ್ಣು ಕತ್ತಲುಗೂಡಿಸಿದುವ್ವ. ತಲೆಯ ಮೇಲಿನ ಕೊಡಬಾಗಿ, ಅವಳ ದೇಹದ ಬಹುಭಾಗವನ್ನು ತೋಯಿಸಿ ನೆಲಕ್ಕುರುಳಿತು. ಆದರೊಡನೆಯೆ ಅವಳ ಹೃದಯ ಎಚ್ಚರ ದಪ್ಪಿತು. ಪ್ರಜ್ಞೆಯಿಲ್ಲದೆ ಕಣ್ಣು ಮುಚ್ಚಿ, ಜೋಲಿ ಹೋಗುತ್ತ ಬೀಳುವುದನ್ನು ಕಂಡು ಅವಳ ಅಪ್ಪಯ್ಯ ಸಾವರಿಸಿ ಹಿಡಿದರು.

ಅವಳ ಮೈಮೇಲೆ ಎಚ್ಚರವಿಲ್ಲ. ಅವಳ ಅಪ್ಪಯ್ಯ ಎರಡೂ ಕೈಗಳನ್ನು ಅವಳ ದೇಹಕ್ಕೆ ಸುತ್ತಿ ಸಾವರಿಸಿ ಹಿಡಿದಿದ್ದಾರೆ. ಕೊಯ್ದು ತಪ್ಪದಿಯಾದ ಆರಿವೆಗಳಲ್ಲಿ ಮಿನುಗುವ ಅವಳ ಅಂಗಸೌಷ್ಠವವನ್ನು ನೋಡಿದರು. ' ಸೆಳೆಮಿಂಚು ಇನ್ನೊಮ್ಮೆ ಬರಲಿ ' ಎಂದು ಅಶಿಸಿದರು. ದೇಹವಾದ್ಯಂತ ಅವರಿಗೆ ಉದ್ರೇಕವಾಯಿತು. ರಕ್ತ ಕುದಿಯಾಗಿ ರೋಮ-ರೋಮಗಳಲ್ಲಿ ಸಂಚರಿಸಿತು. ಎರಡು ದಿನಗಳ ಹಿಂದೆ ಆದ ಅನುಭವವೇ ಇಂದೂ ಹಾಗೆ ಹಿಡಿದುಕೊಂಡಿರುವಲ್ಲಿ ವಿಚಿತ್ರರೀತಿಯ ಸುಖ; ಆದರೆ ಯಾವುದೋ ಒಂದು ಬಗೆಯ ಅತೃಪ್ತಿಯೂ ಇದೆ. ಹೃದಯದ ಇನ್ನೊಂದು ಅಂಶ, ಅವರ ಈ ಆಶೆಯನ್ನು ಬಲವಾಗಿ ಹಿಂಡಿತು. " ಆಯ್ಯೋ, ಏನು ಮಾಡಲಿ? ಇಂತಹ ಅವಳ ಆಪತ್ತಿನಲ್ಲೂ ಈ ಪ್ರಬಲವಾಸನೆ ನನ್ನನ್ನು ಸುಡುತ್ತಿದೆಯಲ್ಲ. ಎಷ್ಟು ಪರಮ ನೀಚ ನಾನು ? " ಎಂದು ತತ್ತರಿಸಿದರು. ಅವಳ ಎದೆಯ ಮೇಲೆಯೇ ಇತ್ತು ಅವರ ಒಂದು ತೋಳು. ಬಲವಂತದಿಂದ ಅದನ್ನು ಕಿತ್ತು ಹೊಟ್ಟೆಯ ಮೇಲೆ ಜರಿಸಿದರು.

ಇದೆಲ್ಲ ನಡೆದುದು ಮೂರೇ ಮಿನಿಟಿನಲ್ಲಿ. ಅವರ ಹೃದಯದ ಸ್ಪಂದನಕ್ಕೆ ಎಚ್ಚರಿಕೆಯಾದವಳಂತೆ, ನೀಲವ್ವ ಕಣ್ಣು ತೆರೆದಳು. ಅವಳ ಅಪ್ಪಯ್ಯ ಅಪ್ಪುಗೆಯನ್ನು ಸಡಿಲಿಸಿ, ಕೈಹಿಡಿದು ನಿಲ್ಲಿಸಿದರು. ಅವಳು ತನ್ನ ಅರಿವಿಗಳನ್ನು ಸಾವರಿಸಿಕೊಂಡಳು. ಇನ್ನು ಯಾರೋ ದಾರಿಯಲ್ಲಿ ಬರುತ್ತಿದ್ದರು ನೀರನ್ನು ತುಂಬಿಕೊಂಡು. ಅವಳ ಮೂರ್ಛೆಯನ್ನು ಒಂದೆರಡು ಮಾತಿನಲ್ಲಿ ತಿಳಿಸಿ, ಅವಳ ಹೆಗಲನ್ನು ಹಿಡಿದುಕೊಂಡೇ ಮನೆಗೆ ಬಂದರು. ಜೊತೆಯವನು ಅಯ್ಯನವರ ಕೊಡವನ್ನು ಹೊತ್ತು ತಂದನು.

ತಿಮ್ಮಯ್ಯನವರ ಹೃದಯವಿಪ್ಲವದ ಕೊನೆಯಂಕ ಇದರಿಂದಾಗಿ ತುತ್ತತುದಿಗೇರಿತು. " ಇದು ಹೀಗೆಯೇ ಮುಂದು-

ಕಳೆದ ಹನ್ನೆರಡು ವರ್ಷಗಳಿಂದ ಇನ್ನಷ್ಟು ಮೇಲೆ ಮೂಡುತ್ತಿರುವ
ದಕ್ಷಿಣ ಕನ್ನಡ ಜಿಲ್ಲೆಯ ಏಂದೆ ಏಂದಾದ
ಸಾಹಿತ್ಯಿಕ—ಸಾಂಸ್ಕೃತಿಕ—ಸಹಕಾರಿ ಎಂದು ಹೆಸರಾದ

ಕನ್ನಡ ಮಾಸಪತ್ರಿಕೆ

ವಾ. ಚಂ. ಅಂ. ವೆ.
ಸೇರಿ ೨-೪-೦ | ಧುರೀಣ | ಬಿಡಿಸಂಚಿಕೆಗೆ ೦-೩-೦

ಸಂಪಾದಕರು

ಶ್ರೀ ಆರ್ ಎಸ್. ಶೆಟ್ಟಿ ....
ಶ್ರೀ. ಬನ್ನಂಜೆ ರಾಮಾಚಾರ್ಯ

ಕನ್ನಡನಾಡಿನ ಸಮರ್ಥ ಬರೆಜಗಾರರ ಕತೆ, ಕವನ, ಲೇಖನಗಳಿಂದ ತುಂಬಿದ ಸಂಚಿಕೆಗಳು. ಜಾಹೀರಾತು ಕೊಡಬೇಕೆನ್ನುವವರಿಗೆ ಅತ್ಯುತ್ತಮ ಸಾಧನ.

ಮ್ಯಾನೇಜರ್ :—
ಧುರೀಣ ಉಡುಪಿ (ದ. ಕ. ಜಿಲ್ಲಾ)

ವರಿದರೆ ನಾನು ಅಧರ್ಮಕ್ಕೆ ಹೋಗುವೆ; ಈಗ ನನ್ನ ಕೈಮೀರಿದ ಮಾತಾಗಿದೆ. ಈ ಕಾಮವಾಸನೆ ನನ್ನನ್ನು ಹತ್ತಿಕ್ಕಿ ಆಳುತ್ತಿದೆ. ಇದುವರೆಗಿನ ನನ್ನ ಸಜ್ಜನಿಕೆಯ ಲಕ್ಷಣ ಇದರಂಬೆಲ್ಲ ತೊಳೆದು ಹೋಗುವಂತಾಯಿತೆ? ಯಾರಿಗಾದರೂ ಈ ವಿಷಯ ತಿಳಿದಿದ್ದರೆ ನನ್ನ ಗತಿಯೇನು? ಆಳುಮಗನಿಗಾಗಲಿ, ಆ ಓಲೇಕಾರನಿಗಾಗಲಿ ಸಂಶಯ ಬಂದಿದ್ದರೆ.. ಹೋಗಲಿ, ಅವರಿಗೆ ಗೊತ್ತಾಗಿಲ್ಲವೆಂದೇ ತಿಳಿಯುವ; ಆದರೆ ಸರ್ವಸಾಕ್ಷಿಯಾದ ಆ ಈಶ್ವರನಿಗೆ ತಿಳಿಯದೆ ಹೋದೀತೇ. ಅದು ಇರಲಿ, ನನ್ನ ಸತ್ತ ಮಗ! ಅವನಿಗೆ ಎಂತಹ ಅನ್ಯಾಯವಮಾಡುತ್ತಿದ್ದೇನೆ; ಅವನಿಗಿದು ತಿಳಿಯಬಂದರೆ? ಅಂತಹ ಮುತ್ತಿನಂತಹ ನನ್ನ ಮಗುವಿನ ಆತ್ಮ ನೆಮ್ಮದಿಯಲ್ಲಿರಬಹುದೇ? ಇದೇ ಏನು ನಾನು ಮೊನ್ನೆ ಬಿಟ್ಟ 'ಅಂಜಲಿ'? ನನ್ನ ಪಾಲಿಗೆ ನರಕವೆ ಗತಿಯಲ್ಲದೆ ಇನ್ನೇನು?"

ಗಂಟೆಯ ನಿನಾದದಂತೆ ಅವರ ಮನಸ್ಸನ್ನು ಭೇದಿಸಿತು. "ಪ್ರಾಯಶ್ಚಿತ್ತ! ಇದಕ್ಕೆ ತಕ್ಕ ದಂಡನೆ ನನಗಾಗಬೇಕು. ನನ್ನನ್ನೇ ಯಾವ ರೀತಿಯಿಂದ ದಂಡಿಸಿಕೊಳ್ಳಲಿ? ದೇವರಿದ್ದಾನೆ, ನೋಡಿಕೊಳ್ಳಲಿ! ಅದಕ್ಕೆ ನಾನು ಸಿದ್ಧ. ಆದರೆ ಇದೇರೀತಿ ಮುಂದೆ ನಡೆಯದಂತೆ ಏನು ಮಾಡಲಿ? ದೇಶಾಂತರಕ್ಕೆ ಹೋಗಲೇ? ಅಲ್ಲಿಯೂ ಇದೇ ಗೋಳು ಬಂದರೆ? ಅಥವಾ ಈಗಾದುದಕ್ಕೆ ಹೊಣೆಯಾರು? ನಾನೇ ಅಲ್ಲವೆ? ಈ ದೇಹ ಅವಳ ಸ್ಪರ್ಶದಿಂದ ಕಲಂಕಿತವಾಗಿದೆ. ಇದಕ್ಕೆ ದಂಡನೆಯಾಗಬೇಕು! ಏನು.. ಸಾವು! ಆತ್ಮಹತ್ಯೆ! .... ಸಾವೆ? ಹೌದು ಸಾವು! ಏಕಾಗಬಾರದು? ಇಲ್ಲಿ ನನ್ನ ಕೆಲಸವಾದರೂ ಏನಿದೆ? ಆಯುಸ್ಸು ಅರ್ಧದಷ್ಟಕಳೆಯಬಂತು..... ಸತ್ತು ಹೋದರೆ ಎಷ್ಟು ಹಿತ! ಮುಂದೆ ಯಾವಾಗ ನನ್ನನ್ನು ಹಾಸುಗೆಯಲ್ಲಿ ಕೊಳೆಯಿಸಲಿದೆಯೊ? ನಾನು ಹೋದ ಕೆಲಕಾಲದ ಮೇಲೆ ಅವಳು ಮರುಮದುವೆಯನ್ನಾದರೂ ಮಾಡಿಕೊಂಡಾಳು.... ನಾನು ಸತ್ತರೆ, ನಿಶ್ಚಯವಾಗಿ ನಾನು ಮಾಡಬಹುದಾದ ಕೊಲೆಗಳಸಾಧ್ಯವಾಗುವುದಲ್ಲವೆ? ಆದರಿಂದ ಆದಷ್ಟು ಜೀವನಕ್ಕೆ ನೆಮ್ಮದಿ; ಸತ್ತ ಮೇಲೆ ಮಗನಿಗೆ ನೆಮ್ಮದಿ, ನನ್ನಿಬ್ಬರಿಗೂ ಈ ಪೀಡೆಯಿಂದ ಉಳಿಯಿತು. ಸಾವು ಎಂದು? ಏಪ್ರಿಲ್ ೨೯ರ ಮೇಲೆ ತಡವೇಕೆ? ನಾಳೆಯೆ? ನಾಳೆ ಬೇಡ! ನಾಡದು—ಅಲ್ಲ.. ರವಿವಾರ!"

ಇದ್ದಕ್ಕಿದ್ದಂತೆ ಸೊಸೆಯ ಚಿಕ್ಕ ಸುಳಿದು ಅವರ ಜೀವ ಹಿಂಡಿತು. "ಅವಳಿಗಾಗಿ ನಾನು ಏನೂ ಒಳ್ಳೆಯದನ್ನು ಮಾಡಲಿಲ್ಲ. ಅವಳ ವಯಸ್ಸಿನ ಇತರ ಹೆಂಗಳೆಯರು ಬಾಳನಲ್ಲಿ ಎಷ್ಟು ಸುಖದಿಂದಿದ್ದಾರೆ. ಅವಳಿಗೆ ಗಂಡನ ಸುಖವಿಲ್ಲ, ಮಕ್ಕಳ ಸುಖವೆ? ಏನಿದೆ? ಇಷ್ಟಾದರೂ ಎಷ್ಟೊಂದು ಸಾತ್ವಿಕ ಮತ್ತು ಸಾತ್ಸಲ್ಯವೃತ್ತಿ ಅವಳದು. ಎಂತಹ ಶಾಂತಪ್ರವೃತ್ತಿ! ನನ್ನನ್ನು ತಂದೆಗಿಂತ ಹೆಚ್ಚಾಗಿ ಕಾಣುತ್ತಿದ್ದಳೆ. ಅಂತಹಳಿಗೆ ಎಂತಹ ಕೇಡು—ಆಘಾತ ಮಾಡುತ್ತಿದ್ದೆನಲ್ಲ!

ಇನ್ನೊಂದು ಮಾತನ್ನು ನೆನೆದು ಅವರ ಹೃದಯ ಆರ್ದ್ರವಾಯಿತು. "ನಾನೂ ಮಡಿದ ಮೇಲೆ ಅವಳೆಷ್ಟು ಸಂಕಟಪಡುತ್ತಾಳೊ ಅವಳಿಗಾರು ಗತಿ? ಹಾಳು ತವರ್ಮನೆ; ಒಂದು ದಿನವೂ ಅವಳು ಹೋಗುವುದಕ್ಕೆ ಇಷ್ಟಪಡಲಿಲ್ಲ. ಮಲತಾಯಿಯ ಮೂಲಕ. .. ನಮ್ಮಿಬ್ಬರ ಸಾವಿನಿಂದ ಎಷ್ಟುದಿನ ತಾನೆ ದುಃಖಪಟ್ಟಾಳು! ಬೆಳೆಯುವ ಕುಸುಮ, ಯಾರೊಡನಾದರೂ ಪುನರ್ವಿವಾಹಿಕೆಯಾದಮೇಲೆ ತಾನೇ ಸರಿಹೋಗುವುದು. ಅಥವಾ ಎಂದಿದ್ದರೂ ಈ ಜೀವ ಬಿದ್ದು ಹೋಗುವುದೇ ಅಲ್ಲವೆ?"

ಮರುದಿನ ಸಂಜೆ ನದಿಯ ದಂಡೆಗೆ ತಿರುಗಾಡಲೆಂದು ಹೊರಟರು. 'ತುಂಗಭದ್ರೆಯ ಮಡಿಲಲ್ಲಿ ಬಿದ್ದು ಸಾಯುವುದು ಎಷ್ಟು ಪುಣ್ಯದ ಕೆಲಸ?' ಎಂದು ತೋಚಿತು; 'ಆದರೆ ಆತ್ಮಹತ್ಯೆ ಪಾಪವಲ್ಲವೇ? ನಿಜ. ಜೀವಂತವಿದ್ದು ಮಾಡಿದ, ಮುಂದೆ ಮಾಡುವ ಪಾಪಕ್ಕಿಂತ ಇದು ಬೇಕು!' ಎಂದುಕೊಂಡರು. ಮನಸ್ಸು ಮತ್ತೊಮ್ಮೆ ಕೆಣಕಿತು. "ಯಾಕೆ ಸಾಯಬೇಕು? ಈ ಕಾಮದ ಶಕ್ತಿ ನನ್ನಂತಹ ಸಂಯಮಿಗೂ ದುರ್ದಮ್ಯವೆ? ಜೀವಂತವಾಗಿದ್ದು ಜನಸೇವೆ ಮಾಡಬಹುದಲ್ಲವೆ? ನನ್ನಿಂದ ಜನಕ್ಕೂ ಉಪಯೋಗ."

ಮರುಕ್ಷಣವೇ ಅದನ್ನು ಬದಲಿಸಿದರು. "ಛೆ, ಇಲ್ಲ, ಬದುಕುವ ಸುಖಕ್ಕೆ ಸುಮ್ಮನೆ ಎಳೆದೊಯ್ಯುತ್ತಿದೆ. ಈಗಾದ ನಿರ್ಧಾರ ಬದಲಿಸುವುದು ಶಕ್ಯವಿಲ್ಲ. ಊರ ಉಪಕಾರ ಮಾಡುವೆನೆಂಬ ಈ ಗರ್ವವೇಕೆ ನನಗೆ? ನಾನೊಬ್ಬನೇ ಏನು ಹಿತಚಿಂತಕ?"

ಹೋಗು-ಹೋಗುತ್ತ ಒಂದು ಕಲ್ಲನ್ನು ಎಡವಿದರು. ಆ ಕಲ್ಲನ್ನು ನೋಡಿ ಒಂದು ಅನುಕೂಲ ವಿಚಾರ ಸುಳಿಯಿತು. "ಈ ಸಲಿಕ್ಕೆ ಬೇರೆ ಬರುತ್ತದೆ. ಹಾರಿದ ಮೇಲೆ ಮತ್ತೆ ಬದುಕುವ ಆಸೆ ಹುಟ್ಟಿದರೆ? ಆಯ್ತು, ಈ ಕಲ್ಲನ್ನು ಕಟ್ಟಿಕೊಂಡು ಇಲ್ಲಿಂದಲೇ ಹಾರುವ" ಎಂದುಕೊಂಡರು. ನಿರ್ವಿಕಾರ ನಗೆಯೊಂದು ಸುಳಿಯಿತು.

ಮರುದಿನ ಊರಲ್ಲೆಲ್ಲ ಸುತ್ತಾಡಿದರು; ಎಲ್ಲರನ್ನೂ ಕಂಡು ಮಾತನಾಡಿಸಿದರು. ಅದು ಕೊನೆಯ ಮಾತು, ಕೊನೆಯ ದರ್ಶನ—ಎಂದು ಆ ದಿನಕ್ಕೆ ಯಾರಿಗೂ ತಿಳಿಯಲಿಲ್ಲ.

ತಿಮ್ಮಯ್ಯನವರ ಮರಣ ಜನಕ್ಕೆ ಇನ್ನೂ ಒಂದು ಸಮಸ್ಯೆ. ಮಗಳಿಗೆ ಸಮಾನಳಾದ ಸೊಸೆಯ ಮೇಲೆ ಕುರುಡುಕಾಮ ಎಲ್ಲ ದೃಷ್ಟಿ ಬೀರಿತು—ಎಂಬ ಮಾತನ್ನು ಹಾವನೂರ ಜನರು ಸುಲಭವಾಗಿ ನಂಬಲಾರರು. ಅಂತು ಅವರ ಮರಣ ಸಕಾರಣವಾಗಿದ್ದರೂ ಅದು ಅಕಾರಣವೆ ಆಗಿ ಪರಿಣಮಿಸಿದೆ.

ಸೊಲ್ಲಾಪುರದಲ್ಲಿ ನಮ್ಮ ಏಜಂಟರು
ವ್ಹಿ. ಎಲ್. ಬಿರೋಜದಾರ
ಕದಾಹಿಂಚಾಳಿ, ಸ್ಟೇಶನ್‌ರೋಡ್, ಸೊಲ್ಲಾಪುರ

ಗದುಗಿನಲ್ಲಿ ನಮ್ಮ ಏಜಂಟರು:
ಶ್ರೀ. ಶಾಮಜಿ ಜೀವೂಭಾಯಿ
ನ್ಯೂಜ್ ಏಜಂಟ್ಸ್

ಧರ್ಮ ರಕ್ಷಣೆ

(ಕಥಾ ಕತೆ)*

ಶ್ರೀ. ಯಸ್. ಶ್ರೀಕೃಷ್ಣ,
ಸೈಂಟ್ ಎಲ್ಯೋಶಿಯಸ್ ಕಾಲೇಜ್ ಮಂಗಳೂರು ಡ. ಕನ್ನಡ

★

ಮತಾಭಿಮಾನದ ಅವಿವೇಕಕ್ಕಿಂತ ಮಾನವತೆಯ ಅಭಿಮಾನದ ವಿವೇಕ, ಸುಖಮಯ ಜೀವನಕ್ಕೆ ಎಷ್ಟೊಂದು ಆವಶ್ಯಕವಿದೆಯೆಂಬುದನ್ನು ಮಾಯಿ ತನ್ನ ಕೃತಿಯಿಂದ ತೋರಿಸಿಕೊಟ್ಟ; ಹಳ್ಳಿಗರ ಬಾಳನ್ನೇ ಸುಖದ ಹೊನಲಲ್ಲಿ ತೇಲಿಸಿದ.

★

ಒಕ್ಕ ಹಳ್ಳಿಯದು. ಒಟ್ಟು ಐವತ್ತು ಮನೆಗಳಿರಬಹುದು ಇಡೀ ಊರಲ್ಲಿ. ಆರೆವಾಸಿ ಜನ ಹಿಂದೂಗಳು; ಉಳಿದವರೆಲ್ಲಾ ಮಹಮ್ಮದೀಯರು. ಆದರೆ, ಅಲ್ಲಿಯ ಜನರ ನಡೆ-ನುಡಿಗಳನ್ನು ನೋಡಿದ ಯಾವನಿಗೂ ಎರಡು ಮತಗಳು ಅಲ್ಲಿ ಇವೆಯೆಂದು ತೋರದು. ಎಲ್ಲರೂ ರೈತರೇ; ಬಿತ್ತು-ಕೊಯ್ಲುಗಳ ಕಾಲದಲ್ಲಿ ಒಂದೇ ಮನೆಯವರಂತೆ ಬೆರೆಯುತ್ತಿದ್ದರು. ಗೈದರೇ ಕೂಳು, ಎಂದಮೇಲೆ ಆರ್ಥಿಕ ದ್ವೇಷಾಸೂಯೆಗಳಿಗೆಂತೂ ಎಡೆಯಿಲ್ಲ. ಒಂದು ಸುಖಾಂತ ನಾಟಕ ಅವರ ಜೀವನವೆಂದರೆ. ಪ್ರಕೃತಿಯೂ ಅಂತೆಯೇ; ತನ್ನ ಸಂಪೂರ್ಣ ಒಲುಮೆಯನ್ನು ಮಳೆಗರೆದಂತಿತ್ತು: ನುತ್ತಲೂ ಪುಟ್ಟ ಗುಡ್ಡಗಳು; ನಡುವೆ ಬಟ್ಟಲಂತಿದ್ದ ಬಯಲು. ನಿಜವಾಗಿಯೂ ಆ ಬಯಲು ಅಲ್ಲಿನ ಜನರ ಬಟ್ಟಲೇ. ಆದರಲ್ಲಿ ಬೆಳೆದ ಬೆಳಸೇ ಅವರ ವರ್ಷಾವಧಿಯ ಜೀವನಾಧಾರ. ಬಯಲ ಮಧ್ಯದಲ್ಲೊಂದು ಚಿಕ್ಕ ತೊರೆ ಹರಿದು ಹೋಗುತ್ತಿತ್ತು. ಅದರ ಮೂಡಣ ತಡಿಯಲ್ಲೊಂದು ಚಿಕ್ಕ ಶ್ರೀಕೃಷ್ಣನ ದೇವಾಲಯ—ಊರಿನ ಇಡೀ ಹಿಂದೂಜನರ ದೇವತೆಯ ಆವಾರ. ಪಡುದಂಡೆಯಲ್ಲಿ ಚಿಕ್ಕದೊಂದು ಮಸೀದೆ. ಅದೇ ಅಲ್ಲಿಯ ಮಹಮ್ಮದೀಯರ ಮಕ್ಕಾ. ದೇಗುಲದ ಪೂಜಾರಿ, ಮಸೀದೆಯ ಕಾಜಿ, ಇಬ್ಬರೂ ಮುಂಜಾನೆ-ಸಂಜೆಗಳಲ್ಲಿ ಮಾಯುವ ಕಡವೇ ಈ ಮೂಡು-ಪಡುತಡಿಗಳ ಸಂಗಮ. ಕಾಜಿಯ ಮನೆಯ ಕೋಳಿ ಮುಂಜಾನೆ ಪ್ರಾಚಾರಿಯನ್ನೆಬ್ಬಿಸ ಬೇಕು; ಪೂಜಾರಿಯ ಗಂಟೆಯ ಸದ್ದು ಕಾಜಿಗೆ ಸಮಯದ ಹೊಲಬನ್ನರಿಯಿಸಬೇಕು. ಇಂತಿತ್ತು ಅವರ ಮೈತ್ರಿ; ಹೀಗಿತ್ತು ಆ ಊರಿನ ಸ್ಥಿತಿ.

ಸೂಫಿ ಮಹಮ್ಮದೀಯರ ಕಾಜಿ. ಸುಮಾರು ಹದಿನೆಂಟು ವರ್ಷ ಪ್ರಾಯದ ಮಾಯು ಅತನ ಮಗ. ಚಿಕ್ಕಂದಿನಿಂದಲೂ ಅವನು, ಪೂಜಾರಿ ಗೋಪಣ್ಣನ ಮನೆಯಲ್ಲಿ ಓಡಾಡಿ ಬೆಳೆದವ. ದಿನ ಬೆಳಗಾಗುವುದೇ ತಡ; ಮಾಯಿ ಹಳ್ಳ ದಾಟಿಯಾಯಿತು. ಅತನ ತಂಗೆಯಂತಿದ್ದವಳು ತೀಲೆ—ಗೋಪಣ್ಣನ ಒಬ್ಬಳೇ ಒಬ್ಬ ಮಗಳು. ಇವಳ ಕರೆ, ಮಾಯಿಯನ್ನು ಬೆಳಗಾಗಲೂ ಹೊಳೆ ದಾಟಿಸುತಿದ್ದುದು. ದೇಗುಲದ ಬಳಿಯ ಸಂಪಗೆಯ ಮರ ಹೂ ಬಿಟ್ಟರೆ ಕೊಯಿದು ಕೊಡಲು, ಪೇರಳೆಯ ಮರದಿಂದ ಹಣ್ಣನ್ನು ಉದುರಿಸಲು, ಹಳ್ಳದಲ್ಲಿ ತೇಲಿಸಲು ದೋಣಿ ಮಾಡಿಕೊಡಲು—ಬೇಕಾದವನು ಮಾಯಿ. ಅತನು ಏನಾದರೊಂದು ಕತೆ ಕಟ್ಟಿ ಕುಣಿಸದ ವಿನಾ ತೀಲೆಯ ದಿನ ಕೊನೆಗಾಣದು. ಎಳೆಯತನದಲ್ಲಿ ಅವರಾಡದ ಆಟವಿಲ್ಲ. ಬಹುಶಃ ಒಂದೇ ಬಟ್ಟಲಲ್ಲಿ ಉಂಡಿರಲಿಕ್ಕಿಲ್ಲ—ಹುಚ್ಚು ನಂಬುಗೆಯ ಪರದೆಯ ತಡೆಯಿಂದಾಗಿ; ಆದರೆ, ಇದು ಅವರೊಳಗಿನ ಸೌಹಾರ್ದಕ್ಕೆ ಯಾವ ಕುಂದನ್ನೂ ತಂದಿರಲಿಲ್ಲ.

* * *

ಮಾಯಿಯ ಆನಂದಕ್ಕೀಗ ಮಿತಿಯಿಲ್ಲ. ಸಂಪಗೆಯ ರಾತ್ರಿಯನ್ನೇ ತಂದು ಸುರುವಿದ್ದಾನೆ ಅಂಗಳದಲ್ಲಿ. ಎಳನೀರು ಕೊಯ್ಯಲು, ಸಿಂಗಾರ ತರಲು ಮಾಯಿಯೇ ಮುಂದು. ನೆರೆಮನೆಯಿಂದ ಏನಾದರೂ ಸಾಮಾನನ್ನು ತರಬೇಕೆಂದು ಯಾರಾದರೂ ನೆನೆದರೆ ಸಾಕು; ಮಾಯಿ ಅದನ್ನು ತಂದಾಯಿತು. ಇಷ್ಟೆಲ್ಲಾ ಸಂಭ್ರಮ ಏಕೆ?..ಏಕೆ? ತನ್ನ ತಂಗಿಗಿಂತಲೂ ಅಧಿಕ ಒಲವಿನ ತೀಲೆ, ನಾಡಿದ್ದು ಗಂಡನೊಡನೆ ಹೋಗುತ್ತಾಳೆ. ಈಗಲ್ಲದೆ ಅಣ್ಣನಿಗೆ ಇನ್ನೆಂದು ತಾನೇ ಸಂಭ್ರಮುಳ್ಳೆ ಎಡೆ? ಮೂರು ದಿನಗಳು ಕಳೆದರೆ ತೀಲೆಯೆಲ್ಲೊ? ಮಾಯಿಯಲ್ಲೊ? ಗಂಡನೊಡನೆ ಹೋಗುವವರೆಗಾದರೂ, ಸ್ವಂತ ತಂಗಿಯಿಲ್ಲದ ತನ್ನನ್ನು ಅಣ್ಣನಾಗಿ ಪಡೆಯಿಸಿದ ತೀಲೆಗೆ ತನ್ನ ಒಲವಿನ ಕಾಣಿಕೆಯ ಅರ್ಪಣೆಗಾಗಿ ತವಕಿಸುತಿತ್ತು ಮಾಯಿಯ ಜೀವ. 'ಸಂಪಗೆ, ಪೇರಳೆ ಕೊಯ್ದು ಕೊಡಲು ತನಗೆ ಅಸಾಧ್ಯವಾದರೂ, ತೀಲೆಯನ್ನು ಕರೆಯಲು ಬರುವವನು ಆ ಕೆಲಸದಲ್ಲಿ ಹಿಂದಾಗನು' ಎಂಬುದೇ ಮಾಯಿಯ ಸಮಾಧಾನ. ತೀಲೆಯ ಗಂಡನಾಗುವವನನ್ನು ಮಾಯಿಯೂ ಕಂಡಿದ್ದನು. ತಂಗಿಯ ಗಂಡನನ್ನು ಅಣ್ಣನೂ ಕಂಡು ಒಪ್ಪಬೇಡವೆ?

"ತೀಲಕ್ಕಾ, ನಾಡದು ಸಂಜೆ..! ನನ್ನ ನೆನಪಾಗಬಹುದೆ?" ಮಾಯಿಯ ನಿಟ್ಟುಸಿರಾತು. 'ತೀಲಕ್ಕ'ನೆಂದೇ ಸಂಬೋಧಿಸುತ್ತಿದ್ದರೂ, ಮಾಯಿಯ ಭಾವನೆಯಲ್ಲಿ ತಾನು ಅಣ್ಣ, ತೀಲೆ ತಂಗಿ; ಜನರ ಕಣ್ಣಿಗೆ ಮಾತ್ರ ಅವಳು 'ತೀಲಕ್ಕ' ತಾನು 'ಮಾಯಿ'.

ತೀಲಾ ಸ್ವಲ್ಪ ಹೊತ್ತು ಮಾತಾಡಲಿಲ್ಲ. ಬಹುಶಃ ಹೆಣ್ಣುಗಳ ನೆನಪಾಗಿರಬೇಕು. 'ಅಣ್ಣನಂತೆ ಪ್ರೇಮಪೂರ್ವಕವಾಗಿ ಕೊಯ್ದು ಕೊಡುವವರು ಇನ್ನಿಲ್ಲ; ತನ್ನ ಜಾಳು ಮುಂದೆ

* ಹೊಲಾಟದಲ್ಲಿ ಮೂರನೆಯ ಬಹುಮಾನ ಪಡೆದ ಕತೆಯಿದು.

ಹಿಂದಿನಷ್ಟು ಹುಲುಸಾಗಿರದು ಎಂದು ಚಿಂತಿಸುವಂತಿತ್ತು ಆಕೆಯ ಮುಖಭಾವ. ಆದರೆ, ಕೂಡಲ ಬಂತು ಅಣ್ಣನ ಸಮಾಧಾನ ವಚನ:

"ಶೀಲಕ್ಕಾ, ಹೂಗಳಿಗಾಗಿ ನೀನು ಚಿಂತಿಸಬೇಕಿಲ್ಲ. ಇಷ್ಟರತನಕ ನಾನು ಹೂಹೊರೆಯನ್ನು ಮುರದಿಂದ ಇಳಿಸುತ್ತಿದ್ದೆ ಮಾತ್ರ; ಆದರೆ, ನಾಡದು ಬರುವ ಮಹಾರಾಯ, ಹೂಹೊರೆಯನ್ನು ನಿನ್ನ ತಲೆಯಮೇಲೆಯೇ ಏರಿಸುವನು. ನಿನಗೆ ಇನ್ನುಮುಂದೆ ಆ ಕೆಲಸವೂ ಮಾಯವಾದಂತೆಯೇ!"

ಕೆಂದಾವರೆಯಾಯಿತು ಶೀಲೆಯ ಮೊಗದಾವರೆ. ಮಾಯಿಯ ಮಾತಿನ ಸತ್ಯತೆ ಒಡಮೂಡಿತ್ತು ಆ ಮುಗ್ಧ ಮೊಗದಲ್ಲಿ.

ಈ ಸಡಗರದ ಗಾಳಿ ಸೂಫಿ, ಗೋಪಣ್ಣ ಇವರ ಮನೆಗಳಲ್ಲಿ ಮಾತ್ರವೆಂದಲ್ಲ; ಇಡಿ ಹಳ್ಳಿಯಲ್ಲಿ ಹೊಕ್ಕು ಹರಿದಿತ್ತು. ತಮ್ಮ ಪೂಜಾರಿಯ ಮಗಳ ಮದುವೆಯೆಂದು ಎಲ್ಲರಿಗೂ ಸಂತಸವೇ. ತಮ್ಮಿಂದಾದ ಅಳಿಲುಸೇವೆಯೆಂದು ಎಲ್ಲರೂ ಸಹಕಾರದ ಕೈ ನೀಡಿದ್ದರು. ಕಬ್ಬು ಧಾರಾಳವಾಗಿ ಬೆಳಸಿದ್ದ ಅಲ್ಲಿಯ ಮಾಪಿಳ್ಳೆಯರು ಬೆಲ್ಲವನ್ನೇ ಮದುವೆಗೆ ಕೈಗಾಣಿಕೆಯೆಂದು ಕೊಟ್ಟರು ತರಕಾರಿ, ತೆಂಗಿನಕಾಯಿ.... ಹೆಸರಿಸುವುದೇನು? ಎಲ್ಲವೂ ಊರವರ ಉದಾರತ್ವದ, ಪ್ರೀತಿಯ, ಪಡಿಯಚ್ಚು — ಎಂಬಂತೆ ಗೋಪಣ್ಣನ ಅಂಗಳದಲ್ಲಿ ರಾಶಿ ಬಿದ್ದಿತ್ತು. ಆದರೆ ಈ ಎಲ್ಲಾ ಸಂಭ್ರಮದಲ್ಲೂ ಮೆರೆಯುತ್ತಿದ್ದುದು ಆ ಗೆಳೆಯರ-ಸೂಫಿ, ಗೋಪಣ್ಣರ-ಒಲವಿನ ಕೈವಾಡ.

ನಂದನದಂತಿಹ ಆ ನಾಡಿಗೆ ಬೀಸಿತು ಸುಂಟರಗಾಳಿ. ಫಲಪುಷ್ಪಗಳ ಭಾರದಿಂದ ಮದುವಣಿಗಿತ್ತಿಯಂತೆ ತೂಗುತ್ತಿದ್ದ ಗಿಡ-ಬಳ್ಳಿಗಳು ಧರೆಗೊರಗುವಂತಾದುವು. ಸುಂಟರಗಾಳಿ....! ಯಾವುದೆಂದೇ? ಧರ್ಮರಕ್ಷಣೆ! ಜೇಹಾದ್! ಹತ್ತಲ್ಲ, ನೂರಲ್ಲ, ಎಷ್ಟೋ ವರ್ಷಗಳಿಂದ ಅಣ್ಣ-ತಮ್ಮಂದಿರಂತೆ, ಅಕ್ಕ-ತಂಗೆಯರಂತೆ ಬಾಳಿದ ಆ ಹಳ್ಳಿಯಲ್ಲಿ, ಹಿಂದುಗಳು ಮುಸ್ಲಿಮರ ನಾಶಕ್ಕಾಗಿ ಇರುವವರಂತೆ! ಪವಿತ್ರ ಇಸ್ಲಾಂ ಧರ್ಮದ ರಕ್ಷಣೆಗೆ—ಆ ಊನ ಹಿಂದುಗಳು, ಊಹೆಗೆ ನಿಲುಕದಂದಿನಿಂದ ಒಂದಾಗಿ ಬಂದವರು, ಒಂದು ಮುಪ್ಪಮ್ಮನೀಯರನ್ನು ಸದೆಬಡಿಯಲು ಹಾತೊರೆಯುತ್ತಿರುವರಂತೆ—ಸೊಂಟ ಕಟ್ಟಬೇಕಾದುದು ಪ್ರತಿಯೊಬ್ಬ ಮುಸ್ಲಿಮನ ಪವಿತ್ರ ಕರ್ತವ್ಯ!

ಶೀಲೆಯ ಮದುವೆಯ ಸುಂದರ ದೃಶ್ಯವನ್ನು ಸವಿಯುತಿತ್ತು ಮಾಯಿಯ ಬಗೆಗಣ್ಣು. ಅವನ ದೇಹಮಾತ್ರ ಮಸೀದಿಯ ಒಂದು ಮೂಲೆಯಲ್ಲಿ ಗೋಡೆಗೊರಗಿ ಕುಳಿತಿತ್ತು. ಒಳಗೆ ನಡೆಯುವ ಗೋಜಿಯ ಕಡೆಗೆ ಆತನ ದೃಷ್ಟಿ ಇದ್ದಂತೆ ತೋರುತ್ತಿದ್ದಿಲ್ಲ. ಮದುವೆಯ ಮುನ್ನಾದಿನದ ಬೆಳಗಿನ ಕತೆಯಿದು. ಯಾರೋ, ನಗರದಿಂದ ಒಂದಷ್ಟಂತೆ; ಕೆಲವು ಮಂದಿ ಮುಸ್ಲಿಂ ಯುವಕರು ಬಿಳ್ಕಲ್ಲು ಎಲ್ಲಾ ಸುಹಮ್ಮದೀಯರನ್ನೂ ಕಲೆಹಾಕಿದ್ದರು ಆ ಮಸೀದಿಯಲ್ಲಿ—ತಮ್ಮ ಪವಿತ್ರ ಧರ್ಮದ ರಕ್ಷಣೆಗಾಗಿ. ಕಾಂಗ್ರೆಸ್ ಯಾವುದೋ? ಲೀಗ್ ಏನೊ? ಒಂದೂ ಅರಿಯದ ಪಶುಗಳವರು. ಅವರಲ್ಲಿ ತುಂಬಿಸುತ್ತಿದ್ದರು ವಿಷವನ್ನು ಈ ಧರ್ಮರಕ್ಷಕರು. ಆದರೆ ಹಳ್ಳಿಗರಿಗೊಬ್ಬರಿಗೂ ಅರ್ಥವಾಗಲಿಲ್ಲ ಅವರ ವಾದಸರಣಿ. ಮದುವೆಗೆಂದು ನೆರೆದ ಎಲ್ಲಾ ಹಿಂದುಗಳನ್ನು, ಸಂತಸದ ಸುಗ್ಗಿಯನ್ನು ಸವಿಯ ಬಂದವರನ್ನು, ಕುರಿ-ಕೋಳಿಗಳಂತೆ ಕೊರಳು ಕೊಯ್ದರೆ ಹೇಗೆ ಧರ್ಮರಕ್ಷಣೆಯಾಗುವುದೆಂದು, ಅವರ ಮುಗ್ಧ ಮತಿಗೆ ಎಷ್ಟು ಯೋಚಿಸಿದರೂ ಹೊಳೆಯಲಿಲ್ಲ. ಕೆಲವರಿಗೆ, 'ಆ ಪಟ್ಟಣದವರಿಗಿಂತ ತಾವು ಇಷ್ಟು ದಡ್ಡರೇ?' ಎನ್ನಿಸಿತು. ಧರ್ಮವೇನೊ ಎಲ್ಲರಿಗೂ ಪವಿತ್ರವಾದುದೆ; 'ಅದಕ್ಕೆ ಹಾನಿ ಬಂದಾಗ ರಕ್ಷಣೆಯೂ ಆಗತ್ಯವೆ. ಆದರೆ, ಎಷ್ಟು ಆಲೋಚಿಸಿದರೂ ಧರ್ಮಕ್ಕೆ ಬಂದ ಹಾನಿಯನ್ನು ಮಾತ್ರ ಅವರು ಕಾಣರು. ಆದರೂ, ನಗರದವರು, ಕಲಿತವರು, ಕುರಾನಿನ ಹೆಸರಿನಿಂದ ಆಜ್ಞಾಪಿಸುವವರು ಹೇಳುತ್ತಿದ್ದಾರೆ: "ಧರ್ಮನಾಶವಾಗುತ್ತಿದೆ" ಎಂದು. "ಬಹುಶಃ ಆಗುತ್ತಿದೆಯೇನೊ ತಮಗರಿಯದೆ" ಎಂದು ತಿಳಿದರು ಆ ಸರಳಜೀವಿಗಳು. ಜನರ ಮನಸ್ಸು ಎಷ್ಟೇ ಸರಳವಿರಲಿ; ವಿಷದ ಬೀಜವು ಬಿದ್ದರೆ, ಅದು ಮೊಳೆಯದೆ, ಗಿಡವಾಗಿ ಫಲವೀಯದೆ, ಚಾಕುಗಟ್ಟುವುದು ಅಪರೂಪ; ಅದುದರಿಂದ ಏಕಾದರೂ ತಮ್ಮ ಧರ್ಮಕ್ಕೆ ಸಂಕಟ ಬಂದಿದೆಯೆಂದು ಅವರ ಮನಸ್ಸಿಗೆ ಒಮ್ಮೆ ಹಿಡಿಸಿದೆನೆಂದರೆ ತಮ್ಮ ಬೇಳೆ ಬೆಂದಂತೆಯೇ ಎಂಬುದನ್ನು ಅರಿತಿದ್ದರು, ಆ ಧರ್ಮರಕ್ಷಣೆಯ ವೀರಯೋಧರು!

ಸಭೆ, ಸಂಘಟನೆ ಎಲ್ಲವೂ ನಡೆಯಿತು ಗುಟ್ಟಾಗಿ. ಆಯುಧಗಳ ಪೂರಯಿಕೆಯ ಖಾತೆಯನ್ನು ನಗರದಿಂದ ಬಂದವರೇ ವಹಿಸಿಕೊಂಡರು. ತಾವು ಬರುವಾಗಲೇ ಹತ್ತಾರು ಚಾಕು, ಚೂರಿಗಳನ್ನು ತಂದಿದ್ದರು. ಮದುವೆಯ ಮಂಟಪವನ್ನು ಮಾರಿಯ ಮನೆಯಾಗಿಸಲು ಇನ್ನಾವ ಹೆಚ್ಚಿನ ಆಯುಧಗಳು ಬೇಕು? ಅಲ್ಲಿಗೆ ಬರುವವರೆಲ್ಲರೂ ನಿರಾಯುಧರೇ; ಹೆಚ್ಚಾಗಿ ಹೆಂಗಳೆಯರು; ಎಳೆಯರು. ಇಂತಹರ ಹಾವಳಿಯಿಂದ ತಮ್ಮ ಧರ್ಮದ ರಕ್ಷಣಾಕಾರ್ಯಕ್ಕೆ ಇನ್ನಾವ ಆಯುಧಗಳು ಬೇಕು? ಪವಿತ್ರ ಕುರಾನಿನ ಆಣೆಯಾಗಿ ಎಲ್ಲರೂ ಭಾಷೆ ಕೊಟ್ಟಿದ್ದರು. ಇಸ್ಲಾಂ ಧರ್ಮರಕ್ಷಣೆಗಾಗಿ ನಾಳೆ ಒಂದೇ ದಿನದಲ್ಲಿ ಇಲ್ಲಿಯ ಕಾಫರರನ್ನು ಒಂದು ಪಿಳ್ಳೆ ಉಳಿಯದಂತೆ ಮಾಡುವೆವು—ಸಮಯ ಬರುವ ಮೊದಲು ಈ ವಿಷಯದ ಗುಟ್ಟನ್ನು ಬಯಲಾಗಿಸಲಾರೆವು ಎಂಬುದಾಗಿ.

ಮಾಯಿಗೆ ತಾನು ಏನು ಮಾಡಬೇಕೆಂಬುದು ತಿಳಿಯದಾಯಿತು, ತನ್ನ ಪರಪ್ರತಿಜ್ಞೆಯನ್ನು ಕೇಳಿದಾಗ. ಬೆಳಗಿನಿಂದ ಶೀಲಕ್ಕನನ್ನು ಕಾಣದಿದ್ದುದಕ್ಕಾಗಿ ಆತನ ಮನಸ್ಸು ಆಗಲೇ ಚಡಪಡಿಸುತ್ತಿತ್ತು. ಈಗ ನಡೆದುದನ್ನು ನೆನೆದಾಗ ಅವನ ಜೀವವೇ ಹಾರಿದಂತಾಯಿತು. 'ಯಾ ಅಲ್ಲಾ! ನಾಳೆ ಮದುವೆಯ ಮನೆಯಲ್ಲಿ ಮಾಟಗೆ ಬಲಿ? ಇದರಿಂದ ಧರ್ಮರಕ್ಷಣೆ?' ಒಂದೂ ಬಗೆಹರಿಯಲಿಲ್ಲ ಆತನ ಎಳೆ ಮೆದುಳಿಗೆ. ಮಸೀದಿಗೆ ಬಂದವರೆಲ್ಲಾ

ರೌದ್ರ ಭೀಷಣರಾಗಿ ಹಿಂದಿರುಗಿದರು. ನೆತ್ತರಿನಾಸನೆ ಎಲ್ಲರ ಗಂಟಲೊಣಗಿಸಿತ್ತು. ಮಾಯಿ ಮಾತ್ರ ಕುಳಿತಲ್ಲಿಂದ ಕದಲಲಿಲ್ಲ. ತಲೆಯೆಲ್ಲ ಬರಿದು. ಏನು ಮಾಡುವುದೆಂದು ಎನಿತು ಚಿಂತಿಸಿದರೂ ತೋರದು. ಎಷ್ಟು ಹೊತ್ತು ಈ ರೀತಿ ಕುಳಿತಿದ್ದನೋ? ಏನೇನು ಆಲೋಚಿಸಿದನೋ?

ಮನಸ್ಸು ಆಲೋಚನಾರಾಜ್ಯದಲ್ಲಿ ಸುಳಿಯತೊಡಗಿದರೆ, ಎಲ್ಲೆಲ್ಲ ಸುತ್ತುವುದೆಂದು ಹೇಳಲುಬಾರದು. ಅನೇಕ ಬಗೆಯಾಗಿ ಕನವರಿಸುತ್ತಿದ್ದ ಮಾಯಿ: 'ಕೂಡಲೇ ತಾನೇಕೆ ಈ ವಿಷಯ ವನ್ನು ಬಳಿಯ ಪೋಲೀಸು ಠಾಣೆಗೆ ತಿಳಿಸಬಾರದು?' ಎಂದು ಒಂದು ಆಲೋಚನೆ. ಆದರೆ ವಿವೇಕ ಇನ್ನೊಂದೆಡೆಯಿಂದ ಎಚ್ಚರಿಸುತ್ತಿತ್ತು: ನೆರೆಹಳ್ಳಿಯಲ್ಲಿ ನಾಲ್ಕೇ ವರ್ಷಗಳ ಹಿಂದೆ ಪೋಲೀಸರು ಗೈದ ಅತ್ಯಾಚಾರವನ್ನೆತ್ತಿ ತೋರಿಸುತ್ತಾ. 'ತನ್ನ ವರು ಮಾಡುವ ಅತ್ಯಾಚಾರವೆಂತೂ ಇದೆ; ಒಟ್ಟಿಗೆ ಆ ಮಾರಿ ಗಳನ್ನೂ ಎಳೆತಂದು ತನ್ನೂರನ್ನು ಬಲಿಗೊಡಬೇಕೆ? ಪೋಲೀಸರು ಊರಿಗೆ ನುಗ್ಗಿದರೆಂದರೆ ತೀರಿತು; ಹೆಣ್ಣೆಂದಿಲ್ಲ, ಗಂಡೆಂದಿಲ್ಲ; ಹಸುಳೆಯೆಂದಿಲ್ಲ, ಹರೆಯದವರೆಂದಿಲ್ಲ; ಎಲ್ಲರಿಗೂ ಒಂದೇ ಬಗೆಯ ಪ್ರಹಾರ, ಇರಿತ; ಕೊಳ್ಳಿ, ಸುಲಿಗೆ ಅವರ ನಿತ್ಯ ವಿಧಿ. ಪೋಲೀಸರನ್ನು ಕರೆಯುವುದೆಂದರೆ ಇರುಳು ಕಂಡ ಭಾವಿಗೆ ಹಗಲು ಧುಮುಕುವಂತೆ. ಆದೆಂತೂ ಸಾಧ್ಯವಿಲ್ಲ. ಹಾಗಾದರೆ, ಬೇರೇನು ವಿಧಿ? ಈಗಲೇ ಹೋಗಿ ಗೋವಣ್ಣನಿಗೆ ಎಲ್ಲವನ್ನೂ ತಿಳಿಸಿದರೆ? ಏನು ತಾನೇ ಲಾಭ? ಅವರೂ ತನ್ನವರಂತೆ ಕತ್ತಿ, ಚೂರಿಗಳ ಸಿದ್ಧತೆ ನಡೆಸುವರು. ನಾಳೆ ಬೆಳಗಾಗಲು ಮಾರಾ ಮಾರಿ; ಇಕ್ಕೆಡೆಗಳೊಳಗೆ ಸಣ್ಣದೊಂದು ಯುದ್ಧ. ಒಂದೇ ಕಡೆಯ ಜನ ಸಾಯುವ ಬದಲು ಇಬ್ಬಣಗಳಲ್ಲೂ ಮರಣ. ತಮ್ಮೊಳಗೆ ಬಡಿದಾಡಿ ಎಲ್ಲರೂ ಒರಗುವ ಬಗೆ. ಛೆ! ಇದೂ ಸಲ್ಲದು. ಬೇರೆ ದಾರಿಯೇ ಇಲ್ಲವೇ ಸಾರಾಗಲು? ತನ್ನಂತೆಯೇ ಈ ಹೇಯ ಕೃತ್ಯಕ್ಕೆ ಮನವೊಗ್ಗದವರು ಬೇರಾರೂ ಇರಲಾರರೆ? ಈ ಆಲೋಚನೆ ಕಾರ್ಮೋಡಗಳೆಡೆಯ ಮಿಂಚಿನಂತೆ, ನೆರೆ ಯೊಂದಿಗೆ ಹರಿವವನಿಗೆ ದೊರೆತ ಹುಲ್ಲುಕಡ್ಡಿಯಂತೆ ಆಸೆಯ ಸೊಡರು ಬೆಳಗಿತು ಮಾಯಿಯ ಮನೋಮಂದಿರದಲ್ಲಿ:

'ನನ್ನಂತೆಯೇ ಆಲೋಚಿಸುವವರು ಹಲವರಿರಬಹುದು ನಮ್ಮವರಲ್ಲಿ; ಅವರ ಅಭಿಪ್ರಾಯವನ್ನೂ ಅರಿಯಬೇಕು' ಎನ್ನುತ್ತಾ ಹೊರಟ ಮಾಯಿ; ಸಂಧಿಕಾರ್ಯಕ್ಕೆ ಹೊರಟ ಶಾಂತಿ-ಕುಮಾರನಂತೆ. ಮೇಲಾಗಿ ಪಳ್ಳಿಯಲ್ಲಿನ ತನ್ನ ಪಿರಿಯ ಯುವಕರ ಅಭಿಪ್ರಾಯವನ್ನು ತಿಳಿಯುವುದು ಯುಕ್ತವೆಂದು ಅವರನ್ನೇ ಮೊದಲು ಕಂಡುದು. ಮಾಯಿಗೆ ಮಹದಾಶ್ಚರ್ಯ! ಎಲ್ಲರೂ ತನ್ನಂತೆಯೇ. ಯಾರಿಗೂ ತನ್ನ ನೆರೆಮನೆಯ ಗೆಳೆಯನ ಕೊರಳಿಗೆ ಕತ್ತಿಯಿಡುವ ಬಯಕೆ ಇಲ್ಲ. ಒಬ್ಬಿಬ್ಬರು ತಮ್ಮ ಕೇಳಿಯೇ ಬಿಟ್ಟರು: "ನಾವು ಪ್ರತಿಜ್ಞೆ ಮಾಡಿದುದು ಧರ್ಮಕ್ಕೆ ಸಂಕಟಬಂದಾಗ—ಅದರ ಉದ್ಧಾರಕ್ಕೆಂದು. ನಾವು ತಿಳಿದ ಮಟ್ಟಿಗೆ ಇಂದು ನಮ್ಮ ಧರ್ಮಕ್ಕೆ ಈ ಊರಲ್ಲಿ ಯಾವ ಸಂಕಟವೂ ಇಲ್ಲ. ಆದುದರಿಂದ ಆ ನಗರದಿಂದ ಬಂದವರ ಮಾತಿನಂತೆ ನಾವು ನಡೆಯುದಿದ್ದರೆ ಪ್ರತಿಜ್ಞೆಗೇನೂ ಭಂಗವಿಲ್ಲ. ಸುಮ್ಮನೆ, ಎಂದೂ ಕಾಣುವ, ಒಡಗೂಡಿ ಗೈಯುವ ಗೆಳೆಯರ ಪ್ರಾಣಕ್ಕೆ ಏಕೆ ಸಂಚಕಾರ ತರಬೇಕು? ಅದೂ ಹೇಡಿಗಳಂತೆ! ಏನೂ ಬೇಡ; ನಮ್ಮಷ್ಟಕ್ಕೆ ನಾವಿರುವ. ಆ ನಗರದ ನಾಗರಿಕಾವೃ ಗಳು ನಮ್ಮ ಹಳ್ಳಿಗೆ ಸುಳಿಯುವುದೇ ಬೇಡ." ಎಂದು ಯುವ ಕರೆಲ್ಲರೂ ಕೂಡಿಕೊಂಡು ಅನೇಕ ಹಿರಿಯರನ್ನು ಕಂಡರು. ಪ್ರತಿ ಯೊಬ್ಬನಿಗೂ ನೆರೆಮನೆಯ ಹಿಂದುವ ಬೇಕಾದವನೆ.

"ಅಯ್ಯೋ! ಅವನು ಹೋದರೆ ನಮ್ಮೊಡನೆ ಕೊಯ್ಲಿಗೆ ಜನ ಯಾರಪ್ಪ? ಬೆಳೆ ಪಣ್ಣಾಗಬಹುದು ಇನ್ನು ಆರೇಳು ದಿನಗ ಳಲ್ಲಿ; ಆ ಮೇಲಿನ ಎರಡನೆಯ ಬೆಳೆಯ ಕತೆ ಹಾಗೆಯೇ ಬಾಕಿ ಯಿದ. ಆದೊಂದೂ ಸಾಧ್ಯವಿಲ್ಲ; ಅವನ ನಾಶವಾದರೆ ನಾನೂ ಸಾಯಬೇಕಾದೀತು" ಎಂದನೊಬ್ಬ ಹಣ್ಣು ಮುದುಕ.

"ನನ್ನ ಒಬ್ಬನೇ ಮಗನನ್ನು ಮೊನ್ನೆ ತಾನೇ ಖುದಾ ಕರೆದ; ಆದರೆ ನನ್ನನ್ನು ತಂದೆಗಿಂತಲೂ ಹೆಚ್ಚಾಗಿ ಕಾಣುತ್ತಾನೆ ಆಜೆಮನೆಯ ಸುಬ್ಬಿ. ದಯೆಮಾಡಿ ಅವನನ್ನು ಉಳಿಸಿಬಿಡಿ. ಅವ ನಿಂದ ನಮ್ಮ ಧರ್ಮಕ್ಕೆ ಯಾವ ಕಂಟಕವೂ ಬಾರದಂತೆ ನಾನು ಹೊಣೆ" ಮಗುದೊಬ್ಬ ಮುದಿಯನ ಬೇಡಿಕೆ. ಎಲ್ಲೂ ಇದೇ ಹಾಡು. ಮಾಯಿಯ ಮೊಗವರಳಿತು. ಇನ್ನೇನೂ ಹೆದರಿಕೆ ಯಿಲ್ಲವೆಂದು ಭರವಸೆಯಾಯ್ತು, ದಡಬಡಿಸುತ್ತಿದ್ದ ಹೃದಯಕ್ಕೆ.

'ಮದುವೆಯ ಹಂದರದೆಡೆ ಪ್ರೇಕ್ಷಕರಂತೆ ಎಲ್ಲಾ ಧರ್ಮ ರಕ್ಷಕರೂ ನೆರೆಯಬೇಕು. ತಾವು 'ಜೇಹಾದ್' ಎಂದು ಸಂಕೇತ ಶಬ್ದ ಉಸುರುವುದೇ ತಡ, ಎಲ್ಲರೂ ತಮ್ಮ ಪವಿತ್ರ ಕಾರ್ಯಕ್ಕೆ ಜೊಡಗಬೇಕು.' ಇದು ಆ ನಗರದಿಂದ ಬಂದಿವರ ಪೇಳಿಕೆಯಾಗಿತ್ತು-ಅಲ್ಲಿನ ಎಲ್ಲಾ ಮುಸ್ಲಿಂ ಬಂಧುಗಳಿಗೆ. ಆದರೆ

ಭಾರತ ಬುಕ್ ಡಿಪೋದಲ್ಲಿ:

★

ಕನ್ನಡ ಮಾಸಿಕ, ಇಂಗ್ಲೀಷ ಮಾಸಿಕ, ವಾರಪತ್ರಿಕೆಗಳ ಸುರಿಮಳೆ. ಬೇಕಾದವರು ಇವತ್ತೇ ಬನ್ನಿರಿ!

ನಮ್ಮಲ್ಲಿ ಶಾಲೆಗೆ ಉಪಯೋಗ ಆಗುವ ಪ್ರತಿಯೊಂದು ಪಠ್ಯಪುಸ್ತಕಗಳು ಸಿಗುತ್ತವೆ. ಅಲ್ಲದೆ ಪ್ರಸಿದ್ಧ ಲೇಖಕರ ಕತೆ, ಕಾದಂಬರಿ, ಹರಟೆ ಪುಸ್ತಕಗಳೆಲ್ಲವೂ ಸಿಗುವುವು. ಬೇಕಾದರೆ ಬರೆಯಿರಿ.

ಭಾರತ ಬುಕ್‌ಡಿಪೋ,
ಗಾಂಧಿಚೌಕ, ಧಾರವಾಡ.

ಮಾಯಿ ಹಾಗೂ ಆತನ ಗೆಳೆಯರಿಗೆ, ತಾವಾರೂ ಅಂತಹ ನೀಚ ಕೃತ್ಯಕ್ಕೆ ಕೈಹಾಕುವುದಿಲ್ಲವೆಂದು ಅಲ್ಲಿಯ ಹಿರಿಯರು, ಕಿರಿಯರು ಎಲ್ಲರೂ ವಿಶ್ವಾಸವಿತ್ತಿದ್ದರು. ಎವ್ವಾದರೂ ಮಾಯಿಗೆ ಮನದೊಳಗೆ 'ಪುಕು ಪುಕು' ಎನ್ನುತ್ತಿತ್ತು. ಎಲ್ಲಾದರೂ ಆ ಯುವಕರು ಯಾರೂ ತನ್ನ ಸಹಾಯಕ್ಕೆ ಬಾರದಿದ್ದರೂ, ಮದುವೆಯ ಹಂದರದಲ್ಲಿ ಗುಲ್ಲೆಬ್ಬಿಸಿದರೆ?' ಎಂಬುದೇ ಆತನ ಶಂಕೆ. ಇದಕ್ಕೂ ಉಪಾಯ ಕಂಡಿತು ಆತನ ಚುರುಕು ಬುದ್ಧಿ. ತನ್ನ ಗೆಳೆಯರೊಂದಿಗೆ ಹತ್ತಿಪ್ಪತ್ತು ಜನರಾಗಬಹುದು–ನೆಟ್ಟಗೆ ಮಸೀದೆಯ ಕಡೆಗೆ ನಡೆದನು. ನಗರದಿಂದ ಬಂದವರು ನಾಲ್ವರೂ ತಮ್ಮ ಮರುದಿನದ ಕಾರ್ಯಕ್ರಮ ಹೇಗೆ ನಡೆಯಬೇಕೆಂದು ಚರ್ಚಿಸುತ್ತಿದ್ದರು. ಒಂದೇ ಬಾರಿಗೆ ಇಷ್ಟುಜನ ಯುವಕರು ತಮ್ಮೆದುರು ಬಂದು ನಿಂತುದನ್ನು ಕಂಡು ಅವರಿಗೆ ಅಚ್ಚರಿಯಾಗಲಿಲ್ಲ; ಬಹುಶಃ ಏನಾದರೂ ಸಲಹೆಗಾಗಿ ಬಂದವರಾಗಿರಬೇಕೆಂದು ಆನಂದವಾಯಿತು ಮನದೊಳಗೆ.

"ಬನ್ನಿ! ಧರ್ಮಾಭಿಮಾನಿಗಳೇ! ನೀನೆಲ್ಲರೂ ನಾಳೆಯ ಪವಿತ್ರ ಕಾರ್ಯಕ್ಕೆ ಸಜ್ಜಾಗಿ ಬಂದವರೆಂದು ತೋರುವುದು. ಅಲ್ಲವೆ?" ಅವರಲ್ಲೊಬ್ಬನ ಪ್ರಶ್ನೆ.

ಮಾಯಿಯೇ ಉತ್ತರಿಸಿದ; ದನಿಯಲ್ಲಿ ಗಡುಸುತನವಿತ್ತು: "ಹೌದು; ಧರ್ಮರಕ್ಷಣೆಗಾಗಿಯೇ ಬಂದವರು; ಆದರೆ, ನಿಮ್ಮ ಸಂಕುಚಿತ ದೃಷ್ಟಿಯ ಧರ್ಮದ ಗೊಡವೆ ಸಖ್ಯಕ್ಕೆ ಬೇಕಿಲ್ಲ ನಮಗೆ. ನಾವು ರಕ್ಷಿಸುವುದು ಮಾನವಧರ್ಮವನ್ನು. ಕುರಿ, ಕೋಳಿಗಳಂತೆ ಮನುಷ್ಯರನ್ನೂ ತರಿದೊಟ್ಟುವುದು ಮಾನವಧರ್ಮದ ಹಾನಿ. ಅದನ್ನು ತಡೆಯಲು ಸಿದ್ಧರಾಗಿಯೇ ಬಂದಿರುವೆವು. ಆ ಪವಿತ್ರಕಾರ್ಯಕ್ಕಾಗಿ ನಾವಿಗೂ ಅಂಜುವವರಲ್ಲ ನಾವು!"

ಹೌಹಾರಿ ಹೋದರು ನಗರದ ಜನ 'ಠೊಟ್ಟೆ ಜಾರಿ ತುಪ್ಪದಲ್ಲಿ ಬಿತ್ತು' ಎಂದು ಆನಂದಿಸುತ್ತಿರುವಾಗಲೇ, ಬಿದ್ದುದು ತುಪ್ಪದಲ್ಲಲ್ಲ; ಕೊಚ್ಚೆಯಲ್ಲಿ ಎಂದು ಅರಿವಾದಂತಾಯಿತು ಅವರ ಸ್ಥಿತಿ. ಮಾತಿನ ಮಲ್ಲನೊಬ್ಬ ಉಪದೇಶಕೊಡುವ ಪಪಣಿಕೆಯಲ್ಲಿದ್ದ.

"ಕೂಡಲೆ ನಿಮ್ಮ ಕೊಳೆಮುಸುಡು ಹೊತ್ತುಕೊಂಡು ಈ ಹಳ್ಳಿ ಬಿಟ್ಟು ತೊಲಗಿದರೆ ನಿಮಗೆ ಸುಖ; ಇಲ್ಲವಾದರೆ ನಿಮ್ಮ ಗತಿ ನೆಟ್ಟಗಾಗದು. ಈ ಊರಿನವರಾರೂ ನಿಮ್ಮ ಬಲೆಗೆ ಸಂಪೂರ್ಣ ಬೀಳದಿದ್ದುದು ಸುದೈವ. ನಿಮ್ಮ ಹೇಸಿಗೆ ಕೆಲಸದಲ್ಲಿ ಇಲ್ಲಿಯ ಯಾವನನೂ ಬೆಂಬಲವೀಯನು. ನಾಳೆ ನೀನೇನಾದರೂ ತಂಟೆ ಹೊರಡಿಸಿದರೆ, ಈ ಲೋಕದಲ್ಲಿ ನಿಮ್ಮನ್ನೀರು ಸಂದಿತೆಂದು ತಿಳಿಯಿರಿ!" ಗುಡುಗಿದನು ಮಾಯಿಯ ಗೆಳೆಯನೊಬ್ಬ.

ವಸ್ತುಸ್ಥಿತಿಯ ಪರಿಚಯವಾಗಲು ತಡವಾಗಲಿಲ್ಲ ಅವರಿಗೆ. ಅಲ್ಲಿಯ ಹಿಂದೂ-ಮುಸ್ಲಿಮರೊಳಗಿನ ಬಾಂಧವ್ಯದ ಕಟ್ಟನ್ನು ತಮ್ಮಿಂದ ಸಡಿಲಿಸಲು ಅಸಾಧ್ಯವೆಂಬುದನ್ನು ಕೂಡಲೇ ಮನಗಂಡರು. ಬರಿದೆ ಅಲ್ಲಿದ್ದು ಮಾನಭಂಗ, ಬಹುಶಃ ಪ್ರಾಣ ಹಾನಿ, ತಂದುಕೊಳ್ಳಲು ಯಾವನಿಗೂ ಸೇರಲಿಲ್ಲ. ಕೂಡಲೇ ಕಂಬಿ ಕಿತ್ತಿತು ಯೋಧರ ಪಡೆ!

ಪರದೆಯ ಮರೆಯಲ್ಲಿ ಎಷ್ಟೆಲ್ಲಾ ಕೆಲಸ ನಡೆದರೂ, ಪ್ರೇಕ್ಷಕರ ಕಣ್ಣಿಗೆ ಅವು ಗೋಚರಿಸುವುವೆ? ಗೋಪಣ್ಣನಿಗೆ ಇದೊಂದರದೂ ಅರಿವಿಲ್ಲ. 'ಬೆಳಗಾದರೆ ನೆರವಿಗೆ ತಯಾರಾಗುತ್ತಿದ್ದ ಸೂಫಿ, ಮಾಯಿ ಯಾರೂ ಇಂದು ಕಾಣೆ. ನಾಳೆ ಮದುವೆ; ಕೆಲಸಗಳು ಇನ್ನೂ ಪೂರೈಸಿಲ್ಲ.' ಗೋಪಣ್ಣನ ಚಾಪಲ್ಯ ಹೇಳತೀರದು. ಮಾಯಿಯಾಗಲಿ ಅವನ ತಂದೆಯಾಗಲಿ ಅತ್ತಕಡೆಗೆ ಸುಳಿಯದಿದ್ದುದು ಆತನಿಗೆ ಬಿಡಿಸಲಾರದ ಒಂದು ಒಗಟು. ಹೋಗಿ ಸಮಾಚಾರ ತಿಳಿದು ಬರುವನೆಂದರೆ, ಆತನಿಗೆ ಕೆಲಸಗಳೆಡೆಯಲ್ಲಿ, ಬಂದ ನೆಂಟರೊಂದಿಗೆ ಒಂದು ನಗೆಮಾತಿಗೂ ಬಿಡುವಿಲ್ಲ. ಶೀಲೆಗೆ ಸಂದೇಹ ತಂದೆಗಿಂತ ಮೊದಲು: 'ತಂದೆಯೇ ಕೆಲಸದ ಗಡಿಬಿಡಿಯಲ್ಲಿ ಸಲ್ಲುದುದೇನನ್ನೋ ಅಂದಿರಬಹುದು; ಅದಕ್ಕಾಗಿ ಅವರು ಬೇಸರಿಸಿರಬಹುದು' ಎಂದು ಆಕೆಯ ಊಹೆ. ಆದರೆ ಎಂದಿನಂತೆ ತಾನೇ ಹೊಳೆವಾಟೆ ತಿಳಿದು ಬರುವೆನೆಂದರೆ, ನಾಳೆ ಗಂಡನ ಮನೆಗೆ ಹೋಗುವವಳು; ಹಾಗೆಲ್ಲಾ ಹುಡುಗಾಟಕೆ ಇನ್ನು ಸಾಧ್ಯವಿದೆಯೆ? ಮುಳ್ಳಿನ ಮೇಲೆ ಮಲಗಿದಂತಿತ್ತು ಅವಳ ಸ್ಥಿತಿ. ಉಣಿಸು, ತಿನಿಸು, ಯಾವುದೂ ರುಚಿಸದು ಆಕೆಗೆ.

ಆದರೆ, ಸಂಜೆಯಾದಾಗ ಎಲ್ಲವೂ ಶುಭ್ರವಾಯಿತು: ಮಾಯಿ, ಸೂಫಿ, ಎಲ್ಲರೂ ಗೋಪಣ್ಣನ ಮನೆಯಲ್ಲಿ 'ಹಾಜರು'. ಮಾಯಿ ಏನೇನೋ ಸುಳ್ಳು ನೆವನ ಹೇಳಿದ. ಹೆಚ್ಚು ವಿಚಾರಿಸುವಷ್ಟು ಬಿಡುವಿಲ್ಲ ಯಾರಿಗೂ. ಅಂತೂ ಅವರೆಲ್ಲಾ ಬಂದು ಸಹಕರಿಸುತ್ತಿರುವುದೇ ಸಾಕಾಗಿತ್ತು ಪೂಜಾರಿಯ ಸಂತೋಷಕ್ಕೆ.

ಮರುದಿನ ಮುಂಜಾನೆ ಕ್ರಮದಂತೆ ಶೀಲೆಯ ವಿವಾಹ ನಡೆಯಿತು, ಏನೂ ಅಡೆತಡೆಯಿಲ್ಲದೆ. ಮಂಟಪದಲ್ಲಿ ಕುಳಿತಿದ್ದರು ವಧೂ-ವರರು. ಹನಿಗಣ್ಣಿನಿಂದ ದೂರದಲ್ಲಿದ್ದುರಿ ನೋಡುತ್ತಿದ್ದ ಮಾಯಿ. 'ನಂದನದಂತಿದ್ದ ಈ ಮನೆ, ಈ ಹಳ್ಳಿ ಏನಾಗಿ ಬಿಡುತ್ತಿತ್ತು ನಮ್ಮವರ ಅವಿಚಾರದಿಂದ?' ಎಂದು ಚಿಂತಿಸುತ್ತಿದ್ದನಾತ. ಹಾಗಾಗುತ್ತಿದ್ದರೆ, ಈಗ ಎಂತಹ ಸ್ಥಿತಿ ಇರುತ್ತಿತ್ತೆಂಬುದನ್ನು ಊಹಿಸಲು ಅವನಿಗೆ ಕಷ್ಟವಾಗಲಿಲ್ಲ. ಅದನ್ನು ನೆನೆದೇ ಅವನು ಹನಿಗಣ್ಣಾದುದು. ಶೀಲೆ ಮಂಟಪದಿಂದ ಮಾಯಿಯೆಡೆಗೇ ನೋಡುತ್ತಿದ್ದಳು. ಆನಂದಾನುಭವದಲ್ಲಿ ತೆಲ್ಲವನ್ನೂ ಮರೆತ ಮಾಯಿ. ತುಂಟನಗೆ ನಗುತ್ತಾ ಸಂಪಗೆ ಮರದೆಡೆಗೆ ಬೆರಳು ತೋರಿಸಿದ. ಮೊದಲೇ ನಾಚಿಕೆಯಿಂದ ಕೆಂಪಾಗಿದ್ದಳು ಶೀಲೆ. ಈಗ ಕೇಳುವುದೇ ಬೇಡ.

ಕ್ಷಮೆ

(ಸಣ್ಣ ಕತೆ)*

ಶ್ರೀ. 'ಕಮಲತನಯ' ಪುಣಿ

★

"ಕ್ಷಮಾಗುಣದ ಸಾಮರ್ಥ್ಯವನ್ನು ಪ್ರಶಂಸಿಸದವರು ದೊರಕುವುದು ತೀರ ವಿರಳ. ಎಂತಹ ಕಠಿನ ಶಿಕ್ಷೆಯಿಂದಲೂ ಸಾಧಿಸಲಾರದ ಅನೇಕ ಸಂಗತಿಗಳು ಕ್ಷಮಾಗುಣದ ಸಾಮರ್ಥ್ಯದ ಇದಿರಿಗೆ ತಲೆವಾಗುವುವು. ಒಮ್ಮೊಮ್ಮೆ ಆತ್ಯಾಶ್ಚರ್ಯಕರವಾದ ಘಟನೆಗಳು ನಡೆದು ಹೋದುದೂ ಉಂಟು."

'....' ನಗರವು ಸಾಕಷ್ಟು ದೊಡ್ಡದಾಗಿದೆ. ಒಂದೆರಡು ಮಹಾವಿದ್ಯಾಲಯಗಳೂ ಪಕ್ಕೆಂಟು ಮಾಧ್ಯಮಿಕ ಶಾಲೆಗಳೂ ಉಂಟು. ವಿದ್ಯಾರ್ಜನೆಗೆ ಸಾಕಷ್ಟು ಅನುಕೂಲ. ಸುತ್ತಲಿನ ಪ್ರದೇಶದಿಂದ ಉಚ್ಚಶಿಕ್ಷಣಕ್ಕಾಗಿ ಅನೇಕ ವಿದ್ಯಾರ್ಥಿಗಳು ಬಂದು ವಾಸಮಾಡಿಕೊಂಡಿದ್ದಾರೆ. ಆಧುನಿಕ ಯುಗದ ದೊಡ್ಡ ಪಟ್ಟಣವೊಂದಕ್ಕೆ ಇರಬೇಕಾದ ಎಲ್ಲ ಬಗೆಯ ಅನುಕೂಲತೆಗಳೂ ಇವೆ.

ಈಗೆಂಟು ದಿನಗಳಲ್ಲಿ ಊರಲ್ಲೊಂದು ವಿಲಕ್ಷಣ ಜಾಗೃತಿಯ ಭಾವನೆ ಒಡಮೂಡಿದೆ. ಹಿರಿಯರು-ಕಿರಿಯರು, ಅಶಿಕ್ಷಿತರು. ಸುಶಿಕ್ಷಿತರು, ಆಸ್ತಿಕರು-ನಾಸ್ತಿಕರು, ಹೆಂಗುಸರು-ಗಂಡುಸರು, ಎಲ್ಲರೂ ಎಂದಿಲ್ಲದ ಉತ್ಸಾಹದಿಂದ, ಪ್ರತಿದಿನ ಸಂಜೆಯಲ್ಲಿ ನದಿಯ ದಂಡೆಯ ಮೇಲೆ ಒಟ್ಟುಗೂಡುತ್ತಾರೆ. ಊರಿಂದ ಸ್ವಲ್ಪ ದೂರದಲ್ಲಿಯೆ ಹರಿಯುತ್ತಿದ್ದಿತು ಆ ಚಿಕ್ಕ ನದಿ. ಎಲ್ಲರ ಮುಖಗಳಲ್ಲಿಯೂ ಉತ್ಸುಕತೆಯು ಉಕ್ಕುತ್ತಿತ್ತು. ಇದೆಲ್ಲಕ್ಕೆ ಕಾರಣವೆಂದರೆ—ಅಲ್ಲಿ ನಡೆಯುತ್ತಿದ್ದ ಪ್ರವಚನ. ಶ್ರೀರಾಮಕೃಷ್ಣಾತ್ಮಮದ ಸ್ವಾಮಿ ಬ್ರಹ್ಮಾನಂದರು, ತಮ್ಮ ನಾಲ್ಕೈದು ಜನ ಶಿಷ್ಯರೊಂದಿಗೆ ದಿನಾಲು ಸಂಜೆ ಅಲ್ಲಿ ಪ್ರವಚನಗಳನ್ನು ನಡೆಯಿಸುತ್ತಿದ್ದರು. ನದಿಯ ದಂಡೆಯ ಮೇಲಿನ ಮುಚ್ಚಂಬೆಯ ಪ್ರಶಾಂತ ವಾತಾವರಣದಲ್ಲಿ, ಉಚ್ಚಾಸನದ ಮೇಲಿಂದ ಶ್ರೀರಾಮಕೃಷ್ಣ ಪರಮಹಂಸರ ಉಚ್ಚತಮ ತತ್ತ್ವಗಳನ್ನು ಉಪೋದ್ಘಾತಕವಾಗಿಯೂ ದೇಶಕಾಲ ಪರಿಸ್ಥಿತಿಯನ್ನನುಸರಿಸಿಯೂ, ಎಲ್ಲರಿಗೂ ತಿಳಿಯುವಂತಹ ಸರಳ ಭಾಷೆಯಲ್ಲಿ ಮಧುರ ಧ್ವನಿಯಿಂದ ಉಪದೇಶಿಸುವ ಶ್ರೀಸ್ವಾಮಿ ಬ್ರಹ್ಮಾನಂದರ ಸಾತ್ತ್ವಿಕ ತೇಜವು '....' ನಗರವನ್ನೇ ಆಕರ್ಷಿಸಿತ್ತು. ಅವರ ಪ್ರವಚಗಳದೊಂದು ವೈಶಿಷ್ಟ್ಯವೇ ಆಗಿತ್ತು. ಆಸ್ತಿಕರಾದವರಿಗೆ ದೇವರ ನಾಮಸಂಕೀರ್ತನೆಯೂ, ನಾಸ್ತಿಕರಾದವರಿಗೆ ಶಾಸ್ತ್ರಶುದ್ಧ ವಿವೇಚನೆಯೂ ಅದರಲ್ಲಿ ದೊರಕುತ್ತಿತ್ತು. ಅಧುನಿಕ ವಿದ್ಯಾರ್ಥಿಗಳಿಗೆ ಅದೊಂದು ಒಳ್ಳೆಯ ಉಪಯುಕ್ತ 'ಭಾಷಣ'ವಾಗಿ ಕಂಡುಬರುತ್ತಿತ್ತು. ಅವರ ಅಮೃತವಾಣಿ ಸಕಲ ಸ್ವಭಾವದ ಜನರನ್ನೂ ಚೇತನಗೊಳಿಸುತ್ತಿತ್ತು. ಅವರ ಮಧುರವಾಣಿಗೆ ಜನಸ್ತೋಮವೆಲ್ಲ ಮುಗ್ಧವಾಗಿಬಿಡುತ್ತಿತ್ತು. ದಿನದಿನವೂ ಶ್ರೋತೃಗಣವು ಬೆಳೆಯುತ್ತಲೇ ಇದ್ದಿತು. ಇದಕ್ಕೆ ಜೊತೆಯಾಗಿ ಅವರು ಕಲಕತ್ತಾ ವಿಶ್ವವಿದ್ಯಾನಿಲಯದಲ್ಲಿ ಎಮ್. ಎಸ್ಸಿ. ಪರೀಕ್ಷೆಯಲ್ಲಿ ಮೊದಲಿಗರಾಗಿ ಪಾಸಾದವರೆಂಬ ವದಂತಿ ಮತ್ತಷ್ಟು ಪುಷ್ಟಿಕಾರಕವಾಗಿತ್ತು. ಆಧುನಿಕಯುಗ ವಿಜ್ಞಾನಯುಗವಷ್ಟೇ! ದೇವರು ಧರ್ಮಗಳಲ್ಲಿ ಎಳ್ಳಷ್ಟೂ ನಂಬುಗೆಯಿಲ್ಲದ ಪಂಡಶುಂಡ ನಾಸ್ತಿಕವಾದಿಗಳೂ ಇವರ ಪ್ರವಚನಕ್ಕೆ ಬರುತ್ತಿದ್ದರು.

ಪ್ರವಚನದ ನಂತರ ನೆರೆದವರೆಲ್ಲರಿಗೂ ಪ್ರಸಾದ ಹಂಚಲ್ಪಡುತ್ತಿತ್ತು. ಮೊದಲೆರಡು ದಿನ ಹೊಂದಲೆಯಾದರೂ ಈಗೇನೂ ಆತಂಕವಿರಲಿಲ್ಲ. ಊರಲ್ಲಿಯ ಅನೇಕ ಜನ ಸಿರಿವಂತರು ಒಳ್ಳೊಳ್ಳೆಯ ಪ್ರಸಾದದ ತಯಾರಿಕೆಗೆ ಹಣವೀಯಲು 'ನಾ ಮುಂದೆ ನೀ ಮುಂದೆ' ಎಂದು ಪೈಲಾಟ್ ಹೂಡಿ ಮುಂದಾಗುತ್ತಿದ್ದರು. ಸಾಮಾನ್ಯ ಜನರೆಲ್ಲ ತಿರಳಿದ ಮೇಲೆ, ಊರಲ್ಲಿಯ ಪ್ರತಿಷ್ಠಿತರೂ ಅನೇಕ ಕುತೂಹಲೀ ತರುಣರೂ ಸ್ವಾಮಿಗಳ ಸುತ್ತಲು ನೆರೆದು ಕೂಡುತ್ತಿದ್ದರು. ಅನೇಕರು ಅನೇಕ ಬಗೆಯ ಸಂದೇಹಗಳನ್ನು ನಿವಾರಿಸಿಕೊಂಡು ಮನಸ್ಸನ್ನು ಹಗುರು ಮಾಡಿಕೊಂಡು, ಮನೆಯತ್ತ ಆನಂದದಿಂದ ಸಾಗುತ್ತಿದ್ದರು. ಸನಾತನಿಗಳು, ರಾಜಕಾರಣಿಗಳು, ನಾಸ್ತಿಕರು, ಭೌತಶಾಸ್ತ್ರಜ್ಞಾನಿಗಳು, ಸಾಮಾನ್ಯ ಕಾರ್ಮಿಕರು, ಯೋಗಾಭ್ಯಾಸವನ್ನು ರಿಯಬೇಕೆನ್ನುವ ಕುತೂಹಲಿ ತರುಣರು.... ಎಲ್ಲರಿಗೂ ಸಮಾಧಾನಕಾರಕವಾದ ಉತ್ತರಗಳು ದೊರೆಯುತ್ತಿದ್ದುವು.

ಎಂದಿನಂತೆ ಆ ದಿನವೂ ಪ್ರವಚನ ಮುಗಿದನಂತರ, ಪ್ರತಿಷ್ಠಿತರು ಸ್ವಾಮಿಗಳವರ ಸುತ್ತಲೂ ಕುಳಿತುಕೊಂಡರು. ಅಂದಿನ ಪ್ರವಚನದ ವಿಷಯ 'ವಿಷಯವ್ಯಾಮೋಹ ಹಾಗೂ ಆತ್ಮನ ಬಿಡುಗಡೆ' ಎಂಬುದಾಗಿತ್ತು. ಒಳ್ಳೆಯ ರಂಗಿಗೆ ಬಂದಿದ್ದರಿಂದ ಪ್ರವಚನ ಬಿಟ್ಟಾಗ ಮಬ್ಬುಗತ್ತಲಾಗುತ್ತಿತ್ತು. ಆದೇ ಕ್ಷೀಣ. ಜಂದಿರ ನಸುನಗುತ್ತ ಮೋಜಗಳ ಹೊರಕ್ಕೆ ಕಾಣಿಸಿಕೊಳ್ಳುತ್ತಿದ್ದ. ಆಲ್ಹಾದಕರವಾದ ತಂಗಾಳಿ ಗಿಡಗಳನ್ನು ತಲೆದೂಗಿಸುತ್ತ ಮಂದವಾಗಿ ಬೀಸುತ್ತಿತ್ತು. ಜನ ತಂದ-ತಂಡವಾಗಿ ಊರ ಕಡೆಗೆ ಹೊರಟಿತ್ತು. ಕೆಲವರು ಸ್ವಾಮಿಗಳಿಗೆ ನಮಸ್ಕರಿಸಲು ಬಂದು ಬಂದು ಹೋಗುತ್ತಿದ್ದರು. ವಾಡಿಕೆಯಂತೆ ಇನ್ನು ಪ್ರಶ್ನೋತ್ತರ-ಚರ್ಚೆ ಆರಂಭವಾಗುವುದರಲ್ಲಿತ್ತು. ಸ್ವಾಮಿಗಳ ಮುಖ ಸ್ವಲ್ಪ ತೀಕ್ಷ್ಣವಾಯಿತು. ಕರುಣೆಯ ರೇಪೆಯೊಂದು ಸ್ಪಷ್ಟವಾಗಿ ತೋರಿತು. ಜಿಟಕ್ಕನೆ ಆಸನ ಬಿಟ್ಟೆದ್ದರು. ದೃಷ್ಟಿ

* ಮೇಲಾಟದಲ್ಲಿ ನಾಲ್ಕನೆಯ ಸ್ಥಾನವನ್ನು ಪಡೆದ ಕತೆಯಿದು

ಇದಿರಿಗೆ ಇದ್ದಿತು. ಸುತ್ತಲಿನ ಜನರೆಲ್ಲ ಸ್ವಾಮಿಜಿಯವರು ನೋಡುತ್ತಿದ್ದ ಕಡೆಗೆಯೆ ಕುತೂಹಲಿಗಳಾಗಿ ನೋಡಿದರು. ದಂಪತಿಗಳಿಬ್ಬರು ಸ್ವಾಮಿಗಳವರ ದರುಶನಕ್ಕಾಗಿ ನಡೆದು ಬರುವಂತೆ ತೋರುತ್ತಿದ್ದಿತು. ಇವರೂ ಮಧ್ಯಮ ವಯಸ್ಸಿನವರೇ. ಹೆಂಡತಿಯ ಕಂಕುಳಲ್ಲೊಂದು ಚಿಕ್ಕ ಮಗು ನಿದ್ರಿಸುತ್ತಿತ್ತು. ಸ್ವಾಮಿಗಳು ತಮ್ಮೆಡೆಗೆ ನಡೆದು ಬರುವುದನ್ನು ಕಂಡು ಪತಿ-ಪತಿಗಳು ಆಶ್ಚರ್ಯಚಕಿತರಾದರು. ಏನು ಮಾಡಬೇಕೆಂಬುದು ತೋಚದೆ ನಿಂತಲ್ಲಿಯೇ ನಿಂತುಬಿಟ್ಟರು. ಸ್ವಾಮಿಜಿಯವರು ಗಂಭೀರವಾಗಿ ನಡೆಯುತ್ತ ಬಂದು, ಆ ದಂಪತಿಗಳಿಗೆ ಸಾಷ್ಟಾಂಗವೆರಗಿದರು. ಏನೋ ಅಚಾತುರ್ಯ ನಡೆಯುತ್ತಿರುವಂತೆ ಕಂಡರೂ, ದಂಪತಿಗಳು ಅಸಹಾಯಕರಾಗಿ ನಿಂತಿದ್ದರು. ಪ್ರತಿನಮಸ್ಕರಿಸಿ ಅವರೂ ಹೊರಟುಹೋದರು. ಗಂಡನು ದೋತರದ ಸೆರಗಿನಿಂದ ಕಣ್ಣು ಒರಸಿಕೊಂಡುದನ್ನೂ, ಹೆಂಡತಿಯು ಕಣ್ಣು ಅಶ್ರುಪೂರ್ಣವಾದುದನ್ನೂ ಅನೇಕರು ಕಂಡರೂ, ಸ್ವಾಮಿಜಿಯವರು ತನ್ನು ಹೊದಿಕೆಯ ಜುಬ್ಬಾನಿಂದ ಕಣ್ಣು ಒತ್ತಿಕೊಂಡುದನ್ನು ಅವರ ಪ್ರಿಯಶಿಷ್ಯ ಅಲೋಕಾನಂದನ ಹೊರತು ಇನ್ನಾರೂ ನೋಡಲಿಲ್ಲ. ದಂಪತಿಗಳು ಭಾರವಾದ ಹೆಜ್ಜೆಗಳನ್ನು ಹಾಕುತ್ತ ಹೊರಟು ಹೋದರು.

ಸ್ವಾಮಿಗಳು ತಿರುಗಿ ಬಂದು ಆಸನಸ್ಥರಾದರು. ಎಂದಿನಂತೆಯೆ ಅವರ ಮುಖ ಗೆಲುವಾಗಿತ್ತು. ನೆರೆದ ಜನರ ಔತ್ಸುಕ್ಯವು ಮೇರೆ ಮೀರಿದ್ದರೂ, ಧೈರ್ಯ ಸಾಲದೆ ಅಘೋಮುಖರಾಗಿ ಕುಳಿತುಬಿಟ್ಟರು. ದರ್ಶನವಿತ್ತ ದಂಪತಿಗಳು ಕೆಲವರಿಗೆ ಅಪರಿಚಿತರೇನಲ್ಲ. ಒಳ್ಳೆಯ ದಯಾವಂತರೆಂದು ಹೆಸರಾದ ದ್ವಿಜೇಂದ್ರರಾಯರು ಹಾಗೂ ಅವರ ಪತ್ನಿ ಪೂಥವೀದೇವಿ. ಒಳ್ಳೆಯ ಸಿರಿವಂತರಲ್ಲದಿದ್ದರೂ ಬಡವರೇನೂ ಅಲ್ಲ.

ಶ್ರೀಸ್ವಾಮಿಗಳೇ ಮುಂದಸ್ಮಿತರಾಗಿ ಮಾತಿಗೆ ಆರಂಭಿಸಿದರು ಒಬ್ಬೊಬ್ಬರೇ ಸಾವಕಾಶವಾಗಿ ತಲೆಯೆತ್ತಿ, ಸ್ವಾಮಿಗಳವರ ದಿನದ ಚರ್ಯೆಯನ್ನು ಕಂಡು, ಧೈರ್ಯವಾಗಿ ಅವರೆಡೆಗೆ ನೋಡುತ್ತ ಅವರ ಹೇಳಿಕೆಯ ಕಡೆಗೆ ಲಕ್ಷ್ಯವಿತ್ತರು:

"ಮನುಷ್ಯ ತನ್ನ ಸುತ್ತಲಿನ ಪರಿಸ್ಥಿತಿಯಲ್ಲಿ ತನ್ನನ್ನೇ ಮರೆತು ಬಿಡುವ ಪ್ರಸಂಗ ಹೆಚ್ಚು. ಸಂಸಾರವ್ಯಾಮೋಹದಲ್ಲಿ ತನ್ನ ನಿಜವಾದ ಆತ್ಮಸ್ವರೂಪದ ವಿಸ್ಮೃತಿಯಾಗುವುದೇನೂ ಆಶ್ಚರ್ಯವಲ್ಲ. ಅದರೂ ಅದೇ ಸಂಸಾರದಲ್ಲಿಯ ಅನೇಕ ಕಠಿನ ಪ್ರಸಂಗಗಳು ಆತನನ್ನು-ತನ್ನ ನಿಜವಾದ ಸ್ವರೂಪದ ಬಗ್ಗೆ ವಿಚಾರಿಸಲು ಚೇತನವೀಯುತ್ತವೆ. ಆತ ವಿಚಾರಿಸಬೇಕೆನ್ನುವಷ್ಟರಲ್ಲಿ ಮತ್ತನೇಕ ಸಂಸಾರಸುಟುಗಳು ಆತನನ್ನು ತೇಲಿಸಿಕೊಂಡು ಹೋಗಿಬಿಡುತ್ತವೆ. ಆತ ಪುನಃ ಸ್ಮೃತಿವಿಹೀನನಾಗುತ್ತಾನೆ— ಮುತ್ತೊಂದು ಕಠಿನಪ್ರಸಂಗ ಎದುರಾಗುವ ವರೆಗೆ. ಮೊದಲ ಅನುಭವಕ್ಕೇನೇ ಬುದ್ಧಿ ತಿಳಿಯುವ ಬನ ತೀರ ವಿರಳ.

"ಮರವೊಂದು ಫಲಭರಿತವಾಗಿದೆ. ಅದರಲ್ಲನೇಕ ಹಣ್ಣುಗಳು ಸಿಹಿಯಾಗಿವೆ, ಕೆಲವು ಕಹಿಯಾಗಿವೆ. ಪಕ್ಷಿಯೊಂದು ಹಣ್ಣು ತಿನ್ನುತ್ತಿದೆ. ಸಿಹಿ ಹಣ್ಣುಗಳ ರುಚಿನೋಡುತ್ತ ನೋಡುತ್ತ ತನ್ನನ್ನೇ ತಾನು ಮರೆತಿದೆ. ಅಕಸ್ಮಾತ್ತಾಗಿ ಅದು ಒಂದು ಕಹಿ ಹಣ್ಣನ್ನು ಕಡಿದು ಮೇಲಕ್ಕೆ ನೋಡುತ್ತದೆ. ಮರದ ತುದಿಯಲ್ಲೊಂದು ಸುವರ್ಣಗರಿಯ ಪಕ್ಷಿ ಗಂಭೀರವಾಗಿ ಕುಳಿತು ಬಿಟ್ಟಿದೆ. ಅದು ಕಹಿ ಹಣ್ಣನ್ನೂ ತಿನ್ನುವುದಿಲ್ಲ, ಸಿಹಿ ಹಣ್ಣನ್ನೂ ತಿನ್ನುವುದಿಲ್ಲ. ಕೆಳಗಿನ ಪಕ್ಷಿಗೆ ತಾನೂ ಮೇಲೆ ಹೋಗಬೇಕೆಂಬ ಆಶೆ ಹುಟ್ಟುತ್ತದೆ. ಸ್ವಲ್ಪ ಮೇಲಕ್ಕೆ ಹೋಗುತ್ತದೆ. ಪುನಃ ಹಣ್ಣು ತಿನ್ನುವ ಚಪಲತೆ. ಎಲ್ಲವೂ ರುಚಿ ರುಚಿ ಸಿಹಿ ಹಣ್ಣುಗಳು. ಮತ್ತೆ ವಿಸ್ಮೃತಿಯಾಗುತ್ತದೆ— ಇನ್ನೊಂದು ಕಹಿ ಹಣ್ಣು ಕಡಿಯುವ ವರೆಗೆ. ಸಾಮಾನ್ಯ ಮನುಷ್ಯನ ಸ್ಥಿತಿಯೂ ಇದೇ ಪ್ರಕಾರದ್ದು.

"ಬುದ್ಧಿ ತಿಳಿಯಲು ಮೊದಲನೆಯ ಕಹಿ ಹಣ್ಣೇ ಸಾಕಾದ ಅದೃಷ್ಟವಂತರಲ್ಲಿ ನಾನೊಬ್ಬ. ಆ ಸಂಧಿ ಒದಗಿದುದು ಇದೀಗ ದರುಶನಕ್ಕೆ ಬಂದ ದಂಪತಿಗಳ ಮೂಲಕ. ನಾನೀ ಸ್ಥಿತಿಗೆ ಬರಲು ಚಾಲನವಿತ್ತವರು ಅವರೇ. ಅಂತೆಯೇ ಗುರುಭಾವನೆಯಿಂದ ಅವರನ್ನು ನಮಸ್ಕರಿಸಿದೆ."

ಎರಡು ನಿಮಿಷ ಮೌನವಾಗಿದ್ದು ಸ್ವಾಮಿಜಿಯವರು ಚರ್ಚೆ ಮುಗಿಯಿತೆಂದು ಹೇಳಿ ಎದ್ದರು. ನೆರೆದ ಜನರೂ ಅನೇಕ ತರ್ಕ-ವಿತರ್ಕಗಳ ಮಾಲೆ ಹೆಣೆಯುತ್ತ ಮೌನವಾಗಿ ಮನೆಗಳತ್ತ ಕಾಲು ಹಾಕಿದರು.

ಸಂಧ್ಯಾಕಾಲದ ಅನುಷ್ಠಾನ-ಫಲಾಹಾರಾದಿಗಳನ್ನು ಮುಗಿಸಿ ಸ್ವಾಮಿಜಿಯವರು ಕೃಷ್ಣಾ ಜಿನದಮೇಲೆ ಕುಳಿತಿದ್ದರು. ಹಣತೆಯ ಮುಂದಪ್ರಕಾಶವೆಲ್ಲೆಡೆ ಪಸರಿಸಿತ್ತು. ಕೆಲಕಾಲ ಮೌನವಾಗಿದ್ದು ಅನಂತರ ಸ್ವಾಮಿಜಿಯವರು ಉಳಿದೆಲ್ಲ ಶಿಷ್ಯರಿಗೆ ವಿಶ್ರಾಂತಿ ತೆಗೆದುಕೊಳ್ಳಲಪ್ಪಣೆಯಿತ್ತು ಕಳುಹಿದರು. ಅಲೋಕಾನಂದ ಮಾತ್ರ ಅವರನ್ನು ಬಿಟ್ಟು ಕದಲಲಿಲ್ಲ. ಮುಖದಲ್ಲಿ ದೈನ್ಯ ಒಡೆದು ತೋರುತ್ತಿತ್ತು. ಆಸಮಾಧಾನದ ಮೋಡ ಮೋರೆಯನ್ನು ಮುಸುಕಿತ್ತು. ಮತ್ತೆ ಕೆಲ ನಿಮಿಷ ಮೌನದಲ್ಲಿಯೆ ಕಳೆದುವು. ಹೊರಕ್ಕೆ ಉಳಿದ ಶಿಷ್ಯರ ಗೊರಕೆ ಕೇಳಬರುತ್ತಿತ್ತು.

"ಅಲೋಕಾ" ಬ್ರಹ್ಮಾನಂದ ಸ್ವಾಮಿಗಳು ನುಡಿದು ಒಮ್ಮೆಲೆ ಎದ್ದುನಿಂತರು. ನಿವಾಸಸ್ಥಾನವನ್ನಗಲಿ ಜೊರಕ್ಕೆ ಸಾಗಿದರು. ಅಲೋಕಾನಂದ ಅವರನ್ನು ಸುಮ್ಮನೆ ಅನುಸರಿಸಿದ. ದೂರದ ನದಿಯ ದಡದಲ್ಲಿಯ ವಿಶಾಲವಾದ ಕಲ್ಲು ಬಂಡೆಯೊಂದರ ಮೇಲೆ ಸ್ವಾಮಿಗಳು ಕುಳಿತು, ಅಲೋಕನಿಗೂ ಕುಳ್ಳಿರಹೇಳಿದರು. ಚಂದಿರ ಕೆಳಕ್ಕಿಳಿಯುತ್ತಿದ್ದ. ನದಿಯ ಮಂದ ಶಬ್ದ ಹಾಗೂ ಗಿಡಗಳಲ್ಲಿಯ ಜಿರ್‌ಜಿರ್ ಎಂಬ ಶಬ್ದದ ಹೊರತು ಎಲ್ಲೆಲ್ಲಿಯೂ ನಿಃಶಬ್ದ.

"ಅಲೋಕಾ," ಸ್ವಾಮಿಗಳವರು ಸಾವಕಾಶವಾಗಿ ಆರಂಭಿಸಿದರು. ಅಲೋಕ ಮೌನವಾಗಿ ಆಲಿಸುತ್ತಿದ್ದ: "ಅದೆಷ್ಟೋ

ವರುಷಗಳ ನಂತರ ನೆನಪಿಗೆಂದು ನನ್ನಾಯುಷ್ಯದಲ್ಲಿ ನಡೆದ ಘಟನೆಯೊಂದರ ಬಗ್ಗೆ ಹೇಳಲಭ್ಯಂತರವಿಲ್ಲವೆಂದು ಎನ್ನಿಸುತ್ತದೆ....

"ಸುಮಾರು ಇಪ್ಪತ್ತು ವರುಷಗಳ ಹಿಂದಿನ ಮಾತು. ನಾನಾಗ ಇದೇ.... ನಗರದಲ್ಲಿಯ ಮಹಾವಿದ್ಯಾಲಯವೊಂದರಲ್ಲಿ ಬಿ. ಎಸ್ಸಿ. ಗಾಗಿ ಓದುತ್ತಿದ್ದೆ. ಊಟ-ವಾಸವೆಲ್ಲವೂ ಅಣ್ಣನ ಮನೆಯಲ್ಲಿ. ಎಲ್ಲ ವಿಷಯಗಳಲ್ಲಿಯೂ ಮೊದಲಿಗನಾಗಿದ್ದೆ. ವಿದ್ಯಾರ್ಥಿ ವೇತನಕ್ಕೇನೂ ಕೊರತೆ ಇರಲಿಲ್ಲ. ಕಲಿತು ದೊಡ್ಡ ಸರಕಾರೀ ನೌಕರಿ ಗಳಿಸಿ, ಬಹಳಷ್ಟು ದುಡ್ಡು ಮಾಡಿ ಮನೆ ಮುಂದೆ ತಂದಾನೆಂದು ಅಣ್ಣನ ಆಶೆ. ನಿಜವಾಗಿಯೂ ಆತನ ಆಶೆ ಬಯಲಾಶೆಯಾದೀತೆಂದು ಕನಸು ಮನಸಿನಲ್ಲಿ ಕೂಡ ಎಣಿಸಿರಲಿಲ್ಲ. ಈಶೇಚ್ಛೆ !!....

"ಮಾಧವಿಯೂ ನಾನೂ ಚಿಕ್ಕಂದಿನಿಂದ ಕೂಡಿ ಆಡಿದವರು. ನಮ್ಮ ನೆರೆಮನೆಯೆ ಮಾಧವಿಯದು. ಒಂದು ದಿನವೂ ಆಗಲಿರುತ್ತಿದ್ದಿಲ್ಲ. ನನಗಿಂತಲೂ ತುಸು ದೊಡ್ಡವರಾದವರೊಂದಿಗೂ ಆಟದಲ್ಲಿ ಸೇರುತ್ತಿದ್ದೆವು. ಅವರ ಆಟದಲ್ಲಿ ಮುಖ್ಯತಃ ಲಗ್ನ ಸಮಾರಂಭದ ಸಂಗತಿ ಇದ್ದೇ ತೀರಬೇಕು. ಅದೆಷ್ಟೋ ಸಲ ಮಾಧವಿಯೂ ನಾನೂ ವಧೂವರರಾಗಿ ಕುಳಿತಿರುತ್ತಿದ್ದೆವು. ತಿಂಡಿಯಲ್ಲಿಯ ಒಳ್ಳೆಯ ಭಾಗ ನಮಗೆ ದೊರೆಯುತ್ತಿದ್ದುದು ಅಷ್ಟೇ. ದೊಡ್ಡವರಿಗದೊಂದು ನೋಟು.

"ನಾನು ಮಹಾ ವಿದ್ಯಾಲಯದಲ್ಲಿದ್ದಾಗಲೇ ಮಾಧವಿಯು ನನ್ನ ಅಣ್ಣನ ಕೈಯನ್ನು ಹಿಡಿದಳು. ನಮಗದೊಂದು ಸಂಭ್ರಮವೇ. ದಿನವೂ ಎಷ್ಟೆಷ್ಟೋ ವೇಳೆ ಪರಟೆಕೊಚ್ಚುತ್ತ ಕೂಡುತ್ತಿದ್ದೆವು. ಕ್ಷಮೆಯ ಅಗರರೆಂದು ಇನ್ನೂ ಖ್ಯಾತಿವೆತ್ತ ದ್ವಿಜೇಂದ್ರರಾಯರಿಗೆ ಅದರಲ್ಲೇನೂ ಅಸಾಮಾಧಾನಿಕತೆ ತೋರಲಿಲ್ಲ.

"ಚಿತೇಂದ್ರಿಯ ಮನುಷ್ಯ ದೊರಕುವುದು ತೀರ ಅಪರೂಪ. ಅದರಲ್ಲಿಯೂ ಸುಧಾರಕಯುಗದ ಸುಶಿಕ್ಷಿತ ತರುಣರಲ್ಲಿಯಂತೂ ಅತಿ ವಿರಳ. ಆ ದಿನ— ವಿಷಗಳಿಗೆಯೋ ಅಮೃತಗಳಿಗೆಯೋ ಹೇಳಲಾರೆ. ಅಜಾತುರ್ಯವಂತೂ ಘಟಿಸಿತು; ದ್ವಿಜೇಂದ್ರರು ಊರಲ್ಲಿರಲಿಲ್ಲ. ನಾನದೇ ಊಟಮಾಡಿ ಗಾಳಿಗೆ ವೈಯ್ಯೊಡ್ಡಿ ಹೊರಕ್ಕೆ ನಿಂತಿದ್ದೆ. ಸಹಜವಾಗಿ ಕಿಟಕಿಯೊಳಗಿಂದ ಒಳಕ್ಕೆ ನೋಡಿದೆ. ಮಾಧವಿ ಊಟ ಮಾಡುತ್ತಿದ್ದಳು. ಬದಿಯಲ್ಲಿಯೆ ನಾನದೇ ಉಂಡ ತಾಟು ಇದ್ದಿತು. ಇದ್ದಕ್ಕಿದ್ದಂತೆಯೇ ಮಾಧವಿ ಆಸ್ಥೆಯಿಂದ, ನಾನದೇ ಅರ್ಧ ತಿಂದಿಟ್ಟರೊಟ್ಟಿಯ ಚೂರೊಂದನ್ನು ತನ್ನ ಎಲೆಯಲ್ಲಿ ಸರಿಸಿಕೊಂಡಳು. ಉಚ್ಛಿಷ್ಟ ಭೋಜನ! ನನ್ನ ಮೈಯಲ್ಲಿ ವಿದ್ಯುತ್ತು ಪ್ರವಹಿಸಿದಂತಾಯ್ತು. ಮೈಯೆಲ್ಲ ಸಣ್ಣಕಹುಟ್ಟಿತು. ಚಿಕ್ಕವರಾಗಿದ್ದಾಗ ವಧೂವರರಾಗಿ ಕುಳಿತಾಗ ಇದೇ ಪ್ರಕಾರ ಅವಳು ಮಾಡಿದ್ದು ನನ್ನ ನೆನಪಿಗೆ ಬಾರದಿರಲಿಲ್ಲ. ಘಕ್ಕನೆ ಮಾಧವಿಯ ದೃಷ್ಟಿಯೂ ಕಿಟಕಿಯತ್ತ ಹೊರಳಿತು. ಮುಖ ಕೆಂಪೇರಿ ಕೆಳದುಟಿ ಅದುರಹತ್ತಿತು. ಹಣೆಯ ಮೇಲೆ ಬೆವರು ಹನಿ ಸಾಲುಗಟ್ಟಿದುವು. ಎಷ್ಟು ಹೊತ್ತು ಒಬ್ಬರನ್ನೊಬ್ಬರು ನೋಡುತ್ತಿದ್ದೆವೋ ತಿಳಿಯದು, ಯಾವಾಗ ಸವಿಾಪಿಸಿದೆವೋ ಅದೂ ತಿಳಿಯದು. ಅಜಾತುರ್ಯವೋ ಅದು ಪುತ್ತಿನ್ನೇನೋ ಘಟಿಸಿದ್ದಂತೂ ನಿಜ.....

"ಮಾಧವೀಽಽ" ಎಂಬ ತೀಕ್ಷ್ಣ ಧ್ವನಿಗೆ ಇಬ್ಬರೂ ಮೆಟ್ಟಿ ಬಿದ್ದು ದೂರ ಸರಿದೆವು. ಬಾಗಿಲಲ್ಲಿ ದ್ವಿಜೇಂದ್ರರಾಯರ ಮೂರ್ತಿ ಎಷ್ಟು ಹೊತ್ತಿನಿಂದ ಬಂದು ನಿಂತಿತ್ತೋ, ಇಬ್ಬರಿಗೂ ತಿಳಿಯದು. ಅಧೋಮುಖರಾಗಿ ಕಂಪಿಸುತ್ತ ನಿಂತೆವು. ಅದೆಷ್ಟೋ ವೇಳೆ ಮೌನದಲ್ಲಿ ಕಳೆದುಹೋಯಿತು.

"ರವೀಽಽ.." ಮೇಲಕ್ಕೆ ಮುಖವೆತ್ತಿ ದ್ವಿಜೇಂದ್ರರೆಡೆಗೆ ನೋಡಿದೆ. ಅವರ ಅಗಿನಂತಹ ಸೌಮ್ಯ-ಗಂಭೀರ ವದನವನ್ನು ನನ್ನಾಯುಷ್ಯದಲ್ಲಿಯೆ ಅಂದು ಮೊದಲು ಕಂಡೆ. 'ವಿಶ್ರಾಂತಿಯು ವೇಳೆ ಮೀರುತ್ತ ಬಂದಿತು, ಹೋಗು ಮಲಗಿಕೊಳ್ಳು.!'

"ಪ್ರತಿನುಡಿಯಬೇಕೆಂದರೆ ಜಾಯಿಯೊಣಗಿತ್ತು. ಹೊರಗಿನ ಕೋಣೆಯಲ್ಲಿ ಮಲಗಿದೆನಷ್ಟೇ. ನಿದ್ರೆ ಹೇಗೆ ತಾನೇ ಬಂದೀತು. ಬೇಡಬೇಡವೆಂದರೂ ಮನಸ್ಸು ಹಿಂದಿನ ಘಟನೆಗಳನ್ನು ಮೆಲುಕು ಹಾಕುತ್ತಿತ್ತು. ದ್ವಿಜೇಂದ್ರರ ಮಾತಿನ ನೆನಪಾಗಿ ನೀರು ಕಣ್ಣು ತುಂಬಿ ಹೊರಸೂಸಿತು. ಮನಸ್ಸು ಏನನ್ನೋ ನೆನೆಯಿತು. ಸಾವಕಾಶವಾಗಿ ಎದ್ದು ದ್ವಿಜೇಂದ್ರರ ಹೆಸರಿನಿಂದ ಪತ್ರವೊಂದನ್ನು ಬರೆದಿಟ್ಟು ಮನೆಯಿಂದ ಹೊರಬಿದ್ದೆ. ತಿಂಗಳಿನ ಬೆಳಕು ಅಲ್ಲಾದಕಾರವಾಗಿತ್ತು; ವೇಳೆ ಪ್ರಶಾಂತವಾಗಿತ್ತು; ಆದರೂ ಅಶಾಂತವಾದ ನನ್ನ ಮನಸ್ಸಿಗೆ ಅನ್ವಗಳನ್ನು ಕಾಣುವ ಹಂಬಲೆಲ್ಲಿಯದು? ರೈಲ್ವೆ ನಿಲ್ದಾಣಕ್ಕೆ ಹೋಗಿ, ಉತ್ತರದಿಕ್ಕಿಗೆ ಹೊರಡುವ ಮೊದಲ ಗಾಡಿಯನ್ನೇರಿದೆ. ಗಾಡಿ ಕೂಗಿ ಹೊರಟಾಗ ಮನದೆದುರಿಗೆ ಹಿಮವಂತನ ಸಾಲುತಿವಿರಗಳ ಚಿತ್ರ ಸುಳಿದುಹೋಯಿತು."

ಬ್ರಹ್ಮಾನಂದರು ಮಾತು ಮುಗಿಸಿ ಚಂದಿರನೆಡೆಗೆ ದೃಷ್ಟಿಸುತ್ತ ಕುಳಿತರು. ಅಲೋಕ, ಬ್ರಹ್ಮಾನಂದರ ಮುಖವನ್ನೀಕ್ಷಿಸುವುದರಲ್ಲಿ ಮೈಮರೆತಿದ್ದ. ನಸುಕಿನ ತಂಗಾಳಿ ಬಿಟ್ಟಾಗಲೆ ಗುರುತಿಷ್ಯರಿಗೆ ಎಚ್ಚರಾಗಿ ನಿವಾಸಸ್ಥಾನದೆಡೆಗೆ ಹೊರಡಲನುವಾದರು.

* * * *

ಅಂದು ಸಂಜೆ ಪ್ರವಚನಕ್ಕಾಗಿ ನೆರೆದ ಜನ ನಿರುತ್ಸಾಹಿತರಾಗಿ ಮನೆಯ ಕಡೆಗೆ ತೆರಳಬೇಕಾಯಿತು. 'ಇನ್ನೆರಡು ದಿನ ಬ್ರಹ್ಮಾನಂದರು ಸಮಾಧಿಸ್ಥರಾಗಿರುವರು' ಎಂಬ ವಾರ್ತೆಯನ್ನು ಅಲೋಕಾನಂದರು ಕೂಡಿದ ಜನರಿಗೆ ಅರುಹಿದರು.

ಹೊಸ ಹುಟ್ಟು *

(ಸಣ್ಣ ಕತೆ)

ಶ್ರೀ. ವಿ. ಸಿ. ಹಿತ್ತಮನಿ, ಒಕ್ಕಲುತನದ ಕಾಲೇಜು, ಪುಣೆ

ಸಾಯುವುದಕ್ಕೆಮೊದಲು ಮನದ ಆಶೆಯೊಂದನ್ನು ಪೂರಯಿಸಿಕೊಳ್ಳಲು ಸ್ವಾಮಿನಾಥ ನರಕಕೂಪದಲ್ಲಿ ಇಳಿಯಲಿಕ್ಕೆ ಹೋಗಿದ್ದ. ಅಲ್ಲಿಯ ಕರುಣಾಭೀಕರ ಚಿತ್ರಗಳನ್ನು ಕಂಡು ಸಾಯಬಾರದೆಂದು ನಿರ್ಣಯಿಸಿದ.

★

ನಿರ್ಜನವಾದಂತಿದ್ದ ಬೀದಿ. ಅಲ್ಲೊಂದು ಇಲ್ಲೊಂದು ನಗರಸಭೆಯವರ ವಿದ್ಯುದ್ದೀಪಗಳು ಉರಿಯುತ್ತಿದ್ದರೂ, ಬೀದಿ ಕತ್ತಲೆಯಿಂದಲೇ ತುಂಬಿದಂತಿತ್ತು. ಆ ಬೀದಿಯಲ್ಲಿ ಕಾಲಿಟ್ಟೊಡನೆಯೆ ಸ್ವಾಮಿನಾಥನಿಗೆ ಮೊದಲು ಎದುರಾದವನು ಒಬ್ಬ ಹಿಂದೀ ಸೈನಿಕ! ತೂಗಾಡುತ್ತ ಬರುತ್ತಿದ್ದನು. ಕುಡಿದ ಹೆಂಡದ ಅಮಲು ನೆತ್ತಿಗೇರಿಬಿಟ್ಟಿತ್ತು! ಹೊಲಸು ನಾರುತ್ತಿದ್ದನು. ಹರಕು ಮುರುಕು ಹಿಂದಿಯಲ್ಲಿ ಅದಾವುದೋ ಪ್ರೇಮಗೀತ ಹಾಡುತ್ತ, ಬೀದಿಯ ಮೇಲೆಯೆ ಉಯ್ಯಾಲೆಯನ್ನೇರಿ ನಡೆದಿದ್ದನವನು! ಸ್ವಾಮಿನಾಥ ಐದೆರಡು ಹೆಜ್ಜೆ ಮುಂದೆ ಇಟ್ಟಿದರಿಲ್ಲ; ಪಕ್ಕದ ಮನೆಯ ಬಾಗಿಲನ್ನು ತೆರೆದ ಸದ್ದಾಯಿತು; ಇಬ್ಬರು—ಆಂಗ್ಲಾಲಿನಿಂದ ನಡುನೆತ್ತಿಯ ವರೆಗೆ ಆಂಗ್ಲೇಯರ ಉಡುಪಿನಲ್ಲಿ—ಆ ಮನೆಯಿಂದ ಹೊರಬಿದ್ದರು. ನೋಡಲಿಕ್ಕೆನೋ ಸುಶಿಕ್ಷಿತರಂತೆ ಕಾಣುತ್ತಿದ್ದರು. ಗಹಗಹಿಸಿ ನಗುತ್ತಿದ್ದರವರು; ಹೆಣ್ಣುಮಗಳೊಬ್ಬಳು ಅವರನ್ನು ಬೀಳ್ಕೊಟ್ಟು "Good night" ಎಂದು ಹೇಳಿ ಒಂದು ಕೈತ್ರಿವು ನಗೆ ನಕ್ಕಳು. ಆಕೆ 'Good night' ಶಬ್ದ ಉಚ್ಚರಿಸಿದುದರ ಮೇಲಿಂದ ಆಕೆಯು ಸಂಸ್ಕೃತಿಯನ್ನು ಅಳೆಯಬಹುದಾಗಿತ್ತು. "Good night darling!" ಎಂದು ಹೇಳಿ ಅವರು ಪಾವಟಿಗೆಗಳನ್ನು ಇಳಿದು ಬೀದಿಗೆ ಬಂದರು. ಆಕೆ ಅದಾವುದಕ್ಕೂ ಲಕ್ಷ್ಯ ಹಾಕದ ಬಗಲೆ ಒಳಗೆ ಹೋಗಿಬಿಟ್ಟಿದ್ದಳು. ಅಲ್ಲಿಯ ಪಕ್ಕದಲ್ಲಿ ಗಟಾರದ ಬದಿಯಲ್ಲಿ ಒಬ್ಬನು ಬಿದ್ದುಕೊಂಡು ಬಡಬಡಿಸುತ್ತಿದ್ದನು. ಅವನ ಮಾತುಗಳ ಮೇಲಿಂದ ಅವನೊಬ್ಬ 'ರಿಕ್ಷಾ' (Riksha) ಹೊಡೆಯುವವನೆಂದು ಹೇಳಬೇಕು. ಅವನೂ ನೆತ್ತಿಗೇರುವಷ್ಟು ಕುಡಿದಿದ್ದಾನೆ! ತಾನು ಆ ದಿವಸ ದುಡಿದ ದುಡ್ಡಿನ ಬಗೆಗೆ ಮಾತನಾಡಿ, ರಿಕ್ಷಾ ಹತ್ತಲಿಕ್ಕೆ ಜನರನ್ನು ಕರೆಯುತ್ತಿದ್ದಾನೆ. ಮತ್ತೆ ಮನೆಯಲ್ಲಿಯ ಹೆಂಡತಿ-ಮಕ್ಕಳನ್ನು ಜಾಯಿಗೆ ಬಂದಂತೆ ಬೈದರಿಸುತ್ತಿದ್ದಾನೆ! ಯಾವುದೋ ಹೆಣ್ಣನ್ನು ತನಗೆ ತಿಳಿದ ಪ್ರೇಮದ, ಕರಗಳಿಂದ ಕೂಗುತ್ತಿದ್ದಾನೆ. ಕೈಯಲ್ಲಿ ಎರಡು ರೂಪಾಯಿಯ ನೋಟುಹಿಡಿದು, ಅದನ್ನು ಯಾರಿಗೋ ಕೊಡುವ ನೆಂಬಂತೆ ಅಲಾಗ ಚಾಚುತ್ತಾನೆ. ಇನ್ನೂ ಅವನು ತನ್ನ ಗುರಿಯ ಮಾರ್ಗದಲ್ಲರಬೇಕು. ಆಗಲೇ ಹಿಂದಿನಿಂದ ಬಂದ ಒಬ್ಬ ನಡುವಯಸ್ಸಿನವನು ಹಿಂದು ಮುಂದು ನೋಡಿ, ಪಕ್ಕಕ್ಕೆ ಹೊರಳಿ, ಬಾಗಿಲನ್ನು ತಳ್ಳಿ, ಒಂದು ಮನೆಯನ್ನು ಹೊಕ್ಕನು. ಬೀದಿಯ ಮುಂದ ಬೆಳಕಿನಲ್ಲಿ ಅವನ ತಲೆಯ ಮೇಲಿನ ಜರದ ರುಮಾಲು ಮತ್ತು ಕೈಯೊಳಗಿನ ಉಂಗುರಗಳು ಥಳಥಳಿಸುತ್ತಿದ್ದುವು! ಮರುಕ್ಷಣದಲ್ಲಿ ಮಗ್ಗುಲ ಮನೆಯಲ್ಲಿ ಯಾರನ್ನೋ ಬಡಿದು ದೂಡುತ್ತಿರುವಂತೆ ಸಪ್ಪಳವಾಯಿತು! ಬಾಗಿಲು ತೆರೆದು ಒಬ್ಬ ಹೆಂಗುಸು ಗಂಡುಸೊಬ್ಬನನ್ನು ಜಂಡಿಗೆ ಕೈಹಾಕಿ, ಬೀದಿಗೆ ಬೆಕ್ಕಿನ ಮರಿಯನ್ನು ಜಲ್ಲಿಕೊಡುವಂತೆ ನೂಕಿಬಿಟ್ಟಳು. ಕುಡಿದು ಜೋಲಿಹಾಕುತ್ತಿದ್ದ ಅವನು ಅಲ್ಲಿಂದ ಎದ್ದು ಬಂದು, ಬಂದು-ಮಾಡಿದ ಜಾಗಿಲನ್ನು ಬಡಿಯುತ್ತ ಬಗೆಬಗೆಯಾಗಿ ಅಂಗಲಾಚಿದನು; ಆಕೆ ಒಳಗಿನಿಂದಲೇ ಏನೇನೋ ಉತ್ತರಿಸಿದಳು. ಪಾವಟಿಗೆಗಳ ಮೇಲೆ ಬಿದ್ದು ಯಾರನ್ನೋ ಶಪಿಸಹತ್ತಿದನವನು. ಆ ಸುಶಿಕ್ಷಿತ ತರುಣರಲ್ಲಿ ಒಬ್ಬನು ಅವನ ಕಡೆಗೆ ಬ್ಯಾಟರಿ ಹಿಡಿದು 'Oh! you rascal!' ಎಂದ; ಮುಂದೆ ನಡೆದರು ಸ್ವಾಮಿನಾಥ ಅಲ್ಲಿಯೆ ಬಂದು ಕ್ಷಣ ತಡೆದಿದ್ದನು. ಬ್ಯಾಟರಿಯ ಬೆಳಕು ಮರುಕ್ಷಣದಲ್ಲಿ ಸ್ವಾಮಿನಾಥನ ಮೋರೆಯ ಮೇಲೆ ಬಿತ್ತು! ಎರಡನೆಯವನು ಜಾಗ 'Yong handsome chap!' ಎಂದನು. ಮೊದಲನೆಯವನು 'Some new face!' ಎಂದ; ಒಂದು ದೇಶಾವರಿ ನಗೆ ನಕ್ಕ. ಬಿರಬಿರನೆ ನಡೆದುಬಿಟ್ಟರು. ಮೂಲೆಯಲ್ಲಿಯ ಮನೆಯೊಂದರಿಂದ ಪೋಲೀಸಿನವನೊಬ್ಬನು ಹೊರಬಿದ್ದನು. ಸ್ವಾಮಿಗೆ ಅವನನ್ನು ಕಂಡು ಅಂಜಿಕೆಯುಂಟಾಯಿತು. ಆದರೆ ಪೋಲಿಸನೇ ಆಗ ಇನ್ನೊಬ್ಬರಿಗೆ ಅಂಜುವ ಸ್ಥಿತಿಯಲ್ಲಿದ್ದ. ಅವನೇಕಳ್ಳನಂತೆ ಸ್ವಾಮಿನಾಥನನ್ನು ಕಂಡು ಅಂಜಿ ಸರಿದುಹೋದನು. ಇನ್ನೂ ಇಂತಹ ಎಷ್ಟೋ ಜನರನ್ನು ಅಲ್ಲಿ ಸ್ವಾಮಿನಾಥ ಕಂಡುದು!

ಬೀದಿಯ ಎರಡೂ ಬದಿಗಳಲ್ಲಿ ಎರಡೆರಡು, ಮೂರು ಮೂರು ಅಂತಸ್ತಿನ ಮನೆಗಳು ಪ್ರತಿಯೊಂದು ಮನೆಯ ಕಿಟಕಿಗಳು ತೆರೆದಿದ್ದುವು. ಒಂದೊಂದು ಕಿಟಕಿಯಲ್ಲಿಯೂ ಒಬ್ಬೊಬ್ಬ ಹೆಂಗುಸು ಕುಳಿತಿದ್ದಳು. ಅವರೆಲ್ಲ ಬೆಡಗು-ಬಿನ್ನಾಣದ ನುಡಿಯಲ್ಲಿ ಕೆಳಗೆ ಹೋಗುವವರನ್ನು ಕರೆಯುತ್ತಿದ್ದರು. ಸ್ವಾಮಿನಾಥನನ್ನು ಹತ್ತಾರು ಹೆಣ್ಣುಗಳು ಒಮ್ಮೆಲೇ ಕೂಗಿದುವು. ಎಲ್ಲ ಭಾಷೆಗಳ ಕರೆಗಳೂ ಅವನ ಕಿವಿಗೆ ಬೀಳುತ್ತಿದ್ದುವು. ಯಾವ ಕಡೆಗೆ ಹೋಗಬೇಕೆಂಬುದು ತಿಳಿಯದೆ ಸ್ವಾಮಿ ದಿಗ್ಭ್ರಾಂತನಾದನು

*ಮೇಲಾಟದಲ್ಲಿ ಮನೆಯ ಸ್ಥಾನ ಪಡೆದ ಕತೆಯಿದು.

ಒಂದೆರಡು ಹೆಜ್ಜೆ ಹಾಗೆಯೆ ಮುಂದೆ ನಡೆದನು. ಯಾವಳೋ ಮೇಲಿನಿಂದ ಶಂಬಾಕು ಜಿಗಿಯುತ್ತಿದ್ದವಳು ಉಗುಳಿಬಿಟ್ಟಳು; ಸುದ್ದಿವದಿಂದ ಅದು ಅವನ ಪಕ್ಕದಲ್ಲಿ ಬಿತ್ತು. ಆಕೆಯ ಬಳಿಗೆ ಬರಲಿಲ್ಲವೆಂದ ಮೇಲೆ ಆಕೆಗೇನು? ಕಿಟಕಿಗಳಲ್ಲಿ ಮುಂದ. ಪ್ರಕಾಶದಲ್ಲಿ ಅವರು ಕುಳಿತ ದೃಶ್ಯ, ನಿರ್ಲಜ್ಜೆಯಿಂದ ಮಾತನಾಡುವ ಪರಿ, ಬೀಭತ್ಸ ನಗೆ, ಅವರ ಆಕಾರ ಎಲ್ಲವನ್ನೂ ನೋಡಿ ಸ್ವಾಮಿಗೆ 'ಇಸ್ಸೀ' ಎನಿಸಿತು; ಅಲ್ಲಿಂದ ಒಂದು ಸಲ ಪಾರಾಗಿ ಹೋದರೆ ಅವನಿಗೆ ಸಾಕಾಗಿ ಹೋಗಬಹುದಾಗಿತ್ತು. ಹಿಂದಕ್ಕೆ ಹೊರಳಿ ನಡೆದು, ಬಂದ ದಾರಿಯಿಂದ ಬರಬರನೆ ಹೋಗಿಬಿಡಬೇಕೆಂದು ತಿರುಗುವುದರಲ್ಲಿದ್ದನು. ಪಕ್ಕದ ಮನೆಯಲ್ಲಿ ಯಾರೋ ಪಾವಟಿಗೆಗಳನ್ನು ಇಳಿದು ಬರುವ ಸದ್ದಾಯಿತು; ಮುಂದೆ ವೇಗವಾಗಿ ನಡೆದುಬಿಟ್ಟನು. ಆಕೆ ಬಾಗಿಲನ್ನು ತೆಗೆದು ಒಮ್ಮೆ ಕೂಗಿದಳು. ಸ್ವಾಮಿನಾಥ ಆ ಕಡೆಗೆ ಲಕ್ಷ್ಯಕೊಡಲಿಲ್ಲ; ಆಡ ಬಾರದ ಮಾತುಗಳನ್ನು ಆಡಿ ಆಕೆ ಮತ್ತೆ ಮೇಲೆ ಹೋಗಿಬಿಟ್ಟಳು. ಮತ್ತೆ ಕೆಲನರು, ಇವನ ಸಲುವಾಗಿಯೆ ತಮ್ಮತಮ್ಮಲ್ಲಿ ಬಡಿದಾಡುತ್ತಿದ್ದರು. ಅವರು ತನಗಾಗಿ ಉಪಯೋಗಿಸುತ್ತಿದ್ದ ಹೊಲಸು ನುಡಿಗಳನ್ನು ಕೇಳಿ ಸ್ವಾಮಿಗೆ ಕಿವಿ ಮುಚ್ಚುಕೊಳ್ಳುವಂತಾಯಿತು. 'ಒಮ್ಮೆ ಈ ಬೀದಿಯನ್ನು ದಾಟಿ ಮುಂದೆ ಹೋದರೆ ಸಾಕು!' ಎನಿಸಿತು. ಇಂಥಲ್ಲಿ ತನ್ನ ಮನದಾಶೆಯನು ತೃಪ್ತಿ ಮಾಡಿಕೊಳ್ಳುವುದು ಅವನಿಗೆ ಖಂಡಿತವಾಗಿಯೂ ಬೇಕಾಗಿರಲಿಲ್ಲ. ಹಾಗೆಯೆ ಮುಂದೆ ನಡೆದನು. ಅದು ಮೊಂಡಬೀದಿ ಎಂಬುದು ಅವನಿಗೇನು ಗೊತ್ತು? ಮುಂದೆ ಹೋಗಲು ಮಾರ್ಗವೇ ಇರಲಿಲ್ಲ. ಎದುರಿನಲ್ಲಿ ಒಂದು ಮನೆಯಿತ್ತು. ಅಲ್ಲಿಯೇ ದೀಪದ ಕಂಬದ ಬಳಿಯಲ್ಲಿ ಒಂದು ಕ್ಷಣ ನಿಂತನು; ತುಂಬಾ ಸೋತವನಂತಿದ್ದನು ಅವನು. 'ಆದದ್ದಾಗಲಿ, ತಿರುಗಿ ಹೋಗುವುದೇ!' ಎಂದು ತಿರುಗಿ ನಡೆಯುವುದರಲ್ಲಿದ್ದನು. ಆ ಮನೆಯಿಂದ ನಾಲ್ವತ್ತಕ್ಕೆ ಮಿಕ್ಕಿದ ಹೆಂಗುಸೊಬ್ಬಳು ಹೊರಗೆ ಬಂದು, ನಗುನಗುತ್ತ ಕೈಹಿಡಿದು, ಬಲವಂತದಿಂದ ಒಳಗೆ ಕರೆದೊಯ್ದಳು. ಒಮ್ಮೆ ಪ್ರತಿಭಟಿಸಬೇಕೆಂದನು; ಆದರೆ ಹಾಗೆ ಮಾಡಲಿಲ್ಲ. ಆಕೆ ಮಗುವನ್ನು ಪ್ರೀತಿ-ವಾತ್ಸಲ್ಯಗಳಿಂದ ಕರೆದೊಯ್ಯುವಂತೆ ಕೊಂಡೊಯ್ದಳು! ಆ ಆಕಾರಾಳ ಎಕಾರಾಳ ದೇಹ, ಕರಿಯ ಮುಖಕ್ಕೆ ಮೆತ್ತಿದ ಬಣ್ಣ, ಒರಟು ನುಡಿ ಇವುಗಳನ್ನೆಲ್ಲ ನೋಡಿ ಅವನಿಗೆ ತೀರ ಅಸಹ್ಯವೆನಿಸಿತು. ಯಾಂತ್ರಿಕವೆಂಬಂತೆ ಕೂಡ! ಒಳಗಿನ ದೃಶ್ಯ ಇನ್ನೂ ಭಯಂಕರ. ಆಕೆಯೊಡನೆ ನಡೆದನು. ಒಳಗಿನ ದೃಶ್ಯ ಇನ್ನೂ ಭಯಂಕರ. ವಾಗಿತ್ತು! ಅದೊಂದು ವಸತಿಗೃಹದಂತೆನಿಸಿತು ಅವನಿಗೆ. ಅಲ್ಲಲ್ಲಿ ಮುಂಜಗಳಿದ್ದುವು; ಒಂದೊಂದು ತಿರುಪರದೆಗಳು ನಾಲ್ಕು ಎರಡು ಬಣ್ಣ ಬಡಿದುಕೊಂಡಂತೆ ಮುಚ್ಚಿ ಹೋಗುವುದೆಂದು ತೀರಿದವು ಮುಂಜಗಳ ನಡುವೆ !! ಒದರಾಟ, ಚೀರಾಟ, ಭೀಕರ ನಗು, ತ್ರೀಯಾ? ಆ ಬಣ್ಣ ನಿನ್ನ ಮುಖದ ಕಪ್ಪನ್ನು ಮರೆಯಿಸಬೇಸಿ ಮಾತು ಕೇಳಬರುತ್ತಿದ್ದುವು. ಎಷ್ಟೋ ಜನರು ಒಳಗಿ ಬಹುದು; ಆದರಲ್ಲಿ ಮೂಡಿದ ಮುದಿತನದ ಗೆರೆಗಳನ್ನು ಮುಚ್ಚಿನಿಂದ ಕೆಳಗೆ ಮುಖ ಹಾಕಿಕೊಂಡು ಹೊರಬಿದ್ದುದು ತೋರಿ ಲಾರದು..ನಿನಗೊಬ್ಬ ಮಗನಿದ್ದಾನಾದರೆ ಅವನಿಗೂ ನಿನ್ನಷ್ಟೇ ಬರುತ್ತಿತ್ತು. ಅದೆಂತಹ ದೃಶ್ಯಗಳು!! ಎಷ್ಟೋ ಯುವತಿ- ವಯಸ್ಸಿರಬೇಕು....ಇಂಥ ನಿನ್ನೊಂದಿಗೆ ರಮಿಸಲು ನಾನು

ಯರು ಅರೆಬೆತ್ತಲೆಯರಾಗಿದ್ದರು. ಒಂದಿಬ್ಬರು ಮೈಮೇಲೆ ಪರಿವೆಯಿಲ್ಲದೆ ಗಂಡುಸರನ್ನು ತಕ್ಕೆಯಲ್ಲಿ ಹಾಕಿಕೊಂಡೇ ಹಣ್ಣು ಯಿಕ್ಕಿ ನೋಡುತ್ತಿದ್ದರು. ಕೆದರಿದ ಕೂದಲುಗಳ ಪರಿವೆಯಿಲ್ಲ; ಮೈಮೇಲಿನ ಸೀರೆ ಕಳಚಿ, ಕುಪ್ಪುಸ ಓರೆಯಾದ ಪರಿವೆಯಿರಲಿಲ್ಲ. ಅನೇಕ ಹೆಣ್ಣುಗಳು ಅವನ ಮಾರ್ಗದಲ್ಲಿ ನಿಂತು ಕಿಲಕಿಲನೆ ನಕ್ಕು ಮುಖತಿರುಗಿಸಿ ಮುರುಕ ಮಾಡಿದರು. ಸ್ವಾಮಿಯೊಬ್ಬ ನ್ಯಾಯಾಸ್ಥಾನಕ್ಕೆ ಹೋಗುವ ಅಪರಾಧಿಯಂತಾಗಿದ್ದನು. ಆಕೆ ಒಂದು ಕೋಣೆಗೆ ಬಯ್ದು ಅಲ್ಲಿ ಒಂದು ಕಬ್ಬಿಣದ ಮುಂಜದ ಮೇಲೆ ಕೂಡ್ರಿಸಿ, ಪಕ್ಕದಲ್ಲಿ ತಾನೂ ಕುಳಿತಳು. ಆಗ ಅವನಿಗೆ ತಡೆಯುವುದಾಗಲಿಲ್ಲ; ತುಂಬಾ ಕೋಪ ಬಂದುಬಿಟ್ಟಿತ್ತು. ಸರಿದು ಮುಂಜದ ತುದಿಗೆ ಕುಳಿತನು. ಇವನನ್ನು ನೋಡಿ ಆಕೆ ಗಹಗಹಿಸಿ ನಕ್ಕಳು. ಎದ್ದು ನುಂದವಾದ ದೀಪದ ಬತ್ತಿಯನ್ನು ಏರಿಸಿದಳು. ಬೆಳಕಿನಲ್ಲಿ ಸ್ವಾಮಿಯನ್ನು ಚೆನ್ನಾಗಿ ನೋಡಿದಳು. ಅವನ ರೂಪ, ಕಂಗಳಲ್ಲಿಯು ಕಾಂತಿ, ದೇಹದ ಕಟ್ಟು, ಮುಖದ ಮೇಲಿನ ಸುಸಂಸ್ಕೃತಿಯ ಗುರುತುಗಳನ್ನೆಲ್ಲ ಕಂಡು ಒಂದಿನಿತು ಬೆದರಿದಳು. ಅಂಥವರಾರೂ ಒಮ್ಮೆಯೂ ಅಲ್ಲಿಗೆ ಒಂದಿರಲಿಲ್ಲ. ನಮ್ರತೆಯಿಂದ ಕೇಳಿದಳು:

"ಹಂಗಾರಽ ನೀವು ತಪ್ಪಿ ಬಂದಿರೇನು ಇಲ್ಲಿಗೆ?"

ಸ್ವಾಮಿನಾಥನಿಗೆ ಒಂದಿಷ್ಟು ಧೈರ್ಯ ಬಂದಿತು— ಆಕೆಯ ವಿನಯದ ನುಡಿಯಿಂದ.

"ಇಲ್ಲ! ಬರಬೇಕೆಂದೇ ಬಂದಿದ್ದೇನೆ..."

"ಅಂದವ್ಯಾಽ ಇವ್ವಾ ಽಕಽ...." ಅರ್ಧಕ್ಕೇ ಮಾತು ನಿಲ್ಲಿಸಿ ನಕ್ಕು ನಟನೆಗೆ ಮೊದಲು ಮಾಡಿದಳು. ಅಂಥ ವಯಸ್ಸಿನಲ್ಲಿಯೂ ಆಕೆ ತೋರುವ ಲಯ್ಯಾರಿ, ಮುಖಕ್ಕೆ ಬಳಿದುಕೊಂಡ ಪಾವಡರು, ತುಟಿಗೆ ಮೆತ್ತಿಕೊಂಡ ಜೆಂಬಣ್ಣ, ತಲೆಗೆ ಸುರುವಿಕೊಂಡ ಎಣ್ಣೆ, ಆ ಕೋಣೆಯಲ್ಲಿ ತೂಗುಹಾಕಿದ ನಗ್ನ ಪ್ರಣಯ ಚಿತ್ರ ಇತ್ಯಾದಿಗಳನ್ನು ಕಂಡು ನಿಸ್ಸಾರವಾಗಿ ನುಡಿದನು:

"ಬರಬೇಕೆಂದೇ ಬಂದೆ! ಆದರೆ...."

"ಆದರೆ?...." ಹುಬ್ಬು ಹಾರಿಸಿ, ಕೋಲು ಕೊಂಕಿಸಿ ಕೈಯಲ್ಲಿಯ ಹಣೆಗಯಿಂದ ತನ್ನ ಕೂದಲುಗಳನ್ನು ನೇವರಿಸುತ್ತ ಕೇಳಿದಳು:

"ಹೀಗೆಲ್ಲಾ ಇರುತ್ತದೆಂದು ನಾನು ಕಲ್ಪಿಸಿರಲೂ ಇಲ್ಲ"

"ಹೇಂಗೆಲ್ಲಾ ಅಂದ್ರುಽ.."

"ತಿಳಿಯುವುದಿಲ್ಲವೇ? ನಿನಗೆ ವಯಸ್ಸಾಗಿದ್ದು ಮುಖಕ್ಕೆ ಮುಚ್ಚಿ ಹೋಗುವುದೆಂದು ತೀರಿದ್ದು ತ್ರೀಯಾ? ಆ ಬಣ್ಣ ನಿನ್ನ ಮುಖದ ಕಪ್ಪನ್ನು ಮರೆಯಿಸಬೇಸಿ ಮಾತು ಕೇಳಬರುತ್ತಿದ್ದುವು. ಎಷ್ಟೋ ಜನರು ಒಳಗಿ ಬಹುದು; ಆದರಲ್ಲಿ ಮೂಡಿದ ಮುದಿತನದ ಗೆರೆಗಳನ್ನು ಮುಚ್ಚಿನಿಂದ ಕೆಳಗೆ ಮುಖ ಹಾಕಿಕೊಂಡು ಹೊರಬಿದ್ದುದು ತೋರಿ ಲಾರದು..ನಿನಗೊಬ್ಬ ಮಗನಿದ್ದಾನಾದರೆ ಅವನಿಗೂ ನಿನ್ನಷ್ಟೇ ಬರುತ್ತಿತ್ತು. ಅದೆಂತಹ ದೃಶ್ಯಗಳು!! ಎಷ್ಟೋ ಯುವತಿ- ವಯಸ್ಸಿರಬೇಕು....ಇಂಥ ನಿನ್ನೊಂದಿಗೆ ರಮಿಸಲು ನಾನು

ಬಂದಿಲ್ಲ.... ಮನಸ್ಸಿನ ಆಶೆಯನ್ನೇನೋ ತಣಿಸಿಕೊಳ್ಳಲು ಬಂದಿದ್ದೇನೆ; ಇದರೆ ನಿನ್ನಂತವಳಲ್ಲಿ ಅದು ತಣಿಯಲಾರದೆಂದು ನನಗೆ ಖಂಡಿತವಾಗಿದೆ....ಅದಿರಲಿ! ಇನ್ನೊಂದು ಕ್ಷಣವೂ ಇಲ್ಲಿ ನಿಲ್ಲಲಾರೆ....ನಿನಗೆಷ್ಟು ಕೊಡಬೇಕು ಹೇಳು... " ಎದ್ದುನಿಂತನು.

ಅಳೆಗೂ ಕೋಪ ಬಂದಿತ್ತು. ಎದುರಿನಲ್ಲಿಯೆ ಮುಖಭಂಗ ಮಾಡರೆ ತಾಳಿಕೊಳ್ಳುವಷ್ಟು ತಾಳ್ಮೆ ಅಳೆಯಲ್ಲಿ ಇರಲಿಲ್ಲ.

" ಸಾಧ್ಯವಿರದಿದ್ದರ ಹೊಂಟು ಹೋಗು! ನಾನೇನು ನಿನ್ನ ಕಟ್ಟಿಹಾಕಿಲ್ಲ. ಮ್ಯಾಲಾಗಿ ನಾನೇನು ನಿನ್ನ ಕೈಕಾಲು ಬಿದ್ದು ಕರತಂದಿಲ್ಲ. ಅಲ್ಲದಽ ನಿನ್ನೊಬ್ಬನ ಮ್ಯಾಲಽ ನಾ ಬದುಕಬೇಕಾಗಿಲ್ಲ. ನಿನ್ನಂತವರು ಸಾವಿರಾರು ಮಂದಿ ದಿನಾ... "

" ಆದಿರಲಿ ನಿನ್ನ ಪುರಾಣ; ಎಷ್ಟು ಹೇಳು ಬೇಗ!" ಹೊರಟೇ ನಿಂತನು.

ಅಳೆ ಒಂದಿನಿತು ಸ್ಥಿಮಿತಕ್ಕೆ ಬಂದು, ಪತ್ತಿರ ಕರೆದು ಹೇಳಿದಳು:

" ಹೆಚ್ಚಿಗೆ ಕೊಡಬೇಕಾಗತೈತಿ ಅಂದಮ್ಯಾಲ—"

" ಏನನ್ನು ಹೆಚ್ಚಿಗೆ ಕೊಡುವುದು? ಯಾತಕ್ಕಾಗಿ?"

" ಇನ್ನೊಬ್ಬಾಕಿಗೆ; ಅಕೀನ್ನಽ ಕಳಸತೇನಿ ಇಲ್ಲೇ—ಕುಳಿತಿರ್ರಿ." ಅಳೆ ಹೊರಗೆ ಹೋಗುವುದರಲ್ಲಿದ್ದಳು.

" ಯಾರೂ ಬರಬೇಕಾಗಿಲ್ಲ; ನಾನೇ ಹೋಗುತ್ತೇನೆ" ಸ್ವಾಮಿನಾಥ ಹೊರಟೇ ಬಿಟ್ಟನು; ಅಳೆ ಅವನ ಮಾತಿಗೆ ಕಿವಿಗೊಡದೆ, ಅಗಲೇ ಬಾಗಿಲನ್ನು ಡಾಟ, ಕದಗಳನ್ನು ಮುಚ್ಚಿಕೊಂಡು, ಹೊರಗಿನಿಂದ ಚಿಲಕಹಾಕಿಕೊಂಡು ನಡೆದಿದ್ದಳು.

" ಬರುವವಳೂ ಇಂಥವಳೇ ಇರಬೇಕು; ಇವರ ಸಹವಾಸವೇ ಬೇಡ....ನಾನು ಇಲ್ಲಿಗೆ ಬರಲೇಬಾರದಾಗಿತ್ತು! ಈ ಬಗೆಯಾಗಿ ಮನಸ್ಸಿನಲ್ಲಿ ನಿಶ್ಚಯಿಸದೆ ಈ ದಿನವೇ...." ತನ್ನಷ್ಟಕ್ಕೆ ತಾನೇ ಗೊಣಗಿಕೊಂಡು, ಒಂದು ಸಿಗರೇಟು ಹಚ್ಚಿದನು. ಒಂದು ಉರಿಯಿತು; ಎರಡು ಮುಗಿಯಿತು; ಬಾಗಿಲನ್ನೂ ತೆರೆಯಲಿಲ್ಲ, ಯಾರೂ ಬರಲಿಲ್ಲ. ಇಡಿಯ ಕೋಣೆ ಸಿಗರೇಟಿನ ಹೊಗೆಯಿಂದ ಮುಸುಕಿಬಿಟ್ಟಿತು. ಒಂದು ಕ್ಷಣ ಅವನಿಗೆ ಆ ಸ್ಥಳ ಅಪಾಯಕರವಾಗಿ ತೋರಿತು; ಆದರೂ ಹೆದರಲಿಲ್ಲ. 'ತೊಯಿಸಿಕೊಂಡವನಿಗೆ ಮಳೆಯ ಅಂಜಿಕೆ ಎಲ್ಲಿಯದು?' ತಾನು ಬಯಸಿದುದೇನು? ನಡೆದುದೇನು? ಒಂದೂ ತಿಳಿಯಲಿಲ್ಲ. ಬಗೆಬಗೆಯಾಗಿ ಚಿಂತಿಸಿದನು. ಚಿಂತಿಸುವುದಾದರೂ ಏನು? ಅದೇ ವಿಷಯ! ಅದೇ ನಿರ್ಧಾರ!!

* * * *

ಸ್ವಾಮಿ ಆ ವರುಷ ಖಂಡಿತವಾಗಿಯೂ ಬಿ.ಎ. ಪರೀಕ್ಷೆಯಲ್ಲಿ ಮೊದಲನೆಯ ವರ್ಗದಲ್ಲಿ ಪಾಸಾಗಬಹುದಿತ್ತು! ಒಂದು ವೇಳೆ ಮೊದಲು ವರ್ಗ ದೊರೆಯದಿದ್ದರೂ 'ಆನರ್ಸ್' ಸಿಕ್ಕದೆ ಹೋಗುತ್ತಿರಲಿಲ್ಲ; ಇಂಗ್ಲಿಷ 'ಆನರ್ಸ್' ಎಂದರೆ ಕೇಳಬೇಕೆ? ಎಂದಿನಿಂದಲೂ ಅವನ ಅಧ್ಯಾಪಕರದು ಅವನ ಮೇಲೆ ತುಂಬಾ ಪ್ರೀತಿ. ತಮ್ಮ ಶಿಷ್ಯನೊಬ್ಬ ಉದ್ದಾಮ ವ್ಯಕ್ತಿಯಾಗುವನೆಂದು ಅವರಿಗೆ ಹೆಮ್ಮೆ! ಬಿ.ಎ. ಮುಗಿದೊಡನೆ ಹೆಚ್ಚಿನ ಅಭ್ಯಾಸಕ್ಕೆ ಸರಕಾರದಿಂದ ಶಿಷ್ಯವೃತ್ತಿ ದೊರೆಕಿಸಿಕೊಡುವ ಬಗ್ಗೆ ಮಾತನ್ನೂ ಕೊಟ್ಟಿದ್ದರು! ಸ್ವಾಮಿ ಬರಿಯ ಪುಸ್ತಕದ ಹುಳುವಷ್ಟೇ ಆಗಿರಲಿಲ್ಲ. ಕಾಲೇಜಿನ ವಿವಿಧ ಚಟುವಟಿಕೆಗಳಲ್ಲಿಯೂ ಭಾಗ ವಹಿಸುತ್ತಿದ್ದನು. ಭಾಷಣಸ್ಪರ್ಧೆಯಲ್ಲಿ ನಾಲ್ಕು ವರುಷ ಅವನನ್ನು ಸೋಲಿಸಿದವರೇ ಇರಲಿಲ್ಲ. ಜರ್ಜಾಕೂಟದಲ್ಲಿ ಅವನಿಗೂ, ಮಿಕ್ಕಿದವಾತುಗಾರರೆಂದು ಖ್ಯಾತಿಪಡೆದ ಚರಿತ್ರೆಯ ಅಧ್ಯಾಪಕರಿಗೂ ದ್ವಂದ್ವ ಪ್ರಾರಂಭವಾಗಿಬಿಡುತ್ತಿತ್ತು! ಕಾಲೇಜಿನ ಹನ್ನೊಂದು ಕ್ರಿಕೆಟ್ ಆಟಗಾರರಲ್ಲಿ ಒಬ್ಬನಾಗಿದ್ದನು; ಒಂದು ವರುಷ ಕಾಲೇಜಿನ ಪಂದ್ಯಾಟಗಳಲ್ಲಿ ವಿಜಯ ಪಟ್ಟವೂ ದೊರೆತಿತ್ತು! ವಿಶ್ವವಿದ್ಯಾನಿಲಯದ ಪಂದ್ಯಾಟಗಳಲ್ಲಿಯೂ ವಿಜಯಿಯಾಗಿ, ವಿಶ್ವವಿದ್ಯಾನಿಲಯದ 'ನೀಲಿ' ದೊರೆಕಿಸಿದ್ದನು. ವಾರ್ಷಿಕೋತ್ಸವಗಳಲ್ಲಿ ಇಂಗ್ಲೀಷ್, ಕನ್ನಡ ನಾಟಕಗಳೆರಡನ್ನೂ ದಿಗ್ದರ್ಶಿಸಿ, ತಾನೂ ಪಾತ್ರವಹಿಸಿ, ಕಲಾಕೋವಿದನೆಂದು ಎಲ್ಲರ ಮೆಚ್ಚಿಗೆಗೂ ಪಾತ್ರನಾಗಿದ್ದನು. ಸ್ವಾಮಿ ಮೊದಲು ಬರೆಯಲಿಕ್ಕೆ ಮೊದಲು ಮಾಡಿದುದು ಇಂಗ್ಲೀಷಿನಲ್ಲಿಯೆ! ಆಗ ಅವನೊಬ್ಬ ಕನ್ನಡದಲ್ಲಿ ಅತ್ಯುತ್ತಮ ಬರೆಹಗಾರನಾಗಿದ್ದಾನೆ! ಹಿಂದೊಮ್ಮೆ ಇಂಟರಿನಲ್ಲಿರುವಾಗ, ಇಂಗ್ಲೀಷಿನಲ್ಲಿ ಪ್ರಬಂಧವೊಂದನ್ನು ಬರೆದು, ಆಂಗ್ಲೋ ಇಂಡಿಯನರಾದ ತನ್ನ ಅಧ್ಯಾಪಕರಿಗೆ ತೋರಿಸಿದಾಗ, ಅವರು ಇಂಗ್ಲೀಷು ಭಾಷೆಯ ಮೇಲಿನ ತನಗಿರುವ ಪ್ರಭುತ್ವಕ್ಕೆ ಮೆಚ್ಚಿ, ಇವನ ಪ್ರತಿಭೆಗೆ ಮಾರುಹೋಗಿದ್ದರು. ಹಾಗೆಯೇ ಸ್ವಾಮಿಯನ್ನು ತಟ್ಟಿ ಕೇಳಿದರು

" ಸ್ವಾಮಿನಾಥ! ನಿನ್ನ ನುಡಿಯಲ್ಲಿಯೂ ನೀನು ಬರೆಯತ್ತಿರಬಹುದಲ್ಲ?"

" ಇಲ್ಲ ಸರ್!"

" ಆಂ....ಬರೆಯುವುದಿಲ್ಲವೇ?" ಒಂದಿನಿತು ಸೋತುಗೊಂಡು ಕೇಳಿದರು.

" ಒಮ್ಮೆಯೂ ಬರೆದಿಲ್ಲ; ಅಷ್ಟು ಚೆನ್ನಾಗಿ ಬರೆಯಲಾರೆನೆಂದೆನಿಸುತ್ತದೆ...."

ಎಲ್ಲ ಇಂಗ್ಲೀಷ್ ಕಲಿತ ತರುಣರಿಗೆ ಆಂಟಿಕೊಂಡ ಆಲವನಿಗೂ ಅಂಟಿಕೊಂಡಿತ್ತು.

" ಏನಪ್ಪಾ! ನನಗಂತೂ ನಿನ್ನ ಮಾತಿನಲ್ಲಿ ನಂಬಿಗೆ ಸಾಲದಿಲ್ಲ. ಹುಟ್ಟಿದಂದು ಹಿಡಿದು ಸುಮಾರು ಇಪ್ಪತ್ತಕ್ಕೆ ಕಡಿಮೆ ದಷ್ಟು ವರುಷ ನೀನು ಕನ್ನಡದಲ್ಲಿ ಒಡನಾಡಿದ್ದಿ; ನಿನ್ನ ನಿನ್ನನ್ನು ಕನ್ನಡದಲ್ಲಿ ನುಡಿಸಿದ್ದಾಳೆ; ತಂದೆ ಅಕ್ಕರೆಯಗಳನ್ನು ನಿನ್ನೊಂದಿಗೆ ಕನ್ನಡದಲ್ಲಿ ಆಡಿದ್ದಾನೆ; ನಿನ್ನ ಆಟದಲ್ಲಿ ನಿನಗೆ ಜೋಗುಳ ಹಾಡಿದ್ದಾಳೆ; ಅಣ್ಣ ರಮಿಸಿದುದಲ್ಲಿ; ತಂಗಿ-ತಮ್ಮಂದಿರು ನಿನ್ನಲ್ಲಿ ಆಗಾಗ ಕಾಡಿಬೇ

ಕನ್ನಡದಲ್ಲಿ — ನೆರೆಹೊರೆಯವರು ಬೆಳಗಿನಿಂದ ಬೈಗಿನ ವರೆಗೆ ಕನ್ನಡ ಮಾತನಾಡುತ್ತಾರೆ. ಕೇವಲ ಕೆಲವು ವರುಷಗಳ ಪ್ರತಿಫಲ ಇಂಗ್ಲೀಷು ಭಾಷೆ. ಮೇಲಾಗಿ ಪರಕೀಯರ ನುಡಿ. ಅದರಲ್ಲಿಯೇ ಇಷ್ಟೆಲ್ಲ ಸಾಂಡಿತ್ಯ ಪಡೆದಿದ್ದೀಯೆಂದ ಮೇಲೆ ಕನ್ನಡದಲ್ಲಿ ಬರೆಯಲು ಬಾರದೆಂಬ ಮಾತಿನಲ್ಲಿ ಹುರುಳಿಲ್ಲ; ಬರೆಯುವ ಕಲೆಯೇ ಗೊತ್ತಿರದಿದ್ದಲ್ಲಿ ಆ ಮಾತು ಬೇರೆ. ಇದೊಂದು ಈಗಿನ ಕಲಿತ ತರುಣರಿಗೆ ಅಂಟಿಕೊಂಡ ಬೇನೆ. ನೀನು ಪ್ರಯತ್ನಿಸು; ಬರೆಯಬಲ್ಲೆ! ಇಂಗ್ಲೀಷ್ ಸಾಹಿತ್ಯ ಈಗಾಗಲೇ ಅಪಾರವಾಗಿದೆ. ಸಾಕಷ್ಟು ಮಂದಿ ಬರೆಯುತ್ತಿದ್ದಾರೆ. ನಿಮ್ಮ ಸಾಹಿತ್ಯ ಇನ್ನೂ ಬೆಳೆಯಬೇಕಾಗಿದೆ. ಆದಕ್ಕೆ ನಿನ್ನಂತಹ ಪ್ರತಿಭಾವಂತ ತರುಣರ ನೆರವು, ಹೆಣಗಾಟ ಅವಶ್ಯಬೇಕು; ಪ್ರಯತ್ನಿಸು! ನೀನೊಬ್ಬ ಉತ್ತಮ ಬರೆಹಗಾರನಾಗುವುದರಲ್ಲಿ ಸಂದೇಹವೇ ಇಲ್ಲ" ಒಂದು ಭಾಷಣವನ್ನೇ ಕೊಟ್ಟರು. ಅದರೊಂದಿಗೆ ಆಶೀರ್ವಾದದ ಹರಕೆಯನ್ನೂ ದಯಪಾಲಿಸಿದ್ದರು. ಸ್ವಾಮಿ ಗುರುಗಳ ಉಪದೇಶ ಕೇಳಿ, ತನ್ನಲ್ಲಿ ತಾನೇ ಇಳಿದುಹೋದನು. ತನ್ನ ನುಡಿಗಾಗಿ ಇಷ್ಟು ದಿವಸ ಮೂಡಿದ ಮುಂಜಿನ ಮುಸುಕನ್ನು ಕಿತ್ತೊಗೆಯ ಬಯಸಿದನು. ಆಗಲೇ ಅವರಿಗೆ ಆದರಂತೆ ಪ್ರಯತ್ನಿಸುವುದಾಗಿ ಮಾತು ಕೊಟ್ಟನು! ಒಂದೇ ಒಂದು ವರುಷದಲ್ಲಿ, ಯಾವುದರಲ್ಲಿ ತಾನು ವಿಜಯ ಪಡೆಯುವುದಿಲ್ಲವೆಂದು ತಿಳಿದಿದ್ದನೋ ಅದರ ಸಮ್ರಾಟನಾದನು! ಕತೆ ಮತ್ತು ಕವನ ರಚಿಸುವುದರಲ್ಲಿ ಅಸಾಧಾರಣ ಸಾಂಡಿತ್ಯ ಪಡೆದನು. ಈ ತರುಣ ಸಾಹಿತಿ ನಾಡಿನೆಲ್ಲೆಲ್ಲ ಪೆಸರನ್ನು ಪಡೆದನು.

ಸ್ವಾಮಿನಾಥನನ್ನು ಎಷ್ಟೋ ಜನರು ಹೊಗಳಿ ಹಾಡುತ್ತಿದ್ದರೂ, ಅವರಲ್ಲಿ ಒಬ್ಬರಾದರೂ ಅವನ ಹತ್ತಿರದವರಾಗಲಿಲ್ಲ; ಅಂದ ದೊಡ್ಡ ಕಾಲೇಜಿನಲ್ಲಿ ಒಬ್ಬನೂ ಅವನಿಗೆ ಜೀವದ ಗೆಳೆಯನಿರಲಿಲ್ಲ; ಅದೊಂದು ಅವನಲ್ಲಿದ್ದ ದುರ್ಗುಣವಾಗಿದ್ದರೂ ಆಗಿರಬೇಕು. ಅವನಿಗೆ ತನ್ನವರೆಂಬವರು ಕೇವಲ ಮೂರೇ ಮಂದಿ– ತಂದೆ, ತಾಯಿ, ಮತ್ತು ತಂಗಿ. ತಂದೆಯೊಬ್ಬ ಪ್ರಾಥಮಿಕ ಶಾಲೆಯ ನುರಿತ ಖ್ಯಾತಿವಂತ ಶಿಕ್ಷಕರು! ಇನ್ನೆರಡು ವರುಷಕ್ಕೆ ಅವರಿಗೆ ಪೆನ್ಶೆನ್ ದೊರೆಯುತ್ತಿತ್ತು. 'ತಂದೆ ಕೆಲಸ ಬಿಡುವಷ್ಟರಲ್ಲಿ ಮಗನು ಕೆಲಸಕ್ಕೆ ಹತ್ತಿಕೊಳ್ಳುವನು' ಎಂದು ಎಲ್ಲರೂ ಹೇಳಿದರು.

ಎಲ್ಲರೊಡನೆಯೂ ನಡೆದುಕೊಳ್ಳುವಂತೆ ಸ್ವಾಮಿನಾಥ ತನ್ನ ಸಹಪಾಠಿ ಆಶಾಳೊಂದಿಗೂ ನಡೆದುಕೊಳ್ಳುತ್ತಿದ್ದನು. ಆಕೆಗೆ ಅದಿಷ್ಟೇ ಸಂಬಂಧ ಸಾಕಾಗಿರಲಿಲ್ಲ. ಸ್ವಾಮಿಗೆ ಆಕೆಯ ಮೇಲೆ ಯಾವ ಬಗೆಯ ಸೆಳೆತವಿರದಿದ್ದರೂ ಮತ್ಸರವಿರಲಿಲ್ಲ. ಆಶಾ, ಸ್ವಾಮಿನಾಥನ ಯೌವನ, ತೇಜಸ್ಸು, ಪಾಂಡಿತ್ಯ, ಪ್ರತಿಭೆ, ಹೆಚ್ಚಳಗಳಿಗೆ ಮಾರುಹೋಗಿ, ಯಾವದೋ ಒಂದು ಬಲೆಯಲ್ಲಿ ಅವನನ್ನು ಹಿಡಿಯಲು ಹೆಣಗಾಡುತ್ತಿದ್ದಳು. ಸ್ವಾಮಿನಾಥನು ಆಕೆಯ ಯೌವನ, ರೂಪಗಳಿಗೆ ಹಲವು ಸಲ ಮರುಳಾಗಿದ್ದರೂ, ಮನಸ್ಸನ್ನು ಬಿಗಿಹಿಡಿದು ಆಕೆ ನೆಯ್ದ ಜಾಲದಲ್ಲಿ ಬಿದ್ದಿರಲಿಲ್ಲ. ಕಾಲೇಜಿನಲ್ಲಿ ಆಗದವರು ಬಗೆಬಗೆಯಾಗಿ ಮಾತನಾಡಿದರು. ಆಶಾ ಪರ್ಯಾಯದಿಂದ ಸ್ವಾಮಿಗೆ ಆದನ್ನೆಲ್ಲ ತಿಳಿಸಿದರೂ, ಸ್ವಾಮಿಯಲ್ಲಿ ಯಾವ ಮಾರ್ಪಾಡೂ ಆಗಲಿಲ್ಲ. ಪರೀಕ್ಷೆಯು ಮುಗಿದು ಒಂದು ನೆಲೆಗೆ ನಿಲ್ಲುವವರೆಗೆ ಅಂಥ ಯಾವ ಸಾಹಸದ ಕಾರ್ಯವೂ ಬೇಡವೆಂದು ನಿರ್ಧರಿಸಿದ್ದನು. ಆಶಾದೇವಿ ಸ್ವಾಮಿನಾಥನನ್ನು ಪೆಚ್ಚಿದ್ದು ಪ್ರೇಮಕ್ಕಿಂತ ಹೆಚ್ಚಾಗಿ ಕಾಮದ ಸೆಳೆತಕ್ಕೆ ಸಿಕ್ಕು! ಒಮ್ಮೊಮ್ಮೆ ಬಯಸಿದುದು ಸಿಕ್ಕುವುದು ಬಹಳ ದಿನಗಳೆಂದಾಗ, ಬೇಸರದಿಂದ ನಿಟ್ಟುಸಿರನ್ನು ಹಾಕುತ್ತಲೂ ಇದ್ದಳು. ಅದರೂ ತೋರಿಕೆಗೆ ಯಾವುದನ್ನೂ ವ್ಯಕ್ತಪಡಿಸುತ್ತಿರಲಿಲ್ಲ.

ಬಿ. ಎ. ಪರೀಕ್ಷೆ ನಡೆಯಿತು! ಇಬ್ಬರಿಗೂ ಯಾವ ವಿಷಯುಗಳಲ್ಲಿಯೂ ಎದೆಗುದಿಯಿರಲಿಲ್ಲ; ಇನ್ನು ಉಳಿದುದು ಒಂದೇ ಒಂದು ವಿಷಯ. ಸ್ವಾಮಿನಾಥ ಮೊದಲುವರ್ಗ ಖಂಡಿತವೆಂದು; ಆಶಾ ಪಾಸಾಗಬಹುದೆಂದಳು. ಕೊನೆಯ ವಿಷಯವೂ ಪ್ರಾರಂಭವಾಯಿತು; ಪ್ರಶ್ನೆಯ ಕಾಗದ ನೋಡಿ ಆಶಾಳ ಎದೆ ಬಿರಿಯಿತು. ಪಾಸಾಗುವ ಯಾವ ಆಶೆಗಳೂ ಉಳಿಯಲಿಲ್ಲ; ಸ್ಪಷ್ಟವಾಗಿ ಆಕೆಯ ಪರಿಣಾಮ ಕಣ್ಣ ಮುಂದೆ ಕಟ್ಟಿತು. ಮುಖ ಬತ್ತಿ ಹೋಯಿತು. ಬಂದಷ್ಟು ಬರೆದು ಮುಗಿಸಿದಳು. ಪರೀಕ್ಷಕನು ಎಷ್ಟು ಉದಾರ ಹಸ್ತದಿಂದ ಗುಣಗಳನ್ನು ದಯಪಾಲಿಸಿದರೂ ಪಾಸಾಗುವಂತಿರಲಿಲ್ಲ. ಆದಾವುದೋ ಆಶೆಯಿಂದ ಸ್ವಾಮಿನಾಥನ ಕಡೆಗೆ ನೋಡುತ್ತಿದ್ದಳು. ಅವನು ಬರೆಯುವುದರಲ್ಲಿಯೆ ಮಗ್ನನಾಗಿದ್ದನು; ಪೇಳೆ ಮುಗಿಯುತ್ತ ಬಂತು. 'ಬರೆಯ ಒಂದು ವಿಷಯದಲ್ಲಿ, ಸ್ವಲ್ಪ ಗುಣ ಕಡಿಮೆ ಬಿದ್ದು ನಪಾಸಾಗಬೇಕು; ಆದಕ್ಕಾಗಿ ಮತ್ತೆ ಆರು ತಿಂಗಳಾದರೂ ಡೀಕುವುದೇ? ಸರಿವರೆಯದವರಲ್ಲಿ ನಾಚಿಕೆಗೇಡು! ಆಕೆಯ ರಕ್ತದ ಒತ್ತಡ ಅತಿಯಾಯಿತು! ಮನಸ್ಸಿನಲ್ಲಿ ತಿಕ್ಕಾಟ ಪ್ರಾರಂಭವಾಯಿತು. ಮೈಯೆಲ್ಲ ಬೆವರಿಟ್ಟಿತು. ಇನ್ನು ಹದಿನೈದೇ ನಿಮಿಷ ಉಳಿದಿತ್ತು! ಸ್ವಾಮಿನಾಥ ಬರೆಯುವುದನ್ನೆಲ್ಲ ಮುಗಿಸಿ ಪೇಪರು ಕಟ್ಟುತ್ತಿದ್ದನು! ಗಟ್ಟಿಮನಸ್ಸು ಮಾಡಿ ಆಶಾ ಕೇಳಿಬಿಟ್ಟಳು: ಸ್ವಾಮಿನಾಥ ಮೊದಲು ಮನಸ್ಸು ಮಾಡಲಿಲ್ಲ; ವಿಚಾರಿಸಲು ಸಮಯವೂ ಇರಲಿಲ್ಲ. ಆಕೆಯ ಮುಖದ ಕಡೆಗೆ ಒಮ್ಮೆ ನೋಡಿದಾಗ ಅವನ ನಿರ್ಧಾರ ಸಡಿಲಾಯಿತು. ಹೆಣ್ಣಿನ ಆರ್ತ ಬೇಡಿಕೆಯೊಂದನ್ನು ಅಲ್ಲಗಳೆಯುವುದು ಅವನಿಂದಾಗಲಿಲ್ಲ. ಸುತ್ತಲೂ ನೋಡಿದನು; ಸಮೀಪದಲ್ಲಿ ಮೇಲ್ವಿಚಾರಕರಾರೂ ಇರಲಿಲ್ಲ. ಹತ್ತಿರದಲ್ಲಿಯೆ ಆಶಾ ಇದ್ದಳು; ಅನಾಯಾಸವಾಗಿ ಏನನ್ನಾದರೂ ಕೊಡಬಹುದಾಗಿತ್ತು. ಉತ್ತರ ಪುಸ್ತಕದ ಒಂದು ಭಾಗವನ್ನು ಆಕೆಯ ಕಡೆಗೆ ಚೆಲ್ಲಿದನು; ಆಕೆ ಆದನ್ನು ತಕ್ಕೊಂಡು ಬರೆಯಲನುವಾದಳು. ಹಿರಿಯ ಮೇಲ್ವಿಚಾರಕನು (Conductor) ಇದನ್ನೆಲ್ಲ ದೂರದೇ ನಿಂತು ಕಿಟಕಿಯಿಂದ ನೋಡಿದನು;

'Copy' ಕೊಟ್ಟ, ಮತ್ತು ಇಸಿದುಕೊಂಡ ಅಪರಾಧಕ್ಕೆ ಅವರು ಇಬ್ಬರೂ ಗುರಿಯಾದರು.

ಮರುದಿವಸ ಇಂಗ್ಲೀಷ್ ಅಧ್ಯಾಪಕರು ಕರೆದು 'ಛೀ' ಹಾಕಿದರು. ಸ್ವಾಮಿಯ ತಂದೆ-ತಾಯಿಗಳು ಕುಂದಿ ಕುಗ್ಗಿದರು; ಅವನಿಗಾಗಿ ಮರುಗಿದವರು ಕೆಲವರು; ಕೆಲವರು ಗೇಲಿಮಾಡಿ 'ಹೆಣ್ಣಿಗೆ Copy ಕೊಟ್ಟ ಪ್ರೇಮವೀರ!' ಎಂದು ನಕ್ಕರು. ಎಲ್ಲೆಲ್ಲಿಯೂ ಅವರ ಮಾತೇ ಮಾತು! ಸ್ವಾಮಿಯು ಕಟ್ಟಿದ ಕಲ್ಪನಾಮಂದಿರವು ಕುಸಿದು ಬಿತ್ತು. ಗಾಳಿಯಲ್ಲಿಯ ಗೋಪುರವು ಬಿರುಗಾಳಿಯ ಹೊಡೆತಕ್ಕೆ ಪಾರಿಹೋಯಿತು. ಮನೆಯಲ್ಲಿ ಬಂದು ಕೋಣೆಯನ್ನು ಹಿಡಿದವನು ಹೊರಗೇ ಬರಲಿಲ್ಲ. ಯಾರಿಗೂ ಮುಖ ತೋರಿಸುವ ಮನಸ್ಸಾಗಲಿಲ್ಲ. ಸ್ವಾಮಿಯ ಮನೆಯವರು, ಯಾರನ್ನೂ ಈ ಅಪರಾಧಕ್ಕೆ ಗುರಿಮಾಡಿ ದ್ವೇಷ ಮಾಡಲಿಲ್ಲ; ಆದರೆ ಆಶಾಳ ಮನೆಯವರು ಸುಮ್ಮನೆ ಕೂಡ್ರಲಿಲ್ಲ. ನಿಜಸ್ಥಿತಿಯ ಅರಿವು ಇನ್ನಾಗಿದ್ದರೂ 'ತಮ್ಮ ಹುಡುಗಿ ಕೇಳಿದ್ದರೂ, ನಿನ್ನ ಸ್ವಾಮಿ ದೊಡ್ಡಿಸ್ತನಕ್ಕೆ ಬಿದ್ದು 'ನಕಲು' ಕೊಟ್ಟು, ನಮ್ಮ ಹುಡುಗಿಯನ್ನು ವ್ಯರ್ಥ ಹಾಳು ಮಾಡಿದನಲ್ಲದೆ, ಆಕೆಯ ಶೀಲಕ್ಕೂ ಭಂಗ ತಂದಿದ್ದಾನೆಂದು, ಸ್ವಾಮಿಯ ತಂದೆಯನ್ನು ಕರೆಯಿಸಿ ಜೈದರು. ಆಶಾಳ ತಂದೆಯೊಬ್ಬ ಗಣ್ಯ ಸರಕಾರೀ ಅಧಿಕಾರಿಗಳು ಬಾಯಿಬುಂದ ಬಂದದ್ದೇ ಬ್ರಹ್ಮವಾಕ್ಯ!! ಆಶಾಳಿಗೆ ಈ ಮಾತುಗಳಿಂದ ಕಿಡುಕೆನಿಸಿತು; ಆದರೂ ಯಾವ ಪ್ರತಿಘಟನೆಯನ್ನೂ ಮಾಡಲಿಲ್ಲ. ಈ ನುಡಿಗಳನ್ನು ಕೇಳಿದ ಸ್ವಾಮಿ ಭೂಮಿಗೇ ಇಳಿದನು. ತನ್ನ ಬಾಳು ಬಂಜೆಯಾದುದು ಅಸ್ಟು ಎನಿಸಲಿಲ್ಲ; ವ್ಯರ್ಥವಾದ ಮಿಥ್ಯಾಪವಾದ ಕ್ಕಾಗಿ ಕರಗಿಹೋದನು. 'ಆಶಾಳ ಶೀಲಕ್ಕೆ ಭಂಗ ತಂದೆನೇ?' ಎಂದು ಎಷ್ಟೋ ಸಲ ತನ್ನಲ್ಲಿಯೆ ತಾನು ಕೇಳಿಕೊಂಡು, ಕೊನೆಗೆ ತಾನೆಯೆ ಒಂದು ಸಲ ರಾತ್ರಿಯಲ್ಲಿ, ಯಾರಿಗೂ ಕಾಣದಂತೆ ಆಶಾಳ ಮನೆಗೆ ಹೋಗಿ, ಅವರ ತಂದೆಯು ಎದುರಿನಲ್ಲಿ ತನ್ನಿಂದ ಆಶಾದೇವಿಯು ಶೀಲಭಂಗವಾಗಿದ್ದರೆ ಪ್ರಾಯಶ್ಚಿತ್ತ ತಕ್ಕೊಳ್ಳಲು ಸಿದ್ಧನಿರುವುದಾಗಿ ಹೇಳಿ, ಅವರೆಲ್ಲ ಇಷ್ಟಪಟ್ಟರೆ ತಾನು ಆಕೆಯನ್ನು ಮದುವೆಯಾಗುವುದಾಗಿ ತಿಳಿಸಿದನು. ಆಶಾಳ ತಂದೆ ಕೋಪದಿಂದ ಕುದಿದು ಅಡಬಾರದ ಮಾತುಗಳನ್ನು ಆಡಿ, ಸ್ವಾಮಿಯನ್ನು ಮನೆಯಿಂದ ಹೊರದೂಡಿ 'ನಿನ್ನಂತಹ ಪಾದಿಹೋಕನಿಗೆ ನನ್ನ ಮಗಳನ್ನು ಕೊಡಲೇ?' ಎಂದು ಸವಾಲಿಟ್ಟನು. ಸ್ವಾಮಿನಾಥನ ತಲೆಯ ಮೇಲೆ ಆಕಾಶವೇ ಕಳಚಿ ಬಿದ್ದಂತಾಯಿತು! ಅವಮಾನ-ಅಪಮಾನದಗಳು! ಒಮ್ಮೆ ಆಶಾಳನ್ನೇ ಕಂಡು ಮಾತನಾಡಬೇಕೆಂದು ಸಮಯ ಕಾಯ್ದನು! ಆಕೆ ಇವನನ್ನು ಕಾಣಲು ಒಮ್ಮೆಯೂ ಬರಲಿಲ್ಲ ಇವನೇ ಅವಳ ಮನೆಗೆ ಹೋದಾಗ ಒಂದು ಸಲ ನೋಡಿ, ಕುಳಿತಲ್ಲಿಂದ ಎದ್ದು ಒಳಗೆ ನಡೆದು ಬಿಟ್ಟಳು. ನಾಚಿಕೆಯಿಂದ ಹಾಗೆ ಮಾಡಿರಬೇಕೆಂಬ ಅರ್ಥ ಹಚ್ಚಿಕೊಂಡಿದ್ದನು ಸ್ವಾಮಿ. ಆದರೆ ಕಾರಣವೇ ಬೇರೆ. ಆಕೆ—ದೂರದರ್ಶಿನಿ (?)—ಸ್ವಾಮಿಯನ್ನು ಮೆಚ್ಚಿದ್ದು ಪ್ರೇಮದಿಂದಲ್ಲ; ಅವನ ಉಜ್ವಲಭವಿತವ್ಯ ಹಾಳಾದ ಮೇಲೆ, ಆಕೆಗೆ ಅವನ ಮೇಲಿದ್ದ ಮೋಹವು ಕಡಿಮೆಯಾಗುತ್ತ ನಡೆಯಿತು. ತಾನೇ ಅವನ ಭವಿತವ್ಯದ ಬಾಗಿಲನ್ನು ಮುಚ್ಚಿದವಳೆಂದು ಪೂರ್ತಿಯಾಗಿ ಅರಿತಿದ್ದರೂ, ಅವನೊಂದಿಗೆ ಬರಿಯದಾದ ಮಂದಿರದಲ್ಲಿ ಕೂಡಲು ಮನಸ್ಸು ಮಾಡಲಿಲ್ಲ. ಪ್ರತಿಯಾಗಿ ತಂದೆಯ ಮಾತಿಗೆ ಸೈಕೊಟ್ಟಳು! ಎಷ್ಟೋ ಕಡೆಯಲ್ಲಿ ತಂದೆ ಆಡಿದ ಮಾತುಗಳನ್ನೇ ತಾನೂ ಗಿಳಿಯು ಹೇಳುವ ರೀತಿ ಪ್ರತಿಯಾಗಿ ಹೇಳಿದಳು. ಪರೀಕ್ಷೆಯ ಪರಿಣಾಮವೂ ಬಂದಿತು! ಇಬ್ಬರ ಪರಿಣಾಮಗಳು ಕಾಯ್ದಿಡಲ್ಪಟ್ಟಿದ್ದುವು! ಆಗಂತೂ ಖಂಡಿತವಾಯಿತು ಎಲ್ಲರಿಗೂ: ಸ್ವಾಮಿನಾಥನಿಗೆ ಆಶಾಳ ಲಗ್ನದ ಸಿದ್ಧತೆ ನಡೆದಿದೆಯೆಂದು ತಿಳಿದು ಬಂತು: ಆಕೆಯ ಮನಸ್ಸಿನ ವಿರುದ್ಧವಾಗಿಯೆ ನಡೆದಿದೆಯೆಂದು ಅವನ ಕಲ್ಪನೆ! ಇನ್ನು ಎಂಟು ದಿನಗಳಲ್ಲಿಯೆ ಆಕೆಯ ಲಗ್ನವೆಂದು ತಿಳಿದಾಗ, ಒಮ್ಮೆ ಆಕೆಯನ್ನು ಹೇಗಾದರೂ ಮಾಡಿ ಕಾಣುವುದೆಂದು ಮನಸ್ಸುಮಾಡಿ ಆಕೆಯ ಮನೆಗೆ ಹೋದಾಗ, ಆಕೆ ಬಾಗಿಲಲ್ಲಿಯೆ ನಿಂತಿದ್ದಳು! ಇವನನ್ನು ಕಾಣುತ್ತಲೆ ಒಳಗೆ ಹೋಗಿಬಿಟ್ಟಳು. ಸ್ವಾಮಿಗೆ ಗೊತ್ತಿತ್ತು; ಆಗ ಅವಳ ತಂದೆ ಮನೆಯಲ್ಲಿಲ್ಲವೆಂದು; ಒಳಗೆ ಹೋದನು. ಆಕೆ ಮನೆಗೆ ಬಂದವನನ್ನು ಮಾತನಾಡಿಸಲೂ ಇಲ್ಲ; ಅಪರಿಚಿತಳಂತೆ ಒಳಗಿನ ಬಾಗಿಲಲ್ಲಿ ಹೋಗಿ ನಿಂತಳು. ಸ್ವಾಮಿ ಒಳಗೆ ಹೋಗಿ ಒಂದು ಖುರ್ಚಿಯಲ್ಲಿ ಕುಳಿತು ಅವಳನ್ನು ಕೂಗಿದನು. ಆಕೆ ಅಲ್ಲಿಂದಲೇ ಉತ್ತರವಿತ್ತಳು.

"ನಿನ್ನೊಡನೆ ಎರಡು ಮಾತನಾಡಬೇಕಿತ್ತು. ಒಂದಿಷ್ಟು ಹೊರಗೆ ಬರುತ್ತೀಯಾ?"

ಆಗಲೇ ಸ್ವಾಮಿನಾಥನನ್ನು ನಿರಾಶೆಯು ಪರದೆ ಆವರಿಸಿತ್ತು.

"ಏನು ಕೇಳುವುದಿದೆ? ಇಲ್ಲಿಂದಲೆ— ಸಾಧ್ಯವಿದ್ದರೆ— ಉತ್ತರಿಸುವೆ."

ಸ್ವಾಮಿಯ ಎದೆಗೆ ಗುಂಡಿಕ್ಕಿದಂತಾಯಿತು, ಆದರೂ ಒಮ್ಮೆ ಮುಗಿಸಿಕೊಂಡು ಬಿಡುವುದೆಂದು ಮುಂದುವರಿಸಿದನು:

"ಆಶಾ! ನಿನ್ನ ಲಗ್ನದ ಮಾತು ನಿಜವೆ?"

"ಹೂಂ!"

"ಒಂದು ಮಾತು; ನೀನು ಅದಕ್ಕೆ ಒಪ್ಪಿರುವೆಯಾ? ಇಲ್ಲವೆ ಬಲವಂತದಿಂದ...." ಮಾತು ಮುಗಿಯುವ ಮೊದಲೇ ಹೇಳಿಬಿಟ್ಟಳು ಆಶಾ:.

"ಬಲವಂತವೇತರದು? ನಾನೇ ಒಪ್ಪಿದ್ದೇನೆ...." ಮುಖದ ಮೇಲೆ ಹೊಡೆಯುವಂತೆ ಹೇಳಿಬಿಟ್ಟಳು. ಸ್ವಾಮಿನಾಥನಿಗೆ ಅಲ್ಲಿ ನಿಲ್ಲುವುದಾಗಲಿಲ್ಲ; ಕಣ್ಣು ಮಂಜುಗೂಡಿದ್ದುವು. ಮನೆಗೆ ಬಂಬಾಗ ತಂದೆಯವರು ಗ್ಯಾಜೆಟ್ ಕೈಯಲ್ಲಿ ಕೊಟ್ಟರು. 'ಮೂರು ವರುಷ ಯಾವ ವಿಶ್ವವಿದ್ಯಾನಿಲಯದ ಪರೀಕ್ಷೆಗೆ ಕೂಡ್ರುವಂತಿಲ್ಲ' ಎಂದು ವಿಶ್ವವಿದ್ಯಾನಿಲಯದ ಅಪ್ಪಣೆ. ಇಬ್ಬರಿಗೂ ಮೂರು ವರುಷ 'ಡಿಬಾರು' ಆಗಿತ್ತು!

ಸ್ವಾಮಿನಾಥನಿಗೆ ಯಾರೂ ಧೈರ್ಯ ಹೇಳಲಿಲ್ಲ; ತಂದೆಯೂ ಸುಮ್ಮಗಿದ್ದು ಬಿಟ್ಟರು. ಇಡಿಯ ದಿನವೆಲ್ಲ ನಿರ್ಧರಿಸಿ ಏನೋ ಒಂದು ನಿರ್ಣಯಕ್ಕೆ ಬಂದನಾತ. ತಂದೆ-ತಾಯಿಗಳ ಗತಿ ! ದೇವರಿಲ್ಲವೇ ? ತನ್ನಂತಪ ಮಗನಿಂದ ಅವರಿಗೆ ದುಃಖೀರ್ತಿ! ಅನುಖ!! ಅವರ ಸಂತಸಕ್ಕಾದರೂ ಮರೆಯಾಗಬೇಕೆಂಬ ಪುಚ್ಚು-ವಿಚಾರ ಬೇರೆ ಬಂದು ಸೇರಿತು ಅವನ ತಲೆಯಲ್ಲಿ. ಹೊಟ್ಟೆಯ ಮಗನ ಅಗಲುವಿಕೆಯಿಂದ ಯಾವ ತಂದೆ-ತಾಯಿಗಳಿಗೆ ಸುಖ ಸಿಕ್ಕಬಹುದು ! ಭವಿತವ್ಯಕ್ಕೆ ಬೆಂಕಿ ! ಪ್ರೇಮಭಂಗ !!.... ಆತ್ಮಹತ್ಯೆಯೊಂದೇ ಅವನಿಗುಳಿದ ಉಪಾಯ; ಯಾವ ರೀತಿಯಲ್ಲಿ ಅಸುವ ತೊರೆಯುವುದು ?.... ಗಾಡಿಯ ಬುಡದಲ್ಲಿ ಸಿಕ್ಕು ಜೆಪ್ಪಟಿಯಾಗಿ ಬಿಡುವುದು !! ಯಾರಿಗೂ ಹೇಳದೆ ಊರಿಂದ ಒಂದು ಮೈಲು ನಡೆದು, ರೈಲ್ವೆ ಹಳಿಗೆ ಬಂದನು. ದಾರಿ-ಯುದ್ದಕ್ಕೂ ಆಕಾಳ ದ್ರೋಹದ ಬಗೆಗೇ ಚಿಂತಿಸಿದುದು; ಅಳಿ-ಯನ್ನು ಸಾಯುವ ಪೂರ್ವದಲ್ಲಿ ಒಂದು ಕ್ಷಣವಾದರೂ ಮರೆಯ-ಬೇಕೆಂದರೆ ಸಾಧ್ಯವಾಗಲಿಲ್ಲ. ಆಕೆಯೊಡನೆ ಹಿಂದೆ ಕಾಲೇಜಿನಲ್ಲಿ ಎರಡು ವರುಷ ನಕ್ಕು ನಲಿದು ಸರಸವಾಡಿದ ಎಲ್ಲ ಸಂದರ್ಭ-ಗಳೂ ಮುಂದೆ ಹಾಯ್ದು ಹೋದುವು ! ಓದುವ ವಯಸ್ಸಿನಲ್ಲಿ ವಿಷಯಲಾಲಸೆ ಬೇಡವೆಂದು ಅಂದು ಬಿಗಿಪಿಡಿದಿದ್ದು, ಅಲ್ಲಿಗೇ ಕೊನೆಯಾಯಿತು! ಸಾಯುವ ಕೊನೆಯ ಗಳಿಗೆಯಲ್ಲಿ ಆ ಅರ್ಥಕ್ಕೆ ನಿಂತ ವಿಷಯಲಾಲಸೆಯ ನೆನಪಾಯಿತು. ಇನ್ನೊಂದು ಕ್ಷಣ-ದಲ್ಲಿ ಸಾಯುವವನಿಗೆ ಯಾವ ನೆನಪುಗಳಿಂದೇನು ? ಆವು ಕೊನೆಗೊಂಡ ಇಲ್ಲವೆ ಅರ್ಥಕ್ಕೆ ನಿಂತುದರ ಗೊಡವೆಯಿಂದೇನು ? ಅವುಗಳನ್ನೆಲ್ಲ ದೂರ ತಳ್ಳಿಬಿಡಲು ಯತ್ನಿಸಿದರೂ ಅವನಿಗೆ ಅದರಲ್ಲಿ ಜಯ ಸಿಕ್ಕಲಿಲ್ಲ ! 'ಡಿಬಾರ್' ಆದುದು ಮರೆತು ಹೋಯಿತು. ಭಗ್ನಹೃದಯದ ಹಾರಿಕೆಗಳು 'ಪ್ರೇಮಭಂಗ'ವೆಂದು ಸದ್ದು ಮಾಡುತ್ತಿದ್ದುವು. ಸಾಯುವ ಪೂರ್ವದಲ್ಲಿ ಒಮ್ಮೆಯಾದರೂ ಆ ಸುಖ ಪಡೆಯಲಿಲ್ಲ! ಎದುರಿನಲ್ಲಿಯೆ ಅವನು ಯಾವುದರ ಕೆಳಗೆ ಬೀಳಬೇಕೆಂದಿದ್ದನೋ ಆ ಗಾಡಿ ಸಾಗಿಹೋಯಿತು. ಅವನು ಅಂದು ಸಾಯಲಿಲ್ಲ. 'ತಾನಿನ್ನೂ ಸಾಯಬೇಕಿಲ್ಲ; ಒಮ್ಮೆ ಯಾದರೂ 'ಆ ಸುಖ' ಪಡೆಯಲೇ ಬೇಕು ! ಅನಂತರ ಸಾಯು-ವುದು !' ಎಂದು ಆತ್ಮಹತ್ಯೆಯನ್ನು ಮರುದಿನಕ್ಕೆ ಮುಂದೆ ಹಾಕಿ, ಅಂದಿನ ದಿನವೇ ತನ್ನ ಇಚ್ಛೆಯನ್ನು ಪೂರಯಿಸಿಕೊಳ್ಳುವುದಕ್ಕೆಂದು ನಿಶ್ಚಯಿಸಿದನು—ಅಂತೆಯೇ ಅಂದು ರಾತ್ರಿ ಬೆಲೆವೆಣ್ಣುಗಳಲ್ಲಿ, ಆತ್ಮಹತ್ಯೆಗೆ ಅಡ್ಡನಿಂತ ಆಕೆಯನ್ನು ತೃಪ್ತಿಪಡಿಸುವುದಕ್ಕಾಗಿ—ಸೂಳೆಗೇರಿಗೆ ನಡೆದಿದ್ದನು.

* * * *

ಬಾಗಿಲು ತೆರೆಯಿತು ! ಮೊದಲಿನಂತವಳಲ್ಲ ; ಹದಿನೆಂಟು ವರುಷದ ಸುಂದರಿಯೊಬ್ಬಳು ಒಳಗೆ ಬಂದಳು ! ಯಾವ-ನೂ ತನಗೆ ಬೇಡ; ಹಾಗೆಯೇ ಹೊರಟು ಬಿಡುವುದೆಂದು ಅವನಿಗೆ ಆಕೆಯನ್ನು ನೋಡುತ್ತಲೆ ಮತ್ತೆ ಅತೆ

ಆಕೆಯಲ್ಲಿ ಆಶಾಳನ್ನೇ ಕಂಡಂತೆ ಅವನಿಗೆ ಎನಿಸಿತು; 'ದ್ರೋಹಿ ಯಾದ ಆಶಾಳಲ್ಲ; 'ಒಡನಾಡಿ ಆಶಾ!'. 'ಆಶಾ' ಎಂದು ಕೂಗಿ ಬಿಡುವವನು; ಆಕೆ ಬಾಗಿಲನ್ನು ಹಾಕಿಕೊಂಡು ಸನಿಯಕ್ಕೆ ಬಂದಳು; ಆಕೆಯ ಕಣ್ಣಿನಲ್ಲಿ ನೀರು ನಿಂತಿತ್ತು. ಸ್ವಾಮಿನಾಥನ ಕೂಗು ಗಂಟಲನ್ನು ದಾಟಿ ಹೊರಗೆ ಬರಲಿಲ್ಲ. ಆಕೆ ಹಾಸಿಗೆಯ ಸನಿಯಕ್ಕೆ ಹೋಗಿ " ಹೂಂ.. ಬನ್ನಿ " ಎಂದು ಮಾತ್ರ ನಿರು-ತ್ಸಾಹದ ಧ್ವನಿಯಲ್ಲಿ ನುಡಿದಳು. ಮೊದಲಿನ ಆರೆಮುದುಕಿ-ಯಲ್ಲಿಯ ವೈಯಾರ-ಮುರುಂಕಗಳೇ ಈಕೆಯಲ್ಲಿರಲಿಲ್ಲ. ಆಶಾ-ಳಷ್ಟೇ ವಯಸ್ಸು ! ಆಕೆಯಷ್ಟೇ ಎತ್ತರ; ಆಕೆಯದೇ ಮೈಕಟ್ಟು; ಆಕೆಯದೇ ಬಣ್ಣ; ಆದರೆ ಆಕೆಯಷ್ಟು ವಿದ್ಯಾವತಿ ಈಕೆಯಾಗಿರ-ಲಿಲ್ಲ. ಬೆಲೆವೆಣ್ಣುಗಳ ಮುಖದ ಮೇಲಿರಬಹುದಾದ ಯಾವ ಪುಡಿಯೂ ಆಕೆಯ ಮುಖದ ಮೇಲಿರಲಿಲ್ಲ ; ತುಟಿಗಳಿಗೆ ಬಣ್ಣ-ವಿಲ್ಲ; ತಲೆಗೆ ಎಣ್ಣೆಯಿಲ್ಲ; ಕೆದರಿದ ಕೂದಲನ್ನು ಕಟ್ಟಿರಲಿಲ್ಲ; ನಿಸರ್ಗದತ್ತ ಸೌಂದರ್ಯವೇ ಮಿಕ್ಕಿರುವಾಗ ಕೃತ್ರಿಮದಿಂದೇನು? ಆಕೆಯಲ್ಲಿಯೇ ದೃಷ್ಟಿ ನಿಲ್ಲಿಸಿ ಸ್ವಾಮಿನಾಥ ಕುಳಿತಲ್ಲಿಯೆ ಕುಳಿತಿದ್ದನು.

ಯಾಕಽ, ಬರೋದಿಲ್ಲಽ ಹೊತ್ತಾಗತೈತಿ..ಲಗುನಽ ಬರ್ರಿ " ಕಣ್ಣೀರನ್ನು ಸುರಿಸುತ್ತಲೇ ಇದ್ದಳು. ಆದಾವ್ವಜ್ಜೋ ಯಾತನೆ ಯನ್ನು ಆಕೆ ಮಾತುಗಳಲ್ಲಿ ಮೊರಸುತ್ತಿದ್ದಂತಿತ್ತು. ಸ್ವಾಮಿ ಆಕೆಯ ಅಂಗಾಂಗಗಳನ್ನೆಲ್ಲ ದಿಟ್ಟಿಸಿದನು; ಎಲ್ಲಿಯೂ ಆಕೆಯ ಜರಿತ್ರೆ ಬರೆದಿರಲಿಲ್ಲ; ಆಕೆಯ ಕಣ್ಣೀರುಗಳೂ ಆಕೆಯ ವೃತ್ತಾಂತ ಹೇಳಲಿಲ್ಲ: ಆದುದರಿಂದಲೇ ಸಮೀಪಕ್ಕೆ ಹೋಗಿ ಕೇಳಿದನು :

" ನೀನೇಕೆ ಳುವುದು ? "

" ..... "

" ನಿನ್ನ ಹೆಸರೇನು ? "

" ..... "

" ನೀನು ಹೇಳದಿದ್ದರೆ ನಿನ್ನನ್ನು ಮುಟ್ಟುವುದೂ ಇಲ್ಲ.... ? " ದೂರನರಿದು ಮತ್ತೆ ಮೊದಲಿನ ಸ್ಥಳದಲ್ಲಿ ಕುಳಿತನು.

" ನನ್ನ ಹೆಸ್ರು ಸಾಖ್ಯಿ.... "

" ನಿನ್ನ ಕಣ್ಣಲ್ಲೇಕೆ ನೀರು ? "

" ಅದನೆಲ್ಲಾ ಹೇಳಿದ್ರು ತಾವು ಅಸಂಯ್ಯ ಪಟಕೊಂ-ತೀರಿ !.... "

" ಅಸಹ್ಯ ! ಅಸಹ್ಯವೆಂದು ತಿಳಿದೇ ಇಲ್ಲಿಗೆ ಬಂದಿದ್ದೇನೆ. "

" ಹಿಂದ ಎಂದೂ ಬಂದಿಲ್ಲಽ ಹಂಗಾರ ನೀವು ? "

" ಇಲ್ಲ ! "

" ಇದಽ ಮೊದಲ ಬಾರೀನಽ ? "

" ಹೌದು ! "

ಸಾಖ್ಯಿ ಕೈಬಿಟ್ಟು ಕೆಟ್ಟು ಹೋಗುವ ಮಗುವಿಗಾಗಿ ಕನಿಕರಿಸು-ವಂತೆ ಕನಿಕರಿಸಿದಳು.

" ಹಾಂಗಾರ... ಇಲ್ಲಿಗೆ ನೀವ ಬರಬಾ ರದಾ ಕ್ತ ! "

" ನನಗೆಲ್ಲ ಅದು ಗೊತ್ತಿದೆ— ಬರುವುದು, ಬಿಡುವುದು ನನಗೆ ಸೇರಿದ್ದು. ಅದಿರಲಿ, ಅಸಹ್ಯಪಟ್ಟುಕೊಳ್ಳೋದಿಲ್ಲ ಹೇಳು; ನೀನೇಕೆ ಅಳುತ್ತಿ ? "

ಆಕೆ ಮೊದಲಿನ ಸರಣಿಯಲ್ಲೆ ಸಾಗಿಸಿದ್ದಳು :

" ನೀವು ಇಲ್ಲಿಗೆ ಬರೂದರಿಂದ ಹಾಳಾಗಬೇಕಿತ್ತು.... "

" ನನಗೆ ಗೊತ್ತಿದೆ ! "

" ಗೊತ್ತಿದ್ದೂ ಬಂದಿರಾ ? "

" ಸಾಕು ನಿನ್ನ ಪಂಟು; ಹೇಳುವಿಯೋ ಇಲ್ಲವೋ ? "

" ಆದರಿಂದ ನಿಮಗ ಉಪಯೋಗ ಏನೂ ಇಲ್ಲ; ಸುಮಾಕ ನಿಮ್ಮ ಯಾಕೇದಾಗ ಹರಣ.... "

" ಉಪಯೋಗ ಬೇಕಳಿ, ಬೇಡಲಿ; ಅದು ನನ್ನ ಸ್ವಂತಕ್ಕೆ ಸೇರಿದ್ದು. ಹೊತ್ತುಹೋದರೆ ನನ್ನದು ಹೋಗುವುದು.... "

ಆಕೆ ಬಿಕ್ಕಿ ಬಿಕ್ಕಿ ಅಳುತ್ತ ಸ್ವಾಮಿಯನ್ನು ತಕ್ಕೈಯಲ್ಲಿ ಹಿಡಿಯಲು ಬಂದಳು. ಅದೆಲ್ಲ ಸೋಗೆಂದು ಸ್ವಾಮಿ ಆಕೆಯನ್ನು ದೂರ ತಳ್ಳಿ ತಿರಸ್ಕಾರದಿಂದ ನುಡಿದನು:

" ಹೇಳಲಾರದುದು ಅಂಥದೇನದೇ ? ಅದೆಷ್ಟು ಮುರಕಾ ನೂಡುತ್ತೀ : ಹೇಳಜಾರದೆ ? "

" ಎಷ್ಟು ಜನರನ್ನ ಸಂತೈಸಲಿ ಹೀಂಗಽ ? " ಕಳಕಳಿಯ ದನಿಯಲ್ಲಿ ಪೇಳಿದಳು.

" ಹಾಗಾದರೆ ನನ್ನ ಹತ್ತಿರಕ್ಕೇಕೆ ಬಂದೆ?.... "

" ಇಕೀಽ ಕಳಿಸಿದ್ದು..... "

" ಆಕೆ ಯಾರು ? "

" ಆಕೀ ಯಾರರಽ ಆಗ್ಲಿ; ಮುಟ್ಟದಿದ್ದವ್ರು ಇಲ್ಲಿಗ್ಯಾಕ ಬಂದ್ರಿಽ ಹಂಗಾರ ? " ಬಿಕ್ಕುತ್ತ ಕೇಳಿದಳು.

" ನಾನು ಇಲ್ಲಿಗೆ ಬಂದುದು ನೀನು ಹೇಗೆ ಅಳುತ್ತಿರುವಿ ಎಂಬುದನ್ನು ನೋಡುವುದಕ್ಕಲ್ಲ.... " ಸ್ವಾಮಿನಾಥ ಸ್ವಲ್ಪ ಬಿರುಸಾಗಿಯೇ ಉತ್ತರವಿತ್ತನು.

" ನಂಗೂ ತಳೀತೈತಿ; ಆಳೂದರಿಂದ ಬಂದವ್ರು ನೊಂದುಕೋಕಾರಂತ !.... "

" ಆದರೂ ಏಕೆ ಅಳುತ್ತೀ ಸುತ್ತೆ ? "

" ಅಳದೆ ಯೇನಮಾಡ್ಲಿ?.... ದುಬ್ಬಾ ಆಗತೈತಿ.... ಹಲವು ಸಲ ತಡೀಲಾರದ. .. "

" ಅಂದರಽ.... "

" ಏನೂ ಇಲ್ಲಾ ! ಹೀಂಗ ಇದಕೂನೊಡ್ಲ ನನ್ನ ' ಯಾಕ ನೀ ಅಳ್ತೀಽ ' ಅಂತ ಯಾರೂ ಕೇಳಲಿಲ್ಲ; ಹಾಂಗs ಗಾಯ್ದ ಮ್ಯಾಲ ಬರೀ ಪಾಕಿದ್ರು; ನೀಂವ ಒಬ್ಬರರ ಮೊದ್ಲಿಗೆ ಹೀಂಗ ಕೇಳ್ದವ್ರು; ಏನೋ ವಿಚಿತ್ರ ಮನಶ್ಯಾರಾಗಿರಬೇಕು.... ಆದು ಹೇಳೂ ಮಾತಲ್ಲ; ಆದಿರ್ಲಿ, ಸುಮ್ಮನೂ ಹೊತ್ತ ಹೋಗತೈತಿ, ಆಕಿ ಈಗ ಬರ್ತಾಳ.... ಬ್ಯಾಗ ಎಳ್ರಿ.... "

" ಯಾರು ಬರುತ್ತಾರೆ ? ಆಕೆಯೆಂದರೆ ಯಾರು ? ಇಲ್ಲವಲ್ಲ ? .... ಅದೇನೋ ಹೇಳುವಂತಿಲ್ಲವೆಂದೆ ಹೇಳದ ಏನಾ ನಿನ್ನೆನ್ನು ಮುಟ್ಟಲಾರೆನೆಂದು ಎಂದೋ ಹೇಳಿಬಿಟ್ಟಿದ್ದೇನೆ.... "

" ನೀವು ತಪ್ಪ ಮಾಡೀರಿಽ.... "

" ಅದಾವ ತಪ್ಪು ? "

" ನೀವು ಇಲ್ಲಿಗೆ ಬರೋ ಮುಂದಗಡೆ ಕುಡಿದ್ಯಾಕ ಬರಲಿಲ್ಲ ? ಅಂದ್ರ ಹಿಂಗೆಲ್ಲ ಕೇಳತಿರಲಿಲ್ಲ; ಆಗ ನಾನೂ ಒಬ್ಬಾಕಿ ' ಮನಶ್ಯಾಳು ' ಎಂಬ ಕಲಪನಾ ಕೂಡಾ ಬರತಿರಲಿಲ್ಲ.... "

" ಅದಿರಲಿ ನಿನ್ನ ವೇದಾಂತ; ಏಕೆ ಅಳುತ್ತಿರುವೆಯೆಂಬುದನ್ನು ಹೇಳುವೆಯೋ— ಇಲ್ಲವೆ, ಹೀಂಗ...ತಗೋ ಇದನ್ನ.... ನಾನು ಹೊರಡುವೆ ! "

ಐದು ರೂಪಾಯಿಯ ನೋಟನ್ನು ಆಕೆಯ ಕಡೆಗೆ ಬೀಸಿ ಅಲ್ಲಿಂದ ಎದ್ದನು. ಆಕೆ ಎದ್ದು ಬಂದು ಅವನ ಕೈ ಹಿಡಿದಳು. ಹೇಳುವ ಮೊದಲು ಮುಟ್ಟುವ್ರದಿಲ್ಲವೆಂದವನು ಆಕೆ ಮುಟ್ಟಿದರೂ ಬಿಡಿಸಿಕೊಳ್ಳಲಿಲ್ಲ. ಮತ್ತೆ ಕೇಳಿದನು :

" ಹೇಳು ಹಾಂಗಾದರೆ ; ಆಕೆ ಯಾರು ? ನೀನು ಅಳುವ ಬೇಕೆ ? "

" ಆಕಿನೂ ನನ್ನಂತವಳರ ಒಬ್ಬಳು ! ಆಕೀನರ ಈ ಮನೀ ಯಜಮಾನಿ ! ನನ್ನಂತಾ ಹತ್ತಾರು ಹೆಂಗಸ್ರು ಆಕೀ ಕೈಯಾಗ ಆದಾರ. ದುಡ್ಡ ಸಿಗತೈತಿ; ಆಕೆ ಹತ್ತರ ದುಡಿತೇವಿ ನಾವು.... "

ಸಾಲ್ವ ತಡೆದಳು.

" ಹೂಂ.... "

" ಯಾಕ ಅಳತೀ, ಯಾಕ ಅಳತೀ ಅಂತ ಕೇಳಿದ್ರು ಏನು ಹೇಳೋದು.....ಎಷ್ಟಂತ ತಡ್ಕೋದರು..... ಈಗಾಗಲೇ ಮೂರುಜನರು.....ನೀವು ನಾಕನೆಯವರು.....ನಾನೂ ಹೆಣ್ಣಲ್ಲರ?.... "

ಸ್ವಾಮಿನಾಥ ಸುಮ್ಮನೆ ಇದ್ದನು. ಅವನಿಗೊಬ್ಬನಿಗೇ ಏಕೆ, ಇಡಿಯ ಮಾನವ ಸಮಾಜಕ್ಕೇನೇ ಈ ಪ್ರಶ್ನೆಯನ್ನು ಕೇಳಿದ್ದರೆ ಯಾರೊಬ್ಬರೂ ಉತ್ತರಿಸುತ್ತಿರಲಿಲ್ಲ. ಆಕೆ ಮುಂದುವರಿಸಿದಳು:

" ಮ್ಯಾಲ ನೋಡಾಕ ನಾ ಜಿಂದರ ಕಾಣತೇನಿ; ನನಗೇನೂ ಹಾಂಗ ಅನಸೂದಿಲ್ಲ.... ಆದ್ರ ಬಾಕಿ ಜನಾ ಬಂದವ್ರು, ನನ್ನ ' ಮನಮೋಹಿನಿಯಾಗಿರುವೆ ' ಎಂದು ಹೇಳತಾರ. ಅವರು ಅನಕಸತಿಬಹುದು. (ಸ್ವಾಮಿಗೆ ಆಕೆ ಮೋಹಿನಿ ಎಂಬುದರಲ್ಲಿ ಯಾವ ಸಂಶಯವೂ ಉಳಿದಿರಲಿಲ್ಲ) ಆದ್ರ..... "

ಮತ್ತೆ ತಡೆದಳು....ಹಿಂದುಮುಂದೆ ನೋಡಿದಳು; ಸ್ವಾನು ಪಾಸನಪಾಗಿ ಕುಳಿತಿದ್ದನು ; ಆಕೆ ಹೇಳಿದಳು :

" ನಾನೇನು ಜಿಂದದ ಮನಿಯಲ್ಲ....ಪಾಪದ ಕೂಪ... ರೋಗದ ಮುದ್ದಿ....ಯಾವಾಗ್ಲೂ ಆ ಬ್ಯಾನಿ, ಈ ಬ್ಯಾನಿ ಆಂ ಂತಿಲ್ಲ ನಗತೇನಿ.... "

ಮೂರು ವರು ಮುಖ ಕೆಳಕ್ಕೆ ಬಾಗಿತು; ಆಕೆಯು ಸ್ಥಿತಿ ಆಕೆ ಮೂರು ವರು ನ್ನು ಮಾಡಿತು.

ಸ್ವಾಥನಿಗೆ ಇದೇನೂ ಹೊಸತಾಗಿ ಕೇಳಿದಂತಾಗಲಿ

ಸೊಳೆಯರು ರೋಗದ ಆಗರವೆಂದು ಅವನು ಕೇಳಿಯೂ ಇದ್ದನು; ಓದಿಯೂ ತಿಳಿದಿದ್ದನು. ನಾಳೆ ಜೀವನ ಕೊನೆಗೊಳ್ಳುವವನಿಗೆ ಯಾವ ರೋಗದ ಅಂಜಿಕೆ?

"ಆದರಲಿ; ದುಡಿಯುತ್ತೀನೆ ಅಂದೆಯಲ್ಲ....ದಿನಕ್ಕೆ ಎಷ್ಟು?"

" ಐದು ರೂಪಾಯಿ!..... "

" ಐದೇ ರೂಪಾಯಿ! ಅಷ್ಟಕ್ಕೇ ಇಷ್ಟು.....ಜೊರಗೆಲ್ಲಿ-ಯಾದರೂ ಕೂಲಿ ಪಾಲಿ ಮಾಡಿದರೆ ನಿನಗೆ ಸಿಕ್ಕುವುದಿಲ್ಲವೇ?"

" ಸಿಗತೈತಿ! ನನ್ನಂತಾ ಹೆಣ್ಣಿಗೆ ಯಾರು ಕೊಟ್ಟಾರು ಐದು ರೂಪಾಯಿ? ಬಲಬರಾ ಕೊಟ್ಟರ ಒಂದ ರುಪಾಯಿ ಕೊಟ್ಟಾರು!"

" ಅಷ್ಟು ಸಾಕು ನಿನ್ನ ಉಪಜೀವನಕ್ಕೆ! ನಿನ್ನ ಶೀಲವಾದರೂ ಉಳಿಯುತ್ತಿತ್ತು!"

" ಶೀಲ ಉಳಿತಿತ್ತಕ? ಹೇಳಂಗಿಲ್ಲ ನನ್ನಂತಾ ಹರೇದ ಹುಡ್ಗೀ ಶೀಲಾ ಉಳಿಸುವಷ್ಟು ದೊಡ್ಡ ಮನಿಕೀರು ಯಾರೂ ಕೆಲಸ ಕೊಡೋದಿಲ್ಲ.....

"ಈ ನರಕ ಯಾತನೆಯಿಂದಲೇ ನಿನಗೆ ಸುಖನೇ, ಅಂದ ಮೇಲೆ?"

" ಎಲ್ಲೀಕ ಸುಖಾ!.....

" ಹಂಗಾದ್ರೆ ಇಂಥ ನರಕಯಾತನೆ ಅನುಭವಿಸುವುದಕ್ಕಿಂತ ನೀನೇಕೆ ಸಾಯಬಾರದು?"

" ನಾನೂ ಬಾಳಿ ಸಲ ನೋಡಿದೆ; ಆದ್ರಕ ಸಾದವಲಿಲ್ಲ...."

" ಯಾಕೆ?"

"ಹೇಳಿದೆನಲ್ಲಾ ದಿನ ಒಂದಕ್ಕ ಒಂದು ರೂಪಾಯಿ ಸಾಲೂ-ದಿಲ್ಲ ಅಂತ ..... ನನಗ ಒಬ್ಬ ಕಾಕಾ ಆದಾನು..... ಅವನಿಗೆ ಕುಡ್ಯಾಕನಕ ದಿನಾ ಒಂದು ರುಪಾಯಿ ಬೇಕು..... ಮನ್ಯಾಗ ಒಂದು ಕುರಡ ಮುದುಕಿ ಐತಿ; ಅವರಿಬ್ಬರನ್ನೂ ಜೋಪಾನ ಮಾಡಬೇಕಾಗೈತಿ ನಾನು....."

" ಕುಡಿಯುವುದಕ್ಕೆ ನೀನು ಸಹಾಯ ಮಾಡುವಿಯೆಂದಂತಾ-ಯಿತು...."

" ಅಲ್ಲ....ಆದರೂ ಯೇನ ಮಾಡೋದು.... ಅಂವಾ ಅದನ್ನ ಬಿಡೊಹಾಂಗಿಲ್ಲ....ಎಡ್ಡನೇದಾರೀನಕ ಇಲ್ಲ....ನಾ ಕೂಸಿರತಾನಕ ನಮ್ಮನ್ನ, ಅಪ್ಪ ಸತ್ತೊದ್ರಂತ; ಹಂಗೆಂಗೋ ಮಾಡಿ ಕಾಕಾನಕ ಸಾಕಿದಾ....ದೊಡ್ಡಾಕಿ ಆಗುತಲೆ ಯಾರಾರದೋ ಮಾತ ಕೇಳಿ ಈ ಕೆಲಸಕ್ಕ ತಗಂದು ಹಚ್ಚಿದ. ಮೊದಮೊದ್ಲ ನಾನೂ ಗರತೇರಂಗಿಂತಾ ಬಲಾ ಈ ಕೆಲಸಕ್ಕ ಎದುರುಬಿದ್ದೆ; ಜುಲುಮಿಂದ ನನ್ನ ಕೆಡಸಿದರು ಅವಶ್ತು....."

ಆಕೆ ಕಣ್ಣೀರು ಸುರಿಸುತ್ತಲೇ ಇದ್ದಳು.

" ನನಗೊಮ್ಮೆ ಅವರೆಲ್ಲ ನನ್ನ ಬದ್ಧ ವೈರಿ ಅನಿಸ್ತು; ಸೇಡು ತೀರಿಸಿಗೋಬೇಕಂತ ಸಾಯಬೇಕಂದೆ; ಕಾಕಾ ಆಗ ದುಡ್ಯೋದು ಬಿಟ್ಟಿದ್ದ; ಮುದುಕಿ ಹೆಂಗು ಕುರ್ದಿ; ನಾನು ದುಡ್ಯೋದು ಬಿಟ್ಟು ಬಿಟ್ಟರ ಅವರು ಉಪವಾಸ ಬಿದ್ದು....."

" ಹಾಗೇಕೆ ಮಾಡಲಿಲ್ಲ?" ನಡುವೆ ಬಾಯಿ ಹಾಕಿ ಸ್ವಾಮಿ ಕೇಳಿದನು.

"ಯಾಕೇನೋ ಸರಿಯಾಗಿ ಹೇಳಲಾರೆ; ಹಂಗ ಮಾಡೋದು ನನ್ನ ಮನಸಿಗೇನೂ ಚೆಂದ ಕಾಣಲಿಲ್ಲ....ಅವರು ಎಷ್ಟಂದರೂ ನನ್ನ ಹಿರೇರು; ಅವರು ಕಣ್ಣ ಕಟ್ಟಿಗೊಂಡು ಬಾವೀ ಬಿದ್ದಾರಂತ ನಾವು ಬೀಳೊದು ನೆಟ್ಟಗಲ್ಲ; ಈಟ ಇದ್ದಾಗಿಂದ ನೆತ್ತೀ ಹೊಟ್ಟೀ ಕಟ್ಟಿ ದೊಡ್ಡಾಕೀನ ಮಾಡ್ಯಾರ; ಅವರೆಂತವರಡದ್ರೂ ಅವರು ಸಾಯೂ ತನಕಾ ಕೂಳು ಹಾಕೋದು ನನ ಕರತವ್ಯ; ಅದಕಕ ಹೆಂಗೂ ಒಮ್ಮೆ ಕೆಡೋದು ಕೆಟ್ಟ ಬಿಟ್ಟೀನಿ; ಎಂಥಾ ಸಂಕಟಾನಾದರೂ ತಾಳಿ ಕೊಂಡು ಅವರ ಜೋಪಾನ ಮಾಡಬೇಕಾಗತೈತಿ....ಅದಿರ್ಲಿ, ಏಳ್ರಿ ಬಾಕಳ ಹೊತ್ತಾತು...."

ಹೊರಗಿನಿಂದ ಆ ನುಡಿಹೆಂಗುಸು ಕೂಗಿದಳು:

" ಸರಿ; ಯಾಳೇ ಬಾಕಳ ಆತು; ಮತ್ತ ನಾಳೆ ಬರ್ರಿ ಮತ್ತೊಮ್ಮೆ...."

ಎದ್ದು ನಡೆದು ಅಳಕೆ ಬಾಗಿಲ ಕಡೆಗೆ ಹೊರಟಳು: ನೆಲದ ಮೇಲಿನ ೫ ರೂಪಾಯಿಗಳ ನೋಟನ್ನು ಎತ್ತಿ ಆಕೆಯ ಕೈಗಿತ್ತನು. ಬಾಗಿಲು ತೆರೆಯಿತು; ಒಬ್ಬ ಗಂಡುಸು ಆ ಹೆಂಗುಸಿನೊಂದಿಗೆ ನಿಂತಿದ್ದನು. ಆ ಮುದಿ ಹೆಂಗುಸು ಸಾಳ್ವಿಯ ಕೈಯಲ್ಲಿಯ ನೋಟನ್ನು ಗಬಕ್ಕನೆ ಕಿತ್ತುಕೊಂಡು, ಸಂಗಡ ತಂದವನನ್ನು ಒಳಗೆ ಕೂಡಿಸಿ ಬಾಗಿಲು ಮುಂದಕ್ಕೆ ಎಳೆದುಕೊಂಡು, ಸ್ವಾಮಿ ನಾಷ್ಟನ ಹಿಂದಿನಿಂದಲೇ ಬೀದಿಯ ಬಾಗಿಲತನಕ ಬಂದು ಹೇಳಿದಳು.

" ಆಗಾಗ ಬರುತ್ತಾ ಇರ್ರಿ...ಮರೀಜ್ಯಾಡ್ರಿ, ನಮುಸ್ಕಾರ!"

ಸ್ವಾಮಿನಾಥನಿಗೆ ಆಕೆಯ ಮಾತಿನ ಕಡೆಗೆ ಲಕ್ಷ್ಯವೇ ಇರಲಿಲ್ಲ. ಇಡಿಯ ರಾತ್ರಿ ಸ್ವಾಮಿಗೆ ಕಣ್ಣಿಗೆ ಕಣ್ಣು ಹತ್ತಲಿಲ್ಲ; ಅವನ ಹೃದಯದಿಂದ ಆಶಾ ಪಂಜನೆ ಮಾಡಿ ದೂರವಾಗಿ ಹೋಗಿದ್ದಳು: ಆ ಸ್ಥಾನದಲ್ಲಿ ಸಾಳ್ವಿ (ಬೆಳೆವೆಣ್ಣು) ನೆಲೆ ನಿಂತಂತೆನಿಸಿತು. ಮರು-ದಿನದ ಆತ್ಮಹತ್ಯೆಯ ನಿರ್ಧಾರ ಹಾರಿಹೋಯ್ತು! ಸಾಳ್ವಿಯ ಕೆಲವ ನುಡಿಗಳು ಅವನ ತಲೆಯಲ್ಲಿ ಅಚ್ಚೊತ್ತಿದಂತೆ ನಿಂತುಬಿಟ್ಟಿದ್ದುವು. ಆಂತೆಯೇ ಆಕೆಯ ಮಾತಿನಿಂದ ಅವನು ಒಂದು ನಿರ್ಣಯಕ್ಕೆ ಬಂದುದು: " ' ಸಾಯುವುದು ಸಾಯುವವನೊಬ್ಬನಿಗೆ ಸಂಬಂಧಿಸಿದ ವಿಷಯವಲ್ಲ! ಎಷ್ಟೋ ಬಾಳಿನ ಮೇಗೆ ಒಂದು ಜೀವಿಯ ಮೇಲಿರುವಾಗ, ಬಲುಮೆಯಿಂದ ಆದರೆ ನಾಶಕ್ಕೆ ಹೆಣ-ಗುವಂತಹ ಪೈಶಾಚಿಕತನಕ್ಕಿಂತ ದೆಚ್ಚಿನ ಕೃತ್ಯವಿಲ್ಲ;' ಇಂಥ ಮಾತು ಬಿದೆಷ್ಟೋ ಪತಿತರಿಗೆ ತಿಳಿಯುತ್ತದೆ. ಮನೆಯಲ್ಲಿ ಮುಪ್ಪಿನ ತಂದೆ-ತಾಯಿಗಳಿದ್ದಾರೆ. ಲಗ್ನದ ವಯಸ್ಸಿಗೆ ಬಂದ ತಂಗಿ ಇದ್ದಾಳೆ.... ಅವರನ್ನು ಗೋಳಿಗೆ ಹಾಕಿ ಆತ್ಮವಂಚನೆ ಮಾಡಿಕೊಳ್ಳುವುದೇ?"

ಮರುದಿವಸ ನಪಕರಿಗೆ ಬಿನ್ನಹತ್ತಿ, ಬೆಳಗಿನಲ್ಲಿ ಮನೆಯಿಂದ ನಡೆದ ಸ್ವಾಮಿನಾಥ, ಊರಿನ ಹೊತ್ತಿನ ಒಳಗಾಗಿ ಮ್ಯುನಸೀಪಾಲ ಟಿಯ ಹೈಸ್ಕೂಲಿನಲ್ಲಿ ತಿಕ್ಷ್ಣಕರೊಬ್ಬರ ಸ್ಥಳಕ್ಕೆ ಹೊಂದಿಕೊಂಡೇ ಮನೆಗೆ ಬಂದನು.

ಯಾರೋ ಹುಚ್ಚ! ★

(ಸಣ್ಣ ಕತೆ)

ಜೀ. ರಾ. ನರಸಿಂಹ ಮೂರ್ತಿ, ಕುಮುಕೂರು

ಶೇಖರ ನಿಜವಾಗಿ ದೊಡ್ಡ ಮನುಷ್ಯನೇ? ಅವನಿಗೆ ಲೋಕಕ್ಕೆ ಉಪದೇಶ ಮಾಡುವಂತಹ ಅಧಿಕಾರ ವಿದೆಯೆ? ಆದರೆ ಲೋಕದ್ದೊಂದು ವಿಚಿತ್ರ ರೀತಿ: ಅನಧಿಕಾರಿಗಳನ್ನೇ ಅಧಿಕಾರಿಗಳನ್ನಾಗಿ ತಿಳಿದು ಮೆರೆವಣಿಗೆ ಮಾಡುವುದು.

★

ಕೊಠಡಿಯೊಂದರಲ್ಲಿ ಸಣ್ಣದಾಗಿ ದೀಪವೊಂದು ಮಿನುಗುತ್ತಿತ್ತು. ಪಕ್ಕದಲ್ಲಿ ಹಾಸಿದ್ದ ಹಾಸಿಗೆಯ ಮೇಲೆ ಹೆಂಗುಸೊಬ್ಬಳು ಮಲಗಿದ್ದಳು. ಪಕ್ಕದಲ್ಲಿ ಒಬ್ಬ ಪುರುಷ—ಆಕೆಯ ಪತಿಯರ ಬಹುದು—ಮಂಡಿಯ ಮೇಲೆ ಕುಳಿತು ಆಕೆಯ ಮುಖವನ್ನೇ ನೋಡುತ್ತಿದ್ದ. ವಯಸ್ಸು ಮೂವತ್ತನ್ನು ಮೀರಿಲ್ಲದಿದ್ದರೂ ಐವತ್ತರ ಮುದುಕನಂತೆ ಕಾಣುತ್ತಿದ್ದ. ಕೂದಲು ಅಲ್ಲಲ್ಲಿ ನೆರೆತಿತ್ತು. ಮುಖಕ್ಕೆ ನಾಯಿಂದನ ಕತ್ತಿ ಕಂಡು ಎಷ್ಟು ದಿನಗಳಾಗಿದ್ದುವೋ! ಹಣೆಯ ಮೇಲೆ ಚಿಂತಾರೇಖೆಗಳು ಕಾಣುತ್ತಿದ್ದುವು. ತೊಟ್ಟಿದ್ದ ಅಂಗಿ ಜೀರ್ಣವಾಗಬಂದಿತ್ತು. ನೀರು ತುಂಬಿದ ಕಣ್ಣುಗಳಿಂದ, ಕಣ್ಣು ಮುಚ್ಚಿ ಮಲಗಿದ್ದ ರೋಗಿಯನ್ನು ಒಂದೇ ಸಮನೆ ನೋಡುತ್ತಿದ್ದ. ತುಂಬುಮೌನ ಕೊಠಡಿಯನ್ನು ತುಂಬಿತ್ತು.

ರೋಗಿ ಕಣ್ಣು ಬಿಟ್ಟಳು; "ನೀರು, ನೀರು" ಎಂದು ಕೂಗಿದಳು.

ಶಂಕರ – ಅದೇ ಅತನ ಹೆಸರು- ನೀರಿನ ಲೋಟವನ್ನು ಹಿಡಿದು ಒಂದೆರಡು ಗುಟುಕುಗಳನ್ನು ನಿಧಾನವಾಗಿ ಕುಡಿಸಿದ. ರೋಗಿ ಮತ್ತೆ ಕಣ್ಣು ಮುಚ್ಚಿದಳು; ಕೊಠಡಿಯಲ್ಲಿ ಮತ್ತೆ ಮೌನ.

ರಾತ್ರಿಯ ಬಹು ಭಾಗ ಕಳೆದಿತ್ತು. ಆದರೂ ಶಂಕರನಿಗೆ ನಿದ್ದೆಯ ಅರಿವೂ ಇಲ್ಲ. ಅವನು ಮತ್ತೊಮ್ಮೆ ರೋಗಿಯ ಮುಖವನ್ನು ದಿಟ್ಟಿಸಿದ. ಕಣ್ಣುಗಳಲ್ಲಿ ನೀರು ಉಕ್ಕಿಉಕ್ಕಿ ಬರತೊಡಗಿತು. ಅವನ ಅಂಧಕಾರ ಜೀವನದಲ್ಲಿ ಮಿನುಗುತ್ತಿದ್ದ ಏಕಮಾತ್ರ ತಾರೆ ಅಂದು ಅಸ್ತೋನ್ಮುಖವಾಗಿತ್ತು.

ಶಂಕರ ಎಷ್ಟುಹೊತ್ತು ಅತ್ತನೋ ತಿಳಿಯದು; ಆ ಅಳು ಅವನ ಹೃದಯದ ಭಾರವನ್ನು ಸ್ವಲ್ಪ ಕಡಮೆಮಾಡಿತು. ಆದರೆನು; ದುಃಖಕ್ಕಿಂತ ಹೆಚ್ಚು ಅಸಹನೀಯವಾದ ನಿರಾಶೆ ಅವನನ್ನು ಮುಸುಕಿತು.

ಕೊಠಡಿಯ ಹೊರಗೆ ಕತ್ತಲು, ಒಳಗೆ ಕತ್ತಲು. ಹೃದಯದೊಳಗೆ ಕೂಡ ಕತ್ತಲು ಮಾತ್ರ. ಸರ್ವವ್ಯಾಪಿಯಾದ ಈ ಕತ್ತಲಿ ನೊಡನೆ ಭೀಕರಮೌನ.

ಶಂಕರನಿಗೆ ಹುಚ್ಚು ಹಿಡಿಯದಿದ್ದುದು ಅವನಿಗೇ ಆಶ್ಚರ್ಯವನ್ನುಂಟುಮಾಡಿತು.

ಯಾವುದೋ ಗಡಿಯಾರ ಆ ನೀರವತೆಯನ್ನು ಭೇದಿಸಿ ಮೂರು ಗಂಟೆಗಳನ್ನು ಬಾರಿಸಿತು. ಮತ್ತೆ ಮೌನ.

ಶಂಕರನಿಗೆ ಆ ಮೌನವನ್ನು ತಡೆಯುವುದು ಆಗಲಿಲ್ಲ. ನಿದ್ದೆಯಂತೂ ಬರುವಂತೆಯೆ ಇಲ್ಲ. ತನ್ನ ಜೀವನದ ಘಟನಾವಳಿಗಳನ್ನು ಒಳಗಣ್ಣುಗಳಿಂದ ನೋಡಹತ್ತಿದ.

ತಂದೆ–ತಾಯಿಗಳು ಚಿಕ್ಕವಯಸ್ಸಿನಲ್ಲೇ ಗತಿಸಿದುದು, ಅಣ್ಣನ ಮನೆಯಲ್ಲಿ ಬೆಳೆದುದು, ಅಲ್ಲಿಯ ಜೀವನದ ನಾನಾದೃಶ್ಯಗಳು– ಒಂದೊಂದೂ ಸುಳಿಸುಳಿದು ಮಾಯವಾದುವು.

ಆ ಮೇಲೆ ಅವನ ವಿದ್ಯಾರ್ಥಿಜೀವನ— ಅವನ ಬಾಳಿನಲ್ಲಿ ನಿಜವಾಗಿಯೂ ಅವನು ಸುಖವನ್ನನುಭವಿಸಿದ್ದು ಆಗಲೇ– ಆ ಕಾಲದ ಒಂದೊಂದು ದಿನವನ್ನೂ, ಘಟನೆಯನ್ನೂ ವಿವರ ವಿವರವಾಗಿ ಚಿತ್ರಿಸಿಕೊಂಡ. ಆ ಕಾಲದ ಆಶೆ-ಉತ್ಸಾಹಗಳನ್ನು ಪುನಃ ಕಲ್ಪಿಸಿಕೊಂಡ. ಆ ಕಾಲದ ಸ್ನೇಹಿತರನ್ನು ಮತ್ತೆ ಸ್ಮರಣೆಗೆ ತಂದುಕೊಂಡ. ಒಬ್ಬ ಸ್ನೇಹಿತನ ವಿಷಯವನ್ನಂತೂ ಅವನು ಮರೆಯುವಂತೆಯೆ ಇರಲಿಲ್ಲ. ಅವರ ಸ್ನೇಹಜೀವನದ ಒಂದು ಘಟನೆಯನ್ನಂತೂ ಅವನ ಸ್ನೇಹಿತನೂ ಮರೆತಿರಲಾರ. ಅವನ ಮನಸ್ಸು ಹತ್ತುವರ್ಷಗಳ ಹಿಂದಣ ಆ ದೃಶ್ಯದ ಕಡೆ ಹಾರಿತು:

* * *

"ಶೇಖರಾ ...ಶೇಖರಾ....ಲೋ ಶೇಖರಾ ಬಾಗಿಲು ತೆಗೆಯಯ್ಯಾ. ಈ ಸಾರಿ ರ್ಯಾಂಕ್ ನಿನಗೇ ಮೀಸಲು ಅಂತ ಕಾಣುತ್ತೆ. ಪ್ರಪಂಚಾನೇ ಮರ್ತು ಇಷ್ಟೊಂದು ಓದ್ತಾ ಇದ್ದೀಯಲ್ಲ."

ಕೊಠಡಿಯ ಬಾಗಿಲು ತೆಗೆಯಲಿಲ್ಲ. ಶಂಕರನಿಗೆ ಗಾಬರಿಯಾಯಿತು. ಬಾಗಿಲ ಸಂದಿನಿಂದ ಒಳಗೆ ನೋಡಿದ. ದೀಪ ಉರಿಯುತ್ತಿತ್ತು. ಬಾಗಿಲನ್ನು ಬಲವಾಗಿತಟ್ಟಿ ಮತ್ತೊಮ್ಮೆ ಕೂಗಿದ.

ಶೇಖರನು ಎದ್ದುಬಂದು ಬಾಗಿಲನ್ನು ತೆರೆದ. ಅವನ ಮುಖ ನಿಸ್ತೇಜವಾಗಿತ್ತು. ಅತ್ತಿದ್ದುದರಿಂದಲೋ ಏನೋ, ಕಣ್ಣುಗಳು ಊದಿಕೊಂಡಿದ್ದುವು. ಅವನ ಆ ಅವಸ್ಥೆಯನ್ನು ನೋಡಿ ಶಂಕರನಿಗೆ ದುಃಖವಾಯಿತು.

"ಏನೋ ಶೇಖರ ಆದು? ಇದೇಕೆ ಹೀಗಿದ್ದೀಯಾ?"

"ಏನೂ ಇಲ್ಲ ಶಂಕರ.. ನಸ್ಸೆಂತೋರಿರ್ಬಾರ್ದು..."

---

* ಮೋಲಾಳದಲ್ಲಿ ಅವಿಯು ಸ್ಥಾನ ಪಡೆದ ಕತೆಯಿದು.

ಶೇಖರನ ಬಾಯಿಂದ ಅಂತಹ ಮಾತು ಹೊರಬಂದುದನ್ನು ಶಂಕರನು ಅಂದೇ ಕೇಳಿದ್ದು. ಸ್ವಭಾವತಃ ಶೇಖರನು ವಾಚಾಳಿ, ಹಾಸ್ಯಪ್ರಿಯ. ಅವನ ಜತೆಯಲ್ಲಿದ್ದರೆ ಎಂಥವರಿಗೂ ಮನಸ್ಸಿನ ಚಿಂತೆ ಮರೆಯಬೇಕು— ಅಷ್ಟು ರಸಮಯವಾಗಿ ಮಾತನಾಡುತ್ತಿದ್ದ ವ್ಯಕ್ತಿಯದು. ಅಂತಹ ಶೇಖರ ಜೀವನದ ಬಗ್ಗೆ ಅಸ್ಪೊಂದು ಜುಗುಪ್ಸೆ ಹೋರಸಿದ್ದು ಶಂಕರನಿಗೆ ತುಂಬಾ ನೋವನ್ನುಂಟುಮಾಡಿತು. ಅದರ ಕಾರಣವನ್ನು ತಿಳಿಯಬೇಕೆಂಬ ಸ್ನೇಹಿತನಿಗೆ ಸಹಜವಾದ ತವಕ ಒಜ್ಜಾಯಿತು.

" ಶೇಖರಾ, ಬಾಗಿಲ್ಲಾ ತಾಳ್ಕೊಂಡು ನದಿ ಹೋಗಿ ಕಾಫಿ ಕುಡ್ಕೊಂಬರೋಣ. "

" ಕಾಫಿ ಗೀಫಿ ಏನೂ ಬ್ಯಾಡ ಶಂಕರ. ಈ ಹೊತ್ತು ನನಗೆ ಜೀವನವೇ ಜುಗುಪ್ಸೆಯಾಗಿದೆ. "

" ಏಳ್ಸಪರಾಯಾ ! ಅದೇನ್ವಿಷ್ಯಾ.. ದಾರೀಲ್ಹೇಳುವ್ಯಂತೆ "

ಶಂಕರನ ಅಧಿಕಾರವಾಣಿಗೆ ಶೇಖರನು ಮಣಿಯಬೇಕಾಯಿತು. ತನ್ನ ದುಃಖವನ್ನು ಶಂಕರನಲ್ಲಿ ಹೋಡಿಕೊಳ್ಳಲೇಬೇಕಾಗಿತ್ತು. ತನ್ನ ನೂರು ಕಷ್ಟಗಳಲ್ಲಿ ನೆರವು ಕೊಟ್ಟಿದ್ದವನು ಶಂಕರನೇ. ಅವನಿಲ್ಲದೆ ಶೇಖರನ ಯಾವ ಸಮಸ್ಯೆಯೂ ಬಗೆಹರಿಯುತ್ತಿರಲಿಲ್ಲ. ಮೇಲಾಗಿ ಆ ಊರಿನಲ್ಲಿ ಶಂಕರನಲ್ಲದೆ ಕೇಳುವರಾರು? ಸ್ನೇಹಿತರೆನಿಸಿಕೊಳ್ಳುವ ಅನೇಕ ಸಹದ್ಯೋಗಿಗಳೇನೋ ಇದ್ದರು. 'ಜೀವಕ್ಕೆ ಜೀವಕೊಡುವ ಒಬ್ಬ ಸ್ನೇಹಿತನಾದರೂ ಇರುವನಲ್ಲ!' ಎಂದು ಶೇಖರನಿಗೆ ಸ್ವಲ್ಪ ಸ್ಥೈರ್ಯ ಬಂತು. ಕೊರಡಿಯ ಬಾಗಿಲು ತಾಕಿ ಕೊಂಡು ಶಂಕರನೊಡನೆ ಹೊರಟ. ಕೊಂಚ ದೂರದ ತನಕ ಯಾರೂ ಮಾತನಾಡಲಿಲ್ಲ. ಒಳಕ ಶಂಕರನೇ ಪೊದಲು ಮಾಡಿದ:

"ಅದೇನು ಶೇಖರಾ ವಿಷಯ? ಅದ್ಯಾಕೆ ಇಂದು ಹೀಗಿದ್ದೀಯಲ್ಲ?"

" ಶಂಕರಾ, ನಿನ್ನಂತಹ ಸ್ನೇಹಿತನಿರೋದು ನಿಜವಾಗಿ ನನ್ನ ಅದೃಷ್ಟ. ಆದರೆ ಇದು ನಿನಗೆ ಮಾತ್ರ ದುರದೃಷ್ಟ. ನಿನ್ನ ಕಷ್ಟಗಳೇ ಸಾಕಾಗಿರೋವಾಗ, ನನ್ನ ಗೋಳುಗಳನ್ನು ಬೇರೆ ನಿನಗೆ ಹಂಚ್ತಾ ಇದ್ದೇನೆ. ನನ್ನಿಂದ ನಿನಗಂತೂ ಲೇಶವೂ ಉಪಯೋಗವಿಲ್ಲ. "

" ಅದೆಂಥಾ ಮಾತು ಶೇಖರಾ. ನಿಜವಾಗಿ ಸ್ನೇಹಿತನಾದವನು ಇದನ್ನು ದುರದೃಷ್ಟ ಎಂದು ಎಂದಿಗೂ ಭಾವಿಸಲಾರ. ಇದುವರೆಗೆ ನನಗೆ ನೀನೆಂದೂ ಸಹಾಯ ಮಾಡಿಲ್ಲಾಂದ ಮಾತ್ರಕ್ಕೆ ' ಮಾಡಿಯೇನೇ ' ಎಂದು ಬದುಸುವ ನಿನ್ನ ಸ್ನೇಹದ ಬೆಲೆ ಕಡಿಮೆಯಾಗುತ್ತೇ? ಅದೆಲ್ಲಾ ಹಾಗಿರ್ಲಿ. ನಿನ್ನ ಸಮಾಚಾರ ಏನು ಹೇಳು!"

"ಆ ದಿನ ಪರೀಕ್ಷೆಗೆ ಕಟ್ಟೋದಕ್ಕೆ ದುಡ್ಡು ಕಳಿಸಿಕೊಡಿ ಎಂದು ನಮ್ಮ ಚಿಕ್ಕಪ್ಪನವರಿಗೆ ಕಾಗದ ಬರೆದಿದ್ದೆ ನೋಡು— ಆದಕ್ಕೆ ಈ ಹೊತ್ತು ಉತ್ತರಬಂತು. "

" ಏನ್ಬರ್ದಿದ್ದಾರಪ್ಪ ? ದುಡ್ಕಳ್ಸಿದಾರಾನೆ ? "

" ನೀನೇ ನೋಡಪ್ಪ. "

ಶೇಖರನು ಕಾಗದವನ್ನು ಶಂಕರನ ಕೈಗೆ ಕೊಟ್ಟ. ನೋಟಲೂ ಸಿಕ್ಕಿತು. ಶಂಕರ ಕಾಗದವನ್ನು ಓದಲೊದಗಿದ. ಈಗಿನ ಅಂಧಕಾರಮಯವಾದ ಮನಸ್ಸಿನಲ್ಲೂ ಕೂಡ ಆ ಕಾಗದ ಶಂಕರನ ಕಣ್ಣಿಗೆ ಕಟ್ಟಿದ:

" ಬ|| ಶೇಖರನಿಗೆ ಆಶೀರ್ವಾದಗಳು. ಉ|| ಕು|| ಸಾಂಪ್ರತ.

ನಿನ್ನ ಪತ್ರ ತಲ್ಪಿತು. ನಿಮ್ಮ ತಂದೆ ಗತಿಸುವಾಗ ನಿನ್ನ ವಿದ್ಯಾಭ್ಯಾಸಕ್ಕೆಂದಾಗಲಿ ನಿನ್ನ ಕೈಯಲ್ಲಿ ಗಂಟೇನೂ ಕೊಟ್ಟಿರಲಿಲ್ಲವೆಂಬುದು ನಿನಗೆ ತಿಳಿದಿರಬೇಕು. ಆದರೂ ಇದುವರೆಗೆ ನಿನ್ನ ಜವಾಬ್ದಾರಿಗಳನ್ನು ನೋಡಿಕೊಳ್ಳುತ್ತ ನಿನಗಾಗಿ ಸಾಲಸೋಲ ಮಾಡಿ, ಇದುವರೆಗೆ ನಿನ್ನ ಖರ್ಚು ವೆಚ್ಚಗಳನ್ನೆಲ್ಲ ಸಹಿಸಿದ್ದಾಯಿತು. ನಿನಗೆ ಸಾಮರ್ಥ್ಯ ನನ್ನ ಕಷ್ಟಗಳ ಲವಲೇ ಇದ್ದಂತೆ ತೋರುವುದಿಲ್ಲ. ಈ ಸಾರಿ ಮಳೆಯಿಲ್ಲದೆ ಬೆಳೆಯೆಲ್ಲ ಕೆಟ್ಟುಹೋಯಿತು. ಕೆದಾಯ ಕೂಡ ಕೊಟ್ಟಿಲ್ಲ, ನಿನಗಾಗಿ ಇದುವರೆಗೆ ಮಾಡಿದ ಸಾಲಗಳ ತಗಾದೆ ಹೆಚ್ಚಾಗುತ್ತಿದೆ. ಇನ್ನು ಮೇಲೆ ನಿನ್ನ ವ್ಯವಹಾರಗಳನ್ನು ನೀನೇ ನೋಡಿಕೊಂಡು, ನಿನ್ನ ಇಷ್ಟ ಬಂದಂತೆ ಇರಬಹುದು. ನಿನ್ನ ಓದನ್ನು ಮುಗಿಸಿ ಯಾವುದಾದರೂ ಒಂದು ಕೆಲಸ ನೋಡಿಕೊಳ್ಳುವುದು ಒಳ್ಳೆಯದೆಂದು ನನಗೆ ತೋರುತ್ತೆ. ನೀನು ಹೇಗೆ ಮಾಡಿದರೂ ಈ ಜವಾಬ್ದಾರಿ ಹೊರುವುದು ನನ್ನಿಂದಂತೂ ಸಾಧ್ಯವಿಲ್ಲ.

ಇಂತು, ಆ|| ಗಳು....."

ಕಾಗದ ಓದಿ ಮುಗಿಸುವಷ್ಟರಲ್ಲಿ ಕಾಫಿ ಬಂತು. ಇಬ್ಬರೂ ಮೌನವಾಗಿ ಕುಡಿದು, ದುಡ್ಡು ಕೊಟ್ಟು ಹೊರಗೆ ಬಂದರು. ಸ್ವಲ್ಪ ಹೊತ್ತು ಯಾರೂ ಮಾತನಾಡಲಿಲ್ಲ. ಶಂಕರನೇ ಮೊದಲು ಮಾಡಿದ:

" ಈಗೇನ್ಮಾಷ್ಟೇಕೂಂತಿಯಾ ಶೇಖರಾ ? "

ಮನೋರಂಜನ ಗ್ರಂಥಮಾಲಾ

ವರುಷದಲ್ಲಿ ಆರು ಸರಸ ಗ್ರಂಥಗಳು !
ವರುಷದಲ್ಲಿ ಒಟ್ಟು ೬೦೦ಕ್ಕೂ ಪುಟಗಳು !!
ವಾರ್ಷಿಕ ಚಂದಾ ೪–೮–೦ (ಅ. ಪೆ. ಬೇರೆ)

ಪ್ರಕಟವಾಗಿವೆ : ಪರಿತ್ಯಕ್ತೆ
ಪತ್ತೆದಾರಿ ಕಾದಂಬರಿ

ಅಚ್ಚಿನಲ್ಲಿವೆ : ಎನ್ಕೌಂಟರ್— ಏಕಾಂಕಗಳು
ಶ್ರೀ. ಎನ್. ಕೆ. ಕುಲಕರ್ಣಿಯವರ ಏಕಾಂಕಗಳ ಸಂಗ್ರಹ
ಕೂಡಲೆ ಚಂದಾದಾರರಾಗಿರಿ !

ಮನೋರಂಜನ ಪ್ರಕಾಶನ ಸಮಿತಿ, ಧಾರವಾಡ

"ಏನ್ಮಾಡೋದೋ ನನ್ನೊಂದೂ ತಿಳ್ಯೋದಿಲ್ಲ ಶಂಕರ. ನನ್ನ ಓದು ಇಲ್ಲಿಗೇ ಮುಗಿಯಿತೂ ಅಂತ ಕಾಣುತ್ತೆ. ಅದಕ್ಕೆ ಬದಲಾಗಿ ನನ್ನ ಜೀವನವಾದರೂ ಮುಗೀಬಾರ್ದೆ—ಅನಿಸುತ್ತೆ."

ಶೇಖರನ ಕಣ್ಣುಗಳಲ್ಲಿ ನೀರೂರಿತು. ಶಂಕರನಿಗೆ ಅದನ್ನು ನೋಡುವುದಾಗಲಿಲ್ಲ.

"ಇದೇನು ಶೇಖರಾ, ಹೀಗೆ ಹೆಂಗಸ್ರು ಹಾಗೆ ಅತ್ತರೆ ಏನ್ಮಾಡಿಧಾಗಾಯ್ತು? ಏನಾದ್ರೂ ಯೋಚ್ನೆ ಮಾಡೋಣ. ನನಗೂ ತಂದೆಯಿಲ್ಲ, ತಾಯಿಯಿಲ್ಲ. ಆದರೆ ಧೈರ್ಯವಾಗಿರು, ಶೇಖರ, ದೇವರ ದಯೆಯಿಂದ ನಿನ್ನ ಓದು ಮುಂದುವರೆಯುತ್ತೆ. ನಾಳೆ ಸಾಯಂಕಾಲ ನೀನು ಪರೀಕ್ಷೆಗೆ ಕೊಡ್ಬೇಕಾದ ದುಡ್ಡು ತಂದ್ಕೊಡ್ತೀನಿ."

ಶೇಖರನಿಗೆ ಆಶ್ಚರ್ಯವಾಯಿತು. ಶಂಕರನ ಕತೆ ಅವನಿಗೆ ಗೊತ್ತಿತ್ತು. ಅವನ ತಾಯಿ-ತಂದೆ ಗತಿಸಿದ್ದರು. ಶಂಕರನು ಅವನ ಅಣ್ಣನ ಮನೆಯಲ್ಲಿ ಇದ್ದ. ಅಣ್ಣ ಸಂಸಾರಿ. ಯಾವುದೋ ಆಫೀಸಿನಲ್ಲಿ ಒಬ್ಬ ಸಣ್ಣ ಗುಮಾಸ್ತೆ. ಇಷ್ಟು ಹೇಳಿ ಉಳಿದುದೆಲ್ಲವನ್ನೂ ಊಹೆಗೆ ಬಿಟ್ಟರೆ ಆಯಿತು

ಶೇಖರ ಕೇಳಿದ: "ಇದೇನು ಶಂಕರಾ, ನೀನ್ಹೇಳೋದೊಂದೂ ನನಗೆ ಅರ್ಥನೇ ಆಗೋದಿಲ್ವಲ್ಲ. ನೀನು ಎಲ್ಲಿಂದ ತರ್ತೀ?"

"ಆದೆಲ್ಲ ತಕ್ಕೊಂಡು ನಿನ್ಗೇನು ಶೇಖರ? ನಾಳೆ ನಿನಗೆ ದುಡ್ಡು ತಂದ್ಕೊಟ್ಟರೆ ಆಯಿತೋ ಇಲ್ಲವೊ? ಇನ್ನು ನೀನು ಯೋಚ್ನೆಗೀಚ್ನೆ ಮಾಡ್ಕೊಬ್ದು. ಊಟಮಾಡಿ ಮಲಗ್ಬಿಡು. ನಾಳೆ ಸಾಯಂಕಾಲ ಐದು ಗಂಟೆ ಹೊತ್ತಿಗೆ ನಿನ್ನ ರೂಮ್ಗುತ್ರ ಒತ್ತೀನಿ."

ಶಂಕರ ಮನೆಯ ಕಡೆಗೂ, ಶೇಖರ ರೂಮಿನ ಕಡೆಗೂ ಹೊರಟರು. ಇಬ್ಬರ ತಲೆಯಲ್ಲೂ ಯೋಚನೆ ತುಂಬಿತ್ತು. ಇವನ ಚಿಂತೆ ಅವನಿಗೆ, ಅವನ ಚಿಂತೆ ಇವನಿಗೆ.

ದುಡ್ಡು ಒದಗಿಸುತ್ತೀನೆಂದು ಹೇಳಿದ್ದೇನೋ ಸರಿ, ಆದರೆ ಹೇಗೆಂಬುದನ್ನು ಅವನು ಯೋಚಿಸಿ ಇರಲಿಲ್ಲ. ಅದಕ್ಕೆ ಅವಕಾಶವೂ ಇರಲಿಲ್ಲ. "ಸ್ನೇಹಿತ ಕಷ್ಟದಲ್ಲಿದ್ದಾನೆ. ಅವನಿಗೆ ನೆರವು ನೀಡಬೇಕು" ಎಂದಿಷ್ಟೇ ಅವನ ಯೋಚನೆ. ಆದರೆ ಈಗೇನು ಮಾಡಬೇಕು?

ಎಷ್ಟೋ ಹೊತ್ತು ಯೋಚಿಸಿದ ಮೇಲೆ, ಏನೋ ಯೋಚನೆ ಹೊಳೆಯಿತು. ಕಡೆಗೊಮ್ಮೆ ಏನೋ ನಿರ್ಧಾರಕ್ಕೆ ಬಂದ.

ಕಾಲೇಜಿನ ಅಧ್ಯಾಪಕರೊಬ್ಬರು ಶಂಕರನಿಗೆ ತುಂಬಾ ಪರಿಚಿತರು. ಅವರಿಗೆ ಶೇಖರನ ಪರಿಚಯವೂ ಇತ್ತು. ಅವರಿಗೆ ಶಂಕರ ಆಗಾಗ ಅನೇಕ ಸಣ್ಣಪುಟ್ಟ ಕೆಲಸಗಳನ್ನು ಮಾಡಿಕೊಡುತ್ತಿದ್ದನು. ಶಂಕರನು ಅವರಿಂದ ಸಹಾಯ ಒದಗೀತೆಂದು ಆತಿಸಿ ಅತ್ತ ಕಡೆಗೆ ಹೊರಟ.

ಶೇಖರನ ದುರದೃಷ್ಟವೋ, ಶಂಕರನ ಸ್ನೇಹಪರೀಕ್ಷೆಯೋ, ಶಂಕರನು ಅಧ್ಯಾಪಕರ ಮನೆಗೆ ಹೋದಾಗ, ಅವರು ಹಾಸಿಗೆ ಹಿಡಿದಿದ್ದರು! ಶಂಕರನು ನಿರಾಶೆಯಿಂದ ಕುಸಿದ. ಮತ್ತೆ ಯೋಚನೆ ಮೊದಲಾಯಿತು.

ಇದುವರೆಗಾಗಲೇ ಹೊತ್ತು ಬಹಳವಾಗಿತ್ತು. ಶಂಕರ ಮನೆಯ ಕಡೆಗೆ ಹೊರಟ. ತಲೆನೋವೆಂದು ಹೇಳಿ ಊಟವನ್ನು ತಪ್ಪಿಸಿಕೊಂಡ. ಪಾತಪ್ರವಚನಗಳಂತೂ ದೂರ ಉಳಿದುವು. ರಾತ್ರಿಯೆಲ್ಲ ಯೋಚಿಸಿದ. ಯಾವಾಗ ನಿದ್ದೆ ಬಂತೋ! ಅಲ್ಲೂ ಕನಸು— ಶೇಖರನ ವಿಷಯವಾಗಿ!

....ತಾನೂ ಶೇಖರನೂ ಕೊಳವೊಂದರಲ್ಲಿ ಈಜುತ್ತಿದ್ದಾರೆ. ದಡದಿಂದ ಬಹುದೂರ ಹೋಗಿದ್ದಾರೆ. ಇಬ್ಬರಿಗೂ ಆಯಾಸವಾಗಿದೆ. ಹಿಂದಿರುಗಬೇಕೆನ್ನುವಷ್ಟರಲ್ಲಿ ಮಳೆ ಮೊದಲಾಗುತ್ತದೆ. ಮೊದಲೇ ದಣಿವು. ಮಳೆಯಿಂದ ಕಣ್ಣು ಕಾಣದಾಗುತ್ತದೆ. ಶೇಖರ ಆಯಾಸದಿಂದಲೂ, ಹೆದರಿಕೆಯಿಂದಲೂ ಕುಸಿಯುತ್ತಾನೆ. ಶಂಕರನು ತನಗೇ ದಣಿವಾಗಿದ್ದರೂ ಶೇಖರನ ಸಹಾಯಕ್ಕೆ ಹೋಗುತ್ತಾನೆ. ಕಷ್ಟದಿಂದ ದಡವನ್ನು ಸಮೀಪಿಸುತ್ತಾರೆ. ಶೇಖರನೇನೋ ದಡವನ್ನು ಸುರಕ್ಷಿತನಾಗಿ ತಲುಪಿದ; ಶಂಕರನ ಕಾಲಿಗೆ ಏನೋ ತೊಡರಿ ಮುಳುಗುತ್ತಾನೆ; 'ಶೇಖರಾ! ಶೇಖರಾ!' ಎಂದು ಕೂಗಿಕೊಳ್ಳುತ್ತಾನೆ. ಶೇಖರನಿಗೆ ಕೇಳಿಸಿತೋ ಇಲ್ಲವೊ....ಮತ್ತೊಮ್ಮೆ ಅವನನ್ನು ಕೂಗುವಷ್ಟರಲ್ಲಿ ಎಚ್ಚರವಾಗುತ್ತದೆ.

ಶಂಕರನ ಮೈಯೆಲ್ಲ ಬೆವತಿತು. ಆಗಲೇ ನಾಲ್ಕು ಗಂಟೆಯಾಗಿತ್ತು. ಮತ್ತೆ ಮಲಗುವುದಾಗಲಿಲ್ಲ. ಅಡ್ಡಾಡುತ್ತ ಹೊರಟ. ದುಡ್ಡಿಗೇನು ಮಾಡಬೇಕು?— ಒಂದೇ ಯೋಚನೆ ಅವನ ತಲೆಯಲ್ಲಿ ಘೂರ್ಮಿಸುತ್ತಿತ್ತು.

ಶಂಕರ ಪುನಃ ಮನೆಗೆ ಬರುವ ವೇಳೆಗೆ ಆರು ಗಂಟೆಯಾಗಿತ್ತು. ನಾಶ್ತಾವಿಧಿಗಳನ್ನು ಹೇಗೋ ಮಾಡಿ ಮುಗಿಸಿದ. ತನ್ನ ಕೊಠಡಿಯ ಕಡೆಗೆ ಹೋಗಬೇಕೆನ್ನುವಷ್ಟರಲ್ಲಿ 'ಶಂಕರಾ!' ಎಂದು ಕೂಗುತ್ತ ಅವರಣ್ಣ ಬಂದರು. "ಗಿರಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ, ರಾತ್ರಿ ಜ್ವರ ಬಂದಿತ್ತೆಂದು ಹೇಳಿ ಔಷಧಿ ತೆಗೆದುಕೊಂಡು ಬಾ!" ಎಂದರು.

ಗಿರಿ ಅಣ್ಣನ ಮಗು. ಶಂಕರ ಮಗುವನ್ನೆತ್ತಿಕೊಂಡು ಆಸ್ಪತ್ರೆಯ ಕಡೆಗೆ ಹೊರಟ. ದಾರಿಯುದ್ದಕ್ಕೂ ಶೇಖರನದೇ ಯೋಚನೆ.

ಸ್ವಲ್ಪ ದೂರ ಹೋಗುವುದರಲ್ಲಿ ಮಗುವೇಕೋ ಅತ್ತಿತು. ಏಕೆಂದು ನೋಡುವಾಗ ಮಗು ಸೊಂಟದ ಕಡೆ ಕೈತೋರಿಸಿತು. ಚಿನ್ನದ ಉಡಿದಾರದ ಒಂದು ರೇಕು ಎದ್ದು ಮಗುವಿನ ಮೈಗೆ ಚುಚ್ಚುತ್ತಿತ್ತು. ಶಂಕರನಿಗೆ ಮಿಂಚಿನಂತೆ ಒಂದು ಯೋಚನೆ

ಹೊಳೆಯಿತು. ಉಡಿದಾರವನ್ನು ಬಿಚ್ಚಿ ಜೇಬಿನಲ್ಲಿಟ್ಟುಕೊಂಡ; ಆಸ್ಪತ್ರೆಯಿಂದ ಬಂದವನೇ ಮನೆಬಿಟ್ಟು ಹೊರಟ. ಪರಿಚಿತನಾಗಿದ್ದ ಒಬ್ಬ ಅಕ್ಕಸಾಲೆಯ ಬಳಿಗೆ ಹೋದ. ಗಡಿಯಾರದ ಚೈನು ಕೊಳ್ಳಬೇಕೆಂದು ನೆವಹೇಳಿ ಅದನ್ನು ಮಾರಿದ.

ಶಂಕರನ ಆನಂದಕ್ಕೆ ಪಾರವೇ ಇಲ್ಲ. ತಾನು ಮಾಡಿದುದು ಸರಿಯೇ ತಪ್ಪೇ—ಎನ್ನುವ ವಿಚಾರವೇ ಅವನಿಗೆ ಬರಲಿಲ್ಲ ; ಪರಿಣಾಮದ ಚಿಂತೆಯೂ ತೊರಲಿಲ್ಲ. ಶೇಖರನ ಕಷ್ಟ ಕಳೆಯಿತಲ್ಲಾ ಎನ್ನುವುದಷ್ಟೇ ಅವನ ಹಿಗ್ಗು. ಐದು ಗಂಟೆಗೆ ಬರುವನೆಂದು ಹೇಳಿದ್ದರೂ ಆಗಲೇ ಶೇಖರನ ಕೊಠಡಿಗೆ ಓಡಿದ. — ಹಣವನ್ನು ನೋಡಿ ಶೇಖರನು ಚಕಿತನಾದ

" ಇದೇನು ಶಂಕರ, ಈಗ್ಲೇ ಬಂದ್ಬಿಟ್ಟೆ! ಇಷ್ಟು ದುಡ್ಡು ಎಲ್ಲಿತ್ತು ? "

" ಎಲ್ಲೂ ಇಲ್ಲ ಶೇಖರ ನಮ್ಮ ತಾಯಿ ನನ್ನ ಸೊಂಟದಲ್ಲಿ ಒಂದು ಚಿನ್ನದ ಉಡಿದಾರ ಹಾಕಿದ್ದರು; ಹೇಗಿದ್ದರೂ ದೊಡ್ಡವನಾದೆ. ಉಡಿದಾರದ ಆಗತ್ಯ ಕಾಣಲಿಲ್ಲ. ಅದನ್ನು ಮಾರಿ ದುಡ್ಡು ತಂದಿದ್ದೇನೆ. "

ಶೇಖರನು ಏನನ್ನೊ ಹೇಳಲು ಹೊರಟ, ಆದರೆ ಶಂಕರ ಅವನನ್ನು ತಡೆದು " ಇನ್ನೊಂದ್ಮಾತೂ ಬೇಡ. ದೇವರ ದಯದಿಂದ ನಿನ್ನ ಓದು ಮುಂದುವರಿದರೆ ಸಾಕು. ಇನ್ನು ಕಾಲೇಜಿಗೆ ಹೊತ್ತಾಗುತ್ತೆ, ಸಾಯಂಕಾಲ ಬರುತ್ತೇನೆ. " ಎಂದು ಹೇಳಿ ಹೊರಟುಬಿಟ್ಟನು.

* * * *

ಪರೀಕ್ಷೆ ಮುಗಿಯಿತು. ಶೇಖರ ಎಲ್ಲರ ನಿರೀಕ್ಷೆಗಿಂತ ಜೆನ್ನಾಗಿಯೇ ಬರೆದಿದ್ದ. ನಿಜವಾಗಿಯೂ ರ್ಯಾಂಕ್ ಹೊಡೆಯುವ ಧೈರ್ಯವಾಯಿತು. ಶಂಕರನೂ ತಕ್ಕಮಟ್ಟಿಗೆ ಮಾಡಿದ್ದ.

ಶೇಖರ ಊರಿಗೆ ಹೊರಡಬೇಕಾದ ದಿನ ಬಂದಿತು. ಗೆಳೆಯರಿಬ್ಬರಿಗೂ ಬಹಳ ದುಃಖವಾಯಿತು. ಶೇಖರನ ಹೃದಯ ಕೃತಜ್ಞತೆಯ ಭಾರದಿಂದ ಕುಸಿದಿತ್ತು. ಶಂಕರನ ಹೃದಯ ವಿಚ್ಛೇಪವಿಯೋಗದಿಂದ ನುಡುತ್ತಿತ್ತು.

ರೈಲು ಹೊರಟಿತು. ಶಂಕರನ ಕಣ್ಣುಗಳಲ್ಲಿ ನೀರೂರಿತು. ಶೇಖರನಿಗೂ ಹಾಗೆಯೇ ಆಗಿರಬೇಕು. ಅಂತೂ ಗೆಳೆಯರು ದೂರವಾದರು....

* * * *

"ನೀರು"—ರೋಗಿಯ ಕೃಶವಾದ ಧ್ವನಿ, ಶಂಕರನ ಕಲ್ಪನಾ ಸಮಾಧಿಯನ್ನು ಭಂಗಗೊಳಿಸಿತು. ನಿಟ್ಟುಸಿರೊಂದು ಕೋಣೆಯ ಗಾಳಿಯಲ್ಲಿ ಲೀನವಾಯಿತು.

ಬೆಳಕು ಹರಿಯುತ್ತಿತ್ತು. ಆದರೇನು? ಶಂಕರನ ಹೃದಯ ಬೆಳಗಲಿಲ್ಲ. ರೋಗಿಯ ಸ್ಥಿತಿ ಕ್ಷಣಕ್ಷಣಕ್ಕೆ ಕೆಡುತ್ತಿತ್ತು.

ಎಂದಿನಂತೆ ಎಂಟು ಗಂಟೆಯ ವೇಳೆಗೆ ಡಾಕ್ಟರು ಬಂದರು. ಅವರ ಅಭಿಪ್ರಾಯ ತಿಳಿಯಲು ಶಂಕರ ಕಾತರಹೃದಯದಿಂದ ಕಾದಿದ್ದ.

ರೋಗಿಯನ್ನು ಪರೀಕ್ಷಿಸಿ ಡಾಕ್ಟರು ಶಂಕರನನ್ನು ಹೊರಗೆ ಕರೆದು, " ನೋಡ್ರಿ, ಇನ್ನು ನಿಮ್ಮಿಂದ ಮುಚ್ಚಿಡಲು ನನಗೆ ಇಷ್ಟವಿಲ್ಲ. ರೋಗಿಯ ಸ್ಥಿತಿ ತುಂಬಾ ಕೆಟ್ಟಿದೆ. ನೀವು ಎಲ್ಲಕ್ಕೂ ಸಿದ್ಧರಿರಬೇಕು. ಕಡೆಯದೊಂದು ಪ್ರಯತ್ನವನ್ನು ಮಾಡುತ್ತೇನೆ. ಉಳಿದುದೆಲ್ಲವೂ ದೈವೇಚ್ಛೆ. ಆಸ್ಪತ್ರೆಗೆ ಬಂದು ಔಷಧಿ ತೆಗೆದುಕೊಂಡು ಬನ್ನಿ. ಈ ಚೀಟಿಯಲ್ಲಿ ಒಂದು ಇಂಜಕ್ಷನ್ ಟ್ಯೂಬಿನ ಹೆಸರನ್ನು ಬರೆದಿದ್ದೇನೆ. ನಾನು ಸಾಯಂಕಾಲ ಬರುವ ವೇಳೆಗೆ ನಾಲ್ಕು ಟ್ಯೂಬುಗಳನ್ನು ತಂದಿಟ್ಟಿರಿ. ಈ ದಿನ ರಾತ್ರಿ ಕಳೆದರೆ ಮುಂದೆ ಹೆಚ್ಚು ಚಿಂತೆಯಿಲ್ಲ." ಎಂದು ನಿಧಾನವಾಗಿ ಹೇಳಿದರು.

" ಟ್ಯೂಬಿನ ಬೆಲೆ ಎಷ್ಟು ? "

ಐದು ರೂಪಾಯಿಗೊಂದು ಇರಬಹುದೆಂದು ಹೇಳಿ ಡಾಕ್ಟರು ಹೊರಟರು.

ಜೀವ ತಲ್ಲಣಿಸಹತ್ತಿತು. ಇಪ್ಪತ್ತು ರೂಪಾಯಿಗಳನ್ನು ತರುವುದೆಲ್ಲಿಂದ? ತರದಿದ್ದರೆ?....ಪರಿಣಾಮವನ್ನು ಊಹಿಸಿ ಶಂಕರನ ಮೈ ಜೀವರಿಳು.

ಶಂಕರ ಆಸ್ಪತ್ರೆಯ ಕಡೆ ಹೊರಟ. ದುಡ್ಡಿಗೆ ಏನು ಮಾಡಬೇಕೆಂದು ಒಂದೇಸಮನೆ ಯೋಚಿಸಹತ್ತಿದನು. ಅವನ ಸುತ್ತಲಿನ ಜಗತ್ತು ಎಂದಿನಂತೆ ಇವನ ಪರಿವೆಯೇ ಇಲ್ಲದೆ ತನ್ನ ಚಟುವಟಿಕೆಯನ್ನು ನಡಿಸಿತ್ತು. ಎಲ್ಲರೂ ತನ್ನನ್ನು ಅಣಕಿಸುವರೋ ಎನ್ನಿಸಿತು ಶಂಕರನಿಗೆ.

ದಾರಿಯಲ್ಲಿಯೇ ಕಾಲೇಜು. ಅಲ್ಲಿ ವಿದ್ಯಾರ್ಥಿಗಳು ತಂಡ ತಂಡವಾಗಿ ನೆರೆದಿದ್ದರು. ಅವರಾಡುತ್ತಿದ್ದ ಮಾತುಗಳಿಂದ ಅವರು ಯಾರನ್ನೋ ನಿರೀಕ್ಷಿಸುತ್ತಿರುವಂತೆ ತೋರಿತು. ಶಂಕರನ ಮನಸ್ಸು ಇದಾವುದನ್ನೂ ಗಮನಿಸುವ ಸ್ಥಿತಿಯಲ್ಲಿರದಿದ್ದರೂ, ವಿದ್ಯಾರ್ಥಿಸಮೂಹ ಅವನಿಗೆ ತನ್ನ ವಿದ್ಯಾರ್ಥಿಜೀವನದ ನೆನಪು ಕೊಟ್ಟಿತು. ಹಿಂದಿನ ರಾತ್ರಿಯಂತೆ ಮತ್ತೆ ಗತ ಜೀವನದ ಮೆಲಕು ಹಾಕುತ್ತ ನಿಂತ. " ನನ್ನ ಕಷ್ಟಗಳು ಅವನಿಗೆ ತಿಳಿದಿದ್ದರೆ" ಎಂದು ಅನೇಕ ಬಾರಿ ಅಂದುಕೊಂಡ. ಆದರೆ ಅವನೆಲ್ಲೊ ತಾನೆಲ್ಲೋ!

ಶಂಕರ ಆಸ್ಪತ್ರೆಯಿಂದ ಔಷಧಿ ತೆಗೆದುಕೊಂಡು ಅದೇ ದಾರಿಯಲ್ಲೇ ಬಂದ. ಇಪ್ಪತ್ತು ರೂಪಾಯಿಗಳ ಯೋಚನೆ ಮತ್ತೆ ಅವನನ್ನು ತಿನ್ನಹತ್ತಿತ್ತು.

ಇದ್ದಕ್ಕಿದ್ದಂತೆ ಜಯಘೋಷದ ಮೊಳಗು ಕೇಳಿತು. ಅದೇನೆಂದು ನೋಡುವಾಗ, ಸುಂದರವಾದ ಕಾರೊಂದರಿಂದ ದೊಡ್ಡ ಅಧಿಕಾರಿಗಳೊಬ್ಬರು ಇಳಿಯುತ್ತಿದ್ದುದನ್ನೂ, ಅವರ ಸಲುವಾ-

ಗಿಯೇ ಜಯಘೋಷವಾಗುತ್ತಿದ್ದುದನ್ನೂ ಕಂಡ.

ಆ ಅಧಿಕಾರಿಯನ್ನು ಶಂಕರ ಹಿಂದೆಂದಾದರೂ ಕಂಡಿದ್ದನೇ? ಆ ಮುಖವನ್ನು ನೋಡಿ ಶಂಕರನಿಗೆ ಏನೋ ಆಯಿತು. ಏನೋ ಕಾತರತೆ ಹುಟ್ಟಿತು. ತನ್ನ ಅನುಮಾನವನ್ನು ಬಿಳಿಯಗೊಟ್ಟು ಆ ಮೇಲೆ ನಿರಾಶನಾಗಬೇಕಾದೀತೇನೋ ಎಂದು ಅಂಜಿ, ವಿದ್ಯಾರ್ಥಿಯೊಬ್ಬನನ್ನು ಪ್ರಶ್ನಿಸಿದ: "ಅವರು ಯಾರು?"

"ಶೇಖರರಾಯರು,.... ಈಗ ಇಲ್ಲಿ ಅವರ ಭಾಷಣವಿದೆ."

ಶಂಕರನ ಅನುಮಾನ ಅಲ್ಲಿಗೂ ಮಾಯವಾಗಲಿಲ್ಲ. ಮತ್ತೊಮ್ಮೆ ಆ ಅಧಿಕಾರಿಯ ಕಡೆ ನೋಡಿದ. ಅಷ್ಟರಲ್ಲಿ ಶೇಖರರಾಯರು ವೇದಿಕೆಯನ್ನೇರಿದ್ದರು. ಅವರ ಭಾಷಣ ಮೊದಲಾಗುವುದರಲ್ಲಿ ಇತ್ತು.

ಶಂಕರನಿಗೆ ಅನುಮಾನವುಳಿಯಲಿಲ್ಲ. "ಅವನೇ, ಅವನೇ" ಎಂದು ಹುಚ್ಚನಂತೆ ಚಪ್ಪಾಳೆ ತಟ್ಟಿದ. ಜೀವರು ಕಡೆಗೊಮ್ಮೆ ದಯಾದೃಷ್ಟಿ ಬೀರಿದನೆಂದುಕೊಂಡ. ಶೇಖರನೆಮ್ಮದಿ ತನ್ನ ದುಃಖವನ್ನು ತೋಡಿಕೊಂಡು ಹೃದಯವನ್ನು ಹಗುರು ಮಾಡಿಕೊಳ್ಳಬೇಕೆಂದು ಮನಸ್ಸು ಹಾತೊರೆಯಿತು. ಆದರೆ ಅದು ಸಮಯವಲ್ಲ. ಮೊದಲಿಗೆ ಔಷಧ ಕೊಡಬೇಕಾಗಿತ್ತು.

ಶಂಕರ ಔಷಧವನ್ನು ಕೊಟ್ಟು ಬರುವ ವೇಳೆಗೆ ಭಾಷಣ ಮುಗಿಯುವ್ತ ಬಂದಿತ್ತು. ನಡು-ನಡುವೆ ಸಭಿಕರ ನಗು; ಚಪ್ಪಾಳೆಗಳ ಮೊಳಗು. ಶೇಖರ ತನ್ನ ವಾಗ್ಝರಿಯಿಂದ ಸಭಿಕರನ್ನು ಸೆರೆ ಹಿಡಿದಿದ್ದ.

ಭಾಷಣ ಮುಗಿದ ಕೂಡಲೇ ಅವನ ಬಳಿಗೆ ಹೋಗಬೇಕೆಂದು ಶಂಕರನಿಗೆ ಕಾತರ. ಆದರೆ ಶೇಖರನನ್ನು ಸುತ್ತುಗಟ್ಟಿದ್ದ ವಿದ್ಯಾರ್ಥಿಗಳ, ಅಧಿಕಾರಿಗಳ ಸಮೂಹವನ್ನು ಭೇದಿಸುವುದು ಸಾಧ್ಯವಾಗಲಿಲ್ಲ. ಶಂಕರನಿನ್ನೂ ಬಡ್ಡಾಡುತ್ತಿರುವಷ್ಟರಲ್ಲೇ ಶೇಖರ ಕಾರನ್ನು ಹತ್ತಿದ; ಜತೆಯಲ್ಲಿ ಒಬ್ಬಿಬ್ಬರು ಅಧಿಕಾರಿಗಳೂ ಹತ್ತಿದರು.

ಶಂಕರನಿಗೆ ಏನು ಮಾಡಬೇಕೆಂಬುದು ತೋರಲಿಲ್ಲ. ಹತ್ತಿರ ಇದ್ದ ಒಬ್ಬ ವಿದ್ಯಾರ್ಥಿಯನ್ನು ಪ್ರಶ್ನಿಸಿದ: "ಅವರು ಹೊರಟು ಹೋದರೇ?

"ಇಲ್ಲ. ಮಧ್ಯಾಹ್ನ ಹೊರಡುತ್ತಾರೆ. ಈಗ ಟಿ. ಬಿ. ಯಲ್ಲಿ ಇಳಿದುಕ್ಕಾರೆ."— ಶಂಕರನಿಗೆ ಜೀವ ಬಂದಂತಾಯಿತು. ಟಿ ಬಿ. ಯ ಕಡೆಗೆ ಓಡಿದ.

ಟಿ. ಬಿ. ಯನ್ನು ತಲುಪಿದರೂ ಶೇಖರನ ದರ್ಶನವಾಗುವುದು ಸುಲಭವಾಗಲಿಲ್ಲ. ಬಾಗಿಲಲ್ಲಿದ್ದ ಕಾನ್‌ಸ್ಟೇಬಲ್ ಅವನನ್ನು ತಡೆದ.

"ನಾನು ಶೇಖರರಾಯರನ್ನು ನೋಡಬೇಕು."

ಕಾನ್‌ಸ್ಟೇಬಲ್ ಶಂಕರನ ಗಡ್ಡ ಬೆಳೆದ ಮುಖವನ್ನೂ ಜೀರ್ಣವಸ್ತ್ರಗಳನ್ನೂ ನೋಡಿದ. ಯಾರೋ ಭಿಕ್ಷುಕನಿರಬಹುದೆಂದುಕೊಂಡು, ಒಳಗೆ ಹೋಗಲು ಅವಕಾಶ ಕೊಡಲಿಲ್ಲ.

ಶಂಕರನಿಗೆ ಅದನ್ನು ತಡೆಯುವುದಾಗಲಿಲ್ಲ. "ಶೇಖರ ನನ್ನ ಸ್ನೇಹಿತ. ನನ್ನನ್ನು ತಡೆದರೆ ನಿನ್ನ ಪರಿಣಾಮ ನೆಟ್ಟಗಾಗಲಿಕ್ಕಿಲ್ಲ. ಬೇಕಾದರೆ ಹೋಗಿ ಕೇಳಿಕೊಂಡು ಬಾ. 'ನಿಮ್ಮ ಸ್ನೇಹಿತ ಶಂಕರನಂತೆ, ನಿಮ್ಮನ್ನು ನೋಡಲು ಬಂದಿರುವನು' ಎಂದು ತಿಳಿಸು!"

ಕಾನ್‌ಸ್ಟೇಬಲ್ ಇದನ್ನು ನಂಬದಿದ್ದರೂ ಒಳಗೆ ಹೋಗಿ ತಿಳಿಸಿದ.

ಒಳಗೆ ಕಳುಹಿಸುವಂತೆ ಶೇಖರರಾಯರ ಅಪ್ಪಣೆಯಾಯಿತು. ಕಾನ್‌ಸ್ಟೇಬಲ್ ತಿಳಿಸಿದ; ಶಂಕರನ ಅಭಿಮಾನಕ್ಕೆ ಮುಳ್ಳು ನಾಟಿದಂತೆ ಆಯಿತು. 'ನನ್ನ ಹೆಸರು ಕೇಳಿದ ಮೇಲೂ ನನ್ನನ್ನು ನೋಡಲು ಬರಲಿಲ್ಲ ಪಲ್ಲ!' ಎಂದು ನೊಂದುಕೊಂಡ. ಆದರೆ ತನ್ನನ್ನು ನೋಡಿದ ಮೇಲೆ ಎಲ್ಲವೂ ನೆನಪಿಗೆ ಬರಬಹುದೆಂದುಕೊಂಡು ಒಳಗೆ ಹೊರಟ.

ಶೇಖರರಾಯರು ಅಧಿಕಾರಿಮಿತ್ರರೊಡನೆ ಜಲಪಾನ ಮಾಡುತ್ತಿದ್ದರು. ಶಂಕರ "ಶೇಖರಾ, ಶೇಖರಾ" ಎಂದು ಕೂಗಿಕೊಂಡು ಒಳಗೆ ಪ್ರವೇಶಿಸಿದ.

ಶೇಖರರಾಯರು ಶಂಕರನನ್ನು ನೋಡಿದರು, ಆದರೆ..... ಗುರುತಿಸಿದಂತೆ ಕಾಣಲಿಲ್ಲ. ಶಂಕರನ ಮುಖಕ್ಕೆ ತಣ್ಣೀರೆರೆಚಿದಂತಾಯಿತು.

"ಇವರು ತಮ್ಮ ಸ್ನೇಹಿತರೇ ಸಾರ್?" ಯಾರೋ ಕೇಳಿದರು. ಶೇಖರರಾಯರು "ಅಯ್ಯೋ ಕಾಪ! ಎನ್ನುವ ಧ್ವನಿಯಲ್ಲಿ ಗಂಭೀರವಾಗಿ ಹೇಳಿದರು: "ಯಾರೋ ಹುಚ್ಚ, ಪಾಪ!"

ಶೇಖರರಾಯರ ಉತ್ತರ ಶಂಕರನ ಕಿವಿಯಲ್ಲಿ ಸಿಡಿಲಿನಂತೆ ಮೊಳಗಿತು. ಅವನ ತಲೆ ತಿರುಗಹತ್ತಿತು.

ಗೋಡೆ-ಮಾಳಿಗೆ, ಕಿಟಕಿ-ಬಾಗಿಲು ಎಲ್ಲ ಅವನನ್ನು "ಹುಚ್ಚ, ಹುಚ್ಚ" ಎಂದು ಅಣಕಿಸಿ ಕೇಕೆ ಹಾಕಿದುವು.

ಹತ ವರ್ಷಗಳಿಂದ ಅನುಭವಪಟ್ಟ
ಕರ್ಕ ಮತ್ತು ಕಂಪನಿಯ
ಜ್ವರಗಡ್ಡೆಯ ಗುಳಿಗೆಗಳು.

ಬಾಟ್ಲಿಗೆ ೧-೮-೦

ಎಂತಹ ಜ್ವರಗಡ್ಡೆಯನ್ನೂ ಕಳೆಯುವುದು.

ವಿಳಾಸ:—
ಗಣೇಶ ರಾಮಚಂದ್ರ ಕರ್ಕ ಮತ್ತು ಕಂಪನಿ
ಗಿರಗಾಂವ, ಮುಂಬಯಿ.

ಅಂದಿನಾ ನಟ್ಟಿರುಳು

ಶ್ರೀ. ಕೆ. ಪಾಂಡುರಂಗಭಟ್ಟ ' ವಿದ್ವಾನ್ ' ಕಾರಕಳ

ಅಂದಿನಾ ನಟ್ಟಿರುಳ ಕಿರುಸೆಲೆಯ ಮರೆಯಲ್ಲಿ
ಜಗವು ಮಿಗೆ ಮೈಮರೆತು ಒರಗಿ ಬಿದ್ದಿತ್ತು;
ಎಲ್ಲೆಡೆಯ ನೀರವತೆ ಕಗ್ಗತ್ತಲಪ್ಪಿರಲು
ತಡೆತಡೆದು ತಂಗಾಳಿ ಬೀಸುತ್ತಲಿತ್ತು ॥ ೧ ॥

ಹಾಸುಗೆಯ ದಿಂಬಿಟ್ಟು ಕಲ್ಲಾದ ಮನದೊಳಗೆ
ಔದ್ಯಮಯ ನೋಟಗಳ ಪದ ಮಿಸಿದ ಬಗೆದೆ;
ಮತಿಪಟವಿ ಕಿರು-ದೊಡ್ಡ ಭಾವಗಳು ತಾಂಡವವ
ಗೈದು ಮೆರೆದುವು. ಬಳಿಕ ಉಸಿರೆಳೆದು ಬಿದ್ದೆ. ॥ ೨ ॥

ಮನಸೋತು ಕಣುಗಳನು ಅರೆಮುಚ್ಚಿ ಸೊಗನಿದ್ದೆ—
ಸವಿಯ ಸವಿಯುತಲಿರಲು ನಾನು ಮುದವೇರಿ,
ಹಿಂಮುಂಡ ಭಾವೋಪಭಾವಗಳು ತಿರುತಿರುಗಿ
ಮನದೊಳಗೆ ಕನ್ನಡಿಸಿ ಕವಡಿಮವು ನಿಜದಿ. ॥ ೩ ॥

ಇಂತಿರಲು ದೂರದಿಂ ಅಸ್ಪಿಷ್ಟ ಬೀಷಣದ
ಕೂಗು ಕಿವಿಗಳ ಚುಚ್ಚೆ ಸಡಗರದಿ ಎದ್ದೆ.
ಕೂಗು ತಾಳಿತು ಒಡನೆ ಅತಿವಿಕಟರೂಪಮಂ
ಸನಿಯದಲಿ ಕೇಳಿಸಿತು; ಜಿಗಿದು ಪೊರಟುಂಪೆ. ॥ ೪ ॥

ಕಡುಗಪ್ಪು ಕವಿದಿರ್ಪ ನಟ್ಟಿರುಳ ಕೊಂಬೆಯಲಿ
ಜನರೆಲ್ಲ ಓದುವರು ಅಸವಸವಿ ಪೆರಿದು—
ಕೆಲರೊಡನೆ ನಾ ಕೇಳ್ದೆ ಗಲಭೆ ಕಾರಣವನ್ನು
ಅದಕವರ ಉತ್ತರವು ' ಕಿಚ್ಚು, ಕಿಚ್ಚೆಂ 'ದು ॥ ೫ ॥

ಒದನೆ ಕಾತರನಾದೆ. ಮೈಯು ಪುಲಕಿತಮಾಗಿ
ಪಡುಪಮುಗ ಬೆಮರೊಡೆದು ಜೀವನವ ನೀಗಿ
ಸ್ತಂಭಿತಮನವಾಯ್ತು; ತಪವು ಸಾಹಸವನಾಂತು
ಕಾಲುಗಳನೆಳೆವೆಳೆದು ಮುಂದರಿದೆನುರದಿ. ॥ ೬ ॥

ಕರಿಮೈಯ ರಕ್ಕಸರ ಸುಲಿದು ತೊಗಲನು ಸುರರು
ಬುವಿಯ ಮುಚ್ಚಿದ ತೆರದಿ ಕತ್ತಲುಬ್ಬಿತ್ತು.
ಸುಖ-ದುಃಖಗಳು ಎಲ್ಲ ಅನುವರದಿ ಬಹವೆಂಬ
ವಿಂಚುಳಿಯು ಮಿನುಗಿನಿಂ ತಿಳಿಯಲನುವಾಯ್ತು!॥೭॥

ಕತ್ತಲನು ಮಿಗೆಹಾಯ್ದು ಎಂತಾನು ಪೋಪೋಗೆ
ದೂರದಿಂ ಕಂಡೆನತಿಭೀಷಣದ ನೋಟ :
ಪೊಗೆಯುದುಳಿ ಸುಳಿದು ಆಗಸಕೆ ಹರಿವುದ ನೋಡಿ
ಕಾಪೋದ ಕವಿದಪೋಲರಿವಾಯ್ತು ನನಗೆ. ॥ ೮ ॥

ಸನಿಯದಲಿ ಓಡಿದೆನು. ಭೈರವಾಕಾರದಲಿ
ಕಿಚ್ಚು ಸುದುತಿತ್ತಲ್ಲಿ ' ಭುಗಿಲು ಭುಗಿಲೆಂ 'ದು
ಮುರುಕು-ಗುಡಿಸಿಲುಗಳನು ಒರಟು ನಾಲಗೆ ನೀಡಿ
ಕವಳಿಪುವ ನೋಡಿಯೆದೆ ಕರಗಿ ನೀರಾಯ್ತು ! ॥ ೯ ॥

' ಚಟಚಟಿಂ 'ದಡಿಗಡಿಗೆ ಬಿರುಗಿಡಿಗಳುಚ್ಚಳಿಸಿ,
ನೆಗೆದು, ಬಾನ್ಗೆರೆಯಲ್ಲಿ ತೇಲಿ ಆರಿದುವು.
ಧಗಧಗಿಸಿ ಮೇಲ್ನೆಗೆವ ಕೆಚ್ಚುರಿಯ ಪೊಂಬಣ್ಣ
ದೆಸೆದೆಸೆಗೆ ಹರಡಿತ್ತು ಕೆನ್ನೀರ ತೆರದಿ. ॥ ೧೦ ॥

ಪಳ್ಳುರಿಯ ಪಾಷದಲಿ ಪರಿಸರದ ಮರಗಳಿಂ
ಪಸುರೆಲೆಗಳೊಣಗೊಣಗಿ ಮುರುಟಿ ಉದುರಿದುವು.
ಅರೆಸಿಪ್ಪೆಯಿಂದೆದ್ದು ದಿಗಿಲಿನಿಂ ಚಡಪಡಿಸಿ
ಪಕ್ಕಿಗಳು ಚೆಲ್ಲರಿದುವು ಕೇಕೆ ಹಾಕುತಲಿ. ॥ ೧೧ ॥

ಹರಕುಬಟ್ಟೆಯನುಟ್ಟು ಕೂದಲುಗಳನು ಕೆದರಿ
ಗೋಳಿಡುವ ಬಡಜನರ ಕಾಯುವವರುಂಟೆ ?
ಸುಟ್ಟುಳಿದ ಸೊತ್ತುಗಳ ಕೈಗಳಲಿ ಬಿಗಿಬಿಡಿದು
ಜೋಲುನೊಗ ಪಾಕಿದರು ಮಿಾರ್ದ ದುಗುಡವಲಿ.॥೧೨॥

ಪೊಡೆತುಂಬ ಕೊಳಿಲ್ಲ, ಮೈತುಂಬ ಉಡೆಯಿಲ್ಲ,
ಜೀವಿಸಿಯು ಜೀವಿಸವ ಮೂಳೆಗೊಂದೆಗಳು—
ಹಗಲಿರುಳುದುಡಿ-ದುಡಿದು ಅರೆಹೊಟ್ಟೆಯಲಿ ಬಾಳ
ಜೀವಸವ ತನಿಸೊಗವ ಸವಿ ಸವಿಯಲಿಹುದೆ ! ॥೧೩॥

ಬರಗಾಲ ಮಂಮೇಹರಕ್ಕಸನು ಬೇರೆ ಬಿರು-
ದವಡೆಗಳ ಕಿರಿಕಿರಿದು ಮಾರಾಂತು ಇಹನು;
ಪರಿಯರಿಯ ಬೇನೆಯಲಿ ಬೆಂದು ಬೇಗುದಿಗೊಂಡ
ಬಡಜನರ ಕೈಕೊಟ್ಟು ಮೇಲ್ತರುವನಾರು ? ॥೧೪॥

(೩೨೪ ನೆಯ ಪುಟದಿಂದ ಮುಂದೆ ಸಾಗಿದ್ದು)

ಆದರೂ, ಬಹುಮಾನ ಪಡೆದ ಕತೆಗಳು ಅತ್ಯುತ್ತಮವಾಗಿವೆಯಾದುದರಿಂದ, ಮೇಲಾಟ ಯಶಸ್ವಿಯಾಯಿತೆಂದು ಸಂತೋಷ ಪಡಬಹುದಾಗಿದೆ. ಅಲ್ಲದೆ ತರುಣ ಕತೆಗಾರರು ಪೆಚ್ಚು ಪೆಜ್ಜಾದ ಹುರುಪಿನಿಂದ ಮುಂದೆ ನುಗ್ಗಿ ಬರುತ್ತಿರುವರೆಂಬುದನ್ನು ಈ ಮೇಲಾಟ ಸಿದ್ಧಗೊಳಿಸಿ ತೋರಿಸಿರುವುದೂ ಸಮಾಧಾನದ ಮಾತಾಗಿದೆ.

ಬಂದಿರುವ ಕತೆಗಳಲ್ಲಿ ಸಾಹಿತ್ಯದ ವಾಕ ಹವಣ್ಕೆ ಇಳಿದುವು ಕಡಿಮೆಯಾಗಿದ್ದರೂ, ಹೆಚ್ಚುಜನ ಲೇಖಕರು ಆರಿಸಿಕೊಂಡ ಕಥಾವಸ್ತುಗಳು ಜೀವನದ ವಿವಿಧಮುಖಗಳನ್ನು ಚಿತ್ರಿಸಲು ಹವಣಿಸುವಂತಹವಾಗಿವೆ. ಸದ್ಯದ ವಿಷಯಗಳಾದ ರೇಶನಿಂಗು, ಜಾತೀಯ ಜಗಳಾಟ, ಸ್ವಾತಂತ್ರ್ಯ ಸಾಧನೆ, ದೇಶದ ದಾರಿದ್ರ್ಯ, ಬಡವರ ಗೋಳು, ಅಜ್ಞಾನದ ದುಷ್ಪರಿಣಾಮ, ಮಾನವತೆಯ ಅಭಾವ, ಹೆಣ್ಣು-ಗಂಡಿನ ಬಾಳಿನ ಗೋಳು ಇವೆಲ್ಲ ವಿಷಯಗಳು ಸ್ಪರ್ಧೆಯ ಕತೆಗಳಿಗೆ ವಸ್ತುಗಳಾಗಿವೆ. ಚಲಚ್ಚಿತ್ರದ ರಂಜಕ ಕತೆಗಳನ್ನು ಅನುಸರಿಸಿದ ಕತೆಗಾರರೂ ಕೆಲವು ಜನರಿದ್ದಾರೆ.

ಬಹುಮಾನ ಪಡೆದ ಕತೆಗಳು—ಕತೆಗಾರರು.

೧ನೆಯ ಬಹುಮಾನ

ಶ್ರೀ. ಕೆ. ಎ. ಎನ್. ರಾವ್ ಅವರ 'ಧರ್ಮಕೊಂಡದ ಕತೆ' ಮೇಲಾಟದಲ್ಲಿ ಮೊದಲನೆಯ ಸ್ಥಾನವನ್ನು ಪಡೆದಿದೆ. ತುಂಬ ಕುತೂಹಲಕಾರಿಯಾದ ಸನ್ನಿವೇಶಗಳು. ಹಿಂದೂ ಸಮಾಜದಲ್ಲಿಯ ತೀರ ಮಹತ್ವದ ಸಮಸ್ಯೆಯೊಂದು ಈ ಕಥೆಯ ಮೂಲಸೂತ್ರವಾಗಿದೆ. ಎಲ್ಲ ಪಾತ್ರಗಳೂ ಸಜೀವವಾಗಿವೆ. ಕಥೆಯ ಕೊನೆ ಕಲ್ಪಿಸಲಾಗದಂತಹದು. ಲೇಖಕರಾದ ಶ್ರೀ. ಕೆ. ಎ. ಎನ್. ರಾವ್ ಅವರು ವಿಶ್ವವಿದ್ಯಾನಿಲಯದ ಸ್ನಾತಕ ಪದವಿಯನ್ನು ಪಡೆದವರಿದ್ದು, ಬನಾರಸ ಹಿಂದೂ ಯುನಿವರ್ಸಿಟಿಯ ಸ್ನಾತಕ (ಎಂಜಿನಿಯರಿಂಗ್) ಕಲಾಶಾಲೆಯಲ್ಲಿ ಪ್ರಾಧ್ಯಾಪಕರಾಗಿ ಕೆಲಸ ಮಾಡುತ್ತಿದ್ದಾರೆ. ಜಯಂತಿಯ ವಾಚಕರಿಗೆ ಇವರು ಹೊಸಬರೇನೂ ಅಲ್ಲ. ಇವರ ಕತೆ-ಕವಿತೆ-ಲೇಖನಗಳು ಕನ್ನಡದ ಹಲವು ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುತ್ತವೆ.

೨ನೆಯ ಬಹುಮಾನ

'ತಿಮ್ಮಯ್ಯನವರ ಅಕಾರಣ ಮರಣ' ಎಂಬ ಕತೆ ೨ನೆಯ ಬಹುಮಾನವನ್ನು ಪಡೆದಿದೆ. ಆಧುನಿಕ ಮನೋವಿಶ್ಲೇಷಣಾತ್ಮಕ ಕತೆಗಳ ತಂತ್ರಕ್ಕೆ ಒಳಗಾದುದು. 'ಕಾಮ ಕಣ್ಣಿಲ್ಲದುದು' ಎಂಬ ನಿಸರ್ಗ ನೀತಿಯನ್ನು ಸಿದ್ಧಗೊಳಿಸುವುದೇ ಕತೆಯ ಮರ್ಮ. ಸರಳವಾದ ಶುದ್ಧವಾದ ಭಾಷೆ. ಕತೆಯ ಕೊನೆ ಎಲ್ಲರನ್ನೂ ಒಳಗೆ ನೋಡಿಕೊಳಲು ಹೆಚ್ಚುವಂತಹದು. ಲೇಖಕರಾದ ಶ್ರೀ ಎಸ್. ಕೆ. ವರದಯವರು ಸಾಂಗಲಿಯ ವಿಲಿಂಗ್ಡನ್ ಕಾಲೇಜಿನಲ್ಲಿ ಓದಿತ್ತಿದ್ದು, ಈ ವರ್ಷ ಬಿ. ಎ. (ಆನರ್ಸ್) ಪರೀಕ್ಷೆಗೆ ಕೂಡುವವರಿದ್ದಾರೆ. ಧಾರವಾಡದಲ್ಲಿಯೆ ಇವರ ವಿದ್ಯಾರ್ಥಿಜೀವನ ಹೆಚ್ಚಾಗಿ ಕಳೆದಿದೆ. ಧಾರವಾಡದ 'ಕಿರಿಯ ರಸಿಕ'ರ ತಂಡಕ್ಕೆ ಸೇರಿದವರು. ಕಾಲೇಜಿನಲ್ಲಿ ನಡೆದ ಸಾಹಿತ್ಯಸ್ಪರ್ಧೆಗಳಲ್ಲಿ ೩-೪ ಸಲ ಬಹುಮಾನ ಪಡೆದಿದ್ದಾರೆ.

೩ನೆಯ ಬಹುಮಾನ

'ಧರ್ಮರಕ್ಷಣೆ' ಎಂಬ ಕತೆ ಮೂರನೆಯ ಬಹುಮಾನ ಪಡೆದಿದೆ. ಮುಸ್ಲಿಂ ಲೀಗಿನ ಪ್ರತ್ಯಕ್ಷ ಆಂದೋಲನದ ಕಾಲದ ದೇಶದ ಸ್ಥಿತಿಯ ಹಿನ್ನೆಲೆಯಲ್ಲಿ, ಜಾತಿ-ಮತಗಳಿಗಿಂತ ಪ್ರೀತಿ-ಸ್ನೇಹಗಳು ಮಾನವತೆಗೆ ಅವಶ್ಯವೆಂಬುದನ್ನು ಪರಿಣಾಮಕಾರಿಯಾಗಿ ರೇಖಿಸಲಾಗಿದೆ ಈ ಕತೆಯಲ್ಲಿ. ಬರೆದವರು ಶ್ರೀ ಎಸ್. ಶ್ರೀಕೃಷ್ಣ ಎಂಬವರು. ಮಂಗಳೂರಿನ ಸೈಂಟ್ ಅಲೋಶಿಯಸ್ ಕಾಲೇಜಿನಲ್ಲಿ ಬಿ. ಎಸ್ಸಿ. ಪದವಿಗಾಗಿ ಓದುತ್ತಿದ್ದಾರೆ. ಸಾಹಿತ್ಯಕ್ಷೇತ್ರದಲ್ಲಿ ಹೊಸತಾಗಿಯೆ ಅಡಿಯಿಡುತ್ತಲಿರುವವರು.

ಒಳ್ಳೆಯ ಕತೆಗಳು

೧ ಕ್ಷಣ

ಮನೋವಿಶ್ಲೇಷಣಾತ್ಮಕ ಕತೆಗಳ ಗುಂಪಿಗೆ ಸೇರಬಹುದಾದ ಒಳ್ಳೆಯ ಕತೆ. ಬರೆದವರು ಶ್ರೀಮಾನ್ ಜೆ. ಎ. ಅಪ್ಪಪುತ್ರಿ ಅವರು. ಹುಟ್ಟಿದೂರು ಗೋಕಾಕ. ಸದ್ಯ ಪುಣೆಯಲ್ಲಿ ವಾಸವಾಗಿದ್ದಾರೆ.

೨ ಹೊಸ ಹುಟ್ಟು

ಜೀವಿತದ ಹೊಣೆಯನ್ನರಿಯದ ತರುಣನೊಬ್ಬನ ಜೀವನವು, ಭೂಲೋಕದ ನರಕದಂತಿರುವ ಸೂಳೆಗೇರಿಯ ಹಿನ್ನೆಲೆಯೊಂದಿಗೆ ಚಿತ್ರಿತವಾಗಿದೆ. ಕತೆ ಬಂದುದು ಪುಣೆಯಿಂದ. ಮಿ. ೫೫-೫-೪೮

ಬಡತನದ ಬಾಳು

☆

'ಆನಂದಕಂದ'ರ ಕಥಾಸಂಗ್ರಹ.

ಕನ್ನಡ ಜನತೆಯ ಜೀವನದ ನಿಜವಾದ ಚಿತ್ರ
ಇದರಲ್ಲಿ ಮೂಡಿದೆ.
ಬೇಕಾದವರು
'ಜಯಂತಿ' ಕಾರ್ಯಾಲಯಕ್ಕೆ
ಬರೆಯಿರಿ.

c/o ವಿ. ಕೆ. ಚಿನ್ನಮುಳಗುಂದ, ಒಕ್ಕಲುತನದ ಕಾಲೇಜು ಪುಣೆ ಎಂದು ಕತೆಗಾರರು ತಮ್ಮ ವಿಳಾಸಕೊಟ್ಟಿದ್ದಾರೆ. ಶ್ರೀಮಾನ್ ವಿ. ಸಿ. ಹಿತ್ತಲಮನಿ ಎಂಬವರೇ ಇದರ ಲೇಖಕರು.

೩ ಪಾಲುಗಾರಿಕೆ

ಕಳ್ಳಪೇಟೆಯ ವ್ಯವಹಾರವನ್ನು ವಾಸ್ತವವಾಗಿ ಚಿತ್ರಿಸಿದ ನೀಳ್ಗತೆಯಿದು. ಬರೆದವರು ಶ್ರೀಮಾನ್ ಮಿರ್ಜಿ ಅಣ್ಣಾರಾಯರು. ಬೆಳಗಾಂವಿ ಜಿಲ್ಲೆಯ ಸೇಡಬಾಳದ ನಿವಾಸಿಗಳಾದರೂ ಸದ್ಯ ಟ್ರೇನಿಂಗ್ ಕಾಲೇಜಿನ ವಿದ್ಯಾರ್ಥಿಗಳಾಗಿ ಧಾರವಾಡದಲ್ಲಿ ಇದ್ದಾರೆ.

೪ ಜೇಹಾದ್

ಮುಸ್ಲಿಂ ಲೀಗಿನ ಪ್ರತ್ಯಕ್ಷ ಆಂದೋಲನ ಕಾಲದಲ್ಲಿ ಬಂಗಾಲದಲ್ಲಿ ನಡೆದಿರಬಹುದಾದ ಒಂದು ವಿಷಾದಾಂತ ಘಟನೆ ಈ ಕತೆಯ ಮೂಲವಸ್ತುವಾಗಿದೆ. ಬಳ್ಳಾರಿ ಜಿಲ್ಲೆಯ ಕನ್ನಡಿಗರಾದ ಶ್ರೀ. ಅ. ನಂಜಪ್ಪ ಅವರು ಇದರ ಲೇಖಕರು. ಮದರಾಸಿನ ಮೆಡಿಕಲ್ ಕಾಲೇಜಿನಲ್ಲಿ ವಿದ್ಯಾರ್ಥಿಗಳಾಗಿದ್ದಾರೆ.

೫ ಯಾರೋ ಹುಚ್ಚ

ಕೃತಘ್ನತೆ ಸಮಾಜದ ಸುಖ-ಶಾಂತಿಗೆ ತಕ್ಕುದಲ್ಲವೆಂಬ ಮಾತನ್ನು ತಿಳಿಸಲು, ತುಮಕೂರಿನ ಶ್ರೀಮಾನ್ ರಾ. ನರಸಿಂಹ ಮೂರ್ತಿ ಎಂಬವರು ಈ ಕತೆಯನ್ನು ಬರೆದಿದ್ದಾರೆ.

೬ ಪತಿತಾಂಗನೆ

ಸಮಾಜದ ದೃಷ್ಟಿಯಿಂದ ಹೀನಳೆಂದು ಪರಿಗಣಿತಳಾದ ದೇವಿಯೊಬ್ಬಳ ಜೀವನವನ್ನು ವಿವೇಚಿಸಿದ ಪ್ರೀತಿಪರಿಪೋಷಿತ ಕತೆಯಿದು. ಕರ್ನಾಟಕ ಕಾಲೇಜಿನಲ್ಲಿ ಬಿ. ಎ. ವಿದ್ಯಾರ್ಥಿಗಳಾಗಿರುವ ಶ್ರೀ. ಲೋಕೇಶ ಬಿ. ಮದಭಾವಿ ಎಂಬವರು ಬರೆದಿದ್ದಾರೆ.

೭ ದೇವರ ಮಕ್ಕಳು

ಬಾಗಿಲುಕೋಟೆಯ ಶ್ರೀ. ಅನಂತ ಬುರ್ಲಿ ಎಂಬವರು ಈ ಕತೆಯನ್ನು ಬರೆದಿದ್ದಾರೆ. ಇದೂ ಜಾತೀಯ ಕಲಹದ ದುಷ್ಪರಿಣಾಮವನ್ನು ತಿಳುಹಲು ಬರೆದ ಕತೆ.

೮ ಬೆಳದಿಂಗಳ ರಾತ್ರಿಯಲ್ಲಿ

ಮೈಸೂರಿನ 'ಅಕ್ರೂರಾನಂತ' ಎಂಬ ಮುಚ್ಚು ಹೆಸರಿನವರು ಈ ಕತೆಯನ್ನು ಬರೆದಿದ್ದಾರೆ. ನಿಜವಾದ ಗೆಳೆತನ ಎಂತಹ ಉತ್ಕಟ ಸ್ವಾರ್ಥವನ್ನೂ ಹೇಗೆ ಭಂಗಿತವನ್ನಾಗಿ ಮಾಡಬಹುದೆಂಬುದರ ಚಿತ್ರವಿದೆ.

೯ ಎರಡು ಜೀವ

ಜಾತೀಯ ಕಲಹದ ದುರಂತ ಪರಿಣಾಮ ಈ ಕಥೆಯ ವಸ್ತು. ಮಂಗಳೂರಿನ ಒಬ್ಬ ವಿದ್ಯಾರ್ಥಿಗಳಾದ ಶ್ರೀ. ಸುರೇಶ ಹೊಸಬೆಟ್ಟು ಎಂಬವರು ಬರೆದಿದ್ದಾರೆ.

೧೦ ಬಡತನದ ಬಾಳು

ಬಡವರ ಜೀವನ ಸಮಾಜದಲ್ಲಿ ಎಂತಹ ಕೀಳು ಪೆಸೆಯದಾಗಿದೆಯೆಂಬುದರ ಕರುಣಾಮಯ ಚಿತ್ರ. ಬೆಂಗಳೂರಿನ ನಿವಾಸಿಗಳಾದ ಶ್ರೀಮಾನ್ ವಿ. ವಿ. ಸುಬ್ಬರಾವ್ ಎಂಬವರು ಲೇಖಕರು.

೧೧ ಹೊಣೆಯಾರು?

ಹೆಣ್ಣಿನ ದಾಂಪತ್ಯ ಜೀವನದಲ್ಲಿಯ ತೊಡಕೊಂದನ್ನು ನಿರೂಪಿಸಲು ಬರೆದ ಕತೆ. ಸದ್ಯ ಜಬ್ಬಲ್‌ಪುರದಲ್ಲಿ ಕಾರ್ಯಾಂತರದಿಂದ ಹೋಗಿ ನಿಂತಿರುವ ಶ್ರೀಮಾನ್ ವಿ. ಡಿ. ಕುಲಕರ್ಣಿ ಎಂಬವರು ಇದನ್ನು ಬರೆದವರು.

೧೨ ಹಸಿರು ನೋಟು

ಹಳ್ಳಿಗರ ಅಜ್ಞಾನವನ್ನು ಸ್ವಾರ್ಥಸಾಧನೆಗಾಗಿ ಉಪಯೋಗ ಮಾಡಿಕೊಳ್ಳುವ ಸಮಾಜದ ಮುಂದಾಳುಗಳ ನಿರ್ದಯ ಸ್ವಭಾವವನ್ನು ವಿವರಿಸುವ ವಾಸ್ತವ ಕಥೆ. ಬರೆದವರು ಶ್ರೀಮಾನ್ ವಿ. ಸಿ. ಹಿತ್ತಲಮನಿ ಒಕ್ಕಲುತನದ ಕಾಲೇಜು ಪುಣೆ.

ಅಭಿನಂದನೆ

ಸ್ಪರ್ಧೆಯಲ್ಲಿ ಭಾಗವಹಿಸಿದ ಕತೆಗಾರರೆಲ್ಲರಿಗೂ ನಮ್ಮ ಹಾರ್ದಿಕ ಅಭಿನಂದನೆಗಳು ಬಹುಮಾನ ದೊರೆಯದ ಕತೆಗಾರರು ನಿರಾಶರಾಗುವ ಕಾರಣವಿಲ್ಲ; ಇಂತಹ ಮೇಲಾಟಗಳು ತಮ್ಮ ಪ್ರಗತಿಯನ್ನಳೆಯುವ ಅಳತೆಗೋಲುಗಳೆಂದು ತಿಳಿದು, ಹೆಚ್ಚಿನ ನುನ್ನಡೆಗಾಗಿ ಅಭ್ಯಾಸ-ಅನುಭವಗಳಿಂದ ಪ್ರಯತ್ನಿಸುತ್ತಿರಬೇಕೆಂದು ನಮ್ಮ ಹಾರೈಕೆ.

ಸ್ಪರ್ಧೆಗೆ ನಿರ್ಣಾಯಕರಾಗಿ ಪ್ರೀತಿಯಿಂದ ತಮ್ಮ ಕಾರ್ಯವನ್ನು ಒಳ್ಳೆಯ ರೀತಿಯಲ್ಲಿ ನಿರ್ವಹಿಸಿಕೊಟ್ಟ ಪ್ರೊ. ರಂ. ಶ್ರೀ. ಮುಗುಳಿಯವರಿಗೂ ಶ್ರೀಮಾನ್ ವಿ. ಬಿ. ನಾಯಕರಿಗೂ ಕೃತಜ್ಞತೆ ಕೂಡಿದ ವಂದನೆಗಳು.

ಮದ್ರಾಸಿನಲ್ಲಿ ನಮ್ಮ ಏಜಂಟರು
ಶ್ರೀ. ವಿ. ಲಕ್ಷ್ಮಣರಾವ್
೧೮೦ ಚೀನಾಬಝಾರ ರಸ್ತೆ
ಜಿ. ಟಿ. ಮದ್ರಾಸು

ನಿಪ್ಪಾಣಿಯಲ್ಲಿ ನಮ್ಮ ಏಜಂಟರು:
ಶ್ರೀ. ಕೆ. ಎಸ್. ಬಳಗುರಗಿ
ನ್ಯೂಜ್ ಏಜಂಟ್ಸ್
ಮತ್ತು ಪುಸ್ತಕ ವ್ಯಾಪಾರಿ

ಸಾದರ ಸ್ವೀಕಾರ

★

೧೫೨ ಹೈದರಾಬಾದ್ ಮತ್ತು ಮುಸಲ್ಮಾನರು (ಪ್ರಚಾರಾತ್ಮಕ ಕಿರುಹೊತ್ತಗೆ) ಬರೆದವರು ಶ್ರೀ. ರಾ. ಗು. ಜೋಶಿ, ಗಾಜಗಾರ್‌ಪೇಟಿ, ರಾಯಚೂರು. ಕ್ರೌ. ಆ. ೧೬ಪುಟಗಳು. ಬೆಲೆ ೦-೪-೦

ಮುನ್ನುಡಿ ಬರೆದ ಶ್ರೀ. ಬಿಂದುಮಾಧವ ಬುರ್ಲಿಯವರು ಈ ಪುಸ್ತಕದ ಬಗೆಗೆ "ಈ ಚಿಕ್ಕ ಹೊತ್ತಗೆಯು ಹೈದರಾಬಾದ್ ಸಂಸ್ಥಾನದ ಇಂದಿನ ಚಿತ್ರವನ್ನು ಚಿತ್ರಿಸುತ್ತದೆ....ಹೈದರಾಬಾದ್ ಸಂಸ್ಥಾನವು ಮುಸಲ್ಮಾನ್ ಸಂಸ್ಥಾನವೆಂಬ ಘೋಷಣೆಯಲ್ಲಿ ಹುರುಳಿಲ್ಲವೆಂದು ನಿವರಿಸಿದ್ದಾರೆ. ಬಹುಸಂಖ್ಯಾಕರು ಹಿಂದುಗಳಿದ್ದರೂ ಆಡಳಿತೆಯಲ್ಲಿ ಅವರಿಗಿರುವ ಹೀನಾವಸ್ಥೆಯನ್ನು ಪರಿಪಿಷ್ಟವಲ್ಲಿ ಜೆನ್ನಾಗಿ ತೋರಿಸಿದ್ದಾರೆ" ಎಂದು ಮೊದಲಾಗಿ ಬರೆದಿದ್ದಾರೆ. ಕಾಸೆ ತಮ್ಮ ಮನೆಯಲ್ಲಿ ಹೇಗೆ ಅಳಿಗಿಂತ ಅಳಾಗಿದ್ದಾರೆಂಬುದರ – ಹೈದರಾಬಾದಿನ ಜನತೆಯ–ಚಿತ್ರ ಇದರಲ್ಲಿ ಹೃದಯಸ್ರಾವಕವಾಗಿ ಮೂಡಿನಿಂತಿದೆ.

೧೫೩ ಕಳ್ಳಸಂತೆ ಮತ್ತು ಇತರ ಕತೆಗಳು: (ಕಥಾ ಸಂಕಲನ) ಬರೆದವರು ಶ್ರೀಮಾನ್ ಬೇಂದ್ರೆ ಲಕ್ಷ್ಮಣರಾಯರು. ಧಾರವಾಡದ ಲಲಿತ ಸಾಹಿತ್ಯಮಾಲೆಯ ೪ನೆಯ ಪರ್ಷದ ೧ನೆಯ ಕುಡಿ. ಕ್ರೌ. ಆ. ೬೦. ಪುಟಗಳು. ಬೆಲೆ ೧-೦-೦.

೧೫೪ ಇಂದಿನ ಕನ್ನಡ ಕಾವ್ಯದ ಗೊತ್ತು-ಗುರಿಗಳು (ಸಾಹಿತ್ಯವಿಮರ್ಶಾತ್ಮಕ ಗ್ರಂಥ). ಬರೆದವರು ಪ್ರಿನ್ಸಿಪಾಲ್ ವಿ. ಕೃ. ಗೋಕಾಕ ಅವರು. ಪ್ರಕಾಶಕರು ಶ್ರೀ. ಮುಕುಂದ, ಪದ್ಮಾ ಪ್ರಕಟನಾಲಯ, ೧೫೦. ಸುಲ್ತಾನ್‌ಬಝಾರ್, ಹೈದರಾಬಾದ್. ಕ್ರೌ. ಆ. ೨೦೦ ಪುಟಗಳು. ಬೆಲೆ ೨-೦-೦.

೧೫೫ ನಡುಗಾಲ ಪ್ರಭುತ್ವ (ರಾಜಕೀಯ ಗ್ರಂಥ). ಲೇಖಕರು ಶ್ರೀ. ಕೃಷ್ಣಾಚಾರ್ಯ ಜೋಶಿ, ಬಿ. ಎ., ಎಲ್ ಎಲ್. ಬಿ. ಎಡ್ವೊಕೇಟ್. ಪ್ರಕಾಶಕರು ರಾಜಕೀಯ ಗ್ರಂಥ ಪ್ರಕಾಶನ ಸಮಿತಿ, ಕಾಚೀಗುಡ, ಹೈದರಾಬಾದ್. ಕ್ರೌ. ಆ. ೭೬. ಪುಟಗಳು. ಬೆಲೆ ೦-೧೨-೦.

೧೫೬ ಪಕ್ಷಿಕಾಶಿ (ಕವನ ಸಂಗ್ರಹ) ಬರೆದವರು 'ಕುವೆಂಪು' ಅವರು. ಮೈಸೂರಿನ ಕಾವ್ಯಾಲಯದ ಕನ್ನಡ ಕಾವ್ಯಮಾಲೆಯ ೪೩ನೆಯ ಗ್ರಂಥ. ಕ್ರೌ. ಆ. ೯೦ ಪುಟಗಳು. ಬೆಲೆ ಸಾದಾ ೧-೮-೦; ಕ್ಯಾಲಿಕೊ ೧-೪-೦.

೧೫೭ ಇದ್ದರೂ ಇರಬಹುದು (ಸಣ್ಣ ಕತೆಗಳ ಸಂಕಲನ) ಬರೆದವರು ಶ್ರೀಮಾನ್ ಎಸ್. ಜಿ. ಶಾಸ್ತ್ರಿಗಳು. ಮೇಲಿನ ಕ. ಕಾವ್ಯಮಾಲೆಯ ೪೬–೪೭ನೆಯ ಗ್ರಂಥ. ಕ್ರೌ. ಆ. ೧೬೬ ಪುಟಗಳು. ಬೆಲೆ ೨-೪-೦.

೧೫೮ ಬಿಸ್ತರ ಕರಿಯ (ಚಿತ್ರಲೇಖನಗಳ ಸಂಕಲನ) ಶ್ರೀ. ಗೋರೂರು ರಾಮಸ್ವಾಮಿ ಅಯ್ಯಂಗಾರ್ಯರು ಬರೆದುದು. ಮೇಲಿನ ಕಾವ್ಯಮಾಲೆಯ ೪೮-೪೯ನೆಯ ಪುಷ್ಪ. ಕ್ರೌ. ಆ. ೧೭೦ ಪುಟಗಳು. ಬೆಲೆ ೨-೪-೦ ಸಾದಾ; ೩-೪-೦ ಕ್ಯಾಲಿಕೊ.

೧೫೯ ಗೌರಿಯ ಪುಣ್ಯವೆ (ಕಥಾಚಿತ್ರ). ಬರೆದವರು ಶ್ರೀ. ಸಿ. ಕೃಷ್ಣ ಅವರು. ಮೇಲಿನ ಕ. ಕಾವ್ಯಮಾಲೆಯ ೫೦ನೆಯ ಗ್ರಂಥ. ಕ್ರೌ. ಆ. ೭೨ ಪುಟಗಳು. ಬೆಲೆ ೧-೪-೦.

೧೬೦ ಶಬರಿ (ಗೀತರೂಪಕ) ಬರೆಸವರು ಶ್ರೀಮಾನ್ ಪು. ತಿ. ನರಸಿಂಹಾಚಾರ್ಯರು; ಪ್ರಕಾಶಕರು ಕಾವ್ಯಾಲಯ ಮೈಸೂರು. ಕ್ರೌ. ಆ. ೭೬ ಪುಟಗಳು. ಬೆಲೆ ೦-೮-೦.

೧೬೧ ಕನ್ನಡ ಮಂಪಾಥಾರತದ ಉಪ್ಯೋಗಪರ್ವ ಸಂಗ್ರಹ (ಕು. ವ್ಯಾ. ಕೃತ). ಸಂಪಾದಕರು ಶ್ರೀ. ಗಳಾದ ಟಿ. ಎಸ್. ಶಾಮರಾವ್ ಬಿ, ಎ. (ಆನರ್ಸ್) ಮತ್ತು ಶ್ರೀ. ಎಚ್. ಎಂ. ಶಂಕರನಾರಾಯಣರಾವ್ ಎಂ. ಎ. ಆವರು. ಪ್ರಕಾಶಕರು ಕಾವ್ಯಾಲಯ, ಮೈಸೂರು, ಪ್ರೌ. ಆ. ೪೦+೧೧೪ ಪುಟಗಳು. ಬೆಲೆ ೧-೪-೦.

೧೬೨ ನನ್ನ ಮನೆ (ಕವನಸಂಗ್ರಹ). ಬರೆದವರು 'ಕುವೆಂಪು'. ಪ್ರಕಾಶಕರು ಕಾವ್ಯಾಲಯ, ಮೈಸೂರು. ಕ್ರೌ. ಆ. ೭೪ ಪುಟ. ಬೆಲೆ ೦-೬-೦.

೧೬೩ ಜಟಾಕಿ (ಕವನಸಂಗ್ರಹ). ಬರೆದವರು ಶ್ರೀಮಾನ್ ಎಲ್. ಗುಂಡಪ್ಪ: ಮೈಸೂರಿನ ಕಾವ್ಯಾಲಯದ ಮಕ್ಕಳ ಮುತ್ತಿನ ಮಾಲೆ ೪. ಕ್ರೌ. ಆ. ೩೨ ಪುಟಗಳು. ಬೆಲೆ ೦-೪-೦.

೧೬೪ ಚಂದ್ರನನ್ನು ತಂದವರು (ಮೂರು ಕತೆಗಳು) ಜರ್ಮನ್ ಕತೆಗಾರರಾದ ಗ್ರಿಮ್ ಸಹೋದರರ ಕತೆಗಳ ಅನುವಾದ. ಅನುವಾದಕರು ಶ್ರೀಮಾನ್ ಕೂಡಲಿ ಚಿದಂಬರಂ ಅವರು. ಪ್ರಕಾಶಕರು: ಕಾವ್ಯಾಲಯ, ಮೈಸೂರು. ಕ್ರೌ. ಆ. ೩೬ಪುಟಗಳು; ಬೆಲೆ ೦-೪-೦.

೧೬೫ ಜಯಹಿಂದ್ (ಸ್ವಾತಂತ್ರ್ಯ ಅಂಕ). ಸಂಪಾದಕರು ಶ್ರೀ. ರಾ. ವೆ. ಕರಿಗುದರಿ. ಸಹ ಸಂಪಾದಕರು ಶ್ರೀ. ಎಸ್. ಎಸ್. ಕಾರಂತ. ವ್ಯವಸ್ಥಾಪಕರು ಶ್ರೀ. ಎಸ್. ಬಿ. ಮನಗೋಳಿ. ಹುಬ್ಬಳ್ಳಿ. ಕ್ರೌ. ಆ. ೧೦೪ ಪುಟಗಳು; ಬೆಲೆ ೦-೪-೦.

ಹುಬ್ಬಳ್ಳಿಯ 'ಹುಬಳಿ ಗಜೆಟ್' ವಾರಪತ್ರಿಕೆಯು ಈ ವಿಶೇಷ ಸಂಚಿಕೆಯಿಂದ 'ಜಯಹಿಂದ್' ಎಂಬ ಹೊಸ ಹೆಸರನ್ನು ತಳೆ

ಯುಗಪ್ರವರ್ತಕ ಬಸವಣ್ಣನವರು

ತಿದ್ದಿ ಬೆಳಸಿದ ೨ನೆಯ ಆವೃತ್ತಿ ಬೇಗನೆ ಪ್ರಕಟವಾಗಲಿದೆ.

ಬರೆದವರು:

ಶ್ರೀಮಾನ್ ಹಳಪೇಟೆ ಚಿಂತಾಮಣಿರಾಯರು.

ದುದು ತುಂಬ ಸಂತೋಷದ ಸಂಗತಿ. ಈ ಹೊಸ ಹೆಸರಿನೊಂದಿಗೆ ಆ ಪತ್ರಿಕೆ ತನ್ನ ಕಾರ್ಯಕ್ಷೇತ್ರವನ್ನು ವ್ಯಾಪಕಗೊಳಿಸಿಕೊಂಡಂತಾಯಿತು. ಈ ಸಂಚಿಕೆಯಲ್ಲಿ ಪ್ರಕಟವಾದ ವಿವಿಧ ವಿಷಯಕ ರಾಜಕೀಯ ಲೇಖನಗಳು ಅಭ್ಯಾಸಪೂರ್ಣವಾಗಿದ್ದು, ನಾಗರಿಕರೆಲ್ಲ ಓದಿ ತಿಳಿದುಕೊಳ್ಳಬೇಕಾದುವುಗಳಿರುವುವು. ಮೂವರ್ಣದ ಮುಖಚಿತ್ರದಿಂದ ಕೂಡಿದ ಮೇಲೋಲೆಯೂ ಆಕರ್ಷಕವಾಗಿರುವುದು. ಎಂಟು ಆಣೆ ಬೆಲೆಯೆಂದರೆ ತೀರ ಸುಲಭ

೧೬೬ ಗಾಂಧೀಜಿಯವರ ರಾಜಕೀಯ ಪತ್ರಗಳು. (ಅನುವಾದಿತ ಗ್ರಂಥ). ಸಂ ಗಾ ಪ ಕರು— ಅನುವಾದಕರು ಶ್ರೀಮಾನ್ ಸಿದ್ದವನಹಳ್ಳಿ ಕೃಷ್ಣಶರ್ಮರು. ಧಾರವಾಡದ ಮಿಂಚಿನ ಬಳ್ಳಿಯ ೯ನೆಯ ವರ್ಷದ ೨ನೆಯ ಕುಡಿ. ಕ್ರಾ ಆ. ೧೬೪ ಪುಟಗಳು. ಬೆಲೆ ೩-೦-೦.

೧೬೭ ಮುಂಬೆಳಗು (ಕವನಸಂಗ್ರಹ) ಬರೆದವರು ಶ್ರೀಮಾನ್ 'ಚಿದಂಬರ'. ಪ್ರಕಾಶಕರು ಶ್ರೀ. ಭಾಲಚಂದ್ರ ನಾನೇಕರ್, ಸಮಾಜ ಪುಸ್ತಕಾಲಯ, ಧಾರವಾಡ. ಕ್ರಾ. ೬೪ ಪುಟಗಳು. ಬೆಲೆ ೧-೦-೦.

೧೬೮ **ಮಹಾದೇವಿ ಅಕ್ಕಗಾರಿ ವಚನವುಲು** (ತೆಲುಗು ಅನುವಾದ). ಅನುವಾದಕರು ವಿಮರ್ಶಾವಿಶಾರದ, ಧರ್ಮ ಸಂಶೋಧನಾಸಕ್ತ ಶ್ರೀ. ಜಿ. ಟಿ. ಅಕ್ಕುಲಯ್ಯ ದೀಕ್ಷಿತುಲು. ಪ್ರಕಾಶಕರು: ಮಾ. ನಂ. ಶಿವಪ್ಪ ಸಹೋದರರು. ವೀರಶೈವ ಸಾಹಿತ್ಯಭಾಂಡಾರ, 'ಕಲ್ಯಾಣಭವನ', ೫೯ ಜಿಕ್ಕಪೇಟೆ— ಬೆಂಗಳೂರು ನಗರ. ಕ್ರಾ ಆ. ೫೦ ಪುಟಗಳು. ಬೆಲೆ ೦-೧೫-೦.

೧೬೯ ಕಲ್ಯಾಣ (ಹಿಂದೀ ಮಾಸಪತ್ರಿಕೆಯ ಮಾರ್ಕಾಂಡೇಯ-ಬ್ರಹ್ಮಪುರಾಣಾಂಕ). ಸಂಪಾದಕರು ಶ್ರೀ. ಗಣಪತಿ ಹನುಮಾನ್ ಪ್ರಸಾದ ಪೋದ್ದಾರ ಮತ್ತು ಸಿ. ಎಲ್. ಗೋಸ್ವಾಮಿ ಎಂ. ಎ. ಪ್ರಕಾಶಕರು ಶ್ರೀ. ಘನಶ್ಯಾಮದಾಸ ಜಾಲನಾ, ಗೀತಾಪ್ರೆಸ್— ಗೋರಖಪುರ (ಯು. ಪಿ.) ಕ್ರಾ. ೧೦೮೨ ಪುಟಗಳು.

೧೭೦ ಕಣ್ಣೀರು (ಸ್ವತಂತ್ರ ಸಾಮಾಜಿಕ ಕಾದಂಬರಿ). ಬರೆದವರು ಶ್ರೀಮಾನ್ ಆ. ನ. ಕೃಷ್ಣರಾಯರು. ಮೈಸೂರಿನ ಉಪಾ ಸಾಹಿತ್ಯ ಮಾಲೆಯ ೩ನೆಯ ಗ್ರಂಥ. ಕ್ರಾ. ಆ. ೧೬೦ ಪುಟಗಳು. ಬೆಲೆ ೧-೫-೦.

೧೭೧ ಕರ್ನಾಟಕ ವಿಶ್ವವಿದ್ಯಾಲಯ (ಪರಿಜಯಾತ್ಮಕ ಕಿರುಹೊತ್ತಿಗೆ). ಲೇಖಕರು ಪ್ರಾ. ನ ಸ. ಮಾಳವಾಡ ಎಂ ಎ. ಧಾರವಾಡ. ಕ್ರಾ. ಆ ೫೨ ಪುಟಗಳು. ಸದಸ್ಯರಿಗೆ ಮಾತ್ರ ಕೊಟ್ಟಿದ್ದಾರೆ.

ಇದು ಆರು ವಿಭಾಗಗಳಿಂದ ಕೂಡಿದ್ದು ೧ ಚಳವಳಿಯ ಇತಿಹಾಸ, ೨ ಮಂದುಸ್ತಾನದಲ್ಲಿ ಸ್ವಾತಂತ್ರೋತ್ತರ ವಿಶ್ವವಿದ್ಯಾಲಯಗಳ ಜೀವಣಿಗೆ. ೩ ಮುಂಬಾರಾಷ್ಟ್ರ ಯುನಿವರ್‌ಸಿಟಿ ಕಮಿಟಿಯ ರಿಪೋರ್ಟ್ ಹಾಗು ಉತ್ತರ ಕರ್ನಾಟಕದ ಒಕ್ಕೂಟ ಸಂಬಂಧ, ೪ ಮುಂಬಯಿ ವಿಶ್ವವಿದ್ಯಾಲಯದಲ್ಲಿ ಕರ್ನಾಟಕದ ಸ್ಥಾನಮಾನ. ೫ ಕರ್ನಾಟಕ ವಿಶ್ವವಿದ್ಯಾಲಯಕ್ಕಾಗಿ ಒಂದು ಯೋಜನೆ— ೬ ಅವಿಂಡ ಕರ್ನಾಟಕ ವಿಶ್ವವಿದ್ಯಾಲಯದ ಯೋಜನೆ— ಎಂಬ ವಿಷಯಗಳು ಕ್ರಮವಾಗಿ ವಿವೇಚಿತವಾಗಿವೆ. ಕೊನೆಯ 'ಬುಳ್ಳಿಬಿಡಿಕೆ' ಎಂಬ ಭಾಗದಲ್ಲಿ, ೧೯೪೬ನೆಯ ಸಪ್ಟಂಬರ್—ನಾಡ ಹಬ್ಬದ ಕಾಲದಲ್ಲಿ ನಡೆಯಿಸಿದ ವಿಶ್ವವಿದ್ಯಾಲಯಸಂಬಂಧ ಚಟುವಟಿಕೆಯ ವಿವರಣೆಯಿದೆ.



ಕಂಕಣ

ಮುಖ್ಯ ವಿಷಯಗಳು

★

ಒಂಬತ್ತನೆಯ ವರ್ಷದ ಕೊನೆ (ಸಂಪಾದಕೀಯ)
ಸಂಪಾದಕರು

ಬೀರಣ್ಣನ ಬಡಿನುಡಿಗಳು (ವ್ಯಂಗ್ಯಚಿತ್ರಣ)
'ಗುಡದಪ್ಪ'

ಹಾಲುಗಾರಿಕೆ (ಒಂದುಕತೆ)
ಶ್ರೀ. ಮಿರ್ಜಿ ಅಣ್ಣಾರಾಯರು, ಧಾರವಾಡ

ನೌಖಾಲಿಯ ಯಾತ್ರೆ (ಪ್ರವಾಸ ಪ್ರಬಂಧ)
ಶ್ರೀ. ಕುಲಕರ್ಣಿ ನಾರಾಯಣರಾಯರು, ವಿಜಾಪುರ

ಶಾಂತಿಗೀತ (ಕವನ)
ಶ್ರೀ. ಜಿ. ವಿ ಚಿತ್ತಾಳ ಬಿ.ಎ., (ಆನರ್ಸ್)

ಅಳಬೇಕೋ ನಗಬೇಕೋ? (ಲಘುಪ್ರಬಂಧ)
ಶ್ರೀ. ಅನಂತ ಕೃಷ್ಣ ಕುಲಕರ್ಣಿ ಬಿ.ಎ., (ಆನರ್ಸ್)

ಶಿಕ್ಷಣದಲ್ಲಿ ಕಾಂತಿ (ಲೇಖಾಂಕ ೨)
ಶ್ರೀ. ಕರ್ನಮಡಕಲ ರಾಧಾಕೃಷ್ಣನ್ ಬಿ. ಎಸ್‌ಸಿ.,

ರಕ್ತಾಂಜಲಿಯ ನಿರೀಕ್ಷಣದಿಂದ (ಸಾಹಿತ್ಯವಿಮರ್ಶೆ)
ಪ್ರೊ. ಎಚ್. ಬಿ. ಕುಲಕರ್ಣಿ ಎಂ. ಎ., ಸಾಂಗ್ಲಿ

ಕೇವಲ ಸ್ವಾರ್ಥಕ್ಕಾಗಿ (ಸಣ್ಣಕತೆ)
ಶ್ರೀ. ಚ. ಲ. ಪರಮೇಶ್ವರ ಗುಪ್ತ, ದಾವಣಗೆರೆ

ಗಂಧಕಾಮ್ಲ (ವಿಜ್ಞಾನ ವಿಚಾರ)
ಪ್ರೊ. ವೆಂಕೋಬಾಚಾರ್ಯ ಉಪಾಧ್ಯಾಯ ಎಂ.ಎಸ್‌ಸಿ,

ಅಲ್ಲದೆ 'ಪುಸ್ತಕ ವಿಮರ್ಶೆ' 'ಸಾದರ ಸ್ವೀಕಾರ' ಮೊದಲಾದುವುಗಳು.

ಜಯಂತಿಯ ವಿಜಂಟರಲ್ಲಿ ವಿನ್ನಹ

ಜಯಂತಿಯ ಮುದ್ರಣ-ಕಾಗದ-ಆಡಳಿತಗಳ ವೆಚ್ಚ ಹೆಚ್ಚಾಗಿರುವುದರಿಂದ, ಇನ್ನುಮೇಲೆ ಪಿಡಿಸಂಚಿಕೆಯ ಬೆಲೆಯನ್ನು ಮೊದಲಿನಂತೆ ೬ಆಣೆ ಇರಿಸಿದರೆ ಹಾನಿಯನ್ನು ಹೊರಬೇಕಾಗುವುದು. ಅಲ್ಲದೆ ಈ ವರ್ಷದಲ್ಲಿ ಪ್ರತಿಸಂಚಿಕೆಯಲ್ಲಿ ೪-೫ಪುಟಗಳನ್ನು ಹೆಚ್ಚಿಗೆ ಕೊಡಬೇಕೆಂದು ಯೋಚಿಸಲಾಗಿದೆಯಲ್ಲದೆ, ಸಚಿತ್ರತೆಯನ್ನು ಹೆಚ್ಚಿಸಬೇಕೆಂಬ ವಿಚಾರವೂ ಇದೆ. ಆದುದರಿಂದ ೧೧ನೆಯ ವರ್ಷದ ೧ನೆಯ ಸಂಚಿಕೆಯಿಂದ ಮೊದಲು ಮಾಡಿ, ಪಿಡಿಸಂಚಿಕೆಯ ಬೆಲೆಯನ್ನು ಎಂಟು ಆಣೆಗೆ ಏರಿಸಲಾಗಿದೆ. ವಿಜಂಟರೆಲ್ಲರೂ ನಮ್ಮ ಪರಿಸ್ಥಿತಿಯನ್ನು ಲಕ್ಷ್ಯಕ್ಕೆ ತಂದುಕೊಂಡು ಎಂದಿನಂತೆ ನಮಗೆ ಸಂಪೂರ್ಣ ಸಹಕಾರ ಕೊಡಬೇಕೆಂದು ವಿಜ್ಞಾಪನೆ. ಹೊಸ ವರ್ಷಾದಿನ ಮೂಲಕ ಪ್ರತಿಗಳ ಹೆಚ್ಚು-ಕಡಿಮೆಯ ಜೋಡಿಕೆಯನ್ನು ಎಲ್ಲ ವಿಜಂಟರೂ ನೇ ೧೧ನೆಯ ತಾರೀಖಿನೊಳಗಾಗಿ ತಿಳಿಸಬೇಕು. ಹಾಗೆ ತಿಳುಹದವರಿಗೆಲ್ಲ ಎಂದಿನಷ್ಟೇ ಪ್ರತಿಗಳನ್ನು ಕಳುಹಲಾಗುವುದು.

ಮ್ಯಾನೇಜರ್, ಜಯಂತಿ, ಧಾರವಾಡ

ಜಯಂತಿಗೆ ವಿನಿಮಯಕ್ಕೆಂದು ಬರುವ ಪತ್ರಿಕೆಗಳು

ವಾರಪತ್ರಿಕೆಗಳು

೧ ಸಂಸ್ಥಾನೀಸ್ವರಾಜ್ಯ (ಜಮಖಂಡಿ), ೨ ಸಂದೇಶ, ೩ ಕರ್ನಾಟಕ, ೪ ತರುಣಭಾರತ-ಮರಾಟಿ (ಬೆಳಗಾಂವಿ) ೫ ಬೆಳಕು (ಧಾರವಾಡ), ೬ ಕರ್ನಾವೀರ, ೭ ಜಯಹಿಂದ, ೮ ಕರ್ನಾಟಕ ಬಂದು, ೯ ಕರ್ನಾಟಕ ವೈಭವ, (ವಿಜಾಪುರ) ೧೦ ನವಸಂದೇಶ (ಬಳ್ಳಾರಿ) ೧೧ ಅಂತರಂಗ, ೧೨ ನವಯುಗ, (ಉಡುಪಿ) ೧೩ ಕಂಠೀರವ. ೧೪ ಸ್ವದೇಶಾಭಿಮಾನಿ, ೧೫ ರಾಷ್ಟ್ರಬಂಧು. ೧೬ ಒಡವರ ಒಂದು, ೧೭ ನವಭಾರತ, ೧೮ ಸ್ವತಂತ್ರ ಭಾರತ, ೧೯ ಕನ್ನಡನುಡಿ, ೨೦ ವಿಶ್ವಕರ್ನಾಟಕ. ೨೧ ತಾಯಿನಾಡು. ೨೨ ವಾಹಿನಿ. ೨೩ ಸುನ್ನಿಯ ವೈಸೂರು, ೨೪ ಕೇಸರಿ (ಬೆಂಗಳೂರು) ೨೫ ತಮಾವ್ (ವೈಸೂರು) ೨೬ ಸೋಷಿಯಲ್ ವೆಲ್ಫೇರ್ (ಇಂಗ್ಲಿಷ್), ೨೭ ಅಮೇರಿಕನ್ ನ್ಯೂಜಫೆಲ್-ಇಂಗ್ಲಿಷ್ (ಮುಂಬಯಿ) ೨೮ ಪ್ರಜಾ (ಹೈದರಾಬಾದ್ ೨೯ ನಾಗರಿಕ (ಗುಲ್ಬುರ್ಗಾ)

ಪಕ್ಷಪತ್ರಿಕೆಗಳು

೧ ತರಂಗರಂಗ (ಆಕಾಶವಾಣಿ ವೈಸೂರು) ೨ ಇಂಡಿಯನ್ ಇನ್‌ಫರ್ಮೇಶನ್-ಇಂಗ್ಲಿಷ್ (ಲಾಹೋರ)

ಮಾಸಪತ್ರಿಕೆಗಳು

೧ ಇಂಡಿಯನ್ ಟಿ. ಇ. ಎನ್-ಇಂಗ್ಲಿಷ್ (ಮುಂಬಯಿ), ೨ ಕಲ್ಯಾಣ-ಹಿಂದಿ (ಗೋರಖಪುರ) ೩ ಕೆಲ್ಕೋ-ಸ್ಕರ—ಮರಾಟಿ (ಕಿರ್ಲೋಸ್ಕರವಾಡಿ), ೪ ಸಹ್ಯಾದ್ರಿ—ಮರಾಟಿ (ಪುಣೆ), ೫ ವಿಶ್ವಕಮಿತ್ರ (ಬೆಳಗಾಂವಿ) ೬ ವಾಗ್ಭೂಷಣ, ೭ ಜಯಕರ್ನಾಟಕ, ೮ ಕಲಿಯುಗ, ೯ ನರಸಿಂಹ (ಧಾರವಾಡ), ೧೦ ಸಿವಿಲ್ ಭಾರತ ಆಯುರ್ವೇದ ಸಮ್ಮೇಳನ ಪತ್ರಿಕಾ ೧೧ ಶಿವಾನುಭವ (ವಿಜಾಪುರ) ೧೨ ಜೀವನ, ೧೩ ಉಷಾ, ೧೪ ವಾಣಿ, ೧೫ ಕತೆಗಾರ, ೧೬ ಕೊರವಂಜಿ, ೧೭ ಸುಬೋಧ. ೧೮ ನಗುವನಂದ, ೧೯ ವಾಕ್ಚಿತ್ರ, ೨೦ ಸ್ವತಂತ್ರ, ೨೧ ಮಯೂರ, ೨೨ ನಿಮಾವಾಣಿಜ್ಯ, ೨೩ ಕೀರ್ತಿಕಿರಣ, ೨೪ ವೈಸೂರು ಇನ್‌ಫರ್ಮೇಶನ್ ಬುಲೆಟಿನ್ (ಬೆಂಗಳೂರು) ೨೫ ಧುರೀಣ (ಉಡುಪಿ) ೨೬ ಹೈದರಾಬಾದ್ ಸಮಾಚಾರ (ಹೈದರಾಬಾದ್), ೨೭ ಪುಸ್ತಕ ಪ್ರಪಂಚ (ವೈಸೂರು).

ತ್ರೈಮಾಸಿಕಗಳು

೧ ಕನ್ನಡ ಸಾಹಿತ್ಯ ಪರಿಷತ್‌ಪತ್ರಿಕೆ (ಬೆಂಗಳೂರು) ೨ ಪುಟ್ಟಿದ್ದ ಕರ್ನಾಟಕ (ವೈಸೂರು) ೩ ವೀರಶೈವ ಸಾಹಿತ್ಯ ಪತ್ರಿಕೆ (ಧಾರವಾಡ)

ಗ್ರಂಥಮಾಲೆಗಳು

೧ ಮನೋಹರ ಗ್ರಂಥಮಾಲೆ, ೨ ಮಿಂಚಿನ ಒಳ್ಳಿ, ೩ ಲಲಿತ ಸಾಹಿತ್ಯಮಾಲೆ ೪ ಪ್ರತಿಭಾ ಗ್ರಂಥಮಾಲೆ (ಧಾರವಾಡ) ೫ ಕನ್ನಡ ಕಾವ್ಯಮಾಲೆ ೬ ಉಷಾಸಾಹಿತ್ಯಮಾಲೆ (ವೈಸೂರು) ೭ ಸಂಜೀವಿನಿ ಪ್ರಕಾಶಮಾಲಾ (ಹುಬ್ಬಳ್ಳಿ) ೮ ಪ್ರಚಾರ ಪುಸ್ತಕ ಮಾಲಾ (ವೈಸೂರು)



ವಾರ್ಷಿಕಚಂದಾ ಪ್ರತಿತಿಂಗಳ ೧ನೆಯ ತಾರೀಖಿಗೆ
೪—೮—೦ ಪ್ರಕಟವಾಗುವುದು.

ಸಂಪುಟ ೯ | ೧ನೆಯ ಮೇ ೧೯೪೭ | ಸಂಚಿಕೆ ೧೨

ಸಂಪಾದಕೀಯ

೯ನೆಯ ವರ್ಷದ ಕೊನೆ

ಇದೀಗ ಜಯಂತಿಯ ಒಂಬತ್ತನೆಯ ವರ್ಷದ ಕೊನೆಯ ಸಂಚಿಕೆ. ನಾಡಿನಲ್ಲಿಯ ರಾಜಕೀಯ ಸಂಕ್ರಮಣಕಾಲದ ಮೂಲಕ, ೯ನೆಯ ವರ್ಷ ಜಯಂತಿಗೊಂದು ಕುತ್ತದ ಕಾಲವಾಗಿ ಪರಿಣಮಿಸಿತು. ಈ ವರ್ಷದಲ್ಲಿ ಒದಗಿದಷ್ಟು ಆಪತ್ತಿಗಳು ಮಹಾಯುದ್ಧದ ಮಧ್ಯಕಾಲದಲ್ಲಿಯೂ ಒದಗಿರಲಿಲ್ಲ. ಇಂತಹ ಆಪತ್ತಿಗಳನ್ನು ಎದುರಿಸಿಯೂ ಧೈರ್ಯದಿಂದ ಮುಂದುವರಿದು, ಒಂಬತ್ತನೆಯ ವರ್ಷದ ತನ್ನ ಹೊಣೆಗಾರಿಕೆಯಿಂದ ಜಯಂತಿ ಮುಕ್ತವಾದುದಕ್ಕಾಗಿ, ಅದರ ಸಂಚಾಲಕ ವರ್ಗ ಒಂದು ಬಗೆಯ ಸಮಾಧಾನದ ನಿಟ್ಟುಸಿರನ್ನು ಬಿಡುತ್ತಲಿದೆ.

ಕಳೆದ ಕಾಲ ಕಳೆದು ಹೋಯಿತು; ಇನ್ನು ಬರಲಿರುವ ಕಾಲ ಯಾದರೂ ಒಳ್ಳೆಯುದಿದೆಯೇ?—ಎಂದರೆ, ಅದೂ ತೀರ ಕತ್ತಲೆಯಲ್ಲಿ ಸುರೆಯಾಗಿದೆ. ಭಾರತದ ಜನತೆಯಲ್ಲಿ ಮಾನವಭಾವ ಜಾಗೃತವಾಗಿ ಕಾರ್ಯಮಾಡಲು ತೊಡಗಿತೇ, ನಾಳೆಯ ದಿನವೆ ಒಳ್ಳೆಯ ಕಾಲವನ್ನು ನಾವು ಕಾಣಬಹುದು. ಕೋಪ, ತಾಪ, ಈರ್ಷೆ, ಮತ್ಸರಗಳ ಸಶಕ್ತ ಕಾರ್ಯವನ್ನು ಮುಂದುವರಿಸಿತೇ, ಒಳ್ಳೆಯ ಭವಿಷ್ಯ ಕಲ್ಪನೆಗೆ ನಿಲುಕದಷ್ಟು ಕಾಲ ದೂರವಾಗಿರುವುದು. ಶುಭಭವಿಷ್ಯಸಾಧನೆಗಾಗಿ ಹೋರಾಡಬೇಕೆಂದಿರುವ ಜಯಂತಿ, ಕನ್ನಡಿಗರ ಸಹಕಾರಶಕ್ತಿಯ ಮೇಲೆ ಭರವಸೆಯನ್ನಿರಿಸಿ, ಹತ್ತನೆಯ ವರ್ಷದ ಕಾರ್ಯಗುರುತನ್ನು ಹೊರಲು ಸಿದ್ಧವಾಗಿದೆ. ಕನ್ನಡಿಗರು ಎಲ್ಲ ಬಗೆಗಳ ಸಹಕಾರವನ್ನಿತ್ತು ತಮ್ಮ ಬಲವನ್ನು ಬೆಳೆಯಿಸಬೇಕು.

ಕಳೆದ ವರ್ಷ ಒಮ್ಮೆಲೆ ಏರಿದ ಮುದ್ರಣದರಗಳ ಮೂಲಕ ಜಯಂತಿ ಆರ್ಥಿಕ ಸಂಕಟದಲ್ಲಿ ಸಿಕ್ಕಿತು. ಇಲ್ಲದೆ 'ನಾಲ್ಕಾಣೆಯ ನೋಟು'ದಲ್ಲಿಯ ತನ್ನ ನಿರ್ದಾಕ್ಷಿಣ್ಯ ಟೀಕೆಗಳ ಮೂಲಕ ಮುಂಬಯಿ ಸರಕಾರದ ವಕ್ರದೃಷ್ಟಿಗೆ ಪಾತ್ರವಾಗಬೇಕಾಯಿತು. ಕಾರ್ಯಾಲಯದಲ್ಲಿಯ ಕೆಲಸಗಾರರ ನಿಶ್ಚಾಸ್ಥಾನದ ಮೂಲಕ ಹಲವುಬೀತಿಯಿಂದ ಹಾನಿಗೊಳಗಾಗಬೇಕಾಗುವ ಸಂದರ್ಭ ಒದಗಿತು. ಪತ್ರಿಕೆಗಾಗಿ ಬೇಕಾಗುವ ಪದಾರ್ಥಗಳ ಆನಮುಕೂಲತೆ ಧಾರವಾಡದಲ್ಲಿ ವಿಶೇಷವಾಗಿರುವುದರಿಂದ, ಇಮ್ಮಡಿ ಮುಮ್ಮಡಿ ಹಣ ವೆಚ್ಚಮಾಡಿದರೂ ಪತ್ರಿಕೆಯ ಬಾಹ್ಯಸೌಂದರ್ಯ ಹೆಚ್ಚಿಸಲು ಸಾಧ್ಯವಿಲ್ಲವಾಯಿತು. ಸರಕಾರದ ನಿಯಂತ್ರಣದ ಮೂಲಕ ಹೆಚ್ಚು ಪುಟಗಳನ್ನು ಕೊಡಲಿಕ್ಕೂ, ಪ್ರಸಾರವನ್ನು ಹೆಚ್ಚಿಸಲಿಕ್ಕೂ ಸಾಧ್ಯವಿಲ್ಲದೆ ಹೋಯಿತು ಇವೆಲ್ಲ ಕೊಂದರೆಗಳ ಮೂಲಕ ಜಯಂತಿ ಮಾಡಬೇಕಾದಷ್ಟು ಕಾರ್ಯವನ್ನು ಮನವೊಪ್ಪುವಂತೆ ಈ ವರ್ಷ ಮಾಡಿಲ್ಲವೆಂಬುದರ ಅರಿವು ನಮಗೆ ಸರಿಕಷ್ಟಿದೆ. ಇವೆಲ್ಲ ಅಡಚಣೆಗಳು ದೂರವಾಗುತ್ತ ಹೋದಂತೆ ಸಂಚಿಕೆಗಳು ಮೊದಲಿನಂತೆ ಸುಂಬುಜ್ಯೆಯಿಂದ, ಕಣ್ಣು ಸೆಳೆಯುವ ಬೆಲುವಿನಿಂದ ಹೊರಡಬಹುದು. ಆ ಕಾಲಕ್ಕಾಗಿ ನಾವೆಲ್ಲ ಕಾಯುತ್ತಿರಬೇಕಾಗಿದೆ.

ಒಂಬತ್ತನೆಯ ವರ್ಷ ಜಯಂತಿ ಜಮಾ ಬಿದ್ದ ೪೦೦ ಪುಟಗಳನ್ನು ತನ್ನ ವಾಚಕರಿಗೆ ಸಲ್ಲಿಸಿರುವುದು. ಇಷ್ಟೊಂದು ಪುಟಗಳನ್ನು ಬೇರೆ ಪುಸ್ತಕಗಳನ್ನು ಕೊಳ್ಳಬೇಕಾದರೆ ಹೇಟೆಯಲ್ಲಿ ಇಂದು ನಾಲ್ಕು ರೂಪ್ಯ

೧೦ ರೂಪಾಯಿಗಳನ್ನು ವೆಚ್ಚಮಾಡಬೇಕಾಗುವುದು. ಅಂತಹದನ್ನು ನಾವು ಅಂಚೆಯ ವೆಚ್ಚ ಸಹಿತವಾಗಿ ಬರಿ ೪ ರೂ. ೪ ಆಣೆಗಳಿಗೆ ಸಲ್ಲಿಸಿದ್ದೇವೆ. ಹೊಸ ವರ್ಷದಲ್ಲಿ ಇದಕ್ಕಿಂತ ಹೆಚ್ಚಿಗೆ ಪುಟಗಳನ್ನು ಕೊಡಲಿಕ್ಕೆ ಸಾಧ್ಯವಾದೀತೆಂಬ ನಿರೀಕ್ಷೆಯಲ್ಲಿದ್ದೇವೆ.

ಕಾಗದದ ನಿಯಂತ್ರಣ ಸಡಿಲಾದುದರಿಂದ, ನಮ್ಮ ನಾಡಿನಲ್ಲಿ ಹಲವು ಪತ್ರಿಕೆಗಳು ಹೊರಡಬಹುದಾಗಿದೆ. ಅದರಿಂದ ಒಂದು ಬಗೆಯ ಮೇಲಾಟವೂ ಪ್ರಾರಂಭವಾಗಬಹುದಾಗಿದೆ. ಇಂತಹ ಮೇಲಾಟದ ಕಾಲದಲ್ಲಿ ಜಯಂತಿಯ ಬದುಕಿಗೆ ಬಲವೆಂದರೆ ಕನ್ನಡಿಗರ ಪ್ರೀತಿ-ವಿಶ್ವಾಸಗಳು; ಸಹಾನುಭೂತಿ-ಸಹಕಾರಗಳು. ಬರಿ ಹಣದ ಬಲದಿಂದ ಮೇಲಾಟ ನಡೆಯಿಸಲಿಕ್ಕೆ ಜಯಂತಿಗೆ ಸಾಧ್ಯವೂ ಇಲ್ಲ; ಸಮಂಜಸವೂ ಎನಿಸುವುದಿಲ್ಲ.

ಒಂಬತ್ತನೆಯ ವರ್ಷದಲ್ಲಿ ಕೊಟ್ಟ ಲೇಖನಗಳು ನಮ್ಮ ವಾಚಕರಿಗೆ ಪೃಷ್ಟಿಕರವಾಗಿತ್ತೆಯೆಂಬುದರ ಅನುಭವ ನಮಗಿದೆ. ಜಯಂತಿಯಲ್ಲಿ ಪ್ರಕಟವಾಗುವ ಕತೆಗಳು ಮೇಲಿನ ತರಗತಿಯವಿರುವುದೆಂಬ ಮಾತನ್ನು ವಿಮರ್ಶಕವರ್ಗ ಒಪ್ಪಿಕೊಂಡಿದೆ. 'ಗೋಪಾಳನ ಗೋಪಾಲ', 'ಭಗವಂತನ ಭವಿಷ್ಯ' ದಂತಹ ವಿಶಿಷ್ಟಾಂಕಪೃಶ್ಯಗಳು ಜನಪ್ರಿಯವಾದುದಕ್ಕೆ, ಅವು ಎಲ್ಲೆಲ್ಲಿಯೂ ರಂಗದಮೇಲೆ ಬಂದು ಅಭಿನೀತವಾದುದೆ ಸಾಕ್ಷಿಯಾಗಿದೆ. ಸಾಹಿತ್ಯವಿಮರ್ಶಾತ್ಮಕ ಪ್ರಬಂಧಗಳೂ ವಿಷಯ ಪರಿಚಯಾತ್ಮಕ ಲೇಖನಗಳೂ ಅಧಿಕೃತ ಲೇಖಕರಿಂದ ಬರೆದುವುಗಳಾಗಿದ್ದು ಕೃತಕಾರ್ಯವೆನಿಸಿಕೊಳ್ಳುವಂತಿವೆ. ಜಯಂತಿಯ ಸಂಪಾದಕೀಯಗಳ ವೈಶಿಷ್ಟ್ಯವಂತೂ ಎಲ್ಲರೂ ಬಲ್ಲ ಸಂಗತಿ. ಕೆಲವೆ ಪುಸ್ತಕಗಳ ವಿಮರ್ಶೆ ಪ್ರಕಟವಾಗಿದ್ದರೂ ಅವು ತರುಣ ಲೇಖಕರಿಗೆ ದಾರಿಯನ್ನು ತೋರಿಸುವಂತಿವೆ. ಜಯಂತಿಯು 'ಸಾದರ ಸ್ವೀಕಾರ' ವಿಭಾಗವು ಸಾವಧಾನ್ಯವಾಗಿ ಕರ್ನಾಟದ ಸಾಹಿತ್ಯಸೃಷ್ಟಿಯ ಪರಿಚಯವನ್ನು ಮಾಡಿಕೊಡುವಂತಿರುವುದು.

ನಿರಂಗುಣ ವೈಶಿಷ್ಟ್ಯದಿಂದ ಜಯಂತಿ ಕೊಡಿರಬೇಕಾದರೆ, ನಮ್ಮ ಲೇಖಕ ಬಂಧುಗಳ ನಿರಪೇಕ್ಷವಾದ ಸಹಕಾರವೆ ಮುಖ್ಯ ಕಾರಣವಾಗಿದೆ. ಲೇಖಕರಿಗೆ ಸ್ವಲ್ಪಿಲ್ಲ ಸ್ವಲ್ಪವಾದರೂ ಪ್ರತಿಫಲ ಸಲ್ಲಿಸಬೇಕೆಂದು ನಮ್ಮ ಅಪೇಕ್ಷೆಯಿದ್ದಿತು. ಹಾಗೆಂದು ಕಳೆದ ವರ್ಷ ಸಾರಿಯೂ ಇದ್ದಿತು ಕೂಡ. ಆದರೆ ಈ ವರ್ಷದ ಆರ್ಥಿಕಸಂಕಟ ಲೇಖಕವರ್ಗದಿಂದ ನಿಷ್ಕಾಮಕರ್ಮವನ್ನು ಅಪೇಕ್ಷಿಸುವ ಸಂದರ್ಭವನ್ನು ತಂದು ಒದಗಿಸಿತು. ಇದು ಅನುಚಿತವಾದರೂ ಅನಿವಾರ್ಯವಾಯಿತು. ನಮ್ಮ ಪರಿಸ್ಥಿತಿಯನ್ನು ಮನದಂದು ಪ್ರತಿಫಲದ ಆಶೆಯಿಲ್ಲದೆ ನೆರವನ್ನು ಕೊಟ್ಟ ಲೇಖಕವರ್ಗಕ್ಕೆ ನಮ್ಮ ಕೃತಜ್ಞತೆಯ ವಂದನೆಗಳನ್ನು ಸಲ್ಲಿಸುವೆವು.

ಜಯಂತಿಯ ಜನಪ್ರಿಯತೆಯ ಮಾನದಿಂದ ಚಂದಾದಾರರ ಸಂಖ್ಯೆ ಸಾಕಷ್ಟಿಲ್ಲವೆಂಬುದನ್ನು ನಾವು ಒಪ್ಪಿಕೊಳ್ಳಲೆ ಬೇಕಾಗಿದೆ. ಇದಕ್ಕೆ ಕಾರಣ ಕೊಂಡು ಓದಬೇಕೆಂಬ ಉತ್ಕಟತೆಯ ಅಭಾವ ಓದಬೇಕೆಂಬ ಬುದ್ಧಿ ಜನರಲ್ಲಿ ಬಳೆದಿದೆಯಾದರೂ ಅದು ಎಲ್ಲಿಯಾದರೂ ಏನಾದರೂ ಓದಿ ಸಮಾಧಾನಪಡುವುದು; ಅದರಿಂದ ಎಂತಹ ಒಳ್ಳೆಯ ಪತ್ರಿಕೆಗಳನ್ನು ಹೊರಡಿಸಿದರೂ ಪ್ರಸಾರ ಸಾಕಷ್ಟು ಇಲ್ಲದೆ ಅವು ಕೊರಗುತ್ತಲಿರುವುವು. ಇಂತಹದರಲ್ಲಿಯೂ ಅನೇಕರು ಪ್ರೀತಿಯಿಂದ ಜಯಂತಿಗೆ ಚಂದಾದಾರರಾಗಿ ನಿಂತು ನೆರವನ್ನಿತ್ತುದಕ್ಕಾಗಿ ಅವರಿಗೆ ನಮ್ಮ ಧನ್ಯವಾದಗಳನ್ನು ಅರ್ಪಿಸುತ್ತೇವೆ.

ಜಯಂತಿಯ ಪ್ರಸಾರಕ್ಕೆ ಹೆಚ್ಚು ಸಹಾಯ ಮಾಡುವರೆಂದರೆ ನಮ್ಮ ಏಜಂಟರುಗಳು. ಒಳದೇಶದಲ್ಲಿಯೂ ಹೊರದೇಶದ ಪ್ರಮುಖ ನಗರಗಳಲ್ಲಿಯೂ ಇದ್ದ ಕನ್ನಡಿಗರ ಕೈಗೆ ಜಯಂತಿ ಸಹಜವಾಗಿ ಸಿಕ್ಕುತ್ತಿರುವುದಕ್ಕೆ ನಮ್ಮ ಏಜಂಟರೇ ನಿಜವಾಗಿ ಶ್ರೇಯೋಭಾಗಿಗಳು. ಸಂಖ್ಯೆಯಲ್ಲಿಯೂ ನಿಯಮಿತತನದಲ್ಲಿಯೂ 'ರೆಕಾರ್ಡ್ ಬ್ರೇಕ್' ಮಾಡಿದವರೆಂದರೆ ಗುಳೇವಗುಡ್ಡದ ಏಜಂಟರಾದ ಶ್ರೀಮಾನ್ ಆರ್. ಎಸ್. ಪರ್ವತೀಕರರು. ಮುಂಬಯಿಯಲ್ಲಿ ಶ್ರೀ. ವೈ ಬಿ. ಕುಂದೇರರೂ ಪುಣೆಯಲ್ಲಿ ಶ್ರೀ. ಎಸ್. ಎನ್. ರೊಟ್ಟಿಯವರೂ, ಮದ್ರಾಸಿನಲ್ಲಿ ಶ್ರೀ. ವಿ. ಲಕ್ಷ್ಮಣರಾಯರೂ, ನೆಲ್ಲೂರಲ್ಲಿ ಶ್ರೀ. ಪಿ. ವಿ. ಆದಿಗಳ್ ಅವರೂ ಕನ್ನಡದ ಪ್ರೀತಿಯಿಂದ ಜಯಂತಿಯ ಪ್ರಚಾರ ಕಾರ್ಯವನ್ನು ಸಂತೋಷದಿಂದ ಕೈಕೊಂಡು ನಡೆಯಿಸುತ್ತಿದ್ದಾರೆ. ಇವರೊಂದಿಗೇ—ನಮ್ಮೊಂದಿಗೆ ಪ್ರಾಮಾಣಿಕತನ-ಪ್ರೀತಿಗಳಿಂದ ನಡೆದುಕೊಳ್ಳುತ್ತಿರುವ—ಎಲ್ಲ ಏಜಂಟರುಗಳಿಗೂ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇವೆ.

ಹೊಸ ವರ್ಷದಲ್ಲಿ ಜಯಂತಿಯ ವಾರ್ಷಿಕ ವರ್ಗಣಿಯನ್ನು ನಾಲ್ಕಾಣೆ ಹೆಚ್ಚಿಸಲಾಗಿದೆ. ಬಿಡಿಸಂಚಿಕೆಯ ಬೆಲೆಯನ್ನು ಎಂಟಾಣೆಗೆ ಏರಿಸಲಾಗಿದೆ. ನಮ್ಮ ಚಂದಾದಾರರೂ ಏಜಂಟರೂ ಪರಿಯಿಟ್ಟು ಇದನ್ನು ಭಾರವನ್ನಾಗಿ ಭಾವಿಸದೆ, ಎಂದಿನಂತೆ ಸಹಕಾರ ನೀಡಬೇಕಾಗಿ ಬೇಡಿಕೆ.

ಜಯಂತಿಯ ೧೦ನೆಯ ವರ್ಷ ಭಾರತದಲ್ಲಿ ಸುಖ-ಶಾಂತಿಗಳು ನೆಲಸುವುದಕ್ಕೆ ಅವಕಾಶವನ್ನು ಕಲ್ಪಿಸಿ ಕೊಡಲಿ!

—ಸಂಪಾದಕರು

ಮುದ್ರಾಸದಲ್ಲಿ ನಮ್ಮ ಏಜಂಟರು
ಶ್ರೀ. ವಿ. ಲಕ್ಷ್ಮಣರಾವ್
೧೪೦ ಚೀನಾಬಝಾರ್ ರಸ್ತೆ
ಜಿ. ಟಿ. ಮದ್ರಾಸು

ನಿಪ್ಪಾಣಿಯಲ್ಲಿ ನಮ್ಮ ಏಜಂಟರು:
ಶ್ರೀ. ಕೆ. ಎಸ್. ಬಳಗುರಗಿ
ನ್ಯೂಜ್ ಏಜಂಟ್ಸ್
ಮತ್ತು ಪುಸ್ತಕ ವ್ಯಾಪಾರಿ



ಪ್ರಶ್ನೆಗೆ ಉತ್ತರ

೧

ಪ್ರ :— ಕನ್ನಡನಾಡಿನ ಏಕೀಕರಣದ ಪ್ರಶ್ನೆ ದೊಡ್ಡದೊ, ಆಸೆಂಬ್ಲಿಯಲ್ಲಿಯ ಮಂತ್ರಿಸ್ಥಾನ ದೊಡ್ಡದೋ ಬೀರಣ್ಣಾ ?

ಉ :— ಮಂತ್ರಿಸ್ಥಾನ ದೊರಕಿಸುವವರೆಗೆ ಕರ್ನಾಟಕ ಏಕೀಕರಣದ ಮಾತು ದೊಡ್ಡದು. ಮಂತ್ರಿಸ್ಥಾನ ಸಿಕ್ಕ ಮೇಲೆ ಅದನ್ನು ಕಾಯ್ದುಕೊಂಡು ಹೋಗುವ ಮಾತು ದೊಡ್ಡದು. ಛೇ! ಇದನ್ನು ನಾನೇಕೆ ಹೇಳಬೇಕು? ಸದ್ಯದ ಮುಂಬಯಿ ಅಸೆಂಬ್ಲಿಯಲ್ಲಿ ಕರ್ನಾಟಕದ ಮಂತ್ರಿ ಪ್ರತಿನಿಧಿಗಳಾಗಿರುವ ಮಾನ್ಯ ಮಲ್ಲನಗೌಡರನ್ನು ಕೇಳಿ. ಸ್ವಾನುಭವಸಿದ್ಧ ಸಂಗತಿಯನ್ನೇ ಅವರು ನಿಮಗೆ ತಿಳಿಸಬಹುದು.

೨

ಪ್ರ :— ದೊಡ್ಡ ಹೋಟೆ ಅಂದಾನೆಪ್ಪನವರಂತಹ ಕತ್ತಲಿನಿಷ್ಠ ಕಾಂಗ್ರೆಸ್ ಭಕ್ತರು, ಧಾರವಾಡ ಜಿಲ್ಲಾ ಬೋರ್ಡಿನ ಅಧ್ಯಕ್ಷರ ಆಯ್ಕೆಯಂತಹ ಸಣ್ಣ ವಿಷಯದಲ್ಲಿ ಮುಸ್ಲಿಂ ಲೀಗಿನವರಲ್ಲಿ ಮೊರೆ ಹೋಗಿರಬಹುದೇ ?

ಉ :— ಹೋಡ್ರಿ, ಕಣ್ಣಿಂದ ಕಂಡವಾಕಲ್ಲ ಇದು. ಊಹೆಯಿಂದಲೆ ಹೇಳಬೇಕಾಗುವುದು. 'ಹೊತ್ತು ಬಂದಾಗ ಕತ್ತೆಯು ಕಾಲನ್ನೂ ಹಿಡಿದು ಕಾರ್ಯ ಸಾಧಿಸು' ಎಂದು ರಾಜಕಾರ್ಯ ಶಾಸ್ತ್ರದ ಸೂತ್ರವಿರುವಾಗ, ದೊಡ್ಡನೇಟೆ ಅಂದಾನೆಪ್ಪನವರಂತಹ 'ರಾಜಕಾರಣ ವಿಶಾರದ'ರು ಮುಸ್ಲಿಂ ಲೀಗಿಗೆ ಜೊರೆ ಹೋಗಿದ್ದರೆ ಆಶ್ಚರ್ಯವೇನು ?

ಇನ್ನೊಂದು ಮಾತು : ಕರ್ನಾಟಕದ ಮುಂದಾಳುಗಳು ಯಾವಾಗಲೂ ಭಾರತದ ಮುಂದಾಳುಗಳ ಅನುಯಾಯಿಗಳು. ಭಾರತ ಸ್ವಾತಂತ್ರ್ಯ ಸಾಧನೆಗಾಗಿ ಅವರು ಮುಸ್ಲಿಂ ಲೀಗಿನೊಂದಿಗೆ ಸಂಧಾನವನ್ನು ನಡೆಯಿಸಿರುವಾಗ, ಅನುಕರಣ ಬುದ್ಧಿಯ ಅಂದಾನೆಪ್ಪನವರು, ಜಿಲ್ಲಾ ಬೋರ್ಡ್ ಅಧ್ಯಕ್ಷಪದವನ್ನು ತಮ್ಮವರಿಗೆ ಸಾಧಿಸಿಕೊಡಲಿಕ್ಕೆಂದು, ಮುಸ್ಲಿಂ ಲೀಗಿನ ಸಹಕಾರಕ್ಕಿಂದಿಗೆ ಸಂಧಾನ ನಡೆಯಿಸಿದರು. ಇದರಲ್ಲಿ ತಪ್ಪೇನು ? ನೀವು ಇನ್ನೊಂದು ಕೆರಳಿದ ಮನದವರಾಗಿ ಕೇಳುವುದಕ್ಕೆ ಕಾರಣವೇ ಇಲ್ಲ.

೩

ಪ್ರ :— ಧಾರವಾಡದಲ್ಲಿಯ ಹೆಣ್ಣುಮಕ್ಕಳ ಟ್ರೇನಿಂಗ್ ಕಾಲೇಜಿನಲ್ಲಿ ಏನೇನೋ ಗಲಾಟೆ ನಡೆದಿದೆಯಂತೆ, ಅದಕ್ಕಾಗಿ ಶಿಕ್ಷಣದ ಮುಖ್ಯಾಧಿಕಾರಿಗಳು ಇತ್ತೀಚೆಗೆ ಬಂದು ಹೋದರಂತೆ. ಇದರ ರಹಸ್ಯ ನಿನಗೆ ಗೊತ್ತಿದೆಯೇ ಬೀರಣ್ಣಾ ?

ಉ :— ಕಳ್ಳಪೇಟೆಯು ಇಂದಿನ ದಿನಗಳಲ್ಲಿ ಎಲ್ಲೆಲ್ಲಿ ಯಾವ ಯಾವ ರಹಸ್ಯಗಳು ನಡೆದಿರುವುವೋ ಸರ್ವಸಾಕ್ಷಿಯಾದ ದೇವರಿಗೊಬ್ಬರಿಗೇ ಗೊತ್ತು. ಹೆಣ್ಣುಮಕ್ಕಳ ಟ್ರೇನಿಂಗ್ ಕಾಲೇಜಿನಲ್ಲಿ ಯಾರಿಗೂ ಪ್ರವೇಶವಿರುವುದಿಲ್ಲ ಬೇರೆ. ನೆಪ್ಪೆಯ ವ್ಯವಹಾರ ಸತ್ತಮೇಲೆ ತಿಳಿವುದಂತೆ; ಪಾಗೆಯ ಅಧಿಕಾರಿಗಳ ವ್ಯವಹಾರ ಇದ್ದಲ್ಲಿಂದ ಎತ್ತಿ ಹಾಕಿದ ಮೇಲೆ ತಿಳಿಯುವುದು. ಅದು ಅಗದೆ ; ಸ್ವಲ್ಪಕಾಲ ತಡೆಯಿರಿ.

೪

ಪ್ರ :— ಕರ್ನಾಟಕದಲ್ಲಿ 'ನುಳ್ಳು ಕಾಂಗ್ರೆಸ್ಸು' 'ನಿಜವಾದ ಕಾಂಗ್ರೆಸ್ಸು' ಎಂದು ಎರಡು ಇವೆಯೆ ?

ಉ :— ಅಹುದು ಇವೆ. ಇದ್ದುದಕ್ಕೆ ಸಾಕ್ಷಿ ಧಾರವಾಡದ ಜಿಲ್ಲಾ ಬೋರ್ಡಿನ ಅಧ್ಯಕ್ಷರ ಆಯ್ಕೆ. ನುಳ್ಳು ಕಾಂಗ್ರೆಸ್ಸಿಗರೆನಿಸಿಕೊಳ್ಳುವ ನಿಜವಾದ (?) ಕಾಂಗ್ರೆಸ್ಸಿಗರಿಗೆ ಸೋಲಾಯಿತು. ನಿಜವಾದ ಕಾಂಗ್ರೆಸ್ಸಿಗರೆನಿಸಿಕೊಳ್ಳುವ ನುಳ್ಳು (?) ಕಾಂಗ್ರೆಸ್ಸಿಗರಿಗೆ ಗೆಲವಾಯಿತು. ಗೌಡರುದ್ಧರಿ— ದೊಡ್ಡ ಮೇಟಿಗಳಿಗೆ ಹಡಪೆಯದೆ ಕಂಚಾಳು ತನ್ನ ಜಾಟವನ್ನು ಎಬ್ಬಿಸಿಬಿಟ್ಟತು. 'ತಂಬಾಳು ತ್ರಿಪಥಗಾಮಿನೀ' ಅಲ್ಲವೆ ?

ವಿಚಿತ್ರ ವಾರ್ತೆಗಳು

ಬೆಳಗಾಂವಿಯ ಸರಕಾರಿ ಹೈಸ್ಕೂಲಿನ ಹೆಡ್‌ಮಾಸ್ತರರು ಒಂದು ಯೋಜನೆಯನ್ನು ಸಿದ್ಧಪಡಿಸಿದ್ದಾರಂತೆ. ಆ ಯೋಜನೆಯ ಪ್ರಕಾರ ಆ ಹೈಸ್ಕೂಲಿನಲ್ಲಿ ಇನ್ನು ಐದು ವರ್ಷಗಳಲ್ಲಿ ಕನ್ನಡ ಮಾತೃಭಾಷೆಯುಳ್ಳ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಅವಕಾಶವೇ ಇಲ್ಲದಂತಾಗುವುದಂತೆ. ಈ ಸಲದ ಮುಂಬೈ ಪರೀಕ್ಷೆಯ ಕಾಲದಲ್ಲಿ ತಮ್ಮ ಯೋಜನೆಯ ಬಗೆಗೆ ಪ್ರಯೋಗ ಮಾಡಿ ನೋಡಿದರಂತೆ. ಕನ್ನಡಿಗರ ದೌರ್ಭಾಗ್ಯದ ಅನುಭವ ಅವರಿಗೆ ಸಾಕಷ್ಟು ಕಂಡುಬಂದು, ತಮ್ಮ ಯೋಜನೆಯು ಯಶಸ್ಸಿನ ಬಗೆಗೆ ಅವರು ಸಂದೇಹವಿಲ್ಲದವರಾಗಿರುವರಂತೆ.

* * *

ಮೊನ್ನೆಮೊನ್ನೆ ಬದನವಾಳನಲ್ಲಿ ಬಳ್ಳಾರಿ ಜಿಲ್ಲಾ ಕರ್ನಾಟಕ ಏಕೀಕರಣ ಸಮ್ಮೇಳನ ಕೂಡಿದ್ದಿತಂತೆ. ಸಭೆಯು ಪ್ರಾರಂಭದಲ್ಲಿ, ಅಧ್ಯಕ್ಷರಾದ ಶ್ರೀಮಾನ್ ಬಲ್ಕೋಣಿ ಭೀಮರಾಯರ ವಿಜಯವನ್ನು ಮಾಡಿಕೊಡುತ್ತಿರುವಾಗ, ಹೊಲಕ ಗೊಬ್ಬೊಬ್ಬರಂತೆ ಎಂಟು ಜನರು, ಅವರನ್ನು ಮನಸೋಕ್ತ ಬೈದು ಬೈದ ಮಾತನಾಡಿದರಂತೆ. ಇದರಲ್ಲಿ ತಪ್ಪುಗಾರರು ಯಾರು ? ಶ್ರೀ. ಬಲ್ಲಕೋಣಿಯವರೋ ಪರಿಚಯಕಾರರಾದ ಪ್ರತಿನಿಧಿಗಳೋ ?— ಎಂಬುದರ ಅರ್ಥ ಒಬ್ಬರಿಗೂ ಆಗಿಲ್ಲವಂತೆ.

* * *

ಧಾರವಾಡದಲ್ಲಿಯ ಕಾಳಿನಾಡ್ಡಿಯಲ್ಲಿ ಮನೆಮನೆಗಳಸವಾಡುತ್ತಿರುವ ಒಕ್ಕಲುಗಿತ್ತಿಯರೆಲ್ಲರೂ ಸಂಪೂರ್ಣಾಯುಷಿಗಳಾಗಿದ್ದಾರಂತೆ. ಇದಕ್ಕೆ ಕಾರಣ ಯಜಮಾನರ ಬಟ್ಟೆಗಳೆಲ್ಲವೂ ಸ್ವಚ್ಛವಾಗಿರುವ ದಶ್ಯ ಧೂಳಿಯಿಂದ ತುಂಬಿರುವುವಂತೆ. ಸ್ವಚ್ಛ ಮಾಡಲಿಕ್ಕಾಗದುದರಿಂದ ನಿತ್ಯವೂ ಮನೆಯಾಕೆಯಿಂದ ಬೈಗಳನ್ನು ತಿನ್ನಬೇಕಾಗುತ್ತಿದೆಯಂತೆ ಧೂಳಿಗೆ ಕಾರಣ ಮುನ್ಸಿಪಾಲಿಟಿಯು ರಸ್ತೆಗಳಿಗೆ ಹಾಕಿದ ಹಾಡಿಮಣ್ಣು ಆದುದರಿಂದ, ಮಾಳ ಮುದ್ದಿಯ ಜನರೆಲ್ಲ ಮುನ್ಸಿಪಾಲಿಟಿಯ ಅಧಿಕಾರಿಗಳ ಕಡೆಗೆ ಕಳುಹಲು ವಿನ್ಸೆಮಂದಲಿಯೊಂದನ್ನು ನಿಯಮಿಸಿದ್ದಾರಂತೆ.

* * *

ರಸವನ್ನು ರಸವನ್ನಾಗಿ ಮಾಡುವವರ ಕೃಪಾವನ್ನು ನನ್ನ ಕೇಳುವರಿಗೆ ಡಿಪಾರ್ಟಮೆಂಟಿನವರು ಮನಸಾರೆ ಕೈಕೊಂಡು ನಡೆಯಿಸುತ್ತಿದ್ದಾರಂತೆ; ನನ್ನ ಹೊಟೆಲುಗಳ ಒಡೆಯರು ಅವರ ಈ ಕಾರ್ಯದಲ್ಲಿ ಸಂಪೂರ್ಣವಾಗಿ ಸಹಕರಿಸಲು ಒಪ್ಪಿಕೊಂಡಿದ್ದಾರಂತೆ.

ವಿಜಯನಗರ ಕರ್ನಾಟಕಸಂಘ, ಠಳಕವಾಡಿ

(ನಾಟ್ಯಶಾಖೆಯ ಸದಸ್ಯರು)

ಕಳೆದ ಫೆಬ್ರುವರಿ (೧೯೬೭) ೧೬ನೆಯ ತಾರೀಖು, ಬೆಳಗಾಂವಿಯ ಲಾ ಕಾಲೇಜಿನ ವಿದ್ಯಾರ್ಥಿಗಳು, ವಿಜಯನಗರ ಕರ್ನಾಟಕ ಸಂಘದ ಸಹಾಯಾರ್ಥ 'ಉಂಡಾಡಿಗುಂಡ' ಎಂಬ ನಾಟಕವನ್ನು ಅತ್ಯಂತ ಯಶಸ್ವಿಯಾಗಿ ಅಭಿನಯಿಸಿದರು. ಈ ಸಮಾರಂಭಕ್ಕೆ ಬೆಳಗಾಂವಿಯ ವೃದ್ಧಪಿತಾಮಹರಾದ ಶ್ರೀಮಾನ್ ಬೆಳವಿ ದತ್ತರಾಯರು ಅಧ್ಯಕ್ಷರಾಗಿ ಇದ್ದರು. ನಟವರ್ಗದಲ್ಲಿ ಶ್ರೀಯುತರುಗಳಾದ ರಾಮಚಂದ್ರರಾವ, ಅನಂತಸ್ವಾಮಿ, ವೆಂಕಟಕೃಷ್ಣಪ್ಪ, ಗೋಪಾಲರಾವ್, ಉಪಾಧ್ಯಾಯ, ರಾಘವೇಂದ್ರರಾವ್, ಬಾಲಸುಂದರಮ್, ವೆಂಕಟೇಶಯ್ಯ, ನಾರಾಯಣಮೂರ್ತಿ, ಶಂಕರರಾವ್, ಲಿಂಗಪ್ಪ ಮುಂತಾದವರು ಇದ್ದು, ತಮ್ಮ ಅಭಿನಯ ಚಾತುರ್ಯದಿಂದ ಪ್ರೇಕ್ಷಕವರ್ಗವನ್ನು ಮೆಚ್ಚಿಸಿದರು, ಮರುಳುಮಾಡಿದರು.

ಹರಪನಹಳ್ಳಿಯ ಸಾಹಿತ್ಯ ಸಮ್ಮೇಳನ

★

ಇದೇ ಮೇ ೭-೮-೯ನೆಯ ದಿನಾಂಕಗಳಲ್ಲಿ, ೩೦ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧಿವೇಶನವು, ಬಳ್ಳಾರಿ ಜಿಲ್ಲೆಯ ಹರಪನಹಳ್ಳಿಯಲ್ಲಿ ನೇರಲಿದೆ. ಸುಪರಿಚಿತ ಸಾಹಿತ್ಯಿಕರಾದ ಶ್ರೀಮಾನ್ ಸಿ. ಕೆ. ವೆಂಕಟರಾಮಯ್ಯನವರು ಅಧ್ಯಕ್ಷರಾಗಲಿರುವರು. ಸಾಹಿತ್ಯ ಸಮ್ಮೇಳನದ ಅಂಗವಾಗಿ ಕವಿಗೋಷ್ಠಿ, ಜನಪದ ಸಾಹಿತ್ಯಗೋಷ್ಠಿ, ಮಹಿಳಾ ಗೋಷ್ಠಿ, ವಿಜ್ಞಾನ ಗೋಷ್ಠಿಗಳು ತಜ್ಞರಾದ ಬೇರೆ ಬೇರೆ ಅಧ್ಯಕ್ಷರ ನೇತೃತ್ವದಲ್ಲಿ ಜರುಗಲಿವೆ. ಸಹೃದಯರೂ ಕನ್ನಡದ ಅಭಿಮಾನಿಗಳೂ ಆದ ಹರಪನಹಳ್ಳಿಯ ನಿವಾಸಿಗಳ ಉತ್ಸಾಹ, ಸಮ್ಮೇಳನವನ್ನು ಯಶಸ್ವಿಯಾಗಿ ನೆರವೇರಿಸುವುದೆಂಬುದರಲ್ಲಿ ಸಂದೇಹವಿಲ್ಲ. ಮುಂದಿನ ಸಂಚಿಕೆಯಲ್ಲಿ ಸಮ್ಮೇಳನದ ವರದಿ ಪ್ರಕಟವಾಗುವುದು.

ಸಂ. ಜ.

ಪಾಲುಗಾರಿಕೆ

(ಒಂದು ಜೀವನ ಚಿತ್ರ)*

ಶ್ರೀ. ವಿಜಿ ಅಣ್ಣಾರಾಯರು, ಧಾರವಾಡ

★

ನಮ್ಮ ನಾಡಿನಲ್ಲಿಯ ಲಾಭಬಡಕ ವ್ಯಾಪಾರಿಗಳ ಪಾಲುಗಾರಿಕೆಯ ವ್ಯಾಪಾರದ ಪಾಡು, ವಾಸ್ತವವಾಗಿ ಚಿತ್ರಿತವಾಗಿದೆ ಇದರಲ್ಲಿ. ಅಧಿಕಾರಿಗಳ 'ವಶೀಲಿ' ಇಲ್ಲದ ಮಲ್ಲೇಶ, ಎಲ್ಲ ರೀತಿಯಿಂದಲೂ ಹಾನಿಗೆ ಗುರಿಯಾಗಿ ಹಲ್ಲು ಕಿರಿದ.

★

೧

ಬೆಳಗಾಂವಿ ನಿಲ್ದಾಣ. ಮೂರನೆಯ ತರಗತಿಯ ಜನರು ಟಿಕೀಟುಪಡೆದುಕೊಳ್ಳುವಲ್ಲಿ ಲಗುಬಗೆಯಿಂದ ಬಂದು ನೋಡಿದ, ಮಲ್ಲೇಶ. ಇನ್ನೂ ನೂರಾರು ಜನ ಇರುವೆಗಳಂತೆ ಸಾಲಾಗಿ ನಿಂತಿದೆ. ಕೈಯ ಗಡಿಯಾರದತ್ತ ದೃಷ್ಟಿ ಹೊರಳಿಸಿದ. ಗಾಡಿ ಬಿಡಲು ಹತ್ತು ಮಿನಿಟುಗಳು ಮಾತ್ರ ಉಳಿದಿವೆ ಅವನ ಅರಳಿದ ಮುಖದಲ್ಲಿ ಅಸಮಾಧಾನದ ನಸುಛಾಯೆಯೊಂದು ಅವರಿಸಿತು. ಒಂದು ಕ್ಷಣ ಹಾಗೆಯೆ ನಿಂತ. ಜೇಬಿನಲ್ಲಿ ಕೈಹಾಕಿ ರಸೀದಿಗಳನ್ನು ಮತ್ತೊಮ್ಮೆ ಮುಟ್ಟಿ ನೋಡಿದ. ಜೊಳುಗಳಿಂದ ಅಲ್ಲಿಯೆ ಸರಿಸಾಡಿ ಎರಡೂ ಇರುವೆಯೆಂಬುದನ್ನು ಮನದಟ್ಟು ಮಾಡಿಕೊಂಡ. ಇನ್ನೊಮ್ಮೆ ಟಿಕೀಟಿಗಾಗಿ ಕಾಯುತ್ತ ನಿಂತ ಜನರ ಮೇಲೆ ದೃಷ್ಟಿ ಬೀರಿದ. ಹಲವರ ಮುಖಗಳನ್ನು ಪರಿಕಿಸಿದ. ಗುರುತಿನವರಾರೂ ಕಾಣಲಿಲ್ಲ. ಇದೀಗ ಹೊರಗಿನಿಂದ ಬಂದ ಒಂದಿಬ್ಬರು, ಸಾಲಿನಲ್ಲಿ ಹಿಂದೆ ನಿಲ್ಲಲು ಮನಸ್ಸು ಮಾಡದೆ, ಅಲ್ಲಿ ಇಲ್ಲಿ ಸುಳಿದಾಡಿ, ಮುಂದೆ ನಿಂತವರಿಗೆ ತಪ್ಪುಗಾಣಿ ಟಿಕೀಟು ಕೊಳ್ಳಲು ಠೊಕ್ಕ ಕೊಡಲಿಕ್ಕೆ ಮುಂದುವರಿದರು. ಅಲ್ಲಿಯೆ ನಿಂತ ಪೋಲೀಸನು ಹಾಗೆ ಮಾಡಗೊಡಲಿಲ್ಲ. ಹಿಂದೆ ನೂಕಿದ. ಸಾಲಿನಲ್ಲಿ ನಿಂತ ಜನರ ಮುಖದ ಮೇಲೆ ಗೆಲುವಿನ ಝಳುಕೊಂದು ಹಾಯ್ದು ಹೋಯಿತು. ಮಲ್ಲೇಶ 'ಇನ್ನು ಇಲ್ಲಿಂತು ಉಪಯೋಗವಿಲ್ಲ,' ಎಂದುಕೊಂಡ. ಹೊರಳಿನಡೆದ. ಗೊಮ್ಮೆ ಜೇಬಿನೊಳಗಿನ ರಸೀದಿಗಳನ್ನು ಮುಟ್ಟಿ ನೋಡಲಿಲ್ಲ. ಏನೋ ವಿಚಾರ ಬಂದು ಹುರುಪಿನಿಂದಲೆ ನಾಲ್ಕು ಹೆಜ್ಜೆಯಿಟ್ಟ. ಮತ್ತೆ ತಡೆದು, ರಸೀದಿಗಳನ್ನು ಹೊರಗೆ ತೆಗೆದು

* 'ಜಯಂತ' ಸಣ್ಣಕತೆಗಳ ಮೇಲಾಟದಲ್ಲಿ ಕನೆಯ ಸ್ಥಾನವನ್ನು ಪಡೆದ ಕತೆಯಿದು.

ನೋಡಿದ: "ಮುಲಗೌಡಾ ಸಿದಗೌಡಾ ವಾಟೇಲ" ಎಂದು ಮೊದಲನೆಯದರ ಮೇಲೆ ಹೆಸರು ಬರೆದಿತ್ತು. ಅದನ್ನು ನೋಡಿ ತಿರುವಿದ. "ಸತ್ಯಪ್ಪ ಶಿವಪ್ಪ ಕಾಗವಾಡೇ, ಉಗಾರ," ಎಂಬ ಇನ್ನೊಂದು ಹೆಸರನ್ನೂ ಮನದಲ್ಲಿಯೆ ಓದಿಕೊಂಡ. ಮುಖ ಇನ್ನಿಷ್ಟು ಪರವಾಯಿತು "ಈ ಹೆಸರಿನ ವ್ಯಕ್ತಿಯನ್ನು ಉಗಾರದಲ್ಲಿ ಪೋಲೀಸರು ವಿಚಾರಿಸ ಹೋದರೆ....."

"ಯಾರು, ಏತಕ್ಕೆ ವಿಚಾರಿಸಹೋದಾರು? ದಿನಾಲು ಮಾಲು ತರಿಸುವವರ ಮನೆ-ಮನೆಗೆಲ್ಲ ಕೇಳುತ್ತ ಹೋದರೆ, ಬ್ರಿಟಿಷ್ ರಾಜ್ಯ ಸಾಗಲಿಕ್ಕಿಲ್ಲ. ಕಳ್ಳಸಂತೆ ಹೀಗೇ ನಡೆಯುವುದೇ. ಯಾರ ಬುದ್ಧಿ-ಕುಶಲತೆ ಹೆಚ್ಚಾಗಿರುವುದೋ ಅವರು ಹೆಚ್ಚು ದುಡ್ಡು ಗಳಿಸುವರಾಯಿತು. ಧೈರ್ಯಬೇಕು, ಮುಂದೆಹೊಕ್ಕು ಕೆಲಸಮಾಡಬೇಕು, ಹೊಸ ಹೊಸ ಯುಕ್ತಿ ಹೂಡಬೇಕು, ಕೊಡಬೇಕು ಪಡೆಯಬೇಕು! ಮನೆಹಿಡಿದು ಕುಳಿದರೆ ಏನು ಸಂಪಾದಿಸಲಾದೀತು? ಲಂಜಪ್ರಪಂಚದಲ್ಲಿ, ಬಾಳಾಸಾಹೇಬನು ಚಟ್ಟೀನನ ಕೈ ಬಿಚ್ಚಿಗೆ ಮಾಡುವುದೇ ತಡ; ಐನೂರು ಚೀಲ ಅಕ್ಕಿಯನ್ನು ಒಮ್ಮಲು ಕಲೆಕ್ಟರ್ ಒಮ್ಮೆಲೇ ಅಪ್ಪಣೆ ಕೊಟ್ಟುಬಿಟ್ಟ. ಅವನದೊಂದು ಯುಕ್ತಿಯಾದರೆ ನಮ್ಮದೊಂದು ಯುಕ್ತಿ. ಬಾಳಾಸಾಹೇಬನಿಗೇನೋ ಟೀಕಾದಷ್ಟು ದುಡ್ಡಿದೆ, ಹೊರಗೆ ನಾಲ್ಕು ಊರು ಕಿರಿಗತಾನೆ; ಹತ್ತು ಊರ ನೀರು ಕುಡೀತಾನೆ; ಹನ್ನೆರಡುಮಂದಿ ಆಫೀಸರ ಗುರುತು ಆ ; ಬೇಕಾದ್ದು ಮಾಡ್ತಾನೆ. ಇತ್ತಲಿನ ಸೃಷ್ಟಿ ಅತ್ತ ಎತ್ತಿ ಇಡತಾನೆ ನಾವು ಇನ್ನೊಬ್ಬರ ಆರಳಿಯ ಗಂಟಿನ ಮೇಲೆ ಲಾಗಯೂಡೆಯುವ ಜನ. ಊರಲ್ಲಿ ಕುಳಿತು ಮುಲಗೌಡ ದುಡ್ಡು ಕೊಡತಾನೆ; ಈ ಮಲ್ಲೇಶ ಓಡಾಡಿ ವ್ಯಾಪಾರಮಾಡತಾನೆ. ಒಬ್ಬ ಸ್ಟೇಶನಮಾಸ್ತರು ನಾಲ್ಕುದುಡ್ಡು ಪೆಚ್ಚು ಕೇಳಿದರೆ ಕೊಡಲಿಕ್ಕೆ ಸ್ವತಂತ್ರವಿಲ್ಲ. ವಾಗೀನ ವೇಳೆಗೆ ಸಿಗುವಂತಿಲ್ಲ. ಮಾಲು ಒಕ್ಕೊಂಡು ಬೀಳಬೇಕು ಇಲ್ಲೇ. ಪೋಲೀಸರು ಗಂಟುಬಿದ್ದರೆ ಕೈಯಲ್ಲಿ ಏನೆಂದರೆ ಹತ್ತು ರೂಪಾಯಿಗಳನ್ನು ಖರ್ಚುಮಾಡುವ ಛಛಕ ಇಲ್ಲ. ಸರೆಮನೆ ಕಂಡರೆ ನಾನೇ ಕಾಣಬೇಕು. ಕುಳಿಂ, ಹೈಗ್ರೆ ಹುಣ್ಣಿ ಹತ್ತಬೇನೇ ಮುಕ್ಕಾಲು ಪಾಲು ಲಾಭಮೂಡಿಯುವಂಥ ಮಟ-ಗೌಡ. ಹಗಲಿರುಳು ದುಡಿಯಬೇಕು ನಾನು; ಇಷ್ಟಿಗೆ ನಾಲು ಕೇಳಿದರೆ ಸಿಗುವಂತಿಲ್ಲ. ಇಂಥಲ್ಲಿ ಎರಡನೇ ಮಾತೇನು? ಅವನ ಛಾಂಡವಲು ಉಪಯೋಗಿಸಿಕೊಂಡು ಇಸ್ಟು ದೂರ ವ್ಯವಹಾರ ಸಾಗಿಸಬೇಕಾಯಿತು! ಜಗತ್ತಿನಲ್ಲಿ ಇಲ್ಲದ ಸತ್ಯಪ್ಪನನ್ನು ಉಗಾರದಲ್ಲಿ ಇರುವನೆಂದು ಕಲ್ಪಿಸಿ, ಮಾಲು ಹೇರಿಸಿದೆ. ಅರ್ಧ ಮಾಲಿಕನ ಹೆಸರಾಗಾದರೆ, ಇನ್ನರ್ಧ ಈ ಕಲ್ಪಿತ ಮಾಲಿಕನಿಗೆ. ಆದರೆ ಇದೇ ಗಾಡಿಗೆ ಹೋಗಿ, ಉಗಾರ ಸ್ಟೇಷನಿನ ಮೇಲೆ ಮಾಲು ಇಳಿಸಿಕೊಳ್ಳಲು ಸಿದ್ಧವಾಗಿ ನಿಲ್ಲಬೇಕಲ್ಲ! ಆ ಸ್ಟೇಶನ್ ಮಾಸ್ತರು ಇನ್ನೆಷ್ಟು ದುಡ್ಡು ಸುಲಿಯುವನೋ!.....'

"ಘಣ್ ಘಣ್ ಘಣ್ ...." ಮೂರನೆಯ ಗಂಟೆಯೂ ಆಯಿತು, ಗಾಡಿಯೂ ಕೂಗಿತು. ಕೊನೆಗೆ ಮಲ್ಲೇಶ ಅವಸರದಿಂದ ಪ್ಲಾಟ್‌ಫಾರ್ಮಿನ ಟಿಕೀಟೊಂದನ್ನು ತಕ್ಕೊಂಡು, ಓಡಿ ಹೋಗಿ ಗಾಡಿಹತ್ತಿದ.

೨

ಮುಲಗೌಡನು ನೋಟುಗಳನ್ನು ಎಣಿಸಿ ಪೆಟ್ಟಿಗೆಯ ಮೇಲೆ ಇಟ್ಟು, ಒಂದು ಕ್ಷಣ ವಂಗುಬಡೆದು ದಿಂಬಿಗೆ ಒರಗಿ ಕುಳಿತುಕೊಂಡನು. ಹದಿನಾಲ್ಕುನೂರು ರೂಪಾಯಿಗಳು! ಒಂದಲ್ಲ, ಎರಡಲ್ಲ, ಏಳುನೂರು ರೂಪಾಯಿಗಳು ಹೆಚ್ಚು ಬಂದಿವೆ! ಇದೀಗ ಲೆಕ್ಕದ ಪಟ್ಟಿ ಪಾಸೂ ಹಣಗಳನ್ನು ತಂದುಕೊಟ್ಟು ಇನ್ನೂ ಎದುರಿಗೇ ನಿಂತಿರುವ ಕಾರಕೂನನ ಮುಖದ ಕಡೆಗೊಮ್ಮೆ ನೋಡಿದ. ತಲೆಯ ಮೇಲಿನ ಜರದ ರುಮಾಲು ಎತ್ತಿ ಜೋಳು-ತಲೆಯ ಮೇಲೆ ಕೈಯಾಡಿಸಿದ. ಅದರೊಡನೆಯೆ "ಯಾರಿಗೇಕೆ ಹೇಳಲಿಕ್ಕೆ ಹೋಗಬೇಕು? ಮನೆಗೆ ಲಕ್ಷ್ಮಿ ನಡೆದುಬಂದಿದ್ದಾಳೆ; ಇಟ್ಟುಕೊಂಡುಬಿಟ್ಟರಾಯಿತು!" ಎಂಬ ವಿಚಾರವೊಂದು ಅವನ ತಲೆಯಲ್ಲಿ ಮೂಡಿತು. ಬಿಳಿಮೀಸೆ ಹಂಗಾಡುವು. ಕೂಡಲೆ ದೂಂದಲ್ಲಿ ಗಾದೆಯ ಮೇಲೆ ಎಲೆಯಡಿಕೆ ಹಾಕಿಕೊಳ್ಳುತ್ತ ಕುಳಿತ ಕುಲಕರ್ಣಿ ಗುಂಡೋಪಂತರ ಕಡೆಗೆ ದೃಷ್ಟಿ ಹರಿಸಿದ.

ಗೌಡನ ಚಟುವಟಿಕೆಯ ಕಡೆಗೇನೇ ಲಕ್ಷ್ಯವಿಟ್ಟು ಕುಳಿತ ಪಂತರು "ಏನು ಹಣ ಸರಿಯಾಗಿಲ್ಲವೊ?" ಎಂದು ಕೇಳಿದರು, ಅಡಕೊತ್ತಿನಿಂದ ಒಣ ಸುಣ್ಣದ ಡಬ್ಬಿಯನ್ನು ಕೆದರುತ್ತ.

ಪಂತರ ಮಾತು ಗೌಡನ ಮರ್ಮಕ್ಕೆ ತಾಕಿತು. "ಇಲ್ಲಾ.... ಅದೆ...." ಎಂದು ಗೊಂದಲದಲ್ಲಿ ಬಿದ್ದು ನುಡಿದ.

ಹಾಗೆಯೇ ಮತ್ತೊಮ್ಮೆ ಕಾರಕೂನನ ಮುಖವನ್ನು ನಿರೀಕ್ಷಿಸಿದ. ಅಲ್ಲೇನೂ ವಿಶೇಷ ಕಾಣಲಿಲ್ಲ ಮೆಲ್ಲನೆ ನೋಟುಗಳನ್ನು ಪೆಟ್ಟಿಗೆಯ ಒಳಗಿಟ್ಟು ಲೆಕ್ಕದ ಕಾಗದಕ್ಕೆ ಕೈಯಿಕ್ಕಿದ.

ಗೌಡನ ಎದೆ ಧಸ್ ಎಂದಿತು. ಲೆಕ್ಕದ ಪಟ್ಟಿಗಳು ಎರಡಿದ್ದುವು. ಒಂದೊಂದರಲ್ಲಿ ಏಳು ಏಳು ನೂರು ರೂಪಾಯಿಗಳ ಲೆಕ್ಕವಿದ್ದಿತು. ಮೊದಲನೆಯ ಕಾಗದವೇನೋ ತನ್ನ ಹೆಸರಿಗೆ ಇದ್ದಿತು. ಇನ್ನೊಂದು ಕಾಗದದ ಮೇಲೆ "ಸತ್ಯಪ್ಪ ಶಿವಪ್ಪ ಕಾಗವಾಡೆ, ಉಗಾರ" ಎಂದು ಬರೆದಿದ್ದಿತು. ನೋಡಿದ, ತಿರುತಿರುಗಿ ನೋಡಿದ. 'ಯಾರ ಹಣ, ಇಲ್ಲೇಕೆ ಕಳಿಸಿರುವರು?' ಎಂದುಕೊಂಡ. "ಇದಾರ ಪಟ್ಟಿಯೊ?" ಎಂದು ಕಾರಕೂನನ ಕಡೆಗೆ ಹೊರಳಿ ಕೇಳಿದ. ಈಗ ಗೌಡನ ದನಿ ಮಾತ್ರ ಜಗ್ಗಿದ್ದಿತು.

"ಏನೋ, ಎರಡೂ ಪಟ್ಟಿಗಳನ್ನೂ ಹಣವನ್ನೂ ಮುಟ್ಟಿಸಲಿಕ್ಕೆ ಹೇಳಿ ಸೇಡಜಿಯವರು ಕಳಿಸಿದರು."

"ಹೀಗೊ....? ನಾನು ಹದಿನಾಲ್ಕುನೂರು ರೂಪಾಯಿಗಳು ಹೇಗೆ ಬಂದುವೆಂದು ಲೆಕ್ಕದೊಳಗೆ ಬಿದ್ದಿದ್ದೇನೆ." ಬಿಡದ ತೊಡಕು ಬಿಟ್ಟಂತೆ ಎನಿಸಿ "ಹಾ! ಹಾ! ಹಾ!" ಎಂದು ನಕ್ಕ ಗೌಡ.

"ಮೊನ್ನೆ ರಾತ್ರಿ ಕಳಿಸಿದ ಗಾಡಿಗಳ ಲೆಕ್ಕ ಹೌದು?" ಎಂದು ಕೇಳುತ್ತ ಗುಂಡೋಪಂತ ಎದ್ದುಬಂದು ಪೆಟ್ಟಿಗೆಯ ಮೇಲೆ ಕುಳಿತ.

ಗೌಡ ಲೆಕ್ಕದ ಕಾಗದಗಳೆರಡನ್ನೂ ಪಂತನ ಕೈಗೆ ಕೊಡುತ್ತ, "ಇದೇನೇನ ಚಮತ್ಕಾರ ಆಗೇದ ನೋಡರಿ!" ಎಂದ. ಈ ಸಲ ತಿರೆದ ಮನಸ್ಸಿನ ಮಾತಾಗಿತ್ತು.

ಗುಂಡೋಪಂತ ಎರಡೂ ಕಾಗದಗಳನ್ನು ತುಸು ಹೊತ್ತು ನಿರೀಕ್ಷಿಸಿದ; ಆ ಮೇಲೆ ನುಡಿದ: "ಇಬ್ಬರ ಹೆಸರಿನ ಮುಂದೂ 'ಉಗಾರ ಖುರ್ದ್' ಎಂದೇ ಬರೆದಿದ್ದಾರಲ್ಲ?"

"ಹಾಗೆ ಬರೆಯದೆ ಗತೀನs ಇಲ್ಲ ಬಿಡರಿ; ಯಾವ ಊರಿನಿಂದ ನೀವು ಮಾಲುಕಳಿಸಿದರೂ ಲೆಕ್ಕಪತ್ರಕ್ಕ ಸಾಂಗಲೀ ಸಂಸ್ಥಾನದ ಹಳ್ಳಿಯನ್ನೇ ಬರೆಯತಕ್ಕದ್ದು. ಸೇಡಜಿಗಳು ಕಾಗದ-ಪತ್ರದಲ್ಲಿ ಸಿಕ್ಕುವ್ದಿಲ್ಲ ಬಿಡರಿ. ನಾವು ಕಾಗವಾಡದಿಂದ ಮಾಲುಕಳಿಸಿದ್ದರೂ ಉಗಾರದ ಗಾಡಿಗಳೆಂದೇ ಅಲ್ಲಿ ದಾಖಲ್ಲು!"

"ಅಂದ ಮೇಲೆ ಸರಳ ಇದೆಯಲ್ಲ....! ಒಂದೇ ಪಟ್ಟಿ ದೊಡ್ಡದು ಆಗ್ತsದಂತ ಎರಡು ಮಾಡಿದಾನು ಅಯ್ತು. ಆದರಲ್ಲಿ ಲೆಕ್ಕಕ್ಕ ಹಾಂಗೇನಾದರೂ ಬೇಕಾಗಿರಬೇಕು!"

"ಪಟ್ಟಿ ಎರಡೇಕೆ ಹತ್ತು ಮಾಡಲಿ, ಅದರ ಪ್ರಶ್ನೆಯಿಲ್ಲೀಗ. ನಾವು ಇಷ್ಟು ಮಾಲನ್ನೇ ಕಳಿಸಿಲ್ಲ. ಹಣ ಎಲ್ಲಿಂದ ಬಂತು?—ಎಂಬ ವಿಚಾರದಲ್ಲಿ ಬಿದ್ದಿದ್ದೇನೆ" ಸ್ವಚ್ಛವಾಗಿ ಹೇಳಿಬಿಟ್ಟ ಗೌಡ.

"ಹೀಗೋ? ಮಾಲು ಕಳಿಸಿದ್ದಕ್ಕ ಎರಡುಪಟ್ಟು ದುಡ್ಡು ಬಂತೊ? ಈಗೇನು.. ಕಳ್ಳಸಂತೆಯಿಂದ ಹತ್ತತ್ತ ಪಟ್ಟು ಹಣ ಸಿಗ್ತsದ ಏಳರಿ...." ಎಂದು ಹರುಷದಿಂದ ಗೌಡನ ಕೈಕುಲುಕಿ ಹೋದ ಪಂತ.

"ಹಾಂಗಲ್ಲ; ದರಾ ಏರಿಲ್ಲ ಪಂತರ! ನಾವು ಎರಡು ಗಾಡಿ ಮಾಲ ಕಳಿಸಿದ್ದೆವಲ್ಲೋ? ಇವು ಎರಡೆರಡು ಗಾಡಿಗಳ ಎರಡು ಪಟ್ಟಿ ಅವೆ.."

"ಇನ್ನೇನು, ನಿಮ್ಮ ಮಲ್ಲೇಶ ಬಂದ ಮೇಲೇ ಎಲ್ಲಾನೂ ಗೊತ್ತಾಗೋದು" ಎಂದು ಪಂತರು ಸ್ವಲ್ಪ ತಗ್ಗಿದ ಸ್ವರದಲ್ಲಿ ನುಡಿದರು.

೩

ಒಂದೆರಡು ದಿನಗಳಲ್ಲಿ ಮಲ್ಲೇಶ ಊರಿಗೆ ಬಂದ. ಆ ಇತ್ತ ವ್ಯವಹಾರ ಮಾಡಿಕೊಂಡು ಸಾಂಗಲಿಗೂ ಹೋಗಿ ಬಂದಿದ್ದ. ಸೇಡಜಿಯವರು ಎಲ್ಲ ಹಣವನ್ನು ಗೌಡರ ಕೈ ಕಳಿಸಿಕೊಟ್ಟಿದ್ದನ್ನು ಕೇಳಿಯಂತೂ ತಣ್ಣಗಾಗಿಯೆ ಬಿಟ್ಟಿ ಅನೇಕ ಚಿಂತೆಗಳಿಂದ ಮುಖ ಮ್ಲಾನವಾಗಿದ್ದಿತು. ನಿದ್ರೆಯಿ ದುದಕ್ಕೆ ಕಣ್ಣು ಕೆಂಪಾಗಿದ್ದುವು. 'ಪಾಲುಗಾರಿಕೆಯ ವ್ಯವಹ ದಲ್ಲಿ ತಾನು ಮಾಡಿದ ಕಳ್ಳ ವ್ಯಾಪಾರ ಹೊರಬಿದ್ದಿತಲ್ಲ' ಎ ಹೆದರಿಕೆ, ಅವಮಾನ. ಜೊತೆಗೆ 'ಗೌಡನ ಕಪಿಮುಷ್ಟಿಯಿ

ಆ ತನ್ನ ಏಳುನೂರು ರೂಪಾಯಿ ಉಜ್ಜುವ ಬಗೆ ಹೇಗೆ?' ಎಂಬ ಚಿಂತೆ. "ಪ್ರತಿಯೊಂದು ವ್ಯವಹಾರದಲ್ಲಿಯೂ ಗುಂಡೋಪಂತರ ಅಂಗವಿರುತ್ತಿದ್ದಿ ತಾದರೂ ಈಗ ಅವರು ತನಗೆ ನೇರವಾಗಲಿಕ್ಕಿಲ್ಲ; ಗೌಡನಿಗೆ ಮಾಲು ಕಳಿಸಕ್ಕೆ ನೇರವಾಗಿ ಇಲ್ಲಿಯವರೆಗೆ ಸುಖವುಂಡವರವರು. ಕುಲಕರ್ಣಿಯು ಕೈ ಬಿಸಿಯಾಗದೆ ಆ ಊರಲ್ಲಿಯ ಒಂದು ಗಾಡಿಯೂ ಸಂಸ್ಥಾನಹದ್ದಿಗೆ ಹೋಗುವಂತಿಲ್ಲ. ಯಾವ ವ್ಯವಹಾರ ಮಾಡಿದರೂ ಅವರನ್ನು ಕಟ್ಟಿಕೊಂಡೇ ಮಾಡಲಿಕ್ಕೆ ಬೇಕು. ಇಂಥದರಲ್ಲಿ ನಾನು ಸಂಸ್ಥಾನದ ಹಳ್ಳಿಯ ಗಾಡಿಗಳೆಂದು ಎರಡು ಗಾಡಿ ಮಾಲು ಉಗಾರದಿಂದ ಕಳಿಸಿಕೊಟ್ಟೆ, ಗುಂಡೋಪಂತರು ನೋಡಿ ನುಮ್ಮನೆ ಬಿಡಬೇಕಾಯಿತು. ಈಗ –ಈ ಗುಟ್ಟು ರಟ್ಟಾದಾಗ–ಅವರ ನೇರವನ್ನಾದರೂ ನಾನು ಕೇಳುವುದು ಹೇಗೆ? ನನ್ನ ಮಾಲು ಅನಿರೀಕ್ಷಿತವಾಗಿ ಒಂದುದಿನ ಮುಂಚಿತ ಹೋದುದರಿಂದ, ಬಾಳಾಸಾಹೇಬನ ವ್ಯಾಪಾರ ಕುಗ್ಗಿತು. ಆವನು ಗೌಡನಿಗೆ ಏನೇನು ಕಲಿಸಿಟ್ಟಿರುವನೋ?" ಈ ಎಲ್ಲ ವಿಚಾರಗಳಿಂದ ಮನಸ್ಸಿಲ್ಲದೆ ಗೌಡನ ಅಂಗಡಿಯ ಕಟ್ಟೆಗಳನ್ನು ಏರುತ್ತಲಿದ್ದ, ಮಲ್ಲೇಶ.

"ಏನಪ್ಪಾ, ಅಂಗಡಿಗೆ ಬರೋದು ಇದೇ ಹೊತ್ತೇನು? ನಿನ್ನೆ ರಾತ್ರಿ ಬಂದವ..ಇನ್ನೂ ನಿನ್ನ ಪತ್ತೆ ಇಲ್ಲ....ನಿನ್ನ ಕೇಳಿ ಲೆಕ್ಕ ಬರೆಯ ಬೇಕಂತ ಇಲ್ಲಿಯ ತನಕ ಹಾದಿ ನೋಡಿ ನೋಡಿ, ಕಾರಕೂನ ಹೋಗಿ ಬಿಟ್ಟ!" ಎಂದು ಗೌಡ ಸ್ವಾಗತಿಸಿದ. ಮಲ್ಲೇಶ ನೌಕರನಲ್ಲದಿದ್ದರೂ ಗೌಡನ ಭಾಂಡವಲದಲ್ಲಿಯೆ ವ್ಯಾಪಾರ ನಾಡುವ ಪಾಲುಗಾರನಲ್ಲವೆ?

"ಎರಡು ದಿನ ನಿಪ್ರೆ ಇರಲಿಲ್ಲ; ಬೇಸರು ಬಂತು, ಮಲಗಿಬಿಟ್ಟಿ. ಈಗ ಎದ್ದವನೇ ಇತ್ತ ಬಂದೆ. ಲೆಕ್ಕ ಹೇಳೋದೇನು ನಮ್ಮ ಜನ್ಮಕ್ಕ ಹತ್ತಿದ್ದೇ ಅದ ಅಲ್ಲ...." ಸ್ವಲ್ಪ ಮುಖ ತಗ್ಗಿಸಿ "ಆ ಏಳು ನೂರು ರೂಪಾಯಿ ಲೆಕ್ಕ ಬರಿಯೋದು ಉಳಿದಿರಬೇಕಷ್ಟೇ?" ಎಂದ. ತುನು ತಡೆದು ಮನದಲ್ಲಿಯೆ ಯೋಚಿಸಿದ: "ಗೌಡನಿಗಂತೂ ಎಲ್ಲ ಸಂಗತಿ ಗೊತ್ತಾಗಿ ಹೋಗಿರಬೇಕು. ಇನ್ನು ಆ ವ್ಯವಹಾರಕ್ಕೆ ಬೀರೆ ಬಣ್ಣ ಕೊಟ್ಟೇ ಗೌಡನಿಗೆ ತೋರಿಸಿ ಬಿಟ್ಟರಾಯಿತು!" ಎಂದು ನಿಶ್ಚಯಿಸಿ ನುಡಿದ:

"ಅಂದು ಬೆಳಗಾಂವಿಯಿಂದ ಬರುವಾಗ ನನಗೊಂದು ಸಂಶಯ ಬಂತು ಗೌಡರ! ಬಾಳಾಸಾಹೇಬನೂ ಮಾಲು ಖರೀದಿ ಮಾಡಿದ್ದ. ಆತ ನಮ್ಮ ಗಾಡಿಗಳಿಗೇನಾದರೂ ಅಡ್ಡಿ ಮಾಡಿಸಬಹುದೆಂದು ಯೋಚಿಸಿ, ಎರಡುಗಾಡಿ ಮಾಲು ಉಗಾರಕ್ಕೇನೇ ಕಳಿಸಿಬಿಟ್ಟಿದ್ದೆ. ಅದೂ ಸಂಸ್ಥಾನ ಹಳ್ಳಿ, ಸರಳ ಹೋಗಿ ಬಿಚ್ಚುವದರಂತ...ಕೆಲಸ ಆಗುವವರೆಗೆ ನಿಮಗೆ ಏಕೆ ತಿಳಿಸುವದು ಅಂತ ಸುಮ್ಮನಿದ್ದೆ.."ಗೆಲುವಿನ ನಗೆಯನ್ನು ಬೀರುವ ಶೈಲಿಯಲ್ಲಿತ್ತು, ಮಲ್ಲೇಶನ ಮುಖ.

ಏಳುನೂರು ರೂಪಾಯಿ ಬಂದ ಬಗೆಯೇನೋ ಗೌಡನಿಗೆ ತಿಳಿದಿತ್ತಾಯಿತಾದರೂ ಮಲ್ಲೇಶನ ಈ ವ್ಯವಹಾರದ ಅರ್ಥ ಹೊಳೆಯಲಿಲ್ಲ. ಬಾಳಾಸಾಹೇಬನಿಗೇನೋ ಹವಾಲದಾರನ ಗುರುತಿದೆ; ಬೇಕಾದಾಗ ಬೇಕಾದಂತೆ ಮಾಲನ್ನು ಕಳಿಸುವನಾತ. ಆದರೆ ನನ್ನು ಗಾಡಿಗಳನ್ನು ಹಿಡಿಸುವ ಗೋಜಿಗೆ ಅವನೆಂದೂ ಹೋದವನಲ್ಲ. ಆದರೆ ನಿನ್ನಿನಿಂದಲೂ ಅವನೂ ಮುಖ ಬಿಗಿದುಕೊಂಡೇ ಇರುವನು. ನಿನ್ನೆ ಮನೆಗೆ ಊಟಕ್ಕೆ ಹೋಗುವಾಗ, ಹಾದಿಯಲ್ಲಿ ಭೆಟ್ಟಿಯಾದರೂ ನೆಟ್ಟಗೆ ಮಾತಾಡಲಿಲ್ಲ. ಇದಕ್ಕೆ ಕಾರಣವೇನಿರಬೇಕೆಂಬುದು ಗೌಡನ ವ್ಯವಹಾರದ ಬುದ್ಧಿಗೆ ಕೂಡಲೆ ಗೊತ್ತಾಗಲಿಲ್ಲ. ಒಂದೆರಡು ದಿನ ಇದೇ ಯೋಜನೆಯಲ್ಲಿದ್ದ; ಯಾವುದೂ ಬಗೆಹರಿಯಲಿಲ್ಲ. ಹೊಸ ವ್ಯಾಪಾರಕ್ಕೆ ಕೈಯಿಕ್ಕುವುದಕ್ಕೂ ಹೆದರಿಕೆ: "ಮಲ್ಲೇಶ ಹೇಳಿದಂತೆ ಬಾಳಾಸಾಹೇಬನ ವಿಚಾರವಿದ್ದರೆ ಹೇಗೆ? ಗಾಡಿಗಳು ಸಿಕ್ಕುಬಿದ್ದರೆ ಶಿಕ್ಷೆಗೆ ಗುರಿಯಾಗಬೇಕಾದೀತು. ಅವನಿಗೆ ವಿರೋಧ ಕಟ್ಟಿಕೊಂಡು ವ್ಯವಹಾರ ನಾಗಿಸುವುದು ಸಾಧ್ಯವಿಲ್ಲ. ಆತ ದೊಡ್ಡ ವ್ಯಾಪಾರಿ. ಮೇಲಾಗಿ ಎಲ್ಲ ಅಧಿಕಾರಿಗಳ ಗುರುತು ಇದ್ದವ. ಇಂಗ್ಲೀಷ್ ಬಲ್ಲವ. ಅದಕ್ಕಾಗಿ ಅವನ ಕೂಡ ಮಾತಾಡಿ ಮನಸ್ಸನ್ನು ರಫ್ ಆಗಿಳ ಮಾಡಿಕೊಳ್ಳದೆ ಗತ್ಯಂತರವಿಲ್ಲ. ಈ ಮಲ್ಲೇಶನಂಥವರು—ನಡುವೆ ಓಡಾಡುವವರು— ಏನಾದರೂ ಹೇಳಿ, ತಮ್ಮ ಬೇಳೆ ಬೇಯಿಸಿಕೊಂಡು ನಾಲ್ಕುದಿನ ಕಳೆಯುವುದಾದರೂ, ಕೊನೆಯವರೆಗೆ ನಮ್ಮ ನಮ್ಮಲ್ಲಿ ಕೆಡುಕುತನ ಬಂದೀತು..?' ಎಂಬ ಯೋಜನೆಯಲ್ಲಿಯೇ ಇದ್ದ, ಗೌಡ.

ಮೂರು ನಾಲ್ಕು ದಿನಗಳ ಮೇಲೆ ಒಂದು ದಿನ, ಮಧ್ಯಾನ್ಹದ ಚಹಕ್ಕೆಂದು ಬಾಳಾಸಾಹೇಬ ಮನೆಗೆ ನಡೆದಿದ್ದ. ಗೌಡ ತನ್ನ ಅಂಗಡಿಯಲ್ಲಿ ಗುಂಡೋಪಂತನೊಡನೆ ಏನೋ ಮಾತನಾಡುತ್ತ ಕುಳಿತಿದ್ದ. ಬಾಳಾಸಾಹೇಬನನ್ನು ದೂರದಲ್ಲಿ ಕಂಡೊಡನೆಯೆ ಮನದಲ್ಲಿ: 'ಈಗಲೇ—ಪಂತರ ಎದುರಿಗೇನೇ—ಕರೆದು ಮನಸ್ಸಿನಲ್ಲಿ ಏನಿದ್ದದ್ದನ್ನು ಕೇಳಿಬಿಡಬೇಕು; ನುಮ್ಮನೆ ಮನಸ್ಸಿನಲ್ಲಿ ಕುಡುವು ಹಾಕಿಕೊಳ್ಳುತ್ತ ಕೂಡುವುದು ಒಳ್ಳೆದುದಲ್ಲ' ಎಂದು ಯೋಚಿಸಿ ಬಾಳಾಸಾಹೇಬನನ್ನು ಕರೆದ, ಗೌಡ.

"ವೇಳೆ ಆಯ್ತು, ಹೋಗಬೇಕು." ಎಂದು ಬಿಗುಹಿನಿಂದಲೇ ನುಡಿದು, ಬಾಳಾಸಾಹೇಬ ಗೌಡನ ಅಂಗಡಿಯ ಎದುರಿನಿಂದ ಮುಂದೆ ಸಾಗತೊಡಗಿದ.

"ಇನ್ನೊಂದು ಸ್ವಲ್ಪ ತಡೆದು ಹೋದರೆ ಚಹಾ ಸಿಗುವುದಿಲ್ಲೇನು ಬಾ.." ಎಂದು, ಒಳಮಗ್ಗಲಿಗೆ ಕುಳಿತ ಗುಂಡೋಪಂತನೂ ಪರಿಹಾಸದ ಸ್ವರದಲ್ಲಿ ಕರೆದ.

"ಚಹಕ್ಕೇನು ಕಡಿಮೆ, ಇಲ್ಲೇ ತರಸೋಣು ಬಾ!" ಎಂದು ಆಗ್ರಹದ ಸ್ವರದಲ್ಲಿ ಗೌಡ ಇನ್ನೊಮ್ಮೆ ಸ್ವಾಗತಿಸಿದ.

ಇಷ್ಟು ಕರೆಯುತ್ತಿರಲಿಕ್ಕೆ ಹಾಗೆಯೇ ಹೋಗುವದು ಒಳ್ಳೆಯದಲ್ಲವೆಂದು ಬಾಳಾಸಾಹೇಬ ಹೊರಳಿದ ಅವನು ಬರುವ ಲಕ್ಷಣ ಕಂಡೊಡನೆಯೆ ಗೌಡನು "ಹೋಗೋ, ಭೀಮನ ಹೊಟೇಲಿನೊಳಗ ನಾಲ್ಕು ಕಪ್ಪು ಚಹಾ ತರಲಿಕ್ಕೆ ಹೇಳಿಬಾ!

ನೀನೇ ಮುಂದ ನಿಂತು ಡೆಲೋ ಮಾಡಿನು."ಎಂದು ಕಾರಕೂನೆ ನನ್ನು ಕಳುಬಿಸಿದ. ಒಂದೇ ಕಲ್ಲಿನಿಂದ ಎರಡು ಕಾಯಿಗಳನ್ನು ಕೆಡಹುವ ರೀತಿಯದಾಗಿತ್ತೀ ಮಾತು.

"ಚಪಾ ಯಾತಕ್ಕ, ಈಗ ಮನೆಯೊಳಗ ಹೋಗಿ ತಕ್ಕೋ-ಬ್ಯೋನೇ ಇರತಕದ ಅಲ್ಲ.."

"ಇರಲಿ, ಇಲ್ಲೊವೆನ್ನಿ!" ತುಸು ಕಡಿದು "ಬಡವರ ಚಹಾ" ಎಂದು ಕೆಣಕುವ ಸ್ವರದಲ್ಲಿ ನುಡಿದ.

"ಬಡವರಂತೇ ಮೊನ್ನೆ ಹಿಂದೆ ನುಗಿಸಿ, ಸಾಂಗ್ಲೀ ಪೇಟೆಯೊ-ಳಗ ಮುಂದೆ ಬಂದಿರಲ್ಲ! ಗೌಡ-ಕುಲಕರ್ಣೀರು ಕೂಡಿದಿರೆಂದರೆ ನಿನ್ನು ಮಾಡೀರಿ ಅಂಬುವದೇ ತಿಳಿಯುವದಿಲ್ಲ!" ಎಂದು ಇಬ್ಬರನ್ನೂ ಕೂಡಿಸಿಯೇ ಕುಟ್ಟಿದ ಜಾಳಾಸಾಹೇಬ.

"ಬಟ್ಟೀಬಾಜಿಗನ ಒಂದು ಕಾಲು ಮುರಿದರ ಏನಾಯ್ತು ಬಿಡು!"

"ಆಯ್ತು, ಹೀಗೆ ಒಂದೊಂದೇ ಕಾಲು ಮುರಿಯುತ್ತ ಹೋಗಲಿ. ಅಂದರ ತೀರಿತು."

"ಅವಕ್ಕೇ ಹವಾಲದಾರನ ಕಡೆಯಿಂದ ಗಾಡಿ ಹಿಡಿಯಿಸುವ ಯೋಜನೆ ನನೆಯಿಸಿದ್ದಿಯೇನೋ!?" ವ್ಯಂಗ್ಯಹಾಸ್ಯದಲ್ಲಿ ಗುಂಡೋಪಂತ ನುಡಿದೇಬಿಟ್ಟ.

ಒಮ್ಮೆಲೇ ಜಾಳಾಸಾಹೇಬ ಕೆರಳಿ ನುಡಿದ: "ಕುಲಕರ್ಣೀರ' ನಾನೇನು ನಾಲ್ಕಾರು ತಿಂಗಳೊಳಗ ನಿಮ್ಮಹಾಗೆ ಒಬ್ಬಿಬ್ಬರೊಳಗ ದಾಲುಗಾರಿಕೆಯಿಟ್ಟು ವ್ಯವಹಾರ ಮಾಡಿ, ರಾತ್ರಿಗಾಡಿ ಕಳಿಸ-ಲಿಕ್ಕೆ ಜಳಬರನ್ನ ಹವಾಲದಾರನ ತನಕ ಕಳಿಸಿ, ಮುಂದ ಬಂದ ವ್ಯಾಪಾರಿ ಅಲ್ಲ. ಅಜ್ಜ-ಮುತ್ತಜ್ಜರಿಂದ ವ್ಯವಹಾರ ಮಾಡತಕ ಬಂದ ಮನೆತನ ನನ್ನದು. ಅಷ್ಟು ಹುಲ್ಲೂ ಇಲ್ಲ ನಾ-ನಂನ್ನಾನವ ಹಡ್ಡಿಗೆ ಮಾಲು ತಂದು ಇಳಿಸಿ,ರಾತ್ರಿ ಗಾಡಿ ಹೇರಿಸಿ ಪಟಾಕಿ ಕಳಿಸಿ, ಇನ್ನೊಬ್ಬರ ಕಾಲು ತುಳಿಯುಲಿಕ್ಕೆ ನಾನೂ ಏನ ಗೌಡ?"

ನಡುವೆಯೇ ಮಾತನ್ನು ಕಡಿದು ಮುಲಗೌಡ ವಿನಯದಿಂದ ನುಡಿದ:

"ಇವೆಲ್ಲ ಮಲ್ಲೇಶನ ಕಾರಭಾರ; ನನಗೊಂದೂ ಗೊತ್ತಿಲ್ಲೋ ಜಾಳಾಸಾಹೇಬ!" ಮಾತಿನಲ್ಲಿ ವಿಧೇಯತನವ ತೀವ್ರಿಯಿತ್ತು.

'ವಿಜಪ್ಪಾ, ನನ್ನ ಮುಂದ ಹೇಳಬೇಡ ಇಂಥಾ ಸೂತ ನೀ! ದಾರುನ ತಕ್ಕೈಯ ಪಕ್ಕದ ಲೆಕ್ಕ ಪಾಕತೇನ ನಾನೂ!"

"ಜಾಳಾಸಾಹೇಬ, ಗೌಡನ ಮಾತು ಸುಳ್ಳಲ್ಲ. ಮೊನ್ನೆ ಮಲ್ಲಪ್ಪ ಬಂದು ಹೋದಿದ ಮೇಲೆ, ನಮ್ಮಿಬ್ಬರಿಗೂ ಗೊತ್ತಾಯ್ತು. ಉಗಾರದಿಂದ ಆತ ಗಾಡಿ ಹೇರಿಸಿದ್ದ ಆಸ್ಕೋದು." ಗುಂಡೋ-ಪಂತ ನಡುವೆ ಬಂದು ಬಿಸ್ಪಂದಿಸಲು ಯತ್ನಿಸಿದ.

"ಇದ್ದೀತು, ನಿಮಗ ಹೊತ್ತಿಲ್ಲದಾ ಸ್ವತಂತ್ರ ಅವನತ ಏನಾದರೂ ಮಾಡಿಕೋಬೇಕು ಅಂತ ಮಾಡಿರಬೇಕು!"

ಈ ಮಾತಿನಿಂದ ಗೌಡನ ತಲೆಯಲ್ಲಿಯು ವಿಚಾರಚಕ್ರ ಬೇರೆ ದಿಶೆಯಲ್ಲಿಯೆ ತಿರುಗಲಾರಂಭಿಸಿತು.

೪

ದಿನಗಳುರುಳಿದುವು. ಗೌಡ-ಮಲ್ಲೇಶರಲ್ಲಿ ಮನಸ್ಸು ಕದಡಿದ್ದು ತಿಳಿಯಾಗಲಿಲ್ಲ. ದಿನದಿನಕ್ಕೆ ಅದು ಮತ್ತಿಷ್ಟು ಮಲಿನವಾಗುತ್ತ ಹೋಯಿತು. ಗೌಡ ಕೈ ಬಿಚ್ಚಿ ಮಲ್ಲೇಶನ ಕೈಯಲ್ಲಿ ಹಣ ಕೊಡದಾದ. ಇವನೂ ಬಾಯಿಬಿಚ್ಚಿ ಕೇಳದಾದ. ವ್ಯವಹಾರ ಅಷ್ಟಕ್ಕಷ್ಟೇ ಸಾಗಿತು. ಇಬ್ಬರೂ ತಮ್ಮ ತಮ್ಮ ರೀತಿಯಲ್ಲಿ ಬಿಗುಹಿನಿಂದ ಉಳಿದರು. ಮುಂದೆ ಮುಂದೆ ಗೌಡನನ್ನು ಕಂಡರೆ ಮಲ್ಲೇಶನಿಗೆ ಆಗದು; ಮಲ್ಲೇಶನನ್ನು ಕಂಡರೆ ಗೌಡ ಅತ್ತ ಪೋರೆ ತಿರುಹುವನು. ಆ ಏಳುನೂರು ರೂಪಾಯಿಗಳನ್ನು ಮಲ್ಲೇಶನಿಗೆ ಕೊಡಲಿಕ್ಕೆ ಗೌಡನ ಮನಸ್ಸಿಲ್ಲ; ಮಲ್ಲೇಶನ ಮನಸ್ಸು ಬಿಡಲು ಒಪ್ಪದು. ಬಾಯಿಬಿಚ್ಚಿ ಕೇಳಲು ಸಂಕೋಚ. ಪಾಲುಗಾರಿಕೆಯಲ್ಲಿ ಮಾಡಿದ ವ್ಯೋಪಕ್ಕೆ ತಾನೇ ನಾಚಿಕೊಂ-ಡಿದ್ದ. ಒಂದಿಬ್ಬರ "ಮುಂದೆ, ನಮ್ಮ ಲೆಕ್ಕ ಗೌಡರ ಲೆಕ್ಕ ಒಮ್ಮೆ ಸ್ಪಷ್ಟ ಆಗಲಿ; ಅವರಿಗೆ ಕೊಡುವುದಾದರೆ ನಾನು ಕೊಡತೇನೆ. ನನಗೆ ಏನಾದರೂ ಬರುವುದಿದ್ದಲ್ಲಿ ಅವರು ಕೊಡಲಿ! ಏನಾದರೂ ಕೊಡು-ಕೊಳ್ಳುವುದರಲ್ಲಿ ಸರಳ ಇರಬೇಕು!" ಎಂದು ಗೌಡನಿಗೆ ಹೇಳಲಿಕ್ಕೆ ಸೂಚಿಸಿದ. ಅದಕ್ಕೆ ಗೌಡ 'ಕಳ್ಳನ ಕೂಡಿ..ಕಳ-ಕೊಂಡೆ. ಊರೊಳಗ ನಾಲ್ಕುಜನ ದೊಡ್ಡವರ ಕೂಡ ಕೆಡುಕು ಆಗುವಪ್ಪಸಂಗ ಬಂತು! ಲೆಕ್ಕ ಏನ ಮಾಡತಾನು..?'ಎಂದು ಹಾರಿಸಿಯೇ ಬಿಟ್ಟ.

'ಆಯಿತು, ದುಡಿಯುವವನಿಗೆ ಎಲ್ಲೇನು? ಲಕ್ಷ್ಮಿ ತಾನೇ ನಡಕೊಂಡು ಮನಿಗೆ ಬರತಾಳ,' ಎಂದು ಹೇಳಿ ಸ್ವತಂತ್ರವಾಗಿ ವ್ಯವಹಾರ ಮಾಡಲು ಆರಂಭಿಸಿದ ಮಲ್ಲೇಶ. ಈಗಾಗಲೇ ಹಲವು ಜನರ ಗುರುತಾದುದರಿಂದ, ಅಲ್ಲಿ ಇಲ್ಲಿ ಕೆಲವು ಮಾಲು ಉದ್ಧರಿಸಿಕ್ಕುತ್ತಿದ್ದಿತು. ಊರಲ್ಲಿ ಕೆಲವು ಜನರ ಹತ್ತಿರ ತುಸು ಹಣ ಕೈಗಡ ತಂದು ಹೇಗೋ ವ್ಯವಹಾರ ಆರಂಭಿಸಿದ, ಬೆಳಸಿದ.

ಗೌಡನ ಕೈಯಲ್ಲಿ ಕೆಲಸ ಮಾಡಲಿಕ್ಕೆ ಮನುಷ್ಯನಿಲ್ಲದುದರಿಂದ ಅವನ ವ್ಯವಹಾರ ಕುಂಠಿತವಾಯಿತು. ಅಂಗಡಿಯಲ್ಲಿ ಕುಳಿತು ಸಾಗುವಷ್ಟು ವ್ಯಾಪಾರ ನಡೆಯಿಸುತ್ತಿದ್ದ. ಈಗ ಕಳ್ಳಸಂತೆಯ ದರ ಏರಿದಾಗ, ಕುಳಿತಲ್ಲಿಯೆ ವ್ಯಾಪಾರ ಲಾಭದರದು. ಸುಮ್ಮ ನಿರಲಿಕ್ಕಾಗದೆ ಏನೋ ಸಾಗಿಸಿದ್ದ. ಸಾಗಲಾರದಕ್ಕೆ ಸವತಿಯ ಹಾಡು ಹೇಳಿದಂತೆ. ಇದನ್ನು ಮಲ್ಲೇಶ ಅರಿತಿದ್ದ. ಎಂತಲೇ ತನ್ನ ವ್ಯಾಪಾರ ಚಿಕ್ಕದಾದರೂ ದೊಡ್ಡದೆಂದು ಜನರ ಮುಂದೆ ಜಂಭ ಕೊಚ್ಚಿಕೊಳ್ಳುವ; ಇಂದು ಅಲ್ಲಿ ಇಷ್ಟು ಚೀಲ ಖರೀದಿ ಮಾಡಿದೆ.—ಇಲ್ಲಿಂದ ಇಷ್ಟು ಚೀಲ ಕಳಿಸಿದೆ.—ನಾಳೆ ಹತ್ತು ಗಾಡಿ ಬಾಡಿಗೆಗೆ ಬೇಕಾಗಿವೆ—ಎಂದು ಇದ್ದದ್ದು ಇಲ್ಲದ್ದನ್ನು ಕೂಡಿಯೇ ಹೇಳಿ ಬಿಡುತ್ತಿದ್ದ. ಈ ಮಾತುಗಳಿಲ್ಲ ಗೌಡನ

ಕಿವಿಗೆ ಬೀಳುತ್ತಿದ್ದುವು. ಮನಸ್ಸು ಮಾತ್ಸರ್ಯದ ಕಣಿಗೆ ಒಲಿಯುತ್ತಿದ್ದಿತು.

ಕ್ರಮೇಣ ಗುಂಡೋಪಂತನ ಕೈಗೂ ಬಿಸಿ ತಗುಲದಿರಲಿಲ್ಲ. ಬಾಳಾಸಾಹೇಬನಂತೂ ಅವನನ್ನು ಸಮೀಪದಲ್ಲಿ ನಿಲ್ಲಗೊಡುತ್ತಿರಲಿಲ್ಲ. ಹತ್ತಿರದ ಗೌಡನ ಸ್ಥಿತಿ ಹೀಗಾಯಿತು. ಗಾಡಿಕಳಿಸಲಿಕ್ಕೆ ಮಲ್ಲೇಶನಿಗೆ ನೆರವು ಕೊಡುವಂತಿಲ್ಲ ಕಿರುಕುಳ ವ್ಯಕ್ತಿಯೊಡನೆ ಸಂಬಂಧ ಬೆಳಸುವುದು ತನ್ನ ಘನತೆಗೆ ಕುಂದು. ದುಡ್ಡಿಗಾಗಿ ಸಲ್ಲದ ಜನರ ಸಂಬಧ ಬೆಳಸಲು ಅವನ ಮನಸ್ಸು ಒಪ್ಪದು. 'ದುಷ್ಟೇನು ಸೂಳೆಯೂ ಘಳಿಸುವಳುಗೌಡರೆ;' ಎಂದೂ ಗೌಡನ ಮುಂದೆ ಹೇಳಿಯೂ ಬಿಟ್ಟಿದ್ದ.

ಮಲ್ಲೇಶನಿಗೆ ಅತ್ತ ಹವಾಲದಾರನೊಡನೆಯೂ ನೇರವಾದ ಸಂಬಂಧವಿಲ್ಲ; ಇತ್ತ ಪಂತನ ಆಭಾರವೂ ಇಲ್ಲ. ಒಬ್ಬ ಹಳಬನನ್ನು ಕಟ್ಟಿಕೊಂಡು ಲಾಭನನ್ನು ತುಸು ಪಾಲುಕೊಟ್ಟು, ವೇಳೆ ತಪ್ಪಿಸಿ ರಾತ್ರಿ ಸಂಸ್ಥಾನದ ಹದ್ದಿಗೆ ಮಾಲು ಕಳಿಸುತ್ತಲಿದ್ದ. ವ್ಯಾಪಾರ ಸಾಗುತ್ತಲಿತ್ತು.

'ಇಂದು ಪೇಟೆಗೆ ಮಾಲು ಇಲ್ಲ. ನನ್ನ ಮಾಲಿಗೇ ದರ ಹತ್ತುವುದು' ಎಂದು ಮನದಲ್ಲಿಯೇ ಮಂಡಿಗೆ ತಿನ್ನುತ್ತ ಬಾಳಾಸಾಹೇಬ ಸಾಂಗ್ಲಿ ಪೇಟೆಯಲ್ಲಿ ಬರುವಷ್ಟರಲ್ಲಿ ಎದುರಿಗೆ ಹರಕು ಕೋಟಿನ ಜೇಬಿನಲ್ಲಿ ಕೈಹಾಕಿಕೊಂಡು ಮಲ್ಲೇಶ ಇದ್ದೇ ತೀರುವ.

"ಯಾಕೋ ಮಲ್ಲಾ! ನಸುಕಿನಲ್ಲಿ ಬಂದಿದ್ದಿ?" ಎಂದು ಬಾಳಾಸಾಹೇಬ ಕೇಳುವುದೇ ತಡ ಮಲ್ಲೇಶ ಹೇಳುವನು: "ನಾವೇನು ನಿಮ್ಮ ಹಾಗೆ ಶ್ರೀಮಂತರಕ, ಮಾಲಿನ ಗಾಡಿ ಯಾರ ಕೂಡಾರಕ ಕಳಿಸಿ, ಈಗ ಉಗಿಬಂಡಿಯೊಳಗಿಂದ ಬರಲಿಕ್ಕೆ? ರಾತ್ರೆಲ್ಲಾ ಮಾಲಿನ ಗಾಡಿಮ್ಯಾಲೇ ಬಿದ್ದು ಬರಜೇಕಲ್ಲ..."

ಹವಾಲದಾರ ಮನೆಯವನಂತಿರುವ ಬಾಳಾಸಾಹೇಬನ ಮಾಲಿನ ಗಾಡಿಗಳು ಇನ್ನೂ ಪಾದಿಯಲ್ಲಿರುವಾಗ. ಮಲ್ಲೇಶನ ಗಾಡಿಗಳು ಪೇಟೆಯಲ್ಲಿ ಬಂದು ನಿಂತಿರುತ್ತಿದ್ದುವು. ಹವಾಲದಾರನ ಕಣ್ಣು ತಪ್ಪಿಸಿ ಒಮ್ಮೆ ಮುಂಚಾನೆ ಗಾಡಿ ಹೊಡೆದು ಕೊಂಡು ಬಂದರೆ, ಮತ್ತೊಮ್ಮೆ ಸೂರ್ಯಾಸ್ತವಾಪೊಜನೆಯೇ ಬಂದುಬಿಡುತ್ತಿದ್ದರು, ಮಲ್ಲೇಶನ ಬಾಡಿಗೆಯವರು. ಇದನ್ನು ನೋಡಿ, ಬಾಳಾಸಾಹೇಬನಿಗೆ ಹೇಗೆ ಸಹಿಸುವುದಾದೀತು? ಎಂಥ ಸಹೃದಯಿಯಾದ ವ್ಯವಹಾರಿಯಿದ್ದರೂ ಕಳ್ಳಸಂತೆಯಲ್ಲಿ ಸಹನ ಶೀಲತೆ ಉಳಿಯದು.

೫

ಸಂಸ್ಥಾನದ ಸೀಮೆಗೆ ಹೋಗುವ ಮಾಲಿನ ಗಾಡಿಗಳು ಚೌಕೀದಾರನ ಕಣ್ಣು ತಪ್ಪಿಸಿಯೇ ಹೋಗಬೇಕಾಗುತ್ತಿದ್ದುವು. ರಾಜಮಾರ್ಗಕ್ಕೆ ಹೊಂದಿ ಚೌಕಿಯಿತ್ತು. ಕಳ್ಳಸಂತೆಯ ಗಾಡಿಗಳೆಲ್ಲ ಕರಿ ಅಡವಿಯಲ್ಲಿ ಹಾಯ್ದು ಹೋಗುವವು. ಒಂದೆರಡುಸಲ ಆ ಪಾದಿಗೂ ಹವಾಲದಾರನು ಪೋಲೀಸರನ್ನು ಕಳುಹಿಸಿ ಹತ್ತೆಂಟು ರೂಪಾಯಿಗಳನ್ನು ಸಂಪಾದಿಸಿದ್ದ. ಪೋಲೀಸರು ಭೆಟ್ಟಿಯಾದರೆ ಕೊಡಲಿಕ್ಕೆಂದು ಮಾಲಕರು ಕೊಟ್ಟ ದುಡ್ಡನ್ನು ತಾವೇ ಎತ್ತಿಹಾಕಬೇಕೆಂದು ಯೋಚಿಸುತ್ತಿರುವ ಬಾಡಿಗೆಯವರಿಗೆ, ದಿನವೂ ಪೋಲೀಸರು ಬರುವರೆಂದು ಹೇಳಿ ಮಾಲಕರಿಂದ ದುಡ್ಡು ಎತ್ತುವ ಚಟವೂ ಬಿದ್ದುಹೋಗಿತು. ವ್ಯಾಪಾರಿಗಳಿಗೂ ತುಂಬ ಸಂವಾದನೆಯಿರುವುದು. ಒಂದು ಗಾಡಿಗೆ ನೂರಿನ್ನೂರು ರೂಪಾಯಿಗಳ ಲಾಭಸಿಕ್ಕುವಾಗ, ಆ ಹತ್ತೆಂಟು ರೂಪಾಯಿಗಳ ಚಿಕ್ಕಪಾಲೊಂದು ಬಾಡಿಗೆಯವರಿಗೇ ಹೋಯಿತೆಂದು ತಿಳಿದು ತಿಳಿದೂ ಕೊಡುತ್ತಿದ್ದರು. ಮಾಲು ಸುರಕ್ಷಿತ ತಲುಪಿದರೆ ಅವರಿಗೆ ಸಾಕಾಗಿತ್ತು. ಜೊತೆಗೆ ಅವರಲ್ಲಿ ಇನ್ನೂ ಒಂದು ವ್ಯವಹಾರ ಬುದ್ಧಿ ಜಾಗ್ರತವಾಗಿರುತ್ತಿತ್ತು: ಪ್ರಸಂಗಬಂದಲ್ಲಿ,ಒಂದುವೇಳೆ ಕೇಸಾದರೆ, ಗಾಡಿಯವರನ್ನೇ ಸಿಕ್ಕಿಸಿಬಿಟ್ಟು, ತಾವು ಜೇರೆ ಉಳಿಯಲೂ ಬರುವುದು— ಎಂಬುದೇ ಅವರ ಆ ಎಚ್ಚತ್ತ ಬುದ್ಧಿಯ ಯುಕ್ತಿ.

ಇಂತಹ ಸ್ಥಿತಿಯಲ್ಲಿ. ಯಾರೋ ಪೋಲೀಸ ಠಾಣೆಗೆ ವರದಿ ಕೊಟ್ಟರೇನೊ; ಅಲ್ಲಿಂದ ಹವಾಲದಾರನಿಗೆ ಒದಿಕೆ ಬರಲಿಕ್ಕೆ ಆರಂಭವಾಯಿತು: 'ನೀನು ಈ ಚೌಕಿಗೆ ಬಂದಾಗಿನಿಂದ ಒಂದೂ ಕೇಸು ಮೇಲೆ ಬರುವದಿಲ್ಲ. ಲಂಚತಿಂದು ಗಾಡಿಬಿಡುತ್ತಿರುವೆ' ಎಂದು. ಇನ್ನು ಹವಾಲದಾರ ಸುಮ್ಮನೆ ಕೂಡಲು ಬಾರದಾಯಿತು ಬಾಳಾಸಾಹೇಬ ಹೋದಾಗಲೆಲ್ಲ ಹೇಳುವ:

"ಠಾಣೆಗೆ ಯಾರೋ ತಿಳಿಸಿದ್ದಾರೆ. ನಮ್ಮಸುತ್ತ ಬರಲಿಕ್ಕೆ ಹತ್ತೇದ."

"ಕೂತ ಆ ಗೌಡನ ಕೆಲಸೇನು? ತನಗೊಂದು ವ್ಯಾಪಾರ ಇಲ್ಲ, ಹೀಂಗಽ ಇಲ್ಲದ್ದೊಂದು ಉಸಾಬರಿ ಮಾಡ್ಲ ಕೂಡತಾನಽ ಆಯ್ತು!"

"ಅವನ ವ್ಯಾಪಾರ ಹಾಳಾಗಿಹೋಗವೊಲ್ಲಯಾಕ? ನಮ್ಮ ಸುತ್ತ ಬರಲಿಕ್ಕೆಹತ್ತೇದ. ಏನ ಮಾಡೋದು ನೋಡು!"

"ಹಿಡದ, ಐಟ್ಟಿಹಾಕಲ್ಲ ಎರಡು ಗಾಡಿಗಳನ್ನ!" ಸ್ವಲ್ಪ ತಡೆದು "ಮೂರುಸಂಜೆ ಅನ್ನುವದಿಲ್ಲ. ಬೆಳಗಾಮುಂಚಾನೆ ಅನ್ನುವದಿಲ್ಲ. ಬೇಕಾದಾಗ ವೇಳೆತಪ್ಪಿಸಿ ಹೊಡಕೊಂಡು ಹೋಗತಿರತಾರ." ಎಂದು ಹುರಿದುಂಬಿಸಿದ, ಬಾಳಾಸಾಹೇಬ.

"ಇರುಳು ಹನ್ನೆರಡು ಗಂಟೆಗೆಂದರೆ ಕಳ್ಳತನದಿಂದ ಗಾಡಿಗಳು ಹೋಗುವ ಸಮಯ. ಆದೇ ಕಾಲಕ್ಕೆ ಹಿಡಿದರೆ ಗಾಡಿಗಳು ಸಿಕ್ಕುವವು." ಎಂದು ಹವಾಲದಾರನ ವಿಚಾರ. ಅದರಂತೆ ನಾಲ್ಕಾರು ಸಲ ಪೋಲೀಸರನ್ನು ಕಳುಹಿಸಿದ. ನಾಲ್ಕೆಂಟು ದಿನಗಳು ಕಳೆದುವು. ಆದರೂ ಒಂದೂ ಗಾಡಿಯೂ ಸಿಕ್ಕಲಿಲ್ಲ. ಪೋಲೀಸರೇ ಲಂಚತಿಂದು ಬಿಡುತ್ತಿರುವರೋ, ಗಾಡಿಗಳೇ ಬರುತ್ತಿಲ್ಲವೋ ಅವನಿಗೆ ತಿಳಿಯದಾಯಿತು. ಇಷ್ಟುದಿನ ಲಂಚದಲ್ಲಿ ಪೋಲೀಸರೊಡನೆ ಪಾಲುಗಾರಿಕೆಯಲ್ಲಿ ವ್ಯವಹಾರ ಮಾಡಿದ ಆತನಿಗೆ ಏನೂ ತಿಳಿಯದ ಹಾಗಾಯಿತು. 'ಇಲ್ಲಿಯವರೆಗೆ ಸರಿಯಾಗಿ ವಾಲು ಕೊಡುತ್ತ ಬಂದವರು ಈಗ ಕೊಡದೆ

ಇರುವರೆ? ಆದರೆ ಇತ್ತೀಚೆಗೆ ಒಂದು ಕಾನನ್ನೂ ಕೂಡ ಕೊಟ್ಟಿಲ್ಲವಲ್ಲ? ನಿಜವಾದ ಸಂಗತಿಯೇನು?' ಎಂದು ವಿಚಾರದಲ್ಲಿ ಬಿದ್ದ. ಮೇಲಿನ ಆಫೀಸಿನಿಂದ ವಾರಕ್ಕೆ ನಿಂಗುಗಳಂತೂ ಮೇಲಿಂದ ಮೇಲೆ ಬರಹತ್ತಿದುವು, ಅದರಿಂದ ಸ್ವಾಭಾವಿಕವಾಗಿ ಅವನ ನಡತೆ ಪೋಲೀಸರ ಕೂಡ ಸಡುಕಿನದಾಗತೊಡಗಿತು.

ಇದನ್ನರಿತ ಪೋಲೀಸರು ಕೊನೆಗೆ ಒಂದು ದಿನ, ತಮ್ಮ ಹೇಡಿ ತನವನ್ನು ಹವಾಲದಾರನ ಮುಂದೆ ಹೇಳಿಕೊಳ್ಳಬೇಕಾಯಿತು: ಇತ್ತಿತ್ತಲಾಗಿ ಕೆಲವು ಗಾಡಿಯವರು, ಹಲವು ಜನ ಗುಂಡರ ನೆರವಿನಿಂದ ಗಾಡಿಗಳನ್ನು ಹೊಡೆದುಕೊಂಡು ಹೋಗುತ್ತಿದ್ದರು. ಹತ್ತಿಂಟು ಹಳ್ಳಿಯ ಜನರು ಕಲ್ಲು-ಬಡಿಗೆಗಳನ್ನು ತಕ್ಕೊಂಡು ಗಾಡಿಗಳನ್ನು ರಕ್ಷಿಸಲು ಹೊರಟರೆ, ಅಲ್ಲಿ ಒಬ್ಬಿಬ್ಬ ಪೋಲೀಸರ ಆಟ ಸಾಗದು: ಪೆಟ್ಟು ತಿಂದು ಬರಬೇಕಾಗುತ್ತಿದ್ದಿತು. ಗಾಡಿಗಳು ಹೋಗುವುದನ್ನು ಕಣ್ಣಾರೆ ಕಂಡೂ ಸುಮ್ಮನಿರಬೇಕಾಗುವುದು. ಪೋಲೀಸರಿಗೆ ಸಲ್ಲಿಸಬೇಕಾಗುತ್ತಿದ್ದ ಹಣವನ್ನು ಆ ಹಳ್ಳಿಗರು ಪಂಚಿಕೊಳ್ಳುತ್ತಿದ್ದರು. ರಾತ್ರಿ ಒಂದೆರಡು ತಾಸು ಗಾಡಿಗಳ ಕೂಡ ನಡೆದು ಬಂದರೆ ತೀರಿತು; ಒಂದೆರಡು ರೂಪಾಯಿ ಕೂಲಿ ಬೀಳುವುದು. ಹಲವು ಜನ ತರುಣರು ಈ ಉದ್ಯೋಗದಲ್ಲಿ ಸಹಜವಾಗಿ ಪಾಲುಗಾರರಾಗುತ್ತಿದ್ದರು.

ಹವಾಲದಾರನಿಗೆ ಎಲ್ಲ ಸಂಗತಿ ಗೊತ್ತಾಯಿತು. ಲಂಚ ತಿಂದು ತಿಂದು ಕೊಬ್ಬಿದ ಅವನಿಗೆ, ಯಾವುದಕ್ಕೂ ವ್ಯಾಪಾರಿಗಳ ಮೇಲೆ ಒಮ್ಮೆಲೇ ಧುಮುಕಲು ಬರುವಂತಿರಲಿಲ್ಲ. ಪೇಲಿನ ಅಧಿಕಾರಿಗಳ ವಕ್ರದೃಷ್ಟಿ ದಿನದಿನಕ್ಕೆ ಹೆಚ್ಚಾಗುತ್ತ ಹೊರಟಿತು. ಒಂದು ದಿನ ಇದೇ ಯೋಜನೆಯಲ್ಲಿ ಕುಳಿತಾಗ, ಒಬ್ಬ ಯುವಕ ಸಾಯಕಲ್ಲು ಹತ್ತಿ ಚಾಕಿಗೆ ಬಂದ. ಇದೀಗ ಸೂರ್ಯ ಮುಳುಗಿದ್ದ, ಸುತ್ತಲೂ ಕತ್ತಲು ಆವರಿಸುತ್ತಿದ್ದಿತು. ಬಂದವನು ಅವಸರದಿಂದಲೇ ಹೇಳಿದ:

"ಕೂಡಲೆ ಹೊರಡಿರಿ, ಸಂಸ್ಥಾನದ ಸೀಮೆಗೆ ಜೋಳದ ನಾಲ್ಕು ಗಾಡಿಗಳು ಹೊರಟಿವೆ. ಹೊರಡಿಯು ಕೆಳವಣ್ಣಿಗೆ ಹೋಗಿ ನಿಂತರೆ ಸಿಕ್ಕುವುವು!"

ಹವಾಲದಾರ ತುಸು ಹೊತ್ತು ಸ್ತಬ್ಧನಾಗಿ ಕುಳಿತ; ಆ ಮೇಲೆ ಕೇಳಿದ:

"ಗಾಡಿಯ ಸಂಗಡ ಎಷ್ಟು ಜನರಿವ್ವಾರೆ?"

"ಹುಚ್ಚು ಗಿಚ್ಚೇನು ನಿಮಗೆ....?"

ಹವಾಲದಾರ ಮರುಮಾತಾಡದೆ ಹೊರಟ. ಸಂಗಡ ಒಂದಿಬ್ಬರು ಪೋಲೀಸರನ್ನೂ ಕರೆದುಕೊಂಡಿದ್ದ. ಕೈಯಲ್ಲಿ ಬಂದೂಕೂ ಸಿದ್ಧವಾಗಿತ್ತು. "ಬೇಕಾದಷ್ಟು ಜನವಿರಲಿ, ಇಂದು ಗಾಡಿಗಳನ್ನು ಹಿಡಿದು ಬಿಟ್ಟೆ ಹಾಕಿಯೇ ಬಿಡುವುದು.." ಎಂದು ಜೊತೆಯ ಪೋಲೀಸರಿಗೆ ಹೇಳದೆಯೂ ಇರಲಿಲ್ಲ.

೬

ಇಂದು ಹೊತ್ತೇರಿದಂತೆ ಊರಲ್ಲೆಲ್ಲ ಸುದ್ದಿ ಪಸರಿಸತೊಡಗಿತು. ಗಾಡಿಯವರು ಮನೆಗೆ ಬಂದ ಮೇಲೆಯೇ ನಾಲ್ಕೂ ಓಣಿಗಳಿಗೆ ವರ್ತಮಾನ ಹಬ್ಬಿದುದು. ಇನ್ನೂ ನಸುಕಿರುವಾಗ ಗೌಡ ತಂಬಿಗೆ ತಕ್ಕೊಂಡು ಅಗಸಿಯಲ್ಲಿ ನಿಂತಿದ್ದ. ಇಷ್ಟು ಬೆಳಗಿನಲ್ಲಿ ಎದ್ದು ಎಂದೂ ಕೈಕಾಲಿಗೆ ಹೋಗದ ಆತ, ಈ ಹೊತ್ತು ಗಾಡಿಯವರನ್ನು ಎದುರುಗೊಳ್ಳುವ ಉದ್ದೇಶದಿಂದ ಎರಡುತಾಸು ರಾತ್ರಿಯಿರುವಾಗಲೇ ಹಾಸಿಗೆಯನ್ನು ತೊರೆದಿದ್ದ. ಇಂದು ಅವನಿಗೆ ಇರುಳೆಲ್ಲ ನಿದ್ರೆಯಿರಲಿಲ್ಲ. ತಾನು ಮಾಡಿದ ಕಾರ್ಯದ ಫಲಶ್ರುತಿಯೇನೆಂಬುದನ್ನು ಆರಿತುಕೊಳ್ಳಬೇಕಾಗಿತ್ತವನಿಗೆ. ಆದಕ್ಕೆ ಯೋಗ್ಯ ದಿಸೆ ತೋರಿಸುವುದೂ ಒಂದು ಉಳಿದಿತ್ತು. ಅದಕ್ಕಂತೇ ಗಾಡಿಯವರಿಗೆ ಮುಲ್ಲೇಶ ಭೆಟ್ಟಿಯಾಗಿ ಏನಾದರೂ ಕಿವಿ ತುಂಬುವ ಮೊದಲು, ತನ್ನ ಮುಂಶ್ರ ಉಸುರಬೇಕೆಂದು ಆತನ ಹಂಬಲ. ಗಾಡಿಯವರು ಎತ್ತುಗಳನ್ನಷ್ಟೇ ಹೊಡೆದುಕೊಂಡು ಜೋಲು ಮೋರೆ ಹಾಕಿ ಎದುರಿಗೆ ಬರಲು:—

"ಭೀಮಾ, ಹಾಕಿಟ್ಟಪ್ಪ ನಿಮ್ಮನ್ನ.... ಗರೀಬರು ನೀವು.... ಇನ್ನೊಬ್ಬರ ಮನಿಗೆ ಹೋಗಿ ಗೊತ್ತಿಲ್ಲ ನಿಮಗ.. ನಾಲ್ಕು ರೂಪಾಯಿ ಬಾಡಿಗಿ ಆಶಾಪಚ್ಚಿ!.... ರಾತ್ರಿ ನನಗ ಗೊತ್ತಾದಾಗಿನಿಂದೂ ಜೀವ ಮರಗಲಿಕ್ಕೆ ಹತ್ತೇದ...." ಹೀಗೆ ನುಡಿದ ಗೌಡ. ಧ್ವನಿಯಲ್ಲಿ ತುಂಬ ತೋರಿಕೆಯ ಸಹಾನುಭೂತಿಯಿತ್ತು.

"ಏನು ಮಾಡೋದು ಗೌಡರ, ಅರಿಸಿಕೊಂಡು ತಿನ್ನುವ.. ಕೋಳಿಯ ಕಾಲುಮುರದಂಗಆಯ್ತು. ಬೆಳತನಕ ಜಾಕಿಯೊಳಗ ಬಿದ್ದೆವು....ಗಾಡಿ ಬಿಟ್ಟುಹೋದ ಮುಲ್ಲೇಶನ ಸುದ್ದಿಯಿಲ್ಲ. ಏನಾದರೂ ಮಾಡಿ, ಹವಾಲದಾರನ ಕಿಸೆ ತಣ್ಣಗಮಾಡಿ, ಬೆಳಕು ಹರಿಯೋದರೊಳಗ ಮುಗಿಸಿಕೊಂಡುಬಿಡಬೇಕಾಗಿತ್ತು...."

"ಅದೇನು ಮುಗೀತದನೋ....? ಹಾಂಗ ಮಾಡಿ ಯೇನ ಹವಾಲದಾರ ಕೆಲಸಾ ಕಳಕೊಂಡು ಮನಿಗೆ ಹೋಗತಾನೇನು? ಅವನಂತೂ ಮೋರೆ ತಪ್ಪಿಸಿದ. ನಿಮ್ಮನ್ನಷ್ಟ ಹಿಡಿದ ಒಯ್ಯತಾರ ಆಯ್ತು ಇನ್ನ!"

ಗೌಡನ ಮಾತು ಮುಗಿಯುವಷ್ಟರಲ್ಲಿ ನಾಲ್ವರೂ ಗೌಡನ ಪಾದಗಳ ಮೇಲೆ ಉರುಳಾಡುತ್ತಿದ್ದರು. ಬಿಕ್ಕಿ ಬಿಕ್ಕಿ ಅಳತೊಡಗಿದರು. ಹಳ್ಳಿಯ ಒಕ್ಕಲಿಗರವರು. ಇಂಥ ಪ್ರಸಂಗದಲ್ಲಿ ಸಿಕ್ಕು ಗೊತ್ತಿಲ್ಲದವರು. ಗೌಡ ತನ್ನ ಮಾತು ನಾಟಿತೆಂದು ತಿಳಿದ.

"ಅಬರೂದಿಂದ ಬಾಳುವ ಜನ ನೀವು.. ಆ ಆಬರೂಗೇಡಿ.. ಸೂ..ಮಗನ ಬೆನ್ನಹತ್ತಿ ಹೀಂಗ ಮಾಡಿಕೊಂಡಿರಿ.." ಎಂದು ಅಂಜಿದವರ ಮೇಲೆ ಕಪ್ಪೆ ಎಸೆದವರಂತೆ ನುಡಿದ. ತುಸು ತಡೆದು "ನೀವೇನು ಮಾಡೋದು ಅದ. ಪಂಜನಾಮೆಯ ಕಾಲಕ್ಕ ಮುಲ್ಲೇಶನ ಮಾಲಂತ ಹೇಳಿ ಬಿಡರಿ ಅಂದರಾತು.." ನುಡಿದ!

"ಅಲ್ಲ ಗೌಡರ, ಅವನದು ಒಂದೇ ಗಾಡಿ ಮಾಲು ನಾ-ಹೇರಿದ್ದು. ಅದು ಇನ್ನೂ ಸಂಸ್ಥಾನದ ಸೀಮೆಗೂ ಹೋಗಿರಲಿಲ್ಲ; ನಮ್ಮ ಸೀಮೆಯೊಳಗೇ ಸಿಕ್ಕಿದ.... ಮೇಲಾಗಿ ನಮ್ಮ ತೋಟಕ್ಕ

ಜೋಳ ಒಯ್ಯತಿದ್ದೆನೆಂದು ಹವಾಲದಾರನಿಗೆ ನುಡಿದಿದ್ದೇನೆ ಬೇರೆ" ಮಲ್ಲೇಶನ ಗಾಡಿಯವ ಹೇಳಿದ.

"ನಿಂದೂ ಏನಾದರೂ ಪಾಲು ಇರಬೇಕು.. ಅದಕ್ಕೇ ಹೀಂಗ ಹೇಳೀದಿ ಮಗನೂ!" ಕೆರಳಿ ನುಡಿದ ಗೌಡ.

"ಎಂದೂ ಇಲ್ಲರಿ; ಇದೇ ಸಲ ಗಾಡೀ ತುಂಬ ಮಾಲ ಇಲ್ಲ ಅನ್ನೋಣ, ನನ್ನೂ ಎರಡು ಚೀಲ ಹಾಕೇನಿ! ಮಲ್ಲೇಶ ಮಾರಿಸಿ ಕೊಡತೇನಿ ಅಂದಿದ್ದ ಅಂತ.."

"ಅನ್ಯವ್ಯಾಪಾರ ಮಾಡ್ತೇನಿ, ಇಷ್ಟವ್ಯಾಪಾರ ಮಾಡ್ತೇನಿ ಅಂತಿದ್ದ; ಒಂದು ಗಾಡೀ ಮಾಲು ದೊರಿಯಲಿಲ್ಲ ಏನ ಅವನಿಗೆ, ನಿಮ್ಮ ಗೂಡ ಪಾಲುಗಾರಿಕೀ ಯಿಡಲಿಕ್ಕೆ?

"ಯಾರ ಕೊಡತಾರರೀ ಅವನಿಗೆ..? ನಮ್ಮ ನಮ್ಮ ಮಾಲು ನಾವೇ ಹೇರಿಕೊಂಡು ನಡದಿದೇವಿ. ಮಾರಿಸಿ ಕೊಟ್ಟರ ಅವನಿಗೇ ಏನಾದರೂ ಪಾಲು ಕೊಡುವವರು ನಾವು!" ಉಳಿದವರು ನುಡಿದರು.

"ಇರಲಿ ಹೋಗರಿ. ಎಲ್ಲಾ ಮಾಲೂ ಅವನದೇ ಅಂತ ಹೇಳಿ ಬಿಡರಿ" ಆಜ್ಞಾಪಿಸುವ ಸ್ವರದಲ್ಲಿ ಗೌಡನ ಮಾತಿತ್ತು.

"ನಮ್ಮ ಕಾಳು ಹೋಗತಾವಲ್ಲರೀ ಪಾಂಗಾದರ....?"

"ಕಾಳಿನ ಮಾರೀ ನೋಡತಾರ ಮಕ್ಕಳು! ನೀವು ಹೋಗತೀರಿ ಅದನ್ನ ಬಿಟ್ಟಿದೀರಿ.. ಇದರೊಳಗಿಂದ ಉಳದ ಬರ್ರಿ ಒಮ್ಮೆ ನೋಡೋಣು!" ಎಂದು ಹೇಳಿ ಗೌಡ ಅಷ್ಯತೆಯಿಂದ ಹೋಗಿ ಬಿಟ್ಟ.

ಗಾಡಿಯವರು ಮನೆಗೆ ಬಂದು ಎತ್ತು ಕಟ್ಟುವಷ್ಟರಲ್ಲಿ ಮಲ್ಲೇಶ ಬಂದು ಹೇಳತೊಡಗಿದ: "ಎಲ್ಲ ಮಾಲು ನಿಮ್ಮದೇ ಎಂದು ಹೇಳಿಬಿಡಿರಿ. ಬೇಕಾದಲ್ಲಿ ಹೋಗಲಿ, ನಾ ಉಳಿಸಿ ತರತೇನಿ. ನನ್ನನ್ನ ಹಿಡಿಸಬೇಕಂತ ಮುದ್ದಾಂ ಮಾಡಿದ್ದಾರೆ. ಮೂರೂ ಸಂಜೆ ನಾವಿಲ್ಲಿ ಗಾಡಿ ಹೂಡುವುದನ್ನನೋಡಿ. ಬೇಕಂತ ಸಾಯಕಲ್ಲು ಕೊಟ್ಟು ಹುಡುಗನನ್ನ ಕಳಿಸಿದಾರಂತ. ಹಳಬರ ಸಿದ್ದಪ್ಪ ಹೇಳಿದ ನನಗ ಈಗ. ಗುಂಡೋಪಂತನ ಆಂಗವೂ ಇದರಾಗ ಇದ್ದಾಂಗ ಅದ. ಅದಕ್ಕೇ ನಾಲ್ಕು ನೂರು ರೂಪಾಯಿಗೂ ಹವಾಲದಾರ ಒಪ್ಪಲಿಲ್ಲ!"

"ನಾಲ್ಕುನೂರು ರೂಪಾಯಿ ತಗೊಂಡ ಹೋಗಿದ್ದಿರಿ?" ಗಾಡಿಯವರು ಬೆರಗಿನಿಂದ ಕೇಳಿದರು.

"ಬೆಳತನಕ ಅದೇ ಯತ್ನದೊಳಗ ಇದ್ದೀನಿ. ಗಾಡಿಗೆ ನೂರು ನೂರು ರೂಪಾಯಿ ಅಂದರ ಬಿಟ್ಟಾನು ಅಂತ ಅನ್ನಿಸಿತ್ತು. ಕೇಸು ಆಗಿ ಕಚೇರಿಗೆ ಎಡತಾಕಿ ಖರ್ಚುಮಾಡಬೇಕು, ಅಷ್ಟರೊಳಗs ಈ ಜೋಳ ಹುಳಾಹತ್ತಿ ಕೆಟ್ಟಹೋಗ್ತಾದ. ಅದಕ್ಕಿಂತ ಇಲ್ಲೇ ಮುಗಿಸಿ ಕೊಳ್ಳೋದು ನೆಟ್ಟಗಂತ ಮಾಡಿದರ...."

"ಬಾಳಾಸಾಹೇಬನ್ನ ಕರಕೊಂಡು ಹೋಗಬೇಕಿಲ್ಲರೀ.."

"ದೊಡ್ಡ ಬಾಯಸ್ಪಾ ಅದು!"

"ಅದು ಮಾತ್ರ ನಿಜ! ನಾಲ್ಕೈದು ನೂರರೊಳಗ ಮುಗಿಸುವ ಮನುಷ್ಯ ಅಲ್ಲ ಅಂವ."

"ಆದರೂ ಅನಿರ್ವಾಹ ಪಕ್ಷಕ್ಕ ಒಯ್ಯಲಿಕ್ಕೇಬೇಕು." ಎಂದು ಚಿಂತೆಯಿಂದ ಮಲ್ಲೇಶ ನುಡಿದ.

ಆ ದಿನ ಮಧ್ಯಾನ್ಹದೊಳಗೆಂದರೆ ಹಲವು ವಿಧದ ಸುದ್ದಿಗಳು ಮಲ್ಲೇಶನ ಕಿವಿಯ ಮೇಲೆ ಬಿದ್ದುವು. ಅವುಗಳಲ್ಲಿ ಒಂದೆರಡಿವು:

'ಠಾಣೆಯಿಂದ ಪೋಲೀಸ ಪಡೆ ಬರುವುದು. ಮಲ್ಲೇಶನನ್ನು ಗಾಡಿಯವರನ್ನು ಕೂಡಿಯೇ ಹಿಡಿದೊಯ್ಯುವರು. ಕೈಯಲ್ಲಿ ಊರೊಳಗಿಂದ ಬೇಡಿ ಹಾಕಿಕೊಂಡೇ ಹೋಗುವರು.'

'ಏನಿಲ್ಲ ಅಂದರೂ ಹತ್ತ ಹತ್ತು ವರ್ಷ ಶಿಕ್ಷೆ ಆಗ್ತದ!..'

"ಪೋಲೀಸರಿಗೆ ಕಲ್ಲು-ಬಡಿಗಿ ತೋರಿಸಿ ಗಾಡಿ ಹೊಡೆದುಕೊಂಡು ಹೋಗತಿದ್ದರು. ಅನ್ನುವ ಬಿಟ್ಟೆ ಒಂದು ಆಗ್ತದ.

ಇವೆಲ್ಲ ಸುದ್ದಿಗಳಿಂದ ಮಲ್ಲೇಶ ತಣ್ಣಗಾದ. ವಿಚಾರಿಸಿದಷ್ಟು ಸುತ್ತಲಿನ ಪರಿಸ್ಥಿತಿ ಭೀಕರವಾಗಿ ತೋರತೊಡಗಿತು. ಸುತ್ತಲಿನ ಊರುಗಳಲ್ಲಿ ವ್ಯಾಪಾರಿಗಳಿಗೆ ಆದ ಶಿಕ್ಷೆಯ ಸಂಗತಿಗಳು ಒಂದೊಂದೇ ನೆನಪಾಗತೊಡಗಿದುವು. ಮೊನ್ನೆ ಒಂದು ದುಡ್ಡು ಹೆಚ್ಚು ತಕ್ಕೊಂಡು ಕಡ್ಡಿಯ ಪೆಟ್ಟಿಗೆ ಮಾರಿದ್ದಕ್ಕೆ ಒಬ್ಬ ವ್ಯಾಪಾರಿಗೆ ಏಸೂರು ರೂಪಾಯಿ ದಂಡ. ಎರಡು ತಿಂಗಳ ಶಿಕ್ಷೆಯಾದ

ವಿಷಯ ಸ್ಮೃತಿಪಥದಲ್ಲಿಳಿಯಿತು, ಗಾಬರಿಗೊಳಿಸಿತು. ಗಾಡಿಯವರನ್ನು ಕೂಡಿಕೊಂಡು ಏನಾದರೂ ವಿಚಾರಮಾಡಿ, ಬಾಳಾಸಾಹೇಬನ ಕಡೆಗೆ ಹೋಗಬೇಕೆಂದು ಅವರನ್ನು ಕರೆಯಕಳುಹಿದ. ಇಷ್ಟರಲ್ಲಿ ಅವರ ಬಣ್ಣ ಬದಲಾಗಿತ್ತು. ಅವರು ಬರಲಿಲ್ಲ. "ನಿನ್ನ ಮಾಲು ಆಮೆ. ನೀನೇ ಬೇಕಾದ್ದು ಮಾಡಿಕೋ, ನಮಗೇನು ಸಂಬಂಧ?" ಎಂದು ಹೇಳಕಳಿಸಿದರು. ಮನೆಯಲ್ಲಿ ತಾಯಿ "ಬೇಕಾದ್ದ ಮಾಡು, ಉಳಿದ ಬಾ. ನಿನಗ ಏಟು ಹಚ್ಚಿಕೊಳ್ಳಬೇಡ; ಬಂದು ಕೂರಿಗಿ ಹೊಲಾ ಹೋದರೂ ಚಿಂತೆಯಿಲ್ಲ" ಎಂದು ದುಂಬಾಲುಬಿದ್ದಳು.

ಯಾವುದೂ ತಿಳಿಯದಂತಾಗಿ ಮಲ್ಲೇಶ ಬಾಳಾಸಾಹೇಬನ ಕಡೆಗೆ ಹೋದ. ಬಾಳಾಸಾಹೇಬ ಇವನು ಬರುವ ದಾರಿಯನ್ನೇ ನಿರೀಕ್ಷಿಸುತ್ತಿದ್ದನೇನೊ! ಇವನನ್ನು ಕಂಡೊಡನೆಯೆ ಸಹಾನುಭೂತಿಯಿಂದ ನುಡಿದ.

"ಏನಾದರೂ ಮಾಡಿ ಇಲ್ಲೇ ಮುಗಿಸಿಕೋಬೇಕಿಲ್ಲೋ?"

"ನೀವೇ ಮುಗಿಸುವವರು." ಎಂದ ಮಲ್ಲೇಶ. ಬೇಡಿಕೊಳ್ಳುವ ಸ್ವರವಿತ್ತು. ಬಾಳಾಸಾಹೇಬನಿಗೆ ಬೇಕಾದ ಮಾತೇ ಆಗಿತ್ತಿದು. ಆದರೂ "ನಾನೇ ಮುಗಿಸತಿದ್ದೆ; ಆದರೆ ಕುಲಕರ್ಣಿ ಬೇರೆ ನಡುವೆ ಬಿದ್ದಾನ," ಎಂದು ಅನುಮಾನಿಸಿದ.

"ನಿಮ್ಮ ಮಾತ ಕೇಳತಾನ ಹವಾಲದಾರ!"

"ಆದೆಲ್ಲಾ ಆಯ್ತು; ಆದರ ನೀವು ಮುಂದಿನ ವಿಚಾರನೂಡಿ ಕೆಲಸಮಾಡತಿರುವದಿಲ್ಲ. ಇಷ್ಟ ಗಾಡಿ ಮಾಲ ಬೇರಿಸಿದಿರಿ. ಒಮ್ಮೆಯಾದರೂ ಕುಲಕರ್ಣಿಗೆ...!"

ಮಲ್ಲೇಶ ತಲೆಕೆಳಗೆ ಹಾಕಿಕೊಂಡು ಕುಳಿತಿದ್ದ. ತುಸು ತಡೆದು ಬಾಳಾಸಾಹೇಬ ಹೇಳಿದ: "ಹೋಗು, ಗುಂಡೋಪಂತನನ್ನು ಇತ್ತ ಕಳಿಸು. ನಾನೇ ವಿಚಾರಮಾಡ್ತೇನಿ." ನೇರವಾಗಿ ದುಡ್ಡಿನ ಮಾತೆತ್ತಲು ಸಂಕೋಚಪಟ್ಟುಕೊಂಡನೇನೋ ಬಾಳಾಸಾಹೇಬ.

"ಆತ ಗೌಡನ ಅಂಗಡಿಯೊಳಗ ಕುಳಿತಂತೆ ಕಾಣಿಸ್ತತ್ತು."

"ಎಲ್ಲಿ ಕುಳಿತಿದ್ದರ ನಿನಗೇನು? ನಿನ್ನ ಕೆಲಸ ಒಂದು ಆದರ ಕೆರಿತು. ಸ್ವಲ್ಪ ಪಕ್ಕನ್ನರದಲ್ಲಿ ನುಡಿದ ಬಾಳಾಸಾಹೇಬ.

ಮಲ್ಲೇಶ ಮರುಮಾತಿಲ್ಲದೆ ಪಂಕರನ್ನು ಕಳಿಸಲು ಹೋದ.

೭

ಕೊನೆಗೆ ಮಲ್ಲೇಶನು ಪಂಕರ ಸೋದರ ಅಳಿಯನ ಹೆಸರಿಗೆ ಎರಡು ಎಕರೆ ಶಸ್ಯ ಹೊಲವನ್ನು ಇನ್ನೂರು ರೂಪಾಯಿಗೆ ಬರೀದಿಮಾಡಿಕೊಡುವುದೆಂದೂ, ಆ ರೂಪಾಯಿಗಳನ್ನು ಪಾಲ. ದಾರನಿಗೆ ಕೊಟ್ಟು, ಬಾಳಾಸಾಹೇಬ ಮಲ್ಲೇಶನ ಗಾಡಿಗಳನ್ನು ಬಿಡಿಸಿತರುವುದೆಂದೂ ಗೊತ್ತಾಯಿತು.

ಈ ನಿರ್ಣಯಕ್ಕೆ ಮಲ್ಲೇಶ ಪೂರ್ಣವಾಗಿ ಒಪ್ಪಲಿಲ್ಲ. ವಿಚಾರಕ್ಕೆಳಗಾದ. ಆಗ ಗೌಡ ಕರೆದು ಹೇಳಿದ: "ಈ ವ್ಯವಹಾರದಲ್ಲಿ ನಿನಗ ಹಾನಿಯಿಲ್ಲ. ಹೇಗಾದರೂ ಗಾಡಿಯವರು ಮಾಲು ನಿನ್ನದೇ ಎಂದು ಹೇಳಿರುವರು. ಅವೇ ನಾಲ್ಕುಗಾಡಿ ಜೋಳ ಮಾರಿ ಈ ರೂಪಾಯಿ ಕೊಟ್ಟುಬಿಡು ಅಂದರಾಯಿತು ನೀ ಏನ ನಿನ್ನ ಮನಿಯಿಂದ ಹಾಕಬೇಕಾಗೇದ ಏನು?"

ಏನಾದರೂ ಹಿರಿಯರ ಬುದ್ಧಿ ಹೆಚ್ಚೆಂದೆನಿಸಿತು ಮಲ್ಲೇಶನಿಗೆ. 'ಆ ಏಳು ನೂರು ರೂಪಾಯಿಗಳನ್ನು ಕೊಡದಿದ್ದರೂ ಕೂಡ ಈ ಹನ್ನೆರಡು ನೂರು ರೂಪಾಯಿಗೆ ಹಾದಿತೋರಿಸಿ ಕೊಟ್ಟನಲ್ಲ ಗೌಡ' ಎಂದು ಯೋಚಿಸಿ, ಮನಸ್ಸಿನಲ್ಲಿ ಸಮಾಧಾನ ತಾಳಿದ. ಕಾಗದಮಾಡಿಕೊಡಲು ಒಪ್ಪಿಕೊಂಡ. ತನ್ನ ಪಾಲುಗಾರನನ್ನು ಉಳಿಸಿಕೊಳ್ಳಲಿಕ್ಕೆಂದು ಗೌಡ ಸ್ವತಃ ತಾನೇ ಮುಂದಾಗಿ, ಕರಾರಿನ ಕಾಗದ ಬರೆದ. ಮಲ್ಲೇಶನ ಸಹಿ ತಕ್ಕೊಂಡ. ಎಲ್ಲವನ್ನೂ ಮಾಡಿದ. ಎಷ್ಟಾದರೂ ಇಬ್ಬರೂ ಪಾಲುಗಾರಿಕೆಯಿಂದ ವ್ಯಾಪಾರಮಾಡಿದವರಲ್ಲವೆ?

ಇಷ್ಟೆಲ್ಲ ಮಾಡಿಕೊಂಡು ಬಾಳಾಸಾಹೇಬ ಹಣ ತಕ್ಕೊಂಡು ಹವಾಲದಾರನ ಕಡೆಗೆ ಹೋದರೆ ಆತ ಹೇಳಿದನಂತೆ:

"ಇಷ್ಟೆಲ್ಲ ಜೊಬ್ಬಾಟ ಮಾಡಿ, ಒಂದು ದಿನ ಕಳೆದು ಬಂದರೆ ಹೇಗೆ ಬಿಡಲಿಕ್ಕೆ ಬಂದೀತು? ನಾನು ನೆರೆಮನೆ ಕಾಣಬೇಕಾದೀತು; ಮೇಲೆ ರಿಪೋರ್ಟ್ ಕೊಟ್ಟಿದ್ದೇನೆ ನಾಳೆ ಪಂಜನಾಮೆ ಆಗಲಿಕ್ಕೇಬೇಕು!"

ಮರುದಿನ ಸರಕಾರೀ ರೀತಿಯಂತೆ ಎಲ್ಲ ನಡೆದುಹೋಯಿತು. ಕಾಳುಗಳು ಕಚೇರಿಯನ್ನು ಕಂಡುವು. ಆದರೂ ಬಾಳಾಸಾಹೇಬನು ಮಾತ್ರ—

"ಮೇಲೆ ಹೋದರೂ ಬಿಡಿಸಿತರುವೆ, ಮಲ್ಲೇಶ! ನೀನು ಚಿಂತೆಯನ್ನುಬಿಡು" ಎಂದು ಹೇಳುತ್ತಿರುವನು. ಒಮ್ಮೊಮ್ಮೆ "ಪಂತರ ಆಳಿಯನ ಕಡೆಯಿಂದ ಇನ್ನೂ ಪೂರಾ ಹಣ ಬರಲಿಲ್ಲವಲ್ಲ" ಎಂದೂ ಅನ್ನುವನು.

"ಸ್ವತಂತ್ರ ವ್ಯಾಪಾರ ಗೌಡ ನಿನ್ನ ಮೈಗೆ ಹತ್ತಗೊಡಲಿಲ್ಲ ಪುಡುಗಾ" ಗುಂಡೋಪಂತ ಆಗಾಗ ಗಂಟುಬಿದ್ದಾಗ ಮಲ್ಲೇಶನಿಗೆ ಹೇಳುವನು.

ಗೌಡನು ಎದುರಿಗೆ ಮಲ್ಲೇಶ ಬಂದಾಗ ಅರ್ಥಪೂರ್ಣವಾದ ದೃಷ್ಟಿಯೊಂದನ್ನು ಬೀರಿ ಏನೋ ಕಳಕೊಂಡವನಂತೆ ನುಡಿಯುವ:

"ಬಾಳಾಸಾಹೇಬ ನಾಡ ಘಟೆಂಗ ಪುಡುಗ. ನಾಲ್ಕು ದಿನ ಕಚೇರಿಗೆ ಎಡತಾಕಿಸಿ ಕೊನೆಗೆ ಬಿಡಸಿತರತೇನಂತ ಹೇಳತಾ ಹೋಗಿತಾನ ತೀರಿತು. ಜಗುವ ಹಾಗೆ ಆಗ್ತಾವದ, ಕಾಯ್ದೆಪ್ರಕಾರ. ದುಡ್ಡು ಹವಾಲದಾರನ ಕೈಗೂ ಹಚ್ಚಲಿಲ್ಲ. ಇತ್ತೂ ಇಲ್ಲ!"

ಈ ಮೂವರ ಮಾತಿನ ಅರ್ಥ ಮಲ್ಲೇಶನಿಗೆ ಹೊಳೆಯುವುದಾದರೂ ಮಾಡುವನೇನು? 'ಈ ಮೊದಲೇ ಕಾಗದ ಬರೆದು ಕೊಟ್ಟಾಗಿದೆ'! ಎಂದು ಒಳಗೊಳಗೇ ಮರುಗುವನು.

ನೌಖಾಲಿಯ ಯಾತ್ರೆ

(ಪ್ರವಾಸ ಪ್ರಬಂಧ)*

ಶ್ರೀ. ನಾರಾಯಣರಾವ ಕುಲಕರ್ಣಿ, ವಿಜಾಪೂರ

ಉಧ್ವಸ್ತ ನವಖಾಲಿಯಲ್ಲಿ ಪ್ರತ್ಯಕ್ಷವಾಗಿ
ತಿರುಗಾಡಿಬಂದ— ಮಹಾತ್ಮಾಗಾಂಧಿಯವರ
ಭಾವುಕ ಭಕ್ತರ— ಬರೆಹವಿದು!

★

ಶ್ರೀಮಾನ್ ಮೋಹರೆ ಹನುಮಂತರಾಯರು ನನ್ನನ್ನು 'ಸಂಯುಕ್ತ ಕರ್ನಾಟಕ'ದ ಪ್ರತಿನಿಧಿಯನ್ನಾಗಿ ಮಿರತ ಕಾಂಗ್ರೆಸ್ಸಿಗೆ ಕಳುಹಿದರು. ನಾನೂ ಹೋದುದಾಯಿತು. ಭಾರತದಲ್ಲಿಯ ಮಹಾ ಮಹಾ ವಿದ್ವಾಂಸರೂ— ಮುಂದಾಳುಗಳೂ, ಅಧಿವೇಶನದ ಬಹಿರಂಗ ಚಳವಳಿಯಲ್ಲಿಯೂ ಚರ್ಚೆಯಲ್ಲಿಯೂ ಭಾಗವಹಿಸಿದ್ದರು. ಅವರ ವಾಕ್‌ಚಾತುರ್ಯವು ಕರ್ತವ್ಯನಿಷ್ಠೆಯನ್ನು ತೋರಿಸುತ್ತಿತ್ತು; ಅವರ ಹಾವಭಾವಗಳು ಕೆಲಸಗಾರಿಕೆಯನ್ನು ಅರುಹುತ್ತಿದ್ದುವು; ಅವರ ಇರುವಿಕೆಯು ತ್ಯಾಗವನ್ನು ತೋರುತ್ತಿತ್ತು. ಅವರ ಮುಖದ ಮೇಲೆ ವಿದ್ವತ್ತೆಯ ಕಳೆಯು ಅರಳಿದ್ದರೂ, ಏನನ್ನೋ ಪ್ರಿಯಕರ ವಸ್ತುವೊಂದನ್ನು ಕಳೆದುಕೊಂಡು ಹುಡುಕುವ ಸ್ಥಿತಿಯವರಂತೆ, ವಿಚಾರಿಸುವ ದೀನತೆಯು ಎಲ್ಲರ ಮೋರೆಯ ಮೇಲೆ ಒಡೆದು ಕಾಣುತ್ತಿತ್ತು.

ಲೇಖಕರು

ಕಾಂಗ್ರೆಸ್ ಅಧಿವೇಶನದ ಕಾರ್ಯಕಲಾಪಗಳೂ ಗೊತ್ತುವಳಿಗಳೂ ಬಹಿರಂಗ ಅಧಿವೇಶನವೂ ಇಡಿಯ ಪ್ರಪಂಚಕ್ಕೇ ಒಂದು ಆಲ್ಹಾದವನ್ನು ಕೊಡುವಂಥವುಗಳಾಗಿದ್ದರೂ, ನೌಖಾಲಿಯ ಪ್ರಳಯದ ವಾರ್ತೆಗೆ ಅಲ್ಲಿ ವಿಶೇಷ ಪ್ರಾಶಸ್ತ್ಯವಿತ್ತು. ಬಾಪೂಜಿಯವರಿಂದ ಬರುವ ಓಲೆಗಳ ಮಾರ್ಗಪ್ರತೀಕ್ಷಣೆ, ಅಲ್ಲಿಯ ಸುದ್ದಿ ಮತ್ತು ಮಹಾತ್ಮಾಜೀಯವರ ಆರೋಗ್ಯ ಇವುಗಳ ಕಡೆಗೇ ಜನರ ಕುತೂಹಲವು ಓಡುವಂತಿತ್ತು.

ಆ ಬಿರುಗಾಳಿಯ ಹವೆಯು ನನ್ನ ತಲೆಯನ್ನೂ ಕಲಕಿಸಿತು. ಮಿರತದ ವರೆಗೆ ಬಂದಿರುವ ನಾನು, ಉತ್ತರ ಹಿಂದುಸ್ತಾನವನ್ನೆಲ್ಲ ತಿರುಗಬೇಕೆಂದು ಆಶೆಪಟ್ಟಿ. ನೌಖಾಲಿಯ ಕಡೆಗೂ ಹೋಗಬೇಕೆಂದು ಹೃದಯ ಹಂಬಲಿಸಹತ್ತಿತು.

ಛಾಯಾಚಿತ್ರಕಾರನಾದ ನಾನು, ಮಿರತಕಾಂಗ್ರೆಸ್ಸಿನ ಅಪೆಪ್ಪೋ ದೃಶ್ಯಗಳನ್ನೂ ಜೀವಜ್ಯೋತಿಗಳ ಛಾಯಾಚಿತ್ರ (ಫೋಟೋ)ಗಳನ್ನೂ ತೆಗೆದುಕೊಂಡು ಪೂರ್ತಿಮಾಡಬೇಕಾಗಿದ್ದುದರಿಂದ, ನನಗೆ ವಿಜಾಪೂರಕ್ಕೆ ತಿರುಗಲೇ ಬೇಕಾಯಿತು. ಬೇಗಬೇಗನೆ ಆ ಕಾರ್ಯ ತೀರಿಸಿ, ಮತ್ತೆ ಮುಂಬೈ-ದಿಲ್ಲಿಗಳ ಮಾರ್ಗವಾಗಿ ಕಲಕತ್ತೆಗೆ ಹೋಗಿ, ಅಲ್ಲಿಂದ ನೌಖಾಲಿಯಲ್ಲಿ ಮಹಾತ್ಮರ ದರುಶನ ತೆಗೆದುಕೊಂಡೆ.

ಮಹಾತ್ಮರ ದರುಶನ

ಕಳೆದ ಫೇಬ್ರುವರಿಯ ೫ನೆಯ ದಿನಾಂಕ ಬುಧವಾರ ದಿನವು ನನ್ನ ಆಯುಷ್ಯದಲ್ಲಿಯ ಶುಭದಿನವು. ಭೂಪೈಕುಂಠವೆನಿಸಿದ ಶ್ರೀಬದರಿಕಾಶ್ರಮದ ನಾರಾಯಣನ ದರುಶನವೆಂದರೆ ಅಜೊಂದು ಅಘಟಿತ ಘಟನಾ ಪ್ರಸಂಗವಂತೆ; ಅದರಂತೆಯೆ ನವಖಾಲಿಯ ಜನತಾಜನಾರ್ದನನಾದ ದರಿದ್ರನಾರಾಯಣನ ದರುಶನವೂ ಅದಕ್ಕಿಂತ ಮಿಸ್ತರವು. ಆ ಬದರೀನಾರಾಯಣನ ದಾರಿಗೆ ನಿಸರ್ಗವು ಅಡ್ಡಗಟ್ಟುತ್ತಿದ್ದರೆ, ಈ ನೌಖಾಲಿನಾರಾಯಣನ ದಾರಿಗೆ ನೀತಿಯು ಬಂಧನಕರವಾಗಿರುವುದು. ಇಂದು ಶ್ರೀನಗರದಲ್ಲಿ, ಪಾದಸಂಚಾರಿಯಾದ ವಿಭೂತಿಗೆ ಭಿಕ್ಷೆ ಇರುವುದೆಂದು ಕೇಳಿ, ಆಕ್ಷಣಕ್ಕೆ ಧಾವಿಸಿದೆ. ಧರ್ಮಭಾವನೆಯುಳ್ಳವನಾದ ನಾನು, ಧೂಳಿದರ್ಶನವನ್ನೇಕ್ಷಿಸಿದೆ. ಆಗ ಪ್ರಸಾದವೂ ಸಿಕ್ಕಿತು : "ಇಷ್ಟುದೂರ ಬಹಳಹಣ ಖರ್ಚು ಮಾಡಿಕೊಂಡು ಬರುವುದೇನಗತ್ಯವಿತ್ತು ನಿಮಗೆ? ಆ ಹಣವನ್ನು ನೌಖಾಲಿಯ ಸಂತ್ರಸ್ತರಿಗೆ ಕಳಿಸಿಕೊಟ್ಟಿದ್ದರೆ ಅಥವಾ ಅಖಂಡ ಜೋಳಿಗೆಯಾದ ಜರಿಜನ ಭಿಕ್ಷೆಗೆ ನೀಡಿದ್ದರೆ ಅದೆಷ್ಟು ಒಳ್ಳೆಯದಾಗುತ್ತಿತ್ತಲ್ಲವೇ! ಇಂದು ನಾನು ನನ್ನ ಸತ್ಪ್ರವರ್ತನೆಯನ್ನೇ ಜೂಜಿಗೆ ಹಚ್ಚಿದ್ದೇನೆ. ನನ್ನ ಕಾರ್ಯಕ್ಕೆ ಹೊರಗಿನವರ ಗದ್ದಲವು ಆತಂಕವನ್ನುಂಟುಮಾಡುತ್ತದೆ. ಈ ಕಾರ್ಯದಲ್ಲಿ ನಾನು ಯಶಸ್ವಿಯಾಗಬೇಕಾದರೆ ನನ್ನನ್ನೆ ನನ್ನನ್ನೇ ಬಿಟ್ಟರೆ ನಿಮ್ಮದು ಮಹದುಪಕಾರವಾಗುತ್ತದೆ." ಈ ಪ್ರಸಾದವಾಕ್ಯಗಳು, ದಾರಿಯ ದಣುವಿಕೆಯ ಮೈಗಾಳಿಗೆ ಅಡ್ಡಗಟ್ಟಿದಂತಹವುಗಳಾಗಿದ್ದರೂ- ಮಹಾತ್ಮರ ದಿವ್ಯದರುಶನದಿಂದಾದ ಆನಂದವು ಉಕ್ಕಿ 'ಧನ್ಯ ಬಾಪೂಜಿ' ಎಂಬ ಅಂತಃಕರಣವು ಕಣ್ಣಿನಲ್ಲಿ ಮಿಲನವಾಗಲು, ಮತ್ತೆ ಮತ್ತೆ ಆ ಚೈತನ್ಯಮೂರ್ತಿಯನ್ನು ನೋಡಿ ಪುನೀತನಾದೆ. ದಾಂಡಿಯ ಉಪ್ಪಿನ ಹರಳು ಅಮೊಂದು ಜ್ಯೋತಿರ್ಲಿಂಗವಾಗಿ ಪರಿಣಮಿಸಿತೆನು ವಂತಾಗಿರಲು

---

* ಇದರಲ್ಲಿ ಬಳಸಿದ ಪಡಿಯಚ್ಚುಗಳನ್ನು ಒದಗಿಸಿಕೊಟ್ಟವರು 'ಲೋಕಶಿಕ್ಷಣ' (ಮರಾಠಿ) ಮಾಸಪತ್ರಿಕೆಯ ಸಂಚಾಲಕರು. ಈ ನೆರವಿಗಾಗಿ ನಾವು ಅವರಿಗೆ ಕೃತಜ್ಞತೆಯ ವಂದನೆಗಳನ್ನು ಸಲ್ಲಿಸುತ್ತೇವೆ.

—ಸಂ. ಜ.

ಮುಸ್ಲಿಮರ ಒಂದು ಸಾಯಂಕಾಲದ ಪ್ರಾರ್ಥನೆ.

ಅಲ್ಲಾಹು ಜನರ ಇರುವಿಕೆಯು ಎಷ್ಟೊಂದು ಅಸಹ್ಯಕರವಾಗಿದೆಯೆಂದೆನಿಸುವುದು. ಅಂತೆಯೆ ರೋಗ-ರುಜಿನಗಳ ತವರುಮನೆಯಾಗಿವೆ ಈ ಹಳ್ಳಿಗಳು. ಹಿಂದೂ ಮುಸಲ್ಮಾನರು ಒಂದಕ್ಕೊಂದು ಹತ್ತಿ ಕಟ್ಟಿದ ಮನೆಗಳ ರಚನೆಯನ್ನು ಕಂಡರೆ, ಈ ಹತ್ಯಾಕಾಂಡಕ್ಕೆ ಮೊದಲು ಅವರ ಬಾಂಧವ್ಯವು ಸಮರಸವಾಗಿತ್ತೆಂದು ಯಾರಿಗೂ ತಿಳಿಯಬಹುದು. ಈ ಹಳ್ಳಿಗಳಲ್ಲಿ ವಾಸಿಸುವ ವಸತಿಗತಲ್ಲಿ ಮುಸಲ್ಮಾನರು ವಿಶೇಷವಾಗಿದ್ದರೂ ಅವರು ಹಿಂದೂ ಸಂಸ್ಕೃತಿಗೆ ವಿಶೇಷವಾಗಿ ಅಂಟಿಕೊಂಡಿರುವರು ಮುಸಲ್ಮಾನರಿಗೆ ಪ್ರಾರ್ಥನೆಯ ಮಸೀದಿಗಳಿಲ್ಲ (ನಮ್ಮಲ್ಲಿಯಂತೆ). ಅವರ ಶಿಕ್ಷಣವು ಬಂಗಾಲಿಯಲ್ಲಿಯೆ. ಅವರ ಮನೆಮಾತು ಬಂಗಾಲಿ. ಅವರ ಆಹಾರವೂ ಬಂಗಾಲೀ ಹಿಂದುಗಳಂತೆಯೆ.

ನೌಖಾಲಿ-ತಿಪ್ಪೇರಾ ಜಿಲ್ಲೆಗಳಲ್ಲಿ ಬರಿಗಾಲಿನಿಂದ ನಡೆಯುವ ಬಾಪೂಜಿಯವರ ಸಾದಸ್ಪರ್ಶದಿಂದ ಅಹಲ್ಯಾದೇವಿಯು ಉದ್ಧಾರವಾಗುವುದರಲ್ಲಿ ಸಂದೇಹವಿಲ್ಲವೆಂದು ಎನಿಸಿತು.

ನಾನು ಶ್ರೀನಗರವೆಂಬ ಹಳ್ಳಿಗೆ ತಲುಪಿದುದು ಮುಂಜಾನೆಯ ೧೧ಗಂಟೆಗೆ. ಆಗ ಗಾಂಧೀಜಿಯವರು ಸ್ನಾನಗೈಯಲ್ಲಿದ್ದರು. ಪ್ರಾತಃಕಾಲದ ಪ್ರಾರ್ಥನೆಯ ನಂತರ-ತೈಲಸ್ನಾನ (ಮಸಾಜ್), ನಂತರ ಆತಪಸ್ನಾನ (ಬಿಸಿಲು ಕಾಸುವುದು), ಅಮೇಲೆ ನೀರಿನ ಸ್ನಾನ—ಹೀಗೆ ನಿತ್ಯದ ಸ್ನಾನದ ಕಾರ್ಯಕ್ರಮಕ್ಕೆ ಅವರಿಗೆ ಎರಡು ಗಂಟೆ ಕಾಲ ತಗಲುವುದು.

ಸಾಮಾನ್ಯವಾಗಿ ನೌಖಾಲಿ ಜಿಲ್ಲೆಯು ಅತಿ ಬಡತನದ್ದಿರುವುದು. ಯಾಕೆಂದರೆ ನಾನು ನನ್ನ ಪರಿಚಾರಕನೆಂದು ತೆಗೆದುಕೊಂಡ ಒಬ್ಬ ಮನುಷ್ಯ (ಕೂಲಿ) ನಿಗೆ, ನನ್ನ ಹಾಸಿಗೆ ತೊಗಲಿನ ಪೆಟ್ಟಿಗೆ ಹೊರಿಸಿಕೊಂಡು ವಿದಿನ ತಿರುಗಿಸಿ, ಅದಕ್ಕಾಗಿ ಎರಡೇ ರೂಪಾಯಿಗಳನ್ನು ಕೊಟ್ಟರೂ ತುಂಬ ಆನಂದದಿಂದ ಸ್ವೀಕರಿಸಿದನು. ಆದರೆ ನಮ್ಮಲ್ಲಿ?

ಅಂದು ಶ್ರೀನಗರದಲ್ಲಿಯ ಸಾಯಂಪ್ರಾರ್ಥನೆಗೆ ನಾನು ಹೋದೆ. ಮಹಾತ್ಮರು ಪ್ರಾರ್ಥನಾಸ್ಥಳಕ್ಕೆ ಪಯಣವಾಡಿಸಿದಾಗಲೆ ಬಂಗಾಲಿ ಹೆಣ್ಣುಮಕ್ಕಳು 'ಬುಲು-ಬುಲು-ಬುಲು' ಎಂದು ನಾಲಗೆಯನ್ನು

ವಿಮಾನದಿಂದ ಕಲಕತ್ತೆಯನ್ನರೆಗೆ ಬರುವ ಪ್ರವಾಸದ ವರ್ಣನೆ ಬೇಡ. ಕಲಕತ್ತೆಯಿಂದ ಜೆಂಗಾಲ್-ಅಸಾಮು ರೈಲುಮಾರ್ಗದಿಂದ ಗಂಗಾನದಿಯ ಉಗಿಪಡಗದ ನಿಲ್ದಾಣಕ್ಕೆ ಬಂದು, ಅಲ್ಲಿಂದ ಗಂಗಾನದಿಯಲ್ಲಿ ಉಗಿಪಡಗದ ಮಾರ್ಗದಿಂದ 'ಜಾನೋಛಿಪಿ' ಎಂಬ ಗ್ರಾಮಕ್ಕೆ ಕಲುಪಿದೆನು. ಮುಂದೆ ಬಸ್ಸಿನಿಂದ ದಕ್ಷಿಣಾಭಿಮುಖವಾಗಿ ಗ್ರಾಮಕ್ಕೆ ಮುಟ್ಟುವ ನದುವಾರ್ಗದಲ್ಲಿ, ಮುರಂತಕ್ಕೆ ಕಾಣದ ಅಪಿಪ್ಪೋ ಹಳ್ಳಿಗಳನ್ನು ನೋಡಿದೆನು. ಇಲ್ಲಿಯ ಹಳ್ಳಿಗಳೆಂದರೆ ೫೦-೪೦ ಗುಡಿಸಿಲುಗಳ ಗುಂಪು ಮೆಂಡೆಗೆ ಕುಡಿಯುವ ನೀರಿನ ಜೊಂಪು ಚಿಕ್ಕತೆರೆ. ಅಸ್ತವ್ಯಸ್ತವಾಗಿ ಹರಡಿರುವ ತಿಪ್ಪೆಯ ಗುಂಪುಗಳನ್ನೂ ಗಿಡದ ನೆರಳಿಗಿರುವ ವಸಗಳ ಹೆಣ್ಣುಗಳನ್ನೂ ನೋಡಿದರೆ,

ಪ್ರಸ್ತಾವ ಕೇಂದ್ರದಲ್ಲಿ ಉಪಚಾರಕ್ಕಾಗಿ ಬಂದ ಹಿಂದೂ-ಮುಸಲ್ಮಾನ್ ಅಪದ್ಗ್ರಸ್ತರು.

ಅಲ್ಲಾಡಿಸುವ ಸ್ವರದಿಂದ ಬಾಪೂಜಿಯವರನ್ನು ಸ್ವಾಗತಿಸಿದರು (ನಮ್ಮಲ್ಲಿ ಜೋಗುಳಪದ ಅನ್ನುವಾಗ, ತೊಟ್ಟಿಲ ತೂಗುವಾಗ ಮತ್ತು ಕೂಸುಗಳನ್ನು ರಮಿಸುವಾಗ ಬಾಯಿ-ನಾಲಗೆಯಿಂದ–ತಾಳದಿಂದ ಹಾಡುವಂತೆ). ಈ ಅಕ್ಷರವಿರಹಿತ ಸ್ವಾಗತವು ಬಂಗಾಲಿಗಳಿಗೆ ಅತಿ ಪ್ರಿಯಕರವಾದುದೂ ಸಂತೋಷವನ್ನು ಬೀರುವುದೂ ಅಲ್ಲದೆ, ಅತಿ ಅಕ್ಷರತೆಯುಳ್ಳದ್ದಾಗಿಯೂ ಇರುವುದಂತೆ.

ಮಹಾತ್ಮರ ಪ್ರಾರ್ಥನೆಗೆ ನೆರೆದ ಜನರಲ್ಲಿ ಒಂದು ಪ್ರಕಾರದ ಓರಣಅಚ್ಚುಕಟ್ಟುತನಗಳು ತಂತಾನೇ ಬಂದುಬಿಡುತ್ತಿದ್ದುವು. ಇದು ಸೈನ್ಯದ ಸರಸೇನಾಪತಿಯನ್ನೂ ನಾಚಿಸುವಂತಹದು. ಮಹಾತ್ಮರು ಪ್ರಾರ್ಥನೆಗೆ ನಿಲ್ಲುವಾಗಲೆ ಅವರಂತೆ ಎಲ್ಲರೂ (ಕೆಲವೇ ಸೇಕಂದುಗಳಲ್ಲಿ) ನಿಂತರು. ಮೊದಲು ಪ್ರಾರ್ಥನೆಯ ಪೀಠಿಕೆಯಾಯಿತು. ಮುಂದೆ ಎರಡು ನಿಮಿಷ ಶಾಂತಿ (ಮೌನ); ಆಮೇಲೆ ಸೊದಲೇ ಗೊತ್ತು ಪಡಿಸಿದ ಇಬ್ಬರು ಗೀತಾಪಠಣವನ್ನು ಮಾಡಹತ್ತಿದರು. ಆದು ಶ್ರೀಮದ್ಭಗವದ್ಗೀತೆಯ ೨ನೆಯ ಅಧ್ಯಾಯದ ೫೫ನೆಯ ಶ್ಲೋಕದಿಂದ ೭೨ನೆಯ ಶ್ಲೋಕಕ್ಕೆ ಮುಕ್ತಾಯವಾಯಿತು. ಈ ನಡುವಿನ ೧೮ ಶ್ಲೋಕಗಳಲ್ಲಿ ಶ್ರೀಕೃಷ್ಣನು ಪಾರ್ಥನಿಗೆ ಸ್ಥಿತಪ್ರಜ್ಞನ ಲಕ್ಷಣಗಳನ್ನು ಹೇಳಿದ್ದಾನೆ. ಸ್ಥಿತಪ್ರಜ್ಞನಂತೆ ಕೆಲಸಮಾಡಬೇಕು; ಎಂದರೆ ಕಾರ್ಯಕರ್ತರು ನಿರಪೇಕ್ಷ ಬುದ್ಧಿಯಿಂದ ಮತ್ತು ನಿಸ್ಸೀಮ ಭಕ್ತಿಯಿಂದ ಕೆಲಸಮಾಡಬೇಕು.–ಇದು ಬಾಪೂಜಿಯವರ ಬೀಜಮಂತ್ರವಾಗಿದೆ; ಜನರಿಗೂ ಅದನ್ನೇ ತಿಳಿಸಿಹೇಳಿದರು. ಇದು ಮುಗಿದಬಳಿಕ:

" ಭಜಮನ ಪ್ಯಾರೇ ರಾಮ ರಹೀಮ |
ಭಜಮನಪ್ಯಾರೇ ಕೃಷ್ಣ ಕರೀಮ " | ಮತ್ತು
" ರಘುಪತಿ ರಾಘವ ರಾಜಾರಾಮ |
ಪತೀತಪಾವನ ಸೀತಾರಾಮ |
ಈಶ್ವರ–ಅಲ್ಲಾ–ತೇರೇ-ನಾಮ |
ಸಬ್‌ಕೇ ಸನ್‌ಮತಿ ದೇ ಭಗವಾನ್ ||

ಈ ಭಜನೆಯನ್ನು ಎಲ್ಲರೂ ಜೀವ್ಯಾಕಿಯ ತಾಳದೊಂದಿಗೆ ಹೇಳಿದರು. ಇಲ್ಲಿಗೆ ಪ್ರಾರ್ಥನೆಯ ಕಾರ್ಯಕ್ರಮವು ಮುಗಿಯಿತು. ಇದ್ದ ಸ್ಥಿತಿಯಲ್ಲಿಯೇ ಸಭೆ-ಭಾಷಣ (ಸಂದೇಶ) ನಡೆಯಿತು. ಆಗ ಪ್ರಶ್ನೋತ್ತರಗಳೂ ನಡೆದುವು. (ಇವು ದೈನಂದಿನ ವೃತ್ತ ಪತ್ರಗಳಲ್ಲಿ ಪ್ರಸಿದ್ಧವಾಗುವವು) ಈ ಪ್ರಾರ್ಥನಾಸಭೆಯು ಸಾಯಂಕಾಲದ ೬॥ಗಂಟೆಗೆ ಮುಕ್ತಾಯವಾಗಿ, ಮಹಾತ್ಮರು ಗಾಳಿಸವಾರಿಗಾಗಿ ತಿರುಗಾಡಿಬಂದು, ತಮ್ಮ ಗುಡಿಸಿಲಿಗೆ ತೆರಳಿದರು.

ಮಹಾತ್ಮರು ಇದ್ದ ಊರಲ್ಲಿ ಅವರ ಪರಿವಾರದ ಹೊರತು ಯಾರಿಗೂ ವಸತಿಮಾಡಲು ಅಪ್ಪಣೆ ಇರಲಿಲ್ಲ. ಕಾಯಿದೇ ಭಂಗವನ್ನು ಮಾಡಿದವರಿಗೂ. ಈ ನೈತಿಕಬಂಧನ ಬಿಗಿಯಾಗಿ ಕಂಡು, ನಾನು ಶ್ರೀನಗರದಿಂದ ಸಾಯಂಕಾಲ ೭॥ಗಂಟೆಗೆ ಹೊರಬೀಳಲೇ ಬೇಕಾಯಿತು.



ದಟ್ಟವಾದ ಕಾಡಿನಲ್ಲಿ ಮಹಾತ್ಮಾಜಿಯವರ ಕಾಲುನಡಿಗೆಯ ಪ್ರಯಾಣ

ನೌಶಾಲಿಯ ಹಳ್ಳಿಗಳಿಂದ ತಿಕೆಲವು ಗುಡಿಸಿಲುಗಳ ಗುಂಪು ನಿಜವನ ಶ್ರೀಯು ಆ ಹಳ್ಳಿಗಳಿಗೆ ಒಂದು ಕಳೆಯನ್ನು ತಂದು ಕೊಟ್ಟಿತ್ತು. ಹಸಿರು ಹುಲ್ಲು ಅಲ್ಲಿಯ ಕಾಲುದಾರಿಯನ್ನು ಮುಚ್ಚಿರುವುದು. ಒಂದಕ್ಕೊಂದು ಅಂಟಿಕೊಂಡು ಬೆಳೆದ ಮಹಾವೃಕ್ಷಗಳು ಗಾಳಿಗೆ ತಿಕ್ಕಿ 'ಚಿರ್–ಚಿರ್' ಎಂಬ ಶಬ್ದವನ್ನು ಹುಟ್ಟಿಸುತ್ತಿದ್ದುವು. ನರಿಗಳ ಕೂಗು, ಅಲ್ಲದೆ ಅದೆಷ್ಟೋ ಪ್ರಾಣಿಗಳ ಗದ್ದಲ. 'ಸರ್‌ಸರ್—ಸರಕ್' ಇತ್ಯಾದಿ ಸಪ್ಪಳಗಳು. ವಿಜಾಪ್ಪರದವನಾದ ನನಗೆ ತುಂಬ ಹೆದರಿಕೆ ಬಂತು. ಇಂತಹ ಸ್ಥಿತಿಯಲ್ಲಿಯೆ ಶ್ರೀನಗರವನ್ನು ಬಿಟ್ಟು, ಸಮೀಪದ ೨೨ ಮೈಲು ಆಂತರದ ಹಳ್ಳಿಗೆ ನನ್ನ ಸಂಗಡವಿದ್ದ ಕೂಲಿಯವನ ಜೊತೆಗೆ ಹೊರಟೆ. ನನಗೆ ಹಾದಿಯಲ್ಲಿ ಒಬ್ಬಿಬ್ಬರು ಭೆಟ್ಟಿಯಾದರು. ಅವರು ಶ್ವಾಪದ-ಮೃಗ-ಹಾವುಗಳಂತಹ ಹಿಂಸ್ರಪ್ರಾಣಿಗಳ ಬೆದರಿಕೆಯನ್ನು ಅಲ್ಲದೆ ಜಾತೀಯ ತುಂಟರ ಹೆದರಿಕೆಯನ್ನೂ ಹಾಕಿದರು. ಈ ದಾರಿಕಾರರ ಹೇಳಿಕೆಯಲ್ಲಿ ನನ್ನ ಸುರಕ್ಷಿತತೆಯ ಬಗ್ಗೆ ಕನಿಕರವಿದ್ದಿತು. ಆಗಸ್ತ್ಯಋಷಿಯ ಪರ್ಣಕುಟೀರದ ಹತ್ತಿರ, ಹುಲಿ-ಸಿಂಹಗಳು ಸಾಮ್ಯ

ಬೆಳಗಿನ ಪಟ್ಟಾಭಿ ಹನುಮಪ್ಪನ ಗಾಂಧಿಜಿಯವರ ಕಾಲುನಡಿಗೆಯ ಪ್ರಯಾಣ.

ಪ್ರಾಣಿಗಳಂತೆ ಮನುಷ್ಯರ ಪ್ರೀತಿಗೆ ಪಾತ್ರವಾಗಿದ್ದುವಂತೆ. ಅವರಂತೆಯೆ ಈ ನಾಯಿಗಳೂ ಆಗಸ್ಟ್‌ನ ಜಿಲ್ಲಿ ಇದ್ದುದರಿಂದ. ಲೇನೋ, ಆ ಅರಣ್ಯಪ್ರಾಣಿಗಳಿಂದ ಅಥವಾ ಜಾತೀಯ ಪುಂಡರಿಂದ ಸುರಕ್ಷಿತವಾಗಿ ಉಳಿದು, ನಾನು ಒಂದು ಹಳ್ಳಿಗೆ ಬಂದು ತಂಗಿದೆನು. ಹಳ್ಳಿಯ ಆದರಾತಿಥ್ಯವು ಹಿಂದೀಯರಿಗೆ ಒಪ್ಪುವಂತಹದಾಗಿತ್ತು. ಆದರೆ ನನಗೆ ಬಂಗಾಲಿ ಬರುವುದಿಲ್ಲ; ಆ ಜನರಿಗೆ ಬಂಗಾಲಿಯ ಹೊರತು ಇನ್ನೊಂದು ಭಾಷೆ ಗೊತ್ತಿಲ್ಲ. ಅಲ್ಲಿ ಮೂಕರ ಸನ್ನೆಗಳೆಲ್ಲವೂ ನನಗೆ ಬಂದುವು.

ಮರುದಿನ ಎಂದರೆ ೬ನೆಯ ಸೋಮವಾರ ಬೆಳಗಿನ ೬ ಗಂಟೆಗೆ ಶ್ರೀರಾಮಪುರಕ್ಕೆ ಮರಳಿ ಬಂದೆ. ಆಗ ಮಹಾತ್ಮರ ಗುಡಿಸಿಲಿನಮುಂದು ಪ್ರಾರ್ಥನೆಗೆ ಜನರು ಕೂಡಿದ್ದರು. ಅವರ ಪರಿವಾರದ ಕೆಲ ಜನರು ನುಂಗಿನ ಹಳ್ಳಿಗೆ ಸಾಮಾನುಸುಗಳೊಂದಿಗೆ ಹೊರಟಿದ್ದರು. ನಾನೂ ನನ್ನ ಕೂಲಿಯವನಿಗೆ ಅವರ ಜೊತೆಗೆ ಹೋಗಲು ತಿಳಿಸಿ, ನಾನು ಪ್ರಾರ್ಥನೆಗೆ ನಿಂತೆ.

ಮಹಾತ್ಮರು ಪ್ರಾರ್ಥನೆಯ ಸ್ಥಳಕ್ಕೆ ಬಂದಕೂಡಲೆ ಶ್ರೀ. ನಿರ್ಮಲ ಬೋಸ್ (ನವಖಾಲಿಯಲ್ಲಿಯ ಅಪ್ತ ಕಾರ್ಯದರ್ಶಿ) ರನ್ನು ಸ್ವೀಕರಿಸಿ "ಓ ನವಾಫೋಲೋಗ್ರಾಫರ್ ಕಂಹಾ ಹಯ್" ಎಂದು ಕೇಳಿದರು. ಈ ಶಬ್ದವು ನನ್ನ ಕಿವಿಗೆ ತಾಗಿ, ಒಂದೇ ಹೆಜ್ಜೆಯಲ್ಲಿ ಬಾಪೂಜಿಯವರ ಹತ್ತಿರ ಹೋಗಿನಿಂತೆ; ನಮಸ್ಕರಿಸಿದೆ. ಆಗ ಅವರು "ಆಪ್ ಹೈ!"—"ಕ್ಯಾ ಆಪ್‌ಕೋ ಬಹುತ್ ಜರೂರ ಥಾ?" ಎಂದರು. ಆಗ ನಾನು ಮತ್ತೊಮ್ಮೆ ನಮಿಸಿ "ಆಪಕೇ ದರ್ಶನಕೇ ಲಿಯೇ ಆಯಾ ಹೂಂ-ಬಾಪೂಜೀ" ಎಂದೆ. ಅವರ ಜೊತೆಗೇ ನಿಂತು ಪ್ರಾರ್ಥನೆ ಮಾಡುವ ಸುಯೋಗವೂ ಒದಗಿತು. ಪ್ರಾರ್ಥನೆ ಮುಗಿದ ಕೂಡಲೆ ಎರಡನೆಯ ಹಳ್ಳಿಯಾದ ಧರ್ಮಪುರಕ್ಕೆ ನಡೆದರು. ಅವರು ಸುಮ್ಮಗೆ ನಡೆಯುತ್ತಿದ್ದರೂ, ಅವರ ಬೆನ್ನು ಹತ್ತಲು ಅವಸರದ ಹೆಜ್ಜೆಯನ್ನಿಡಬೇಕಾಗುತ್ತಿತ್ತು ನನಗೆ. ನಡುದಾರಿಯಲ್ಲಿ, ಮಹಾತ್ಮರ ದಾರಿ ಕಾಯುತ್ತ ನಿಂತ ವಸತಿಗಳಲ್ಲಿ ೬-೭ ನಿಮಿಷ ನಿಂತು, ಅಲ್ಲಿಯ ಜನರಿಂದ ಹಣ್ಣು-ಹಂಪಲ ಸ್ವೀಕರಿಸಿ, ಆತುರತೆಯಿಂದ ನೋಡುವ ಬಾಲಗೋಪಾಲರಿಗೆ ಆ ಹಣ್ಣು-ಹಂಪಲಗಳನ್ನು ಹಂಚಿ, ನಗೆಮುಖದಿಂದ ಎಲ್ಲರಿಗೂ ವಂದಿಸುತ್ತ, ಮುಂಜಾವಿನ ೮-೪೦ಕ್ಕೆ ಎರಡನೆಯ ಹಳ್ಳಿಯಾದ ಧರ್ಮಪುರಕ್ಕೆ ಬಂದು ತಲುಪಿದೆವು. ಮಹಾತ್ಮರನ್ನು ಸಂದರ್ಶಿಸಿದ ಗುಂಪುಗಳಲ್ಲಿ ಮಹಮ್ಮದೀಯ ಸ್ತ್ರೀ-ಪುರುಷರೂ ಬಹುವಾರು ಜನರು ಇದ್ದರು. ಧರ್ಮಪುರಕ್ಕೆ ಮುಟ್ಟಿದನಂತರ ಬಾಪೂಜಿಯವರ ನಿರೋಪ ತೆಗೆದುಕೊಂಡು, ಎರಡನೆಯ ಸ್ಥಳಕ್ಕೆ ಹೋಗಬೇಕಾಯಿತು; ಹೋದದ್ದೂ ಆಯಿತು.

ನವಖಾಲಿಯಲ್ಲಿಯ ಒಂದು ಕಾಳು ಹಳ್ಳಿಯ ನೋಟ

ಈ ಎರಡು ದಿನಗಳಲ್ಲಿ ನಾನು ಅದೆಷ್ಟೋ ಛಾಯಾಚಿತ್ರ (ಫೋಟೊ) ಗಳನ್ನು ತೆಗೆದುಕೊಂಡದ್ದಲ್ಲದೆ, ೪೦೦ ಫೂಟು ಚಲಚ್ಚಿತ್ರಗಳನ್ನೂ (ಫಿಲ್ಮ್) ತೆಗೆದುಕೊಂಡೆ—ಈ ಮುಂದೆ ಮಹಾತ್ಮರ ಮನಸ್ಸಿಗೆ ವಿರುದ್ಧವಾಗಿ ಅವರನ್ನು ಹಿಂಬಾಲಿಸುವ ಇಚ್ಛೆಯು ನನಗಾಗಲಿಲ್ಲ.

ಅಂದು ಅಲ್ಲಿಯೆ ವಿಶ್ರಮಿಸಿ ಊರಿಗೆ ಹೊರಡುವುದನ್ನು ನಿಶ್ಚಯಿಸಿದರೂ, ಮಹಾತ್ಮರ ದರುಶನಕ್ಕೆ ಮನಸ್ಸು ಮತ್ತೊಮ್ಮೆ ಹಂಬಲಿಸಿತು. (ಈ ನಡುವಿನ ಅವಧಿಯಲ್ಲಿ ಮಹಾತ್ಮರ ಆಸ್ಥಾಯಿಗಳಲ್ಲನೇಕರು ನನಗೆ ಪರಿಚಿತರಾದರು)

ಸಾಯಂಕಾಲದ ೭ ಗಂಟೆಯ ಸುಮಾರಿಗೆ ಮಹಾತ್ಮರ ಪರ್ಣಕುಟೀರದೆದುರು ದರ್ಶನಕ್ಕೆಂದು ಹೋಗಿ ನಿಂತೆ. ಪರಿಚಾರಕರು ನಾನು ಬಂದಿರುವುದನ್ನು ಬಾಪೂಜಿಯವರಿಗೆ ಆರುಹಿದರು. ಒಳಗೆ ಬರಲು ಅಪ್ಪಣೆಯಾಯಿತು. ಒಳಗೆ ಹೋದೆ. ಹಸನ್ಮುಖದ ಸ್ವಾಗತವೂ ಆಗಿ—"ಈ ಮುಂದೆ ನಿಮ್ಮಂತಹ ಪರಪ್ರಾಂತೀಯ ಜನರು ಇಲ್ಲಿಗೆ ಬರಬಾರದು; ಮತ್ತು ಯಾರೂ ಇಲ್ಲಿಗೆ ನನ್ನನ್ನು ಕಾಣಲು ಬರಲಾಗದು–ಎಂದು ಪ್ರಚಾರ ಮಾಡಿರಿ!" ಎಂದರು. ಅದಕ್ಕೆ ನಾನು ತಲೆದೂಗಿ ಸಮ್ಮತಿಯನ್ನಿತ್ತೆ. ಕೆಲವು ವಿಷಯಗಳ ಮೇಲೆ ನನ್ನ ಅವರ ಸಂಭಾಷಣೆ ಮುಗಿದ ಮೇಲೆ, ನಾನು ಅವರ ಅಂಕಿತ (Autograph) ಮಾಡಿಕೊಡಲು ಕೇಳಿದೆ. ಮಹಾತ್ಮರ ಹಿಂದುಸ್ತಾನಿ ಭಾಷೆಯ ಪ್ರಶ್ನೆಗಳಿಗೆ ಮಾರುತ್ತರವಾಗಿ ನಾನು ಇಂಗ್ಲೀಷಿನಲ್ಲಿಯೆ ಮಾತನಾಡತೊಡಗಿದೆ. ನನಗೆ ಹಿಂದುಸ್ತಾನಿ ತಿಳಿಯುತ್ತದೆ, ಸರಿಯಾಗಿ ಮಾತಾಡಲು ಬರುವುದಿಲ್ಲೆಂಬುದನ್ನು ಅರಿತು ಮಹಾತ್ಮರೂ ಇಂಗ್ಲಿಷಿನಲ್ಲಿಯೆ ಮಾತನಾಡಹತ್ತಿದರು: "Oh! I can give you any number of autographs for Rs. 5/-each, towards Harijan funds." ಎಂದು ನಕ್ಕರು. ಇದು ಜಗತ್ಪ್ರಸಿದ್ಧವಿಷಯವೆಂದು ನಾನೂ ನಗುತ್ತ ಹತ್ತು ರೂಪಾಯಿಗಳ ನೋಟನ್ನು ಮುಂದೆ ಮಾಡಿದೆ. ಆಗ ಅವರು ಬೊಳ್ಳನೆ ನಕ್ಕರು. ನಾನು ಕನ್ನಡದಲ್ಲಿ ಸಹಿಮಾಡಲು ಕೇಳಿಕೊಂಡೆ ಮತ್ತೆ ಮಹಾತ್ಮರು ನಗುತ್ತಲೇ "I do not know Kanarese, it is since long I used to sign in Kanarese and now I have forgotten" ಎಂದು ಅನ್ನುತ್ತ ಒಂದು ಪುಸ್ತಕ ಹುಡುಕಿ, ಸಹಿಮಾಡಿದ ಕಾಗದದ ತುಂಡನ್ನೊಂದು ನನ್ನ ಕೈಯಲ್ಲಿ ಇರಿಸಿದರು ನಾನು ಗಾಬರಿಗೊಂಡೆ. ಆ ತುಣುಕು ಕಾಗದದ ಮೇಲೆ "ಮೋ. ಕ. ಗಾಂಧಿ" ಎಂದು ಕನ್ನಡದಲ್ಲಿ ಗಾಂಧೀಜಿಯವರ ಹಸ್ತಾಕ್ಷರದ ಬರೆಹವಿತ್ತು. ಆಗ ನಾನು "Mahatmaji, tell me how and why you have carried this Kannada specimen signature to Navakali?" ಅಂದೆ. ಅದಕ್ಕವರು: "The only two Langauges I do not know are Kannada and Bengali" ಎಂದು ಹೇಳಿ, ಬಂಗಾಲಿಯಲ್ಲಿ ಬರೆದ ಇನ್ನೊಂದು ಕಾಗದದ ತುಂಡನ್ನು ತೋರಿಸಿದರು, ಇದಾದ ಬಳಿಕ ಮಹಾತ್ಮರ ಕೈಯೊಳಗೆ ಒಂದು ಮುದುಡಿಯಾದ ಚೀಟಿಯೊಂದನ್ನು ಕೊಟ್ಟೆ. ಅದನ್ನು ನೋದಿದಾಕ್ಷಣವೆ ಆ ಅಕ್ಷರಗಳನ್ನು ಗುರುತಿಸಿ, ಅವರ ಮುಖಮುದ್ರೆಯು ಬಾದಿಡಂತಾಗಿ, ಓದುವ ಮುಖವು ಆದರಭಾವದಿಂದ ಆ ಪತ್ರವನ್ನು ನೋಡುವಂತೆ ಭಾಸವಾಯಿತು. ಆ ಪತ್ರವನ್ನೋದಿ ಮಹಾತ್ಮರು ಹಿಂದಿಯಲ್ಲಿ :—

"ಇದು ಮಹಾದೇವನ ಪತ್ರವಲ್ಲವೇ?" ಎಂದರು, ಆಗ ನಾನು "I have started the production of Educational and Documentary films and I wanted young opinion whether such films be of any use to educate young minds." ಎಂದು ನುಡಿದೆ. ಆಮೇಲೆ ಆ ಕಾಗದದ ಮೇಲೆ ಹಿಂದುಸ್ತಾನಿಯಲ್ಲಿ ಅಂಕಿತ ಹಾಕಿಕೊಟ್ಟರು. ನಾನು ಮತ್ತೆ ಮಹಾತ್ಮರಿಗೆ :— "The text of the letter is in English and your Hindustani Autograph cannot be read if some foreigners see this letter" ಎಂದೆ. ಅದಕ್ಕವರು "Oh you want another signature gratis" ಎಂದರು. ಅದಕ್ಕೆ ನಾನು "Now I will pay for it" ಅನ್ನುತ್ತ ಮತ್ತೆ ಐದು ರೂಪಾಯಿ ತೆಗೆದೆ. ಅದಕ್ಕವರು ನಗುತ್ತ "No you need not pay" ಎಂದು I. E. ಅಕ್ಷರಗಳನ್ನು ಬರೆದು M. K. Gandhi ಎಂದು ಇಂಗ್ಲಿಷಿನಲ್ಲಿ ಸಹಿ ಮಾಡಿಕೊಟ್ಟರು. ಈ ಇಂಗ್ಲಿಷ್ ಅಂಕಿತವನ್ನು ನೋಡಿ ಅಲ್ಲಿ ಇದ್ದವರು ಆಶ್ಚರ್ಯಪಟ್ಟರು. ಯಾಕೆಂದರೆ (ಪರದೇಶಸ್ಥರ ಹೊರತುಪಡಿಸಿ) ಭಾರತೀಯರಿಗೆ ಇಂಗ್ಲಿಷಿನಲ್ಲಿ ಸಹಿಮಾಡಿ ಕೊಡುವುದಿಲ್ಲವಾಗಿ ಮಹಾತ್ಮರ ಪಣವಿರುವುದಂತೆ. ಇದು ಕೈ. ವಾ. ಪರಮಪೂಜ್ಯ ಮಹದೇವಭಾಯಿ ದೇಸಾಯಿಯವರ ಹಸ್ತಲಿಖಿತ ಓಲೆಯ ಪುಣ್ಯದಿಂದ ನನಗೆ ಸಿಕ್ಕಿತು.



ಕಡಿಮೆದ ಕಟ್ಟಡದ ನೋಟ

ಈ ನಡುವಿನ ವೇಳೆಯು ಸಂಭಾಷಣಕ್ಕೆ ಬಾಪೂಜಿಯವರು ನನ್ನ ಜೊತೆಗೆ ೧೭ ನಿಮಿಷಗಳನ್ನು ಖರ್ಚುಮಾಡಿದರು; ಇದು ನನ್ನ ಭಾಗ್ಯವೇ ಸರಿ. ಇದಾದ ಬಳಿಕ ಮಹಾತ್ಮರ ಉಪಕಾರವನ್ನು ಸ್ಮರಿಸಿ, ನವಖಾಲಿ ಗ್ರಾಮಕ್ಕೆ ಹೋದೆನು. ಅಲ್ಲಿ ಒಬ್ಬ ಮಹಾರಾಷ್ಟ್ರೀಯ ಡಾಕ್ಟರರು ಭೆಟ್ಟಿಯಾಗಿ, ನನ್ನನ್ನು ತಮ್ಮ ಅತಿಥಿಯನ್ನಾಗಿ ಮಾಡಿಕೊಂಡರು. ಆ ಡಾಕ್ಟರರ ಪರಿಚಯದಿಂದ ಮಿಸ್. ಬೀನಾದಾಸರ ಪರಿಚಯ ನನಗೆ ಸಾಕಷ್ಟು ಆಯಿತು. ಇವರು ಸುಪ್ರಸಿದ್ಧ ಬಂಗಾಲೀ ಕ್ರಾಂತಿಕಾರರು. ಇವರು ತಮ್ಮ ಡಾಕ್ಟರೀ ಪರೀಕ್ಷೆಯ ಡಿಗ್ರಿಯನ್ನು ಪಡೆಯಲು (ಕಾನ್ವೋಕೇಶನ್) ೧೯೩೫ ರಲ್ಲಿ, ಕಲಕತ್ತಾ ಗವ್ಹರ್ನರರ ಸಭೆಗೆ ಹೋದಾಗ, (ಸರ್ ಸ್ಟ್ಯಾನಿಲೇ ಜಾಕ್ಸನ್) ಗವ್ಹರ್ನರರಿಗೆ ಗುಂಡಿನೇಟು ಕೊಟ್ಟವರು. ಇವರಿಗೆ ಇದರ ಬಗ್ಗೆ ೯ ವರ್ಷ ಸಶ್ರಮ ಶಿಕ್ಷೆಯಾಗಿತ್ತು. ಈ ಶಿಕ್ಷೆಯು ಮಹಾತ್ಮರ ಮಧ್ಯಸ್ಥಿಕೆಯಿಂದ ಇಲ್ಲದಂತಾಗಿ, ಬಿಡುಗಡೆ ಹೊಂದಿ, ಬಿಟ್ಟಕೂಡಲೆ ಕಾಂಗ್ರೆಸ್ಸನ್ನು ಸೇರಿ, ಅಹಿಂಸಾವೃತ್ತಿಯನ್ನು ಅವಲಂಬಿಸಿದರಿವರು ಮತ್ತೆ ೧೯೪೨ರ ಆಂದೋಲನದಲ್ಲಿ ಸಿಕ್ಯೂರಿಟಿ ಪ್ರಿಜನರರೆಂದು ಜೇಲಿನಲ್ಲಿದ್ದಾಗಲೇ, ಬಂಗಾಲ ಅಸೆಂಬ್ಲಿಗೆ ಕಾಂಗ್ರೆಸ್ ಟಿಕೀಟಿನಮೇಲೆ ಆರಿಸಿಬಂದರು. ಈಗ ನವಖಾಲಿ ಸಂತ್ರಸ್ತರ ಸಹಾಯ ಕಾರ್ಯವನ್ನು ಮಾಡುತ್ತಲಿರುವರು. ಇವರ ಜೊತೆಗೆ, ಅದೆಷ್ಟೊ ಭಸ್ಮವಾದ ಹಿಂದೂ ವಸತಿಗಳನ್ನೂ ಧ್ವಂಸ ಮಾಡಿದ ಹಿಂದೂ ದೇವಾಲಯಗಳನ್ನೂ ನೋಡಿದೆನು—ಆಗ ಬಂಗಾಲಿಯಲ್ಲಿ ಬರೆದ ತಾಳೆಗರಿಗಳ ಸರವೊಂದು ಸಿಕ್ಕಿದೆ, ಬಂಗಾಲಿ ಬಲ್ಲವರು ನೋಡಬಹುದು—ಅಲ್ಲದೆ ಹಿಂದೂ ದೇವಾಲಯಗಳ ಭಗ್ನಮೂರ್ತಿಗಳನ್ನೂ ನೋಡಿದೆನು.

ನನಗೆ ಅಲ್ಲಿ ಇರಲು ಹೆಚ್ಚಿನ ದಿವಸಗಳ ಬಿಡುವು ದೊರೆಯದುದರಿಂದ ಮರಳಿ ನನ್ನೂರಿಗೆ ಬಂದೆನು.

ಹಾರೈಕೆ

★

ಶ್ರೀ. ಬಿ. ಎಚ್. ಶ್ರೀಧರ, ಎಂ. ಎ; ಧಟಕಳ.

ಭಾರತ ದೇಶದ ಭಾಲಪಟ್ಟದಲಿ
ಬರೆಯುಲು ಕುಳಿತವನಾವನೊ ಹೇಳಿ?
ಆ ಬ್ರಹ್ಮನ ಪ್ರಭುಸಮ್ಮಿತವಾಣಿಯ
ರೂಪ-ರೇಪೆಗಳ ಬಲ್ಲೆಯ ಹೇಳಿ?

ಶತಮಾನದ ಕೊಳೆದಾಸ್ಯಪಂಕವನು
ತೊಳೆವ ಪುಳಿದು ಕಾರ್ಪೋಡಗಳ
ಘನತೆವೆತ್ತ ಘಟನಾಕೃತಿ ಮಗ್ಗರ
ಜರಣಕೆರಗಿ ನೀವೇಳು ಸಲ!

ಅಂಕರಾಳದಲಿ ತೂಗುವ ಬಿಡುಗಡೆ
'ಬಂತು ಬಂತು' ಎಂದೆನಿಸುತಿರೆ—
ತಂತು ಕಡಿವುದೋ ಎಂಬೀ ಬೆದರಿಕೆ
ಜಿನ್ನಹಿಡಿದ ಬೀತಾಳವರೆ!

ಅಂತರಾಯಗಳನಂತವಲಾ ಸ-
ತ್ಕರ್ಮಗಳಿಗೆ; ಅದರಿಂದೆ ಭಯ—
ಚಿಂತೆಯಟ್ಟಿ ಈಯೆದೆಯಲಿ ಬೇಡದ-
ವಾಂತರಗಳನೆಸಗಿದೆ ಸದಯಾ!

ಅನಂದದ ನಂದನವನವನ್ನೇ
ಕನಸಿನಲ್ಲಿ ಕಡೆದಿಟ್ಟಿರುವ
ಭಾರತರೆದೆ ಕಂಪಿಸುತಿದೆ ಭಾವಿಸಿ
ಕೋಟಿ ವಿಘ್ನಕರಿಗಳ ಬರವ!

ಪಟೇಲ ನೆಹರುಗಳಂಟಿದೆಗಾರಿಕೆ-
ಗಿರಲಿ ಭೀಮ-ಫಲ್ಗುಣರ ಬಲ!
ಮಾತಿಗೆ ಮಾತೇಟೇಟಿಗೆಂಬುದಿದು
ಅಹುದೆ ಬಂಟತನದೊಂದು ಛಲ?

ಶಾಂತಿಗೀತ

ಶ್ರೀ ಗಂಗಾಧರ ಚಿತ್ತಾಲ ಬಿ.ಏ. (ಆನರ್ಸ್), ಮುಂಬಯಿ.

卐

ಗಾಳಿ ಬಿತ್ತಿ ಬಿರುಗಾಳಿಯ ಬೆಳೆಸಿ
ಉರಿಯನುತ್ತು ಹೆಬ್ಬುರಿಯನೆ ಮೊಳೆಸಿ
ಏನಿದು ದುಡುಕುವೆ ಮನುಕುವರ?
ಇಲ್ಲದ ಭೂತವ ಕರೆಯಿಸಿ ತಂದೆ—
ತನ್ನ ತನ್ನವರ ಕಾವೆನು ಎಂದೇ
ಕೊಲಲು ನಿಂತೆ ನೀ ನಿನ್ನವರ! ೧

ಸುಖ-ಶಾಂತಿಗಳನು ನಿಲಿಸುವೆಯಲ್ಲೇ?—
ಅದಕೇಕೀ ವಿಧ್ವಂಸನ ಲೀಲೆ?
ಕೈನಡೆವನಕವು ಕಡಿವ ಪಣ?
ಉರಿಯುವೆ, ತರಿಯುವೆ!— ಏನಿದು ನಡೆಯೇ?....
ಚೀರುವೆ, ಹಲುಬುವೆ ಮುಗಿಲೆದೆಯೊಡೆಯೇ—
ನರಕುಲವೋ ಅರಿಸತ್ತ ಹೆಣ! ೨

ನಿನ್ನ ಹಸಿವೆ ನಿನಗಾಯಿತೆ ಮುಳುವು?
ಅನ್ನದ ಬನ್ನದಿ ಹುಟ್ಟಿತೊ ಅಳುವು—
ಬಾಳಲೆ ಗೋಳಿದು ಎಂಬೆಯಲಾ!
ಜೀವನ ಲಾಲಿಸಿ ಪಾಲಿಸಿದಿಳೆಯು—
ಹಬ್ಬಲು ಹಗೆ-ಹೋರಾಟದ ಬೆಳೆಯು—
ಸಾವಿನ ನೋವಿನ ಹಾಳುಹೊಲ! ೩

ಜೀವಕುಲಕೆ ನೆಲವೆಲ್ಲವು ಅನ್ನ
ಅದನೆಲ್ಲವ ನೀನೊಬ್ಬನೆ, ಅಣ್ಣ
ನುಂಗಲು ನಾಲಗೆ ಚಾಚಿದರೆ,
ಮರಳಿ ನಿನ್ನನದು ನುಂಗದೆ ಇಹುದೇ—
ನರಳಿ ಒರಲಿವರು ತಂಗಲು ಬಹುದೇ
ನೆಲಮುಗಿಲನು ಉರಿ ಬಾಚಿದರೆ? ೪

ಪಾಲುಗಾರಿಕೆಯಿ ಕೊಲೆಪಾತಕವೋ!
ದಾಯಾದಿತನವೆ ಕುಲಘಾತಕವೋ!—
ಕುದಿ ಕುದಿದೆದ್ದಿತು ನೆಲದೆದೆಯು,
ಬಾನ್ ಕನಲಿತು, ಮರಣದ ಕರೆ ಕೇಳಾ—
ಕಡಲ್ ಕೆರಳಿ ತೆರೆನೂಂಕಿತು—ಬೀಳಾ,
ನೀನೇ ನಿನ್ನಯ ಹಡವಿಧಿಯು! ೫

ಹೆತ್ತೊಡಲಿಗೆ ನೀ ಎರಡನು ಬಗೆದೆ,
ಒಡಹುಟ್ಟಿದವರ ತುತ್ತನೆ ತೆಗೆದೆ—
ತಿನುವನ್ನವೆ ತಿನ್ನಲು ಬಂತು!
ಗಿಲೆನೆ ಹತ್ಯಾಕಾಂಡದ ಕುಂಡ—
ಹಾ ಸ್ವಾಹಾ ಈ ನರಪಿಂಡ!—
ಆದಿಯಲೇ ಅಂತವೆ ಇಂತು? ೬

ವಿಜ್ಞಾನವೊ ಅದು ಯಕ್ಷನ ಕಣ್ಣು:
ವಿಶ್ವವೆ ತೆರೆವುದು ತನ್ನೆದೆಯನ್ನು
ಹರುಹಿತು ಆಮೊ ಹಿಗ್ಗಿನ ಹಾದಿ!
ರಕ್ಷಣಕಲ್ಲದೆ ಭಕ್ಷಣಕೆನಲು,
ಮುಕ್ಕಣ್ಣನ ಕಣ್ಣಿನ ಉರಿಹೊನಲು
ಹರಿಯಿತಲಾ!—ನೀ ಹಿಡಿಬೂದಿ! ೭

ನೀ ಬಗೆದರೆ ಮಣ್ಣೇ ಹೂ ಹಣ್ಣು
ನೆಲದಲಿ ನಾಕವೆ ತೆರೆವುದು ಕಣ್ಣು:
ವಿಶ್ವಕರ್ಮನೋ ನೀ ಮನುಜಾ!
ಇದನೇಕೋ ನೀ ಮರೆದೆ, ತೊರೆದೆ—
ಕೊಲೆ ತಲೆಗೇರಿರೆ ಸಾವನೆ ಕರೆದೆ—
ತಗುಲಿತೆ ಆತ್ಮಾಹುತಿಯ ರುಜಾ? ೮

ನಿನ್ನಾಳವ ನೀ ಧುಮುಕಿ ಅಳೆದೆಯಾ?
ನಿನ್ನೆತ್ತರಕೂ ಎದ್ದು ಬೆಳೆದೆಯಾ?
ಸಿಲುಕಿತೆ ನಿಲುಕಿಗೆ ನಿನ್ನಗಲ?
ಎಂತಹ ಭವ್ಯ ಸ್ವರೂಪನೊ ನೀನು
ತೋರೋ ನಿನ್ನ ವಿಭವ-ವಿಲಸವನು
ಕಾದಿಹ ಜಗ ಕಾಣಲಿ ದಿಗಿಲ! ೯

ಯುಗಯುಗಗಳು ತಪಿಸಿದುವೋ ಪಡೆಯಲು ನಿನ್ನಾ—
ಹುಸಿಯೇ ಭೂಮಿಯ ಬಸಿರಿನ ಬಯಕೆಯ ಬನ್ನಾ?
ಜಗದಾಸೆಗಳೋ ಕುಳಿತಿವೆ ನಿನ್ನನೆ ನಂಬಿ—
ಎಂದಿಗೆ ಆ ಅಮೃತೋದಯ ಬಗೆಬಾನ್ ತುಂಬಿ?
ಬರಿ-ನೆನಹಿನ ಬಳುವಳಿ ಬಿಡುವರೆ ಈ ಧರೆಗೆ?
ಏಳ್, ನಡೆ, ಓಗೊಡು ಕಾದಿಹ ಕಾಲದ ಕರೆಗೆ!
ಕಾದಿಹ ಕಾಲದ ಕರೆಗೆ! ೧೦

ಶಿಕ್ಷಣದಲ್ಲಿ ಕ್ರಾಂತಿ

ಲೇಖಾಂಕ ೨

ನಯೀ ತಾಲೀಮಿನ ಪರಿಚಯ

ಶ್ರೀ. ಕರ್ನಮಡಕಲ ರಾಧಾಕೃಷ್ಣ, ಸೇವಾಗ್ರಾಮ.

ಇಂದಿನ ಶಿಕ್ಷಣವನ್ನು ಗುಲಾಮೀ ಶಿಕ್ಷಣವೆಂದದ್ದಾಯಿತು; ಅಷ್ಟೇ ಸಾಕೆ? ಈ ಶಿಕ್ಷಣ ನಮ್ಮ್ಯ ಹುಡುಗರಿಗೆ ತಕ್ಕುದಲ್ಲ—ಎಂದು ಸ್ಥಾಪಿಸಿದ್ದಾಯಿತು. ಸಾಮ್ರಾಜ್ಯದ ನೆಲಲಲ್ಲಿ ಬಾಳಿದಷ್ಟು ದಿನ ಕೀರಿತು! ಸ್ವಾತಂತ್ರ್ಯದ ಹೊಸಿಲಲ್ಲಿರುವ ನಮಗೆ, ನಮಗೆ ಯೋಗ್ಯವಾದ ಶಿಕ್ಷಣ ಬೇಡವೇ? ಬಡ ದೇಶ ನಮ್ಮದು. ನೂರರಲ್ಲಿ ಇಬ್ಬರು ಹೊಟ್ಟೆತುಂಬ ಅನ್ನ, ಮೈತುಂಬ ಬಟ್ಟೆ ಕಂಡಿದ್ದಾರು. ಸಮಾಜದಲ್ಲಿ ಹೇಳಲಾರದಷ್ಟು ವಿಪರೀತ ಬಂದಿದೆ. ಈ ೨೦೦ ವರ್ಷದ ಅಂಧಕಾರ, ಅದರ ಹಿಂದಿದ್ದ ಸೋಮಾರಿತನದಲ್ಲಿ—ನಮ್ಮ ನೀತಿ, ನೀತಿ, ಧರ್ಮಗಳಲ್ಲಿ—ಅನ್ಯಾಯ, ಅಂಧಕಾರ, ಅಸಹನೆ ತುಂಬಿ ಒಂದಿದೆ.

ನಮಗೆ ಇಂದು ಬೇಕಾದುದು ಬರಿಯ ಅಕ್ಷರಜ್ಞಾನವಲ್ಲ. ಇಂದಿನ ಶಿಕ್ಷಣದಲ್ಲಿ ಇಂಗ್ಲೀಷನ್ನು ಕಿತ್ತು, ಹಿಂದುಸ್ತಾನಿಯನ್ನು ತುಂಬಿದರೆ ಆಗುವುದಲ್ಲ—ಭಾರತೀಯ ಶಿಕ್ಷಣ. ನಮ್ಮ ನವಸಮಾಜಕ್ಕೆ ಹೊಸ ಬಣ್ಣ, ಹೊಸ ನೀತಿ ಬರಬೇಕು. ನಿಜವಾದ ಧರ್ಮದ ಪುನರುದ್ಘಾಟನೆಯಾಗಬೇಕು. ಶಿಕ್ಷಣಬೇಕು ಜೀವನಕ್ಕೆ! ಶಿಕ್ಷಣ ಬೇಕು ಹೊಸ ಸಮಾಜದ ನಿರ್ಮಾಪನಕ್ಕೆ! ಇಂದಿನ ಶಿಕ್ಷಿತ ನಿಗೂ ಅಶಿಕ್ಷಿತನಿಗೂ ಬಹಳ ವ್ಯತ್ಯಾಸವಿಹೆಯೇನು? ಜೀವನಕ್ಕೆ ಬೇಕಾದುದು ಬರಿಯ ವಿದ್ಯೆಯಲ್ಲ, ವಿವೇಕ! ನೂರು ಶಾಸ್ತ್ರಗಳನ್ನೋದಿ, ವೇದ, ವ್ಯಾಕರಣದ ಪಂಡಿತರಾದರೇನು! ಜೀವನದ ಜೀವಿತ ಕಲೆ, ಬಾಳಿನಲ್ಲಿ ಬೆಳಕು ಮೂಡಿಸಲಾಗದಿದ್ದರೆ ಆ ಜೀವನ ವೇಕೆದ್ದೀತು? ಒಡಹುಟ್ಟಿದವರನ್ನೂ, ನೆರೆಹೊರೆಯವರನ್ನೂ ಪ್ರೇಮದಿಂದ, ವಿಶ್ವಾಸದಿಂದ ನಾವು ನೋಡದಿದ್ದರೆ ಅದನ್ನು ಜೀವನವೆನ್ನಬಹುದೆ? ಇಂದು ನಮಗೆ ಬೇಕು ಹೊಸ ಸಮಾಜ, ಹೊಸ ನೀತಿ; ಇದಕ್ಕಾಗಿ ಬೇಕು ಹೊಸ ಶಿಕ್ಷಣ,

* * *

'ನಯೀ ತಾಲೀಂ'ಎಂದರೆ ನೂತನ ಶಿಕ್ಷಣ ಎಂದರ್ಥ. ಗಾಂಧೀಜೀ

> ಈ ಅಜ್ಞಾನನಾಸದಲ್ಲಿ ನಯೀ ತಾಲೀಮಿನ ಬಗ್ಗೆ ಪೂರ ಪೂರ ಯೋಚಿಸಿದ್ದೇನೆ. ರಾಷ್ಟ್ರದ ಬೆಳೆವಣಿಗೆಯಲ್ಲಿ ನಯೀ ತಾಲೀಮಿನ ಉಪಯೋಗವೇನು ಎಂದು ನನ್ನೊಡನೆ, ಇತರರೊಡನೆ ಚರ್ಚಿಸಿದ್ದೇನೆ.
>
> ಇಂದಿನ ಅಭಿವೃದ್ಧಿಯಿಂದ ನಾವು ತೃಪ್ತಿಗೊಂಡರೆ ತೀರುವುದಿಲ್ಲ. ಬರಿಯ ಮಕ್ಕಳೊಡನೆ ಇದ್ದರೆ ತೀರಿದ್ದಲ್ಲ; ಮಕ್ಕಳಿಂದ ಮನೆಗೆ ಪ್ರವೇಶ ಮಾಡಬೇಕು. ಹಿರಿಯರೆಲ್ಲರ ಶಿಕ್ಷಣವಾಗಬೇಕು. ಮೂಲ-ಶಿಕ್ಷಣ ನಿಜವಾಗಿಯೂ ಜೀವನ, ಶಿಕ್ಷಣವಾಗಬೇಕು.
>
> ಇಷ್ಟೇ ಅಲ್ಲ. ಮಕ್ಕಳ ಶಿಕ್ಷಣಕ್ಕೆಂದು ೭ ವರ್ಷ ತುಂಬುವವರೆಗೂ ಕಾಯಬೇಕಾಗಿಲ್ಲ. ಹುಟ್ಟಿದೊಡನೆ ಆರಂಭವಾಗಬೇಕು. ನಾನು ಇನ್ನೊಂದು ಹೆಜ್ಜೆ ಮುಂದೆ ಹೋದೇನು! ಶಿಕ್ಷಣದ ಕಾರ್ಯಕ್ರಮ ನುಗುಸಿನ ಜನನಕ್ಕಿಂತಾ ಮೊದಲೇ ಆರಂಭವಾಗಬೇಕು.
>
> ಶಿಕ್ಷಣ ಎಲ್ಲರಿಗೂ, ಎಲ್ಲ ಕಾಲಕ್ಕೂ ಆಗಬೇಕು. [1]ನಯೀ ತಾಲೀಮಿನ ಶಿಕ್ಷಕ ವಿಶ್ವಮಿತ್ರ, ವಿಶ್ವ ಶಿಕ್ಷಕ."
>
> —ಬಾಪು (ಆಗಾಖಾನ್ ಅರಮನೆಯಿಂದ ಬಂದೊಡನೆ.)

ಅನ್ನವಸ್ತ್ರಗಳಿಗೆ ಕೊರತೆಯಿಲ್ಲದ ಸಮಾಜದಲ್ಲಿ ಹುಟ್ಟಿ ಬೆಳೆದ ಮಕ್ಕಳಿಗೆ ಬಾಳಿನಲ್ಲಿ ಬೆಳಕು ಮೂಡಿಸಲಾಗದಿದ್ದರೆ ಆ ಜೀವನ ವೇಕೆದ್ದೀತು? ಒಡಹುಟ್ಟಿದವರನ್ನೂ, ನೆರೆಹೊರೆಯವರನ್ನೂ ಪ್ರೇಮದಿಂದ, ವಿಶ್ವಾಸದಿಂದ ನಾವು ನೋಡದಿದ್ದರೆ ಅದನ್ನು ಜೀವನವೆನ್ನಬಹುದೆ? ಇಂದು ನಮಗೆ ಬೇಕು ಹೊಸ ಸಮಾಜ, ಹೊಸ ನೀತಿ; ಇದಕ್ಕಾಗಿ ಬೇಕು ಹೊಸ ಶಿಕ್ಷಣ,

ಇಂದಿನ ಶಿಕ್ಷಣದ ಪದ್ಧತಿಗಳೇನು ಸಾಮಿರಾರಿವೆ! ಆದರೆ ಜೀವನಕ್ಕೆ ಹೊಂದಿಕೊಂಡು, ನಮಗೆಲ್ಲ ಬೇಕಾದ ಹೊಸ ಸಂಸ್ಕೃತಿ, ನಮ್ಮಾಸೆಯಾದ ನೂತನ ಸಮಾಜ ರೂಪಿಗೆ ಬರಬೇಕಾದರೆ ಬರೆ ಶಿಕ್ಷಣ ಸಾಲದು: ಆ ಶಿಕ್ಷಣಕ್ಕೆ ಹೊಂದಿಕೊಂಡು ಅದರೊಡನೆ ಬೆರೆತು ಬಂದ ಹೊಸ ನೋಟ, ನೂತನ ದೃಷ್ಟಿ, ನವಜೀವನ ಬೇಕು. ನೂತನ ಶಿಕ್ಷಣವೆಂದರೆ ಜೀವನ ಶಿಕ್ಷಣ—ಎಂದಂತೆ.

ಶಿಕ್ಷಣ ಬಾಳಿನ ಸಾವು, ನೋವು, ಏನೋದ, ವಿಪರೀತಗಳಿಂದ

ಹೊರಗಿರಲಾಗದು. ಬಾಳಿನ ನಾಟಕದಲ್ಲಿ ಬರುವ ಅನಂತ ದೃಶ್ಯಗಳೂ ಶಿಕ್ಷಣದಲ್ಲಿ ಒಂದಲ್ಲ ಒಂದು ರೂಪಿನಲ್ಲಿ ಬಂದಾವು. ಜೀವನ ಬೇರೆ ಶಿಕ್ಷಣ ಬೇರೆ—ಹೇಗೆ ಮಾಡಲು ಸಾಧ್ಯ? ಇಂದಿನ ಯುದ್ಧ, ಇಂದಿನ ರಕ್ತಕಾಂಡ ನಮ್ಮ ಶಿಕ್ಷಣದಿಂದ ಆದುವೇ ಅಲ್ಲವೇ? ಮುಂದಿನ ಸಮಾಜ ಈ ದುರ್ಘಟನೆ, ಅವಸ್ಥೆಯಿಂದ ಪಾರಾಗಬೇಕಾದರೆ, ಶಿಕ್ಷಣದ ನೋಟ ಬದಲಾಗಬೇಕು.

'ನಯೀ ತಾಲೀಂ' ಬರೆ ಶಿಕ್ಷಣ ಪದ್ಧತಿಯಲ್ಲ; ಇದೊಂದು ಜೀವನದ ರೀತಿ, ನೀತಿ. ಹೊಸ ಪಾಠ್ಯಕ್ರಮವಲ್ಲ ಇದು; ಜೀವನಕ್ಕೆ ಹೊಸ ಬೆಲೆ. ಬರಿಯ ದಾರ ತೆಗೆಯುವುದು, ನೇಯುವುದನ್ನು ಸೇರಿಸಿದರೆ ತೀರುವುದಿಲ್ಲ. ಇದು ಹೊಸ ಸಮಾಜದ ಹೊಸ ಜೀವನದ ಬೇಕೆಂಬ ಸಂಕಲ್ಪ, ಇಂದಿನ ಸರ್ಕಾರ ತನ್ನ ಆರ್ಥಿಕಸ್ಥಿತಿಯಲ್ಲಿ ಶಿಕ್ಷಣವನ್ನು ಸರ್ವಸಾಮಾನ್ಯಮಾಡಲಾರದೆಂಬ ನೋವು, ಇಂದಿನ ಶಿಕ್ಷಣಪದ್ಧತಿಯಲ್ಲಿ ತುಂಬಿ ಬಂದ ತಪ್ಪು, ವ್ಯಯ. ಕಾಲಹರಣ—ಇವೆಲ್ಲ ನೋಡಿ ಗಾಂಧೀಜಿ ಎರಡು ಸಿದ್ಧಾಂತ ದೇಶದ ಮುಂದೆ ಇಟ್ಟರು. ಉಡ್ ಮತ್ತು ಅಬಟ್ ವರದಿ ನೋಡಿ ಬರೆದುದಲ್ಲ; ಖಾದಿಯನ್ನು ಯಾವ ರೀತಿಯಿಂದಾದರೂ ಪ್ರಚುರಿಸಬೇಕೆಂಬ ಹುಚ್ಚಿನಿಂದಲ್ಲ. ತನ್ನ ಅನುಭವಕ್ಕೆ ತೋರಿದಂತೆ ಮೂಡಿಬಂದುದು. ಇದೇ ಆ ಸಿದ್ಧಾಂತ:

"ಶಿಕ್ಷಣವೆಂದರೆ ಅಕ್ಷರಜ್ಞಾನವಲ್ಲ; ಪುಸ್ತಕಪರಿಚಯವಲ್ಲ. ಮಕ್ಕಳ ವಿಕಾಸಕ್ಕೆ, ಬೆಳವಣಿಗೆಗೆ– ದೈಹಿಕ, ಮಾನಸಿಕ, ನೈತಿಕ,

ಇಂದಿನವರೆಗೆ ನಾವೆಲ್ಲ ಸಂಕ್ಷಿಪ್ತ ಸಮುದ್ರದಲ್ಲಿದ್ದೆವು. ನಮ್ಮ ಕೆಲಸ ಪೂರ್ಣವಾಗಿ ಗೋಚರವಾಗಿದ್ದಿಲ್ಲ. ಇಂದು ಈ ಸಮುದ್ರದಿಂದ ವಿಶಾಲ ಮಹಾಸಾಗರಕ್ಕೆ ನಮ್ಮ ಕಾರ್ಯ ಕೊಂಡೊಯ್ಯುತಿದೆ. ಈ ಅಂತರಾಳದಲ್ಲಿ, ಈ ವಿಶ್ವಸಾಗರದ ನಡುವೆ ಗ್ರಾಮೋದ್ಯೋಗವೇ ನಮ್ಮ ಧ್ರುವತಾರೆ. ಕೈಗಾರಿಕೆಯೇ ನಮ್ಮ ಚುಕ್ಕಾಣಿ. ಶಿಕ್ಷಣ ಇಂದು ೭ ರಿಂದ ೧೪ ರವರೆಗೆ ಮಾತ್ರವೇ ಅಲ್ಲ ಇಂದು ನಯೀ ತಾಲೀಮಿನ ಸಾಮ್ರಾಜ್ಯ. ಹುಟ್ಟಿನಿಂದ ಕೊನೆಯುವರೆಗೆ. ಕೆಲಸ ವಿಪರೀತವಾಗಿ ಹೆಚ್ಚಿದೆ; ಆದರೆ ಕೆಲಸಗಾರರೇನೋ ಮೊದಲಿನಷ್ಟೆ!

ನಯೀ ತಾಲೀಮಿನ ಕೆಲಸ ಹಣದಿಂದ ನಿರ್ಭರ. ಬೇಕಾದ ಹಣವೆಲ್ಲ. ಬೇಕಾದಂತೆಲ್ಲ, ಶಿಕ್ಷಣಕಾರ್ಯಕ್ರಮದಿಂದಲೇ ಉತ್ಪನ್ನವಾಗಬೇಕು. ಯಾರು ಏನೇ ಹೇಳಲಿ. ಇಷ್ಟು ಮಾತ್ರ ನನಗೆ ಗೊತ್ತು: ನಿಜವಾದ ಶಿಕ್ಷಣ ಸ್ವಾವಲಂಬಿಯಾಗಿರಬೇಕು. ಹೀಗೆಂದರೆ ಹೊಸದಾಗಿ ಕಂಡೀತು! ಕ್ರಾಂತಿಕಾರಿಯಾಗಿದ್ದೀತು! ಆದರೆ ನಾನು ಧೈರ್ಯವಾಗಿ ಹೇಳುತ್ತೇನೆ. ಈ ತೆರನೆ ನೀವು ಕೆಲಸಮಾಡಿದ್ದಾದರೆ, ಈ ಕಾರ್ಯ ಮಾನಸಿಕ ವಿಕಾಸಕ್ಕೆ ಅತ್ಯುನ್ನತ ಎಂದು ತೋರಿಸಿದರೆ, ಇಂದು ನಮ್ಮನ್ನು ಕಂಡು ಅಪಹೇಳನ ಮಾಡುವವರು, ನಾಳೆ ನಮ್ಮೊಡನೆ ಬಂದಾರು. ನಯೀತಾಲೀಂ ಸರ್ವಸಾಮಾನ್ಯವಾದೀತು. ೭ ಲಕ್ಷ ಗ್ರಾಮಗಳು ಇದು ನಾಚಿಕೆಗೇಡಿನ ವಿಷಯ; ನೆನೆಸಿ ಅವಮಾನದಿಂದ ತಲೆ ತಗ್ಗಿಸಿದ್ದೇವೆ. ಆದರೆ ಅದೇ ೭ ಲಕ್ಷ ನಮ್ಮ ಸಂಪತ್ತು, ಸಿರಿ. ಈ ಸಿರಿ ಹೊರಗಿನಿಂದ ಬರಬೇಕೆಂದರೆ ಬರಿಕನಸು; ಸಿರಿ ಒಳಗಿನಿಂದ ಉತ್ಪನ್ನವಾಗಬೇಕು. ಅದೇ ನಯೀ ತಾಲೀಮಿನ ಧ್ಯೇಯ; ಅದಕ್ಕಿಂತ ಕಡಿಮೆ ಒಪ್ಪಲಾರೆ. ಸತ್ಯ-ಪ್ರತೀಕ, ಈಶ್ವರ. ಅತನ ಬೆಂಬಲದಿಂದ ಈ ಸತ್ಯಧ್ಯೇಯ ಸ್ಥಾಪಿಸಲು ಪ್ರಯತ್ನಿಸುವ—

—ಗಾಂಧೀಜಿ. (ಜನವರಿ ೧೯೪೫ರಲ್ಲಿ ಸೇವಾಗ್ರಾಮದಲ್ಲಿ, ರಾಷ್ಟ್ರೀಯ ಶಿಕ್ಷಣ ಸಮ್ಮೇಳನದ ಉದ್ಘಾಟನೆ ನೆರವೇರಿಸುತ್ತ)

ಕಯ್ಯಾರಿ. ಶಿಕ್ಷಕ, ಶಿಕ್ಷಿತರೆಲ್ಲ ಸಾಮೂಹಿಕ ಜೀವನದಲ್ಲಿ ಬೆರೆತು ಸಹಕಾರಸಮಾಜ ತಂದು ನಡೆಸಬೇಕು. ಹೊಸ ಪಾಠ್ಯಕ್ರಮವೆಂದು ತಿಳಿದವರು ನೋಸಹೋದಾರು. ಇದು ಹೊಸ ಸಮಾಜದ ತಯ್ಯಾರಿಗೆ, ಹೊಸ ನೀತಿ-ಧರ್ಮಸ್ಥಾಪನೆಗೆ— ಬಾಳಬೆಳಕಿಗೆ— ಬಾಳಿನಿಂದ ಬಾಳಿಗೇ—

೧೯೩೭ ರಲ್ಲಿ ಗಾಂಧೀಜೀ 'ಹರಿಜನ'ದಲ್ಲಿ ಶಿಕ್ಷಣದ ಬಗ್ಗೆ ಲೇಖನಾಂಕ ಬರೆಯಲಾರಂಭಿಸಿದರು. ಪಾಶ್ಚಿಮಾತ್ಯ ಪದ್ಧತಿಗಳನ್ನೆಲ್ಲ ಶೋಧಿಸಿ, ಶಿಕ್ಷಣಶಾಸ್ತ್ರದ ಬಗ್ಗೆ ವಿಪುಲವಾಗಿ ಪರೀಕ್ಷಿಸಿ, ಈ ಸಿದ್ಧಾಂತಕ್ಕೆ ಬರಲಿಲ್ಲ. ದೇಶದಲ್ಲಿ ತುಂಬಿದ ಅಜ್ಞಾನ, ಅಂಧಕಾರ, ನೋವು, ಸಾವು—ಈ ಕೊಳೆಯನ್ನೆಲ್ಲ ತೊಳೆಯಲು ಆಧ್ಯಾತ್ಮಿಕ— ಪೂರ್ಣ ಬೆಳವಣಿಗೆಗೆ ಅವರ ಸರ್ವಾಂಗಗಳೂ ಸಮನ್ವಯವಾಗಿ ಬೆಳೆಯಬೇಕು. ಅಕ್ಷರ, ಶಿಕ್ಷಣ ಕೊಡಲು ಒಂದು ಮಾರ್ಗವಾಗಿದ್ದೀತು, ಅಷ್ಟೆ. ನಿನ್ನೆ ಮಟ್ಟಿಗೆ ಮಗುವಿನ ಶಿಕ್ಷಣ ಕೈಕೆಲಸದಿಂದ ಆರಂಭವಾಗಬೇಕು. ಶಿಕ್ಷಣದಲ್ಲಿ ಆರಂಭದಿಂದಲೇ ಉತ್ಪನ್ನಮಾಡುವ ಶಕ್ತಿ ಹುಟ್ಟಿಬರಬೇಕು. ಅಂತೇ ಪ್ರತಿ ಶಾಲೆ ಸ್ವಾವಲಂಬಿಯಾದೀತು, ಸರ್ಕಾರಿ ಶಾಲೆಯ ಉತ್ಪನ್ನ ಪದಾರ್ಥವನ್ನು ಕೊಂಡುಕೊಂಡರೆ—

ಇಂತಹ ಶಿಕ್ಷಣದಿಂದಲೇ ಮನುಷ್ಯ ಪೂರ್ಣವಿಕಾಸಹೊಂದಿದ. ಉದ್ಯೋಗ ಬರೆ ಉದ್ಯೋಗ ದೃಷ್ಟಿಯಿಂದಲ್ಲ, ಶಾಸ್ತ್ರೀಯವಾಗಿ ಕಲಿಸಬೇಕಾದೀತು. ಮಗು ಪ್ರತಿ ಕಾರ್ಯದ ಹಿಂದಿನ ತತ್ವಕ್ಕೆ ತಿಳಿದು.

೫೭ ವರ್ಷಗಳಿಂದ ಅನುಭವಪಟ್ಟ
ಕರ್ಕಿ ಮತ್ತು ಕಂಪನಿಯ
ಜ್ವರದ ಗುಳಿಗೆಗಳು.

ಬಾಟ್ಲಿಗೆ ೧-೮-೦

ಎಲ್ಲ ಬಗೆಯ ಜ್ವರಗಳ ಮೇಲೆ ದಿವ್ಯೌಷಧ!

ವಿಳಾಸ:—
ಗಜೇಂದ್ರ ರಾಮಚಂದ್ರ ಕರ್ಕಿ ಮತ್ತು ಕಂಪನಿ
ಗಿರಗಾಂವ, ಮುಂಬಯಿ.

ಜೇಕು. ಮನ್ಮನಸೆ ಮನಸಿಗೆ ಬಂದುದೆಂದು ಹೇಳುತ್ತಿಲ್ಲ ನಾನು. ಕೆಲವು ವರ್ಷಗಳ ಕಾಲ್ಯಕ್ರಮವು ಈ ತೆರನೆ ನಡೆದು, ಅದರ ಅನುಭವದಿಂದ ಹೇಳುತ್ತಿದ್ದೇನೆ."

'ಇದೆಂತಹುದಿದು! ರಾಜಕಾರಣದಲ್ಲಿ, ಜೇಲು ವಾಸದಲ್ಲಿ ಇರಬೇಕಾದ ಈ ಮನುಷ್ಯನಿಗೆ ಶಿಕ್ಷಣಶಾಸ್ತ್ರ ಏನು ಗೊತ್ತು! ಇಸಿಲ್ಲ ಬಿಯು ಹುಜ್ಜು!' ಎಂದರು ಮುಂಬಾ ಮುಂಬಾ ಶಿಕ್ಷಕರು ಶಿಕ್ಷಾವಾಕ್ಯಪಾರಂಗತರು. ಹೊಸತೆಂದರೆ ಹಿಂಜೆ ಸರಿವ ಜನ ನಾವು ಹುಟ್ಟಿನವರು. ಈತನ ಆಲಾವನಲ್ಲಿ ಏನಾದರೂ ಅಂತರ್ಯ ಇರಿಯೇ ಎಂದು ಯೋಚನಲಿಲ್ಲ ಈ ಶಿಕ್ಷಣ ಪದ್ಧತಿಯ ತರ್ಕಕ್ಕೆ ಹೋಗಲಿಲ್ಲ. 'ಶಿಕ್ಷಣದ ಬಗ್ಗೆ ತಿಳಿದವರು ನಾವು. ಈ ವಿಷಯವಾಗಿ ಮಾತನಾಡಲು ಯಾರಿಗೂ ಪಕ್ಕಿಲ್ಲ. ಶಿಕ್ಷಣ ಸ್ವಾವಲಂಬಿಯಂತೆ; ಶಿಕ್ಷಣದಲ್ಲಿ ಉದ್ಯೋಗವಂತೆ! ಎಲ್ಲ ಬರೆ ಜುಟ್ಟು '—ಎಂದರು ಪಂಡಿತರು, ಪಾಮರರು, ಪ್ರೊಫೆಸರ್—ಎಲ್ಲ.

ಗಾಂಧೀಜಿಗೆ ಅವರ ಅನುಯಾಯಿಗಳೊಳಗಾ, ಕಾಣಬರಲಿಲ್ಲ. "ನಾನು ಹೇಳುವುದು ಇವರಿಗೆ ವಿಪರೀತವಾಗಿ ಕಂಡಿದೆ! ಅವರ ಮಾತು ಮಿಟ್ಟು ಬೇರೆಯಾಗಿ ಆವುದೇನು ಗೊತ್ತು? " ಅವರು ಹಿಡಿದ ಹೊಲಕ್ಕೆ ಮುನ್ನಡೆಯಲು!

ಗಾಂಧೀಜಿಯು ಶಿಕ್ಷಣಪ್ರಯೋಗಗಳು ಇಂದಿನ ಶಿಂಪರ್ಯಗಳ ಹಿಂದೆ ಆರಂಭವಾದವು. ಪಟ್ಟಣಪಳ್ಳಿಕೆಯಲ್ಲಿ ನಮಯ ಸಿಕ್ಕಿದಂತೆಲ್ಲ 'ಬೆಟಲ್‌ಮೆಂಟ್'ನ ಮಕ್ಕಳಿಂದನೆ ಸ್ವಯಂಪಾಗ ನಡೆದಿತ್ತು. ೧೯೩೮ರಲ್ಲೇ ಬಾಪು ಸಬರ್ಮತಿಯ ಆಶ್ರಮಶಾಲೆಗಳಲ್ಲಿ ಬಾರ ತೆಗೆಯಬೇಕೆಂದು ಕರೆಕಾಯ ನೀಡಿದ್ದರು, ಅಂತೇ ಆ ಸಮಯದಲ್ಲಿ ತೆರೆದ ಶಾಲೆಗಳಲ್ಲೆಲ್ಲಿ 'ಸಾಕ್ಷರತೆಯಜ್ಞ' ನಡೆಯಿತು. [illegible]

೧೯೩೭ರಲ್ಲಿ ಅನಾವರಣೀಯವಾಗಿದ್ದ ವರ್ಧಾಯೋಜನೆ, ಇಂದು ಗಾರವಯುತವಾಗಿದೆ. ಅಂದು ಕೆಲವೇ ಜನ ಒಪ್ಪಿದರು. ಒಂದು ವರ್ಷದಲ್ಲಿ ಶಿಕ್ಷಣಶಾಸ್ತ್ರಜ್ಞರೂ ತಮ್ಮ ಒಪ್ಪಿಗೆಯನ್ನಿತ್ತರು. ನಾಡಿನ ಮುಖ್ಯ ನಾಳ—ಕಾಂಗ್ರೆಸು—ಸೆರೆಯಲ್ಲಿದ್ದಾಗ, ಭಾರತ ಸರ್ಕಾರ ವರ್ಧಾಯೋಜನೆಯನ್ನು ಪರಿಶೀಲಿಸಿ, ಅಂಗೀಕರಿಸಿ, ಆಶೀರ್ವದಿಸಿತು ಇಷ್ಟೇ ಅಲ್ಲ, ಇದನ್ನು ಜಾರಿಗೆ ತರಬೇಕೆಂದು ಒಪ್ಪಿಕೊಂಡಿತು. ಆದರೆ ಈ ಶಿಕ್ಷಣದ ಸ್ವಾವಲಂಬನದ ಬಗ್ಗೆ ಅವರ ಮನಸ್ಸು ಹಿಂಜರಿಯಿತು. ಬಾಲಕರನ್ನು ಕೂಲಿಗಾರರನ್ನಾಗಿ ಮಾಡಬಾರದೆಂಬ ಯೊಸ ಗಾಳಿ ಹುಟ್ಟಿಕೊಂಡಿತು. ಹರಿಪುರ ಕಾಂಗ್ರೆಸ್ಸಿನಲ್ಲಿ ವರ್ಧಾಶಿಕ್ಷಣವನ್ನು ಸರ್ವಸಮ್ಮತ ಮಾಡಿ ರಾಷ್ಟ್ರೀಯ ಶಿಕ್ಷಣವಾಗಬೇಕೆಂದು ನೂಚಿಸುವ ನಿರ್ಣಯ ಮಾಡುತ್ತಾ, ಕಾಂಗ್ರೆಸ್ ಸಾಮ್ಯವಾದಿ ಆಚಾರ್ಯ ನರೇಂದ್ರ ದೇವರೇ ನಯೀ ತಾಲೀಮಿನ ತತ್ತ್ವವನ್ನಂಗೀಕರಿಸಿ, ಸ್ವಾವಲಂಬನೆಯ ಬಗ್ಗೆ ಸಂಶೋಧನೆಯನ್ನು ತಂದಿಟ್ಟರು.

ಆದರೆ ಗಾಂಧೀಜೀ ಈ ಸಂದೇಹಕ್ಕೆ ಸ್ವಲ್ಪವೂ ಅವಕಾಶ ಕೊಡರು. ಸ್ವಾವಲಂಬನ ನಯೀ ತಾಲೀಮಿನ ಮುಖ್ಯ ಸೂತ್ರ. ಅದೇ ಆ ಶಿಕ್ಷಣದ ಪರೀಕ್ಷೆ. ಉದ್ಯೋಗಕ್ಕೆ ಶಿಕ್ಷಣದಲ್ಲಿ ಸ್ಥಾನ ಕೊಟ್ಟರೆ, ಆ ಉದ್ಯೋಗದ ಉತ್ಪನ್ನ ಅನುಪಯೋಗವಾಗ ಬಾರದು; ಮಾಡಿದ ಕಾರ್ಯ ಸಂಪೂರ್ಣವಾಗಿರಬೇಕು. ಮಾಡಿದ ಕೆಲಸ ಶಾಲೆ-ಕಾಲೇಜಿನ ತೊಟ್ಟಿ (Sluice) ಯಲ್ಲಿ ಹರಿದು ಖಾಳಾಗುವ ವಿಜ್ಞಾನಪ್ರಯೋಗದ ಕೊಚ್ಚೆಯಲ್ಲ; ಕೆಲಸ ಸಮಸ್ಯೆಯಾಗಬೇಕು, ಪರಿಪೂರ್ಣವಾಗಿರಬೇಕು. ಅಂತೇ ಆ ಕೆಲಸಕ್ಕೆ ಜೆಲೆ. ಉತ್ಪನ್ನದ ಜೆಲೆಯಲ್ಲದ ಪ್ರಯೋಗವೇತಕ್ಕೆಂದು ಆದೀತು. ಕೆಲಸದಲ್ಲಿ ತಲೆ ಇದ್ದರೆ, ಕೆಲಸದಲ್ಲಿ ಪೂರ್ಣತೆ ಇರಬೇಕಾದರೆ, ಆ ಕೆಲಸ ಉತ್ಪನ್ನಕಾಯಕವಾಗಿಬೇಕು. ಮೊದಲೇ ವ್ಯರ್ಥವಾಗಿ ವ್ಯಯಮಾಡುವ ಮಂದಿ ನಾವು, ಕಾಲವಾಗಲಿ, ಶಕ್ತಿಯಾಗಲಿ, ಧನವಾಗಲಿ—ಹರಣವಾಗಬಾರದು. ವ್ಯಯಮಾಡ ಬಾರದ —ಎಂಬ ವಿಳಪಳಕೆ ನಮ್ಮ ನಾಡಿನಲ್ಲೇ ಕಡಿಮೆ. ವ್ಯರ್ಥ, ಅವ್ಯವಸ್ಥೆ—ಇವೆಲ್ಲ ನಮ್ಮ ಪೆಗ್ಗುರುತು ನಮ್ಮ ನಾಡಿನ ಜೀವನ ಹಾಳಾಗುತ್ತಲಿದೆ. ಇಂತಹ ಸಮಯದಲ್ಲೂ ನಾವು ಅನಾವಶ್ಯಕ ವ್ಯಯ ಮಾಡಿದರೆ, ನಾಡಿನ ಐಶ್ವರ್ಯ ಹಾಳುಮಾಡಿದಂತಲ್ಲವೇ! ಗುರಿ ಇಲ್ಲದ ಉದ್ಯೋಗ, ಪೂರ್ಣವಲ್ಲದ ಕೆಲಸ, ಅನಾವಶ್ಯಕ ದುಂದುಗಾರಿಕೆಯೊಂದೇ ಅಲ್ಲ; ಅಂತಹ ಕೆಲಸದಲ್ಲಿ ಏನು ಶಿಕ್ಷಣ ಬಂದೀತು?

ಇಷ್ಟೆಲ್ಲ ಎಂದರೆ ನಾಕು! ನಾವಿರಾರು ಪ್ರಶ್ನೆ ಹುಟ್ಟಿ ಬರುತ್ತವೆ! ಪ್ರಯೋಗ ನಡೆದೆ, ಮನಸಿನಲ್ಲೇ ಮೆಲಕು ಹಾಕಿ, ಅಂತೇ ಕೊಯ್ದು ಪ್ರಶ್ನೆಗಳು ಅಶೇಕಷ್ಟು. ಪ್ರಶ್ನೆಯ ಜೆಲೆ ಏನೇ ಇರಲಿ, ಉತ್ತರ ಕೊಡದಿದ್ದರೆ ಶಿಕ್ಷಣಪಂಡಿತರ ಆಶೀರ್ವಾದ ದೊರಕುವುದಿಲ್ಲ. ಮುಂದಿನ ಲೇಖನಾಂಕದಲ್ಲಿ ನಯೀ ತಾಲೀಮಿನ ವಿವಿಧ ವಿಷಯಗಳು, ವಿವಿಧ ಅಂಗ, ಅದರ ತೊಡಕು, ಒಡಕು ಒಗ್ಗೆ ಚರ್ಚಿಸುವ.

ಜಯಂತಿ

ಅಳಬೇಕೋ, ನಗಬೇಕೋ?

(ಒಂದು ಜೀವನಚಿತ್ರ)

ಶ್ರೀ. ಅನಂತ ಕೃಷ್ಣ ಕುಲಕರ್ಣಿ ಬಿ ಎ. (ಆನರ್ಸ್), ಪುಣೆ.



ಪಟ್ಟಣಗಳಲ್ಲಿ ಮನೆ ಹುಡುಕುವವರಿಗೆ ಇದರಲ್ಲಿಯ ಮಾತುಗಳು ಕ್ಷಣಕ್ಷಣಕ್ಕೂ ಅನುಭವಕ್ಕೆ ಬರುತ್ತವೆ 'ಮನೆಗೆದ್ದು ಮಾರುಗೆಲ್ಲು' ಎಂಬ ಗಾದೆಯನ್ನು 'ಮನೆ ಬೊರಕಿಸಿ ಮನೆಯಾಕೆಯನ್ನು ಪಡೆ' ಎಂದು ತಿದ್ದಿಕೊಳ್ಳಬೇಕಾಗಿದೆ ಇಂದು.

ನನಗೆ ಬೆಳಗಾಂವಿಯಿಂದ ಪುಣೆಗೆ ವರ್ಗವಾದುದರಿಂದ, ನಾನು ಇಲ್ಲಿಗೆ ಎಂದರೆ ಪುಣೆಗೆ ಬಂದು ಈಗ ಕೆಲವು ದಿವಸಗಳಾದುವು. ಇಲ್ಲಿಗೆ ಬರುವ ಮುನ್ನ ಇಲ್ಲಿಯ ಜಾದಿಗೆಮನೆಗಳ ಪರಿಸ್ಥಿತಿಯ ಬಗ್ಗೆ ನನ್ನ ಸ್ನೇಹಿತರು ನನಗೆ ಸತ್ಕಾಮೂಲಕ ತಿಳಿಸಿದ್ದರು. ಅದರಿಂದ ಹಿಂದೆ ಒಂದೆರಡು ವರ್ಷ ಇಲ್ಲಿಯೆ ಇದ್ದವನಾದ ನನಗೆ, ಇಲ್ಲಿ ಮನೆ ಹುಡುಕುವುದು ಅಷ್ಟೊಂದು ಕಠಿಣ ಸಂಗತಿಯಾಗಲಿಕ್ಕಿಲ್ಲ ಎನಿಸಿತು. ನಾನು ಇಲ್ಲಿಗೆ ಬಂದಂದಿನಿಂದ ಇಲ್ಲಿಯವರೆಗೆ ನನ್ನ ಸ್ನೇಹಿತರೊಬ್ಬರಲ್ಲಿ ಉಳಿದುಕೊಂಡಿರುವೆನು. ಮನೆಯವರು ಬೆಳಗಾಂವಿಯಲ್ಲಿಯೆ ಇರುವರು. ಅವರನ್ನು ಇಲ್ಲಿಗೆ ಕರೆದುಕೊಂಡು ಬರಬೇಕು; ಆದರೆ ಸಲುವಾಗಿ ನನಗೊಂದು ಮನೆಯು ಬೇಕು....ಎಂಬ ಪ್ರಯತ್ನದಲ್ಲಿ ಇರುವೆನು. ಈ ಕುರಿತು ಇಲ್ಲಿಗೆ ಬರುವ ಮುನ್ನ ನನಗೆ ಇದ್ದ ಆಶೆಯು ನಿರಾಶೆಭಾವಿಯಿತು. ದಿನಾಲು ಮುಂಜಾವು ಸಂಜೆ ಮುಕ್ತ ರಿಜೆಯ ದಿವಸಗಳನ್ನೆಲ್ಲ ಈ ಪ್ರಯತ್ನದಲ್ಲಿಯೆ ಕಳೆಯುವೆನು. ಇಲ್ಲಿರುವ ನನ್ನ ಸ್ನೇಹಿತರು ಕೂಡ ಈ ವಿಷಯದಲ್ಲಿ ನನಗೆ ಪರಿಪರಿಯಿಂದ ಸಹಾಯ ಮಾಡುತ್ತಿರುವರು. ಆದರೂ ಇದುವರೆಗೆ ಏನೊಂದೂ ಸಾಧ್ಯವಾಗಿಲ್ಲ, ಇರಲಿ. ಆದರೆ, ಈ ವಿಷಯದಲ್ಲಿ ಆವರೆಗೆ ಆದ ಅನುಭವ ಮತ್ತು ನನಗೆ ಕಂಡ ನಾಲ್ಕು ಸಂಗತಿಗಳನ್ನು ಇಲ್ಲಿ ತಿಳಿಸಬಯಸುತ್ತೇನೆ. ಸಂಗತಿಗಳು ಹಾಸ್ಯಾಸ್ಪದವಾದರೂ ಯೋಗ್ಯ ವಿಚಾರ ಮಾಡಿ ನೋಡಿದಲ್ಲಿ ಈಸಿಕಾವನ್ನುಂಟು ಮಾಡುತ್ತಿವೆ— ಎಂಬುದರಲ್ಲಿ ಸಂದೇಹವಿಲ್ಲ.

" ಏನ್ರಿ, ಇಲ್ಲೆ ? ಸಹಜ ಒಂದಿದ್ದೀರೇನು ? "

" ಇಲ್ರೀ, ನನಗ ಈಗ ಇಲ್ಲೇ ವರ್ಗ ಆಗೇದ."

" ಯಾಕ್ರೀ, ಈಗ್ಯಾಕ ಪುಣೇಕ್ಕ ವರ್ಗ ಮಾಡಿಸಿಕೊಂಡಿರಿ? ಅಲ್ಲೇ ಆರಾಮ ಇದ್ದಿರಲ್ಲಾ ! "

ಇದಕ್ಕೇನು ಉತ್ತರ ಹೇಳಬೇಕೆಂಬುದು ತಿಳಿಯಲಿಲ್ಲ. ಆದರೂ ಏನೋ ಹೇಳಿದೆ :

" ನೌಕರೀ ವಿಷಯರೀ; ಎಲ್ಲಿ ಕಳಿಸುವರೋ ಅಲ್ಲಿ ಹೋಗಬೇಕಲ್ಲ ! "

" ಅದೂ ಖರೇನೆಪ್ಪಾ ! ಆದರೆ ಇಲ್ಲಿ ಬಹಳ ಕಠಿಣ—ಇರಲಿಕ್ಕೆ ಜಾಗಾ ಸಿಕ್ಕದ ! ನಮಗೂ ತೀರಾ ಸ್ವಲ್ಪ ಜಾಗಾ ಸಿಕ್ಕಿದ ನೋಡ್ರಿ ! ಎಲ್ಲಿ ಇಳಕೊಂಡೀರಿ ? "

" ನನ್ನ ಸ್ನೇಹಿತರೊಬ್ಬರಲ್ಲಿ ಇದ್ದೇನೆ. ಜಾಗಾ ಹುಡುಕಲಿಕ್ಕೆ ಪ್ರಯತ್ನಿಸುವೆನು. "

" ಸಿಗೂದೇ ಇಲ್ರಿ ? "

" ಹುಡುಕಿದರೆ ಸಿಗಬಹುದಲ್ಲವೇ ? "

" ನಾನು ಒಂದು ವರ್ಷ ತಪಸ್ಸು ಮಾಡಬೇಕಾಯಿತು, ನೋಡ್ರಿ. ಮೊನ್ನೆ ಮೊನ್ನೆ ಸ್ವಲ್ಪ ಜಾಗಾ ಸಿಕ್ಕಿದ. ನೀವು ಎಲ್ಲಾದರೂ ಪತ್ತೆ ಮಡ್ರೀನು ? "

" ಇನ್ನೂ ಸಾಧ್ಯವಾಗಿಲ್ಲರೀ; ನಮಗೊಂದು ಎಲ್ಲೆರ ನೋಡ್ರೆಪ್ಪ. ಬಹಳ ಉಪಕಾರ ಆಗತದ ! "

" ಓ, ಏನೂ ಅಷ್ಟೀ ಇಲ್ಲರೀ. ಅದೂ ಬಹಳ ದಿವಸ ಬಟವಾಡಿ ಮಾಡಬೇಕಾಗತದನ ? ಇದ್ದ ಸಂಗತೀ ಬೇಕಾದೆಸಂತ ಸಿಟ್ಟಾಗಬೇಡ್ರಿ ಮತ್ತ. ನೀವು ಮೇಲಿಂದ ಮೇಲೆ ಭೆಟ್ಟಿಯಾಗುತ್ತಾ ಇರ್ರಿ. ನೋಡೋಣ ಏನಾಗುತ್ತನೋ ! "

" ನೀವು ಇರುವದೆಲ್ಲಿ ? ಈ ರವಿವಾರ ಬಿಡುವು ಮಾಡಿಕೊಂಡು ಬರುತ್ತೇನೆ ! "

" ಏನು ಮಾಡುತ್ತೀರಿ ಏಳ್ರಿ, ಯಾಕ ಅಷ್ಟು ತಕ್ರಾರ ! ನಮ್ಮ ಜಾಗಾ ದುಡ್ಡಾದರೂ ಅಷ್ಟು ಸುಲಭವಿಲ್ಲ. ಮೇಲಿಂದ ಸೂಳೆ ಇಲ್ಲೇ ಎಲ್ಲಿಯಾದರೂ ಭೆಟ್ಟಿಯಾಗೋಣ. ಬರತೇನ್ರೀ ನಮಸ್ಕಾರ ! '

ಬಹಳ ಹಳೆಯ ಸ್ನೇಹಿತನಾದ ಈತನು ತನ್ನ ಜಾಗಾದ ಪತ್ರೀ ತಿಳಿಸಿದ್ದು ಆಶ್ಚರ್ಯವಾಯಿತು. ಈತ ಹೋದ ಬಳಿಕ ಈತನ ಬಗ್ಗೆ ನನ್ನ ಜೊತೆಯಲ್ಲಿದ್ದ ಸ್ನೇಹಿತ:—"ಈತನಿಗೆ ಜಾಗಾ ಸಿಕ್ಕದ್ದು ಸುಳ್ಳು; ಪ್ರಾತಃಕಾಲ ಪ್ರಣಯಿಂದ ದೀಪೂರೋಡಿಗೆ ಕೆಲಸಕ್ಕೆಹೋಗಿ ರಾತ್ರಿ ಮರಳಿಬಂದವನು, ಯಾವುದಾದರೊಂದು ಸಿನೇಮಾ ನೋಡಿಕೊಂಡು, ತನ್ನ ಸ್ನೇಹಿತನೊಬ್ಬನ ಖೋಲಿಯ ಮುಂದಿನ ಬಾಲ್ಕನಿಯಲ್ಲಿ ಮಲಗುತ್ತಾನೆ. ಅದೇ ಅವನಿಗೆ ಸಿಕ್ಕ ಸ್ವಲ್ಪ ಜಾಗಾ! ನೊಡಲು ಎಲ್ಲಿ ಇರುತ್ತಿದ್ದನೋ ಏನೋ! ಅದುದರಿಂದಲೇ ಮನೆಯ ಪತ್ತೆ ನಿಮಗೆ ಹೇಳಲಿಲ್ಲ"—ಎಂದು ತಿಳಿಸಿದ!

* * *

ಇನ್ನೊಬ್ಬ ಸ್ನೇಹಿತ ತಾನು ಒಂದು 'ದೀಪಖೋಲಿಯ' ಜಾಗಾ ಹೇಗೆ ಹಿಡಿದನೆಂಬುದನ್ನು ಈ ಪ್ರಕಾರ ಹೇಳಿದ:

"ಮನೆ ಹುಡುಕೀ ಹುಡುಕೀ ಬೇಜಾರಾಯಿತು! 'ನಾನೊಬ್ಬನೇ ಹುಡುಕಿದರೆ ಯಾರೂ ಹಚ್ಚಿಕೊಳ್ಳಲಿಕ್ಕಿಲ್ಲ; ಹೆಂಡತಿ-ಮಕ್ಕಳನ್ನು ಜೊತೆಗೆ ಕರೆದುಕೊಂಡು ಮನೆ ಹುಡುಕಲು ಹೋದರೆ ಯಾರಾದರೂ ಕನಿಕರವೆನಿಸಿ ಮನೆ ಕೊಟ್ಟಾರು' ಅಂತ ಮನೆಯವರನ್ನು ಕರೆಯಿಸಿ, ೮-೧೦ ದಿವಸ ಪಿರೀ ಪಿರೀ ತಿರುಗಿದ್ದಾಯಿತು. ಏನೂ ಸಾಧ್ಯವಾಗಲಿಲ್ಲ. ಮನೆಯವರನ್ನು ಮರಳಿ ಕಳಿಸಿಕೊಡಬೇಕಾಯಿತು. ಮುಂದೆ ಹಾಗೇ ಪ್ರಯತ್ನ ಸಾಗಿಸಿರಲು ಒಂದು 'ಮಜಾ' ಆಯ್ತೇನ್ರಿ! ಟೆಳಕರೋಡಿನ ಮೇಲೆ ಸಾಯಂಕಾಲ ತಿರುಗಾಡಲು ಹೊರಟಿದ್ದೆ. ನನ್ನ ಮುಂಭೆಯೆ ಇಬ್ಬರು ಹೆಣ್ಣು-ಮಕ್ಕಳು ತಮ್ಮ ತಮ್ಮೊಳಗೇ ಮಾತಾಡುತ್ತ ಸಾಗಿದ್ದರು.

ಅವರಲ್ಲಿ ಒಬ್ಬಳು:—

'ನಮಗೆ ಸ್ವಲ್ಪ ದಿವಸಗಳಲ್ಲಿ ಒಂದು ಬ್ಲಾಕು ಸಿಗುತ್ತದೆ. ನಿನ್ನೆ ನಮ್ಮ ಮನೆಯವರು ಹೇಳಿದರು. ಅದು ಮುಂದಿನ ತಿಂಗಳು ಖಾಲೀ ಆಗುವುದಂತೆ—ಆಮೇಲೆ ನಾವು ಸ್ವತಂತ್ರ ಇರುವೆವು. ನೀನು ನೀಲಿಂದ ಮೇಲೆ ಈಗಿನಂತೆ ನನ್ನನ್ನು ಭೆಟ್ಟಿಯಾಗಲು ಬರುವೆಯಲ್ಲವೇ? ಸ್ವಲ್ಪ ದೂರ ಆತ್ರ ಆಗುತ್ತದೆ ನೋಡು!'

'ಎಲ್ಲಿ ಇರುವುದೇ ಅದು?'

'ನೋಡು, ಸ್ವತಂತ್ರ ನಳ, ಪಾಯಖಾನೆ, ದೀಡಬೋಲಿ—'

'ಬಹಳ ಒಳ್ಳೇದಾಯಿತು, ಎಲ್ಲಿ?'

'ನಮಗೆ ಯಾರದೂ ಹಂಗು ಬೇಡವ್ವಾ. ನಾವು ಇನ್ನು ಮುಂದೆ ಸ್ವತಂತ್ರ ಇರುವೆವು. ಬಾಡಿಗೆಯೂ ಸ್ವಲ್ಪವೆ, ೩೦ ರೂಪಾಯಿ!'

'ಹೌದವ್ವಾ ಎಲ್ಲಾ ನಿಜ, ಆದರೆ ಮನೆ ಎಲ್ಲಿ ಇರುವುದು?'

'ಫರ್‌ಗ್ಯೂಸನ್ ರೋಡಿನಲ್ಲಿ.... ನಂಬರು!'

ಮನೆಯ ನಂಬರು ಕಿವಿಯ ಮೇಲೆ ಬಿದ್ದ ಕೂಡಲೆ, ಲಕ್ಷ್ಯ ಪೂರ್ವಕವಾಗಿ ಈ ಸಂಭಾಷಣೆ ಕೇಳುತ್ತ ನಡೆದ—ನನ್ನ ಸ್ನೇಹಿತ, ಆ ಹೆಣ್ಣುಮಕ್ಕಳನ್ನು ಹಿಂಬಾಲಿಸುವುದನ್ನು ಬಿಟ್ಟು, ಮರಳಿ ಡೆಕ್ಕನ್ ಜೀಮಖಾನಾಕ್ಕೆ ಬಂದ; ಆ ನಂಬರಿನ ಬ್ಲಾಕು ಹುಡುಕಿದ. ಒಳಗೆ ಹೋಗಿ ಕೇಳಿದ:

'ಕ್ಷಮಿಸಿ, ಈ ಬ್ಲಾಕು ಖಾಲೀ ಆಗುವುದು ಅಂತ ಕೇಳಿದೆ. ನಿಜವೇ?'

'ಎಷ್ಟು ಜನರಿಗಂತ ಹೇಳಬೇಕರೀ; ಒಂದು ನಾಟೇಯನ್ನೇ ಹಚ್ಚತೇನೀ ನಾಳಿಂದ!'

'ಅಂದರೆ, ಖಾಲೀ ಆಗುವ ಸಂಗತಿ ಸುಳ್ಳು ಅಲ್ಲವೇ?'

'ಛೇ, ನಾವು ಮುಂದಿನ ತಿಂಗಳಲ್ಲಿ ಬಿಡುವವರಿದ್ದೇವೆ. ನಮಗೆ ವರ್ಗವಾಗಿದೆ. ಮಾಲಕರು....ಲ್ಲಿ ಇರುವರು. ಅವರನ್ನ ವಿಚಾರಿಸಿರಿ!'

ಮಾಲಕನ ಪತ್ತೆಯನ್ನು ದಿನಚರಿಯಲ್ಲಿ ಬರೆದುಕೊಂಡು, ಮರುದಿವಸ ಪ್ರಾತಃಕಾಲ ಅತ್ತಕಡೆಗೆ ಹೊರಟ ನನ್ನ ಸ್ನೇಹಿತ. '೩೦ ರೂ. ಬಾಡಿಗೆ' ಎಂದು ಅವನ ಕಿವಿಯ ಮೇಲೆ ಬಿದ್ದಿತ್ತು. ದೈವವಶಾತ್ ಮಾಲಕನು ಇನ್ನೂ ಮನೆಯಲ್ಲಿಯೆ ಇದ್ದನು.

'ನಮಸ್ಕಾರರೀ! ನೀವು...ಲ್ಲಿಯ ಮನೆಯ ಮಾಲಕರಲ್ಲವೇ?'

'ಹೌದು, ಏನು ಬೇಕಾಗಿತ್ತು?'

'ಇಲ್ಲ, ನನಗೆ ಒಂದು ಬ್ಲಾಕು ಬೇಕಾಗಿತ್ತು. ಅಲ್ಲಿಯ ಒಂದು ಬ್ಲಾಕು ಖಾಲೀ ಆಗುವುದದೆಯೆಂದು ನನಗೆ ವರ್ತಮಾನ ಬಂದಿದೆ. ಅದಕ್ಕೆ—ಹ, ಹ,—ವಿಚಾರಮಾಡಿಕೊಂಡು ಹೋಗ ಬೇಕೂ ಅಂತ ಬಂದಿದ್ದೆ.'

'ಕೂಡ್ರೀ, ಬ್ಲಾಕು ಖಾಲೀ ಆಗುವುದೇನೋ ನಿಜ. ಆದರೆ, ಬಹಳ ಮಂದಿ ಬ್ಯಾಂಕ್ ಹಚ್ಚಿಕೊಂಡು ನಿಂತಿದ್ದಾರೆ ನೋಡ್ರಿ. ಈಗಿನ ಕಾಲದಲ್ಲಿ ಇಲ್ಲಿ ಮನೀ ಮಾಲಕರು ಆಗಿ ಇರುವುದೇ ಬಹಳ ತ್ರಾಸ ಆಗೇದ!'

'ಛೇ ಛೇ, ಹೀಂಗ್ಯಾಕಂತೀರಿ?'

'ಏನುಮಾಡಬೇಕರೀ, ಈ ಜನರ ಉಪದ್ರವಕ್ಕೆ ನಾನೇ ಸ್ವತಃ ಅಲ್ಲಿ ಇರಬೇಕಂತ ಮಾಡೀನಿ.'

'ನೋಡ್ರಿ, ಬಹಳ ದಿವಸದಿಂದ ನಾನು ಮನೆಯ ಸಲುವಾಗಿ ಪ್ರಯತ್ನಮಾಡುತ್ತಿದ್ದೇನೆ. ನನಗೆ ದೊರಕಿಸಿಕೊಟ್ಟರೆ ಬಹಳ ಉಪಕಾರವಾಗುತ್ತದೆ.'

'ಅದೆಲ್ಲ ನಿಜ. ಏನು ಮಾಡಬೇಕು? ದಿವಸ ಬಹಳ ಕೆಟ್ಟ ಬಂದಾವರೀ!'

"ಏನೋ, ಸಿಗಬಹುದು—ನಮ್ಮ ಮನೆಯವರು ಇಲ್ಲಿಗೆ ಬರಬಹುದೂ—ಅಂತ ಬಹಳ ಆಶಾ ಇತ್ತು!"

"ನೀವೆಲ್ಲಿ ಕೆಲಸಾ ಮಾಡ್ತೀರಿ? ಪಗಾರ ಎಷ್ಟಿದೆ ನಿಮಗೆ?"

"ಏನೋ ತಕ್ಕಮಟ್ಟಿಗೆ ಇದೆ. ಯಾಕೆ?"

"ಇಲ್ಲ—ನೀವು ಬಾಡಿಗೆ ಎಷ್ಟರ ತನಕ ಕೊಡುವಿರೀ ಅಂತ."

೩೦ ರೂಪಾಯಿಗಿಂತ ಹೆಚ್ಚು ಹೋದರೇನೇ ಮನೆಯು ಸಿಗಬಹುದೆಂದು ನನ್ನ ಸ್ನೇಹಿತ ಧಕ್ಕನೆ:

"೪೦ ರೂಪಾಯಿ ತನಕ ಕೊಡಬಹುದು!" ಎಂದ.

ನಿನ್ನೆಯ ದಿವಸವೇ ೩೦ ರೂ. ಗೆ ಹೊಂದಿಸಿಕೊಂಡ ಮಾಲಕ, ೧೦ ರೂ. ಹೆಚ್ಚು ಬರುವುದನ್ನು ನೋಡಿ, ಸ್ವಲ್ಪ ತಡೆದು ನುಡಿದ:

"೪೦ ರೂ. ನನಗೆ ಈಗ ಸಿಗತಾವಽ?"

"ಹಾಗಾದರೆ, ಇನ್ನೊಂದು ೫ ರೂ. ತೆಗೆದುಕೊಳ್ಳಿರಿ. ಹೇಗಾದರೂ ಮಾಡಿ ನನ್ನ ಹೆಸರು ರಜಿಸ್ಟರ್ ಮಾಡಿರಿ, ತೆಗೆದು ಕೊಳ್ಳಿರಿ ೪೫ ರೂ. ಮತ್ತು ಅವರು ಬಿಟ್ಟ ಕೂಡಲೆ ನನಗೆ ತಿಳಿಸಿರಿ! ಇಗೋ ನನ್ನ ಅಡ್ರೆಸ್ಸು ಇಲ್ಲಿದೆ!"

ಮಾಲಕ ರೂಪಾಯಿ ತೆಗೆದುಕೊಂಡ — ಇದ್ದವರು ಬಿಟ್ಟ ಕೂಡಲೆ ನನ್ನ ಸ್ನೇಹಿತನಿಗೆ ಬ್ಲಾಕು ಸಿಕ್ಕಿತು. ಟೆಳಕ ರೋಡಿನಲ್ಲಿ ಸಿಕ್ಕ ಸುದ್ದಿಯ ಲಾಭವನ್ನು ಪಡೆದು ಸುದ್ದಿಯನ್ನು ಕೊಟ್ಟ ಹೆಣ್ಣು ಮಗಳ ಸವಿಗನಸನ್ನು ಕಾಳುಮಾಡಿದ.

* * *

ಮತ್ತೊಬ್ಬ ಸ್ನೇಹಿತ ತನ್ನ ಅನುಭವವನ್ನು ಈ ರೀತಿ ಹೇಳಿದ:

"ಒಂದು ಬ್ಲಾಕು ಖಾಲೀ ಆಗುವ ವರ್ತಮಾನ ನನಗೆ ಸಿಕ್ಕಿತು. ಮಾಲಕನನ್ನು ಭೆಟ್ಟಿಯಾಗಲು ಹೋದೆ. ನಾನು ಹೋದಾಗ ಮತ್ತೊಬ್ಬ ಅದೇ ಮನೆಯ ಸಲುವಾಗಿ ಬಂದಿದ್ದ. ಅವನ ಡ್ರೆಸ್ಸು ನೋಡಲಾಗಿ ಅವನು ದೊಡ್ಡ ಪಗಾರದವನಿರಬಹುದು ಎಂದು ಎನಿಸಿತು. ಮಾಲಕನು ಮನೆಯು ಖಾಲೀ ಇರುವುದನ್ನು ಒಪ್ಪಿದ. ಆಮೇಲೆ 'ಬಾಡಿಗೆ ಎಷ್ಟು ಕೊಡಬಹುದು?' ಎಂದು ನನ್ನನ್ನು ಮತ್ತು ನನ್ನ ಜೊತೆಗೆ ಬಂದವನನ್ನು ವಿಚಾರಿಸಿದ. ಜೊತೆಗೆ ಬಂದವನು ೨೦ ರೂಪಾಯಿ ಕೊಡಬಹುದು, ಎಂದ. ತಕ್ಷಣ ನಾನು ೨೫ ರೂ. ಎಂದೆ. ಮುಂದೆ ಅವನು ೩೦ ರೂ. ಎಂದ; ಕೂಡಲೆ ನಾನು ರೂ. ೨೫ ಎಂದೆ. ಮಾಲಕನು ನಗುತ್ತ ಕುಳಿತಿದ್ದ. ಮುಂದೆ ನನ್ನ ಜೊತೆಗೆ ಬಂದವನು ನುಮ್ಮ ನಾದ. ಕೊನೆಗೆ ಮಾಲಕನು "ನೋಡ್ರಿ, ನಿಮ್ಮಿಬ್ಬರಲ್ಲಿ ಯಾರಿಗಾದರೂ ಆ ಬ್ಲಾಕನ್ನು ರೂ. ೩೫ ಕ್ಕೆ ಕೊಡುತ್ತೇನೆ. ಯಾರಿಗೆ ಅವಶ್ಯಕತೆ ಬಹಳ ಇರುವುದೋ ಅವರು ಬರಬಹುದು. ಬಾಡಿಗೆ ಮಾತ್ರ ಮುಂಗಡ ಕೊಡಬೇಕು. ಇದನ್ನು ನಿಮ್ಮೊಳಗೇ ವಿಚಾರಿಸಿರಿ" ಎಂದ. ನಾನು ನನಗೇ ಮನೆಯು ಸಿಗುವುದೆಂಬ ಸೆಡವಿನಿಂದ ಹೊರಟೆ. ನನ್ನನ್ನು ನನ್ನ ಜೊತೆಗೆ ಬಂದವನು ಹಿಂಬಾಲಿಸಿದ. ದಾರಿಯಲ್ಲಿ ಆ ವಿಷಯ ಈ ವಿಷಯ ಮಾತ. ನಾಡುತ್ತ ಒಂದು ಕಡೆಗೆ ಬಂದು ನಿಂತ. ಸಾಯಂಕಾಲವಾಗಿತ್ತು. ಒಂದು ಬಂಗಲೆಯ ಕಂಪಾವುಂಡಿನಲ್ಲಿ ಇದ್ದ ಮೋಟರ ಷಡ್ ಕಡೆಗೆ ಕೈಮಾಡಿ—"ಇಕೋ, ಇದೇ ನೋಡ್ರಿ ನಾನು ಇರುವ ಜಾಗಾ. ಆರು ತಿಂಗಳಿಂದ ಇಲ್ಲೇ ಇರುವೆವು" ಎಂದ. ಅವನ ಜೊತೆಗೆ ನಾನು ಷಡ್ಡಿನ ಬಳಿ ಬಂದೆ. ಷಡ್ಡಿನ ಹತ್ತಿರ ಒಂದು ಗಿಡ. ಗಿಡದ ಕೆಳಗೆ ಒಂದು ಕಾಟು. ಕಾಟಿನ ಮೇಲೆ ಒಬ್ಬ ಹೆಣ್ಣು ಮಗಳು ಕುಳಿತಿದ್ದಳು. ಗಿಡಕ್ಕೆ ಒಂದು ತೊಟ್ಟಿಲು ತೂಗು ಬಿಟ್ಟಿತ್ತು. "ಇಲ್ಲೇಕೆ ಇವೆಲ್ಲ?" ಎಂಬ ಪ್ರಶ್ನೆಗೆ ಕೆಳಗಿನ ಉತ್ತರ ದೊರಕಿತು:

"ನೋಡ್ರಿ, ಇಲ್ಲಿ ನಾನು, ನನ್ನ ಹೆಂಡತಿ ಮತ್ತೆ ಮಗು ಇರುತ್ತೇವೆ. ಆಡಿಗೆ ಮೊದಲಾದುವು ಷೆಡ್ಡಿನಲ್ಲಿಯೆ. ಮಧ್ಯಾಹ್ನ ಷೆಡ್ಡು ಕಾಯುತ್ತದೆ. ಮಗುವನ್ನು ಗಿಡಕ್ಕೆ ನೇತುಬಿಟ್ಟ ತೊಟ್ಟಿಲಲ್ಲಿ ಮಲಗಿಸುತ್ತೇವೆ; ಮತ್ತು ನನ್ನ ಹೆಂಡತಿಯು ಗಿಡದ ಕೆಳಗೆ ಇದ್ದ ಮಂಚದ ಮೇಲೆ ಕಾಲಕಳೆಯುತ್ತಾಳೆ. ಜೀವನವೆ ನಮಗೆ ಬೇಜಾರವಾಗಿದೆ. ಎಷ್ಟು ಪ್ರಯತ್ನಮಾಡಿದರೂ ಒಂದು ಒಳ್ಳೆಯ ಮನೆಯು ಸಿಗಲಿಲ್ಲ. ನಡೆಯಿರಿ, ಇನ್ನು ನೀವು ಹೇಗೆ ಇರುವಿರೋ ನೋಡ್ರೋಣ!" ಎಂದು ಹೇಳಿದ.

ಇದೆಲ್ಲ ಪರಿಸ್ಥಿತಿಯನ್ನು ನೋಡಿ ನನಗೆ ಕನಿಕರವೆನಿಸಿತು. ನನಗೆ ಮನೆ ಹಿಂದುಗಡೆ ಸಿಕ್ಕರೂ ಆಡ್ಡಿಯಿಲ್ಲ; ಈ ಗೃಹಸ್ಥನಿಗೆ ಮನೆಯ ಅವಶ್ಯಕತೆ ಬಹಳವಿದೆ—ಎಂದು ಭಾವಿಸಿ "ನೀವು ನನ್ನ ಮನೆ ನೋಡುವುದು ಕಾರಣವಿಲ್ಲ. ನನಗಿಂತಲೂ ನಿಮಗೆ ಮನೆಯ ಅವಶ್ಯಕತೆ ಹೆಚ್ಚು ಇರುವುದು. ನಡೆಯಿರಿ, ಆ ಮಾಲಕನಲ್ಲಿ ಇಬ್ಬರೂ ಹೋಗೋಣ. ನೀವೇ ಆ ಮನೆಯನ್ನು ತೆಗೆದುಕೊಳ್ಳಿರಿ" ಎಂದೆ. ಅವನಿಗೇ ಮನೆಯು ಸಿಕ್ಕಿತು. ನಾನು ಅವನಿಗೆ ಭೆಟ್ಟಿಯಾದಾಗೆಲ್ಲ ನಿಂತು ಮಾತಾಡಿದರೆ ಹೋಗುವದಿಲ್ಲ."

ಇದೇ ಪ್ರಕಾರ ಅನೇಕ ಸಂಗತಿಗಳು ಇಲ್ಲಿ ಕಂಡುಬರುತ್ತಿವೆ; ಕೇಳಬರುತ್ತಿವೆ. ಇವೆಲ್ಲವುಗಳ ಬಗ್ಗೆ ಕೂಲಂಕಷವಾಗಿ ವಿಚಾರಮಾಡಿದಲ್ಲಿ ಜೀವನವೇ ಒಂದು ಆಟವೆಂಬಂತೆ ತೋರುತ್ತದೆ. ಕೈಯಲ್ಲಿ ದುಡ್ಡು ಇಟ್ಟುಕೊಂಡು ಭಿಕ್ಷೆಬೇಡುವ ದಿವಸಗಳು ಬಂದಂತೆ ಎನಿಸುತ್ತಿದೆ.

ಒಂದು ಜಾಳಿನಲ್ಲಿ ಸಹಜ ವಿಚಾರಿಸಬೇಕೆಂದು ನಾನೇ ಹೋದೆ. ಮಾಲಕರು ಇರುವ ಬ್ಲಾಕಿನಲ್ಲಿ ವಯಸ್ಸಾದ ಒಬ್ಬ ಹೆಣ್ಣು ಮಗಳು ಇದ್ದಳು. ಅವರನ್ನು:—

"ಏನ್ರೀ, ಇಲ್ಲೆ ಏನಾದರೂ ಬಾಡಿಗೆಯಿಂದ ಜಾಗಾ ಸಿಗಬಹುದೇ?" ಎಂದು ವಿಚಾರಿಸಿದೆ.

"ನಿಮಗೆ ಹುಚ್ಚು ಹಿಡಿದಿಲ್ಲವೇ?" ಎಂದು ಒಂದೇ ಒಂದು ಉತ್ತರ ಬಂತು.

ಹಾಗೇ ಮುಂದೆ ಸಾಗಿ ಇನ್ನೊಂದು ಜಾಳಿನಲ್ಲಿ ವಿಚಾರಿಸಬೇಕೆಂದು ಮಾಡಿದೆ. ಗೇಟಿನ ಪಕ್ಕದಲ್ಲಿ ಒಂದು ಬೋರ್ಡು ತೂಗುಬಿಟ್ಟಿತ್ತು. ಅದೇನಿದೆಯೆಂದು ಓದಿದೆ; ಧೈರ್ಯ ಕುಂದಿತು. ಅಲ್ಲಿ ಬರೆದುದು ಹೀಗೆ: "ಇಲ್ಲಿ ಬಾಡಿಗೆಕೊಡುವ ಜಾಗಾ ಇಲ್ಲ; ವಿನಾಕಾರಣ ಒಳಗೆ ಬಂದು ತ್ರಾಸ ಕೊಡಬಾರದು!"

ಅಳಬೇಕೋ ನಗಬೇಕೋ ತಿಳಿಯಲಿಲ್ಲ.

‘ರಕ್ತಾಂಜಲಿ’ಯ ನಿಮಿತ್ತದಿಂದ

(ಇಂದಿನ ಸಾಹಿತ್ಯಜಕ್ಕ ಒಂದು ನೋಟ) ★ ಪ್ರೊ. ಎಚ್. ಬಿ. ಕುಲಕರ್ಣಿ

ಲೌಕಿಕಾನುಭವಗಳಿಂದ ತಲೆದೋರಿದ ಶೋಕ, ಕೋಪ, ಸ್ಪರ್ಧೆ, ಈರ್ಷೆ, ಮತ್ಸರ ಮೊದಲಾದ ನಿಷಭಾವನೆಗಳನ್ನು ಪ್ರೀತಿ, ಪ್ರೇಮ, ದಯೆ, ಸ್ನೇಹ ಮೊದಲಾದ ಅಮೃತಭಾವಗಳನ್ನಾಗಿಸುವವನೇ ನಿಜವಾದ ಕವಿ. ಅಂತಹ ಕವಿಯ ಕೃತಿಯೇ ಶಾಶ್ವತವಾಗಿ ನಿಲ್ಲಬಲ್ಲದು!

ಇಂದಿನ ಕಾವ್ಯವು ಇಂದಿನ ಜೀವನದ ಸಮರ್ಥಕವಾದ ಸಮಗ್ರಚಿತ್ರವಾಗಿರಬೇಕು. ಬಾಳು ಸಿಹಿಯಿರಲಿ, ಕಹಿಯಿರಲಿ, ಅದರ ಸವಿಯ ಸಂವೇದನೆಯೇ ಕಾವ್ಯವಿಷಯವಾಗಬೇಕು. ಸಮಾಜದ ಆದ್ಯತನದ ಸಮಸ್ಯೆಗಳನ್ನೆಲ್ಲ ಧೈರ್ಯದಿಂದ ಎದುರಿಸಿ, ಸಹಾನುಭೂತಿಯಿಂದ ಅವುಗಳನ್ನು ತಿಳಿದು ತಿಳಿಸುವ ನಿಶ್ಚಯವನ್ನು ಕವಿಯು ಮಾಡಿಕೊಂಡಿರಬೇಕು. ಯಾಕೆಂದರೆ ವೈವಿಧ್ಯಪೂರ್ಣವಾದ ಜೀವನವ ಬಣ್ಣಕ್ಕೆ ಬೆರಗುಗೊಳ್ಳದೆ, ಅದರ ಬೇರುಗಳಲ್ಲಿಳಿದು ಅಲ್ಲಿರುವ ಜಟಿಲಭಾವಗ್ರಂಥಿಗಳನ್ನೆಲ್ಲ ಬಿಡಿದು, ಮಾನವತೆಯು ರುದ್ರಭವ್ಯವಾದ ವನ್ಯೋದ್ಘರ್ಷನವನ್ನು ಪಡೆಯುವೇಕೆಂದು ಮಾಡಿದ ಪ್ರಯತ್ನದ ಪ್ರತಿಬಿಂಬವೇ ಕವಿಯ ಕಾವ್ಯ! ಇದು ಸುಲಭಸಾಧ್ಯವಲ್ಲ ಎಂದಿಂದೂ ಅದು ಹೆಚ್ಚು ಕಠಿಣವಾಗಿದೆ. ಯಾಕೆಂದರೆ ಈಗ ಜೀವನವು ತನ್ನ ವಿಕೃತಿಯ ಪ್ರಖರ ಸ್ವರೂಪವನ್ನು ಹೊರಗೆಡಹಿ, ವಿಕಾರವಾಗಿ ನಿಂತುಕೊಂಡಿದೆ. ಮುಪ್ಪಾಯುದ್ದದ ಪ್ರಳಯವಾಗ್ನಿಯಲ್ಲಿ ಕೋಟ್ಯಂತರ ಜನರ ಅಮಾನುಷವಾದ ವಧೆಯಾಯಿತು. ಅದೂ ಸಾಲದೆ ಎಣಿಕೆಯಿಲ್ಲದಷ್ಟು ಜನರು ಪಸಿವೆಯ ಉರಿಯಲ್ಲಿ ಅನ್ಯಾಯವಾಗಿ ಬೆಂದುಹೋದರು. ಆದರೆ ಈ ವೀರಿಯಾಗಿ ಐವತ್ತೇ ವರ್ಷಗಳ ಪರಿಗೆ ನಡೆದ, ಇನ್ನೂ ನಡೆಯಬಹುದಾದ ಭಯಂಕರ ವಿಪ್ಲವದಲ್ಲಿ, ಮಾನವಕುಲವು ತನ್ನ ಜನ-ಧನಗಳನ್ನಷ್ಟೇ ಕಳೆದುಕೊಳ್ಳಲಿಲ್ಲ; ಮಾನವ ಸಂಸ್ಕೃತಿಗೆ ವಿಜ್ಞಾನದಂತೆಯೆ ಪ್ರಗತಿಯ ಮೂಲ ಪ್ರಚೋದನೆಯಾಗಿರುವ ತಾತ್ವಿಕ ಮೌಲ್ಯಗಳನ್ನೇ ಅದು ಹಾಳುಗೆಡಹಿತು. ಪ್ರೀತಿಯೇ ಜೀವಪ್ರಜೆಂದು ಸಾರಿದ ಧರ್ಮವು ಇಂದು ಸುಳ್ಳಿನ ಕಂತೆಯಾಯಿತು; ಸ್ನೇಹವೇ ಸಮಾಜದ ಸುಸ್ಥಿತಿಯ ಮೂಲವೆಂದು ಒಗೆದಿರುವ ನೀತಿಯು ಇಂದು ಹೃದಯದೌರ್ಬಲ್ಯವಾಯಿತು. ಸೌಂದರ್ಯದ ಕಲ್ಪನೆಗಳು ಬಂಧುತ್ವದ ಭಾವನೆಗಳು ಸಂಸ್ಕೃತಿಯು ಇತಿಹಾಸದಲ್ಲಿ ಕಾಲಕಾಲಕ್ಕೆ ಅಕ್ಕಸಿಡಿ ಬೆರಂತನಸ್ಸಮಗಳು, ಚಿಂತನೆಯ ಸಲಹಾದ ತತ್ತ್ವಗಳು,— ಎಲ್ಲವೂ ಈ ವಿಪ್ಲವೋದ್ಧದಲ್ಲಿ ಅದುಂಯಾದುವು. ಈಗ ಮನುಷ್ಯತ್ವವನ್ನೇ ಕಳೆದುಕೊಂಡಿರುವ ಮನುಷ್ಯಜಕ್ಕಿರ ಉಳಿದಿರುವ ಪ್ರಭಾವಿಯಾದ ಭಾವನೆ ಒಂದೇ— ಭೀತಿ! ಅದರ ಮಹಾ ವಿಷಪೂರ್ಣವು ಅಶ್ವತ್ಥದ ಹಾಗೆ ನಾಡುನಾಡುಗಳಲ್ಲಿ ತನ್ನ ಬೇಳಲುಗಳನ್ನಿಳಿಸಿ, ವಿಸ್ತಾರವಾಗಿ ಹರಡಿಕೊಂಡಿದೆ. ಇಂದು ಭೂಮಿಯನ್ನೆಲ್ಲ ಸುತ್ತಿಬಂದವರಿಗೆ ಹಾಳಾಗಿ ಹುಡಿಗೂಡಿಹೋದ ಮನೆ-ಮಾರುಗಳನ್ನೆಲ್ಲ ಕಂಡು ಲೋಕವೆಲ್ಲ ಒಂದು ಸ್ಮಶಾನಭೂಮಿಯಾಗಿದೆಯೆಂದೆನಿಸುವಂತೆ, ಮನುಷ್ಯನ ಮನಸ್ಸನ್ನು ಇಣಿಕಿ ನೋಡುವವರಿಗೆ ಅದೊಂದು ಭಯಂಕರವಾದ ರುದ್ರಭೂಮಿಯಾಗಿದೆ— ಎಂಬ ಅರಿವು ಬಾರದಿರಲಿಕ್ಕಿಲ್ಲ. ಈಗ ಕೆಲವು ವರ್ಷಗಳ ವರೆಗಂತೂ ಸಮಾಜದ ಪ್ರಜ್ಞೆ ಎರಡೇ ರೀತಿಯಲ್ಲಿ ವ್ಯಕ್ತವಾಗುತ್ತಿದೆಯೆಂದು ಹೇಳಬಹುದು— ಒಂದು ಕೆನ್ನೀರು, ಇನ್ನೊಂದು ಕಣ್ಣೀರು! ಬಲವಿದ್ದವರು ತಮ್ಮ ಉನ್ಮಾದದಲ್ಲಿ ಕೆನ್ನೀರ ಕಾಲುವೆಗಳನ್ನು ಹರಿಸುತ್ತಿದ್ದಾರೆ. ಅವರ ಉದ್ರೇಕ್ಯೆಯಲ್ಲಿ ಸಿಲುಕಿದ ನಿರ್ಬಲರೂ ನಿರ್ಗತಿಕರೂ ಆದ ಅಸಂಖ್ಯಾತರು ಬರಿಯ ಕಣ್ಣೀರು ಸುರಿಸುತ್ತಿದ್ದಾರೆ. ಅದರಿಂದ ವರ್ತಮಾನಕಾಲದ ವಿಷಯಕ್ಕೆ ನಿರಾಶೆ, ಭವಿಷ್ಯದ ವಿಷಯಕ್ಕೆ ಸಾರಂಕತೆಗಳು ಜನಮನಸನ್ನು ದಟ್ಟಾಗಿ ಸುತ್ತಿಕೊಂಡಿರುವುದರಿಂದ, ದೇಶದ ಉಸಿರು ಸಿಕ್ಕಂತಾಗಿದೆ.

ಇಂತಹ ವಿಚಿತ್ರವಾದ ಸನ್ನಿವೇಶದ ಮುಷ್ಯದಲ್ಲಿ ನಿಂತು ಮೋದಕವಿದ ಕೈಜೀವನವನ್ನು ನಿರುಕಿಸುತ್ತಿರುವ ಕವಿಯ ಆತ್ಮವಿಂದು ದಿಗ್ಭ್ರಾಂತವಾಗಿದೆ; ಅವನ ಚಿತ್ತ ವಿಚಲಿತವಾಗಿದೆ. ನಿಂತ ನೆಲ ಕುಸಿಯಿತು; ನಂಬಿಗೆಯ ಊರುಗೋಲೂ ಮುರಿದು ಹೋಯಿತು; ಇನ್ನು ಯಾವ ಬೆಳಕಿನ ಸೆರಗನ್ನು ಹಿಡಿಯಬೇಕೆಂಬುದು ಅವನಿಗೆ ತೋಚದಂತಾಗಿದೆ. ಅದಕ್ಕೇ ಭೀತಿ, ದೈನ್ಯ, ಶೋಕ, ಕೋಪಗಳೇ ಅವನ ಮನಸ್ಸಿನ ಭಾವಲಹರಿಗಳಾಗಿವೆ. ಅದರೂ ಅವಸಿನ್ನೂ ಕನಸನ್ನು ಕಾಣುವ ತನ್ನ ಶಕ್ತಿಯನ್ನು ಕಳೆದುಕೊಂಡಿಲ್ಲ. ಲೋಕದಲ್ಲಿ ಕೂಡ ಅದರ್ಶದ ದರ್ಶನವು ಮನುಕಾಗಿದ್ದಾದರೂ ಉಳಿದಿದೆಯೆಂದೇ ಹೇಳಬಹುದು. ಅಂತೆಯೇ ಯುದ್ಧೋತ್ತರ ಪುನರ್ರಚನೆಯ ಮಾತುಕತೆಗಳು ಗಾಳಿಯಲ್ಲಿ ತುಂಬಿಕೊಂಡಿದೆ. ಮೃತ್ಯುವೆನ ಕರಾಳ ಕುಣಿತದಲ್ಲಿಯೂ ಅದು ನವನಿರ್ಮಿತಿಯ ಉತ್ಸಾಹವನ್ನು ತಂದೊಡ್ಡಿದೆ. ಅದು ಬುದ್ಧಿರಚಿತವಾದ ಸರ್ವಗ್ರಾಹ್ಯವಾದ ಒಂದು ತತ್ತ್ವವಾಗಿ ಇನ್ನೂ ಬೆಳೆಯದಿದ್ದರೂ, ಮನಸ್ಸಿಗೆ ಸ್ಥೈರ್ಯವನ್ನೂ ಸಮಾಧಾನವನ್ನೂ ಕೊಡಬಲ್ಲ ನಂಬಿಗೆಯ ನವಾಂಕುರವಾಗಿದೆಯೆಂದೇ ಹೇಳಬಹುದು. ಭಾರತಕ್ಕಂತೂ ಮಹಾಯುದ್ಧದ ಕಾಡುಕಿಚ್ಚು ನಾಡನ್ನೆಲ್ಲ ನೆಕ್ಕುತ್ತಿರುವಾಗಲೇ ಹೊಸ

ಪೌರುಷದ ಪ್ರತೀತಿಯಾಯಿತು. 'ಆಗಸ್ಟ್ ಕ್ರಾಂತಿ' ಯು ನಮ್ಮ ನೈರಾಶ್ಯದ ಕಗ್ಗತ್ತಲೆಯಲ್ಲಿಯೇ ಜನ್ಮತಾಳಿದ ಒಂದು ಮಿಂಚು. ಮೂರ್ತಿ! ನಮ್ಮ ದುಃಖ, ದಾರಿದ್ರ್ಯಯಾತನೆಗಳ ಮಹಾಸಾಗರದ ಮಂಥನದೊಳಗಿಂದಲೇ ನಿಗೆದೆದ್ದ ಸ್ವಾತಂತ್ರ್ಯದ ಅಮೃತವೇ ನಮ್ಮ ಕರ್ತೃತ್ವಶಕ್ತಿಯನ್ನು ಜಾಗೃತವಾಗಿರಿಸಿದೆ. ಇದರಿಂದ ಕೆಚ್ಚುಗೊಂಡ ಕುಯ್ಯ ಬಾಯಿಗೆ ಹುರುಪಿನ ಹಾಡು ಹೊಮ್ಮಿಬಾರದಿರದು.

ಶ್ರೀ. ವಿ. ಜೆ. ಭಟ್ಟರ 'ರಕ್ತಾಂಜಲಿ' ಕವನಸಂಗ್ರಹ ನೋಲೆ ವರ್ಣಿಸಿದ ವೃತ್ತಿಯು ಪ್ರೌಢೀತಕವಾಗಿದೆಯೆಂದೇ ಹೇಳಬೇಕು. ಬಾಳುಕವಿಯಾಗಿದೆಯೆಂದು ಅವರು ಜೀವನದಿಂದ ಪರಾವೃತ್ತರಾಗಿ, ಅಂತರಂಗದ ವಿರಲ ಊಹೆಯಲ್ಲಾಗಲಿ, ನಿಸರ್ಗದ ಸಹಜ ಸೌಂದರ್ಯದಲ್ಲಾಗಲಿ, ಇರುವಿನ ಉಚ್ಛ್ರಯಲ್ಲರಳಿದ ಚಪಸಿನ ಉನ್ಮಾದದಲ್ಲಾಗಲಿ ಸುಖದ ಕೋಟೆಯನ್ನು ಕಟ್ಟಿ, ಜೀವನದ ವಿಸ್ಮೃತಿಯೇ ಕಲೆಯ ಕೌಶಲ್ಯವೆಂದು ಬಗೆದು, ನಿರಾಯಾಸವಾದ ಲೀಲಾಗೀತಗಳನ್ನು ಹಾಡತೊಡಗಿಲ್ಲ. ಈ ಪಲಾಯನ ವೃತ್ತಿಯು ಕವಿಗೆ ಅಸಹನೀಯವಾಗದ. 'ನಾನು ಮಳ್ಳುಕಣ್ಣಿಯಾದರೂ ನನ್ನ ಗತಿ ನನಗಿರಲಿ; ನನ್ನನ್ನು ತುಳಿಯಲು ನಿನ್ನ ಪಡೆಯನ್ನು ಅಟ್ಟು; ನರಕದಲ್ಲಿ ನನ್ನನ್ನು ನೂಕು' ಎಂದು ಅಭಿಮಾನದಿಂದ ತಲೆಯತ್ತಿ ಅವರು ದೇವರನ್ನು ಎದುರಿಸುತ್ತಾರೆ. ಇದು ನೋವುಗಳಿಗೊಂದಿನಿಸೂ ಜಪ್ಯತೆಯಿಲ್ಲದಾಗಿ, ನಲಜೆಲ್ಲಪೂ ಸ್ವಯಿವಾದಾಗ, ಕಮಿಗೊಂಡ ಕರುಣನ ಜನಸ್ಯತೆಯಲ್ಲಿ ನಿಸರ್ಮಾಣವಾದ ವೃತ್ತಿಯೋನೋ ಎಂದೆನಿಸುವುದು. ದೇವರು ರಕ್ತಸಿಪಾನುವಾಗಿದ್ದಾನೆ. ಅವನಿಗೇ ಸ. ರಕ್ತಾಂಜಲಿಯು ತರ್ಪಣ! ನತ್ಯನಿನ ಬೊಗಸೆಯನ್ನು ಕುಡಿದಾದರೂ ತಣಿಯಬಹುದೆ ಆ ದೇವರು? ಹೊಸ ಬಾಳಿನ ಆಗಸೆಯನ್ನು ತಲೆಯಬಹುದೆ? ಈ ಸಂಶಯವನ್ನೇ ಬೆಳೆದು ನಿರಾಶೆಯಾಗಿ ಮನಸ್ಸನ್ನಾವರಿಸಿದಾಗ, ಸಂಜೆಯ ಶಾಂತ ಸೌಂದರ್ಯವೂ ಶತಮಾನಗಳ ಪತನವನ್ನೇ ಸೂಚಿಸುವುದು:

'ಪಡವಣಕವಲಲಿ
ಕವಡಿತು ಜಿನ ದೇ—
ವಯ ಹಣಿ ಕುಂಕುಮವು'

ಹೀಗೇ ಚಿಂತೆಯಲ್ಲಿರುವಾಗಲೇ ಕಣ್ಣಿಗೆಸಿದ ಹಸಿಗಳಲ್ಲಿ

'ಒಡಕುಗೋಲಿಗಂತ ಬೆಲೆಯಿದುವೋ
ಕುಡುವು ತಾಯಿಯ ಬೇಲಿದಿವು.

ಈ ಕವಿತೆಯಲ್ಲಿಯು ಕಲ್ಪನಾಶಕ್ತಿ ಮೇಲ್ಪುರಗತಿಯುಳ್ಳಾಗಿದೆ. ಇದರ ಧ್ವನಿಸಾಮರ್ಥ್ಯವೂ ಉಚ್ಚಸ್ತರವಾಗಿದೆ. ನಿತ್ಯವನ್ನೇ ವ್ಯಾಪಿಸಿದ ಕರುಣೆಯೆಲ್ಲ ಒ. ಚಿನ್ನ ಪದ್ಯದಲ್ಲಿ ಮುಂಬಿಂಬಿಸಿದಂತೆ ಭಾಸವಾಗುವುದು. ಜನನ ನಿಸ್ಸಾರವಿದ ದೈನ್ಯ ಒಡೆಯಕಾಲದವರೆಗೆ ಅವರ ಮನಸ್ಸಿನಲ್ಲಿ ಸಿಲ್ಲಿದು. ತಾರುಣ್ಯದ ಕೆಚ್ಚೇ ಇವರ ಕವಿತೆಗಳನ್ನೆಲ್ಲ ವ್ಯಾಪಿಸಿನಿಂತಿದೆ. ಅಂತಿಯೇ ಶೋಕಕ್ಕಿಂತಲೂ ಕೋಪ ಹೆಚ್ಚಾಗಿ, ಕರುಣೆಗಿಂತಲೂ ಅಣಕವೇ ಅಧಿಕವಾಗಿ ಇವರ ಕಾವ್ಯಕ್ಕೆ ಒಂದು ನವೀನ ತೀಕ್ಷ್ಣತೆಯನ್ನು ಕೊಟ್ಟಿದೆ. ಕಲೆಯೊಡೆದರೂ ಬಾಗದ ಆತ್ಮಾಭಿಮಾನ, ಅನ್ಯಾಯದ ವಿಷಯಕ್ಕಿದ್ದ ಲಜ್ಯಂತಿಕವಾದ ದ್ವೇಷ, ಮನುಷ್ಯನ ಕ್ರೌರ್ಯ-ಕಾರುಣ್ಯಗಳ ವಿಷಯಕ್ಕಿದ್ದ ದ್ವೇಷ-ಇವುಗಳಿಂದ ಹುರಿಗೊಂಡ ಮನಸ್ಸು ಇವರ ಕವಿತೆಗಳಲ್ಲೆಲ್ಲ ಸ್ಪಷ್ಟವಾಗಿ ಪ್ರತಿಬಿಂಬಿತವಾಗಿದೆ. ಇವರ ಶೈಲಿಗೂ ಅದರಿಂದ ಒಂದು ಉರಿಯುವ ಬೂರೆಯುವ ಧಾರೆ ಬಂದಿದೆ. ಉತ್ಕಟತೆಯೇ ಇವರ ಕಾವ್ಯದ ಮುಖ್ಯಲಕ್ಷಣ. ನವಯುಗದ ಭಾವನೆಗಳನ್ನು ಸಮರ್ಥವಾದ ಕಲ್ಪನೆಯಲ್ಲಿ ಹೊಸೆದು, ಚೆಚ್ಚಿನ ಭಾಷೆಯಲ್ಲರಳಿಸುವ ಶಕ್ತಿ ಇವರಿಗಿದೆ. ಅವರು ಒಳ್ಳೆಯ ಕಥನಕವನಗಳನ್ನೂ ಬರೆಯಬಲ್ಲರು. ಇವರೂ ಇವರ ಬಲವನ್ನೂ ಬೆಳೆಯಬೇಕು; ಶೈಲಿಯನ್ನೂ ಪಕ್ವವಾಗಬೇಕು ಪ್ರಜ್ಞೆ ವಿಶಾಲವಾಗಬೇಕು. ವ್ಯಕ್ತಿತ್ವದ ಪರಿಣತಿಯನ್ನು ಸೂಚಿಸುವ ಕಾವ್ಯಸಂಗ್ರಹವಿದಲ್ಲ. ಉಜ್ವಲವಾದ ಭವಿಷ್ಯವನ್ನು ಬೆಳೆಯಲಿರುವ ಆತ್ಮದ ಧಡಪಡಪೇ ಇಲ್ಲಿ ವ್ಯಕ್ತವಾಗಿದೆಯೆಂದು ಹೇಳಬಹುದು.

ಕೊನೆಗೆ ಇನೆಯಾಗಿ ತೊನೆವ ಒಂದು ವಿಚಾರವನ್ನಿಡಲು ಮನಸ್ಸು ಹಾಪೇಕರೆಯುತ್ತದೆ. ನಿಷಾದವಿದ್ಧವಾದ ಕ್ರೌಂಚ ಮಿಥುನವನ್ನು ಕಂಡು ಕಳವಳಗೊಂಡ ಆದಿಕವಿಯ ಶೋಕವು ಶ್ಲೋಕವಾಯಿತಂತೆ. ಆಗ ರಾಷವಾಗಿ ಹೊರಬಿದ್ದ ಭಾವನೆಯು ಪ್ರಾಜ್ಞವಾಲ್ಮೀಕಿಯ ಮನಸ್ಸಿನಾಳದಲ್ಲಿ ಸೇರಿ ಮುಂದೆ ಮೊಳಕು ಬಗೆದು, ರಾಮಾಯಣದ ಮಹಾಕಾವ್ಯವಾಯಿತೆಂದು ಕೆಲವರು ಹೇಳುತ್ತಾರೆ. ಕ್ರೌಂಚವಧೆಯ ಕಾಲದಲ್ಲಿ ಹೊಮ್ಮಿಬಂದ ಶೋಕವು ಸುಂದರವಾದ ಸೀತೆಯ ಮೂರ್ತಿಯಲ್ಲಿಯೂ, ಮಯೋನ್ಮತವಾದ ರಾವಣನ ವ್ಯಕ್ತಿತ್ವದಲ್ಲಿಯೂ, ಆಗ ಉಕ್ಕಿ ಬಂದ ರೋಷವು ರಾವಣನ ಭೀಷಣವಾದ ಚಿತ್ರದಲ್ಲಿಯೂ 'ಸಫಲ'ವಾಗಿ, ಭಾಂತಕ್ಕೆ ನಿರಂತರವಾದ ಸ್ಫೂರ್ತಿಯನ್ನು ಕೊಡಬಲ್ಲು ಒಂದು ಮಹಾಕಾವ್ಯವಾಗಿ ಬೆಳೆಯಿತು. ಮಾನವತೆಯ ಕೊಲೆಯನ್ನು ಕಂಡು ಕಳವಳಗೊಂಡ ಆಧುನಿಕ ಕವಿಯ ವಾಣಿಯು ಇಂದು ರಾವಣ ವಿಷವನ್ನು ಕಾರತೊಡಗಿದೆ. ಆದರೆ ಆದಿಕವಿಯ ಶೋಕ-ಕೋಪಗಳಲ್ಲೇ ಸ್ಥಿರವಾಗಿ ನಿಂತಿದೆ. ಅವುಗಳಿಗೆ ಮಹಾಕಾವ್ಯದ ಮಂತ್ರಶಕ್ತಿ ಬರಬೇಕಾದರೆ, ಆದಿಕವಿಯಲ್ಲಿ ಕಂಡುಬಂದ ಆರ್ಷೇಯದೃಷ್ಟಿ, ದೀರ್ಘಚಿಂತನೆಯು ಫಲವಾಡ ತತ್ತ್ವೈಕಸೃಷ್ಟಿ, ವಿಶ್ವವನ್ನೇ ಅಂಗೈಯಲ್ಲಿಟ್ಟು ನೋಡಬಲ್ಲ ಕಲ್ಪನಾಶಕ್ತಿ-ಇವುಗಳನ್ನು ಇಂದಿನ ಕವಿ ಪಡೆಯಬೇಕು. ಜಗನ್ನಾಟಕ ಎಲ್ಲ ನಾಟಕ್ಯಗಳು ಅಂತರ್ಹತವಾಗಿರುವ ಮಹಾನಾಟಕದಲ್ಲಿಯೇ ನಿರತವಾಗಿರುವ ಇವರ ಫಲವು ಯಾರಿಗೆ, ಎಂದು ತೋರಿಕೆಂದು ನಮಗು ಕಾಣಿಸ್ಸದು.

ಆ ನಿರುವರೆಗೆ ಕಾವ್ಯದ ಎಲ್ಲ ಸಮಸ್ಯೆಗಳೂ ಈ ಅಮರ ಕೃತಿ ನಿರ್ಮಿತಿಯ ಪೂರ್ವವೇದನೆಗಳೆಂದೇ ನಾನು ತಿಳಿದಿದ್ದೇನೆ. ಮುಖ್ಯವಾಗಿ ಮಹಾಜೀವನವು ನಮ್ಮೆಲ್ಲರಿಗೆ ಮಹಾಪೂರವಾಗಿ ಹರಿಯುತ್ತಿದೆ. ಅದಕ್ಕೆ ತಕ್ಕ ಮಹಾವ್ಯಕ್ತಿತ್ವವನ್ನು ಬೆಳೆಸುವ ಹೊಣೆಗಾರಿಕೆ ತರುಣ ಕವಿಯಮೇಲೆ ಇದೆ.

ಕಡೆಗೂ ಸ್ವಾರ್ಥವೆ?

ಶ್ರೀ. ಚ. ಲ. ಪರಮೇಶ್ವರಗುಪ್ತ, ದಾವಣಗೆರೆ.

★

ಮಗನ ಪ್ರೀತಿಗಾಗಿ ಪರಿಯದಲ್ಲಿ ಮರುಮದುವೆ-
ಗೊಪ್ಪದ ಶಾಂತಿಲಾಲ, ಕಿರಿಯದಾದೊಂದು
ಘಟನೆಯ ಮೂಲಕ ಮುಪ್ಪಿನಲ್ಲಿ ಮರು-
ಮದುವೆ ಮಾಡಿಕೊಂಡ. ಆಶ್ಚರ್ಯ!

★

ಸತ್ತ ಹೆಂಡತಿಯ ಪಕ್ಕದಲ್ಲಿ ಕೊನೆಯಸಾರೆ—ತನ್ನ ಮುದ್ದು ಮೋಹನಾಂಗಿಯ—ಮುಖವನ್ನು ನೋಡುವುದರಲ್ಲಿಯೆ ತಲ್ಲೀನನಾಗಿ ಶಾಂತಿಲಾಲನು ಕುಳಿತಿದ್ದನು. ಈ ಜಗತ್ತಿನಲ್ಲಿ ಮೊದಲನೆಯ ಬಾರಿಗೆ ಕಣ್ಣು ಬಿಡುವುದರಿಂದ, ತನ್ನ ತಾಯಿ ಶಾಶ್ವತವಾಗಿ ಕಣ್ಣು ಮುಚ್ಚಿದ ನಿಮಿಷದಿಂದ—ಇದುವರೆಗೂ ಸಂದ ಇಪ್ಪತ್ತೆರಡು ಅಥವಾ ಇಪ್ಪತ್ತುಮೂರು ವರುಷಗಳು ಸಾಲಾಗಿ ಶಾಂತಿಲಾಲನ ಕಣ್ಣೆದುರು ನಿಂತುಹೋದುವು.

ರಮಣಜಿಯು ಶಾಂತಿಲಾಲನಿಗೆ ಮೂರು ವರುಷ ತುಂಬುವುದರಲ್ಲಿಯೆ ಎರಡನೇ ಹೆಂಡತಿಯನ್ನು ಪಡೆದು, ತನ್ನ ವಿಧುರತ್ವವನ್ನು ನೀಗಿಕೊಂಡ. ದಾದಿಯು ಪಾಲನ ನೆನಪಲ್ಲದೆ ತಾಯಿಯ ನೆನಪೇ ಉಳಿಯಲು ಅವಕಾಶ ಇರಲಿಲ್ಲ. ಇನ್ನೊಬ್ಬ ತಾಯಿ ಬಂದದ್ದು ಅವನಿಗೆ ಒಡಿಸಲಾರದಷ್ಟು ಜನಂದ—ಉದ್ರೇಕವಾಗಿತ್ತು.

ಶಾಂತಿಲಾಲನಿಗೆ ಒಟ್ಟು ಕಮ್ಮಿ ಈ ಜಗತ್ತಿನಲ್ಲಿ ತಲೆಹಾಕುವವರೆಗೂ ಶುಕ್ರಮುಹೂರ್ತದಲ್ಲಿ ನಡೆಯಿತು. ಸದಾ ತನ್ನ ಚಿಕ್ಕ ಅಮ್ಮನ ಕಂಕುಳಲ್ಲಿಯೆ ನಲಿದಾಡುತ್ತಿದ್ದ, ಶಾಂತಿಲಾಲನು "ಕಮ್ಮ" ಹುಟ್ಟಿದ ಕೆಲವು ದಿನಗಳಲ್ಲಿಯೆ ತಾಯಿಯ ಹೂಡೆತಗಳಿಗೆ ಗುರಿಯಾದ. ದಾದಿಯೇ ಗತಿಯೆಂದು ರಮಣಜಿ ಇವನನ್ನು ಆಕೆಯ ವಶಕ್ಕೆ ಒಪ್ಪಿಸುವ ಪ್ರಸಂಗ ತಪ್ಪಲಿಲ್ಲ.

ಶಾಂತಿಲಾಲನು ಒಂದೊಂದೇ ಕರಗತಿಯನ್ನು ದಾಟುತ್ತ ನಡೆದನು. ದಿನದಿನಕ್ಕೆ ತಾಯಿಯು ಕೆರಕುಳ ಹೆಚ್ಚುತ್ತಾ ಹೋಯಿತು. ಪಾಠಕ್ಕಾಗಿ ಬರುತ್ತಿದ್ದ ಉಪಾಧ್ಯಾಯರಿಗೆ ಮಂಗಳಾರತಿಯಾಯಿತು. ಹುಡುಗ ಅಡಿದರೆ ಒಂದು ತಪ್ಪು, ಓದಿದರೆ ಒಂದು ತಪ್ಪು; ಉಂಡರೆ ತಪ್ಪು, ನಿದ್ರಿಸಿದರೆ ತಪ್ಪು. ಹೀಗೆ ಶಾಂತಿಲಾಲನ ದೇಹ ತಪ್ಪಿನಿಂದ ಹೆಣೆದಂತೆ ಭಾಸವಾಗುತ್ತಿತ್ತು. ಇಷ್ಟಾದರೂ ಶಾಂತನಾಗಿಯೇ ಇದ್ದ. ತಂಗಿ-ತಮ್ಮಂದಿರು ಹೆಚ್ಚಾದಂತೆಲ್ಲಾ ಇವನ ದೇಹ ಒದೆಗಳಿಂದ ದಷ್ಟಿ ಕಟ್ಟುತ್ತಾ ನಡೆಯಿತು. ಕೊನೆಗೆ ತಾಯಿಯಿಂದ ಓದಿಗೂ ಸಂಚುಕಾರ ಬಂದಿತು. ಅಂಗಡಿಗೆ ಶರಣಾದ. ತಂದೆ ಮಗನಿಗೆ ಕೇವಲ ಸಹಾನುಭೂತಿ ತೋರಿಸಬಲ್ಲವನಾಗಿದ್ದನೇ ಹೊರತು ಕಷ್ಟವನ್ನು ನಿವಾರಿಸಲು ಸಾಧ್ಯವಾಗಲಿಲ್ಲ.

ಶಾಂತಿಲಾಲನ ಸೋದರಮಾವನಿಗೆ ಸಮಸ್ತ ವಿಷಯಗಳೂ ತಿಳಿದಿದ್ದುವು. ಆದರೆ ಬೆಳೆದ ಮಗಳನ್ನು-ತೆರವಿಲ್ಲದೆ-ಕೊಡುವುದನ್ನು ಬಿಟ್ಟು ಮತ್ತೇನೂ ಸಾಧ್ಯವಿರಲಿಲ್ಲ ಅವನಿಗೆ. ಶಾಂತಿಲಾಲ-ಹೆಂಡತಿಯೊಂದಿಗೆ-ತಂದೆಯ ಮನೆಯಲ್ಲಿ ಎರಡು ವರುಷಗಳು ಸಹ ಬಾಳಲು ಸಾಧ್ಯವಾಗಲಿಲ್ಲ. ತಂದೆಯಿಂದ ಐದು ಸಾವಿರ ರೂಪಾಯಿಗಳನ್ನು ಪಡೆದು ಮನೆಯನ್ನು ಬಿಟ್ಟ. ಶಾಂತಿಲಾಲನಿಗೆ ಲಗ್ನವಾಗಿ ಹತ್ತು ವರುಷಗಳಾಗಿದ್ದುವು, ಹೆಂಡತಿ ಗಂಡುಮಗುವನ್ನು ಹೆತ್ತು ಸತ್ತಾಗ.

ಐದು ವರುಷದ-ಶಾಂತಿಲಾಲನ ಮಗ-ಸೋಹನನ ಭಂಗಾರದಂತಹ ಮುಖಮುದ್ರೆಗೆ ವಜ್ರವನ್ನು ಕೂಡಿಸಿದಂತೆ ಎರಡು ಕಣ್ಣುಗಳೂ ತೇಜಃಪುಂಜವಾಗಿದ್ದುವು. ಮಗನ ಸಕಲ ಸಂರಕ್ಷಣೆಯ ಭಾರವೂ ತಂದೆಯ ಮೇಲೆ ಬಿದ್ದಿತ್ತು. ಇಬ್ಬರು ದಾದಿಯರನ್ನು ನೇಮಕಮಾಡಿದ್ದರೂ ತೃಪ್ತನಾಗದೆ, ಬಿಡುವಿಲ್ಲದ ವ್ಯಾಪಾರವನ್ನು ಮಗುವನ್ನು ಎತ್ತಿಕೊಂಡೇ ಮಾಡುತ್ತಿದ್ದನು. ಹಾಗಿಲ್ಲದಿದ್ದಲ್ಲಿ ಶಾಂತಿಲಾಲನಿಗೆ ಸಮಾಧಾನವೇ ಇರುತ್ತಿರಲಿಲ್ಲ.

ಎಷ್ಟೋ ಜನ ಇಷ್ಟ ಮಿತ್ರರೇಕೆ, ಅಷ್ಟು ದಿನ ಮಾತನಾಡಿಸದೆ ಇದ್ದ ತಂದೆಯೇ ಬಂದು ಎರಡನೆಯ ಮದುವೆ ಮಾಡಿಕೊಳ್ಳಲು ಹೇಳಿದಾಗ ಶಾಂತಿಲಾಲ ಒಪ್ಪಲಿಲ್ಲ. ತನ್ನ ಅನುಭವವನ್ನು ಅರಿತುಕೊಂಡು, ತನ್ನ ಮಗನಿಗಾಗಿ— ತನ್ನ ಸುಖದ—ತ್ಯಾಗ-ಮಾಡಲು ಸಿದ್ಧನಾಗಿದ್ದ. ಮೊದಲನೆಯ ಮಹಾಯುದ್ಧದ ದೆಸೆಯಿಂದ ಹತ್ತಾರು ಲಕ್ಷಗಳ ವರೆಗೆ ಗಳಿಸಿದ್ದನೆಂದು ವದಂತಿ ಇತ್ತು. ಅಂದು ಐದುವರುಷದ ಸೋಹನನು, ಇಂದು ಇಪ್ಪತ್ತರ ಗಡಿದಾಟಿದ್ದನು. ತನ್ನ ಸೊಸೆ ಮನೆಗೆ ಬರಬೇಕು, ಹಂಗುಸರಿಲ್ಲದ ಮನೆ ತುಂಬಿದಂತಾಗಬೇಕು— ಎನ್ನುವ ಆಶೆ ಶಾಂತಿಲಾಲನಿಗೆ ಒಂದೇ ಸವನೆ ಕಟೆಯುತ್ತಿತ್ತು.

ಚತುರ್ಭುಜನಾಗಿ, ಒಂದು ವರುಷದಲ್ಲಿಯೆ ಸೋಹನಲಾಲನು ಹೆಂಡತಿಯನ್ನು ಮನೆಗೆ ಕರೆದುತಂದನು. ಸೋಹನಲಾಲ ಎಷ್ಟು ವಿಶ್ವಾಸವಿಟ್ಟಿದ್ದನೋ ಅದರ ನೂರ್ಮಡಿಯುಷ್ಟು ವಿಶ್ವಾಸ-ಆದರಗಳನ್ನು ಸೋಹನಲಾಲನ ಹೆಂಡತಿ, ಮಾವನ ಬಗೆಗೆ ಇಟ್ಟಿದ್ದಳು. ದಾಸಿಯರೂ, ಆಡಿಗೆಯವರೂ ಇದ್ದರೂ, ಅನುದಿನವೂ ಅನೇಕ ಸಾಮಾನುಗಳನ್ನು ಸೊಸೆಯೇ ಪೂರೈಸುತ್ತಿದ್ದಳು. ಊಟವನ್ನು ಸಹ ಸೊಸೆಯೇ ಬಡಿಸಬೇಕು. ಊಟ-ಉಡುಗೆ- ಉಪಚಾರಗಳಲ್ಲಿ ಆಕೆ ವಿಶೇಷ ಲಕ್ಷ್ಯತೆಗೆದುಕೊಳ್ಳುತ್ತಿದ್ದಳು. ಶಾಂತಿಲಾಲನು ಯಾವ ವಿಧವಾದ ಬೇಸರಕ್ಕೆ, ಅಲಸ್ಯಗಳೂ ಇಲ್ಲದಂತೆ 'ಊಟವಾಯಿತು, ತನ್ನ ಅಂಗಡಿಯಾಯಿತು' ಎನ್ನುವಷ್ಟು ನಿರ್ಲಿಪ್ತನಾಗಿದ್ದನು. ಇವನ ಒಂದು

ಅಂಗಡಿಗೆ ಹತ್ತು ಅಂಗಡಿಗಳು ಪ್ರಾರಂಭವಾಗಿದ್ದರೂ ಅವುಗಳ ಕಡೆಗೆ ಕಣ್ಣೆತ್ತಿ ನೋಡುತ್ತಿರಲಿಲ್ಲ. ಇವನ ವಿಲ್ಲುಗಳು ಯಾವು, ಅಂಗಡಿಗಳು ಎಷ್ಟು? — ಎನ್ನುವುದೇ. ಇವನಿಗೆ ತಿಳಿಯುದು. ಎಲ್ಲಾ ಸೋಹನಲಾಲನ ಅಡಳಿತಕ್ಕೆ ಸೇರಿತ್ತು.

ಶಾಂತಿಲಾಲ ಕುಂಜಾ ದಣಿದು ಮನೆಗೆ ಬಂದವನೇ ಒಂದು ಗಂಟೆ ವಿಶ್ರಾಂತಿ ಪಡೆದು ಊಟಕ್ಕೆ ಕುಳಿತ ಊಟದ ಕೊನೆಯಲ್ಲಿ ಅನ್ನದ ಮೇಲೆ ಒಂದು ಬಟ್ಟಲು ಮೊಸರು ಬಿದ್ದಿತು. ಕೆನೆಮೊಸರು ಸ್ವಲ್ಪಸ್ವಲ್ಪವಾಗಿ ಹೊಟ್ಟೆಯನ್ನು ಸೇರಿತು. ಎಂದೂ ಇಲ್ಲದ ರುಚಿ ಆ ದಿನದ ಮೊಸರಿನಲ್ಲಿ ಇತ್ತೆಂದು ಅವನ ಪ್ರಸನ್ನವದನ ಹೇಳುತ್ತಿತ್ತು. ಇನ್ನೊಂದು ಬಟ್ಟಲು ಮೊಸರಿಗಾಗಿ ಸೊಸೆಯನ್ನು ಕೇಳಿದ. ಸೊಸೆ ಬೀರುವನ್ನು ತೆಗೆದು ನೋಡಿದಳು. ಅದರಲ್ಲಿ ಇನ್ನು ಕೇವಲ ಎರಡೇ ಬಟ್ಟಲುಗಳು ಇದ್ದುವು. ತನಗೊಂದು ತನ್ನ ಗಂಡನಿಗೊಂದು— ಎಂದು ಎಣಿಸಿ ಇಟ್ಟಂತೆ ಎರಡೇ ಬಟ್ಟಲುಗಳನ್ನು ನೋಡಿ, ರಾತ್ರಿಯ ಹಾಲು ಕೈತಪ್ಪಿ ಜಾರಿದ್ದುದು ನೆನಪಿಗೆ ಬಂದಿತು. ನಡೆದ ಸಂಗತಿಯನ್ನು ಹೇಳಿ, ಮೊಸರು ಇಲ್ಲವೆಂದಳು. ಮಾವ ಇದರ ಬಗೆಗೆ ಸ್ವಲ್ಪವೂ ಯೋಚಿಸದೆ ತನ್ನ ಕೋಣೆಗೆ ಹೋಗಿ ಮಲಗಿದ.

ಸೋಹನಲಾಲನೂ ಊಟಕ್ಕೆ ಕುಳಿತಾಗ ಮತ್ತೊಂದು ಬಟ್ಟಲು ಮೊಸರಿಗಾಗಿ ಕೇಳಿದ. ಅದೇನೊ, ಅವನಿಗೂ ಆ ದಿನ ಎಂದೂ ಇಲ್ಲದ ರುಚಿ ಇತ್ತೆಂದು ತೋರುತ್ತಿತ್ತು! ಹೆಂಡತಿ, ತನಗೆ ಇಲ್ಲವಾದರೂ ಸರಿಯೆ.... ಗಂಡನನ್ನು ತೃಪ್ತಿಪಡಿಸಬೇಕೆಂಬ ಬಯಕೆಯಿಂದ, ತನಗಾಗಿ ಇದ್ದ ಮೊಸರನ್ನೇ ಬಡಿಸಿದಳು. ನೀರುಬೇಕೆಂದು ಬಂದ ಶಾಂತಿಲಾಲನು ಇದನ್ನು ಕಾಣದೆ ಇರಲಿಲ್ಲ. ಅವನಿಗೆ ಒಂದು ಬಗೆಯಾಗಿ ಮನಸ್ಸು ಕದಡಿತು:

"ಯಾರಿಗಾಗಿ ತ್ಯಾಗಮಾಡಿದೆ ನಾನು? ಇಷ್ಟೊಂದು ತ್ಯಾಗ ಮಾಡಿದ ನನಗೆ, ಎಂದೂ ಇಲ್ಲದೆ ಈ ದಿನ ಕೇಳಿದಾಗ, ಮೊಸರು ಇಲ್ಲವಾಯಿತೆ? ಗಂಡನಿಗೆ ಬಡಿಸುವಂತೆ ಪ್ರೇರಿಸಿದ ಮನಸ್ಸು, ನನಗೆ ಬಡಿಸಲು ಪ್ರೇರಿಸಲಿಲ್ಲವೇ? ಹೆಣ್ಣು ಸ್ವಾರ್ಥಿ!" ಎಂಬುದಾಗಿ ವಿಚಾರ ಸುಳಿಯಿತು. "ಹೆಣ್ಣೇನು ಸ್ವಾರ್ಥಿಯಲ್ಲ, ತ್ಯಾಗಿಯೇ ಸರಿ," ಎಂಬುದಾಗಿ ಒಂದು ಯೋಚನೆಗೆ ಆಕಾಲನೆ ಕೊಟ್ಟನು: "ತಾಯಿ ತನ್ನ ಮಗನಿಗಾಗಿ ಯಾವ ಕಷ್ಟವನ್ನಾದರೂ ಸಹಿಸಬಲ್ಲಳು. ಆದರೆ ಮಗನನ್ನು ನಂಬಿ ಬಂದ ಸೊಸೆಯ ಬಗೆಗೆ ಸ್ವಲ್ಪವಾದರೂ ಸಹಾನುಭೂತಿ ಸುಳಿಯಲಾರದು. ಹೆಂಡತಿ ಗಂಡನಿಗಾಗಿ ಸರ್ವತ್ಯಾಗ ಮಾಡಬಲ್ಲಳು; ಆದರೆ ಗಂಡನನ್ನೇ ನಂಬಿರುವ ಅವನ ಅಣ್ಣ-ತಮ್ಮಂದಿರು-ಮಲಮಕ್ಕಳುಗಳನ್ನು ಕಾಸಿಗೆ ಕಡೆಯಾಗಿ ತುಚ್ಛೀಕರಿಸಲು ಹಿಂದೆ ಮುಂದೆ ನೋಡಲಾರಳು. ಏಳಿಗೆಗೆ ಕಾರಣರಾದವರನ್ನೋ ಅಪ್ಪನನ್ನೋ ಅಪ್ಪನನ್ನೋ, ಹೆಂಡತಿಯ ಪ್ರೇರಣೆ— ನತತ ಸಿದ್ಧತೆಗಳು ಇಲ್ಲದೆ ಯಾವ ಗಂಡನೂ ಹೀನಾಯ ಗೊಳಿಸಲಾರನು. ಬೀರೆ ಸಿಡಿದು ಹೋಗಲಾರನು." ಎಂದೆಂದು ಏನೇನೋ ಯೋಜನೆಗಳನ್ನು ತನ್ನ ಹಿಂದಿನ ಮತ್ತು ಆ ದಿನದ ಅನುಭವಗಳ ತಳಪಾಯದ ಮೇಲೆ ಕಟ್ಟಿದನು. "ಈ ವಯಸ್ಸಿನಲ್ಲೇ ಹೀಗಾಯಿತು. ಮುಂದೆ ಮುಪ್ಪಿನಲ್ಲಿ ಗತಿ ಏನು?" ಎಂಬ ಚಿಂತೆ ಅವನನ್ನು ಅವರಿಸಿತು. ಈ ಮೊಸರಿನಂತಹ ಕ್ಷುದ್ರ ಕಾರಣ, ತಪ್ಪಿತವನ್ನು ಪುಷ್ಪಾಪೋರುವನ್ನಾಗಿ ಮೆರೆಸಿತು. "ನನ್ನದೆಂಬ ಪ್ರಾಣ ಈ ಜಗತ್ತಿನಲ್ಲಿ ಬೇಕು. ನನ್ನ ದೇಹದ ಸುಖಕ್ಕಾಗಿ, ಮುಪ್ಪಿನ ಯೋಜನೆಗಾಗಿ, ನನಗಾಗಿ ತ್ಯಾಗಮಾಡುವ ಸೇವೆ ಮಾಡುವ ಹೆಣ್ಣೊಂದು ಬೇಕು" ಎಂಬ ಕೊನೆಯ ದೃಢ ನಿರ್ಧಾರಕ್ಕೆ ಶಾಂತಿಲಾಲನು ಮುಟ್ಟಿದನು. ಇದಕ್ಕಾಗಿಯೆ ಅನೇಕ ವಾರಗಳನ್ನು ಅಶಾಂತಿಯಿಂದ ಕಳೆದನು.

ಒಂದುರಾತ್ರಿ ಶಾಂತಿಲಾಲ ಎಲ್ಲಿಗೋ ಹೋದವನು, ಒಂದು ವಾರದ ನಂತರ ಮನೆಗೆ ಬಂದನು. ಜೊತೆಗೆ ಪದಿನೆಂಟು ಇಪ್ಪತ್ತು ವಯಸ್ಸಿನ ಹೆಂಡತಿಯನ್ನೂ ಕರೆತಂದ. ಮನೆಯ ಪಾತಿಗೆ-ಅಂಗಡಿಯಲ್ಲಿ —ಹದಿನೈದು ಸಾವಿರ ರೂಪಾಯಿಗಳ ಖರ್ಜೂರಂದನ್ನು ನೋಡಿ ಸೋಹನಲಾಲ ಸುಮ್ಮಗಾದ.

ಯಾರಿಗೂ ಜಗ್ಗದೇ ಇದ್ದು ತನ್ನ ತಾರುಣ್ಯವನ್ನು ಕಳೆದ ಶಾಂತಿಲಾಲನು, ಕೇವಲ ಮೊಸರಿಗಾಗಿ ಹೀಗಾಗುವುದೇ? ಮನುಷ್ಯನ ಮನಸ್ಸೇ ವಿಚಿತ್ರ. ಯಾವ ಗಳಿಗೆಯಲ್ಲಿ ಹೇಗಿರುವುದೋ ಅವನಿಗೇ ತಿಳಿಯದು. ಕೇವಲ ಒಂದು ಚಿಕ್ಕ-ಕ್ಷಮಾಯೋಗ್ಯ ಅಪರಾಧಕ್ಕಾಗಿ-ಕಾರಣಕ್ಕಾಗಿ-ಮಾನವನ ಮನಸ್ಸು ಹಿಡಿತ ತಪ್ಪಿಹೋಗಿ, ತನ್ನ ಧ್ಯೇಯಗಳನ್ನು ಮೂಲೆಗುಂಪು ಮಾಡುವುದಕ್ಕೂ ಆತ ಹಿಂಜರಿಯಲಾರ ಎನ್ನುವುದಕ್ಕೆ ಶಾಂತಿಲಾಲನೇ ಸಾಕ್ಷಿ.

ಯಾರ ಮಾತಿಗೂ ಒಪ್ಪದ—ಒತ್ತಾಯಕ್ಕೆ ಬಗ್ಗದ— ಶಾಂತಿಲಾಲನು ಮದುವೆಯಾದದ್ದು ಊರಿಗೇ ಆಶ್ಚರ್ಯದ ಮಾತಾಯಿತು. ಸೋಹನಲಾಲ ದಂಪತಿಗಳಿಗೆ ಇದೊಂದು-ಹಿಡಿಯಲಾರದ ಸಮಸ್ಯೆಯಾಗಿಯೆ ಉಳಿಯಿತು.

ಹೊಸ ಸಾಹಿತ್ಯಿಕ ತಂತ್ರಗ್ರಂಥವೊಂದು
ಮಾರಾಟಕ್ಕೆ ಸಿದ್ಧವಾಗಿದೆ!

ಲೇಖನಕಲೆ

ಲೇಖಕರು: ಶ್ರೀ. ವಿರ್ಜಿ ಅಣ್ಣಾರಾಯರು

ಸಣ್ಣಕತೆ, ಕಾದಂಬರಿ, ನಾಟಕ, ಏಕಾಂಕ ನಾಟಕ, ಪ್ರಬಂಧ, ಭಾವಚಿತ್ರ ಇತ್ಯಾದಿ ಸಾಹಿತ್ಯಾಂಗಗಳ ತಂತ್ರಗಳನ್ನು ಸೋದಾಹರಣವಾಗಿ ವಿವರಿಸುವ ಗ್ರಂಥ. ಕನ್ನಡದಲ್ಲಿ ಇದೇ ಮೊದಲನೆಯದು.

ಮಾರಾಟಗಾರರು:
ಸಮಾಜ ಪುಸ್ತಕಾಲಯ, ಧಾರವಾಡ

ಗಂಧಕಾಮ್ಲ

(ರಾಸಾಯನಿಕಗಳ ರಾಜ)

ಶ್ರೀ. ವೆಂಕೋಬಾಚಾರ್ಯ ಉಪಾಧ್ಯಾಯ, ಎಂ. ಎಸ್‌ಸಿ.
ಲಕ್ಕರ್ ಸಿಟಿ ಕಾಲೇಜ್, ಹೈದರಾಬಾದ್.

★

ವಿಜ್ಞಾನವು ಜೀವನಕ್ಕೆ ಪ್ರಯೋಜನವನ್ನು ಒದಗಿಸಿಕೊಡುವಲ್ಲಿ ಗಂಧಕಾಮ್ಲ-ಪಡೆಯುವ ಸ್ಥಾನ ಮಾನವು, ತುಂಬ ಮಹತ್ವದುದು. ಇಂತಹ ಗಂಧಕಾಮ್ಲವನ್ನು ಹೇಗೆ ನಿರ್ಮಿಸಬೇಕು ನಾವು?

★

ಪ್ರಪಂಚದಲ್ಲಿ ಉದ್ಯಮದಲ್ಲಿ ಗಂಧಕಾಮ್ಲದ ಉಪಯೋಗವಿರುವುದರಿಂದ, ಎಲ್ಲಿಯ ವರೆಗೆ ಇಮು ಹಿಂದುಸ್ತಾನದಲ್ಲಿ ಸಾಕಷ್ಟು ಪ್ರಮಾಣದಲ್ಲಿ ತಯಾರಾಗುವುದಿಲ್ಲವೋ ಅಲ್ಲಿಯವರೆಗೆ ಹಿಂದುಸ್ತಾನದ ರಾಸಾಯನಿಕ ಉದ್ಯಮಗಳಲ್ಲಾಗಲಿ ಅಥವಾ ಮತ್ತಿತರ ಉದ್ಯಮಗಳಲ್ಲಾಗಲಿ ಏಳಿಗೆಯಾಗುವಂತಿಲ್ಲ. ಈ ಆಮ್ಲವನ್ನು ತಯಾರಿಸಲಿಕ್ಕೆ ಬೇಕಾದ ಕಚ್ಚಾವಸ್ತುಗಳಲ್ಲಿ ಪ್ರಕೃತಿದತ್ತವಾದ ಗಂಧಕ (Brimstone) ಮತ್ತು ಆಯರ್ನ್ ಪೈರಿಟೀಜ್ ಮುಖ್ಯವಾದುವುಗಳು ಪ್ರಕೃತಿದತ್ತವಾದ ಗಂಧಕವು ಕೇವಲ ಬಲುಚಿಸ್ತಾನ ಮತ್ತು ಸಿಮ್ಲಾದ ಗುಡ್ಡಗಳಲ್ಲಷ್ಟೇ ಸಿಕ್ಕಿರುತ್ತದೆ. ಆಯರ್ನ್ ಪಲ್ಫ್ಯಾಯಿಡು, ಸಿಮ್ಲಾದ ಹತ್ತಿರದಲ್ಲಿರುವ ತಾರಾದೇವಿ ಎಂಬ ಸ್ಥಳದಲ್ಲಿಯೂ ಮತ್ತು ಹೈದರಾಬಾದು ದಕ್ಷಿಣದಲ್ಲಿರುವ ತಾಂಡೂರು ಕಲ್ಲಿದ್ದಲಿಯ ಕಣಿಯಲ್ಲಿಯೂ ಸಿಕ್ಕುತ್ತದೆ. ಹಿಂದುಸ್ತಾನದಲ್ಲಿ ಇಲ್ಲಿಯ ವರೆಗೆ, ಗಂಧಕಾಮ್ಲವನ್ನು ತಯಾರಿಸಲಿಕ್ಕೆ ಬೇಕಾಗುವ ಗಂಧಕವನ್ನು ಸಿಸಿಲಿ, ಜಪಾನು ಮತ್ತು ಅಮೇರಿಕೆಗಳಿಂದ ಬರಮಾಡಿಕೊಳ್ಳುತ್ತಿದ್ದರು. ಯುದ್ಧದ ಮೂಲಕ ಸಿಸಿಲಿ, ಮತ್ತು ಜಪಾನಿನಿಂದ ಗಂಧಕದ ಆಯಾತ ನಿಂತ ಕಾರಣ, ಸದ್ಯ ಅಮೇರಿಕೆಯಿಂದ ಬರುವ ಗಂಧಕವನ್ನೇ ಉಪಯೋಗಿಸಲ್ಪಡುತ್ತಿದೆ.

ಗಂಧಕಾಮ್ಲವನ್ನು ತಯಾರಿಸಬೇಕಾದರೆ ಗಂಧಕವನ್ನು ಅಥವಾ ಗಂಧಕ ಮತ್ತು ಕಬ್ಬಿಣದಿಂದ ಕೂಡಿದ ಒಂದು ಸಂಯುಕ್ತವಸ್ತುವಾದ ಆಯರ್ನ್ ಪೈರಿಟೀಜ್ (Iron Pyrites) ನ್ನು ಭಟ್ಟಿಗಳಲ್ಲಿ ಸುಡುತ್ತಾರೆ. ಸುಡುವುದರಿಂದುಂಟಾದ, ಗಂಧಕದ ಡಾಯಿಆಕ್ಸಾಯಿಡು (Sulphur Dioxide) ಮತ್ತು ಗಾಳಿಯಲ್ಲಿದ್ದ ಆಮ್ಲಜನಕ ಇವುಗಳ ರಾಸಾಯನಿಕ ಮಿಲನದಿಂದ ಮತ್ತೊಂದು ಸಂಯುಕ್ತವು ತಯಾರಾಗುತ್ತದೆ. ಈ ಸಂಯುಕ್ತಕ್ಕೆ ಗಂಧಕದ ಟ್ರಾಯಿಆಕ್ಸಾಯಿಡ್ ಎಂದು ಹೆಸರು. ಸಾಮಾನ್ಯ ಸ್ಥಿತಿಯಲ್ಲಿ ಗಂಧಕದ ಡಾಯಿಆಕ್ಸಾಯಿಡು ಮತ್ತು ಆಮ್ಲಜನಕಗಳ ನಡುವೆ ರಾಸಾಯನಿಕಕ್ರಿಯೆಯು ಬಹಳ ಸಾವಕಾಶವಾಗಿ ಆಗುತ್ತದೆ. ಆದರೆ ಇವುಗಳಲ್ಲಿ ಕೆಲವೊಂದು ಕ್ರಿಯಾವೇಗವರ್ಧಕ (Catalysts) ಗಳನ್ನು — ಉದಾಹರಣವಾಗಿ, ಮಹಾರಜತ ಅಥವಾ ಪ್ಲಾಟೀನಂ — ಉಪಯೋಗಿಸಿದರೆ, ರಾಸಾಯನಿಕ ಕ್ರಿಯೆಯ ವೇಗವು ಹೆಚ್ಚಾಗಿ, ಗಂಧಕದ ಡಾಯಿಆಕ್ಸಾಯಿಡು ಬಹುಬೇಗ ಟ್ರಾಯಿಆಕ್ಸಾಯಿಡಿನಲ್ಲಿ ಪರಿವರ್ತನೆಯಾಗುತ್ತದೆ. ಟ್ರಾಯಿಆಕ್ಸಾಯಿಡು ತಯಾರಾದ ನಂತರ ಗಂಧಕಾಮ್ಲವನ್ನು ತಯಾರಿಸುವುದು ಸುಲಭವಾದ ಕೆಲಸ. ಏಕೆಂದರೆ ನೀರಿನ ಮೇಲೆ ಬಹು ಬೇಗ ಈ ಆಕ್ಸಾಯಿಡಿನ ಕ್ರಿಯೆಯಾಗಿ, ಗಂಧಕಾಮ್ಲವು ಹುಟ್ಟುತ್ತದೆ. ಸಾಮಾನ್ಯವಾಗಿ ಈ ವಿಧಾನಕ್ಕೆ 'ಸಂಪರ್ಕವಿಧಾನ' (Contact Process) ವೆಂದು ಕರೆಯಲಾಗಿದೆ. ಈ ವಿಧಾನವಲ್ಲದೆ, ಗಂಧಕಾಮ್ಲವನ್ನು ತಯಾರಿಸುವ ಇನ್ನೊಂದು ವಿಧಾನವೂ ಇದೆ. ಇದರಲ್ಲಿ ಗಂಧಕದ ಡಾಯಿಆಕ್ಸಾಯಿಡು, ಗಾಳಿ ಮತ್ತು ನೀರನ್ನು ನೈಟ್ರಿಕ್‌ಆಕ್ಸಾಯಿಡ್ ಅನಿಲ (Nitric Oxide Gas) ದ ಸಾನ್ನಿಧ್ಯದಲ್ಲಿ ಪರಸ್ಪರ ಕಲೆಯುವುದಕ್ಕೆ ಬಿಟ್ಟುಬಿಡುತ್ತಾರೆ. ಇದರಿಂದ ದುರ್ಬಲ ಗಂಧಕಾಮ್ಲದ (Dilute Sulphuric Acid) ದ್ರಾವಕವು ತಯಾರಾಗುತ್ತದೆ. ಅನಂತರ ಇದನ್ನು ಬೆಚ್ಚಗೆ ಮಾಡಿ, ಇದರಲ್ಲಿದ್ದ ನೀರನ್ನು ಬೇರ್ಪಡಿಸಿ, ನಿರ್ಜಲ ಗಂಧಕಾಮ್ಲ

ಕಳೆದ ಹನ್ನೆರಡು ವರ್ಷಗಳಿಂದ ಕನ್ನಡದ ಸೇವೆ ಮಾಡುತ್ತಿರುವ
ದಕ್ಷಿಣ ಕನ್ನಡ ಜಿಲ್ಲೆಯ ಒಂದೆ ಒಂದಾದ
ಸಾಹಿತ್ಯಿಕ—ಲೋಕಪ್ರಿಯ—ಪುರೋಗಾಮಿ ಎಂದು ಹೆಸರಾದ

ಕನ್ನಡ ಮಾಸಪತ್ರಿಕೆ

ವಾ. ಚಂ. ಅಂ. ನೆ. ಸೇರಿ ೨-೪-೦ | ಧುರೀಣ | ಬಿಡಿಸಂಚಿಕೆಗೆ ೦-೩-೦

ಸಂಪಾದಕರು

ಶ್ರೀ. ಆರ್. ಎಸ್. ಶೆಣೈ ....
ಶ್ರೀ. ಬನ್ನಂಜೆ ರಾಮಾಚಾರ್ಯ

ಕನ್ನಡನಾಡಿನ ಸಮರ್ಥ ಬರೆಹಗಾರರ ಕತೆ, ಕವನ, ಲೇಖನಗಳಿಂದ ತುಂಬಿದ ಸಂಚಿಕೆಗಳು. ಜಾಹೀರಾತು ಕೊಡಬೇಕೆನ್ನುವವರಿಗೆ ಅತ್ಯುತ್ತಮ ಸಾಧನ.

ಮ್ಯಾನೇಜರ್ :—
ಧುರೀಣ ಉಡುಪಿ (ದ. ಕ. ಜಿಲ್ಲಾ)

ಬಡತನದ ಬಾಳು

'ಆನಂದಕಂದ'ರ ಕಥಾಸಂಗ್ರಹ.

ಕನ್ನಡ ಜನತೆಯ ಜೀವನದ ನಿಜವಾದ ಚಿತ್ರ
ಇದರಲ್ಲಿ ಮೂಡಿದೆ.
ಬೇಕಾದವರು
'ಜಯಂತಿ' ಕಾರ್ಯಾಲಯಕ್ಕೆ
ಬರೆಯಿರಿ.

(Concentrated Sulphuric Acid) ವನ್ನು ತಯಾರಿಸುತ್ತಾರೆ. ಈಕ್ರಿಯೆಯು ಒಂದು ಸೀಸದಕೋಣೆಯಲ್ಲಿ ಆಗುವುದರ ಮೂಲಕ, ಈ ವಿಧಾನಕ್ಕೆ "ಕೋಣೆಯ ವಿಧಾನ" (Chamber Process) ಎಂದು ಹೆಸರು ಕೊಡಲಾಗಿದೆ. ಈ ಎರಡೂ ವಿಧಾನಗಳು ಹೆಚ್ಚಿನ ಪ್ರಮಾಣದಲ್ಲಿ ಗಂಧಕಾಮ್ಲವನ್ನು ತಯಾರಿಸಲಿಕ್ಕೆ ಉಪಯೋಗವಾಗುತ್ತವೆ.

ಸದ್ಯ ಹಿಂದುಸ್ತಾನದಲ್ಲಿ ಗಂಧಕಾಮ್ಲವು ಹೆಚ್ಚಿನ ಪ್ರಮಾಣದಲ್ಲಿ ಜಮಷೀದಪೂರ (ಟಾಟಾ ಆಯರ್ನ್ ಅಂಡ್ ಸ್ಟೀಲ್ ಕಂಪನಿ) ಕಲಕತ್ತೆ (ಬಂಗಾಲ ಕೆಮಿಕಲ್ ಅಂಡ್ ಫಾರ್ಮಾಸ್ಯೂಟಿಕಲ್ ವರ್ಕ್ಸ್), ಮೈಸೂರು (ಕೆಮಿಕಲ್ಸ್ ಆಂಡ್ ಫರ್ಟಿಲಾಯಿಜರ್ಸ್), ಮದ್ರಾಸು (ಪೆರ್ರಿ ಆಂಡ್ ಕಂಪನಿ), ಮುಂಬಯಿ (ಧರ್ಮಸಿ ಮುರಾರಜಿ), ಅಮೃತಸರ (ಶಂಭೂನಾಥ ಅಂಡ್ ಸನ್ಸ್), ಆಗ್ರಾ (ಮೈನಿಂಗ್ ಆಂಡ್ ಕೆಮಿಕಲ್ ಇಂಡಸ್ಟ್ರೀಜ್ ಲಿಮಿಟೆಡ್), ಹೈದರಾಬಾದು (ಹೈದರಾಬಾದ ಕೆಮಿಕಲ್ಸ್ ಆಂಡ್ ಫರ್ಟಿಲಾಯಿಜರ್ಸ್), ಮತ್ತು ಕಾನಪೂರ (ಕಾನಪೂರ ಕೆಮಿಕಲ್ ವರ್ಕ್ಸ್) ಗಳಲ್ಲಿ ತಯಾರಾಗುತ್ತದೆ. ಜಮಷೀದಪೂರ, ಕಲ್ಕತ್ತೆ ಮತ್ತು ಮೈಸೂರುಗಳಲ್ಲಿ "ಸಂಪರ್ಕವಿಧಾನ"ದಿಂದಲೂ, ಉಳಿದೆಲ್ಲ ಕಾರಖಾನೆಗಳಲ್ಲಿ "ಚೇಂಬರ್‌ವಿಧಾನ" ದಿಂದಲೂ ತಯಾರಿಸುತ್ತಾರೆ.

ಪ್ರಯೋಗ ಶಾಲೆಯಲ್ಲಿ ಗಂಧಕಾಮ್ಲವು, ಬಹುತರವಾಗಿ ಎಲ್ಲ ಆಸಿಲಗಳನ್ನು ಶುದ್ಧ ಮಾಡುವಾಗ, ಅವುಗಳಲ್ಲಿದ್ದ ತೇವವನ್ನು ಅಥವಾ ನೀರನ್ನು ಹೀರಿಕೊಳ್ಳುವುದಕ್ಕೆ 'ಜಲಗ್ರಾಹಕ' (Drying Agent) ದಂತೆ ಉಪಯೋಗವಾಗುವುದಲ್ಲದೆ, ನೈಟ್ರೇಟ್, ಸಲ್ಫೇಟ್ ಸಂಯುಕ್ತಗಳನ್ನು ತಯಾರಿಸುವ ವಿಧಾನಗಳಲ್ಲಿಯೂ ಕೂಡ ಉಪಯೋಗವಾಗುತ್ತದೆ. ಉದ್ಯಮಗಳಲ್ಲಿ ಇದನ್ನು, ಹೈಡ್ರೊಕ್ಲೋರಿಕ್ ಮತ್ತು ನೈಟ್ರಿಕ್ ಆಮ್ಲ, ಪಟಕ, ಮೇಗ್ನೀಷಿಯಂ ಸಲ್ಫೇಟು, ಫೆರ್ರಿಸ್ ಸಲ್ಫೇಟು, ಕೃತಕಗೊಬ್ಬರ, ಸಿಡಿಮದ್ದು ಮತ್ತು ಬಣ್ಣಗಳ ತಯಾರಿಯಲ್ಲಿ ಉಪಯೋಗಿಸುತ್ತಾರೆ.

ಒಟ್ಟಿನ ಮೇಲೆ ಹೇಳಬೇಕಾದರೆ, ಬಹುತರ ಎಲ್ಲ ರಾಸಾಯನಿಕ ವಸ್ತುಗಳನ್ನು ತಯಾರಿಸಬೇಕಾದರೆ ಗಂಧಕಾಮ್ಲವು ಬೇಕೇ ಬೇಕು. ಕಾರಣ ವಿಜ್ಞಾನಿಗಳು ಇದಕ್ಕೆ "ರಾಸಾಯನಿಕಗಳ ರಾಜ" (King of Chemicals) ನೆಂದೂ, ಹಾಗೂ ಇದು ಪ್ರತಿಯೊಂದು ಉದ್ಯಮದ ಪ್ರಗತಿಯ ನಿರ್ದಿಷ್ಟತೆಯನ್ನು ಗೊತ್ತು ಪಡಿಸುವುದರಿಂದ ಇದಕ್ಕೆ "ಉದ್ಯಮದ ಸ್ಥಿತಿ ಸೂಚಕ" (Barometer of Industry) ನೆಂದೂ ಕರೆದಿದ್ದಾರೆ. ಇದಲ್ಲದೆ, ಗಂಧಕಾಮ್ಲದ ವ್ಯಯದ ಮೇಲೆ ಯಾವುದೇ ದೇಶದ ಸರಿಯಾದ ವ್ಯಾವಹಾರಿಕ ಸಮಾಧಾನಕಾರಕತೆಯನ್ನು ತೀರ್ಮಾನಿಸಲಾಗುತ್ತದೆ; ಎಂದ ಮೇಲೆ ಉದ್ಯಮಗಳಲ್ಲಿ ಇದರ ಮಹತ್ತ್ವದ ವಿಷಯಕ್ಕೆ ಹೆಚ್ಚಿಗೆ ಹೇಳಬೇಕಾಗಿಲ್ಲ.

ವಸಂತ ಮಾಲಿಕೆ

ವರ್ಷ ಒಂದಕ್ಕೆ ೩೦೦ ಪುಟಗಳನ್ನು ಲಲಿತಸಾಹಿತ್ಯ ೨ ಅಥವಾ ೩ ಪುಸ್ತಕಗಳಲ್ಲಿ.
ಮಾಲಿಕೆಯ ಮೊದಲನೆಯ ಪುಷ್ಪ ಈಗ ತಾನೆ ಅಚ್ಚಾಗಿದೆ.

ಶ್ರೀ. ಕಡೆಂಗೋಡ್ಲು ಶಂಕರ ಭಟ್ಟರ ಗಾಜಿನ ಬಳೆ ಮತ್ತು ಇತರ ಕಥೆಗಳು.

— ಇಂದೇ ಚಂದಾದಾರರಾಗಿರಿ —

ಹೆಚ್ಚಿನ ಮಾಹಿತಿಗೆ—
ಸಂಪಾದಕರು:— ವಸಂತ ಮಾಲಿಕೆ,
ಬೆಸೆಂಟ್ ರಾಷ್ಟ್ರೀಯ ಬಾಲಿಕಾ ಪಾಠಶಾಲೆ
ಕೊಡಿಯಾಲಬೈಲು, ಮಂಗಳೂರು.

ಬಿಡಿ ಪ್ರತಿಗಳ ಮಾರಾಟಗಾರರ.—
ದಿ ಇಂಡಿಯನ್ ಇಂಡಸ್ಟ್ರಿಯಲ್ಸ್ ಎಂಡ್
ಏಜನ್ಸೀಜ್— ಪುಸ್ತಕ ವ್ಯಾಪಾರಿಗಳು,
ಹಂಪನಕಟ್ಟೆ, ಮಂಗಳೂರು.

ಕರ್ಣನ ಮೂರು ಚಿತ್ರಗಳು

(ಸಾಹಿತ್ಯಿಕ ಚರ್ಚೆಯೊಂದು)

ಬರೆದವರು: ಶ್ರೀಮಾನ್ ಶಂ. ಬಾ. ಜೋಶಿ (ಶ್ರೀ ಬಿ. ವೆಂಕಟ ನಾರಾಯಣಪ್ಪನವರ ಸ್ಮಾರಕ ಉಪನ್ಯಾಸ, ಮುದವಾಸು ೧೯೬೬);
ಸಂಪಾದಕರು: ಮಾಧವ ಬಲ್ಲಾಳ ಬಂಧುಗಳು, ಧಾರವಾಡ.

ಕನ್ನಡದಲ್ಲಿ ವಿಮರ್ಶಾ ಗ್ರಂಥಗಳ ಕೊರತೆಯಿರುವಾಗ, ಒಂದು ಉತ್ಕೃಷ್ಟ ಸಂಶೋಧನೆಯಿಂದೊಡಗೂಡಿದ ವಿಮರ್ಶೆಯ ಈ ಪುಟ್ಟ ಪೊತ್ತಿಗೆಯನ್ನು ಓದುಗರ ಕೈಯಲ್ಲಿರಿಸಿ, ಅವರ ವಿಚಾರಪ್ರಚೋದನೆಗೆ ಕಾರಣರಾದ ಪ್ರೀ. ಶಂ. ಬಾ. ಜೋಶಿಯವರನ್ನು ಮನ ಮುಟ್ಟಿ ಅಭಿನಂದಿಸದಿರಲಾರೆವು. ಅವರು ಎತ್ತಿಕೊಂಡ ವಿಷಯವನ್ನು ಆನೇಕರು ದಿನಾಲು ಭಾರತವನ್ನು ಓದುವಾಗ ಎದುರಿಸುತ್ತಿರಬಹುದು. ಅವರಿಗೆ ಕರ್ಣನ ಸ್ವಭಾವದಲ್ಲಿ ಕಂಡುಬರುವ ವ್ಯತ್ಯಾಸದ ಸಮಸ್ಯೆಯವನ್ನು ಹೇಗೆ ಮಾಡಿಕೊಳ್ಳಬೇಕೆಂಬ ಕಲ್ಪನೆಯೇ ಗೋಚರಿಸದು. ಆದು ವಿಮರ್ಶಕನ ಸೂಕ್ಷ್ಮದೃಷ್ಟಿಯಲ್ಲಿ ಮಾತ್ರ ನುಸುಳಿಕೊಂಡು ಹೋಗದು. ಬೇರೆ ಬೇರೆ ಕವಿಗಳು ತಮ್ಮ ಬುದ್ಧಿಸಾಮರ್ಥ್ಯದಿಂದ ಕಥಾವಸ್ತುವನ್ನು ತಮ್ಮ ಕಲ್ಪಕತೆಗೆ ಸರಿದೂಗುವಂತೆ ಮಾರ್ಪಡಿಸಿಕೊಳ್ಳಬಹುದು. ಹಾಗೆ ಮಾಡುವಲ್ಲಿ ಅವರು ವಾಸ್ತವತೆ-ಸತ್ಯ-ಮಾನಸ ಶಾಸ್ತ್ರಗಳ ಎಲ್ಲೆಯನ್ನು ಮೀರಕೂಡದು. ಈ ದೃಷ್ಟಿಯಿಂದಲೇ ಪ್ರೀ. ಜೋಶಿಯವರು ಕುಮಾರವ್ಯಾಸ-ಪಂಪ-ವ್ಯಾಸರ ಭಾರತಗಳಲ್ಲಿನ ಕರ್ಣನ ಸ್ವಭಾವವನ್ನು ವಿಶ್ಲೇಷಿಸಿ ವ್ಯಾಸನ ಕರ್ಣನಿಗೆ ಸಾಧಾರವಾಗಿ ಅಗ್ರಸ್ಥಾನ ಕೊಟ್ಟಿದ್ದಾರೆ.

ಕರ್ಣನು ದಾನಶೂರನೆಂದು ಈಗಲೂ ನಾವು ಹೇಳುತ್ತೇವೆ. ಈ ವಿಷಯವನ್ನು ಪ್ರೀ. ಜೋಶಿಯವರು ಚರ್ಚಿಸಿ ಅವನನ್ನು ಅವಿಚಾರಿಯೆಂದು ತೋರಿಸುವಷ್ಟು ಮಟ್ಟಕ್ಕೆ ಬಂದು ನಿಂತಿದ್ದಾರೆ. ಆತನು ಅವಿಚಾರಿಯೂ ಆಹುದು; ಧರ್ಮಸಂಕಟದಲ್ಲಿ ಬುದ್ಧಾನ ನಿರ್ಣಯಕ್ಕೆ ಬಾರದೆ ಆತ್ಮಾಹುತಿಗೆ ಸಿದ್ಧನಾಗುವ ಮನೋದುರ್ಬಲನೂ ಆಹುದು. ಈ ಸಮಸ್ಯೆ ನಮಗೆ ಸುಮಾರು ನಲವತ್ತು ವರುಷಗಳ ಹಿಂದೆ ಮಹಾಭಾರತವನ್ನೋದುವಾಗ ಕಂಡಿದ್ದಿತು. ಆದನ್ನು ಕಾಲಾಂತರದಲ್ಲಿ ಕೂಲಂಕಷವಾಗಿ ಚರ್ಚಿಸಿದ್ದರೂ ಅವನ್ನೊಂದು ಬರೆಹದ ರೂಪಕ್ಕಿಳಿಸಿರಲಿಲ್ಲ. ಆ ಕಾರ್ಯವನ್ನು ಪ್ರೀ. ಜೋಶಿಯವರು ಕೈಕೊಂಡು, ಒಂದು ನಿರ್ಣಯಕ್ಕೆ ಬಂದು, ಆದನ್ನು ಧೈರ್ಯವಾಗಿ ಪ್ರಕಟಿಸಿ, ನಮ್ಮ ಮೇಲಿನ ಭಾರವನ್ನು ಇಳಿಸಿಬಿಟ್ಟಿದ್ದಾರೆ.

ವ್ಯವಹಾರದಲ್ಲಿ ಕಂಡು ಬರುವ ಭಿನ್ನ ಭಿನ್ನ ಸ್ವಭಾವಗಳ ಪಾತ್ರಗಳನ್ನು ಭಾರತದಲ್ಲಿ ನಾವು ಕಾಣುತ್ತೇವೆ. ಅವುಗಳಲ್ಲಿ ಕೆಲವು ಬಹಳ ತೊಡಕಿನವಾಗಿವೆ. ಅವುಗಳನ್ನೆಲ್ಲ ಅಲ್ಲಿ ವಾಸ್ತವತೆಗೂ ಮಾನಸಶಾಸ್ತ್ರಕ್ಕೂ ಹೊಂದಿಕೆಯಾಗುವಂತೆ ರಚಿಸಿಕೊಂಡುದು ಕಂಡು ಬರುತ್ತದೆ. ಅಂತಹವುಗಳಲ್ಲಿ ಕರ್ಣನದೊಂದು. ಆತನು ಕಂಡುಕೊಂಡ ತನ್ನ ಜನ್ಮದ ಅನಿಶ್ಚಿತತೆ, ಪರಶುರಾಮನಿಂದ ತಾನು ಕ್ಷತ್ರಿಯನೆಂದು ತಿಳಿದುಕೊಂಡ ಸಂಗತಿ, ತನ್ನಲ್ಲಿ ಪೌರುಷವಿದೆ. ಮತ್ತು ತಾನು ಶೂರರನ್ನು ಗೆಲ್ಲುವವನು ಎಂಬ ಆತ್ಮವಿಶ್ವಾಸ, ಕ್ಷತ್ರಿಯರು ತನ್ನನ್ನು ಇಳಿಕೆಗೆಯ್ಯಬಹುದೆಂಬ ಊನಗಂಡ (inferiority complex), 'ರಾಧೇಯ'ನೆಂಬ ಹೆಸರು ಉಚ್ಚಾರವಾದ ಕೂಡಲೆ ಆತನು ಅಂತಃಕರಣದಲ್ಲಿ ಪಟ್ಟುಕೊಳ್ಳುವ ಬೇಧ, ಅದನ್ನು ದೂರಮಾಡಲು ಸ್ವಾರ್ಥಿಯೂ ದೂರದರ್ಶಿಯೂ ಆದ ದುರ್ಯೋಧನನು ತನ್ನನ್ನು ಅಂಗರಾಜನನ್ನು ಮಾಡಿದ ಬಗೆಗೆ ಆ ಅರಸನಲ್ಲಿ ತನಗುಂಟಾದ ಜೋಳದವಾಳಿ, ಅದರ ಮೂಲಕವಾಗಿ ಸತ್ತ್ವಶಾಲಿಯಾದ ತಾನು ಆ ಅರಸನ ದುಷ್ಕೃತ್ಯಗಳನ್ನು ಸಹಿಸುವುದಲ್ಲದೆ ತನ್ನ ಸತ್ತ್ವವನ್ನು ಮರೆತು ಅವುಗಳಲ್ಲಿ ತಾನು ಸಹಭಾಗಿಯಾಗುವುದು—ಇಂತಹ ಎಲ್ಲ ಸನ್ನಿವೇಶಗಳ ಮೂಲಕವಾಗಿ ಆತನಲ್ಲಿ ಉಂಟಾಗಿರುವ ಮನೋದುರ್ಬಲತೆ ಮತ್ತು ತಾಯಿಯ ಮೇಲಿನ ತನ್ನ ಸಾತ್ತ್ವಿಕ ಸಿಟ್ಟು ಇವೆಲ್ಲ ಒಟ್ಟಾರೆ ಸೇರಿ ಕರ್ಣನ ಸ್ವಭಾವದೊಳಗಿನ ತೊಡಕಿಗೆ ಕಾರಣ. ಇವುಗಳನ್ನು ಪ್ರೀ. ಜೋಶಿಯವರು ಅಲ್ಲಲ್ಲಿ ಸೂಕ್ಷ್ಮವಾಗಿ ತೇಲಿಸಿ ಹೇಳಿಬಿಟ್ಟಿದ್ದರೂ, ಕರ್ಣನ ಸ್ವಭಾವದ ಈ ತಳಹದಿಯನ್ನು ಅವರು ಆರಂಭದಲ್ಲಿ ಚರ್ಚಿಸಿದ್ದರೆ ಒಳಿತಾಗುತ್ತಿತ್ತಲ್ಲದೆ ಕರ್ಣಾರ್ಜುನರ ಕಾಳಗದಲ್ಲಿ ಕಂಡುಬಂದ ಕರ್ಣನ ಸ್ವಭಾವವನ್ನು ತಿಳಿದುಕೊಳ್ಳಲು ಬಹಳ ಅನುಕೂಲವಾಗುತ್ತಿತ್ತೆಂದು ಹೇಳಬಹುದು. ಆದರೆ ಈ ಪುಸ್ತಿಕೆ ಒಂದು ಉಪನ್ಯಾಸದ ವಿಸ್ತೃತಭಾಗವಾಗಿರುವುದರಿಂದ ಎಲ್ಲ ಸಂಗತಿಗಳನ್ನು ಆಮೂಲಾಗ್ರವಾಗಿ ಚರ್ಚಿಸುವುದು ಪ್ರೀ. ಜೋಶಿಯವರಿಗೆ ಸಾಧ್ಯವಾಗಿಲ್ಲ.

ಕೊನೆಯಲ್ಲಿ ಈ ಪುಸ್ತಿಕೆಯಲ್ಲಿ ಕಂಡು ಬರುವ ಮಹತ್ತ್ವವಾದ ಒಂದು ದೋಷವನ್ನು ಎತ್ತಿ ತೋರಿಸದೆ ಬಿಡುವ ಹಾಗಿಲ್ಲ. ಅವರು ಆಧಾರಕ್ಕೆಂದು ಎತ್ತಿಕೊಂಡ ಆ ಆಗ್ರಂಥಗಳೊಳಗಿನ ಭಾಗಗಳನ್ನು ಇದ್ದಕ್ಕಿದ್ದಂತೆ ಇಟ್ಟಿದ್ದರೆ ಒಳಿತಾಗುತ್ತಿತ್ತು. ಹಾಗೆ ಮಾಡದೆ ಅವುಗಳಲ್ಲಿನ ಪದಗಳನ್ನು ನಿಂಗಡಿಸಿ ಉಪಹರಿಸುವುದರಿಂದ ಸ್ವಾಭಾವಿಕವಾಗಿ ಅಲ್ಲಿದ್ದ ಭಾಷಾ ಸೌಂದರ್ಯವು ಅಳಿದು ಹೋಗಿದೆ. ಅವರು ಹಾಗೆ ಮಾಡಿದುದರಲ್ಲಿ ಎಲ್ಲರಿಗೂ ಸುಲಭವಾಗಿ ಅರ್ಥವಾಗಬೇಕೆಂಬ ಉದ್ದೇಶವಿದೆಯೆಂಬುದೇನೋ ನಿಜವಾದರೂ, ಸೌಂದರ್ಯಜ್ಞಾನಿಯ ವಿಚಾರ ಅವರ ಮನಸ್ಸನ್ನು

ಏಕೆ ಹಿಡಿಯುವಿಲ್ಲವೋ ಅಯಿತು. ಇನ್ನು ಈ ಪುಸ್ತಿಕೆಯನ್ನು
ಓದುವವರು ಸಾಮಾ ಾಗಿ ವಿದ್ಯಾವ್ಯಾಸಂಗಿಗಳಾಗಿರಬಹುದಾ
ದುದರಿಂದ, ಸುಲಭಾ ಿ ಪೃಷ್ಟಿಯಸ್ಪೆತ್ತುವ ಅವಶ್ಯಕತೆಯೇ
ತೋರುವುದಿಲ್ಲ. ಈ ವಿಷಯವಾಸಭಾರತದೊಳಗಿನ ಶ್ಲೋಕ
ಗಳನ್ನು ಉದಹರಿಸು ಇನ್ನೂ ಹೆಚ್ಚು ಸ್ಪುಟವಾಗಿ ಕಂಡು
ಬರುತ್ತದೆ. ಕನ್ನಡ ಕ ಗಳ ಅವತರಣಿಕೆಗಳನ್ನು ಅವರು ಪದ
ಬಿಡಿಸಿ ಗದ್ಯರೂಪಕೊ ಲು ಕಂಸಿದ್ದರೆ, ಸಂಸ್ಕೃತ ಶ್ಲೋಕ
ಗಳನ್ನು ಪದ ಬಿಡಿಸಿ ಪದ ಸಃ ಗಳೆ ಕೊಟ್ಟದ್ದಾರೆ. ಅದರಿಂದ
ಆ ಶ್ಲೋಕಗಳ ವಿಕಾರ ಪ ಸಹ್ಯತೆಯನ್ನುಂಟುಮಾಡುವಲ್ಲಿ
ಪರಿಣಮಿಸುತ್ತದೆ.

ಅಚ್ಚಿನ ದೋಷಗಳ ನೇ ಗಿವೆ. ಈ ಬಗೆಗೆ ಶ್ರೀ. ಜೋಶಿ
ಯವರು ಹೊಣೆಗಾರರಲ್ಲ ಇ ಕಾಲಮಹಿಮೆ. ಈ ವಿಷಯ
ಪುಸ್ತಕಗಳನ್ನು ಅಚ್ಚುಹ ಸಹಾಯಕರಿಗೇ ಗೊತ್ತು. ಮಹಾನು-
ಭಾವರಾದ ಅಪ್ಪರದ ರಿಗೆನ್ನು ಹೊಂದಿಸುವವರಿಗೆ ನಮ್ಮ
ಪತಪಃ ವಂದನೆಗಳು. ಕೊ ಪ್ರತಿಯೆ ಮಹಿಮೆಯ ಮುಂದೆ
ಈ ದೋಷಗಳು ಅಚಿಗಿ ಗಣ್ಯತ್ವವು ಇಂತಹ ಸ್ವಭಾವ ನಿಶ್ಚೀ-
ಷಣಾತ್ಮಕವಾದ ಬಹು ಸಾರಾಂಶ ವಿಮರ್ಶೆಯ ಈ ಪುಸ್ತಿಕೆ
ಯನ್ನು ಒದಗಿಸಿಕೊಟ್ಟ ಶ್ರೀ. ಜೋಶಿಯವರಿಗೆ ಮತ್ತೊಮ್ಮೆ
ನಾವು ಧನ್ಯವಾದಗಳನ್ನ ತ್ತೆವೆ.

—ಕೆ. ಜಿ. ಕೆ.

ಕಳ್ಳಸಂತೆ ಮತ್ತಿತರ ಕತೆಗಳು

ಲೇಖಕರು: ಶ್ರೀ. ಬೇಂ ಕ್ಷಿ ಬೀಳಗಿ ; ಧಾರವಾಡದ ಲಂಕ
ಶಾಮಿತ್ರ ಪುಸ್ತಕಭಂಡಾರ.

'ಚಕಮಕಿ'ಯ ಸಂ ಮೊ: ಶ್ರೀ. ಬೇಂದ್ರೆ ಲಕ್ಷ್ಮಣ-
ರಾಯರ ಎರಡನೆಯ ಕಥ ಂಕಲನವು. 'ಕಳ್ಳಸಂತೆ' ತಂಗಿಗೆ
ಉಡುಗೊರೆ, 'ಮುಂದಾ ಕ್ಟೇಟರ್', 'ತಿಮ್ಮಣ್ಣನ ಪ್ರಣಯ
ಪುರಾಣ', 'ರಾಣಿ ಕಲಿಸಿ ತಿ', 'ಟಿನೋನೊ'—ಹೀಗೆ ಏಳು
ಸಣ್ಣ ಕತೆಗಳಿವೆ ಇವ ಾನ್ನ 'ಕಳ್ಳಸಂತೆ' ಎಂಬ
ಕತೆಯ ತಲೆಕಟ್ಟನ್ನು ಇಡಿ ಲಸ್ಥಿಕೊಡಲಾಗಿದೆ.

'ಕಳ್ಳಸಂತೆ' ಎಂಬ ಕ ವಿವಿ ಪೇಟೆಗೆ ಸಂಬಂಧಿಸಿದ್ದಲ್ಲ;
ಗುರಪ್ಪ ಜೀವಣರಾಯರು ಗೆ ಬೇರೆ ಯಾವಾಗ, ಒಬ್ಬರನ್ನೊಬ್ಬರು
ತಪ್ಪಿಸಿ ತಮ್ಮ ಕಾರ್ಯಸಾ ಳಿಗೆ ಹೊಂಚು ಹಾಕಿದರೂ.
ಕೊನೆಗೊಮ್ಮೆ ಒಂದೇ ಸ್ಥಳ ಪುರಿಯ ಮನೆಯ ಮುಂದೆ
ಕೂಡಿದಾಗ, ಇಬ್ಬರ ಕಳ್ಳಗ ಂಬೆಂದು ಗೊತ್ತಾಗಿ, ಗುಟ್ಟು
ರಟ್ಟಾಗುವುದು. ಆಗ ಗೆಳ ರ್ ತಮ್ಮ ನೈಜ ಧ್ಯೇಯ-
ಸಾಧನೆಗಾಗಿ ಹೆಣಗುವರು. ತ್ತು. ಗೋಮಾಂತಕದ
ಸಾಂವರ್ಭಿಕ ವರ್ಣನೆಯಲ್ಲಿ ರ, ತಮ್ಮ ಕಾವ್ಯಲಹರಿ-
ಯನ್ನು ಹರಿಬಿಟ್ಟಿರುವರು. ದಲಿಂದ ಕೊನೆಯ ವರೆಗೂ
ಕಥಾನಕದಲ್ಲಿ ಓದುಗನಿಗೆ ತ್ಮಕತೆಯುವ ಪ್ರಸಂಗ
ಒಂದರೂ, ಹವಣುಮೀರಿದ ಕ್ಕೆಡೆಸಿಕ್ಕದಂತಾಗಿದೆಯೆಂದು
ಕೆಲವರು ಹೇಳಬಹುದಾಗಿದೆ. ಗಪ್ಪ ಜೀವಣರಾಯರ ಪಾತ್ರ-
ಪರಿಪೋಷಣೆಯ ಕಲೆಗೆ ಯಾರೂ ತಲೆದೂಗುವಂತಿದೆ. ಐದಾರು
ವಾಕ್ಯಗಳಲ್ಲಿ ಈ ಇಬ್ಬರ ಗಾಢಪರಿಚಯ ಮಾಡಿಕೊಡುವ ಕತೆ-
ಗಾರರ ಕೌಶಲ ಹೆಚ್ಚಿನದು.

'ತಂಗಿಗೆ ಉಡುಗೊರೆ' ಒಂದು ರುದ್ರಕತೆ. ವಸ್ತು ರ್ಗಳ್ಳ-
ನೆಯು ಆಗಸ್ಟ್ ಆಂದೋಲನಕ್ಕೆ ಸಂಬಂಧಪಟ್ಟದ್ದು. ತಿಮ್ಮ-
ರಾಮಿಯರ ಸರಸಸಲ್ಲಾಪ ಕೊನೆಗೆ ಇಷ್ಟು ಭಯಾನಕತೆಯಲ್ಲಿ
ಮಾಪರ್ಯವಸಾನವಾದೀತೆಂಬ ಸುಳಿವು ಯಾರಿಗೂ ಎನಿಸುವಂತಿಲ್ಲ.
ಪಾಟೀಲ ಸಂಗನಗೌಡರಂತಹ ನಿಸ್ಪೃಹ ದೇಶಭಕ್ತರ ರಕ್ಷಣೆಗಾಗಿ
ರಾಮಿ ಆತ್ಮಾರ್ಪಣೆ ಮಾಡಿದುದರಲ್ಲಿ ಆ ಪಾತ್ರದ ಉಜ್ವಲತೆ
ಸ್ಪುಟವಾಗಿ ತೋರುವುದು. ಕತೆಗಾರರು ಇಂತಹ ವಾಸ್ತವ
ನಿವೇಶವನ್ನು ಮನಮುಟ್ಟುವಂತೆ ಚಿತ್ರಿಸಿ ಓದುಗರ ಹೃದಯ-
ವನ್ನು ಸೂರೆಗೊಳಿಸಿರುವರು.

'ರಾಣಿ ಕಲಿಸಿದ ನೀತಿ'ಯಲ್ಲಿ ಒಂದು ಸಂಸ್ಥಾನದ ಆವ್ಯವಸ್ಥೆಯ
ನೀತಿ ಬಾಹಿರತೆಯು ಅಡಳಿತದ ಚಿತ್ರವಿದೆ. ಸ್ವತಃ ರಾಣಿಯೇ
ಗಿಲ್ಟಿಯುಂತಹ ತುಂಟ ಹೆಣ್ಣುಗಳಿಗೆ ಪ್ರೋತ್ಸಾಹಿಸುತ್ತಿರುವುದು
ಎಷ್ಟೂ ಶ್ರೇಯಸ್ಕರವಲ್ಲವೆಂದು ಓದುಗರಿಗೆ ಮನದಟ್ಟಾಗುವುದು.
ಡಾಕ್ಟರ್ ರಾಮರಾಯರ ಸ್ನೇಹಿತರ ಕಥನಜಾತುರ್ಯವು ಮೊದಲಿ
ನಿಂದಲೂ ಎದ್ದು ಕಾಣುವುದು.

'ಟಿನೋನೊ' ಒಂದು ಇಂಗ್ಲಿಷಕತೆಯ ಅನುವಾದ. ಅನುವಾದದ
ಭಾಷೆ ಲಲಿತವಿದೆ. ಭಾವಗರ್ಭಿತ ಶಬ್ದಜೋಡಣೆಯಿಂದ, ಚಿಕ್ಕ
ಚಿಕ್ಕ ವಾಕ್ಯಗಳಿಂದ ಇಡೀ ಕತೆಗೆ ಕಳೆಕಟ್ಟಿದೆ. ಪಾತ್ರ ಸಾಗೂ
ಸಂನಿವೇಶಗಳಲ್ಲಿ ವಿಶಾಗ್ರತೆ ತಳೆದ ಓದುಗನಿಗೆ ಇಲ್ಲಿಯೂ ವಾತಾ-
ವರಣ ಪರದೇಶದ್ದೆಂಬ ಅರಿವೇ ತಲೆದೋರದು. ಅಂತಹ
ಸ್ವಾಭಾವಿಕತೆ ಮನೆಮಾಡಿದೆ. ಅನ್ಯಭಾಷೆಯಿಂದ ತಮ್ಮ ಭಾಷೆಗೆ
ಪರಿವರ್ತಿಸಲು ಹಾತೊರೆದು ನಿಂತಾಲೆಗೊಂಡ ಲೇಖಕರಿಗೆ ಇಲ್ಲಿಯ
ಶೈಲಿ ಮಾರ್ಗದರ್ಶಕವಾಗಿದೆ.

'ತಿಮ್ಮಣ್ಣನ ಪ್ರಣಯ ಪುರಾಣ' ವಾಸ್ತವತೆಯ ಕೊರತೆಯು
ಮೂಲಕ—ಕಥಾನಕದ ನೈಸರ್ಗಿಕವಿದ್ದರೂ—ನಿಶ್ಚಿತ ಪರಿ
ಣಾಮವನ್ನುಂಟುಮಾಡಲಾರದು. 'ಮುಂದಾ' 'ದಿಕ್ಟೇಟರ್'
ಕತೆಗಳು ಸಾಮಾನ್ಯವಾಗಿವೆ. ಘಟನೆ, ಪಾತ್ರನಿರೂಪಣೆಯಲ್ಲಿ
ಅಂತಹ ಅಸಾಧಾರ್ವತೆ ಕಾಣಬಾರದು.

ಮುನ್ನುಡಿಕಾರ ಬೇಂದ್ರೆಯವರು, ಒಳ್ಳೆ ಕತೆಗಾರರು ಎಂದು
ಈಗಾಗಲೆ ಹೆಸರುವಾಸಿಯಾಗಿರುವವರು. ಈ ಕಥಾಸಂಕಲನವು ಅವರ
ಕಲೋಪಾಸನೆಗೆ ಸಾಕ್ಷಿಯಾಗಿ ನಿಂತಿದೆ. ಮನದ ವಿಚಾರವನ್ನು
ಹಿಂಗಿಸಲು, ಬುದ್ಧಿ-ಭಾವನೆಗಳಿಗೆ ಚಾಲನೆ ಕೊಡಲು, ಜಗತ್ತಿನ
ವಿಲಕ್ಷಣತೆಯನ್ನು ಜೊಟ್ಟುಮಾಡಿ ತೋರಿಸಲು ಶ್ರೇಯುಕರ
'ಕಳ್ಳಸಂತೆ' ಅತ್ಯಂತ ಸಾಹಾಯ್ಯಕಾರಿಯಾಗಿದೆ. ಎಲ್ಲಕ್ಕೂ
ಮಿಂಚ್ಚಾಗಿ ವಾಸ್ತವತೆಗೆ ಮೊಗೆ ಹೋಗಿ ಜೀವನದ ರಸಿಕತೆ
ತೋರ್ಪಡಿಸುವುದರಲ್ಲಿ ಬೇಂದ್ರೆಯವರಿಗೆ ಹೊಸಗನ್ನಡ ಸಾಹಿತ್ಯ
ದಲ್ಲಿ ನಿಶ್ಚಿತ ಸ್ಥಾನವಿದೆ.

ಶ್ರೀ. ಎನ್. ಎಸ್. ಗದಗಕರ

ಸಾದರ ಸ್ವೀಕಾರ

೧೭೨. ರಕ್ತಾಂಜಲಿ (ಕವನ ಸಂಗ್ರಹ). ಬರೆದವರು ಶ್ರೀ. ವಿ. ಜಿ. ಭಟ್ಟ ಅವರು. ಪ್ರಕಾಶಕರು ಶ್ರೀ. ಮ. ಗ. ಸೆಟ್ಟಿ ಅಂಕೋಲಾ. ಸೋಲ್ ಏಜಂಟರು: ಶ್ರೀ. ಆರ್. ಎನ್ ಛೇಣೈ ಜಿಲ್ಲಾ ಸೇವಾದಳ ಕಾರವಾರ, ಕ್ರೌ. ಆ. ೯೨ ಪುಟಗಳು; ಬೆಲೆ ೧–೦–೦.

೧೭೩. ಸಂಧಿಕಾಲ (ಸಣ್ಣ ಕತೆಗಳ ಸಂಗ್ರಹ). ಲೇಖಕರು ಶ್ರೀ. ಕುಳಕುಂದ ವಿವರಾಯರು. ಪ್ರಕಾಶಕರು ಜನತಾಸಾಹಿತ್ಯ, ಮರಾಠಾಗಲ್ಲಿ, ಹುಬ್ಬಳ್ಳಿ. ಕ್ರೌ. ಆ. ೯೦ ಪುಟಗಳು. ಬೆಲೆ ೧–೪–೦.

೧೭೪. ರಕ್ತಸರೋವರ (ಸಣ್ಣ ಕತೆಗಳ ಸಂಗ್ರಹ) ಲೇಖಕರು ಶ್ರೀ. ಕುಳಕುಂದ ವಿವರಾಯರು. ಪ್ರಕಾಶಕರು ಶ್ರೀ. ಮ. ಗ. ಸೆಟ್ಟಿ, ಗೌ. ಕಾರ್ಯದರ್ಶಿ, ಕರ್ನಾಟಕ ಸಂಘ, ಗೋಕರ್ಣ ಕ್ರೌ. ಆ. ೯೬ ಪುಟಗಳು. ಬೆಲೆ ೧–೪–೦.

೧೭೫. ವಿಧಿತಂದ ವಧು (ಅನುವಾದಿತ ಕಾದಂಬರಿ). ಅನುವಾದಕರು ಶ್ರೀ. ಪಿ. ವೆಂಕೋಬಾಚಾರ್ಯ ಬಿ. ಎ. ಬಿ. ಟಿ. ಹುಬ್ಬಳ್ಳಿಯ ಸಂಜೀವಿನಿ ಪ್ರಕಾಶನ ಸಂಸ್ಥೆಯ ೩ನೆಯ ಗ್ರಂಥ. ಕ್ರೌ. ಆ. ೧೪೪ ಪುಟ. ಬೆಲೆ ೧–೪–೦.

೧೭೬. ಪುನರಾಗಮನ (ಐತಿಹಾಸಿಕ ಕಾದಂಬರಿ). ಲೇಖಕರು ಶ್ರೀ ಧನ್ವಂತ. ಬೆಂಗಳೂರು. ಪ್ರಕಾಶಕರು ಪಿ ಎಚ್. ಎನ್. ರಾವ್ ಬ್ರದರ್ಸ್, ಜಿಕ್ಕಜೇಟಿ— ಬೆಂಗಳೂರು ನಗರ. ಕ್ರೌ. ಅ. ೧೩೦ ಪುಟಗಳು. ಬೆಲೆ ೧–೪–೦.

೧೭೭. ನಾಗರಿಕ (ನೂತನ ವಾರಪತ್ರಿಕೆ). ಸಂಪಾದಕರು ಎಸ್. ಹನುಮಂತರಾವ್ ಎಂ. ಎ. ಸಹಸಂಪಾದಕರು ಶ್ರೀ. ಪತ್ತಾತ್ರೇಯ ಅವರಾದಿ 'ಸಿದ್ಧಾಂತರತ್ನ'. ಪ್ರಕಾಶಕರು: ನಾಗರಿಕ ಕಾರ್ಯಾಲಯ, ಜಗತ್–ಗುಲ್ಬರ್ಗಾ. ವಾ. ಚಂ. ೬ ರೂಪಾಯಿ. ಬಿಡಿ ಸಂಚಿಕೆಗೆ ೦–೩–೦.

೧೭೮. ಕರ್ನಾಟಕ ವಿಕೇಂದ್ರೀಕರಣ ಕೈಪಿಡಿ (ಭಾಗ ೧). ವಿವಿಧ ಲೇಖಕರ ಬೇರೆ ಬೇರೆ ಲೇಖನಗಳ ಸಂಕಲನ. ಅಖಿಲ ಕರ್ನಾಟಕ ತರುಣ ಕಾರ್ಯಕರ್ತರ ಮಹಾಸಭೆಯ ಪ್ರಕಟಣೆಯುದು. ಕ್ರೌ. ಅ. ೧೦೨ ಪುಟಗಳು. ಬೆಲೆ ೦–೧೨–೦.

೧೭೯. ಮೂರಾಬಟ್ಟೆ (ಸ್ವತಂತ್ರ ಸಾಮಾಜಿಕ ಕಾದಂಬರಿ). ಲೇಖಕರು ಶ್ರೀ. ವಿ ಎಂ. ಇನಾಮದಾರ ಎಂ. ಎ. ಅವರು. ಧಾರವಾಡದ ರಂಗ-ಮಂಗ ಪ್ರಕಾಶನದವರು ಪ್ರಕಾಶಕರು. ಕ್ರೌ. ೨ ೩೪೪ ಪುಟಗಳು. ಬೆಲೆ ೩–೧೨–೦.

೧೮೦. ಕರ್ಣನ ಮುಂಬರು ಕೈಗಳು (ಸಾಹಿತ್ಯ ವಿಮರ್ಶಾತ್ಮಕ ಗ್ರಂಥ). ಬರೆದವರು ಶ್ರೀ. ಶಂ. ಬಾ. ಜೋಶಿ ಧಾರವಾಡ. ಪ್ರಕಾಶಕರು ನಾಡಿನ ಬಲ್ಲಾಳ ಬಂಧುಗಳು ಧಾರವಾಡ. ಕ್ರೌ. ಆ. ೬೨ ಪುಟ. ಬೆಲೆ ೧–೪–೦.

೧೮೧. ಮುಂಬಯಿ ಪ್ರಾಂತದ ನಾಡಿನ ಕರ್ನಾಟಕರ ಕಾರ್ಯವಿವರ (ಕನ್ನಡ ಭಾಷಾಂತರ). ಲೇಖಕರು ಶ್ರೀ. ಕೆ. ಎನ್. ಗದಗಕರ ಬಿ. ಎ. ಎಲ್‌ಎಲ್. ಬಿ. ನವಲಗುಂದ ಮತ್ತು ಧಾರವಾಡ. ಲೇಖಕರೇ ಪ್ರಕಾಶಕರು. ಡೆ. ಆ. ೪೪ ಪುಟಗಳು. ಬೆಲೆ ೧–೬–೦. ಸೋಲ್ ಏಜಂಟರು: ಭಾರತ ಬುಕ್ ಡಿಪೊ, ಧಾರವಾಡ.

೧೮೨. ಮನೆಮದ್ದು (ಔಷಧಗಳ ವಿಚಾರ). ಲೇಖಕರು ಡಾ. ಕೊರಡ್ಕಲ್ಲ ವೆಂಕಟರಾವ್ ಎಂ. ಎ ಎಂ. ಉಡುಪಿ. ಪ್ರಕಾಶಕರು: ನವಭಾರತ ಪುಸ್ತಕಾಲಯ ಉಡುಪಿ. ಕ್ರೌ. ೮೦ ಪುಟಗಳು. ಬೆಲೆ ೨–೮–೦.

೧೮೩. ಡ್ರಾಯಿಂಗ್ ಶಿಕ್ಷಕ (ಚಿತ್ರಕಲಿಸುವ ಪುಸ್ತಕ). ಲೇಖಕರು ಶ್ರೀ. ಆ. ಕಮಲಾಪುರ. ಡ್ರಾ. ಮಾಸ್ಟರ್. ಪ್ರಕಾಶಕರು ಶ್ರೀ. ಗು. ಮ ಜೋಶಿ ಸಾಹಿತ್ಯ ಮಂದಿರ, ಲೈನ್‌ಬಝಾರ್, ಧಾರವಾಡ. ಮಾರಾಟಗಾರರು: ಸುಪ್ರೀಮ್ ಸ್ಟೂಡಿಯೊ, ಸ್ಟೇಶನ್‌ರೋಡ್–ಹುಬ್ಬಳ್ಳಿ. ಕ್ರೌ ಆ. ೪೨ ಪುಟ. ಬೆಲೆ ೧–೨–೦.

೧೮೪. ಎರಡು ಸೆಳೆತ (ಅನುವಾದಿತ ಕಾದಂಬರಿ) ಮೂಲ ಬಂಗಾಲೀ ಲೇಖಕರು ಶ್ರೀ ಶಾಂತಿ ವಂದ್ಯೋಪಾಧ್ಯಾಯ. ಅನುವಾದಕರು ಶ್ರೀ ಸುರೇಂದ್ರ ಮಲ್ಲಾರಿ. ಧಾರವಾಡದ ಪ್ರತಿಭಾ ಗ್ರಂಥಮಾಲೆಯ ೩ನೆಯ ವರ್ಷದ ೩ನೆಯ ಕೆರಣ. ಕ್ರೌ. ಆ. ೧೪೪ ಪುಟಗಳು. ಬೆಲೆ ೧–೪–೦.

೧೮೫. ಗೃಹದಾಪ (ಅನುವಾದಿತ ಕಥಾಸಂಕಲನ). ಮೂಲ ಹಿಂದೀ ಲೇಖಕರು ದಿವಂಗತ ವೃಂದಾವನಲಾಲ್ ವರ್ಮಾ. ಅನುವಾದಕರು ಶ್ರೀ. ವೆಂಕಣ್ಣ ಮೇಲಿನಮಠ. ಧಾರವಾಡದ ಗ್ರಂಥಮಾಲೆಯ ೩ನೆಯ ವರ್ಷದ ೩ನೆಯ ಕೆರಣ. ಕ್ರೌ. ಆ. ೧೩೦ ಪುಟಗಳು. ಬೆಲೆ ೧–೮–೦.

೧೮೬. ಕರ್ನಾಟಕದ ಗಣ್ಯರಿಯಾದ ಕ್ರಾಂತಿವೀರರು (ವ್ಯಕ್ತಿಪರಿಚಯಗಳು). ಬರೆದವರು ಶ್ರೀ. ನಾಡಿಗ ಕೃಷ್ಣಮೂರ್ತಿ (ಈಗ ವಿದೇಶದಲ್ಲಿ). ಪ್ರಕಾಶಕರು: ಸಮಾಜ ಪುಸ್ತಕಾಲಯ ಧಾರವಾಡ. ಕ್ರೌ ಆ. ಬಗೆಬಗೆಯ ಬೆಲೆ ೦–೮–೦.

೧೮೭. ಕ್ರಾಂತಿಯ ಹಾದಿ (ವರ್ಷ (ಸಚಿತ್ರ ಗ್ರಂಥ). ಲೇಖಕರು ಶ್ರೀ ಮೇಖಂಡಿಮಠ್ಠರಿ. ಪ್ರಕಾರಕರು ಸಮಾಜ ಪುಸ್ತಕಾಲಯ, ಧಾರವಾಡ ಕ್ರೌ. ೧೬ ಪುಟಗಳು ಬೆಲೆ ೦–೧೬–೦.

ಅಹಮದ್‌ನಗರ ಜಯದೇವಶರಣ ಫಾರ್ಮಸಿ ಲಿ.
ಅಹಮದ್‌ನಗರ

ಅಧಿಕೃತ ಮುದ್ರೆ ಇದು. ಇದನ್ನು ನೋಡಿ ಔಷಧಿಗಳನ್ನು ಕೊಳ್ಳಿರಿ.

ಪಟ್ಟಣದಲ್ಲಿ ಬೀದಿಗಳಲ್ಲಿ ಸಂಚರಿಸುವ ಮಾರಾಟಗಾರರಿಂದ ಔಷಧಿಗಳನ್ನು ಕೊಳ್ಳಬೇಡಿರಿ. ಅವರು ಮಾರುವ ಔಷಧಿಗಳು ಕಲಬೆರಕೆಯಾಗಿರುವ ಸಂಭವವಿದೆ.

ಪೇಟೆಯಲ್ಲಿ ಮಾರಾಟಕ್ಕಿಟ್ಟಿರುವ ಔಷಧಿಗಳನ್ನು ಕೊಳ್ಳುವಾಗ ಅವುಗಳ ಮೇಲೆ ಅಂಟಿಸಿರುವ ಲೇಬಲ್ಲುಗಳನ್ನು ಚೆನ್ನಾಗಿ ಪರೀಕ್ಷಿಸಿ ಕೊಳ್ಳಿರಿ. ಲೇಬಲ್ಲುಗಳು ಹರಿದಿರುವ ಅಥವಾ ಅಳಿಸಿಹೋಗಿರುವ ಔಷಧಿಗಳನ್ನು ಕೊಳ್ಳಬೇಡಿರಿ.

ಔಷಧಿಗಳನ್ನು ಕೊಳ್ಳುವಾಗ ಅವುಗಳ ಮೇಲೆ ಅಂಟಿಸಿರುವ ಲೇಬಲ್ಲುಗಳಲ್ಲಿ ಬರೆದಿರುವ ಹೆಸರು, ಅವುಗಳ ಪ್ರಮಾಣ ಮತ್ತು ಅವುಗಳನ್ನು ಉಪಯೋಗಿಸಬೇಕಾದ ರೀತಿಯನ್ನು ಚೆನ್ನಾಗಿ ಪರೀಕ್ಷಿಸಿ ಕೊಳ್ಳಿರಿ. ಅವುಗಳಲ್ಲಿ ಯಾವುದಾದರೂ ಸಂದೇಹವಿದ್ದರೆ ಔಷಧಿಗಳನ್ನು ಕೊಳ್ಳಬೇಡಿರಿ.

ಔಷಧಿಗಳನ್ನು ಕೊಳ್ಳುವಾಗ ಅವುಗಳ ಬಾಟಲಿಗಳು ಚೆನ್ನಾಗಿ ಮುಚ್ಚಿವೆಯೆಂದು ಪರೀಕ್ಷಿಸಿ ಕೊಳ್ಳಿರಿ. ಬಾಟಲಿಗಳು ತೆರೆದಿರುವ ಔಷಧಿಗಳನ್ನು ಕೊಳ್ಳಬೇಡಿರಿ.

ಔಷಧಿಗಳನ್ನು ಕೊಳ್ಳುವಾಗ ಅವುಗಳ ಬಾಟಲಿಗಳು ಒಡೆದಿರುವ ಅಥವಾ ಬಿರುಕು ಬಿಟ್ಟ

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿ ಧಾರವಾಡ

ಹೆಡ್ ಆಫೀಸ್ ಧಾರವಾಡ

★ ವಿಮೆ ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಭರದಿಂದ ಜೀಯುತ್ತಿರುವ ಈ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!

★ ಮೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಖಾಸ ಎಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.

★ ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಲಂಬವಿಲ್ಲದೆ ಹಕ್ಕಿನ ಹಣ (Clain) ವನ್ನು ಸಲ್ಲಿಸಿರುವುದರಿಂದ, ಎಲ್ಲರ ನಂಬಿಗೆಗೂ ತಕ್ಕುದಾಗಿದೆ.

★ ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಡಸಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲೇಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ಮ್ಯಾನೇಜಿಂಗ್ ಡಾಯರೆಕ್ಟರ್
ಎ. ಎಸ್. ಕಿಣಿ

ಮ್ಯಾನೇಜರ್
ಎಮ್. ಗೋವಧ್ಸರಾವ



ರೀಟಾ: ತಲೆಯ ಕೂದಲನ್ನು ಸಳಸುವುದು.

ರೀಟಾ ಮೆದುಳಿಗೆ ಶಕ್ತಿಯನ್ನು ಕೊಟ್ಟು, ಮಿರುಗುವ ನೀಳವಾದ ಕೂದಲನ್ನು ಬೆಳಸಲು ಅದ್ಭುತವಾದ ಟೆಲ್ ಟಾನಿಕ್.

ರೀ ಟಾ

ತಲೆಯ ಕೂದಲು ಉದುರುವುದು, ನೆರೆಯುವುದು, ಹೊಟ್ಟು, ಉದುರುವುದು, ಕಟ್ಟಿತಲೆ, ಹೇನಿನ ಬಾಧೆ, ಇವೇ ಮೊದಲಾದ ತಲೆಯ ಕೂದಲಿಗೆ ಸಂಬಂಧಿಸಿದ ಸಮಸ್ತ ವ್ಯಾಧಿಗಳಿಗೂ ರೀಟಾ ಅಮೋಘವಾದ ಗುಣಕಾರಿ.

ಈಗಾಗಲೆ ಸಾವಿರಾರು ಜನ ಉಪಯೋಗಿಸಿ ಗುಣವನ್ನು ಹೊಂದಿದ್ದಾರೆ. ನೀವು ಕೂಡ ಇಂದಿನಿಂದಲೇ ರೀಟಾವನ್ನು ಉಪಯೋಗಿಸಿರಿ.

RITA
HAIR TONIC

ರೀಟಾ ಹಿಂದುಸ್ತಾನದಲ್ಲೆಲ್ಲಾ ದೊರಕುವುದು. ಬೆಲೆ:— ಸೀಸೆ ೧ಕ್ಕೆ ೧೫ ಆಣೆ.

Printed by Mr. V. Y. Jathar at the Karnatak Printing Works, Dharwar, and Published for the Proprietor Jayanti Publications, by M. V. Melligatti at the Jayanti Office, Dharwar.—9600-47.











ವಿಷಯಸೂಚಿ

ಮುನ್ನುಡಿ ವಿಷಯಗಳು

★

ಸಂಪಾದಕೀಯ (ಪತ್ರಿಕಾ ತರಂಗ)

'ಸಾಮಾಜಿಕ' ೧

ವಿಜ್ಞಾನದಲ್ಲಿ ಭಾರತೀಯ ಸಾಧನೆ (ಪುಂಖಾನುಪುಂಖವಾಗಿ)

ಸಂಪಾದಕರು ೩

ವೀರಣ್ಣನ ಬಡಿಸುಂಡಿಗೆಗಳು (ವ್ಯಂಗ್ಯಚಿತ್ರ)

'ಗುಡಗಪ್ಪ' ೫

ಚಲನಚಿತ್ರಗಳಲ್ಲಿ ಅಶ್ಲೀಲತೆ (ಕೋಡಿದ ಸೋಟ)

ಧಾರವಾಡದವ ೬

ಕನ್ನಡಕ್ಕೆ ಮರಳಿದ ಪ್ರತಿಭೆ (ಸಣ್ಣಕತೆ)

ಶ್ರೀ. ಪಿ. ಎಂ. ಲಕ್ಷ್ಮಣರಾಯರು, ಧಾರವಾಡ ೫

ಬಾಗಲಕೋಟ್ಟೆಯ ಹಿಂದೀ ಸುದ್ದಿಸಂಸ್ಥೆ (ಪರಿಚಯ)

ಶ್ರೀ ಬಿ. ಜಿ. ಕುಲಕರ್ಣಿ ಬಿ ಎ (ಅನರ್ಸ್) ಹುಬ್ಬಳ್ಳಿ ೧

ಸುಮ (ಕವನ)

ಶ್ರೀ. ಚಿನಾಸಂದ ಬಿ. ಎ. ಬೈಲಹೊಂಗಲ ೧೩

ಬಾಡಿದ ಹೂ (ಕವನ)

ಶ್ರೀ. ಎಸ್. ಎಸ್. ಒಡೆಯಪ್ಪನವರ, ಸೊಲ್ಲಾಪುರ ೧೫

ಕನ್ನಡ ಸಾಹಿತ್ಯದ ಸ್ವರೂಪವಿವರಣೆ (ಛಾಯಾಚಿತ್ರ)

ಶ್ರೀ. ಬೆಟಗೇರಿ ಕೃಷ್ಣಶರ್ಮ, ಧಾರವಾಡ ೧೬

ಅತಾಂಗನೆ (ಒಂದು ಸ್ಕೆಚ್)

ಶ್ರೀ. ಲೋಕೇಶ ವಿ. ಗುದಗನವರ, ಧಾರವಾಡ ೨೧

ಬಂಧ ವಿಧಿಮಂಡಲದ ನಿರೀಕ್ಷಣೆ (ಪರಿಚಯ)

ಶ್ರೀ. ಹ. ವಾ. ಜಂಭಾ ಬಿ. ಎ., ಎಲ್.ಎಲ್. ಬಿ. ೨೦

ಸ್ವಪ್ನ ವಿಮರ್ಶೆ ('ಪ್ರಣಯ ಗೆ' ಮತ್ತು 'ದೇವಲೋಕಾನುನುಷ್ಯ')

ಶ್ರೀ. ರಾ. ಕು. ಮತ್ತು ಶ್ರೀ. ಎಂ. ಜಿನರಾಜ

ಇವರ ಸ್ವೀಕಾರ ೨೩

ಪುಟ

ದಲಿ ಭಿನ್ನ

ಯ ಚಲಯಿಸ್ತೆ

ನವ ಮಾಡಿಲಾಗಿ

ಗಸ್ಥಿದು ಕಾರ್ಯ |

ಪ ಸಾಹಿತ್ಯಕನೆಗಿ

ಚಿತ್ರಕಲಾ ಪ್ರವೇ

(ವಿದ್ಯಾಮಾತೆಯ ಚಿತ್ರಕಲೆಯು ನೂತನ ಅಭ್ಯಾಸಕ್ರಮ ನುಸಾರವಾಗಿ

ಬರೆದವರು: ಶ್ರೀ ಗೋಪಾಲ ಶ್ರೀನಿವಾಸರಾವ ಪುದ್ದಾರ, ಕ. ಮಾತೆಲ್ಲಿ ಬೆಳಗಾಂವಿ.

ಚಿತ್ರಕಲೆಯು ಪರಿಚಯ ಸ್ವಲ್ಪವೂ ಇಲ್ಲದವನೂ ತ ಪುಸ್ತಕವಿಂ ವಿಷಯಗಳನ್ನು ತಿಳಿದುಕೊಳ್ಳ ಬಹುದಾಗಿದೆ. ಕನ್ನಡ ಒನೆಯ ಒನೆಯ ತರಗತಿಯ ವಿದ್ಯಾರ್ಥಿಗಳ ಭ್ಯಾಸಕ್ಕನುಕೂಲ ಪುಸ್ತಕದ ಮುಖ್ಯ ಗುರಿ ಯಾಗಿದೆ. ಪ್ರೌಢಶಾಲೆಯ ಚಿತ್ರಕಲಾ ವಿದ್ಯಾರ್ಥಿಗಳೂ ಇದರಿಂದ ಸಾಕಷ್ಟು ಸಹಾಯ ಪಡೆಯಬಹುದು. ಪುಟಪುಟದಲ್ಲಿಯೂ ಪ್ರತಾಣಚಿತ್ರಗಳ ಸೊಬಗಿನ ಸೂಚಿ! ಬೇಗನೆ ಪೇಟೆಯಲ್ಲಿ ಮಾರಾಟಕ್ಕೆ ಬರುವುದು.

'ಶಿಕ್ಷಕ ಮಿತ್ರ' ಕಾರ್ಯಾಲಯ, ಪ್ಲೇ ಬಾಗಗಲ್ಲಿ, ಬೆಳಗಾಂವಿ

ಶ್ರೀ ಕೆ. ಜಿ. ಭಟ್ಟರ ಕವನಸಂಗ್ರಹಗಳು

ಶಾಯನ

(ಶ್ರೀ ಕವನ ಸಂಗ್ರಹ)

ಪ್ರಸಿದ್ಧಿಪಡೆದ ಮುಗುಳಿಯುವರು ಈ ಸಂಗ್ರಹದ ಗೆಗೆ ಹೀಗೆ ಅಭಿಪ್ರಾಯ ಪಟ್ಟಿರುವರು

" ಪ್ರತಿಭೆಯುಜ ಸೊಸ್ಟಾನಿ. ದೃಷ್ಟಿ ಮುಟ್ಟಿ ಸ್ಪಂ ನಿವೆ.... ಸೌಂದರ್ಯ, ಪ್ರೀತಿ ಇವು ಗಾಢ ಸಂಪರ್ಕದಿಂದ ಇವರ ಕಾವ್ಯಕೆಗೊಂಡಿವೆ. "

೧—೪—೦

ಕಾಣಿಕೆ

(ಕವನ ಸಂಗ್ರಹ)

ಕೆಲವು ಸ್ಫೂರ್ತಿ ಓಡಿಸಿ ಉತ್ಸಾಹವನ್ನು ಕೆಚ್ಚನ್ನು ಬಡಿಸುವುದಕ್ಕೆ ಒಂದೊಂದು ಕವನವನ್ನು ಆಯ್ದುಕೊಟ್ಟಿದ್ದಾರೆ. ಇದರಲ್ಲಿ ಸಮಯೋಚಿತವಾಗಿ ಸ್ಫೂರ್ತಿಯ ಕವಿತೆಗಳನ್ನು ಕನ್ನಡಿಗರಿಗೆ ಕೊಟ್ಟಿದೆ.

ಬೆ ೧—೨—೨

ನೀಕಾವ ತಳಗಿನ ವಿಳಾಸಕ್ಕೆ ಬರೆಯಿರಿ. ಪರಣನು ಸ್ಟೂಲೆ ತರಿಸಿದರೆ ಅಂಚೆಯ ಪಚ್ಚಿಸ್ಟ್

ಪಂ ಪ್ರಸ್, ಹೊನ್ನಾವರ

(ಜಿಲ್ಲಾ)



ವಾರ್ಷಿಕಚಂದಾ
ಲು—ಲೆ—೦

ಪ್ರತಿತಿಂಗಳ ೧ನೆಯ ತಾರೀಖಿಗೆ
ಪ್ರಕಟವಾಗುವುದು.

ಸಂಪುಟ ೧೦ | ೧ನೆಯ ಜೂನ್ ೧೯೪೭ Bangalore ಸಂಚಿಕೆ ೧

ಸಂಪಾದಕನಗಳು

ಉಣ್ಣುವುದನು ತೋಕದಲಿ ಎಲ್ಲರೂ ಬಲ್ಲರಾದರೂ ಅನ್ನವನು ಹದವರಿತು ಅಡಿಗೊಳಿಸಬಲ್ಲ ಅಚ್ಚಿ-ಅಕ್ಕದಿರು ಎನಿತು ಜನ ನಿಕ್ಕುವರಯ್ಯಾ! ಸಮಾಜದಲ್ಲಿಯ ಬಹು-ಜನರಿಗೆ ಸಾಹಿತ್ಯ ಸವಿಯೆನಿಸಿದರೂ ಅದನು ಹಣ್ಣಿಸುವ ರಸಯೋಗಿಗಳು ಬಹು ಜನರು ದೊರೆವರೇನಯ್ಯಾ?

* * * *

ಚರ್ಮಕಾರನೆ ಚರ್ಮವ ಹದಗೊಳಿಸಬಲ್ಲ; ಕುಂಬಾರನೆ ಕೊಡ-ಮಡಕೆಗಳ ಮಾಡಬಲ್ಲ. ತೇಟಿಗನೆ ಮಣಿಗಳನು ಸಾಣೆ ಹಿಡಿಯಬಲ್ಲ; ಹೊನ್ನಗಾರನೆ ಕುಂದಣದ ಕೆಲಸ ಮಾಡಬಲ್ಲ. ಒಬ್ಬರ ಕಜ್ಜವನು ಇನ್ನೊಬ್ಬರು ಗೆಯ್ಯಲಾಟಿಸಿದರೆ ವಸ್ತು-ವಿಷ್ಕಗಳ ಹಾನಿ; ಶಕ್ತಿ-ಸಮಯಗಳ ಹಾನಿ! ಹುಟ್ಟಿದವರೆಲ್ಲ ಕವನವ ಕಟ್ಟಲು ಹೊರಟರೆ ಕುಟ್ಟುಕೊಂಡು ಅಳುವವಳಯ್ಯಾ ನಮ್ಮ ಪಾಗೇಶ್ವರಿ!

* * * *

ಮುದ್ದು-ಮೂಲಿಗೆಗಳನು ಸಂಗಡಿಸಿ ವಿಂಗಡಿಸಿ ಪಲಕಿಸುವುದನು ವೈದ್ಯನು ಬಾರದೇಕಲ್ಲವೆ ವೈದಿಕನು ಮಾಡಿದರೆ ಸರಿಹೋದೀತೆ? ರಾಶಿ-ಗ್ರಹ-ಚಾರಗಳ ಗಣಿತ-ಗುಣಿಸುವಂಗಳನು ಕ್ಯೋಚಿಸಿ ಮಾಡಲೇಕಲ್ಲದೆ ಜೀವದವರಿಂದದು ಸಾಧ್ಯವಾದೀತೆ? ಸಾಹಿತ್ಯದ ರೀತಿ-ನೀತಿಗಳನು ಸಾಧಿಸಿ ನಿರ್ಣಯಿಸಲಿಕೆ ವಿಮರ್ಶಕ ವಿಜ್ಞಾನಿಗಳು ಬೇಕಲ್ಲದೆ, ಬೇಸಾಯಗಾರರಿಗದು ಸಲುವಳೆಯೆನಿಸಿತೆ?

* * * *

ಬಹುಜನ ಮನದಿಂದ ಆರಿಸಿ ಸಿದ್ಧಮಾಡಲು ಸಾಹಿತ್ಯವೇನು ಶಾಸನ ಸಭೆಯ ಸದಸ್ಯನೆ ಆಯ್ಯಾ! ಪದವಿ-ಪ್ರಶಸ್ತಿಗಳನಿತ ನಿರ್ಮಿಸಲಿಕ್ಕೆ ಸಾಹಿತ್ಯಕವೇನು ವಿಶ್ವವಿದ್ಯಾನಿಲಯದ ಪದವೀಧರ ನೇನಯ್ಯಾ! ಧನಬಲ, ಸ್ಥಾನಬಲ, ದೇಹಬಲಗಳಿಂದ ಆಶ್ರಯಿಸಿ ನಿಲ್ಲಬಹುದೆಂದರೆ, ಸಾಹಿತ್ಯಕನ ಸ್ಥಾನವೇನು ಸಮಾಜದ ಮುಂದಾಳು ತನವೇನಯ್ಯಾ! ಇಂತಹವರೆ ಸಾಹಿತ್ಯಕರೆಂದು ಮೆರೆಯತೊಡಗಿದರೆ, ಆ ನಾಡು ಕಾಡು; ಆ ನಾಡಿಗರೆ ಕೇಡಿಗರು ಕಾಣಯ್ಯಾ!

* * *

ಎಲ್ಲ ದೇಶ ಎಲ್ಲ ಕಾಲ ಎಲ್ಲ ಕುಲಗಳಲ್ಲಿಯೂ ಸಾಹಿತ್ಯಕರು ಉದಯಿಸಬಲ್ಲರು ಕೇಳಯ್ಯಾ! ಆದರೆ ಎಲ್ಲಿಯೂ ಎಲ್ಲರೂ ಸಾಹಿತ್ಯಕರಾಗುವುದಕ್ಕೆ ಸಾಧ್ಯವಿಲ್ಲವಯ್ಯಾ! ಸಾಹಿತ್ಯಕನಾಗಲಿಕೆ ಕಾರಣವಲ್ಲ ಕೇವಲ ದೇಶ-ಕಾಲ-ಕುಲಗಳು! ವ್ಯಕ್ತಿಯ ಸಹೃದಯ, ಸೂಕ್ಷ್ಮಬುದ್ಧಿ, ಸರಸಾಭ್ಯಾಸ, ಸ್ವಾನುಭವಗಳೆ ಮುಖ್ಯ ಕಾರಣಂಗಳು ಕೇಳು ತಂದೆ!

* * * *

ದೇಶ-ಕಾಲಾನುಸಾರ ಸ್ವಭಾವಗಳಿಂತೆ ಬೇರೆಬೇರೆಯಾದಂತೆ ಬೇಡ-ಬೇಡಗಳು ಬೇರೆಬೇರೆಯಾಗಿಹವಯ್ಯಾ! ಆದುದರಿಂದಲೆ ಭಿನ್ನ ಭಿನ್ನ ಸಾಮಾಜಿಕ, ರಾಜಕೀಯ, ಧಾರ್ಮಿಕ ವಾದಗಳು ಜಲಯೆತ್ತಿ ನಿಲುವುವು ಕೇಳಯ್ಯಾ! ಈ ವಾದಗಳ ಪರಿಚಯವ ಮಾಡಿಕೊಳ ಬೇಕಲ್ಲದೆ, ಸಾಹಿತ್ಯಕ ಇವುಗಳ ಪ್ರಚಾರಕನಾಗಬಲ್ಲದು ಕಾಣಾ! ಪ್ರಕೃತಿಯ ನಿತ್ಯಸತ್ಯದ ದರ್ಶನಕಾರನೆ ನಿಜವಾದ ಸಾಹಿತ್ಯಕನೆನಿಸುವ ಕೇಳಯ್ಯಾ!

ಹರಪನಹಳ್ಳಿಯ ಸಾಹಿತ್ಯ ಸಮ್ಮೇಳನ

ಕಳೆದ ಮೇ ೬–೮ನೆಯ ದಿನಾಂಕಗಳಲ್ಲಿ, ಬಳ್ಳಾರಿ ಜಿಲ್ಲೆಯ ಹರಪನಹಳ್ಳಿಯಲ್ಲಿ, ಕನ್ನಡ ಸಾಹಿತ್ಯಸಮ್ಮೇಳನದ ೩೦ನೆಯ ಅಧಿವೇಶನವು ಸೇರಿ, ವಿಜೃಂಭಣೆ-ಸಂಭ್ರಮಗಳಿಂದ ನೆರವೇರಿತು. ಸಮ್ಮೇಳನದ ಅಂಗವಾಗಿ ಸಾಹಿತ್ಯಗೋಷ್ಠಿ, ಜನರದ ಸಾಹಿತ್ಯಗೋಷ್ಠಿ, ವಿದ್ಯಾರ್ಥಿಗೋಷ್ಠಿ, ಮಹಿಳಾಗೋಷ್ಠಿಗಳು ಜರುಗಿದುವಲ್ಲದೆ ಉಪಾಂಗಗಳಾಗಿ ಲಿಪಿನಿಬಾರ ಸಭೆ, ಲೇಖಕರ ಸಭೆ, ಯುವಜನ ಸಭೆ ಇವೆಲ್ಲ ನಡೆದುವು.

ಹರಪನಹಳ್ಳಿಗೆ ಹೋಗಿ ಹಿಂತಿರುಗಿದ ಜನರಿಗೆ ಪ್ರಾಮುಖ್ಯವಾಗಿ ಕಂಡುಬಂದದ್ದೆಂದರೆ ಅಲ್ಲಿಯ ಜನರ ಕರ್ನಾಟಕದ ಅಭಿಮಾನ, ಅತಿಶಯವಾದ ಉತ್ಸಾಹ. ಇದುವರೆಗೆ ನಡೆದ ಯಾವ ಸಮ್ಮೇಳನದ ಸ್ವಾಗತ ಮಂಡಲಿಯವರೂ ಇಷ್ಟೊಂದು ಮೂಲನಿಧಿ (ಸುಮಾರು ೩೦೦೦೦) ಯನ್ನು ಕೂಡಿಸಿರಲಿಕ್ಕಿಲ್ಲ. ಊಟ ಬೀದಿಗಳಲ್ಲಿ, ಇದುವರೆಗಿನ ಬೀತಿ ಬೀತಿ ಸಮ್ಮೇಳನಕ್ಕಿಂತ ಹಾಗೂ ಅಧ್ಯಕ್ಷ ರನ್ನು ನೆನಪಿಗೆ ತಂದುಕೊಡುವ ಅಗಸಿ ಬಾಗಿಲುಗಳು, ಕೊನೆಯ ಬಾಗಿಲು ಕೈಲಾರಂ ನಗರದ ಕೃನೇಶಮ್ಮರ. ಅಧಿವೇಶನಕ್ಕಾಗಿ ಕಟ್ಟಿಸಿದ ಸಭಾಮಂಟಪ ಅಲ್ಲಿಯವರ ಉತ್ಸಾಹಕ್ಕೆ ಉಚಿತವಾದುದಾಗಿಯೆ ಇದ್ದಿತು. ೧೦–೧೧ ಸಾವಿರ ಜನರು ಸಹಜವಾಗಿ ಕುಳ್ಳಿರ ಬಹುದಾದಷ್ಟು ಸ್ಥಳವೈಶಾಲ್ಯ. ೩–೪ ನೂರು ಜನರು ಕುಳಿತು ಕೊಳಲು ಸಾಲುವಷ್ಟು ಸುಂದರವಾದ ವ್ಯವಸ್ಥೆ. ವಿದ್ಯುದ್ದೀಪ, ಧ್ವನಿವಾಹಕಗಳ ಯೋಜನೆ

ಊಟ 'ಬಳ್ಳಾರಿಯ ಅನ್ನದರಾಶಿ'ಯಾವರೂ, ಈಗಿನ ದಿನಗಳಲ್ಲಿ, ಅಷ್ಟೊಂದು ವಿತರಣೆಯಿಂದ ನಿರ್ವಹಿಸಿದ ಊಟ-ತಿಂಡಿಯ ವ್ಯವಸ್ಥೆಯನ್ನು ಕಂಡು ಯಾರೂ ಆಶ್ಚರ್ಯಪಡುವಂತಿತ್ತು. ಅಲ್ಲಿಯ ಜನವಸತಿಯನ್ನು ನೋಡಿದವರೆ ಮಹಾ ಸಮಾರಾಧನೆ, ತೇರಿನ ಜಾತ್ರೆಯ ಊಟಗಳ ನೆನಪು ಬಾರದೆ ಹೋಗುತ್ತಿರಲಿಲ್ಲ. ಅಂತಹ ನೀರಿನ ಅನನುಕೂಲ ಪ್ರದೇಶದಲ್ಲಿ, ಅಷ್ಟು ಮುಟ್ಟುಗಾವರೂ ನೀರನ್ನು ಒದಗಿಸಿಕೊಟ್ಟುದು, ಸಮ್ಮೇಳನ ಸಂಚಾಲಕರ ಸಾಹಸವನ್ನು ಪ್ರಕಟಪಡಿಸುವಂತಹದು. ೩೦ ಮೈಲಿಯ ಮೇಲಿರುವ ಹರಿ. ಹರದ ತುಂಗಭದ್ರೆಯಿಂದ, ಮೋಟಾರುಗಳಿಂದ ಕುದಿಯುವ ನೀರನ್ನು ಕರಿಸಿಮುಡೀನು ಗಣ್ಣಾಸಾಹಲ್ಲ.

ಬಂದವರಿಗೆ ಇಳಿದುಕೊಳಲಿಕ್ಕೆ ಹೈಸ್ಕೂಲಿನ ವಿಶಾಲವಾದ ಕಟ್ಟಡ. ಆದು ತುಂಬಿ ಹೆಚ್ಚಾದ ಜನರು ಅಂಗಳ-ಹಿತ್ತಲುಗಳ ಬಯ್ಲುಲಲ್ಲಿ ಮಲಗಿಕೊಳ್ಳುತ್ತಿದ್ದರು. ಸ್ನಾನಕ್ಕೆ ನೀರು ಸಾಕಷ್ಟು ದೊರೆಯುವ ಹೋದರೂ, ಸ್ನಾನದ ಮನೆಗಳ ನಿರ್ವಹಣೆಯ ಚಚ್ಚು-ಕಟ್ಟು ನೋಡುವಂತಿದ್ದಿತು. ಇಷ್ಟು ಜನರು ಸೇರಿದ್ದರೂ ಎಲ್ಲಿಯೂ ಕೊಳೆಯಾಗದಂತೆ ನೋಡಿಕೊಳ್ಳುತ್ತಿದ್ದುದು ಅನ್ಯಾದೃರವಾದ ಕೆಲಸ.

ಹರಪನಹಳ್ಳಿ ಆಷ್ಟೊಂದು ದೊಡ್ಡ ಪಟ್ಟಣವಲ್ಲ. ಇದ್ದ ಕೆಲಸಗಾರರೆಲ್ಲ ಅತಿಥಿ ಸತ್ಕಾರದ—ಸ್ವಾಗತದ ಕೆಲಸಗಳಲ್ಲಿ ತೊಡಗಿದುದರಿಂದ, ಸಮ್ಮೇಳನದಲ್ಲಿ ನಡೆಯಬಹುದಾದ ಕಾರ್ಯಕಲಾಪಗಳ ಕಡೆಗೆ ಆಷ್ಟೊಂದು ಲಕ್ಷ್ಯ ಪೂರೈಸಲಿಕ್ಕೆ ಸಾಧ್ಯವಾಗಿರಲಿಲ್ಲ ವೇನೋ! ಉದ್ಘಾಟಕ, ಸ್ವಾಗತಾಧ್ಯಕ್ಷ, ಅಧ್ಯಕ್ಷರ ಭಾಷಣಗಳೇ ಸಮ್ಮೇಳನ, ಪ್ರತಿಯೊಂದು ಗೋಷ್ಠಿಗಳ ಮುಖ್ಯ ಕಾರ್ಯಕ್ರಮ ಗಳಾಗಿ ಪರಿಣಮಿಸಿದುವು. ಪೆಚ್ಚಿನ ಕಾರ್ಯಕಲಾಪಗಳಿಗೆ ಅವಕಾಶವೇ ಇರಲಿಲ್ಲ. ಒಂದು ಗೋಷ್ಠಿ ಬೆಳೆದರೆ, ಇನ್ನೊಂದರ ಸೇಳೆಯನ್ನು ತಿಂದಂತಾಗುತ್ತಿತ್ತು. ಆದರೂ ಕಾವ್ಯಗಾಯನ ಸ್ಪರ್ಧೆ, ಆಶುಕವಿತಾಸ್ಪರ್ಧೆ, ಹಳ್ಳಿಯ ಹಾಡು, ಕೋಲಾಟ, ಮಹಿಳಾಗೋಷ್ಠಿಯಲ್ಲಿಯ ಸಂಗೀತ ಸಹಿತ ವ್ಯಾಯಾಮ—ಇವೆಲ್ಲ ಸಭೆಯಲ್ಲಿಯ ಜನಸಾಮಾನ್ಯರ ಮನಸ್ಸನ್ನು ಆಕರ್ಷಿಸಿದುವು.

ಎಲ್ಲವೂ ಸೇರಿ ನಡೆಯಿಸಿದ ಕಾರ್ಯಕ್ರಮವೆಂದರೆ ೬ನೆಯ ತಾರೀಖಿನ ಬೆಳಿಗಿನ ಸಮ್ಮೇಳನದ ಪ್ರಾರಂಭಭಾಗ. ಆ ಮೇಲೆ ವಿಷಯ ನಿಯಾಮಕ ಮಂಡಲಿಯ ಸಭೆ, ಪರಿಷತ್ತಿನ ಸದಸ್ಯರ ಸಾಮಾನ್ಯ ಸಭೆ, ಲೇಖಕರ ಸಭೆ, ಯುವಜನರ ಸಭೆ, ಪತ್ರಿಕಾ ವ್ಯವಸಾಯಿಗಳ ಸಭೆ ಇವೆಲ್ಲ ಪ್ರತ್ಯೇಕ ಸ್ಥಳದಲ್ಲಿ ನಡೆಯುತ್ತಿರುವುದರಿಂದ, ಹೊರಗಿನಿಂದ ಬಂದ ಬಹುಜನರಿಗೆ ಸಮ್ಮೇಳನದ ಸಭಾಮಂಟಪಕ್ಕೆ ವಿಮುಖವಿಕ್ಕಲು ಸಾಧ್ಯವಾಗುತ್ತಲೆ ಇರಲಿಲ್ಲ. ಅದರಿಂದ ಕೂಡಿದ ಬಹುಜನರಿಗೆ ನಾಡಿನ ವಿವಿಧ ಭಾಗದ ಹಿರಿ. ಕಿರಿಯ ಸಾಹಿತ್ಯಿಕರ ಪ್ರತ್ಯಕ್ಷ ಪರಿಚಯ ಆಗಲೆ ಇಲ್ಲ. ಈ ನಿಜವಾದ ಸಾಹಿತ್ಯಿಕರ ಅಭಾವದ ಮೂಲಕ, ವಿವಿಧಗೋಷ್ಠಿಗಳಲ್ಲಿ ನಡೆದ ಕಾರ್ಯಕಲಾಪಗಳು ಎಷ್ಟು ಬೇಕೋ ಅಷ್ಟು ಕಳೆಗೊಳ್ಳಲಿಲ್ಲ. ವಿಶ್ವವಿದ್ಯಾನಿಲಯದ ಬಗೆಗಾದ ೪–೬ ಜನರ ಪ್ರಚಾರಕ ಪದ್ಧತಿಯ ಉಪನ್ಯಾಸಗಳನ್ನು ಬಿಟ್ಟರೆ, ಸಾಹಿತ್ಯದ ವಿವಿಧಾಂಗಗಳನ್ನು ಕುರಿತ ಒಂದೂ ಗಂಭೀರ ಚರ್ಚೆ-ಯಿಲ್ಲ; ಉಪನ್ಯಾಸವಿಲ್ಲ. ಹೀಗಾದರೆ, ಸಾಹಿತ್ಯ ಸಮ್ಮೇಳನವನ್ನು ಸೇರಿಸುವುದರ ಉದ್ದೇಶ ಸಫಲವಾದಂತೆ ಎನಿಸಬಹುದೆ?

ಅಧ್ಯಕ್ಷರ—ಸ್ವಾಗತಾಧ್ಯಕ್ಷರ ಎಲ್ಲ ಭಾಷಣಗಳು ಆಚ್ಚಾಗಿವೆ; ಆಚ್ಚಾಗಲಿವೆ. ಎಲ್ಲರೂ ಓದಿಕೊಳ್ಳಬೇಕು. ವಿಮರ್ಶೆ-ಚರ್ಚೆ ನಡೆಯಿಸಬೇಕು. ಅಂತಹ ಚರ್ಚೆ-ವಿಮರ್ಶೆಗಳಿಗೆ ಸ್ಥಾನ ಕಲ್ಪಿಸಿ ಕೊಡಲು ನಾವು ಸಿದ್ಧರಿದ್ದೇವೆ.

—ಸಂಪಾದಕರು.



ಬೀರಣ್ಣ ಉವಾಚ :—

ಗೃಹಮಂತ್ರಿ ಮುದಾರಜಿ ದೇಸಾಯಿಯವರು ಕರ್ನಾಟಕದ ಸಂಚಾರಕ್ಕೆ ಬಂದಿದ್ದರು. ಕರ್ನಾಟಕ ಕಾಂಗ್ರೆಸ್ ಕಮಿಟಿಯವರು ಅವರನ್ನು ಹಳ್ಳಿ-ಹಳ್ಳಿಗೆ ಕರೆದುಕೊಂಡು ಹೋಗಿದ್ದರು. ಆಗ ಗೃಹಮಂತ್ರಿಗಳು, ಹಳ್ಳಿಗರಿಗೆ ಪಾಪಾಶುವ ಹಿಂದುಸ್ತಾನ ಮತ್ತು ತಿಳಿಯುವುದಂದ, ಎಲ್ಲರೂ ಹಿಂದಿಯನ್ನು ಕಲಿಯಬೇಕೆಂಬ ಬುದ್ಧಿವಾದವನ್ನು – ಸಿಟ್ಟುಮಾಡಿ – ಹೇಳಿದರು. ಜೀ ಗೂ ಕೈಯಲ್ಲಿ ಅಧಿಕಾರವಿದೆ, ಮುದಾರಜಿಯವರು ಒಂದು ಕೆಲಸ ಮಾಡಬೇಕು. ಕನ್ನಡನಾಡಿನಲ್ಲಿ ಪ್ರಾರಂಭವಾಗಲಿರುವ ಒತ್ತಾಯದ ಪ್ರಾಥಮಿಕ ಶಿಕ್ಷಣವನ್ನು ಹಿಂದುಸ್ತಾನಿಯಲ್ಲಿ ಕುರುಮಾಡಿಬಿಡಬೇಕು. ಕರ್ನಾಟಕದಲ್ಲಿ ಹೇಗೂ ನೂರಕ್ಕೆ ೫-೬ ರಷ್ಟು ಜನರಿಗೂ ಕನ್ನಡ ಓದು-ಬರೆಯುಲಿಕ್ಕೆ ಬರುವುದಿಲ್ಲ. ಮಿಕ್ಕ ೯೪-೯೫ ರಷ್ಟು ಜನರು ಹಿಂದುಸ್ತಾನಿ ಲಿಪಿ-ಭಾಷೆಯನ್ನೇ ಕಲಿತು ಬಿಟ್ಟರೆ, ಕರ್ನಾಟಕದಿಂದ ಕೂಡಲೆ ಕನ್ನಡಭಾಷೆಯನ್ನು ಹೊರಕ್ಕೆ ಪಾಕಲಿಕ್ಕಾದೀತು. ನಮ್ಮ ಮುಂದಾಳುಗಳಿಗೆಲ್ಲ ಈ ಪಾಪು ಬಿಸ್ಕಿಗೆಯಿಂದೆ ಯೆಂದು ಬೇರೆ ಹೇಳುವ ಕಾರಣವೇ ಇಲ್ಲ. ಒಬ್ಬಿಬ್ಬರು ತರುಣರು ವಿರೋಧದ ಧ್ವನಿಯೆತ್ತಿದರೆ, ಪತ್ರಿಕ್ಕಲಿಕ್ಕೆ ಸ್ಥಳೀಯ ಅಧಿಕಾರಿಗಳು ಇದ್ದೇ ಇರುವರು. ಸರಕಾರ ಕೊಟ್ಟ ಬಿರುದು-ಬಾವಲಿಗಳನ್ನು ಪಡೆದ ಮಹನೀಯರನ್ನು ಹೊಗಳಿ ಹಾಡುತ್ತಿರುವ ಕನ್ನಡ ಸಾಹಿತ್ಯ ಪರಿಷತ್ತು, ಸರಕಾರದ ಈ ಉಪಕ್ರಮವನ್ನು ಎಂದಾದರೂ ವಿರೋಧಿಸೀತೆ ?

ಬೇಕು ಹಿಂದುಸ್ತಾನಿ ಬೇಕು!
ಸಾಕು ನಮ್ಮ ಕನಡು ಸಾಕು!

* * *

ಕನ್ನಡನಾಡಿನ ನೆತ್ತಿಹೊಲೆಯ ನಾಡಿನ ಮುಂದಾಳುಗಳ ಗುಡುಗು-ಗೆರ್ಜನೆಗಳು ನಮ್ಮ ಮುಂದಾಳುಗಳನ್ನು ಮಂಕುಗೊಳಿಸಿ ಬಿಟ್ಟಿವೆ. ಕೊಡಗು-ನೀಲಗಿರಿ-ಮಂಗಳೂರು ಕಾರವಾರಗಳು ಕೇರಳಕ್ಕೆ ಸೇರಬೇಕೆಂದು 'ಮಲಬಾರದ' ಕೇಳಪ್ಪನವರು ಕೀಸರಿಟ್ಟಿದ್ದಾರೆ. ಹಿಂದೆ ಈ ವಿನಿಸ ಪ್ರದೇಶವೆಲ್ಲ ಏಕೀಕೃತ ಮದ್ರಾಸಪ್ರಾಂತ್ಯಕ್ಕೆ ಸೇರಬೇಕೆಂದು ಶ್ರೀಮಾನ್ ದೇವ ಶಂಕರ ರಾಯರು ರಂಪ ಊದುತ್ತಲಿದ್ದಾರೆ. ರಾಯಲು ಸೀಮೆಯನ್ನು ಆಂಧ್ರ ವಿಶ್ವವಿದ್ಯಾನಿಲಯದ ನೇತೃತ್ವಕ್ಕೆ ಎಳೆದುಕೊಳಬೇಕೆಂದು ತೆಲಗು ದುರೀಣರು ತಂತ್ರ ನಡೆಯಿಸಿದ್ದಾರೆ. ಕರ್ನಾಟಕದ ಮುಂದಾಳುಗಳಿಗೆ ತಮ್ಮ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಕಾರ್ಯಾಲಯವನ್ನು ಎಲ್ಲಿ ಸ್ಥಾಪಿಸಬೇಕೆಂಬುದೇ ತಿಳಿಯದಾಗಿದೆ. ಕರ್ನಾಟಕ ಕಾಂಗ್ರೆಸ್ ಕಮಿಟಿಗೆ ಆಸ್ತಿಪಾಸ್ತಿಯಿಲ್ಲದ ಮೇಲೆ, ಕೌನ್ಸಿಲು-ಅಸೆಂಬ್ಲಿಗಳಿಗೆ ಆರಿಸಿ ಹೋಗುವುದು ಹೇಗೆ? ಅಲ್ಲಿ ಕರ್ನಾಟಕದ ಪ್ರತಿನಿಧಿಗಳಾಗಿ ಮಂತ್ರಿಪದವನ್ನು ಬೇಡುವುದು ಹೇಗೆ? ಆದು ತಿಳಿಯದೆ ತಿರುಕಿ ವಿಡುಕಿ ನಮ್ಮ ಮುಂದಾಳುಗಳು, ಭುವನೇಶ್ವರಿಯನ್ನು ಬೇಡಿಕೊಳ್ಳುತ್ತಲಿದ್ದಾರೆ: 'ತಾಯಿನಾ, ಹೇಗಾದರೂ ನಾಡಿ ಕರ್ನಾಟಕವನ್ನು ಉಳಿಸು; ನಮಗೇನು ನಮ್ಮ ನುಡಿಯ ಹಂಬಲಿಲ್ಲ; ಸಾಹಿತ್ಯ-ಸಂಸ್ಕೃತಿಗಳ ದುರಾಶೆಯಿಲ್ಲ. ಆದರೆ ಕರ್ನಾಟಕವಿಲ್ಲದೆ ಹೋದರೆ, ನಮ್ಮ ಮುಂದಾಳುತನ ಹೇಗೆ ಉಳಿದೀತು?' ವಿದ್ಯಾರಣ್ಯರ ಪ್ರಾರ್ಥನೆಗೆ ಸುವರ್ಣವೃಷ್ಟಿ ಸುರಿಸಿದ ಮುಗ್ಧ ದೇವತೆಯೆಂಬ ಮನವರಿಕೆ ನಮ್ಮ ಮುಂದಾಳುಗಳಿಗಿದೆಯೆಂಬಲೇ ಅವರೀಗ ಭುವನೇಶ್ವರಿಯ ಬೆನ್ನನ್ನು ಹಿಡಿದಿರುವರು.

* * *

ಹರಪನಹಳ್ಳಿಯಲ್ಲಿ ನೇರಿದ ಸಾಹಿತ್ಯಗೋಷ್ಠಿಯಲ್ಲಿ ಆಶುಕವಿತಾಸ್ಪರ್ಧೆ ನಡೆಯದು ಸರಿಯಲ್ಲ! ಈ ಸ್ಪರ್ಧೆಯ ಪರಿಣಾಮ ಹೀಗೆ ಪ್ರಕಟವಾಯಿತು :

೧ನೆಯ ನಂಬರು ಪಡೆದವನಿಗೆ ಸುಮಾರು ೧೫-೧೬ ರೂಪಾಯಿ ಬೆಲೆಯ ಚಿನ್ನದ ಪದಕ.

೨ನೆಯ ನಂಬರು ಪಡೆದವನಿಗೆ ಸುಮಾರು ೧೦-೧೨ ರೂಪಾಯಿ ಬೆಲೆಯ ಬೆಳ್ಳಿಯ ಕಪ್ಪು.

೩ನೆಯ ನಂಬರು ಪಡೆದವನಿಗೆ ಇನಾಮು ಇರಲಿಲ್ಲ; ಆದರೂ ಸಭಿಕರಿಂದ ೫೫ ರೂ. ಗಳು ಜೊತೆಯಾದವು.

೪ನೆಯ ನಂಬರು ಪಡೆದಿದ್ದ ಬೆಂಬುದು ಗೊತ್ತಿಲ್ಲದ ಮುಹಿಳೆಯೊಬ್ಬರಿಗೆ ಸಭಿಕರಿಂದ ಇಂತ್ಕಿಂತ ಹೆಚ್ಚಿಗೆ ರೂಪಾಯಿ ಜೊತೆಯಾದವು.

೧ನೆಯ ೨ನೆಯ ಬಹುಮಾನ ಪಡೆದವರ ಮುಜವನ್ನು ಮುಂಡಿಸಿಕೊಳಲು ಬೇಕೆಂದು ಕ್ಯಾಮರಾಗಳು ಪ್ರಯತ್ನಪಟ್ಟು ವಾದರೂ, ಅವರ ಮುಖ ಬಾಡಿ ಬಿಕ್ಕಿಯಾದುದರಿಂದ ಮೂಡಲಿಲ್ಲ. ನಂಬರು ಪಡೆಯುವ ಕೈಕುಂಬ ಹಣ ಪಡೆದ ಮಹಿಳೆಯ ಮುಖ ಹಿಗ್ಗಿ ಆಗಲವಾದುದರಿಂದ, ಫೋಟೋ ಪ್ಲೇಟುಗಳಲ್ಲಿ ಅವಕಾಶವೇ ಸಾಕಾಗಲಿಲ್ಲ. ಆದರೂ ಸ್ಪರ್ಧೆಯಪಸ್ವಿಯಾಗಿಯೆ ನಡೆಯಿತು.

* * *

ನಮ್ಮೀಕನ ಕಾಲದಲ್ಲಿ ಸೇರಿದ ವಿಜ್ಞಾನ ಗೋಷ್ಠಿಯ ಅಧ್ಯಕ್ಷರು, ವೈಜ್ಞಾನಿಕ ದೃಷ್ಟಿಯಿಂದ ಒಕ್ಕೆಯ ಆಹಾರವಾತ್ತದೆಂಬುದನ್ನು ವಿವರಿಸಿದರು. ಪಣ್ಣು, ಹಾಲು, ಗೋದಿ, ಬಾದಾಮಿ, ಅಖರೋಟು, ಮಾಂಸ, ತರಕಾರಿಗಳಲ್ಲಿ ದೊರೆವ ಜೀವಕಳ್ಳಗಳನ್ನು ಕುರಿತೇ ಮಾತನಾಡಿದರಲ್ಲವೆ. ಇಂದಿನ ರೀತಿನಂಗಿನಲ್ಲಿ ಸರಕಾರ ಪತರು ದಯೆಯಿಟ್ಟು ಕೊಡುವ ಹುಳುಕು-ಕೊಳಕು-ಮುಗ್ಗು ಕಾಳುಗಳನ್ನು ತಿಂದು ಹೇಗೆ ಬದುಕಬೆಕೆಂಬುದನ್ನು... ವೈಜ್ಞಾನಿಕ ದೃಷ್ಟಿಯಿಂದ—ವಿವೇಚಿಸಲೇ ಇಲ್ಲ. ಅಧ್ಯಕ್ಷರು ಹೇಳಿದ ಆಹಾರ ಪದಾರ್ಥಗಳನ್ನು ಸಭೆಯಲ್ಲಿದ್ದವರಲ್ಲಿ ಬಹು ಸಂಖ್ಯಾಕರು ಕನಸಿನಲ್ಲಾದರೂ ಕಂಡಿರಬಹುದೆ? ಕಾಣಬಹುದೆ? ಪೆಸರು ಕೂಡ ಕೇಳಿರದ ಪದಾರ್ಥಗಳು ಕನಸಿನಲ್ಲಾದರೂ ಹೇಗೆ ಕಾಣಲು ಸಿಕ್ಕಬೇಕು? ಅಧ್ಯಕ್ಷರಿಗೆ ನಿಕ್ಕಪ್ಪ ಅವುಸಿಕ್ಕುತ್ತಿರಬಹುದು. ಆದರೆ ಅಲ್ಲಿ ಇದ್ದವರಿಗೆ?



ಜೂನ್ ೧೯೪೭

ಅಧಿಕಾರಿಗಳ ಅವಿವೇಕ

(ಧಾರವಾಡದಲ್ಲಿ ನಡೆದ ಘಟನೆಯೊಂದು)

ಪರಕೀಯರಾದ ಬ್ರಿಟಿಷ್ ಅಧಿಕಾರಿಗಳು ಒತ್ತಾಯದಿಂದ ಕೊಟ್ಟ ಕಷ್ಟಗಳನ್ನೆಲ್ಲ, ಕನ್ನಡಿಗರು ಇದುವರೆಗೆ ಕಣ್ಣು-ಬಾಯಿ ಮುಚ್ಚಿ ಸಹಿಸಿಕೊಂಡೇ ಬಂದರು. ಈಗ ಜನತೆಯ ಪ್ರತಿನಿಧಿಗಳಾದ ಕಾಂಗ್ರೆಸ್ಸಿನ ಸರಕಾರದ ಅಧಿಕಾರಿಗಳೂ ಕನ್ನಡಿಗರನ್ನು ಅದೇ ರೀತಿಯ ಬಲುಮೆಯಿಂದ ನಡೆಯಿಸಿಕೊಳ್ಳುತ್ತಿರುವುದನ್ನು ನೋಡಿದರೆ, ಯಾವ ಕನ್ನಡಿಗನಿಗೂ ಅನಮಾನವಿಸದ ಇರದು. ಭಾರತಕ್ಕೆ ಸ್ವಾತಂತ್ರ್ಯ ಬೊಂತಿರೂ ಕನ್ನಡಿಗರಿಗೆ ಅದಂ ಸೌಖ್ಯ ಸಿಕ್ಕುವುದೋ ಇಲ್ಲವೋ—ಎಂಬ ಸಂದೇಹ-ಭಾವವೂ ಅವರಲ್ಲಿ ಒಡಮೂಡಬಹುದು.

ಕಳೆದ ತಿಂಗಳ ೨೪ನೆಯ ತಾರೀಖಿನ ದಿನ ಧಾರವಾಡ ನಗರ ಸಭೆಯಲ್ಲಿ ನಡೆದ ಘಟನೆ, ಮೇಲಿನ ನಮ್ಮ ವಿಧಾನಕ್ಕೆ ಪ್ರತ್ಯಕ್ಷವಾದ ಉದಾಹರಣೆ. ಅಂದು ಮುಂಬಯಿ ಸರಕಾರದ ಸ್ಥಾನಿಕ ಸ್ವರಾಜ್ಯ ಮಂತ್ರಿಗಳಾದ ಶ್ರೀ. ಜಿ. ಡಿ. ವರ್ತಕರು ದಯಮಾಡಿಸಿದ್ದರು. ನಗರಸಭೆಯಲ್ಲಿ ಅವರಿಗೆ ಮಾನಪತ್ರವನ್ನರ್ಪಿಸುವ ಸಮಾರಂಭದ ಸಭೆಯಿದ್ದಿತು. ಸಭೆಗೆ ಬಂದವರೆಲ್ಲ ಚೆತರ ಕೊಟ್ಟು ಬರಮಾಡಿಕೊಂಡ ಸನ್ಮಾನ್ಯ ನಾಗರಿಕರು. ಮಾನಪತ್ರ ಸ್ವೀಕರಿಸಿದ ಮೇಲೆ ಮಾನ್ಯಮಂತ್ರಿ ವರ್ತಕರು ಕೆಲಹೊತ್ತು ಇಂಗ್ಲಿಷಿನಲ್ಲಿ ಮಾತನಾಡಿ, ಆಮೇಲೆ ಸಾರ್ವಜನಿಕರಿಗಾಗಿ ಮಾತನಾಡುವೆನೆಂದು ಮರಾಟಿಯಲ್ಲಿ ಮಾತನ್ನು ಪ್ರಾರಂಭಿಸಿದರು. ಸಭೆಗೆ ಬಂದವರಲ್ಲಿ ನೂರಕ್ಕೆ ೯೯ರಷ್ಟು ಜನ ಕನ್ನಡಿಗರು. ಸಾರ್ವಜನಿಕರಿಗಾಗಿ ಮಾತನಾಡಲಿರುವ ಮಂತ್ರಿಗಳು ಧಾರವಾಡದ ಸಾರ್ವಜನಿಕರ ಭಾಷೆ ಯಾವುದೆಂಬುದನ್ನೂ ವಿಚಾರ ಮಾಡಿರಬೇಡವೆ? ಮಂತ್ರಿಗಳ ಜೊತೆಗಿದ್ದ ಸ್ಥಳೀಯ ಕಾಂಗ್ರೆಸಿನ ಅಧಿಕಾರಿಗಳು ಅವರಿಗೆ ಈ ವಿಷಯದ ತಿಳಿವಳಿಕೆ ಕೊಟ್ಟಿರಲಿಲ್ಲವೆ? ಇಲ್ಲವೆ ಅವರ ಭಾಷಣವನ್ನು ಕನ್ನಡದಲ್ಲಿ ಭಾಷಾಂತರಿಸಿ ಹೇಳುವ ವ್ಯವಸ್ಥೆಯನ್ನು ಇರಿಸಬೇಕಾಗಿರಲಿಲ್ಲವೇ? ಇದಾವುದನ್ನೂ ಮಾಡದೆ ಮರಾಟಿಯಲ್ಲಿ ಭಾಷಣ ಪ್ರಾರಂಭವಾಗಲು, ಸಭೆಯಲ್ಲಿ ಅಸಮ್ಮತಿಯ ಸೂಚನೆ ಬಂದಿತು. ಅದನ್ನು ಲೆಕ್ಕಿಸದಿರಲು ಗೊಂದಲ ಪ್ರಾರಂಭವಾಯಿತು. ಕೊಣಿಗಾರರಾದ ನಗರಸಭೆಯ ಅಧಿಕಾರಿಗಳೂ ಸರಕಾರದ ಅಧಿಕಾರಿಗಳೂ 'ಮರಾಟಿ ತಿಳಿಯದವರೂ ಬೇಡವಾದವರೂ ಎದ್ದು ಹೊರಗೆ ಹೋಗಬಹುದು. ಗದ್ದಲ ಮಾಡಬೇಡಿರಿ!' ಎಂಬುವಾಗಿ, ಬಂದಿದ್ದ ಸಾರ್ವಜನಿಕ ಸಜ್ಜನರಿಗೆ ಬೇಡವಾದ. ಚೆಲ್ಲಾಟದ ಸೂಚನೆಯ ಸ್ವಾಗತ ಸಭೆ ಪಿಸಿಜನಲ್ ಮ್ಯಾಜಿಸ್ಟ್ರೇಟರೂ, ಮಾಮಲೇದಾರರೂ ಒಂದೋಜಿಸ್ಟಿಗಾಗಿ ಸಿದ್ಧರಾದರು. ವಿಪರೀತಕ್ಕೆ ಸಂದರ್ಭ ಹೋಗಬಹುದೆಂದೋ ಏನೋ, ಮಾನ್ಯಮಂತ್ರಿಗಳು ಹಿಂದಿಯಲ್ಲಿ ಮಾತನ್ನಾರಂಭಿಸಿ, ಮರಾಟಿಯಲ್ಲಿ ಮಾತನಾಡಗೊಡದುದಕ್ಕಾಗಿ ಕನ್ನಡಿಗರನ್ನು ಒಂದು ಬಗೆಯಲ್ಲಿ ಬೈದು, ವಿನೋಧವನ್ನು ವ್ಯಕ್ತಪಡಿಸಿದರು. ಅಲ್ಲದೆ ಕನ್ನಡಿಗರ ಅಂದಿನ ಅಸಮ್ಮತಿಯ ಪ್ರಕಟನೆ ವ್ಯಕ್ತಿಯ ಮತ್ತು ವಕ್ತಾರನ ಮೂಲಭೂತ ಹಕ್ಕಿನ ಮೇಲೆ ಆಘಾತ ಮಾಡಿದಂತಾಯಿತು—ಎಂಬ ಮಾತನ್ನೂ ಸಾರಿದರು. ಅವರ ಮಾತನ್ನು ಪ್ರತಿಭಟಿಸಲು ಅಂದೂ ಯಾರೂ ಸಿದ್ಧರಾಗಲಿಲ್ಲ.

ಕರ್ನಾಟಕದ ಎಲ್ಲ ಚಳವಳಿಯ ಕೇಂದ್ರವಾದ ಧಾರವಾಡದಲ್ಲಿಯೂ ಇಂತಹ ಅಪಮಾನದ ಸಂದರ್ಭಗಳೊದಗುವುವು ಕನ್ನಡಿಗರಿಗೆ. ಮುಂಬೈ ಸರಕಾರದಲ್ಲಿ ನಮ್ಮ ಕನ್ನಡ ಮಂತ್ರಿಗಳಾಗಿರುವ ಮಾನ್ಯ ವಲ್ಲಭಭಾಯಿಗಳು ಪುಣೆ-ಸಾತಾರೆಗಳಿಗೆ ಹೋದಾಗ, ಸಾರ್ವಜನಿಕರಿಗಾಗಿ 'ಕಳಕಳಿ'ಯ ಮಾತುಗಳನ್ನು ಹೇಳಬೇಕಾದಾಗ, ಎಂದಾದರೂ ಕನ್ನಡ ಭಾಷಣ ಮಾಡಿದ್ದಾರೆಯೆ? ಹಾಗೆ ಅಭಿಮಾನದಿಂದ ಮಾತಾಡಲು ಬಯಸಿದ್ದರೆ, ಪುಣೆ-ಸಾತಾರೆಗಳ ಮರಾಠಾ ಮರ್ದರು ಸುಮ್ಮನೆ ಇರುತ್ತಿದ್ದರೆ? ಅಲ್ಲಿ ಇಂತಹ ಅನಿವೇಕಗಳು ನಡೆಯಲು ಸ್ವಲ್ಪವೂ ಆಸ್ಪದವಿಲ್ಲದಿರುವಾಗ, ನಮ್ಮ ಕರ್ನಾಟಕದಲ್ಲಿ ಮಾತ್ರ ಹೆಜ್ಜೆಹೆಜ್ಜೆಗೂ ಇಂತಹ ಅತಿಕ್ರಮಗಳು ನಡೆದು ಕನ್ನಡಿಗರ ಮುಖಭಂಗ ಮಾಡುತ್ತಿವೆಯಲ್ಲ; ಇದು ಯಾರ ತಪ್ಪು? ಹೊರಗಿನಿಂದ ಬರುವ ಮಾನ್ಯ ಮಹಾಶಯರದೋ, ಒಳಗೆ ಇದ್ದ ಅಭಿಮಾನರೂನ್ಯ ಮುಂದಾಳುಗಳದೊ?

ವಕ್ತಾರನ ವೈಯಕ್ತಿಕ ಮೂಲಭೂತ ಹಕ್ಕಿನ ಜ್ಞಾಪಕವನ್ನು ಕೊಟ್ಟ ಮಾನ್ಯಮಂತ್ರಿ ವರ್ತಕರು—ಸದಸ್ಯರ ವೈಯಕ್ತಿಕ ಮೂಲಭೂತ ಹಕ್ಕುಗಳ ವಿಚಾರವನ್ನು ಮಾಡಬೇಕಾಗಿರಲಿಲ್ಲವೆ? ತಮಗೆ ತಿಳಿಯುವ ಭಾಷೆಯಲ್ಲಿ ಮಾತನಾಡಬೇಕೆಂದು ಕೇಳುವುದು, ಅದರಂತೆಯೆ ತಮಗೆ ತಿಳಿಯುವಂತೆ ವ್ಯವಸ್ಥೆಮಾಡಿಕೊಡಬೆಂದು ವಿನ್ನವಿಸಿಳೊಳ್ಳುವುದು ಸದಸ್ಯರ ಮೂಲಭೂತ ಹಕ್ಕಾಗಿದೆಯಲ್ಲವೆ? ಸಭೆಗೆ ಬನ್ನಿರೆಂದು ಚೆತರಕೊಟ್ಟು ಕರೆಯಿಸಿ, ತಿಳಿಯದ ಭಾಷೆಯಲ್ಲಿ ಮಾತನಾಡಿ ಹಚ್ಚಿ, 'ತಿಳಿಯದವರು ಹೊರಗೆ ಹೋಗಬಹುದು!' ಎಂದು ಹೇಳುವುದು ಯಾವ ರೀತಿಯ ಸಭ್ಯತೆ? ಇನ್ನೂ ಜನತೆಯ ಪ್ರತಿನಿಧಿಗಳಾಗಿದ್ದ ಕರ್ನಾಟಕ ಕಾಂ. ಕಾಂಗ್ರೆಸ್ ಸರಕಾರದ ಅಧಿಕಾರಿಗಳು ಇದನ್ನೆಷ್ಟು ಪ್ರಾಮ್ಯ ನೋಡುತ್ತ ಸುಮ್ಮನೆ ಇದ್ದು ಬಿಡುವುದೆಂದರೆ ಇದು ವಿವೇಕವೆ ಒಪ್ಪಣವೇ? ಧಾರವಾಡದ ಮಹಾಜನರು—ಇಷ್ಟೊಂದು ವಿರೋಧ ಪರಿಸ್ಥಿತಿಯಲ್ಲಿಯೂ—ತಮ್ಮ ಹಕ್ಕನ್ನು ಕಾಯ್ದುಕೊಳ್ಳಲು ಹೆಣಗಿದುದೂಂಡೇ ಸರಕಾರದ ನಿರ್ಣಯ

ಮನೆಗೆ ಮರಳಿದ ಸೈನಿಕ

(ಸಣ್ಣಕತೆ)*

ಶ್ರೀ ಬೇಂದ್ರೆ ಲಕ್ಷ್ಮಣರಾಯರು, ಧಾರವಾಡ

★

ಹಳ್ಳಿಗರಿಗೆ ಸೈನಿಕನ ಕರುಳಿನ ಬೆಲೆಯೇ ಕಾಣಲಿಲ್ಲ; ನೋಟನ ಕಟ್ಟು ಮಾತ್ರ ಅವರ ಕಣ್ಣುಗಳನ್ನು ತೆರೆಯಿಸಿತು.

★

ಶ್ರೀನಿವಾಸ ಎಮ್. ಎಸ್. ಎಮ್. ರೈಲ್ವೆಯ ಪುಣೆ-ಬೆಂಗಳೂರು ನಾರ್ಗವಾಗಿ ಪ್ರಯಾಣಮಾಡುತ್ತಿದ್ದ. ಪ್ರತಿಯೊಂದು ಸ್ಟೇಶನ್ನಿನಲ್ಲೂ ಕೆಳಗಿಳಿದು, ಪ್ಲ್ಯಾಟ್‌ಫಾರ್ಮಿನ ಉದ್ದಕ್ಕೂ ಒಂದುಸಲ ಅಡ್ಡಾಡಿಬರುವ. ನಿಲ್ದಾಣವನ್ನು ಶೋಧಕದೃಷ್ಟಿಯಿಂದ ನೋಡುವ. ತನಗೆ ಬೇಕಾದ ಗುರುತಿನ ಕುರುಹುಗಳು ಕಾಣದಾಗಲು, ನಿರಾಶನಾಗಿ ತನ್ನ ಗಾಡಿಯನ್ನೇರುವ. ಅವನು ಸೈನಿಕರ ಗಾಡಿಯಲ್ಲಿ ಕುಳಿತಿದ್ದ. ಗಣವೇಷದಲ್ಲಿದ್ದ, ಆದರೆ ಈಗ ಅವನೊಬ್ಬ ಬಿಡುಗಡೆಯಾದ ಸಿಪಾಯಿ. ತನ್ನ ಊರಿಗೆ ಹೊರಟಿದ್ದ. ಯಾರಾದರೂ 'ಯಾವ ಊರಿಗೆ ಹೊರಟಿದ್ದು?' ಎಂದು ಕೇಳಿದರೆ, 'ಬೆಂಗಳೂರು' ಎಂದು ಹೇಳುತ್ತಿದ್ದ. ಅವನು ತೆಗೆಯಿಸಿದ ವಾಸು ಕೂಡ ಅಲ್ಲಿಯವೇ ಇತ್ತು. ಆದರೆ ಅವನು ಈಗ ಹೂರಟದ್ದು ಮಾತ್ರ ಬೆಂಗಳೂರಿಗೂ ಅಲ್ಲ; ಅವನ ಊರೂ ಅದಲ್ಲ. ಅವನಿಗೆ ತನ್ನ ಊರಿಗೆ ಹೋಗಬೇಕಾಗಿದ್ದಿತು. ಆ ಊರು ಪುಣೆ-ಬೆಂಗಳೂರು ಹಾದಿಯ ಮೇಲೆ, ಯಾವುದೋ ಒಂದು ನಿಲ್ದಾಣದ ಹತ್ತಿರ ಇದೆ, ಎಂಬುದಿಷ್ಟೇ ಅವನ ನೆನಪಿನಲ್ಲಿತ್ತು. ಅದರ ಹೆಸರು, ದಿಸೆ—ಅವನ ಸ್ಮರಣೆಯಲ್ಲಿರಲಿಲ್ಲ. ಆ ನಿಲ್ದಾಣದ ಹೆಸರಾದರೂ ಅವನಿಗೆಲ್ಲಿ ಗೊತ್ತಿತ್ತು? ಆ ನಿಲ್ದಾಣವನ್ನು ಗುರುತಿಸುವ ಎಡದು ಕುರುಹುಗಳು ಮಾತ್ರ ಹೇಗೋ ಅವನ ಲಕ್ಷ್ಯದಲ್ಲಿ ಉಳಿದಿದ್ದುವು. ನಿಲ್ಮನೆಯ ಎಡಗಡೆಗ ಎತ್ತರದಲ್ಲಿ ಕಟ್ಟಿದ್ದ ನೀರಿನ ಟಾಕಿ; ಬಲಗಡೆಗ ಎರಡು ಮಾವಿನ ಮರಗಳು. ಇವು ಯಾವ ಸ್ಟೇಶನ್ನಿನಲ್ಲಿರುವೊ ಆದೇ ಅವನಿಗೆ ಬೇಕಾದ ನಿಲ್ದಾಣ. ಒಂದು ನಿಲ್ದಾಣದಲ್ಲಿ ನೀರಿನ ಟಾಕಿಯೂ ಇದ್ದಿತು, ಮಾವಿನ ಮರವೂ ಇದ್ದಿತು; ಆದರೆ ಅವನಿಗೆ ಬೇಕಾದದ್ದು ಎರಡು ಮಾವಿನ ಮರಗಳು, ಅಲ್ಲಿ ಇದ್ದುದು ಒಂದೇ ಮಾವಿನ ಮರ. ಮೇಲಾಗಿ ತೀರ ಸಮೀಪದಲ್ಲಿ ಹಳ್ಳಿಯೇ ಇಲ್ಲ, ಎಂದು ಗೊತ್ತಾಯಿತು! ಬರುಬರುತ್ತ ಅವನ ಆಶೆಯ ಕಿರಣಗಳು ಮಸಕಾಗುತ್ತ ನಡೆದಿದ್ದುವು. ಗಾಡಿ ತನಗೆ ಹಾಕಿಕೊಟ್ಟ ನಿಯಮದಂತೆ ಒಂದೊಂದೇ ನಿಲ್ದಾಣವನ್ನು ಹಿಂದೆ ಹಾಕುತ್ತ ತನ್ನ ಕೊನೆಯ ತಾಣವನ್ನು ಸೇರಲು ಅದೆಷ್ಟು ವೇಗದಿಂದ ಸಾಗಿತ್ತು! ಪ್ರಯಾಣಿಕರ ಸುಖ-ಮುಖಗಳ, ನಗೆ-ಬಗೆಗಳ, ಹಂಬಲು-ಹಾರಯಿಕೆಗಳ ಜಿಂತೆ ಅದಕ್ಕೇನು? ಸೂರ್ಯ-ಚಂದ್ರರಂತೆ ಅದಕ್ಕೂ ಒಂದು ನಿರ್ದಿಷ್ಟವಾದ ಪ್ರಯಾಣ! ಜನರನ್ನು ಕಟ್ಟಿಕೊಂಡೂ ಹೊಂಟರೂ ಅವರ ಜಿಂತೆಯನ್ನು ಅದು ಕಟ್ಟಿಕೊಳ್ಳುವುದಿಲ್ಲ! ಅವರ ಜಿಂತೆಯನ್ನು ಅವರೇ ನಿವಾರಿಸಿಕೊಳ್ಳಬೇಕು. ತನ್ನ ಹಾದಿಯಲ್ಲಿ ಸಿಪಾಯಿಯು ನಿಲ್ದಾಣವಿದ್ದರೆ, ಗಾಡಿ ಅವನನ್ನು ನಿಶ್ಚಯವಾಗಿ ಮುಟ್ಟಿಸುತ್ತಿತ್ತು! ಆದರೆ ಈ ಸಿಪಾಯಿ ಬಹಾದ್ದರನಿಗೆ ತನ್ನ ನಿಲ್ದಾಣದ ಹೆಸರೇ ತನಗೆ ಗೊತ್ತಿರಲಿಲ್ಲ. ಅದಕ್ಕೆ ಗಾಡಿಯದೇನು ತಪ್ಪು? ಅಸಾಮಾದಿಂದ ಹೊರಟಾಗ ಅವನು ಮಂಬ.ನಿಶ್ವಾಸದಿಂದ ಹೂರಟಿದ್ದ. 'ತನ್ನ ಊರ ನಿಲ್ದಾಣವನ್ನು ತಾನು ಸುಲಭವಾಗಿ ಗುರುತಿಸಬಹುದು, ಅದು ತನಗೆ ಪ್ರಯಾಸವಿಲ್ಲದೆ ಸಿಕ್ಕಬಹುದು' ಎಂದು. ಯಾವ ಕೆಲಸವೂ ಅಪೇಕ್ಷಿಸಿದಷ್ಟು ಸುಲಭವಿರುವುದಿಲ್ಲ—ಎಂಬುದೇ ನಿಜ.

ಈಗ ೫೫ ವರುಷದ ಹಿಂದೆ ಅವನು ಮನೆಯಿಂದ ಓಡಿ ಹೋಗಿದ್ದ! ಹೆಚ್ಚಾದರೆ ಅವನು ಆಗ ಹತ್ತು ವರ್ಷದವನಿರಬಹುದು. '೫೫ ವರ್ಷದ ಈ ಕಾಲಾವಧಿಯಲ್ಲಿ ತನ್ನ ಮನೆಯಲ್ಲಿ ಏನೇನು ಸ್ಥಿತ್ಯಂತರವಾಗಿರಬಹುದು? ತಾಯಿ, ತಂದೆ, ತಂಗಿ ಎಲ್ಲರೂ ಬದುಕಿ ಇರಬಹುದೆ? ತನ್ನ ಗೆಳೆಯ ಸುಬ್ಬಾನ ತನ್ನಂತೆಯೆ ದೊಡ್ಡವನಾಗಿದ್ದಾನು. ಎಲ್ಲರೂ ಈಗ ತನ್ನನ್ನು ಗುರುತಿಸಬಹುದೆ? ಪ್ರೀತಿಯಿಂದ ಸ್ವಾಗತಿಸಬಹುದೆ? ತಂದ, ತನ್ನ ಮೇಲಿನ ಸಿಟ್ಟನ್ನು ಮರೆತಿದ್ದಾನೆಯೆ? ಅಂದು—ತಂದ ತನ್ನನ್ನು ಗದರಿಸಿಯಲ್ಲಿ ಅಡಗಿಸಿಟ್ಟ ಐದು ರೂಪಾಯಿ ಕಳವು ಮಾಡಿದ್ದಕ್ಕಾಗಿ ಮೈ ಚಾಣ್ಣಾಗುವಂತೆ ಥಳಿಸಿ ಹೊರಗೆ ಬಾಕಿದ ದಿನ—ತಾನು ತಂದೆಯನ್ನು ದಹಿಸಿದ್ದು ಅಷ್ಟಿಷ್ಟಲ್ಲ. ಎಂದೂ ಮನೆಯವರಿಗೆ ಇನ್ನು ಮೋರೆಯನ್ನು ತೋರಿಸಬಾರದೆಂದು ಹೊರಟುಹೋದ ತಾನು, ೫೫ ವರ್ಷಗಳ ತರುವಾಯ ಪುನಃ ಅವರನ್ನು ಕಾಣಲು ಅಡಿಟ್ಟು ಅತುರನಾಗಿದ್ದೇನೆ? ಎಲ್ಲರಿಗಿಂತ ತನ್ನ ತಾಯಿಯನ್ನು ನೋಡಬೇಕು, ಆವಳ ಪಾದದಮೇಲೆ ತಲೆಯಿಟ್ಟು ಅವಳ ಆಶೀರ್ವಾದ ಪಡೆಯಬೇಕು. ಅವಳು ಈಗ ಹಣ್ಣಾದ ಮುದುಕಿಯಾಗಿದ್ದಾಳು, ತನ್ನನ್ನು ನೋಡಿ ಆವಳಿಗ ಅದೆಷ್ಟು ಆನಂದವಾದೀತು! ತಂದೆಯ ಸಿಟ್ಟು ಇದುವರೆಗೆ ಹಾಗೆಯ ಉಳಿದಿರಬಹುದೆ?' ಹೀಗೆಲ್ಲ ಸಿಪಾಯಿಯು ಆಗಾಗ ಲಲೋಚನೆಗೊಳಗಾಗುವನು. ಕೆಲವು ಕ್ಷಣ ಉತ್ಸಾಹಪೂರಿತ ಆಶೆಗಳು, ಕೆಲವು ಕ್ಷಣ ನಿರಾಶೆಯ ವೇದನೆಗಳು, ಅವನನ್ನು ವ್ಯಾಪಿಸುವುವು ಗಾಡಿಯಲ್ಲಿ ಕುಳಿತಾಗ ಯಾರೊಡನೆಯೂ ಮಾತುಗಳಿಲ್ಲ. ಸಿಗರೇಟ್ ಸೇದುತ್ತ ಕಿಟಕಿಯಲ್ಲಿ ಕಾಣುವ

* ಮುಂಬಯಿ ಆಕಾಶವಾಣಿಯಲ್ಲಿ ಹೇಳಿದ ಕತೆಯಿದು. ಅ. ಭಾ. ಆಕಾಶವಾಣಿಯ ಅಧಿಕಾರಿಗಳ ಒಪ್ಪಿಗೆ ಪಡೆದು ಪ್ರಕಟಿಸಲಾಗಿದೆ.

— ಬೇ.

ಸೃಷ್ಟಿಯ ಕಡೆಗೆ ಶೂನ್ಯದೃಷ್ಟಿಯಿಂದ ನೋಡುತ್ತ ಕುಳಿತು ಬಿಡುವ. ನಿಲ್ದಾಣ ಬಂದಕೂಡಲೆ ಇಳಿದು, ಅದನ್ನು ನೋಡಿ ಬರುವ. ಅವನ ಈ ಕಾರ್ಯಕ್ರಮ ಅವಿಚ್ಛಿನ್ನವಾಗಿ ನಡೆದೇ ಇತ್ತು.

ಬರುಬರುತ್ತ ಅವನಿಗೆ ಇದು ಬೇಸರವಾಯಿತು. 'ನಿಷ್ಫಲವಾದುದು ತನ್ನ ಈ ಆಶೆ!' ಎಂದು ಅವನು, ಒಂದೆರಡು ನಿಲ್ದಾಣಗಳಲ್ಲಿ ಕೆಳಗಿಳಿದು ನೋಡಲೇ ಇಲ್ಲ. ಆದರೂ ಮನಸ್ಸು, ದೃಷ್ಟಿ ತಮ್ಮ ಕೆಲಸವನ್ನು ಮಾಡಿಯೇ ಮಾಡಿದುವು. ಹೀಗೆ ಕೆಲವು ನಿಲ್ದಾಣಗಳು ದಾಟಿದುವು. ಈಗ ಬರಲಿರುವ ನಿಲ್ದಾಣವನ್ನು ನೋಡುವುದಾದರೂ ಏಕೆ—ಎಂಬ ವಿಚಾರದಿಂದ ಅವನು ಕಿಟಕಿಯ ಕಡೆಗೆ ಬೆನ್ನು ಮಾಡಿ ಕುಳಿತ. ನಿಲ್ದಾಣವು ಬಂದಿತು. ಚಿಕ್ಕ ನಿಲ್ದಾಣ. ಇನ್ನೊಂದು ಗಾಡಿ ಮೊದಲೇ ಬಂದು ಮುಖ್ಯ ಹಳಿಯ ಮೇಲೆ ನಿಂತಿತ್ತು. ನಿಲ್ಮನೆ ಕಾಣುತ್ತಿರಲಿಲ್ಲ. ಸಿಪಾಯಿ ತಿಂಡಿಯನ್ನು ಕೊಂಡು ತಿನ್ನುವುದನ್ನು ನಡೆಸಿದ. ಎರಡೂ ಗಾಡಿಗಳು ಒಂದೇ ಕಾಲಕ್ಕೆ ಹೊರಟುವು. ಸಿಪಾಯಿ ಕಿಟಕಿಯಲ್ಲಿ ಕತ್ತು ಚಾಚಿ ನಿಲ್ಮನೆಯ ಕಡೆಗೆ ದೃಷ್ಟಿಹರಿಸಿ ನೋಡಿದ. ಅವನ ಆಶೆ ಫಲಿಸುವ ಕಾಲ. ಅವನ ನಿಲ್ದಾಣವೆ ಅದು! ನೀರಿನ ಟಾಕಿ, ನಡುವೆ ನಿಲ್ಮನೆ, ಆ ಕಡೆಗೆ ಎರಡು ಮಾವಿನ ಮರಗಳು! ಅವನು ಕುಳಿತಲ್ಲಿಂದ ಟಣ್ಣನೆ ಜಿಗಿದು ನಿಂತ; ಅತ್ತಿತ್ತ ನೋಡಿದ. ಗಾಡಿಯ ವೇಗ ಹೆಚ್ಚಾಗುತ್ತಲಿತ್ತು. ಇಳಿಯುವುದು ಸಾಧ್ಯವಿರಲಿಲ್ಲ. ಇಷ್ಟಕ್ಕಾಗಿ ಸರಪಳಿಯನ್ನು ಎಳೆದು ಗಾಡಿಯನ್ನು ನಿಲ್ಲಿಸುವುದು ಹೇಗೆ? ಗಾಡಿ ಹಾಗೆಯೆ ವೇಗವಾಗಿ ಸಾಗಿತು. ಮುಂದಿನ ನಿಲ್ದಾಣ ಬಂದಕೂಡಲೆ ಸಿಪಾಯಿ ಇಳಿದು, ಮರಳಿ ಬರುವ ಗಾಡಿಯಿಂದ ಪುನಃ ಈ ನಿಲ್ದಾಣಕ್ಕೆ ಬಂದ. ಅವನ ಆಶೆ ಕೈಗೂಡಿತು. ಅದೇ ಅವನಿಗೆ ಬೇಕಾದ ನಿಲ್ದಾಣ. ಅದರ ಹತ್ತಿರವೇ ಅವನ ಹಳ್ಳಿ!

ಎರಡು ಮೈಲು ನಡೆದು ಅವನು ಆ ಹಳ್ಳಿಗೆ ಬಂದ. ಹಳ್ಳಿಯಲ್ಲಿ ಯಾರ ಮನೆ ಎಂದು ಕೇಳಬೇಕು? ತನ್ನ ತಂದೆಯ ಹೆಸರು? ತಾಯಿಯ ಹೆಸರು? ತಂಗಿಯ ಹೆಸರು? ಯಾವ ಹೆಸರುಗಳೂ ಇವನಿಗೆ ತಿಳಿಯವು. ಅವನು ಕರೆಯುತ್ತಿದ್ದುದು 'ಯಪ್ಪ', 'ಯವ್ವ' ಎಂದು! ಎಲ್ಲರಿಗೂ 'ಯಪ್ಪ', 'ಯವ್ವ' ಇದ್ದೇ ಇರುತ್ತಾರೆ! ಬರಿ 'ನಮ್ಮಪ್ಪ, ನಮ್ಮವ್ವ ಎಲ್ಲೈದಾರು?' ಎಂದು ಕೇಳಿದರೆ ಯಾರು ಹೇಳಬೇಕು? ಹಾಗೆ ಕೇಳುವುದು ಕೂಡ ಹುಚ್ಚುತನವಾದೀತು.

ಅವನು ಒಂದು ಓಣಿ ಹಿಡಿದು ಹೊರಟ. ಎದುರಿಗೆ ಒಬ್ಬ ಮುದುಕ ಬರುತ್ತಿದ್ದ, 'ಏ ಯಜ್ಜಾ, ಈಗ ೨೫ ವರ್ಷದ ಹಿಂದ ಈ ಊರ ಒಬ್ಬ ಹುಡುಗ ಓಡಿ ಹೋದನಂತ ಬರಲೇ ಇಲ್ಲಂತ, ಹೌದ?' ಎಂದು ಆ ಹಣ್ಣಾದ ಮುದುಕನನ್ನೆ ಕೇಳಿದ.

"ಹೌದೋ ತಮ್ಮಾ, ಬಾಳ ವರ್ಸಾತು ಆ ಮಾತಿಗೆ. ಹೋದ ಹುಡುಗ ಹೋಗೇ ಬಿಟ್ಟ. ಎರಡು ದಿವಸದಾಗ 'ಆ ಹುಡುಗ ಗಾಡೀ ಹಳೀವ್ಯಾಲ ಬಿದ್ದು ಸತ್ತ' ಅಂತ ಸುದ್ದಿ ಬಂತು. ಮನೆಯವರು ಹೋಗಿ ಹೆಣ ನೋಡಿ ಬಂದರು. ಅದ್ಯಾವುದೂ ಗುರ್ತು ಸಿಗಲಿಲ್ಲ. ಮೈ ಅಷ್ಟೋದು ಮಾಂಸದ ಮುದ್ದಿ ಆಗಿತ್ತು!"

"ಅವರ ಮನಿ ಎಲ್ಲೆ? ಅವರ ಹೆಸರು?" ಸಿಪಾಯಿ ಕೇಳಿದ.

"ಅಗೊ, ಆ ದೊಡ್ಡ ಬೇವಿನ ಮರ ಕಾಣತೈತಲ್ಲಾ—ಅದರ ಹಂತ್ಯಾಕಿಂದಕ! ಗುಡಸಲಧಾಂಗ ಐತಿ ನೋಡು. ಮ್ಯಾಲ ತಗಡು ಹೊಚ್ಚೈತಿ. ಕಪ್ಪಲಿ ಕರಿಯಾನ ಮನಿ ಅದು!" ಮುದುಕ ಹೇಳಿದ.

ತನ್ನ ಮನೆಯ ಹತ್ತಿರ ಒಂದು ಮರ ಇದ್ದುದು ಸಿಪಾಯಿಯ ಸ್ಮರಣೆಗೆ ಬಂತು. ಆದರೆ ಮನೆಗೆ ಹುಲ್ಲಿನ ಜೆಪ್ಪರವಿತ್ತು. ಇದಕ್ಕೆ ತಗಡುಹೊಚ್ಚಿದೆ. ಹತ್ತಿರ ಹೋದ. ಮರದಡಿಯ ಕಟ್ಟೆಯ ಮೇಲೆ ಹಾಸಿಗೆಯ ಸುರುಳಿಯೊಂದನ್ನೊಗೆದು, ಅದಕ್ಕೆ ಆತುಕೊಂಡು ಕುಳಿತ. ಹುಸುಹೊತ್ತಿನಲ್ಲಿಯೆ ಅಲ್ಲಿ ನಾಲ್ಕಾರು ಜನ ಹಳ್ಳಿಗರು ನೆರೆದರು. ಓಣಿಯ ಹುಡುಗರು ಗುಂಪುಗಟ್ಟಿದರು. ಎಲ್ಲರೂ ಕುತೂಹಲ ಬೆರಸಿದ ನೋಟದೊಡನೆ ಸಿಪಾಯಿಯನ್ನು ನೋಡುವವರೇ! ಅವನನ್ನು ಮಾತನಾಡಿಸುವವರೇ! ದಿಟ್ಟ ಉಲಕೋಚಿ ಹುಡುಗರು ಅವನ ಮಳಿಕೋಟನ್ನೂ, ಚಳಿಯ ಹೊದ್ದಿಕೆಯನ್ನೂ ಮುಟ್ಟಿಮುಟ್ಟಿ ನೋಡಿದರು.

"ಇದು ಯಾರ ಮನಿ?" ಎದುರಿನ ಮನೆಯ ಕಡೆಗೆ ಬೆರಳು ತೋರಿಸಿ ಸಿಪಾಯಿ ಒಬ್ಬನನ್ನು ಕೇಳಿದ.

"ಇದಕ? ಕರಿಯಪ್ಪನ ಮನಿ!"

"ಅಂವ ಅದಾನೇನು?"

"ಅಂವ ಕೈಲಾಸ ಕಂಡು ಬಾಳ ವರ್ಸಾತು. ಅವನ ಹ್ಯಾಣ್ತಿ—ಮುದಿಕಿ ಅದಾಳು!"

"ಅಂವಗ ಮಕ್ಕಳು-ಮರಿ?"

"ಗಂಡುಮಕ್ಕಳಿಲ್ಲದಾರು? ಒಂದು ಮಗಳಿತ್ತು. ಹೋದ ವರ್ಸ ಊರಿಗೆ ದುರ್ಗವ್ವನ ಬ್ಯಾನಿ ಹಾದು ಅದೂ ಸತ್ತುಹೋತು. ಅದರ ಮಕ್ಕಳು, ಗಂಡ ಅದಾರು."

"ಆ ಕರಿಪ್ಪಗ ಗಂಡುಮಕ್ಕಳು ಯಾರೂ ಇದ್ದಿಲ್ಲೇನು?"

"ಇದ್ದ ಒಬ್ಬಕಂವ, ಹತ್ತು ಹನ್ನೊಂದು ವರ್ಸದಂವ. ಅಂವ ಓಡಿಹೋದಂವ ಹೋಗೇಬಿಟ್ಟನಂತ. ಗಾಡೀ ಕೆಳಗ ಬಿದ್ದು ಸತ್ತಾ ಅಂತ ಅಂತಾರು. ಸತ್ತಾನೋ ಅದಾನೋ ಮಾದೇವಗ ಗೊತ್ತು!"

"ಈ ಊರಾಗ ಸುಬಾನ್ಯಾ ಅಂತ ಯಾರಾದರ ಅದಾನೇನು?"

"ಅದಾನಲ್ಲ. ಅಂವ ಈಗ ಮುಂಬಯಾಗ ಡ್ರಾಯ್‌ವರ್ ಅದಾನು. ತಿಂಗಳಾ ನೂರಿಪ್ಪತ್ತು ರುಪಾಯಿ ಗಳಸ್ತಾನು! ಯಾಕ್ರೀ, ಬಲುಪೆಟ್ಟು ಕೇಳ್ತೀರಿ? ಸರಕಾರದವರೇನ್ರಿ ನೀವು?" ನೆರೆದವರಲ್ಲೊಬ್ಬ ಗಾಬರಿಯಿಂದ ಕೇಳಿದ.

"ಇಲ್ಲ, ಇಲ್ಲ, ಸುಬಾನ್ಯಾಂದು ನಂದು ದೋಸ್ತಿ ಇತ್ತಕ— ಅದಕ್ಯಕ ಕೇಳಿದೆ. ಈ ಮನ್ಯಾಗಿರ್ತಾನಲ್ಲ— ಕರಿಪ್ಪನ ಅಳಿಯ— ಅಂವ ಏನ ಮಾಡ್ತಾನು?"

"ಬ್ಯಾಸಾಯ ಮಾಡ್ತಾನ್ರಿ! ಬೇಸ ದುಡಿತಾನ್ರಿ. ಸತ್ತ ಹೇಣ್ತೀ ಹೊಟ್ಟೀಲೆ ನಾಲ್ಕು ಮಕ್ಕಳದಾವರಿ. ಈಗ ಇನ್ನೊಂದು ಉಡಿಕೀ ಮಾಡಿಕೊಂಡಾನ್ರಿ. ಅದೂ ಒಂದು ಬೆಂಡ್ಲಾನಂ ಸಿಕ್ಕೈತ್ರಿ. ಪಾಸ! ಆ ಮುದಿಕೀ ಗೋಳು ಹೇಳಾಕ ತೀರದು; ದಿನಾ ಉರಿಸಿ ಉರಿಸಿ ಕೊಲ್ತಾಳ್ರಿ ಸೊಸಿ..ಆಕೀನ್ನ!"

"ಅಂವನ ಹೆಸರು?"

"ಜಂಬಗನ್ರಿ."

ಅಲ್ಲಿ ನೆರೆದ ಹಳ್ಳಿಗರಿಗೆ ಸಂಶಯ :—'ಈ ಸಿಪಾಯಿ ಯಾರನ್ನಾದರೂ ಹಿಡಿದೊಯ್ಯಲಿಕ್ಕೆ ಬಂದಿರಬಹುದು, ಇಲ್ಲವೆ ಏನಾದರೂ ತಪಾಸಣೆಗಾಗಿ ಬಂದಿರಬಹುದು' ಎಂದು. ಅವನ ಹರಕು ಕನ್ನಡಮಾತು, ಸಿಪಾಯಿಯ ಬಗ್ಗೆ ಅವರಲ್ಲಿ ತುಸು ಆತ್ಮೀಯತೆಯನ್ನುಂಟುಮಾಡಿದ್ದಿತಾದರೂ, ಅವನು ಕೇಳುವ ಪ್ರಶ್ನೆಗಳಿಗೆ ಅವರು ಅಂಜಂಜುತ್ತಲೆ ಉತ್ತರಕೊಡುತ್ತಿದ್ದರು. ಆದರೂ ತಮ್ಮ ಮಾತು ಆಡುತ್ತಾನೆ ಎಂಬ ಒಂದು ವಿಶ್ವಾಸ, ಅವರನ್ನು ಹೇಳಲು ಹುರಿದುಂಬಿಸುತ್ತಿದ್ದಿತು. ಅಲ್ಲದೆ ಸಿಪಾಯಿ ಎಲ್ಲರಿಗೂ ಒಂದೊಂದು ಸಿಗರೇಟ್ ಬೇರೆ ಕೊಟ್ಟಿದ್ದನಲ್ಲ! ವ್ಯಸನ ಒಂದೇ ಇದ್ದರೆ ಸಖ್ಯ ಬಲು ಬೇಗ ಬೆಳೆಯುತ್ತದೆ.

"ಇಲ್ಲಿ ಚಹಾದಂಗಡಿ ಇಲ್ಲೇನು?" ಸಿಪಾಯಿ ಕೇಳಿದ.

"ಐತೆಲ್ಲಾ!"

"ಹೆಂಗಾರ ಇಲ್ಲಿ ಎಷ್ಟು ಮಂದಿ ಐತಿ—ಆ ಎಲ್ಲರಿಗೂ ಚಹಾ ಹೇಳ್ರಿ; ನಾ ರೊಕ್ಕಾಕೊಡ್ತೀನಿ!" ಸಿಪಾಯಿ ಒಂದು ರೂಪಾಯಿ ನೋಟನ್ನು ತೆಗೆದು ಒಬ್ಬನ ಕೈಯಲ್ಲಿಟ್ಟ.

ಐದು ನಿಮಿಷದಲ್ಲಿ ಎಲ್ಲರಿಗಾಗಿ ಚಹ ಬಂತು. ಹುಟ್ಟಿದ ಮೇಲೆ ಅವರಿಗೆ ಹೀಗೆ ಯಾರೂ ಚಹ ಕುಡಿಸಿರಲಿಲ್ಲ. ಮತ್ತೊಮ್ಮೆ ಎಲ್ಲರಿಗೂ ಸಿಗರೇಟ್ ದೊರೆಯಿತು, ಎಂಥ ಭರ್‌ಜರಿ ಸಿಗರೇಟು. ಅದರ ಮಾದಕವಾಸನೆ ಅವರಿಗೆ ಗುಂಗುಹಿಡಿಸಿತು ಅಷ್ಟರಲ್ಲಿ ಜಂಬಗ ಮೇವಿನ ಹೊರೆಯನ್ನುಹೊತ್ತುಕೊಂಡು ಮನೆಗೆ ಬಂದ.

"ಇಂವನಽರಿ ಜಂಬಗ" ಒಬ್ಬ ಹೇಳಿದ. ಬೇವಿನಕಟ್ಟೆಯ ಮೇಲೆ ಜನ ನೆರೆದದ್ದನ್ನು ನೋಡಿ ಜಂಬಗ ಹೊರೆಯನ್ನು ದನದ ಹಕ್ಕೆಯಲ್ಲೊಗೆದು ಅಲ್ಲಿಗೇ ಬಂದ. ಸಿಪಾಯಿ ಜಂಬಗನನ್ನು ದಿಟ್ಟಿಸಿ ನೋಡಿದ.

"ಸಿಪಾಯಿ ಸಾಹೇಬರು ನಿನ್ನ ಕೇಳ್ತಿದ್ದರು" ಒಬ್ಬ ಹೇಳಿದ.

"ಕುಂಪ್ರೆಸ್ವಾ, ಹೆದರಬ್ಯಾಡ ಕುಂಡ್ರು! ನಾಯೀನು ಪೋಲೀಸಲ್ಲ, ಸಿ.ಐ.ಡಿ.ನೂ ಅಲ್ಲ; ಮತ್ತ ಇಲ್ಲೆ ಗುನ್ಹೆ ತಪಾಸಣೆಗೂ ನಾ ಬಂದಿಲ್ಲ..ಇದು ನೋಡು, ನಿಮ್ಮ ಮನ್ಯಾಗ ಮುದಿಕಿ ಐತೆಲ್ಲಾ—ನಿನ್ನ ಅತ್ತ— ಆಕೀನ್ನ ನೋಡಬೇಕನಸೈತೆ ಕರೀತಿಯಾ ಆಕೀನ್ನ? ಬ್ಯಾಡ, ನಾನಽ ಬರಲ್ಯಾ ನಿಮ್ಮ ಮನೀಗೆ?" ದೈನ್ಯಭಾವದಿಂದ ಕೇಳಿದ ಸಿಪಾಯಿ,

ಸಿಪಾಯಿ ಕೇಳಿದ ಈ ಪ್ರಶ್ನೆಗೆ ಜಂಬಗ ಸ್ತಂಭಿತನಾದ. ಹತ್ತೆಂಟು ಪ್ರಶ್ನೆಗಳು ಏಕಕಾಲಕ್ಕೆ ಅವನೆದುರು ನಿಂತುವು. ನೆರೆದ ಜನರೂ ತುಸು ಆಶ್ಚರ್ಯಗೊಂಡರು. ಅದೇ ಹೊತ್ತಿಗೆ ನೀರು ತುಂಬಿದ ಒಂದು ಪೊಗೆಯನ್ನು ಕೈಯಲ್ಲಿ ಹಿಡಿದು, ಕೋಲನ್ನೂರುತ್ತ ಮುದುಕಿ ಆ ಮನೆಯಿಂದ ಹೊರಬಿದ್ದಿತು. ಅವಳನ್ನು ನೋಡುವುದೇ ತಡ, ಸಿಪಾಯಿಗೆ ಜೀವ ನಿಲ್ಲಲಿಲ್ಲ; ಧಾವಿಸಿ ಅವಳ ಹತ್ತಿರ ಹೋಗಿ ಅವಳೆದುರು ನಿಂತುಬಿಟ್ಟ! ಎಲ್ಲರೂ ಅವನ ಬೆನ್ನ ಹಿಂದೆ ನಡೆದು ಅವರ ಸುತ್ತಲೂ ನೆರೆದರು. ಯಾವನೋ ಒಬ್ಬ ಸಿಪಾಯಿ ಒಮ್ಮೆಲೆ ತನ್ನೆದುರು ನಿಂತದ್ದನ್ನು ಕಂಡು ಮುದುಕಿ ಗಾಬರಿಗೊಂಡಿತು. ಅವಳ ಕಣ್ಣು ಮಸುಳು; ಹೆಣೆಗೆ ಕೈಹಚ್ಚಿ ಕಣ್ಣು ಹಿಗ್ಗಿಸಿ ನೋಡಿದಳು. ಸಿಪಾಯಿಗೆ ಎದೆ ತುಂಬಿ ಮಾತೃವ್ಯೋಮವು ಉಕ್ಕಿ ಬಂದಿತು! ಅವನು ಮುದುಕಿಯ ಪಾದದ ಧೂಳನ್ನು ಮಸ್ತಕದಲ್ಲಿ ಧರಿಸಿ, ಅವಳನ್ನು ಭಾವನೆಯ ಆನೇಶದಲ್ಲಿ ಅಪ್ಪಿಕೊಂಡು ಬಿಟ್ಟ! ನೆರೆದವರೆಲ್ಲ ಬೆಪ್ಪಾಗಿ ನಿಂತರು. 'ಅರೆಹುಚ್ಚನಿರಬಹುದೆ?' ಎಂದು ಕೆಲವರು ಶಂಕಿತರಾದರು. 'ಇದೇನು ಗೂಢ?' ಎಂದು ಕೆಲವರು ಬೆರಗಾದರು. ಜಂಬಗ ಹತ್ತಿರ ಬಂದು ನಿಂತ. ಸಿಪಾಯಿಯ ಕಣ್ಣುಗಳಿಂದ ಟಪಟಪನೆ ನೀರು ಸುರಿಯುತ್ತಿದ್ದಿತು!

"ಯಾರೋ ನೀನು? ನನ ಮಗನ!" ಕೇಳಿತು ಮುದುಕಿ.

"ಯವ್ವಾ ನಾನು, ನಿನ ಮಗನವ್ವ!" ಸಿಪಾಯಿ ಗದ್ಗದಿತನಾಗಿ ನುಡಿದ.

"ಹಡೆದ ಮಗ ಹೋದ. ಇರೋವರೆಲ್ಲಾ ನನ್ನ ಮಕ್ಕಳು, ನನ ಮಗನಽ!"

"ಇಲ್ಲೆವ್ವಾ, ನಿನ್ನ ಮಗಾ ಹೋಗಿಲ್ಲ. ನೀ ಹಡದ ಮಗನವ್ವ ನಾನು! ನಾ ಸತ್ತಿಲ್ಲ, ನಾ ಬದಿಕಿ ನಿನ ಬೆಟ್ಟಿಗೆ ಬಂದೇನಿ. ನನ್ನ ಕಥೀ ಎಲ್ಲಾ ನಿನಗ ಹೇಳ್ತೀನಿ ಬಾ, ಅಲ್ಲಿ ಕಟ್ಟೇಮ್ಯಾಗ ಕುಂಡ್ರೋಣು! ಬರ್ರಿ, ಎಲ್ಲಾರೂ ಬರ್ರಿ!"

ಸಿಪಾಯಿಯ ಮಾತಿಗೆ ಎಲ್ಲರೂ ಕಟ್ಟೆಗೆ ಬಂದರು. ಸಿಪಾಯಿ ತಾನು ಮನೆಯಿಂದ ಹೊರಬಿದ್ದಾಗಿನಿಂದ ಆ ಊರಿಗೆ ಬರುವವರೆಗೆ ನಡೆದ ಸಂಗತಿಗಳನ್ನು ಬಣ್ಣಿಸಿ ಹೇಳಿದ. ಅವನ ಕಥನ ಚಾತುರ್ಯಕ್ಕೆ ಎಲ್ಲರೂ ಬಾಯಿ ತೆರೆದು ಬೆಪ್ಪಾಗಿ ಕುಳಿತಿದ್ದರು. ಕಟ್ಟೆಯ ಕೊನೆಗೆ ಕುಳಿತಿದ್ದ ಜಂಬಗ ಹತ್ತಿರ ಕುಳಿತವನ ಕಿವಿಯಲ್ಲಿ, ನಡುನಡುವೆ ಏನನ್ನೋ ಉಸುರುತ್ತಿದ್ದ! ಸಿಪಾಯಿ ಬಿತ್ತರಿಸಿದ ಜೀವನ ವೃತ್ತಾಂತ ಜಂಬಗನಿಗೆ ಕಟ್ಟುಕಥೆ ಎನಿಸಿತು: 'ಹೊಲಾಮನಿ ಎತ್ತಿಹಾಕುವುದಕ್ಕೆ ಯಾವನೋ ಹೊಂಚು ಹಾಕಿಕೊಂಡು ಬಂದಿದ್ದಾನೆ!' ಎಂದು ಭಾವಿಸಿದ. ಮಾವನ ಆಸ್ತಿಗೆ ಹೆಕ್ಕುಂಟಾವ ತನಗೆ 'ದಿಕಾತ ಬಂತಲ್ಲಾ' ಎಂದು ಅವನಿಗೆ ಸಂತಾಪವಾಯಿತು. ಅವನು ಎದ್ದು ನಿಂತು ಜೀರುದನಿಯಲ್ಲಿ ಚೀರಿದ :

೫೦ ವರ್ಷಗಳಿಂದ ಅನುಭವಪಟ್ಟ
ಕರ್ಕಿ ಮುತ್ತು ಕಂಪನಿಯ
ಜ್ವರಗಡ್ಡೆಯ ಗುಳಿಗೆ.
ಬಾಟ್ಲಿಗೆ ೧-೮-೦
ಜ್ವರಗಡ್ಡೆಯನ್ನೂ ಕಳೆಯುವುದು.
ಳಾಸ:—
ಗಣೇಶ ರಾಮಚಂದ್ರ ಕರ್ಕಿ ಮುತ್ತು ಕಂಪನಿ
ಗಿರಗಾಂವ, ಮುಂಬಯಿ.

"ಅಲ್ಲೋ ಸಿಪಾಯಿ, ಓಡಿಹೋದ ನಮ್ಮ ಮಾವನ ಮಗಾ-ಗಾಡಿಯು ಹಳ್ಳ ಕೆಳಗ ಬಿದ್ದು ಸತ್ತದ್ದು ಕಣ್ಣಾರ ಕಂಡವರದಾರ. ಜೀವದಿಂದ ಇದ್ದರ ಅಂವ ಇಪ್ಪತ್ತೈದು ವರ್ಸ ಬರದಽ ಇರ್ತಿ-ದ್ದನಽ? ನಾಕುಮಂದಿ ಹಿರೇರು ಕೂಡೀರಿ, ನೀವಽರಽ ಹೇಳ್ರೆಪಾ! ಇಂವ ಹೇಳಿದ್ದೆಲ್ಲಾ ನೋಡಿದವರ್ಯಾರದಾರು? ಕಾಣದ ಮಾತು. ಬೇಕಾದ್ದಽ ಹೊಂದಿಸಿ ಹೇಳಿದರೂ ಖರೇನಽ ಕಾಣತೈತಿ! ದಂಡಿ-ನ್ಯಾಗಿನ ಚಾಕರಿ ಕೈಬಿಟ್ಟಿದ್ದೀತು; ಹಿಂದಿನ ಸುದ್ದೀ ಕೇಳಿಕೊಂಡು ನಾರಸಾ ಹಚ್ಚಾಕ ಬಂದಾನು! ಬೇವಾರಸೀ ಮಗ! ನಡೀಬೇ ನುದಿಕೀ, ಮಗಾ ಅಂತ ಮಗ!"

ಎಂದು ಜಂಬಗ ಎದ್ದು ಹೊರಟೇ ಬಿಟ್ಟ. ಕೂಡಿದ ಜನರಿಗೆ ಇನು ಸರಿಯೆನಿಸಲಿಲ್ಲ. ಅವರು ಜಂಬಗನನ್ನು ಎಳೆದು ತಂಡು ಪುನಃ ಕುಳ್ಳಿರಿಸಿದರು. ಮುದುಕಿ ದಿಗ್ಭ್ರಮೆಗೊಂಡಿತು. ಈ ಇಪ್ಪತ್ತೈದು ವರ್ಷದ ಕಾಲಾವಧಿಯಲ್ಲಿ ಅವಳ ಮಗ ಹೋದ; ಗಂಡ ತೀರಿಕೊಂಡ; ಮಗಳು ಬೇನೆಗೆ ಬಲಿಯಾದಳು; ಮನೆ-ಮಾರು ಅಳಿಯನ ಪಾಲಾಯಿತು. ಆಕೆಗೆ ತನ್ನದೆಂಬುದು ಯಾವುದೂ ಉಳಿದಿರಲಿಲ್ಲ. ಇತ್ತೀಚೆಗೆ ಅರ್ಧರೊಟ್ಟಿಕೂಡ ದೊರೆಯುವುದು ಅವಳಿಗೆ ಕಷ್ಟವಾಗಿತ್ತು. ಹಂಗಿನ ಮಾತಿಗೆ ಮಿತಿಯೇ ಇರಲಿಲ್ಲ. ಓಡಿಹೋದ ಮಗ ಸತ್ತು ಹೋಗಿದ್ದಾನೆಂದು ಭಾವಿಸಿದ್ದಳಾಕೆ. 'ಅವನು ಸತ್ತಿರದೆ, ಬಂದವನು ತನ್ನ ಮಗನೇ ಆಗಿದ್ದರೆ ತಾನು ಅದೆಂಥ ಭಾಗ್ಯತಾಳಿ!' ಎಂದು ಬಗೆದಳು. ಆದರೆ ಇವನ್ನು ನಂಬುವುದು ಹೇಗೆ? ಆಕೆಯ ಎದೆ ಕರಗ ಹರಿಯುತ್ತಿದೆ; ಮನಸ್ಸು ಅದಕ್ಕೆ ಒಡ್ಡು ಹಾಕುತ್ತಿದೆ. ಜಂಬಗ ಬಿಮ್ಮನೆ ಬೆಗಿದು ಕುಳಿತುಬಿಟ್ಟಿದ್ದಾನೆ. ಸಿಪಾಯಿ ಉಸುರಿದ ಯಾವ ಸಂಗತಿಯನ್ನೂ ಅವನು ಅಮೂಲಾಗ್ರ ನಂಬಲಿಲ್ಲ. ಜನರೇನೋ ಸಹಾನುಭೂತಿಯಿಂದ ಕೇಳಿದರಾಗಲಿ 'ಇವನು ಮಗನೇ ಅಹುದು' ಎನ್ನುವ ನಿರ್ಧಾರಕ್ಕೆ ಬರಲಾರದಾದರು. ಸಿಪಾಯಿ ನೆರೆದ ಜನರನ್ನುದ್ದೇಶಿಸಿ ತನ್ನ ಬಗೆಗೆ ಸವಾಲು ಹಾಕಿದ; ಆದರೆ ಯಾರಿಂದಲೂ ನಿರ್ಣಾಯಕನಾದ ಉತ್ತರ ಬರಲಿಲ್ಲ. ಜಂಬಗ ಸಿಡಿದೆದ್ದು ಕೂಗಿದ: "ಬರೇ ನಾ ಮಗಾ ಅಂತ ಬಂದರ ಯಾರಾ-ದರೂ ಒಪ್ಪುತಾರಽ? ಹುಕುಮು ತೊಗೊಂಡು ಬಾ ಹುಕುಮು!"

ಎಲ್ಲರೂ ಮೌನವಾಗಿ ಕುಳಿತರು. ಒಬ್ಬ ವಿಚಾರವಂತ ಮುದುಕ ನುಡಿದ:— "ಏ ಸಿಪಾಯಿ ತಮ್ಮಾ, ನಿನ್ನ ಮಾತು ಖರೇ ಅಂತ ಹಿಡಿದರೂ, ಈಗ ಇಪ್ಪತ್ತೈದು ವರ್ಸಾನಽ ಹೊರಗ ಕಳದೀಯಂತ. ಇನ್ನಽರಽ ಯಾಕ ಈ ಆಸ್ತೀ ಆತಿ? ಜಂಬಗ್ಗ ಮಕ್ಕಳು-ಮರಿ ಐದಾವು. ದುಡದು ಉಣ್ತಾನ, ಉಣವಲ್ಲ್ಯಾಕ. ಅಂವನ ಅದೃಷ್ಟ ಅಂವಗ, ನಿನ್ನ ಅದೃಷ್ಟ ನಿನಗ! ದೇವರು ಕೊಡಾಂವ, ಎಲ್ಲಾ ಐದರೂ ಕೊಡ್ತಾನು. ಇನ್ನ ಈ ಮುದಿಕಿ ಏಟುದಿನ ಬದಿಕೀತು? ಅದರದೂ ಮುಗೀತಽ ಬಂದೈತಿ. ಇಲ್ಲೇ ಮಮ್ಮಕ್ಕಳು ಐದಾವು; ಅವನ್ನ ಬಿಟ್ಟು ಎಲ್ಲೆ ಹೋಕ್ಕೈತಿ? ನೀನು ಈಟುದಿನ ಎಲ್ಲಿದ್ದಿ, ಅಲ್ಲೇ ಹೋಗಿಬಿಡೇನಪಾ! ಹರೇದಹುಡುಗ, ಎಲ್ಲಾ ಐದರೂ ಹೊಟ್ಟೀತುಂಬಿಕೊಳ್ತೀ?" ಮುದುಕನ ಮಾತು ಎಲ್ಲರಿಗೂ ಸಮಂಜಸವಾದದ್ದು ಎನಿಸಿತು. ಎಲ್ಲರೂ ಮುತ್ತಿ ಸ್ತಬ್ಧರಾಗಿ ಕುಳಿತರು.

ಆಗ ಸಿಪಾಯಿ ತನ್ನ ಟೊಂಕಕ್ಕೆ ಕೈಹಾಕಿ ಹಮ್ಮಿಣಿಯೊಂದನ್ನು ಹೊರಗೆ ತೆಗೆದು, ಅದರೊಳಗಿನ ನೋಟಿನ ಪುಡಿಕೆಯನ್ನು ಕೈಯಲ್ಲಿ ಹಿಡಿದಿತ, ಉಚ್ಚಸ್ವರದಲ್ಲಿ ನುಡಿದ: "ನಾನು ಗೇಣು ಹೊಲ, ಈ ಮುರುಕು ಗುಡಿಸಲು ಇದಕ್ಕಾಗಿ ಬಂದಿಲ್ಲ. ನನ್ನ ತಾಯಿಗಾಗಿ ಬಂದೀನಿ. ಬದಿಕಿದಷ್ಟು ದಿನ ಆಕೀಗೆ ಸುಖ ಆಗ ಬೇಕೂ ಅಂತ, ಐದು ಸಾವಿರ ರೂಪಾಯಿ ತಂದೀನಿ. ಜಂಬಣ್ಣನ ಮ್ಯಾಗ ನನಗ ಸಿಟ್ಟಿಲ್ಲ. ನಾವಿಬ್ಬರೂ ಅಣ್ಣ-ತಮ್ಮರ ಹಾಂಗ, ಒಂದಽ ಹೊಟ್ಟೀ ಮಕ್ಕಳ ಹಾಂಗ ಇರಬೇಕು ಅಂತ ನನಗ ಆಸೀ ಐತಿ. ಆತ ಅವಕ್ಕ ಕಬೂಲಿ ಕೊಟ್ಟರ ಪಾಡಾತು, ಇಲ್ಲದಿದ್ದರ ನಾಕು ಮಂದಿ ಪಂಚರ ಸ್ವಾಧೀನ ಈ ದುಡ್ಡು ಕೊಡ್ತೀನಿ; ಸಾಯೋತನಕ ಅವರು ನನ್ನ ತಾಯಿಗೆ ಹೊಟ್ಟಿಗೆ ನಡಿಸಲಿ. ನಾನು ಹೊಂಟೆ." ಎಂದು ನುಡಿಯುವಾಗ, ಸಿಪಾಯಿಯ ಕುತ್ತಿಗೆ ಬಿಗಿದು ಬಂದಿತ್ತು. ನೆರೆದವರೆಲ್ಲ ರಾಶಿರಾಶಿ ನೋಟುಗಳನ್ನು ನೋಡಿ ದಂಗುಬಡಿದರು, ಜಂಬಗನ ಬಾಯಿಗೂ ನೀರು ಬಿಟ್ಟಿತು.

ಒಮ್ಮೆಲೆ ಎಲ್ಲರ ತಲೆಯಲ್ಲಿ ಬೆಳಕು ಹೊಳೆದಂತಾಗಿ ಅವರ ಬಾಯಿಂದ ಒಂದೇ ಮಾತು ಹೊರಬಂದಿತು— "ಹೌದೋಪಾ, ಹೌದು, ಇಂವ ನಮ್ಮ ಆ ಓಡಿಹೋದ ಸಂಬ್ಯಾನಽ ಹೌದು! ಎಲಾ ಇವನಽ, ಏಟಾಕೊಂದು ರೊಕ್ಕಾ ತಂದಾನಲ್ಲೊ!"

ಮುದುಕಿ ನೋಟಿನ ಕಡೆಗೆ ನೋಡುತ್ತಿರಲಿಲ್ಲ. ತಾಯೊಲವಿನ ತುಂಬುನೋಟದಿಂದ ಸಿಪಾಯಿಯನ್ನು ನಿಟ್ಟಿಸುತ್ತಿದ್ದಳು. ಬಾಯಿಂದ ಮಾತಿಲ್ಲ; ಕಂಬನಿ ಮುಪ್ಪಿನ ಕೆನ್ನೆಗಳನ್ನು ತೋಯಿಸುತ್ತಿತ್ತು.

ಸಾಗರೋತ್ತರ ಹಿಂದೀ ಸುದ್ದಿಸಂಸ್ಥೆ

(ಪರಿಚಯಾತ್ಮಕ ಲೇಖನ)

卐 ಶ್ರೀ. ಬಿ. ಜಿ. ಕುಲಕರ್ಣಿ, ಬಿ.ಎ. (ಆನರ್ಸ್)

ಉಪಸಂಪಾದಕ ' ಸಂಯುಕ್ತ ಕರ್ನಾಟಕ ' ಹುಬ್ಬಳ್ಳಿ.

★

ಹಿಂದುಸ್ತಾನದ ನಿಜವಾದ ವಾರ್ತೆ ವಿದೇಶಗಳಿಗೆ ತಿಳಿಯುತ್ತಿದ್ದಿಲ್ಲ; ವಿದೇಶದ ನಿಜವಾದ ವಾರ್ತೆ ಹಿಂದುಸ್ತಾನವನ್ನು ತಲ್ಪುತ್ತಿರಲಿಲ್ಲ. ಈಗ ಈ ಸಾಗರೋತ್ತರ ಹಿಂದೀ ಸುದ್ದಿಸಂಸ್ಥೆಯು ಅಂತಹ ಕೊರತೆಯನ್ನು ಕಳೆಯಲು ಸೊಂಟ ಬಿಗಿದಿದೆ.

★

ನಡುಗಾಲ ಸರಕಾರದ ನೇತೃತ್ವದಲ್ಲಿ ಹಿಂದುಸ್ತಾನವು ಅಂತರರಾಷ್ಟ್ರೀಯ ರಾಜಕಾರಣದಲ್ಲಿ ತನಗೊಂದು ಹೆಮ್ಮೆಯ ಹಾಗೂ ಮಾನದ ಸ್ಥಾನವನ್ನು ದೊರೆಕಿಸಿಕೊಳ್ಳುತ್ತಲಿದೆ. ಸಂಸ್ಕೃತಿಯ ಹಿರಿಮೆ, ಭೌಗೋಲಿಕ ಮಹತ್ತ್ವ ಅಲ್ಲದೆ ಕೇವಲ ಜನಸಂಖ್ಯೆಯ ಮಾನದಿಂದಲೂ ಕೂಡ ಹಿಂದುಸ್ತಾನಕ್ಕೆ ಇಂತಹ ಸ್ಥಾನವು ಈ ಮೊದಲೇ ದೊರೆಯಬೇಕಾಗಿತ್ತು. ಅದು ಇಲ್ಲಿಯವರೆಗೆ ದೊರೆತಿರಲಿಲ್ಲವಿಷ್ಟೆ ಅಲ್ಲ; ಅದು ದೊರೆಯಬಹುದೆಂಬ ಲಕ್ಷಣಗಳು ಕೂಡ ಇರಲಿಲ್ಲ. ' ಹಿಂದೀಯರೆಂದರೆ ಹಿಂದುಳಿದ ಜನಾಂಗದವರು, ಆಕಾಶದಲ್ಲಿ ಹಗ್ಗವನ್ನು ನಿಲ್ಲಿಸಿ ಅದರ ಮೇಲೆ ಹತ್ತುವ ಮಾಟಗಾರರು ' ಎಂಬ ಚಿತ್ರವಿಚಿತ್ರ ಕಲ್ಪನೆಗಳು ಪರದೇಶಿಗರಲ್ಲಿ ನೆಲಸಿದ್ದುವು. ಅಮೇರಿಕೆಯಲ್ಲಿ ಹಿಂದೀಯರೆಂದರೆ ನಿಗ್ರೋ ಜನರೆಂದೆ ತಿಳಿಯಲಾಗುತ್ತಿತ್ತು. ಆಫ್ರಿಕೆಯಲ್ಲಿ ಹಿಂದೀಯರನ್ನೂ ಸಾಯಿಗಳನ್ನೂ ಒಂದೇ ವರ್ಗಕ್ಕೆ ಸೇರಿಸಿದ್ದರು. ಜೀನಾ ನೊದಲಾದ ಅತಿಪೂರ್ವ ದೇಶಗಳಲ್ಲಿ ನಮ್ಮನ್ನು ಇಂಗ್ಲಿಷರ ಗುಲಾಮರೆಂದೇ ಕಾಣುತ್ತಿದ್ದರು ಹೊರತು, ತಮ್ಮ ಧರ್ಮದ ಮಾತೃಭೂಮಿಯ ಮಕ್ಕಳೆಂದು ನೋಡುತ್ತಿರಲಿಲ್ಲ.

ಹಿಂದೀ ಸಂಸ್ಕೃತಿಯ ಹಿರಿಮೆಯನ್ನೂ ಅದರ ಮಹಿಮೆಯನ್ನೂ ಅರಿತ ಮತ್ತು ಜನರಿಗೆ ಅದರ ಅರಿವು ಮಾಡಿಕೊಡಲು ಯತ್ನಿಸಿದ ಎಷ್ಟೋ ವಿದೇಶೀ ಮಹನೀಯರು ಆಗಿಹೋದರು. ವಿನೇಕಾನಂದ ರಂಥವರು ಹಿಂದೀ ತತ್ತ್ವಜ್ಞಾನದ ವಿಜಯಪತಾಕೆಯನ್ನು ವಿದೇಶದಲ್ಲಿ ಹಾರಾಡಿಸಿದರು. ರಾಮನ್ನ ರಂತಹ ವೈಜ್ಞಾನಿಕರು, ಠಾಕೂರರಂತಹ ಕವಿಗಳು ಹಿಂದೀಯರ ಸತ್ತ್ವವನ್ನು ತೋರಿದರು. ಪ್ರತಿ ಬುದ್ಧನಂತಿದ್ದ—ಯುಗಪುರುಷರಾಗಲಿರುವ—ಮಹಾತ್ಮಾ ಗಾಂಧಿಯವರು ನಮ್ಮಲ್ಲಿ ಜನಿಸಿದರು. ಆದರೂ ಈ ದೇಶಕ್ಕೆ ಜಗತ್ತಿನಲ್ಲಿ ಮಾನವಿರಲಿಲ್ಲ. ಹೀಗಾಗುವುದಕ್ಕೊಂದು ಕಾರಣವುಂಟು. ಅದೇನೆಂದರೆ ನಮ್ಮನ್ನಾಳುವವರು, ತಮ್ಮ ಬೇಳೆ ಬೇಯಿಸಿಕೊಳ್ಳುವುದರ ಸಲುವಾಗಿ ಪರದೇಶಗಳಲ್ಲಿ ನಮ್ಮ ವಿರುದ್ಧ ಪ್ರಚಾರ ನಡೆಸಿಯಿಸಿದ್ದು. ಹಿಂದೀಯರನ್ನು ಅಲ್ಲಗಳೆಯುವ, ಹಿಂದೀ ಸಮಾಜದಲ್ಲಿಯ ದೋಷಗಳನ್ನಷ್ಟೇ ಎತ್ತಿತೋರಿಸುವ ಎಷ್ಟೋ " ಗಟರ್ ಇನ್ಸ್‌ಪೆಕ್ಟರರ " ವರದಿಗಳು ಪ್ರಸಿದ್ಧವಾದುವು. ಆದರೆ ಈ ಅಪಪ್ರಚಾರದ ಕೆಲಸವನ್ನು ಅತ್ಯಂತ ಯಶಸ್ವಿಯಾಗಿ ತೆರೆಯ ಮರೆಗೆ ನಿಂತುಕೊಂಡು ಮಾಡಿದವರೆಂದರೆ ವಿದೇಶೀಯ ಸುದ್ದಿ ಸಂಸ್ಥೆಗಳು. ಈ ಸಂಸ್ಥೆಗಳಲ್ಲಿ ಅತ್ಯಂತ ಮುಖ್ಯವಾದುದೆಂದರೆ ಇಂಗ್ಲಂಡಿನಲ್ಲಿ ಜರ್ಮನನೊಬ್ಬನಿಂದ ಸ್ಥಾಪಿತವಾದ ಹಾಗೂ ಮುಂದೆ (೧೮೭೫) ಇಂಗ್ಲಂಡಿನ ಕೈಗೊಂಬೆಯಾದ ರಾಯ್ಟರ್ ಸಂಸ್ಥೆಯು. ಹಿಂದುಸ್ತಾನದ ಸುದ್ದಿಗಳಿಗೆ ವಿಕೃತಸ್ವರೂಪ ಕೊಟ್ಟು ಅವುಗಳನ್ನು ಪರದೇಶದ ವೃತ್ತಪತ್ರಗಳಿಗೆ ಒದಗಿಸಿಕೊಡುವುದು, ಹಾಗೂ ಹಿಂದುಸ್ತಾನದ ರಾಜಕೀಯ ಮುನ್ನಡೆಗೆ ಉಪಯೋಗವಾಗದಂತಹ ವಿದೇಶದ ಸುದ್ದಿಗಳನ್ನಷ್ಟೇ ಹಿಂದೀ ಪತ್ರಿಕೆಗಳಿಗೆ ಪೂರಯಿಸುವ ಕೆಲಸವನ್ನು ಈ ಸಂಸ್ಥೆಗಳು ಚೆನ್ನಾಗಿ ಸಾಗಿಸಿದುವು. ಇದರಿಂದ ಹಿಂದೀಯರ ನಿಜವಾದ ಬೆಲೆಯು ಅವರ ಆಕಾಂಕ್ಷೆಗಳು ಪರದೇಶೀಯರಿಗೆ,—ಸಹಾನುಭೂತಿಯುಳ್ಳ ಪರದೇಶೀಯರಿಗೆ ಕೂಡ—ತಿಳಿಯುವುದು ಅಸಾಧ್ಯವಾಯಿತು. ಜಗತ್ತಿನಲ್ಲಿ ನಡೆದ ಸಂಗತಿಗಳು, ವಿಶೇಷವಾಗಿ ಸ್ವಾತಂತ್ರ್ಯದ ಹೋರಾಟಗಳ ಸುದ್ದಿಗಳು ಈ ಸಂಸ್ಥೆಗಳಲ್ಲಿ ಸೋಸಿಬರುತ್ತಿದ್ದುವಾದ್ದರಿಂದ, ನಮ್ಮ ವಿಕಾಸವು ಕುಂಠಿತವಾಯಿತು. ನಾವು ಕಸ್ತ್ರೆರೆಯಲ್ಲಿ ಒಂದೇ ತತ್ತ್ವಕ್ಕಾಗಿ ಹೋರಾಡುವ ನಮ್ಮ ನೆರೆಹೊರೆಯ ರಾಷ್ಟ್ರಗಳೊಡನೆ ನಮ್ಮ ಸ್ನೇಹಸಂಬಂಧವು ಬೆಳೆಯಲಿಲ್ಲ.

ನಡುಗಾಲ ಸರಕಾರದ ಸ್ಥಾಪನೆಯಾದೊಡನೆ, ದೇಶದಲ್ಲಿ ಹೊಸ ಚೈತನ್ಯ ನಿರ್ಮಾಣವಾಗಿದೆ. ಅದರಲ್ಲಿಯೂ ವಿದೇಶರಾಖೆಯು ಜವಾಹರಲಾಲರಂಥವರ ಕಡೆಗೆ ಇದ್ದುದರಿಂದ, ನಮ್ಮ ವಿದೇಶೀ ಸ್ನೇಹ ಸಂಬಂಧಗಳಿಗೆ ಹೊಸ ಕಳೆ ಬಂದಿದೆ. ಮೊನ್ನೆ

ತಾನೆ ದಿಲ್ಲಿಯಲ್ಲಿ ಆಂತರ ಏಷಿಯಾ ಪರಿಷತ್ತು ನೆರೆಯಿತು. ಹಿಂದುಸ್ತಾನ ಹಾಗೂ ಏಶಿಯಾದ ಇತರ ರಾಷ್ಟ್ರಗಳ ನಡುವೆ ಹೊಸ ಸ್ನೇಹಕ್ಕೆ ಹೊಸ ಒಪ್ಪು ಹಾಕಲ್ಪಡುವುದು. ಅಮೇರಿಕಾ, ಚೀನಾ ದೇಶಗಳಿಗೆ ನಮ್ಮ ರಾಯಭಾರಿಗಳು ಹೋಗಿದ್ದಾರೆ. ಫ್ರಾನ್ಸ್, ನಾರ್ವೆ, ಸ್ವೀಡನ್, ರಶಿಯಾಗಳಿಗೆ ಹೋಗಲಿದ್ದಾರೆ. ಹಿಂದುಸ್ತಾನವು ಸದ್ಯಕ್ಕೆ ಸ್ವತಂತ್ರವಾಗದಿದ್ದರೂ, ಸ್ವಾತಂತ್ರ್ಯದ ಹೊಸ್ತಿಲದ ಮೇಲಿರುವುದು. ಜಗತ್ತಿನಲ್ಲಿ ನಮಗಿನ್ನು ದೊರೆಯ ತಕ್ಕ ಸ್ಥಾನವು ಬಹಳ ದೊಡ್ಡದಾಗಿರುವುದು. ಇಂಥ ಹೊಸ ಸ್ಥಾನವನ್ನು ದೊರೆಕಿಸಿಕೊಂಡು ಅದನ್ನು ಕಾಯ್ದುಕೊಳ್ಳಬೇಕಾದರೆ ನಮಗೆ ವಿದೇಶಗಳಲ್ಲಿ ನಮ್ಮದೇ ನಮ್ಮದಾದ ಸುದ್ದಿ-ಸಂಸ್ಥೆಯು ಅವಶ್ಯವಾಗಿ ಬೇಕು. ಪರದೇಶದ ವೃತ್ತಾಂತಗಳನ್ನು ಚೆನ್ನಾಗಿ ಲಿರಿತುಕೊಂಡು, ನಮ್ಮ ಆಶೆ ಆಕಾಂಕ್ಷೆ ಯತ್ನ ಪ್ರಯತ್ನಗಳನ್ನು ಅವರಿಗೆ ತಿಳಿಸಿಕೊಡುವುದು ಅತ್ಯಗತ್ಯವಿದೆ. ಹಿಂದಿನ ಕೊಳಜೆಯನ್ನು ತೆಗೆದೊಗೆದು, ಅದರ ಸ್ಥಳದಲ್ಲಿ ಒಂದು ಉಪವನವನ್ನು ನಿರ್ಮಿಸುವ ಕಾರ್ಯವನ್ನು ನಾವು ಮಾಡಬೇಕಾಗಿದೆ. ಇದಕ್ಕಾಗಿ ನೂರಕ್ಕೆ ನೂರರಷ್ಟು ನಮ್ಮದೇ ನಮ್ಮದಾದ—ಸಾಗರೋತ್ತರ—ಸುದ್ದಿ ಸಂಸ್ಥೆಯು ಬೇಕು.

ಆನಂದದ ಸುದ್ದಿ. ಲಂಡನಿನಲ್ಲಿಯ ಕೆಲವು ಉತ್ಸಾಹಿ ಹಿಂದೀ ಪತ್ರಕಾರರು ಇಂತಹದೊಂದು ಸಂಸ್ಥೆಯನ್ನು ಸ್ಥಾಪಿಸಿದ್ದಾರೆ. ಇವರ ಹೆಸರು 'ಇಂಡಿಯನ್ ಪ್ರೆಸ್ ಅಸೋಶಿಯೇಶನ್' ಎಂದರೆ ಹಿಂದೀ ಸುದ್ದಿ ಸಂಸ್ಥೆ. ಈ ಸಂಸ್ಥೆಯ ಸ್ಥಾಪಕರಲ್ಲೊಬ್ಬರೂ, ಅದರ ಮ್ಯಾನೇಜಿಂಗ್ ಡಾಯರೆಕ್ಟರರೂ ಆದ ಶ್ರೀ. ಶ್ರೀಧರ ತೇಲಕರು ಸದ್ಯ ಹಿಂದುಸ್ತಾನಕ್ಕೆ ಬಂದಿದ್ದು, ಕಳೆದ ಕೆಲವು ದಿವಸಗಳಿಂದ ತಮ್ಮ ಜನ್ಮಸ್ಥಳವಾದ ಬೆಳಗಾಂವಿಯಲ್ಲಿದ್ದಾರೆ. ಇವರನ್ನು ಕಂಡು ಹಿಂದೀ ಸುದ್ದಿಸಂಸ್ಥೆಯ ರಚನೆ, ಅದರ ಕಾರ್ಯ ಮೊದಲಾದುವುಗಳ ಬಗ್ಗೆ ಚರ್ಚೆಮಾಡುವ ಸುಸಂಧಿ ನನಗೆ ದೊರೆತಿತ್ತು.

ಮೇಲಿನ ವಿವರಣೆಯು ಮೇಲಿಂದ ಹಿಂದೀ ಸುದ್ದಿಸಂಸ್ಥೆಯ ಉದ್ದೇಶವು ಸ್ಪಷ್ಟವಾಗಿರಲು ಸಾಕು. ರ್ಚಿಲನೆಯ ಇಸ್ಪಿಯಲ್ಲಿ ಶ್ರೀ. ತೇಲಕರರು ಲಂಡನಿನ ನ್ಯೂಜ್ ಕ್ರಾನಿಕಲ್ಲಿನ ಪ್ರೇಷಿತ ಪ್ರತಿನಿಧಿಗಳೆಂದು ತಿರುಪುರೀ ಕಾಂಗ್ರೆಸಿಗೆ ಬಂದಾಗ, ಒಂದು ಮಾತನ್ನು ಚೆನ್ನಾಗಿ ಮನಗಂಡರು. ತಾವು ತಮ್ಮ ಪತ್ರಕ್ಕೆ ಕಳಿಸಿದ ವರದಿಯನ್ನೂ ಬೇರೆ ವಿದೇಶೀ ಸುದ್ದಿಗಾರರು ಇಂಗ್ಲಂಡಿನ ಇತರ ಪತ್ರಗಳಿಗೆ ಕಳಿಸಿದ ವರದಿಗಳನ್ನೂ ಹೋಲಿಸಿ ನೋಡಿ ಅವರು, ವಿದೇಶಕ್ಕೆ ಹಿಂದುಸ್ತಾನದ ಪರಿಸ್ಥಿತಿಯ ನಿಜವಾದ ಜ್ಞಾನವು—ಅಂತೆಯೇ ಹಿಂದುಸ್ತಾನದ ಬಗ್ಗೆ ಸಹಾನುಭೂತಿ—ಏಕೆ ಉಂಟಾಗುವುದಿಲ್ಲವೆಂಬುದನ್ನು ಕಂಡುಕೊಂಡರು. ಹಿಂದುಸ್ತಾನಕ್ಕೆ ಬರುವ ವಿದೇಶೀಸುದ್ದಿಗಳು ಕೆನೆತೆಗೆದ ಹಾಲಿನಂತಿರುವುದನ್ನೂ ಅವರು ಕಂಡರು. ಇಂತಹ ಸುದ್ದಿಗಳಿಂದ ಹಿಂದೀಯರಿಗೆ ವಿದೇಶದ ಅಂತರಂಗ ತಿಳಿಯಲಾರದೆಂದು ಅವರಿಗೆ ಸ್ಪಷ್ಟವಾಯಿತು. ಹಿಂದೀ ಕಣ್ಣುಗಳಿಂದ ಸಂಗ್ರಹಿಸಲ್ಪಟ್ಟ, ಹಿಂದೀ ಲೆಕ್ಕಣಿಕೆಗಳಿಂದ ಬರೆಯಲ್ಪಟ್ಟ ಸುದ್ದಿಗಳೇ ವಿದೇಶದಿಂದ ಹಿಂದುಸ್ತಾನಕ್ಕೆ ಹಾಗೂ ಹಿಂದುಸ್ತಾನದಿಂದ ವಿದೇಶಕ್ಕೆ ಹೋಗುವುದು ಆತ್ಯನಶ್ಯವೆಂದೂ, ಮತ್ತು ಅದಕ್ಕಾಗಿ ಪ್ರಯತ್ನಿಸುವುದು ತಮ್ಮ ಕರ್ತವ್ಯವೆಂದೂ ಇವರು ತಿಳಿದುಕೊಂಡರು. ಕರ್ಮ-ಧರ್ಮಸಂಯೋಗದಿಂದ ಅಧಿವೇಶನದ ಒಂದು ಭಾಷಣದಲ್ಲಿ ಪಂಡಿತ ಜವಾಹರಲಾಲರು, ಸಾಗರೋತ್ತರ ಹಿಂದೀ ಸುದ್ದಿ-ಸಂಸ್ಥೆಯ ಆವಶ್ಯಕತೆಯನ್ನು ವಿವರಿಸಿದರು. ಅಂದಿನಿಂದಲೇ ಹಿಂದೀ ಸುದ್ದಿಸಂಸ್ಥೆಯ ಅಂಕುರವು ಮೂಡಿತೆಂದು ಹೇಳಲು ಅಡ್ಡಿಯಿಲ್ಲ. ಆದರೆ ಯುದ್ಧಪರಿಸ್ಥಿತಿಯ ಮೂಲಕ ಅದು ಈವರೆಗೆ ಮೂರ್ತಸ್ವರೂಪಹೊಂದಿರಲಿಲ್ಲ. ಕಳೆದ ಡಿಸೆಂಬರಿನಲ್ಲಿ ಈ ಸಂಸ್ಥೆಯು ಸ್ಥಾಪಿಸಲ್ಪಟ್ಟಿದೆ. ಸದ್ಯಕ್ಕೆ ಅದರ ಶಾಖೆಗಳು ನ್ಯೂಯಾರ್ಕ್, ಲಂಡನ್ ಮತ್ತು ಪ್ಯಾರಿಸ್ಸುಗಳಲ್ಲಿವೆ. ಮುಂಬಯಿಯಲ್ಲಿ ಸಂಸ್ಥೆಯ ಮುಖ್ಯ ಕಚೇರಿಯಿದೆ. ಸಂಸ್ಥೆಗೆ ನುರಿತ ಪತ್ರಕಾರರ ಸಹಕಾರವೂ ಸಂಪಾದಕರ ಬೆಂಬಲ ಮತ್ತು ಪ್ರೋತ್ಸಾಹನೆಗಳೂ ದೊರೆತಿವೆ. ಪಂಡಿತ ಜವಾಹರಲಾಲರೇ ಸಂಸ್ಥೆಯನ್ನು ತೊಟ್ಟಿಲಿನಲ್ಲಿ ಹಾಕಿ ತೂಗಿದ್ದಾರೆ.

ಸಂಸ್ಥೆಯ ಮುಖ್ಯ ಕಚೇರಿಯು ಮುಂಬಯಿಯಲ್ಲಿ ಉಳಿಯುವುದು. ಯುರೋಪ, ಅಮೇರಿಕಾ ಮತ್ತು ಅತಿಪ್ರಾಚ್ಯದ ಪ್ರತಿಯೊಂದು ದೇಶದ ರಾಜಧಾನಿಯಲ್ಲಿಯೂ ಸಂಸ್ಥೆಯ ಶಾಖೆಗಳು ಸ್ಥಾಪಿಸಲ್ಪಡುವವು. ಪೂರ್ವದ ಸುದ್ದಿಗಳು ಕಲಕತ್ತೆಯಲ್ಲಿಯೂ ಪಶ್ಚಿಮದ ಸುದ್ದಿಗಳು ಮುಂಬಯಲ್ಲಿಯೂ ಸಂಗ್ರಹಿಸಲ್ಪಡುವುವು; ಅಲ್ಲಿಂದ ಅವುಗಳನ್ನು ಪತ್ರಿಕೆಗಳಿಗೆ ಕಳಿಸಲಾಗುವುದು. ಸಂಸ್ಥೆಯು, ಈಗಾಗಲೇ ಕಾರ್ಯನಡೆಸಿದೆ. ಈ ಸಂಸ್ಥೆಯ ಸುದ್ದಿಗಳು ನಮ್ಮ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿವೆ. 'ಸಂಯುಕ್ತ ಕರ್ನಾಟಕ'ದಲ್ಲಿಯೂ ಕೆಲವು ಬಂದಿವೆ. ಮೊದಲು ಕೆಲವು ದಿವಸ ಸುದ್ದಿಗಳನ್ನು ಏಪಾನವಾರ್ಗವಾಗಿ ಕಳಿಸಲಾಯಿತು. ಈಗ ಅವು ತಂತಿಯಿಂದ ಕಳಿಸಲ್ಪಡುತ್ತಿವೆ. 'ನಿಮ್ಮ ಸಂಸ್ಥೆಗೆ ಟೆಲಿಪ್ರಿಂಟರ್ ಸೌಕರ್ಯವನ್ನು ಪೊರೆಕಿಸಿಕೊಳ್ಳಲು ನೀವು ಪ್ರಯತ್ನಿಸುತ್ತಿದ್ದಿರಾ?' ಎಂಬ ನನ್ನ ಪ್ರಶ್ನೆಗೆ ಶ್ರೀ. ತೇಲಕರರು, ತಮ್ಮ ಹೆಜ್ಜೆ ಅದಕ್ಕೂ ಮುಂದಿರುವುದಾಗಿ ಉತ್ತರ ಕೊಟ್ಟರು. ಮುಂಬಯಿ ಮತ್ತು ಕಲಕತ್ತೆಯ ಕಚೇರಿಗಳಿಂದ ಸುದ್ದಿಗಳನ್ನು ಬಾನುಲಿಯ ಸಹಾಯದಿಂದ ಕಳಿಸುವ ಬಗ್ಗೆ ಅವರು ಯೋಚಿಸುತ್ತಿದ್ದಾರೆ. ದೇಶಭಾಷೆಯ ಪತ್ರಗಳಿಗೆ ಅದೇ ಭಾಷೆಯಲ್ಲಿಯೆ ಸುದ್ದಿಗಳನ್ನು ಪೂರಯಿಸಬೇಕೆಂದು ಅವರು ಯತ್ನಿಸಲಿರುವರು. ಸದ್ಯಕ್ಕೆ ದೇಶೀಭಾಷೆಯ ಪತ್ರಗಳ ಬಹಳ ಕಾಲವು ಇಂಗ್ಲೀಷ್ ಸುದ್ದಿಗಳನ್ನು ಭಾಷಾಂತರಿಸುವುದರಲ್ಲಿಯೇ ವ್ಯಯವಾಗುತ್ತದೆ. ಸುದ್ದಿಗಳಿಗೆ ಆಕರ್ಷಕತೆಯನ್ನುಂಟುಮಾಡಲು ಅವುಗಳಿಗೆ ಸಾಕಷ್ಟು ವೇಳೆ ಸಿಕ್ಕುವುದಿಲ್ಲ. ಶ್ರೀ. ತೇಲಕರರ ಈ ಮೇಲಿನ ಯೋಜನೆಯಿಂದ ಈ ತೊಂದರೆಯು ಪರಿಹಾರವಾಗುವುದು.

ವೇತನವೂ ವಿದೇಶಪತ್ರಿಕೆಗಳು ಇಂಗ್ಲೀಷ್ ಪತ್ರಗಳಷ್ಟೇ ಆಕರ್ಷಕವಾಗಲು ಅನುಕೂಲವಾಗುವುದು.

ಈ ಸಂಸ್ಥೆಯ ರೂಪ-ರೇಷೆಗಳನ್ನು ಕೊಡುವಾಗ್ಗ ಅದರ ಸಂಸ್ಥಾಪಕರಾದ ಶ್ರೀ. ತೇಲಕರರ ಪರಿಚಯ ಮಾಡಿಕೊಡುವುದು ಅಪ್ರಸ್ತುತವಾಗಲಿಕ್ಕಿಲ್ಲ.

ಶ್ರೀ. ಶ್ರೀಧರರಾವ ತೇಲಕರರು ಬೆಳಗಾಂವಿಯ ಒಂದು ಶ್ರೀಮಂತ ಮನೆತನಕ್ಕೆ ಸೇರಿದವರು. ಒಂದು ದೃಷ್ಟಿಯಿಂದ ಕನ್ನಡಿಗರು. ೧೯೨೭ ನೆಯ ಇಸ್ವಿಯಲ್ಲಿ ಇವರು ಮುಂಬಯಿ ವಿಶ್ವವಿದ್ಯಾಲಯದ ಮ್ಯಾಟ್ರಿಕ್ ಪರೀಕ್ಷೆಗೆ ಬೇಸತ್ತು ಬ್ಯಾರಿಸ್ಟರ್ ರಾಗಲು ಲಂಡನಿನತ್ತ ಸಾಗಿದರು. ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಮೂರುಸಾರೆ ನಾಪಾಸಾಗಿದ್ದರೂ ಇವರು ಲಂಡನ್ನಿನ ಬ್ಯಾರಿಸ್ಟರ್ ಪರೀಕ್ಷೆಯ ಮೊದಲನೆಯ ಭಾಗವನ್ನು ಒಂದೇ ಹೊಡೆತಕ್ಕೆ ಪಾಸಾದರು. (ಮ್ಯಾಟ್ರಿಕ್ ನಾಪಾಸಾದವರನ್ನು ಹೀಯಾಳಿಸುವ ನಮ್ಮ ಜನರು, ಇದರ ಮೇಲಿಂದ ಒಂದು ದೊಡ್ಡ ಪಾಠ ಕಲಿಯಬಹುದು.) ಮುಂದಿನ ಪರೀಕ್ಷೆಯ ವಿಚಾರ ಮಾಡಬೇಕೆನ್ನುವಷ್ಟರಲ್ಲಿಯೆ ಇವರ ಮನೆಯ ಆಧಾರಸ್ತಂಭರಾಗಿದ್ದ ಇವರ ತಂದೆಯವರು ಕೈಲಾಸವಾಸಿಗಳಾದರು. ಶ್ರೀಧರರಿಗೆ ಆರ್ಥಿಕ ಸಹಾಯವು ಇಲ್ಲದಂತಾಯಿತು. ಮರಳಿ ಬರಲು ಕೂಡ ಹಣ ಇರಲಿಲ್ಲ. ಇಂಗ್ಲಂಡಿನಲ್ಲಿಯೆ ಜೀವನೋಪಾಯ ಹುಡುಕುವ ಪ್ರಸಂಗ ಬಂದಿತು. ಇಂಗ್ಲಂಡಿನ ಜೀವನದ ಮಟ್ಟವು ಹೆಚ್ಚಿಗಿರುವುದರಿಂದ ಅಲ್ಲಿಯ ಸಾಮಾನ್ಯ ಜೀವನವು ನಮ್ಮಲ್ಲಿಯ ಶ್ರೀಮಂತರಿಗೆ ಕೂಡ ಪೂರಯಿಸುವುದಿಲ್ಲ. ಅಂತಹದರಲ್ಲಿ ಯಾವ ಪದವಿಗಳಿಲ್ಲದೆ, ಯಾವ ವಿಶಿಷ್ಟ ಕಲೆಯು ಸಾಧನೆಯಿಲ್ಲದೆ, ಶ್ರೀಧರರಿಗೆ ಜೀವನಕಲಹದಲ್ಲಿ ಧುಮುಕಬೇಕಾಯಿತು. ಅವರ ಕಷ್ಟವನ್ನು ಊಹಿಸುವುದೆ ಒಳಿತು. ಎಷ್ಟೋ ದಿವಸ ಉಪವಾಸ; ಎಷ್ಟೋ ದಿವಸ ನೆಲಮನೆಯಲ್ಲಿ ಇಲ್ಲವೆ ಅಡುಕಲ ಕೋಣೆಯಲ್ಲಿ ವಾಸಮಾಡುವುದು— ಒಂದಲ್ಲ ಎಡಡಲ್ಲ, ಕಷ್ಟಗಳ ಸರಿವಾರವೇ ಅವರನ್ನು ಬೆನ್ನಟ್ಟಿತು. ಧೈರ್ಯದ ಹೊರತು ಅವರಿಗೆ ಬೇರೆ ಯಾರು ಸಹಾಯವೂ ಇರಲಿಲ್ಲ. ಇದೇ ಕಾಲಕ್ಕೆ ಇಂಗ್ಲಂಡಿನ ದುಂಡುಮೇಜಿನ ಪರಿಷತ್ತಿಗಾಗಿ ಬಂದ ಡಾ. ಸುಬ್ರಾಯನರ ಪತ್ನಿಯವರು, ಮರಳಿ ಹಿಂದುಸ್ತಾನಕ್ಕೆ ಏನಾದರೂ ಮಾರ್ಗವಾಗಿ ಹೊಂಟಿದ್ದರು. ತೇಲಕರರು ಇವರನ್ನು ಸಂದರ್ಶಿಸಿ, ಸಂದರ್ಶನದ ವಂದಿಗೆ 'ಭಾರತಕ್ಕೆ ಏನಾದರೂ ಸಾಗಿದ ಮೊದಲನೆಯ ಹಿಂದೀ ಮಹಿಳೆ' ಎಂಬ ಶೀರ್ಷಕವನ್ನು ಕೊಟ್ಟು, ಅದನ್ನು ಡೇಲಿ ಹೇರಾಲ್ಡ್ ಪತ್ರಕ್ಕೆ ಕಳಿಸಿದರು. ಆಗ ಹಿಂದೀ ಸುದ್ದಿಗಳಿಗೆ ವಿಶೇಷ ಬೇಡಿಕೆಯಿತ್ತಾದ್ದರಿಂದ ಪಾಗೂ ವರದಿಯ ಭಾಷೆ ಹಾಗೂ ಅದರ ಶೈಲಿಯು ಆಕರ್ಷಕ ಕಂಡದ್ದರಿಂದ, ಡೇಲಿ ಹೆರಾಲ್ಡ್ ಪತ್ರವು ಅದನ್ನು ಸ್ವೀಕರಿಸಿ, ಪ್ರತಿಫಲವೆಂದು ಮೂರು ಪೌಂಡು ಗಳನ್ನು ಕೊಟ್ಟಿತು. ಇದೇ ಶ್ರೀಧರರ ಪತ್ರಿಕೋದ್ಯಮದ ಶ್ರೀಕಾರ. ಇಂತಹ ಮೂರು ಪೌಂಡುಗಳನ್ನು ದಿನಾಲು ದೊರಕಿಸುವುದು ಸಾಧ್ಯವಿದ್ದಿಲ್ಲ. ಆದಕ್ಕಾಗಿ ಶ್ರೀಧರರಿಗೆ ಜೀವನೋಪಾಯದ ಬೇರೆ ಮಾರ್ಗವನ್ನು ಕಂಡುಕೊಳ್ಳಬೇಕಾಯಿತು. ಡೇಲಿ ಹೆರಾಲ್ಡ್ ಪತ್ರಿಕೆಯ ಮುದ್ರಣಾಲಯದಲ್ಲಿ ಯಂತ್ರಸ್ವಚ್ಛ ಮಾಡುವ ಕೆಲಸವನ್ನು ಅವರು ಸ್ವೀಕರಿಸಿದರು. ಅಲ್ಲಿಂದ ಮೇಲಕ್ಕೇರುತ್ತ ಎದುತ್ತ ಕಚೇರಿಯಲ್ಲಿಯೂ ಕಾಲಿಟ್ಟರು. ಪತ್ರಿಕೆಯ ಉಪಸಂಪಾದಕನ ಸ್ಥಾನವು ಇವರಿಗೆ ದೊರೆಯಬೇಕಾಗಿತ್ತು; ಆದರೆ ಶಕ್ಯವಿದ್ದಿಲ್ಲ. ಏಕೆಂದರೆ ಇಂಗ್ಲಂಡಿನ ನ್ಯಾಶನಲ್ ಜರ್ನ್ಯಾಲಿಸ್ಟ್ಸ ಅಸೋಸಿಯೇಶನ್ (ರಾಷ್ಟ್ರೀಯ ಪತ್ರಕಾರರ ಸಂಘ) ಎಂಬ ಸಂಸ್ಥೆಯ ಸದಸ್ಯರಿಗೆ ಮಾತ್ರ ಈ ಸ್ಥಾನ ದೊರೆಯುತ್ತದೆ. ಹಿಂದೀಯರಿಗೆ ಈ ಸಂಸ್ಥೆಯ ಸದಸ್ಯರಾಗಲು ಬರುವುದಿಲ್ಲ. ಆದರೂ ಶ್ರೀಧರರು ಪತ್ರಿಕೋದ್ಯಮದಲ್ಲಿ ಒಂದು ಸ್ಥಾನವನ್ನು ದೊರೆಕಿಸಿಕೊಂಡರು. ಇಂಗ್ಲಂಡಿನಲ್ಲಿ ಹಿಂದುಸ್ತಾನದ ಬಗ್ಗ ಲೇಖನ ಬರೆಯತೊಡಗಿದರು; ಭಾಷಣಗಳನ್ನು ಮಾಡತೊಡಗಿದರು. ೧೯೩೮ ರಲ್ಲಿ ಚೀನದ ಡಾ. ಸಾನ್ ಯಾತ್-ಸೇನರ ಆಯುಷ್ಯದ ಒಂದು ಘಟನೆಯನ್ನೆ ವಿಷಯವಾಗಿಟ್ಟುಕೊಂಡು, ಒಂದು ರೇಡಿಯೊ ನಾಟಕ ಬರೆದರು. ಇದು ಬಹಳ ಲೋಕಪ್ರಿಯವಾಯಿತು. ಯುದ್ಧಕಾಲದಲ್ಲಿ ಇಂಗ್ಲಂಡಿನ ಆಕಾಶವಾಣಿಯಲ್ಲಿ ಸುದ್ದಿಗಳನ್ನು ಹೇಳುವ ಕೆಲಸವು ಇವರಿಗೆ ದೊರೆಯಿತು. ಇತ್ತೀಚೆಗೆ ಇವರು ಮುಂಬಯಿ ಫ್ರೀಪ್ರೆಸ್ ಜರ್ನಲಿನ ಲಂಡನ್ ಸುದ್ದಿಗಾರರೆಂದು ಕೆಲಸಮಾಡುತ್ತಿದ್ದರು; ಆದರೆ "ಮದುವೆ"ಯಾದ ಮೇಲೆ ಈ ಕೆಲಸವನ್ನು ಬಿಟ್ಟುಕೊಟ್ಟಿದ್ದೇನೆ—ಎಂದು ಅವರು ನಸುನಗುತ್ತ ನನಗೆ ಹೇಳಿದರು. "ನಿಮ್ಮ ಮನೆಯವರು ಲಂಡನ್ನಿನಲ್ಲಿದ್ದಾರೆಯೆ?" ಎಂದು ನಾನು ಪ್ರಶ್ನಿಸಿದೆ. "I am married to I. P. A. (ಹಿಂದೀ ಸುದ್ದಿಸಂಸ್ಥೆಯೊಡನೆ ನನ್ನ ಮದುವೆಯಾಗಿದೆ)" ಎಂದು ಅವರು ನಗುತ್ತ ಹೇಳಿದರು. "ಶುಭ ಮಂಗಲಂ" ಎಂದು ನನ್ನ ಬಾಯಿಂದ ಬಂತು.

ಮದ್ರಾಸದಲ್ಲಿ ನಮ್ಮ ಏಜಂಟರು
ಶ್ರೀ. ವ್ಹಿ. ಲಕ್ಷ್ಮಣರಾವ್
೧೮೦ ಚೀನಾಬಝಾರ್ ರಸ್ತೆ
ಜಿ. ಟಿ. ಮದ್ರಾಸು

ನಿಪ್ಪಾಣಿಯಲ್ಲಿ ನಮ್ಮ ಏಜಂಟರು:
ಶ್ರೀ. ಕೆ. ಎಸ್. ಬಳಗುರಗಿ
ನ್ಯೂಜ್ ಏಜಂಟ್ಸ್
ಮತ್ತು ಪುಸ್ತಕ ವ್ಯಾಪಾರಿ

ಸುಮ

ಶ್ರೀ. "ಚಿದಾನಂದ" ಬೈಲಹೊಂಗಲ

೧

ಆವ ಕಲೆಗಾರ ನಿನ್ನನು ನಿರ್ಮಿಸಿದ ಸುಮವೆ?
ಎನಿತು ತಪಗಳ ಫಲವು ನೀನಾಗಿಹೆ?
ಆವ ಸಿದ್ಧಿಯ ಪಡೆದ ಕೈಯ್ಯ ಕೈಮೆಯು ನೀನು?
ಆರ ಪುಣ್ಯದ ಪರಮ ಫಲವಾಗಿಹೆ?

೨

ಮೃದುತನವೆ ನಿನ್ನ ರೂಪವ ತಾಳಿ ಬಂದಿಹುದೊ?
ನೀನೆ ಮೃದುತನದ ರೂಪವ ತಳೆದೆಯೊ?
ಕಠಿನತೆಯು ಮಾರ್ದವವಿ ರೂಪುಗೊಳಿಸಲು ನೀನು
ಭೂಮಿಯಲ್ಲಪತರಿಸಿ ಬಂದಿರುವೆಯೊ?

೩

ದೇವದೇವನ ಕರುಣಹೃದಯದ ಪ್ರತೀಕವೆ?
ನಿನ್ನಿಂದ ಎದೆಯೆನಿತು ಅರಳುತಿಹುದು?
ದೇವ ಭೂದೇವಿಗಿತ್ತಿಹ ಪ್ರೇಮಗಾಣಿಕೆಯೆ—
ನಿನ್ನಿಂದ ಮನವೆಷ್ಟು ನಲಿಯುತಿಹುದು?

೪

ನಿನ್ನ ಕ್ಷಣಿಕತೆಯು ಕಲ್ಪನೆಯಿರುವುದೇ ನಿನಗೆ?
ಅದಕೆಂತಲೇ ಇಷ್ಟು ಆನಂದವೆ?
"ಇಹುದೆಲ್ಲವವಿನಾಶಿ! ಕ್ಷಣಿಕತೆಯು ಅಮರತೆಯೆ!"
ಎಂದು ನಿನ್ನಯ ದಿವ್ಯ ತಿಳಿವಳಿಕೆಯೆ?

೫

ಹೇಗಿದ್ದರೂ ಕೂಡ ನಲಿಯುತಿರು ನೀ ಸುಮವೆ,
ಯಾವಾಗಲೂ ಮನದ ಕಣ್ಣ ಮುಂದೆ—
ನಿನ್ನ ಚಲುವನು ನೋಡಿ ನಿನ್ನ ನಲುಮೆಯಲೂಡಿ
ಎನ್ನ ಬಾಳೆಲ್ಲವೂ ಅರಳಲೆಂದೆ.

೬

ಆವ ಶಿಲ್ಪಿಯು ನಿನ್ನ ನಿರ್ಮಿಸಿದನೆಲೆ ಸುಮವೆ,
ಯಾರ ತಪಸಿನ ಫಲವು ನೀನಾಗಿಹೆ?
ಆವ ಸಿದ್ಧಿಯ ಪಡೆದ ಕೈಯ ಕೈಮೆಯು ನೀನು?
ಆವ ಪುಣ್ಯದ ರೂಪು ನೀನಾಗಿಹೆ?

ತೋಟದ ಹೂ

ಶ್ರೀ. ಎಸ್. ಎಸ್. ಬಸುಪಟ್ಟಪ, ಸೊಲ್ಲಾಪುರ

೧

ಬಳ್ಳಿಯಲಿ ಬಿರಿದಿರುವ ಹೂ ನಾನು ದಿಟವಿದುವು
ನೀರೆರೆದು ಬೆಳೆಸಿಹರು ತೋಟದಲಿ ತಂದೆ;
ಮೈಸಿರಿಯೊ, ಸಿರಿವೈಯೊ, ಮನಸಿರಿಯೊ ನಾನರಿಯೆ
ಮೈಗೊಂಡು ಮೂಡಿದುದ ಪೇಳುವರು ಇಂದೆ.

೨

ಬಿರಿದ ಹೂವಿರೆ ನಾನು ಬೀರಿಜೆನು ಹುರುಳನ್ನು
ದಾರಿಗರನದು ಇಂದು ಮಾಡಿಹುದು ಮರುಳು—
ಅಂತೆ ತಿರುಗುವರಿಲ್ಲಿ ಎನ್ನೆಡೆಗೆ ಬಳಿಸುಳಿದು
ಕಾಮುಕದ ವೃತ್ತಿಯೋ ತಿಳಿಯದೀ ಕರುಳು.

೩

ನೋಡವರು ಬೇಡುವರು ಹುಡುಗರೊಲು ಹಟಮಾಡಿ
ಮನೆಯೊಡೆಯನಂಜಿಕೆಗೂ ಹಚ್ಚಿಲ್ಲ ಕೈಯ—
ಚಿತ್ತದಲಿ ಚಿತ್ರಿಸಿದ ಮನದೊಡೆಯನಾ ಸ್ಪರ್ಶ
ಪಾವನವಗೊಳಿಸುವುದು ಎಂದೊ ಈ ಮೈಯ—!

೪

ಯಾವ ರೀತಿಯೊ ಬಂದು ಯಾವ ನೀತಿಯನಂದು
ಊದಿದನು ಕವಿಯಲ್ಲಿ ಗುರುವಾಗಿ ನಿಂದು—
ಅವನು ಊದಿದ ಮಂತ್ರ ಮಾಡಿತೆನ್ನನು ಯಂತ್ರ,
ಯಾವ ತಂತ್ರವೊ ಏನೊ ಆದೆ ಪರತಂತ್ರ!

೫

ಬರಲಿ ಬರುವವರೆಲ್ಲ ನೋಡಿ ನಿಲ್ಲಲಿ ದೂರ
ಮರಳಿಸಾಗಲಿ ಮುತ್ತೆ ಬಂದ ದಾರಿಯಲಿ—
ಇರಲಿ ನನ್ನಿರವೆನಗೆ ವಿಾಸಲಾಗಿಯೆ ಇರಲಿ,
ಕಾಯುವೆನು ಮನದೊಡೆಯ ಬರುವ ದಾರಿಯಲಿ—

೬

ನಾಡಸ್ವಾಮಿಯ ದಿವ್ಯ ಮಂಗಳದ ಕಜ್ಜದಲಿ
ವಿಾಸಲಿದು ಈ ಕಾಯ ಅವನ ನೆರವಿನಲಿ—
ದಿವ್ಯತೆಯು ದೀಪ್ತಿಯಲಿ ಬೆಳಗಿ ತೊಳಗಲಿ ಜೀವ
ಭವ್ಯ ಭವಿತವ್ಯತೆಯ ಭಾಗ್ಯದೆದುರಿನಲಿ!

ಸಾಮಾನ್ಯರ ಸಾಹಿತ್ಯದ ಸ್ವರೂಪದರ್ಶನ

(ಒಂದು ಭಾಷಣ)*

ಶ್ರೀ. ಬೆಟಗೇರಿ ಕೃಷ್ಣಶರ್ಮ, ಧಾರವಾಡ

★

ಮಾನ್ಯರಾದ ಹಿರಿಯರೆ, ಒಲವಿನ ಸೋದರ-ಸೋದರಿಯರೆ,

ಈ ಸ್ಥಾನಕ್ಕೆ ನಾನು ತಕ್ಕವನಲ್ಲವೆಂಬ ಸಾಂಪ್ರದಾಯಿಕ ವಿನಯದ ಮಾತುಗಳನ್ನು ನಾನೀಗ ಬೆಳೆಸಲು ಬಯಸುವುದಿಲ್ಲ. ತಮ್ಮ ವಿಶ್ವಾಸ-ಪ್ರೀತಿಗಳು ನನ್ನನ್ನು ಕರೆದು ಈ ಮನ್ನಣೆಯ ಮಣೆಯನ್ನು ಕೊಟ್ಟಿರುವಾಗ, ನನಗೆ ಸಾಮರ್ಥ್ಯ ಸಾಲದೆಂದು ನಾನೇಕೆ ಹೇಳಬೇಕು? ಭಾವುಕರ ಸಹೃದಯ-ಶ್ರದ್ಧೆಗಳು, ಕಲ್ಲು-ಕಟ್ಟಿಗೆಗಳಲ್ಲಿ ದೇವತ್ವವನ್ನು ಆಹ್ವಾನಿಸಿ ಸಿದ್ಧಿಪಡಿದಿರುವುದನ್ನು ನಮ್ಮ ಸಂಸ್ಕೃತಿಯ ಇತಿಹಾಸ ಸಾರುತ್ತದೆ. ಮಾನವರ ಈ ಮನಶ್ಶಕ್ತಿಯಲ್ಲಿ ನನಗೆ ತುಂಬುನಂಬುಗೆಯಿರುವುದರಿಂದ, ತಮ್ಮೆಲ್ಲರ ಸೌಹಾರ್ದ-ಶ್ರದ್ಧೆಗಳು ಈ ಸ್ಥಾನಕ್ಕೆ ಒಕ್ಕ ಸಾಮರ್ಥ್ಯವನ್ನು ನನ್ನಲ್ಲಿ ಆವಾಹನಗೊಳಿಸಬಲ್ಲವೆಂದು ನಾನು ನಂಬಿರುವೆನು. ಈಗ ತಮ್ಮ ಸಹೃದಯ-ಶ್ರದ್ಧೆಗಳಿಗೆ ಮೊದಲು ನನ್ನ ಕೃತಜ್ಞತೆಯ ಕಾಣಿಕೆಯನ್ನು ಸಲ್ಲಿಸುತ್ತೇನೆ.

ನಾನು ಹುಟ್ಟಿ ಬಳೆದುದು ಕನ್ನಡದ ಬೆಳುವಲ ನಾಡಿನ ಒಂದು ಹಳ್ಳಿಯಲ್ಲಿ. ಮೊದಲು ನಾನು ಕೇಳಿದುದು ಕನ್ನಡ ತಾಯಿ ಜೋಗುಳ ಹಾಡುಗಳನ್ನು. ಅಂದು ಕಂದಿರೆದಾಗ ಕಂಡುದು ಕನ್ನಡ ಹಳ್ಳಿಗರನ್ನು, ಅವರ ಸವಿಯಾದ ಜೀವನವನ್ನು. ಮೊದಲು ನಾನು ಕೇಳಿದ ಮಾತುಗಳು ಅವರ ಬದುಕಿನ ಸುಖ-ದುಃಖಗಳಿಂದ ಬೆರೆತುವುಗಳು. ಮೊದಲು ಅಲಿಸಿದ ಕಥೆ-ಕವನ-ಗೀತಗಳು ಹಳ್ಳಿಯ ಸಾಮಾನ್ಯರ ಮನದಲ್ಲಿ ಮೂಡಿ ಬಂದುವುಗಳು. ಮೊದಲು ನೋಡಿದ ದೃಶ್ಯಕಾವ್ಯಗಳೆಂದರೆ ಕನ್ನಡ ಹಳ್ಳಿಗರಾಡುವ ಅಟ್ಟದಾಟಗಳು. ಎಳಮೆತನದಲ್ಲಿ ನನಗೆ ಲೋಕದ ಪರಿಚಯವನ್ನು ಮಾಡಿಕೊಟ್ಟುದೇ ಜನಸಾಮಾನ್ಯರಲ್ಲಿ ಅವತರಿಸಿ ಬಂದ ಸಾಹಿತ್ಯದೇವತೆಯ ಸಹಸ್ರಮುಖದ ಪಾಣಿ.

ಕನ್ನಡಿಗರ ವೈಭವ-ಸಂಸ್ಕೃತಿಗಳ ದೃಷ್ಟಿಯಿಂದ ನೋಡಿದರೆ, ಬೆಳುವಲ ನಾಡಿನ ಹೆಸರು ಒನ್ನಡಿಕ್ಕರಿಗಳಂದ ಬರದಿರಿಸಿದಂತಹದು. ನಮ್ಮ ಜನಪದಕವಿ ಸರ್ವಜ್ಞಮೂರ್ತಿ, ಬೆಳುವಲ ನಾಡಿನ ಸಿರಿಯನ್ನೂ ಆ ನಾಡಿಗರ ಹದುವಾದ ಜೀವನವನ್ನೂ ಕಣ್ಣಾರೆ ಕಂಡು ಅನುಭವಿಸಿದವನು. ಆ ನೆಲೆಗಾರ:

" ಜೋಳದಾ ಜೋನಕ್ಕೆ ಜೇಳಿಯಾ ತೊಗೆಯಾಗಿ
ಕಾಳೆಮ್ಮೆ ಕರೆದ ಹಯನಾಗಿ ಬೆಣವಲದ
ಪೇಳಿ ನೋಡು....."

ಎಂದೂ

" ನವಣೆಯಾ ಜೋನಕ್ಕೆ ಹವಣಾಳ್ಕ ತೊಗೆಯಾಗಿ
ಕವಣೆಗಲ್ಲವ್ವ ಬಣ್ಣಾಗಿ ಬೆಳುವಲದ
ಹವಣ ನೋಡು....."

ಎಂದೂ, ಬೆಳುವಲ ನಾಡಿಗರ ಬದುಕಿನ ಸಾಮರಸ್ಯವನ್ನು ಪೇಳ್ದಿ. ತಲೆದೂಗಿ, ಶೈಮಾಡಿ ತೋರಿಸಿದ್ದಾನೆ. 'ಪೇಳಿ' 'ಹವಣ' ಎಂದರೆ ಸಾಮರಸ್ಯ 'ಸಮರಸವೇ ಜೀವನ' ಎಂದು ಹೇಳಿದ ಇಂದಿನ ಹಿರಿಯ ಕಬ್ಬಿಗನೊಬ್ಬನ ಸೂತ್ರವಚನವು. ಅಂದಿನ ಆ ಸರ್ವಜ್ಞಮೂರ್ತಿಯ ವಿವರಣಾತ್ಮಕ ಪದ್ಯಗಳ ಅನುಷ್ಠಾನದಿಂದಲೆ ಹೊರಟಿದೆಯೇನೊ—ಎಂದು ಭಾವಿಸುವಂತೆ ಮೇಲಿದ ಬಾನಿನ—ಹವಣಿನ ಬದುಕಿನ ಬೆಳುವಲ ನಾಡಿಗರು, ಅತ್ಯಪ್ರಜ್ಞೆಯನ್ನು ಮರೆಯದಿರುವನಕ—'ನಡೆದುದೆ ನೀತಿ, ನುಡಿದುದು ಸಾಹಿತ್ಯ' ಎನ್ನುವಂತೆ ಇದ್ದರು. ಅವರಿಗೆ ಬೆಚ್ಚನೆಯ ಮನೆಯಿರುತ್ತಿದ್ದಿತು; ಬೆಚ್ಚಕ್ಕೆ ಹೊನ್ನು ಇರುತ್ತಿದ್ದಿತು. ಕಜ್ಜೆಯ-ನರಿಯುವ ಒಡನಾಡಿಗಳು ಇರುತ್ತಿದ್ದರು. ಅದುದರಿಂದಲೆ 'ಸ್ವರ್ಗಕ್ಕೆ ಕಿಚ್ಚು ಹಚ್ಚು' ಎಂದು ಹೇಳುವ ಗಡಸನ್ನು ತೆದೆದಿದ್ದರು. ಕಾಣದಿರುವ ಸ್ವರ್ಗ-ಮೋಕ್ಷಗಳಿಗಿಂತ ಕಂಡು ಅನುಭವಿಸಬಹುದಾದ ಸಂಸಾರದ ಸೌಖ್ಯಕ್ಕೆ ಜೀ ಕೊಡುವವರೇ ನಮ್ಮ ಹಳ್ಳಿಗರಲ್ಲಿ ಹೆಚ್ಚಿನ ಜನರು. 'ಜೀವನವೇ ದೇವರು' ಎಂಬ ಶ್ರದ್ಧೆ ಅವರನ್ನು ಆಶಾವಾದಿಗಳನ್ನಾಗಿಸಿತ್ತು. ಬದುಕನ್ನು ಕಂಡರಿಯದ ನಮ್ಮ ಪ್ರೌಢಸಾಹಿತ್ಯ, ಈ ಜನಸಾಮಾನ್ಯರ ಜೀವನವನ್ನು ಮೂಡಿಸಲಿಕ್ಕೆ ಮನಸ್ಸು ಮಾಡಲಿಲ್ಲ. ಅದರಿಂದ ಕನಸಿನ ಲೋಕ, ಕಲ್ಪನೆಯ ಜನರನ್ನೇ ಚಿತ್ರಿಸಿರುವುದು ಅಮುದರಿಂದ ಯಾವುದೊಂದು ಹಳೆಯ ಕೃತಿಯನ್ನು, ನಮ್ಮ

* ಹರಪನಹಳ್ಳಿಯಲ್ಲಿ ತಾ|| ೨೬-೨೭ನೆಯ ದಿನ ನೇರಿದ ಜನಪದ ಸಾಹಿತ್ಯಗೋಷ್ಠಿಯ ಅಧ್ಯಕ್ಷರಾಗಿ ಮಾಡಿದ ಭಾಷಣವಿದು. ಸಂ. ಪ.

ಹಳ್ಳಿಗರ ಸುಖ-ದುಃಖದ ವಾಸ್ತವಜೀವನವನ್ನು ಗುರುತಿಸಲಿಕ್ಕೆ ನಮಗೆ ಸಾಧ್ಯವಿಲ್ಲ; ಆದರೆ ಕವಿಯಿಂದ ಕವಿಗೆ ಬಾಯಿಂದ ಬಾಯಿಗೆ— ಪರಂಪರೆಯಾಗಿ— ನಡೆದುಕೊಂಡು ಬಂದ ಜನಸಾಮಾನ್ಯರ ಸಾಹಿತ್ಯ—'ಶ್ರಾವಣ' ಸಾಹಿತ್ಯ—ಮಾತ್ರ, ಸ್ಪಷ್ಟವಾಗಿ ಬೇರೆ ಬೇರೆ ಕಾಲದ— ಪ್ರದೇಶದ— ಹಳ್ಳಿಗರ ಜೀವನವನ್ನು ಸರಿಯಾಗಿ ಮೂಡಿಸಿಕೊಂಡು ನಿಂತಿದೆ. ಈ ಸಾಮಾನ್ಯರ ಸಾಹಿತ್ಯದ ಸ್ವರೂಪದರ್ಶನ ಮಾಡಿಸುವುದೇ ಇಂದಿನ ನನ್ನ ಭಾಷಣದ ಮುಖ್ಯ ಉದ್ದೇಶವಾಗಿದೆ.

ಈಗಿನ ನಮ್ಮ ಹಳ್ಳಿಗರ ಹೀನ ದೀನ ಬದುಕು, ಅವರ ಮನುಷ್ಯತ್ವವನ್ನೆ ಮರೆಮಾಡಿಬಿಟ್ಟಿದೆ. ಹೆಸರಿಲ್ಲ-ಬಡತನಗಳು ಅವರ ಸಂಸ್ಕೃತಿಯ ಹಿರಿಮೆಯನ್ನು ಹಿಂಜರಿಸಿ ಬಿಟ್ಟಿವೆ.

'ಪದನರಿದು ನುಡಿಯಲುಂ ನುಡಿದುದನ್ ಅರಿದು ಅರಯಲುಂ ಅರ್ಪರ್' ಆ ನಾಡವರ್ಗಳ್'; ಚಮುರರ್, ನಿಜದಿಂ ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್'

ಎಂಬುದಾಗಿಯೂ

'ಕಿರುಮುಕ್ಕಳುಂ ಆ ಮೂಗರುಂ ಅರಿಪಲ್ ನೆರೆವರ್ ವಿವೇಕಮುಂ ಮಾತುಗಳಂ' ಎಂದೂ ರಾಜಕವಿ ನೃಪತುಂಗನಿಂದ ಹೊಗಳಿಸಿಕೊಂಡ ಕನ್ನಡ ಜನಸಾಮಾನ್ಯರಿಂದು 'ಹಳ್ಳಿಯ ಕಂಚ' 'ಹುಂಬ' 'ಬೋರೆಗೌಡ' 'ಬೀರಣ್ಣ' ಎಂಬ ತಿರಸ್ಕಾರದ ಬಿರುದುಗಳಿಗೆ ಗುರಿಯಾಗಿದ್ದಾರೆ. ತಮ್ಮದನ್ನೆಲ್ಲ ಮರೆತ— ಇನ್ನೊಬ್ಬರದನ್ನು ಅರಿಯದ— ಇಂದಿನ ನಮ್ಮ ಹಳ್ಳಿಗರ ಪರಿಸ್ಥಿತಿಗೆ ನಾಗರಿಕರೆನಿಸಿಕೊಳ್ಳುವ ನಮ್ಮ ಜನವೇ ಕಾರಣವಾಗಿದೆಯೆಂದು ನಮ್ಮ ನಾಗರಿಕರು ಅರಿತುಕೊಳ್ಳಬೇಕಾಗಿದೆ. ಈ ಅರಿವಿನಿಂದ ಹಳ್ಳಿಗರ ಜೀವನದಲ್ಲಿ— ಅಳಿದುಳಿದಿರುವ— ಅವರ ಸಂಸ್ಕೃತಿಯಲ್ಲಿ ಹೊಕ್ಕು ನೋಡಿದರೆ, ನಿಜವಾದ ಮಾನವತೆ ಎಲ್ಲಿ ಬೇಗನೆ ಅರಳಲು ಅವಕಾಶವಿದೆಯೆಂಬ ಸಂಗತಿ ಅವರಿಗೆ ಖಂಡಿತವಾಗಿ ಗೊತ್ತಾಗುವುದು.

ಆ ದೂರದ ಕಾಲದ ದೊರೆಯಾದ ನೃಪತುಂಗನು ಮಾತ್ರವೇ ನಮ್ಮ ಹಳ್ಳಿಗರ ಸುಸಂಸ್ಕೃತ ಜೀವನವನ್ನು ಕಂಡವನಲ್ಲ. ನಮ್ಮ ನಿಮ್ಮ ಹಿರಿಯರೂ ಅವರ ಒಳಬಾಳನ್ನು ಕಂಡಿದ್ದಾರೆ; ಉಂಡಿದ್ದಾರೆ. ಅದನ್ನು ಒಂದು ಕಾಲದಲ್ಲಿ ಅನುಭವಿಸಿದವರಾಗಿ, ಅಂತಹ ಕಾಲಕ್ಕಾಗಿ ಬಾಯಿಬಿಡುವ ಮುದುಕರನೇಕರು ಇದುವರೆಗೆ ಜೀವಿಸಿದ್ದಾರೆ. ನನ್ನ ಬಾಲ್ಯದಲ್ಲಿಯ ಬಹಳ ದಿನಗಳು ಹಳ್ಳಿಗರ ರಸಜೀವನದ ಮಾದರಿಗಳನ್ನು ನನಗೂ ತೋರಿಸಿ ಕೊಟ್ಟಿರುವುವು. ಆ ಇನಿದಾದ ನೆನಪನ್ನು ನಾನೆಂದೂ ಮರೆಯುವುದಿಲ್ಲ.

ನಮ್ಮ ಹಳ್ಳಿಗಳಲ್ಲಿ ಅಂದು—ಹೆಂಗುಸರಿರಲಿ ಗಂಡುಸರಿರಲಿ, ಬಾಯಿ ತೆರೆದರೆ ಅವರ ನುಡಿಗೊಂದು ಹದವಾದ ಕಟ್ಟು, ನುಣ್ಪು ಇದ್ದುದು ಕಾಣುತ್ತಿತ್ತು. ಮಾತಿಗೆ ತೊಡಗಿದರೆ ಅರ್ಥವು ಸುಲಭವಾಗುವಂತೆ ಪಡೆನುಡಿ, ಗಾದೆಯ ಮಾತುಗಳ ಸೂರೆ. ಅವರ ನಿತ್ಯದ ವ್ಯಾವಹಾರಿಕ ಮಾತುಗಳನ್ನು ಕೇಳಿದರೆಯೆ ಅದೊಂದು ಸಾಹಿತ್ಯದ ಮಾತುಗಳನ್ನು ಕೇಳಿದಂತೆ ಎನಿಸುವುದು. ವ್ಯಾವಹಾರಿಕ ಮಾತುಗಳನ್ನಷ್ಟು ಬಿಟ್ಟರೆ, ಹಳ್ಳಿಗಳಲ್ಲಿಯ ಮಿಕ್ಕ ಮಾತುಗಳ ಗುಂಪೆಲ್ಲ ಒಂದೊಂದು ಬಗೆಯ ಸಾಹಿತ್ಯ. ಇದು ಗದ್ಯವಾಗಿ ಇದೆ, ಪದ್ಯವಾಗಿ ಇದೆ; ದೃಶ್ಯಕಾವ್ಯವಾಗಿ ಇದೆ.

ಉದ್ಯೋಗದಲ್ಲಿ ಇರಲಿ, ಬಿಡುವಾಗಿ ಇರಲಿ, ಹಳ್ಳಿಯ ಜನಸಾಮಾನ್ಯರು—ವ್ಯವಹಾರ ತಲೆಯಲ್ಲಿ ಇಲ್ಲದಿರುವಾಗ—ಸಾಹಿತ್ಯ ಲೋಕದಲ್ಲಿ ಸುಳಿದಾಡುತ್ತಿರುವರು. ಆದರೆ ಅವರ ಸಾಹಿತ್ಯ ಕನಸಿನ ಲೋಕದ್ದಲ್ಲ; ಆಭಾಸದ ಬೆನ್ನನ್ನು ಹತ್ತಿ ಹೊರಟುದಲ್ಲ. ಅವರ ವಾಸ್ತವಜೀವನದೇ ಸಾಹಿತ್ಯದ ಸವಿಹೊನಲಾಗಿ ಹರಿಯುತ್ತಿರುವುದು; ಹಳ್ಳಿಗರೆಲ್ಲ ಆದರಲ್ಲಿ ಈಜುತ್ತಿರುವರು.

ಮಕ್ಕಳನ್ನು ತೂಗುವಾಗ ಮೊದಲುಮಾಡಿಕೊಂಡು ರಾಟೆಯಿಂದ. ನೂಲು ತೆಗೆವ ವರೆಗಿನ ಪ್ರತಿಯೊಂದು ಮನೆಗೆಲಸ ಮಾಡುವಾಗಲೂ—ಹಳ್ಳಿಯ ಹೆಂಗುಸರು ತಮ್ಮ ಸಾಹಿತ್ಯದ ಪಠನ, ಶ್ರವಣ, ಮನನ, ನಿಧಿಧ್ಯಾಸಗಳಲ್ಲಿ ನಿರತರಾಗಿರುವರು. ಅದರಂತೆಯೆ ಉಳುಮೆಯನ್ನು ಮೊದಲುಮಾಡಿಕೊಂಡು ಕಾಳನ್ನು ಒಕ್ಕಿ ಮನೆಗೆ ತರುವವರೆಗಿನ ಪ್ರತಿಯೊಂದು ಹೊಲಗಪ್ಪದ ಕಾಲದಲ್ಲಿ, ಗಂಡುಸರು ತಮ್ಮ ಸಾಹಿತ್ಯದ ಶ್ರವಣ, ಪಠನ, ಪ್ರಚಾರಕಾರ್ಯದಲ್ಲಿ ಮುಳುಗಿರುವರು.

ಉದ್ಯಮಸಮಯದಂತೆಯೆ ಉತ್ಸವ ಸಮಯಗಳಲ್ಲಿ ಬಳಸುವ ಸಾಮಾನ್ಯರ ಸಾಹಿತ್ಯವೂ ವಿವಿಧ ಪೂರಣಿಯದಾಗಿರುವುದು. ಹಬ್ಬ, ಹುಣ್ಣಿವೆ, ಜಾತ್ರೆಗಳಲ್ಲಿ ಕೇಳಬರುವ ಸಾಹಿತ್ಯ ಒಂದು ಬಗೆಯದಾದರೆ ಹುಟ್ಟುಹಬ್ಬ, ಮದುವೆ, ಮೈನೆರೆವುದು, ಮನೆ ತುಂಬಿಸುವುದು, ಉಡಿ ತುಂಬುವುದು ಮೊದಲಾದ ಶುಭ-ಶೋಭನ ಸಂದರ್ಭಗಳಲ್ಲಿ ಕೇಳಬರುವುದು ಇನ್ನೊಂದು ಬಗೆಯದು. ದೇವಭಕ್ತಿ, ದೇವ-ದೇವಿಯರ ಮಾಹಾತ್ಮ್ಯ, ಅವರ ಮಾನವಸದೃಶ ಲೀಲೆಗಳು, ತಮ್ಮ ಹಳ್ಳಿಯ ದೇವ-ದೇವಿಯರ ಸವಾಡ ವಿಶೇಷ, ಅವರ ಸೌಂದರ್ಯ-ಶೌರ್ಯಗಳ ವರ್ಣನೆ—ಇವೆಲ್ಲ ಹಬ್ಬ, ಹುಣ್ಣಿವೆ, ಜಾತ್ರೆಗಳ ಕಾಲದ ಸಾಹಿತ್ಯದಲ್ಲಿ ಕಾಣುವುವು; ಗಂಡು-ಹೆಣ್ಣುಗಳ ಸೌಂದರ್ಯ-ಐಶ್ವರ್ಯಗಳು, ದಾಂಪತ್ಯಜೀವನದ ಶುಭಾಕಾಂಕ್ಷೆ, ಸಂತಾನದ ಬಯಕೆ, ಅನುಕೂಲ ದಾಂಪತ್ಯದ ಸಮರಸ ಸೌಂದರ್ಯ, ಪ್ರತಿಕೂಲ ದಾಂಪತ್ಯದ ವಿಷಮತೆಯ ವಿರಸ ಚಿತ್ರ, ಸಂಯೋಗಶೃಂಗಾರದ ಸಂಭ್ರಮ, ವಿರಹಜೀವನದ ವಿಭ್ರಮ ಇವೆಲ್ಲ ಶುಭಕಾರ್ಯದ ಸಾಹಿತ್ಯದಲ್ಲಿ ತುಂಬಿರುವುವು.

ಉದ್ಯೋಗ—ಉತ್ಸವಗಳ ಸಮಯದ ನೈಮಿತ್ತಿಕ ಸಾಹಿತ್ಯ. ವಲ್ಲದೆ, ತಿರಹು ದೊರೆತಾಗಲೆಲ್ಲ ರಸ ಸವಿಯಬಹುದಾದ ನಿತ್ಯ ಸಾಹಿತ್ಯವೂ ಹಳ್ಳಿಯ ಸ್ತ್ರೀ-ಪುರುಷರ ದಿನಬಳಕೆಯಲ್ಲಿ—ನೂರಾರು

ಬಗೆಯಲ್ಲಿ— ತಲೆಯೆತ್ತಿ ನಿಂತಿರುವುದು. ಮಾನವರ ಮೂಲ-ಭೂತ ಆದರ್ಶ-ಆಕಾಂಕ್ಷೆಗಳೂ, ಜೀವನದ ಸಹಸ್ರಮುಖದ ಅನುಭವಗಳೂ, ಕಷ್ಟ-ಕಾರ್ಪಣ್ಯಗಳೂ, ದುಃಖ ದುಗುಡಗಳೂ, ಪ್ರೇಮ-ಕಾಮಗಳೂ ಕೆಳೆ-ಹಗೆಗಳೂ, ಜಿದ್ದು-ಸೆಣಸಾಟಗಳೂ, ಬಲ್ಲಿ-ಜಾಣ್ಮೆಗಳೂ ಈ ಸಾಹಿತ್ಯದಲ್ಲಿ ಹಾಸು-ಹೊಕ್ಕಾಗಿ ಇರುವುವು. ಈ ಸಾಹಿತ್ಯದಿಂದ ಹಳ್ಳಿಗರು ಬಯಸುವ ಪ್ರಯೋಜನವೆಂದರೆ ಮನೋರಂಜನೆ, ಲೋಕಪರಿಚಯ, ನೀತಿಬೋಧೆ, ಹೃದಯ-ಮನಸ್ಸುಗಳ ವಿಕಾಸ.

ವರ್ತಮಾನಕಾಲದಲ್ಲಿ ಶಿಕ್ಷಣದ ಮುಖ್ಯ ಲಕ್ಷಣವೆಂಜರೆ ಸಾಕ್ಷರತೆ. ಈ ಸಾಕ್ಷರತೆಯ ಮುಖ್ಯ ಉದ್ದೇಶವೆಂದರೆ ಜೀವನ-ಕಲಹ ನಿರ್ವಹಣ; ಎಂದರೆ ಧನಸಂಪಾದನೆ. ಆದರೆ ಸಮ್ಮ ಜನಸಾಮಾನ್ಯರ ಕಲ್ಪನೆಯಂತೆ ಸಾಕ್ಷರತೆ ಶಿಕ್ಷಣದ ಮುಖ್ಯ ಲಕ್ಷಣವಲ್ಲ. ಅವರು ಅನ್ನ-ಧನಗಳ ಸಂಪಾದನೆಗಾಗಿ ಅಕ್ಷರ-ಗಳನ್ನು ಕಲಿಯುವ ಕಾರಣವೇನೂ ಇರಲಿಲ್ಲ. 'ಸುಜಲಾ, ಸುಫಲಾ' ಆದ ಕನ್ನಡತಾಯಿ ಅವರ ದುಡಿತಕ್ಕೆ ತಕ್ಕಹಾಗೆ ಪಡಿತವನ್ನು ಒದಗಿಸುತ್ತಿದ್ದಳು. ಸುಖಜೀವನವನ್ನೆ ಆಪೇಕ್ಷಿಸುತ್ತಿರುವ ಆ ಜನರಿಗೆ ಸಮಾಜದಲ್ಲೆಲ್ಲ ಶಾಂತಿ-ಸಮತೆಗಳು ನೆಲೆಗೊಳ್ಳಬೇಕೆಂದು ಎನಿಸುತ್ತಿದ್ದಿತು. ಆದಕ್ಕೆ ಕಕ್ಕುದಾಗಿ ಪ್ರತಿವ್ಯಕ್ತಿಯ ಮನಸ್ಸು, ಬುದ್ಧಿ, ಹೃದಯಗಳು ಒಳ್ಳೆಯ ಸಂಸ್ಕಾರ ಪಡೆದರೆ ಸಾಕೆಂಬ ಭಾವನೆ ಆವಗಲ್ಲಿ ನೆಲಸಿತ್ತು. ಇಂತಹ ಸಂಸ್ಕಾರದ ಪ್ರಚಾರಕ್ಕಾಗಿ ಸಮಾಜದ ರಚನೆಯಲ್ಲಿಯೆ ಕೆಲವೊಂದು ವಿಶಿಷ್ಟ ಪಂಗಡಗಳನ್ನು ಏರ್ಪಡಿಸಿ, ಆ ಪಂಗಡದ ಜನರ ಕಡೆಗೆ ಆದರ ಹೊಣೆಯನ್ನು ಒಪ್ಪಿಸಲಾಗಿತ್ತು. ಜಂಗಮರು, ಹರಿದಾಸರು, ಒಡೆಯರು, ಪುರಾಣಿಕರು, ಗೊಂಡಲಿಗರು, ಕಿಂದರಿ ಜೋಗಿಗಳು, ಭಾಗವತರು, ಕತೆಗಾರರು, ಹಾಸ್ಯಗಾರರು ಇವರೆಲ್ಲ ಈ ಪಂಗಡಕ್ಕೆ ಸೇರಿದವರು. ಇವರು ತಮ್ಮ ಕಾರ್ಯಗಳಿಂದ ಚರಸಿದ್ಯಾಲಯಗಳೆನಿಸಿಕೊಂಡು, ವ್ಯಕ್ತಿಗಳನ್ನು ಮಾನವತೆಯ ಮಟ್ಟಕ್ಕೆ ಏರಿಸಿದರು; ಸಮಾಜವನ್ನು ತಿದ್ದಿ ಸಮತೆ-ಶಾಂತಿಗಳ ಆಗರವನ್ನಾಗಿಸಿದರು ಈ ಪ್ರಚಾರಕ ಪಂಗಡದವರೆಲ್ಲರೂ ತಂತಮ್ಮ ಕಾರ್ಯಕ್ಕಾಗಿ ನಿರ್ಮಾಣಮಾಡಿ ನಾಡಿನಲ್ಲಿ ಹಬ್ಬಿಸಿದ 'ಶ್ರಾವಣ' ಸಾಹಿತ್ಯ ರಾಶಿರಾಶಿಯಾಗಿ ಇದೆ. ನಮ್ಮ ಪ್ರಾಚೀನ ಇತಿಹಾಸ-ಪುರಾಣಗಳನ್ನು ಹೊಲೆಯ ಹದಿನೆಂಟು ಜಾತಿಯವರ ಕಿವಿಗೆ ತಲ್ಪಿಸಿದ ಶ್ರೇಯಸ್ಸು ಇವರದು. ನಮ್ಮ ಆದರ್ಶ ಪುರಾಣ ವ್ಯಕ್ತಿಗಳ ಪರಿಚಯವನ್ನವರಿಗೆ ಮಾಡಿಕೊಟ್ಟ ಕೀರ್ತಿ ಇವರಿಗೇ ಸಲ್ಲಬೇಕು. ರಾಮಾಯಣ, ಮಹಾಭಾರತ, ಭಾಗವತ, ಶಿವಪುರಾಣಗಳು, ನೀತಿಯ ಕತೆಗಳು ಇವನ್ನೆಲ್ಲ ಮನೆವಾರ್ತೆಯ ಮಾತನ್ನಾಗಿಸಿದವರು ಈ ಪ್ರಚಾರಕರು. ಮಾನವತೆಯ ವಿಕಾಸವನ್ನೇ ಇವರು ಗುರಿಯಿರಿಸಿಕೊಂಡುದರಿಂದ, ಮತ-ಮತಗಳ ಕಿಡಿಗಳನ್ನು ಎಬ್ಬಿಸುವ ಕೆಲಸಕ್ಕೆ ಇವರು ಎಂದೂ ಪ್ರವೃತ್ತರಾಗಲಿಲ್ಲ.

ಸಂಸ್ಕೃತಿಪ್ರಚಾರಕರಂತೆಯೆ ಸಮಾಜದ ಮನೋರಂಜನೆಯ ಹೊಣೆಯನ್ನು ಹೊತ್ತ ಕೆಲವು ಕುಲಗಳೂ ನಮ್ಮ ಹಳ್ಳಿಗಳಲ್ಲಿ ಇವೆ. ಒಟ್ಟದಾಟ-ಬಯಲಾಟಗಳನ್ನಾಡಿ ಮನವನ್ನು ರಂಜಿಸುವ ಹೊಲಿಬಾಸ-ಹೆಣ್ಣುದಾಸರು, ಚರ್ಮದ ಗೊಂಬೆಗಳನ್ನು ದೀಪದ ಮುಂದೆ ಹಿಡಿದು ನೆರಳನ್ನು ಪರದೆಯ ಮೇಲೆ ಕುಣಿಸುವ— ಎಂದೋ ಚಲಚ್ಚಿತ್ರದ ಕನಸನ್ನು ಕಂಡ— ಕಿಳ್ಳೇಕ್ಯಾತರು, ಸೂತ್ರಗೊಂಬೆಗಳಿಂದ ಜೀವನನಾಟಕಗಳನ್ನಾಡಿಸುವ ಗೊಂಬೆಯಾಟದವರು, ಬಹುರೂಪಿಗಳು, ವೇಷಧಾರಿಗಳು, ನಟ್ಟುವರು, ಲಾವಣಿಕಾರರು, ಕತೆಗಾರರು ಇವರೆಲ್ಲ ಸಮಾಜದ ಮನೋರಂಜನೆಯ ಹೊಣೆಹೊತ್ತವರು. ಇವರ ಕಾರ್ಯಕ್ಕಾಗಿ ಸೃಷ್ಟಿಯಾದ ಸಾಹಿತ್ಯವೂ ನಮ್ಮಲ್ಲಿ ಬೆಟ್ಟದಷ್ಟಿದೆ.

ಇಂದು ಹಳ್ಳಿಗರು ತಮ್ಮನ್ನು ತಾನೇ ಕೆಲಸಕ್ಕೆ ಬಾರದವರೆಂದು ಭಾವಿಸಿಕೊಂಡಿದ್ದಾರೆ. ನಾಗರಿಕಬ್ರುವರು ಅವರ ಈ ಭಾವನೆಯ ಬೆಳೆವಣಿಗೆಗೆ ನೀರೆರೆಯುತ್ತಿದ್ದಾರೆ. ವ್ಯಕ್ತಿಗೆ ಬೆಲೆಯಿಲ್ಲದಲ್ಲಿ ವ್ಯಕ್ತಿಯ ಕೃತಿ ಬೆಲೆಬಾಳುವುದು ಸಾಧ್ಯವಿದೆಯೆ? ಆದುದರಿಂದಲೆ ನಮ್ಮ ಹಳ್ಳಿಯ ಸಂಸ್ಕೃತಿ ಪ್ರಚಾರಕವರ್ಗವೂ ಮನೋರಂಜನಕಾರರ ಪುಂಡಲಿಯೂ ತಂತಮ್ಮ ಉದ್ಯಮಗಳಿಂದ ದೂರವಾಗಬೇಕಾಗಿಬಂದಿದೆ. ಆದುದರಿಂದ ಆವರ

ಪ್ರಶಸ್ತಿಪ್ತ ಸಾಹಿತ್ಯವಿಂದು ಚಿದರಿಹೋಗಿರುತ್ತದೆ; ಶರಣ ಸಂಶೋಧಕರ ದಾರಿಯನ್ನು ಕಾಯುತ್ತ ಎಲ್ಲೆಲ್ಲಿಯೋ ಅದು ಅಡಗಿಕೊಂಡು ಕುಳಿತಿದೆ.

ನಾಡಿನಲ್ಲಿ ನಾಗರಿಕತೆ ಹೆಚ್ಚುವುದೆಂದರೆ ಜನರಲ್ಲಿ ವಿಜ್ಞಾನ ಬುದ್ಧಿ ಹೆಚ್ಚು ಹೆಚ್ಚು ಬೆಳೆಯುತ್ತ ಹೋಗುವುದು. ವೈಜ್ಞಾನಿಕ ಬುದ್ಧಿ ಬೆಳೆದಂತೆಲ್ಲ ಜನತೆಯಲ್ಲಿಯ ಸಾಹಿತ್ಯಿಕಶಕ್ತಿ ಕಡಿಮೆಯಾಗುತ್ತ ಹೋಗುವುದು. ವಿಜ್ಞಾನ ಬುದ್ಧಿಯು ನಾಗರಿಕ, ಪ್ರಪಂಚವನ್ನು ವಿಶ್ಲೇಷಣಾತ್ಮಕ ರೀತಿಯಿಂದ ಕಾಣುವನು; ಏಕೆಂದರೆ ಸೃಷ್ಟಿಯಲ್ಲಿಯ ಸತ್ಯವನ್ನು ಭೇದಿಸಿ ನೋಡಬೇಕೆಂಬುದು ಅವನ ಹವಣಿಕೆ. ಅದೇ ಸಹೃದಯನಾದ ಸಾಹಿತಿ, ಪ್ರಪಂಚದ ಸಮಗ್ರತೆಯನ್ನು ದೃಷ್ಟಿಸಿ, ಅದರಲ್ಲಿರುವ ಸೌಂದರ್ಯ ಸ್ಥಲಗಳನ್ನು ಸಂಶೋಧಿಸಿ, ಲೋಕದೆದುರು ಹಿಡಿಯುವನು. ಸತ್ಯಸಂಶೋಧನೆಯು ಹುಚ್ಚು ಹತ್ತಿದವನು ಸೌಂದರ್ಯವನ್ನು ಅನುಭವಿಸಿ ಆನಂದಿಸಲಾರ ನಮ್ಮ ಹಳ್ಳಿಗರು ಸೌಂದರ್ಯದ ಬಯಕೆಗಾರರು. ಹೆಗಲಿರುಳೂ ಸೃಷ್ಟಿಯೊಂದಿಗೆ ಆಟವಾಡುವವರು. ಅದನ್ನು ಸಮಗ್ರವಾಗಿ ನೋಡಿ, ಸೌಂದರ್ಯವನ್ನು ಅನುಭವಿಸಿ ಉಪಮೆ-ರೂಪಕ-ಉತ್ಪ್ರೇಕ್ಷೆ-ದೀಪಕಗಳನ್ನು ತಂದೊಗಿಸಿ, ಆ ಸೌಂದರ್ಯಾನುಭೂತಿಯನ್ನು ಅರ್ಥಪೂರ್ಣವಾದ ವಚನಗಳಲ್ಲಿ ನಿರ್ವಚನಮಾಡಿರುವರು. ನಿಜವಾದ ಸಾಹಿತ್ಯ ನಿರ್ಮಾಣಕ್ಕೆ ವಿಜ್ಞಾನಿಯ ವಿಮರ್ಶಾತ್ಮಕಬುದ್ಧಿ ಅನುಕೂಲ ಕ್ಷೇತ್ರವಲ್ಲ; ನಮ್ಮ ಜನಸಾಮಾನ್ಯರ ಭಾವುಕಹೃದಯವೇ ಅದರ ಹುಲುಸಿಗೆ ಅನುಕೂಲವಾದ ಹೊಲ. ಈ ಸತ್ಯವು, ಹಳ್ಳಿಗರ ಸಾಹಿತ್ಯವನ್ನು ಕೂಲಂಕಷವಾಗಿ ಅಭ್ಯಾಸಿಸಿದ ಯಾವ ವಿಮರ್ಶಕನಿಗೂ ಅನುಭವಕ್ಕೆ ಬಾರದಿರದು.

ಹಳ್ಳಿಯ ಸಾಹಿತ್ಯಿಕರಲ್ಲಿ ಹೆಸರಿಗೆ ಹಂಬಲಿಸುವವರು ತೀರ ಕಡಿಮೆ ಜನರು. ಹದಗಾಲವಲ್ಲಿ ಹೂಗಳು ಅರಳುತಿರುವಂತೆ ಅಲ್ಲಿ ರಸಪ್ಪದಯಗಳು ಅರಳಿ, ಸಾಹಿತ್ಯದ ಸುಗಂಧ ಹೊರಕ್ಕೆ ಬಂದಿರುವುದು. ಕೀರ್ತಿಯನ್ನು ಕಾಮಿಸುವ ಬುದ್ಧಿಗೆ ಹೆಸರು-ಪೆಸೆ ಬೇಕು ವ್ಯಕ್ತಿಪೂಜೆಯ ಆಕಾಂಕ್ಷೆಗೆ ಕೀರ್ತಿಬೇಕು. ಆದರೆ ಸಮಷ್ಟಿದೃಷ್ಟಿಯಿದ್ದ ಹಳ್ಳಿಗರಿಗೆ ವೈಯಕ್ತಿಕ ಘನತೆ-ಅಹಂಕಾರಗಳ ಆಶೆಯೆ ಇರುವುದಿಲ್ಲನೇನೊ! ಆದುದರಿಂದಲೆ ಈ ಸಾಮಾನ್ಯರ ಸಾಹಿತ್ಯದಲ್ಲಿ ಬಹುಭಾಗವನ್ನು, ಯಾರು ಯಾವಾಗ ಎಲ್ಲಿ ರಚಿಸಿದ್ದಾರೆಂಬುದು ಗೊತ್ತಾಗುವುದಿಲ್ಲ ಇವುಗಳ ಒಡೆತನದ ಅಧಿಕಾರವನ್ನು ಹೇಳುವವರು ಯಾರೂ ಇರುವುದಿಲ್ಲ. ಇದು ಕೇವಲ ಜನಪದ (ದೇಶ)ದ ಒಡೆತನಕ್ಕೆ ಸೇರಿದುದು. ಆದುದರಿಂದಲೆ ಇವನ್ನ 'ಜನಪದ ಸಾಹಿತ್ಯ'ಎಂದು ಕರೆಯುತ್ತಿರುವದು.

'ಜನಪದ ಸಾಹಿತ್ಯ'ದ ರೀತಿಯನ್ನು ನಮ್ಮ ಪೂರ್ವದ ಲಾಕ್ಷಣಿಕರು 'ದೇಸಿ' ಎಂದು ಕರೆದಿದ್ದಾರೆ. ದೇಸಿಯಲ್ಲಿ ವಿಶಿಷ್ಟವಾದ ಸೊಬಗು ಇಹುದೆಂಬುದನ್ನು ನಮ್ಮ ಹಿರಿಯ ಕವಿಗಳಲ್ಲಿ ಕೆಲವರು ಎಂದೋ ಒಪ್ಪಿಕೊಂಡಿರುತ್ತಾರೆ. ಆದಿಕವಿ ಪಂಪನ 'ವಿಕ್ರಮಾರ್ಜುನ ವಿಜಯ', ಜನ್ನಕವಿಯ 'ಯಶೋಧರ ಚರಿತೆ', ನಯಸೇನನ 'ಧರ್ಮಾಮೃತ' ಇವು ಹೆಚ್ಚು ಜನಪ್ರಿಯವಾಗುವುದಕ್ಕೆ ಆ ಆ ಕವಿಗಳು ತಮ್ಮ ಪೌಢಸಂಸ್ಕೃತಿಯ 'ಮಾರ್ಗ' ದೊಂದಿಗೆ 'ದೇಸಿ'ಯನ್ನು ಸಮನ್ವಯಿಸಿಕೊಂಡುದು ಕಾರಣವಾಗಿದೆ. ರಾಜ-ಮಹಾರಾಜರ ರತ್ನಸಿಂಹಾಸನದ ಮೇಲೆ ಕುಳಿತು, ಕವಿಚಕ್ರವರ್ತಿ-ಕವಿಸಾರ್ವಭೌಮರೆಂದ ಸೇವೆ ಕ್ಲೆಕೊಳ್ಳುತ್ತಲಿದ್ದ ಕನ್ನಡ ಸಾಹಿತ್ಯಶಾರದೆಗೆ ಜನಸಾಮಾನ್ಯರತ್ತ ಕಣ್ಣು ತಿರುಗಿಸಬೇಕೆಂದು ಆಶೆಯಾದಾಗ, ಸಾಂಪ್ರದಾಯಿಕರು ಹಾಕಿಕೊಟ್ಟ ರಾಜಮಾರ್ಗವನ್ನು ಬಿಟ್ಟು, ಹಳ್ಳಿಗರ 'ದೇಸಿ'ಯ ದಾರಿಯನ್ನು ಆಕೆ ಹಿಡಿಯಬೇಕಾಯಿತು. ವೀರಶೈವ ವಚನಕಾರರು, ಹರಿದಾಸರು, ವರ್ಣಕ (ಹಾಡುಗಬ್ಬ)ದ ಕವಿಗಳು ಇವರೆಲ್ಲ ಇದೇ ದಾರಿಯಿಂದ ನಡೆದು ನಮ್ಮ ಜನತೆಯ ಸಂಸ್ಕೃತಿಯ ಮಟ್ಟವನ್ನು ಮೇಲಕ್ಕೆ ಏರಿಸಿದರು.

ಹಳ್ಳಿಗಳಲ್ಲಿ ರೂಢವಾಗಿದ್ದ ಗಾದೆಯ ಮಾತು, ಒಡಪು, ನೀತಿಯ ಮಾತು ಇವೆಲ್ಲ ಒಂದು ಬಗೆಯ ವೃತ್ತಗಂಧಿಯಲ್ಲಿ ಕಟ್ಟಿದ ತುಂಡುಸಾಹಿತ್ಯ. ಅನುಭವದ ಮಾತುಗಳನ್ನು ಮನಂಬುಗುವಂತೆ ಹೇಳಲಿಕ್ಕೆ ಈ ಮಾತಿನ ಕಟ್ಟು-ಕುಣಿತಗಳು ತುಂಬ ಸಹಾಯಕಾರಿಯೆನ್ನಿಸುವವು. ಆದುದರಿಂದಲೆ ಅನುಭಾವಿಗಳಾದ ಶಿವಶರಣರು ತಮ್ಮ ಜೀವನದ ಆದರ್ಶವಿಚಾರಗಳನ್ನೂ ಅನುಭವ ಸಾಕ್ಷಾತ್ಕಾರಗಳನ್ನೂ ಬದುಕಿನ ಆಚಾರ-ಶೀಲಗಳನ್ನೂ ಸಾರಿ ಹೇಳಲಿಕ್ಕೆ ಈ ಮಾತಿನ ಕಟ್ಟು-ಕುಣಿತಗಳನ್ನು ಉಪಯೋಗಿಸಿಕೊಂಡು ಕೃತಾರ್ಥರಾಗಿದ್ದಾರೆ. ಹರಿಹರ ಕವಿಯ ರಗಳೆಯ ಪದ್ಧತಿ ಈ ಜಾನಪದ ದಾರಿಯಿಂದ ಸ್ಫೂರ್ತವಾದುದು. ಪಟ್ಟದಿ-ಕಾರರ ಹಾಡುಗಬ್ಬಗಳು, ಈ ಜನಪದ ಸಾಹಿತ್ಯಕ್ಕೆ ಒಪ್ಪಕೊಟ್ಟು ಸುಧಾರಿಸಿದ ರೂಪಗಳು. ತ್ರಿಪದಿ-ಸಾಂಗತ್ಯ ಗ್ರಂಥಗಳಂತೂ ಜನಪದ ಸಾಹಿತ್ಯದ ಚಾಕ್ಷುಷ (ಕಣ್ಣಿಗೆ ಕಾಣುವ) ರೂಪಗಳು ಎಂದು ಹೇಳಬಹುದು ಹರಿದಾಸರ 'ಸುಳಾದಿ'ಗಳು ಈ ಜಾನಪದ ಕಟ್ಟುಕುಣಿತಗಳನ್ನು ಸಂಗೀತದೊಂದಿಗೆ ಸೇರಿಸಿ ಮಾಡಿದ ಪ್ರಯೋಗ ವಿಶೇಷ.

ಕವಿ ಕನಕದಾಸನು ತನ್ನ 'ಮೋಹನ ತರಂಗಿಣಿ' ಕಾವ್ಯದ ಪ್ರಾರಂಭದಲ್ಲಿ :

> 'ನಾಡೊಳಗುಳ್ಳ ಜಾಣರು ಬಾಡೆಯರೊಡ-
> ನಾಡುವ ಕವಿಮಾತುಗಳ
> ಪಾಡುಗಬ್ಬವ ಪರುಠವಿಸಿದ ಬಗೆಯ ನೀ
> ನೋಡು ವಾಣಿನಿ ಮುಂದೆ ಮುಂದೆ!'

ಎಂದು ಹೇಳಿದುದನ್ನು ನೋಡಿದರೆ. ತನ್ನ ಕಾವ್ಯರೀತಿ ಸಂಪೂರ್ಣವಾಗಿ ದೇಸಿಯೆಂಬುದನ್ನು ಸಾರಿ ಹೇಳಿದಂತಿದೆ. ಆ ಕವಿಯ ಹೆಂಡತಿಯ:

'ಜಾಣಿಯುಧವನೆಂಬ ವ್ಯವಹಾರಿ ಪಟ್ಟೆಯ
ಗೋಣಿಯೊಳ್ ತುಂಬಿದ ರತ್ನ
ಖಣಿಯೊಳ್ ಚೆಲ್ಲಿದಂತಿದೆ ನಿನ್ನ ಕೃತಿಯೆಂಬ
ಮಾಣಿಕ ಮನ್ನನೋನಾಥ!'

ಎಂಬ ವಿಮರ್ಶೆಯ ಮಾತು, ದೇಸಿಯ ಸ್ವೀಕರಣದ ಸಾರ್ಥಕತೆಯ ಪರಿಣಾಮವನ್ನು ಪ್ರಕಟಿಸುವಂತಹದಾಗಿದೆ.

ಲಕ್ಷಣಶಾಸ್ತ್ರದ 'ಮಾರ್ಗ'ವನ್ನು ಬಿಟ್ಟು, ದೇಸಿಯ ದಾರಿ ತುಳಿದುದನ್ನು ಹೇಳುವ ಕಾಡುಗಬ್ಬಿಗರು ನಮ್ಮಲ್ಲಿ ಬಹುಜನರಾಗಿದ್ದಾರೆ. ಅವರೆಲ್ಲರಿಗೆ ಪ್ರತಿನಿಧಿಕವಾಗಿ 'ಆದಿಪುರಾಣ'ಕಾವ್ಯದ ಕರ್ತೃ ಆಡಿದ ಮಾತುಗಳನ್ನು ಇಲ್ಲಿ ಉದಾಹರಿಸುವೆನು:

'ಶಬ್ದಮಣಿ ಮೊದಲಾದ ಶಾಸ್ತ್ರದ
ಹೊದಿಕೆಯು ಸಾಹಿತ್ಯಕಲ್ಲಜೆ
ಶ್ರದ್ಧೆಪಟ್ಟದಿ ಪಾಡುಗಬ್ಬಕೆ ತೊಡಕು....' ಎಂದು.

ರತ್ನಾಕರ ವರ್ಣಿಯಂತೂ 'ಮಾರ್ಗ'ದ ಕಾವ್ಯಗಳನ್ನು ಬಿಬಿರಿಗೆ ಹೋಲಿಸಿ, ದೇಸಿಯ ಹಾಡುಗಬ್ಬಗಳನ್ನು ಕಬ್ಬಿಗೆ ಹೋಲಿಸಿದ್ದಾನೆ ನಮ್ಮ ಸಾಹಿತ್ಯದಲ್ಲಿಯ ಈ ಕ್ರಾಂತಿಯ ಚರಿತ್ರೆಯನ್ನು ನೋಡಿದರೆ ನಿಜವಾದ ಜೀವಂತ ಸಾಹಿತ್ಯವು ಈ ಜನಸಾಮಾನ್ಯರಲ್ಲಿ ರೂಢನಾಗಿದ್ದುದೆ ಎಂಬುದು:—ಹಿಂಗ್ಗೆನೆಲ್ಲಿಯಂತೆ ಸ್ಪಷ್ಟವಾಗಿ ಕಾಣುತ್ತದೆ ಎಂಥಲೆ ಲೋಕಚುಂಬಕತೆ. ದಂತೆ ಇದು ಕನ್ನಡ ರಸಜ್ಞರನ್ನು ತನ್ನ ಕಡೆಗೆ ಸೆಳೆದುಕೊಂಡಿತು; ಮುಂದಾಲನಂತೆ ತನ್ನ ದಾರಿಯಲ್ಲಿ ನಡೆಯಿಸತೊಡಗಿತು. ಬೆರಳೆಣಿಕೆಯ ಸಂಪ್ರದಾಯವಾದಿ ಪಂಡಿತರು 'ಇದು ಸಾಹಿತ್ಯವಲ್ಲ' ಎಂದು ಕೂಗು ಹಾಕುತ್ತಲಿದ್ದರೂ, ಯಾರೂ ಅವರ ಮಾತನ್ನು ಲೆಕ್ಕಿಸಲಿಲ್ಲ ಸಾಲಬ್ಬ, ಆನಂದ, ತತ್ತ್ವಜೊಂಪೆ ಎಲ್ಲವೂ ಸಹಜವಾಗಿ ಸಿಕ್ಕುತ್ತಿರುವ ಈ ಸಾಮಾನ್ಯರ ಸಾಹಿತ್ಯರೀತಿಯನ್ನೇ ಬಹುಜನರು ಅನುಸರಿಸಿದರು ಈ ಅನುಸರಣೆಯ ಮಧುರಫಲಗಳೆಂದರೆ ರಾಘವಾಂಕ, ಕುಮಾರವ್ಯಾಸ, ಚಾಮರಸ, ರತ್ನಾಕರವರ್ಣಿ, ಕನಕದಾಸ, ಗೋವಿಂದವೈದ್ಯ, ಸರ್ವಜ್ಞಮೂರ್ತಿ ಇವರ ಕೃತಿಗಳು. ಪಂಡಿತ-ಪಾಮರರಲ್ಲಿಯ ದೂರವ ಅಂತರವನ್ನು ಕಡಿಮೆ ಮಾಡಿದ ಆಕರ್ಷಣೆಗಳಿವು. ಜನಸಾಮಾನ್ಯರಲ್ಲಿಯೂ ಮಾನವತೆ ನೊಳಗಬಲ್ಲವೆಂಬುವನ್ನು ನಾಗರಿಕತೆಯುಲಕ್ಕೆ ಖಚಿತವಾಗಿ ತಿಳುಹಿಸಿದ ಕನ್ನಡವಾಣಿಯ ಕೂಗುಗಳಿವು. ಗುಣವಂತರು ಗುಣವಂತರ ವಂಶದಲ್ಲಿಯೆ ಅಲ್ಲವೇ ಹುಟ್ಟುವುದು? ಜನಸಾಮಾನ್ಯರ ಸಾಹಿತ್ಯರಾಶಿಯಿಂದ—'ಗೊರವರ ಡುಂಡುಚಿಯೇ ಬೀದಿವರೆಯೆ ಬೀರನ ಕತೆಯೆ?' ಎಂದು ಮಧುರಕವಿಯಿಂದ ಅಣಕಿಸಿಕೊಂಡ ಹಳ್ಳಿಗರ ಸಾಹಿತ್ಯದ ಕುಪ್ಪೆಯಿಂದ—ಇಂತಹ ರಸಘಟ್ಟಗಳು ಹೊರಟಿರುವುವೆಂದಮೇಲೆ, ಇವುಗಳ ವಂಶ ಎಷ್ಟೊಂದು ರಸಪೂರ್ಣವಾಗಿರಬೇಕು? ಎಷ್ಟೊಂದು ಭಾವಸಂಪನ್ನವಾಗಿರಬೇಕು?

ಗದ್ಯವಾಗಿ ಪದ್ಯವಾಗಿ ದೃಶ್ಯವಾಗಿ ಮೂರು ತೆರದಲ್ಲಿ ನಮ್ಮ ಸಾಮಾನ್ಯರ ಸಾಹಿತ್ಯ ಬೆಳೆದಿದೆ. ಅವುಗಳಲ್ಲಿ ಒಂದೊಂದರ ಸ್ವರೂಪವನ್ನು ಸ್ವಲ್ಪವರಲ್ಲಿಯೆ ನಾನೀಗ ಮಾಡಿಕೊಡಬೇಕೆಂದಿರುವೆನು. ಹೆಚ್ಚಿನ ವಿವರಣೆಗಳಿಂದ ಈ ಭಾಷಣವನ್ನು ಬೆಳೆಯಿಸಲು ಮನಸ್ಸಿಲ್ಲ; ಅವಕಾಶವೂ ಇಲ್ಲ.

ಗದ್ಯ ಸಾಹಿತ್ಯದಲ್ಲಿಯು ತೀರ ಸಣ್ಣ ರೂಪುಗಳೆಂದರೆ ಗಾದೆಯು ಮಾತುಗಳು. ಕನ್ನಡಿಗರಲ್ಲಿ 'ಮಾತಿಗೆ ಮೊದಲು ಗಾದೆ, ಊಟಕ್ಕೆ ನೊದಲು ಉಪ್ಪಿನಕಾಯಿ!'. ಎಂತೆಂತಹ ಪರಂಪರಾಪ್ರಿಯ ವೈದಿಕರೂ ಗಾದೆಗಳಿಗೆ ಮನಸೋತು— ಮೈಮರೆತು— ಹೇಳುತ್ತಾರೆ: 'ಗಾದೆಯ ಮಾತು ವೇದಕ್ಕೆ ಸಮಾನ' ಎಂದು. ಈ ಉಪಮೆಯಲ್ಲಿ ಸ್ವಲ್ಪವೂ ಅತಿಶಯೋಕ್ತಿಯ ದೋಷವಿಲ್ಲ. ವೇದದಂತೆ ಗಾದೆಗಳೂ 'ಅಪೌರುಷೇಯ' ವಚನಗಳು; ಎಂದರೆ ಇವುಗಳನ್ನು ರಚಿಸಿದವರಾರೆಂಬುದನ್ನು ಯಾರೂ ಅರಿಯರು. ವೇದ 'ಕಿರಿದರೊಳ್ ಪಿರಿದರ್ಥವ ಹುದುಗಿಸಿಕೊಂಡ' ಅನುಭವ ಸೂತ್ರ; ಗಾದೆಯು ಮಾತುಗಳೂ ಹಾಗೆಯೆ ಒಂದೊಂದೂ ವ್ಯಾವಹಾರಿಕ ಸತ್ಯಸಿದ್ಧಾಂತಗಳ ಶಿಲಾಶಾಸನಗಳಂತಿವೆ ಇಂತಹ ಗಾದೆಯು ಮಾತುಗಳು ಕನ್ನಡನಾಡಿನ ಹಳ್ಳಿ-ಹಳ್ಳಿಗಳಲ್ಲಿ, ಮನೆ-ಮನೆಗಳಲ್ಲಿ, ವ್ಯಕ್ತಿ-ವ್ಯಕ್ತಿಗಳ ಬಾಯಿಗಳಲ್ಲಿ ಹೊಸ ಹೊಸ ಅರ್ಥಗಳನ್ನು ಹೇಳುತ್ತ ಹೆರಡಿಕೊಂಡಿವೆ ಕೆಲಕೆಲವು ಗಾದೆಯು ಮಾತುಗಳು ಆರ್ಥಪೂರ್ಣವಾದ ಕತೆಯೊಂದರ ಮೇಲೆ ಕುಳಿತು ಹೊರಟಿರುವುವು 'ಜಾಣನ ಗೋಣಿ ಬರಿಯದು' 'ಖಬರನೇಡಿಯ ಕೈಯಾಗ ಕೊಬರೀ ಕೊಟ್ಟರ ಸಬರದ ಬುಡಕಿಟ್ಟು ಸರವತ್ತಿನಾಗ ಹೊಡಕಾಡತಿತ್ತು' 'ಸನ್ನೆಗೇಡಿಯ ಕೈಯಾಗ ಸುಣ್ಣಾ ಕೊಟ್ಟರ ಬಿಣ್ಣೀ ಅಂತ ಬಾಯಾಗ ಹಾಕಿಕೊಂಡಿತು' ಇತ್ಯಾದಿ ಗಾದೆಗಳು ಅವಕ್ಕೆ ಉದಾಹರಣೆ.

ಗಾದೆಯು ಮಾತುಗಳು ಲೋಕವ್ಯವಹಾರವನ್ನು ಚಿನ್ನಾಗಿ ತಿಳುಹೆಬಲ್ಲವು. ನಮ್ಮಲ್ಲಿಯ ಒಂದೊಂದು ಪಂಗಡದವರ ವೈಶಿಷ್ಟ್ಯವನ್ನೂ ಪ್ರದೇಶಗಳ ವೈಶಿಷ್ಟ್ಯವನ್ನೂ ಈ ಗಾದೆಗಳು ಯಥಾವತ್ತಾಗಿ ಚಿತ್ರಿಸುವುವು 'ಎತ್ತ ಬಿದ್ದರೂ ನಟ್ಟ ತನ್ನ ಲೆಕ್ಕಮೊಳಗೆ' 'ಅಕ್ಕನ ಬಂಗಾರನಾದರೂ ಅಕ್ಕಸಾಲೆ ಬಿಡ; ಆಪ್ಪನ ಬಟ್ಟೆಯಾದರೂ ಚಿಪ್ಪಿಗ ಬಿಡ' 'ಹಾರುವರನ್ನ ಬಾಳಯೊಳಗ ಬಿಸಬಾರದು, ಮುಸಲರನ್ನ ಕೋಳಿಯೊಳಗ ಬಿಡಬಾರದು' 'ಹಸಿದ ಹಾರುವನನ್ನ ತಡೆಯಬಾರದು; ಉಂಡ ಮುಸಲನ್ನ ತಡೆಯಬಾರದು' ಇವು ಪಂಗಡಗಳ ವೈಶಿಷ್ಟ್ಯಕ್ಕೆ ಉದಾಹರಣೆಯಾದರೆ 'ಗೋಕಾಂವಿ ನಾಡು ಮುಗಲಕಡೆ ನೋಡು!' 'ಹೆಸರಿಗೆ! ಕುಂದಗೊಳ; ಮೊಸರಿಗೆ! ನೀರಿಲ್ಲ!' 'ಹೋಣ ಬೆಳೆದರೆ ಓಣಿತುಂಬ ಜೋಳ' ಮೊದಲಾದುವು ಪ್ರಾದೇಶಿಕ ವೈಶಿಷ್ಟ್ಯಕ್ಕೆ ಉದಾಹರಣೆಗಳಾಗಿವೆ.

ಗಾದೆಗಳ ಬೆಳೆದು ಒಂದು ವೃತ್ತಲಕ್ಷಣದಿಂದ ಕೂಡಿ ತ್ರಿಪದಿ-

ಗಳಾಗಿರುವುವು. ಹಳ್ಳಿಗರಲ್ಲಿ ರೂಢವಾಗಿರುವ ತುಂಡುಕವನ-ಗಳೆಲ್ಲ ಎಂದರೆ ಜೋಗುಳ, ಬೀಸುವಕಲ್ಲಿನ ಹಾಡು, ಬೇಸಾಯದ ಹಾಡುಗಳು, ಹೋಳಿಯ ಹಬ್ಬದ 'ಬಿಡಿಸದ' ಇವೆಲ್ಲ ತ್ರಿಪದಿ-ಗಳೇ ಆಗಿವೆ.

ತ್ರಿಪದಿ ಹಿಗ್ಗಿ ತಾಲಬದ್ಧವಾಗಿ ನಡೆದು ಚೌಪದಿಯಾಗಿ 'ಸಾಂಗತ್ಯ'ಎಂಬ ಹೆಸರನ್ನು ಪಡೆದಿದೆ. ಸಾಮಾನ್ಯವಾಗಿ ಉತ್ಸವ ಸಮಯದ ಹಾಡುಗಳು, ಮಂಗಲಕಾರ್ಯದ ಸೋಬಾನೆಗಳು, ಸುವ್ವಿಪದಗಳು, ಬೆಳುದಿಂಗಳಲ್ಲಿ ಹಾಡುವ ಕೋಲುಹಾಡುಗಳು, ಜಾನಪದ ಕಥನ-ಕವನಗಳು ಈ ಸಾಂಗತ್ಯದ ನಡಿಗೆಯಲ್ಲಿಯೆ ಇರುವುವು. ಇಂತಹ ಸಾಂಗತ್ಯಗಳು 'ವ ಯಾರೊ ಐದೊ ಕೂಡಿ, ಸಲ್ಲನಿಯೊಂದನ್ನು ಹೊಂದಿಕೊಂಡು ಒಂದೆ ವಿಚಾರಸೂತ್ರದಿಂದ ಪೋಣಿಕೆಗೊಂಡು 'ಪದ' 'ಹಾಡು' ಎನಿಸುವುದು. ಭಕ್ತಿಯನ್ನು ಹೇಳುವ ಹಾಡು: ಕೀರ್ತನೆ. ನಮ್ಮ ಸಾಮಾನ್ಯರ ಸಾಹಿತ್ಯದಲ್ಲಿ ಕೀರ್ತನೆಗಳಲ್ಲದೆ ಲೌಕಿಕ ಭಾವಗೀತಗಳೂ ಪ್ರೇಮಗೀತಗಳೂ ಹೇರಳವಾಗಿರುವುವು. ಹೆಲ್ಲಿಲ್ಲದ ಮುದುಕನೊಬ್ಬನ ಕಳವಳದ ಹೃದಯ:

" ಎಲ್ಲಿ ಹೋದೆ ನನ ಹಲ್ಲಪ್ಪಾ, ನೀ
ಹಂತಿದ್ದಿ ಕೊಬ್ಬರಿ ಬೆಲ್ಲಪ್ಪಾ! "

ಎಂಬ ಹಾಡಿನಲ್ಲಿ ಯಥಾವತ್ತಾಗಿ ಮೂಡಿದೆ. ಇಬ್ಬರು ಹೆಂಡಿರ ಗಂಡನೊಬ್ಬನ ಕನಿಕರದ ಪರಿಸ್ಥಿತಿಯು:

" ಸಾಯಲೇನೋ ಯಪ್ಪಾ ಸಾಯಲೇನೋ
ಸಕ್ಕ್ರಿ ಹೋಗಲೇನೋ ೀ ॥ ಪಲ್ಲ ॥

ಇಬ್ಬರ ಹೆಂಡರ ಜಗಳಾ ಕೇಳಿ
ಮಗ್ಗದ ಕುಣ್ಣಾಗ ಹೋಗಿ ಡೊಗ್ಗಿದೆ,
ಗಬ್ಬದೆವಿಯ್ಯಾಯಂಥಾ × × ರು
ಮನ್ಮಾಲ ಬಂದು ಬಿದ್ದಾರಣ್ಣಾ "

ಎಂಬ ಹಾಡಿನಲ್ಲಿ ಚೆನ್ನಾಗಿ ಚಿತ್ರಿತವಾಗಿದೆ. ಹೋಳಿಯ ಹಾಡುಗಳಂತೂ ಶೃಂಗಾರ-ಹಾಸ್ಯಗಳಿಗೆ ಉತ್ತಮ ಉದಾಹರಣೆಗಳಾಗಿವೆ.

ಗದ್ಯ ಸಾಹಿತ್ಯದ ನಿಡಿದಾದ ಕೃತಿಗಳೆಂದರೆ ಕತೆಗಳು. ಕನ್ನಡದಲ್ಲಿ ಕತೆಗಳ ಬಾಹುಲ್ಯವಿರುವಷ್ಟು ಇನ್ನೊಂದು ಭಾಷೆಯಲ್ಲಿ ಇದೆಯೊ ಇಲ್ಲವೊ! ಇಲ್ಲಿ ಕೋಟಿಗೊಂದು ಕತೆ, ಕೊತ್ತಳಕ್ಕೊಂದು ಕತೆ; ಕೆರೆಗೊಂದು ಕತೆ ಬಾವಿಗೊಂದು ಕತೆ; ಗುಡಿಗೊಂದು ಕತೆ, ಗೋಪುರಕ್ಕೊಂದು ಕತೆ; ಬೆಟ್ಟಕ್ಕೊಂದು ಕತೆ, ಹೊಳೆಗೊಂದು ಕತೆ—ಹೀಗೆ ಎಲ್ಲಿ ನೋಡಿದಲ್ಲಿ ಕತೆಗಳ ಮುಖಗಳು ಕಾಣುತ್ತಿರುವುವು. ದೀರ್ಘಕಾಲವಾಗಿ ನಡೆಯುವ ರಾಜ-ರಾಣಿ-ರಾಕ್ಷಸರ ರೋಮಹರ್ಷಕ ಕತೆಗಳು ಇದ್ದಂತೆ, ಐತಿಹಾಸಿಕ ವ್ಯಕ್ತಿಯ ಪವಾಡಗಳನ್ನು ಬಣ್ಣಿಸುವ ತುಂಡುಗತೆಗಳೂ ಇರುವುವು. 'ಪಂಚತಂತ್ರ' 'ಇಸೋಪನ ಕತೆ'ಗಳ ಮಾದರಿಯ ನೀತಿಕತೆಗಳಿರುವಂತೆಯೆ, ಕೇವಲ ನಗಿಸುವ ಉದ್ದೇಶದಿಂದ ಹೊರಟ ನಗೆಚುಟಿಕೆಗಳೂ ಹೇರಳವಾಗಿ ಇರುವುವು. ಇವೆಲ್ಲವುಗಳಿಗೆ ಉದಾಹರಣೆಗಳನ್ನು ಕೊಡುತ್ತ ಹೋಗಲು ಈಗ ಅವಕಾಶ ಸಾಲದು.

'ಪದ್ಯ ಸಾಹಿತ್ಯದ ನಿಡಿದಾದ ರೂಪು ಎಂದರೆ ಲಾವಣಿಗಳು. ಇದರಲ್ಲಿ ಪುರಾಣದ ಕತೆಗಳನ್ನು ಹೆಣೆದುಕೊಂಡುವು ಹೆಚ್ಚಾಗಿ ಇರುವುವು. ಬಾಗೇವಾಡಿಯ ಗೋಪಾಳ ದುರದುಂಡಿ, ಮುರ ಗೋಡದ ಕುಬಣ್ಣ, ತೇರದಾಳದ ಪ್ರಭುದೇವ ಮೊದಲಾದ ಕವಿಗಳ ಅಂಕಿತಗಳಿಂದ ಕೂಡಿದ ಪೌರಾಣಿಕ ಲಾವಣಿಗಳು ತುಂಬ ಇವೆ. ಶೈಲಿ, ಪ್ರಾಸ, ನರ್ತನ, ಕಥೆ, ಅರ್ಥಸೌಲಭ್ಯ ಇವುಗಳ ಮೂಲಕ ಈ ಲಾವಣಿಗಳು ಸಮೂಹಕ್ಕೆ ತುಂಬ ರುಚಿಸುವುವು. ವೀರ-ಕರುಣೆ-ಶೃಂಗಾರಗಳು ಈ ಲಾವಣಿಗಳಲ್ಲಿ ಸ್ಥಾಯೀಭಾವಗಳಾಗಿರುವುವು. ಇವಲ್ಲದೆ ನಮ್ಮ ಸಾಮಾನ್ಯರ ಜನಜೀವನವನ್ನು ಅಂದವಾಗಿ ಚಿತ್ರಿಸಬಲ್ಲ ಕಥನಪರ ಲಾವಣಿಗಳು ನಗೆಯ ಸೆಲೆಗಳಂತಿರುವುವು. 'ಬಸರಿದ್ದೀನ ಹೆಸರಿನ್ನಽ ಏನಿಡೂನು' 'ತುಂಟತುಂಟರಿಗೆ ಗಂಟುಬಿದ್ದರ ಗರದಿಯಾಗತಽದ ಗಮ್ಮತ್ತಾ!' 'ನಾಗರ ಪಂಚಮಿ ನಾಡಿಗೆ ದೊಡ್ಡದು' ಮೊದಲಾದ ಇಂತಹ ಜಾನಪದ ಚಿತ್ರಗಳನ್ನು ಕೆಲವು ಸಂಗ್ರಹಿಸಿ ಪ್ರಕಟಿಸಲಾಗಿದೆ. ಹರದೇಪಿ-ನಾಗೇತಿಗಳೆಂಬ ಪಕ್ಷಗಳನ್ನು ಕಟ್ಟಿಕೊಂಡು ನಡೆಯುವ ಈ ಲಾವಣಿಗಳ ಪಂದ್ಯಾಟಗಳು ಹಳ್ಳಿಗರನ್ನು ಕುಣಿದಾಡಿಸುವುವು. ಈ ಪಕ್ಷಗಳ ವಾದಗಳಲ್ಲಿ ವೇದಾಂತ, ವ್ಯವಹಾರ, ಇತಿಹಾಸ, ಪುರಾಣ, ಪ್ರಪಂಚ ಪರಿಚಯ ಎಲ್ಲವೂ ಇರುವುವು.

'ನಿರಾಕಾರದಾಗ ನೀರಿನ ಹೊರತು ಇದ್ದಿದ್ದಿಲ್ಲ ಏನಾ! ಹೇ! ನೀರು ಅಂದರ ನೀರಿನ ರೂಪಾ ತೊಟ್ಟಿದ್ದ ಭಗವಾನಾ' ಈ ಬಗೆಯ ಆಧ್ಯಾತ್ಮಿಕ ವಿಚಾರವನ್ನು ಸಾಂಪ್ರದಾಯಿಕ ಸಂಕೇತಗಳಲ್ಲಿ ಹೇಳುವ ಪ್ರಬಂಧ ಲಾವಣಿಗಳು ತುಂಬ ಇರುವುವು. 'ಆಚಿತ್ರ ಮಿಕಾ ಒಂದು ಕಂಡಿನಲಾ, ಅಂತರ ಮಾರ್ಗ ಹಿಡಿದು ಬಂದಿತಲಾ' ಎಂಬುದೊಂದು ರೂಪಕಕವಿತೆ, 'ಅಂಬಿಕಾ ತನಯ ದತ್ತ'ರ 'ಹಕ್ಕಿ ಹಾರುತಿದೆ ನೋಡಿದಿರಾ?' ಎಂಬ ರೂಪಕದ ಸೌಂದರ್ಯವನ್ನೇ ಸ್ಮರಣೆಗೆ ತರುವಂತಹದಿದೆ.

ಗೊಂದಲಿಗ-ಜೋಗಿಗಳ ಕಥೆಗಳನ್ನು ಜಾನಪದ ಚಂಪೂ ಕಾವ್ಯಗಳೆಂದು ಹೇಳಬಹುದು. ಈ ಕತೆಗಳ ಕೆಲವು ಭಾಗಗಳು ಸಂದರ್ಭೋಚಿತವಾದ ಮಟ್ಟುಗಳಿಂದ ಕೂಡಿದ ಆಶುಪದ್ಯಗಳಲ್ಲಿ ಸಾಗುವುವು: ನಿಲ್ಕ ಭಾಗವು ಆಲಾಪನೆಯಿಂದ ಕೂಡಿದ ಗದ್ಯದಲ್ಲಿ ಸಾಗುವುದು. ಹಳ್ಳಿಗಳಲ್ಲಿ ಜೇಕೆನಿಸಿದಾಗ—ರಾತ್ರಿಯುದ್ದಕ್ಕೂ—ಇಂತಹ ಕಥಾಕಾಲಕ್ಷೇಪಗಳು ನಡೆಯುವುವು. ಹಿನ್ನೆಲೆಯಲ್ಲಿ ತಂತುಣಿ, ಚಾಡಿಕೆ, ಸಂಮೇಳ, ತಾಳ ಮೊದಲಾದ

ಪಕ್ಕವಾದ್ಯಗಳಿರುವುವು. ಈ ಕತೆಗಾರರು ಹೇಳಿದ 'ಮದುವೆ ಯಾಗದ ಮೈನಾವತಿ' 'ಜಾಲ್ಯಾಡು ಆಂಬೂ ಬಂಜ್ಯಾಡು' 'ಆಡವೀಸಿಂಗರಾಜ' 'ಬಂಗಾರಗಿರಿ ಬಾವಾ ಜಲಾಲಗಿರಿ ಬಾವಾ' 'ದಾಳಿಂಬ ಕುಮಾರಿ' 'ರಂಡಿಮುಂಡಿಯ ಮಗ ರಾಜ ಕುಮಾರ' ಮೊದಲಾದ ರೋಮಾಂಚಕ ಕತೆಗಳನ್ನು ಕೇಳಿ ನಾನು ಎಳೆಯತನದಲ್ಲಿ ತುಂಬ ಆನಂದಪಟ್ಟಿದ್ದೇನೆ. ಕತೆಯ ಕಟ್ಟಡ ಅದ್ಭುತರಮ್ಯ ಜಾತಿಗೆ ಸೇರಿದುವಾದರೂ, ವರ್ಣಕವಾಗುವ ಜನಜೀವನವೆಲ್ಲ ತಮ್ಮದೇ ಎನಿಸುವುದರಿಂದ, ಹಳ್ಳಿಗರು ಈ ಕತೆಗಳನ್ನು ತುಂಬ ಮೆಚ್ಚಿಕೆಯಿಂದ ಕೇಳುತ್ತಿರುವರು,

ಆಟ್ಟದ ಆಟ, ಬಯಲಾಟ, ತಾಳಮದ್ದಳೆ, ಯಕ್ಷಗಾನ, ಮೂಡಲಪಾಯ, ಶ್ರೀಕೃಷ್ಣಪಾರಿಜಾತ— ಇವೆಲ್ಲ ಅವರ ದೃಶ್ಯ-ಸಾಹಿತ್ಯಗಳು, ಇದೇ ದಾರಿಯಲ್ಲಿ ಇತ್ತೀಚೆಗೆ 'ತಿರುನೀಲಕಂಠ' 'ಉಡುತಡಿಯ ಮಹಾದೇವಿ'. 'ಹೇಳುರಡ್ಡಿ ಮಲ್ಲನ್ಮ' ಮೊದಲಾದ ಜಾನಪದ ಆಟಗಳು ಮುಂದೆ ಬಂದಿವೆ.

ಈ ಎಲ್ಲ ಸಾಹಿತ್ಯದ ಸ್ವರೂಪಗಳನ್ನು ನಾನಿಲ್ಲಿ ಸ್ಥೂಲಮಾನದಿಂದ ವಿಂಗಡಿಸಿ ಹೇಳಿದ್ದೇನೆ ಹೊರತು, ವಿವರ-ವಿವರವಾಗಿ ಹೇಳಲು ಸಾಧ್ಯವಾಗಿಲ್ಲ. ಸೂಕ್ಷ್ಮವಾಗಿ ವಿಂಗಡಿಸಲುಹೋದರೆ ಇನ್ನೂ ವರ್ಗಗಳ ಸಂಖ್ಯೆ ಬೆಳೆಯಬಹುದು. ಈ ಸಾಹಿತ್ಯವನ್ನು ಸಂಶೋಧಿಸಿ ಅಭ್ಯಾಸಮಾಡಬೇಕೆಂಬ ಪಂಡಿತರು, ಇನ್ನೂ ಸೂಕ್ಷ್ಮರೀತಿಯಿಂದ ವಿಮರ್ಶೆಮಾಡಿ ನೋಡಬೇಕು.

ಕನ್ನಡ ಭಾಷೆಯನ್ನು ಒಂದು ಕಾಲದಲ್ಲಿ ಸಂಸ್ಕೃತ ಭಾಷೆಯು ಅಳಿ, ಅವರ ರೂಪವನ್ನು ಕೆಡಿಸಿಹು; ಇಂದು ಆಂಗ್ಲಭಾಷೆ ಅಳಿ ಕನ್ನಡನುಡಿಯನ್ನು ಕುಲಗೆಡಿಸಿಬಿಟ್ಟಿದೆ. ಕನ್ನಡವನ್ನು ಕನ್ನಡವನ್ನಾಗಿಯೆ ಮಾತನಾಡಬೇಕೆಂಬ— ಒಯಬೇಕೆಂಬ— ಅಪೇಕ್ಷೆಯುಳ್ಳವರು, ಜಾನಪದ ಸಾಹಿತ್ಯದ ಅಭ್ಯಾಸವನ್ನು ಮಾಡಿಯೇ ಅದನ್ನು ಸಾಧಿಸಬಹುದಾಗಿದೆ. ಅಚ್ಚಗನ್ನಡದ ಕೆಚ್ಚಿನ ನಾಮಪದಗಳೂ ಕ್ರಿಯಾಪದಪ್ರಯೋಗಗಳೂ ವಾಕ್ಯರಚನೆಗಳೂ ನಮಗೆ ಈ ಹಳ್ಳಿಯ ಸಾಹಿತ್ಯದಲ್ಲಿಯೆ ಹೆಚ್ಚಾಗಿ ಸಿಕ್ಕಬೇಕಾಗಿದೆ. ಕನ್ನಡದಲ್ಲಿ ಸಂಪೂರ್ಣವಾದ ಶಬ್ದಕೋಶವೊಂದನ್ನು ಆಣಿಗೊಳಿಸಬೇಕೆನ್ನುವವರು, ಕೇವಲ ಬರೆಹದಲ್ಲಿರುವ ಕನ್ನಡಸಾಹಿತ್ಯದಿಂದ ಅದನ್ನು ನಡಪೇರಿಸಲಾರರು. ಜನಪದಸಾಹಿತ್ಯದ ಪರಿಚಯ-ಅಭ್ಯಾಸಗಳಿಂದ ಅವರು ಖಂಡಿತ ತಮ್ಮ ಕೊರತೆಯನ್ನು ಕಡಮೆಮಾಡಿಕೊಳ್ಳಬಲ್ಲರು. ಹಳ್ಳಿಗರ ವ್ಯವಸಾಯದ ಎಲ್ಲ ಪರಿಭಾಷೆಗಳು ಹೆಚ್ಚಾಗಿ ಅಚ್ಚಗನ್ನಡದಲ್ಲಿ ಇರುವುವು. ಹಳ್ಳಿಗರನ್ನು ಎಂದೂ ಕಾಣದ ಪಂಡಿತರು, ಪ್ರೊಫೆಸರರು, ಪಟ್ಟಣದ ಕಾರ್ಯಾಲಯದ ಕುರ್ಚಿಯ ಮೇಲೆ ಕುಳಿತುಕೊಂಡು, ಕನ್ನಡ ಶಬ್ದಸಂಗ್ರಹದ ವ್ಯಾಪ್ತಿಯನ್ನು ತಿಳಿವ ಬಗೆ ಹೇಗೆ, ಅಳೆವ ದಾರಿ ಹೇಗೆ?

ಜನಪದಸಾಹಿತ್ಯವನ್ನು ಸಂಗ್ರಹಿಸಿ ಪ್ರಕಟಿಸುವ ಪ್ರಯತ್ನಗಳು ನಮ್ಮಲ್ಲಿ ಇತ್ತೀಚೆಗೆ ಕೆಲವು ನಡೆದಿವೆ. ಆದರೆ ಒಬ್ಬಿಬ್ಬರ ಪ್ರಯತ್ನಗಳಿಂದ ಏನಾದೀತು? 'ಕೊಡದೊಳಗೆಷ್ಟು ನಿಲ್ಲುದು ಸಮುದ್ರ ಜಲಂ? ವರಕಾಂಚನಾದ್ರಿ ಕನ್ನಡಿಯೊಳಗೆಷ್ಟು ತೋರ್ಪುದು?' ಎಂಬ ರತ್ನಾಕರಸಿದ್ಧನ ಉಪಮೆ ನೆನಪಿಗೆ ಬರುತ್ತದೆ. ನಮ್ಮ ಸರಕಾರದ ವಿದ್ಯಾವಿಭಾಗದವರೂ, ವಿಶ್ವವಿದ್ಯಾನಿಲಯಗಳೂ, ಅಲ್ಲಲ್ಲಿಯ ಕರ್ನಾಟಕ ಸಂಘಗಳೂ, ಹಳ್ಳಿಗಳಲ್ಲಿ ವಾಸವಾಗಿರುವ ಅಕ್ಷರಿಗರೂ ಇವುಗಳನ್ನು ಸಂಗ್ರಹಿಸುವ ಕಾರ್ಯದಲ್ಲಿ ಶ್ರದ್ಧೆವಹಿಸಬೇಕು. ಜೋಳ್ಳೆಂದೊ, ಪೊಳ್ಳೆಂದೊ, ನೀರಸವೆಂದೊ, ಅಶ್ಲೀಲವೆಂದೊ ಹೆಸರಿಟ್ಟು ಯಾವುದನ್ನೂ ಅಲಕ್ಷಿಸದೆ, ಕೈಗೆ ಸಿಕ್ಕಿದುದನ್ನೆಲ್ಲ ಸಂಗ್ರಹಿಸಬೇಕು. ಈ ಸಂಗ್ರಹಗಳ ಅಭ್ಯಾಸದಿಂದ ನಮ್ಮ ಸಂಸ್ಕೃತಿಯ ಚರಿತ್ರೆಯ ಎಷ್ಟೋ ಪುಟಗಳನ್ನು ಬೆಲೆಯುಳ್ಳ ವಿಷಯಗಳಿಂದ ತುಂಬಬಹುದು; ನಮ್ಮ ಹೊಸ ಸಾಹಿತ್ಯದ ನಡಿಗೆಯನ್ನು ನಿರ್ಣಯಿಸಲಿಕ್ಕೆ ಅನುಕೂಲವೆನಿಸುವ ಹಲವು ಸಾಧನ ಸೌಕರ್ಯಗಳನ್ನು ಪಡೆಯಬಹುದು.

ಮಹನೀಯರೆ, ನನ್ನ ಸಣ್ಣ ಬುದ್ಧಿಯಿಂದ ದೊಡ್ಡ ಮಾತನ್ನು ಹೇಳಲು ಇದುವರೆಗೆ ಪ್ರಯತ್ನಪಟ್ಟಿದ್ದೇನೆ. ನನ್ನ ಈ ರಸಹೀನ ಮಾತುಗಳನ್ನು ತಾವು ಬೇಸರಿಯದೆ ಕುಳಿತು ಕೇಳಿದುದಕ್ಕಾಗಿ ತಮ್ಮೆಲ್ಲರಿಗೂ— ಈ ಆದರದ ಸ್ವಾಗತವನ್ನು ಕೊಟ್ಟುದಕ್ಕಾಗಿ ಸಮ್ಮೇಳನದ ಸ್ವಾಗತಮಂಡಲಿಗೂ ಮತ್ತೆ ಮತ್ತೆ ಕೃತಜ್ಞತೆಯ ನಮನಗಳನ್ನು ಸಲ್ಲಿಸಿ, ನನ್ನ ಮಾತನ್ನು ಮುಗಿಸುತ್ತೇನೆ

ಜಯ ಕನ್ನಡ ಶಾರದೆ!

ಕಳೆದ ಹನ್ನೆರಡು ವರ್ಷಗಳಿಂದ ಕನ್ನಡದ ಸೇವೆ ಮಾಡುತ್ತಿರುವ
ದಕ್ಷಿಣ ಕನ್ನಡ ಜಿಲ್ಲೆಯ ಒಂದೆ ಒಂದಾದ
ಸಾಹಿತ್ಯಿಕ—ಲೋಕಪ್ರಿಯ—ಪ್ರಯೋಗಾತ್ಮಕ ಎಂದು ಹೆಸರಾದ

ಕನ್ನಡ ಮಾಸಪತ್ರಿಕೆ

ವಾ. ಚಂ. ಅಂ. ಪೆ
ಸೇರಿ ೨-೪ ಂ

ಧುರೀಣ

ಬಿಡಿಸಂಚಿಕೆಗೆ
೦-೩-೦

ಸಂಪಾದಕರು

ಶ್ರೀ. ಜಿ. ಎಸ್. ಶೆಣೈ ....
ಶ್ರೀ. ಬನ್ನಂಜೆ ರಾಮಾಚಾರ್ಯ

ಕನ್ನಡನಾಡಿನ ಸಮರ್ಥ ಬರೆಹಗಾರರ ಕತೆ, ಕವನ, ಲೇಖನಗಳಿಂದ ತುಂಬಿದ ಸಂಚಿಕೆಗಳು. ಜಾಹೀರಾತು ಕೊಡಬೇಕೆನ್ನುವವರಿಗೆ ಅತ್ಯುತ್ತಮ ಸಾಧನ.

ಮ್ಯಾನೇಜರ್:—
ಧುರೀಣ ಉಡುಪಿ (ದ. ಕ. ಜಿಲ್ಲಾ)

ಪತಿತಾಂಗನೆ

(ಸಣ್ಣ ಕಥೆ)*

ಶ್ರೀ. ಲೋಕೇಶ ಬಿ. ಮುದಬಾವಿ,
ಕರ್ನಾಟಕ ಕಾಲೇಜ್, ಧಾರವಾಡ

★

(೧)

ಸುಶೀಲೆಯು ಮುಂಜಾನೆಯ ಶಾಲೆ ಟೀರಿಸಿ ಮನೆಗೆ ಬಂದವಳೇ ತನ್ನ ಅಣ್ಣನ ಕೊಠಡಿಯ ಬಾಗಿಲಿಗೆ ಬಂದು ನಿಂತಳು. ಎರಡೂ ಕೈಗಳಲ್ಲಿ ಮುಖವನ್ನಿರಿಸಿ ಕುರ್ಚಿಯ ಮೇಲೆ ಕುಳಿತ ವಿದ್ಯಾಧರನು, ಬಾಗಿಲ ಕಡೆ ಮುಖವನ್ನೇನೂ ಮಾಡಲಿಲ್ಲ. ಸ್ವಲ್ಪಕಾಲ ಕಳೆಯಿತು; ಸುಶೀಲೆಯು "ಅಣ್ಣಾ" ಎಂದು ಅವನ ಕುರ್ಚಿಯ ಹಿಂದೆ ಬಂದು ನಿಂತಳು. ವಿದ್ಯಾಧರ ಮುಖ ಎತ್ತುತ್ತಿರುವಾಗಲೆ "ಏಕೆ? ಏನೋ ಬಹಳ ವಿಚಾರ ನಡೆಯಿಸಿದ್ದಿ?" ಎಂದು ಕೇಳಿದಳು ಮುಗುಳು ನಗೆ ನಗುತ್ತ 'ಏನೂ ಇಲ್ಲ!' ಎಂದ ವಿದ್ಯಾಧರ. ಸುಶೀಲೆಯು 'ಶೆಲ್ಫಿ'ನಲ್ಲಿಯ ಪುಸ್ತಕಗಳ ಕಡೆಗೆ ನೋಡುತ್ತ ನಿಂತಳು. ಆಕೆಯು ಕೈಯಲ್ಲಿದ್ದ ಒಂದೆರಡು ಹೊಸ ಪುಸ್ತಕಗಳನ್ನು ನೋಡಿ ವಿದ್ಯಾಧರ "ನಾನು ಹೇಳಿದ 'Saint Joon' ತಂದೆಯಾ?" ಎಂದು ಕೇಳಿದ. ಕೂಡಲೇ ಆಕೆಯು ತಿರುಗಿ ಹೇಳಿದಳು: "ಕ್ಷಮಿಸಣ್ಣ, ಈ ಹೊತ್ತು ನಮ್ಮ ಮಿಸ್ಟೆಸ್ಸರ ಮನೆಗೆ ಹೋಗಿದ್ದೆ. ಆದ ಕಾರಣ Book Depot ದ ಮೇಲೆ ಹಾಯ್ದು ಬರಲಿಕ್ಕಾಗಲಿಲ್ಲ. ನಾಳೆ ತಪ್ಪದೆ ತಂದು ಕೊಡುತ್ತೇನೆ. ನನಗೂ ಗೊತ್ತು 'ಶಾ' (Show) ಎಂದರೆ ಎಷ್ಟು ಹುಚ್ಚು ನಿನಗೆ ಅಂತ. ನಿಜಕ್ಕೂ ನಾಳೆ ತರುತ್ತೇನೆ."

"ನಿನ್ನದು ಯಾವಾಗಲೂ ಹೀಗೆಯೆ! ಇರಲಿ. ಈಗ ತಂದಿರುವ ಪುಸ್ತಕಗಳು ಯಾವುವು? ಯಾರದೋ ಮನೆಗೆ ಹೋಗಿದ್ದೆ ಎಂದೆಯಲ್ಲ?"

"ನಮ್ಮ ಮಿಸ್ಟೆಸ್ಸರ ಮನೆಗೆ. ಅಣ್ಣಾ ಅವರಷ್ಟು ಒಳ್ಳೆಯವರನ್ನು ನಾನು ಎಂದೂ ಕಾಣಲಿಲ್ಲ ಬಿಡು. ಒಂದು ದಿವಸವಾದರೂ ನನ್ನನ್ನಾಗಲಿ ನನ್ನ ಗೆಳತಿಯರನ್ನಾಗಲಿ ಬೈದದ್ದು? ಜಾಸ್ತಿಯಿಂದ ತಳಹೇಳುವರಲ್ಲದೆ, ಬೈಯುವುದು, ಹೊಡೆಯುವುದು ಎಂದೂ ಇಲ್ಲ. ನನ್ನ ಮೇಲೆ ಅವರದು ಬಹಳ ಪ್ರೀತಿ. ಯಾವಾಗಾದರೊಮ್ಮೆ ತಮ್ಮ ಮನೆಗೆ ಕರೆದುಕೊಂಡು ಹೋಗುತ್ತಾರೆ. ಕೆಲವು ಪುಸ್ತಕಗಳನ್ನು ಓದಲು ಕೊಡುತ್ತಾರೆ. ಇಂದು ಸಾಲೆ ಬಿಟ್ಟ ಕೂಡಲೆ, ತಮ್ಮ ಮನೆಗೆ ಕರೆದುಕೊಂಡು ಹೋಗಿದ್ದರು. ಎಷ್ಟು ಪುಸ್ತಕಗಳು ಅವರ ಹೋಲಿಯಲ್ಲಿ! ಯಾವಾಗಲೂ ಓದುವ ಹಾಗೆಯೆ ಕಾಣುತ್ತದೆ. ಅಲ್ಲಿಯ ಕುರ್ಚಿಗಳು, ಪುಸ್ತಕಗಳನ್ನಿರಿಸುವ ಶೆಲ್ಫು, ಪಲ್ಲಂಗ ಎಲ್ಲಾ ನೋಡಿದರೆ ನಿನ್ನ ಈ ಹೋಲಿಯ ನೆನಪನ್ನೇ ತಂದುಕೊಡುತ್ತವೆ ನೋಡು!"

"ಅವರು ಯಾವ ವಿಷಯ ಹೇಳುತ್ತಾರೆ?"

"ಇಂಗ್ಲೀಷು ಮತ್ತು ಭೂಗೋಲ."

"ಚೆನ್ನಾಗಿ ಹೇಳುತ್ತಾರಲ್ಲವೇ?"

"ಓಹೋ; ಆಗಲೇ ಹೇಳಲಿಲ್ಲವೇ? ಅವರಷ್ಟು ಚೆನ್ನಾಗಿ ನಮ್ಮ ಇಡಿ ಹಾಯ್‌ಸ್ಕೂಲಿನಲ್ಲಿಯೆ ಯಾರೂ ಕಲಿಸುವುದಿಲ್ಲ! ಆದರೆ ಉಳಿದ ಮಿಸ್ಟೆಸ್ಸರು ಮಾತ್ರ ಅವರನ್ನು ಸೇರುವುದೇ ಇಲ್ಲ."

"ಎಲ್ಲಿಯಾದರೂ ಹೀಗೆಯೇ, ಚೆಲೋ ಜನರನ್ನು ಕಂಡರೆ ಸೇರಿಕೆಯೇ ಇರುವುದಿಲ್ಲ. ನೀವೇ ಅವರ ಗೆಳತಿಯರು ಕಾಣಿಸುತ್ತದೆ ಅಲ್ಲವೇ?" ಎಂದು ಸ್ವಲ್ಪ ನಕ್ಕ ವಿದ್ಯಾಧರ.

"ಎನೋ, ನಾನು ನೋಡಿದ್ದು; ಸದಾ ಒಬ್ಬರೇ ಇರುತ್ತಾರೆ. ಯಾವಾಗಾದರೊಮ್ಮೆ ನನ್ನನ್ನು ನನ್ನ ಗೆಳತಿಯರನ್ನು ತಮ್ಮ ಮನೆಗೆ ಕರೆದುಕೊಂಡು ಹೋಗುತ್ತಾರೆ ಅಷ್ಟೇ! ಇಂದು ಹೋಗಿದ್ದೆವಲ್ಲ. ಮೇಜಿನ ಮೇಲೆ 'ಶಾ'ನ 'ಕ್ಯಾಂಡಿಡಾ' 'ಟಾಲಸ್ಟಾಯಿ'ಯವರ 'ಚಿಕ್ಕ ಕಥೆಗಳು' ಮತ್ತಿತರ ಪುಸ್ತಕಗಳು ಇದ್ದುವು. ನಾನು 'ಕ್ಯಾಂಡಿಡಾ'ವನ್ನು ನೋಡಿದವಳೇ 'ಅದು 'ಶಾ'ನದಲ್ಲವೇ' ಎಂದೆ. ಅದಕ್ಕೆ ಅವರು "ನೀನು ಓದಿರುವಿಯೇನೆ, ಸುಶೀಲಾ?" ಎಂದು ಕೇಳಿದರು. ಅದಕ್ಕೆ ನಾನು "ಇಲ್ಲ, ನಮ್ಮ ಅಣ್ಣ ತಂದು ಮನೆಯೊಳಗೆ ಇಟ್ಟಿದ್ದಾನೆ ನಾನು ನೋಡಿದ್ದೆ—ಎಂದೆ."

"ಅದನ್ನೇಕೆ ಹೇಳಲು ಹೋಗಿದ್ದೆ?"

"ಅಯ್ಯತೀನೀಗ? ಅವರು ಕೇಳಿದರು: 'ನಿನಗೆ ಅಣ್ಣಂದಿರೊಬ್ಬರು ಇದ್ದಾರೇನು? ಏನು ಮಾಡುತ್ತಾರೆ?' ಎಂದು!"

"ಒಬ್ಬ ಉದಾಳ ಇದ್ದಾನೆಂದು ಹೇಳಿದೆಯಿಲ್ಲೋ!"

ನಡೆಯುವ ಮನುಷ್ಯ ಎಡಹುವುದು ಸ್ವಾಭಾವಿಕ. ಎಡಹಿದುದೊಂದು ದೊಡ್ಡ ತಪ್ಪೆಂದು ಕಂಡು, ಮನುಷ್ಯರ ನಡಿಗೆಯನ್ನೇ ತಡೆಹಿಡಿದರೆ, ವ್ಯಕ್ತಿಯ ಪ್ರಗತಿ ಹೇಗಾದೀತು? ಸಮಾಜದಲ್ಲಿ ಸಂಸ್ಕೃತಿ ಹೇಗೆ ಬೆಳೆದೀತು. ಸಹನೆ-ಸಹಾನುಭೂತಿಗಳು ಪ್ರಗತಿಗೊಂದು ಮಹತ್ತ್ವದ ಸಾಧನ.

★

* ಜಯಂತಿಯ ಸಣ್ಣಕತೆಗಳ ಮೇಲಾವಳಿಯಲ್ಲಿ ಒಳ್ಳೆಯ ಕತೆಯೆಂದು ಪರಿಗಣಿತವಾದ ಕತೆಯಿದು. —ಸಂ. ಜ.

ಹೂಂ, ಹೇಳಿದೆ; ಎಮ್. ಎ. ಆಗಿ ಎರಡು ವರ್ಷ ಆಯಿತು. ಮನೆಯೊಳಗೇ ಕುಳಿತಿದ್ದಾನೆ--ಎಂದೆ."

"ಆಯಿತು ಬಿಡು, ಅರ್ಥ ಎಲ್ಲಾ ಒಂದೇ."

"ಇಂತಹದಕ್ಕೆಲ್ಲ ಬಲು ನೀನು. ಏನು ದೊಡ್ಡ ಮಾತು? ಸೆಲ್ಫಿನಲ್ಲಿಯ ಪುಸ್ತಕಗಳಲ್ಲೊಂದರ ಮೇಲೆ 'A Doll's House' ಎಂದು ಬರೆದಿತ್ತು. ನಾನು ಚಿಕ್ಕವರಿಗಾಗಿ ಎಂದುಕೊಂಡು 'ಓದುತ್ತೇನೆ ಕೊಡಿರಿ' ಎಂದೆ. ಅದಕ್ಕೆ ಅವರು 'ಅದು ಯುರೋಪದಲ್ಲೆಲ್ಲ ಕ್ರಾಂತಿ ಮಾಡಿದ ನಾಟಕ; ಅದು ನಿನಗೆ ತಿಳಿಯುವುದೆಂದು ಹೇಳಲಾರೆ. ಆದರೆ ಮುಂದೆ ಕಾಲೇಜಿಗೆ ಹೋದಮೇಲೆ ಮಾತ್ರ ತಪ್ಪದೆ ಓದಬೇಕು!' ಎಂದರು."

"ಹೌದು, ಅದು ಇಬ್ಸೆನ್ನನದು ಜೆನ್ನಾಗಿದೆ. ಗಂಡನು ಹೆಂಡತಿಯನ್ನು ಒಂದು ಗೊಂಬೆಯಂತೆ ನಡೆಯಿಸಿಕೊಳ್ಳುತ್ತಾನೆ. ಸ್ವಾತಂತ್ರ್ಯದ ಬಯಕೆಯುಳ್ಳ ಸೂಕ್ಷ್ಮ ವಿಚಾರದ ನೋರಾ—ಅವಳೇ ಅವನ ಹೆಂಡತಿ—ಮನೆಬಿಟ್ಟು ಹೊರಡುತ್ತಾಳೆ."

"ಇರಲಿ ಬಿಡಪ್ಪಾ, ಯಾವುದಾದರೊಂದು ಪುಸ್ತಕದ ಹೆಸರು ಹೇಳಿದರೆ, ಅದಕ್ಕೆ ಏನಾದರೊಂದು ಸುರುಮಾಡುತ್ತೀ ನೀನು!"

"ಆಯಿತು ಬಿಡು. ಈಗ ಯಾವುದನ್ನು ತಂದಿದ್ದೀ?"

"ಅವರೇ ಕೊಟ್ಟರು. ಟಾಲಸ್ಟಾಯಿಯವರ ಸಣ್ಣ ಕತೆಗಳು ಮತ್ತು ವಿಕ್ಟರ ಹ್ಯೂಗೋನ ಲಾ ಮಿಜರೇಬಲ್ಸ್ (Les Miserables)."

"ಓಹೋ, ಉತ್ತಮ ಪುಸ್ತಕಗಳು....ಹಾಂ, ಆಗಲಿ, ಮೊದಲು ಓದು, ಆಮೇಲೆ ಹೇಳುತ್ತೇನೆ" ಎಂದು ವಿದ್ಯಾಧರನು ಮಾತು ಮುಗಿಸುವುದರಲ್ಲಿ ಸುಶೀಲೆಯು ತನ್ನ ಕೊರಡಿಗೆ ಹೊರಟಳು. ಮತ್ತೆ ಹೇಳಿದ: "ಇಲ್ಲಿ ನೋಡು, ನಿನ್ನದು ಯುನಿವರ್ಸಿಟಿಯ ಪರೀಕ್ಷೆ ಬರಿ ಇಂತಹ ಪುಸ್ತಕಗಳನ್ನು ಓದುತ್ತ ಕೂಡ್ರಬೇಡ!"

ಸುಶೀಲೆ ಮತ್ತೆ ತಿರುಗಿ ವಿದ್ಯಾಧರನ ಕೊಠಡಿಗೆ ಬಂದು "ಗೊತ್ತಿಲ್ಲವೇ ನಿನಗೆ? ನಾನು ಎಂದು ಅಭ್ಯಾಸಮಾಡುವುದನ್ನು ಬಿಟ್ಟಿದ್ದೇನೆ? ನಿನ್ನ ವಾರ್ನಿಂಗ್ ಮೇಲಿಂದ ಮೇಲೆ ಇದ್ದೇ ಇದೆ."

"ಇರಲಿ, ಮಾತಿಗೆ ಕುಳಿತರೆ ಹೀಗೇ! ನಡೆ ಊಟ ಮಾಡೋಣ!"

"ಹೊಟ್ಟೆ ಹಸಿದೇ ಇಲ್ಲ. ಆಗಲೇ ಅವರ ಮನೆಯಲ್ಲಿ ಚಹಾ ಆಯಿತು. ಇಂದು ನಾನೇ ಮಾಡಿದೆ ಚಹಾ."

"ಓಹೋ, ಚಹಾ ಮಾಡುವುದನ್ನೂ ಕಲಿಸುತ್ತಾರೆಯೋ ನಿಮ್ಮ 'ಅಕ್ಕಾ' ಅವರು?"

"ಹಾಗಲ್ಲ. ಅವರ ಹಣೆಗೆ ಏನೋ ಆಗಿತ್ತು. ಒಬ್ಬ ಮಡುಗ ಪರಳಿನಿಂದ ಹೊಡೆದನಂತೆ. ಬಹಳ ನೋಯುವ ಹಾಗೆ ಕಾಣುತ್ತಿತ್ತು. 'ಈಗ ಊಟಕ್ಕೆ ಹೋಗುತ್ತೀನೆ, ಚಹಾ ಏತಕ್ಕೆ?' ಎಂದೆ. 'ಏನಾಯಿತು, ನನಗೂ ಬೇಕಾಗಿದೆ' ಎಂದು ಸ್ವೋ ಹೊತ್ತಿಸಿ ನೀರಿಟ್ಟು ಬಂದರು. ಉಳಿದದ್ದನ್ನು ನಾನು ಮಾಡಿದೆ!"

ಉತ್ಸುಕತೆಯಿಂದ ಕೇಳಿದ ವಿದ್ಯಾಧರ: "ಅವರೇ ಏನು ನಿಮ್ಮ ಮಿಸ್ಟ್ರೆಸ್...ಇಂದು ಮಿಲಿಟರಿ ಮೋಟಾರಿಗೆ ಆಹುತಿಯಾಗುತ್ತಿದ್ದರು!"

ಸ್ವಲ್ಪ ಗಾಬರಿಯಾಗಿ ಸುಶೀಲೆ ಕೇಳಿದಳು: "ಏಕೆ, ಏನಾಯಿತು?"

"ನೀನು ಅತ್ತ ಶಾಲೆಗೆ ಜೋದೆಯಲ್ಲ; ನಾನು Library ಕಡೆಗೆ ಹೋದೆ. ಮುಂಜಾನೆ ದಾರಿಯಲ್ಲಿ ಒಬ್ಬ ಹುಡುಗ ಗಲೋಲಿನಿಂದ ಗುಬ್ಬೀ ಹೊಡೆಯಲಿಕ್ಕೆ ಹೋಗಿ, ಅವರ ಹಣೆಗೆ ಹೊಡೆದುಬಿಟ್ಟ. ಹೊಡೆತ ಜೋರಾಗಿಯೇ ಬಿದ್ದಿರಬೇಕು. ಅವರು ಹಣೆಹಿಡಿದು ನಿಲ್ಲುವಷ್ಟರಲ್ಲಿ, ಹಿಂದೆ ಒಂದು ಮಿಲಿಟರಿ ಮೋಟಾರು ಬರುತ್ತಿತ್ತು. ಕಳ್ಳರು—ಅವರೂ ಜೋರಾಗಿಯೇ ಬಿಡುತ್ತಾರೆ. ಊರಲ್ಲ ಮೆಂದಿ ಮಕ್ಕಳು ಇರುವುದೇ ಇಲ್ಲ ಎಂದು ತಿಳಿದುಕೊಂಡಿದ್ದಾರೆಯೊ ಏನೋ! ಅವರು ಸರಿಯಾದ ಇದ್ದದ್ದನ್ನು ನೋಡಿ, ನಾನೇ ಸರಿಯೆಂದು ಜೋರಾಗಿಯೆ. ಒದರಿದೆ. ಆದರೂ ಅವರು ಸರಿಯುವ ಹಾಗೆ ಕಾಣಲಿಲ್ಲ ಓಡಿ ಹೋಗಿ ಅವರ ರಟ್ಟೆಯನ್ನು ಹಿಡಿದು ಎಳೆದೆ. ಸಂಕೋಚ ಎಷ್ಟೂ ಎನಿಸಲಿಲ್ಲ ನನಗೆ!"

"ಸಂಕೋಚವೇಕೋ ನನಗೆ ತಿಳಿಯದು....ಅದೂ ಜೀವಕ್ಕೆ ಧಕ್ಕೆ ಬಂದಾಗ. ನೀನು ಸಂಕೋಚ ಪಟ್ಟಿದ್ದರೆ ನಮ್ಮ ಅಕ್ಕಾ ಅವರನ್ನು ಕೊಲ್ಲುತ್ತಿದ್ದೆ- ಆ ಹುಡುಗ ಯಾರು? ನೋಡಲಿಲ್ಲವೇನೊ!"

"ಕೇಳಬಾರದೇ, ಹಣೆಯ ಮೇಲೆ ರಕ್ತ ಬರುತ್ತಿದ್ದರೂ, ಆ ಹುಡುಗನನ್ನು ಹೊಡೆಯಲು ನೆರೆದಿದ್ದ ನಾಲ್ಕಾರು ಜನರಿಗೆ 'ಹೊಡೆಯುವೆರೇಕೆ?' ಎಂದು, ಬಿಡಿಸಿಕೊಂಡು, ಅವನಿಗೆ 'ಇನ್ನು ಎಂದೂ ಗುಬ್ಬಿ ಹೊಡೆಯಬೇಡಪ್ಪಾ, ತಮ್ಮಾ!' ಎಂದು ಹೇಳಿ ಕಳುಹಿದಳು. ಎಂಥಾ ಮನುಷ್ಯಳವಳು!"

"ನಾನು ಹೇಳಲಿಲ್ಲನೇ ಎಷ್ಟು ಒಳ್ಳೆಯವರೆಂದು! ನಾನೊಮ್ಮೆ ಗೆಳತಿಯರ ಕೂಡ ಗೊಂದಲ ಹಾಕುವಾಗ ಹೊಸ ನಕಾಶವನ್ನು ಹರಿದೆ. ಅದಕ್ಕೆ ಅವರು ಏನೂ ಅನ್ನಲಿಲ್ಲ. 'ಗೊಂದಲ ಹಾಕುವ ಪರಿಣಾಮವಿದು; ಹೀಗೆ ಮಾಡಬೇಡಿರಿ ಇನ್ನು ಮೇಲೆ!' ಎಂದು ಸ್ವಲ್ಪವೂ ಸಿಟ್ಟಿಲ್ಲದೆ ಕ್ಲಾಸ್ ತೆಗೆದುಕೊಂಡರು."

"ಅವರ ಮನೆಯಲ್ಲಿ ಯಾರು ಯಾರು ಇರುತ್ತಾರೆ? ಅವರ ತಂದೆ ಏನು ಮಾಡುತ್ತಾರೆ? ಗೊತ್ತಿದೆಯೇ ನಿನಗೆ?"

"ಯಾರೂ ಇದ್ದ ಹಾಗಿಲ್ಲ. ತಾವೇ ಅಡಿಗೆ ಮಾಡಿಕೊಳ್ಳುತ್ತಾರೆ. ಅವರದು ಇನ್ನು ಮೇಲೆ ಅಡಿಗೆ. ಮುಂಜಾನೆ ಶಾಲೆ ಇದ್ದಾಗೆಲ್ಲ ಹೀಗೆಯೆ—ಜೀರಾ ಹೊತ್ತು."

"ನಾನು ಅವರನ್ನು ಯಾವುದೋ ಕಾಲೇಜಿನ ಹುಡುಗಿ ಇರಬೇಕೆಂದು ತಿಳಿದಿದ್ದೆ. ಇಂಥ ಏನು ಅಡಿಗೆ ಮಾಡುತ್ತಾರೆ ಅವರು? ಹಣೆಯ ನೋವೇ ಹೆಚ್ಚಾಗಿರಬೇಕು. ನೀನು ಅವರನ್ನು ಊಟಕ್ಕೆ ಕರೆಯಬಾರದೇ.... ಇಷ್ಟು ಸಲುಗೆ ಇದ್ದ ಬಳಿಕ! ಸರಿವಂತ ಹುಡುಗಿಯರಿಗೆ ಸೊಕ್ಕೇ ಬಹಳ!"

"ಹೌದು ನೋಡಣ್ಣಾ. ನನಗೆ ಹೊಳೆಯಲೇ ಇಲ್ಲ!"

ಹೇಗೆ ಹೊಳೆದೀತು. ಯಾರ ಯೋಚನೆ ನಿಮಗೆ? ಮನೆಯಲ್ಲಿ ಬೇಕಾದ ಹಾಗೆ ಇರುತ್ತೀರಿ. ನಾವು ನೆಟ್ಟಗಿದ್ದೇವೆಂದು ಯಾರನ್ನೂ ಅಲಕ್ಷ್ಯಮಾಡಬಾರದು!"

"ಹೀಗೆ ಇನ್ನು ಮುಂದೆ ಮಾಡುವುದಿಲ್ಲ. ಏಕೆ? ನಮ್ಮ ಅಕ್ಕಾ ಅವರ ಬಗ್ಗೆ ನಿನಗೆ ಬಹಳ ಹತ್ತಿದೆ. ನಾನು ಶಾಲೆಯಿಂದ ಬಂದಾಗ ನೀನು ಅದನ್ನೇ ವಿಚಾರ ಮಾಡುತ್ತಿದ್ದೆಯೇನು ಮತ್ತೆ?" ಎಂದು ನಗುತ್ತ ತನ್ನ ಕೊಠಡಿಗೆ ಹೊರಟಳು.

"ಛೆ, ಅದೇನೂ ಇಲ್ಲ" ಎಂದು ಮುಗುಳುನಗೆ ನಕ್ಕು ಸುಶೀಲೆ ತನ್ನ ಕೋಣೆಯನ್ನು ಸೇರುತ್ತಿರುವಾಗಲೆ "ಅವರ ಹೆಸರು ಗೊತ್ತಿದೆಯೇ ನಿನಗೆ?" ಎಂದು ಕೇಳಿದ ವಿದ್ಯಾಧರ.

"ಓಹೋ, ನನಗೆ ಕಲಿಸುತ್ತೀಯಲ್ಲವೇ?" ಎಂದು ತನ್ನ ಮೇಜಿನ ಮೇಲೆ ಪುಸ್ತಕವನ್ನು ಒಗೆದು ಬಂದು ನಿಂತು, ಮತ್ತೆ ಎಂದಳು: "ಅಣ್ಣ, ನೀನವರನ್ನು ಳಿಸಿದ ಬಳಿಕ ಅವರೇನೂ ಎನ್ನಲಿಲ್ಲವೇ?"

"ನಿಮ್ಮ ಉಪಕಾರ ಬಹಳವಾಯಿತು– ಎಂದಳಷ್ಟೇ; ನಾನವಳ ಹೆಸರನ್ನು ಕೇಳಲೇ? ಗೊತ್ತಿದ್ದರೆ ಹೇಳು—ಎಂದು ನಿನ್ನನ್ನು ಕೇಳಿದೆ."

"ದುರ್ಗಾದೇವಿ–ಎಂದವರ ಹೆಸರು."

"ದುರ್ಗಾ!" ಎಂದು ವಿದ್ಯಾಧರ ಪುನರುಚ್ಚಾರಣೆ ಮಾಡುವುದರೊಳಗಾಗಿ, ಸುಶೀಲೆ ಅಡುಗೆ ಮನೆಯನ್ನು ಕಂಡಿದ್ದಳೋ ಏನೋ!

೨

ವಿದ್ಯಾಧರ ತುಂಬ ಶ್ರೀಮಂತ ಮನೆತನದವನಾದರೂ ಒಂದು ತರದ ವ್ಯಕ್ತಿ. ಶ್ರೀಮಂತ ಮನೆತನಕ್ಕೆ ತಕ್ಕಂತೆ ನಡೆನುಡಿಗಳು ಇರಬೇಕೆಂದು ಅವನು ಎಂದೂ ಭಾವಿಸಿರಲೆ ಇಲ್ಲ. ಸರಳ ಮನುಷ್ಯ. ಕಣ್ಣಿಗೆ ಕಂಡಂತೆ ವಿಚಾರಕ್ಕೆ ತಕ್ಕಂತೆ ನಡೆದುಕೊಳ್ಳುವವ. ಬಹು ವಿಚಾರವಾದಿ. ತಾನೇನಾದರೂ ಹೇಳುತ್ತಿರುವಾಗ ಯಾರಾದರೂ ಪೂರ್ಣ ಕೇಳದಿದ್ದರೆ, ವಿಚಾರಕ್ಕೆ ಸರಿಯಾಗಿ ಹೋಗದಿದ್ದರೆ, ಎಂದೂ ಇಲ್ಲದ ಸಿಟ್ಟು ಬರುತ್ತಿತ್ತು. ಅವನ ತಂದೆಯವರು, ಮಗನು ಡಾಕ್ಟರನಾಗಿ ತಮ್ಮ ವೃತ್ತಿಯನ್ನೆ ಸಾಗಿಸಬೇಕೆಂದು ಹಟ ಹಿಡಿದಾಗ, ಅವನಿಗೆ ತಡೆಯಲಿಲ್ಲ. ಡಾಕ್ಟರನಾಗಲು ಬೇಕಾದ ಗುಣಗಳೇ ತನ್ನಲ್ಲಿ ಇಲ್ಲವೆಂದೂ ತನ್ನ ಮನಸ್ಸೇ ಆ ಕಡೆಗೆ ಇಲ್ಲವೆಂದೂ ತಾನೆಂದೂ ಡಾಕ್ಟರನಾಗಲಾರನೆಂದೂ ಹೇಳಿಬಿಟ್ಟ. ಇದ್ದ ಒಬ್ಬನೇ ಒಬ್ಬ ಮಗನು ಡಾಕ್ಟರನಾಗಲಿಲ್ಲವೆಂಬ ಸಿಟ್ಟು ಇನ್ನೂ ಇಳಿದಿಲ್ಲ ಡಾಕ್ಟರರಿಗೆ. ವಿಚಾರವಿನಿಮಯವಾಡಿ ತಮಗೆ ಒಳಿದ್ದ ಹಾದಿ ಹಿಡಿಯಬೇಕು; ಇಂಥದರಲ್ಲಿ ಕೂಡ ಸ್ವತಂತ್ರತೆಯನ್ನು ಕೊಡದೆ ತಾವು ಹಾಕಿಕೊಟ್ಟಂತೆಯೆ ಆಗಬೇಕೆಂಬುದು ವಿದ್ಯಾಧರನಿಗೆ ಎಳ್ಳಷ್ಟು ಮನಸ್ಸಿಗೆ ಒಂದಿರಲಿಲ್ಲ. ತಾನೊಬ್ಬ ಪ್ರೊಫೆಸರನಾಗುವೆನೆಂದಾಗ ಅವನ ತಂದೆಯವರು 'Very Poor Job' ಎಂದದ್ದನ್ನು ಕೇಳಿಯಂತೂ ಮನಸ್ಸು ತಳಮಳಿಗೊಂಡಿತ್ತು. ಅವನಿಷ್ಟು ಕಾಲೇಜಿನ ಜೀವನ ಮುಗಿಯಿಸಿದ್ದರೂ, ಮುಂಬಯಿಯಲ್ಲಿ ವೈದ್ಯಕ ಕಲಿಯಲು ಇದ್ದ ಗೆಳೆಯನ ಹೊರತು ಬೇರೆ ಯಾರೂ ಗೆಳೆಯರೇ ಇರಲಿಲ್ಲ. ತಾನಾಗದಿದ್ದರೂ ತನ್ನ ಅತ್ಯೀಯ ಗೆಳೆಯನೊಬ್ಬನು ಡಾಕ್ಟರನಾಗುವನಲ್ಲ—ಎಂಬ ಸಮಾಧಾನವಿದ್ದರೂ ಇಂಬೇಕು. ಅಟ್ಟದ ಮೇಲಿನ ತನ್ನ ಕೊಠಡಿಯ ಕಿಟಕಿಯ ಬಾಗಿಲನ್ನು ತೆರೆದು, ಒಂದು ಆರಾಮು ಕುರ್ಚಿಯ ಮೇಲೆ ಓದುತ್ತ ಕುಳಿತಿರುವುದು ಅವನಿಗೆ ಬಲು ಸೇರುತ್ತಿತ್ತು. ಎಂ. ಎ. ಎರಡನೆಯ ವರ್ಗ ಹೊಡೆದಿದ್ದರೂ 'ಪ್ರೊಫೆಸರ ಚಾನ್ಸ್' ಬಂದಿರಲೇ ಇಲ್ಲ.

ದುರ್ಗಾದೇವಿಯ ಹಣೆಗೆ ಹೊಡೆತ ಬಿದ್ದ ಘಟನೆಯು ಎಷ್ಟೇ ಆಕಸ್ಮಾತ್ತಾಗಿ ಸಂಭವಿಸಿದ ಸಣ್ಣ ಸಂಗತಿಯಾಗಿದ್ದರೂ, ವಿದ್ಯಾಧರನ ಮೇಲೆ ಅದು ತುಂಬ ಪರಿಣಾಮವನ್ನುಂಟುಮಾಡಿದ್ದಿತು. ಆವಾಗಿ ೧೦-೧೫ ದಿವಸಗಳು ಕಳೆದರೂ ಆಕೆಯನ್ನೇನೂ ನೋಡಿರಲಿಲ್ಲ. ಆ ದಿನವೇ ೫-೧೦ ನಿಮಿಷ ಮಾತ್ರ ನೋಡಿದ್ದ. ಆ ಸುಂದರ—ಶಾಂತ— ಮೊಗವನ್ನು ನೆನೆಯಿಸಿಕೊಂಡಾಗ—'ಕರುಣಾದೇವಿ ಒಮ್ಮಿಂದೊಮ್ಮೆಲೆ ಭೆಟ್ಟಿಯಾಗಿ ಮಾಯವಾಗಿ ಬಿಟ್ಟದ್ದಾಳೆ' ಎಂದೆನಿಸಿತು. ಸುಶೀಲೆ ದಿನಾಲು ಆಕೆಯ ಬಗ್ಗೆ ಹೇಳುತ್ತಿದ್ದ ಮಾತುಗಳು ಆಕೆಯ ಬಗ್ಗೆ ಅದರವನ್ನೂ ಕುತೂಹಲವನ್ನೂ ಹೆಚ್ಚಿಸುತ್ತ ಹೋದುವು.

ಅಂದು ಮಧ್ಯಾಹ್ನ ೪ ಗಂಟೆಯ ಸಮಯಕ್ಕೆ ಚಹಕ್ಕಾಗಿ ವಿದ್ಯಾಧರ ದಾರಿ ಕಾಯುತ್ತಿದ್ದ. ಅಷ್ಟರಲ್ಲಿ ಸುಶೀಲೆ ಬಂದು 'ಅಣ್ಣಾ, ಇಂದು ಕಾಲೇಜಿನ ಚರ್ಚಾಸಂಘದ ಪರವಾಗಿ 'ಡಿಬೇಟ್' ಇದೆಯಂತೆ, ಬರುತ್ತೀಯಾ? ನಮ್ಮ ದುರ್ಗಾದೇವಿಯವರೂ ಭಾಗವಹಿಸಿದ್ದಾರೆ. ಪ್ರಿನ್ಸಿಪಾಲರು ಅಧ್ಯಕ್ಷರು. ಅದಕ್ಕೆ ನಾನು ಹೋಗಬೇಕೆಂದು ಇಂದು ಶಾಲೆಯಿಂದ ಬೇಗನೆ ಬಂದಿರುವೆ" ಎಂದು ಒಂದೇ ಉಸಿರಿನಲ್ಲಿ ಹೇಳಿದಳು.

"ವಿಷಯವೇನು ಕೇಳಿಲ್ಲವೇ?"

"Legal and Moral Bondages of man (ಮಾನವನ ಮೇಲಿರುವ ಕಾಯಿದೆ ಮತ್ತು ನೀತಿಗಳ ಬಂಧನಗಳು)"

"ಅಡ್ಡಿ ಇಲ್ಲ. ನಿಮ್ಮ ಪ್ರೀತಿಯ ಅಕ್ಕಾ ಅವರು ಭಾಗವಹಿಸಿರುವರಲ್ಲವೇ? ಹಾಗಾದರೆ ಹೋಗೋಣ! ಚಹಾ ಆಗಿದೆಯೇನು ನೋಡು, ಆಗಲೇ ಹೇಳಬಂದಿದ್ದೆ!" ಎಂದು ಸುಶೀಲೆಯನ್ನು ಕಳಿಸಿ ತಾನು ಬಟ್ಟೆ ಧರಿಸಲು ಎದ್ದ.

ಐದುಗಂಟೆಯಾಗಿ ಹೋಗಿದ್ದಿತು. ಸುಶೀಲೆಯೊಡನೆ ವಿದ್ಯಾಧರ ಬಂದಾಗ, ಕಾಲೇಜಿನ ಎಡಗಡೆಯ ಗ್ಯಾಲರಿಹಾಲು ಶ್ರೋತೃವೃಂದದಿಂದ ತುಂಬಿಹೋಗಿದ್ದಿತು. ಚರ್ಚೆಯಿನ್ನೂ ಪ್ರಾರಂಭವಾಗಿರಲಿಲ್ಲ. ಬದಿಗಿದ್ದ ಒಂದೇ ಕುರ್ಚಿಯ ಮೇಲೆ ತನ್ನ ತಂಗಿಯನ್ನು ಕುಳ್ಳಿರಿಸಿ, ತಾನು ಹಿಂದೆ ನಿಂತುಕೊಂಡ ವಿದ್ಯಾಧರ. ಸುಶೀಲೆ ಮುಖ ಮೇಲೆನಾಡಿ ಅಣ್ಣನಿಗೆ ಹೇಳಿದಳು: "ಆ ಕಡೆಯ ಸೀರೆ ಉಟ್ಟವರೇ ನಮ್ಮ ಮಿಸ್ಟೆಸ್" ಎಂದು. ವಿದ್ಯಾಧರ

ಅವಳು ಡಾಬಿನಾಗದೆ. ದಿಕ್ಕೆಟ್ಟವರಂತೆ ನೋಡಿದಳು. "ಹೌದು" ಎಂದಳು ಕೊನೆಗೆ. ಅಷ್ಟೆ ಹೇಳಿದಳು. ಅಷ್ಟೆ ಹೇಳಲು ಅವಳಿಗೆ ಸಾಧ್ಯವಾಯಿತು. ಅಷ್ಟೆ ಹೇಳಲು ಅವಳಿಗೆ ಸಾಧ್ಯವಾಗಿತ್ತು.

ಅವಳ ಮುಖದಲ್ಲಿ ಅಸಹ್ಯ ಮೂಡಿತು. ಅಸಹ್ಯವೋ ಅಥವಾ ಅಸಹ್ಯವನ್ನು ಮರೆಮಾಚುವ ಪ್ರಯತ್ನವೋ ಎಂಬಂತೆ ಅವಳ ಮುಖ ಕೆಂಪಾಯಿತು. ಅವಳು ಕಣ್ಣು ಮುಚ್ಚಿಕೊಂಡಳು. ಅವಳ ಕಣ್ಣುಗಳಲ್ಲಿ ಕಣ್ಣೀರು ಜಿನುಗ

"ಎಲ್ಲದರಲ್ಲೂ ನಿರ್ಬಂಧ ಸರಿಯಾಗುವುದಿಲ್ಲ. ನಿರ್ಬಂಧ ಮಾಡಿದರೆ ಅದನ್ನು ಒಡೆಯಬೇಕೆನ್ನುವುದು ಮನುಷ್ಯನ ಸ್ವಭಾವವೇ; ಅಲ್ಲದೆ ಯಾರಿಗೂ ಕಾಣದಂತೆ ದುಷ್ಕೃತಿಯನ್ನು ನಡೆಯಿಸುವನು. ಮನುಷ್ಯನಲ್ಲಿ ಯಾವುದು ಸರಿ ಎಂದು ತೂಕ ಮಾಡುವ ಬುದ್ಧಿ ಬರಬೇಕು. ಅವನ ತಪ್ಪಿಗಾಗಿ ಒಮ್ಮೆ ಮನಸ್ಸಿಗೆ ಶಿಕ್ಷೆಯಾಯಿತೆಂದರೆ, ಅವನು ದಾರಿಗೆ ಹತ್ತುತ್ತಾನೆ. ಮನಸ್ಸಿಗಾಗುವ ಶಿಕ್ಷೆಗಿಂತ ಮನುಷ್ಯನಿಗೆ ಬೇರಾವ ಶಿಕ್ಷೆ ಹೆಚ್ಚಿನದಲ್ಲ. ಅಂತಹ ಶಿಕ್ಷೆಯನ್ನು ಅನುಭವಿಸದಿದ್ದರೆ, ದೇವರು ಅಂತಹದನ್ನು ಒಮ್ಮೆಯಾದರೂ ಕೊಡಲೇಬೇಕು!"

"ನೀವು ಹೇಳಿದಂತೆ, ತಿಳಿದುಕೊಳ್ಳುವಷ್ಟು ಬುದ್ಧಿಯುಳ್ಳವಳೆ ನನ್ನ ಜನರಲ್ಲಿಲ್ಲ ಈ ಜನರು ಯೋಚಿಸುವುದು, ಹೇಗೆ ನಡೆಯಬೇಕು?—ಯಾವುದು ಸರಿ?—ಎನ್ನುವದಲ್ಲ. 'ಹೇಗೆ ದುಡಿದರೆ ಹೊಟ್ಟೆ ತುಂಬೀತು? ಇಂದು ಏನು ಮಾಡೋಣ? ನಾಳೆ ಏನು ಗತಿ?' ಎಂಬುದು!"

"ನಿಜ. ಹೊಟ್ಟೆ ಹೇಗೆ ತುಂಬಿಕೊಳ್ಳಬೇಕೆಂಬುದೇ ಬೊಡ್ಡ ಸಮಸ್ಯೆಯಾದಾಗ, ಜನಕ್ಕೆ ನೈತಿಕತೆಯ ಹದಿಯ ಮೇಲೆ ನಿಲ್ಲಿರಿ ಎಂದು ಹೇಳುವುದು ಸ್ವಲ್ಪ ಮೂರ್ಖತನದ ಮಾತೇ ಸರಿ. ಆದರೆ ನಾನಿಂದು ಹೇಳಬೇಕೆಂದಿರುವುದು ಕಲಿತ ವರ್ಗಕ್ಕೆ. ಇವರೇ ನಿಮ್ಮ ನಾಳೆಯ ಸಮಾಜದ ಆಧಾರಸ್ತಂಭಗಳು. ಅಧಿಕಾರ ವರ್ಗವಂತೂ ಎಲ್ಲಾ ಇವರೇ. ಅಧಿಕಾರಬಲದಿಂದ ತಮ್ಮ ಸ್ವಾರ್ಥ ಸಾಧಿಸುತ್ತಿದ್ದರೆ ಎಂತಹ ಅನ್ಯಾಯ ನೋಡಿರಿ! ಅವರು ಕಲಿತವರು, ತಿಳಿದವರು ಎಂದು ನಾವು ಭಾವಿಸುತ್ತೇವೆ. ಆದರೆ ಅವರೇ ತಿಳಿಯದ, ಕಲಿಯದ ಜನ ಮಾಡದ ತಪ್ಪುಗಳನ್ನು ಮಾಡುತ್ತಾರೆ. ತಮ್ಮ ಪ್ರತಿಷ್ಠೆಗಾಗಿ ಅಥವಾ ಹಿರಿಯತನದ ಪ್ರದರ್ಶನಕ್ಕಾಗಿ ಏನಾದರೊಂದು ಅಧಿಕಪ್ರಸಂಗತನ ಮಾಡುತ್ತಾರೆ. ಹುಂಬ ಜನರು ಮಾಡುವದಕ್ಕಿಂತ ಹೆಚ್ಚಾಗಿ ಕಲಿತವರು— ತಿಳಿದೂ— ತಪ್ಪು ಮಾಡುತ್ತಾರೆ. ಅವರನ್ನು ರಾಜಕೀಯ ಕಟ್ಟಳೆಗಳು ಬಿಗಿಯಲಾರವು. ಜನರ ಅಜ್ಞಾನ ಅವರಿಗೆ ಸಾಧಕ."

"ರಾಜಕೀಯ ಕಟ್ಟಳೆಗಳು ಹೆಚ್ಚು ಫಲಕಾರಿಯಾಗದ್ದಕ್ಕೆ ಕಾರಣ, ಮನುಷ್ಯನಲ್ಲಿಯ ನಿಷ್ಪಕ್ಷಪಾತತನದ ಅಭಾವ!"

"ಅಂತೆಯೇ ಹೇಳುತ್ತೇನೆ. ಆ ನಿಷ್ಪಕ್ಷಪಾತತನದ ಘೋರಣ ಬರಬೇಕಾದರೆ, ಮನುಷ್ಯನಲ್ಲಿ — ನಾನೇನೂ ಸಂಪೂರ್ಣ ಎನ್ನುವದಿಲ್ಲ, ಅಷ್ಟೆ ನಿರೀಕ್ಷಿಸುವುದು ಅಸಾಧ್ಯವೇ ಸರಿ—ಸಾಧ್ಯವಾದಷ್ಟು ನೈತಿಕ ಬೆಂಬಲ ಬೇಕೇಬೇಕು. ರಾಜಕೀಯ ಕಟ್ಟಳೆಗಳು ಎಷ್ಟೋ ಫಲಕಾರಿ. ನಮ್ಮ ಸಮಾಜ ಸುಸೂತ್ರ ಸಾಗುವುದು ಅವುಗಳಿಂದಲೇ; ಆದರೆ ಅವು ಮತ್ತಿಷ್ಟು ಫಲಕಾರಿಯಾಗಬೇಕಾದರೆ ನೈತಿಕ ಬೆಂಬಲ ಅವಶ್ಯ ಯಾವ ದಕ್ಕೂ ಇದು ಇರಬೇಕಾದ್ದೇ. ಅದಕ್ಕೇ ಮನುಷ್ಯನ ಎಲ್ಲ ದೃಷ್ಟಿಗಳಲ್ಲಿ ನೈತಿಕ ದೃಷ್ಟಿ ಮುಖ್ಯವಾದದ್ದು —ಎಂದು ನಾನೆನ್ನುವುದು!"

"ನೀವೇನೂ ಇಂದು ಸಣ್ಣ ಭಾಷಣ ಮಾಡುತ್ತಿದ್ದಿಲ್ಲ ಬಿಡಿರಿ. ನಾನು ಸಹಜವಾಗಿ ಕೇಳಿದ್ದಕ್ಕೆ ಇಷ್ಟು ಹೇಳಿದಿರಿ. ಇನ್ನೂ ಏನೇನು ಹೇಳಬೇಕೆಂದು ಮಾಡಿದ್ದಿರೊ!" ಎಂದೆನ್ನುತ್ತಿರುವಷ್ಟರಲ್ಲಿ ಕಾಲೇಜಿನ ಗದಿಯಾರ ಎಂಟು ಹೊಡೆಯಿತು.

"ಅಣ್ಣಾ, ನೀನು ಮಾತನಾಡಹತ್ತಿದರೆ ಹೀಗೆಯೇ. ಯಾವುದರದೂ ಪರಿವೆ ಇರುವುದಿಲ್ಲ. ನೋಡಿದೆಯಾ ಎಷ್ಟು ಹೊತ್ತಾಯಿತು!" ಎಂದು ನುಡಿದಳು ಸುಶೀಲಾ.

"ಆಗಲಿ ನಡೆಯಿರಿ ಹೋಗೋಣ" ಎಂದ ವಿದ್ಯಾಧರ

"ಅಕ್ಕಾ ಅವರೇ, ಈಗ ಎಂಟು ಹೊಡೆದಿದೆ, ಹೊತ್ತಾಯಿತು ನಮ್ಮ ಮನೆಗೆ ಹೋಗೋಣ! ಇನ್ನು ಹೋಗಿ ಅಡಿಗೆಮಾಡುವುದೆಂದರೆ ಎಷ್ಟು ಹೊತ್ತಾಗುವುದೋ! ನಮ್ಮಲ್ಲಿಗೇ ಹೋಗೋಣ ನಡೆಯಿರಿ" ಎಂದು ಸುಶೀಲೆ ಒತ್ತಾಯಪಡಿಸಹತ್ತಿದಳು.

"ಓಹೋ, ನೀವೇ ಅಡಿಗೆಮಾಡುತ್ತೀರೇನು?" ಎಂದು ಗೊತ್ತಿಲ್ಲದವನಂತೆ ವಿದ್ಯಾಧರನೆಂದ.

"ಕ್ಷಮಿಸಿರಿ, ಇಂದು ನನ್ನದು ಉಪವಾಸ" ದುರ್ಗಾ ಎಂದಳು.

"ದೇವರು-ದಿಂಡರಲ್ಲಿ ಭಕ್ತಿ ಬಹಳ ಏನು ನಿಮ್ಮದು?" ಎಂದ ವಿದ್ಯಾಧರ.

"ಹಾಗೇನೂ ಇಲ್ಲ ಯಾವ ದೇವರ ಹೆಸರಿನಿಂದಲೂ ಮಾಡುವುದಿಲ್ಲ; ವಾರದಲ್ಲಿ ಒಂದುದಿನ ಉಪವಾಸಮಾಡುವುದು ಸಟ್ಟಗೆನಿಸುವುದರಿಂದ ಶನಿವಾರ ಮಾಡುವೆ. ಯಾವ ವಾರವಾದರೇನು? ನೆಪಲಾಗಿ ಅಡಿಗೆಮಾಡುವುದು ತಪ್ಪುತ್ತದೆ!".

"ಅಡಿಗೆಮಾಡುವುದು ತಪ್ಪುತ್ತದೆಂದು ಉಪವಾಸವಾಡುವುದಾದರೆ, ನಮ್ಮಲ್ಲಿಗೇ ಹೋಗೋಣ ನಡೆಯಿರಿ!"

"ನಿಜವಾಗಿಯೂ ನಾನು ಉಪವಾಸಮಾಡುವೆನು!"

"ಹಾಗಾದರೆ ಸ್ವಲ್ಪ ಫಲಾಹಾರ ಮಾಡಬಹುದಲ್ಲ!" ಎಂದು ಸುಶೀಲೆ ಒತ್ತಾಯಪಡಿಸಹತ್ತಿದಳು.

"ಒಲ್ಲೆ, ದಯಮಾಡಿ ಕ್ಷಮಿಸಿರಿ. ಮತ್ತೆಂದಾದರೂ. . . ."

"ಏಕೆ? ನೀವು ಬಾರದಿರುವ ಕಾರಣ ತಿಳಿಯಲೊಲ್ಲದು; ನಾಚುವಿರೇನು?" ವಿದ್ಯಾಧರ ಕೇಳಿದ.

"ನಾಚಿಕೆ, ಹೆದರಿಕೆ ಎಂದೂ ಇಲ್ಲ. ಕ್ಷಮಿಸಿರಿ. ಸುಶೀಲಾ, ಇನ್ನೆಂದಾದರೂ ಬರುವೆ. ಅದೇನು ಮಹತ್ತ್ವದ ಮಾತು! ನಮಸ್ಕಾರ" ಎಂದು ಹೊರಟೇಬಿಟ್ಟಳು. ವಿದ್ಯಾಧರ ತಡೆಯಲಿಲ್ಲ. ಸುಶೀಲೆ ಅವಳು ಬರುವಂತೆ ತಿಳಿದಿದ್ದಳು. ನಿರಾಶೆಯಾಯಿತವಳಿಗೆ. ವಿದ್ಯಾಧರ ಕೆಲವುಹೊತ್ತು ದಂಗುಬಡೆದವರಂತೆ ನಿಂತುಬಿಟ್ಟ. ಕತ್ತಲೆಯಾಗಿದ್ದರೂ, ದುರ್ಗಾ ಹೋದ ಬಳಿಕ ಮತ್ತಿಷ್ಟು ಕಾರ್ಗತ್ತಲೆಯಾವಂತೆನಿಸಿತವನಿಗೆ.

೩

ಎಂದಿಗಿಂತಲೂ ಹೆಚ್ಚಾಗಿ ಈಗ ವಿದ್ಯಾಧರನಿಗೆ ಆ 'ದುರ್ಗಾ'ನ ಬಗ್ಗೆ ವಿಚಾರಗಳು ಬರತೊಡಗಿದುವು. ವಿಚಾರ ಮಾಡಿದ ಹಾಗೆ ಆಕೆ ಒಂದು ದೊಡ್ಡ ವ್ಯಕ್ತಿ ಎಂದನಿಸಿತು. ರಸತುಂಬಿದ ಹೊಸ

ತಾವರೆಯಂತೆ ಎದ್ದು ಕಂಡುಬರುವ ಸುಂದರ ರೂಪ, ಇನಿದಾದ ಕಂಠ, ವಿನಯಪೂರಿತವಾದ ಮಾತುಗಳು, ತೀಕ್ಷ್ಣ ವಿಚಾರ ಇವುಗಳೆಲ್ಲವೂ ಇವೆಯೆಂದಮೇಲೆ ಅಸಾಧಾರಣ ವ್ಯಕ್ತಿಯೇನೋ ಸರಿ. ಆದರೂ ಆಕೆಯಾಡಿದ ಮಾತುಗಳನ್ನು ನೆನೆದುಕೊಂಡಾಗ, "ಆಕೆಯದು ಸೌಖ್ಯದ ಜೀವನವಲ್ಲ. ಆಕೆಯ ಮಾತುಗಳಲ್ಲಿ ಒಂದು ತರದ ದುಃಖ ಎದ್ದು ಕಂಡುಬರುತ್ತದೆ. ವಯಸ್ಸಾದರೂ ೨೧-೨೨ ಇರಬೇಕು. ಇಷ್ಟು ಚಿಕ್ಕ ವಯಸ್ಸಿನಲ್ಲಿಯೇ ಒಬ್ಬ ತತ್ತ್ವಜ್ಞಾನಿಯಂತೆ ಆಗಿ ಬಿಟ್ಟಿದ್ದಾಳೆ. ಹುಡುಗರು ಎಷ್ಟೊಂದು ಗೊಂದಲ ಹಾಕಿದರೂ ಆಕೆ ಎಷ್ಟು ವಿನಯವಾಗಿ ಮಾತಿಗಾರಂಭಿಸಿದಳು. 'ನಾನು ಉತ್ಕಟತೆಯಿಂದ ಹೇಳಬೇಕೆಂದಾಗ ನೀವು ನಗೆಯಾಡುವಿರಿ. ಮನುಷ್ಯನಿಗೆ ಇದಕ್ಕಿಂತ ಹೆಚ್ಚಿನ ದೌರ್ಭಾಗ್ಯ ಮತ್ತೊಂದಿರಲಿಕ್ಕಿಲ್ಲ' ಹೌದು, ನಿಜ..ತನ್ನ ದನ್ನು ತೋಡಿಕೊಳ್ಳುವುದನ್ನು ನೋಡಿದರೆ ಜಗತ್ತು ನಿಜವಾಗಿಯೂ ಲಕ್ಷ್ಯ ಕೊಡುವುದಿಲ್ಲ, ನಗೆಯಾಡುತ್ತದೆ. ನಮಗೆ ಎನಿಸಿದಷ್ಟು ಜನರೇಕೆ ತಿಳಿದುಕೊಂಡಾರು? ಮನುಷ್ಯಗಾದಷ್ಟು ದುಃಖ ಅವನಿಗೇ ಸರಿ. ಆ ದುಃಖದಲ್ಲಿ ಮನುಷ್ಯನಿಗಾಗಿ ದೇವರು ಒಂದು ಆಶೀರ್ವಾದದ ವಚನವನ್ನಿತ್ತಿರುತ್ತಾನೆ. ಅದನ್ನು ಅವನು ಜೀನ್ಯಾಗಿ ತಿಳಿಯಬೇಕು. ಪೃತ್ಪೂರ್ವಕವಾಗಿ ಸ್ವೀಕರಿಸಬೇಕು. ಅಂದರೇನೆ ಅವನಿಗೆ ಅಜ್ಞಾನಾಂಧಕಾರದಲ್ಲಿ ಒಂದು ತರದ ಬೆಳಕಾಗುತ್ತದೆ. ಆ ಬೆಳಕು ಎಂತಹ ಕತ್ತಲೆಯಲ್ಲಿ ಹೊರಟರೂ ಸಹಕಾರಿಯಾಗುತ್ತದೆ..ಇಂಥ ಬೆಳಕನ್ನು ಕಂಡ ಮನುಷ್ಯನ ಅನುಭವದ ಮಾತುಗಳನ್ನು ಜಗತ್ತು ಕೇಳುವುದೂ ಇಲ್ಲ ವಿಚಾರ ಮಾಡುವುದೂ ಇಲ್ಲ....ಯಾವುದಾದರೂ ಒಂದು ವಿಷಯದಲ್ಲಿ ಮನುಷ್ಯ ವಿಚಾರ ಮಾಡದಿದ್ದರೆ, ತನ್ನ ಕರ್ತವ್ಯವನ್ನು ಮರೆತಂತೆಯೇ ಸರಿ. ಕರ್ತವ್ಯ ಮರೆತರೆ ಅವನಿಗೆ ಒಪ್ಪಿಯಾದರೂ ಶಿಕ್ಷೆಯಾಗಲೇಬೇಕು. ಆ ಮೇಲಾದರೂ ಅವನು ಆದನ್ನು ಮರೆಯುವುದಿಲ್ಲ...

..ಆಕೆ ನಮ್ಮ ಮನೆಗೇಕೆ ಊಟಕ್ಕಾಗಲಿ ಫಲಹಾರಕ್ಕಾಗಲಿ ಬರಲಿಲ್ಲ? ರಾತ್ರಿಯ ವೇಳೆಯೆಂದು ಬಿಟ್ಟಳೇ? ಇರಲಿಕ್ಕಿಲ್ಲ ನಾಚಿಕೆ, ಹೆದರಿಕೆ ಇಲ್ಲವೆಂದು ದಿಟ್ಟತನದಿಂದ ಹೇಳುವವಳು. ಹೀಗೆಂದು ನೆಪ ಹೇಳಲಾರಳು. ಸುಶೀಲೆಯ ಸಲುಗೆಯಿಂದ ಮೇಲೆ...." ಮುಂತಾಗಿ ವಿಚಾರಮಗ್ನನಾದ ವಿದ್ಯಾಧರನಿಗೆ, ಅವಳ ಆ ಶಾಂತ ಮೊಗದ ದರ್ಶನವಾದಾಗ ವಿಲಕ್ಷಣ ಅಸಂಪನ್ನವಾಗುತ್ತಿದ್ದಿತು.

ಶಾಲೆಯಿಂದ ಸುಶೀಲೆ ಬಂದು ಕೇಳಿದಳು: "ಅಣ್ಣಾ, ಇನ್ನೂ ಅಡ್ಡಾಡಲು ಹೊರಟಿಲ್ಲವೇ?"

ತಾಯಿಯನ್ನು ಎಂದೋ ಕಳೆದುಕೊಂಡಿದ್ದ ಅಣ್ಣ-ತಂಗಿಯರಿಗೆ ಪರಸ್ಪರರನ್ನು ಬಿಟ್ಟರೆ ಪ್ರೀತಿಯಿಂದ ಮಾತನಾಡುವವರಾರೂ ಇರಲಿಲ್ಲ.

'ಈಗ ಹೊರಡಬೇಕೆಂದಿದ್ದೆ. ನೀನು ಎಷ್ಟು ಬೇಗ ಬಂದಿದ್ದಿಯೆ?" ಎಂದ ವಿದ್ಯಾಧರ.

"ಬೇಗ ಏನು? ಆರು ಹೊಡೆಯಲು ಬಂದಿತು" ಸ್ವಲ್ಪ ಸುಮ್ಮನಿದ್ದು ನುತ್ತೆ ನುಡಿದಳು: "ನಮ್ಮ ಮನೆಗೆ ಊಟಕ್ಕೆ ಬರಬೇಕಾಗುತ್ತದೆಂದು ಉಪವಾಸ ಎಂದು ಹೇಳಿದರು ಕಾಣಿಸುತ್ತದಲ್ಲವೇ—ಪೊನ್ನೆ—ನಮ್ಮ ಅಕ್ಕಾ ಅವರು?"

"ಏಕೆ?..ಇದ್ದರೂ ಇರಬಹುದು....ಸರಿ, ಅವರು ನಿಮಗೆ ಕಲಿಸುತ್ತಾರೆ ಹೇಗೆ?"

ಸುಶೀಲೆಗೆ ಈ ಪ್ರಶ್ನೆಯಿಂದ ಸಮಾಧಾನವಾಗಲಿಲ್ಲ. ಸ್ವಲ್ಪ ಅಚ್ಚರಿಯಾಯಿತು.

"ಎಷ್ಟು ಸಾರಿ ಹೇಳಿಲ್ಲ..ಅವರಷ್ಟು ಚೆಲೋ ನಮ್ಮ ಶಾಲೆಯೊಳಗೆ ಯಾರೂ ಕಲಿಸೋದಿಲ್ಲ ಅಂತ! ನಡುನಡುವೆ ಕಷ್ಟಗಳನ್ನು ಹೇಳುತ್ತಾರೆ; ಆ ಮೇಲೆ ಇದರಿಂದ ನೀವು ಕಲಿಯತಕ್ಕದ್ದೇನು ಎಂದು ಕೇಳುತ್ತಾರೆ. ಅವರದೊಂದು ಶೈಲಿಯೇ ಬೇರೆ. ಕ್ಲಾಸು ಎಂದೂ ಬೇಜಾರು ಬರುವುದಿಲ್ಲ."ಎಂದು ಉಸಿರು ಬಿಡದ ಹಾಗೆ ಹೇಳಿ ಸುಮ್ಮನಾದಳು.

ವಿದ್ಯಾಧರ ಕುರ್ಚಿಯಿಂದೆದ್ದು ಅತ್ತಿಂದ ಇತ್ತ ಇತ್ತಿಂದ ಅತ್ತ ಅಡ್ಡಾಡಹತ್ತಿದ. ಸುಶೀಲೆಗೆ ವಿಚಿತ್ರವೆನಿಸಿತು.

"ಅವರು ಸದಾ ಒಬ್ಬರೇ ಇರುತ್ತಾರೆಂದು ನೀನು ಹೇಳಿದೆಯಲ್ಲವೆ?"ಎಂದು ತಂಗಿಯತ್ತ ನೋಡದೆಯೇ ಕೇಳಿದ.

"ಹೌದು!"

ಕೆಲಹೊತ್ತು ಸುಮ್ಮನಿದ್ದ "ಅವರ ಪುಚ್ಚು ಹತ್ತಿದೆಯೇನಿನಗೆ?" ಎಂದ ಸುಶೀಲೆಯ ಮಾತುಗಳು ಕೇಳಿಸಿದುವೋ ಇಲ್ಲವೋ!

"ಅವರನ್ನೊಮ್ಮೆ ಬೆಟ್ಟಿಯಾಗಬೇಕಾಗಿದೆ!" ಎಂದ.

"ಏಕೆ?"

"ಸುಮ್ಮನೆ." ಎಂದು ಕೋಟು ಹಾಕಿಕೊಂಡವನೇ ಹೊರಟು ಬಿಟ್ಟ; ಸುಶೀಲೆ ಸ್ವಲ್ಪ ನಕ್ಕು ಬಿಟ್ಟಳು.

* *

ಎಷ್ಟೋ ದಿನಗಳು ಉರುಳಿಹೋದರೂ ದುರ್ಗಾದೇವಿಯ ಭೆಟ್ಟಿ ಎಷ್ಟೋಸಲ ಆಗಿದ್ದರೂ, ಧೈರ್ಯದಿಂದ ಆಕೆಯ ವಿಷಯ ಏನೂ ಕೇಳಲಾಗಲಿಲ್ಲ. ಆ ವಿಷಯ, ಈ ವಿಷಯದ ಚರ್ಚೆಯಲ್ಲೇ ಅವರ 'ಭೇಟಿ' ಮುಗಿದು ಹೋಗುತ್ತಿತ್ತು.

ವಿದ್ಯಾಧರನಂತಹ ಸುಂದರ, ಸರಳ, ವಿಚಾರವಂತ ತರುಣ ಸೊಬ್ಬನು ದುರ್ಗಾದೇವಿಯ ಜೀವನದಲ್ಲಿ ಬಂದದ್ದು ಇದೇ ಮೊದಲು. ಎಷ್ಟೋ ಸಾರಿ ನೋಡಿದ್ದಳು.... ಮಾತನಾಡುವ ಹೇಡಿಗಳನ್ನು; ತಿಳಿಯದೆ ದುಡಿಯುವವರನ್ನು. ತಾನೆಂದಂತೆ ನಡೆಯಿಸಿಕೊಂಡು ಬರುವ ವ್ಯಕ್ತಿ-ವಿಚಾರಬದ್ಧನಾದ ವ್ಯಕ್ತಿಯ ಬಗ್ಗೆ ಆಕೆಗೆ ಆತ್ಯಾದರ ಪ್ರೀತಿ, ಸ್ನೇಹ. ಆದುದರಿಂದ ವಿದ್ಯಾಧರ ಸೊಬ್ಬನು ತನ್ನ ಒಂಟಿಗ ಜೀವನದಲ್ಲಿ ಬಂದದ್ದು ಆಕೆಗೆ ಒಂದು ತರದ ಸಮಾಧಾನ; ಆನಂದವೇ ಆಗಿದ್ದಿತು.

"ನಿಮಗೆ ಗೊತ್ತಿಲ್ಲದೆ ಇರುವುದು ಏನಿದೆ? ನಿಮ್ಮ ಮಾತಿನಲ್ಲಿ ಅಹಂಕಾರ ಕಾಣಿಸುತ್ತಿದೆ. ಅಷ್ಟಕ್ಕೂ ನಿಮಗೆ ಗೊತ್ತಿಲ್ಲದೆ ಇರುವುದು ಏನಿದೆ?" ಎಂದು ಕೇಳಿದಳು ಅವಳು.

"ಅಯ್ಯೋ, ಅದೆಲ್ಲ ಬಿಡಿ. ಅದೆಲ್ಲ ಹೇಳಿದರೆ ನಿಮಗೆ ಅರ್ಥವಾಗುವುದಿಲ್ಲ. ಅದೆಲ್ಲ ಹೇಳಿ ಪ್ರಯೋಜನವಿಲ್ಲ

"ಕೇಳಲಹ್ರವಲ್ಲವೆಂದು ಬಿಟ್ಟುಬಿಡುವುದು ದೊಡ್ಡ ತಪ್ಪೇ ಸರಿ. ಆಗಿದೆಯೇನೆಂಬುದರ ವಿಚಾರ ಕೂಡ ಮಾಡಬಾರದೇ?"

ಎಷ್ಟೋ ದೂರದ ವ್ಯಕ್ತಿಯನ್ನು ಇಷ್ಟೊಂದು ಹತ್ತಿರದವರಂತೆ ತಿಳಿದುಕೊಂಡಿರುವುದನ್ನು ನೋಡಿ, ಆಕೆಯ ಮನಸ್ಸಿಗಾದ ಆನಂದವು, ಸ್ವಲ್ಪ ನಾಚಿಕೆಯಿಂದ ಬಗ್ಗಿದ ಮುಖದ ಮೂಲಕ ಅವನಿಗೇನೂ ಕಾಣಿಸಲಿಲ್ಲ. ಜಗತ್ತಿಗೇ ತನ್ನ ಸಂಗತಿ ಗೊತ್ತಿದ್ದರೂ, ತನ್ನ ಮುಖದಿಂದಲೇ ಹೇಳಲು ಆಕೆ ಸ್ವಲ್ಪ ಹಿಂಜರಿದಳು. ತನ್ನ ಜೀವನದಲ್ಲಿ ಎಷ್ಟೋಮಂದಿ ಬಂದಿದ್ದರು, ಹೋಗಿದ್ದರು, ಗೆಳತಿಯರಂತಾಗಿದ್ದರು. ಆದರೆ ಇಂಥವನನ್ನು ಕಂಡದ್ದು ಇದೇ ಮೊದಲು. ಒಮ್ಮೆ ಎನಿಸಿತು ಆಕೆಗೆ: ತನ್ನ ಹೃದಯದ ಹತ್ತಿರ ಬಂದ ಮನುಷ್ಯನಿಗೆ ತಾನಾಗಿಯೇ ತನ್ನ ವೃತ್ತಾಂತವನ್ನು ಹೇಳಬಾರದೆಂದರೆ ಸಾಧ್ಯವೇ ಇಲ್ಲವೆಂದು. ನಿಟ್ಟುಸಿರು ಬಿಟ್ಟಳು. ವಿದ್ಯಾಧರನ ಕಡೆಗೊಮ್ಮೆ ನೋಡಿದಳು. ಅವನೂ ಆಕೆಯನ್ನೇ ನೋಡುತ್ತಿದ್ದ. ಕನಿಕರಭಾವ ಅವನ ಮುಖದ ಮೇಲೆ ನಿಚ್ಚಳವಾಗಿ ಮೂಡಿತ್ತು. ಆಕೆ ಮುಖ ತಗ್ಗಿಸಿ ಆರಂಭಿಸಿದಳು:

"ನಾನೊಂದು ಸಾಧಾರಣ ಮನೆತನದಲ್ಲಿ ಹುಟ್ಟಿಬೆಳೆದೆ. ನನ್ನಷ್ಟಿನ್ನೂ ಬಿ. ಎ. ಆಗಿರಲಿಲ್ಲ; ಒಬ್ಬ ಸಿರಿವಂತನೊಡನೆ ನನ್ನ ಲಗ್ನವಾಯಿತು. ನಾನಿನ್ನೂ ಅವರ ಮನೆಗೆ ಹೋಗಿದ್ದಿಲ್ಲ ಕೂಡ; ಲಗ್ನವಾದ ಎರಡು ಮೂರು ತಿಂಗಳಲ್ಲಿ ಅವರು ವಿಷಮಜ್ವರದಿಂದ ತೀರಿಕೊಂಡರು. ಎಂತಹ ದೈವವೋ ನನ್ನದು. ಅವರು ತೀರಿದ ನಂತರ, ಲಗ್ನವಾದಾಗ ಸಂಬಂಧಬಂದ ಅತ್ತೆ ಮತ್ತು ಒಬ್ಬಳೇ ಆದ ನಾದಿನಿಯವರು,ಜಗತ್ತಿನ ಯಾವುದೋ ಮೂಲೆಯಲ್ಲಿಯವರಂತೆ ಮಾಡಿದರು. ಅತ್ತೆಯವರು ಇದ್ದ ಬೆಳ್ಳಿ, ಬಂಗಾರ ಮುಂತಾದುದನ್ನೆಲ್ಲ ತನ್ನ ಮಗಳಿಗೆ ಕೊಟ್ಟರು ನಾನು ಸೊಸೆಯಾಗಿ ಹೋದದ್ದು ಅನಿಷ್ಟವೆಂದು ಅವರ ಕಲ್ಪನೆ. ಯಾವುದೇ ಆಗಲಿ, ಹತ್ತಿರ ಇದ್ದಾಗ ಆದರ ಲಕ್ಷ್ಯವೇ ಇರುವುದಿಲ್ಲ. ನವ್ಮನ್ನಗಲಿದಾಗ ಎಷ್ಟೋ ವಿಚಾರ ಮಾಡುತ್ತೇವೆ. ಹೀಗೆ ಅಕಸ್ಮಾತ್ತಾಗಿ ಸಂಭವಿಸಿದ ನನ್ನವರ ಮರಣದಿಂದ ಉಂಟಾದ ದುಃಖದ ಅಳವನ್ನು ನೋಡಿ 'ಅಯ್ಯೋ' ಎಂದುಕೊಂಡೆ. ಇಂತಹ ಸಮಯದಲ್ಲಿ ಅತ್ತೆಯವರು ಹಾಗೆ ಮಾಡಿದ್ದು ಸರಿಬೀಳಲಿಲ್ಲ. ನನ್ನ ತಂದೆಯವರಿಗೆ ಹೇಳಿದೆ: 'ನ್ಯಾಯಹೂಡಿ—ನನ್ನ ಆಸ್ತಿ ನನಗೆ ಬರಲಿ' ಎಂದು. ಅದಕ್ಕೆ ಅವರೆಂದರು: "ಬೇಡ ತಂಗಿ, ಆಸ್ತಿಗಾಗಿ ನ್ಯಾಯಹೂಡುವ ಮೂರ್ಖತನ ಬೇಡ. ನೀನೊಬ್ಬ ಮಗಳು ನಮಗೇನೂ ಭಾರವಲ್ಲ" ಎಂದು ನಾನಾವರೂ ಸುಮ್ಮನಿದ್ದೆ.

'ಸುಮ್ಮನೆ ದಿನಗಳೆಯುವ ಜೀವನ ನನ್ನ ಮನಸ್ಸಿಗೆ ಬರಲಿಲ್ಲ. ಸುಮ್ಮನೆ ಕುಳಿತಾದರೂ ಏನು ಮಾಡುವುದೆಂದು ಕೆಲವು ತಿಂಗಳು ಮಿಸ್ಟ್ರೆಸ್ಸಾಗಿ (ಒಂದು ಕನ್ಯಾಶಾಲೆಯಲ್ಲಿ), ಮುಂದೆ ಬಿ.ಟಿ.ಗಾಗಿ ಹೋದೆ ಇನ್ನೂ ನನ್ನ ಹಣೆಯಲ್ಲಿ ಏನೇನು ಇದ್ದಿತೋ ಏನೋ! ಪತಿಯ ಮರಣದಿಂದಾದ ದುಃಖ ಎಂದೋ ಮರೆತುಹೋಗಿತ್ತು. ನಾನೊಬ್ಬ ಸುಖಜೀವಿಯ ಹಾಗೆಯೇ ಇದ್ದೆ. ಅಷ್ಟರಲ್ಲಿ ಒಟ್ಟಿಗೆ ಬಿ. ಟಿ ವಿದ್ಯಾರ್ಥಿಯ ಪರಿಚಯವಾಯಿತು. ಅವರ ಹೆಸರು ಸತೀಶ ದೇಶಭಕ್ತ, ಮೇಲಾಗಿ ಒಳ್ಳೆಯ ವಾಗ್ಮಿ. ಅವರ ನನ್ನ ಪರಿಚಯ ಪ್ರಣಯರೂಪದಲ್ಲಿ ಪರಿಣಮಿಸಿತು. ನಾನು ಮುಂದುವರಿದರೆ ಅವನು ನನ್ನನ್ನು ಲಗ್ನವಾಗಿ ಬಿಡುವನೆಂದೇ ನನ್ನ ದೃಢಪಾಪ ಕಲ್ಪನೆ. ಏಕೆಂದರೆ ಅವನೂ ವಿಧವಾವಿವಾಹಕ್ಕೆ ಸಮ್ಮತಿಸಿದ್ದ; ಭಾಷಣ ಮಾಡಿದ್ದ; ಲೇಖನಗಳನ್ನೂ ಬರೆದಿದ್ದ. ಗಂಡನಿಲ್ಲದ್ದೊಂದು ಬಿಟ್ಟು ನನಗೇತರ ಕೊರತೆ? ಸತೀಶನನ್ನು ಲಗ್ನವಾಗಿ ಬಿಟ್ಟರೆ ನನ್ನಷ್ಟು ಸುಖಜೀವಿ ಯಾರೂ ಇಲ್ಲ— ಎಂದುಕೊಂಡೆ. ಮನುಷ್ಯನಿಗೆ ಆಶೆ-ಆಕಾಂಕ್ಷೆಗಳು ಸ್ವಾಭಾವಿಕವಾದರೂ ಅದನ್ನವನು ಸಂಪೂರ್ಣ ವಿಚಾರ ಮಾಡಬೇಕು, ಅಲ್ಲವೇ? ಏನೋ ಒಂದು ಕುರುಡುನಂಬುಗೆಯಿಂದ ಸತೀಶನನ್ನು ನನ್ನ ಸಮೀಪ ಬರಗೊಟ್ಟೆ. ಕಾಲೇಜಿನ ವಿದ್ಯಾರ್ಥಿಗಳೆಲ್ಲ ನಾವು ವಿವಾಹವಾಗುವೆವೆಂದೇ ತಿಳಿದಿದ್ದರು. ನಾನು ಯಾವುದಕ್ಕೂ ಕೊರತೆ ಕಂಡಿದಲಿಲ್ಲ. ಲಗ್ನವೊಂದನ್ನಾಗಿ ಕಡೆತನಕ ಸುಖಜೀವಿಯಾಗಬೇಕೆಂದು ಪ್ರಯತ್ನಿಸಿದೆ. ಮನುಷ್ಯ ಸುಖಿಯಾಗಲೇಬೇಕೆಂದು ಇಚ್ಛಿಸಿದರೆ ಸಾಧ್ಯವಾದೀತೇ? ಬೇಕೆಂತಲೇ ಹಾಗೆ ಪ್ರಯತ್ನಿಸಿದರೆ ಕೈಮಿಂಚಿ ಹೋಗುವುದೇ ಬಹಳ. ಸತೀಶ, ತನ್ನ ತಂದೆ-ತಾಯಿಗಳು ವಿಧವಾವಿವಾಹಕ್ಕೆ ಸಮ್ಮತಿಸುವುದಿಲ್ಲವೆಂಬ ನೆಪದಿಂದ ಲಗ್ನವನ್ನು ನಿರಾಕರಿಸಿಬಿಟ್ಟ. ಮೊದಲಿನ ಪಟ ತೀರಿದಾಗ, ಸುಮ್ಮನೆ ಮನೆಯಲ್ಲಿದ್ದರೆ ತೀರಿ ಹೋಗಿದ್ದಿತು. ಆದರೆ ಈಗ ಒಮ್ಮೆಲೆ ಉನ್ನತ ಶಿಖರದಿಂದ ಕೆಳಗೆ ಬಿದ್ದಂತೆನಿಸಿತು. ನಾನು ನಲುಗೆ ಕೊಟ್ಟಿದ್ದೇ ತಪ್ಪು. ಇದಕ್ಕೂ ಮುಂಚಿತ ನಮ್ಮ ಪ್ರಣಯದ ಸುದ್ದಿ ನನ್ನ ತಂದೆ-ತಾಯಿಯವರಿಗೆ ಮುಟ್ಟಿದ್ದಿತು. ಅವರು ಎಷ್ಟು ತಿಳಿಹೇಳಿದರೂ ನಾನು ಕೇಳಲಿಲ್ಲ ನಾನು ಮನೆಯ ದಾರಿ ಹಿಡಿದೆ. ಇದನ್ನೆಂತೂ ಕೇಳಿ ಕೆಂಡದಂತಾಗಿದ್ದರು. ಆದರೆ ಏನು ಮಾಡಿಯಾರು? ಮನೆಯಲ್ಲ ಸ್ಥಾನಕೊಟ್ಟರು—ಮಗಳೆಂದು ಮುತ್ತಿ ಇಲ್ಲವೆಂದು ಕನ್ಯಾಶಾಲೆಯಲ್ಲ ಶಿಕ್ಷಕಿಯಾದೆ. ಇದಾಗಿ ವರ್ಷ-ಒಂದೂವರೆ ವರ್ಷ ದಾಟಿತೆ. ಆದರೂ ನಾನೊಬ್ಬಳು ಒಬ್ಬನ ಭೋಗ್ಯವಸ್ತುವಾಗಿದ್ದೆನೆಂಬುದನ್ನು ನೆನೆಯಿಸಿಕೊಂಡಾಗ, ನನ್ನಂತಹ ಅಪರಾಧಿ ಯಾರೂ ಇರಲಿಕ್ಕಿಲ್ಲವೆಂದನಿಸುತ್ತದೆ. ಆ ಕ್ಷಣಿಸಿಲಾಗದ ತಪ್ಪಿಗಾಗಿ, ನಾನು ಈ ಕೆಲಸ ಮಾಡುವುದು ನನಗೆಂದೂ ಒಡಪ ಕರ್ತವ್ಯವೆನಿಸಿದೆ." ಎಂದು ಸಾವಧಾನದಿಂದ ಮುಗಿಸಿ, ಕಣ್ಣೀರನ್ನು ಒರಸಿಕೊಂಡಳು.

ವಿದ್ಯಾಧರನೆಂದ:"ಆ ಮನುಷ್ಯ ಎಂತಹ ನೀಚನವ! ಕರ್ತವ್ಯ ಶಕ್ತೀಟೀನ! ಲಗ್ನವಾಗಿದ್ದರೆ ತಾನೇನಾದರೂ ಕೆಟ್ಟ ಕೆಲಸ ಮಾಡಿಬಿಡಂತಾಗುತ್ತಿತ್ತೆ?"

"ಆದರೂ ನನ್ನದೇ ಮುಕ್ಕಾಲು ಭಾಗ ತಪ್ಪು ಎಂದು ನನ್ನ ಹೃದಯ ಹೇಳುತ್ತದೆ; ಅವನೂ ಹಾಗೆ ಮಾಡಬಾರದಿತ್ತು ನಿಜ!"

ವಿದ್ಯಾಧರನಿಗೆ ಆಶ್ಚರ್ಯವಾಯಿತು. "ಸಂಪೂರ್ಣ ನಿಮ್ಮದೇ ತಪ್ಪು ಎಂದು ನೀವೇ ಎನ್ನುವುದನ್ನು ಕೇಳಿ ಆಶ್ಚರ್ಯವಾಗುವುದಾದರೂ, ಒಂದು ಬಗೆಯ ಸಂತೋಷ ನನಗೆ. ಜನರು ತಾವು ಎಷ್ಟೇ ತಪ್ಪಿತಸ್ಥರಿದ್ದರೂ ತಾವು ಎಳ್ಳಷ್ಟೂ ತಪ್ಪಿತಸ್ಥರಲ್ಲ ಎಂಬ ಸಿದ್ಧಾಂತಕ್ಕೆ ಹೊರಡುತ್ತಾರೆ. ನೀವು ಹೀಗೆ ಬಿಚ್ಚುಮನಸ್ಸಿನಿಂದ ಹೇಳಿದ್ದನ್ನು ಕೇಳಿ ನನಗೆ ಅತೀವ ಹರ್ಷವಾಗಿದೆ. ನಿಮ್ಮೀ ಕಥೆಯನ್ನು ಕೇಳಿ ನನಗೆ ಎಳ್ಳಷ್ಟೂ ನಿಮ್ಮ ಬಗ್ಗೆ ತಿರಸ್ಕಾರವಿಲ್ಲ. ಹೆಚ್ಚಾದ ಆದರವೇ ಉತ್ಪನ್ನವಾಗಿದೆ," ಎಂದು ನುಡಿದು ಸುಮ್ಮನಾದ.

ಎದುರಿನ ದಿನ್ನೆಯ ಮೇಲಿನ ಊರಲ್ಲಿ ದೀಪಗಳು ಹೆಚ್ಚಿದುದು ಕಂಡು ಬರುತ್ತಿತ್ತು. ಮಬ್ಬುಗತ್ತಲೆಯಲ್ಲಿ ರಸ್ತೆಯು ಮಸಮಸಕಾಗಿ ಕಾಣುತ್ತಿತ್ತು. ಆಗಾಗ ಮೋಟಾರುಗಳು ಓಡಾಡುತ್ತಿದ್ದುವು. ಮತ್ತೆ ವಿದ್ಯಾಧರನೇ ಹೇಳಿದ್ದು: "ಈಗಿನ ನಿಮ್ಮ ಮನಃಸ್ಥಿತಿಯನ್ನೂ ಗುಣಗಳನ್ನೂ ಹಿಂದಿನ ನಿಮ್ಮ ಮನಸ್ಸು ಹೇಗಿದ್ದಿತೆಂಬುದನ್ನೂ ನೋಡಿದರೆ, ನೀವು ತಕ್ಕುದ್ದಕ್ಕಿಂತ ಹೆಚ್ಚು ಶಿಕ್ಷೆ ಅನುಭವಿಸಿರುವಿರಿ; ಜನರು ನಿಮ್ಮನ್ನು ಈಗಿನ ಸ್ಥಿತಿಯಲ್ಲಿ ಇದ್ದಂತೆ ಎಂದೂ ತಿಳಿಯುವುದಿಲ್ಲ. ಹಿಂದೆ ಎಂದೋ ಆದ ಘಟನೆಯಿಂದಲೇ ಅರಿಯುತ್ತಾರೆ."

"ನಿಮ್ಮ ಮಾತು ಎಷ್ಟು ನಿಜ! ಅಂತೆಯೇ ನನಗಾರೂ ಗೆಳೆಯರುಳಿಯುವುದಿಲ್ಲ. ನಾನೊಬ್ಬಳೇ ಕಳಿದಿದ್ದೇನೆ ಈ ಎರಡು ವರ್ಷ ದೇವರು ಎಂತಹ ಜೀವನವನ್ನಾದರೂ ಕೊಟ್ಟರೂ ತಡೆದುಕೊಳ್ಳುವ ಶಕ್ತಿ ಬಂದಿದೆ. ನಾನು ಯಾರಿಗೂ ಹೆದರಬೇಕಾಗಿಲ್ಲ; ಪೂತ್ರ ನನ್ನ ಮನಕ್ಕೆ ಆಂಜುವುದನ್ನು ಕಲಿತಿದ್ದೇನೆ. ಇಲ್ಲಿಯ ವರೆಗೆ ಆದ ಗೆಳೆಯ-ಗೆಳತಿಯರಲ್ಲಿ ಕನಿಕರ ಪಟ್ಟವರೇ ಇಲ್ಲ. ನನ್ನ ಬಗ್ಗೆ ತಿಳಿಯಲಿಚ್ಛಿಸಿದವರು ನೀವೊಬ್ಬರೇ. ನನ್ನ ಮನಸ್ಸನ್ನು ಪೂರ್ಣ ಅರಿತವರೂ ನೀವೆ. ಆದ್ದರಿಂದ ನಿಮ್ಮ ಕೂಡ ಮನಬಿಚ್ಚಿ ಮಾತನಾಡಲು ಧೈರ್ಯ ಬರುತ್ತದೆ. ಅಲ್ಲದೆ ಮನಸ್ಸಿಗೆ ಆನಂದವಾಗುತ್ತದೆ ನನ್ನನ್ನಾವರಿಸಿದ ಕಗ್ಗತ್ತಲಿನ ಜಾಳಿನಲ್ಲಿ ನೀವು ಚಂದ್ರನಂತೆ ಉದಯಿಸಿ ಬಂದಿರಿ. ನಿಜವಾಗಿಯೂ ನಾನು ಭಾಗ್ಯಶಾಲಿನಿ!" ಎಂದು ಮೃದುಧ್ವನಿಯಿಂದ ಕಣ್ಣನ್ನರಳಿಸಿ ವಿದ್ಯಾಧರನ ಮುಖವನ್ನೇ ನೋಡಿದಳು. ವಿದ್ಯಾಧರ ಆಕೆಯ ಮೊಗವನ್ನೇ ನಿಟ್ಟಿಸಿ ನೋಡಿದ. ಆಕೆಯ ಮುಖದಲ್ಲಿ ಏನನ್ನೋ ಅರಿಕೊಂಡನೋ!

ಅವರು ಮನೆಯ ಕಡೆಗೆ ಮೆಲ್ಲನೆ ಹೊರಟಾಗ, ಸಂಪೂರ್ಣ ಕತ್ತಲೆಯಾಗಿತ್ತು. ಊರಲ್ಲಿಯ ವಿದ್ಯುದ್ದೀಪಗಳು ನಿಚ್ಚಳವಾಗಿ ಉರಿಯುತ್ತಿದ್ದುವು.

(೪)

ಸುಶೀಲೆಯ ಮ್ಯಾಟ್ರಿಕ್ ಪರೀಕ್ಷೆಯಾಗಿ ೧೦-೧೫ ದಿವಸಗಳು ಸಂದುಹೋದುವು. ಎಲ್ಲ ರೀತಿಯಿಂದ ಉತ್ತಮವಾಗಿ ಬರೆದಿದ್ದರಿಂದ ಸಂತೋಷಸಾಗರದಲ್ಲಿ ಮುಳುಗಿದ್ದಳು.

ವಿದ್ಯಾಧರನ ಮನಸ್ಸಿಗೆ ಪೂರ್ತ್ರ ೮-೧೦ ದಿವಸಗಳಿಂದ ನೆಮ್ಮದಿಯಿರಲಿಲ್ಲ. ಅಂದು ಸಂಜೆಯ ವರೆಂದೆ ಸುಶೀಲೆ ಮನೆಯಲ್ಲಿರಲಿಲ್ಲ. ಅವನೆದ್ದು 'ದುರ್ಗಾ'ನ ಮನೆಯ ಕಡೆಗೆ ನಡೆದ.

ದುರ್ಗಾ ಏನನ್ನೋ ಓದುತ್ತ ಕುಳಿತಿದ್ದಳು. ಸ್ಕಾರ್ಫನ್ನು ಸುತ್ತಿಕೊಂಡು ಕೈಕಟ್ಟಿಕೊಂಡು ಬಂದ ವಿದ್ಯಾಧರನನ್ನು ನೋಡಿ, "ಏಕೆ? ಇಂತಹ ಬೇಸಗೆಯಲ್ಲಿ ಕೂಡ ನಿಮಗೆ ಚಳಿಯೇ?" ಎಂದು ಕೇಳಿದಳು.

"ಛೇ, ಇಲ್ಲ! ಏಕೋ ಇಂದು ಮಧ್ಯಾನ್ಹ ಸ್ವಲ್ಪ ಜ್ವರ ಬಂದಹಾಗಿತ್ತು. ಈ ಸಂಜೆಯ ತಂಗಾಳಿ ನಿಮಗೆ ಎಷ್ಟೊಂದು ಆಲ್ಹಾದಕರವೆನಿಸಿದರೂ ನನಗೆ ಬಹಳ ಚಳಿಯನ್ನುಂಟುಮಾಡುತ್ತದೆ!"

"ಸುಶೀಲೆಯನ್ನು ಏಕೆ ಕರೆದುಕೊಂಡು ಬರಲಿಲ್ಲ? ೮-೧೦ ದಿವಸಗಳಿಂದ ಆಕೆಯನ್ನು ನೋಡಿಯೇ ಇಲ್ಲ!"

"ನಾನು ಬರುವಾಗ ಮನೆಯಲ್ಲಿದ್ದಿಲ್ಲ. ಗೆಳತಿಯರೊಡನೆ ಸಿನೇಮಾಕ್ಕೆ ಹೋಗಿರಬೇಕು. ಆಕೆಯೇನು, ಆನಂದದಲ್ಲಿದ್ದಾಳೆ; ನಿರೀಕ್ಷಿಸಿದ್ದಕ್ಕಿಂತ ಚೆನ್ನಾಗಿ ಬರೆದಿದ್ದಾಳೆ ಪೇಪರಿನಲ್ಲಿ."

"ಸಂತೋಷದ ವಿಷಯ. ಇರಲಿ; ನಿಮಗೆ ಕಾಫೀ ಮಾಡಿ ಕೊಡಲೇ?"

"ಇದೀಗ ಹೊರಡುವಾಗಲೆ ಬಹಳ ಕುಡಿದು ಬಂದಿದ್ದೇನೆ."

"ಚಳಿ-ತಲೆನೋವನ್ನು ಕಡಿಮೆಮಾಡತ್ತದೆ ಕಾಫಿ. ಮಾಡುತ್ತೇನೆ ತಡೆಯಿರಿ!"

"ನಿಮ್ಮನ್ನು ನೋಡಿದ ಕೂಡಲೇ ಅರ್ಧ ತಲೆನೋವು ಮಾಯವಾಯಿತು. ನಿಮ್ಮ ಕಾಫಿಯಂತೂ ಸಂಪೂರ್ಣ ಗುಣಪಡಿಸಬಹುದೇನೋ! ಪರವಾ ಇಲ್ಲ, ಕುಡಿಯುತ್ತೇನೆ." ಎಂದು ಹತ್ತಿರದ ಪಲ್ಲಂಗದ ಮೇಲೆ ಕುಳಿತ.

ದುರ್ಗಾ ಕಾಫೀಮಾಡಿ ತರುವ ಹೊತ್ತಿಗೆ,ತಲೆಹಿಡಿದುಕೊಂಡು ಕಣ್ಣುಮುಚ್ಚಿಕೊಂಡು ಒರಗಿದ್ದ.

'ಕಾಫೀ ತೆಗೆದುಕೊಳ್ಳಿರಿ!"

ವಿದ್ಯಾಧರ ಮುಖವನ್ನಾಕಡೆಗೆ ತಿರುಗಿಸಿದ.

"ಏಕೆ, ತಲೆಯು ಬಹಳ ನೋಯುತ್ತದೆಯೇ?"ಎಂದು ಕಾಫಿ ಕೆಳಗಿಟ್ಟು, ಅವನ ಹಣೆಯನ್ನು ಮುಟ್ಟಿ ನೋಡಿದಳು.

"ಅಬ್ಬಾ, ಎಷ್ಟು ಸುಡುತ್ತಿದೆ. ಹಿಡಿಯಿರಿ, ಕಾಫಿ ಕುಡಿಯಿರಿ ಮೊದಲು!" ಸ್ವಲ್ಪ ಹೊತ್ತಿನನಂತರ ಜೆಟಕ್ಕನೆ ಎದ್ದು ಕಾಫಿ ಕುಡಿದು ಮತ್ತೆ ಸುಮ್ಮನೆ ಬಿದ್ದುಕೊಂಡ. ದುರ್ಗಾ ಅಮೃತಾಂಜನದ ಡಬ್ಬಿಯನ್ನು ತೆಗೆದುಕೊಂಡು ಬಂದು "ಅಮೃತಾಂಜನ ವನ್ನು ಹಚ್ಚಿ ತಿಕ್ಕುತ್ತೇನೆ. ಸ್ವಲ್ಪ ಹೊತ್ತಿನಲ್ಲಿ ಕಡಿಮೆಯಾಗುವುದು" ಎಂದು ಅವನ ಹಣೆಗೆ ಹಚ್ಚಿ ಮೆಲ್ಲನೆ ತಿಕ್ಕತೊಡಗಿದಳು. ವಿದ್ಯಾಧರ ಕೂಡಲೆ ತನ್ನ ಹಣೆಯ ಮೇಲಿನ ಆಕೆಯ ಕೈಗಳನ್ನು ಹಿಡಿದು:

"ನಾನು ನಿನ್ನನ್ನು ಲಗ್ನವಾಗಬೇಕೆಂದಿದ್ದೇನೆ" ಎಂದ.

ಒಮ್ಮಿದೊಮ್ಮೆಲೆ ಬಂದ ಈ ಅಸಂಭವ-ಅಶಕ್ಯಮಾತುಗಳನ್ನು ಕೇಳಿ ದುರ್ಗಾ ಬೆವ್ವಾದಳು. ಆಮೇಲೆ ತುಸು ನಿಂತು "ನನ್ನನ್ನು ಲಗ್ನವಾಗುವಿರಾ?" ಎಂದು ಆಶ್ಚರ್ಯದಿಂದ ಕೇಳಿದಳು.

"ನೀವು ನಂಬುವುದಿಲ್ಲವೇ? ಅಷ್ಟು ಅಶಕ್ಯವೆಂದು ತಿಳಿಯುವಿರಾ?" ಎಂದು ಎದ್ದು ಕುಳಿತ. ಆಕೆಯ ಹೃದಯದಲ್ಲಿ ಎಷ್ಟೊ ಆನಂದದ ತೆರೆಗಳು ಎದ್ದು, ಆಕೆಯ ಉಸಿರು ಕಟ್ಟತೆನ್ನುವಂತೆ ಮಾಡಿದುವು. ಸ್ವಲ್ಪ ಹೊತ್ತಿನನಂತರ ಆಕೆಯದು ಇಳಿಮೊಗವಾಯಿತು. ಸಾವಧಾನವಾಗಿಯೆ ನುಡಿದಳು: "ನಿಮ್ಮ ವಿಶಾಲ ಹೃದಯ ನೋಡಿದರೆ ಅಶಕ್ಯವೇನೂ ಎನಿಸಲಾರದು. ಆದರೆ ಅದಕ್ಕೊದಗುವ ತೊಂದರೆಗಳನ್ನು ನೋಡಿದರೆ ನೀವು ಸಪ್ತ ಸಮುದ್ರಗಳನ್ನು ದಾಟಿ ಒಂದು ಗೂಬೆಯನ್ನು ಹಿಡಿದು ತಂದ ಹಾಗೆ ಆಡೀತು!"

"ಎಷ್ಟು ತೊಂದರೆಗಳು ಬಂದೊದಗಿದರೂ ನಾನೀ ನಿಶ್ಚಯವನ್ನು ಬದಲು ಮಾಡುವುದಿಲ್ಲ." ಎಂದು ಆಕೆಯ ಕೈಬಿಟ್ಟು ಹೇಳಿದ. ಹತ್ತಿರದ ಕುರ್ಚಿಯ ಮೇಲೆ ಕುಳಿತಳಾಕೆ. "ನಿಮ್ಮ ತಂದೆಯವರ ವಿಚಾರ ಮಾಡಿದ್ದೀರಾ?"

"ಒಬ್ಬನೇ ಆದ ಮಗನ ವಿರುದ್ಧ ಅವರು ಹೋಗಲಾರರೆಂದೆನಿಸುವುದು!"

"ಇಂತಹ ವಿಧವಾವಿವಾಹಕ್ಕೆ!"

"ವಿಧವಾವಿವಾಹ ಹಳೆಯ ಮಾತು!"

"ಆದರೂ ನನ್ನ ಬಗ್ಗೆ ಜನರ ಕಲ್ಪನೆ ಗೊತ್ತಿಲ್ಲವೇ ನಿಮಗೆ?"

"ಮಂದಿಯೆಂದದ್ದನ್ನು ಕಂಡು ಮಂದಿಯೆನ್ನುತ್ತಾರೆ; ನಿಜವಾಗಿಯೂ ಅವರಿಗೆ ಏನೂ ಗೊತ್ತಿರುವುದಿಲ್ಲ. ಹೊಸದನ್ನು ಮಾಡಿದರೆ ಜಗತ್ತು ಸೇರುವುದೇ ಇಲ್ಲ. ಅದನ್ನಾದಷ್ಟು ವಿರೋಧಿಸುವುದು ಅವರ ಕೆಲಸ. ಹೊಸದಾದರೂ, ಸಂಪ್ರದಾಯಕ್ಕೆ ವಿರುದ್ಧವಾದರೂ ಸರಿಯಾದದ್ದನ್ನು ನಾವು ಮಾಡುತ್ತೇವೆಂದು ಅವರು ತಿಳಿಯುವುದೇ ಇಲ್ಲ."

"ನೀವೀಗ ಸರಿಯಾದದ್ದನ್ನೇ ಮಾಡುವಿರೆಂದು ತಿಳಿದಿರುವಿರಾ?"

"ಓಹೋ, ತಿಳಿಯದೇ ಏನು? ಇದರಿಂದ ಹಾನಿಯೇನಾಗಬೇಕಾಗಿದೆ? ನಗುವ ಜನರು ನಕ್ಕುಬಿಟ್ಟಾರು!"

"ಛೆ, ಆದರೂ ನನಗೆನಿಸುವುದು: ನಿಮ್ಮ ಹೆಂಡತಿಯಾಗುವ ಯೋಗ್ಯತೆ ನನ್ನಲ್ಲಿಲ್ಲ. ನನ್ನಂತಹ ಪಾಪಿಯನ್ನು ನೀವು.... ಛೇ, ಬೇಡ!",

"ಆದರ ಬಗ್ಗೆ ಸಂಪೂರ್ಣ ವಿಚಾರ ಮಾಡಿದ್ದೇನೆ. ನಿಮ್ಮ ಕಸ್ಟಿಗಿಂತ ಹೆಚ್ಚಾದ ಶಿಕ್ಷೆಯನ್ನನುಭವಿಸಿರುವಿರಿ. ಒಂದು ಪಶ್ಚಾತ್ತಾಪದಗ್ನಿ ದುಃಖೋಜ್ವಲನದ ಸುಖಕ್ಕಾಗಿ ನಾನು ಏನನ್ನಾದರೂ ಮಾಡಿದರೆ ದುಡುಕಿದ ಹಾಗೆಯೆ?"

"ನಿಮ್ಮ ಮನಸ್ಸು ದೊಡ್ಡದು. ನಿಮ್ಮಂಥ ದೊಡ್ಡವರ ಸುಖವನ್ನು ನಾನು ನೋಡಬೇಕು. ಎಲ್ಲರ ಮನಸ್ಸಿನ ವಿರುದ್ಧ ಮಾಡಬೇಡಿರಿ. ಅಲ್ಲದೆ ನಿಮ್ಮಂಥ ಶ್ರೀಮಂತ ವಿದ್ವಾಂಸರಿಗೆ ಬೇಕಾದ ಕನ್ಯೆ ಸಿಗುವುದು ದೊಡ್ಡ ಮಾತಲ್ಲ ಅವಳನ್ನು ಹೊಂದಿ ನೀವು ಎಷ್ಟೋ ಸುಖವಾಗಿರಬಹುದು! ನನ್ನನ್ನು ಲಗ್ನವಾಗುವುದರಿಂದ ತಿಳಿದೂ ಸಂಕಟದಲ್ಲಿ ಬಿದ್ದ ಹಾಗೆಯೆ!"

"ಬೇಕಾದ ಸಂಕಟ ಬಂದರೂ ನಿಮ್ಮನ್ನು—ಜೊತೆಗೊಂಡೇ ಎದುರಿಸುವೆ. ನನ್ನ ಸಿರಿವಂತಿಕೆ ಸುಟ್ಟಿತು!"

"ಛೇ, ಹಾಗೆಂದೂ ಮಾತನಾಡಬೇಡಿರಿ. ನಾನು ಬೇಕಾದಂತಹ ಜೀವನ ನಡೆಯಿಸಬಲ್ಲೆ; ಆದರೆ ನೀವು ದುಃಖ ಸಹಿಸುವುದನ್ನು ನಾನು ಎಳ್ಳಷ್ಟೂ ತಡೆಯಲಾರೆ!"

"ಆದರೆ ನಿಮ್ಮನ್ನು ಬಿಟ್ಟ ನನ್ನ ಬಾಳು ಎಂದೂ ಸುಖಮಯವಾಗಲಾರದು. ಯಾವ ಸಿರಿವಂತ, ವಿದ್ವಾಂಸ ತರುಣಿ ನನ್ನ ಹೆಂಡತಿಯಾಗಿ ಬಂದರೂ, ನನ್ನ ಬಾಳು ಸುಖಮಯವಾಗುವುದಿಲ್ಲವೆಂಬುದು ನನಗೆ ಗೊತ್ತು. ನೀವೊಬ್ಬರು ಬೇಕಾದ ಜೀವನ ಸಹಿಸಬಹುದು; ಆದರೆ ನಾನೊಬ್ಬ ಶಕ್ತಿಹೀನ ತರುಣ! ನೀವಿಲ್ಲದೆ ಇದ್ದ ಕೊರತೆ ನನಗೆ ಅಸಹನೀಯ!" ದುರ್ಗಾ ಕುರ್ಚಿಯಿಂದೆದ್ದು ಕಿಟಕಿಯೊಳಗಿಂದ ಏನನ್ನೋ ನೋಡುತ್ತ ಕೆಲಹೊತ್ತು ನಿಂತಳು. ಆ ಮೇಲೆ ವಿದ್ಯಾಧರನ ಕಡೆಗೆ ತಿರುಗಿ ನುಡಿದಳು: "ನಿಮ್ಮ ಪ್ರೇಮುಕ್ಕೆ ನಾನು ಎಷ್ಟೂ ಪಾತ್ರಳಲ್ಲ."

"ಪ್ರೇಮ ಪವಿತ್ರವಾಗುವುದು ಪರಸ್ಪರ ಪ್ರೀತಿಯಿಂದ. ಏಕೆ, ನನ್ನನ್ನು ಪ್ರೀತಿಸುವುದಿಲ್ಲವೇ?" ಎಂದು ವಿದ್ಯಾಧರ ಆಕೆಯ ಹತ್ತಿರ ಬಂದು ಆಕೆಯ ಹೆಗಲಮೇಲೆ ಕೈಯನ್ನಿಟ್ಟ. ಕಿಟಕಿಯಿಂದ ಸುಳಿಗಾಳಿ ಬೀಸುತ್ತಿತ್ತು. 'ನಿಜವಾಗಿಯೂ ದೇವರು ಪ್ರಸನ್ನನಾಗಿದ್ದಾನೆ' ಎಂದು ಆಕೆಯ ಹೃದಯ ಹೇಳುತ್ತಿತ್ತು. ಸುಮ್ಮನೆ ಏನನ್ನೋ ನೋಡುತ್ತ ನಿಂತುಬಿಟ್ಟದ್ದಳು. ವಿದ್ಯಾಧರನೇ ಆಕೆಯ ಮುಖವನ್ನು ಸ್ವಲ್ಪ ಮೇಲಕ್ಕೆತ್ತಿ ಉಸುರಿದ: 'ದುರ್ಗಾ, ನಿನ್ನ ಹೆಸರಿನಲ್ಲಿ ಕೂಡ ಇಷ್ಟು ಶಕ್ತಿಯಿದೆಯೆಂದು ಯಾರೂ ತಿಳಿಯರು ದೇವರು ಕೊಟ್ಟ ಅಮೂಲ್ಯ ರತ್ನ ನೀನು!' ಆ ಸುಂದರ ಮುಖದಲ್ಲಿಯ ಆಕರ್ಷಕ ಕಣ್ಣುಗಳು ಆನಂದ ಬಾಷ್ಪಗಳಿಂದ ತುಂಬಿದ್ದುವು. ಜೊಂದುಟಿಗಳ ಮೇಲೆ ಮುಗುಳುನಗೆಯಾಡುತ್ತಿತ್ತು. ಗಟ್ಟಿಯಾದ ಉಸುರಿನಿಂದ ಮೂಗು ಅಲುಗಾಡುತ್ತಿದ್ದಿತು. 'ದುರ್ಗಾ' ಎಂದು ಇನ್ನೂ ಸ್ವಲ್ಪ ಮುಖವನ್ನೆತ್ತಿದ. ಕಿಟಕಿಯಿಂದ ಬರುವ ಆ ಸಂಜೆಯ ಬೆಳಕಿನಲ್ಲಿ ಆ ಮೋಹಕ ಕಣ್ಣುಗಳು ಇನ್ನೂ ಹೊಳೆದುವು.

ಕೇಂದ್ರ ವಿಧಿಮಂಡಳದ ನಿರೀಕ್ಷಣೆ

(ಕೆಲವು ರಮಣೀಯ ದೃಶ್ಯಗಳು)

ಶ್ರೀ. ರ. ವಾ. ಜತ್ತಾರ, ಬಿ.ಎ.ಎಲ್‌ಎಲ್.ಬಿ. ಧಾರವಾಡ

ಕೇಂದ್ರವಿಧಿಮಂಡಲದ ಸ್ಥಾನ, ಕಾರ್ಯ, ವ್ಯಕ್ತಿಗಳ ಪರಿಚಯ ಮಾಡಿಕೊಳಬೇಕೆಂದು ಕುತೂಹಲವಿದ್ದವರು ಬಹುಜನರು. ಈ ಬರೆಪ ಅವರ ಕುತೂಹಲವನ್ನು ಕಡಿಮೆಮಾಡಬಹುದು.

ಕೇಂದ್ರ ಸರಕಾರದಲ್ಲಿ ಕಾಂಗ್ರೆಸ್ ಧುರೀಣರು ಅಧಿಕಾರ ಸ್ವೀಕಾರ ಮಾಡಿದ ಬಳಿಕ, ಹಿಂದುಸ್ತಾನ ಸರಕಾರದ ಚಟುವಟಿಕೆಗಳ ಕಡೆಗೆ ಹಿಂದೀ ಜನರು ಹೆಚ್ಚು ಕುತೂಹಲತೆಯಿಂದಲೂ ಆಸ್ಥೆಯಿಂದಲೂ ನಿರೀಕ್ಷಿಸುತ್ತಿರುವುದು ಸ್ವಾಭಾವಿಕ. ದಿಲ್ಲಿಯವರೆಗೆ ಹೋಗಿ, ನಮ್ಮ ಕಾಂಗ್ರೆಸ್ ಧುರೀಣರು ಹಿಂದುಸ್ತಾನ ಸರಕಾರವನ್ನು ಹೇಗೆ ನಡೆಯಿಸುತ್ತಿರುವರೆಂಬುದನ್ನು ನೋಡುವ ಹಂಬಲವು ನನ್ನಲ್ಲಿ ಹುಟ್ಟಿತು. ಸುದೈವದಿಂದ ಈ ಸಲವ ಕೇಂದ್ರ ವಿಧಿಮಂಡಳದ ಮುಂಗಡಪತ್ರಿಕೆಯ ಅಧಿವೇಶನವನ್ನು ನೋಡುವ ಸುಯೋಗವು ನನಗೆ ದೊರೆಯಿತು. ನಾನು ನೋಡಿದುದನ್ನು ಈ ಬರೆಹದಲ್ಲಿ ಹೇಳಬೇಕೆಂದು ಬಯಸುತ್ತೇನೆ.

ಈ ಸಲವ ಕೇಂದ್ರ ವಿಧಿಮಂಡಳದ ಮುಂಗಡ ಪತ್ರಿಕೆಯ ಅಧಿವೇಶನವು, ಫೆಬ್ರುವರಿ ೩ನೆಯ ತಾರೀಖಿಗೆ ಪ್ರಾರಂಭವಾಗಿ ಏಪ್ರಿಲ್ ೧೭ನೆಯ ತಾರೀಖಿಗೆ ಮುಕ್ತಾಯವಾಯಿತು. ಕೇಂದ್ರ ವಿಧಿಮಂಡಳದ ಕಟ್ಟಡವು ಅತ್ಯಂತ ಭವ್ಯವೂ ಅಂದವಾಗಿಯೂ ಇವೆ. ಇಂಗ್ಲಿಷ್ ಪಾರ್ಲಮೆಂಟಿಗಿಂತ ಈ ಕಟ್ಟಡವು ಎಷ್ಟೋ ಪಾಲು ಶ್ರೇಷ್ಠ ತರಗತಿಯದೆಂದು ಇಂಗ್ಲಿಷ್ ಪಾರ್ಲಮೆಂಟನ್ನು ನೋಡಿದವರು ಹೇಳುತ್ತಾರೆ. ಹೊಸ ದಿಲ್ಲಿಯಲ್ಲಿ ವಾಯಿಸ್‌ರಾಯರ ಭವನವಂತೂ ಆಧುನಿಕ ಸುಖ-ಸೌಕರ್ಯಗಳಿಂದೊಡಗೂಡಿದ ಅತ್ಯಂತ ಪ್ರಚಂಡವಾದ ಹಾಗೂ ಭವ್ಯವಾದ ಅರಮನೆಯಾಗಿರುವುದು. ಈ ಅರಮನೆಯ ಎದುರಿನ ರಾಜಬೀದಿಯಲ್ಲಿ, ಎಡಬಲ ಪಕ್ಕಗಳಲ್ಲಿ ವಿಶಾಲವಾದ ಸೆಕ್ರೆಟರಿಯೇಟಿನ (ಹಿಂದುಸ್ತಾನ ಸರಕಾರದ ಕಚೇರಿಗಳ) ಕಟ್ಟಡಗಳಿರುವುವು. ಈ ರಾಜಬೀದಿಯೇ ನೇರವಾಗಿ ಸರಳರೇಷೆಯಲ್ಲಿ, ಸಾಧಾರಣ ಒಂದು ಫರ್ಲಾಂಗದಷ್ಟರೆಗೆ, ಹಿಂದುಸ್ತಾನ್ ಆಗಸೆಯವರೆಗೆ ಹೋಗುತ್ತದೆ. ಅದಕ್ಕೆ 'Gate way of India' ಎಂದು ಹೆಸರಿಟ್ಟಿದ್ದು, ಮುಂಬಯಿಯೆಲ್ಲಿಯಂತೆಯೆ ಈ ಆಗಸೆಯಾದರೂ ಎತ್ತರವಾಗಿಯೂ ಭವ್ಯವಾಗಿರುವುದು. ಈ ಆಗಸೆಯಲ್ಲಿ ನಿಂತು ವಾಯಿಸ್‌ರಾಯ ಭವನದ ಕಡೆಗೆ ನೋಡಿದರೆ, ಅತ್ಯಂತ ಆಕರ್ಷಕವಾದ ರಮಣೀಯ ದೃಶ್ಯವು ಕಾಣಿಸುತ್ತದೆ. ಈ ರಾಜಬೀದಿಯ ಎರಡೂ ಬದಿಗಳಲ್ಲಿ ಉಪವನಗಳೂ ಜಲಸಂಚಯಗಳೂ ಇದ್ದು, ಸೆಕ್ರೆಟರಿಯೇಟಿನ ಎರಡೂ ಬದಿಗಳಲ್ಲಿಯ ಕಟ್ಟಡಗಳ ಮಧ್ಯದಿಂದ ಹೋಗುವ ರಾಜಬೀದಿಯು ಕೊನೆಗೆ-ಎತ್ತರದ ಮೇಲೆ-ವಾಯಿಸ್‌ರಾಯರ ಭವನವು ಹೆಮ್ಮೆಯಿಂದ ನಿಂತುದು ಕಂಗೊಳಿಸುತ್ತಿರುವುದು. ವಾಯಿಸ್‌ರಾಯರ ಭವನದ ಹಿಂದಿನ ಭಾಗದಲ್ಲಿ ನಯನಮನೋಹರವಾದ ವಿವಿಧ ಬಣ್ಣಗಳ ಪುಷ್ಪಲತೆಗಳಿಂದ ತುಂಬಿದ ಹಾಗೂ ಅನೇಕ ಜಲತುಷಾರಗಳನ್ನು ಹಾರಿಸುವ ಕಾರಂಜಿಗಳಿದ್ದ ಹೂದೋಟವಿದೆ. ಈ ತೋಟದಲ್ಲಿ ಪ್ರವೇಶ ಸಿಕ್ಕುವುದು ದುಷ್ಕರ. ಆದರೆ ಇತ್ತೀಚೆಗೆ ಯಾವಾಗಾದರೊಮ್ಮೆ, ಸಾರ್ವಜನಿಕರಿಗೆ ನೋಡಲು ಪ್ರವೇಶ ದೊರೆಯುತ್ತದೆ. ನಾನೊಮ್ಮೆ ಸಂಧಿಯನ್ನು ಸಾಧಿಸಿ ಈ ತೋಟವನ್ನು ನೋಡಿ, ಮೊಗಲ ಬಾದಶಹರ ವೈಭವವನ್ನು ವಿಾರುವಂತಹ ಹಾಗೂ ಚಿತ್ರಪಟಗಳಲ್ಲಿ ಸಹ ನೋಡಲಿಕ್ಕೆ ಸಿಕ್ಕದಂತಹ ಅವರ್ಣನೀಯವಾದ ಹೂದೋಟವನ್ನು ನೋಡಿ ಬೆರಗಾಗಿರುವೆನು. ದಿಲ್ಲಿಗೆ ಹೋಗತಕ್ಕವರು ಈ ತೋಟವನ್ನು ಮರೆಯದೆ ನೋಡಬೇಕೆಂದು ನಾನು ಹೇಳದಿರಲಾರೆ.

ಬಲಬದಿಯ ಸೆಕ್ರೆಟರಿಯೇಟಿನ ಹತ್ತಿರ 'ಕೌನ್ಸಿಲ್ ಚೇಂಬರ್' ಎಂಬ ದುಂಡು ಕಟ್ಟಡವಿದೆ. ಈ ಕಟ್ಟಡದಲ್ಲಿ ಮೂರು ಬೇರೆ ಬೇರೆ ಸಭಾಗೃಹಗಳಿರುತ್ತವೆ. ಪರಿಷ್ಕ ವಿಧಿಮಂಡಳ (Council of State) ಕೇಂದ್ರ ವಿಧಿಮಂಡಳ (Legislative Assembly) ಮತ್ತು ನರೇಂದ್ರ ಮಂಡಳ (Chamber of Princes).—ಈ ಮೂರು ಗೃಹಗಳ ಹೊರತಾಗಿ ದುಂಡು ಕಟ್ಟಡದ ಮಧ್ಯಭಾಗದಲ್ಲಿ ಗ್ರಂಥಾಲಯವಿದೆ. ಈ ಗ್ರಂಥಾಲಯದಲ್ಲಿಯೆ ಘಟನಾಸಮಿತಿಯ ಅಧಿವೇಶನಗಳು ಸೇರುತ್ತವೆ. ಈ ಯಾವತ್ತೂ ಗೃಹಗಳು ಭವ್ಯವಿರುವಲ್ಲದೆ ಅವುಗಳ ರಚನೆ, ನಪ್ಪೆಯ ಕೆಲಸ, ವೈಶಾಲ್ಯ ಮೊದಲಾದ ವಿಷಯಗಳಲ್ಲಿ ರಾಜಧಾನಿಗೆ ಒಪ್ಪುವಂತಹವಿರುತ್ತವೆ. ನರೇಂದ್ರ ಮಂಡಳದ ಗೃಹವಂತೂ ರಾಜ-ರಾಜರಿಗೆ ಒಪ್ಪುವಂತಹದಿದ್ದು ಈ ಮಂಡಳದ ಅಧಿವೇಶನವಿಲ್ಲದಿದ್ದಾಗ ಅಲ್ಲಿ ಫೆಡರಲ್ ಕೋರ್ಟು ಸೇರುತ್ತದೆ

ಕೇಂದ್ರ ವಿಧಿಮಂಡಳದಲ್ಲಿ ಪ್ರವೇಶಿಸಲಿಕ್ಕೆ ಸದಸ್ಯರಿಗೂ ಅಧಿಕಾರಸ್ಥರಿಗೂ ಸಾಮಾನ್ಯ ಪ್ರೇಕ್ಷಕರಿಗೂ ಹಾಗೂ ಸನ್ಮಾನ್ಯ ಪ್ರೇಕ್ಷಕ ಹಾಗೂ ಅಧ್ಯಕ್ಷರಿಗೂ ಬೇರೆ ಬೇರೆ ಪ್ರತ್ಯೇಕ ಪ್ರವೇಶದ್ವಾರಗಳಿವೆ. ಅನುವರು ಆ ಆ ಬಾಗಿಲಿನಿಂದಲೆ ಪ್ರವೇಶಿಸಬೇಕಾಗುತ್ತದೆ. ಸದಸ್ಯರು ಕೆಳಗಿನ ಅಂತಸ್ತನ್ನು ಪ್ರವೇಶಿಸು

ವರು. ಆಲ್ಲಿ ಸದಸ್ಯರ ಹೊರತಾಗಿ ಯಾರಿಗೂ ಪ್ರವೇಶವಿಲ್ಲ. ಪ್ರೇಕ್ಷಕರಿಗೆ ಹಾಗೂ ವೃತ್ತಪತ್ರ ಪ್ರತಿನಿಧಿಗಳಿಗೆ ಅಟ್ಟದ ಮೇಲೆ ಹೋಗಬೇಕಾಗುತ್ತದೆ ಈ ಗೃಹದಲ್ಲಿ ಸಶಸ್ತ್ರ ಪೋಲೀಸರ ಕಾವಲಿರುತ್ತದೆ ಸನ್ಮಾನ್ಯ ಪ್ರೇಕ್ಷಕರಿಗೂ ವೃತ್ತಪತ್ರ ಪ್ರತಿನಿಧಿಗಳಿಗೂ ಅಟ್ಟದ ಮೇಲೆ ಹೋಗಲು ವಿದ್ಯುತ್ತಿನ ತೊಟ್ಟಿಲು ಇದೆ. ಸಾಮಾನ್ಯ ಪ್ರೇಕ್ಷಕರಿಗೆ ಮಾತ್ರ ಟಿಕೀಟಿನ ಹೊರತಾಗಿ ಪ್ರವೇಶವು ದೊರೆಯುವುದಿಲ್ಲ. ಈ ಟಿಕೀಟಿಗೆ ಬೆಲೆಯನ್ನೇನೂ ಕೊಡಬೇಕಾಗಿಲ್ಲ; ಆದರೆ ಅದನ್ನು ಯಾವನಾದರೊಬ್ಬ ಸದಸ್ಯನ ಮುಖಾಂತರವಾಗಿ ದೊರೆಕಿಸಿಕೊಳ್ಳಬೇಕಾಗುತ್ತದೆ ಯಾವ ದಿವಸ ಪ್ರೇಕ್ಷಕರಿಗೆ ಗೃಹದಲ್ಲಿ ಹೋಗಬೇಕೆಂಬ ಇಚ್ಛೆಯಿರುತ್ತದೆಯೊ ಆ ದಿವಸಕ್ಕೆ ಮುಂಚಿತವಾಗಿ—ಕನಿಷ್ಟ ಎರಡು ದಿವಸ ಮೊದಲು—ಸದಸ್ಯರು ಅರ್ಜಿಯನ್ನು ಮಾಡಬೇಕಾಗುತ್ತದೆ ಪ್ರೇಕ್ಷಕರು ಸದಸ್ಯರ ಆನ್ತೇಷ್ಟರಿದ್ದರೆ, ಒಂದೇ ದಿನ ಮೊದಲು ಅರ್ಜಿಯನ್ನು ಮಾಡಿದರೂ ನಡೆಯುತ್ತದೆ. ಸನ್ಮಾನ್ಯ ಪ್ರೇಕ್ಷಕರಿಗೆ ಮಾತ್ರ ಅದೇ ದಿನ ಟಿಕೀಟು ಕೊಡುವ ಅಧಿಕಾರವು, ಕೇಂದ್ರ ವಿಧಿಮಂಡಳದ ಅಧ್ಯಕ್ಷರಿಗಿರುವುದು.

ಪ್ರೇಕ್ಷಕರು ಗೃಹದಲ್ಲಿ ಪ್ರವೇಶಮಾಡುವ ಪೂರ್ವದಲ್ಲಿ, ಅಟ್ಟದ ಮೇಲೆಯೆ ಮೊದಲು ಪೋಲೀಸರಿಂದ ತಮ್ಮ ಟಿಕೀಟಿನ ಮೇಲೆ ಗುರುತು ಮಾಡಿಸಿಕೊಂಡು, ಕೆಲ ಹೆಜ್ಜೆ ಮುಂದೆ ಹೋಗಿ, ಒಳಗೆ ಪ್ರವೇಶಮಾಡುವ ಬಾಗಿಲಿನ ಹತ್ತಿರವೆ ಮತ್ತೊಮ್ಮೆ ವಿಧಿಮಂಡಳದ ನೋಕರರಿಂದ ತಮ್ಮ ಟಿಕೀಟಿನ ಮೇಲೆ ಗುರುತು ಮಾಡಿಸಿಕೊಳ್ಳಬೇಕಾಗುತ್ತದೆ.ಪೋಲೀಸರಾಗಲಿ, ವಿಧಿಮಂಡಳದ ನೋಕರರಾಗಲಿ, ಟಿಕೀಟಿನ ಮೇಲೆ ಗುರುತುಮಾಡುವ ಕಾಲಕ್ಕೆ ತಮ್ಮ ಕಡೆಗಿದ್ದ ಪ್ರೇಕ್ಷಕರ ಹೆಸರಿನ ಯಾದಿಯಲ್ಲಿಯೂ ಗುರುತು ಮಾಡಬೇಕಾಗುತ್ತದೆ. ಎಂದರೆ ಒಳಗೆ ಯಾವ ಪ್ರೇಕ್ಷಕರಿರುವರೆಂಬುದನ್ನು ಆ ಯಾದಿಗಳಲ್ಲಿ ನೋಡಿದರೆ ಗೊತ್ತಾಗುತ್ತದೆ. ಕೇಂದ್ರ ವಿಧಿಮಂಡಳದಲ್ಲಿ ಪ್ರವೇಶ ದೊರೆಕಿಸುವುದು ಅಷ್ಟೇನು ಸುಲಭವಿಲ್ಲವೆಂಬುದು ಇದರ ಮೇಲಿಂದ ಗೊತ್ತಾಗುವುದು. ಪ್ರೇಕ್ಷಕರ ಅಟ್ಟ (ಗ್ಯಾಲರಿ) ಅಧ್ಯಕ್ಷರು ಕೂಡ್ರುವ ಸ್ಥಳದ ಎದುರಿಗಿದ್ದು ಬಹಳೇ ಪ್ರಶಸ್ತವಿದೆ. ಆಲ್ಲಿಂದ, ಕೆಳಗಿರುವ ಎಲ್ಲ ಮಂತ್ರಿಗಳ ಸಭಾಸದರ ಹಾಗೂ ಅಧ್ಯಕ್ಷರ ನೋರೆಗಳು ಚೆನ್ನಾಗಿ ಕಾಣಿಸುವುವಲ್ಲದೆ, ಅವರ ಭಾಷಣಗಳಾದರೂ ಸ್ಪಷ್ಟವಾಗಿ ಕೇಳಿಸುತ್ತವೆ.

ಪ್ರೇಕ್ಷಕರ ಗ್ಯಾಲರಿಯ ಎದುರಿಗೆ,ಎಂದರೆ ಅಧ್ಯಕ್ಷರು ಕೂಡ್ರುವ ಸ್ಥಳದ ಮೇಲೆ, ವೃತ್ತಪತ್ರಗಳ ಪ್ರತಿನಿಧಿಗಳ ಅಟ್ಟವಿರುತ್ತದೆ. ಆಲ್ಲಿಂದ ಸಹ ಸದಸ್ಯರ ಭಾಷಣಗಳು ಸ್ಪಷ್ಟವಾಗಿ ಕೇಳಿಸುತ್ತವೆ. ಅದರ ಬಲಕ್ಕೆ ಅಧ್ಯಕ್ಷರ ಅತಿಥಿಗಳಿಗೂ, ವರಿಷ್ಠ ವಿಧಿಮಂಡಳದ ಸದಸ್ಯರಿಗೂ ಸನಾನ್ಯ ಪ್ರೇಕ್ಷಕರಿಗೂ ಸ್ಥಳಗಳು ಕಾರ್ದಿಲ್ಪಟ್ಟಿವೆ. ಈ ಸ್ಥಳಗಳ ಎದುರಿಗೆ ಸನಾನ್ಯ ಸದ್ಗೃಹಸ್ಥರಿಗೂ ಹಾಗೂ ಸ್ತ್ರೀಯರಿಗೂ ಸ್ಥಳಗಳಿವೆ. ಕೇಂದ್ರ ವಿಧಿಮಂಡಳದ ಸಭಾಗೃಹದ ಆಕಾರವು ಅರ್ಧವರ್ತುಲಾಕಾರವಿದೆ. ಸಭಾಗೃಹದ ವಿಸ್ತಾರ, ಕಲಾಮಯರಚನೆ, ಸದಸ್ಯರ ಸುಖ-ಸೌಕರ್ಯಗಳು, ಭವ್ಯವಾದ ಗ್ರಂಥಾಲಯ, ಅಂದವಾದ ವಿಶ್ರಾಂತಿ ಗೃಹಗಳು ಮೊದಲಾದುವುಗಳನ್ನು ನೋಡಿದರೆ, ಮೊಗಲ ಬಾದಶಹರ ವೈಭವಗಳು ನೆನಪಾಗುತ್ತವೆ.

ಸಭಾಗೃಹದಲ್ಲಿ ಅಧ್ಯಕ್ಷರು ಮಧ್ಯದಲ್ಲಿ ಉಚ್ಚಾಸನದ ಮೇಲೆ ಕೂಡ್ರುತ್ತಾರೆ ಸದ್ಯ ನಾನ್ಯ ಮಾವಳಣಕರರು ಅಧ್ಯಕ್ಷರಿರುವರು. ಹಿಂದಿನ ಅಧ್ಯಕ್ಷರು ಇಂಗ್ಲಿಷ್ ಪದ್ಧತಿಯ ಗೌನ್ ಹಾಗೂ ಸ್ಟಿಗ್ ಹಾಕಿಕೊಳ್ಳುತ್ತಿದ್ದರು ಶ್ರೀ. ಮಾವಳಣಕರರು ಆದನ್ನು ಕಿತ್ತೊಗೆದು,ತಮ್ಮ ಗಾಂಧಿಟೊಪ್ಪಿಗೆ ಹಾಗೂ ಖಾದಿಯ ಕೋಟು ಹಾಕಿ, ಹಿಂದೀಯರ ವೈಶಿಷ್ಟ್ಯವನ್ನು ಕಾಯ್ದಿರುವರು ಅಧ್ಯಕ್ಷರ ಎದುರಿಗೆ ಸದಸ್ಯರು ಅರ್ಧ ವರ್ತುಲಾಕಾರದಲ್ಲಿ ಆಸನಸ್ಥರಾಗಿರುತ್ತಾರೆ. ಅವರ ಬಲಪಕ್ಕದಲ್ಲಿ ಸರಕಾರೀ ನೋಕರರ ಗ್ಯಾಲರಿಯಿದೆ ಅಲ್ಲಿ ಬೇರೆ ಬೇರೆ ಖಾತೆಗಳ ಕಾರ್ಯದರ್ಶಿಗಳು ಕಾಗದ-ಪತ್ರಗಳನ್ನು ತೆಗೆದುಕೊಂಡು ಸಿದ್ಧರಾಗಿ ಕುಳಿತುಕೊಳ್ಳುತ್ತಾರೆ. ಅವರಿಗೆ ಆ ಗ್ಯಾಲರಿಯಲ್ಲಿ ಪ್ರವೇಶಿಸಲಿಕ್ಕೆ, ಹಿಂದಿನಿಂದ ಜೇರೆ ಬಾಗಿಲು ಇದೆ. ಅಧ್ಯಕ್ಷರ ಎಡಪಕ್ಕದಲ್ಲಿ ವ್ಹಾಯಿಸ್‌ರಾಯರ ಗ್ಯಾಲರಿಯಿದೆ ಆ ಗ್ಯಾಲರಿಯಲ್ಲಿ ಪಾರ್ಲ್‌ಮೆಂಟಿನ ಸದಸ್ಯರೂ, ಪ್ರಾಂತದ ಗವರ್ನರರೂ, ವ್ಹಾಯಿಸ್‌ರಾಯರ ಆಸ್ತೇಷ್ಟರೂ ಹಾಗೂ ಅತಿಥಿಗಳೂ ಮೊದಲಾದವರಿಗಷ್ಟೇ ಪ್ರವೇಶ ದೊರೆಯುತ್ತದೆ.

ಸಭಾಗೃಹದಲ್ಲಿ ಕಾರ್ಯಕಲಾಪಗಳು— ಪ್ರತಿನಿತ್ಯ— ಸರಿಯಾಗಿ ೧೧ರಿಂದ ೧-೧೫ ರ ವರೆಗೆ, ಮತ್ತು ಮಧ್ಯಾನ್ಹ ೩-೫೦ ರಿಂದ ೫ ರ ವರೆಗೆ ನಡೆಯುತ್ತವೆ. ಶುಕ್ರವಾರ ದಿವಸ ಮಾತ್ರ ಮುಸಲ್ಮಾನರಿಗೆ ನಮಾರ್ಧನೆ ಮಾಡಲಿಕ್ಕೆ ಅನುಕೂಲವಾಗಬೇಕೆಂದು,೧-೧೫ರ ಬದಲು ೧ ಗಂಟೆಗೇ ಸದಸ್ಯರು ಏಳುತ್ತಾರೆ. ಸರಿಯಾಗಿ ೧೧ಗಂಟೆಗೆ ಅಸೆಂಬ್ಲಿಯ ಕಾರ್ಯ ಪ್ರಾರಂಭವಾಗುತ್ತದೆ. ಗಡಿಯಾರದ ಮುಳ್ಳು ೧೧ಗಂಟೆಯ ಮೇಲೆ ಬರುವುದೇ ತಡ, ಅಧ್ಯಕ್ಷರ ಕಾರ್ಯದರ್ಶಿಯು ಮೊದಲು ಬಂದು "ಸಭ್ಯ ಗೃಹಸ್ಥರೆ, ಅಧ್ಯಕ್ಷರು ಬರುತ್ತಾ ಇದ್ದಾರೆ" ಎಂದು ಜೋರಿನ ಮಾತುಗಳಲ್ಲಿ ಹೇಳುವಷ್ಟರಲ್ಲಿ, ಅಧ್ಯಕ್ಷರು ತಮ್ಮ ಆಸನದ ಕಡೆಗೆ ಬರುತ್ತಾರೆ. ಸದಸ್ಯರೆಲ್ಲರೂ ಎದ್ದು ನಿಂತು ಪ್ರಣಾಮ ಮಾಡುತ್ತಾರೆ. ಅಧ್ಯಕ್ಷರಾದವರೂ ಮೂರುಸಾರೆ ಬಾಗಿ ನಮಸ್ಕಾರಾಪನ್ನರಾಗುತ್ತಾರೆ. ಶವನ ವಿಧಿಯಾಗುವುದಿದ್ದರೆ ಅದಾದ ಮೇಲೆ, ಏನಾದರೂ ಘೋಷಣೆಯನ್ನು ಮಾಡತಕ್ಕದ್ದಿದ್ದರೆ ಅಧ್ಯಕ್ಷರು ಮಾಡುತ್ತಾರೆ. ಸಭಾಗೃಹದ ಧುರೀಣರಾದ ಪಂಡಿತ ನೆಹರೂರವರಿಗೆ ಏನಾದರೂ ಹೇಳತಕ್ಕದ್ದಿದ್ದರೆ ಅದನ್ನು ಹೇಳಿಬಿಡುತ್ತಾರೆ. ಆ ಮೇಲೆ ಪ್ರಶ್ನೋತ್ತರಗಳು ನಡೆಯುತ್ತವೆ. ಪ್ರಶ್ನೋತ್ತರಗಳು ೧೧ರಿಂದ ೧೨ ರ ವರೆಗೆ ನಡೆಯುತ್ತವೆ ಪ್ರಶ್ನಾವಲಿಗಳು ಮುದ್ರಿತವಿರುತ್ತವೆ. ಪ್ರತಿಯೊಂದು ಪ್ರಶ್ನೆಗೆ ನಂಬರು ಇರುತ್ತದೆ. ಅಧ್ಯಕ್ಷರು ನಂಬರನ್ನು ಉಚ್ಚರಿಸಿದ ಕೂಡಲೆ, ಆ ಪ್ರಶ್ನೆಯನ್ನು ಕೇಳಿದ ಸದಸ್ಯರು ಎದ್ದು ಕುಳಿತುಕೊಳ್ಳುತ್ತಾರೆ. ಆ ಸಭಾಸದರು

ಇರದಿದ್ದರೆ ಮುಂದಿನ ನಂಬರನ್ನು ಉಚ್ಚರಿಸುತ್ತಾರೆ. ಆದರೆ ಉತ್ತರವನ್ನು ಮಂತ್ರಿಗಳಾಗಲಿ, ಅವರ ಕಾರ್ಯದರ್ಶಿಗಳಾಗಲಿ ಓದಿ ತೋರಿಸುತ್ತಾರೆ. ಆ ಮೇಲೆ ಸದಸ್ಯರು ಮರುಸವಾಲುಗಳನ್ನು ಹಾಕುತ್ತಾರೆ. ಉಪಪ್ರಶ್ನೆಗಳಿಗೆ ಉತ್ತರ ಕೊಡಲಿಕ್ಕೆ ಸಾಧ್ಯವಾಗದಿದ್ದರೆ "ಆ ಉಪಪ್ರಶ್ನೆಯ ಬಗೆಗೆ ನೋಟೀಸು ಕೊಡಿರಿ" ಎಂದು ಹೇಳಲಾಗುತ್ತದೆ. ಬಳಿಕ ಅಲ್ಪಾವಧಿಯ ಪ್ರಶ್ನೆಗಳನ್ನು ಕೇಳಲಾಗುತ್ತದೆ. ಅವಕ್ಕೆ ೩ ಗಂಟೆಗಳ ನೋಟೀಸು ಸಾಕಾಗುತ್ತದೆ. ನಿಲುವಳಿ ಸೂಚನೆಗಳಿದ್ದರೆ ಅವುಗಳ ಮೇಲೆ ಚರ್ಚೆಯಾಗುತ್ತದೆ. ಇಷ್ಟಾದ ಬಳಿಕ, ಗೊತ್ತುವಳಿಗಳಾಗಲಿ ಬಿಲ್ಲುಗಳಾಗಲಿ ಚರ್ಚಿಸಲ್ಪಡುತ್ತವೆ. ಮುಖ್ಯತಃ ೧೧ ರಿಂದ ೨ ಗಂಟೆಯ ವರೆಗೆ ಪ್ರೇಕ್ಷಕರ ಸುದ್ದಿಗಾರರ ಹಾಗೂ ಸದಸ್ಯರ ಸಂಖ್ಯೆಯು ಹೆಚ್ಚಿರುತ್ತದೆ. ಆಮೇಲೆ ಅನೇಕ ಪ್ರೇಕ್ಷಕರು ಸುದ್ದಿಗಾರರು ಹಾಗೂ ಸದಸ್ಯರು ಹೊರಟುಹೋಗುತ್ತಾರೆ.

ಸಭಾಗೃಹದಲ್ಲಿ ಸದಸ್ಯರ ಸಾಲುಗಳಲ್ಲಿ, ಅಧ್ಯಕ್ಷರ ಬಲಪಕ್ಕದಲ್ಲಿ ಸರಕಾರದ ಪಕ್ಷದವರು ಕುಳಿತುಕೊಳ್ಳುತ್ತಾರೆ. ಮೊದಲನೆಯ ಆಸನದಲ್ಲಿ ಭಾರತಭೂಷಣರಾದ ಪಂಡಿತ ಜವಾಹರಲಾಲ ನೆಹರೂರವರು ಹಾಗು ಅವರ ಜೊತೆಗೆ ಅರ್ಧಸಚಿವರಾದ ನವಾಬ ಜಾದಾ ಲಿಯಾಖತ ಅಲೀಖಾನರು ಕುಳಿತುಕೊಳ್ಳುತ್ತಾರೆ. ಆಮೇಲೆ ಗೃಹಮಂತ್ರಿಗಳಾದ ಸರದಾರ ವಲ್ಲಭಭಾಯಿ ಪಟೇಲರು ಒಳ್ಳೇ ಗಂಭೀರಮುದ್ರೆಯನ್ನು ತಾಳಿ ಕುಳಿತುಕೊಂಡಿರುತ್ತಾರೆ. ಅವರನ್ನು ನೋಡಿದರೆ, ಶತ್ರುಗಳ ಎದೆಯಲ್ಲಿ ಭಯಹುಟ್ಟಿದರೆ ಆಶ್ಚರ್ಯವಲ್ಲ. ಆಮೇಲೆ ಮೊದಲಿನ ಸಾಲಿನಲ್ಲಿಯೆ ಮಿ. ಚುಂದ್ರಿಗಾರ, ಮೌಲಾನಾ ಕಬ್ದುಲ್‌ಕಲಂ ಆಜಾದ್, ಶ್ರೀಯುತ ಸಿ. ರಾಜಗೋಪಾಲಾಚಾರ್ಯ, ಡಾ ಜಾನಮಥಾಯಿ, ಶ್ರೀ. ಜಗಜೀವನರಾಮ ಮೊದಲಾದವರು ಆಸನಸ್ಥರಾಗಿರುತ್ತಾರೆ. ಈ ಮಂತ್ರಿಗಳ ಹಿಂದೆ ಸರಕಾರೀ ಪಕ್ಷದ ಪ್ರತೋದರಾದ ಶ್ರೀಯುತ ಸತ್ಯನಾರಾಯಣಸಿಂಹ, ಸಂರಕ್ಷಣ ಮಂತ್ರಿಗಳ ಕಾರ್ಯದರ್ಶಿಗಳಾದ ಮಿ ಭಾಲಜಾ, ಅನ್ನಪೂರ್ತಮ್ಮ ಸೆಕ್ರೆಟರಿ ಮಿ. ಪಂಜಾಬಿ, ಮಿ. ಭಾಭಾರವರ ಕಾರ್ಯದರ್ಶಿಗಳಾದ ಮಿ. ಗೋಖಲೆ ಮೊದಲಾದವರು ಕುಳಿತುಕೊಂಡಿರುತ್ತಾರೆ. ಪಂಡಿತ ನೆಹರೂರವರ ಎದುರಿಗೆ ಉಪಾಧ್ಯಕ್ಷರಾದ ಮಿ ಯಾಮಿನಖಾನ್ ಹಾಗೂ ವಿರೋಧಿಪಕ್ಷದ ಧುರೀಣರಾದ ಮಿ. ಗ್ರಿಫಿತ್(ಯುರೋಪಿಯನ್ ಗುಂಪಿನ ಮುಂದಾಳುಗಳು) ಇವರು ಕುಳಿತುಕೊಳ್ಳುತ್ತಾರೆ. ಅದೇ ಸ್ಥಳದಲ್ಲಿ ಪಂಡಿತ ಮೋತೀಲಾಲ ನೆಹರೂ, ಭುಲಾಭಾಯಿ ದೇಸಾಯಿ, ಶರಚ್ಚಂದ್ರ ಬೋಸ ಇವರೆಲ್ಲರೂ ವಿರೋಧೀ ಪಕ್ಷದ ಧುರೀಣರೆಂದು ಕುಳಿತುಕೊಂಡು ಗೃಹದಲ್ಲಿ ತಮ್ಮ ಪ್ರಭಾವವನ್ನು ತೋರಿಸಿದ್ದಾರೆ. ಅದು ಜನರ ನೆನಪಿನಲ್ಲಿರಲಿಕ್ಕೆ ಸಾಕು. ಆಮೇಲೆ ಮಿ. ಜಿನ್ನಾ, ಬಂಗಾಲದ ಮಾಜೀ ಮುಖ್ಯ ಮಂತ್ರಿಗಳಾದ ಮಿ. ನಜೀಮುದ್ದೀನ, ಡಾ. ದೇಶಮುಖ, ಮನುಸುಭೇದಾರ, ಸೇಠ ಗೋವಿಂದದಾಸ ಮೊದಲಾದವರು ಮೊದಲನೆಯ ಸಾಲಿನಲ್ಲಿಯೆ ಕುಳಿತುಕೊಳ್ಳುತ್ತಾರೆ. ಮಿ. ಜಿನ್ನಾ ಇವರು ಈ ಸ್ಥಾನವು ಅಧಿವೇಶನಕ್ಕೆ ಕೊನೆಯದಿವಸವಷ್ಟೇ ಎರಡು ಮೂರಿಟುಗಳ ಮಟ್ಟಿಗೆ ಗೃಹದಲ್ಲಿ ಹಾಜರ ಇದ್ದು, ತಮ್ಮ ಸಭಾಸದತ್ವವನ್ನು ಕಾಯ್ದುಕೊಂಡಿದ್ದಾರೆ.

ಈ ಸಲದ ಅಧಿವೇಶನದಲ್ಲಿ ಶ್ರೀಮತಿ ಅಮ್ಮು ಸ್ವಾಮಿನಾಥನ್ ಅವರು ಅಧ್ಯಕ್ಷರ ಆಸನವನ್ನು ಅಲಂಕರಿಸಿದ್ದರು. ಇದೇ ಮೊದಲನೆಯ ಸಲ ಸ್ತ್ರೀಯು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದುದು.

ಈ ಸಲದ ಕೇಂದ್ರ ವಿಧಿಮಂಡಳದ ಮುಂಗಡ ಪತ್ರಿಕೆಯ ಅಧಿವೇಶನವು ೪೭ ದಿನಸ ಸೇರಿತು. ಈ ಅಧಿವೇಶನದಲ್ಲಿ ಒಟ್ಟು ೩೪ ಸರಕಾರೀ ಬಿಲ್ಲುಗಳು ಹಾಗೂ ೨ ಸರಕಾರೇತರ ಬಿಲ್ಲು ಸಮ್ಮತವಾದುವು. ಬೇರೆ ಬೇರೆ ಖಾತೆಗಳಿಗೆ ಸಂಬಂಧಿಸಿದ ಒಟ್ಟು ೧೫೮೮ ಪ್ರಶ್ನೆಗಳು ಕೇಳಲ್ಪಟ್ಟುವು ಅವುಗಳ ಮೇಲೆ ಎಷ್ಟು ಉಪಪ್ರಶ್ನೆಗಳು ಕೇಳಲ್ಪಟ್ಟವೋ ಅವುಗಳ ಲೆಕ್ಕವೇ ಹತ್ತುವ ಹಾಗಿಲ್ಲ. ಅಲ್ಪಾವಧಿಯ ೬೨ ಪ್ರಶ್ನೆಗಳು ಕೇಳಲ್ಪಟ್ಟುವು. ಮತ್ತು ೪೨ ಪ್ರಶ್ನೆಗಳ ಮೇಲೆ ಚರ್ಚೆಯಾಯಿತು ೩೧ ನಿಲುವಳಿ ಸೂಚನೆಗಳು ತರಲ್ಪಟ್ಟಿದ್ದುವು. ಅವಗಳಲ್ಲಿ ಕೇವಲ ಮಿ. ಸಿದ್ದಿಕಿ ಎಂಬವರ ನಂದಹಾರದ ಬಗ್ಗೆ ನಿಷೇಧ ವ್ಯಕ್ತಗೊಳಿಸುವ ಸೂಚನೆಯ ಮೇಲೆ ಅಷ್ಟೇ ಚರ್ಚೆಯಾಯಿತು ಆ ಚರ್ಚೆಯ ಮೇಲೆ ಮತಗಣನೆಯಾಗಿ, ಸರಕಾರದ ವಿಜಯವಾಯಿತು. ಈ ಚರ್ಚೆಯಲ್ಲಿ ಪಂಡಿತ ನೆಹರೂರವರು ೪೦ ನಿಮಿಷಗಳ ವರೆಗೆ ಅಪ್ರತಿಮ ಭಾಷಣವನ್ನು ಮಾಡಿ, ತಮ್ಮ ಅಲೌಕಿಕ ವ್ಯಕ್ತಿತ್ವದ ಬಗ್ಗೆ ಗೃಹದ ಮನವರಿಕೆಯನ್ನು ಮಾಡಿಕೊಟ್ಟರು

ಕೇಂದ್ರ ವಿಧಿಮಂಡಳದ ಸದಸ್ಯರು, ಹೊಸದಿಲ್ಲಿಯಲ್ಲಿಯೆ ಸರಕಾರದವರೇ ಕಟ್ಟಿಸಿದ ಭವ್ಯವಾದ ಬಂಗಲೆಗಳಲ್ಲಿ ಇರುತ್ತಾರೆ. ಸರಕಾರದವರಿಗೆ ಆ ಬಗ್ಗೆ ಬಾಡಿಗೆಯನ್ನು ಕೊಡಬೇಕಾಗುತ್ತದೆ. ಈಗ ಸದಸ್ಯರಿಗೆ ಪ್ರತಿನಿತ್ಯ ೪೫ ರೂ. ಗಳ ಭತ್ತೆ ಸಿಕ್ಕುತ್ತದೆ. ಪ್ರವಾಸವೆಚ್ಚದ ಬಗ್ಗೆ ಫಸ್ಟ್‌ಕ್ಲಾಸಿನ ಒಂದುವರೆಯಷ್ಟು ಕೊಡಲಾಗುತ್ತದೆ. ಅವರಿಗೆ ಯಾವುದೇ ವರ್ಗದಿಂದ ಪ್ರವಾಸ ನಾಡಲಿಕ್ಕೆ ಸ್ವಾತಂತ್ರ್ಯವಿದ್ದರೂ, ಅಷ್ಟು ಪ್ರವಾಸವೆಚ್ಚ ಅವರಿಗೆ ಹೊರೆಯುತ್ತದೆ.

ಈ ಸಲದ ಕೇಂದ್ರ ಅಸೆಂಬ್ಲಿಯಲ್ಲಿ ಕರ್ನಾಟಕದ ಪ್ರತಿನಿಧಿಗಳಾದ ಶ್ರೀ. ಕರಮರಕರರು ಒಳ್ಳೆಯ ಕೆಲಸಗಳನ್ನು ಮಾಡಿ, ಕರ್ನಾಟಕದ ಹೆಸರನ್ನು ಮುಂದೆತಂದರೆಂಬುದರಲ್ಲಿ ಸಂದೇಹವಿಲ್ಲ. ಅವರನ್ನು ಸರಕಾರದವರು ಈ ಅಧಿವೇಶನ ನಡೆದ ಕಾಲಕ್ಕೇನೇ ಆಂತರರಾಷ್ಟ್ರೀಯ ವಾಣಿಜ್ಯ ಪರಿಷತ್ತಿಗೆ ಹಾಜರ್ ಆಗಲು ಜಿನೇವಾಕ್ಕೆ ಕಳಿಸಿರುವರು. ಶ್ರೀ. ಕರಮರಕರರು ಏಪ್ರಿಲ್ ೫ನೆಯ ತಾರೀಖಿನ ದಿವಸ ವಿಮಾನಮಾರ್ಗವಾಗಿ ಹೊಸದಿಲ್ಲಿಯಿಂದ ಹೊರಟು ಲಂಡನ್ನಿಗೆ ಹೋಗಿ, ಅಲ್ಲಿಂದ ಏಪ್ರಿಲ್ ೯ನೆಯ ತಾರೀಖಿನ ದಿವಸ ಜಿನೇವಾ ಮುಟ್ಟಿರುವರು. ಜೂನ ೩೦ಗಳ ಕೊನೆಗೆ ಅವರು ಜಿನೇವಾದಿಂದ ಭಾರತಕ್ಕೆ ಮರಳಿ ಬರುವವರಿದ್ದಾರೆ ಶ್ರೀ. ಕರಮರಕರರು ಹೊಸದಿಲ್ಲಿಯಲ್ಲಿ ೧೫ ಡಿ. ಫೆರೋಜಶಹಾ ರೋಡ್ ಎಂಬ ಬಂಗ್ಲೆಯಲ್ಲಿ ವಾಸಿಸುತ್ತಿದ್ದರು. ಕರ್ನಾಟಕ ಏಕೀಕರಣ ಸಂಘದ ಕಾರ್ಯಾಲಯವಾದರೂ ಅಲ್ಲಿಯೆ ಇದ್ದಿತು.



ಪಲಾಯನ

(ಕವನ ಸಂಗ್ರಹ)

ರಚಿಸಿದವರು— ಶ್ರೀ. ವಿ. ಜಿ ಭಟ್ಟರು.

ಪ್ರಕಾಶಕರು: ಮ. ಗ. ಶೆಟ್ಟಿ, ಬಂಕಿಕೊಡ್ಲು.

ಹೊಸಕವನ ಯಾವ ಹಾದಿ ಹಿಡಿದಿದೆಯೆಂಬುದನ್ನು ತಿಳಿಯುವುದಕ್ಕೆ ಈ ಪುಟ್ಟ ಸಂಗ್ರಹ ಒಂದು ಸೂಚನೆಯಾಗಿದೆ. ಇಂದಿನ ಪರಿಸರ-ಪ್ರಜ್ಞೆಗಳಿಂದ ಮೂಡಿದ ಹೊಸ ಮನೋವೃತ್ತಿ ಹಾಗೂ ಅದರಿಂದ ಹುಟ್ಟುವ ವಿಶಿಷ್ಟಶೈಲಿ— ಇವೆರಡು ಇಲ್ಲಿ ಕಾಣುವ ಮುಖ್ಯ ಅಂಶಗಳು. ಎಷ್ಟೇ ವಾಸ್ತವವಾದಿಯಾದರೂ ಕವಿ ಅಯ್ದುಕೊಳ್ಳುವ ವಿಷಯ ಯಾವುದು? ನಿಸರ್ಗ, ಪ್ರಣಯ, ಸ್ನೇಹ— ಮನುಷ್ಯನ ಹೃದಯವನ್ನು ಮುಟ್ಟುತಕ್ಕದ್ದು ಯಾವುದೋ ಅದೆಲ್ಲಾ ಕವನದ ವಿಷಯ; ಇಂದಿನ ಕವಿಗೂ ಕೂಡ. ಸಾಮಾಜಿಕವೈಷಮ್ಯಗಳನ್ನು ಕಂಡು ರೋಸಿಹೋದ ಕವಿ ನಸುಕಿನ ಮೋಹದಲ್ಲಿ ನೈಮರೆಯುತ್ತಾನೆ. "ಮನು ಹುಟ್ಟದ ಗಳಿಗೆಯ ಜೆಲುವು" ಆ ನಸುಕಿನಲ್ಲಿ ಅವನಿಗೆ ಕಾಣುತ್ತದೆ: "ವನವಾಸದ ಸೀತೆಯ ಮುಂಗ್ಸೆ ಗಿಣಿ" ಕತೆ ಹೇಳಿದುದೂ ಅವನಿಗೆ ಕೇಳಿಸುತ್ತದೆ. ಪ್ರಕೃತಿಗೆ ಅವನು ಎರವಾಗಿಲ್ಲ. "ಮಾಯೆ ತುರುಬು ಬಿಚ್ಚಿದಂತೆ" ಹರಹಿಕೊಂಡು ನಿಂತ ಆಲದ ಮರವನ್ನು ಕುರಿತು ಅವನು ಹಾಡುತ್ತಾನೆ. ಕಲ್ಪನೆಯ ಕುವರಿ ಆಗಾಗ ಬಂದು ಅವನ ಹೃದಯವನ್ನು ಜೀತರಿಸಿ ಹೋಗುತ್ತಾಳೆ. ಇಂದಿನ ಭೀಷಣಜೀವನದ ವಿಕೃತರೀತಿಯನ್ನು ಕುರಿತಾಗ, ಕವಿಯ ಮಾತು ವಕ್ರವಿಡಂಬನೆಯಾಗಿ ಕಂಡೀತು. ಆದರೂ ಈ ತೃಸ್ತಮನೋವೃತ್ತಿಯ ಒಳಗಡೆ "ಒಂದೊಂದು ಜೆಲುವಿನೊಂದೊಂದು ನೋಟವನ್ನೂ ಹೀರಿಕೊಂಡು, ಅದರ "ಮೂಲ"ದ ಕಡೆಗೆ ಓಡುವ ಚಿತ್ತವೃತ್ತಿ ಇನ್ನೂ ಜಾಗ್ರತವಾಗಿದೆ. "ದೇವನ ಅಂಗೈಗೆರೆ"ಯಾದ ಕನಸು ಜೀತೋದಾಯಿಯಾಗಿ ಬರುತ್ತದೆ. ಕವಿ ತನ್ನ ಎದೆ-ತಲೆಗಳನ್ನು ತೆರೆದಿರಿಸಿದರೆ "ಈ ಲೋಕ ತೀರ ಸಣ್ಣ, ನನ್ನೆದೆಯನು ತುಂಬಲು". ಹೂವಿನ ಹಾಡನ್ನು ಕೇಳಿ ವಿವರಿಸಬೇಕೆಂಬ, ಪ್ರಪಂಚದ ಎಲ್ಲಾ ಹಾಡಿನ ಮೂಲವನ್ನು ಗುರುತಿಸಬೇಕೆಂಬ, ಲೋಕಶಾಂತಿಯ "ಹುಚ್ಚು ಕನಸು" ತುಂಬಿಕೊಂಡ ಈ ಕವಿ. ತನ್ನ ಎದುರಿನ ಜೀವನವನ್ನು ಕಾಣುವ ರೀತಿ ನನಗೆ ಮುಖ್ಯವಾದದ್ದು. ಈ ಕವಿಗೆ ನೆಲದ ಜೆಲುವು ಬರಿ ಮಾಯೆಯಲ್ಲ. ಮನಸಿನ ಒಳಗಿನ ಬೋಳ್ಮರದ ಹೆಗಲಲ್ಲಿ ಚುಂಚು-ಚುಂಚಿಗೆ ಚಾಚಿ ಕುಳಿತ ಕಾಗೆಯ ಜೋಡಿಯೂ ಒಂದು ಸೌಂದರ್ಯದ ಪ್ರತೀಕ ನೋಡಬಲ್ಲ ಕಣ್ಣಿದ್ದರೆ. ಆದರ ಗುಟ್ಟು ಕಾಣುತ್ತದೆ. ಆದರೆ ನನ್ನು ಕಣ್ಣಿದುರಿನ ಪ್ರತ್ಯಂದಿನ ಜೀವನ ಸದಾ ಸುಖರೂಪವಾಗಿರುವುದಿಲ್ಲ. ಆಚಾರ ಹೇಳಿ ಬದನೆಕಾಯಿ ತಿನ್ನುವ ನಿದರ್ಶನ, ಪರಂಪರೆಯ ದುರುಪಯೋಗ, ಒಳ್ಳೆಯದನ್ನು ವಿಕಾರಗೊಳಿಸುವ ರೀತಿ, ಮೂಲೋದ್ದೇಶವನ್ನು ಮರೆತುಬಿಟ್ಟ ಸಂಪ್ರದಾಯಗಳು— ಹೀಗೆ ಅನೇಕ ಬಗೆಯ ವೈಷಮ್ಯಗಳನ್ನು ಸಮಾಜದ ವಿವಿಧಮುಖಗಳಲ್ಲಿ ಈ ಕವಿ ನೋಡುತ್ತಾನೆ. ಈಗಿನ ದಾಂಪತ್ಯದ ಹಾಗೂ ಸಂತತಿಯ ನಿಕಟದೃಶ್ಯ ಎಂತಹದು! ರುದ್ರಗೀತೆಯ ಕವಿ ಪಟಾಕ್ಷಿಯ ಸದ್ದಿಗೆ ಜಿಗಿದುಬೀಳುತ್ತಾನೆ. ಪಂಪನು ಪುನಃ ಹುಟ್ಟಿ, ಕನ್ನಡ ಕಲಿತು ಪರೀಕ್ಷೆಗೆ ಕುಳಿತರೆ, ಪಂಪಭಾರತ-ಆದಿಪುರಾಣಗಳ ಮೇಲಿನ ಪ್ರಶ್ನೆಗಳನ್ನು ಅವನು ಗಟ್ಟಿಯಾಗಿ ಪಳಿಯಬೇಕಾಗುತ್ತದೆ. ಬಹುಶಃ "ನಾಡೋಜಪಂಪ"ವೂ ಅವನಿಗೆ ಅರ್ಥಪಾಗಲಿಕ್ಕಿಲ್ಲ. ಬೀದಿಗುಡಿಸುವ ಬೀರ ಸತ್ತಾನೆಂಬ ಪರವೆಯಿಲ್ಲದೆ, ರಾಯರ ಕಾರು ಅವನನ್ನು ಚಿಮ್ಮಿಕೊಂಡು ಓಡುತ್ತದೆ. ಪೊಸರನುಣಬೇಕೆಂಬ ಕೂಸಿಗೆ, ಬಿಟ್ಟಿಯ ತುತ್ತಲ್ಲದೆ ಇನ್ನೇನೂ ಸಿಗಲಾರದು ಈ ಬಗೆಯ ದೃಶ್ಯಗಳನ್ನು ಚುಟುಕುಪದ್ಯಗಳಲ್ಲಿ ತುಂಬುವಾಗ, ಕವಿಯು ಮಾತಿನಲ್ಲಿ ಅಕ್ಕಸವಿಲ್ಲವೆನ್ನುವುದು ಗಮನಾರ್ಹವಾದ ವಿಷಯ. ಒಂದು ಪರಿಹಾಸದ ಆವರಣ, ನಿಡಂಬನೆಯ ಧ್ವನಿ— ಕವಿಯು ಹೃದ್ಗತವನ್ನು ಬಿಚ್ಚಿತೋರುವುದಕ್ಕೆ ಇವೆರಡು ಸಾಕು. ಎಷ್ಟೇ ನೊಂದುಕೊಂಡರೂ, ಈ ಕವಿಯು ಭಾವನೆಯಲ್ಲಿ ರೊಚ್ಚು ಇಲ್ಲ, ಮಾತಿನಲ್ಲಿ ಆಕ್ರೋಶವಿಲ್ಲ. ಇದು ಒಂದು ದೊಡ್ಡ ಗುಣ. ಇಲ್ಲಿಯ ಪ್ರಣಯಗೀತೆಗಳಲ್ಲಿ ಈ ಗುಣ ಇನ್ನೂ ಸ್ಪಷ್ಟವಾಗಿದೆ.

ಈ ಸಂಗ್ರಹದಲ್ಲಿ ಪ್ರಣಯಗೀತಗಳೇ ಹೆಚ್ಚು. ಇಲ್ಲಿಯ ಪ್ರಣಯ ಒಂದು ಅವಸ್ಥೆಯದಲ್ಲ. ಬಾಳು "ಸೊನ್ನೆ ಸೊನ್ನೆ ಸೊನ್ನೆಯಾಗಿ" ತೋರುತ್ತಿರುವ ಯುವಕನ ಎದೆಯಲ್ಲಿ, ಯಾವಳೋ ಒಬ್ಬಳ ಒಂದು ಕ್ಷಣದ ಆಕಸ್ಮಿಕದೃಷ್ಟಿವಿಂಚುಬಿತ್ತಿ, ಜೀವನಕ್ಕೊಂದು ಅರ್ಥವಿದೆಯೆಂದು ತಿಳುಹಿಕೊಡುವ ಅವಸ್ಥೆಯಿಂದ— ನಲ್ಲನಲ್ಲಿಯರ ಪ್ರಣಯಜೀವನದ ಪ್ರಸ್ಫುಲ್ಲಸಾಕ್ಷಿಯಾಗಿ ಪುತ್ತಳಿಮಗು ನಗುತ್ತಿರುವವರೆಗೆ ಈ ಗೀತಗಳ ವ್ಯಾಪ್ತಿಯಿದೆ. ಎಂದರೆ ಇವು ಒಬ್ಬಳನ್ನೆ ಕುರಿತು ಹಾಡಿದ ಪ್ರಬಸ್ತಿಗೀತಗಳಲ್ಲ. ಒಲಿದು ಕೂಡಿದ ಜೋಡಿ, ಹತ್ತಿರವಿದ್ದೂ ದೂರವಿರುವ ಎರಡುಜೀವ, ಸಮಾಜದಿಂದ ಸಿಡಿದು ಪಲಾಯನಮಾಡುವ ಜೋತೆ, ಎಂದೋ ಒಮ್ಮೆ ಝಗ್ಗನೆ ಮಿಂಚಿ ಮಾಯವಾದ ಜೆಲುವೆ, ತಾನು ಅಳಿದರೂ ತನ್ನ ನೆನಪನ್ನು ಬಿಟ್ಟುಹೋದ

ಮೊದಲ ಹೆಂಡತಿ, ಇನ್ನೊಬ್ಬನ ಹೆಂಡತಿ— ಹೆಲವಾರು ವ್ಯಕ್ತಿಗಳಿಗೆ ಸಂಬಂಧಿಸಿದ ಹಾಡುಗಳಿವೆ. ಇವುಗಳಲ್ಲಿಯ ಹೆಲವಾರು ಗೀತಗಳು ಸುಂದರವಾಗಿವೆ. ಭಾವನೆ ತೀವ್ರವಾಗಿದ್ದರೂ ಮಾತಿನಲ್ಲಿ ಹಿಡಿತವಿದೆ, ಕಷ್ಟಸಾಧ್ಯವಾದ ಸರಳತೆಯಿದೆ. ಕವಿಯ ಭಾವನೆಯಲ್ಲಾಗಲಿ ಅಭಿವ್ಯಕ್ತಿಯಲ್ಲಾಗಲಿ ಆಡಂಬರವಿಲ್ಲ. ಪ್ರೀತಿಯೆಂಬುದು ಬರಿ ಮೋಹವಲ್ಲ. ಮನುಷ್ಯನನ್ನು "ದೇವರ ಸಿಂಹಾಸನ"ದ ಬಳಿಗೆ ಕರೆದೊಯ್ಯುವ ಪ್ರತೀಹಾರಿ ಪ್ರೇಮ. ಒಂದು ಹೆಣ್ಣು ಒಂದು ಗಂಡು ಒಂದಕೊಂದು ಹೊಂದಿಕೊಂಡು ಬಾಳುವುದನ್ನು ಕಂಡು, ಲೋಕದ ಜನ ಅಸಹನೆಯಿಂದ ಟೀಕಿಸಿದರೆ ಈ ಕವಿಗೆ ನೋವಾಗುತ್ತದೆ, ಸಿಟ್ಟುಬರುವುದಿಲ್ಲ. 'ಈ ಜನಕ್ಕೆ ಪ್ರೇಮದ ಗೌರವ ತಿಳಿದಿಲ್ಲವಲ್ಲ!' ಎಂಬ ಕರುಣೆಯಿದೆ ಅವನಿಗೆ. ಅದಕ್ಕಾಗಿ ಅವನು ದೇವರಿಗೆ ಬೇಡಿಕೊಳ್ಳುತ್ತಾನೆ:

"ಅವರಿಗೊಮ್ಮೆ ಕೈಯ ನೀಡು
ತೋರು ನಿನ್ನ ಪೀಠದ"

ಪ್ರೇಮದ ದಿವ್ಯತ್ವವನ್ನು ಎಲ್ಲರೂ ಅರಿಯಬೇಕು.

"ಜೀವ ಜೋಡಿಯೊಂದ ಕ್ಷಣಿಸಿ
ಹಿಡಿವೆ ಜಗದ ತೂಕವ"

ಎಂದು ದೇವರು ಎಲ್ಲರಿಗೂ ತಿಳಿಸಿಕೊಟ್ಟರೆ ಯಾರಲ್ಲಿಯೂ ಅಸಹನೆ ಉಳಿಯಲಾರದು. ಕವಿಯ ಈ ಮನೋವೃತ್ತಿ ಶ್ಲಾಘ್ಯವಾದುದು. ಪ್ರಣಯಕವನ ನಮಗೇನೂ ಹೊಸದಲ್ಲ. ಆದರೆ ಯಾವುದು "ಆನ್ಯೆತಿಕ-ಲೋಕಬಾಹಿರ" ಎಂಬ ಬರೆ ಎಳೆಯಿಸಿಕೊಂಡಿದೆಯೊ ಅಂತಹ ಪ್ರಣಯದ ನಿರ್ಭಯ ಪ್ರಸ್ತಾಪ ಇಲ್ಲಿಯ ಕವನಗಳಲ್ಲಿದೆ. ಸಮಾಜದ ಮುಳ್ಳುಬೇಲಿಯ ಆಚೆ ಈಚೆಗೆ ನಿಂತು ನಿಟ್ಟುಸಿರಿಡುವ ದುರ್ಬಲ ಪ್ರಿಯ-ಪ್ರಣಯಿನಿಯರ ಸಂನಿಧಾನ ಬಹು ಪುರಾತನವಾಗಿದ್ದರೂ ಇದು. ಆದರೆ

"ನಾ ನಿನ್ನ ಹತಿಯಲ್ಲ
ಗೆಳತಿ, ಇನಿಯ!"

ಎಂದು ಹೇಳುವ ನೊಂದ ಹೃದಯದ ಪ್ರಿಯಕರನಿದ್ದಾನೆ.

"ಎಲ್ಲಾದರೇನು ಓ
ಚಿಂದನೂರಿನ ಮಗಳೆ!
ಚಿಲುವೆಯಾಗಿರು ನೀನು ಎಂದೂ,
ಈ ಬೀರೆ ಜನುಮಗಳೆ
ನಡುವೆ ಬಂದರದೇನು?
ಸೊಗವಾಳುವೆನು ನಾನು ಸಕತ ನೊಂದು!"

ಎಂದು ಹಾರೈಸುವ ಹಿತೈಷಿಯೂ ಇದ್ದಾನೆ. ಈ ಬಗೆಯ ಕವನಗಳಲ್ಲಿರುವ ಭಾವನೆಯ ಸಂಯಮ ಹಾಗೂ ಮಾತಿನ ತೂಕ ಈ ಕವಿಯ ಶೈಲಿಗೆ ಕಳಿಕಟ್ಟುವ ಮುಖ್ಯ ಅಂಶಗಳಾಗಿವೆ, ಮನಸ್ಸಿನಲ್ಲಿ ಉಳಿಯುತಕ್ಕ ಸುಂದರ ಚರಣವಾಗಲಿ, ಕವಿತುಂಬುವ ಲಲಿತ ನಾದವಾಗಲಿ ಇಲ್ಲಿ ಇರಲಿಕ್ಕಿಲ್ಲ. ಏಕೆಂದರೆ ಈ ಕವಿಗೆ ಮಾತು ಮುಖ್ಯವಾಗಿಲ್ಲ, ಅವನ ಮಾತು ಅಂಜೆಯ ಪೇದೆಯ ಹಾಗೆ ನಮಗೆ ಮುಟ್ಟಸಬೇಕಾದುದನ್ನು ಮುಟ್ಟಿಸಿ ಹೊರಟು ಹೋಗುತ್ತದೆ. ಒಂದೆರಡು ಸಲ ಸಂತೋಷದ ಸುದ್ದಿ ತಂದುದಕ್ಕಾಗಿ "ಖುಷಿ" ಕೇಳುವ ಹವಣಿಕೆಯಲ್ಲಿ ಈ ಪೇದೆ ಇದ್ದಂತೆ ಕಾಣುತ್ತದೆ; ಇದರೆ ಅಲ್ಲಿಯೂ ಇವನಿಗೆ ಖುಷಿ ಸಿಕ್ಕಲಾರದು.

ಈ ಕವಿಯ ಹೆಗ್ಗುರುತು ಇವನ ನಿರಾಡಂಬರವಾದ ನೇರವಾದ ಶೈಲಿ ಅನಲಂಕೃತವಾದ. ವಿಸ್ತಾರವಿಲ್ಲದ, ಸರಳಮಾತಿನ ರೀತಿ. ಬಹುಮಟ್ಟಿಗೆ ಯಶಸ್ವಿಯಾಗಿದೆ. ಆದರೆ ಚುಟುಕುಪದ್ಯದ ಹಟದಿಂದಾಗಿ ಕೆಲವು ಸಲ ಭಾವ ಪೊಟಕಾಗಿ ಉಳಿಯುತ್ತದೆ. ಅಲ್ಲಲ್ಲಿ ತುಸು ವಿವರಣೆ ಅವಶ್ಯವೆನಿಸುತ್ತದೆ. ಛಂದಸ್ಸಿನಲ್ಲಿ ವಿಶೇಷದೋಷಗಳಿಲ್ಲವಾದರೂ, ಪ್ರಾಸದ ಸಂಕಟಕ್ಕೆ ಸಿಕ್ಕು ಕವಿ ಒಮ್ಮೊನ್ನೆ ಭಾಷೆಯ ಗೋಣು ಮುರಿಯುತ್ತಾನೆ:

"ಯಾವ ಹೂವು ಕಂಪು ಸೋಂಕಿ-
ತಾವ ಲೋಕದುಸಿರು ಧೀಂಕಿ-
ದುತಿದೆ ಭಮುನಿಯಾಳದಿ"

ಈ ಬಗೆಯ ಪ್ರಾಸದ ಹಟವ್ಯೇಕೆ? ಪ್ರಾಸದ ಬೆಡಗನ್ನು ಮೆರೆಯುವುದಕ್ಕಾಗಿಯೊ ಏನೊ, ಕೆಲವು ಚರಣಗಳನ್ನು ಮುರಿಮುರಿದು ಇಡಲಾಗಿದೆ. ಸರಳಸುಂದರವಾದ ಕವನದ ಮುಖಕ್ಕೆ ಈ ವೈಯಾರದ ಕೃತ್ರಿಮತೆಯೇಕೆ? ಭಾಷೆ ನಿರ್ಮಲ್ಯವಾಗಿಲ್ಲ; ಅದಕ್ಕೆ ಅಚ್ಚಿನ ದೋಷಗಳೂ ಕೂಡಿಕೊಂಡಿವೆ. ಷಷ್ಠೀನಿರ್ಭಕ್ತಿಯ ಪ್ರತ್ಯಯದ ಮೇಲೆ ಈ ಕವಿಗೆ ಏನು ಹೆಗೆಯೋ ತಿಳಿಯದು; ಅದನ್ನು ಸುತರಾಂ ಬಳಸಿಲ್ಲ. "ಅವನು" ಎಂಬ ಶಬ್ದವನ್ನು ಇಂಗ್ಲೀಷಿನ ರೂಢಿಯಲ್ಲಿ ದೇವವಾಚಕವಾಗಿ ಬಳಸಲಾಗಿದೆ. (ಇಂಗ್ಲೀಷಿನಲ್ಲಿ ಸಾಮಾನ್ಯ ಸರ್ವನಾಮದಿಂದ ಪ್ರತ್ಯೇಕಿತವಾಗಿ ಅದಕ್ಕೆ ದೊಡ್ಡ ಅಕ್ಷರದ ಆರಂಭವಾದರೂ ಇದೆ) ಈ ಬಗೆಯ ದೋಷಗಳು, ಚಿಕ್ಕವುಟ್ಟವಾದರೂ ದೋಷಗಳೆ. ಕವನಗಳನ್ನು ಸಂಗ್ರಹಿಸುವ ರೀತಿಯಲ್ಲಿ ಒಂದು ವ್ಯವಸ್ಥೆ ಇದ್ದಂತೆ ಕಾಣಲಿಲ್ಲ. ಇದರಲ್ಲಿಯು ಕೆಲವು ಕವನಗಳನ್ನು ಆಯ್ದುಕೊಂಡು, ದೋಷಗಳನ್ನು ತಿದ್ದಿ ಪ್ರಕಟಿಸಿದರೆ, ಆದೊಂದು ಉತ್ತಮ ತರಗತಿಯ ಹೊಸಮಾದರಿಯಾಗಬಹುದು.

ರಾ. ಶಿ.

ದೇವತಾಮನುಷ್ಯ

(ಸ್ವತಂತ್ರ ಸಾಮಾಜಿಕ ಕಾದಂಬರಿ)

ಲೇಖಕರು—ಕಡೆಂಗೋಡ್ಲು ಶಂಕರಭಟ್ಟರು. ಧಾರವಾಡದ ಮನೋಹರ ಗ್ರಂಥಮಾಲೆಯ ಪ್ರಕಾಶನ.

ಕನ್ನಡದಲ್ಲಿ ಸ್ವತಂತ್ರ ಕಾದಂಬರಿಗಳು ಹೆಚ್ಚು ಹೆಚ್ಚಾಗಿ ಬರುತ್ತಲಿವೆ. ಜೀವನದ ಎಲ್ಲ ಮೆಟ್ಟಿಲುಗಳನ್ನೂ, ಎಲ್ಲ ಸ್ಥಿತಿಗತಿಗಳನ್ನೂ ಚಿತ್ರಿಸುವ ಕಾದಂಬರಿಗಳು ಹುಟ್ಟುತ್ತಲಿವೆ. ಕಾದಂಬರಿಯ ಹೊಸಯುಗ ನಾಡಿನಲ್ಲಿ ಪ್ರಾರಂಭವಾಗಿದೆಯೆನ್ನಬಹುದು.

ಶ್ರೀ ಕಡೆಂಗೋಡ್ಲು ಶಂಕರಭಟ್ಟರು ಕನ್ನಡಿಗರಿಗೆ ಪರಿಚಿತರು. ಇದು ಅವರ ಎರಡನೆಯ ಕಾದಂಬರಿ. ಇದರಲ್ಲಿ ಅವರು ಒಬ್ಬ ಶಿರಸ್ತೇದಾರನ ನೀರಸವಾದ ಗೃಹಜೀವನವನ್ನು ಚಿತ್ರಿಸಲು ಪ್ರಯತ್ನಪಟ್ಟಿದ್ದಾರೆ. ಶಿರಸ್ತೇದಾರ ಶ್ರೀನಿವಾಸಯ್ಯನೆ ಕಾದಂಬರಿಯ ಮುಖ್ಯನಾಯಕ. ಧನವಂತ, ಕಚೇರಿಯಲ್ಲಿಯ ಅಧಿಕಾರವನ್ನೇ ಮನೆಯಲ್ಲಿ ಹೆಂಡತಿಯ ಮೇಲೂ ಉಪಯೋಗಿಸುತ್ತಿದ್ದ.

ಸುಭದ್ರಮ್ಮ ಅವನ ಒಲವಿಗೆ ತಕ್ಕಂತೆಯೇ ನಡೆಯುತ್ತಾಳೆ. ಮಗ ಮಧುಸೂದನ ನವಯುವಕ. ಆದರ್ಶವಾದಿ. ಐ. ಸಿ. ಎಸ್. ಆಗಬೇಕೆಂದು ಹಂಬಲಿಸುವಾತ. ತಂದೆ ತನ್ನ ಅಧಿಕಾರವಾಣಿಯಿಂದಲೇ ಮಗನಿಗೆ ಮದುವೆಯಾಗಲು ಹೇಳುತ್ತಾನೆ. ಮಧುಸೂದನ ಐ. ಸಿ. ಎಸ್. ಆಗುವ ವರೆಗೆ ಮದುವೆ ಬೇಡವೆಂದು ಹೇಳಿ, ಇಂಗ್ಲಂಡಿಗೆ ಹೋಗಿಬಿಡುತ್ತಾನೆ. ಅಲ್ಲಿ ಶ್ಯಾಮಸುಂದರಿಯ ಜಾಲದಲ್ಲಿ ಸಿಕ್ಕಿಬೀಳುತ್ತಾನೆ. ಮಾವನ ಮುಖಾಂತರ ತನ್ನ ಪಾಲಿನ ಆಸ್ತಿ ಮಾರಿ ಹಣ ಹಾಳುಮಾಡುತ್ತಾನೆ. ಎರಡುಸಾರೆ ಐ. ಸಿ. ಎಸ್. ಫೇಲು. ಶ್ಯಾಮಸುಂದರಿಯೂ ಕೈಬಿಡುತ್ತಾಳೆ. ಸ್ವಾರ್ಕ್ ಎಂಡ್ ಬ್ಲೆಂಡ್ ಕಂಪನಿಯ ಪ್ರತಿನಿಧಿಯಾಗಿ ಸ್ವದೇಶಕ್ಕೆ ಮರಳುತ್ತಾನೆ. ಶ್ಯಾಮಸುಂದರಿ (ಈಗ ತಾರಾಮಣಿ) ಫೆಟ್ಟಿಯಾಗುತ್ತಾಳೆ. ಅವಳು ಆಗ ಅವನ ಕೂಡ ಮಾಡಿದ ಪ್ರೇಮ ಒಂದು ಅಭಿನಯವೆಂದು ಹೇಳುತ್ತಾಳೆ. ಅಂದಿನಿಂದ ಅವನ ಜೀವನ ಬದಲಾಯಿತು. ಜೀವನವನ್ನು ಒಬ್ಬ ವಿಮರ್ಶಕನ ದೃಷ್ಟಿಯಿಂದ ನೋಡತೊಡಗಿದ.

ಸುಭದ್ರಮ್ಮ ತೀರಿದ ಮೇಲೆ, ಶಿವಣ್ಣ–ಸಂಕಣ್ಣರ ತಂತ್ರದಿಂದ ಗಂಗಮ್ಮ ರಾಯರ ಕೈಹಿಡಿದಳು. ಸಂಕಣ್ಣ ರಾಯರ ಭಾವನಾಗಿ ಅಧಿಕಾರ ನಡೆಯಿಸಿದ. ತಂತ್ರದಿಂದ ಗಂಗಮ್ಮನ ಹೆಸರಿಗೆ ಎಲ್ಲ ಆಸ್ತಿ ಬರೆಯಿಸಿಕೊಂಡ. ಕಡೆಗೆ ಒಕ್ಕಲು ತೌಡಪ್ಪನನ್ನು ಜೊಜೆದು ಕೊಂದು, ೭ ವರ್ಷದ ಶಿಕ್ಷೆಗೆ ಗುರಿಯಾದ. ರಾಯರಿಗೆ ಮೊದಲಿನಿಂದ ವಿಶ್ವಾಸಪಾತ್ರನಾದ ಧನಶೆಟ್ಟಿಯ ಕಪಟತಂತ್ರಗಳು ರಾಯರ ಮನಸ್ಸನ್ನು ಮತ್ತಿಷ್ಟು ನೋಯಿಸುತ್ತವೆ. ಕಡೆಗೆ, ಶ್ರೀನಿವಾಸಯ್ಯ ಮರಣೋನ್ಮುಖನಾದ ಹೊತ್ತಿಗೆ ಮಾವ ಹಾಗೂ ಫೆಟ್ಟರ ಪತ್ರದ ಪ್ರಕಾರ ಮಧುಸೂದನ ಅಲ್ಲಿಗೆ ಬರುತ್ತಾನೆ. ಅವನನ್ನು ನೋಡಿ ಶ್ರೀನಿವಾಸಯ್ಯ ದೇಹ ತೊರೆಯುತ್ತಾನೆ. ಇದೇ ಕಾದಂಬರಿಯ ಕಥಾನಸ್ತು.

ಕಾದಂಬರಿಯ ಶೈಲಿ ಮನಸ್ಸನ್ನು ಹಿಡಿಯುವಂತಿದೆ. ಆಗಾಗ ಅಲ್ಲಲ್ಲಿ ಬರುವ ಅಸ್ವಾಭಾವಿಕವಾದ ಕೆಲವು ಪ್ರಸಂಗಗಳು ವಾರ್ತಾಲಾಪಗಳು ಮನಸ್ಸನ್ನು ತಡೆಯುತ್ತವೆ. ಆದುದರಿಂದಲೇ ಕಾದಂಬರಿಗೆ ಜೀವಾಳವಾದ ಓಟಕ್ಕೆ ಇಲ್ಲಲ್ಲಿ ಕಡಿವೆಯಾಗಿದೆ. ಒಂದೆರಡು ಉದಾಹರಣೆಗಳನ್ನು ಕೊಡಬಹುದು: ತನ್ನ ಒಬ್ಬನೇ ಒಬ್ಬ ಮಗನು ಪರದೇಶಕ್ಕೆ ಹೋಗುತ್ತಿರುವಾಗ, ತನ್ನ ಮಾತನ್ನು ಮೀರಿದನೆಂಬ ಒಂದು ಕಾರಣಕ್ಕಾಗಿಯೆ ಅವನನ್ನು ಅಸಹಾಯನನ್ನಾಗಿ ಮಾಡಿಬಿಡಬಹುದೊ? ಅವನು ಹೋದ ಮೇಲಾದರೂ ರಾಯರ ಗುಪ್ತಪಿತೃತ್ವವು ಜಾಗೃತವಾಗಬಾರದೇ? ಇಂತಹ ಸ್ಥಿತಿಯಲ್ಲಿ—ಅಷ್ಟು ಬೇಗನೆ—ಇಂತಹ ವಯಸ್ಸಿನ ಮುದುಕ ಮದುವೆಯಾಗಲು ಎಂದಾದರೂ ಸಿದ್ಧನಾಗಬಹುದೇ? ಅಲ್ಲಲ್ಲಿ ಅಸ್ವಾಭಾವಿಕ ವಾರ್ತಾಲಾಪಗಳೂ ಒಡಮೂಡಿವೆ. ಲಂಕಾಕಾಂಡದಂತಹ ಪ್ರಸಂಗ ಹಳ್ಳಿಯ ಜೀವನಕ್ಕೆ ಯೋಗ್ಯವಾಗಿದ್ದರೂ ಕಾದಂಬರಿಯ ಪಾತ್ರಪರಿಪೋಷಣೆಗೆ ಅಷ್ಟೊಂದು ಸಹಾಯಕವಾಗಿಲ್ಲ.

ಕೋರ್ಟಿನಲ್ಲಿರುವ ಶಿರಸ್ತೇದಾರ ಶ್ರೀನಿವಾಸಯ್ಯ, ಜಗತ್ತಿನಲ್ಲಿ ನಡೆಯುವ ತಂತ್ರ, ಕುತಂತ್ರ, ಅತ್ಯಾಚಾರಗಳ ನ್ಯಾಯದ ನಾಟಕದ ಅಭಿನಯಶಾಲೆಯಲ್ಲಿದ್ದವ. ಉಳಿದ ಸಂಸಾರದ ಜ್ಞಾನವಿರದಿದ್ದರೂ ಈ ಬಗ್ಗೆ ಅವನಿಗೆ ಹೆಚ್ಚು ಜ್ಞಾನವಿರಬೇಕು. ಧನಶೆಟ್ಟಿಯಲ್ಲಿ ವಿಶ್ವಾಸವಿಟ್ಟು ಈ ಪ್ರಕಾರ ವಂಚಿತನಾಗುವುದು ಅಂತಹ ಪಾತ್ರಕ್ಕೆ ಯೋಗ್ಯವೆನಿಸಲಾರದು.

ಮಧುಸೂದನ ಆದರ್ಶವಾದಿ ಕರುಣ; ಅವನು ಇಂಗ್ಲಂಡಕ್ಕೆ ಹೋಗುವ ಮುಂಚೆ ಮಾವನ ಮುಂದೆ ತಂದೆಯ ಬಗ್ಗೆ ಈ ಪ್ರಕಾರ ಮಾತಾಡುವುದು ಸ್ವಾಭಾವಿಕವೇ? "ಕೋಪಬಂದರೆ ಅವನ ತಲೆಯೆಷ್ಟು ಬಿಸಿಯಾದೀತು, ಕುತ್ತಿಗೆಗೆ ಹಗ್ಗಹಾಕಿಕೊಳ್ಳಲಿ!" ಅವನು ತನ್ನ ವಯಸ್ಕರ ಮುಂದೆ ಹಾಗೆ ಪ್ರಾತಾಡಬಹುದಿತ್ತು; ಆದರೆ ಮಾವನಂತಹ ಹಿರಿಯನ ಮುಂದೆ ತಂದೆಯ ಬಗ್ಗೆ ಹೀಗೆ ಆಡುವುದು ಸಮಂಜಸವೆನಿಸುವುದಿಲ್ಲ. ಅವನು ಇಂಗ್ಲಂಡಿನಿಂದ ತನಗೆ ಹೆಣ್ಣುಕೊಡಲು ಬಯಸಿದ ಮಾವನಿಗೆ ಹಾಗೆ ಪತ್ರ ಬರೆಯಬಹುದೇ?

ಇದರಲ್ಲಿ ನಮ್ಮ ಮನಸ್ಸನ್ನೆಳೆಯುವ ಪಾತ್ರಗಳಿಂದರೆ ಧನಶೆಟ್ಟಿ ಮತ್ತು ತೌಡಪ್ಪ. ಧನಶೆಟ್ಟಿಯ ಪಾತ್ರಚಿತ್ರಣದಲ್ಲಿ ಲೇಖಕರು ಅಸಾಧಾರಣವಾದ ಯಶಸ್ಸನ್ನು ಪಡೆದಿದ್ದಾರೆ. ಧನಶೆಟ್ಟಿಯಲ್ಲಿರುವ ಸಮಯ ಸೂಚಕತೆ ಎರಡನೆಯವರ ಸ್ಥಿತಿ–ಗತಿಗಳನ್ನು ಅರಿತು, ಅವರ ಮನಸ್ಸಿನ ಅಂತರಾಳವನ್ನು ಪ್ರವೇಶಿಸಿ, ತನ್ನ ಮುಂದಿನ ಕಾರ್ಯಕ್ಕೆ ಅವರ ಪರಿಸ್ಥಿತಿ ಹಿತವಾಗಿದೆಯೊ ಇಲ್ಲವೊ ಎಂಬುದನ್ನು ಪರೀಕ್ಷಿಸಿ, ತನ್ನ ಕಾರ್ಯದ ಬೀಜಾರೋಪಣ ಮಾಡುವ ರೀತಿಯು ಧೂರ್ತತನದ ಜೀವಾಳವಾಗಿ ಮೂಡಿದೆ. ಈ ಪಾತ್ರದ ಚಿತ್ರಣಕ್ಕಾಗಿ ಲೇಖಕರು ಎಲ್ಲರ ಆದರಣೆಗೆ ಪಾತ್ರರು.

ಗಂಗಮ್ಮನ ಪಾತ್ರವೂ ಚೆನ್ನಾಗಿಯೇ ಮೂಡಿದೆಯೆನ್ನಬಹುದು. ಆದರೆ ಅವಳ ಕಪಟನಾಟಕ, ಬಾವಿಯ ಈಜಾಟ ಇವನ್ನೆಲ್ಲ ಸ್ವಲ್ಪ ಬೇರೆ ರೀತಿಯಿಂದ ಬೇಳಿದ್ದರೆ ನೆಟ್ಟಗಾಗುತ್ತಿತ್ತು. ಸಂಕಣ್ಣ—ರಾಯರ ಆ ಸಂಭಾಷಣೆ ಆ ಕಾಲಕ್ಕೆ ಯೋಗ್ಯವೇ? ಇಷ್ಟೆಲ್ಲ ಕುತಂತ್ರ ರಾಯರಿಗೆ ತಿಳಿದಿದ್ದರೂ, ಉಳ್ಳನ್ನ ಗಂಗಮ್ಮನ ಹೆಸರಿಗೆ ಮಾಡುವಾಗ ಮಧುಸೂದನನ ನೆನಪಾಗಲಿಲ್ಲವೇ? ಅವನ ಬಗ್ಗೆ ರಾಯರ ಹೃದಯದಲ್ಲಿ ಸ್ವಲ್ಪವೂ ದಯವಿರಲಿಲ್ಲವೆ?

ತಾರಾಮಣಿ ಹಾಗೂ ಸುಡಾನರ ಸಂಭಾಷಣೆ ಚೆನ್ನಾಗಿದೆ. ಚಲಚ್ಚಿತ್ರತಾರೆಯರ ಒಂದು ಜೀವನದೃಶ್ಯ ಚೆನ್ನಾಗಿ ಮೂಡಿದೆ.

ಕೆಲವು ದೋಷಗಳಿಂದ ಕಾದಂಬರಿಯ ಓಟಕ್ಕೆ ಬಾಧೆ ಬಂದಿದ್ದರೂ, ತಮ್ಮ ಶೈಲಿಯ ಸೌಂದರ್ಯದಲ್ಲಿ ಅವೆಲ್ಲವೂ ಅಡಗಿ ಮೇಲೆ ಮುಖವೆತ್ತದಂತೆ ಮಾಡಿದ್ದಾರೆ ಲೇಖಕರು. ಧನಶೆಟ್ಟಿಯ ಪಾತ್ರ, ಓದುಗನ ಉತ್ಸುಕತೆಯನ್ನು ಕೆರಳಿಸಿ ಉಳಿದ ಪಾತ್ರಗಳ ದೋಷಗಳು ಓದುಗನ ದೃಷ್ಟಿಗೆ ಬೀಳುವ ಮೊದಲೇ ಅವನನ್ನು ಮುಂದೆ ಎಳೆದೊಯ್ಯುತ್ತದೆ.

—ಎಸ್. ಜಿನದಾಸ

ಸಾದರ ಸ್ವೀಕಾರ

★

೧. **ಮಾಧವಲೀಲೆ** (ಸ್ವತಂತ್ರ ಸಾಮಾಜಿಕ ಕಾದಂಬರಿ) ಬರೆದವರು ಶ್ರೀ. ಎಂ. ಜಿ. ವೆಂಕಟೇಶಯ್ಯ ಎಂ.ಎ, ಎಲ್.ಟಿ. ಅವರು. ಧಾರವಾಡದ ಪ್ರತಿಭಾಗ್ರಂಥಮಾಲೆಯು ೪ನೆಯವರ್ಷದ ಕಿರಣ ೧. ಕ್ರೌ. ಆ. ೧೩೦ ಪುಟಗಳು. ಬೆಲೆ ೧-೮-೦.

೨. **ಕಾಲಯಾನ** (ವಿಜ್ಞಾನಯುಗದ ಸಮಾಜಚಿತ್ರ). ಲೇಖಕರು ಶ್ರೀ. 'ಭಾರತೀಸುತ' ಕೊಡಗು. ಮೇಲಿನ ಪ್ರತಿಭಾ ಗ್ರಂಥಮಾಲೆಯ ೪ನೆಯ ವರ್ಷದ ಕಿರಣ ೨. ಕ್ರೌ. ಆ. ೧೨೪ ಪುಟಗಳು. ಬೆಲೆ ೧ ೧೦-೦.

೩. **ಗಾಜಿನ ಬಳೆ ಮತ್ತು ಇತರ ಕಥೆಗಳು** (ಕಥಾ ಸಂಕಲನ). ಲೇಖಕರು ಶ್ರೀಮಾನ್ ಕಡೆಂಗೋಡ್ಲು ಶಂಕರ ಭಟ್ಟರು. ಮಂಗಳೂರಿನ ವಸಂತ ಸ್ಟೈಮಿಂಗ್ ಮಂಡಲಿಯ ವಸಂತ ಮಾಲಿಕೆಯ ೧ನೆಯ ವರ್ಷದ ೧ನೆಯ ಪುಷ್ಪ. ಕ್ರೌ. ಆ. ೧೦೪ ಪುಟಗಳು. ಬೆಲೆ ೧-೬-೦.

೪. **ಲೇಖನ ಬಳೆ** (ಸಾಹಿತ್ಯಿಕ ತಂತ್ರಗ್ರಂಥ). ಲೇಖಕರು ಶ್ರೀಮಾನ್ ಮಿರ್ಜಿ ಅಣ್ಣಾರಾಯರು. ನೇಡಬಾಳದ ಶಾಂತಿ ಸೇವಾ ಸದನದ ಪ್ರಕಟನೆ. ಮಾರಾಟಗಾರರು: ಸಮಾಜ ಪುಸ್ತಕಾಲಯ, ಧಾರವಾಡ. ಕ್ರೌ. ಆ ೨೧೬ ಪುಟಗಳು. ಬೆಲೆ ಸಾದಾ ೨-೪-೦. ಕ್ಯಾಲಿಕೊ ೩-೧-೦.

೫. **ವಿಶಾಲಕರ್ನಾಟಕ** (ವಾರಪತ್ರಿಕೆಯ ೫೬ನೆಯ ವರ್ಷದ ೧ನೆಯ ಸಂಚಿಕೆ). ಸಂಪಾದಕ ಮಂಡಲಿಯಲ್ಲಿ ಶ್ರೀಯುತರುಗಳಾದ ಪಾಟೀಲ ಪುಟ್ಟಪ್ಪ, ಕೆ. ವೀರಭದ್ರಪ್ಪ, ಟಿ. ಜಿ. ಉಗ್ರಾಣಕರ, ಕೆ. ಚೆನ್ನಬಸಪ್ಪ ಇವರು ಇದ್ದಾರೆ. ಮುಖ್ಯ ಸಂಪಾದಕರು ಶ್ರೀ. ಎಚ್. ಆರ್. ಇಟಗಿ ಎಲ್. ಎಲ್. ಬಿ. ಸ್ಟೇಶನ್ ರೋಡ್, ಹುಬ್ಬಳ್ಳಿ. ಕ್ರೌನ್ ಪೋಲಿಯೊ ೮ ಪುಟಗಳು. ವಾ. ಚಂ. ೪ ರೂಪಾಯಿ. ಬಿಡಿಸಂಚಿಕೆಗೆ ಒಂದು ಆಣೆ

ಧಾರವಾಡದಲ್ಲಿ ಬಹುದಿನಗಳಿಂದ ನಡೆದುಕೊಂಡು ಬಂದ 'ರಾಜಹಂಸ' ವಾರಪತ್ರಿಕೆಯು 'ವಿಶಾಲಕರ್ನಾಟಕ' ಎಂಬ ಹೆಸರಿನಿಂದ ಪ್ರಕಟವಾಗುತ್ತಲಿದ್ದುದನ್ನು ಬಹುಜನರು ಬಲ್ಲರು. ಆ ಪತ್ರಿಕೆಯು ಈಗ ಹೊಸ ಜನರ ಕೈಗೆ ಸೇರಿ, ಹೊಸ ವ್ಯವಸ್ಥೆಯಿಂದ ಹುಬ್ಬಳ್ಳಿಯಲ್ಲಿ ಹೊಸತಾಗಿ ಪ್ರಕಟವಾಗುತ್ತಲಿದೆ. ಕನ್ನಡಿಗರ ಸರ್ವತೋಮುಖ ಜಾಗೃತಿಯ ಗುರಿಯನ್ನಿರಿಸಿಕೊಂಡ. ಹೊರಟ ಈ ಹೊಸ ಹುರುಪಿನ ಪತ್ರಿಕೆಗೆ ಸುಸ್ವಾಗತ. 'ವಿಶಾಲ ಕರ್ನಾಟಕ' ಧ್ಯೇಯಸಾಧನೆಗಾಗಿ ಕಾರ್ಯಮಾಡುತ್ತ ಬಹುಕಾಲ ಬಾಳಲಿ!

೬. **ಕ್ರಾಂತಿಯುಗ** (ಕಾಂಗ್ರೆಸ್ ಸೋಶಿಯಾಲಿಸ್ಟ್ ಪಕ್ಷದ ಇತಿಹಾಸ). ಬರೆದವರು ಶ್ರೀ. ಜೆನ್ನಗಿರಿ ರಾಮಚಂದ್ರರು. ಪ್ರಕಾಶಕರು: ಉಜ್ವಲ ಸಾಹಿತ್ಯ ಭಾಂಡಾರ, ಮೈಸೂರು. ಕ್ರೌ. ಆ. ೧೦೦ ಪುಟಗಳು. ಬೆಲೆ ೧-೦-೦.

೭. **ಭಾವಫಲಬೋಧಿನಿ** (ಜ್ಯೋತಿಷಗ್ರಂಥ). ಲೇಖಕರು ಶ್ರೀಮಾನ್ ವಿ. ಸೀತಾರಾಮಶರ್ಮ, ದೈವಜ್ಞ. ಪ್ರಕಾಶಕರು: ಕಲ್ಪತರು ಪಬ್ಲಿಕೇಶನ್, ಬಳೇಪೇಟೆ— ಬೆಂಗಳೂರು ನಗರ. ಕ್ರೌ. ಆ. ೧೨೬ ಪುಟಗಳು. ಬೆಲೆ ?

೮. **ಕಟ್ಟೆಯ ಬಸವೇಶ್ವರನ ವಚನಗಳು** (ವಚನ ಸಂಕಲನ). ಸಂಪಾದಕರು ಮತ್ತು ಮಾರಾಟಗಾರರು: ಶ್ರೀಮಾನ್ ಜೀರಗೆ ಕಟ್ಟೆಬಸವಪ್ಪ ಬಿ. ಎ. ವಿಶ್ವಸಾಹಿತ್ಯ ಪ್ರಕಟನಾ ಸಂಸ್ಥೆ, ೧೪೧೪. ೩ನೆಯ ಅಡ್ಡ ಬೀದಿ; ಮಲ್ಲೇಶ್ವರಂ, ಬೆಂಗಳೂರು. ಕ್ರೌ. ಆ ೬೮ ಪುಟಗಳು. ಬೆಲೆ ೧-೦-೦.

೯. **ಪಿ ನ್ಯಾಶನಲ್ ಪ್ರೆಸ್ ಸಿಂಡಿಕೇಟ್** (ಇಂಡಿಯಾ). ಪರಿಚಯಾತ್ಮಕ ಕಿರುಹೊತ್ತಗೆ. ಕ್ರೌ. ಆ. ೧೬ ಪುಟಗಳು. ಈ ಸಂಸ್ಥೆಯ ವಿಚಾರ ತಿಳಿದುಕೊಳ್ಳಬೇಕೆನ್ನುವವರು 'ನ್ಯಾಶನಲ್ ಹಾವುಸ್, ನೀಯರ್ ರೀಗಲ್ ಸಿನೇಮಾ, Tulloch Road, ಬಾಂಬೆ ೧.' ಈ ವಿಳಾಸಕ್ಕೆ ಬರೆದು ಕೇಳಬೇಕು.

೧೦. **ಳುಮುಡಿನಿ** (ಅನುವಾದಿತ ಕಾದಂಬರಿ). ದಿವಂಗತ ರವೀಂದ್ರನಾಥ ಠಾಕೂರರ ಮೂಲ ಬಂಗಾಲಿ 'ಯೋಗಾಯೋಗ' ಕಾದಂಬರಿಯನ್ನು ಶ್ರೀ. ಕೆ ನಾರಾಯಣಸ್ವಾಮಿ ಅಯ್ಯರರು ಕನ್ನಡದಲ್ಲಿ ಅನುವಾದ ಮಾಡಿದ್ದಾರೆ. ಮಾರಾಟಗಾರರು: ವಿಚಾರಸಾಹಿತ್ಯ ಲಿಮಿಟೆಡ್, ಬಳೇಪೇಟೆ-ಬೆಂಗಳೂರು ನಗರ. ಕ್ರೌ. ಆ. ೩೬೪ ಪುಟಗಳು. ಬೆಲೆ ೩-೮-೦.

೧೧. **ಜನಶಕ್ತಿ** (ವಾರಪತ್ರಿಕೆ). ಸಂಪಾದಕರು ಶ್ರೀ. ಕುಳುಕುಂದ ಶಿವರಾಯರು. ಪ್ರಕಾಶಕರು: ಶ್ರೀಮಾನ್ ಶಿವೇಶ್ವರ ದೊಡ್ಡಮನಿ, ಜನಶಕ್ತಿ ಕಾರ್ಯಾಲಯ, ತಬೀಬ ಲ್ಯಾಂಡ್ ಹುಬ್ಬಳ್ಳಿ ಡೇಮಿ ಪೋಲಿಯೊ ೮ ಪುಟಗಳು. ವಾ. ಚಂ. ೬ ರೂಪಾಯಿ. ಬಿಡಿಸಂಚಿಕೆಗೆ ಎರಡಾಣೆ.

ಭಾರತದಲ್ಲಿಯೂ ಕಸುವಿನಿಂದ ತಲೆಯೆತ್ತುತ್ತಲಿರುವ ಕಮ್ಯೂನಿಸ್ಟ್ ಪಕ್ಷದ ರಾಜಕೀಯ ವಿಚಾರಗಳನ್ನು ಕನ್ನಡದಲ್ಲಿ ಹರಡಲು ಈ ಪತ್ರಿಕೆ ಮುಂದೆಬಂದಿದೆ. ಯಾವುದೇ ಒಂದು ರಾಜಕೀಯ ತತ್ತ್ವವೆ ಇರಲಿ, ಅಧ್ಯಾತ್ಮತತ್ತ್ವವೇ ಇರಲಿ, ಗುಣದೋಷಗಳೆರಡರ ಬೆರಕೆಯಿಂದಲೇ ಕೂಡಿರುವುದು. ದೇಶ-ಕಾಲ-ವರಿಸ್ಥಿತಿಗನುಸಾರವಾಗಿ ಒಮ್ಮೆ ಒಂದೆಡೆ ಗುಣವಾಗಿ ಕಂಡುಬರುವ ಇನ್ನೊಮ್ಮೆ, ಇನ್ನೊಂದೆಡೆ ದೋಷವಾಗಿ ಪರಿಣಮಿಸುವುದೂ ನೈಸರ್ಗಿಕರೀತಿಯಾಗಿದೆ. ಕಮ್ಯೂನಿಝಂ ತತ್ತ್ವದೊಳಗಿನ- ನಮಗೆ ಹೊಂದಿಕೆಯಿನಿಸಬಹುದಾದ- ಭಾಗವನ್ನು ನಾವು ಸ್ವೀಕರಿಸಲೇಬೇಕಾಗುವುದು ಆದುದರಿಂದ ಕಮ್ಯೂನಿಸ್ಟರ ವಿಚಾರಗಳನ್ನು ತಿಳಿದುಕೊಳ್ಳುವುದು ಅತ್ಯಗತ್ಯ. 'ಜನಶಕ್ತಿ'

ಅದನ್ನು ತಿಳುಹೆಲು ಮುಂದೆ ಬಂದಿದೆ. ಕನ್ನಡಿಗರು ಇದರಿಂದ ಇಷ್ಟವಾದ ಪ್ರಯೋಜನ ಪಡೆಯಲಿ.

೧೨. ಜಯಕರ್ನಾಟಕ (ವಾರಪತ್ರಿಕೆ). ಸಂಪಾದಕರು ಶ್ರೀಮಾನ್ ಎಸ್. ಎಸ್. ಬಸವನಾಳ ಎಂ. ಎ. ಅವರು. ಪ್ರಕಾಶಕರು: ಶ್ರೀ. ಡಿ. ಬಿ ಕಾಯಸ್ಥ 'ಜಯಕರ್ನಾಟಕ' ಕಾರ್ಯಾಲಯ, ಧಾರವಾಡ. ಕ್ರೌ. ಫೋ. ೮ ಪುಟಗಳು. ವಾ. ಬಂ. ೬-೦-೦. ಪಿಡಿರಂಜಿಕೆಗೆ ೦-೩-೦.

'ಜಯಕರ್ನಾಟಕ' ಮಾಸಪತ್ರಿಕೆಯೊಂದಿಗೇ ಈ ವಾರಪತ್ರಿಕೆಯನ್ನು ಕೈಕೊಂಡು, ಸಂಪಾದಕರು ತಮ್ಮ ಕಾರ್ಯದಕ್ಷತೆಯನ್ನು ಹೆಚ್ಚಿಸಿಕೊಂಡಿದ್ದಾರೆ. ಶ್ರೀ. ಬಸವನಾಳರು ಕರ್ನಾಟಕದ ಬೇಕು-ಬೇಡಗಳನ್ನೂ ತೊಪರು-ತೊಂದರೆಗಳನ್ನೂ ಚೆನ್ನಾಗಿ ಅಭ್ಯಾಸಮಾಡಿದವರು; ಅಲ್ಲದೆ ತಮ್ಮ ಕಾರ್ಯನಿರ್ವಾಹಕ ಗುಣದಿಂದ ಕನ್ನಡಿಗರಿಗೆಲ್ಲ ಬೇಕಾದವರು. ಇವರ ಮುಖಿನಾದ 'ಜಯ ಕರ್ನಾಟಕ' ವಾರಪತ್ರಿಕೆ ಜನಪ್ರಿಯವಾಗಿ ಬಹುಕಾಲ ಬಾಳುವುದರಲ್ಲಿ ಯಾವ ಸಂಶಯವೂ ಇಲ್ಲ.

೧೩. ಹೈದರಾಬಾದು ಶಾಸನಸಭೆ (ಪರಿಚಯಾತ್ಮಕ ಕಿರುಹೊತ್ತಿಗೆ). ಬರೆದವರು ಶ್ರೀ. ರಾ. ಗು. ಜೋಶಿ, ಗಾಜಗಾರ ಪೇಟೆ, ರಾಯಚೂರು. ಲೇಖಕರೇ ಪ್ರಕಾಶಕರು. ಪೂ. ಕ್ರಾ. ಅ. ೩೬ ಪುಟಗಳು. ಬೆಲೆ ೦-೪ ೦.

ಹೈದರಾಬಾದಿನಲ್ಲಿ ಎಂದೂ ಇಲ್ಲದೆ ಹೊಸತಾಗಿ ಪ್ರಜಾಪ್ರತಿನಿಧಿಕ ಶಾಸನಸಭೆಯು ಪ್ರಾರಂಭವಾಗಿದೆ. ಇದರ ಯೋಜನೆ ಎಷ್ಟೊಂದು ಅತ್ಯುಪಕಾರಕ-ವಿರುವುದೆಂಬುದನ್ನು ಲೇಖಕರು ಇವರಲ್ಲಿ ವಿವರಿಸಿದ್ದಾರೆ. ನಮ್ಮ ಭಾರತೀಯ ಸಂತಾನಕ್ಕೆ ಸೇರಿದವರೇ ಆದ ಹೈದರಾಬಾದಿನ ಪ್ರಜೆಗಳು, ಈ ಇಪ್ಪತ್ತನೆಯ ಶತಮಾನದಲ್ಲಿಯೂ ಎಂತಹ ನುದ್ದಿಯನ್ನು ಕೊರಳಿಗೆ ಕಟ್ಟಿಸಿಕೊಂಡಿದ್ದಾರೆಂಬುದನ್ನು ನೋಡಿ ನಾವು ಕಳವಳಿಸುವಂತಿದೆ. ಎಲ್ಲರೊಂದಿಗೆ ಹೈದರಾಬಾದಿನ ಜನತೆಯೂ ಸ್ವತಂತ್ರವಾಗುವದು ಅನಿವಾರ್ಯ. ಅದಕ್ಕಾಗಿ ಹೋರಿನವರಾದ ನಾವೂ ಚಳವಳಿ ನಡೆಯಿಸಬೇಕಾಗುವದು ಶ್ರೀ. ರಾ. ಗು. ಜೋಶಿಯವರ 'ತಿಳಿವಿನ ತುತೂರಿ'ಯ ಪ್ರಕಟನೆಗಳು ಜನರನ್ನು ಚೆನ್ನಾಗಿ ಎಚ್ಚರುಗೊಳಿಸಬಲ್ಲವು. ಎಲ್ಲರೂ ಓದಿ ನೋಡಬೇಕು.

೧೪. ಕನ್ನಡ ಕುಮಾರಸಂಭವ (ಪ್ರಥಮಭಾಗ). ಮಹಾಕವಿ ಕಾಳಿದಾಸನ ಮೂಲ ಸಂಸ್ಕೃತ ಕಾವ್ಯದ ಕನ್ನಡ ಪದ್ಯಾನುವಾದ. ಅನುವಾದಕರು: "ವಿದ್ವಾನ್" ಅಮ್ಮೆಂಬಳ ಶಂಕರನಾರಾಯಣ, ಮಂಗಳೂರು. ಪ್ರಕಾಶಕರು 'ಸಾಹಿತ್ಯಾಂಜಲಿ' ಗ್ರಂಥಮಾಲೆ, ಮಂಗಳಾದೇವಸ್ಥಾನ, ಬೋಳಾರ— ಮಂಗಳೂರು. ಕ್ರೌ. ಅ. ೬೮ ಪುಟಗಳು. ಬೆಲೆ ೧-೪-೦.

೧೫. ಸಂದೇಶ (ವಾರಪತ್ರಿಕೆಯ ವಿಶೇಷ ಸಂಚಿಕೆ). ಸಂಪಾದಕರು ಶ್ರೀ. ಗೋ. ಅ. ದೇಸಪಾಂಡೆ, ಬೆಳಗಾಂವಿ. ರೋಯಲ್ ಆಕ್ಟವರಿ ೬೪ ಪುಟಗಳು. ಬೆಲೆ ೦-೮-೦.

ಕರ್ನಾಟಕದ ಆರ್ಥಿಕ, ವೈಜ್ಞಾನಿಕ, ರಾಜಕೀಯ ವಿಷಯಗಳನ್ನು ಕುರಿತು ಒಳೆದ ಒಳ್ಳೆಯ ಲೇಖನಗಳು ಇದರಲ್ಲಿ ಪ್ರಕಟವಾಗಿವೆ; ಅಲ್ಲದೆ ಕತೆ-ಪದ್ಯ-ಕವನಗಳೂ ಇವೆ. ಶ್ರೀ. ಕೃಷ್ಣಕುಮಾರರು ಒರೆದ 'ಕರ್ನಾಟಕದ ಜೆದ್ದಾರಿಗಳು' ಎಂಬ ಲೇಖನ ಅವರ ಸೂಕ್ಷ್ಮ ಅಭ್ಯಾಸದ ಫಲವಾಗಿದ್ದು-ಪ್ರಯೋಜನಕಾರಿಯಾಗುವಂತಿದೆ. ೧೦ನೆಯ ವರ್ಷದಲ್ಲಿ ಕಾಲಿಕ್ಕಿದ 'ಸಂದೇಶ' ಬೆಳಗಾಂವಿ ಜಿಲ್ಲೆಯ ಕನ್ನಡಕೋಟೆಯ ಕಾವಲುಗಾರನಾಗಿ, ಬಹುಕಾಲ ಬಾಳಲಿ.

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿ. ಧಾರವಾಡ

ಹೆಡ್ ಆಫೀಸ್ ಧಾರವಾಡ

★ ನಿಮ್ಮ ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಭರದಿಂದ ಬೆಳೆಯುತ್ತಿರುವ ಈ ಕಷ್ಟದ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!

★ ಮೊದಲನೆಯ ಪೌಲ್ಯಮಾಪನದಲ್ಲಿ (Valuation) ಲಾಭವನ್ನು ಪಡುವುದಲ್ಲದೆ, ಹೊಸ ವಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು ಎಲ್ಲ ಪಾಲಿಸಿದಾರರ ಹ್ಯೋತ್ಸಾಹಕ್ಕೂ ಪಾತ್ರವಾಗಿದೆ.

★ ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಳಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸಿರುವುದರಿಂದ, ಎಲ್ಲರ ನಂಬಿಗೆಗೂ ಕಕ್ಕುವಾಗಿದೆ.

★ ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲೇಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ಮ್ಯಾನೇಜಿಂಗ್ ಡಾಯರೆಕ್ಟರ್
ವಿ. ಎಸ್. ಕಿಣಿ

ಮ್ಯಾನೇಜರ್
ಎಮ್. ಗೋಪರ್ಧನರಾವ



ರೀಟಾ: ತಲೆಯ ಕೂದಲನ್ನು ಬೆಳೆಸುವುದು.

ರೀಟಾ ಮೆಜುಳಿಗೆ ಶಕ್ತಿಯನ್ನು ಕೊಟ್ಟು, ಮಿರುಗುವ ನೀಳವಾದ ಕೂದಲನ್ನು ಬೆಳೆಸಲು ಅದ್ಭುತವಾದ ಪೇರ್ ಟಾನಿಕ್.

ರೀ ಟಾ

ತಲೆಯ ಕೂದಲು ಉದುರುವದು, ನೆರೆಯುವದು, ಹೊಟ್ಟು, ಉದುರುವದು, ಕಟ್ಟಿಕಲೆ, ಹೇನಿನ ಬಾಧೆ, ಇವೇ ಮುಂತಾದ ತಲೆಯ ಕೂದಲಿಗೆ ಸಂಬಂಧಿಸಿದ ಸಮಸ್ತ ವ್ಯಾಧಿಗಳಿಗೂ ರೀಟಾ ಅತ್ಯುತ್ತಮವಾದ ಗುಣಕಾರಿ.

ಈಗಾಗಲೆ ಸಾವಿರಾರು ಜನ ಉಪಯೋಗಿಸಿ ಗುಣವನ್ನು ಹೊಂದಿದ್ದಾರೆ. ನೀವು ಕೂಡ ಇಂದಿನಿಂದಲೇ ರೀಟಾವನ್ನು ಉಪಯೋಗಿಸಿರಿ.

RITA
HAIR TONIC

ರೀಟಾ ಹಿಂದುಸ್ತಾನದಲ್ಲೆಲ್ಲಾ ದೊರಕುವುದು. ಬೆಲೆ:— ಸೀಸೆ ೧ಕ್ಕೆ ೧೫ ಆಣೆ.

Printed by Mr. V. Y. Jathar at the Karnatak Printing Works, Dharwar, and Published for the Proprietors Jayanti Publications, by M. V. Melligatti at the Jayanti Office, Dharwar.—41-47.

ಪುಟ್ಟ ಗಣಪತಿ

ಶಾಂತಿನಿ ಕಾಮತ್

ಕೆ. ಎನ್. ಉಪಾಧ್ಯ.

ಸಂಪುಟ ೧೦

ಬಾಲಭಾರತಿ

ಸಂಚಿಕೆ ೨

ಸಂಪಾದಕರು : ಬೆಟಗೇರಿ ಕೃಷ್ಣಶರ್ಮರು

ಸಂಪುಟ ೧೦ ಏಪ್ರಿಲ ಜುಲೈ ೧೯೪೭ ಸಂಚಿಕೆ ೨

ಮುಖ್ಯ ವಿಷಯಗಳು

ಸಂವಚನಗಳು (ವಿಚಾರ ತರಂಗ)
ಕನ್ನಡನಾಡಿನ ಎಳೆದಾಟ (ಸಂಪಾದಕೀಯ)
ಬೀರಣ್ಣನ ಬಡಿನುಡಿಗಳು (ವ್ಯಂಗ್ಯಚಿಪ್ಪಣಿ)
ತೀರ್ಥ-ಪ್ರಸಾದ (ಒಂದು ಜೀವನಕಥೆ)
ಗಲಭೆನೆಯ ಇಸ್ಪಿಯ ಕ್ರಾಂತಿ (ಕೆಲವು ಸಂಗತಿಗಳು)
ಅಖಂಡಭಾರತ (ಕವನ)
ಎಂ. ಎಲ್ ಎ ಮಿತಾಕ್ಷರರು (ವ್ಯಂಗ್ಯ ಪ್ರಬಂಧ)
ಸೇವೆ (ಕವನ)
ಆಧುನಿಕ ನಾಟಕ (ವಿಮರ್ಶಾತ್ಮಕ ಪ್ರಬಂಧ)
ಬೆಳುದಿಂಗಳ-ರಾತ್ರಿಯಲ್ಲಿ (ಸಣ್ಣಕತೆ)
ಬದುಕುವ ಆಶೆ (ವಿಚಾರ ಪ್ರಚೋದಕ ಪ್ರಬಂಧ)
ಸಹಾಯಕಗಳು (ವೈಜ್ಞಾನಿಕ ಲೇಖನ)
ಬಾ ವಸಂತ ! (ಕವನ)
ಪುಸ್ತಕ ವಿಮರ್ಶೆ (ಕಣ್ಣೀರು, ಭಾವಫಲಬೋಧಿನಿ)
ಸಾದರ ಸ್ವೀಕಾರ
'ಸಾಮಾಜಿಕ' ೩೬
ಸಂಪಾದಕರು ೩೮
'ಗುಡದಪ್ಪ' ೩೯
ಶ್ರೀ. ಕೆ. ಅಶ್ವತ್ಥ ನಾರಾಯಣರಾವ್, ಬನಾರಸ ೪೬
ಶ್ರೀ. ದ್ವೈಪಾಯನಾಚಾರ್ಯ ಜಹಾಗೀರದಾರ, ವಿಜಾಪುರ ೪೭
ಶ್ರೀ. ಎಂ. ಎಸ್. ರಾಮಕೃಷ್ಣ ಭಟ್ಟ, ಉಡುಪಿ ೪೬
ಶ್ರೀ. ವೆಂಕಣ್ಣಾಚಾರ್ಯ ಪಪ್ಪು ಬಿ ಎ, ಎಲ್ ಎಲ್ ಬಿ. ೪೮
ಶ್ರೀ. ಕೆ. ಎಸ್. ಸುಬ್ರಾಯಭಟ್ಟ, ಪೆರಡಾಲ ೪೯
ಶ್ರೀ. ಖಾನೋಳಕರ ಶ್ರೀಧರರಾಯರು, ಪುಣೆ ೫೦
ಶ್ರೀ. ಎಸ್. ಅನಂತ ನಾರಾಯಣ ಬಿ.ಎ (ಆನರ್ಸ್) ೫೦
ಡಾ. ಗೋಪಾಲ ಕೃಷ್ಣರಾಯರು, ಧಾರವಾಡ ೫೨
ಶ್ರೀ. ವೀ. ಸಿ. ಹಿತ್ತಲಮನಿ ಪುಣೆ ೫೯
ಶ್ರೀ. ಮುದೇನೂರ ಸಂಗಣ್ಣ, ಹರಪನಹಳ್ಳಿ ೬೨
ಶ್ರೀ. ಕೇಶವ ಶರ್ಮರು ಮತ್ತು ಶ್ರೀ. ರಾ ಕು ೬೪
.... ೬೮

೫೨ ವರ್ಷಗಳಿಂದ ಅನುಭವಪಟ್ಟ
ಕರ್ಕಿ ಮತ್ತು ಕಂಪನಿಯ
ಜ್ವರದ ಗುಳಿಗೆಗಳು.
ಜಾಟ್ಲಿಗೆ ೧-೮-೦
ಎಲ್ಲ ಬಗೆಯ ಜ್ವರಗಳ ಮೇಲೆ ದಿವ್ಯೌಷಧ!
ವಿಳಾಸ:—
ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪನಿ
ಸರಗಾಂವ, ಮುಂಬಯಿ.

ಕನ್ನಡ ಸಾಹಿತ್ಯಕ್ಕೆರಿಂದ ಮುಚ್ಚುಗೆ ಪಡೆದ
ಕಾಂಚನಮೃಗ ಪಾಂಡೇಕರ ೩-೪-೦
ರಕ್ತಾಂಜಲಿ ಪ್ರೊ. ಜ ಚಟ್ಟ ೧-೦ ೦
ಪಲಾಯನ ,, ೧-೪-೦
ಗೆಲುವಿನ ಗುಟ್ಟ ಮ ಗ. ಕೆಟ್ಟ ೦-೪-೦
ಅಂಬೆಯ ವೆಚ್ಚ ಉಚಿತ. ವ್ಯಾಪಾರಿಗಳಿಗೆ ಧಾರಾಳ ಕಮಿಶನ್.
ಪುಸ್ತಕ ಪಿಬ್ಲಿಷ ಸ್ಥಳ
ಪಿ. ಡಿ. ಶಹಾಪೆ, ಅಂಕೋಲಾ (ಉ. ಕನ್ನಡ)

'ಜಯಂತಿ'ಗಾಗಿ ಅಲ್ಲಲ್ಲಿ
ವಿಜಂಟರು ಬೇಕು!

★

ಮುಂಬೈ, ಮೈಸೂರು, ಮಡಿಕೆರೆ, ತುಮಕೂರು, ಹಾಸನ, ಚಿಕ್ಕಮಗಳೂರು, ದಾವಣಗೆರೆ, ಹರಿಹರ, ಉಡುಪಿ, ಕುಂದಾಪುರ, ಅಂಕೋಲಾ, ಹೊನ್ನಾವರ, ಕುಮಟಾ, ಆಥಣಿ, ಚಿಕ್ಕೋಡಿ, ಹುಕ್ಕೇರಿ, ರಬಕವಿ, ಜಮಖಂಡಿ, ಬಾದಾಮಿ, ಇಳಕಲ್ಲ, ಮೊದಲಾದ ಕನ್ನಡ ನಾಡಿನ ಪ್ರಮುಖ ಪಟ್ಟಣಗಳಲ್ಲಿ, ಜಯಂತಿಗಾಗಿ ಸಜ್ಜನ್ನಿ ನಷ್ಟೆಯಿಸಿಕೊಂಡು ಹೋಗಲಿಕ್ಕೆ ಸ್ವಾಮಾಣಿಕರಾದ ವಿಜಂಟರು ಬೇಕಾಗಿದ್ದಾರೆ. ಚೆನ್ನಾಗಿ ಕೆಲಸಮಾಡಿದರೆ ಕೈತುಂಬ ಹಣ ಸಿಕ್ಕುವುದು. ಅಪೇಕ್ಷೆಯುಳ್ಳವರು ಕರಾಯಗಳಿಗಾಗಿ ಪತ್ರ ಬರೆದುಕೊಳ್ಳಬೇಕು

ಜಯಂತಿಯ ಲೋಕಪ್ರಿಯತೆಯ ಬಗೆಗೆ ಹೆಚ್ಚಿಗೆ ಹೇಳಬೇಕಾಗಿಲ್ಲ ಮಧ್ಯಮ ವರ್ಗದ ಪ್ರತಿಯೊಂದು ಕುಟುಂಬದಲ್ಲಿಯೂ ಇರಬೇಕಾದ ಪತ್ರಿಕೆಯಿದು.

ಮ್ಯಾನೇಜರ್ : 'ಜಯಂತಿ' ಧಾರವಾಡ.



ವಾರ್ಷಿಕ ಚಂದಾ
೪—೮—೦

ಪ್ರತಿತಿಂಗಳ ೧೫ನೆಯ ತಾರೀಖಿಗೆ
ಪ್ರಕಟವಾಗುವುದು.

ಸಂಪುಟ ೧೦ | ೧೫ನೆಯ ಜುಲೈ ೧೯೪೭ | ಸಂಚಿಕೆ ೨

ಸಂಪಾದನಗಳು

ಕಾಲಿದಾಸ-ಭವಭೂತಿಯರ ಕೀರ್ತಿಯು ಕಹಳೆಯುಂ ಕೇಳ. ಪಂಪ-ಕುಮಾರವ್ಯಾಸ-ರತ್ನಾಕರರ ಪವಾಡಗಳನಾಲಿಸಿ, ಶೆಕ್ಸ್‌ಪಿಯರ್-ಶೆಲ್ಲಿ-ಕೀಟ್ಸ್‌ರ ಖ್ಯಾತಿಯು ಕತೆಗಳನರಿದು, ತಾವೂ ಕವಿವರರಾಗಬೇಕೆಂಬ ಹುಚ್ಚುಹಂಬಲದವರು ಹಲವು ಜನರಯ್ಯಾ! ಆ ಮಹಾಕವಿಗಳನ್ನು ಅನುಕರಿಸಲು ಹೋಗಿ ಅಣಕಿಸಿದಂತೆ ಮಾಡುವ ವಾಗ್ವೀರರ ಅವತಾರ ಎಲ್ಲೆಲ್ಲಿಯೂ ನಡೆದಿದೆ ನೋಡ ತಂದೆ! ಕಾಲವಾವುದಾ ಕಾಲಿದಾಸ-ಭವಭೂತಿಯರದು? ಪರಿಸ್ಥಿತಿಯೆಂತಿದ್ದಿತಾ ಪಂಪಾದಿಗಳು ಜೀವಿಸಿದ್ದುದು? ದೇಶವಾವುದಾ ಶೆಕ್ಸ್‌ಪಿಯರ್-ಶೆಲ್ಲಿ-ಕೀಟ್ಸ್‌ರದು? ಇಂತಿದಾವುದರ ವಿವೇಕ-ವಿವೇಚನೆಗಳಿಲ್ಲದೆ ಕಗ್ಗಗಳನು ಹೊಸೆವ ಕುರುಡರನು ಕಂಡು, ಕೆರಳಿ ನಿಲುವಳಯ್ಯಾ ನಮ್ಮ ವಾಗೀಶ್ವರಿ!

* * * *

ಹೆಸರ ಹೆಂಬಲದಿಂದೇನಯ್ಯಾ ಮರ-ಬಳ್ಳಿತಳರಬಿಡುತಿಹುದು? ಖ್ಯಾತಿಯ ಕೋರಿಕೆಯಿಂದೇನಯ್ಯಾ ಮೊಗ್ಗು ಬಿರಿದು ಅರಳಾಗುತಿಹುದು? ಕೀರ್ತಿಯ ಹಾರಯಿಕೆಯಿಂದೇನಯ್ಯಾ ಕಾಯಿ ಕಾಯ್ದು ಹಣ್ಣಾಗುವುದು? ಪ್ರಕೃತಿಯ ನಿಯತಿಯಂತೆ ಸೇರುವುದು ಕೇಳಯ್ಯಾ ಈ ಜೀವುವ-ಜಿಂದಗಳ ಸಂತೆ! ಪ್ರಕೃತಿಯ ನಿಯತಿಯಂತೆಯೆ ಸಾಹಿತ್ಯವೂ ತಳೆತು, ಅರಳಿ, ಹಣ್ಣಾಗಿ ಹೂರಕ್ಕೆ ಬಂದರೆ, ಕೀರ್ತಿ-ಖ್ಯಾತಿ-ಹೆಸರುಗಳದನು ನಾಯಿಗಳಂತೆ ಬೆಂಬಳಸಿ ಬರುವುವು ಕೇಳು ತಂದೆ!

'ಹೊಟ್ಟುಹೊತ್ತಿಗೆ ಹೊಸಪರಿಯ ಸಿಂಗರಬೇಕು' ಎಂದು ಸಾರಿಹನಯ್ಯಾ ನವ್ಯಾರಸಯೋಗಿ ರತ್ನಾಕರಸಿದ್ಧ. 'ಉಸ್ತವ ಸುಖಿಗಳಿಂದ'ವಾವುದೆಂಬುದನರಿತ ಅರಸುಕಬ್ಬಿಗನಾ ಕನ್ನಡ ಜಾಣ. ಸಾಹಿತ್ಯಿಕನಾಗಬೇಕೆಂದು ಹಂಬಲಿಸುವಂಗೆ ದೇಶೋಚಿತ ಕಾಲೋಚಿತ ಸಿರಿ-ಸಿಂಗರಗಳ ಅರಿವಿಲ್ಲದಿರ್ದೊಡೆ, ಒರೆವ ಬರೆವ ಮಾತುಗಳೆಲ್ಲ ಪರಿಣಮಿಸುವುವಯ್ಯಾ ತಿರುಳರದ ತೆಂಗಿನಂತೆ! ನೋಡಿಕೊಳುವ ಕನ್ನಡಿಯಲ್ಲಿ ಮೂಡುವುದು ಕೋಡಿಗನ ಮೊಗವಾದೊಡೆ, ಉಳಿಗಾಲವಿದ್ದೀತೇನಯ್ಯಾ ಆ ಬೂತುಗನ್ನಡಿಗೆ?

* * * *

ಒಬ್ಬರೆಂದುದನೆ ಇನ್ನೊಬ್ಬರು ಎನ್ನುವುದರಲ್ಲಿ ಹೊಸತೆಂಬುದು ಏನಿದ್ದೀತಯ್ಯಾ? ಒಬ್ಬನು ನಿಂದಲ್ಲಿಯೆ ಇನ್ನೊಬ್ಬನು ನಿಂತುಕೊಂಡರೆ, ಮುನ್ನಡೆಯುದೆಂದು ಕಾಂಬುದೆಂತಯ್ಯಾ? ವ್ಯಕ್ತಿಯು ಸ್ವಂತದ ದರ್ಶನ, ಅಭ್ಯಾಸ, ಅನುಭೂತಿಗಳೆ ಹೊಸತನ್ನು ತಂದು ತೋರಿಸಬಲ್ಲವು ಕೇಳು ತಂದೆ! ತನ್ನ ನೋಟ, ತನ್ನ ಕೇಳಿಕೆ, ತನ್ನ ಬುದ್ಧಿ, ತನ್ನ ಭಾವನೆಗಳೆ ಹೊಸಸಾಹಿತ್ಯವನು ಹುಟ್ಟಿಸಬಲ್ಲವು ಕಾಣಯ್ಯಾ! ಇಂತಿದಿಲ್ಲದೆ ಬರೆದೊರೆವವನು, ಹಾಡಿದುದನೆ ಹಾಡುವ ಕಸಿವಾಯದಾಸನೆಂದು ಟೊಣೆದು ನುಡಿವಳು ಕೇಳಾ ನಮ್ಮ ವಾಗೀಶ್ವರಿ!

—ಸಾವಾಜಿಕ.

ಕನ್ನಡನಾಡಿನ ಎಳೆದಾಟ

ಭಾರತಕ್ಕೆ ಸ್ವಾತಂತ್ರ್ಯ ಬಂದು ಬಿಟ್ಟಿತು. ಸ್ವಾತಂತ್ರ್ಯ ಸಾಧನೆಗಾಗಿ ಭಾರತವು ಹೂಡಿದ ಹೋರಾಟದಲ್ಲಿ ಕನ್ನಡಿಗರು ಮಾಡಿದ ಕಾರ್ಯ ಕಡಿಮೆಯಾದೇನೂ ಅಲ್ಲ; ರಾಷ್ಟ್ರೀಯ ಮಹಾಸಭೆಯ ಪ್ರತಿಯೊಂದು ಕಾರ್ಯಕ್ರಮದಲ್ಲಿಯೂ ನಮ್ಮ ನಾಡು ಯಶಸ್ವಿಯಾಗಿ ಭಾಗವಹಿಸಿದೆ. ಆದರೆ ಈಗ ಸ್ವಾತಂತ್ರ್ಯಾಯುದ್ಧೋತ್ತರ ಭಾರತದಲ್ಲಿ, ಕನ್ನಡಿಗರು ತಮ್ಮ ಅಸ್ತಿತ್ವ ರಕ್ಷಣೆಗಾಗಿಯೂ ಸುಖ ಜೀವಿತಕ್ಕಾಗಿಯೂ ಅತ್ಮನಿಕಾಸಕ್ಕಾಗಿಯೂ ಹೊಸ ತೊಂದು ಹೋರಾಟವನ್ನು ಹೂಡಬೇಕಾದ ಲಕ್ಷಣಗಳು ತೋರಲು ತೊಡಗಿವೆ.

ಇದುವರೆಗೆ ನಮ್ಮ ಸಾಮಾಜಿಕ ಸಂಕಟಗಳ ಕಾರಣವನ್ನು ನಮ್ಮ ಮುಂದಾಳುಗಳು, ಬ್ರಿಟಿಷರ ಬಲುಮೆಯ ಆಳಿಕೆಯ ಮೇಲೆ ಹಾಕುತ್ತ ಬಂದರು. ಇದ್ದರೂ ಇರಬಹುದೆಂದು ಭಾವಿಕರಾದ ಕನ್ನಡ ಜನಸಾಮಾನ್ಯರು, ತಮ್ಮ ನಾಡಿನ ಭಿನ್ನ-ವಿಚ್ಛಿನ್ನತೆಯ ಆಪತ್ತಿಯನ್ನು ಮರೆತೂ, ಅಖಿಲಭಾರತದ ಸಂಕಟನಿವಾರಣೆಯ ಚಟುವಟಿಕೆಗಳಲ್ಲಿ ನುಗ್ಗಿದರು. ಸ್ವತಂತ್ರ ದೊರೆತರೆ ಕರ್ನಾಟಕಕ್ಕೆ ತಾನಾಗಿ ಸ್ವಾಯತ್ತತೆ ದೊರೆಯುವುದೆಂಬ ನಂಬುಗೆಯನ್ನು, ನಮ್ಮ ಕನ್ನಡನಾಡಿನ ರಾಷ್ಟ್ರೀಯ ಮುಂದಾಳುಗಳು ಕಾಲಕಾಲಕ್ಕೆ ಕೊಡುತ್ತ ಬಂದರು. ಕನ್ನಡದ ಸಂಪೂರ್ಣ ಹಿತವನ್ನು ಬಯಸುವ ಕೆಲವು ಮುನ್ನೋಟದ ಮುಂದಾಳುಗಳು: 'ಭಾರತದ ಸ್ವಾತಂತ್ರ್ಯ ದಷ್ಟೇ ಕರ್ನಾಟಕದ ಏಕೀಕರಣವೂ ಮಹತ್ವದುದು' ಎಂದೂ 'ಅದುದರಿಂದ ಏಕೀಕರಣ ಸಾಧಿಸುವುದು ಕನ್ನಡಿಗರಿಗೆ ಅಗತ್ಯದ ಮಾತು' ಎಂದೂ ಕೂಗತೊಡಗಿದರು. ಆದರೆ ಅಖಿಲ ಭಾರತೀಯ ಸ್ವಾತಂತ್ರ್ಯದ ಚಟುವಟಿಕೆಗಳ ಮುಂದೆ ಇವರ ಕೂಗು, ನಗಾರಿಯ ಮುಂದೆ ತಂತುವಾದ್ಯ ಬಾಜಿಸಿದಂತಾಯಿತು ಮಿಕ್ಕ ಪ್ರಾಂತಗಳಲ್ಲಿಯ ಎಲ್ಲ ಜನರಂತೆ, ಕರ್ನಾಟಕದ ಎಲ್ಲ ಜನರೂ ಪ್ರಾಂತೀಯ ಸಂಘಟನೆಯ ಕಾರ್ಯವನ್ನು ಎಂದೂ ಕೈಕೊಡದೆ ನಡೆಯಿಸಲಿಲ್ಲ. ಅದರ ಕಹಿಫಲವನ್ನಣ್ಣಿಪ ಸ್ಪಂದಭ ಇಂದು ನಮ್ಮನ್ನು ಎದುರಿಸುತ್ತಿದೆ.

ಭಾಷಾನುಗುಣ ಪ್ರಾಂತರಚನೆಯ ತತ್ತ್ವವನ್ನು, ಸದ್ಯ ಅಧಿಕಾರ ಕೂತ್ರವನ್ನು ವಹಿಸಿರುವ ರಾಷ್ಟ್ರೀಯ ಮಹಾಸಭೆ ಒಪ್ಪಿಕೊಂಡು ಬಿಟ್ಟಿದೆ. ಅದಕ್ಕನುಸಾರವಾಗಿ ಭಾರತದ ಹೊಸರಾಜ್ಯ ಘಟನೆಯಲ್ಲಿ ಭಾಷಾನುಗುಣ ಪ್ರಾಂತ ರಚನೆಯಾಗುವುದು ನಿಶ್ಚಯ. ಆಂಧ್ರದ ಡಾಕ್ಟರ್ ಪಟ್ಟಾಭಿಸೀತಾರಾಮಯ್ಯನವರೂ, ಮಹಾರಾಷ್ಟ್ರದ ಶ್ರೀ. ಶಂಕರರಾವದೇವರೂ ತಮ್ಮ ತಮ್ಮ ಪ್ರಾಂತಗಳನ್ನು ಪ್ರತ್ಯೇಕವಾಗಿ ನಿರ್ಮಿಸಿಕೊಂಡೇ ತೀರುವುದಾಗಿ ಪ್ರತಿಜ್ಞಾಬದ್ಧರಾಗಿ ಹೊರಗೂ ಒಳಗೂ ಕಾರ್ಯ ನಡೆಯಿಸಿದ್ದಾರೆ. ಆ ಪ್ರಾಂತಗಳ ಜನತೆ ಪ್ರತ್ಯೇಕ ಪ್ರಾಂತಕ್ಕಾಗಿ ಹಾರಯಿಸಿಕೊಂಡು ಕುಳಿತಿದೆಯಲ್ಲದೆ, ಅದಕ್ಕಾಗಿ ಬೇಕಾಗುವ ವಿವಿಧ ಮುಖವಾದ ಅನುಕೂಲತೆಗಳನ್ನೂ ಪ್ರಾಂತದಲ್ಲಿ ನಿರ್ಮಿಸಿಕೊಂಡಿದೆ; ನಿರ್ಮಿಸುತ್ತಲಿದೆ. ಆದುದರಿಂದಲೆ ಆ ಪ್ರಾಂತಗಳು ಪ್ರತ್ಯೇಕವಾಗುವುದು ಖಂಡಿತವಾದ ಮಾತು. ಮುಂಬಯಿ ಪ್ರಾಂತದಲ್ಲಿಯ ಮಹಾರಾಷ್ಟ್ರ ಭಾಗವು ಬೇರೆಯಾದರೆ, ಉಳಿಯುವುದರಲ್ಲಿ ಪ್ರಮುಖವಾದ ಭಾಗವು ಗುಜರಾತಿಗಳದು. ಸದ್ಯದ ಅಖಿಲ ಭಾರತ ರಾಜಕಾರ್ಯದ ಸೂತ್ರಗಳೇ ಗುಜರಾತಿಗಳ ಕೈಯಲ್ಲಿರುವಾಗ, ಅವರ ಪ್ರಾಂತ ಪ್ರತ್ಯೇಕವಾಗುವುದಕ್ಕೆ ವಿಲಂಬವೂ ಆಗದು; ಪ್ರಯಾಸದ ಮಾತೂ ಆಗದು. ಉಳಿದುದು ಕನ್ನಡ ಪ್ರದೇಶ. ಅದರ ಗತಿ?

ಇದರಂತೆಯೆ ಮದರಾಸ ಆಧಿಪತ್ಯದಲ್ಲಿಯ ಆಂಧ್ರಪ್ರದೇಶ ಬೇರೆಯಾದರೆ, ತಮಿಳರ ಪ್ರಾಂತ ಪ್ರತ್ಯೇಕವಾಗುವುದು. ಅಖಿಲ ಭಾರತ ರಾಜಕಾರ್ಯದಲ್ಲಿ ಪ್ರಮುಖ ಸ್ಥಾನದಲ್ಲಿದ್ದು ಕಾರ್ಯ ಮಾಡುತ್ತಿರುವ ಮಲಯಾಳಿನ ಮಹಾ ಮಹಾ ಧುರೀಣರು ತಮ್ಮ ಪ್ರಾಂತದ ಏಕೀಕರಣವನ್ನು ಕುರಿತು ಆತುರರಾಗಿದ್ದಾರೆ. ಜಾಗೃತವಾದ ಅಲ್ಲಿಯ ಜನತೆ, ಕೇರಳ ಪ್ರಾಂತದ ಏಕೀಕರಣದ ಕೂಗನ್ನು ಅಖಂಡವಾಗಿ ನಡೆಯಿಸಿಬಿಟ್ಟಿದೆ. ಜನತೆಗೂ ಮುಂದಾಳುಗಳಿಗೂ— ಇಬ್ಬರಿಗೂ— ಬೇಕಾದ ಮಾತು ಸಾಧಿಸುವುದಕ್ಕೆ ತಡವೇನು? ಆದುದರಿಂದ ಮದರಾಸ ಆಧಿಪತ್ಯದಲ್ಲಿಯ ಕನ್ನಡಿಗರದೂ ಒಂದು ಮಹಾಸಮಸ್ಯೆಯಾಗಿ ಕುಳಿತಿದೆ. ಅಲ್ಲಿಯ ಜನತೆಯಲ್ಲಿ ಪ್ರಾಂತೀಯ ಭಾವನೆಯು ಜಾಗೃತಿಯಿಲ್ಲ; ಜನತೆಯ ಮುಂದಾಳುಗಳಿಗೆ ಕರ್ನಾಟಕ ಪ್ರಾಂತ ಬೇಕಾದಂತೆ ಕಾಣುವುದಿಲ್ಲ. ಏಕೆಂದರೆ ಪ್ರಾಂತದ ಬಗೆಗೆ ಉತ್ಕಟವಾದ ಚಳುವಳಿಯ ಕೂಗನ್ನೇ ಅವರು ಎಬ್ಬಿಸಿಲ್ಲ. ಅವರು ಎಬ್ಬಿಸುತ್ತಿರುವ ಕೂಗುಗಳೆಂದರೆ ಕೇವಲ ಆಧಿಪತ್ಯದಲ್ಲಿಯ ಅಧಿಕಾರದ ಸ್ಥಾನಗಳಿಗಾಗಿ. ಈ ಸ್ವಾರ್ಥ ಸಾಧಿಸುವ ಪ್ರಸಂಗ ಬಂದಾಗ, ಜನತೆಯನ್ನೊಲಿಸಿಕೊಳ್ಳುವ ಮಟ್ಟಿಗೆ 'ಕರ್ನಾಟಕ'ದ ಹೆಸರನ್ನು ಬಾಯಿಂದಾಡುತ್ತಾರೆ. ಮದರಾಸ ಕರ್ನಾಟಕದಲ್ಲಿಯ ಹಣೆ ಬರಹವೆ ಮುಂಬಯಿ ಕರ್ನಾಟಕದಲ್ಲಿದೆ.

ಕನ್ನಡಿಗರ ಈ ಅಶಕ್ತತೆಯನ್ನರಿತೇ ದಿಕ್ಕಿಲ್ಲದ ಈ ಕರ್ನಾಟಕದ ಪ್ರದೇಶಗಳನ್ನು ತಂತಮ್ಮ ಪ್ರಾಂತಗಳಿಗೆ ಸೇರಿಸಿಕೊಳ್ಳಬೇಕೆಂದು ಮಹಾರಾಷ್ಟ್ರ, ಆಂಧ್ರ, ಕೇರಳಗಳ ಅಗ್ರಣಿಗಳಿಂದು ಕೂಗಾಟ ನಡೆಯಿಸಿದ್ದಾರೆ. ಗೋವೆಯವರೆಗೆ ಮಹಾರಾಷ್ಟ್ರವೆಂದು ಶ್ರೀ. ದೇವ ಶಂಕರರಾಯರು ಗರ್ಜಿಸಿದರೆ, ಗೋಕರ್ಣದ ವರೆಗೆ ಕೇರಳವೆಂದು ಅಲ್ಲಿಯ ವೀರಸತ್ಯಾಗ್ರಹಿ ಕೇಳಪ್ಪನವರು ಕೂಗುತ್ತಲಿದ್ದಾರೆ.

ಸಂಚಿಕೆಯ ಮುಂದಿನ ಪುಟಕ್ಕೆ ಮುಂದುವರಿದಿದೆ:

ಪ್ರಶ್ನೋತ್ತರಗಳು

೧

ಪ್ರ:— ಬೀರಣ್ಣ, ಬೆಳಗಾಂವಿಯ ಹಿಂದಿನ ಕಲೆಕ್ಟರರು ಸರಕಾರಿ ಗೋದಾವುನಿಂದ ಕಡಲೆಯ ಚೀಲವನ್ನು 'ಕೊಂ ೨' ಕೊಂಡಿದುದ್ದೂ ಅವರು ಕೊಂಡ ಕಡಲೆಯು ಚೀಲ ಕೆಟ್ಟುಹೋದ ಮಾಲೆಂದು ಲೆಕ್ಕದಲ್ಲಿ ಖರ್ಚುಬಿದ್ದುದೂ ಇದರ ಪ್ರಕರಣವೀಗ ಮುಂದುವರಿದುದೂ ನಿನಗೆ ಗೊತ್ತಿರಬೇಕು. ಇದರ ಬಗೆಗೆ ನಿನ್ನ ಅಭಿಪ್ರಾಯವೇನು ?

ಉ:— ಇದು ಅಭಿಪ್ರಾಯ ಕೊಡುವ ಮಾತಲ್ಲ—ನಾವೆಲ್ಲರೂ ಕೇಳುತ್ತೀರೆಂದಮೇಲೆ ಒಂದೆರಡು ಮಾತುಗಳನ್ನು ಸಂಜ್ಞೆಮುಖೇನಾಗಿ ಬೇಳಬೇಕಾಗಿದೆ. ಕವಿ ಮುಂದೆ ಮಾಡಿರಲ್ಲಿ. ಮುತ್ತ ನಾನು ಹೇಳುವುದನ್ನು ಇನ್ನಾರಿಗೂ ಹೇಳಬೇಡಿ ! ಮೊಲ್ಲಿ, ಇಂತಹ ಕತೆಗಳು ಎಲ್ಲಿ ನಡೆದಿಲ್ಲ ? ಯಾವ ಜಿಲ್ಲಾಧಿಕಾರಿಗಳು ಬರೀ ತಮ್ಮ ಸಂಬಳದ ಮೇಲೆ ಉಂಡುಕೊಂಡು ಇದ್ದಾರೆ ? ಕಡಿಗೇದಿ ಪತ್ರಕಾರರು ಇಲ್ಲದ ಕತಿ ಎಬ್ಬಿಸುತ್ತಾರೆ. ಪತ್ರಕಾರರನ್ನು ಸಮಾಧಾನಪಡಿಸುವ ಜಾಣತನವು ಕಲೆಕ್ಟರರಲ್ಲಿ ಇದ್ದರೆ, ಇಂತಹ ಮಾತು ಎಂದಿಗೂ ಹೊರಗೆ ಬರುವುದಿಲ್ಲ. ತೆಗೆದುಕೊಳ್ಳುವವರಿಗೆ ಕೊಡಲೂ ಬೇಕಾಗುವುದೆಂಬ ಕಲ್ಪನೆ ಇರಬೇಡವೆ ?

೨

ಪ್ರ:—ಬೆಳಗಾಂವಿ ಜಿಲ್ಲಾ ಬೋರ್ಡಿನವರು ಹೊಸ್ತೆ ಹೊಸ್ತೆಯೆ ತಮ್ಮ ನಿರ್ಣಯ ಬದಲಿಸಿ, ತಮ್ಮ ಅಧೀನದಲ್ಲಿಯ ವಿದ್ಯಾರ್ಥಿಗಳೆಲ್ಲ ಹಿಂದೂ ಸ್ಥಾನ ಸ್ಕಾವುಟ್ ಸಂಸ್ಥೆಯಿಟ್ಟು ಬಾಯರ್‌ಸ್ಕಾಟ್ ಸಂಸ್ಥೆಗೆ ಸೇರಿಕೊಳ್ಳಬೇಕೆಂದು ನಿರ್ಣಯಿಸಿದ್ದಾರೆ. ಈಗ ಮುಂಬಯಿ ಸರಕಾರದಿಂದ ಹುಕುಮು ಬಂದಿದೆ : ಸ್ವಾಂತದಲ್ಲಿಯ ಎಲ್ಲ ಸ್ಕೌಟುದಲಗಳು ಹಿಂದುಸ್ಥಾನ ಸ್ಕಾವುಟ್ ಸಂಸ್ಥೆಗ ಸೇರಿಕೊಳ್ಳಬೇಕು— ಎಂದು. ಈಗ ಏನು ಮಾಡುವರು ಬೆಳಗಾಂವಿ ಜಿಲ್ಲಾ ಬೋರ್ಡಿನವರು ?

ಉ:— ಈ ಪ್ರಶ್ನೆಯಲ್ಲಿ ಅಂತಹ ತಿಳಿಯದ ಕೊಡಕು ಇದೆಯೇನು ? ಮೂಗುದಾರವಿರುವ ಕೋಣನನ್ನು ಯಾರು ಬೇಕಾದಹಾಗೆ ತಿರುಗಿಸಬಹುದು ಅಂದು ಜಿಲ್ಲಾಧಿಕಾರಿಗಳಾ ಹಸುಕ್ಕರನ್ನರು ಮೂಗುದಾರ ಹಿಡಿದು ಆಡಿಸಿದರು; ಬಾಯರ್‌ಸ್ಕಾವುಟ್ ದಾರಿ ಹಿಡಿಯಿತು; ಇಂದು ಮುಂಬಯಿ ಸರಕಾರ ಮೂಗುದಾರ ಕೈಗೆ ತೆಗೆದುಕೊಂಡಿತು; ಸರಿ, ಹಿಂದುಸ್ಥಾನ ಸ್ಕಾವುಟ್ ಸಂಸ್ಥೆಯು ಕಡೆಗೆ ಹೊರಳಿತು. ಮ್ಯುನಿಸಿಪಾಲಿಟಿ—ಲೋಕಲ್ ಬೋರ್ಡುಗಳು ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಲ್ಲ; ಕರ್ಜನ್ ಕಂಪನಿಯು ಪ್ರಾಣಿಶಾಲೆಗಳು : ರಿಂಗ್‌ಮಾಸ್ಟರ್ ಮನಸ್ಸಿಗೆ ಬಂದಂತೆ ಈ 'ಸ್ವರಾಜ್ಯ' ಪದಸ್ಥರನ್ನು ಕುಣಿಸುತ್ತಾನೆ. ನೀವು ಯಾವ ಯೋಚನೆಯನ್ನೂ ಮಾಡಬೇಕಾಗಿಲ್ಲ.

೩

ಪ್ರ:— ಸರ್ ಸಿ. ಪಿ ರಾಮಸ್ವಾಮಿಗಳೆಂದರೆ ಭಾರತೀಯರೆ ಅಲ್ಲವೆ? ಅವರು ತಿರುವಾಂಕೂರು ಸಂಸ್ಥಾನದವರೇ ಆಹೆ.ದೇನು ? ಸಂಸ್ಥಾನಿಕರು ತಾವೇ ಎನಿಸುವಂತೆ ಕಾರುಭಾರ ನಡೆಯಿಸಿಬಿಟ್ಟಿದ್ದಾರಲ್ಲಾ ! ಸಂಸ್ಥಾನಿಕರಿಗೆ ಬೇಡವಾಗಿ ಸಂಸ್ಥಾನದಿಂದ ಹೊರಗೆಹಾಕಿದರೆ ಅವರು ಎಲ್ಲಿಗೆ ಹೋಗಿ ಇರಬಹುದು !

ಉ:— ನಿಮ್ಮ ಎರಡನೆಯ ಪ್ರಶ್ನೆಗಿದೋ ಉತ್ತರ : ಸರ್ ಸಿ. ಪಿ. ಯವರ ಮಾರ್ದೆವ ಅವರನ್ನು ಭಾರತದಲ್ಲಿ ಹುಟ್ಟಿಸಿದೆಯೆಂದೂ ಅವರು ಭಾರತೀಯರಾಗಿದ್ದಾರೆ. ನಿನೆಯ ಪ್ರಶ್ನೆಗೆ ಉತ್ತರ : ಅವರು ತಿರುವಾಂಕೂರಿನವರೇ ಅಲ್ಲ; ಮದರಾಸಿನಲ್ಲಿ ಜೀವನಾಡ ವಕೀಲರಾಗಿದ್ದರು. ಲಾರ್ಡ್ ವಿಲಿಂಗ್ಡನ್ನರ 'ಭಯಕಾರಿಮಿತ್ರ'ರಾದುದರಿಂದ ತುಂಬ ಮೇಲಕ್ಕೇರಿ, ದಿವಾನರೂ ಆದ್ದರು. ತಿರುವಾಂಕೂರು ಎಂದರೆ ಮಲೆಯಾಳ. ಮಲೆಯಾಳಿನ ರಾಣಿಯರ ಪುಸಸ್ಸಿಗೆ ಬಂದರೆ, ಮಂತ್ರಿಗಳೇ ರಾಜನ ಸ್ಥಾನವನ್ನು ಆಕ್ರಮಿಸಬಹುದು. ಎಂಬ ಮೇಲೆ, ಸರ್. ಸಿ. ಪಿ. ಯವರು ತಾವೇ ಸಂಸ್ಥಾನಿಕರಂತೆ ನಿಕೆ ಮಾತನಾಡಬಾರದು ? ಳನೆಯ ಪ್ರಶ್ನೆಗೆ ಉತ್ತರ : ಸಂಸ್ಥಾನಿಕನಲ್ಲಿ ಅಂತಹ ಯೋಗ್ಯತೆಯಿದ್ದಲ್ಲಿ, ಅವನ ತಿರುವಾಂಕೂರನ್ನು ಬಿಡಿಸಿ ಸಿ. ಪಿ. ಯವರನ್ನು ಹೊರಗೆ ಕಳುಹಿಸಿದರೆಅದಕ್ಕೆ ಅನುಕೂಲವಾಗುವಂತೆ ಮೊದಲಿನಿಂದಲೂ ಜಿನ್ನಾಸಾಹೇಬರನ್ನು ಬಲಿಸುವಕೆಲಸ ಮಾಡುತ್ತಿದ್ದಾರೆ. ಪಾಕಿಸ್ತಾನದಲ್ಲಿ ಈ ಸಿ. ಪಿ. ವೀರನಿಗೆ ಸ್ಥಾನಸಿಕ್ಕುತ್ತದು ಬಂಡಿತ.

೪

ಪ್ರ:— ಜಮಖಂಡಿಯ ಮುಂದಾಳು ಪಾಟಡೆಯವರನ್ನು ನಡುಊರ್ಲಯೆ ಕಡಿದು ಕೊಲೆ ಮಾಡಿದರೂ, ಇದುವರೆಗೆ ಆದರ ಪತ್ತೆಯೆ ಇಲ್ಲ. ಏನೂ ಗೊತ್ತಿಲ್ಲದ ಜನರನ್ನು ಕರೆದು ತಂದು 'ಭರಮಪ್ಪನಪ್ರಸಾದ' ಕೊಟ್ಟು, ಏನೆಲ್ಲವನ್ನೂ ಗೊತ್ತುಹಚ್ಚಬಲ್ಲ ಪೋಲೀಸರು, ಪಾಟಡೆಯವರ ಕೊಲೆಯ ಬಗೆಗೆ ಕ್ರಿಯಾಶೂನ್ಯರಾಗಿದ್ದಾರೆ. ಇದರಲ್ಲಿ ಏನಾದರೂ ರಹಸ್ಯವಿರಬಹುದೇನು ?

ಉ:— ಕೊಲೆಯಾಗಿದೆಯೆಂದ ಮೇಲೆ ಆದಕ್ಕೊಂದು ಮಹತ್ವದ ಕಾರಣವಿರಬೇಕು. ಪಾಟಡೆಯವರಂತಹ ರಾಜಕೀಯ ಮುಂದಾಳಿನ ಕೊಲೆಯೆಂದ ಮೇಲೆ, ಆದರ ಹಿಂದೆ ರಾಜಕೀಯ ರಹಸ್ಯವೇನಾದರೂ ಇರಲೇಬೇಕು. ಪ್ರಜೆಗಳ ಗುಪ್ತ ಕಾರಸ್ಥಾನವನ್ನು ಹುಡುಕುವುದು ರಾಜರ ಸೇವಕರಾದ ಪೋಲೀಸರ ಕರ್ತವ್ಯ. ಜಮಖಂಡಿಯ ಪೋಲೀಸರಿಗೆ ಈ ಕೊಲೆ ಪ್ರಜೆಗಳ ಕಾರಸ್ಥಾನದಿಂದ ನಡೆದುದಲ್ಲವೆಂಬುದರ ಬಗ್ಗೆ ಸಂಪೂರ್ಣ ನಂಬುಗೆಯಿರಬೇಕು. ಎಂದಮೇಲೆ ತಮ್ಮ ಕಾರ್ಯವಲ್ಲದ ಕಾರ್ಯವನ್ನು ಅವರೇಕೆ ಮಾಡಬೇಕು ? ಈ ರಾಜಕೀಯ ರಹಸ್ಯವನ್ನು

(ಪುಟ ೩೬ ನೋಡಿರಿ.)



ಬಳ್ಳಾರಿ ಜಿಲ್ಲೆಯನ್ನು ಬಾಯಿಗಿಳಿಸಿಕೊಳ್ಳಬೇಕೆಂದು ಆಂಧ್ರ ಧುರೀಣರು ಹೊಂಚು ಹಾಕುತ್ತಲಿದ್ದರೆ, ಕೋಯಿಮತ್ತೂರು—ಕೊಳೈಗಾಲಗಳನ್ನು ತಮಿಳರು ನುಂಗಿಯೇ ನಿಂತಿದ್ದಾರೆ. ಇಂತಹ ವೇಳೆಯಲ್ಲಿಯೂ ತಮ್ಮಪ್ರಾಂತವನ್ನುಳಿಕೊಂಡು ಏಕೀಕರಿಸಿ ಪುನರ್ಘಟಿಸಬೇಕೆಂಬ ಕಸುವಿನ ಕೂಗು ಕರ್ನಾಟಕದಲ್ಲಿ ಇದುವರೆಗೂ ಕೇಳಿಸಲೊಲ್ಲದು. ಒಂದೆರಡು ಕಿವುಡುಮಾತುಗಳು ಕೇಳುತ್ತಲಿದ್ದರೂ, ಅದಕ್ಕೆ ಬೇಕಾಗುವ ಕೆಲಸ ಬಲುಹಿನಿಂದ ನಡೆದಿಲ್ಲ. ಆಂಧ್ರ-ಕೇರಳ-ಮಹಾರಾಷ್ಟ್ರಗಳ ಮುಂದಾಳುಗಳಂತೆ 'ಸಾತಾರೆಯ ಅಗ್ನೇಯ ಭಾಗ ನಮ್ಮದು' 'ಸೊಲ್ಲಾಪುರ ನಮ್ಮದು!' 'ಕೊಲ್ಲಾಪುರ ನಮ್ಮದು!' 'ಅನಂತಪುರ-ಸೇಲಂ-ಪೈನಾಡುಗಳು ಕನ್ನಡಿಗರವು!' ಎಂದು ಹೃದಯಬಲದಿಂದ ಕೂಗಿ ಬೇಳುವ ಕನ್ನಡದ ಮುಂದಾಳು ಒಬ್ಬನೂ ಕಾಣಲೊಲ್ಲ. ಮುಂದಾಳುಗಳ ಮೋರೆಯನ್ನೇ ನೋಡುತ್ತ ಬಳೆದ ನಮ್ಮ ಜನತೆಗೆ ನಾಡಿನ ಪ್ರಶ್ನೆ-ಕತೆಯು ಎಚ್ಚರವೇ ಇಲ್ಲ. ದ್ರೌಪದಿಯನ್ನು ದುಶ್ಶಾಸನನು ಎಳೆದಾಡಿದಂತೆ, ಮಿಕ್ಕ ಪ್ರಾಂತೀಯರು ಕನ್ನಡ ತಾಯನ್ನು ಎಳೆದಾಡುತ್ತಿರುವಾಗ, ಹಣದಲ್ಲಿ ಸೋತ ಪಾಂಡವರಂತೆ ನಮ್ಮ ಮುಂದಾಳುಗಳು ಮುಂಕುವಟ್ಟು ನಿಂತಿದ್ದಾರೆ. ಕನ್ನಡ ತಾಯು ಈ ಎಳೆದಾಟವನ್ನು ನಿಲ್ಲಿಸಲಿಕ್ಕೆ ಜನತೆಯಲ್ಲಿಯ ಛಲವುಬಲವೆನ್ನೆ ಎಚ್ಚತ್ತು ಇಂದು ಕಾರ್ಯಮಾಡಬೇಕಾಗಿದೆ. ಇಲ್ಲವಾದರೆ ನಮ್ಮ ನಾಡು ಇನ್ನಿಷ್ಟು ಹರಿಹಂಚಾಗಿ, ಕೊನೆಯವರೆಗೂ ಅನ್ಯರ ಆಳ್ವಿನ ಮಾಡುವುದೇ ಕನ್ನಡಿಗರ ಪ್ರಾರಬ್ಧವಾಗಿ ಪರಿಣಮಿಸದಿರದು.

ಇಂದು ಕನ್ನಡ ನಾಡು ಸಂಪೂರ್ಣವಾಗಿ ಅಸಿತ್ವದಲ್ಲಿ ಬಾರದೆ ಹೋದರೆ, ಕನ್ನಡಿಗರಿಗೆ ಮುಂದೆ ಒಳ್ಳೆಯ ಭವಿಷ್ಯವಿಲ್ಲವೆ ಇಲ್ಲ. ಇನ್ನೊಬ್ಬರ ಸೊಂಡೆಯಿಂದ ನೀರು ಕುಡಿಯುವುದು ಸಾಕಾಗಿ ಅಲ್ಲವೇ ಕನ್ನಡಿಗರು ಭಾರತದ ಸ್ವಾತಂತ್ರ್ಯಯುದ್ಧದಲ್ಲಿ ಧುಮುಕಿದುದು? ಆದರೆ ಅವರಿಂದು ವಿಜಯಶಾಲಿಗಳಾದರೂ, ಆ ವಿಜಯದ ಫಲವನ್ನು ಪ್ರತ್ಯೇಕ ಪ್ರಾಂತ್ಯದ ನಿರ್ಮಿತಿಯಿಲ್ಲದೆ ಅನುಭವಿಸಲಾರರು! ಆದುದರಿಂದಲೇ :

'ಎಳ್ ಕನ್ನಡ ತಾಯ್ ಅಳ್ ಕನ್ನಡ ತಾಯ್'

ಎಂದು ಕನ್ನಡ ಜನತೆ ಒಕ್ಕೊರಲಿನಿಂದ ಕೂಗಿ ಎದ್ದೇಳಲಿ! ನ್ಯಾಯಕ್ಕಿಕ ಸ್ವಾರ್ಥಸಾಧನೆಗಾಗಿ ಹೊಂಚು ಹಾಕುತ್ತಿರುವ ಸೋಗಿನ ಮುಂದಾಳುಗಳನ್ನು ಹಿಂದೊತ್ತಲಿ! ಕನ್ನಡದ ಗಡಿಯಲ್ಲಿ ಆಗದವರು ಕಾಲಿಕ್ಕದಂತೆ ಕಾಯ್ದುಕೊಳ್ಳಲಿ!

ನಮ್ಮ ಹಿತಚಿಂತಕರಲ್ಲಿ :

ಮಹಾಶಯರೆ, ಸದ್ಯದ ಆರ್ಥಿಕ ಮುಗ್ಗಟ್ಟು ಜಯಂತಿಯ ಜೀವನದ ಮೇಲೆ ತುಂಬ ಹರಿಣಾಮವನ್ನು ಮಾಡಿದೆ. ಜಯಂತಿಯ ಆದಾಯದಲ್ಲಿ ವ್ಯತ್ಯಾಸವೇನೂ ಇಲ್ಲ; ಆದರೆ ಬೆಚ್ಚ ಮೊದಲಿಗಿಂತ ಮೂರು ಮಡಿ ಹೆಚ್ಚಾಗಿದೆ. ಈ ಕಡಿಮೆ ಬೀಳುವ ಹಣದ ನಷ್ಟ ತುಂಬ ಬರಬೇಕಾದರೆ, ಜಯಂತಿಗೆ ಚಂದಾದಾರರು ಹೆಚ್ಚಾಗ ಬೇಕಾಗಿದೆ. ಆದುದರಿಂದ ನಮ್ಮ ಹಿತಚಿಂತಕರೆಲ್ಲ ಜಯಂತಿಗಾಗಿ ಚಂದಾದಾರರನ್ನು ಒದಗಿಸಿಕೊಡುವ ಉಪಕಾರವನ್ನಾಡಬೇಕೆಂದು ವಿನ್ನಹ. ಜಯಂತಿಗಾಗಿ ಕೊಟ್ಟ ನಾಲ್ಕುವರೆ ರೂಪಾಯಿಗಳು ಪೌಷ್ಟಿಕವಾದ ಆಹಾರಕ್ಕೆ ಬೆಚ್ಚವಾಡಿದಂತಲ್ಲದೆ ವ್ಯರ್ಥವ್ಯಯವಲ್ಲ ವೆಂಬೀ ಅನುಭವ, ಚಂದಾದಾರರಾದವರಿಗೆಲ್ಲ ಬಾರದೆ ಹೋಗದೆಂಬ ನಮ್ಮ ವಿಶ್ವಾಸ. ನಷ್ಟ ಕಡಿಮೆಯಾದಂತೆ ಜಯಂತಿಯು ಹೊರ-ಒಳ ಬೆಲುವು ಹೆಚ್ಚುತ್ತ ಹೋಗುವುದೆಂದು ನಂಬುಗೆ ಕೊಡುತ್ತೇನೆ. ನಾಡಿನ ಮೂಲೆಮೂಲೆಗಳಲ್ಲಿಯೂ ಜಯಂತಿಗೆ ಸ್ವಾಗತ ಸಿಕ್ಕಿ ಪ್ರೋತ್ಸಾಹ ದೊರೆತರೆ, ಅದರ ಕಾರ್ಯದ ಸೀಮೆ ಬೆಳೆಯುತ್ತ ಸೋಗುವುದು. ಕಲಿತ ಕನ್ನಡಿಗರೆಲ್ಲರೂ ಜಯಂತಿಯನ್ನು ಬರ್ತಮಾಡಿಕೊಳ್ಳಿರಿ! ನಿಮ್ಮ ಬುದ್ಧಿ-ಸಂಸ್ಕಾರಗಳನ್ನು ಬೆಳೆಯಿಸಿಕೊಳ್ಳಿರಿ!

—ಸಂಪಾದಕರು.

(ಕಳೆನೆಯ ಪುಟದಿಂದ ಮುಂದುವರಿದುದು)

ಕಂಡುಹಿಡಿಯಬೇಕಾದುದು ಜನಪಿಂಡಿಯ ಪ್ರಜೆಗಳ ಕೆಲಸ. ಅವರು ತಮ್ಮ ಕರ್ತವ್ಯವನ್ನು ಮಾಡಿದರಾಯಿತು; ಹೊಲಿಸರ ಕೈಯಾಡಿಕೆಗೆ ಸಿಟ್ಟಣ'.....ಇತ್ಯಾದಿ.

ನೋಡಬೇಕಾದ ಕಾರಣವೇನು?

ವಾರ್ತಾ-ವಿಕೃತಿಗಳು

ಕನ್ನಡದಲ್ಲಿ ಬೇಗನೆ ಹೊರಡಲಿರುವ ಪುಸ್ತಕಗಳ ಹೆಸರು ಕೆಳಗೆ ಕಾಣಿಸಿದುವು ಇರುವಂತೆ:

'ರಕ್ತದ ಓಕುಳಿ' 'ಕೀವಿನ ಕಡಲು' 'ಹೆಣಗಳ ಕಣಿವೆ' 'ಹೊಟ್ಟೆಯಂಕಿಚ್ಚು' 'ಅಗ್ನಿವರ್ಷ' 'ಭಂಗಿಯಬಾಟ್ಲಿ' 'ಕೊಳೆತ ಕನಸು' 'ಕಾಳಕೂಟ' 'ಹಾವು-ಚೇಳು' 'ಹಾಳುಮನೆ' 'ಬೀಳುಹೊಲ' 'ನಗ್ನಕನ್ಯೆ' 'ಬೋಳುತಲೆ' 'ಸುಡುಗಾಡುಸಿದ್ದ' 'ಮಸಣದ ಮಲ್ಲಿ' 'ಕ್ರಾಂತಿಯ ಭ್ರಾಂತಿ' 'ಮೂಗಿನ ಸಿಂಬಳು' 'ಒಡೆದ ಗಡಿಗೆ' 'ಸುಟ್ಟ

* * * *

ದಾರವಾಡದರೇಶನಿಂಗ್ ಅಂಗಡಿಯೊಂದರಲ್ಲಿ, ಜೋಳದಲ್ಲಿ ಸ್ವಲ್ಪ ಅಕ್ಕಿಬೆರೆಯಿಸಿ, ಅಕ್ಕಿಯೆಂದು ಮಾರಾಟಮಾಡುತ್ತಿದ್ದಾರಂತೆ. ಕತ್ತಲೆಯಲ್ಲಿಯೆ ಕೊಡ-ತಕ್ಕೊಳ್ಳುವ ವ್ಯವಹಾರವಾಡಿಗೊತ್ತಿದ್ದ ಆ ಅಂಗಡಿಯ ಗಿರಾಕಿಗಳು, ಪಾಪ ತಿತ್ತಿದೆ ಮನೆಗೊಯ್ದು ಅಕ್ಕಿಯು ಅನ್ನವೆಂದು ಜೋಳವನ್ನು ಕುಚ್ಚಿ ತಿನ್ನುತ್ತಿದ್ದಾರಂತೆ.

* * * *

ಹೈದರಾಬಾದಿನ ನಿಜಾಮರಿಗೂ ಕಾಶ್ಮೀರದ ಮಹಾರಾಜರಿಗೂ ಹಿಂದುಸ್ತಾನ-ಪಾಕಿಸ್ತಾನಗಳೆರಡೂ ನಿದ್ದೆಹತ್ತದಂತೆ ಮಾಡಿವೆಯಂತೆ. ಭೋಪಾಳದ ನವಾಬರಿಗೆ ಪಿತ್ತ ನೆತ್ತಿಗೇರಿದೆಯಂತೆ. ಅವರಿಂದ ಲೆವರಿಗೆ ಔಷಧಿಕೊಟ್ಟು ರೋಗವಾಸಿಸುವ ಮಹಾವೈದ್ಯರು ಬೇಕೆಂದು ಬೇಗನೆ ಪ್ರಕಟನೆ ಕೊಡಲಿದ್ದಾರಂತೆ.

'ಜಯಂತಿ'ಯಲ್ಲಿ ಜಾಹೀರಾತು ಕೊಟ್ಟರೆ, ವ್ಯಾಪಾರಿಗಳಿಗೆ, ತುಂಬ ಲಾಭವುಂಟು.

ತೀರ್ಥ-ಪ್ರಸಾದ

(ಒಂದು ಜೀವನಕಥೆ)

ಶ್ರೀ. ಕೆ. ಎ. ಎನ್. ರಾವ್, ಹಿಂದು ವಿಶ್ವವಿದ್ಯಾನಿಲಯಂ, ಬನಾರಸ

★

ಸ್ವಾರ್ಥಕ್ಕಾಗಿ ರಾಕ್ಷಸನಂತೆ ವರ್ತಿಸುವುದು; ಹುಚ್ಚು ಸಮಾಧಾನಕ್ಕಾಗಿ ತೀರ್ಥ-ಕ್ಷೇತ್ರವಿಧಿಗಳನ್ನಾಚರಿಸುವುದು. ಇದು ಮನುಷ್ಯತ್ವದ ಲಕ್ಷಣವೆ? ಇದನ್ನರಿತೇ ಸರ್ವಭೂಷಣ ಶಿವಯೋಗಿಗಳು ಕೇಳಿದ್ದಾರೆ: 'ಯಾಕೆ ಯಾತ್ರೆಯ ಮಾಡುತಿರ್ಪಿರಿ? ಅಲ್ಲೇನು ಇಹುದು?' ಎಂದು.

★

೧೦೦ ವರ್ಷದ ಕೆಳಿನ ಸೌಕರ್ಯವು ಇಲ್ಲದಿದ್ದಾಗ, ಕಾಶಿಗೆ ಹೋಗಿಬರುವುದೆಂದರೆ ಗಂಡಾಂತರದ ಮಾತಾಗಿದ್ದಿತಂತೆ. ಆಗ ಯಾತ್ರಾರ್ಥಿಗಳು ಮತ್ತೆ ಹಿಂದಕ್ಕೆ ಬರುತ್ತಾರೊ, ಇಲ್ಲವೊ— ಎನ್ನುವಷ್ಟು ಭಯ-ಅನುಮಾನಗಳಿದ್ದು, ಯಾತ್ರಾರ್ಥಿಗಳು ಶ್ರೀವಿಶ್ವನಾಥನ ಪಾದಕ್ಕೇ ಸೇರಿಬಿಟ್ಟರೆನ್ನುವಷ್ಟು ಎದೆಯನ್ನು ಕಲ್ಲುಮಾಡಿಕೊಂಡು ಬೀಳ್ಕೊಡುವವರೂ, ತಮ್ಮ ಇಹಲೋಕದ ಕತೆಯೇ ಮುಗಿಯಿತೆಂದುಕೊಂಡು ಯಾತ್ರಾರ್ಥಿಗಳೂ, ಬಹಳವಾಗಿ ಗೋಳಾಡಿ ಅಗಲುತ್ತಿದ್ದರಂತೆ. ದಾರಿಯಲ್ಲಿ ದುಷ್ಟಮೃಗಗಳಿಗೆ ಆಹಾರವಾದರೂ, ಕಳ್ಳ-ಕಾಕರಿಂದ ಹತರಾದರೂ, ಕಾಶಿಯ ರಣಹದ್ದುಗಳಂತಿದ್ದ ಪುಂಡರ ಪಾಲಾದರೂ, ಹೇಗೂ ಯಾತ್ರಾರ್ಥಿಗಳು ಶ್ರೀವಿಶ್ವನಾಥನ ಸಾನ್ನಿಧ್ಯವನ್ನೇ— ಈ ಸಣ್ಣ ಓಣಿಗಳ ಮೂಲಕ— ಸೇರಿಬಿಡುತ್ತಿದ್ದರು. ಈಗಲಾದರೊ, ಅಷ್ಟೊಂದು ಕಷ್ಟವಾಗಲಿ ಅನುಮಾನವಾಗಲಿ ಇಲ್ಲ. ಬೀಳ್ಕೊಡುವವರಿಗೆ, ತಮ್ಮವರು ಸ್ವಾಮಿಪಾದವನ್ನು ಸೇರಿಬಿಡುವುದಿಲ್ಲವೆಂಬ ಭರವಸೆಯಿರುತ್ತದೆ; ಯಾತ್ರಾರ್ಥಿಗಳಿಗೆ ಇಹದ ಇನ್ನಷ್ಟು ಸುಖವನ್ನು ತೊರೆದುಬಿಡುತ್ತಿರುವೆವೆಂಬ ಸಂಕಟವೂ ಇಲ್ಲ. ಹೀಗಾಗಿ, ಈಗಿನ ಅಗಲುವಿಕೆ ಸಂತೋಷದಿಂದಲೆ ನಡೆಯುತ್ತದೆ. ಅದೂ ಅಲ್ಲದೆ ಮೃಗ, ಕಳ್ಳ, ಪಂಡಾ ಮೊದಲಾದ ಓಣಿಗಳಿಂದ ಸ್ವರ್ಗವನ್ನು ಸೇರುವ ಸಂದರ್ಭವೂ ಇಲ್ಲ... ರೈಲುಡಿಕ್ಕಿಯು ಅದ್ದ ಹೆದ್ದಾರಿಯೊಂದನ್ನು ಬಿಟ್ಟರೆ, ಎಲ್ಲವೂ ಸುಸೂತ್ರವಾಗಿದೆ; ಕ್ಷೇಮವಾಗಿದೆ. ಮೂರು ನಾಲ್ಕು ದಿನದ ರೈಲಿನ ಪ್ರಯಾಣ— ಮಿತಿಯಾದ ವೆಚ್ಚ— ಅಷ್ಟೆ. ಇಷ್ಟಾದರೂ ಇದು ಸೌಲಭ್ಯದ ಶತಮಾನವಲ್ಲವೆ? ಒಂದು ಸಾಮಾನ್ಯವಾದ ಮ್ಯಾಟ್ರಿಕ್ಯುಲೇಷನ್ ಪರೀಕ್ಷೆಯನ್ನು ಕುರಿತು ಯೋಚಿಸಿದರೆ, ಅದರಲ್ಲಿ 'ಪಾಸು' ಮಾಡುವುದೊಂದು ಬ್ರಹ್ಮವಿದ್ಯವೆ? ಆದರೂ 'Matric made easy' ಗಳು ಇತರ 'ಸುಲಭವಾಗಿಸಿದುವು'ಗಳಂತೆ, ಮತ್ತು 'Key to success' ಗಳು ಇತರ ತರಹಾವಾರಿ ಬೀಗದ ಕೈಗಳಂತೆ— ಬಿಸಿದೋಸೆಯ ಭರಾಟೆಯಿಂದ ಮಾರಲ್ಪಡುತ್ತವೆ. ಇನ್ನು ವ್ಯಾಪಾರಕ್ಷೇತ್ರದಲ್ಲಿ, ಕಸಬುಕಲೆಯುವುದರಲ್ಲಿ, ಗೃಹಕೃತ್ಯದಲ್ಲಿ, ಪಾರಭಾಗದಲ್ಲಿ— ಒಂದೇ ಮಾತಿನಲ್ಲಿ ಎಲ್ಲೆಲ್ಲಿಯೂ— ಈ 'ಸುಲಭ ದಾರಿಗಳು' 'ಸ್ವಯಂಬೋಧಿನಿಗಳು' 'ಚಿತ್ತಾರವನ್ನೆ ನುಂಗಿ'ಬಿಟ್ಟವೆ ಎಂದು ಹೇಳಿದರೆ ತಪ್ಪಾಗಲಾರದು, ಈ ಗಾಳಿಯೇ ಯಾತ್ರಾಕ್ಷೇತ್ರದಲ್ಲಿ ಬೀಸಿದರೆ ಹೆಚ್ಚಿನ ಆಶ್ಚರ್ಯವೇನು? ಹೀಗಿದ್ದು, ಸಾಮಾನ್ಯದೃಷ್ಟಿಯಿಂದ ಸುಲಭವೆ ಅದ, ಮೂರು ನಾಲ್ಕುದಿನದ ಪ್ರಯಾಣದ, ಮಿತವಾದ ವೆಚ್ಚದ ಕಾಶೀಯಾತ್ರೆಯ ಫಲವು ಸಹ, ಇನ್ನೂ ಸುಲಭ ರೀತಿಯಲ್ಲಿ ಸಿಕ್ಕುವ ದಾರಿಗಳೂ ಸ್ಥಾಪಿಸಲ್ಪಟ್ಟಿವೆ ಇದನ್ನು ತಿಳಿದರೆ ಯಾರುಬೇಕಾದರೂ ಇಪ್ಪತ್ತುನಾಲ್ಕು ಗಂಟೆಗಳಲ್ಲಿ— ಹಂಜಿಕುಕ್ಕೆಯಂತಹ ಬಿಳಿಯತಲೆಯನ್ನು ಕಲ್ಲಿದ್ದಲಿಯಂತೆ ಕಪ್ಪಗೂ, ಜೋಟುದ್ದ ಶರೀರವನ್ನು ಗೇಣುದ್ದಕ್ಕೂ ಮಾಡಿಕೊಳ್ಳಬಹುದಾದಂತೆ— ಯಾವ ಯಾವ ಸ್ಥಿತಿಗತಿಯಲ್ಲಿದ್ದರೂ, ಕೇವಲ ಕೆಲವೇ 'ಜಾರ್ಜ್‌ಪ್ರಭು'ವಿನ ನಾಣ್ಯಗಳ ಭಾರ್ಜಿ ಕೊಟ್ಟು, ಅಧಃವಾತಾಳದಿಂದ ಏಳನೆಯಸ್ವರ್ಗಕ್ಕೆ. ಏಕಾಏಕಿ— ಎಲೆಕ್ಟ್ರಿಕ್ ಲಿಫ್ಟಿನಲ್ಲಿ ಹೇಗೋ ಹಾಗೆ— ಹತ್ತಿಬಿಡಬಹುದು ಇಪಕ್ಕೆ ದಾರಿತೋರಿಸುವ ಉದ್ದಿಶ್ಯದಿಂದ, ಈ ಭಾವನೆಯ ಸಮರ್ಥನೆಗಾಗಿ ಕಾಶಿಯ 'ಅನಾದಿ' ಶ್ರೋತ್ರಿಯು ಮಹಾನುಭಾವರಲ್ಲೊಬ್ಬರು ಹೊರದಿಸಿರುವ— ಬಹಳ ಉಪಯುಕ್ತವಾದ— ಪ್ರಕಟನೆಯೊಂದರಿಂದ ಕೆಲವು ಮಾತುಗಳನ್ನು ಉದ್ಧರಿಸಲು ತಪ್ಪು ಅಪ್ಪಣೆಬೇಡುತ್ತೇನೆ:

"ಮಹನೀಯರಿಗೆ ವಿಶೇಷ ಸೂಚನೆ: ಅನೇಕರು 'ಕಾಶಿಗೆ ಹೋಗಬೇಕು— ಗಂಗಾಸ್ನಾನ ಮಾಡಬೇಕು—' ಎಂಬುದಾಗಿ ನಿತ್ಯ ಸಂಕಲ್ಪ ಮಾಡಿಕೊಂದೇ ಇರುತ್ತಾರೆ. ಆದರೆ ಕೆಲವರು ಸಂಕಲ್ಪಗಳನ್ನು ನೆರವೇರಿಸಿಕೊಳ್ಳುತ್ತಾರೆ; ಕೆಲವರಿಗೆ ಆಸಾಕರ್ಯವೊ, ಆರ್ಥಿಕ ಅನನುಕೂಲವೊ. ಅನಾರೋಗ್ಯವೊ, ಇಲ್ಲವೆ ಇವೇ ಬಗೆಯ ಇನ್ನಾವ ತೊಂದರೆಗಳೊ ಒದಗುವುದರಿಂದ, ಸಂಕಲ್ಪವು ನೆರವೇರದೆ ಹೋಗುವುದೂ ಉಂಟು. ಅಂಥವರು ಕೂಡ ಭಗ್ನಮನೋರಥರಾಗಬಾರದು. ಏಕೆಂದರೆ 'ಕಾಶೀ ಕಾಶೀತಿ ಕಾಶೀತಿ ತ್ರಿವಾರ ಯಃ ಪಠೇನ್ನರಃ! ಸೋಪಿ ವೇಹಾಂತರೇ ವಾಸೀ ಕಾಶೀವಾಸ ಫಲಂ ಭವೇತ್ ॥" ಎಂಬ ಪ್ರಾತಃಸ್ಮರಣ ವಚನಾನುಸಾರ, ಅವರಿಗೆ ಕಾಶೀವಾಸದ ಫಲವು ಇರುತ್ತದೆ. ಆದರೂ ಗಂಗಾಸ್ನಾನ, ವಿಶ್ವನಾಥನ ಅಭಿಷೇಕ, ಅರ್ಚನೆಗಳ ಸ್ಥಳ ಇನ್ನೆಲ್ಲ ಹೇಗೆ ಲಭ್ಯವಾಗಬಹುದೆಂದು ಚಿಂತಿಸಬೇಕಾಗಿಲ್ಲ. ಕಾಶಿಯಲ್ಲಿ ಒಬ್ಬ ಶ್ರೋತ್ರಿಯ ಬ್ರಾಹ್ಮಣನನ್ನು

ವಾಸಮಾಡಿಸಿ, ಅತನಿಂದ ಗಂಗಾಸ್ನಾನ—ಅರ್ಚನೆ—ಅಭಿಷೇಕಾದಿಗಳನ್ನು ಮಾಡಿಸಿದರೂ—ತಮ್ಮ ಮನೆಯಲ್ಲಿದ್ದವರಿಗೆ ಕೂಡ—ಆ ಫಲ ಪ್ರಾಪ್ತಿಯಾಗುತ್ತದೆ. ಈ ರೀತಿ ಗಂಗಾಸ್ನಾನ ಮಾಡಿಸಿ, ಅಭಿಷೇಕಾದಿಗಳನ್ನು ನಡೆಯಿಸಿ, ಪ್ರಸಾದವನ್ನು ಕಳುಹಿಸುವ ವಿಶೇಷಾರಿ ಕೂಡ ನಾವು ಮಾಡಿಸುತ್ತೇವೆ. ಇಲ್ಲಿ ಎಷ್ಟೋ ಮಂದಿ ಅನಾದಿ ಶ್ರೋತ್ರಿಯ ಬ್ರಾಹ್ಮಣರು ಗಂಗಾಸ್ನಾನ ಮಾಡಿಕೊಂಡು ವಾಸಿಸಿದ್ದಾರೆ. ಈ ಕೆಳಗಿನ ವಿವರದಂತೆ ಮೌಲ್ಯವನ್ನು ಕಳುಹಿಸಿದರೆ, ಆ ಬ್ರಾಹ್ಮಣರ ಮೂಲಕ ನಾವು ಆ ಆ ಕಾರ್ಯಗಳನ್ನು ನೆರವೇರಿಸಿಕೊಡುತ್ತೇವೆ:

೧. ಬ್ರಾಹ್ಮಣದ್ವಾರಾ ಗಂಗಾಸ್ನಾನ ಮಾಡಿಸಿ, ವಿಶ್ವೇಶ್ವರನಿಗೆ ಅಭಿಷೇಕ ಮಾಡಿಸಿ, ಗಂಗಾಪ್ರಸಾದವನ್ನು ಕಳುಹುವ ಬಗ್ಗೆ ಕನಿಷ್ಟಪಕ್ಷ ರೂ. ೩–೦–೦.

೨. ಬ್ರಾಹ್ಮಣದ್ವಾರಾ ಗಂಗಾಸ್ನಾನ, ವಿಶ್ವೇಶ್ವರನಿಗೆ ರುದ್ರಾಭಿಷೇಕ, ಬಿಲ್ವಾರ್ಚನೆ ಮಾಡಿಸಿ, ಗಂಗಾಪ್ರಸಾದ ಕಳುಹುವ ಬಗ್ಗೆ ಕನಿಷ್ಟಪಕ್ಷ ರೂ. ೫–೪–೦.

೩. ಅನ್ನಪೂರ್ಣೇಶ್ವರೀ ಅಮ್ಮನವರಿಗೆ ಕುಂಕುಮಾರ್ಚನೆ ಮಾಡಿಸಿ, ಪ್ರಸಾದ ಕಳುಹಲಿಕ್ಕೆ ಸುಮಾರು ೩ ರೂಪಾಯಿ ೪ ಆಣೆಗಳು.

ಇದರಂತೆಯೆ ವಿಶಾಲಾಕ್ಷಿಗೂ ಗಂಗಾದೇವಿಗೂ ಕುಂಕುಮಾರ್ಚನೆಯ ಬಗ್ಗೆ ರೂಪಾಯಿ ಮೂರು ಮತ್ತು ಮೂರು.

ಬಿಂದುಮಾಧವದೇವರಿಗೆ ತುಳಸೀ ಅರ್ಚನೆಯ ಬಗ್ಗೆ ರೂಪಾಯಿ ೩–೦–೦; ಕಾಳಭೈರವನಿಗೆ ಪಡೆಯಮಾಲೆ ಹಾಕಿಸಿ ಪ್ರಸಾದ ಕಳುಹುವ ಬಗ್ಗೆ ರೂಪಾಯಿ ೩–೪–೦.

ಇದೇ ರೀತಿ ಪ್ರಯಾಗ ಕ್ಷೇತ್ರದಲ್ಲೂ, ಗಂಗಾ–ಯಮುನಾ–ಸರಸ್ವತೀ, ತ್ರಿವೇಣೀ ಸಂಗಮಸ್ನಾನ, ತ್ರಿವೇಣಿಗೆ ಕುಂಕುಮಾರ್ಚನೆ ಮಾಡಿಸಿ ಪ್ರಯಾಗ ಗಂಗಾಪ್ರಸಾದ ಕಳುಹಿಸುವ ಬಗ್ಗೆ ರೂಪಾಯಿ ೩–೪–೦....''

ಇದು ದಮಗೆ 'ಆನಂದಭವನ'ದ ತಿಂಡಿಯುಬೋರ್ಡನ್ನು ನೆನಪಿಗೆ ತರುತ್ತದೆಯೇನು? ಹಾಗಿದ್ದರೆ ಅವನ್ನು ಅತ್ತಕಡೆಗೆ ಒತ್ತರಿಸಿ ಬಿಡಿ. ಬೋಕೆ! ಸುಮ್ಮನೆ ವೈವಸಿಂದೆಯ ಪಾಪವನ್ನು ಕಟ್ಟಿಕೊಂಡು, ಯಮಯಾತರ ಕೈಗೆ ಸಿಕ್ಕಿ ಸಂಕಟಕ್ಕೆ ಒಳಗಾಗಬೇಡಿ. ಮತ್ತೆ ತಾವು ಮುಖ್ಯವಾಗಿ ಗಮನಿಸಬೇಕಾದ ವಿಷಯವೊಂದಿದೆ, ಮೇಲೆ ಕಾಣಿಸಿದ ದರಗಳು ಯುದ್ಧ ಪೂರ್ವದ್ದು. ಈಗ ಜೀವನದ ಬೆಚ್ಚನ್ನು ಹೆಚ್ಚಿರುವಂತೆ ಇವೂ ಶೇಕಡಾ ಮುನ್ನೂರರಷ್ಟಾದರೂ ಕನಿಷ್ಟಪಕ್ಷ ಹೆಚ್ಚಿರಬೇಕು. ಇನ್ನು, ಮೇಲೆ ಬರೆದಿರುವಷ್ಟೇ ಸೇವಾವಿವರಗಳೆಂದು ತಿಳಿದಿದ್ದರೆ ಅದು ಬುದ್ಧ ತಪ್ಪು. ಆದೇ ಪ್ರಕಟನೆಯಿಂದ ಇನ್ನೂ ಕೊಂಚ ಕೇಳಿ:

"ಮತ್ತು ಈ ಕ್ಷೇತ್ರಗಳಲ್ಲಿ ಎಷ್ಟೋ ಅನ್ನಛತ್ರಾದಿಗಳನ್ನಿಟ್ಟು, ಸಹಸ್ರಾರು ಮಂದಿ ಬ್ರಾಹ್ಮಣ-ಸುವಾಸಿನಿಯರಿಗೆ ಭೋಜನ ಮಾಡಿಸುತ್ತಾರೆ. ಇಲ್ಲಿ ಒಬ್ಬಳು ಸುವಾಸಿನಿ, ಒಬ್ಬ ಬ್ರಾಹ್ಮಣ ಇವರಿಗೆ ಭೋಜನ ಮಾಡಿಸಿದರೆ, ಒಂದು ಸಹಸ್ರಭೋಜನ ಮಾಡಿಸಿದಷ್ಟು, ಫಲವೆಂದು ಹೇಳಲ್ಪಟ್ಟಿರುತ್ತದೆ. ಯಾವ ಮಹನೀಯರಿಗೆ ಈ ಕ್ಷೇತ್ರಗಳಲ್ಲಿ ಬ್ರಾಹ್ಮಣ ಭೋಜನ ಮಾಡಿಸಬೇಕೆಂಬ ಇಚ್ಛೆಯಿದೆಯೋ ಅವರು, ಈ ಮೆಲ್ಪಟ್ಟ ವಿಳಾಸಕ್ಕೆ ಎಷ್ಟು ಜನರ ಭೋಜನ ಮಾಡಿಸಬೇಕೋ ಅಷ್ಟು ಜನರ ಮತ್ತು ಸ್ವಯಂಪಾಕಿಗಳ ಭೋಜನದ ವೆಚ್ಚಕ್ಕಾಗಿ ಹಣ ಕಳುಹಿದರೆ, ಕೋರಿಕೆಯಂತೆಯೇ ಮಾಡಿಸಲಾಗುತ್ತದೆ. ಮತ್ತು ಗಂಗಾತೀರದಲ್ಲಿ ಶ್ರೀಪ್ರಾಣದೇವರ ಸನ್ನಿಧಾನದಲ್ಲಿ, ಅಖಂಡ ನಂದಾದೀಪವನ್ನು ಬೆಳಗುವುದರಿಂದ ವಿದ್ಯಾ, ಬುದ್ಧಿ, ಪರಾಕ್ರಮ, ಶ್ರೇಯಸ್ಸು, ಧೈರ್ಯ, ನಿರ್ಭಯತೆ, ಆರೋಗ್ಯ ಮತ್ತು ಅಜಾಡ್ಯ ಮೊದಲಾದುವು ಪ್ರಾಪ್ತಿಯೆಂದು ವರ್ಣಿಸಿರುತ್ತದೆ. ಇಲ್ಲಿ ನಿರಂತರವೂ ಹಗಲಿರುಳು ಪ್ರಾಣದೇವರ ಸನ್ನಿಧಾನದಲ್ಲಿ ಒಂದು ತುಪ್ಪದಿಂದಲೂ, ಒಂದು ಎಳ್ಳೆಣ್ಣೆಯಿಂದಲೂ ಅಖಂಡ ನಂದಾದೀಪವು ಪ್ರಜ್ವಲಿಸುತ್ತಿರುತ್ತದೆ. ಈ ದೀಪವನ್ನು ಶಾಶ್ವತವಾಗಿರಿಸಲಿಕ್ಕೆಂದು ಯಾವ ಮನುಷ್ಯರು....."

ಹೋಗಲಿ ಬಿಡಿ, ಸುಮ್ಮನೆ ನಿಮ್ಮನ್ನು ಯಾಕೆ ಪಡಿಸಲಿ? ಮುಂದೆ ಇನ್ನು ಟನ್ನುಗಟ್ಟಲೆ ತುಪ್ಪ–ಎಣ್ಣೆಗಳಲ್ಲೂ, ಕೋಟಿಗಟ್ಟಲೆ ಬತ್ತಿಗಳಲ್ಲೂ ಕೊನೆಗಂಡು, ಭಕ್ತರಿಂದ ಯಥಾನುಶಕ್ತಿ ದ್ರವ್ಯಸೇವೆ. ಆದರ ಫಲಗಳನ್ನೂ ಸೂಚಿಸುತ್ತದೆ. ಹೆಚ್ಚಿಗೆ ವಿವರಕ್ಕೆ ದಾಹವಿರುವವರು, ಪ್ರಕಟನೆಯನ್ನೇ ನೋಡಬೇಕು. ಅಂತೂ ಈ ವಿಚಾರವನ್ನು ಮುಗಿಸುವುದಕ್ಕೆ ಮುಂಚೆ ತಾನು ಭೋಜನ ಸೇವೆಯಲ್ಲಿ ನೆನಪಿಡಬೇಕಾದ ಅಂಶಗಳೆಂದರೆ: ತಾವು ಭೋಜನ ಮಾಡಿಸುವ ಜಿನಾದಿ ಶ್ರೋತ್ರಿಯ ಬ್ರಾಹ್ಮಣ ಸುವಾಸಿನಿಯರೆಲ್ಲರೂ ಗಂಗಾಸ್ನಾನ ಮಾಡಿಕೊಂಡು ಕ್ಷೇತ್ರದಲ್ಲಿ ವಾಸಮಾಡಿಕೊಂಡಿರುವರೆಂಬುದು, ಮತ್ತು ತಾವು ಎಷ್ಟು ಜನರ ಭೋಜನಫಲವನ್ನು ಗಳಿಸಬೇಕೆಂದಿರುವಿರೋ ಆ ಸಂಖ್ಯೆಯನ್ನು ಸಹಸ್ರದಿಂದ ಭಾಗಿಸಿ—ಪ್ರಕಟನೆಯನ್ನು ಮತ್ತೆ ಓದಿನೋಡಿ—ಭಾಗಲಬ್ಧದ ಸಂಖ್ಯೆಗೆ ತಗಲುವ ಖರ್ಚನ್ನು ಕಳುಹಿಸುವುದು. ಇರಲಿ.

ಹೀಗೆ ಕಾಶಿಯವಾಸದ ಫಲ, ವಿಶ್ವೇಶ್ವರಾದಿಗಳ ಅಭಿಷೇಕ, ಪೂಜೆಗಳ ಫಲ, ಬ್ರಾಹ್ಮಣ ಭೋಜನಫಲ, ತುಪ್ಪ ಅಥವಾ ಎಣ್ಣೆಯ ಅಖಂಡ ನಂದಾದೀಪದ ಫಲ ಇತ್ಯಾದಿ—ಇತ್ಯಾದಿಗಳೆಲ್ಲವೂ ಇಷ್ಟು ಸುಲಭವಾದುವೆಂದ ಮೇಲೆ, ಯಾವ ಭಕ್ತನಿಗೆ ತಾನೆ ಈ ಮೂಲಕ ಪುಣ್ಯವನ್ನು ಕಟ್ಟಿಕೊಂಡು ಮುಕ್ತಿಯನ್ನು ಸಾಧಿಸಿಕೊಳ್ಳಲು ಮನಸ್ಸಾಗುವುದಿಲ್ಲ? ಆದುದರಿಂದ ಈ ಸತ್ಕಾರ್ಯಗಳ ಬಗೆಗೆ ದೇಶದ ಉದ್ದ ಅಗಲದಿಂದ ನಿತ್ಯವೂ ನೂರಾರು ಮನಿಯಾರ್ಡರುಗಳು ಬರುತ್ತಿರುತ್ತವೆ. ಇಷ್ಟೊಂದು ಸೇವಾನಿಧಿಯನ್ನು ಸಾಗಿಸಲು ಯಾರೊಬ್ಬರಿಂದಾಗಲಿ, ಯಾವುದೊಂದು ಸಂಸ್ಥೆಯಿಂದಾಗಲಿ ಸಾಧ್ಯವೆ? ಅದೆಲ್ಲ ಆಗದ ಮಾತು. ಅಲ್ಲದೆ

ಭಕ್ತರ ಪಂಥದ ಅನಾದಿ ಶ್ರೋತ್ರಿಯ ಬ್ರಾಹ್ಮಣರು ಇಲ್ಲಿ ಸಿಕ್ಕಿ ಸೇವೆ ಸಲ್ಲಿಸಿದರೆ, ಭಕ್ತರಿಗೆ ಇನ್ನೂ ಹೆಚ್ಚು ತೃಪ್ತಿಯಲ್ಲವೆ? ಈ ಕಾರಣಗಳಿಂದ ಹೀಗೆ ಮನಿಯಾರ್ಡರುಗಳನ್ನು ತರಿಸಿಕೋಡು ಸೇವೆ ಸಲ್ಲಿಸಿ, ತೀರ್ಥಪ್ರಸಾದವನ್ನು ಪೋಸ್ಟು ಮೂಲಕ ಭಕ್ತರಿಗೆ ತಲುಪಿಸಿ, ಅವರನ್ನು ಪಾವನರನ್ನಾಗಿ ಮಾಡುತ್ತಿದ್ದ ಕಾಶಿಯ ಅನಾದಿ ಶ್ರೋತ್ರಿಯ ಬ್ರಾಹ್ಮಣರು ಅನೇಕರಲ್ಲಿ, ಕಾಶಿಯಲ್ಲಿ ಹದಿನೈದು ವರ್ಷಗಳಿಂದ ವಾಸವಾಗಿದ್ದೂ ಅನಾದಿಯಾಗಿದ್ದ, ವೇದಮೂರ್ತಿ ಗುಂಡಾ ಶಾಸ್ತ್ರಿಗಳೂ ಒಬ್ಬ ಸೇವಾಧುರಂಧರರು.

ಶಾಸ್ತ್ರಿಗಳ ಪರಿಚಯದ ಭಕ್ತರು ಬಹುಮಂದಿ. ಅವರ ಪಂಗಡದವರು ಕರ್ನಾಟಕದೇ ಆದರೂ, ಶಾಸ್ತ್ರಿಗಳಿಗೇನು ಸೇವೆಯ ಕೆಲಸ ಸುಲಭವಾಗಿದ್ದಿತೆಂದು ಯಾರೂ ಭಾವಿಸಬಾರದು. ಅವರಲ್ಲಿಗೆ ನಿತ್ಯವೂ ಮನಿಯಾರ್ಡರುಗಳ ಮಳೆಯೇ ಸುರಿಯುತ್ತಿದ್ದಿತು. ನಿವೃತ್ತ ಡಿಪ್ಯೂಟಿ ಕಮಿಷನರಿಂದ, ನಿವೃತ್ತ ಗುಮಾಸ್ತೆಯ ವರೆಗೂ ತರತರದ ದರ್ಜೆಯ ಜನ, ತರತರದ ಪೂಜೆ-ಭೋಜನಾದಿ ವಿಧಿಗಳನ್ನು ಶ್ರೀಕಾಶಿಯಲ್ಲಿ ಸಲ್ಲಿಸ ಬಯಸಿ ಅಷ್ಟು, ಇಷ್ಟು ಎಷ್ಟೋ ಹಣವನ್ನು ಕಳುಹಿಸುತ್ತಿದ್ದರು. ಇದಲ್ಲದೆ ಶಾಸ್ತ್ರಿಗಳು ಭಕ್ತಾದಿಗಳಲ್ಲಿ ತುಂಬ ಪ್ರಸಿದ್ಧಿಪಡೆದುದರಿಂದ, ಈಚೀಜೆಗೆ ಬೇರೆ ಪಂಥದವರೂ, ವೈಶ್ಯರೂ, ಇತರರೂ ಕೂಡ ಇವರ ಮೂಲಕ ಸೇವೆ ಸಲ್ಲಿಸಲು ವಿನಂತಿಸುತ್ತಿದ್ದರು. ಇವರನ್ನೆಲ್ಲರನ್ನೂ ಪಾವನಗೊಳಿಸುವುದು ಶಾಸ್ತ್ರಿಗಳ ಕೆಲಸ. ಇದು ಹೊರಗಿನಿಂದ ಮಾಡಿಸುವ ಸೇವೆಯಾದರೆ, ಇಷ್ಟಕ್ಕೇ ತೃಪ್ತಿಪಡೆಯದೆ ಅನೇಕರು ಕಾಶಿಗೇ ಬಂದು ಶಾಸ್ತ್ರಿಗಳ ಸಹಾಯವನ್ನು ಕೋರುತ್ತಿದ್ದರು. ಬಂದವರಿಂದ ಕ್ಷೇತ್ರವಿಧಿಯ ಸಂಕಲ್ಪ, ಮಣಿಕರ್ಣಿಕೆ-ದಶಾಶ್ವಮೇಧ-ಕೇದಾರ-ಹರಿಶ್ಚಂದ್ರು ಮೊದಲಾದ ಘಟ್ಟಗಳಲ್ಲಿ ಗಂಗಾಸ್ನಾನ; ವಿಶ್ವೇಶ್ವರ, ಅನ್ನಪೂರ್ಣಾ, ವಿಶಾಲಾಕ್ಷಿ, ಬಿಂದುಮಾಧವ, ಕಾಳಭೈರವ, ವ್ಯಾಸದೇವರು ಇತ್ಯಾದಿ ದೇವರುಗಳಿಗೆ ಅಭಿಷೇಕ; ಪೂಜಾ, ಸಹಸ್ರನಾಮ, ಅಷ್ಟೋತ್ತರ, ಕುಂಕುಮಾರ್ಚನೆ, ತುಳಸಿ ಅರ್ಚನೆ, ವಜೆಮಾಲೆ ನಂದಾದೀಪಗಳ ಸೇವೆ; ಮತ್ತೆ ಇವಕ್ಕೂ ಮೀರಿದ 'ತಿಥಿ-ಮತಿ' ಮಾಡಿಸುವುದು; ಅವರ ಹಿಂದೆ ಮುಂದೆ ಸುತ್ತಿಕೊಂಡು ಕಾಶೀಕ್ಷೇತ್ರದಲ್ಲಿ ಇನ್ನುಳಿದ ಕವಡಿಬಾಯಿ, ಸಂಕಟವಿಮೋಚನ, ವ್ಯಾಸಕಾಶಿ ಇವೇ ಮೊದಲಾದ ಪುಣ್ಯಸ್ಥಳಗಳ ಸಂದರ್ಶನ ಮಾಡಿಸುವುದು; ಗಂಗೆಯನ್ನು ತುಂಬಿಸಿ 'ಸೀಲು' ಮಾಡಿಸಿ ಕೊಡುವುದು; ಸ್ಪಟಿಕದ ಶಿವಲಿಂಗ, ಜಪಸರಗಳನ್ನು ಪರೀಕ್ಷಿಸಿ ಕೊಡಿಸುವುದು; ರೇಷ್ಮೆಸೀರೆ-ಹಿತ್ತಾಳೆ ಪಾತ್ರೆಗಳ ವ್ಯಾಪಾರ ಮಾಡಿ ಹೊಂದಿಸಿಕೊಡುವುದು; ಯಾತ್ರಾರ್ಥಿಗಳನ್ನು ಊರಿನಿಂದ ಸಾಗಹಾಕುವುದು, ಪ್ರಯಾಗ-ಗಯಾ-ಇತರ ಕ್ಷೇತ್ರಗಳಲ್ಲಿ ಇವರಿಗೆ ತಮ್ಮ 'ಬ್ರಾಂಚು ಆಫೀಸಿನ' ಮೂಲಕ ಅಲ್ಲಿಯ ಸೇವೆಗೆ ಸಹಾಯ ಒದಗಿಸುವುದು—ಇವೂ ಶಾಸ್ತ್ರಿಗಳ ನಿತ್ಯಕೆಲಸವೆ. ಇಷ್ಟಕ್ಕೇ ಮುಗಿಯದೆ, ಕಾಶಿಯಲ್ಲಿಯೇ ವಾಸವಾಗಿದ್ದ ಮಹಾಜನರಲ್ಲಿ ಕೆಲವರ ಮನೆಗೆ ಹೋಗಿ ಶ್ರಾದ್ಧಕರ್ಮಗಳನ್ನು ನಡೆಸುವುದು, ಹೆಲವರಿಗೆ ಈ ಅನುಕೂಲಗಳನ್ನು ತಮ್ಮ ಮನೆಯಲ್ಲೇ ಕಲ್ಪಿಸುವುದು—ಇವೂ ಶಾಸ್ತ್ರಿಗಳಿಗೆ ಸೇರಿದ ಕೆಲಸವೆ. ಹೀಗಾಗಿ ಶಾಸ್ತ್ರಿಗಳಿಗೆ, ಇತರರನ್ನು ಪುನೀತರನ್ನಾಗಿ ಮಾಡುವ ಕಾರ್ಯದಲ್ಲಿ ತಮಗಾಗಿ ಉರಿಸಿಕೊಳ್ಳಲೂ ಪುರುಸೊತ್ತು ಇರಲಿಲ್ಲ. ಇಷ್ಟೊಂದು ಕೆಲಸವನ್ನು ಸಾಗಿಸುವುದಂತೂ ಈಚೀಜೆಗೆ ಅಸಾಧ್ಯವೇ ಆಗಿ ಅವರು, ಲಾಯರುಗಳು ಜೂನಿಯರುಗಳನ್ನು ತೆಗೆದುಕೊಳ್ಳುವಂತೆ ಇನ್ನೂ ಕೆಲವು ಅನಾದಿ ಶ್ರೋತ್ರಿಯ ಬ್ರಾಹ್ಮಣರನ್ನು ಒದಗಿಸಿಕೊಂಡಿದ್ದರು. ಇನ್ನು ದಿನಕ್ಕೆ ಎರಡು ಮೂರು 'ಕಾರ್ಯ'ಗಳು ಇದ್ದೇ ಇದ್ದು, ಶ್ರೀಮತಿ ಪಾತಮ್ಮನವರ ಸಹಾಯಕ್ಕೆ ಹಿಂದಿಗೆ ಹಿಂದೇ ಅಮ್ಮಗಳೂ ಅವರ ಮನೆಯಲ್ಲಿ ಸ್ಥಿರವಾಗಿ ನೆಲೆಸಿದ್ದರು. ಇಷ್ಟೊಂದು ಸಿಬ್ಬಂದಿಯೊಡನೆ ಶಾಸ್ತ್ರಿಗಳು ತಮ್ಮ ಕೆಲಸವನ್ನು ಹೇಗೋ 'ದುಸ್ತರ'ವಾಗಿ ಸಾಗಿಸುತ್ತಿದ್ದರು. ಅಂತೂ ಈ ವರೆಗೆ ಎಷ್ಟೋ ಸಾವಿರಾರು ಜನರನ್ನು ಪಾವನರನ್ನಾಗಿ ಮಾಡಿದ್ದುದೇ ಅವರಿಗೆ ಇದ್ದ ದೊಡ್ಡ ತೃಪ್ತಿ, ಸಮಾಧಾನ, ಉತ್ತೇಜನ.

ಆ ದಿನ ಮಧ್ಯಾನ್ಹ, ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಾಗಿದ್ದ ರಾಯರು ಶಾಸ್ತ್ರಿಯವರ ಮನೆಗೆ ಬಂದು, ತಮ್ಮ ತಾಯಿಯ ಶ್ರಾದ್ಧವನ್ನು ಮುಗಿಸಿದ್ದರು. ಅವರ ಊಟವೂ ಮುಗಿದಿದ್ದಿತು.

ಗಂಟೆಯು ಒಂದೂವರೆಯಾಗಿದ್ದು ಬಸಿಲು ಬಹಳ ಜೋರಾಗಿದ್ದಿತು. ಶಾಸ್ತ್ರಿಗಳ ಮನೆಯಿದ್ದ ಘಾಟಿಗೂ ವಿಶ್ವವಿದ್ಯಾಲಯದ ಆವರಣದಲ್ಲಿದ್ದ ರಾಯರ ಮನೆಗೂ ಎರಡು ಮೈಲಿ ದೂರ; ಆದುದರಿಂದ ಅತಿಥಿಯು ಆದರದಲ್ಲಿ ಬಹಳ ಆಸಕ್ತಿಯುಳ್ಳವರಾಗಿದ್ದ ಶಾಸ್ತ್ರಿಗಳು, ಹೊರಗಿನ ಕೋಣೆಯಲ್ಲಿ ಚಾಪೆ-ದಿಂಬುಗಳನ್ನು ತಂದು ಹಾಕಿ, ಹೊರಡಲು ಹವಣಿಸುತ್ತಿದ್ದ ರಾಯರನ್ನು ಕೊಂಚ ವಿಶ್ರಮಿಸಿಕೊಳ್ಳುವಂತೆ ಒತ್ತಾಯ ಪಡಿಸಿದರು. ರಾಯರು ಅರೆಮನಸ್ಸಿನಿಂದ ಒಪ್ಪಿ, ಜಾಪೆಯ ಮೇಲೆ ಕಾಲನ್ನು ನೀಡಿಕೊಂಡು, "ಶಾಸ್ತ್ರಿಗಳೆ, ತಾವೂ ಬಹಳ ದಣಿದಿರಬೇಕು. ಸ್ವಲ್ಪ ವಿಶ್ರಮಿಸಿಕೊಳ್ಳುತ್ತೀರಷ್ಟೆ?" ಎಂದು ಕೇಳಿದರು. ಶಾಸ್ತ್ರಿಗಳು "ರಾಯರೆ, ನನಗೆಲ್ಲಿ ವಿಶ್ರಾಂತಿ—ಈಗ? ದಿನವೂ ಏನಾದರೂ ಇದ್ದೇ ಇರುತ್ತವೆ. ಈ ದಿನವೂ ಅಷ್ಟು ತೀರ್ಥ-ಪ್ರಸಾದವನ್ನು ಭಕ್ತರೊಬ್ಬರಿಗೆ ಕಳುಹಿಸಿ ಕೊಡುವ ಅಗತ್ಯವಿದೆ" ಎಂದು, ತೀರ್ಥವಿದ್ದ ಒಂದು ಸೀಸೆಯನ್ನೂ, 'ಬಿಲ್ವಪತ್ರೆ, ಜಾಜಿ' ಹೂವಿನ ಪ್ರಸಾದವನ್ನೂ ತೆಗೆದು ಜಾಪೆಯ ಮೇಲಿಟ್ಟು, ಡಬ್ಬಿಯೊಂದನ್ನೂ ಹೊಸ ಬಟ್ಟೆಯ ಚೀಲ, ಸೂಜಿ, ದಾರ, ಅರಗು, ಪುಡ್ರೆ, ಮೇಣದ ಬತ್ತಿ, ದೀಪದ ಕಡ್ಡಿ ಸಟ್ಟಣ, ಕಾಗದ, ಮಸಿ, ಲೇಖನಿ, ಗೋಂದು ಮೊದಲಾದ ಸಲಕರಣೆಗಳನ್ನೂ, ಆ ಕೋಣೆಯ ನಾನಾ ಭಾಗಗಳಿಂದ ಸಂಗರಿಸಿ ತಂದು ಕುಳಿತು, ಮುಂದಿಟ್ಟುಕೊಂಡು, ತೀರ್ಥಪ್ರಸಾದವನ್ನು 'ಪಾರ್ಸಲ್' ಮಾಡುವ ಕೆಲಸಕ್ಕಾಗಿ ನೊದಲು ಮಾಡಿದರು. ರಾಯರು "ಇದೇನು ಇಷ್ಟು ಆತುರ? ಇದು ಯಾರಿಗಾಗಿ?" ಎಂದು ಕೇಳಿದರು. ಶಾಸ್ತ್ರಿಗಳು "ತ್ವರೆಯೇನಿಲ್ಲ. ಎಂದಿನ ಕೆಲಸದಂತೆ. ಇವರು ನಿವೃತ್ತ ಪೋಲೀಸು ಇನ್‌ಸ್ಪೆಕ್ಟರಂತೆ. ಹೆಸರು ಏನೋ 'ಖಂಡೇರಾವ್' ಅಂತ ಬರದಿದ್ದಾರೆ!" ಎಂದು ನೆನೆಸಿಕೊಂಡು ಹೇಳಿದರು.

"ಏನು? ಪೋಲೀಸು ಇನ್‌ಸ್ಪೆಕ್ಟರು ಖಂಡೇರಾವೆ" ರಾಯರು ಆಶ್ಚರ್ಯದಿಂದ ಕೇಳಿದರು.

"ನಿಮಗೆ ಪರಿಚಯವಿದ್ದ ಹಾಗಿದೆ!"

"ಹೌಂ ಚೆನ್ನಾಗಿಯೇ ಗೊತ್ತು. ಹಾಗೂ ದೂರದ ಸಂಬಂಧ. ಇದೇನು ಈಗ ಸೇವೆಗೆ ಕಳುಹಿಸಿದ್ದು? ಕಷ್ಟ—ಅಪಮಾನವಿಲ್ಲದೆ, ನೌಕರಿಯಿಂದ ಇಷ್ಟು ಮಟ್ಟಿಗೆ ಸುಲಭವಾಗಿ ನಿವೃತ್ತಿಯಾಯಿತು ಅಂತಲೋ?"

"ಅಲ್ಲ. ಅವರ ಮಗನಿಗೆ ಮೊನ್ನೆ ಮದುವೆಯಾದ ಪ್ರಯುಕ್ತ ರುದ್ರಾಭಿಷೇಕ...."

"ಓಹೋ, ಅವನಿಗೆ ಆಗಲೇ ಮದುವೆಯೂ ಆಗಿಹೋಯಿತೆ?"

"ಯಾಕೆ? ಏನು ವಿಶೇಷ?"

"ಮೊದಲನೆಯ ಹುಡುಗಿ ಹೋಗಿ ಇನ್ನೂ ವರ್ಷವಾಗಿಲ್ಲ, ಶಾಸ್ತ್ರಿಗಳೆ!"

"ಹಾಗೇನು? ಹುಡುಗಿಗೆ ಏನಾಗಿತ್ತು? ಏನಾದರೂ ಹೆತ್ತು.."

"ಏನಾಗಿತ್ತೆ? ಅದೊಂದು ದೊಡ್ಡ ಕತೆ! ಅವಳು ಬಹಳ ಹೆತ್ತು ಸತ್ತಿದ್ದರೆ, ಇಷ್ಟು ವ್ಯಸನಕ್ಕೆ ದಾರಿ ಇರುತ್ತಿರಲಿಲ್ಲ!"

"ಅಂದರೆ?"

"ಅಂದರೇನು? ಅತ್ತೆ-ಮಾವ ಸೇರಿಕೊಂಡು, ಪಾಪ, ಬಡ ಹುಡುಗಿಯನ್ನು ಚಿತ್ರ ಹಿಂಸೆ ಕೊಟ್ಟು ಸಾಯಿಸಿದರು!"

"ಛೇ!" ಶಾಸ್ತ್ರಿಗಳು ಅನುಮಾನಿಸಿದರು.

"ಪಾಪ! ನಿಮ್ಮ ಅನುಮಾನ ನ್ಯಾಯವಾದದ್ದೇ. ಆದರೆ ನನಗೆ ಖಂಡಿತವಾಗಿ ಗೊತ್ತು. ಹುಡುಗಿ ನಮ್ಮ ಕಡೆಯವಳು. ಅವಳ ತಾಯಿ-ತಂದೆಗಳನ್ನು ನಾನು ಚೆನ್ನಾಗಿ ಬಲ್ಲೆ. ಅವರಿಂದ ವಿವರವೆಲ್ಲ ಗೊತ್ತಾಗಿದೆ. ಈತ ಪೋಲೀಸು ಅಧಿಕಾರಿಯಲ್ಲವೆ? ಅವನಿಗೆ 'ಮೂರನೆ ಡಿಗ್ರಿ' ಯೆಲ್ಲ ಚೆನ್ನಾಗಿ ತಿಳಿದಿದೆ."

"ಅದೇನು ಕಾರಣ?"

"ಮಿತಿಮೀರಿದ ದುರಾಶೆ—ಇನ್ನೇನು? ನೌಕರಿಯಲ್ಲಿ ಹೊಡೆದ ಕೊಳ್ಳೆ ಸಾಕಾಗಲಿಲ್ಲ. ಬೀಗರು ಕೊಟ್ಟ ಬಳುವಳಿಯೂ ಸಾಲದು. ಅವನು ಇನ್ನೂ ಸಿರಿವಂತರ ಸಂಬಂಧ ಬಯಸಿದ—ಸಿರಿ ಬೆಳೆಸಿಕೊಳ್ಳುವುದಕ್ಕೆ. ಒಬ್ಬಳು ಹೆಂಡತಿ ಇರುವಾಗ, ಮಗನಿಗೆ ಮತ್ತೊಂದು ಹೆಣ್ಣನ್ನು ಯಾರು ಕೊಡುತ್ತಾರೆ? ಮತ್ತೇನು ದಾರಿ—ಅವನ ಇಷ್ಟಸಾಧನೆಗೆ? ಇದೇ."

"ಛಿ, ಛಿ! ಏನು ಅನ್ಯಾಯ!"

"ಚಿನ್ನದಂಥ ಹುಡುಗಿ, ಶಾಸ್ತ್ರಿಗಳೆ. ಅಂಥವಳಲ್ಲಿ ಇವರು, ಕೂತರೆ ತಪ್ಪು—ನಿಂತರೆ ತಪ್ಪು—ಅಂದು, ರಾಕ್ಷಸರಂತೆ ಎಳೆದಾಡಿ, ಹೊಡೆದು, ಬಡಿದು, ಮೈಮೇಲೆಲ್ಲ ಬರೆ ಎಳೆದು, ಅನ್ನ ನೀರು ಹಾಕದೆ ಗೋಳು ಹುಯ್ದುಕೊಂಡರು. ಹಾಗೂ ಅವಳು ಸಹಿಸಿಕೊಂಡು ಹೇಗೋ ಬದುಕಿಕೊಂಡಿದ್ದಳು. ಸಾಯುವಾಗ ಆರು ತಿಂಗಳ ಗರ್ಭಿಣಿ. ಖಂಡೇರಾಯನೇ ಹೊಟ್ಟೆಯ ಮೇಲೆ ಒದ್ದುದರಿಂದ ಸತ್ತಳು— ಎಂತ ವರ್ತಮಾನ."

"ಉಂಟೇ—ಎಲ್ಲಾದರೂ!"

"ನೀವು ನಂಬಿದರೆ ನಂಬಿ, ಬಿಟ್ಟರೆ ಬಿಡಿ. ನಾನೇನೋ ನಂಬಬಲ್ಲೆ. ಅವನು ಅದಕ್ಕೇನೂ ಹೇಸುವವನಲ್ಲ."

"ಆ ಹುಡುಗಿಯ ಗಂಡನಿಗೇನು ಬಂದಿತ್ತು ಕೇಡು? ಹೆಂಡತಿಯನ್ನು...."

"ಸರಿ, ಅವನು ಗಂಡನೇ? ಅವನೊಬ್ಬ ಷಂಡ! ಖಂಡೇರಾಯನಿಗೆ ಹೆದರಿ ಗಡಗಡಾ ಅಂತ ನಡುಗುತ್ತಾನೆ—ಇವತ್ತಿಗೂ, ಈ ಹೊತ್ತಿಗೂ!"

"ಮತ್ತೆ ಇಂತಹ ಕಡೆಗೂ ಹೆಣ್ಣನ್ನು ಕೊಡುವವರಿದ್ದಾರೆಯೆ?"

"ಇಲ್ಲದೆ ಏನು? ನಮ್ಮ ಸಮಾಜದಲ್ಲಿ ಹೆಣ್ಣಿಗೆ ಕಡಿಮೆಯೇನು? ಅವಳಿಗೆ ಬೆಲೆಯಿದೆಯೇನು? ಅನೇಕರಿಗೆ ಅವಳನ್ನು ಹೇಗೋ—ಅಂತೂ—ತುಗುಚಿಬಿಟ್ಟರಾಯಿತು ಅಂತ. ಇಲ್ಲವೆ

ಖಂಡೇರಾಯ ಎಲ್ಲೆಲ್ಲಿ ಯಾರು ಯಾರಿಗೆ ಮೋಸಮಾಡಿ ಸರ್ಟಿಫಿಕೇಟು ಪಡೆದು, ತನ್ನ ಬಲೆಯನ್ನು ಬೀಸಿ ಹಿಡಿದನೋ ಏನೋ ಯಾರಿಗೆ ಗೊತ್ತು!"

ಶಾಸ್ತ್ರಿಗಳು ಕೇಳುತ್ತಿರಲಿಲ್ಲ. ವಿಚಾರಪರರಾಗಿದ್ದವರು, ರಾಯರ ಮಾತು ಮುಗಿದ ಮೇಲೆ:

"ಛೆ, ರಾಮ! ರಾಮ! ಏನು ಘೋರ ಪಾಪ!" ಎಂದು ಸ್ಮರಿಸಿದರು.

"ಆ ಪಾಪವನ್ನು ತೊಳೆದುಕೊಳ್ಳುವುದಕ್ಕೋ ಏನೋ; ಈ ಸೇವೆ—ಈ ತೀರ್ಥಪ್ರಸಾದ!"

"ಓ!"

"ಅಥವಾ ಎರಡನೆಯ ಬಲಿ ಸಿಕ್ಕಿತು ಅಂತ ಕೃತಜ್ಞತೆಯನ್ನು ದೇವರಿಗೆ ತೋರಿಸುವುದಕ್ಕೆ ಇದ್ದರೂ ಇರಬಹುದು."

"ಹೂಂ!" ಶಾಸ್ತ್ರಿಗಳು ದೀರ್ಘವಾಗಿ ನಿಟ್ಟುಸಿರನ್ನೆಳೆದರು.

ಈವರೆಗೆ ಅವರ ಕೈಯ ಕೆಲಸವು ನಿಂತುಹೋಗಿದ್ದಿತು. ದಬ್ಬಿಗೆ ಮುಚ್ಚಳವನ್ನು ಮಾತ್ರ ಹಾಕಿ ಕಾಗದದ ಪೊಂದನ್ನು ಸುತ್ತಿದ್ದರು; ದಾರವನ್ನು ಬಿಗಿದಿರಲಿಲ್ಲ. ಬಟ್ಟೆಯ ಚೀಲದೊಳಕ್ಕೆ ಹಾಕಿ ಹೊಲಿಯುವುದೂ, ಅರಗಿನ ಮುದ್ರೆಗಳನ್ನು ಹಾಕುವುದೂ, ವಿಳಾಸವನ್ನು ಕಾಗದದ ಮೇಲೆ ಬರೆದು ಅಂಟಿಸುವುದೂ ಬಾಕಿ ಇದ್ದುವು. ಮೂರು ಘಂಟೆಗೆ ಅಂಚೆಯ ಹೊತ್ತು. ಆಗಲೇ ಎರಡೂವರೆಯ ಮೇಲಾಗಿತ್ತು. ಶಾಸ್ತ್ರಿಗಳ ಕೆಲಸವು ನಿಂತುಹೋದುದನ್ನು ಕಂಡು, ಗದಿಯಾರದ ಕಡೆಗೆ ಕಣ್ಣನ್ನು ಹೊರಳಿಸಿ, ರಾಯರು "ಶಾಸ್ತ್ರಿಗಳೆ, ಬೇಗಮಾಡಿ; ಅಂಚೆಯ ಹೊತ್ತಾಯಿತು!" ಎಂದರು. ಶಾಸ್ತ್ರಿಗಳು "ಆಗಲಿ ಬಿಡಿ, ಇಪತ್ತು ಕಳುಹಿಸುವುದು ಸಾಧ್ಯವಿಲ್ಲ. ನನಗೂ ಏನೋ ಕಣ್ಣು ಎಳೆಯುತ್ತಿದೆ—ಅಪೂರ್ವವಾಗಿ!" ಎಂದು ತೀರ್ಥ–ಪ್ರಸಾದದ ದಬ್ಬಿ ಮತ್ತು ಇತರ ಸಲಕರಣೆಯನ್ನು ದೂರಕ್ಕೆ ತಳ್ಳಿ, ಆದೇ ಜಾಪೆಯ ಮೇಲೆ ಜಾಚಿಕೊಂಡರು. ಇಬ್ಬರಿಗೂ ನಿದ್ದೆಯಾದ ಮೇಲೆ, ರಾಯರು ಶಾಸ್ತ್ರಿಗಳನ್ನು ಬೀಳ್ಕೊಂಡರು.

ರಾಯರನ್ನು ಹೊರಬಾಗಿಲಿನವರೆಗೂ ಕಳುಹಿಸಿ ಕೋಣೆಯೊಳಕ್ಕೆ ಬಂದಮೇಲೆ ಶಾಸ್ತ್ರಿಗಳು, ಜಾಪೆಯ ಮೇಲೆ ಕುಳಿತು ಅರ್ಧ ಮುಗಿದಿದ್ದ ಕೆಲಸವನ್ನು ಮುಂದುವರಿಸಲು, ಒತ್ತರಿಸಿದ್ದ ಸಾಮಾನುಗಳನ್ನು ಪೆತ್ತಿರಕ್ಕೆ ಎಳೆದುಕೊಂಡರು. ಮತ್ತೆ ಏತಕ್ಕೋ ಯೋಚಿಸುತ್ತ ಹಿಂದಿನಂತೆಯೆ ಒತ್ತರಿಸಿ, ದಬ್ಬಿಯನ್ನು ಮಾತ್ರ ಹಿಡಿದುಕೊಂಡು:

"ನಾನೇನೋ ವೈದಿಕನೇ ಸರಿಯೆ. ಆದರೆ ನಾನೂ ಮನುಷ್ಯನೇ. ಬರಿಯ ಪುಣ್ಯದ ವ್ಯಾಪಾರಿಯಲ್ಲ. ಈ ನನ್ನ ಕಸಬಿನಿಂದ ಈಗಾಗಲೇ ಎಷ್ಟು ಬಾರಿ ನಾನು ಕಳುಹಿದ ಪವಿತ್ರ ತೀರ್ಥ-ಪ್ರಸಾದಗಳು, ಪಾಪಗಳನ್ನು ತೊಳೆಯುವ ಬದಲು ಇಂತಹ ಘೋರ ಪಾಪಿಗಳ ಸಂಪರ್ಕದಿಂದ ತಾವೇ ಪತಿತವಾಗಿ ಹೋಗಿವೆಯೋ ಕಾಣೆ" ಎಂದುಕೊಳ್ಳುತ್ತ, ದಬ್ಬಿಯ ಕಾಗದವನ್ನು ಬಿಚ್ಚಿ, ಮುಚ್ಚಳವನ್ನು ಕಿತ್ತು, ತೀರ್ಥದ ಸೀಸೆಯ ಬಿರಿಡೆಯನ್ನು ತೆಗೆದು, ತೀರ್ಥವನ್ನು ಹತ್ತಿರವಿದ್ದ ಪಂಚಪಾತ್ರೆಗೆ ಬಗ್ಗಿಸಿಕೊಂಡರು. ಪ್ರಸಾದವನ್ನು ತೆಗೆದು ಕಾಗದದಲ್ಲಿ ಸುತ್ತಿ ಗೂಡಿನಲ್ಲಿಟ್ಟರು. ಅನಂತರ ಸೀಸೆಯನ್ನು ತೆಗೆದುಕೊಂಡು ಬಚ್ಚಲ ಮನೆಗೆ ಹೋಗಿ, ನೀರು ಹರಿಯುತ್ತಿದ್ದ ಬಚ್ಚಲ ನಾಲಿಯ ಕಡೆಗೆ ಬಗ್ಗಿದವರು "ಛೆ, ಇದು ಅವನಿಗೆ ಹೇಗಾದರೂ, ನನಗೇ ಸರಿಯಲ್ಲ" ಎನ್ನುತ್ತ, ಹಾಗೆಯೇ ಸೊಂಟವನ್ನು ನೆಟ್ಟಗೆ ಮಾಡಿ, ಬಾಯಿ ತೆಗೆದ ಹಂಡೆಯ ಕಡೆಗೆ ತಿರುಗಿ "ಹೋಗಲಿ, ಇದೇ ಸಾಕು!" ಎಂದು ಸೀಸೆಯನ್ನು ಅದರ ಒಳಕ್ಕೆ ಅದ್ದಿ, ಹಂಡೆಯ ನೀರನ್ನು ತುಂಬಿ, ಬಿರಿಡೆ ಹಾಕಿದರು. ಕೋಣೆಗೆ ಬರುತ್ತ ಅವರ ಕಾಲಿಗೆ ಏನೋ ಸಿಕ್ಕಿಕೊಂಡಿತು. ಅದು ಮುಡಿದ ಪಳಸಲು ಹೂವಿನ ದಂಡೆಯ ಚೂರಾಗಿದ್ದಿತು. ಅವರು ನಸುನಗುತ್ತ ಅದನ್ನೂ ಕೈಗೆ ತೆಗೆದುಕೊಂಡರು.

ಮಾರನೆಯ ದಿನ 'ತೀರ್ಥ-ಪ್ರಸಾದ'ಗಳು ಪಾರ್ಸಲಿನಲ್ಲಿ ಕಾಶಿಯನ್ನು ಬಿಟ್ಟುವು—ಭಕ್ತ ಖಂಡೇರಾಯರನ್ನು ತಲುಪುವುದಕ್ಕೆ: ಪಾಪವನ್ನು ತೊಳೆದು ಪಾವನರನ್ನಾಗಿ ಮಾಡುವುದಕ್ಕೆ.

ಕಳೆದ ಹನ್ನೆರಡು ವರ್ಷಗಳಿಂದ ಕನ್ನಡದ ಸೇವೆ ಮಾಡುತ್ತಿರುವ
ದಕ್ಷಿಣ ಕನ್ನಡ ಜಿಲ್ಲೆಯ ಒಂದೆ ಒಂದಾದ
ಸಾಹಿತ್ಯಿಕ—ಲೋಕಪ್ರಿಯ—ಪುರೋಗಾಮಿ ಎಂದು ಹೆಸರಾಪ

ಕನ್ನಡ ಮಾಸಪತ್ರಿಕೆ

ವಾ. ಚಂ. ಆಂ. ವೆ. ಸೇರಿ ೨-೪-೦ | ಧುರೀಣ | ಬಿಡಿಸಂಚಿಕೆಗೆ ೦-೩-೦

ಸಂಪಾದಕರು

ಶ್ರೀ. ಆರ್. ಎಸ್. ಶೆಣೈ ....
ಶ್ರೀ. ಬನ್ನಂಜೆ ರಾಮಾಚಾರ್ಯ

ಕನ್ನಡನಾಡಿನ ಸಮರ್ಥ ಬರೆಹಗಾರರ ಕತೆ, ಕವನ, ಲೇಖನಗಳಿಂದ ತುಂಬಿದ ಸಂಚಿಕೆಗಳು. ಜಾಹೀರಾತು ಕೊಡಬೇಕೆನ್ನುವವರಿಗೆ ಅತ್ಯುತ್ತಮ ಸಾಧನ.

ಮ್ಯಾನೇಜರ್:—
ಧುರೀಣ ಉಡುಪಿ (ದ. ಕ. ಜಿಲ್ಲಾ)

೧೮೫೭ ಇನ್ನಿಯ ಕ್ರಾಂತಿಯ ಕೆಲವು ★ ಸಂಗತಿಗಳು

ಶ್ರೀ. ದ್ವೈಪಾಯನಾಚಾರ್ಯ ಜಹಾಗಿರದಾರ

ಭಾರತದಲ್ಲಿ ಕ್ಷಾತ್ರವೃತ್ತಿಗೆ ಎಂದೂ ಕೊರತೆಯಿಲ್ಲ; ಆದರಂತೆಯೆ ವೈಯಕ್ತಿಕ ಸ್ವಾರ್ಥವೃತ್ತಿಗೂ ಯಾವಾಗಲೂ ಕೊರತೆಯಿಲ್ಲ. ಭಾರತದ ಇತಿಹಾಸ ಈ ಮಾತನ್ನೇ ಸಾರುತ್ತಿದೆ; ವರ್ತಮಾನದ ವಾಸ್ತವಚಿತ್ರ ಇದನ್ನೇ ಎತ್ತಿ ತೋರಿಸುತ್ತಲಿದೆ.

★

ಕ್ರಿ. ಶ. ೧೮೫೭ರಲ್ಲಾದ ಕ್ರಾಂತಿಯಲ್ಲಿ ಕ್ರಾಂತಿವೀರರು ಸೋತರು. ಇದಕ್ಕೆ ಅನೇಕ ಕಾರಣಗಳಿರಬಹುದು; ಆದರೆ ಕ್ರಾಂತಿಯು ಪ್ರಾರಂಭವಾದ್ದಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ, ಅದರ ಮುಂದಾಳುಗಳ ಬಗೆಗೆ ಆದರವೆನಿಸದೆ ಇರದು. ಶ್ರೀ. ನಾನಾಸಾಹೇಬ ಪೇಶ್ವೆ, ರಾವಸಾಹೇಬ ಪೇಶ್ವೆ, ಸೇನಾಪತಿ ತಾತ್ಯಾಟೋಪಿ, ಮಜಾರಾಣಿ ಲಕ್ಷ್ಮೀಬಾಯಿ, ರಾಣಾ ಕುವರಸಿಂಹ, ಶಹಾಜಾದಾ ಫಿರೋಜಷಾ, ಅಹಮ್ಮದಶಹಾ ಮೊದಲಾದವರು ಕ್ರಾಂತಿಯಲ್ಲಿ ಧುಮುಕಿದರು; ಇದಲ್ಲದೆ ಸಂಯುಕ್ತಪ್ರಾಂತ, ಅಯೋಧ್ಯಾ, ರೋಹಿಲಖಂಡ, ಬಿಹಾರ, ಮಾಳವಾ, ಬುಂದೇಲಖಂಡ, ಮೊದಲಾದ ನರ್ಮದಾನದಿಯ ಉತ್ತರ ಭಾಗವನ್ನೆಲ್ಲ ತಮ್ಮ ವಶವಲ್ಲಿ ತೆಗೆದುಕೊಂಡರು. ಅವರ ಯೋಜನೆಯಂತೆ ಎಲ್ಲವೂ ಕೈಗೂಡಿದ್ದರೆ, ಉತ್ತರದಲ್ಲಿ ಪಸರಿಸಿದ್ದ ಜ್ವಾಲೆಯು ದಕ್ಷಿಣದಲ್ಲಿಯೂ ಪಸರಿಸಿದ್ದರೆ, ಬ್ರಿಟಿಶರು ತಮ್ಮ ಗಂಟುಗವಡಿಗಳನ್ನು ಕಟ್ಟಿ ಖಂಡಿತವಾಗಿ ಅಂದೆಯೆ ಹೊರಬೀಳಬೇಕಾಗುತ್ತಿತ್ತು.

ರಣಯಜ್ಞದ ಮಂಗಲಮಯ ಧೂಮವು, ಕೇವಲ ಉತ್ತರದಲ್ಲಷ್ಟೇ ವ್ಯಾಪಿಸಿದ್ದಿಲ್ಲ; ಕ್ರಮೇಣ ದಕ್ಷಿಣದಲ್ಲಿಯೂ ಅದು ಹಬ್ಬತೊಡಗಿತು. ನಾನಾಸಾಹೇಬನ ಬಯಕೆಯಂತೆ ದಕ್ಷಿಣದಲ್ಲಿ ಒನ್ಮೈಲೆ ಈ ಜ್ವಾಲೆಯು ಪಸರಿಸಲಿಲ್ಲ. ಕ್ರಾಂತಿವೀರರ ಸೇವಕರು ಇಡಿ ದೇಶದಲ್ಲೆಲ್ಲ ಅದರ ಸಂದೇಶವನ್ನು ಬೀರುತ್ತಿದ್ದರು. ಸಾತಾರೆಯ ಪ್ರಸಿದ್ಧ ರಂಗೋ ಬಾಪು ಇವನ ಜೊತೆಗೆ ನಾನಾಸಾಹೇಬನ ಪತ್ರವ್ಯವಹಾರವು ಸಾಗಿತ್ತು. ಮೈಸೂರಿಂದ ವಿಂಧ್ಯಪರ್ವತದವರೆಗಿನ ವಾತಾವರಣವೆಲ್ಲ ಪ್ರಕ್ಷುಬ್ಧವಾಗಿತ್ತು. ಕ್ರಾಂತಿಯ ಪ್ರತಿಜ್ಞಾವಿಧಿಯೂ ಅಲ್ಲಲ್ಲಿ ಸಾಗಿತ್ತು. ಉತ್ತರದಲ್ಲಿ ಕ್ರಾಂತಿಯು ಪ್ರಾರಂಭವಾದೊಡನೆಯೆ ದಕ್ಷಿಣದಲ್ಲಿಯೂ ಪ್ರಾರಂಭವಾಗಬೇಕೆಂಬ ಯೋಜನೆ ಇತ್ತು; ಆದರೆ ದಕ್ಷಿಣದ ಕ್ರಾಂತಿಕಾರರು ಉತ್ತರದ ಪರಿಣಾಮವನ್ನು ನಿರೀಕ್ಷಿಸಹತ್ತಿದರು. ಆದರಿಂದ ಉತ್ತರದ ಕ್ರಾಂತಿಯೊಂದಿಗೆ ಸಹಕರಿಸುವುದಾಗಲಿಲ್ಲ. ಎಂತಲೆ ಉತ್ತರದಲ್ಲಿ ಅಪಜಯ ಉಂಟಾಯಿತು. ದಕ್ಷಿಣದಲ್ಲಿಯೂ ಸಾಕಷ್ಟು ಗಡಿಬಿಡಿಯುಂಟಾಯಿತಾದರೂ ಅದು ಸಕಾಲಕ್ಕೆ ಆಗಲಿಲ್ಲ. ಆದರಿಂದ ಕ್ರಾಂತಿಕಾರರ ಪ್ರಯತ್ನವನ್ನು ಅಲ್ಲಿಂದಲ್ಲಿಯೆ ಮಣ್ಣುಗೂಡಿಸಲು ಬ್ರಿಟಿಶರಿಗೆ ಅನುಕೂಲವಾಯಿತು.

ದಕ್ಷಿಣದಲ್ಲಿ ಕೊಲ್ಹಾಪುರದಲ್ಲಿ ೨೭ ದಳ, ಬೆಳಗಾಂವಿಯಲ್ಲಿ ೯೯ ದಳ, ಧಾರವಾಡದಲ್ಲಿ ೨೮ ದಳ—ಈ ಪ್ರಕಾರ ಮೂರು ಕಡೆಗೆ ಮೂರು ಮುಖ್ಯ ಸೈನ್ಯದ ಬಿಡಾರಗಳಿದ್ದುವು. ಆಗಸ್ಟ್ ೧೫ನೆಯ ತಾರೀಖಿನ ದಿನ ಕ್ರಾಂತಿಯನ್ನೆಬ್ಬಿಸುವುದು ನಿರ್ಣಯವಾಯಿತು. ಆದರೆ ಈ ಅವಧಿಯಲ್ಲಿ, ಕೊಲ್ಹಾಪುರದ ಜನರ ಹಾಗು ಸೈನಿಕರ ಮೇಲೆ ವರ್ಚಸ್ಸನ್ನು ಸ್ಥಾಪಿಸಲು ಇಂಗ್ಲಿಷ್ ಸೈನ್ಯವು ಬೇಗನೆ ಬರಲಿಡೆಯೆಂದು ತಂತೀಪಾತೆಯ ನೌಕರ ನೊಬ್ಬನು ಸೈನಿಕರಿಗೆ ತಿಳಿಸಿದನು. ಇದನ್ನು ಕೇಳಿದೊಡನೆಯೆ ಸೈನಿಕರು ಜುಲೈ ೩೧ನೆಯ ದಿನವೇ ಕ್ರಾಂತಿಯನ್ನೆಬ್ಬಿಸಿದರು. ಕೆಲವು ಅಧಿಕಾರಿಗಳನ್ನು ಕೊಂದು, ಬೊಕ್ಕಸವನ್ನು ವಶವಡಿಸಿಕೊಂಡರು. ಅಷ್ಟರಲ್ಲೆಯೆ ಇಂಗ್ಲಿಷರ ಸೈನ್ಯವು ಬಂದಿತು. ಕ್ರಾಂತಿವೀರರು ಛಟ್ಟಿದ ಕಡೆಗೆ ಸರಿದರು. ಸಾವಂತವಾಡಿಯ ರಾಮಜಿಯು ಅವರ ಮುಂದಾಳಾಗಿದ್ದನು. ಅವನು ಬ್ರಿಟಿಶ್ ಸೈನ್ಯಕ್ಕೆ ಬಹಳಷ್ಟು ತೊಂದರೆ ಕೊಟ್ಟನು. ಆಗ ಬ್ರಿಟಿಶರು ಗೋವೆಯ ಪೋರ್ತುಗೀಜರ ಸಹಾಯದಿಂದ, ಬಹಳ ದಿನಗಳ ಮೇಲೆ ಸೈನಿಕರನ್ನೆಲ್ಲ ನಿರ್ನಾಮಮಾಡಿದರು. ಬ್ರಿಟಿಶ್ ಸೈನ್ಯಾಧಿಕಾರಿ ಜೇಕಬ್ಬನು ಆಳಿದುಳಿದ ಸೈನಿಕರನ್ನು ನಿಶಸ್ತ್ರಗೊಳಿಸಿದನಲ್ಲದೆ, ಅವರ ಮುಂದಾಳುಗಳನ್ನು ಕೊಲ್ಲಿಸಿದನು.

ನಾನಾಸಾಹೇಬನ ಪಸ್ತಕರೂ ಸ್ವಸ್ಥರಾಗಿದ್ದಿಲ್ಲ. ಅವರು ಕೊಲ್ಹಾಪುರ ಮಹಾರಾಜನ ಮನವೊಲಿಸಲು ಪ್ರಯತ್ನಿಸಹತ್ತಿದರು. ಅವನಿಗೆ ಲಖನೌ ದರಬಾರಿನವರು ಕಳಿಸಿದ ಖಡ್ಗವನ್ನು ಒಪ್ಪಿಸಿದರು. ಕೊಲ್ಹಾಪುರದಂತೆ ಸಾಂಗಲಿ, ಜಮಖಂಡಿ ಮೊದಲಾದ ಇತರ ಸಂಸ್ಥಾನಗಳೊಂದಿಗೆ ಸಹ ನಾನಾಸಾಹೇಬನ ಪತ್ರವ್ಯವಹಾರವು ನಡೆದಿತ್ತು. ಆದರೂ ಕೊಲ್ಹಾಪುರ ಮಹಾರಾಜನು ಕ್ರಾಂತಿಕಾರರಿಗೆ ವಶನಾಗಲಿಲ್ಲ. ಆದರೆ ಅವನ ಬಂಧು ಬಿಮಜಾಜಿಯು ಮಾತ್ರ ಕ್ರಾಂತಿಯಲ್ಲಿ ಸೇರಿದನು. ಪ್ರಯತ್ನವು ಹಿಂದಿನ

ಸಲ ಆಯಶಸ್ವಿಯಾದರೂ ಹೆದರದೆ, ಅವನು ಸ್ವಯಂಸೇವಕದಲ ವನ್ನುಹಾಗು ಕೊಲ್ಹಾಪುರದ ರೆಗ್ಯುಲರ್ ಸೈನ್ಯವನ್ನು ಸಿದ್ಧಪಡಿಸಿ, ಗಾಣೆಯ ತಾರೀಖಿನ ದಿನ ಕ್ರಾಂತಿಯ ಧ್ವಜವನ್ನು ಹಾರಿಸಿ, ಆಗಸೆಯ ಬಾಗಿಲನ್ನು ವಶಪಡಿಸಿಕೊಂಡನು. ಜನತೆಯೂ, ಸಿದ್ಧವಾಯಿತು. ರಣವಾದ್ಯಗಳು ಮೊಳಗಿದುವು. ಜೇಕಬ್‌ನಿಗೆ ಈ ಸುದ್ದಿ ತಿಳಿದೊಡನೆಯೆ ಸೈನ್ಯ ಸನ್ನೇಶ ಬಂದನು. ಅವನಿಗೂ ಕ್ರಾಂತಿಕಾರರಿಗೂ ತುಮಲಯುದ್ಧವಾಯಿತು. ಕೊನೆಗೆ ಕ್ರಾಂತಿ-ಕಾರರು ಹಿಂದೆಗೆದರು. ಕ್ರಾಂತಿಕಾರರ ಮುಂದಾಳನ್ನು ಶೋಧಿಸಲು ಬೇಕಾದಷ್ಟು ಪ್ರಯತ್ನ ನಡೆಯಿತು. ಕೆಲವರನ್ನು ಸಂಶಯದಿಂದ ಸೆರೆಯಲ್ಲಿಟ್ಟರು. ಒಬ್ಬನ ಬಳಿಯಲ್ಲಿ ಗುಪ್ತಪತ್ರವೊಂದು ದೊರೆತುದರಿಂದ, ಜೇಕಬ್‌ನ ಎದುರಿನಲ್ಲಿಯೇ ಅವನು ಅವನ್ನು ಚೂರುಚೂರು ಮಾಡಿ ನುಂಗಿಬಿಟ್ಟನು. ಕೆಲವರು ತೋಫಿನ ಬಾಯಿಗೆ ತುತ್ತಾದರು. ಆಗ ಅವರಲ್ಲಿ ಒಬ್ಬನಿಗೆ ಗಾಯ ಮಾತ್ರ ವಾಯಿತು. ಕೂಡಲೆ ಅವನು ಎದ್ದು ನಿಂತನು. ಆಗ ಜೇಕಬ್‌ನು ಅವನ ಬಳಿಯಲ್ಲಿ ಹೋಗಿ— 'ನೀನು ತಪ್ಪಿ ಈ ಕ್ರಾಂತಿಯಲ್ಲಿ ಸೇರಿದಂತೆ ಕಾಣುತ್ತದೆ; ನಿನ್ನನ್ನು ಯಾರೋ ವಂಚಿಸಿದಂತೆ ತೋರುತ್ತದೆ. ನೀನು ಕ್ರಾಂತಿಕಾರರ ಮುಂದಾಳುಗಳನ್ನು ತೋರಿಸಿದರೆ, ನಿನಗೆ ಜೀವದಾನ ಕೊಡುವೆನು!' ಎಂದು ಹೇಳಿದನು. ಗಾಯಗೊಂಡವನು ಜೇಕಬ್‌ನನ್ನ ಧಿಃಕರಿಸಿ ಮತ್ತೆ ತೋಫಿನ ಎದುರಿಗೆ ನಿಂತನು. ಇನ್ನೊಬ್ಬನನ್ನು ಕೊಲ್ಲುವಾಗ, ಅವನು ಒಬ್ಬ ಕ್ರಾಂತಿಕಾರನ ಹೆಸರನ್ನು ಉಚ್ಚರಿಸಿದನು. ಅವನನ್ನು ಶೋಧಿಸಲಾಗಿ, ಅವನು ಮೊದಲೇ ಊರು ಬಿಟ್ಟು ಹೋಗಿದ್ದನು. ಈ ರೀತಿಯಾಗಿ ಕ್ರಾಂತಿಯು ಅತ್ಯಂತ ಗುಪ್ತ-ವಾಗಿ ಸಾಗಿತ್ತು. ಇಷ್ಟು ಗುಪ್ತತೆಯನ್ನು ಯಾವ ಕ್ರಾಂತಿ-ಯಲ್ಲಿಯೂ ಕಂಡಿಲ್ಲವೆಂದು ಜೇಕಬ್‌ನು "ವೆಸ್ಟರ್ನ್ ಇಂಡಿಯಾ" ಎಂಬ ಪುಸ್ತಕದಲ್ಲಿ ಹೇಳಿರುವನು.

ಕೊಲ್ಹಾಪುರದಲ್ಲಿ ಹೀಗೆ ನಡೆದಿರಲು, ಬೆಳಗಾಂವಿಯಲ್ಲಿಯೂ ಕ್ರಾಂತಿಯ ಚಿಹ್ನೆಗಳು ತೋರತೊಡಗಿದುವು. ಆದರೆ ಅಲ್ಲಿಯ ಕ್ರಾಂತಿಯ ಮುಂದಾಳು ಕಾಕಾರಸಿಂಗನೆಂಬವನೂ ಒಬ್ಬ ಅಧಿಕಾರಿಯೂ ಆಯತ್ತಸನಯಕ್ಕೆ ಸೆರೆಹಿಡಿಯಲ್ಪಟ್ಟರು. ಆ ಅಧಿಕಾರಿಯು ಬರೆದ ಪತ್ರಗಳು, ಕೊಲ್ಹಾಪುರ ಹಾಗು ಪುಣೆಯಲ್ಲಿ ಸೀಪಾಯಿಯರ ಹತ್ತಿರ ದೊರೆತುವು. ಅವರಿಬ್ಬರೂ ತೋಫಿನ ಬಾಯಿಗೆ ತುತ್ತಾದರು. ಬೆಳಗಾಂವಿ ಹಾಗು ಧಾರವಾಡದಲ್ಲಿ ಗೊಂದಲವೇಳಲಿಲ್ಲ. ನಾತಾರೆಯಲ್ಲಿ ರಂಗೋಬಾಪುವು ಮೊದಲಿನಿಂದಲೂ ಬ್ರಿಟಿಶರ ಕಣ್ಣಲ್ಲಿ ಒತ್ತುತ್ತಿದ್ದನು. ಅವನ ಮಗನು ಗಲ್ಲಿಗೇರಿಸಲ್ಪಟ್ಟನು. ನಾತಾರೆಯ ರಾಜಮನೆತನದ ಇಬ್ಬರು ಗಡಿಪಾರು ಮಾಡಲ್ಪಟ್ಟರು. ಈ ದುಃಸ್ಥಿತಿಯನ್ನು ನೋಡಿ ರಂಗೋ ಬಾಪುವು ಮಾಯವಾದನು, ಇದುವರೆಗೂ ಅತನ ವತ್ತೆ ಇಲ್ಲ.

ಈ ಕಾಲಕ್ಕೆ ಎಲ್‌ಫಿನ್ಸ್‌ಟನ್‌ನು ಗವರ್ನರನಾಗಿ ಬಂದನು. ಅವನು ತನ್ನ ಸೀಮೆಯಲ್ಲಿ ಶಾಂತತೆಯನ್ನು ಕಾಯ್ದುಕೊಂಡು, ರಜಪೂತಸ್ಥಾನಕ್ಕೆ ಸೈನ್ಯವನ್ನು ಕಳುಹಿದನು. ಮುಂಬಯಿ ನಾಗರಿಕರಲ್ಲಿ ಕ್ರಾಂತಿ ಏಳುವದಿಲ್ಲವೆಂದು ಪೋಲೀಸ ಅಧಿಕಾರಿ ಫಾರೆಸ್ಟ್‌ನಿಗೆ ವಿಶ್ವಾಸವಿತ್ತು. ಕ್ರಾಂತಿ ಎದ್ದರೆ ಸೈನಿಕರಲ್ಲಿಯೆ ಏಳುವುದೆಂದು ಎನಿಸಿತ್ತು. ಅದಕ್ಕಾಗಿ ಅವನು ಸೈನ್ಯದ ಮೇಲೆ ಸೂಕ್ಷ್ಮದೃಷ್ಟಿ ಇಟ್ಟಿದ್ದನು. ದೀಪಾವಳಿಯ ಹಬ್ಬದ ದಿನವೆ ಕ್ರಾಂತಿಯನ್ನೆಬ್ಬಿಸಬೇಕೆಂದು ಗೊತ್ತಾಗಿತ್ತು. ಅದಕ್ಕಾಗಿ ಗುಪ್ತ ಸಭೆಗಳು ಕೂಡತೊಡಗಿದುವು. ಅಲ್ಲಿ ಗುಪ್ತಚಾರರನ್ನು ಕಳಿಸಲು ಫಾರೆಸ್ಟ್‌ನು ಪ್ರಯತ್ನಿಸಿದನು; ಸಾಧ್ಯವಾಗಲಿಲ್ಲ. ಅವನು ಸ್ವತಃ ವೇಷಬದಲಿಸಿ ಅವರಲ್ಲಿ ಸೇರ್ಪಡೆಯಾದನು. ಆಗ ಮಾತ್ರ ಸುಳುವುಹತ್ತಿತು. ಗಂಗಾಪ್ರಸಾದ ಎಂಬವನ ಮನೆಯಲ್ಲಿ ಗುಪ್ತಸಭೆಯು ನಡೆಯುವುದೆಂದು ಗೊತ್ತಾಯಿತು. ಅಲ್ಲಿಗೆ ಹೋಗಿ ಪ್ರತ್ಯಕ್ಷ ನೋಡಿದನು. ಇದು ಕ್ರಾಂತಿಕಾರರಿಗೆ ಗೊತ್ತಾಗಲಿಲ್ಲ.

ಬಳಿಕ ಆ ಪೋಲೀಸ ಅಧಿಕಾರಿ, ಸೈನ್ಯಾಧಿಕಾರಿಯನ್ನು ಕರೆತಂದು ತೋರಿಸಿದನು; ಆಗ ಅವನಿಗೆ ಆಶ್ಚರ್ಯವಾಯಿತು. ಕ್ರಾಂತಿಕಾರರು ಮೊದಲು ಮುಂಬಯಿಯನ್ನು ವಶಪಡಿಸಿಕೊಂಡು, ಬಳಿಕ ಪುಣೆಗೆ ಹೋಗಿ ಅಲ್ಲಿ ಮಹಾರಾಷ್ಟ್ರ ಧ್ವಜವನ್ನು ಹಾರಿಸಬೇಕು—ನಾನಾಸಾಹೇಬನನ್ನು ಪೇಶ್ವೆಯೆಂದು ಜಾಹೀರು ಮಾಡಬೇಕು—ಎಂಬುದಾಗಿ ಅವರ ಯೋಜನೆಯಿತ್ತು. ಆದರೆ ಅದೆಲ್ಲವೂ ಅಲ್ಲಿಂದಲ್ಲಿಯೆ ಮಣ್ಣುಪಾಲಾಯಿತು. ಪ್ರಮುಖರಲ್ಲಿ ಇಬ್ಬರಿಗೆ ಗಲ್ಲಿನ ಹಾಗು ಅರು ಜನರಿಗೆ ಗಡಿವಾರಿನಶಿಕ್ಷೆಯಾಯಿತು. ಪುಣೆ-ಮುಂಬಯಿಯ ಕ್ರಾಂತಿಯು ತಣ್ಣಗಾಯಿತ್ತು.

ಇದೇ ಸುಮಾರಿಗೆ ಕ್ರಾಂತಿಯ ಜ್ವಾಲೆಯು ನಾಗಪುರ-ಜಬಲ ಪುರಗಳಲ್ಲಿ ಪಸರಿಸಿತು. ನಾಗಪುರ ಸೈನಿಕರು, ಆಗಸ್ಟ್ ೧೩ ನೆಯ ತಾರೀಖಿನ ದಿನ ಕ್ರಾಂತಿಯನ್ನು ಹೂಡಲು ನಿಶ್ಚಯಿಸಿದ್ದರು. ಅವರಿಗೆ ನಾಗರಿಕರ ಬೆಂಬಲವೂ ಇದ್ದಿತು. ೧೩ ನೆಯ ತಾರೀಖಿನ ದಿನ ನಾಗರಿಕರು ರಾತ್ರಿಯಲ್ಲಿ ಮೂರು ಆಕಾಶ ಬುಟ್ಟಿಗಳನ್ನು ಬಿಡಬೇಕು, ಸೈನಿಕರು ನುಗ್ಗಬೇಕು—ಎಂದು ಯೋಜಿಸಿದ್ದರು ಅಲ್ಲಿಯ ಸೈನಿಕರಿಗೆ ಆಂದು ಅನುಕೂಲತೆಯಿತ್ತು. ಅದಾವುದೆಂದರೆ ಅಲ್ಲಿ ಬಿಳಿಯರ ಸೈನ್ಯವು ಸ್ವಲ್ಪ ಇತ್ತು. ಆದರೆ ಗೊತ್ತಾದ ದಿನಕ್ಕಿಂತಲೂ ಮುಂಚೆ ಮದ್ರಾಸಿನಿಂದ ಸೈನ್ಯವು ಬಂದಿತು. ಆದರಿಂದ ಕ್ರಾಂತಿಯಾಗಲಿಲ್ಲ. ಜಬಲ್‌ಪುರದ ಗೊಂಡಾಜಾತಿಯ ಅರಸು ಶಂಕರಸಿಂಗನು ಹಾಗು ಅವನ ಮಗನು ಕ್ರಾಂತಿಯಲ್ಲಿ ಸಮಾವೇಶವಾಗಿದ್ದರು. ಅವರು ಸೆರೆಹಿಡಿಯಲ್ಪಟ್ಟು ತೋಫಿನಬಾಯಿಗೆ ತುತ್ತಾದರು. ಇದನ್ನು ಕೇಳಿದೊಡನೆಯೆ ಸೈನಿಕರು ರೊಚ್ಚಿಗೆದ್ದು, ತಮ್ಮ ಅಧಿಕಾರಿ ಸ್ಕೀಗಾರನನ್ನು ಕೊಂದರು.

ಬ್ರಿಟಿಶರಿಗೆ ನಿಜವಾಗಿಯೂ ಹೈದರಾಬಾದಿನ ಬಗ್ಗೆ ಹೆದರಿಕೆ ಇತ್ತು. ಆಗ ಅಫಜುಲ್ಲುದ್ದೌಲಾನು ನಿಜಾಮ್‌ಪುರದಲ್ಲಿದ್ದನು.

ಮುಖ್ಯಮಂತ್ರಿ ಸಾಲಾರಜಂಗನು. ದಕ್ಷಿಣಭಾಗವೆಲ್ಲ ಸಾಲಾರಜಂಗನನ್ನೇ ನೆಟ್ಟನೋಟದಿಂದ ನೋಡುತ್ತಿತ್ತು. ನಿಜಾಮನು ಕ್ರಾಂತಿಯನ್ನೆಬ್ಬಿಸಿದ್ದರೆ, ದಕ್ಷಿಣಭಾಗವೆಲ್ಲ ಒಟ್ಟಾಗುತ್ತಿತ್ತು. ಉತ್ತರಭಾಗದಲ್ಲಿ ನಿರಾಶೆಗೊಂಡಿದ್ದ ಬ್ರಿಟಿಶರು ಹಾರಿಹೋಗುತ್ತಿದ್ದರು. ಹೈದರಾಬಾದಿನ ಜನರು ಕ್ರಾಂತಿಯನ್ನೆಬ್ಬಿಸಲು ಸಾಲಾರಜಂಗನಿಗೆ ಬೇಕಾದಷ್ಟು ಹೇಳಿದರು; ಆದರೆ ಅದರಿಂದ ಉಪಯೋಗವಾಗಲಿಲ್ಲ.

ಕೊನೆಗೆ ಜೂನ್ ೧೫ನೆಯ ತಾರೀಖಿನ ದಿನ ಹೈದರಾಬಾದಿನಲ್ಲಿ ಕ್ರಾಂತಿ ಎದ್ದಿತು. ಆ ದಿನ ಅಲ್ಲಲ್ಲಿ ಭಿತ್ತಿಪತ್ರಗಳು ಹಚ್ಚಲ್ಪಟ್ಟುವು. ಅದರ ಮೇಲೆ ಅನೇಕ ಪ್ರತಿಷ್ಠಿತ ಮೌಲ್ವಿಗಳ ಅಂಕಿತಗಳಿದ್ದುವು. ಮಸೀದಿಗಳಲ್ಲಿ ಸಭೆಗಳು ಜರುಗಿ, ಕಾಫರ್-ಫಿರಂಗಿಗಳನ್ನು ದೇಶದಿಂದ ಹೊರದೂಡಲು ಉಪದೇಶಮಾಡಿದರು. ಇಷ್ಟಾದರೂ ಸಾಲಾರ್‌ಜಂಗನು ಕ್ರಾಂತಿಗೆ ಬೆಂಬಲ ಕೊಡಲಿಲ್ಲವಷ್ಟೇ ಅಲ್ಲ; ಜನತೆಯ ಮುಂದಾಳುಗಳನ್ನು ಸೆರೆಹಿಡಿದು ಬ್ರಿಟಿಶರಿಗೆ ಒಪ್ಪಿಸಿದನು. ಇದರ ಪರಿಣಾಮವಾಗಿ ೧೭ನೆಯ ತಾರೀಖಿನ ದಿನ ಕ್ರಾಂತಿಯು ಭುಗಿಲ್ಲೆಂದಿತು. ನಗರದಲ್ಲೆಲ್ಲ "ದೀನ್, ದೀನ್" ಎಂಬ ಘೋಷವು ಕೇಳಸತೊಡಗಿತು. ಸೆರೆಹಿಡಿದ ಮುಂದಾಳುಗಳನ್ನು ಬಿಡಿಸಿಕೊಳ್ಳಲು ಕ್ರಾಂತಿಭ್ಯಜವನ್ನು ಹಿಡಿದು, ರಸಿಡೆನ್ಸಿಯ ಕಡೆಗೆ ಜನರು ಸಾಗಿದರು. ನಿಜಾಮ ಸೈನ್ಯದ ರೊಹಿಲರು, ನಾಗರಿಕರು, ಪ್ರತ್ಯಕ್ಷ ಯುದ್ಧವನ್ನೇ ಹೂಡಿದರು. ಸಾಲಾರ್‌ಜಂಗನು 'ಬ್ರಿಟಿಶರ ಸಹಾಯದಿಂದ ಕ್ರಾಂತಿಕಾರರನ್ನು ಕೊಲ್ಲಹತ್ತಿದನು. ಮುಂದಾಳು ತೋರಬಾಜ್ ಖಾನನು ಕೊಲ್ಲಲ್ಪಟ್ಟನು. ಮೌಲ್ವಿ ಅಲ್ಲಾದೀನನು ಕೈಸೆರೆಯಾಪನು. ಅವನನ್ನು ಅಂದಮಾನಕ್ಕೆ ಅಟ್ಟಿದರು. ಈ ರೀತಿಯಾಗಿ ಹೈದರಾಬಾದಿನ ಕ್ರಾಂತಿಯು ಕೊನೆಗೊಂಡಿತು. ಬ್ರಿಟಿಶ್ ಇತಿಹಾಸಕಾರರು ಈ ಕ್ರಾಂತಿಯ ಬಗ್ಗೆ. "ಹಿಂದುಸ್ತಾನದಲ್ಲಿಯ ಬ್ರಿಟಿಶ್ ರಾಜ್ಯದ ಭವಿತವ್ಯವು, ಮೂರು ತಿಂಗಳ ವರೆಗೆ ಅಫಜುಲ್ಲುದ್ದೌಲಾ ಹಾಗು ಸಾಲಾರಜಂಗರ ಕೈಯಲ್ಲಿತ್ತು!" ಎಂದು ಸ್ಪಷ್ಟವಾಗಿ ಹೇಳಿದ್ದಾರೆ.

ಹೈದರಾಬಾದು ಕ್ರಾಂತಿಯಲ್ಲಿ ಭಾಗವಹಿಸದಿದ್ದರೂ ಆ ರಾಜ್ಯದ ಗಡಿಯಲ್ಲಿದ್ದಸುರಪುರದ ಹಿಂದೂ ಅರಸು, ಕ್ರಾಂತಿಯಲ್ಲಿ ಭಾಗವಹಿಸಲು ನಿರ್ಧರಿಸಿ, ಅದಕ್ಕಾಗಿ ಆರಬ, ರೋಹಿಲೆ, ಪಠಾಣರ ಸೈನ್ಯವನ್ನು ಕೂಡಿಸಿದನು. ನಾನಾಸಾಹೇಬನ ಹೂತನು ಅವನಲ್ಲಿಗೆ ಹೋಗುವುದೊಂದೇ ತಡ; ಪೇಶ್ವೆಯವರ ಧ್ವಜದಡಿಯಲ್ಲಿ ಯುದ್ಧವನ್ನು ಸಾರಿದನು. ರಾಯಚೂರಲ್ಲಿ ಮೌಲ್ವಿಗಳೂ ಬ್ರಾಹ್ಮಣರೂ ಅವನಿಗೆ ಉತ್ತೇಜನವನ್ನಿತ್ತರು. ಅವನು ದಾಳಿಯನ್ನೆಬ್ಬಿಸಿದ ಕೂಡಲೆ ನಿಜಾಮನ ಹಾಗೂ ಬ್ರಿಟಿಶರ ಸೈನ್ಯಗಳು ಅವನ ಮೇಲೆ ಸಾಗಿದುವು. ಈ ಎರಡೂ ಸೈನ್ಯಕ್ಕೆ ಎದುರಾಗುವುದು ಅಶಕ್ಯವೆಂದು ಬಗೆದು, ೧೮೫೭ನೆಯ ಫೆಬ್ರುವರಿಯಲ್ಲಿ ಆರಸನು ಹೈದರಾಬಾದಿಗೆ ಓಡಿದನು. ಅಲ್ಲಿ ಅವನು ಬೀದಿಯಲ್ಲಿ ಹೋಗುವಾಗ, ಸಾಲಾರಜಂಗನ ಜನರು ಸೆರೆಹಿಡಿದು ಬ್ರಿಟಿಶರಿಗೆ ಒಪ್ಪಿಸಿದರು. ಈ ಅರಸನಿಗೂ ಮೇಜರ್ ಟೀಲರನಿಗೂ ಸ್ನೇಹವಿತ್ತು. ಅವನು ಇವನನ್ನು ಸಾಕಿ ಸಲುಹಿದ್ದನು. ಅದರಿಂದ ಅರಸನು ಅವನಿಗೆ "ಅಪ್ಪಾ" ಎಂದು ಕರೆಯುತ್ತಿದ್ದನು. ಇದನ್ನು ನೋಡಿದ ಬ್ರಿಟಿಶ್ ಅಧಿಕಾರಿಗಳು, ಟೀಲರನನ್ನು ಅರಸನ ಕಡೆಗೆ ಕ್ರಾಂತಿಯ ರಹಸ್ಯವನ್ನು ಕಂಡು ಹಿಡಿಯಲು ಕಳಸಿದರು. ಅರಸನು ಮರಣದ ದಾರಿಯನ್ನೇ ಕಾಯುತ್ತಿದ್ದನು. ಟೀಲರನನ್ನು ನೋಡಿದ ಕೂಡಲೆ ಅವನಿಗೆ ಸಮಾಧಾನವೆನಿಸಿತ್ತು. ಟೀಲರನು ಕ್ರಾಂತಿಕಾರರ ಸಂಗತಿಯನ್ನು ಕೇಳಹತ್ತಿದನು. ಆಗ ಅರಸನಲ್ಲಿ ಸ್ವಾಭಿಮಾನವು ಜಾಗೃತವಾಗಿ—"ಅಪ್ಪಾ! ಈ ಸಂಗತಿಯನ್ನು ನಿನಗೆ ಹೇಳಲಾರೆ; ಮತ್ತು ನೀನು ಹೇಳಿದಂತೆ ನನಗೆ ರೆಸಿಡೆಂಟಿನ ಭೆಟ್ಟಿಯೇ ಬೇಕಿಲ್ಲ. ನಾನು ಜೀವದಾನವನ್ನಪೇಕ್ಷಿಸುವುದಿಲ್ಲ. ನನಗೆ ಜೀವದ ಇಚ್ಛೆಯೇ ಇಲ್ಲ. ನನ್ನ ದೇಶಬಾಂಧವರ ಹೆಸರನ್ನು ಹೇಳಲಾರೆ" ಎಂದು ಸ್ಪಷ್ಟವಾಗಿ ಹೇಳಿದನು. ಮೆಜೋಜ್ ಟೀಲರನು ಪುನಃ ಪುನಃ ಪ್ರಯತ್ನಿಸಿದನು; ಕ್ಷಮೆಯು ಆಶೆ ತೋರಿಸಿದನು. ಕ್ರಾಂತಿಕಾರರ ಸುದ್ದಿ-ಸಂಗತಿಗಳನ್ನು ವಿಚಾರಿಸಿದನು; ಆದರೂ ಅರಸನು ಯಾರ ಹೆಸರನ್ನೂ ಹೇಳಲು ಒಪ್ಪಲಿಲ್ಲ. ಅವನು— "ನಾನಂತೂ ಮೃತ್ಯುವಿನ ಬಾಗಿಲಲ್ಲಿಯೇ ಇರುವೆನು; ಇಂಥಹ ಸಮಯದಲ್ಲಿ ನನ್ನ ದೇಶಬಾಂಧವರ ಹೆಸರನ್ನು ಹೇಗೆ ಹೇಳಲಿ? ಅವರ ವಿಶ್ವಾಸಘಾತವನ್ನು ಹೇಗೆ ಮಾಡಲಿ? ನನಗೆ ಈಗ ಏತರ ಭಯವೂ ಇಲ್ಲ. ಆದರೆ ನನ್ನ ಜೊಂದು ಇಚ್ಛೆ ಮಾತ್ರ ಇದೆ. ನನ್ನನ್ನು ತುದುಗನಂತೆ ಗಲ್ಲಿಗೇರಿಸದೆ, ತೋಫಿನಬಾಯಿಗೆ ಆಹುತಿಕೊಡಿಸು! ನೋಡು ಮೃತ್ಯುವನ್ನು ಹೇಗೆ ಎದುರಿಸುವೆನೆಂಬುದನ್ನು?" ಎಂದು ಹೇಳಿದನು.

ಮುಂದೆ ಟೀಲರನ ಮಧ್ಯಸ್ಥಿಕೆಯಿಂದ,ಅರಸನ ಗಲ್ಲಿನ ಶಿಕ್ಷೆಯು ಕಡಿಮೆಯಾಗಿ ಕರಿನೀರಿನ ಶಿಕ್ಷೆಯಾಯಿತು. ಅಂದಮಾನಕ್ಕೆ ಒಯ್ಯುವ ಸಿದ್ಧತೆಯು ನಡೆಯಿತು. ಆದರೆ ಅಂದಮಾನಕ್ಕಿಂತಲೂ ಮರಣವೇ ಲೇಸೆಂದು ಆ ವೀರನು, ಸಮೀಪದ ಕಾವಲುಗಾರನ ಪಿಸ್ತೂಲನ್ನು ತೆಗೆದುಕೊಂಡು ಆತ್ಮಹತ್ಯೆ ಮಾಡಿಕೊಂಡನು.

"ನನ್ನ ರಾಜ್ಯದಲ್ಲಿ ಸಾಮಾನ್ಯ ಒಬ್ಬ ಮನುಷ್ಯನು ಕೂಡ ಸೆರೆಯಲ್ಲಿಲ್ಲ ಎಂದ ಮೇಲೆ, ಅವರ ಅರಸು ನಾನು ಸೆರೆಯಲ್ಲಿ ಇರುವುದು ಹೇಗೆ?" ಎಂದು ಅವನ ಅಭಿಪ್ರಾಯವಿತ್ತು.

ಸುರಪುರದ ಅರಸನ ಕೊನೆಯು ಹೀಗಾಯಿತು. ನರಗುಂದ ಬಾಬಾಸಾಹೇಬನಿಗೂ ಅವನಿಗೂ ಅತ್ಯಂತ ಸ್ನೇಹ. ಸುರಪುರದ ಅರಸನು ಬಂಡನ್ನೆಬ್ಬಿಸಿದ ಕೂಡಲೆ ಬಾಬಾಸಾಹೇಬನು ಒಂಡನ್ನೆಬ್ಬಿಸಬೇಕಾಗಿತ್ತು, ಅವನು ಹಾಗೆ ಮಾಡದೆ ಹಿಂದುಗಡೆ ಬಂಡಾಯಹೂಡಿದನು. ಅದರಿಂದ ಇಬ್ಬರಲ್ಲಿಯೂ ಏಕಸೂತ್ರತೆಯುಂಟಾಗಲಿಲ್ಲ. ಇದರಿಂದ ಇಬ್ಬರೂ ನಾಶವಾದರು. ಬಾಬಾ-

ಸಾಹೇಬನು ಒಳ್ಳೆಸುಸಂಸ್ಕೃತ; ವಿದ್ಯಾಭಿಮಾನಿ. ಅವನ ಸಂಗ್ರಹದಲ್ಲಿ ಬೆಲೆಯುಳ್ಳ ಗ್ರಂಥಗಳಿದ್ದುವು. ಬಾಬಾಸಾಹೇಬನ ಹೆಂಡತಿಯಾದರೂ ತುಂಬ ಅಭಿಮಾನಿಯಾಗಿದ್ದಳು.

೧೮೫೭ನೆಯ ಇಸ್ವಿ ಮೇ ೨೩ನೇಯ ತಾರೀಖಿನದಿನ, ನರಗುಂದ ಕರನು ಬಂಡಾಯ ಹೂಡಿದನು. ಬ್ರಿಟಿಶ್ ಅಧಿಕಾರಿ ಮ್ಯಾನ್ಸನ್ ಸಾಹೇಬನು ಸಾಗಿಬರುವ ಸುದ್ದಿಯನ್ನು ಕೇಳಿ, ಸಮೀಪದಲ್ಲಿರುವ ಅರಣ್ಯದಲ್ಲಿ ಹೊಕ್ಕು ಅವನ ಕೊಲೆಮಾಡಿದನು. ಅವನ ರುಂಡವನ್ನು ನರಗುಂದದ ಅಗಸೆಯ ಬಾಗಿಲಿಗೆ ಕಟ್ಟಿಸಿದನು. ಬ್ರಿಟಿಶ್ ಸೈನ್ಯವು ನರಗುಂದದ ಮೇಲೆ ಸಾಗಿಬಂದಿತು. ನರಗುಂದಕರನು ಸೋತು ಬ್ರಿಟಿಶರ ಕೈಯಲ್ಲಿ ಸಿಕ್ಕನು. ಅವನು ಜೂನ್ ೧೫ನೆಯ ತಾರೀಖಿನ ದಿನ ಗಲ್ಲಿಗೇರಿಸಲ್ಪಟ್ಟನು. (ಗಲ್ಲಿಗೇರಿಸಲ್ಪಟ್ಟವನು ಬಾಬಾಸಾಹೇಬನಲ್ಲ; ಅವನ ವಿಶ್ವಾಸಿಕ ನೌಕರನು. ಬಾಬಾಸಾಹೇಬನು ವೇಷ ಬದಲಿಸಿ ಉತ್ತರ ಹಿಂದುಸ್ತಾನಕ್ಕೆ ಹೋದನು. ಅಲ್ಲಿ ಅವನ ಮದುವೆಯಾಯಿತು. ಗಂಡುಮಗುವು ಹುಟ್ಟಿತು. ಇಂದಿಗೂ ಬಾಬಾಸಾಹೇಬನ ಮೊಮ್ಮಗನು ಇರುವನು—ಎಂದು ಹೇಳುವರು.) ಬಾಬಾಸಾಹೇಬನು ಗಲ್ಲಿಗೇರಿಸಲ್ಪಟ್ಟ ಸಂತರ. ಅವನ ತಾಯಿ ಮತ್ತು ಹೆಂಡತಿಯು ಮಲಪ್ರಭಾ ನದಿಯಲ್ಲಿ ಹಾರಿಕೊಂಡು ಆತ್ಮಹತ್ಯೆ ಮಾಡಿಕೊಂಡರು. ನರಗುಂದವು ಹಾಳಾಯಿತು.

ದಕ್ಷಿಣ ಹಿಂದುಸ್ತಾನದ ಸಂಕ್ಷಿಪ್ತ ಸಂಗತಿಯನ್ನು ಕೇಳಿದ ಬಳಿಕ, ಉತ್ತರ ಹಿಂದುಸ್ತಾನದಲ್ಲಿಯ ಗಡಿಬಿಡಿಯನ್ನು ಕೇಳಲು ಉತ್ಸುಕರಾಗುವುದು ಸಹಜ.

ಝಾನ್ಸಿರಾಣಿಯು ವೀರಸ್ವರ್ಗವನ್ನು ಪೊಂದಿದಳು. ತಾತ್ಯಾಟೋಪಿಯು ಸಿಪ್ರಿಯಲ್ಲಿ ಗಲ್ಲಿಗೇರಿಸಲ್ಪಟ್ಟನು. ಪೇಶ್ವೆ ರಾವಸಾಹೇಬನು ಸೆರೆಹಿಡಿಯಲ್ಪಟ್ಟು, ಗಲಟಿರಲ್ಲಿ ಕಾನಪುರದಲ್ಲಿ ಗಲ್ಲಿಗೇರಿಸಲ್ಪಟ್ಟನು. ಉಳಿದ ನಾನಾಸಾಹೇಬ ಮತ್ತು ಅವನ ಮೊಮ್ಮಗ ಬಾಬಾಸಾಹೇಬ, ಮೌಲ್ವಿ ಅಹಮ್ಮದಶಹಾ ಲಖನೌದ ಬೇಗಮ್ ಇವರ ಸ್ಥಿತಿಗತಿ ಏನಾಯಿತೆಂಬುದನ್ನು ಸ್ವಲ್ಪದರಲ್ಲಿ ಹೇಳುವೆ.

ಅಯೋಧ್ಯಾ ಪ್ರಾಂತದ ಬಂಡಾಯದ ಶ್ರೇಯಸ್ಸೆಲ್ಲ ಮೌಲ್ವಿ ಅಹಮ್ಮದಶಹಸಿಗೆ ಸಲ್ಲುವುದೆ. ಆಲ್ಲಿ ಅವನ ವರ್ಚಸ್ಸು ವಿಶೇಷವಾಗಿತ್ತು. ಕೇವಲ ಅವನ ಪ್ರಯತ್ನದಿಂದಲೆ ಅಯೋಧ್ಯಾ ಪ್ರಾಂತವು ಎರಡು ವರುಷಗಳವರೆಗೆ ಬಂಡಾಯವನ್ನು ನಡಿಸಿತು. ಕೊನೆಗೆ ಪೌವೇನದ ಮಹಾರಾಜ ರಘುನಾಥಸಿಂಗನು ವಿಶ್ವಾಸಘಾತಮಾಡಿ, ಅಹಮ್ಮದಶಹನನ್ನು ಜೂನ್ ೫ನೆಯ ತಾರೀಖಿನ ದಿನ ಕೊಲೆಮಾಡಿಸಿದನು. ಈ ಕೊಲೆಯಿಂದ ಅಯೋಧ್ಯಾ ಪ್ರಾಂತದ ಜನರು ಹೆದರದೆ ಮತ್ತಷ್ಟು ರೊಚ್ಚಿಗೆದ್ದರು. ಮೌಲ್ವಿಯ ಕೊಲೆಯ ಸೇಡನ್ನು ತೀರಿಸಿಕೊಳ್ಳುವದಕ್ಕಾಗಿ ಖಾನ್ ಬಹಾದ್ದೂರ ಖಾನ್, ನಿಜಾಮ ಅಲ್ಲೀಖಾನ್, ವಿಲಾಯತ್ ಖಾನ್, ನಾನಾಸಾಹೇಬ ಮೊದಲಾದವರು ರೋವಲಖಂಡ, ಅಯೋಧ್ಯಾ ಪ್ರಾಂತಗಳಲ್ಲಿ ಒಮ್ಮೆಲೆ ಬಂಡಾಯ ಹೂಡಿದರು. ಇದನ್ನು ನೋಡಿ ಪೌವೇನದ ಹೇಡಿ ಅರಸನು, ಹೆದರಿ ನಡುಗ ಹತ್ತಿದನು. ಅವನ ಸಹಾಯಕ್ಕಾಗಿ ಬ್ರಿಟಿಶ್ ಸೈನ್ಯವು ಧಾವಿಸಿತು. ಘೋಗ್ರಾ ನದಿಯ ದಡದಲ್ಲಿ ಅಯೋಧ್ಯೆಯ ಬೇಗಮ್ ಮತ್ತು ಸರದಾರ ಮಯೂಖಾನರು ಕಳವೂರಿದ್ದರು. ಇದಲ್ಲದೆ ರಾಜಾ ರಾಮಭಕ್ಷ, ರಘುನಾಥಸಿಂಹ, ಚಂದ್ರಸಿಂಹ ಮೊದಲಾದ ಜಮೀನ್‌ದಾರರು. ತಮ್ಮ ತಮ್ಮ ಸೈನ್ಯದೊಂದಿಗೆ ಬಂದು ಸೇರಿದರು. ಶಹಾಜಾದಾ ಫಿರೋಜಶಹನೂ ಬಂದು ಕೂಡಿದನು. ಇವರೆಲ್ಲರೂ ಒಮ್ಮನಸ್ಸಿನಿಂದ ಯುದ್ಧ ಸಾಗಿಸಿದರು. ಆದರೆ ಶೀಖರು, ಗುರ್ಖಾ ಜನರು, ಆಯತ್ತಸಮಯಕ್ಕೆ ಬ್ರಿಟಿಶರಲ್ಲಿ ಸೇರಿದ್ದುದರಿಂದ, ಯುದ್ಧದಲ್ಲಿ ಕ್ರಾಂತಿಕಾರರಿಗೆ ಯಶಸ್ಸು ದೊರೆಯಲಿಲ್ಲ.

ವಿಜಯದ ಆಶೆಯು ತೀರಿದ ಮೇಲೆ, ಶರಣಾಗತಿಗಿಂತಲೂ ಮರಣವೇ ಲೇಸೆಂದು ಯುದ್ಧಮಾಡುತ್ತ ಮಾಡುತ್ತ ಅವರೆಲ್ಲ ಮಡಿದರು. ಕ್ರಾಂತಿಕಾರರು ಮತ್ತೆ ಲಖನೌದ ಮೇಲೆ ದಾಳಿ ಮಾಡಿದರು. ನವಾಬಗಂಜದ ಹತ್ತಿರ ಘನಘೋರ ಯುದ್ಧವಾಯಿತು. ಈ ಯುದ್ಧದ ಬಗ್ಗೆ ಬ್ರಿಟಿಶ್ ಸೇನಾಪತಿ ಗ್ರ್ಯಾಂಟನು ಈ ರೀತಿ ಹೇಳುತ್ತಾನೆ:

"ಬಂಡಾಯಗಾರರಿಗೆ ಜಯದ ಆಶೆ ಇದ್ದಿಲ್ಲ; ಆದರೂ ಅವರು ಒಂದೇಸವನೆ ಏರಿ ಬರುತ್ತಿದ್ದರು. ಜಮೀನ್‌ದಾರರ ಶೂರ ಸೈನಿಕರು, ತಮ್ಮ ತೋಪ್ಪುಗಳೊಂದಿಗೆ ಹಿಂಬದಿಯಿಂದ ಏರಿ ಬಂದರು. ನಾನು ಹಿಂದುಸ್ತಾನದಲ್ಲಿ ಅನೇಕ ಯುದ್ಧಗಳನ್ನು ನೋಡಿದೆನು; ಆದರೆ ಇಂತಹ ಶೂರ ಸೈನಿಕರ ಪ್ರತೀಕಾರವನ್ನು ಎಲ್ಲಿಯೂ ನೋಡಲಿಲ್ಲ. ಜಮೀನ್‌ದಾರರ ಸೈನಿಕರು, ಮೊದಲು ಹಡ್‌ಸನ್ನನ ಕುದುರೆದಳದ ಮೇಲೆ ಹಲ್ಲೆಮಾಡಿದರು. ಇದನ್ನು ನೋಡಿ ಅವನು ಜಮೀನ್‌ದಾರರ ಸೈನ್ಯದ ಮೇಲೆ ಬೆಂಕೆಯನ್ನು ಮಳೆಗರೆದನು. ಆದರೂ ಅವರು ಒಂದು ಇಂಚು ಕೂಡ ಹಿಂದೆ ಸರಿಯಲಿಲ್ಲ. ಅವರ ಸೇನಾಪತಿಯು ಹೆದರದೆ, ತನ್ನ ಧ್ವಜದೊಂದಿಗೆ ತೋಪಿನ ಹತ್ತಿರ ನಿಂತಿದ್ದನು. ನಮಗೆ ಹಿಂದಿನಿಂದ ಮತ್ತೆ ಸಹಾಯವು ಒದಗಿತು. ಕೊನೆಗೆ ಬಂದುಗಾರರು ಹಿಂದೆಗೆದರು. ನಾವು ಅವರ ತೋಪನ್ನು ಕೈವಶಮಾಡಿಕೊಳ್ಳಬೇಕಾದರೆ, ನೂರಿನ್ನೂರು ಜನರನ್ನು ಕೊಲ್ಲಬೇಕಾಯಿತು...."

ಈ ರೀತಿಯಾಗಿ ಘನಘೋರ ಕಾಳಗವು ಅಯೋಧ್ಯಾ ಪ್ರಾಂತದಲ್ಲಿ ನಡೆಯಿತು. ಕೊನೆಗೆ ೧೮೫೯ನೆಯ ಇಸ್ವಿಯ ಆಕ್ಟೋಬರಿನಲ್ಲಿ ಬ್ರಿಟಿಶ್ ಸೇನಾಪತಿಯು ನಾಲ್ಕೂ ಬದಿಯಿಂದಲೂ ಏರಿಬಂದನು. ಆದರಿಂದ ಕ್ರಾಂತಿವೀರರು ಉತ್ತರದ ಕಡೆಗೆ ನೇಪಾಳಕ್ಕೆ ಓಡಿದರು. ಅದೇ ವರುಷವೆ ರಾಣಿಯವರ ಜಾಹೀರ್‌ನಾಮೆ ಹೊರಟಿತು.

ಸುಮಾರು ಆರುನೂರು ಸಾವಿರ ಕ್ರಾಂತಿಕಾರರು ನೇಪಾಳದಲ್ಲಿ ಹೊಕ್ಕರು. ಅವರ ಮುಂದಾಳು ನಾನಾಸಾಹೇಬ, ಬಾಳಾ-

ನಾಹೇಬ, ಆಯೋಧ್ಯೆಯ ಬೇಗಮ್, ಅವಳ ಮಗ ನೊದಲಾದವರಿದ್ದರು. ಇವರು ನೇಪಾಳದಲ್ಲಿ ನೆರಿದನಂತರ,ನೇಪಾಳದ ಮಹಾರಾಜನು ಅವರಿಗೆ ಒಂದು ಕಾಗದ ಬರೆದನು. ಅದಕ್ಕೆ ಉತ್ತರವೆಂದು ನಾನಾನಾಹೇಬನು ಈ ರೀತಿಯಾಗಿ ಬರೆದನು:

"ನಿನ್ನ ಪತ್ರ ಮುಟ್ಟಿತು. ನಾನು ನೇಪಾಳದ ಕೀರ್ತಿಯನ್ನು ಬಹುದಿನಗಳಿಂದ ಕೇಳಿದ್ದೇನೆ. ನಾನು ಎಷ್ಟೋ ಅರಸರ ಇತಿಹಾಸವನ್ನು ಓದಿದ್ದೇನೆ. ಆದರೆ ನಿನಗೆ ಸಮರಾದವರು ಯಾರೂ ಇಲ್ಲ. ಯಾಕೆಂದರೆ ನೀವು, ಇಂಗ್ಲಿಷರಿಗೆ ಸಹಾಯಮಾಡಲು ತೀರ ಮುಂದಾಗಿರುವಿರಿ. ಇಂಗ್ಲಿಷರಿಗೂ ನಿಮಗೂ ವೈರತ್ವ ವಿದ್ದರೂ ಸಹ ಅವರಿಗೆ ಸಹಾಯ ನೀಡಿದಿರಿ! ಎಷ್ಟೊಂದು ಉದಾರತೆಯು !! ನಾನಂತೂ ಪೇಶ್ವೆಯವರ ವಂಶಸ್ಥನು. ನಮ್ಮ ನಿಮ್ಮಲ್ಲಿ ಯಾವ ತೆರದಿಂದಲೂ ಜಗಳ ಬಂದಿಲ್ಲ. ಎಂದಮೇಲೆ, ನಿನ್ನ ಸಹಾಯವನ್ನಪೇಕ್ಷಿಸುವುದರಲ್ಲಿ ತಪ್ಪೇನಿದೆ? ವೈರಿಗಳನ್ನು ಮನೆಯಲ್ಲಿ ಸೇರಿಸಿಕೊಂಡಿರಿ; ಮಿತ್ರರನ್ನು ಹೊರದೂಡುವಿರಾ? ಬ್ರಿಟಿಶರು ಹಿಂದುಗಳೊಡನೆ ಹೇಗೆ ನಡೆಯುತ್ತ ಬಂದಿರುವರು, ಒಪ್ಪಂದಗಳನ್ನು ಹೇಗೆ ಮುರಿಯುತ್ತ ಬಂದರು, ರಾಜ್ಯಗಳನ್ನು ಹೇಗೆ ಮುರಿದರು— ಇದನ್ನೆಲ್ಲ ಹೇಳುವ ಆವಶ್ಯಕತೆಯಿಲ್ಲ. ಹಿಂದೂ ರಾಜ್ಯಗಳು ನಷ್ಟವಾದುದರಿಂದ ಧರ್ಮಕ್ಕೆ ಹಾನಿ ತಟ್ಟಿ ಹತ್ತಿದೆ. ಆದಕ್ಕಾಗಿಯೇ ಯುದ್ಧವಾಯಿತು. ನನ್ನ ಬಂಧು ಬಾಳಾಸಾಹೇಬನನ್ನು ಕಳಿಸಿದ್ದೇನೆ; ಅವನು ಎಲ್ಲ ಸಂಗತಿಯನ್ನೂ ಹೇಳುವನು."

ಈ ಪತ್ರವನ್ನು ಕಳುಹಿದ ನಂತರ, ಎರಡೂ ಪಕ್ಷದಲ್ಲಿ ತೀಕ್ಷ್ಣ ಚರ್ಚೆ ನಡೆಯಿತು. ಜಂಗ್‌ಬಹಾದ್ದೂರನು ಬಲಭದ್ರಸಿಂಗನನ್ನು ಪೇಶ್ವೆಯ ಕಡೆಗೆ ಕಳಿಸಿದನು. ಅವನಿಗೆ ಎಲ್ಲರೂ— "ನಾವೆಲ್ಲರೂ ಧರ್ಮರಕ್ಷಣೆಗಾಗಿ ಯುದ್ಧ ಮಾಡಿದೆವು. ಮಹಾರಾಜ ಜಂಗ್‌ಬಹಾದ್ದೂರನೂ ಹಿಂದುವು; ಅದರಿಂದ ಅವನು ನಮಗೆ ಸಹಾಯಮಾಡಲೇ ಬೇಕು. ಅವನು ತನ್ನ ಅಧಿಕಾರಿಗಳನ್ನು ನಮ್ಮ ಕಡೆಗೆ ಕಳಿಸಿದರೆ, ಅವರ ಕೈಕೆಳಗೆಯೆ ನಾವು ಕಲಕತ್ತೆಯ ವರೆಗೆ ದಾಳಿಮಾಡುವೆವು. ನಾವು ನಮ್ಮ ವೆಚ್ಚವನ್ನೆಲ್ಲ ನೋಡಿಕೊಳ್ಳುವೆವು. ನಿಮ್ಮ ಅಪ್ಪಣೆಯನ್ನು ಪಾಲಿಸುವೆವು. ಗೆದ್ದ ಪ್ರದೇಶಗಳ ಒಡೆತನವನ್ನು ನಿಮಗೇ ಬಿಟ್ಟುಕೊಡುವೆವು. ಇದು ಸಾಧ್ಯವಿರದಿದ್ದರೆ ಕನಿಷ್ಟ ಆಶ್ರಯವನ್ನಾದರೂ ಕೊಡಬೇಕು" ಎಂದು ಹೇಳಿದರು. ಬಲಭದ್ರಸಿಂಗನು—"ಬ್ರಿಟಿಶರುನ್ನೆಲ್ಲರನ್ನೂ ಕ್ಷಮಿಸಿರುವರು; ಆದುದರಿಂದ ನೀವು ಶಸ್ತ್ರಾಸ್ತ್ರಗಳನ್ನು ತ್ಯಜಿಸಿ ಅವರ ಆಶ್ರಯವನ್ನು ಹೊಂದಿರಿ" ಎಂದು ಹೇಳಿದನು.

ಕ್ರಾಂತಿಕಾರರು— "ನಾವು ಜಾಹೀರ್‌ನಾಮೆಯನ್ನು ಓದಿರುವೆವು. ಜಂಗ್‌ಬಹಾದ್ದೂರನು ಹಿಂದುವು. ಹಿಂದುವಿನ ವಿರುದ್ಧ ಖಡ್ಗವನ್ನೆತ್ತುವುದು ನಮಗೆ ಬೇಕಿಲ್ಲ. ಅವಶ್ಯವಿದ್ದರೆ ಅವನಿಗೇ ನಮ್ಮ ಶಸ್ತ್ರಾಸ್ತ್ರಗಳನ್ನು ಒಪ್ಪಿಸುವೆವು. ಅವನು ನಮಗೆ ಏನು ಮಾಡಿದರೂ ಅಡ್ಡಿಯಿಲ್ಲ. ಆದರೆ ಬ್ರಿಟಿಶರಲ್ಲಿ ಶರಣಾಗತಿಯನ್ನು ಬೇಡಲಾರೆವು!" ಎಂದರು. ಬಹಳಹೊತ್ತಿನ ವರೆಗೆ ಚರ್ಚೆ ನಡೆಯಿತು. ಜಂಗ್‌ಬಹಾದ್ದೂರನು—"ನಾನು ನಿಮಗೆ ಆಶ್ರಯವನ್ನೇ ಕೊಡುವುದಾದರೆ, ನಿನ್ನನ್ನು ಕೊಲ್ಲಲು ಲಖನಾಕ್ಕೆ ಸೈನ್ಯವನ್ನೇಕೆ ಕಳುಹಿಸುತ್ತಿದ್ದೆ?" ಎಂದು ಹೇಳಿ, ಬ್ರಿಟಿಶರಿಗೆ ನೇವಾಳದಲ್ಲಿ ಸೇರಲು ಅಪ್ಪಣೆಕೊಟ್ಟನು; ಮತ್ತು ಕೂಡಲೆ ಕ್ರಾಂತಿಕಾರರ ಬೆನ್ನು ಹತ್ತಿದನು. ಈ ರೀತಿಯಾಗಿ ಎಲ್ಲ ಕಡೆಯಿಂದಲೂ ನಿರಾತೆಯಾದುದರಿಂದ, ಅವರು ತಮ್ಮ ತಮ್ಮ ಶಸ್ತ್ರಾಸ್ತ್ರಗಳನ್ನು ಬಚ್ಚಿಟ್ಟು ನಿಃಶಸ್ತ್ರರಾದರು.

ಇದೇ ಸುಮಾರಿಗೆ ನಾನಾಸಾಹೇಬನು ಬ್ರಿಟೀಶ್ ಸೇನಾಪತಿ ಗ್ರ್ಯಾಂಟನಿಗೆ ಒಂದು ಕಾಗದ ಬರೆದನು, ಅವರಲ್ಲಿ ಅವನು ಬ್ರಿಟಿಶ್ ರಾಜನೀತಿಯನ್ನು ಟೀಕಿಸಿ:— "ನಿನಗೆ ಈ ದೇಶದಲ್ಲಿ ಕಾಲಿಡಲು ಅಧಿಕಾರವೆಲ್ಲಿದೆ? ನನ್ನನ್ನು ಬಂಡುಖೋರನೆಂದು ಕರೆಯಲು ನೀವಾರು? ನೀವು ಅರಸರು,ನಾನು ಬಂಡುಖೋರನೇ? ನಾನು ನನ್ನ ಮನೆಯಲ್ಲಿ ಬಂಡಾಯಗಾರನೇ?" ಎಂದು ಮುಂತಾಗಿ ಬರೆದನು. ನಾನಾಸಾಹೇಬನ ಗತಿಯು ಮುಂದೇನಾಯಿತೆಂಬುದನ್ನು ಯಾರೂ ಅರಿಯರು. ಬಾಳಾಸಾಹೇಬನು ನೇಪಾಳದ ಅಡವಿಯಲ್ಲಿ ಮಡಿದನು. ಮುಂದೆ ಬೇಗಮ್ ಹಾಗು ಅವಳ ಮಗನಿಗೆ ಜಂಗ್‌ಬಹಾದ್ದೂರನು ಆಶ್ರಯವಿತ್ತನು.

ಈ ರೀತಿಯಾಗಿ ೧೮೫೭ ರ ಕ್ರಾಂತಿಯು ಕೊನೆಗೆಂಡಿತು. ಈ ವಿಷಯವಾಗಿ ಮೆಲೆಸನ್ ಸಾಹೇಬನು ಹೀಗೆ ಬರೆದಿದ್ದಾನೆ:— "ಆಯೋಧ್ಯೆಯ ಜನರು ಸೈನಿಕರಿಗೆ ಸಹಾಯ ನೀಡಿದರು; ಸ್ವಾತಂತ್ರ್ಯಪ್ರವೃತ್ತಿಗಾಗಿ ಕಾದಿದರು. ಅವರ ಉತ್ಸಾಹವನ್ನು ಇತಿಹಾಸವು ಸಾರಿಹೇಳುತ್ತಿರುವುದು. ಈ ರೀತಿಯಾದ ಪ್ರತೀಕಾರವನ್ನು ನಾನೆಲ್ಲಿಯೂ ಕಂಡಿಲ್ಲ." ಕ್ರಿ.ಶ. ೧೮೫೭ ರ ಅನ್ಯಾಯವು ಜನತೆಯ ಹೃದಯದಲ್ಲಿ ಅಳವಾಗಿ ನೆಟ್ಟಿತು. ಆದರಿಂದ ಅವರು ಕಸುವಿನಿಂದ ಪ್ರತೀಕಾರ ಮಾಡಿದರು. ಕೆಲವು ವೇಳೆ ಅವರು ಹಿಂದೆಗೆದರು; ಯಾಕೆಂದರೆ ಮತ್ತೆ ಸಾಗಿಬರಲು ಅನುಕೂಲವಾಗಬೇಕೆಂದು ಕೊನೆಗೆ ಲಾರ್ಡ್ ಕ್ಯಾನಿಂಗನು ಎಲ್ಲ ಕ್ರಾಂತಿಕಾರರನ್ನೂ ಹತ್ತಿಕ್ಕಿದನು. ಅಳಿದುಳಿದವರು ನೇಪಾಳದ ಅಡವಿಯನ್ನು ಸೇರಿದರು. ಕೆಲವರು ಕೊನೆಯವರೆಗೂ ಪ್ರತೀಕಾರಮಾಡಿದರು.

ಅಖಂಡ ಭಾರತ

ಶ್ರೀ. ಎ. ಎಸ್. ರಾಮಕೃಷ್ಣ ಭಟ್ಟ, ಉಡುಪಿ

★

ಜಯತು ಜಯತು ಜಯ ಭಾರತ ವರ್ಷ!

೧

ಎಂದೆಂದಿನಿಂದ ಒಂದಾಗಿ ನಿಂದ
ನಾಡಿಂದು ಒಡೆಯಬೇಕೇ
ಯುಗಯುಗದ ದಿವ್ಯ ಸೊಗವಡೆದ ಭವ್ಯ
ಭಾರತವ ಕಡಿಯಬೇಕೆ?

೨

ಇಂದು ತೋರುತಿದೆ 'ಸ್ವಾತಂತ್ರ್ಯ'ದ ಬಾಧೆ—
ಪುಣ್ಯಭುವಿಯನೊಡೆಯುವ ಮೌಢ್ಯ;
ಹುಟ್ಟಿ ಬೆಳೆದಿರ್ದ ಬಾಳಿ ಬದುಕಿರ್ದ
ಮನೆಯ ಮುರಿವನೆಂತಹ ಅಧ್ಯ?

೩

ಉತ್ತ ಹಿಮಾಚಲ, ಸುತ್ತುಮುತ್ತು ಜಲ,
ನಡುವೆ ಭಾರತವ ವಿಸ್ತಾರ!
ಅಂದೆ ದೇವ ಇದು ಒಂದೆ ನಾಡೆಂದು
ನಿರ್ಮಿಸಿಹುದೆ ನಿಜ ಪ್ರಸ್ತಾರ!

೪

ಎಲ್ಲ ಸಂಸ್ಕೃತಿಗಳಿಲ್ಲಿ ಕಲೆತು ಜಗ
ದಲ್ಲಿ ಮೆರೆದ ನಾಡಿದು ಒಂದೆ;
ಎಲ್ಲ ತತ್ತ್ವಗಳ ನಲ್ಮೆಯಿಂದ ಅಳ-
ವಡಿಸಿಕೊಂಡ ನಾಡಿದು ಒಂದೆ!

೫

ಅಡಿಗಡಿಗೆ ಬಂದ ಎಡೆಬೇಡಿನಿಂದ
ಕುಲ-ಪಂಥವ ಸ್ವಾಗತಿಸಿದ ನಾಡು;
ಅಶೋಕ ಮೌರ್ಯರ ವಿಕ್ರಮ-ಭೋಜರ
ಸತ್ತಿಗೆಯಡಿ ಒಂದಿದ್ದಿಹ ನಾಡು!

೬

ಹಿಂದು-ಮುಸ್ಲಿಮರು ಪಾರಸಿ-ಸೀಖರು
ಒಂದಾಗಿನಿಂತ ಕಾಲವು ಇತ್ತು;
ಎಂದು ಹೇಳವರಾ ಹಂಚಿಕೆಯಾ ಕರ
ಕೆಳೆಯನಳಿಯಿತೋ, ಬಂದಿತು ಕುತ್ತು!

೭

ಭಕ್ತ ಕಬೀರರು ರಾಮ-ರಹೀಮರು
ಬೇರೆಯಲ್ಲವೆನುತಿದ್ದಲ್ಲಿ—
ಇಂದು ಮೊರೆಯುತಿದೆ 'ಜೇಹಾದಿ'ನ ಹೆದೆ;
ಪಶುವೃತ್ತಿಯೆ ನೋಡಿದೊದೆಲ್ಲಿ!

೮

ದ್ವೇಷವರಿಯದರ ದೇಶಬಾಂಧವರ
ಚುಚ್ಚಿತು ಅಯ್ಯೋ, ಮತಾಂಧರ ಮುಳ್ಳು!
ವಿಷಬೀಜ ಬಿತ್ತಿ, ರಾಂತ-ಸಮುವೃತ್ತಿ
ತಾಳಿದ ಜನತೆಯ ಕೆಣಕುವ ಸೊಲ್ಲು!

೯

ಕನ್ನಡ ವಂಗ—ಆಂಧ್ರ-ಕಾಳಿಂಗ—
ಮಹಾರಾಷ್ಟ್ರ ದ್ರಾವಿಡರಂಗ
ಗುಜರಾತ ಹಿಂದ— ಪಂಜಾಬ ಸಿಂಧ
ನುಡಿಗಳೆಲ್ಲವಿವು ಭಾರತದಂಗ!

೧೦

ಅನುಸರಿಸುತ ನುಡಿ ಒಂದಾಳ್ತಿಕೆಯಡಿ
ಪ್ರಾಂತವಿವನು ಪೋಷಿಸಬೇಕು;
ಸಿಂಹಿಣಿಯು ತನ್ನ ಮರಿಯೆಲ್ಲವನ್ನ
ಕೂಡಿಸಿ ಮೊಲೆಗೊಡುವಂತಿರಬೇಕು!

೧೧

ಎಂದೆಂದಿನಿಂದ ಒಂದಾಗಿನಿಂದ
ನಾಡಿಂದು ಒಡೆಯಬೇಕೇ?
ಯುಗಯುಗದ ದಿವ್ಯ ಸೊಗವಡೆದ ಭವ್ಯ
ಸಂಸ್ಕೃತಿಯು ಕೆಡೆಯಬೇಕೆ?

೧೨

ಅಖಂಡ ಭಾರತ ನಮ್ಮಾದರ್ಶ—
ಕೂಡಿ ಬಾಳುವುದೆ ನಮಗುತ್ಕರ್ಷ!
ಭೇದಭಾವವದು ಅಳಿಯುತ ಹರ್ಷ—
ಮೂಡಲು, ಧನ್ಯವು ಭಾರತವರ್ಷ!

ಜಯತು ಜಯತು ಜಯ ಭಾರತ ವರ್ಷ!

ಎಂ. ಎಲ್. ಎ. (ಕಥೆ ಕೇಳಿದ್ದು) ಮಿತಾಕ್ಷರರು

ಶ್ರೀ. ವೆಂಕಣ್ಣಾಚಾರ್ಯ ಹಪ್ಪು ಬಿ. ಎ., ಎಲ್‌ಎಲ್. ಬಿ.
ವಕೀಲ ಹುಬ್ಬಳ್ಳಿ

★

ಕಾಯದೆಗಳನ್ನು ಮಾಡಿ ಜನತೆಯನ್ನು ಬಿಗಿಯುತ್ತಿರುವುದು ನಿಜವಾದ ಸ್ವಾತಂತ್ರ್ಯದ ಲಕ್ಷಣವಲ್ಲ. ಮಾಡಿದ ಕಾಯಿದೆಗಳಿಂದ ಮನುಷ್ಯತ್ವ ವಿಕಾಸಗೊಳುವ ದಾರಿ ದೊರೆತರೆ ಅದುವೆ ಸ್ವಾತಂತ್ರ್ಯ; ಅದುವೆ ಸ್ವರಾಜ್ಯ!

★

ಷಡಕ್ಷರಿ (ಹಳ್ಳಿಗ):— ಎಂ. ಎಲ್. ಎ., ನಮ್ಮ ಹಳ್ಳಿಗೆ ಒಮ್ಮೆಲೆ ಬಂದಿರಲ್ಲಾ?

ಮಿತಾಕ್ಷರ (ಎಂ.ಎಲ್.ಎ.):—ಹೌದಪ್ಪ, ನಾನು ನಿಮ್ಮ ಸೇವಕ. ನಿಮ್ಮ ಬೇಕು-ಬೇಡಗಳನ್ನು ಪ್ರತ್ಯಕ್ಷ ನೋಡಿ, ಅರಿತು, ತಿಳಿದುಕೊಳ್ಳೋದಕ್ಕಾಗಿ, ನಾನು ಅರಿಸಿಬಂದ ಕ್ಷೇತ್ರದಲ್ಲಿ ಸುತ್ತಾಡಿಕೋತಿರ ಇಲ್ಲಿಗೆ ಬಂದಿದ್ದೇನೆ.

ಷ:— ಅಲ್ರೀ ಯಪಾ, ಗಾಂಧೆಪ್ಪನ್ಹಾಂಗ ಕಾಲ್ನಡಿಗೆಯಿಂದ ಒಬ್ಬರೆ ಬಂದೀರಲ್ಲಾ.

ಮಿ:—ಹಿಂದಿನ ಎಂ. ಎಲ್. ಎ. ಸಾಹೇಬರ್ಹಾಂಗ ನಮಗೆಲ್ಲಿ ಮೋಟರು ಬರಬೇಕು?

ಷ:— ಹಂಗಾರ ಯೆಪಾ, ನಿಮ್ಮ ಪೆಟ್ರೋಲ್ ಕೂಪನ್ ಏನ ಮಾಡಿದಿರಿ?

ಮಿ:—ಪೆಟ್ರೋಲ್ ಕೂಪನ್ ಅಂದರ...ಬಹಳ ಡಿವ್ವಿಡೆಂಡ್ ಹಂಚೋ ಕಂಪನೀ ಷೇರೂ ಅಂತ್ಕೊನಿಮ್ಮ ಹಲ್ಯಾಗ ಯಾರೋ ತುಂಬ್ಯಾರ!

ಷ:—ಆದರೂ, ಮೋಟರು ಇಡೂ ಯೋಗ್ಯತಾ ಇಲ್ಲದವರು ಸಹಿತ ಒಂದು ಹೊಡತಕ್ಕ ಎಂ..ಎಲ್. ಎ. ಆಗಾಕ ಹತ್ಯಾರ.

ಮಿ:— ಹುಂ.....ಹುಂ.....ಹುಂ.

ಷ:—.....ರಾವಸಾಹೇಬ್, ರಾವಬಹಾದ್ದೂರ್, ದಿವಾಣ ಬಹಾದ್ದೂರ್ ಇವರಿಗೆಲ್ಲಾ ಕಾಯಿದೆ ಮಾಡೂ ಕೆಲ್ಸದಿಂದ ಪಿಂಚಣಿ ಕೊಡ್ಸಿದ್ರೇನು ಯೆಪಾ?

ಮಿ:— ರಾಜಕೀಯ ಜೀವನದಿಂದ ಆವರು ನಿವೃತ್ತರಾದರು. ಇಲ್ಲಿ ನೋಡು, ಈ 'ರಾವಸಾಹೇಬ್' 'ರಾವಬಹಾದ್ದೂರ್' ಇವೆಲ್ಲಾ ಬಿರುದು, ೧೯೪೨ನೆಯ ಚಳವಳಿ ತರುವಾಯ ಬದಲು ಆಗ್ಯಾವ.

ಷ:—ಹಂಗಾರ ಈಗಿನ ಬಿರುದು ಯಾವರಿ..ಅಽಟ ಹೇಳ್ರಿ!

ಮಿ:— "ಮೂರು ಚಾವಡಿ ಸುಟ್ಟ ವೀರ"

"ತಾಲೂಕ ಕಚೇರೀ ದಫನಶೂರ"

"ಅಧಿಕಾರ್ಯಪಹಾರಿ" "ರೇಲ್ವೆ ಪೂರ್ ಧ್ವಂಸಕ"

"ಹಳಿ ಕೆತ್ತಿದ ಮುತ್ತು" "ತಂತೀ ಕರ್ತನ ಕೇಸರಿ" ಮೊದಲಾದುವು.

ಷ:— ಇದರಾಗಿನ ಯಾವ ಬಿರುದು ತಮ್ಮನ್ನ ಎಂ.ಎಲ್.ಎ. ಪದವಿಗೆ ಏರಿಸೀತಿ?

ಮಿ:— ಹಾಂಗಽ ಹೇಳಿದೆ.

ಷ:— ಮೊದಲಿನ ಎಂ. ಎಲ್. ಎ. ಅಂದರ ನಮಗ ಅವರ ಮಕಾ ನೋಡಾಕ ಸಿಗತಿದ್ದಿಲ್ಲ; ನೀವು ಬಹಳ ಅಗ್ಗ ಆಗೀರೆವಾ!

ಮಿ:— ನನ್ನ ಹಳ್ಳಿಯ ಬಾಂಧವನೆ, ವಸ್ತುಸ್ಥಿತಿ ವಿಪರ್ಯಾಸವಾಡಿ, ನಮ್ಮ ವಿರುದ್ಧ ಯಾವುದೋ ಪಕ್ಷ ವಿಷಮಯ ಪ್ರಚಾರ ನಡಿಸಿರಲಿಕ್ಕೆ ಸಾಕು. ನಾವು ಅಗ್ಗ ಆದದ್ದು ನಿಮ್ಮ ಹಿತದ ಸಲುವಾಗಿಯೇ! ಯುದ್ಧೋತ್ತರ ಪುನರ್ರಚನೆಯು ಅಂಗವಾದ ಹಳ್ಳಿಯ ಪುನರುಜ್ಜೀವನವನ್ನು ಸಾಧಿಸುವ ದಕ್ಕಾಗಿ; ಸುಂದರ ಸುಖ ಶಾಂತಿಮಯವಾದ ಹಳ್ಳಿಗಳನ್ನು ಕಟ್ಟಲಿಕ್ಕೆ.....

ಷ:— ಯುದ್ಧೋತ್ತರ ಜಗತ್ತನ್ನ ಕಟ್ಟಲಾಕ ನಿಮ್ಮಂಥಾ ಬನೆ ಪ್ಲ್ಯಾನ್ ತಗದಕೊಡೂ ಶಿಲ್ಪಿಗಳಽ ಬಹಳ ಆಗ್ಯಾರ. ಪ್ರತ್ಯಕ್ಷ ಕಬ್ಬೋ ಗೌಂಡಿಗಳೇ ಪೂಜಿ. ಯಪ್ಪಾ, ಒಂದೀಟ ವಳ್ಯಾಕ ಬರ್ರಿ. ನಮ್ಮ ಹಳ್ಯಾಗ ಹದ್ದು ಬಹಳ. ನಿಮ್ಮ ಬಿಳೇ ಗಾಂಧೀ ಟೊಪಿಗೀ ಧರಸಿದ್ದೇನ್ಸೈತಲ್ಲಾ ಅದನ್ನ, ಹದ್ದು ಬೆಣ್ಣೀನೋ ಅಂತ ಪಟಕ್ಕನಽ ಹೊಡಕೊಂಡು ಹೋದಾವು, ಇಲ್ಲಾ ದಂಟು ಚುಚ್ಚಿಗೊಂಡು ಬೇಕಾದ್ಹಾಂಗ ಓಡ್ಯಾಡರಿ.

ಮಿ:— ಏನ್ ಬೆರಕಿಯಲೇ ನೀನು; ಹಳ್ಳ್ಯಾಗ ತಪ್ಪಿ ಇರಲಿಕ್ಕೆ ಹತ್ತೀದಿ!

ಷ:— ಹೌದ್ರಿ! ಶಹರದಾಗಿದ್ದರ ಯಾವದಾರಽ ಯಾಪಾರ ಮಾಡಿ...ಸೆಗಣಿ ಅಥವಾ ಮಣ್ಣು ಪೂರಾಟಾ ಮಾಡಿದ್ದರೂ—ಮಣಗಟ್ಲೆ ಬಂಗಾರ ಮಾಡತಿದ್ದೆ. ನನ್ನ ನಶೀಬ ಕೊಟ್ಟೇ ಅಂತ ಹಳ್ಳಿವಾಡದಾಗ ಅಪೇನ್ರಿ! ಎಲ್ಲಾ ಉಲಟ ಆಗ್ಯೈತಿ! "ಉತ್ತಮ ನೌಕರಿ, ಮಧ್ಯಮ ವ್ಯಾಪಾರ, ಕನಿಷ್ಠ ಶೇತ್ಕಿ!"

ಮಿ:— ನಿಮ್ಮ ಶೇತ್ಕಿ ಇಷ್ಟು ಅಧೋಗತಿಗೆ ಇಳಿದಿದ್ದರಿಂದಲೇ ಇಲ್ಲಿ ಓಡ್ಯಾಡಿ, ನಿಮ್ಮಲ್ಲಿ ಬೆರೆತು ಸಮರಸವಾಗಿ, ನಿಮ್ಮ ಹಿತದ ಸಲುವಾಗಿ ಯಾವ ಯಾವ ಕಾಯಿದೇ ಬೇಕು ಅವನ್ನರಿತು ಕೊಂಡು.....

ಷ:— ಎನ್ ಕಾಯಿದೇರೀ ಈಗ? ಮೊನ್ನೆ ನಿಮ್ಮ ಕಾಯಿದೆ ಮಾಡೂ ಕಾರಖಾನಿ ಕೂಡಿದಾಗ, ೧೫ ದಿವಸದಾಗ ೨೫ ಕಾಯಿದೇ ಮಾಡಿ ಒಗಪಾರ. ನನ್ನ ಜನ್ಮದಾಗ—ನಾನೂ ಮುಪ್ಪಿನ ಮುದಕಾಗೇನಿ—ಇಷ್ಟು ಕಾಯಿದೆ ಆದದ್ದು ಕಂಡಿಲ್ಲ. ಮೊದ್ಲ ಏಸ್ರೀ, ಎಲ್ಲಾರ ೧೦–೧೫ ವರಸಕ್ಕೊಂದು ಕಾಯಿದೆ! ಈಗೇನು! ಹೆಣಾ ಸಹಿತ ಅಷ್ಟು ಬಿಗಿಯಾಕ ಇಲ್ಲಾ, ಅಷ್ಟು ಮನಶ್ಯಾ ಮಿಸಕದ್ಹಾಂಗ ಕಾಯಿದೇದಿಂದ ಬಿಗದ ಬಿಟ್ಟಾರು! ನಮ್ಮ ಸರಕಾರ ಬಂತಲೇ ಅಂತ ಹೆರಸ ಆಗಿತ್ತು; ಅವರು ಈ ಕಾಯಿದೇದ ಹೊರೀ ನಮ್ಮ ಮ್ಯಾಗ ಹೇರ್ಯಾರ. ಎಮ್. ಎಲ್. ಎ. ಜನರು ಪಗಾರಾ ತಗೊಂಡು ಸುಮ್ಮಕ್ಕು ಕುಂತಿಲ್ಲಾ ಅಂತ ತೊರಸಾಕ, ಇಷ್ಟು ಕಾಯಿದೇ ಮಾಡತಾರೋ ಎನೊ!

ವಿ:— ನಿಂದು ತಪ್ಪ ತಿಳಿವಳಿಕಿ ಆಗೇದೇನಪಾ! ಈ ಎಲ್ಲಾ ಕಾಯಿದೆ ನಿಮ್ಮ ಫಾಯದೇದ ದಸಿಯಿಂದ!

ಷ:— ಎನ ಫಾಯದೇಯಪಾ? ಸುರಳೀತ ನಡದ ನಮ್ಮ ಬಾಳ್ವೆದಾಗ, ನಮಗ ಫಾಯಿದೇ ಮಾಡೋ ಕಾಯಿದೆ ಮಾಡಾಕ ಹೋಗಿ, ನಮ್ಮ-ನಮ್ಮೊಳಗ ನ್ಯಾಯಾ ಹೆಚ್ಚಿ ಬಿಡತಾವ ನಿಮ್ಮ ಕಾಯಿದೆ! ನೀವೂ ಸೀಳೇ ಆಳಾಕ (Divide and rule) ಬಂದಾಂಗ ಕಾಣ್ಸುತೈತಿ. ಯಾಕಂದರ, ಯಾರು ನಮಗ ಈ ಕಾಯಿದೇ ಹೆಚ್ಚ ಬ್ಯಾಡ್ರೀ ಅಂತ ಬೆದರಸತಾರ, ಅಂತವರನ್ನ ಬಟ್ಟು ಬಿಡತೀರ!

ವಿ:— ನಿನ್ನ ಪ್ರಕಾರ ಸರಕಾರ ಯಾವ ತರಹೆದ್ದು ಇರಬೇಕು ಮತ್ತು ಕಾಯಿದೆ ಯಾವ ತರಹೆದ್ದು ಆಗಬೇಕು?

ಷ:— ಸರಕಾರ ಯಾವದು ಸ್ವರೂಪದ್ದಿರಲಿ, ಆಡಳಿತಗಾರರು ಲಂಚಬುರುಕರಿರದೆ, ಪ್ರಾಮಾಣಿಕರೂ ಕೊಟ್ಟ ಕೆಲಸಾ ಮಾಡವರೂ ಛಡೆ ಮುರವಕ್ಕುಗಳಿಗೆ ಒಳಗಾಗದವರೂ ಇದ್ದರ ಆಯಿತು. ಇನ್ನ ಕಾಯಿದೆ ಎಷ್ಟು ಕಮ್ಮೀ ಮಾಡೀರಿ, ಅಷ್ಟು ಜನರಿಗೆ ಬೆಕಾದ ಸರಕಾರ ಆಗತೈತಿ. ಮತ್ತು ಇಂಥಾ ಕಾಯಿದೆ ಮಾಡಬೇಕಲ್ಲಾ...ಜನರೊಳಗ ಆದರಂತೇ ನಡದು ಮುಂದಿನ್ನ ನಡಸಲಿಕ್ಕೆ ಹೆಚ್ಚೊ ಅಂಥಾ ಬುದ್ದಿ ಹುಟ್ಟಬೇಕು!

ಸೇವೆ

ಶ್ರೀ. ಕೆ. ಎಸ್. ಸುಬ್ರಾಯಭಟ್ಟ, ಪೆರಡಾಲ.

ಸೇವೆಗಾಗಿಯೆ ಹುಟ್ಟು ಸೇವೆಗಾಗಿಯೆ ಬದುಕು,
ಸೇವೆಯಲಿ ನವೆಯುದಿಹ ಬಾಳು ಬೊಳ್ಳು;
ಸೇವೆಯೇ ನಿಜಧರ್ಮ ಸೇವೆ ಯೋಗಿಯ ಕರ್ಮ
ಸೇವೆಯೇ ಮನುಜ ಜೀವನದ ಮರ್ಮ! ॥ ೧ ॥

ನೀರಡಿಸಿ ಬರ್ಪ ದಾರಿಗನೆಡೆಯ ತೊರೆಯಂತೆ
ನಿಚ್ಚ ಕಾದಿರಬೇಕು ಆರ್ತನೊರೆಯ—
ಬೆಂದ ಬುವಿಗಿಳಿದ ಸೋನೆಯ ತೆರದಿ ತಡೆಯದಲೆ
ತಳಿವದಲೆ ತಿಳಿದೀಯ ಬೇಕು ನೆರವ. ॥ ೨ ॥

ಕೂಗುತಿಹ ಕಂದನೆಡೆಗೋಡಿ ಮೊಲೆಯೂಡುತ್ತ
ಸಂತವಿಪ ಪ್ರೇಮನಿಧಿ ಹಸುವಿನಂತೆ—
ದುಃಖಿಗಳ ಮೊರೆ ಕೇಳಿ ಅವರ ಸಾಂತ್ವನಕಾಗಿ
ವಿಾಸಲಿರಿಸಿದ ಬಾಳ್ವೆ ಸಫಲವಲ್ತೆ? ॥ ೩ ॥

ಬತ್ತಿಯುಂದದಿ ಉರಿದು ಸುತ್ತ ಬೆಳಕನು ಬಿತ್ತಿ
ಅಮರತ್ವವೊಂದುವಾ ಧರ್ಮಸಾರವನು—
ಸೇವೆಯೆಂದರಿತು ತಿಳಿಸಿದ ಬುದ್ಧ ಮಾಜಾಗಿ;
ಲೋಕಸೇವೆಯ ದೀಕ್ಷೆ ಏಸುವಿತ್ತಿಹನು. ॥ ೪ ॥

ಸೇವೆಯೆನ್ನಲು ದಾಸ್ಯವೆಂಬ ಭಾವವು ಸುಳ್ಳು,
ನಿಸ್ವಾರ್ಥಸೇವೆಯದು ದಾಸ್ಯವಲ್ಲ!
ಬೆಂದವರ ತಾನಾಗಿ ತಂಗಾಳಿ ತಣಿಸುವುದು
ಪ್ರತಿಯಾಗಿ ತನಗೇನ ಬಯಸದಲ್ಲ! ॥ ೫ ॥

ಸೇವೆಗಾಗಿಯೆ ಬಂದು ಸೇವೆಯಲ್ಲಿಯೆ ನಿಂದು
ಸೇವೆಯಲ್ಲಿಯೆ ಸಂದು ಶಾಂತಿ ಬೆಳಿಸಿ
ಪುಣ್ಯ ಜೀವಿಗಳಿನ್ನು ಭಾರತದಿ ಬರಲೆಂದು
ಬಯಸುವೆನಿದೊಂದೆನ್ನ ಹಿರಿಯ ಬಯಕೆ! ॥ ೬ ॥

ಆಧುನಿಕ ನಾಟಕ

ಶ್ರೀ. ಖಾನೋಳಕರ ಶ್ರೀಧರರಾಯರು, ಪುಣೆ

ಆಧುನಿಕ ನಾಟಕ ಮೇಲಿನಿಂದ ಕೆಳಕ್ಕಿಳಿದಿದೆಯೊ, ಕೆಳಗಿನಿಂದ ಮೇಲಕ್ಕೇರಿದೆಯೊ ಎಂಬುದು, ಇಂದಿನ ಹಳಬ—ಹೊಸಬರಲ್ಲಿ ಚರ್ಚೆಯ ವಿಷಯವಾಗಿದೆ. ಆದರೆ ಇಷ್ಟೊಂದು ನಿಜ: ಆಧುನಿಕ ನಾಟಕ ಜನಸಾಮಾನ್ಯರ ಜೀವನವನ್ನು ಚಿತ್ರಿಸುವುದು; ಎಂತಲೆ ಅವರ ಎದೆಯನ್ನು ಮುಟ್ಟುವುದು.

"ನಾಟ್ಯಂ ಭಿನ್ನರುಚೇರ್ಜನಸ್ಯ ಬಹುಧಾಪ್ಯೇಕಂ ಸಮಾರಾಧನಮ್"
—ಕಾಲಿದಾಸ

ನಾನು ಸಣ್ಣವನಿದ್ದೆ ಎಂಟು-ಹತ್ತು ವರ್ಷದವನಿರಬೇಕು. ಧಾರವಾಡದಲ್ಲಿ ಪ್ಲೇಗು ಎಂದು ಸಮೀಪದಲ್ಲಿಯ ಹಳ್ಳಿಯಲ್ಲಿ ನಮ್ಮ ಆಪ್ತರಲ್ಲಿ ವಾಸವಾಗಿದ್ದೆ. ಹಳ್ಳಿಯ ಊರು— ಐವತ್ತು ಅರುವತ್ತು ಮನೆಗಳು ಕಾಲೂರು ಎನ್ನಿರಿ; ಬೇಕಾದರೆ ಹಾಳೂರು ಎನ್ನಿರಿ; ಏನೆಂದರೂ ನಡೆಯಬಹುದಾಗಿತ್ತು. ಹಳ್ಳಿಯ ನಡುವೆ ಒಂದು ಹಾಳು ಮನೆ. ಅದೇ ಆದರ ಟಾವ್ನ್‌ಹಾಲ್ ಎನ್ನಿರಿ. ಅಲ್ಲಿ ಒಂದು ದಿವಸ ಒಬ್ಬ ಬಂದಿದ್ದ. ರಾತ್ರಿ ಹತ್ತು ಗಂಟೆ ಆಗಿತ್ತು. ಹೊರಗೆ ಹಿಟ್ಟು ಜೆಲ್ಲಿದಂತೆ ಬೆಳುದಿಂಗಳು ಬಿದ್ದಿತ್ತು. ವಾದವೆಂದರೆ 'ಊರಲ್ಲಿ ಈ ಸುಗ್ಗಿಯಲ್ಲಿ ದೊಡ್ಡಾಟ ಮಾಡಬೇಕೋ ಇಲ್ಲವೋ?' ಎಂಬ ವಿಷಯ. 'ಮಾಡೇತೀರಬೇಕು' ಎನ್ನುವವರು ಹತ್ತು ರೂಪಾಯಿ ವರ್ಗಣಿಗೆ ಸಿದ್ಧರಾದರು. ಇವರು ಹೆತ್ತು ಜನ. 'ಮಾಡಬಹುದು' ಎನ್ನುವವರು ಐದು ಜನ. ಐದು ರೂಪಾಯಿ ಕೊಡುವವರು. ಅಂತೂ ನೂರಾ ಇಪ್ಪತ್ತೈದು ರೂಪಾಯಿ ಆಯಿತು. ಗೌಡರಿಗೆ ಇದು ಸಹನವಾಗಲಿಲ್ಲ. ಅವರು ಹುರುಪಿನಿಂದ 'ನಾನು ಇಪ್ಪತ್ತೈದು ರೂಪಾಯಿ ಕೊಡುತ್ತೇನೆ' ಒಂದೂವರೆ ನೂರು ಆಯಿತು. ಹೋಗಿ ಮಲಗಿರಿ' ಎಂದು ನುಡಿದು ಎದ್ದರು. ಬಂದ ಮನುಷ್ಯನು ದೊಡ್ಡಾಟ ಕಲಿಸುವ ಸದ್ಗುರು. ಪಾತ್ರ ತಯಾರಾಗಿ, ದೊಡ್ಡಾಟ ಸಿದ್ಧವಾಗಿ, ಮೂರು ತಿಂಗಳಲ್ಲಿ ಆಗೇಹೋಯಿತು. ಪಾಪ! ಆ ಆಟಕ್ಕೆ ನಾನು ಅಲ್ಲಿ ಇರಲಿಲ್ಲ. ಒಂದು ಹಾಳೂರಿನಲ್ಲಿ ಒಂದುವರೆ ನೂರು ರೂಪಾಯಿ ವೆಚ್ಚಮಾಡಿ, ದೊಡ್ಡಾಟ ಕಲಿತು ಆಡಿ ತೋರಿಸಿದರು; ನೂರಾರು ಮಂದಿ ನೋಡಿದರು, 'ನೋಡಿ 'ಸೈಯ್ಯನಾ' ಎಂದರು. ಇದಕ್ಕೆ ವೆಚ್ಚವೆನ್ನಬೇಕೋ ಹುಚ್ಚು ಎನ್ನಬೇಕೋ? ಇ ದೊಂದು ಹುಚ್ಚು. ಕಾಲಿದಾಸನೆಂದಂತೆ ನಾಟಕವೊಂದು ಸಮಾಜೀವನವಾದ ಆಧ್ಯಾತ್ಮಿಕ ಭೋಜನಸಮಾರಂಭ. ನಿವಿಧರುಚಿಯುಳ್ಳವರು ಈ ರಸದೂಟವನ್ನುಂಡು ಆನಂದಪಡಬಹುದು. ಬಡಿಸಿದವರಿಗೂ ಸಮಾಧಾನ. ಉಂಡವರಿಗೂ ಸಮಾಧಾನ. ಎಲ್ಲರ ಸಮಾಧಾನವೆ ಇದು. ಎಲ್ಲರಿಗೂ ಬೇಕಾದದ್ದು ಎಲ್ಲರೂ ಪಡೆಯತಕ್ಕಂತಹದು.

ಹಳ್ಳಿಯೊಳಗೆ ನೋಡಲಿಲ್ಲ ನಾನು ದೊಡ್ಡಾಟವನ್ನು. ಬಹಳ ತಳಮಳವೆನಿಸಿತು. ಬಲು ದೂರ ಆಟಗಳಾಗುತ್ತಿದ್ದುವಾದುದರಿಂದ ಮನೆಯಲ್ಲಿ ಅಪ್ಪಣೆ ಸಿಗುತ್ತಿರಲಿಲ್ಲ. ಒಮ್ಮೆ ನಮ್ಮ ಓಣಿಯವರೇ ಆಟವಾಡಿದರು. ನಮ್ಮ ಮನೆಯ ಮುಂದೆಯೇ ಆಟ. ಆ ಮೇಲೆ ಕೇಳುವುದೇನಿದೆ? ನನಗೆ ಮೂರು ತಿಂಗಳು ಉಪ್ಯೋಗವೇ ಇರಲಿಲ್ಲ. ಆಟ ಕಲಿಯುತ್ತಿದ್ದವರಿಗೆ ಅವರ ಮಾತುಗಳನ್ನು ಬರೆದುಕೊಡುವುದು, ಅನ್ನಿಸುವುದು. ಅವರು ಕಣಿಕಣಿದು ಅನ್ನುವುದನ್ನು ಕೇಳುವುದು, ಆಟ್ಟಕಟ್ಟಲಿಕ್ಕೆ ನೆರವಾಗುವುದು— ಎಷ್ಟೋ ಕೆಲಸಗಳನ್ನು ಮಾಡಿ ದಣಿದೆ. ಕಡೆಗೆ ಆ ಆಟದ ದಿನ ಬಂತು. ರಾಮ-ರಾವಣ ಯುದ್ಧದ ಕಥೆ. ಬೆಳಬೆಳತನಕ ಆಯಿತು. ಬೆಳಗಿನ ಸೂರ್ಯ ತನ್ನ ಹೊಂಬಣ್ಣದ ಕಿರಣಗಳನ್ನು ಹರಡಿದ ಮೇಲೆ ಆರತಿಯನ್ನೆತ್ತಿದರು. ಎಲ್ಲರಿಗೂ ಆನಂದವಾಯಿತು.

ದೊಡ್ಡದೊಂದು ಚಡ್ಡಾಕವಾದ ಆಟ್ಟ, ಒಂದೆರಡು ಹರಕು ಮುರುಕಾದ ಪರದೆಗಳು. ಪರದೆಯ ಹಿಂದೆಯೇ ಪಾತ್ರಗಳು. ಸಮೀಪದಲ್ಲಿಯ ಮನೆಯ ಕೋಣೆಯಲ್ಲಿ ಬಣ್ಣ ಬರೆಯಿಸಿಕೊಂಡು, ಆಟ್ಟದ ಮೇಲೆ ಮಂಗಗಳಂತೆ ಹಾರಿ ಹಾರಿ ಬರುತ್ತಿದ್ದುವು ಪಾತ್ರಗಳು. ರಾಮ-ರಾವಣ ಯುದ್ಧ. ರಾಮನಿಗೆ ಜಟ್ಟಿ, ಬಿಲ್ಲು, ಬಾಣ. ಲಕ್ಷ್ಮಣನ ಕೈಯಲ್ಲಿ ಗದೆ. ಸೀತಾದೇವಿಯ ಕೊರಳೊಳಗೆ ಒಳ್ಳೆ ಮುತ್ತಿನ ಸರ, ಇಪ್ಪತ್ತು ತೊಲೆಯ ಸರಿಗೆ; ಮತ್ತೆ ಕಾಲ್ಗಡಗ, ಸೀತಾಂಬರ, ಬಂಗಾರದ ಪಟ್ಟೆ; ಕೈಯಲ್ಲಿ ನಾಗಮುರಿಗೆ, ಬೆರಳಲ್ಲಿ ತಳತಳಿಸುವ ಹರಳಿನ ಉಂಗುರಗಳು. ಒಂದು ಸೀತೆಯನ್ನು ಸಿದ್ಧಗೊಳಿಸಲಿಕ್ಕೆ ನಾಲ್ಕು ಗಂಟೆ ಹಿಡಿಯಿತು. ರಾವಣನನ್ನೋ! ಅಬ್ಬಬ್ಬಾ! ಅವನನ್ನು ನೋಡಿದರೆ ಗರ್ಭವತಿಯರಿಗೆ ಗರ್ಭಸ್ರಾವವಾಗುವ ಸಂದರ್ಭ. ಆ ರಾವಮ್ಮೋರೆ, ಆ ಕಲ್ಲಿಮೀಸೆ, ಪೋರೆತುಂಬ ಕೆಂಪು ಬಣ್ಣ, ಹಣೆಗೆ ಹೆಸರು! ಆ ಹತ್ತು ಮುಖಗಳು, ಆ ಭುಜಕೀರ್ತಿಗಳು, ಆ ಕೊರಳೊಳಗಿನ ಮಾಲೆಗಳು—ರುಂಡಮಾಲೆಗಳು—ಕೈಗೆ ಸಿಕ್ಕಿದ್ದೆಲ್ಲ ಕೊರಳೊಳಗೆ ಹಾಕಿದ್ದರು. ಗೇಣುದ್ದ ಅಂಚಿನ ಧೋತರವನ್ನು ಉಟ್ಟಿದ್ದ. ಕೈಯಲ್ಲಿ ನಿಜವಾದ ಖಡ್ಗ. ಅವರಂತೆಯೆ ಎಲ್ಲರೂ—ಕುಂಭಕರ್ಣ, ಕಪೀಶ್ವರರು, ಸುಗ್ರೀವ, ವಾಲಿ, ಹನುಮಂತ. ಇಷ್ಟೆಲ್ಲ ಸನ್ನಾಹದೊಂದಿಗೆ ಆಟ ಪ್ರಾರಂಭವಾಯಿತು ಸೂತ್ರಧಾರ "ಬಾಲೈ ಗಜವದನಾ" ಎಂದು ತಾರದಿಂದ ಸ್ತೋತ್ರ ಮಾಡಿದನು. ಗಣೇಶ-ಸರಸ್ವತಿದೇವಿ ಇವರಿವ್ವರ ಆತೀರ್ವಾದ ಪಡೆಯಬೇಕೆಂದು ಸೂತ್ರಧಾರ ತಾಳ ಬಡಿಯಹತ್ತಿದ. ರಾಮ ಬಂದ; ಶೂರ್ಪಣಖಿ ಬಂದಳು 'ಆ' ಎಂದು ಬಾಯಿ ತೆರೆದು ವಿದೂಷಕನು ರಾಮನನ್ನು ನೋಡಿ 'ಪಾಪ ಸಾಯುವನು' ಎಂದ "ನೀನು ಯಾರು," ಎಂದು ಕೇಳಿದ. ರಾಮ "ನೀನು ಯಾರು" ಎಂದು ಕೇಳಿದ. ವಿದೂಷಕ "ನಾನೇ ವಿದೂಷಕ ಕೇಳೈ ದೊರೆಯೆ! ಹಾಲಗೆರೆಯೊಳಗಿನ ಮೀನದ ಮರಿಯೆ!" ಎಂದ. ನಟ್ಟ ನಡುರಾತ್ರಿಯಲ್ಲಿ ರಾವಣ, ಸಭಾಸದರೊಳಗಿಂದ ಹಾರಿ ಬಂದ. ಕೋಳಿ-ಕುರಿಗಳ ಬಲಿಪ್ರದಾನವಾಯಿತು ಯುದ್ಧವಾಯಿತು ಆಟವಾಯಿತು, ಆನಂದವಾಯಿತು, ಜಾಗರಣೆಯೂ ಆಯಿತು!!

ಇದು ನಾಟಕದ ಮೊದಲನೆಯ ರೀತಿ. ಮಾತುಬರದವರೂ ನೋಡುವವರೂ ಸಾಮಾನ್ಯಜನತೆಯೆ. ಮುಖ್ಯತಃ ಮನಸ್ಸು-ಬುದ್ಧಿಗಳ ಬೆಳೆವಣಿಗೆಯಾಗಿರದಿರುವ ಪಳ್ಳಿಗರೇ ಇದರಲ್ಲಿ ಮುಖ್ಯ ಸಭಾಸದರು. ರಾಳದ ದೀಪದಲ್ಲಿ ಆದ್ಭುತ ಆಕೃತಿಗಳು ಮಾಡುವ ಅತ್ಯದ್ಭುತ ಕೃತ್ಯಗಳೇ ಆ ನಾಟಕಗಳ ಜೀವಾಳ. ಸ್ವಭಾವ ವೈಚಿತ್ರ್ಯವಿದ್ದರೂ, ಸ್ವಭಾವದ ಬೆಳೆವಣಿಗೆಯನ್ನು ತೋರಿಸುವಂತಹದಲ್ಲ. ಸೀತಾದೇವಿಯಲ್ಲಿ ಬೆಡಗು ಇದ್ದರೂ ಬಿನ್ನಾಣವಿಲ್ಲ. ಯಾವ ರಸಕ್ಕೂ ಕುಣಿತವಿದ್ದೇ ಇರುವುದು. ರಾವಣನು ಸೀತಾದೇವಿಯನ್ನು ಅಶೋಕವನದಲ್ಲಿ ಇಟ್ಟಿದ್ದರೂ ಆಕೆ ತನ್ನ ಕುಣಿತವನ್ನು ಮರೆಯುವುದಿಲ್ಲ. "ಹ್ಯಾಂಗ ಮಾಡಲೆ ಗೆಳತೀರಾ" ಎಂದು ಅರ್ಧ ಗಂಟೆ ಕುಣಿಯಾಗುವುದು. ರಾವಣನು ಸಪ್ಪುಬಿದ್ದ. ಅವನ ಸುತ್ತಲೂ ನುಂಡೋದರಿಯು ಅಳುತ್ತ ಕುಣಿತವನ್ನಾಡುವಳು. ಆಗ ಸಭಾಸದರೆಲ್ಲರೂ ನಕ್ಕೇ ನಗುವರು ರಾವಣನೂ ನಕ್ಕು ಬಿಡುವನು ಒಂದೇ ಮುಖದಿಂದ ಹೇಗಾದರೂ ಮನೋರಂಜನೆಗೇನೂ ಕಡಿಮೆಯಿಲ್ಲ. ಆಟಕ್ಕೆ ದುಡ್ಡಿನ ನೆಚ್ಚವಿಲ್ಲ.

ಇದೇ ಮಾವರಿ—ಆದರೆ ಟಿಕೀಟು ಹಚ್ಚಿ—ಥಿಯೇಟಂನಲ್ಲಿ ಆಗುವ ನಾಟಕ ಮುಂದೆ ಬಂತು. ಕಥೆಯು ಅದೇ ಆದರೂ, ಅವು ಬಂತಗಳಂತೆ ಬರಹತ್ತಿದುವು ಹೇಳಿವಷ್ಟೇ ಮಾತುಗಳು, ಹಾಕಿವಷ್ಟೇ ಹಾಡುಗಳು. ಅವೂ ಎಷ್ಟು ಬೇಕು ಅಷ್ಟೇ. ಒಂದೊಂದು ತಾಸಿಗೆ ಒಂದೊಂದು ಬಂತ. ನಾಲ್ಕೈದು ತಾಸಿನ ನಾಟಕ. ಇದಕ್ಕೂ ಸಾವಿರಾರು ಜನರು ಬರಬಹುದಾಗಿತ್ತು. ಆದರೆ ಇದಕ್ಕೆ ದುಡ್ಡು ಉಳ್ಳವರಷ್ಟೇ ಬರಬೇಕೆಂಬ ಬಿಗಿಕಟ್ಟು ಇದ್ದುದರಿಂದ, ಪಳ್ಳಿಯ ಜನರು ಇದಕ್ಕೆ ಬರದಂತೆ ಆದರು. ನಾಟಕಕ್ಕೆ ಬಂದವೇನಾಯಿತು; ಮಾತಾವನೂ ತಿಳಿಯಬೇಕಲ್ಲವೆ? ಅದರೊಳಗಿನ ಹಾಡಂತೂ ತಿಳಿಯುವುದಸಾಧ್ಯ ಆವಾಗ. ಜರಡಿಯು ಮಜಲು ಕೀಸರುಬಾಸರು ಬಿಗುವಂತೆ ಹೊಡೆದರೆ 'ಸೈ' ಎನ್ನುವ ಜನರಿಗೆ. ಪಿಯಾನೋ ಪೆಟ್ಟಿಯು ಫೀ ಎಂಬ ಸಪ್ಪಳಗಳು 'ಕೊಂಬೋ ಕೊಳಲೋ' ಎನ್ನುವಂತೆ! ಇದಕ್ಕೆ ಊರೊಳಗಿನ ಪ್ರತಿಷ್ಠಿತ ಜನರು ಬರಹತ್ತಿದರು. ಪೊಡ್ಡಾಟದ ರಂಗು—ರಾಳದ ದೀಪ—ಇದರಲ್ಲಿ ಇಲ್ಲದಿದ್ದರೂ, ಕಥೆಗಳು ಅವೇ. ಭೀಮಾರ್ಜುನಯುದ್ಧ, ಕೃಷ್ಣಾರ್ಜುನಯುದ್ಧ. ಗದಾಯುದ್ಧ, ದ್ರೌಪದೀವಸ್ತ್ರಾಪಹರಣ—ನುಂತಾದ ಪೌರಾಣಿಕ ಕಥೆಗಳೇ ಇವುಗಳ ಜೀವಾಳವಾಗಿದ್ದುವು. ಒಮ್ಮೊಮ್ಮೆ ಸಾಮಾಜಿಕ ಜೀವನ ಬರಹತ್ತಿತು; ಅವೂ ರಾಜಾ-ರಾಣಿಯರ ಕಥೆಗಳೇ ಹೆಚ್ಚು. 'ಭೋಜರಾಜ-ಕಾಳಿದಾಸ' 'ಪದ್ಮಾವತೀಪರಿಣಯ' 'ಆಧುನಿಕ ಪ್ರಲ್ಹಾದ'! ಏನೇ ಆದರೂ ನಾಟಕದ ಬಹಿರಂಗವಷ್ಟೇ ಸೂಕ್ಷ್ಮವಾಯಿತು; ಅಂತರಂಗ ಮಾತ್ರ ಅದೇ. ಸಭಾಸದರು ದುಡ್ಡು ಕೊಟ್ಟು ಆಧುನಿಕ ಉಡುಪು ಹಾಕಿ ಕುರ್ಚಿ ಬಾಕಿನ ಮೇಲೆ ಕೂಡಹತ್ತಿದರು. ಆವತ್ತೆ ಅವರಿಗೆ ಬಹಳ ಆನಂದದ ಸಂಗತಿಗಳೆಂದರೆ ಯುದ್ಧಗಳೇ ಎಂದು ಹೇಳಬಹುದು.

ಇದರಲ್ಲಿ ಮೂರನೆಯ ತರಗತಿಯೆಂದರೆ ಸ್ವಲ್ಪ ಸುಧಾರಿಸಿದ ನಾಟಕ. ತಿಂಗಳಲ್ಲಿ ಹನ್ನೆರಡು ನಾಟಕ ಆಡುವುದು. ಅದರಲ್ಲಿ ಅರ್ಧಕ್ಕರ್ಧ ಪೌರಾಣಿಕ ಅದರೆ ಅರ್ಧ ಸಾಮಾಜಿಕ ನಾಟಕಗಳು ಇವುಗಳಲ್ಲಿ ಹೊರಗಿನ ಬೆಡಗು ಬಹಳೇ ಕಡಿಮೆ. ಸಾಮಾಜಿಕ ನಾಟಕಗಳಾದರೂ ಬೇಕಾದಷ್ಟು ಹಾಡು. ಹಾಡಿನಿಂದಲೇ ಜನರ ಮನಸ್ಸನ್ನು ಸೆಳೆಯುವುದು ಮುಖ್ಯ. ಇದರೂ ಸಾಮಾಜಿಕ ನಾಟಕದೊಂದನೇಲೆ, ಪಾತ್ರರಚನೆಯು ಸಂಗಡ ಪಾತ್ರಗಳ ಸ್ವಭಾವವ ಬೆಳೆವಣಿಗೆ ಬಂತೇಬಂತು. ರಾವಣನು ಸೀತೆಯನ್ನು ಒಯ್ದನು. ಸೀತಾಪಹರಣದ ಪರಿಣಾಮ, ಈ ಪರಿಣಾಮದ ಕಾರಣವೇನು? ರಾವಣನ ಕಾಮವಾಸನೆ! ಮುಗಿಯಿತು! ರಾವಣನ ಕಾಮಾಸಕ್ತಿಯೋ ಸೌಂದರ್ಯರತಿಯೋ ಎಂದು ಸಂಶಯ ಬಂದರೆ, ರಾವಣನ ಸ್ವಭಾವದ ಬೆಳೆವಣಿಗೆಯನ್ನು ತೋರಿಸಬೇಕಾಗುವುದು. ಮಹಾವ್ಯಕ್ತಿಯ ಸ್ವಭಾವವರ್ಣನೆಗಿಂತಲೂ ಸಾಮಾನ್ಯರ ಸ್ವಭಾವವರ್ಣನೆಯನ್ನು ಮಾಡುವುದು ಬಲು ಕಷ್ಟ. ಈ ಕಷ್ಟಸಾಧ್ಯವಾದದ್ದನ್ನು ಸಾಧ್ಯಮಾಡಲು ಸಾಮಾಜಿಕ ನಾಟಕವು ಸೊಂಟಕಟ್ಟಿತು. ಆದರೂ ನಾಟಕವು ಅರ್ಥರಹಿತವಾದದ್ದೇ ಆಗಿತ್ತು. ನಾಟಕವು ಜೀನ್ನಾಗಿತ್ತೋ? ಜೀನ್ನಾಗಿತ್ತು. ಎಂದರೆ ಅದರಲ್ಲಿಯ ಹಾಡು ಜೀನ್ನಾಗಿದ್ದುವು, ಪರದೆ ಹೊಸತಾಗಿದ್ದುವು. ಗಂಡಸಿದ್ದು ಹೆಣ್ಣಿನಂತೆ— ತೀರ ಹೆಣ್ಣಿನಂತೆ— ನಟಿಸುವವನದೇನು ಕೌಶಲ್ಯ! ಅಹಹಾ! ಆದರೆ ನಾಟಕ ತಿಳಿಯಿತೊ? ತಿಳಿಯುವಂತಹದು ಅದರಲ್ಲಿ ಏನೂ ಇರಲಿಲ್ಲ!

ಆಧುನಿಕ ನಾಟಕವೆಂದರೆ ತಿಳಿಯುವಂತಹ ನಾಟಕ! ಅರ್ಥಪೂರ್ಣವಾದ ನಾಟಕ. ಎಂದರೆ ಮೊದಲಿನ ನಾಟಕಗಳಲ್ಲಿ ಏನೂ ಅರ್ಥವಿರಲಿಲ್ಲವೆನ್ನುವರೋ? ಛೇ, ಹಾಗಲ್ಲ! ಮೊದಲಿನ ನಾಟಕಗಳಲ್ಲಿ ಅರ್ಥವಿದ್ದರೂ 'ಕವಿಯು ಅರ್ಥವೇನು?'—ಎನ್ನುವುದನ್ನು ಕವಿಯು. ಹೇಳುತ್ತಿರಲಿಲ್ಲ. ಶಾಕುಂತಲಕ್ಕೆ ಅರ್ಥವಿಲ್ಲವೆಂದಲ್ಲ. ನೀವು ಯಾವ ಅರ್ಥವನ್ನು ಅದರಿಂದ ಹುಡುಕುವಿರೋ ಆ ಅರ್ಥ. ಅರ್ಥವನ್ನು ಹೇಳುವ ಕೆಲಸವನ್ನು ಅವರು ಮಾಡುತ್ತಿರಲಿಲ್ಲ. ಈಗ ಸಭಾಸದರೂ ತಕ್ಕಷ್ಟು ಜ್ಞಾನವಂತರಾದುದರಿಂದಲೂ ನಾಟಕಕಾರರು ಸಮಾಜವಘಟಕಗಳಂತೆ ತಮ್ಮನ್ನು ತಿಳಿದುಕೊಂಡು ವರ್ತಿಸುವರಾದುದರಿಂದಲೂ, ಆಧುನಿಕ ನಾಟಕಗಳಲ್ಲಿ ಸಾಮಾಜಿಕ ತತ್ತ್ವಜ್ಞಾನವೊಂದು ಬಂದುಬಿಟ್ಟಿತು. ಕೆಲವು ಸಾಮಾಜಿಕ ರೀತಿ-ನೀತಾವಳಿಗಳನ್ನೆ ಬಿಚ್ಚಿ ಹೇಳಲು ನಾಟಕವು ಈಗ ಹಣಪೆಸಹತ್ತಿದೆ. ಇಂತಹ ನಾಟಕಗಳಿಗೆ ನೋರ್ವೇದ ತತ್ತ್ವಜ್ಞಾನಿಯಾದ ಇಬ್ಸೆನ್ನನೇ ಜನಕನೆಂದು ಹೇಳಬಹುದು. ಇಬ್ಸೆನ್ನನ ನಾಟಕಗಳಲ್ಲಿ ಕಥೆಯೂ ಇವೆ, ಪಾತ್ರಗಳೂ ಇವೆ, ಸ್ವಭಾವವರ್ಣನೆಯೂ ಸ್ವಭಾವಪರಿಪೋಷಣವೂ ಇವೆ; ಇವಕ್ಕೆ ಹೊಂದಿ ಇಬ್ಸೆನ್ನನ ಸಾಮಾಜಿಕ ತತ್ತ್ವಜ್ಞಾನದ ಚರ್ಚೆಯೂ ಇವೆ. ಆಧುನಿಕ ಸಾಮಾಜಿಕ ಪ್ರಶ್ನೆಗಳ ಚರ್ಚೆಯೇ ಮುಖ್ಯವಿದ್ದು, ಪಾತ್ರವೆಂದರೆ ಇಬ್ಸೆನ್ನನ ವಿಚಾರಗಳ ಅವತಾರಗಳೆಂದೂ ಎನ್ನಬಹುದು. ನಮ್ಮ ನಾಡಿನಲ್ಲಿ ಇತ್ತೀಚೆಗೆ ಈ ಮಾದರಿಯ ನಾಟಕಗಳು ಸಾಹಿತ್ಯದಲ್ಲಿ ಕಂಡು ರಂಗಭೂಮಿಯಲ್ಲಿ ಹಣೆಯಿಕ್ಕುತ್ತಲಿವೆ. ಆದರೆ ಸಂಖ್ಯೆ ಸಾಕಷ್ಟು ಇಲ್ಲ.

ಬೆಳುದಿಂಗಳ ರಾತ್ರಿಯಲ್ಲಿ

(ಸಣ್ಣಕತೆ)*

[illegible]

~~ಎಸ್. ಅನಂತನಾರಾಯಣ ಬಿ.ಎ. (ಆನರ್ಸ್)~~

~~ಮೈಸೂರು~~

★

ಆನಂದನ ವೈಯಕ್ತಿಕ ಸ್ವಾರ್ಥ, ಮಾನವತೆಯ ಆದರ್ಶ ಇವುಗಳ ಎಳೆದಾಟವೆ ಇಲ್ಲಿ ಒಂದು ಕತೆಯಾಗಿ ಅರಳಿದೆ. ಅವನ ಸ್ವಾರ್ಥದ ಎಳೆತಕ್ಕೇ ಬಲಸಿಕ್ಕಿದ್ದರೆ, ಪಾಪ ಸೀತಾರಾಮುವಿನ ಬಾಳು?

★

ಸುಕ್ಕುಗಟ್ಟಿದ ಮುಖ. ಕೆನ್ನೆಯ ಮೇಲೆ ಅಲ್ಲೊಂದು ಇಲ್ಲೊಂದು ಕರಿಯ ಗುಪ್ಪು, ಸುತ್ತಲೂ ಕೆನೆಗಟ್ಟಿದಂತೆ ಬಿಳುಪು. ಕಾಂತಿಗೆಟ್ಟು ಗುಳಿಬಿದ್ದ ಕಣ್ಣುಗಳಿಂದ ಮೇಲುದುಟಿಯವರೆಗೂ ಜರ್ಮದ ಕಾಲುವೆ! ಹಣೆಯ ಮೇಲಂತೂ ಹತ್ತಾರಿ ಹೊದೆದ ಮರದ ತುಂಡಿನಂತೆ ಸುರುಳಿ ಸುಳಿಗಳು. ಗದ್ದದ ಮೇಲೂ ಕಪ್ಪಿಟ್ಟ ಒಂದು ಮೊಡವಿ. ಕನ್ನಡಿಯಲ್ಲಿ ಈ ಪ್ರತಿಬಿಂಬವನ್ನೇ—ಒಂದೇಸಮನಾಗಿ—ನೆಟ್ಟ ನೋಟದಿಂದ ದಿಟ್ಟಿಸುತ್ತಿದ್ದ ಆನಂದ. ಹೃದಯ ಉದ್ವೇಗದಿಂದ ಬೀಯುತ್ತಿತ್ತು. ಕೈ ತಾನೇ ತಾನಾಗಿ ಮೇಲೇರಿ, ಮುಖದ ಮೇಲಿನ ಕಪ್ಪು ಚುಕ್ಕೆಯ ಮೇಲಿಳಿಯಿತು. " Not all the perfomes of Arabia can sweaten this little spot " ಎಂದುಕೊಂಡು ತುಸುನಕ್ಕ. ಆದರೆ ಮರು-ನಿಮಿಷವೇ ಮರಳಿತು ಆ ನಗು. ಕನ್ನಡಿಯನ್ನು ಕೈಗೆತ್ತಿಕೊಂಡು ಇನ್ನೂ ಸೂಕ್ಷ್ಮವಾಗಿ ನೋಡಲಾರಂಭಿಸಿದ. ಆ ಚುಕ್ಕಿಯನ್ನೇ ದಿಟ್ಟಿಸಿದಂತೆ, ಕಣ್ಣಿಗೆ ಪೆಲ್ಲನೆ ಬೆಳಕಾಯಿತು. ಆ ಒಂದು ಕಪ್ಪು ಕುಣುಕು ಜರ್ಮದಿಂದ ನೂರು ಸಾವಿರ ಕ್ರಿಮಿಗಳು ಹೊರಟು, ಕೋಟಿರೂಪ ತಾಳಿ, ಕಣ್ಣು ಮುಂದೆ ಕನ್ನಡಿಯಲ್ಲಿ ಕುಣಿದುವು. ಹಲವಂತೂ ಕುಣಿದು ಕುಣಿದು ಆವನನ್ನಣಕಿಸಿದುವು. ಮತ್ತೆ ಕೆಲವು ಕಂಡರೂ ಕಾಣದಂತೆ ತಮ್ಮ ಕೆಲಸದಲ್ಲಿ—ಜರ್ಮ ಕೊರೆಯುವುದರಲ್ಲಿ—ನಿರತವಾದುವು. ಈ ಕನಸು ಒಂದು ಅರೆಚಣ ಕೂಡ ಇಲ್ಲ. ಮರುನಿಮಿಷವೇ ಕನ್ನಡಿಯಲ್ಲಿ ಅದೇ ಆಕೃತಿ! ಆದರೆ ಆನಂದನ ಮನಸ್ಸಿನಲ್ಲಿ ಭೀತಿ-ಬೇಸರಗಳು ಮೈಗೂಡಿದ್ದುವು. ಹೀಗೆಯೇ ಆದರೆ? ಹೀಗೆಯೇ ಬಿಟ್ಟರೆ! ಮೈಕೈಯೆಲ್ಲಾ ಹೀಗೆಯೇ ಆಗುವುದಲ್ಲಾ! ತನಗರಿವಿಲ್ಲದೆಯೇ ಆನಂದ ತನ್ನ ಕೈ ನೋಡಿಕೊಂಡ. ಬೆರಳುಗಳಲ್ಲಿ ಗಂಟುಗಳಲ್ಲೆಲ್ಲಾ ಕಪ್ಪು ಚುಕ್ಕಿಗಳು; ಸಂದುಗಳಲ್ಲೆಲ್ಲಾ ಕಪ್ಪು! ಆದಕ್ಕೇ ಮತ್ತೆ ಆ ಸಂನ್ಯಾಸಿ ತನ್ನಿಂದ ಕಾಸನ್ನು ತೆಗೆದುಕೊಳ್ಳಲು ಒಪ್ಪದಿದ್ದುದು. ಆದರೆ ಹೀಗಾದುದು ತನ್ನ ತಪ್ಪೇ? ತಾನು ಅಂತಹ ಹೇಯಕಾರ್ಯವನ್ನು ಮಾಡಿದ್ದರೆ ತಾನೇ! ಎಲ್ಲಾ ಕನ್ನ ತಂದೆಯ ಪ್ರಸಾದ! ಅವರು ತಮ್ಮ ಯೌವನದಲ್ಲಿ ನಡೆಸಿದ ರಸಿಕ ಜೀವನಕ್ಕೆ, ವಿಧಿಯ ಪ್ರತೀಕಾರ ತನ್ನಮೇಲೆ! ಆನಂದನಿಗೆ ಈ ನೋವಿನಲ್ಲೂ ನಗು ಬಂತು. ಆದು ವಿಚಿತ್ರಾಕಾರದ ನಗೆ.... ದೇವರು! ಆ ದೇವರೊಂದು ವಿಚಿತ್ರಪ್ರಾಣಿಯೆ ಇರಬೇಕು. ಯಾರ ತಪ್ಪಿಗೋ ಮತ್ತಾರಿಗೋ ಶಿಕ್ಷೆ, ಯಾರ ಲೀಲೆಗೋ ಯಾರೋ ಗೊತ್ತುಗುರಿಯಿರದೆ ಬಿಟ್ಟ ಜಾಣಕ್ಕೆ, ಯಾರೋ ಶುತ್ತು! ಇದೇ ಹಾಳು ಜೀವನದ ನಿಯಮ. ಆದರೆ-ಆದರೆ-ತಂದೆಯನ್ನು ಅಂದು ಏನೂ ಪ್ರಯೋಜನವಿಲ್ಲ. ಸತ್ತು ಹೋದವರೆಲ್ಲ ಸ್ವರ್ಗಕ್ಕೇ ಸೇರಿದರೆಂದುಕೊಳ್ಳುವುದು ನಮ್ಮ ಭ್ರಾಂತಿ. ಅವರ ತಪ್ಪುಗಳನ್ನೆಲ್ಲ ನಾವು ಮರೆತು ಬಿಡಬೇಕಲ್ಲವೇ? ನಿಜ. ಆದರೆ ಆ ತಪ್ಪು ನಮ್ಮ ಜೀವನವನ್ನೇ—ನಮ್ಮ ಸುಖವನ್ನೇ ತುಂಡು ಹಾಕಿದರೆ!

ಆನಂದನ ತಂದೆ ಅರಮನೆಯಲ್ಲಿ ಪುರೋಹಿತರು. ಅವರು ಚಿಕ್ಕತನದಲ್ಲಿ ತಮ್ಮ ತಂದೆಯೊಂದಿಗೆ ಅರಮನೆಗೆ ಹೋಗಿ ಬರುತ್ತಿದ್ದರು. ಅಲ್ಲಿಯ ನೀತಿ, ಗಾಂಭೀರ್ಯ, ರಸಿಕತೆಯೆಲ್ಲ ಅವರ ಮನಸ್ಸನ್ನು ಸೆಳೆದುವು. ಜತೆಗೆ ಮನೆಯಲ್ಲಿ ಅವರಿಗೂ ಅರಮನೆಯ ರಾಜೋಪಚಾರ! ಹಾಲು-ಕುಪ್ಪದಲ್ಲಿ ಕೈತೊಳೆಯುವಂತಿತ್ತು ಆಸ್ತಿ! ಆನಂದನ ಆಬ್ಬನೇನೋ ಮಗನಿಗೆ ಬೇಗ ಮದುವೆಮಾಡಿದರು; ಆದರೆ ಆನಂದನ ತಂಪಿಗೆ ಅದರಿಂದ ಸಾಕಷ್ಟುಸುಖ ಸಿಕ್ಕಲಿಲ್ಲ ಎಂದರೆ ಆನಂದನ ತಾಯಿ ಗೌರಮ್ಮ—ಹಳ್ಳಿಯಹುಡುಗಿ. ಬಡವರ ಮನೆಯಲ್ಲಿ ಹುಟ್ಟಿ ಜೆಳೆದವರು. ಸಾಕಷ್ಟು ಮೈತುಂಬಿಕೊಂಡಿರಲಿಲ್ಲ. ಅವಳ ಸಂಗದಿಂದ ಆನಂದನ ತಂದೆಗೆ ಬಯಸಿದಷ್ಟು ಸುಖ ಸಿಕ್ಕಲಿಲ್ಲ. ಬೇಗೋ ಏನೋ—ಬಹುಕಾಲ ತಮ್ಮನ್ನು ತಾವೇ ಹಿಡಿತದಲ್ಲಿಟ್ಟುಕೊಂಡಿದ್ದರು. ಆದರೆ ಅದು ಬಹುಕಾಲ ಸಾಗದಾಯಿತು ಜತೆಗೆ ಅರಮನೆಯಲ್ಲಿಯೂ ಇದಕ್ಕೆ ಉತ್ತೇಜನ. ತಾಫೆಯವರು, ಸಂಗೀತದವರು, ಬೇರೆ ಬೇರೆ ದೇಶದಿಂದ ಅರಮನೆಗೆ ಬಂದಾಗ, ಆನಂದನ ತಂದೆಯ ಕಣ್ಣು ಒಂದಲ್ಲ ಒಂದು ಪಾರಿವಾಳದ ಮೇಲೆ ಬೀಳುತ್ತಿತ್ತು. ಆದರೆ ಹೇಗೋ ಏನೋ, ಪಾರಿವಾಳ ಕೈಗೆ ಸಿಕ್ಕದೆ ನುಣುಚಿಕೊಳ್ಳುತ್ತಿತ್ತು. ಆದರೆ ಒಂದೆರಡು ಬಾರಿ ಮಾತ್ರ ಅವರಿಗೆ ಅನುವು ದೊರೆಯಿತು. ಪರ್ಧಂತಿಗೆಂದು ಮಲಯಾಳ ದೇಶದಿಂದ ಕೆಲವರನ್ನು ಕುಣಿಯಲು ಕರೆಯಿಸಿದ್ದರು. ಅವರಲ್ಲೊಬ್ಬಳು ಅತಿಸುಂದರಿ. ಆವಳ ಸೌಂದರ್ಯ ಶಾಂತಿಯ ನೆರಳು-

* ಜಯಂತಿಯು ಸಣ್ಣಕತೆಗಳ ಮೇಲಾಟದಲ್ಲಿ ಒಲ್ಲೆಯು ಕತೆಯೆಂದು ಪರಿಗಣಿತವಾಗದಿದ್ದರೆ ಕೈ ಬರಹ ಸ್ಪಷ್ಟವಾಗಿದ್ದರೆ, ಈ ಕತೆಯೂ ಮೇಲಿನ ಸ್ಥಾನಕ್ಕೆ ಅರ್ಹವಾಗಬಹುದಾಗಿತ್ತು. ಸಂ. ಜ.

ನೀಡುವಂತಹುದಲ್ಲ; ಕಾಮ ಕೆರಳಿಸುವಂತಹುದು. ಆನಂದನ ತಂದೆ ಈ ಪಾರಿವಾಳಕ್ಕಾಗಿ ಬಹಳ ಒದ್ದಾಡಿದರು. ಒಂದು ರಾತ್ರಿ—ಬೆಳುದಿಂಗಳ ರಾತ್ರಿಯಲ್ಲಿ—ಬಿಟ್ಟುವನ್ನಿಳಿದು ಬರುತ್ತಿರುವಾಗ, ಬಸವನ ಹತ್ತಿರ ಆ ನರ್ತಕಿಯರು ಬಹಳ ಬೇಸರುಗೊಂಡು ಕುಳಿತಿದ್ದರು. ಆನಂದನ ತಂದೆ ಅವರನ್ನು ಕಂಡೊಡನೆ ನಿಂತರು. ಆಸ್ಥಾನದವರೆಂದಮೇಲೆ ಗೌರವ. ಮಾತುಕತೆ. ಬೆಳುದಿಂಗಳು ನವಿರಾಗಿ ಹಾಸಿತ್ತು. ಯೌವನದ ಕಾವು ರಕ್ತದಲ್ಲಿತ್ತು. ಕಣ್ಣುಗಳಲ್ಲಿ ಉದ್ರೇಕ ಮೂಡಿತ್ತು. ಪಾರಿವಾಳ ತೋಳ ತೆಕ್ಕೆಗೆ ಬಿದ್ದಿತು. ಅಂದಿನಿಂದ ಆನಂದನ ತಂದೆಯ ರಸಿಕತೆಗೆ ಮೇರೆಯೇ ಇಲ್ಲದಾಯಿತು. ಸಾಯುವಪರ್ಯಂತ ಅವರು ದೇಹಕ್ಕೆ ಯಾವ ಬಗೆಯ ಹಿಡಿತವನ್ನೂ ಹಾಕಲಿಲ್ಲ. ಅವರ ರಸಿಕತೆಯ ಅನುಭವದ ಫಲ—ವಿಷಫಲ—ವನ್ನನುಭವಿಸುವವನು ಅವರ ಮಗ ಆನಂದ!— ಅದೂ ಒಬ್ಬನೇ ಮಗ!

ಆನಂದ ಕನ್ನಡಿಯನ್ನು ತೆಗೆದು ಗೋಡೆಗೆ ತೂಗುಹಾಕಿದ. ತೂಗುಹಾಕುತ್ತಾ ಮತ್ತೊಮ್ಮೆ ತನ್ನ ಪ್ರತಿಬಿಂಬವನ್ನೇ ನೋಡಿಕೊಂಡ. ಇನ್ನೂ—ತನಗಿನ್ನೂ ೨೬ ವರ್ಷ. ಯಾವುದನ್ನೂ ತಿನ್ನು-ಭವಿಸಿಲ್ಲ. ಯಾವ ಬಗೆಯ ಸುಖವನ್ನೂ ಕಂಡಿಲ್ಲ. ಆದರೆ ಆಷ್ಟರಲ್ಲೇ ಈ ಹಾಳುರೋಗ ತನ್ನನ್ನು ಕಿತ್ತು ತಿನ್ನುತ್ತಿದೆ. ತನ್ನ ಆಶೆಗಳೆಲ್ಲ ಹುಡಿಗನಸುಗಳು. ಸುಖವಾಗಿ ಮದುವೆಯಾಗಿ ಚೆಲುವೆಯೊಂದಿಗೆ ಚೆಂದದ ಸಂಸಾರ ಸಾಗಿಸುವ ಆಶೆ ಹೃದಯದಲ್ಲೇ ಹುಡಿಯಾಯಿತು. ಆ ಹೃದಯದ ಹುಡಿಗನಸನ್ನು ಮತ್ತೆ ಕೂಡಿಸಲೆಲ್ಲಿ ಸಾಧ್ಯ? ಮತ್ತೆ—ಜೀವನ ಹೀಗೆಯೇ ಮುಗಿಯಬೇಕೇ? ಈ ಹಾಳು ರೋಗ ದಿನೇ ದಿನೇ ಹೆಚ್ಚಾಗಿ ತನ್ನ ವೈಭವನ್ನೆಲ್ಲಾ ಮುಚ್ಚಿದಾಗ—ತಾನೊ ಕಪ್ಪು ಬಿಳುಪುಗಳ ಚಿತ್ರಾನ್ನ—ನೆಳಲು ಬೆಳಕು! ಅಬ್ಬಾ! ಈಗ ಅನುಭವಿಸುತ್ತಿರುವ ನರಕಯಾತನೆಯೇ ಸಾಕೋ ಸಾಕಾಗಿದೆ ಇನ್ನು ಆದರ ಕಲ್ಪನೆಯೆ? ಸಾಕು! ಹೇಗಾದರೂ ಮಾಡಿ ಇದರಿಂದ ತಪ್ಪಿಸಿಕೊಳ್ಳಲೇ ಬೇಕು! ಆದಕ್ಕೆಂದೇ ಆ ಸಂನ್ಯಾಸಿಯನ್ನು ಹಿಂಬಾಲಿಸಿದುದು. ತಾನು ಕಾಸು ಕೊಡಲು ಹೋದಾಗ ಕೈ ಹಿಂದೆಗೆದ. ಆ ಸಂನ್ಯಾಸಿಯ ಹಿಂದೆ ಹಿಂದೆಯೇ ಹೋಗಿ,ಅವನ ಕಾಲಿಗೆ ಬಿದ್ದು, ಈ ರೋಗಕ್ಕೆ ಮದ್ದು ಕೇಳಿದುದು. ತಾನು ನಾಗರಿಕ ಯುವಕ; ಪದವೀಧರ! ಸಂನ್ಯಾಸಿಯ ಕಾಲಿಗೆ ಬಿದ್ದುದು. ಬೇರೇನು ತಾನೇ ಮಾಡಲಾದೀತು? ವೈದ್ಯರು, ಡಾಕ್ಟರುಗಳೆಲ್ಲಾ ಇವಕ್ಕೆ ಮದ್ದು ಕೊಡುವ ನೆಪದಲ್ಲಿ ಹಣ ಕಸಿದುಕೊಂಡಿದ್ದರೇ ಹೊರತು, ಗುಣ ಮಾತ್ರ ತೋರಿಸಿರಲಿಲ್ಲ.ಇನ್ನೇನೂ ತೋರದೆ ಆ ಸಂನ್ಯಾಸಿಯನ್ನು ಮೊರೆಹೊಕ್ಕಿದ್ದ. ಕೊನೆಗೆ ಸಂನ್ಯಾಸಿ ತನ್ನ ಮೇಲೆ ಕರುಣೆಯಿಟ್ಟು ಒಂದು ಮದ್ದು ಕೊಟ್ಟಿದ್ದ. ಮದ್ದು! ಅಬ್ಬಾ! ಸ್ವಾರ್ಥ! ಹುಂ! ಸುಖಬಯಸುವುದೂ ಸ್ವಾರ್ಥವೇ ಅಲ್ಲವೆ? ಜೀವಿಸಿರುವುದೂ ಸ್ವಾರ್ಥವೇ ಅಲ್ಲವೇ? ಪ್ರಪಂಚದ ಅಡಿಗಲ್ಲೇ ಸ್ವಾರ್ಥ. ಒಬ್ಬನ ಸುಖ, ಇನ್ನೊಬ್ಬನ ಕಷ್ಟದಿಂದಲೇ ಸಾಧ್ಯ—ಈ ಕೆಟ್ಟ ಪ್ರಪಂಚದಲ್ಲಿ! ತನ್ನ ಸುಖಕ್ಕಾಗಿ ಇನ್ನೊಬ್ಬನ ಸುಖ ಬಲಿಕೊಡಲೇ ಬೇಕು.ತನ್ನ ಆಶೆಗಳು ಪೂರಯಿಸಬೇಕಾದರೆ, ಮತ್ತೊಬ್ಬರ ಆಶೆಗಳು ಪುಡಿಯಾಗಲೇ ಬೇಕು. ಹುಂ, ಆದಕ್ಕೆ ಮಣಿಯಬೇಕು. ಇಲ್ಲದಿದ್ದರೆ ತನ್ನ ಜಯಕೇಳಿಗಳನ್ನೆಲ್ಲಾ ಒಟ್ಟು ಸುಡಬೇಕು! ಹೃದಯ ಸಾವಿರ ಆಶೆಗಳ ಶವಗಳ ಸ್ಮಶಾನಭೂಮಿಯಾಗಬೇಕು! ಆದರೆ ತನ್ನಂತೆಯೆ ಉಳಿದವರೂ ಅಲ್ಲವೇ? ಅವರಿಗೂ ಇದೇ ಬಗೆಯ ಆಶೆಗಳಿರುವುದಿಲ್ಲವೇ? ತನಗಿರುವಂತೆಯೆ ಮದುವೆ, ಸಂಸಾರ, ಮಕ್ಕಳು, ಸುಖಗಳ ಆಶೆ ಪ್ರತಿಯೊಬ್ಬನಿಗೂ ಇರುವುದಲ್ಲವೆ; ತನ್ನ ಆಶೆಗಾಗಿ ಮತ್ತೊಬ್ಬನನ್ನು ಮಣ್ಣು ಮಾಡುವುದು ಸರಿಯೇ? ಹೀಗಾಗಿ, ಈ ಚಿಂತೆಯಲ್ಲಿ ಆನಂದನ ಮನಸ್ಸು ಬಹಳ ಒದ್ದಾಡಿತು. ಮನಸ್ಸು ತುಂಬಾ ಜಂಜಿಲು; ಒಂದು ಬಾರಿ ಸಂನ್ಯಾಸಿಯ ಮಾತನ್ನು ಒಪ್ಪಿಕೊಳ್ಳೋಣವೆನಿಸುತ್ತಿತ್ತು. ಆದರೆ ಮರುಕ್ಷಣವೇ ತನ್ನಿಂದ ಮುಂದೆ ಕನ್ಯವನ್ನನುಭವಿಸಬೇಕಾಗುವವನ ಮೇಲಿನ ಮರುಕದಲ್ಲಿ ಬೇಡವೆನಿಸುತ್ತಿತ್ತು. ಹೀಗಾಗಿ ಆನಂದನ ಮನಸ್ಸು ಗಡಿಯಾರದ ತೂಗುಗುಂಡಿನಂತೆ. ಹೀಗಿಂದ ಹಾಗೆ ತೂರಾಡುತ್ತಿತ್ತು. ಆದರೆ ಸಂನ್ಯಾಸಿಗೆ ಉತ್ತರ ಕೊಡಬೇಕಾಗಿತ್ತು ಅವನನ್ನು ಬೇಡವೆನ್ನಬೇಕಾಗಿತ್ತು. ಕೈ ತಾನಾಗಿಯೇ ಮುಂದೆ ನೀಡಿತ್ತು. ಸಂನ್ಯಾಸಿ ಹಿಡಿಯಲ್ಲಿ ಹಾಕಿದ ತಾಯಿತವನ್ನು ಭಕ್ತಿಭಾವದಿಂದ ಹಿಡಿದುದೂ ಆಗಿತ್ತು.

ಆನಂದ ಜೇಬಿನಿಂದ ಆ ತಾಯಿತವನ್ನು ಹೊರಗೆತ್ತಿಕೊಂಡ. ಇದೇ ತನ್ನ ಕಾಯಿಲೆಗೆಲ್ಲ ಮದ್ದು! ತನ್ನನ್ನು ತಿನ್ನುತ್ತಿರುವ ಈ ಮಹಾರೋಗಕ್ಕೆ ಔಷಧ! ಮೃತ್ಯು! ಆದರೆ ಈ ರೋಗಕ್ಕೊಂದಕ್ಕೇ ಅಲ್ಲ-ಮತ್ತಾವುದಕ್ಕೋ ಮೃತ್ಯು! ಈ ತಾಯಿತವನ್ನು ಬೆಳುದಿಂಗಳ ರಾತ್ರಿಯಲ್ಲಿ ಯುವಕನೊಬ್ಬನಿಗೆ ಕಟ್ಟಬೇಕು. ಆಗ ಆ ಯುವಕನಿಗೆ ತನ್ನ ರೋಗ ಹೋಗುವುದು; ತಾನು ಉಳಿದುಕೊಳ್ಳುವೆನು. ಆದರೆ ಯುವಕ? ಅವನ ಗತಿ? ಇಷ್ಟಾಗಿ ಯಾವ ಯುವಕನನ್ನು ಹುಡುಕುವುದು? ನಿನ್ನೆ ರಾತ್ರಿಯೆಲ್ಲಾ ಅದೇ ಯೋಚನೆಯಾಗಿತ್ತು. ಜತೆಗೆ ಮನಸ್ಸಿನಲ್ಲಿ ತಿಕ್ಕಾಟ. ತನ್ನ ಒಂದು ಆಶೆಗಾಗಿ ಮತ್ತೊಂದು ಯುವಕ ಹೃದಯದ ಬಲಿ! ಎಂತಹ ಅನ್ಯಾಯ! ಆದರೆ ಬೇರೆ ಹಾದಿಯೇ ಇಲ್ಲ. ಹೀಗಾಗಿ ರಾತ್ರಿಯೆಲ್ಲಾ ಹೀಗಿಂದ ಹಾಗೆ ಒದ್ದಾಡಿದ. ಬೆಳಿಗ್ಗೆ ಏಳುವಾಗ ಮನಸ್ಸಿನ್ನೂ ಕುಲುಮೆಯಲ್ಲಿತ್ತು!

ಬೆಳಿಗ್ಗೆಮುಖ ತೊಳೆಯಲು ಕಿಟಕಿಯಿಂದ ಕೊರಗೆ ನೋಡಿದಾಗ, ಎದುರು ಮನೆಯ ಹೆಣ್ಣು ಎರೆದುಕೊಂಡು, ತಲೆಗೂದಲಿನ ಎಳೆಯೆಳೆಗಳನ್ನು ಬಿಸಿಲಿನಲ್ಲಿ ಹರವುತ್ತಿದ್ದುದು ಕಾಣಿಸಿತು. ಕಣ್ಣು ಅಲ್ಲಿಯೇ ನಿಂತಿತು. ಹೃದಯ ನಿಂತಂತಾಯಿತು. ಬೀದಿಯಲ್ಲಿ ದೂರದಲ್ಲಿ ಚೆಂದುಳ್ಳಿಯ ಹೆಣ್ಣು ಹಾದು ಹೋಗಲು ರಕ್ತ ಮಿಡಿಯುತ್ತಿತ್ತು. ಈಗಂತೂ ಎದುರಿಗೇ ಆ ಹೆಣ್ಣು—ಎಷ್ಟು ನೋಡಿದರೂ ಮತ್ತೆ ನೋಡಬೇಕೆನಿಸುವ ಹೆಣ್ಣು! ಅವಳನ್ನೇ ದಿಟ್ಟಿಸಿ ನೋಡುತ್ತಿದ್ದಂತೆ: 'ಇಂತಹ ಒಂದು ಹೆಣ್ಣಿಗಾಗಿಯಾದರೂ

ಜೀವಿಸಬೇಕು; ಸುಖಬಯಸಬೇಕು!'ಎನಿಸಿತ್ತು! ಅದಕ್ಕೆ ಒಂದೇ ಮಾರ್ಗ! ಆ ತಾಯತ! ಅದನ್ನು ಯುವಕನೊಬ್ಬನಿಗೆ ಕಟ್ಟಬೇಕು; ಬೆಳುದಿಂಗಳ ರಾತ್ರಿಯಲ್ಲಿ—ಅಂದು ರಾತ್ರಿ!

ಬೆಳಿಗ್ಗೆ ಎಂದಿನಂತೆಯೇ ಹೋಟೆಲಿಗೆ ಹೋಗಿ ಕಾಫಿ ಕುಡಿದು ಬರುವಾಗ, ದಾರಿಯಲ್ಲೇ ಸೀತು ಸಿಗಬೇಕೇ? ಸೀತು—ಸೀತಾರಾಮು ಸುಂದರ ಯುವಕ. ಅವನೂ ಆನಂದನ ಜತೆಯವನೇ. ಇಬ್ಬರೂ ಒಂದಿಗೇ ಓದಿದವರು. ಈಗ ಸೀತುವೂ ಆನಂದನಂತೆಯೇ ಕೆಲಸಕ್ಕಿದ್ದ. ಯಾವ ಹೆಣ್ಣಾದರೂ ಒಲಿಯುವಂತಹ ರೂಪವಿತ್ತು ಅವನಿಗೆ. ಕಾಲೇಜಿನಲ್ಲಿದ್ದಾಗ ಅವನನ್ನು ತಾವೆಲ್ಲ ಹಾಸ್ಯಮಾಡುತ್ತಿದ್ದರು:— "ಸೀತು, ನೀನು ಹಾದುಹೋದರೆ ಸಾಕು; ಎರಡು ಪಕ್ಕಗಳಲ್ಲಿಯೂ ಸುಮ್ಮನೆ ಪಟ ಪಟ ಎಂದು ಸದ್ದಾಗುತ್ತದೆ ಹೆಣ್ಣುಹೃದಯಗಳನ್ನು ಹಾಗೆ ಒಡೆಯಬಾರದು" ಎಂದು ನಗೆಯಾಡುತ್ತಿದ್ದರು. ಸ್ಫುರದ್ರೂಪಿ ಸೀತುವನ್ನೇ ತನಗೆ ಬದಲು!—ಛೆ! ಎಂತಹ ಯೋಚನೆ! ಅಂತಹ ಯೋಚನೆ ಕನಸಿನಲ್ಲಿಯೂ ಬರಕೂಡದು.... ಎಂದುಕೊಂಡ. ಸೀತುವನ್ನೇನೋ ನಗುನಗುತ್ತಲೇ ಮಾತನಾಡಿಸಿದ. ಆದರೆ ಆ ನಗೆಯಲ್ಲಿ ಮಾತ್ರ ಕೊಂಚವಾದರೂ ಸಹಜತೆಯಿರಲಿಲ್ಲ. ಸೀತು ಹೊರಟುಹೋದ ಮೇಲೂ ಒಂದೇಸಮನಾಗಿ ಅದೇ ಯೋಚನೆ: 'ಸೀತುವೇ ಯಾಕಾಗಬಾರದು? ಯಾಕಾಗಬಾರದು?' ಎಷ್ಟೇ ಬೇಡಬೇಡವೆಂದುಕೊಂಡರೂ ಮತ್ತೆ ಅದೇ ಚಿಂತೆ ತಲೆಯೊಳಗೆ ಸುಳಿಯುತ್ತಿತ್ತು: 'ಯಾಕಾಗಬಾರದು? ಯಾಕೆ ಕೂಡದು?' ಎಂದು ಮನಸ್ಸು ಕೇಳುತ್ತಿತ್ತು. 'ಇವತ್ತಾಗಿ ಸೀತುವಿಗೂ ನನಗೂ ಏನು ಸಂಬಂಧ? ಕಾಲೇಜಿನಲ್ಲಿ ಎರಡು ವರ್ಷ ಜತೆಯಾಗಿ ಓದಿದ್ದು—ಹೆಚ್ಚೇ ಆಯ್ತೇ! ಆಗ ಏನೋ ಸ್ನೇಹ ಹಾಗೆಯೇ ಉಳಿದಿತ್ತು. ಅದೇನು ಮುಖಾ? ರೈಲಿನಲ್ಲಿ ಕುಳಿತು ನಾಲ್ಕು ಗಂಟೆಗಳ ಕಾಲ ಜೇಸರ ಕಳೆಯಲು, ಅಲ್ಲಿಯೇ ಸ್ನೇಹ ಉಮ್ಮರಿಸಿಕೊಳ್ಳುವುದಿಲ್ಲವೇ? ಆ ಹೊತ್ತಿಗೆ ಅವರೆಲ್ಲೋ ನಾನೆಲ್ಲೋ! ಅವರಿಗಾಗಿ ಕೊರಗುವುದರಿಂದ ನನಗೆಂಥ ಲಾಭವಾಗಬಲ್ಲದು? ಇಂದು ಜತೆ; ನಾಳೆ? ನಾಳೆಯ ವಿಷಯ ನಾಳೆಗೇ! ಎಂದ ಮೇಲೆ ಸೀತುವಿಗಾಗಿ ಯಾತಕ್ಕೆ ಸಂಕಟಪಡಬೇಕು? ಅವನನ್ನು ನನ್ನ ಆಟದಲ್ಲಿ ಬಾಣಕ್ಕೆ ಗುರಿಯಾಗಿ ಯಾಕೆಡಬಾರದು? ಅವರಲ್ಲೇನು ತಪ್ಪು? ಹಾಗಿದ್ದರೆ ಅವನೆ ಜೀವನವನ್ನೇ ಹಾಳುಮಾಡಿದಂತಲ್ಲವೇ? ಅದು ಪಾಪವಲ್ಲವೇ? ಪಾಪ! ನಿಜ. ಆದರೆ ನಾನನುಭವಿಸುತ್ತಿರುವುದು! ಆ ನೆನೆಸೋವನ್ನು ನೆನೆದೇ ಸಾಕು. ಪಾಪ-ಪುಣ್ಯಗಳೆಲ್ಲಾ ಬರಿಯ ಸಾಮಾನ್ಯರ ಕಾಳಜಿ!.....' ಅಂತೂ ಮನಸ್ಸು ಏನು ಮಾಡಿದರೂ ಸ್ಥಿಮಿತಕ್ಕೆ ಬರಲಾರದು. ಒಂದು ಬಗೆಯ ಆಳುಕು, ಆತಂಕ! ಮಧ್ಯಾಹ್ನವೆಲ್ಲಾ ತೂಕಾಟ, ತಾಕಲಾಟ; ಯಾವ ತೀರ್ಮಾನವೂ ಇಲ್ಲ.

ಆನಂದ ಕನ್ನಡಿಯನ್ನು ತಗುಹಾಕಿದವನು. ತಲೆಕೊಡವಿಕೊಳ್ಳುತ್ತಾ ಕಿಟಕಿಯ ಬಳಿ ಕುಳಿತ. 'ಇಂದೇ ಹುಣ್ಣಿಮೆ. ಇಂದು ಈ ತಾಯತ ಕಟ್ಟಿದ್ದರೆ ಮತ್ತಿನ್ನು ಒಂದು ತಿಂಗಳು! ಅಬ್ಬಾ, ಒಂದೊಂದು ನಿಮಿಷವೇ ಒಂದೊಂದು ಯುಗವಾಗಿ ಪರಿಣಮಿಸಿರುವಾಗ, ಒಂದು ತಿಂಗಳು! ಮತ್ತೆ? ಸೀತುವನ್ನೇ ಕರೆಯಬೇಕು. ಅವನಿಗೆ ತಾಯತ ಕಟ್ಟಿದರೆ— ನನ್ನ ರೋಗ ವಾಸಿಯಾಗಿ ನಾನು ದೃಢಕಾಯನಾಗುತ್ತೇನೆ. ನನ್ನ ಕೋಣೆಯಲ್ಲಿಯೂ ಹೆಣ್ಣಿನ ಮಧುರಧ್ವನಿಯ ಸಂಗೀತದ ಸೌಂದರ್ಯದ ಬಲೆ ನೇಯುತ್ತದೆ!' ಎಂದು ಕಲ್ಪನೆಯಲ್ಲೇ ಚಿತ್ರಕಟ್ಟುತ್ತಾ ಹೊರಕ್ಕೆ ನೋಡಿದ.

ಸಂಜೆಯಾಗುತ್ತಿತ್ತು. ಪಶ್ಚಿಮದಲ್ಲಿ ಸೂರ್ಯ ಮೆಲ್ಲನೆ ಮಾಯುವಾದ. ದಿಗಂತದ ಅಂಚಿನಲ್ಲಿದ್ದ ಕಪ್ಪು ಹೊಗೆಯ ನಡುವೆ ಒಂದೊಂದು ಕೆಂಪು ಜ್ವಾಲೆಯ ನೆರಳೂ ಇಣುಕುತ್ತಿತ್ತು. ಆ ನೆರಳಿನ ನಸುಬೆಳಕಿನಿಂದ ಅಲ್ಲೊಂದು ಇಲ್ಲೊಂದು ಮೋಡ, ಕೆಂಪು ರಂಗಿನ ಸೀರೆಯನ್ನುಟ್ಟಂತಿತ್ತು. ಕಪ್ಪಿನ ಪಕ್ಕಕ್ಕೆ ಒಂದಷ್ಟು ದೂರದಲ್ಲಿ—ಕೆಂಪು ಮರಳು ಜೆಲ್ಲಿದ ಮಹಾ ಮೈದಾನದಂತೆ—ಆಕಾಶ ಸುಂದರವಾಗಿ ಕರೆಯುತ್ತಿತ್ತು. ಅಲ್ಲಿಯೇ ಒಂದು ಬಳುಕುವೋಡ. ಅಡಿಯಂಚು ಕಡುನೀಲ, ನಡುವಿಗೆ ಸಾರಿದ ಹಾಗೆ ಆಕಾಶನೀಲ ಸೆರೆಬಣ್ಣ ಮಾಯಜಾಲ! ಮುಡಿಯ ಕಡೆಗೆ ನೋಡಿದರೆ, ಬಣ್ಣ ಬಣ್ಣದ ಹೂವನ್ನು ಮುಡಿವ ಹುಡುಗಿಯ ಬೆನಗುಜಡೆಯಂತೆ ತೋರಿತು ಮೋಡ. ಆನಂದನ ಕಣ್ಣಿನಿಂದೊಂದು ಹನಿ ನೀರು ಹೊರಳಿತು. ಉಸಿರು ನೀಳವಾಗಿ ಉರುಳಿತು ಕಣ್ಣು ತಗ್ಗಿತು.

ಆನಂದ ಕಣ್ಣೊರೆಸಿಕೊಂಡ. ಕಣ್ಣೀರಿನ ತೆಳುಪರೆ ಕಳಚಿತು. ಬೀದಿಯಲ್ಲಿ ಚಿದೇ ಹುಡುಗಿ—ಆ ಹುಡುಗಿ! ತಾನು ಪ್ರತಿದಿನವೂ ಕಾಣುತ್ತಿದ್ದವಳು, ಕಾಣಬಯಸುತ್ತಿದ್ದವಳು. ಅವಳನ್ನು ಕಂಡೊಡನೆಯೇ ಮೈಮನಸ್ಸು ಜೀವೆನ್ನುತ್ತಿತ್ತು. ಒಳಕ್ಕೆ ಕಲ್ಲುಬಿದ್ದಾಗ ಏಳುವಂತೆ ನೂರು ತರಂಗಗಳೇಳುತ್ತಿದ್ದುವು ಅವಳನ್ನು ಒಂದು ದಿನವಾದರೂ ಕಾಣದಿದ್ದರೆ, ಮನಸ್ಸು ಕಾವಲಿಯ ಮೇಲಿನ ಮೀನೆಯಂತೆ ಚುರುಗುಟ್ಟುತ್ತಿತ್ತು. ಅವಳ ಆ ನಡಿಗೆಯ ಗಾಂಭೀರ್ಯ, ಆ ಕಣ್ಣಿನ ನೋಟದ ಮಿಂಚಿನಲ್ಲಿ ಕೂಡಿಕೊಂಡ ಮೊಸ ಹಾಸ ಹೊದ್ದಿಸಿದ ಎಳೆಯ ನಗು ನುಣುಪಕ್ಕೆ ಕೊಡುವ ಪೆರುಗು, ಹೆಜ್ಜೆ ಹೆಜ್ಜೆಯಿಡುವಾಗಲೂ ಮೊಣಕಾಲಿಗೆ ತಗುಲಿ ಪುಟಿನೆಗೆದು ನರ್ತ್ತ ಬೀಳುವ ನಿಡುಜಡೆ, ಅವಳ ನಿಲುವು, ಪುಸ್ಸಟಿ ಚಿಕ್ಕತಿ, ಅವಳ ತೆಳುದೇವಿಯ ಸೀರೆಯಲ್ಲಿ ಕಾಣುವ ಪರಿಪೂರ್ಣರೂಪದ ಸನುಸೃಷ್ಟಿ—ಆನಂದನನ್ನು ಸೆಳೆದಿದ್ದುವು. ಹೃದಯವನ್ನು ಯಾವುದೋ ಶೃಂಗಾರರಸದ ಕಡಲಿನ ಅಲೆಗಳಂಚಿಗೆ ತುಯ್ಯುತ್ತಿದ್ದುವು. ಈಗಂತೂ ಆನಂದನ ಎದೆಯ ಬಡಿತ ನಿಂತೇ ಹೋದಂತಾಗಿತ್ತು. ರಕ್ತಮಾತ್ರ ಕುದಿಯುತ್ತಿತ್ತು. 'ಈ ಹಕ್ಕಿಯನ್ನು ತಾನು ಮುದ್ದಿಡಬೇಕು; ಎದೆಗವಚಿಕೊಳ್ಳಬೇಕು; ಆಗ ಬಲುದಿನಗಳ ಬಯಕೆ ಕೈಗೂಡುತ್ತದೆ; ಅದು ನನ್ನ ಕೈಯಲ್ಲದೆ!' ಎಂದಿತು ಮನಸ್ಸು. ಆದರೆ ಮತ್ತೆ ಹಿಂದೇಟು. ಅವಳು ರಸ್ತೆಯ ಕೊನೆಯಲ್ಲಿ ಮರೆಯಾಗುವವರೆಗೂ ಸುಮ್ಮನೆ ಕುಳಿತಿದ್ದ. ಅವಳನ್ನೇ ದಿಟ್ಟಿಸುತ್ತಾ ಮನಸ್ಸು

ವಿಹ್ವಲ—ಚಂಚಲವಾಗಿತ್ತು. ಕೋಣೆಯ ತುಂಬಾ ಕತ್ತಲು ಕವಿದಿತ್ತು!

ಆನಂದ ದೀಪ ಹಾಕದೆ ಹಾಗೆಯೇ ಕಣ್ತೆರೆದು ಕುಳಿತಿದ್ದ. ಮನಸ್ಸಿನ ಮುಂದೆ ಎರಡು ಚಿತ್ರಗಳು. ಸೀತುವಿನ ಆಕೃತಿ—ಪಕ್ಕದಲ್ಲೇ ಆ ಹುಡುಗಿಯ ರೂಪ! ಒಂದನ್ನಳಿಸಬೇಕು. ಒಂದನ್ನುಳಿಸಬೇಕು. ಎರಡರಲ್ಲಿ ಒಂದನ್ನಿರಿಸಬೇಕು. ಮಹಾ ಸಮಸ್ಯೆ! ಆ ಹೆಣ್ಣು—ಸುಂದರ ಹೆಣ್ಣು—ತನ್ನಿಲ್ಲ ಹೃದಯದ ಆಶೆಗಳ ಮೂರ್ತಿ. ಸೀತುವಿಗಾಗಿ ಆ ಹೆಣ್ಣನ್ನು ಬಿಡುವುದೆಂದರೆ ಕ್ಷಮಿಸಲಾಗದ ಮೂರ್ಖತನ! ಆದರೆ ಅವನನ್ನು ಬಲಿಕೊಡಲು ಮನಸ್ಸಿನ ಮಾನವತೆ ಒಪ್ಪದು. ಜೀನುತುಪ್ಪದ ಮೇಲಿನ ಆಶೆ, ಆದರೆ ಜೇನನ್ನು ಕೊಲ್ಲಲು ಮನಸ್ಸಿಲ್ಲ. ಜೇನುತುಪ್ಪದ ಆಶೆ ಬಿಡಬೇಕು; ಅಥವಾ ಜೇನಿನ ಗೂಡಿಗೆ ಬೆಂಕಿಯಿಡಬೇಕು! ನಿಜ! ಜೇನು ಬೇಕಾದವನು ಬೆಂಕಿ ಹಚ್ಚಲೇ ಬೇಕು. ಅಲ್ಲಿ ಯಾವ ರೀತಿಯ ಕರುಣೆಗೂ ಸ್ಥಾನವಿಲ್ಲ ಯಾವ ಬಗೆಯ ದೌರ್ಬಲ್ಯಕ್ಕೂ ಜಾಗವಿಲ್ಲ. ಹಾಗೆಯೇ ಇಲ್ಲಿ ಕೂಡ. ಕೈಗೆ ಬಂದ ತುತ್ತನ್ನು ಬಾಯಿಗಿಟ್ಟುಕೊಳ್ಳುವ ಬದಲು, ಯಾವನೋ ಬಾಂಧವ್ಯವಿಲ್ಲದವನಿಗಾಗಿ ಮರುಗುವುದೇ! ಇಷ್ಟಾಗಿ ತನಗೂ ಸೀತುವಿಗೂ ಯಾವ ಸಂಬಂಧವೂ ಇಲ್ಲ. ಎಂದಮೇಲೆ ಅವನಿಗಾಗಿ ಯಾಕಿಷ್ಟು ಕರುಣೆ, ಸಹಾನುಭೂತಿ, ಮಮತೆ? ಸ್ವಾರ್ಥವೆನ್ನಬಹುದು, ನಿಜ. ಪ್ರಪಂಚದಲ್ಲಿ ಸುಖಬಯಸಿದ ಮೇಲೆ, ಅದನ್ನು ಪಡೆಯಲು ಎಷ್ಟೊಂದು ಸ್ವಾರ್ಥತೆಯಾದರೂ ಅದನ್ನು ತೋರಲೇ ಬೇಕು. ಬಯಸಿದುದನ್ನು ಹೊಂದಲು ಸಾಕಷ್ಟು ಕಸುವಿರಬೇಕು. ಯಾವುದಕ್ಕಾದರೂ ಸಿದ್ಧವಾಗಿರಬೇಕು. ಇಲ್ಲದಿದ್ದರೆ, ಎಲ್ಲ ಆಶೆಗಳನ್ನು ಬಿಟ್ಟು ಸಂನ್ಯಾಸ ತೆಗೆದುಕೊಳ್ಳಬೇಕು. ಮಾನು ತಿನ್ನುವ ಆಶೆ. ಆದರೆ ಪ್ರಾಣಹತ್ಯವಾಗುವುದಲ್ಲಾ ಎಂಬ ಭೀತಿ! ಇದು ಹೃದಯದ ಹೇಡಿತನ! ಎರಡರಲ್ಲೊಂದು: ಇಲ್ಲ ಬಯಕೆ! ಇಲ್ಲ ಬಲಿ! ಆನಂದನ ಮುಖ ಕಟುವಾಯಿತು, ತಲೆ ಗಿರ್ರನೆನುತ್ತಿತ್ತು. ಮೆಲ್ಲನೆದ್ದು ನಿಂತು ದೀಪ ಹಾಕಿದ. ಅವನ ಮುಖದ ಮೇಲಿನ ಕ್ರೂರ ದಿಟ್ಟತನವನ್ನು ಕನ್ನಡಿ ಒಮ್ಮೆಗೇ ಪ್ರತಿಬಿಂಬಿಸಿತು!

ರಾತ್ರಿಯು ಸುಮಾರು ೧೦ ಗಂಟೆಯ ಸಮಯ. ಹುಣ್ಣಿಮೆಯ ಚಂದ್ರ ನೀಲಿಯ ಆಕಾಶದಲ್ಲಿ, ಶೃಂಗಾರದ ತೆಳುದೆರೆಯುಟ್ಟು ಬೆಳಗುತ್ತಿದ್ದ. ಸುತ್ತೆಲ್ಲ ಅವನ ದಾರಿಯನ್ನು ಮೃದುಮಾಡಲು ಹತ್ತಿಯ ಚೂರುಗಳನ್ನು ಬಿಡಿಸಿ ಬಿಡಿಸಿ ಎಸೆದಂತೆ, ಮೋಡಗಳ ಹೂರುಗಳು. ಕೊಂಚ ದೂರದಲ್ಲಿ ಅವುಗಳನ್ನು ನೋಡಲು ಪಿಳಪಿಳ ಕಣ್ಣು ಬಿಡುವ ಎಳೆಯ ಮಾನುಗಳಂತಹ ನಕ್ಷತ್ರಗಳು. ಎಲ್ಲ ಕಡೆಗೂ ನೀರವತೆ, ಶಾಂತಿ, ನಿರ್ಲಿಪ್ತತೆ, ನಿಶ್ಯಬ್ದ! ಆನಂದ ಕಿಟಕಿಯ ಬಳಿ ಕುಳಿತು ಹೊರಗಿಣುಕಿ ನೋಡುತ್ತಿದ್ದ. ತೆಂಗಿನ ಗರಿಗಳ ಹಸುರಂಚಿನ ಮೇಲೆ ಚಂದ್ರನ ಮೃದುಶೀತಲ ಕಿರಣಗಳು ಕೈಯಾಡಿಸಿ, ಏನೋ ಸಂಗೀತ ಸೂಸುತ್ತಿದ್ದುವು; ಗಾಳಿ ಬೀಸಿಯೂ ಬೀಸದಂತೆ ಬಂದು ಮುತ್ತಿಡುತ್ತಿತ್ತು. ಎಲ್ಲವೂ ಈ ಮಾಧುರ್ಯದಲ್ಲಿ ನಿದ್ದೆ ಹೋದಂತೆ—ಯಾವುದೋ ಮಾಯಗಾರನ ಮೋಡಿಯಲ್ಲಿ ಸಿಕ್ಕಿ ಮಲಗಿ, ಸುಂದರ ಕನಸಿನಲ್ಲಿ ಮೈಮರೆತಂತೆ—ತೋರುತ್ತಿತ್ತು. ಗಾಳಿ ತಂಪಾಗಿದ್ದರೂ ಆನಂದನ ಮೈ ಮಾತ್ರ ಕಾದಿತ್ತು. ಹಣೆಯ ಸುಕ್ಕುಗೆರೆಗಳ ಮೇಲೆ ಸಣ್ಣ ಸಣ್ಣ ಹನಿಗಳು ನಾಲ್ಕಾರು ಆಗಲೇ ಕೂಡಿದ್ದುವು. ಆನಂದನ ಮನಸ್ಸು ದೂರದಲ್ಲಿ ಕಾಣುತ್ತಿದ್ದ ನಕ್ಷತ್ರದಂತೆಯೆ ಮಿಣುಕುತ್ತಿತ್ತು. ಒಮ್ಮೆ ಒಂದು ಯೋಚನೆ; ಮರುಕ್ಷಣವೇ ಹಿಂದೋಟ! ಚಂಚಲೆಯರ ಜಪಲ ಕಣ್ಣಿನ ಎವೆಗಳಿಗಿಂತ ವೇಗವಾಗಿ ಮನಸ್ಸು ಬದಲಾಗುತ್ತಿತ್ತು.

"ಆನಂದ" ಎಂದ, ಆ ಕಡೆ ಕುರ್ಚಿಯ ಮೇಲೆ ಕುಳಿತಿದ್ದ ಸೀತು. ಆನಂದನ ಪೈ ನಡುಗಿತು. ಸೀತುವಿನ ಕಡೆಗೆ ತಿರುಗಲೂ ಹೆದರಿಕೆ, ಮಾತನಾಡಲೂ ಸಾಗದು.

"ಏನೋ ಆನಂದ? ಇವತ್ತು ಬಹಳ ಸಪ್ಪಗಿದ್ದೀಯಲ್ಲಾ? ಏನೋ ಸಮಾಚಾರ?" ಎಂದ ಸೀತು ನಗುತ್ತಾ. ಆನಂದನ ಬಾಯಿಂದ ಮಾತೇ ಹೊರಡಲಿಲ್ಲ.

"ಅಂದ ಹಾಗೇ ಆನಂದ, ನಿನಗೆ ಹೇಳುವುದು ಮರೆತೇ ಬಿಟ್ಟೆ; ಆದಕ್ಕೇ ಈಗ ಬಂದದ್ದು. ನಾಳೆ ಬೆಳಿಗ್ಗೆ ರೈಲಿಗೇ ನಾನು ಬೆಂಗಳೂರಿಗೆ ಹೊರಡುತ್ತೇನೆ. ಅಮ್ಮನ ಕಾಗದ ಬಂತು. ಆ ಆಹಾಳಾದವನು ಪೋಸ್ಟ್‌ಮನ್, ೪-೫೦ ಗಂಟೆಗೆ ತಂದುಕೊಟ್ಟ. ಇಲ್ಲದೆ ಹೋಗಿದ್ದರೆ ಈವತ್ತು ಮಧ್ಯಾಹ್ನವೇ ಹೋಗಿಬಿಡಬಹುದಾಗಿತ್ತು. ನನ್ನ ಮಾವನ ಕಾಗದ ಬಂದಿದೆಯಂತೆ. ಹುಡುಗಿ—ಅಂದರೆ ಗೊತ್ತಲ್ಲ—ನನ್ನ ಉಷಾ ದೊಡ್ಡವಳಾದಳೆಂತೆ ಈ ಪವಿತ್ರತೆಯೇ ಲಗ್ನವಂತೆ. ಈವತ್ತಾಗಲೇ ಪೌರ್ಣಮೆ. ಆದಕ್ಕೇ ನಾಳೆ ಬೆಳಿಗ್ಗೆ ಹೊರಡಬೇಕು; ಹೋಗುವ ಮೊದಲು ನಿನಗೂ ಸೇಳೆ ಹೋಗೋಣವೆಂದು ಬಂದೆ!" ಎಂದ ಸೀತು.

ಆನಂದನ ಕಣ್ಣಿನಲ್ಲಿ ಹನಿಗೂಡಿತು, ತುಟಿ ನಡುಗಿತು. 'ಪೋಸ್ಟ್‌ಮನ್ ಬೆಳಿಗ್ಗೆಯೇ ಕಾಗದ ತಂದುಕೊಡಬಾರದಾಗಿತ್ತೇ ಸೀತು ಮಧ್ಯಾಹ್ನದ ರೈಲಿಗೆ ಹೋಗಬಾರದಾಗಿತ್ತೆ?' ಎನಿಸಿತು. ಮೆಲ್ಲನೆ ಸೀತುವಿನ ಕಡೆಗೆ ತಿರುಗಿ ನೋಡಿದ. ಅವನ ಮುಖದ ವಿಕಾರತೆ ಕಂಡು ಸೀತುವಿಗೆ ಆಶ್ಚರ್ಯ ಹೆದರಿಕೆಗಳಾದುವು.

"ಇದೇನೋ ಆನಂದ, ಇದು?" ಎಂದ ಗಾಬರಿಯಿಂದ.

"ಏನೂ ಇಲ್ಲವೋ—" ಎಂದ ಆನಂದ—ಬಹು ಕಷ್ಟದಿಂದ.

ಆನಂದ ಮೆಲ್ಲನೆ ತಲೆಯೆತ್ತಿ ನೋಡಿದ. ಸೀತುವಿನ ಹಿಂದೆ ಗೋಡೆಯಲ್ಲಿದ್ದ ಕೂಗುಗನ್ನಡಿಯಲ್ಲಿ ತನ್ನ ಪ್ರತಿಬಿಂಬ. ಅಬ್ಬಾ! ನರಿತ ತಲೆಗೂದಲು; ಸುಕ್ಕಿದ ಹಣೆಯ ಮೇಲಿನ ಬೆವರುಮಾಲೆ; ಉತ್ತ್ಹೊಲದ ಹಾಗೆ ಹಳ್ಳ-ಬಿಟ್ಟನ ಕೆನ್ನೆಗಳು; ಅಲ್ಲಲ್ಲಿ ಕಪ್ಪು ನೀಲಿಯ ಮಚ್ಚೆಗಳು, ಜೊಕ್ಕೆಗಳು; ಕಾಂತಿಗುಂದಿದ, ಕಾಳು ಭಾಂವಿಯಂತಹ ಕಣ್ಣುಗಳು; ಯಾವಾಗ ಮುಚ್ಚುವೆವೋ ಎಂದು ಇಳಿಬೀಳಲು ಕಾದ ಕಣ್ಣೆವೆಗಳು—ಜತೆಗೆ ಕೊರಳಿನ ಮೇಲೊಂದು ದೊಡ್ಡ ಕರಿಯ ಮಚ್ಚೆ! ಪ್ರತಿಬಿಂಬದಿಂದ ದಿಟ್ಟಿಯನ್ನು ಕೆಳಗಿಳಿಸಿ ಸೀತುವಿನ ಕಡೆಗೆ ನೋಡಲಾರಂಭಿಸಿದ ಸೀತು ಎಷ್ಟೊಳ

ವಯಸ್ಸಿನ ಸುಂದರ ಯುವಕ. ಮುಖದಲ್ಲಿ ಸರಸ್ವತಿಯ ಕಳೆ, ಗಾಂಭೀರ್ಯ. ಕಣ್ಣಿನಲ್ಲಿ ಯುವತಿಯ ಮುಖದ ಕಾಂತಿಯ ಜತೆಗೊಂದು ನಾಧೃರ್ಯದ ಹುಸಿನಗೆ. ಹೊಳೆವ ಕೆನ್ನೆ, ನುಣುಪು-ಗದ್ದ ! ಈ ಸುಂದರ ರೂಪು, ಈ ಸುಂದರ ಆಕೃತಿ ತನ್ನಂತಾಗ-ಬೇಕೇ? ತಾಯತಿ ಕಟ್ಟಿದೊಡನೆಯೆ ತನ್ನಂತೆ! ಪಾಪ! ಇನ್ನು ನಾಳೆ ಊರಿಗೆ ಬೇರೆ ಹೊರಡುತ್ತಿದ್ದಾನೆ. ಹೊಸದಾಗಿ ಮದುವೆ ಯಾವನನು. ಇನ್ನು ಮೂರು ದಿನಕ್ಕೆ ಸ್ಪಷ್ಟ ಬೇರೆ. ಜೀವನ-ದಲ್ಲಿ, ಸಂಸಾರಸುಖದಲ್ಲಿ ಈಗಿನ್ನೂ ಕಾಲಿಡುತ್ತಿದ್ದಾನೆ. ಅಂತಹ-ವನನ್ನು ಮೊದಲಿಗೇ ಬಲಿಗೊಳ್ಳುವುದೇ ? ಆನಂದನಿಗೆ ತಲೆ, ಚಕ್ರವ್ಯೂಹವಾಯಿತು. ಕೈ ತಾನೇ ತಾನಾಗಿ ಜೇಬಿನಲ್ಲಿದ್ದ ತಾಯತಿಯನ್ನು ಭದ್ರವಾಗಿ ಹಿಡಿಯಿತು. ಈಗ ಅನಾವೃತ್ತಾಗಿ ಸೀತುವಿಗೆ ತಿಳಿಯದಂತೆ, ಇದನ್ನು ಅವನಿಗೆ ಕಟ್ಟಬಿಟ್ಟರೆ ಆಯಿತು. ಸೀತು ತನ್ನಂತಾಗಿ ಬಿಡುವನು. ತನಗೆ ಆರೋಗ್ಯ ! ಇದು ತನಕ ತಾನು ಕಾಣದುದು! ಅಮೇಲೆ ತಾನು ಬೇಕಾದ ಸುಖವನ್ನು ಅನು-ಭವಿಸಬಹುದು ! ಆದರೆ, ಆದರೆ, ಸೀತು? ಅವನ ಪಾಡೇನು? ಸುಖದ ಹೊಲಸಿನಲ್ಲಿ ಕಾಲಿಡುತ್ತಿರುವವನನ್ನು ಕತ್ತು ಹಿಡಿದು ತಳ್ಳಿ ಬಿಡುವುದೇ! ಪಾಪ! ಅವನ ಮನೆಯವರಿಗೆ ಎಷ್ಟು ದುಃಖ-ವಾಗಬಹುದು ! ಅವನ ಹೆಂಡತಿಯ ದುಃಖ ! ತನ್ನ ಗಂಡನಿಂದ ತನ್ನ ಸಂಸಾರದಿಂದ ಸುಖಬಯಸಿ, ಕಲ್ಪನೆಯಲ್ಲಿ ಕನಸು ಕಟ್ಟು-ತ್ತಿರುವ ಆ ಹೊಸ ಹರಯದ ಹುಡುಗಿಯ ಮಾಂಗಲ್ಯವನ್ನೇ ತಾನು ಕಿತ್ತಹಾಗಲ್ಲವೇ ? ಬಾಳನ್ನೇ ಹಾಳುಮಾಡಿದಂತಲ್ಲವೇ ? ಇನ್ನು ಸೀತುವಿನ ಬಾಳು ! ಜೀವನವೆಲ್ಲಾ ಆ ಹಾಳು ರೋಗ-ದಿಂದ ಕೊರಗಿ ಕೊಳೆಯಬೇಕು ! ಆದರೆ — ತನಗೆ ಬೇರೆ ಮಾರ್ಗವೇ ಇಲ್ಲ !....

ಆನಂದನ ಮನಸ್ಸು ಬಿರುಗಾಳಿಯಲ್ಲಿ ಸಿಕ್ಕಿ ಒದ್ದಾಡುತ್ತಿತ್ತು. ಸೀತು ತನ್ನಂತೆ ತಾನು ಮಾತಾಡುತ್ತಿದ್ದ:

"ಆನಂದ, ನನ್ನ ಉಷಾ ಎಷ್ಟು ಚತುರೆ ಗೊತ್ತೇನೋ? ಬಹಳ ಜಾಣೆ ! ಪುಂಬಾ ಜೆಲುವೆ ! ಬಹಳ ನಾಜೂಕು, ನಯ! ಅವಳಿಗೆ ನಾನು ಯೋಗ್ಯನಲ್ಲ — ಅಂತನನಗೇ ಒಂದೊಂದುಸಲ ಅನಿಸುತ್ತೆ ಕಣೋ. ಈಗ ಬೆಳುದಿಂಗಳ ರಾತ್ರಿಯಲ್ಲಿ ಅವಳ ನೆನಪಾಗುತ್ತೆ. ಕೆರೆಯಲೆಗಳ ಮೇಲೆ ಬೆಳ್ಳಿಯ ಅಂಚನ್ನು ಮಾತ್ರ ಹೆಣೆದ ಹಾಗೆ, ಅವಳ ಕೆನ್ನೆಯ ಹೊಳಪು. ಅವಳು ನಕ್ಕರೇ ಬೆಳುದಿಂಗಳು ಜೆಲ್ಲಿದ ಹಾಗೆ. ಜತೆಗೆ ಬಹಳ ನಯುಗಾತಿ. ಎಲ್ಲ ಕೆಲಸವನ್ನೂ ಚೆನ್ನಾಗಿ ಮಾಡುತ್ತಾಳೆ. ಸಪ್ಯ ! ಇನ್ನುಮೇಲೆ ನ ನ ಗೂ ಹೋಟಲೂಟದ ಚಿಂತೆ ತಪ್ಪುತ್ತೆ !"

ಆನಂದ ಕನ್ನಡಿಯನ್ನೇ ದಿಟ್ಟಿಸುತ್ತಿದ್ದ: 'ನಿಜ. ನಾನೇನೋ ಸೀತುವಿಗೆ ಇದನ್ನು ಕಟ್ಟುತ್ತೀನೆ. ಅಮೇಲೆ ಅವನೂ ಬೇಕಾದರೆ ಇನ್ನು ಯಾರಿಗಾದರೂ ಕಟ್ಟಬಹುದಾಯಿತು. ಅಷ್ಟೇತಾನೆ!.... ಆದರೆ ಇದಕ್ಕೆ ಕೊನೆಯೆಲ್ಲಿ? ಇದಕ್ಕೆ ಕೊನೆಯೆಲ್ಲಿ?' ಯೋಚನೆ ಯಲ್ಲಿ ಆನಂದನ ಕಣ್ಣುಗಳು ಬೆದರಿ ನೆಟ್ಟುನಿಂತುವು. ಸೀತು ಒಡನೆಯೆ ಮಾತನ್ನು ನಿಲ್ಲಿಸಿ, ಆನಂದನನ್ನು ಜೋರಾಗಿ ಕೂಗಿದ. ಆನಂದ ಬೆಚ್ಚಿ ಎಚ್ಚೆತ್ತ.

"ಯಾಕೋ ? ಆಷ್ಟು ಹೊತ್ತಿನಿಂದ ಹಾಗೆಯೇ ? ಮೈ ಚೆನ್ನಾಗಿಲ್ಲವೇನೋ ಆನಂದ ?" ಎಂದ ಸೀತು.

"ಏನೂ ಇಲ್ಲವೋ, ಹಾಂ. ನೀನು ನಾಳೆ ಬೆಳಿಗ್ಗೆಯೇ ಹೊರ-ಡುವೆಯೇನೋ ?"

"ಹೂಂ, ಇನ್ನೊಂದು ತಿಂಗಳಲ್ಲೇ ಇಲ್ಲೇ ಸಂಸಾರ ಹೂಡಿ ಬಿಡುವ ಯೋಚನೆಯಿದೆ. ಹೋಟಲಿನ ಅನ್ನ ತಿಂದು ತಿಂದು ಬೇಸರವಾಗಿದೆ. ಉಷಾ ಬಂದರೆ ನನಗೂ ಯೋಚನೆಯಿಲ್ಲ. " ಎಂದ ಸೀತು.

"ಸರಿ"

ಆನಂದನ ಕೈಯಲ್ಲಿನ್ನೂ ತಾಯತಿ ಆಡುತ್ತಿತ್ತು. ಮೈ ಇನ್ನೂ ನಡುಗುತ್ತಿತ್ತು. ಮನಸ್ಸು ತಹತಹಪಡುತ್ತಿತ್ತು. ಸಿಕ್ಕಿದ ಸಮಯ ಬಿಡಲಾಗದೆಂದು ಸ್ವಾರ್ಥ; ಬಾಳ್ವೆಯನ್ನು ಬಲಿಗೊಳ್ಳ ಬೇಡವೆಂದು ಮಾನವತೆ. ಇವೆರಡರ ತಿಕ್ಕಾಟದಲ್ಲಿ ಮನಸ್ಸು ತರಗೆಲೆಯಂತೆ ಒದ್ದಾಡುತ್ತಿತ್ತು.

ಸೀತು ಎದ್ದು ಕಿಟಕಿಯ ಹತ್ತಿರ ನಿಂತ.

"ಲೋ- ಬೆಳುದಿಂಗಳು ಎಷ್ಟು ಸೊಗಸಾಗಿದೆಯೋ—"

ಕಿಟಕಿಯಿಂದ ಹೊರಗೆ ನೋಡುತ್ತಾ ಬೆಳುದಿಂಗಳಲ್ಲಿ ಮೈಮರೆತಿದ್ದ ಸೀತುವಿಗೆ ತಾಯತಿ ಕಟ್ಟುವುದು ಬಹಳ ಸುಲಭ. ಆನಂದ ಎದ್ದುನಿಂತ. ಕೈಕಾಲು ನಡುಗುತ್ತಿತ್ತು. ನಡುಗುತ್ತಿದ್ದ ಕೈಯಿಂದ ಜೇಬಿನಲ್ಲಿದ್ದ ತಾಯತಿಯನ್ನು ಮೆಲ್ಲಗೆ ಎತ್ತಿ-ಕೊಂಡ. ಮೈ ಬೆವರಿನಿಂದ ತೊಯ್ದಿದ್ದತ್ತು. ಎದೆಯ ಬಡಿತ ಸಿಡಿಲಪೊರೆತವಾಗಿತ್ತು. 'ಇನ್ನೇನು ಕಟ್ಟಬಿಡಬೇಕು' ಎಂದು ಕೊಂಡ. ಆದರೂ ಯಾಕೋ ಒಂದೇಟು ಕೊನೆಗೊಮ್ಮೆ ಸೈನೀಡಿದ ಸೀತು ಇದ್ದಕ್ಕಿದ್ದಂತೆ "ಆನಂದ" ಎನ್ನುತ್ತಾ ಹಿಂದೆ ತಿರುಗಿದ. ಆನಂದನ ಮುಖಭಾವ, ಕೈಯಲ್ಲಿದ್ದ ತಾಯತಿ ನೋಡಿ ಹಿಂತೆಗೆದ- ಹಿಮ್ಮೆಟ್ಟಿದ.

"ಇದೇನೋ ಇದು ?"

ಆನಂದನ ಮುಖವಲ್ಲಿ ಧಾರೆ ಸುರಿಯುತ್ತಿತ್ತು. ಮೆಲ್ಲನೆ ಮುಖವನ್ನೊರೆಸಿಕೊಂಡು, ಶಾಂತತೆಯ ಧ್ವನಿಯಲ್ಲಿ "ಏನೂ ಇಲ್ಲ" ಎಂದ.

"ಏನು ಹೇಳೋ- ಏನೋ ಇವೆ- ಕೈಯಲ್ಲಿ ತಾಯತಿ ? " ಎಂದ ಸೀತು.

"ಅದು- ಅದು- ಹಳೆಯ ತಾಯತಿ. ಕಾಲಿಗೆ ಸಿಕ್ಕಿತು. ಹೊರಗೆಸೆಯಲು ತೆಗೆದೆ. ಎಸೆದುಬಿಡು" ಆನಂದ ಸೀತುವಿನ ಕೈಗೆ ತಾಯತಿ ಕೊಟ್ಟ. ಸೀತು ಮೊದಲು ಮೊದಲು ಅನುಮಾನಿ-ಸಿದರೂ, ಕೊನೆಗೆ ಕೈನೀಡಿ ಆದನ್ನು ತೆಗೆದುಕೊಂಡು, ಕಿಟಕಿಯಿಂ-ದಾಚೆಗೆ ಎಸೆದ. ತಾಯತಿ ಬೆಳುದಿಂಗಳಲ್ಲಿ ಹೊಳೆದು, ಹೊರಗಿನ ಗಟಾರದಲ್ಲಿ ಬಿದ್ದಿತು. ಆನಂದನ ಮನಸ್ಸಿಗೇನೋ ಆಹ್ಲಾದ, ಶಾಂತಿ, ಹಾಯಿ ಎನಿಸಿತು. ಹೊರಗೆ ಚಂದ್ರು ಆಕಾಶದಲ್ಲಿ ಹರಹಿದ್ದ ತನ್ನ ಬೆಳಕಿಗೆ ತಾನೇ ಮರುಳಾಗಿ ಮೈಮರೆತಿದ್ದ.

ಬದುಕುವ ಆಸೆ

ಡಾ. ಗೋಪಾಲಕೃಷ್ಣರಾಯರು
"ಕಲಿಯುಗ" ಸಂಪಾದಕರು

★

ಬದುಕಬೇಕೆಂಬ ಬಯಕೆ ಎಲ್ಲ ಮಾನವರಲ್ಲಿಯೂ ಇದೆ; ಆದರೆ ಬಯಕೆಗೆ ತಕ್ಕ ಹಾಗೆ ನಡೆವಳಿಯನ್ನಿಡುವವರು ಆಕಾಶಕುಸುಮವಾಗಿದ್ದಾರೆ.

★

ಮನುಷ್ಯನು ಮನೆ-ಮಕ್ಕಳನ್ನು ಪ್ರೀತಿಸುತ್ತಾನೆ; ವಿದ್ಯೆಯನ್ನು ಮೆಚ್ಚುತ್ತಾನೆ; ದುಡ್ಡನ್ನು ಹಂಬಲಿಸುತ್ತಾನೆ; ಅಧಿಕಾರವನ್ನು ಪ್ರೇಮಿಸುತ್ತಾನೆ; ಮಾನ-ಸನ್ಮಾನಕ್ಕಾಗಿ ಹಾತೊರೆಯುತ್ತಾನೆ. ಮತ್ತು ಅವೆಲ್ಲವುಗಳಿಗಾಗಿ ನಿದ್ದೆ-ನೀರಡಿಕೆಗಳನ್ನೂ ಮರೆಯುತ್ತಾನೆ; ದುಃಖ-ದುಮ್ಮಾನಗಳನ್ನು ಸಹಿಸುತ್ತಾನೆ; ಮತ್ತು ಇದಕ್ಕೆ 'ಸ್ವಾರ್ಥತ್ಯಾಗ' ಎಂಬ ದೊಡ್ಡ ಹೆಸರಿಟ್ಟಿದ್ದಾನೆ.

ಆದರೆ ಅವೆಲ್ಲವುಗಳಲ್ಲಿಯೂ ಅವನು ನಿಜವಾಗಿಯೂ ಸ್ವ-ಅರ್ಥದ ತ್ಯಾಗ ಮಾಡುತ್ತಾನೆಯೇ? ಮನುಷ್ಯನಿಗೆ ತನ್ನ 'ಸ್ವ'ವನ್ನು ತ್ಯಜಿಸಿಯೂ ಮನೆ-ಮಕ್ಕಳನ್ನೂ ವಿದ್ಯಾ-ಧನಗಳನ್ನೂ ಸಾಧಿಸುವುದು ಶಕ್ಯವಾಗಿದೆಯೇ? ನಿಶ್ಚಿತವಾಗಿ ಮನುಷ್ಯನ ಸ್ವ-ಅರ್ಥವು ಎಲ್ಲಿದೆ? ಮನೆ-ಮಕ್ಕಳು, ವಿದ್ಯಾ-ಅಧಿಕಾರ, ಧನ-ಮಾನಗಳನ್ನಾದರೂ ಅವನು ಹಂಬಲಿಸುವುದೇಕೆ? ಅವನಲ್ಲಿಯ ಸ್ವ-ಅರ್ಥವು ತ್ಯಜಿಸಲ್ಪಟ್ಟರೆ, ಮತ್ತಾವ ಅರ್ಥವು ಅವೆಲ್ಲವನ್ನೂ ಸಾಧಿಸುವುದು? ಈ ಪ್ರಶ್ನೆಗಳಿಗೆ ಸತ್ಯಪೂರ್ಣವಾದ ಉತ್ತರ ತೊದುವುದಾದರೆ, ಮನುಷ್ಯನಿಗೆ ಸ್ವಾರ್ಥತ್ಯಾಗವು ಶಕ್ಯವೇ ಇಲ್ಲವೆನ್ನಬೇಕಾಗುತ್ತದೆ. ವ್ಯಕ್ತಿಗತ ಸ್ವ-ಅರ್ಥವು ಬೇರೆ ಬೇರೆಯಾಗಿರಬಹುದು. ಒಬ್ಬನು ಕೀರ್ತಿಯಿಂದ ತಣಿಯಬಹುದು; ಇನ್ನೊಬ್ಬನು ಕಾರ್ಯಸಿದ್ಧಿಯಿಂದ ತೃಪ್ತಿಪಡಬಹುದು. ಪ್ರತಿಯೊಬ್ಬನ 'ಸ್ವ'ಕ್ಕೆ ಯಾವುದಾದರೊಂದು ಅರ್ಥ—ಗುರಿ—ಇರಲೇ ಬೇಕು. ಗುರಿಯಿಲ್ಲದಲ್ಲಿ ಬಾಳು ಅಸಾಧ್ಯ. ಕೆಲವರಲ್ಲಿ ಆ ಗುರಿಯು ಜಾಗೃತಚಿತ್ತದಲ್ಲಿ ಮೆರೆಯುತ್ತಿರಬಹುದು; ಕೆಲವರಲ್ಲಿ ಅದು ಸುಪ್ತಚಿತ್ತದಲ್ಲಿ ಉರಿಯುತ್ತಿರಬಹುದು. ವ್ಯಕ್ತವಾಗಿಯೋ ಅವ್ಯಕ್ತವಾಗಿಯೋ, ಆ ತಣಿವಿನ ಆ ತೃಪ್ತಿಯ ಧ್ಯೇಯ. ಪ್ರಯೋಜನದಿಂದಲೆ ಜೀವಿಯು ಜೀವಿಸಬಲ್ಲನು. 'ಸುಖಾರ್ಥಃ ಸರ್ವಭೂತಾನಾಂ ಮತಾಃ ಸರ್ವಾಃ ಪ್ರವೃತ್ತಯಃ।'

ಸ್ವಾರ್ಥತ್ಯಾಗಿಗಳಿಗೂ ಕೂಡ ಆ ಸುಖದ ಹಂಬಲು ಬಿಟ್ಟಿಲ್ಲ. ಕೆಲವರು ಅದಕ್ಕೆ 'ಶಾಂತಿ' ಎಂದು ಕರೆಯಬಹುದು; ಹಲವರು 'ನಿರ್ವಾಣ' ಎಂದು ಹೆಸರಿಡಬಹುದು; ಮತ್ತನೇಕರು 'ಆದರ್ಶ' ಎಂದು ಸಂಬೋಧಿಸಬಹುದು. ಆ ವಿವಿಧ ಶಬ್ದ-ಜಾಲದ ಜೀವಾಳವಾದ ತೃಪ್ತಿಗೇ ಮನೋವಿಜ್ಞಾನದಲ್ಲಿ 'ಸುಖ' ಎಂದು ಹೇಳುತ್ತಾರೆ. ಸ್ವಾರ್ಥತ್ಯಾಗಿಗಳು ದೇಶ, ಭಾಷೆ, ಧರ್ಮ, ದೇವರುಗಳಲ್ಲಿ ತೋರುವ ಅಭಿಮಾನ-ಪ್ರೇಮಗಳು ಕೂಡ ಸುಖಕ್ಕಾಗಿಯೆ ಇವೆ. ಅಭಿಮಾನ, ಪ್ರೇಮಗಳಿಗೆ ಭಾರತೀಯ ಮನೋವಿಜ್ಞಾನವಾದ ಯೋಗಶಾಸ್ತ್ರದಲ್ಲಿ 'ರಾಗ' ಎಂದು ಕರೆಯುತ್ತಾರೆ. ಪಾತಂಜಲ ಯೋಗಸೂತ್ರದಲ್ಲಿ 'ಸುಖಾನುಶಯೀ ರಾಗಃ' ಎಂದರೆ ಪ್ರೇಮವು—ಅಭಿಮಾನ, ಆಕರ್ಷಣಗಳು—ಸುಖದಿಂದ ಹುಟ್ಟುತ್ತವೆಂದು ಹೇಳಿದೆ. ಈ ತತ್ತ್ವವು ಅತ್ಯಾಧುನಿಕ ಮನೋವಿಜ್ಞಾನಕ್ಕೂ ಒಪ್ಪಿಗೆಯಿದೆ. ದೇವ-ಧರ್ಮಾಭಿಮಾನದ ಕಪಳೆಯೂಡದು ಮನದು, ಅವುಗಳಲ್ಲಿ ತಮಗೆ ಸುಖವಿಲ್ಲವೆಂದು ಜಂಬ ಕೊಚ್ಚಿದರೆ, ಅವರು ಆತ್ಮವಂಚಕರೇ ಸೈ. ಸುಖಸಂಪಾದನೆಯೆ ಸಕಲ ವೃತ್ತಿ-ಪ್ರವೃತ್ತಿಗಳ ಪ್ರಚೋದಕವಾಗಿದೆ. ಅರ್ಥಾತ್ ಜೀವನವೆಂದರೆ ಸುಖದ ಬೇಟೆ. ಸುಖವಿದ್ವಲ್ಲಿಯೆ ಜೀವನದ ಸಿದ್ಧಿ. ಸುಖವೇ ಬಾಳಿನ ಬೆನ್ನೆಲುಬು.

ಮೇಲಿನ ಸಿದ್ಧಾಂತವನ್ನು ಮನವರಿಸಬೇಕಾದರೆ 'ಸುಖವೆಂದರೇನು?' ಎಂಬ ಪ್ರಶ್ನೆಯನ್ನು ಜೀವನವಿಜ್ಞಾನದ ದೃಷ್ಟಿಯಿಂದ ಉತ್ತರಿಸಬೇಕಾಗುವುದು. ಇಲ್ಲಿ ಸುಖವೆಂದರೆ ಕ್ಷಣಿಕ ಇಂದ್ರಿಯ ಚಾಪಲ್ಯವಲ್ಲ—ಅಂದು ಬೇರೆ ಹೇಳಬೇಕಾಗಿಲ್ಲ. ಆದರೂ ಕ್ಷಣಿಕ ಇಂದ್ರಿಯ ಚಾಪಲ್ಯವೂ ಸೂಡ ಆ ದೊಡ್ಡ ಸುಖದ ಒಂದು ಅಂಶವೇ ಆಗಿದೆ ಎಂಬುದನ್ನು ಮರೆಯುವ ಹಾಗೂ ಇಲ್ಲ. ಸುಖದ ಬಗ್ಗೆ ನೂರಾರು ಸಾವಿರಾರು ವ್ಯಾಖ್ಯೆಗಳಾಗಿವೆ; ಮತ್ತು ಅವು ಎಲ್ಲವೂ ಸಲ ಸರಸ್ವಾಗ ವಿರುದ್ಧವಾಗಿರುವುದೂ ಉಂಟು. ಆದರೆ ಜೀವನಶಾಸ್ತ್ರದ ದೃಷ್ಟಿಯಲ್ಲಿ ಒಂದೇ ಒಂದು ವ್ಯಾಖ್ಯೆಯಿದೆ. ಅದೆಂದರೆ: 'ಬದುಳುವುದಕ್ಕೆ ಸಾಧಕವಾಗಿರುವುದೇ ಸುಖ' ಎಂಬುದು. ತೋರಿಕೆಗೆ ಸುಖವು ಊಟಕ್ಕು-ತಿನಿಸುಗಳಲ್ಲಿ, ಉಡುಗೆ-ತೊಡುಗೆಗಳಲ್ಲಿ, ಧನ-ಮಾನಗಳಲ್ಲಿ ಇರುವುದೆಂದು ಎನಿಸಿದರೂ, ಅವೆಲ್ಲವುಗಳನ್ನು ತೆಡೆದು ನೋಡಿದರೆ, ಒಳಗೆ ಅಡಗಿರುವುದು ಬದುಕಿನ ಒತ್ತಾಯ.

ನಾವು ಅಲಂಕಾರಗಳನ್ನು ಅಪೇಕ್ಷಿಸುತ್ತೇವೆ. ಏಕೆ? ಆಕರ್ಷಕರಾಗಿರಬೇಕೆಂದು; ಜನರಞ್ಜನೆಗಳಿಸಬೇಕೆಂದು. ಅದಾದರೂ ಏಕೆ? ಸುಖವಾಗಿ ಬಾಳಬೇಕು ಎಂದಲ್ಲವೇ? ಬರಿ ಸುಖವಾಗಬೇಕೆಂದಲ್ಲ; ಸುಖವಾಗಿ ಬಾಳಬೇಕು, ಬದುಕಬೇಕು ಎಂದು. ಮನುಷ್ಯೇತರ ಪ್ರಾಣಿಗಳಲ್ಲಂತೂ ಬದುಕಿಗೆ ಬಾಧಕವಾದ ವೃತ್ತಿ-ಪ್ರವೃತ್ತಿಗಳಾಗಲಿ, ಮೋಹ-ಲೀಲೆಗಳಾಗಲಿ ಇರುವುದೇ ಇಲ್ಲ. ಮನುಷ್ಯನು ಪ್ರಕೃತಿನಿಯಮಗಳನ್ನು ಜಯಿಸುವ ಹುಚ್ಚಾಟದಲ್ಲಿ ತನ್ನ ರುಚಿಯನ್ನು ಹಸಗೆಡಿಸಿದ್ದಾನೆ; ಬದುಕಿಗೆ ಮಾರಿಯಾದ ಆಹಾರ-ವಿಹಾರಗಳನ್ನು ಮೆಚ್ಚಿದ್ದಾನೆ; ಅದರಲ್ಲಿಯೆ

ಮುಂಬಯಿ ವ್ಯಾಪ್ತಿಯ

ಮಾರಾಟಕರ ಕಾಯಿದೆ

(ಕನ್ನಡದಲ್ಲಿ)

ಶ್ರೀ ಕೆ. ಎಸ್. ಗದಗಕರ ಬಿ ಎ. (ಆನರ್ಸ್), ಎಲ್.ಎಲ್.ಬಿ., ಅವರು ಕನ್ನಡಿಸಿರುವರು.

ಸ್ವತಂತ್ರ ಭಾರತದ ವಿಶೇಷ ಕರ್ನಾಟಕದಲ್ಲಿ. ಇನ್ನು ಸರಕಾರದ ವ್ಯವಹಾರವೆಲ್ಲ ಕನ್ನಡದಲ್ಲಿಯೇ ನಡೆಯುವುದು. ಕನ್ನಡ ನಾಗರಿಕರೆಲ್ಲ ದಿನಬಳಕೆಯ ಕಾಯಿದೆಗಳನ್ನು ಅರಿತುಕೊಳ್ಳಬೇಕಾದುದು ಅತ್ಯಂತ ಅವಶ್ಯಕ.

ವ್ಯಾಪಾರಿಗಳಿಗೂ ಗಿರಾಕಿಗಳಿಗೂ

ಬೇಕಾದ ಮಾರಾಟದ ಕಾಯಿದೆಯನ್ನೆಂದೂ ಎಲ್ಲರೂ ಅರಿತುಕೊಳ್ಳಬೇಕು.

ಎಲ್ಲರ ಮನೆಯಲ್ಲಿಯೂ ಇರಬೇಕಾದ ಪುಸ್ತಕ!

ಇಂದೆಯೇ ನಿಮ್ಮ ಪ್ರತಿ ಕಾದಿರಿಸಿಕೊಳ್ಳಿರಿ.

ಬೆಲೆ ೧–೬–೦

ಪುಸ್ತಕ ವ್ಯಾಪಾರಿಗಳಿಗೆ ಕಮೀಶನ್ನು!

— ಮಾರಾಟಗಾರರು —

ಭಾರತ ಬುಕ್‌ಡಿಪೊ, ಸುಭಾಸರೋಡ್, ಧಾರವಾಡ.
ರಾಷ್ಟ್ರಕವಿ ಬುಕ್‌ಡಿಪೊ, ಪತಾರ್ಕಟ್ ,,
ಸರ್ವೋದಯ ಪುಸ್ತಕಾಲಯ, ಗಾಂಧಿಬೌಕಂ, ,,

ಸುಖವಿದೆಯೆಂದು ಭ್ರಮಿಸಿದ್ದಾನೆಂಬುದೂ ನಿಜ. ಆದರೆ ಆದು ಭ್ರಮೆಯೇ ಸೈ. ವ್ಯಕ್ತ (ಜಾಗೃತ)ವಾಗಿ ನಮ್ಮ ಪಪಣಿಕೆ-ಹಂಬಲಗಳೇನೆ ಇರಲಿ, ಅವಕ್ಕೆ ನಮ್ಮ ಸುಪ್ತ (ಅವ್ಯಕ್ತ)ದಲ್ಲಿ ಸ್ವಾಗತವಿದೆಯೇ? ಆ ರುಚಿ-ನೋಹಗಳಿಗೇ ಕೊನೆಯವರೆಗೆ ನಾವು ಜೋತುಬಿದ್ದು ಬದುಕನ್ನು ಮುಂದುವರಿಸಬಲ್ಲೆವೇ?—ಎಂಬ ಪ್ರಶ್ನೆಗಳಿಗೆ ತಕ್ಕಉತ್ತರವನ್ನುಕೊಟ್ಟರೆ, ಆ ಭ್ರಮೆಯ ಅರಿವಾಗುವುದು. ಮನುಷ್ಯನ ನೈಸರ್ಗಿಕ ಆಹಾರವೆಂದರೆ ಬೆಂಕಿತಾಗದ ಗಡ್ಡೆ-ಗೆಣಸು, ಕಾಯಿ, ಹಣ್ಣು, ಪಸಿರಕ್ತ, ಮಾಂಸಗಳೆಂದು ಮಾನವ ಶಾಸ್ತ್ರಜ್ಞರು ಸಾರಿದ್ದಾರೆ. ಅವನ್ನೆಲ್ಲ ಬಿಟ್ಟು ಜಿಲೇಬಿ, ಜಾಮೂನು, ಹೋಳಿಗೆ, ಮಂಡಿಗೆ, ಚಹಾ, ಕಾಫಿಗಳಿಗೆ ಮರುಳಾದ ಆಧುನಿಕ ಮಾನವನ ಬದುಕು ಸುಖಿಯಾಗಿದೆಯೇ? ಬೋಂಡಾ,ಬುರುಬುರಿಗಳನ್ನು ನೋಡಿ ಬಾಯಿ ನೀರೂರಬಹುದು. ಅವನ್ನು ಸವಿಯುತ್ತಿರುವಾಗ ಕ್ಷಣಿಕಚಾಪಲ್ಯದಿಂದ ಆನಂದವೆನಿಸಬಹುದು. ಆದರೆ ಆ ಮಸಾಲೆಗೆ ಹೊಟ್ಟೆಯು ಸತ್ಕಾರವನ್ನು ನೀಡುವುದೇ? ಕರುಳು ಅದನ್ನು ಕಕ್ಕುಲತೆಯಿಂದ ಕರಗಿಸುವುದೇ? ರಕ್ತವು ಅವನ್ನು ಆದರದಿಂದ ಅಪ್ಪಿ ಲಘಿಸುವುದೇ? ಆ ರುಚಿಭಕ್ತರ ಮೊಗದಲ್ಲಿ ನಗೆಯು ಜಗಜಗಿಸಬಹುದು; ಆದರೆ ಸೂಕ್ಷ್ಮದರ್ಶಿನಿಯಿಂದ ನೋಡಿದರೆ, ಆಹಾರನಾಳವೆಲ್ಲ ದಾಹದಿಂದ ಭಗಭಗಿಸುತ್ತಿರುವುದು ತೋರದಿರದು. ಕಾಲಾಂತರದಲ್ಲಿ ಅವರು ಕರುಳುಬೇನೆಯಿಂದ ಹೊರಳುವರು; ಅಗ್ನಿಮಾಂದ್ಯದಿಂದ ನರಳುವರು; ಪಾಂಡುವಿನಿಂದ ಪೀಡಿಸಲ್ಪಡುವರು; ಮಲಬದ್ಧತೆಯಿಂದ ಮರುಗುವರು. ಯಾವುದನ್ನು ಸುಖಕರವೆಂದು ಮುಕ್ಕಿ ಬಕ್ಕರಿಸಿದರೋ, ಅದನ್ನೀಗ ಬೇಸೆ-ಬೇಸರಿಕೆಗಳ ರೂಪದಲ್ಲಿ ಕಕ್ಕುವರು. ಹಿಂದೆ ಹಿಗ್ಗೆಂದು ತೋರಿದುದು ಇಂದು ಬದುಕಿಗೆ ಮುಗ್ಗಾಗಿದೆ. ವ್ಯಕ್ತಜೀವಾಂಶವ—ಅನೈಸರ್ಗಿಕ ಚಟಗಳ ಪ್ರೇರಣೆಯಿಂದ— ಕ್ಷಣಿಕವಿಲಾಸಕ್ಕಾಗಿ ಬೇಡವಾದುದನ್ನು ಸವಿದು ಸೊಕ್ಕಲೆಣಿಸಿದರೂ, ಸುಪ್ತಜೀವಾಂಶವು ಅದನ್ನು ಎದುರಿಸಿ ಹೋರಾಡುವುದು. ಮತ್ತೀ ವ್ಯಕ್ತ-ಸುಪ್ತಗಳ ಹೋರಾಟದಲ್ಲಿ ಬದುಕು ಮಣ್ಣುಮುಕ್ಕುವುದು. ಇದಕ್ಕೆ ಸುಖವೆಂದು ಯಾರು ಯಾವ ಬಾಯಿಂದ ಹೇಳಬೇಕು?

ಮೇಲಿನ ವಿವೇಚನೆಯಿಂದ ಸಕಲಜೀವಿಗಳಲ್ಲಿಯೂ ಬದುಕೆನಾಸೆಯು ಎಷ್ಟು ದೃಢಮೂಲವಾಗಿದೆಯೆಂಬುದು ಸಿದ್ಧವಾಗುವುದು. ಆ ತಾತ್ತ್ವಿಕದೃಷ್ಟಿಯಿಂದ ಸ್ವಾರ್ಥತ್ಯಾಗ, ಆತ್ಮಯಜ್ಞ, ಪರೋಪಕಾರ, ತಪಶ್ಚರ್ಯ, ದೇಶ-ಭಾವಾ-ಸೇವೆಗಳೆಂಬ ತೋರಿಕೆಯ ಘನಕಾರ್ಯಗಳೆಲ್ಲವೂ ಆ ಬದುಕೆನಾಸೆಯ ಪರಿಣಾಮವಾಗಿವೆ. ತೋರುವ ಗುರಿ ಯಾವುದೇ ಇರಲಿ; ಇರುವ ಗುರಿ ಒಂದೇ, ಎಂದರೆ 'ಬಾಳಬೇಕು, ಬದುಕಬೇಕು' ಎಂಬ ಜೀವಿಯ ನಿರ್ಧಾರ. ಆ ಗುರಿಗೆ ಪೂರಕವಾದ ನೃತ್ತಿ-ಪ್ರವೃತ್ತಿಗಳಲ್ಲಿಯೆ ಪ್ರಕೃತಿಯು ಸುಖವನ್ನಿಟ್ಟಿದ್ದಾಳೆ, ಆದುದರಿಂದಲೇ ಜೀವಿಗಳೆಲ್ಲ ಸುಖದ ಬೆನ್ನ ಹತ್ತಿವೆ. ಆದರೆ ಸುಖವೆಂದರೆ ಬರಿ ಚರ್ಮೇಂದ್ರಿಯಗಳಿಗೆ ರುಚಿಕರವಾದುದಲ್ಲ; ಅಂತರೇಂದ್ರಿಯಗಳು ಸೂಕ್ಷ್ಮೇಂದ್ರಿಯಗಳು ತನು-ಮನಗಳ ಅಣು-ರೇಣುಗಳು ಯಾವುದನ್ನು ಒಪ್ಪಿ ಅದರಿಸುವವೋ ಅದುವೇ ಸುಖ; ಅದುವೆ ಬದುಕೆನಾಸೆ. (ಮುಂದಿನ ತಿಂಗಳು 'ಬದುಕು ನೂರೇ ವರುಷವೇ?' ಎಂಬ ಬರೆಹ.)

ಮದ್ರಾಸದಲ್ಲಿ ನಮ್ಮ ಏಜಂಟರು
ಶ್ರೀ. ಸ್ಹಿ. ಲಕ್ಷ್ಮಣರಾವ್
೧೮೦ ಚೀನಾಬಝಾರ್ ರಸ್ತೆ
ಜ. ಟಿ. ಮದ್ರಾಸು

ನಿಪ್ಪಾಣಿಯಲ್ಲಿ ನಮ್ಮ ಏಜಂಟರು:
ಶ್ರೀ. ಕೆ. ಎಸ್. ಬಳಗುರಗಿ
ನ್ಯೂಜ್ ಏಜಂಟ್ಸ್
ಮತ್ತು ಪುಸ್ತಕ ವ್ಯಾಪಾರಿ

ಸಹಾಯಕಗಳು

(Catalysers)

★

(ವಿಜ್ಞಾನವಿಚಾರ)

ಪ್ರೊ. ವೀ. ಸಿ. ಹಿತ್ತಲಮನಿ, ಒಕ್ಕಲುತನದ ಕಾಲೇಜು, ಪುಣೆ.

★

ನಮ್ಮ ಸುತ್ತಮುತ್ತಲೂ ನಿತ್ಯ ಎಷ್ಟೋ ಕಲಸಗಳು ನಡೆಯುತ್ತಿವೆ. ಅವೆಲ್ಲ ಯಾವನೊಬ್ಬನ ಪರಿಶ್ರಮದಿಂದಲೆ ನಡೆಯುತ್ತಲಿವೆಯೆಂದು ಹೇಳಲಕ್ಕಾಗುವುದಿಲ್ಲ. ಅವುಗಳಲ್ಲಿ ಹಲವಂತೂ ತಮ್ಮಿಂದ ತಾವೆ ನಡೆಯುತ್ತಿವೆಯೊ ಎನ್ನುವಷ್ಟರ ಮಟ್ಟಿಗೆ ಕಾಣುತ್ತಿರುತ್ತವೆ. ಇದೇ ರೀತಿ ಮಾನವರಲ್ಲಿಯೂ ಎಷ್ಟೋ ತೆರನಾದ ಕೆಲಸಗಳು ನಡೆಯುತ್ತಿವೆ. ಎರಡು ಪಂಗಡದವರು ಇಲ್ಲವೆ ಎರಡು ವ್ಯಕ್ತಿಗಳು, ತಮ್ಮ ತಮ್ಮಲ್ಲಿ ವೈಮನಸ್ಸು ತಲೆದೋರಿ ಜಗಳ ಮಾಡುತ್ತಾರೆ. ಯಾವುದರ ಅರಿವೂ ಇರದ ಹೊಸಬರಿಗೆ, ಜಗಳವಾಡುವವರು ಆ ಎರಡು ಪಂಗಡದವರು ಇಲ್ಲವೆ ಎರಡು ವ್ಯಕ್ತಿಗಳು—ಎನಿಸಿಬಿಡುವುದು ಆದರೆ ಸಂಪೂರ್ಣವಾಗಿ ಒಳಹೊಕ್ಕು ನೋಡಿದಲ್ಲಿ, ಆಪರ ವೈಮನಸ್ಸುಗಳಿಗೆ ಕಾರಣಗಳು ಅನೇಕವಿದ್ದುದು ಕಂಡುಬರುವುದು. ಹಲವು ಸಲ ಮೂರನೆಯವರು ಅವರ ಮನಸ್ಸುಗಳನ್ನು ಕೆಡಿಸಲು ಕಾರಣರಾಗಿರಬೇಕು ಅಂತಹವರ ಕೈಚಳಕವಿದ್ದಂತೆ—ಕಣ್ಣಿಗೆ ಕಾಣುವ ಜಗಳದಲ್ಲಿ—ತೋರಿಬರುವುದಿಲ್ಲ; ಆದರೂ ಆ ಜಗಳಕ್ಕೆ ಇವರೇ ಕಾರಣರು. ಹಲವಾರು ರೀತಿಗಳಲ್ಲಿ ಬಣ್ಣಬಳಿದು ಇಲ್ಲದ್ದೊಂದು ಹೇಳಿ ಮನಸ್ಸು ಕೆಡಿಸಿ, ಜಗಳಕ್ಕೆ ಸಿದ್ಧಗೊಳಿಸಿದ ಮೂರನೆಯವರೇ, ಬಾಳಪಾಲು ಅಂತಹ ಜಗಳಗಳಿಗೆ ಹೊಣೆಗಾರರಾಗುತ್ತಾರೆ. ಇದೇ ಮಾತು ಯುದ್ಧಭೂಮಿಯಲ್ಲಿ ನಡೆಯುವ ಯುದ್ಧಕ್ಕೂ ಅನ್ವಯಿಸುವುದು. ಯುದ್ಧಸಾರಿದವರು ಕಾದುವ ಯೋಧರಲ್ಲ; ರಾಜ್ಯಾಧಿಕಾರಿಗಳು! ಆದರೂ ಪ್ರತ್ಯಕ್ಷವಾಗಿ ಮಾರಿಯ ಮುಖವಲ್ಲಿ ನಿಂತು ಯುದ್ಧಮಾಡುವವರು ಯೋಧರು! ಆದರೂ ಯುದ್ಧದ ಹೊಣೆಗಾರರು ಅವರಲ್ಲ!

ಇಬ್ಬರು ಗಂಡ-ಹೆಂಡಿರಿರುತ್ತಾರೆ, ಕೆಲದಿನಗಳ ನಂತರ ಅವರಿಗೆ ಮಕ್ಕಳೂ ಹುಟ್ಟಬಹುದು. ಮಕ್ಕಳ ಜನನಕ್ಕೆ ಅವರಿಬ್ಬರಪೇ ಪೂರ್ತಿ ಕೈಯಾಡವಿರುವುದೆಂದು ಧೈರ್ಯವಾಗಿ ಎದೆತಟ್ಟಿ ಹೇಳಬಹುದು. ಆದರೆ ಅಂತಹ ಒಂದು ಸಂದರ್ಭವನ್ನು ಕಲ್ಪಿಸಿಕೊಟ್ಟವರಾರು? ಅವರಿಬ್ಬರ ಮದುವೆಯಾಗಿರದಿದ್ದರೆ ಇದು ಸುಲಭಸಾಧ್ಯವಿತ್ತೇ? ಹಿರಿಯರೋ ಪುರೋಹಿತರೋ ನಡುವೆ ನಿಂತು, ಅವರ ಮದುವೆ ಮಾಡಿಸುತ್ತಾರೆ. ಮದುವೆಯಾಗದೆ ಇಂತಹ ಹಲವಾರು ಘಟನೆಗಳು ನಡೆಯಬಹುದು; ಆದರೆ ಅವು ಮದುವೆಯನಂತರ ನಡೆಯಬಹುದಾದಷ್ಟು ದೊಡ್ಡ ಪ್ರಮಾಣದಿಂದ ನಡೆಯುವುದಿಲ್ಲ. ಅಂತಹ ಘಟನೆಗಳಿಗೆ ಅನೇಕ ತೊಂದರೆಗಳು ಅಡ್ಡಬಂದು ಬಿಡುವುವು. ಅವುಗಳ ಪ್ರಗತಿ ಮುಂದವಾಗಿ ಬಿಡುವುದು. ಅಂತಹ ಅಡ್ಡಿಗಳನ್ನು ದೂರಮಾಡುವುದಕ್ಕೆ ಮದುವೆ ನೆರವಾಗುವುದು. ಆದುದರಿಂದ ಗಂಡ-ಹೆಂಡಿರ ಕಾರ್ಯದಲ್ಲಿ ಗುರು-ಹಿರಿಯರು ಸಹಾಯಕರಾಗುತ್ತಾರೆ. ಇಂತಹ ಹಲವಾರು ಸಂಗತಿಗಳನ್ನು ನಿತ್ಯದ ಬಾಳಿನಲ್ಲಿ ಕಾಣುತ್ತೇವೆ.

ಆಡುಂಬೊಲದ ಮೇಲೆ ಆಟವು ಪ್ರಾರಂಭವಾಗಿರುತ್ತದೆ. ಎರಡೂ ಪಕ್ಷದವರು ಉತ್ಸಾಹದಿಂದ ಆಟ ನಡೆಯಿಸಿರುತ್ತಾರೆ. ದೂರದಲ್ಲಿ ನಿಂತ ವೀಕ್ಷಕರು ಕೇಕೆಯಾಕುತ್ತ ಆಟಗಾರರಿಗೆ ಹುರುಪು ಕೊಡುತ್ತಾರೆ. ಆದರಿಂದ ಆಟಗಾರರಿಗೆ ಮಿತಿಮೀರಿದ ಉತ್ಸಾಹ ಬಂದು, ಆಟದ ರಂಗೇ ಬದಲಾಗುತ್ತದೆ. ಇಲ್ಲಿ ವೀಕ್ಷಕರದೇನೂ ಆಟದಲ್ಲಿ ನೇರವಾದ ಅಂಗವಿರುವುದಿಲ್ಲ; ಆದರೂ ಆಟದ ರಂಗಿಗೆ ಅವರೇ ಕಾರಣರು.

ಆಳುಗಳನ್ನು ದುಡಿಸಿಕೊಳ್ಳುವ ಯಜಮಾನ, ಸೋಮಾರಿತನಗಳಿಂದ ಕೆಲಸ ತೆಗೆದುಕೊಳ್ಳುವುದಕ್ಕಿಂದು ಹೆಗಲಮೇಲೆ ಹಾಕಿಕೊಂಡ ಬಾರುಕೋಲು ಮೊದಲಾದುವು, ಈ ಜಾತಿಗೆ ಸೇರುತ್ತವೆ. ಎಲ್ಲ ಸಂದರ್ಭಗಳಲ್ಲಿಯೂ ಸಹಾಯಕರಿಂದ ಕಾರ್ಯ ಮುನ್ನಡೆಯ ಮಾರ್ಗದಲ್ಲಿಯೆ ನಡೆಯುತ್ತದೆಂದಲ್ಲ; ಹಲವು ಸಲ ನಡುವಿನ ಇಂತಹ ಸಹಾಯಕರಿಂದ, ನಡೆಯುವ ಕಾರ್ಯಕ್ಕೆ ಅಡ್ಡಿ ಬರುವುದಲ್ಲದೆ ಅದು ಹಿನ್ನಡೆಯಲೂ ಸಾಧ್ಯವಿದೆ. ಹುಡುಗಿಯೊಬ್ಬಾಕೆ, ತುಂಬಾ ಇಂಪಾದ ಧ್ವನಿಯಿಂದ ಒನಪು-ಒಯ್ಯಾರಗಳಿಂದ ಮುದಿಮುದಿಸಿ, ಹಾವ-ಭಾವಗಳನ್ನು ತೋರಿ ಹಾಡುತ್ತಿರುವಳೆಂದು ತಿಳಿಯುವಾ! ಆಗ ಇಲ್ಲಿ ಯಾರೂ ಇರುವದಿಲ್ಲ. ಆ ಸ್ಥಳ ನಿರ್ಜನವಾಗಿರುವುದೆಂದೇ ಆಕೆ ನಿರ್ಧರಿಸಿದಂದ, ಪೈಜಾಮಬಿಟ್ಟುಕೊಟ್ಟು ತಾನೆತಾನಾಗಿ, ಗಾನಸಾಗರದಲ್ಲಿ ನಲಿಯುತ್ತಾರೆ! ಇದನ್ನಾಲಿಸಿದವರಿಗೆ ನಿಜಕ್ಕೂ ಸಂತಸವಾಗುತ್ತದೆಂದಿಟ್ಟುಕೊಳ್ಳೋಣ! ಅಂತಹ ಒಬ್ಬರು ಆಕೆಯ ಸಮೀಪಕ್ಕೆ ಆಗ ಹೋಗಿ, ಆಕೆಯನ್ನು ಪ್ರಶಂಸಿಸಿ ಮಾತನಾಡುತ್ತಾರೆ! ಅವರ ಹೊಗಳುವಿಕೆಯಿಂದ ಆಕೆ ಇನ್ನೂ ಉತ್ಸಾಹಗೊಂಡು, ತನ್ನ ಪಾಠವನ್ನು ಮುಂದುವರೆಯಿಸಬೇಕಾಗಿತ್ತು; ಆದರೆ ಆಕೆ ಅವನನ್ನು ಕಂಡೊಡನೆಯೇ ಸಂಕೋಚದಿಂದ ನಾಚಿಕೊಂಡು, ಅದನ್ನೆಲ್ಲ ನಿಲ್ಲಿಸಿ ಬಿಡುತ್ತಾಳೆ. ಅಲ್ಲಿ ಎರಡನೆಯವರ ಬರುವು ಸಹಾಯವೆನಿಸುತ್ತಿದ್ದರೂ, ಅದು ಕೆಲಸ ನಿಲ್ಲಿಸಿ ಬಿಡುತ್ತದೆ. ಹಲವು ಸಲ ಆಕೆ ಛಿಡೆ, ಮುರುವತ್ತುಗಳಿಗೆ ಸಿಕ್ಕಿ ಹಾಡನ್ನು ಮುಂದೆವರೆಯಿಸಿದರೂ, ಮೊದಲಿನಂತಹ ಸಹಜತೆ, ಮಾಧುರ್ಯಗಳು ಅದಕ್ಕೆ ಬರಲಾರವು. ಸಂಕೋಚವೇ ಅಧಿಕವಾಗಿ ಬಿಡುವುದು. ಇಲ್ಲಿ ಉತ್ತೇಜಕರಾಗಿ ಬಂದ ನಡುವಿನವರಿಂದ ಕಾರ್ಯಗತಿ

ಮುಂದವಾಗುವುದು. ಇಂತಹ ಎಷ್ಟೋ ಸಂದರ್ಭಗಳು ಅಡಿಗಡಿಗೆ ನಮ್ಮ ದೃಷ್ಟಿಗೆ ಬೀಳಬಹುದು! ಇದು ಬರೀ ಮಾನವರಲ್ಲಿಯ ಮಾತಾಯಿತು; ಪ್ರಪಂಚದ ಎಲ್ಲ ರಂಗಗಳಲ್ಲಿಯೂ ಇವುಗಳ ಕೈವಾಡವಿದ್ದುದು ಕಂಡುಬರುತ್ತದೆ. ಕೆಲವು ವಸ್ತುಗಳ ಇಂತಹ ಸಹಾಯಕ ಗುಣಗಳನ್ನು ಪರೀಕ್ಷಿಸಿ, ತಜ್ಞರು ಹಲವು ತೆರನಾದ ಲಾಭಗಳನ್ನು ಅವುಗಳ ನೇರವಿನಿಂದ ಪಡೆಯುತ್ತಲಿದ್ದಾರೆ! ರಸಾಯನಶಾಸ್ತ್ರಜ್ಞರಿಗಂತೂ ಇಂತಹ ವಸ್ತುಗಳು ಪರಮ ಮೈತ್ರಿಯವ ಎಷ್ಟೋ ರಸಾಯನಕ್ರಿಯೆಗಳು ನಡೆಯುತ್ತವೆ; ಎಷ್ಟೋ ಮಹತ್ತ್ವದ ವಸ್ತುಗಳು ಇಂದು ರಸಾಯನ ಕ್ರಿಯೆಯ ಪರಿಣಾಮಗಳು. ಆ ವಸ್ತುಗಳ ಉತ್ಪಾದನೆಯನ್ನು ಹೆಚ್ಚಿಸಲಿಕ್ಕೂ, ಆರ್ಥಿಕದೃಷ್ಟಿಯಿಂದ ಅವು ನಿರಾಯಾಸವಾಗಿ ದೊರೆಯುವಂತೆ ಮಾಡುವುದಕ್ಕೂ ಹಲವೊಂದು ಹಂಚಿಕೆಗಳನ್ನು ಆರಿಸಬೇಕಾಗುತ್ತದೆ. ಸಹಾಯಕ ಇಲ್ಲವೆ ಮಧ್ಯಸ್ಥ ವಸ್ತುಗಳು ಅಂತಹ ಹಂಚಿಕೆಗಳ ಪರಿಣಾಮಗಳು. ಇವುಗಳಿಗೆ ಸಹಾಯಕಗಳು, ಮಧ್ಯಸ್ಥ ವಸ್ತುಗಳು. ಸಹಾಯಕ ಕೈವಾರಿಗಳು ಎಂದು ಹೆಸರು (Catalyst, Catalysers or Catalyticagents). ಇವುಗಳ ಕ್ರಿಯೆಯೇ "ನೇರವು, ಸಹಾಯಕತೆ ಇಲ್ಲವೆ ಮಧ್ಯಸ್ಥಿಕೆ" (Catalysis). Catalysis ಇದರ ಶಬ್ದಾರ್ಥ— (Loosing Down) 'ಕಳೆದುಕೊಳ್ಳು' ಎಂದು. ಏನನ್ನು ಕಳೆದುಕೊಳ್ಳುವುದೆಂಬುದು ಸರಿಯಾಗಿ ತಿಳಿಯದು.

ಬರಿಯ ರಸಾಯನ ವಸ್ತುಗಳೇ ಸಹಾಯಕಗಳಾಗಿ ಕೆಲಸಮಾಡುತ್ತವೆಂದಲ್ಲ. 'ಬ್ಯಾಕ್ಟೀರಿಯಾ ಈಸ್ಟ್ (Bacteria-yeast)' ಮೊದಲಾದ ಸೂಕ್ಷ್ಮಜೀವಿಗಳೂ ಸಹಾಯಕಗಳಂತೆ ಕೆಲಸಮಾಡುತ್ತವೆ. ಪಿಷ್ಟಪದಾರ್ಥದಿಂದ ಮದ್ಯಾರ್ಕವನ್ನು ಸಿದ್ಧಗೊಳಿಸುವಾಗ 'ಈಸ್ಟ್' ಸಹಾಯಕಗಳಂತೆ ಕೆಲಸಮಾಡುತ್ತದೆ. ಸಾರಜನಕ (Nitrifying) ಬ್ಯಾಕ್ಟೀರಿಯಾಗಳೂ ಅಮೋನಿಯಾದಿಂದ ಹರಿತ್‌ಪೀತಾಮ್ಲವನ್ನು ಸಿದ್ಧಪಡಿಸುವಾಗ ಸಹಾಯಕಗಳಂತೆ ಕೆಲಸಮಾಡುತ್ತವೆ. ನಿಸ್ಸಾರಜನಕ (Denitrifying) ಬ್ಯಾಕ್ಟೀರಿಯಾಗಳು ಹರಿತ್‌ಪೀತಾಮ್ಲ (HNO_3) ದಿಂದ ಸಾರಜನಕ (Nitrogen) ವಾಯುವನ್ನು ಸಿದ್ಧಗೊಳಿಸುವಾಗ, ಸಹಾಯಕಗಳಂತೆ ಕೆಲಸಮಾಡುತ್ತವೆ. ಇನ್ನೂ ಹಲವು ತರದ ಇಂತಹ ಸೂಕ್ಷ್ಮ ಜೀವಿಗಳಿರುತ್ತವೆ. ಇವುಗಳಿಗೆ Enzymes ಎಂದು ಕರೆಯುತ್ತಾರೆ ಆರ್ಥಿಕ ವೃದ್ಧಿಯಲ್ಲಿ ಇವಕ್ಕೆ ಮಹತ್ತ್ವ ಅತಿಯಾಗಿದೆ. ಪಿಷ್ಟ, ಮದ್ಯಾರ್ಕ, ಸಕ್ಕರೆ ಇತ್ಯಾದಿ ಹಲವಾರು ಔದ್ಯೋಗಿಕ ವಸ್ತುಗಳನ್ನು ಸಿದ್ಧಗೊಳಿಸುವಾಗ, ಇವು ನೆರವು ನೀಡುತ್ತವೆ. ಇವುಗಳ ಅವಶ್ಯಕತೆ ಅನಿವಾರ್ಯ! ಹಾಲಿನಿಂದ ಮೊಸರು ಹುಟ್ಟುವುದಕ್ಕೂ, ಕಾಯಿ ಹಣ್ಣಾಗಲಿಕ್ಕೂ ಈ ಜೀವಿಗಳೇ ಕಾರಣಗಳು! ಇಪ್ಪತ್ತಕ್ಕಿಂತ ಹೆಚ್ಚುವರ್ಗಗಳ ಜೀವಿಗಳು ಈಬಳಕೆಯಲ್ಲಿ ಸೇರುತ್ತವೆ. ಇಂತಹ ಜೀವಿಗಳನ್ನು ಪ್ರಯೋಗಶಾಲೆಗಳಲ್ಲಿಯೂ ತಯಾರಿಸುತ್ತಾರೆ.

ದ್ರವ್ಯರಾಶಿ (Mass)— ರಸಾಯನ ಸ್ಥಿತಿಗಳೆರಡರಲ್ಲಿಯೂ, ಸ್ವತಃ ಬದಲಾಗದ ಮೂರನೆಯ ಹೊರಗಿನ ವಸ್ತುವೊಂದು ರಸಾಯನ ಕ್ರಿಯೆಯ ಮೇಲೆ (ಹೆಚ್ಚಿಸುವುದು ಇಲ್ಲವೆ ಕಡಿಮೆ ಮಾಡುವುದು) ಪರಿಣಾಮವಶ್ನಂಟುಮಾಡುವುದಕ್ಕೆ ನೆರವು, ಸಹಾಯಕತೆ ಇಲ್ಲವೆ ಮಧ್ಯಸ್ಥಿಕೆಯೆಂದು ಹೆಸರು. ಪರೀಕ್ಷಾನಳಿಕೆಯಲ್ಲಿ ಪೊಟ್ಯಾಶಿಯಮ್ ಕ್ಲೋರೇಟ್ ($Kclo_3$) ಪಾಕಕಾಸಿದರೆ ಅದು ಬೇಗಲು ಕರಗುತ್ತದೆ. ಇನ್ನೂ ಹೆಚ್ಚಿಗೆ ಕಾಸಿದರೆ ಅದರೊಳಗಿಂದ ಪ್ರಾಣವಾಯುವು ಹೊರಡುತ್ತದೆ (O_2). ಆಬಳಿಕ ಅದಕ್ಕೆ ಮ್ಯಾಂಗನೀಜ್ ದ್ವಿಭಸ್ಮವನ್ನು (Mno_2) ಕೂಡಿಸಿ ಕಾಯಿಸಿದರೆ, ಆಗ್ಗೇ ಉಷ್ಣತಾಮಾನದಲ್ಲಿ ಪ್ರಾಣವಾಯುವಿನ ಪ್ರಮಾಣ ಹೆಚ್ಚುವುದು. ಮೊದಲಿನಷ್ಟೇ ಪ್ರಾಣವಾಯುವು ಕಡಿಮೆ ಉಷ್ಣತಾಮಾನದಲ್ಲಿ ದೊರೆಯುವುದು. ಪ್ರಯೋಗಾನಂತರ ಪರೀಕ್ಷಾನಳಿಕೆಯಲ್ಲಿ ಉಳಿದ ವಸ್ತುವನ್ನು ನೀರಿನಲ್ಲಿ ಬೆರೆಯಿಸಿ, ಸೋಸಿ ರುದ್ಧಗೊಳಿಸಿ ಪರೀಕ್ಷಿಸಿದಲ್ಲಿ, ಮ್ಯಾಂಗನೀಜ್ ದ್ವಿಭಸ್ಮವಾ, ದ್ರವ್ಯರಾಶಿ ಮತ್ತು ರಸಾಯನ ಸ್ಥಿತಿಗಳೆರಡರಲ್ಲಿಯೂ ಬದಲಾಗದಿದ್ದುದು ಕಂಡುಬರುತ್ತದೆ.

ಸಹಾಯಕಗಳು ರಸಾಯನ ಕ್ರಿಯೆಯಲ್ಲಿ ಯಾವ ರೀತಿಯಲ್ಲಿ ಕೆಲಸಮಾಡುತ್ತವೆಯೆಂಬುದನ್ನು ಕಂಡು ಹಿಡಿದಿದ್ದಾರೆ; ಒಬ್ಬೊಬ್ಬರು ಒಂದೊಂದು ಬಗೆಯಾಗಿ ವಿಚಾರಗಳುಳ್ಳವರಾಗಿದ್ದಾರೆ. ಎಲ್ಲರೂ ತಮ್ಮ ಹೇಳಿಕೆಗಳನ್ನು ಪ್ರಯೋಗದಿಂದಲೇ ಪುಷ್ಟೀಕರಿಸುತ್ತಾರೆ; ಆದರೂ ಒಂದು ನಿಶ್ಚಿತ ಸ್ಥಿತಿಗೆ ಯಾರೂ ಇನ್ನೂ ವರೆಗೆ ಬಂದಿಲ್ಲ. ಅವುಗಳಲ್ಲಿ ಮುಖ್ಯವಾದುವೆಂದರೆ:—

೧. ಸಹಾಯಕಗಳು ಬದಲಾವಣೆ ಹೊಂದುವುದಿಲ್ಲ—

ದ್ರವ್ಯರಾಶಿ ಮತ್ತು ರಸಾಯನ ಸ್ಥಿತಿಗಳೆಂದೂ ಬದಲಾಗುವುದಿಲ್ಲವೆಂದು ಹಿಂದೆಯೆ ಹೇಳಿದೆ. ಅವುಗಳ ಭೌತಿಕ (Physical) ಸ್ಥಿತಿಯಲ್ಲಿ ಮಾತ್ರ ಒಂದಿನಿತು ಬದಲಾವಣೆಯಾಗಬಹುದು. ಮೇಲಿನ ಪ್ರಯೋಗದಲ್ಲಿಯ ಮ್ಯಾಂಗನೀಜ್ ಭಸ್ಮದ ಪಳುಕುಗಳು ಪ್ರಯೋಗದ ಕೊನೆಯಲ್ಲಿ ಪುಡಿಯಾಗಿ ಮಾರ್ಪಡುತ್ತವೆ. ಎಮೋನಿಯಾದಿಂದ ಹರಿತ್‌ಪೀತಾಮ್ಲವನ್ನು ಸಿದ್ಧಗೊಳಿಸುವಾಗ, ಸಹಾಯಕದಂತೆ ಉಪಯೋಗಿಸಿದ ಪ್ಲಾಟಿನಮ್ ತಂತಿಯು ಹೊರುಕುಬರಕಾಗುವುದು.

೨. ಸಹಾಯಕಗಳು ತೀರ ಕಡಿಮೆಪ್ರಮಾಣದಲ್ಲಿ ಪರಿಣಾಮವನ್ನುಂಟುಮಾಡುತ್ತವೆ—

ಸಹಾಯಕಗಳು ರಸಾಯನಕ್ರಿಯೆಯಲ್ಲಿ ಪರಿಣಾಮನುಡಬೇಕಾದರೆ ತೀರ ಕಡಿಮೆಪ್ರಮಾಣದಲ್ಲಿರಬೇಕು. ಜಲಜನಕವಾಯುವು ಉರಿಯುವುದಕ್ಕೂ, ಹಸಿರುವಾಯು (Cl_2) ಮತ್ತು ಜಲಜನಕವಾಯುಗಳು ಸೇರಿ ಶಂಖದ್ರಾವಾಮ್ಲ (Hcl) ಸಿದ್ಧವಾಗಲಿಕ್ಕೂ ಅಲ್ಪಪ್ರಮಾಣದಲ್ಲಿ ನೀರುಬೇಕು.

೩. **ಸಹಾಯಕಗಳಿಂದಲೂ ಕ್ರಿಯೆ ಪ್ರಾರಂಭಿಸುವುದಿಲ್ಲ**—"ಸಹಾಯಕಗಳಿಂದಲೂ ಕ್ರಿಯೆಯನ್ನು ಮೊದಲುಮಾಡುವುದಿಲ್ಲ; ಆದರೆ ನಡೆಯುವ ಕ್ರಿಯೆಯನ್ನು ಹೆಚ್ಚಿಸುತ್ತವೆ" ಎಂದು ಓಸ್ಟ್ವಾರ್ಡನು ತಿಳಿದಿದ್ದನು. ಆದರೆ ಇದು ಪೂರ್ತಿ ಸತ್ಯವಾಗಿಲ್ಲ. ಸಹಾಯಕಗಳೇ ರಸಾಯನಕ್ರಿಯೆಯನ್ನು ಪ್ರಾರಂಭಮಾಡುವ ಎಷ್ಟೋ ದೃಷ್ಟಾಂತಗಳಿವೆ. ನಿಶ್ಯಬ್ದ ಉಷ್ಣಕಾವಾನದಲ್ಲಿ ಕೂಡ ಜಲಜನಕ ಮತ್ತು ಪ್ರಾಣವಾಯುಗಳು, ಪ್ಲಾಟಿನಂ ಕಪ್ಪು (Platinum Black) ಸಹಾಯಕದ ನೆರವಿನಿಂದ ನೀರನ್ನು ಹುಟ್ಟಿಸುತ್ತವೆ.

೪. **ಸಮತೋಲಿತ ರಸಾಯನಕ್ರಿಯೆಗಳಲ್ಲಿ ಸಮತೋಲನೆಯನ್ನು ಕಾಯ್ದುವುದೂ ಈ ಸಹಾಯಕಗಳ ಹುಟ್ಟಿಗುಣವು.**

ಇದರಿಂದ ಸಮತೋಲನಬಿಂದುವು ನಿಶ್ಚಲವಾಗಿ ಉಳಿಯುವುದು ಸಾಧ್ಯವಾಗಿದೆ.

ಸಹಾಯಕಗಳು ಬೇರೆ ಬೇರೆ ತೆರದುವುಗಳಾಗಿವೆ; ಅವುಗಳಲ್ಲಿ ನಾಲ್ಕು ಭಾಗಗಳು:

೧. ಧನಸಹಾಯಕಗಳು (Positive Catalysers)
೨. ಋಣಸಹಾಯಕಗಳು (Negetive „)
೩. ಸ್ವತಃ ಸಹಾಯಕಗಳು (Auto „)
೪. ಪ್ರವರ್ತಿತಸಹಾಯಕಗಳು (Induced „)

ರಸಾಯನಕ್ರಿಯೆಗಳನ್ನು ಹೆಚ್ಚಿಸುವ ಸಹಾಯಕಗಳು ಧನಸಹಾಯಕಗಳು. ಇವುಗಳು ತುಂಬಾ ಮಹತ್ವದುವುಗಳಾಗಿವೆ. ಔದ್ಯೋಗಿಕವಸ್ತುಗಳ ಸಿದ್ಧತೆಯಲ್ಲಿಯೂ ಇವ ತುಂಬ ನೆರವುನೀಡುವುವು. ಸಾಸಿರ ಧನಸಹಾಯಕಗಳು ಇಂದು ಬಳಕೆಯಲ್ಲಿ ಇವೆ. ಗಂಧಕಾಮ್ಲ, ಎಮೋನಿಯಾ ಮೊದಲಾದುವುಗಳ ಸಿದ್ಧಕೆಯಲ್ಲಿ ಉಪಯೋಗಿಸುವ ಪ್ಲಾಟಿನಂ-ಕಪ್ಪು, ವನಸ್ಪತಿಯಿಂದ ಆಹಾರಪದಾರ್ಥಗಳನ್ನು ಸಿದ್ಧಪಡಿಸುವಲ್ಲಿ ಉಪಯೋಗಿಸುವ ನಿಕೆಲ್ಲಿನ ಪುಡಿ, ನೀಲಿಯನ್ನು ತಯಾರಿಸುವಾಗ ಉಪಯೋಗಿಸುವ ಪಾರಜ, ಸಾರಜನಕದ ತಯಾರಿಕೆಯಲ್ಲಿ ಉಪಯೋಗಿಸುವ ತಾನ್ವುಸಾರಜನಕ ಲವಣ, ಗಂಧಕಾಮ್ಲ ಸಿದ್ಧತೆಯಲ್ಲಿ ಉಪಯೋಗಿಸುವ ಸಾರಜನಕ ಭಸ್ಮಗಳು—ಈ ಜಾತಿಗೆ ಸೇರಿದ ಸಹಾಯಕಗಳು.

ರಸಾಯನಕ್ರಿಯೆಗಳ ಶಕ್ತಿಯನ್ನು ಕಡಿಮೆ ಮಾಡುವ ಸಹಾಯಕಗಳು ಋಣಸಹಾಯಿಕಗಳು. ಹಲವು ಸಲ ಇವುಗಳಿಂದ ರಸಾಯನಕ್ರಿಯೆ ನಿಂತುಹೋಗಲೂ ಬಹುದು. ರಸಾಯನ ದೃಷ್ಟಿಯಲ್ಲಿ ಧನಸಹಾಯಕಗಳಿಗಿಂತಲೂ ಇವಕ್ಕೇ ಬೆಲೆ ಅಧಿಕ. ರಸಾಯನಕ್ರಿಯೆಗಳಿಗೆ ಅಡ್ಡಿಮಾಡಿ ವ್ಯರ್ಥಕಾಲ್ತೊಡಕಾಗುವುವಾದರೂ ಇವುಗಳಿಂದ ಉಪಕಾರವೇ ಹೆಚ್ಚಿಗಿರುವುದು. ಕೆಲವು ರಸಾಯನ ವಸ್ತುಗಳು ಇಟ್ಟಲ್ಲಿಯೆ ಮಾರ್ಪಾಡುಹೊಂದಿ, ತಮ್ಮ ಸ್ಥಿತಿಯಲ್ಲಿ ಬದಲಾವಣೆಯಾಗುತ್ತವೆ. ಅವುಗಳ ಮೂಲಸ್ಥಿತಿಯನ್ನು ಕಾಯ್ದಿಡಲಿಕ್ಕೆ ಈ ಸಹಾಯಕಗಳು ಬೇಕೇಬೇಕು. ನಡೆಯಬಹುದಾದ ರಸಾಯನಕ್ರಿಯೆಗಳನ್ನು ಇವು ನಿಲ್ಲಿಸಿಬಿಡುತ್ತವೆ. ಜಲಜನಕದ್ವಿಭಸ್ಮಮಿಶ್ರಣ (H_2O_2) ವನ್ನು ಗಾಯಗಳನ್ನು ತೊಳೆಯುವುದಕ್ಕೂ ಸ್ವಚ್ಛತೆಯನ್ನು ಕಾಯ್ದಿಡುವುದಕ್ಕೂ ಉಪಯೋಗಿಸುವರು. ಅದನ್ನು ಹವೆಯಲ್ಲಿ ಇಟ್ಟುಬಿಟ್ಟರೆ ಅದರಲ್ಲಿಯ ಪ್ರಾಣವಾಯುವಿನ ಅರ್ಧಭಾಗವು ಹಾರಿಹೋಗಿ, ಅದು ನೀರಾಗಿಬಿಡುವುದು. ಈ ಕ್ರಿಯೆಯನ್ನು ತಡೆಯುವುದಕ್ಕೆ ಗ್ಲೀಸರೀನ್ ಇಲ್ಲವೆ ರಂಜಕಾಮ್ಲಗಳನ್ನು ಉಪಯೋಗಿಸುವರು. ಇವು ಇಲ್ಲಿ ಋಣಸಹಾಯಕಗಳು.

ರಸಾಯನಕ್ರಿಯೆಯು ಪರಿಣಾಮವಾಗಿ ಹುಟ್ಟಿದ ವಸ್ತುವು ಸಹಾಯಕದಂತೆ ಕೆಲಸಮಾಡುವುದು. ಈ ಸಹಾಯಕವು ಸ್ವತಃಸಹಾಯಕವು. ಇಲ್ಲಿ ಹೊರಗಿನ ವಸ್ತುವು ಸಹಾಯಕವಾಗಿ ಬರಬೇಕಿಲ್ಲ. ಎಥಿಲ್ ಎಸೆಟೇಟ್ (Ethyl acetate) ಮತ್ತು ನೀರುಗಳು ರಸಾಯನಕ್ರಿಯೆ ಹೊಂದಿ ಎಸೆಟಿಕ್ ಆಮ್ಲ (Acetic acid) ಮತ್ತು ಎಥಿಲ್ ಮದ್ಯಾರ್ಕ [Ethyl alcohol] ಗಳನ್ನು ಹುಟ್ಟಿಸುತ್ತವೆ. ಹೆಚ್ಚಿಗೆ ಆಮ್ಲ ಹುಟ್ಟಿದಂತೆಲ್ಲ ಕ್ರಿಯೆ ತ್ವರೆಯಿಂದ ಸಾಗುತ್ತದೆ. ವಿಷಾಮ್ಲ (Oxalic acid) ವು ಆಮ್ಲಮಿಶ್ರಿತ ಪೊಟ್ಯಾಶಿಯಮ್ ಮಿಶ್ರಣದ ಜಾಂಬಳ ಬಣ್ಣವನ್ನು ತೆಗೆದುಬಿಡುತ್ತವೆ. ಕ್ರಿಯೆ ನಡೆಯುವಾಗ ಮ್ಯಾಂಗನೀಜ್ ಲವಣವು ಹುಟ್ಟುತ್ತದೆ; ಈ ಮ್ಯಾಂಗನೀಜ್ ಲವಣವು ಹೆಚ್ಚಿಚ್ಚು ಹುಟ್ಟಿದಂತೆ, ಬಣ್ಣ ತೆಗೆಯುವ ಕ್ರಿಯೆಯು ಭರದಿಂದ ನಡೆಯುತ್ತದೆ.

ಕೆಲವೊಂದು ವಸ್ತುಗಳು ಹಲವು ವಸ್ತುಗಳ ಮೇಲೆ ಜೂಪ ಕ್ರಿಯೆಯನ್ನೂ ಮಾಡಲಾರವು; ಅವರೆ ಕ್ರಿಯೆ ನಡೆಯದ ವಸ್ತುಗಳನ್ನು ಬೇರೆ ಕ್ರಿಯೆ ನಡೆಯುವ ವಸ್ತುವಿನೊಂದಿಗೆ ಸೇರಿಸಿದರೆ, ಕ್ರಿಯೆ ಮಾಡದಿದ್ದ ವಸ್ತುವು ಎರಡೂ ವಸ್ತುಗಳ ಮೇಲೆ ಕ್ರಿಯೆ ಮಾಡುವುದು. ಒಬ್ಬನು ಸಿಗರೇಟು ಸೇದುತ್ತಾನೆ; ಇನ್ನೊಬ್ಬನು ಸೇದುವುದಿಲ್ಲ. ಇಲ್ಲಿ ಸಿಗರೇಟು ಮೊದಲನೆಯವನ ಮೇಲೆ ತನ್ನ ಅಂಕಿತಹಾಕಿದೆ; ಎರಡನೆಯವನ ಮೇಲೆ ಅಧಿಕಾರ ನಡೆಯಿಸುವುದು ಅದಕ್ಕೆ ಸಾಧ್ಯವಾಗಿಲ್ಲ. ಆದರೆ, ಅವರಿಬ್ಬರ ಸಹವಾಸದಿಂದ ಎರಡನೆಯವನೂ ಕೆಲವು ದಿನಗಳಲ್ಲಿ ಸಿಗರೇಟು ಸೇದಲಿಕ್ಕೆ ಕಲಿಯುತ್ತಾನೆಂದು ಇಟ್ಟುಕೊಳ್ಳುವಾ! ಇಲ್ಲಿ ಸಿಗರೇಟು ಪ್ರವರ್ತಿತ ಸಹಾಯಕವು. ಏಕಾಕಿಯಾಗಿದ್ದಾಗ ಅವನನ್ನು ತನ್ನ ಒಡೆತನದಲ್ಲಿ ತಕ್ಕೊಳ್ಳುವುದು ಅದಕ್ಕೆ ಸಾಧ್ಯವಾಗಿರಲಿಕ್ಕಿಲ್ಲ; ಆದರೆ ಮೊದಲನೆಯವನ ಸಹವಾಸದಲ್ಲಿ ಬಿದ್ದಾಗ ಅದಕ್ಕೆಸುಲಭಸಾಧ್ಯವಾಯಿತು. ಹವೆಯು ಸೋಡಿಯಮ್ ಸಲ್ಫಾಯಿಟಿನ ಮೇಲೆ ಮಾತ್ರ ಕ್ರಿಯೆ ಮಾಡುತ್ತದೆ; ಸೋಡಿಯಮ್ ಆರ್ಸಿನೇಟಿನ ಮೇಲೆ ಅದರ ಕ್ರಿಯೆ ನಡೆಯುವುದಿಲ್ಲ. ಆದರೆ ಎರಡನ್ನೂ ಸೇರಿಸಿ ಇಟ್ಟಾಗ, ಹವೆಯು ಅವೆರಡರ ಮೇಲೆಯೂ ಕ್ರಿಯೆವಾಡುವುದು.

ಎಷ್ಟೋ ಸಂದರ್ಭಗಳಲ್ಲಿ ಸಹಾಯಕಗಳ ನೆರವು ಸಿಕ್ಕ-ಬೇಕಾದಷ್ಟು ಸಿಕ್ಕುವುದಿಲ್ಲ. ರಸಾಯನಕ್ರಿಯೆಯಲ್ಲಿ ಬೇರೆ ವಸ್ತುಗಳು ಈ ಸಹಾಯಕಗಳ ಶಕ್ತಿಯನ್ನು ಉಡುಗಿಸಿಬಿಡು-ತ್ತವೆ. ಇವೇ ಪ್ರತಿಸಹಾಯಕಗಳು (Anti catalysers). ಆರ್ಸೆನಿಕ ಭಸ್ಮಗಳು, ಗಂಧಕಾಮ್ಲವನ್ನು ಸಿದ್ಧಗೊಳಿಸುವಾಗ ಉಪಯೋಗಿಸುವ ಪ್ಲಾಟಿನಮ್, ಸಹಾಯದ ಶಕ್ತಿಯನ್ನು ಕಡಿಮೆಮಾಡುತ್ತವೆ. ಆದುದರಿಂದ ಅಂತಹ ಭಸ್ಮಗಳನ್ನು ಆಗಿಂ-ದಾಗ ತೆಗೆದುಹಾಕಬೇಕಾಗುವುದು.

ಕೆಲವು ವಸ್ತುಗಳಲ್ಲಿ ಸಹಾಯಶಕ್ತಿ ಎನಿತೂ ಇರುವುದಿಲ್ಲ; ಅವನ್ನು ಸಹಾಯಕಗಳಂತೆ ಉಪಯೋಗಮಾಡಲೂಬರುವುದಿಲ್ಲ. ಆದರೆ ಅವು ಸಹಾಯಕವಸ್ತುಗಳ ಶಕ್ತಿಯನ್ನು ಹೆಚ್ಚು ಮಾಡು-ತ್ತವೆ. ಇವುಗಳಿಗೆ ಉತ್ತೇಜಕಗಳೆನ್ನುವರು (Activators). ಎನೋನಿಯಾವನ್ನು ಸಂಯೋಜಿಸುವಾಗ ಕಬ್ಬಿಣದ ಪುಡಿಯನ್ನು ಸಹಾಯಕದಂತೆ ಉಪಯೋಗಿಸುವರು. ಕಬ್ಬಿಣದ ಪುಡಿಯಲ್ಲಿಯ ಸಹಾಯಕಶಕ್ತಿಯು, ಮೊಲಿಬ್ಡೀನಿಯಮ್, ಇಲ್ಲವೆ ಸೋಡಿ-ಯಮ್ ಭಸ್ಮದಿಂದ ಹೆಚ್ಚಾಗುವುದು. ಮೊಲಿಬ್ಡೀನಿಯಮ್ (Molybdenum) ಇಲ್ಲವೆ ಸೋಡಿಯಮ್ ಭಸ್ಮಗಳು ಸ್ವತಃ ಸಹಾಯಕಗಳಲ್ಲ. ಬರಿಯ ಸಹಾಯಕಗಳ ಉತ್ತೇಜಕಗಳು. ತನ್ನ ಒಡೆಯನು ಹತ್ತಿರುವಾಗ ಕೆಲವು ನಾಯಿಗಳ ಶೌರ್ಯ ಹೆಚ್ಚಿರುತ್ತದೆ; ಒಡೆಯನಿಲ್ಲದಾಗ ಯಾರನ್ನಾದರೂ ಕಂಡಾಗ— ಬಾಲ ಮುದುಡಿಕೊಂಡು ಓಡಿಹೋಗುವ ನಾಯಿ, ತನ್ನ ಯಜ-ಮಾನನ ಹತ್ತಿರದಲ್ಲಿದ್ದಾಗ ಕಂಡವರ ಮೇಲೆ ಏರಿ ಹೋಗಿ 'ಗುರುಗುಡು'ತ್ತದೆ. ಅದೇ ಯಜಮಾನನು ಅದಕ್ಕೆ ಒಂದು ಸರಪಳಿ ಹೆಚ್ಚಿ ಪಿಡಿದುಕೊಂಡು ಹೋಗುವಾಗಂತೂ ಅದರ ರೌಸು ಹೇಳತೀರದು; ಸರಪಳಿಯನ್ನು ಹರಿದುಕೊಂಡು ಏರಿ-ಹೋಗುತ್ತದೆಯೋ ಎನ್ನುವಷ್ಟರಮಟ್ಟಿಗೆ ಎಳೆಯುತ್ತಿರುತ್ತದೆ. ಇಲ್ಲಿ ಯಜಮಾನನು; ಸಹಾಯಕನು! ಆದರೆ ಸರಪಳಿಯಲ್ಲ— ಯಜಮಾನನಿಲ್ಲದೆ, ಸರಪಳಿಯೊಂದೇ ಇದ್ದರೆ, ನಾಯಿಯ ಶೌರ್ಯ ಹೆಚ್ಚುವುದಿಲ್ಲ; ಸರಪಳಿಯಿಂದ ಅದರ ಶೌರ್ಯ, ಯಜಮಾನನ ಎದುರಿನಲ್ಲಿ ಮಾತ್ರ ಪೆಚ್ಚಾಗುವುದು; ಸರಪಳಿ ಇಲ್ಲಿ ಉತ್ತೇಜಕವು!

ಈ ಸಹಾಯಕಗಳು ಯಾವ ರೀತಿಯಲ್ಲಿ ಕಾರ್ಯಮಾಡು-ತ್ತವೆಯೆಂಬ ಬಗೆಗೆ ವಿಜ್ಞಾನಿಗಳು ಏಕಮೇವ ಅಭಿಪ್ರಾಯದವ-ರಾಗಿಲ್ಲ; ಹಲವಾರು ತೆರನಾದ ಹೇಳಿಕೆಗಳು ಇಂದು ನಮ್ಮೆದುರಿ-ನಲ್ಲಿವೆ. ಇನ್ನು ಮೇಲೆಯೂ ಅನೇಕ ಹೇಳಿಕೆಗಳು, ಸಂಶೋ-ಧನಗಳ ಪರಿಣಾಮಗಳಾಗಿ ಹೊರಬೀಳುವುದೂ ಸಾಧ್ಯವಿದೆ. ಅಂತೆಯೇ ಈ ಬಗೆಗೆ ಇನ್ನೂ ನಿಶ್ಚಿತವಾದ ಜ್ಞಾನ ದೊರೆತಿಲ್ಲ. ಅವುಗಳಲ್ಲಿ ಮುಖ್ಯವಾದುವು ಎರಡು ವಾದಗಳು:—

೧. ಸ್ಪರ್ಶವಾದ (contact theory)

೨. ಮಧ್ಯ ಸಂಯುಕ್ತ ವಸ್ತುವಿನ ವಾದ (Intermediate Compound Theory.)

ಸ್ಪರ್ಶವಾದದ ಹೇಳಿಕೆಯನ್ನು ಮುಂದೆ ಮಾಡಿದ ವಿಜ್ಞಾನಿ-ಗಳು "ಸಣ್ಣಾಗಿ ಪುಡಿಮಾಡಿದ ಘನಸಹಾಯಕಗಳ ಸೂಕ್ಷ್ಮ ಕಣಗಳ ಸುತ್ತಲೂ ಕ್ರಿಯೆನಡೆಯು ಬೇಕಾದ ವಾಯುಗಳು ಬಂದು ಕೂಡ್ಯುತ್ತವೆ; ಈ ವಾಯುಗಳ ದಟ್ಟಣೆ ಹೆಚ್ಚಿದಂತೆ ಕ್ರಿಯೆಯೂ ಭರದಿಂದ ಸಾಗುವುದು" ಎಂದು ಹೇಳುತ್ತಾರೆ. ಸಹಾಯಕ ಪದಾರ್ಥಗಳು ಪುಡಿಪುಡಿಯಾದಂತೆ, ತೀರ ಸಣ್ಣಕಣಗಳಾಗಿ ಪರಿ-ಣಮಿಸುತ್ತವೆ; ಕಣಗಳು ಚಿಕ್ಕವುಗಳಾದಂತೆ ಪೃಷ್ಠ ಕ್ಷೇತ್ರವೂ ಹೆಚ್ಚುವುದು (Surfacearea). ಆ ಭಾಗದಲ್ಲಿ ವಾಯುಗಳು ಬಂದು ಕೂಡುವುವು. ಆಕ್ರಮಣವು ಅತಿಯಾದಂತೆಲ್ಲ ರಸಾ-ಯನ ಕ್ರಿಯೆಯು ತ್ವರೆಯಿಂದ ನಡೆಯುವುದು; ಅಂತೆಯೆ ಪುಡಿ-ಮಾಡಿದ ಅಲ್ಯುಮಿನಿಯಮ್, ಕಬ್ಬಿಣ, ಪ್ಲಾಟಿನಮ್, ನಿಕೆಲ್ ಇತ್ಯಾದಿ ಧಾತುಗಳನ್ನು ಸಹಾಯಕಗಳಂತೆ ಉಪಯೋಗಿಸುವರು.

ಮಧ್ಯವಸ್ತುವಾದವು ಬೇರೊಂದು ತೆರನಾಗಿದೆ. ಅವರು ಸ್ಪರ್ಶವಾದವನ್ನು ಒಪ್ಪುವುದಿಲ್ಲ. ರಸಾಯನ ಕ್ರಿಯೆಯು ಎರಡು ಪದಾರ್ಥಗಳಲ್ಲಿ ನಡೆಯುತ್ತದೆಂದರೆ, ಸಹಾಯಕವು ಮೊದಲು ಅವುಗಳಲ್ಲಿ ಒಂದು ಪದಾರ್ಥದ ಸಂಗಡ ಸೇರಿ, ಬೇರೊಂದು ಮಧ್ಯಸಂಯುಕ್ತ ಪದಾರ್ಥ ಸಿದ್ಧವಾಗುವುದು. ಆಗ ಎರಡನೆಯ ಪದಾರ್ಥವು ಈ ಹೊಸ ಸಂಯುಕ್ತಪದಾರ್ಥದ ಸಂಗಡ ಕ್ರಿಯೆನಡಾಡಿ, ಸಹಾಯಕ ವಸ್ತುವನ್ನು ಅವರಿಂದ ಬೇರೆ-ಮಾಡಿ, ತಾನು ಮೊದಲನೆಯ ವಸ್ತುವಿನೊಂದಿಗೆ ಬೇರೆಯೆ ಸಂಯುಕ್ತ ಪದಾರ್ಥ ನಿರ್ಮಿಸುತ್ತದೆ.

"ಅ", "ಬ" ಗಳೆರಡು ರಸಾಯನ ಕ್ರಿಯೆ ನಡೆಯಬೇಕಾದ ವಸ್ತುಗಳು.

"ಸ" ಸಹಾಯಕವು.

ಅ+ಸ=ಅಸ ಮಧ್ಯ ಸಂಯುಕ್ತ ಪದಾರ್ಥ; ಅಸ+ಬ=ಅಬ+ಸ; ಅಬ ಕೊನೆಯ ಸಂಯುಕ್ತಪದಾರ್ಥ— "ಸ" ಸಹಾಯಕವು ಹೊರಗೆ ಬಂದುಬಿಡುವುದು.

ಚೆಂಬರ ವಿಧಾನದಿಂದ (Chember process) ಗಂಧಕಾಮ್ಲ-ವನ್ನು ಸಿದ್ಧಪಡಿಸುವಾಗ, ಸಾರಜನಕದ ಭಸ್ಮಗಳು ಈ ರೀತಿ-ಯಲ್ಲಿಯೇ ಸಹಾಯಕಗಳಾಗಿ ಕೆಲಸಮಾಡುತ್ತವೆಂದು ತಿಳಿ-ದಿದ್ದಾರೆ.

ಇತ್ತೀಚಿಗೆ 'ವಿದ್ಯುತ್‌ಕಣ ವಿಭಾಜಕ' ಇತ್ಯಾದಿ ಹಲವಾರು ತತ್ತ್ವಗಳ ತಳಹದಿಯ ಮೇಲೂ ಈ ಸಹಾಯಕಗಳ ಕಾರ್ಯ-ಗಳನ್ನು ಕಂಡುಹಿಡಿದಿದ್ದಾರೆ. ಆದರೆ ನಿಶ್ಚಿತ ಜ್ಞಾನವಿನ್ನೂ ದೊರೆತಿಲ್ಲ. ರಸಾಯನ ಪ್ರಯೋಗಶಾಲೆಗಳಲ್ಲಿ ಇಲ್ಲವೆ ಕಾರ್-ಖಾನೆಗಳಲ್ಲಿ ಔದ್ಯೋಗಿಕ ವಸ್ತುಗಳನ್ನು ಲಾಭದಾಯಕಗಳಾ-

ಬಾ ವ ಸಂ ತ

ಶ್ರೀ. ಮುದೇನೂರ ಸಂಗಣ್ಣ, ಹರಪನಹಳ್ಳಿ

★

೧

ಶಿಶಿರಾಗ್ನಿಯೊಳಗಿಂದು ಬೇಯುತಿಹ ಬನರತಿಯ
ಸಂಕಟವ ಪರಿಹರಿಸು ಎಲೆ ವಸಂತ,
ನನಗಿರುವ ಉಗ್ಗಡದ ಬೇಗುದಿಯ ಪರಿಹರಿಸು,
ಬೇಡುತಿಹೆವಿಬ್ಬರೂ ನಿನ್ನ ಸತತ !

೨

ನಗುನಗುವ ಸಲ್ಲಲಿತ ಕೆಂದಳಿರ ಬಟ್ಟೆಯನು
ಸೊಗದಿಂದ ಉಡಿಸಯ್ಯ ಬನದೇವಿಗೆ!
ಜ್ಞಾನದಾ ಒಟ್ಟೆಯನು ಉಡಿಸಯ್ಯ ನನ್ನ ಈ
ಮೂಢತೆಯ ಬತ್ತಲೆಯ ಮನದ ಮೈಗೆ !

೩

ಬರಿದಾದ ಬನರತಿಯ ಕೊರಳಿಂಗೆ ತೊಡಿಸಯ್ಯ,
ಕಂಪಿಡುವ ಹೊಂಗುಸುಮ ವರಮಾಲೆಯನ್ನು !
ಜಡತನದಿ ಭಣಭಣಿಪ ನನ್ನ ಈ ಕಂದರಕೆ
ತೊಡಿಸಯ್ಯ ಚೇತನದ ವರಹಾರವನ್ನು !

೪

ಬರಡಾದ ಗೆಲ್ಲುಗಳ ಸಿಂಗರಿಸು, ಹಲ ವಿಧದ
ರಸಮಧುರ ಹಣ್ಣುಗಳನಲ್ಲಲ್ಲಿ ಬಿಡಿಸಿ !
ಜೀವನದಿ ಹೋರಾಡಿ ಹಸಿದಿರುವೆ ! ಕಳಿಯಯ್ಯ
ಹಸಿವೆಯನು ಚಿರಶಾಂತಿ ಸವಿಫಲವ ತಿನಿಸಿ!

೫

ಎಳದಳಿರ ಮಧ್ಯದಲಿ ಗಾಯಕರ "ಚಿಲಿಪಿಲಿ"ಯ
ಇಂಪಾದ ಹಾಡುಗಳ ನೀ ಹಾಡಿಸು!
ಪರಿಮಳವನ ಮನತಣಿಪ ಚಿರಮಧುರ ಗೀತಗಳ
ನನ್ನ ಹೃದಯದ ವೀಣೆಯನು ಮಿಡಿದು ಹಾಡಿಸು!

೬

ಈ ರೀತಿ ಬನರತಿಯ ಸಂತಯಿಸಿ, ಸಿಂಗರಿಸಿ,
ಜಗವನ್ನೆ ಸೊಗದಿಂದ ನೀ ತುಂಬಿಸಯ್ಯ !
ಒಲುವಿನಲುಮೆಗಳಮೃತ ರಸ ತೀರ್ಥದಲಿ ಮೈದೊ-
ಳೆಸಿ ಅಮರ ಚೋಳೆಯಿಂ ನೀ ಸೆರೆಯಿಸಯ್ಯ !

೬೨ನೆಯ ಪುಟದಿಂದ ಮುಂದೆ ಸಾಗಿದ್ದು :

ಸಿದ್ಧಗೊಳಿಸಬೇಕಾದರೆ, ಈ ಸಹಾಯಕಗಳ ನೆರವು ಅಗತ್ಯ! ಪ್ರತಿ ದಿವಸ ಇಂತಹ ಹೊಸಹೊಸ ಸಹಾಯಕಗಳನ್ನು ಅರಸಿ ತೆಗೆಯುತ್ತಿದ್ದಾರೆ—ಹಿಂದಿನವುಗಳಲ್ಲಿ ಮಾರ್ಪಾಡುಮಾಡಿಕೊಳ್ಳುತ್ತಿದ್ದಾರೆ. ಆದುದರಿಂದ, ಇಂದಿನ ವಿಜ್ಞಾನಯುಗದಲ್ಲಿ ಸಹಾಯಕಗಳಷ್ಟು ಮಹತ್ವ ಇನ್ನಾವ ವಸ್ತುಗಳಿಗೂ ಬರಲಾರದು. ಹಲವು ಸಲ ಸಾಕಷ್ಟು 'ಕಚ್ಚಾ' ಮಾಲು ದೊರೆಯುತ್ತಿದ್ದರೂ, ಸಹಾಯಕಗಳು ದೊರೆಯದಿದ್ದಲ್ಲಿ 'ಪಕ್ಕಾ' ಮಾಲಿನ ಸಿದ್ಧತೆಯೂ ನಡೆಯಲಿಕ್ಕಿಲ್ಲ. ಆದುದರಿಂದ ಸಹಾಯಕಗಳು ರಸಾಯನ ವಿಜ್ಞಾನಿಗಳ ಕೈಗೋಲುಗಳು !! ಇದರ ಸಂಶೋಧನವು ಕನ್ನಡಿಗರಾದ ವಿಜ್ಞಾನಿಗಳಿಂದಲೂ ನಡೆಯಬೇಕು.

——:o:——

(ಡಾ. ಡೇ. ಬಂಗಾಲ ವಿಶ್ವವಿದ್ಯಾಲಯ ಅವರ 'ರಸಾಯನ ಪುಸ್ತಕ'ದಲ್ಲಿಯ 'Catalysis' ಅಧ್ಯಾಯದ ನೆರವನ್ನು ಈ ಲೇಖನ ಬರೆಯುವಾಗ ತೆಗೆದುಕೊಂಡಿದೆ.) ಲೇ.

೬೬ನೆಯ ಪುಟದಿಂದ ಮುಂದೆ ಸಾಗಿದ್ದು :

ಬೃಹತ್ಪಾರಾಶರದಲ್ಲಿ ಕೇವಲ ಉತ್ತಮ ತತ್ತ್ವಗಳು ಸಿಗುತ್ತವೆ. ಇವು ನಮ್ಮ ಅನುಭವಕ್ಕೆ ಬಂದಿವೆ. ಬೃಹತ್ಪಾರಾಶರದಲ್ಲಿ ನವಮದಲ್ಲಿ ರಾಹು ಇದ್ದರೆ 'ಯವನ ಪ್ರಭು ಸನ್ಯಾಸಃ' ಎಂದು ಬರೆದಿದೆ. ಪ್ರಕೃತಲೇಖಕನ ಕುಂಡಲಿಯಲ್ಲಿ ನವಮದಲ್ಲಿ ಉಚ್ಚ ರಾಹುವಿದ್ದುದರಿಂದ, ಅವನಿಗೇ ಇದರ ಅನುಭವ ಬಂದಿತು. ಸಾಮಾನ್ಯ ಪರಿಸ್ಥಿತಿಯಲ್ಲಿ ಹುಟ್ಟಿದವರಿಗೂ ಕೂಡ ಈ ಅನುಭವ ಬರುತ್ತದೆಂದ ಬಳಿಕ, ಶಾಸ್ತ್ರತತ್ತ್ವಗಳನ್ನು ಛಿದ್ರಿಸುವುದು ಹೇಗೆ? ಕಾರಣ ಸಾಮಾನ್ಯರಿಗೆ ಸಮನ್ವಯವನ್ನಾಡುವ ಗ್ರಂಥಗಳನ್ನು ಬರೆದು. ಸೀತಾರಾಮ ಶರ್ಮರು ಹೆಚ್ಚು ಲೋಕಪ್ರೀತಿಯನ್ನು ಪಡೆಯಲೆಂದು ಹಾರೈಸುವೆವು.

ನಮ್ಮ ಸುಪರಿಚಿತ ತರುಣರೂ ಇಂತಹ ಗ್ರಂಥಗಳನ್ನು ಆಸಕ್ತಿಯಿಂದ ನೋಡದೆ, ವಿಮರ್ಶಕ—ಸಂಶೋಧಕ ಬುದ್ಧಿಯಿಂದ ಓದಿ ಅಭ್ಯಾಸಿಸುವುದು ಅಗತ್ಯವೆಂದು ನಮ್ಮ ಭಾವನೆ.

—ಪಂ. ಕೇಶವಶರ್ಮ ಗಲಗಲಿ.

ಕ ಣ್ಣೀ ರು

(ಸಾಮಾಜಿಕ ಕಾದಂಬರಿ)

ಉಷಾ ಸಾಹಿತ್ಯಮಾಲೆಯ ೩ನೆಯ ಪ್ರಕಟನೆ. ಕ್ರಾನ್ ೪ ಆಕಾರದ ೧೯೫ ಪುಟ; ಬರೆದವರು ಶ್ರೀ. ಆ. ನ. ಕೃಷ್ಣರಾಯರು.

"ಒಂದೇ ಬಗೆಯ ಸಾಹಿತ್ಯನಿರ್ಮಾಣಕ್ಕೆ ಕ್ರಿಯಾಶಾಲಿ ಲೇಖಕ ಗಂಟುಬಿದ್ದರೆ, ಅದು ಅವನ ಕುತ್ತಾಗುತ್ತದೆ" ಎಂದು ಶ್ರೀ. ಕೃಷ್ಣರಾಯರಿಗೆ ಹೆದರಿಕೆಯಿದೆ. ಆದುದರಿಂದ "ಮಂಗಳಸೂತ್ರ" ವನ್ನು ಬರೆದಮೇಲೆ ಅವರು ಆ ಮಾದರಿಯನ್ನು ಬಿಟ್ಟು, ಕೆಲಕಾಲ "ಕಲಾವಿದರ ಚಿತ್ತಕಥೆಯನ್ನು ನಿರೂಪಿಸುವ ಕಾದಂಬರಿಮಾಲೆ" ಯನ್ನು ಹೆಣೆಯುತ್ತಿದ್ದರು. ಅದಕ್ಕೂ ಕುತ್ತ ಬರಬಾರದೆಂದು ಈಗ ಮತ್ತೆ ಮೊದಲ ಹಾದಿಗೆ ಹೊರಳಿದ್ದಾರೆ. ಕೆಲಕಾಲ ಬಿಟ್ಟು ಮೊದಲಿನ ಚಿತ್ರವನ್ನೆ ಎತ್ತಿಕೊಳ್ಳುವುದರಿಂದ, ಒಂದು ಬಗೆಯ ಬದಲಾವಣೆಯು ಸ್ವಾರಸ್ಯವೊದಗಬಹುದು. ಆದರೆ, ಆ ಚಿತ್ರ ಹೆಚ್ಚು ಬದಲಾದೀತೆಂದು ಹೇಳಲಾಗುವುದಿಲ್ಲ; ಬದಲಾಗುವುದೆ ಆದರೆ ಕಾದಂಬರಿಕಾರನಲ್ಲಿಯೆ ಆಗಲಿ, ಇಲ್ಲವೆ ಅವನು ಚಿತ್ರಿಸಿತಕ್ಕ ಸಮಾಜದಲ್ಲಿಯೆ ಆಗಲಿ ಸ್ಥಿತ್ಯಂತರವಾಗಿರಬೇಕು. ಈ "ಕಣ್ಣೀರು" ಕಾದಂಬರಿಯಲ್ಲಿ ಆ ಬಗೆಯ ಲಕ್ಷಣ ಕಾಣುವುದಿಲ್ಲ. "ಮಂಗಳಸೂತ್ರ"ದಿಂದ ಈ ವರೆಗಿನ ಅವರ ಎಲ್ಲ ಕಾದಂಬರಿಗಳಲ್ಲಿ, ಬೇರೆ ಬೇರೆ ಹೆಸರಿನಿಂದ ಸನ್ಮುಖದಿಂದ ನಿಲ್ಲುತಕ್ಕ ಪಾತ್ರವರ್ಗಗಳು ಮೂಲತಃ ಬೇರೆ ಬೇರೆಯಾಗಿಲ್ಲ. ಕಾದಂಬರಿಕಾರನ ಜೀವನದಲ್ಲಿ ತಮ್ಮ ವ್ಯಕ್ತಿತ್ವದ ಪ್ರಭಾವವನ್ನು ಬೀರಿಹೋದ ನಾಲ್ಕಾರು ಪ್ರಮುಖ ವ್ಯಕ್ತಿಗಳಿವೆಯೆಂದು ಕಾಣುತ್ತದೆ. ಪುನಃ ಪುನಃ ಅವೇ ಪಾತ್ರಗಳು, ಅವನ ಕೃತಿಯಲ್ಲಿ ವಿವಿಧವೇಷಗಳನ್ನು ಹೊತ್ತು ಹೊಸ ಹೊಸ ಸನ್ನಿವೇಶಗಳಲ್ಲಿ ಸುಳಿದಾಡುತ್ತವೆ. ಈ ಕಾದಂಬರಿಯಲ್ಲಿ ಬರತಕ್ಕ ಪಾತ್ರಗಳು ನಮಗೆ ಪರಿಚಿತವಾದುವು. ಹೊಸದೊಂದು ಸಂದರ್ಭದಲ್ಲಿ ಇವೇ ವ್ಯಕ್ತಿಗಳನ್ನು ಇಟ್ಟರೆ, ಇವು ಹೇಗೆ ವರ್ತಿಸುತ್ತವೆಯೆಂಬುದನ್ನು ನೋಡುವುದೇ ನಮ್ಮ ಕುತೂಹಲವಾಗಿದೆ

"ಸಾಮಾಜಿಕ ಜೀವನವನ್ನು ವಿಷಯಮಯ ಮಾಡುವ ಒಂದು ಸಮಸ್ಯೆಯನ್ನು" ಈ ಗ್ರಂಥ ನಿರೂಪಿಸುತ್ತದೆ. ಅಕ್ಕಿಯ ಮನೆಯವರು ಅಳಿಯನ ಮೂಲಕವಾಗಿ ಹೆಣ್ಣು ಕೊಟ್ಟವರಿಂದ ಹಣ ಎಳೆಯುವುದು, ಅದರಲ್ಲಿ ಯಶಸ್ಸು ದೊರೆಯದಿದ್ದರಿ ಅವರನ್ನು ಹಿಂಸಿಸುವುದು— ಮತ್ತೊಂದು ಹೆಣ್ಣನ್ನು ತಂದು ಅದರ ತಂದೆಯನ್ನು ಹಿಚುಕುವುದು— ಇದೇ ಆ ಸಮಸ್ಯೆ. ಈ ರೂಢಿಯ ಕಾರಣಗಳೇನೆ ಇರಲಿ, ಅದರ ದುಷ್ಪರಿಣಾಮಗಳನ್ನು ಮಾತ್ರ ಕಥೆ ಚಿತ್ರಿಸುತ್ತದೆ. ಸುಬ್ಬಾಯರಿಗೆ ಇಬ್ಬರು ಹೆಣ್ಣುಮಕ್ಕಳು. ಹಿರಿಯ ಮಗಳು ಸೀತೆಯನ್ನು ಕಾಲೇಜಿನ ಉಪಾಧ್ಯಾಯ ಕೇಶವಯ್ಯನಿಗೆ ಕೊಟ್ಟರು. ಅವನು ಅದಕ್ಕೆ ಇದಕ್ಕೆ ಎಂದು ಮಾವನಿಂದ ದುಡ್ಡು ಸೆಳೆದೂ ಸೆಳೆದೂ, ಮಾವ ಕೈಸೋತು "ಇಲ್ಲ" ಎನ್ನುವ ವರೆಗೆ ಕಾಡಿದ. ಕೊನೆಗೆ ಇವರ ಮೇಲೆ ಕೋಪಗೊಂಡು, ಇವರು ತಮ್ಮ ಮಗಳನ್ನು ಕಾಣದಂತೆ ಮಾಡಿದ. ಎರಡನೆಯ ಮಗಳು ಗೌರಿಯನ್ನು ವೆಂಕಟಾಚಲಯ್ಯನವರ ಮಗ ಶ್ರೀನಿವಾಸನಿಗೆ ಕೊಟ್ಟರು. ಹುಡುಗ ಕೆಟ್ಟವನಲ್ಲವಾದರೂ ಅವನ ತಾಯಿ ಫಣಿಯಮ್ಮ, ಸೊಸೆಯ ತಂದೆಯನ್ನು ತೋಡಿ ದುಡ್ಡು ತೆಗೆಯತೊಡಗಿದಳು. ಅದು ಅಸಾಧ್ಯವೆಂದು ತಿಳಿದಾಗ, ಸೊಸೆಯನ್ನು ಪೀಡಿಸುವುದಕ್ಕಾರಂಭಿಸಿದಳು. ಗೌರಿಯ ಪುಣ್ಯವಶದಿಂದ ಅವಳ ಓರಗಿತ್ತಿಯೊಬ್ಬಳು ಸಹಾನುಭೂತಿಯನ್ನು ತೋರುತ್ತಿದ್ದಳು. ಈ ಮಧ್ಯೆ ಶ್ರೀನಿವಾಸನಿಗೆ ಹೊಸಪೇಟೆಯಲ್ಲಿ ಶಾಲಾಮಾಸ್ತರಿಕೆ ದೊರೆತುದರಿಂದ, ಅವನೊಬ್ಬನೆ ಅಲ್ಲಿ ಇರತೊಡಗಿದ. ಫಣಿಯಮ್ಮನ ಪೋಸದ ಕಾಗದಗಳಿಂದ ಅವನಿಗೆ ಗೌರಿಯ ಬಗ್ಗೆ ದುಷ್ಟ ಭಾವನೆಯಾಯಿತು. ಅಲ್ಲಿ ಅದ್ಭುತವಾದ ಘಟನೆಯೊಂದು ನಡೆಯಿತು:— ಧನಾಢ್ಯ ಜಹಗೀರದಾರರೊಬ್ಬರು ಇವನಿಗೆ, ತಮ್ಮ ಒಬ್ಬಳೇ ಒಬ್ಬ ಮಗಳಾದ ಕಾಮಾಕ್ಷಿಯನ್ನು ಕೊಟ್ಟು ಮದುವೆ ಮಾಡಿದರು! ಫಣಿಯಮ್ಮನೊಬ್ಬಳೆ ಹೋಗಿ ಮದುವೆ ಮಾಡಿಸಿದಳು. ಉಳಿದವರಾರಿಗೂ ಈ ಸುದ್ದಿ ತಿಳಿಯದು. ಈಚೆ ಗೌರಿ ನಿರ್ವಿಣ್ಣಳಾಗಿ ತವರುಮನೆ ಸೇರಿರುವ ಹೊತ್ತಿಗೆ, ಹೊಸ ಹೆಂಡತಿಯೊಡನೆ ಶ್ರೀನಿವಾಸ ಮನೆಗೆ ಮರಳಿದ. ಕಾಮಾಕ್ಷಿ ಮೊದಲ ಹೆಂಡತಿಯ ಸ್ಥಿತಿಯನ್ನು ತಿಳಿದು, ಅವಳನ್ನು ಕರೆತರುವುದಕ್ಕೆ ಸಾಹಸಮಾಡಿದರೂ ಅದು ಸಾಧ್ಯವಾಗದ್ದರಿಂದ, ತಾನೇ ಜೋಗಿ ಗೌರಿಯ ಜೊತೆಗಿದ್ದು ತನ್ನ ಪ್ರಾಣವನ್ನು ಅರ್ಪಿಸಿದಳು. ಸಾಯುವ ಮುನ್ನ ಗೌರಿಯನ್ನು ಮರಳಿ ಕರೆದು, ಕೊಳ್ಳೆಂದು ಗಂಡನಿಗೆ ಪ್ರಾರ್ಥಿಸಿಕೊಂಡು ಕಾಗದವನ್ನು ಬರೆದು ತನ್ನ ಹಾಸಿಗೆಯಲ್ಲಿಟ್ಟುಕೊಂಡದ್ದು ಶ್ರೀನಿವಾಸನ ಕೈಗೆ ಬಿತ್ತು. ಈ ಒಳಗಾಗಿ ಸೀತೆಯು ಗಂಡ ಪತ್ಯಾತ್ತಾಪಹೊಂದಿ ಒಳ್ಳೆಯ ಹಾದಿಗೆ ಬಂದಿದ್ದು, ಶ್ರೀನಿವಾಸನಿಗೆ ಬೋಧೆ ಹೇಳಲೂ ಸಿದ್ಧನಾಗಿದ್ದ. ಶ್ರೀನಿವಾಸನು ಆ ಮೇಲೆ ಗೌರಿಯನ್ನು ಮರಳಿ ಪಡೆದನೆಂದು ಕತೆಯು ಸೂಚನೆಯಿದೆ.

ಗಂಡನವರ ದುರಾಗ್ರಹ ಹಾಗೂ ಹೆಣ್ಣು ಹೆತ್ತವರ ಸಂಕಟ ಇವೆರಡೂ ಚಿತ್ತವೇಧಕವಾಗಿ ಚಿತ್ರಿತವಾಗಿವೆ. ಫಣಿಯಮ್ಮನ ಪಾತ್ರ ಅತಿರಂಜಿತವೆನಿಸಿದರೂ ತೀರ ಅವಾಸ್ತವವೇನೂ ಅಲ್ಲ.

ಉದಾತ್ತಜೀವನಗಳನ್ನೇ ಹೆಚ್ಚಾಗಿ''ಕೊಡುವ ಉದ್ದೇಶದಿಂದ ಲೇಖಕರು ಕೆಲವು ಪಾತ್ರಗಳನ್ನು ಬಹಳ ಏರಿಸಿ ಕುಳ್ಳಿರಿಸಿದ್ದಾರೆ. ಈ ಪ್ರಯತ್ನದ ಅನಿವಾರ್ಯಫಲವಾಗಿ ಇನ್ನುಳಿದ ಪಾತ್ರಗಳು ಮಂಕಾಗಿವೆ. ಇಲ್ಲಿಯ ಪಾತ್ರಗಳಿಗೆ ದಾಕ್ಷಿಣ್ಯ ಬಹಳ ಎಂದು ಕಾಣುತ್ತದೆ. ಏಕೆಂದರೆ ಕಾದಂಬರಿಕಾರನು ಎಲ್ಲಿ ಕೈಬಿಟ್ಟನೊ ಅಲ್ಲಿಯೆ ಅವು ಹಟಮಾಡದೆ ನಿಂತುಬಿಡುತ್ತವೆ. ತಮ್ಮ ಮನೆಯಲ್ಲಿಯೆ, ತಮ್ಮ ಕಣ್ಣಮುಂದೆಯೆ, ಎಂತಹ ಘಟನೆ ನಡೆದರೂ ಅವು ವಿಸುಕುವುದಿಲ್ಲ. ಕತೆಯ ಆರಂಭದಲ್ಲಿ, ಸೀತೆಯು ಗೋಳು ಕಟ್ಟಿಕೊಳ್ಳುವುದಕ್ಕೆ, ಕೇಶವಯ್ಯನ ಜೊತೆಗೆ ಅವನ ತಂದೆಯೂ ಇದ್ದನೆಂದು ಹೇಳಿದೆ. ಆ ಮೇಲೆ ಕೇಶವಯ್ಯನಿಗೆ ಪಶ್ಚಾತ್ತಾಪವಾಗಿ ಅವನು ಒಳ್ಳೆಯ ಹುಡುಗನಾಗಬೇಕಾದುದರಿಂದ, ಆ ತಂದೆ ಮುಂದಿನ ಕತೆಯಲ್ಲಿ ಮಾಯವಾಗಿಬಿಡುತ್ತಾನೆ. ಕಾಮಾಕ್ಷಿಯು ಮದುವೆಯ ನಂತರ ವೆಂಕಟಾಚಲಯ್ಯನವರ ಪತ್ತೆಯೆ ಹತ್ತುವುದಿಲ್ಲ. ಮದುವೆ ಮಾಡಿಸಿ ಬಿಟ್ಟಗಿಯುಪ್ಪ ಪುನಃ ಮುಖ ತೋರಿಸುವುದಿಲ್ಲ. ಏಕೆ? ಕಾದಂಬರಿಕಾರನ ಮುಖ್ಯ ಉದ್ದೇಶಕ್ಕೆ ಅವರು ಬೇಕಾಗಿಲ್ಲ.

ಶ್ರೀನಿವಾಸ ತೀರ ಜೊಳ್ಳುವ್ಯಕ್ತಿ. ಕಾಮಾಕ್ಷಿಯ ಪ್ರಾಣತ್ಯಾಗ ಏಂಗ ಅವನಲ್ಲಾಗಲಿ, ಸಣಿಯಮ್ಮನಲ್ಲಾಗಲಿ ಹೃದಯಪರಿವರ್ತನೆಯಾಯಿತೆಂದು ನಂಬುವುದು ಕಷ್ಟ. ''ದೇವಿಯು ಅಜ್ಞೆ'' ಆಗಿದೆಯೆಂದು ಅವನು ಗೌರಿಯನ್ನು ಮರಳಿ ಕರೆದೊಯ್ಯಬಹುದು, ಆದರೆ ಇನ್ನೊಬ್ಬ ಶ್ರೀಮಂತ ಹೆಂಡತಿ ಸಿಕ್ಕರೆ ಅವನು ಮತ್ತೆ ಇವಳನ್ನು ಹೊರದೂಡಲಾರನೆಂಬುದಕ್ಕೆ ಪ್ರಮಾಣವಿಲ್ಲ. ಕಾಮಾಕ್ಷಿಯ ವ್ಯಕ್ತಿತ್ವದ ಪ್ರಭಾವದಿಂದಲೂ ಶ್ರೀನಿವಾಸನ ಪಾತ್ರ ಬೆಳೆಯುವುದಿಲ್ಲ. ಗೌರಿಯನ್ನು ನಡೆಯಿಸಿಕೊಂಡಂತೆ ಕಾಮಾಕ್ಷಿಯನ್ನು ನಡೆಯಿಸಿಕೊಳ್ಳಲಾಗದಿಲ್ಲವೆಂಬುದು ನಿಜ; ಆದರೆ ಅದಕ್ಕೆ ಕಾರಣ ಕಾಮಾಕ್ಷಿಯು ಶ್ರೀಮಂತಿಕೆ ಮಾತ್ರ. ಕಾಮಾಕ್ಷಿಯ ಪಾತ್ರ ಕತೆಯೊಡನೆ ಏಕಾನಹೊಂದುತ್ತಾ ಹೋಗಿದೆ. ಉಳಿದ ಪಾತ್ರಗಳು ಅವಳನ್ನು ಅನುಸರಿಸಲಾರದುವಾಗಿವೆ. ಕೇಶವಯ್ಯ ಬಲು ಬೇಗ ಬುದ್ಧಿಗಲಿಯುತ್ತಾನೆ. ಏಕೆಂದರೆ ಅವನಿಗೆ ಆಡ್ಡಲಾಗಿದ್ದ ಅವನ ತಂದೆಯನ್ನು ಕತೆಗಾರರು ಹಿಂದೆ ಎಳೆದುಕೊಂಡುಬಿಡುತ್ತಾರೆ; ಮತ್ತು ತನ್ನ ಸ್ಪರ್ಧೆಗೆ ಇನ್ನೊಬ್ಬ ಪಡ್ಡಕನೂ ಸಿದ್ಧನಾದುದರಿಂದ, ತನ್ನ ಆಟ ನಡೆಯದೆಂಬುದೂ ಅವನಿಗೆ ತಿಳಿದಿರಬೇಕು. ರಂಗಮ್ಮ, ಸುಶೀಲ, ಸೀತೆಯರು ಕೇವಲ ವಯಸ್ಸಿನಿಂದಲ್ಲದೆ ಗುಣದಿಂದಲೂ ಗೌರಿಗಿಂತ ಹಿರಿಯರು. ಗೌರಿ ಕೋಮಲವಾದ ಎಳೆಯ ಜೀವ. ಸೀತೆಯ ಜಾಣ್ಮೆಯಾಗಲಿ, ಸುಶೀಲಳ ದಿಟ್ಟತನವಾಗಲಿ, ರಂಗಮ್ಮನ ಸಹನೆಯಾಗಲಿ, ಅವಳಲ್ಲಿಲ್ಲ. ಕಾಮಾಕ್ಷಿಯ ಎದುರಿಗಂತೂ ಗೌರಿ ಬಹಳ ಚಿಕ್ಕವಳಾಗಿ ತೋಕುತ್ತಾಳೆ. ಇಡಿಯ ಕಾದಂಬರಿಯಲ್ಲಿ ಎದ್ದು ನಿಲ್ಲಬಹುದಾದ ಪಾತ್ರ ಕಾಮಾಕ್ಷಿ. ಆದರೆ ಅವಳು ಕತೆಯಲ್ಲಿ ಮೊದಲುಬಾರಿ ಕಾಲಿಡುವ ಸಂದರ್ಭ ಮಾತ್ರ ಒಂದು ಅದ್ಭುತವಾಗಿದೆ. ಅಗರ್ಭಶ್ರೀಮಂತರಾದ ಅವಳ ತಂದೆಯವರು, ಜಾಲಾವಾಸ್ತರ್ ಶ್ರೀನಿವಾಸನಿಗೆ ಒಮ್ಮಿಂದೊಮ್ಮೆಲೆ ತಮ್ಮ ಮಗಳನ್ನು ಧಾರೆಯೆರೆದು ಕೊಟ್ಟದ್ದೇಕೆ?— ಎಂದು ಓದುಗನು ವಿಸ್ಮಯಗೊಳ್ಳುತ್ತಾನೆ. ಕಾದಂಬರಿಕಾರನಿಗೆ ಅದು ಬೇಕಾಗಿದೆಯೆಂದಿಷ್ಟೆ ಉತ್ತರ ಬರುತ್ತದೆ. ಏಕೆಂದರೆ ಬೇರೆ ಉತ್ತರ ಯಾವುದೂ ಸಾಧ್ಯವಿಲ್ಲ. ಅದೇನೆ ಇರಲಿ, ಪ್ರಸ್ತುತ ಕಾದಂಬರಿಕಾರರು ಇಟ್ಟುಕೊಂಡ ಉದ್ದೇಶ ಸಫಲವಾಗಿದೆಯೊ ಇಲ್ಲವೊ? ಎಂಬುದು ಮುಖ್ಯ ವಿಷಯ. ಸಾಮಾಜಿಕ ವಿಷಮಯ ಸಮಸ್ಯೆಯೊಂದನ್ನು ನಿರೂಪಿಸುವ ಅವರ ಪ್ರಯತ್ನ ಯಶಸ್ವಿಯಾಗಿದೆ. "ಉದಾತ್ತ ಜೀವನಚಿತ್ರಗಳನ್ನು ಹೆಚ್ಚಾಗಿಕೊಡುವ" ಅವರ ಉದ್ದೇಶಮಾತ್ರ ಸಂಪೂರ್ಣವಾಗಿ ಸಫಲವಾಗಿಲ್ಲ. ಈ ಕಾದಂಬರಿಯಲ್ಲಿ ಬರುವ ಪಾತ್ರಗಳಲ್ಲಿ ದುರ್ಬಲಪ್ರಕೃತಿಗಳೆ ಹೆಚ್ಚು. ಕಾಮಾಕ್ಷಿಯನ್ನು "ಉದಾತ್ತ"ಗೊಳಿಸುವುದಕ್ಕೆ ಲೇಖಕರು ಹೆಣಗಿದ್ದಾರೆ; ಆದರೆ ಅವರ ಸಂವಿಧಾನ, ಓದುಗನ ನಂಬುಗೆಯ ಮೇಲೆ ಬಹಳ ಭಾರಹಾಕುತ್ತದೆ. ಅತ್ತೆ-ಸೊಸೆಯರ ನಡುವಣ ದುಃಖಸಮಸ್ಯೆಯನ್ನು "ಮಂಗಳಸೂತ್ರ"ದ ಕಾವೇರಿ ಆಗಲೆ ತೆರೆದಿದ್ದಳು. ಕಣ್ಣೀರಿನ ಗೌರಿ ಈಗ ಅವನ್ನು ಹಿಂಜಿ ತೋರಿಸಿದ್ದಾಳೆ. ಶ್ರೀ. ಕೃಷ್ಣರಾಯರ ಕತೆಗಾರಿಕೆ ಮನಸ್ಸನ್ನು ಹಿಡಿಯುವಂತಹದೆಂಬುದನ್ನು ಓದುಗರು ಚೆನ್ನಾಗಿ ಬಲ್ಲರು. ನಮಗೆ ಪರಿಚಿತರಾದ ಪ್ರಿಯವ್ಯಕ್ತಿಗಳನ್ನು ಕಣ್ಣೆದುರಿಗೆ ತಂದು ನಿಲ್ಲಿಸಬಕ್ಕ ಕಾರ್ಯದಲ್ಲಿ ಅವರು ನುರಿತಿದ್ದಾರೆ. ಅವರು ಈವರೆಗಿನ ಜೀವನದಲ್ಲಿ ಹೊಸತಾಗಿ ಕಂಡ ಇನ್ನೂ ಕೆಲವು "ಐನಾತಿ" ಪಾತ್ರಗಳನ್ನು, ಇನ್ನು ಮೇಲೆ ನಮಗೆ ಪರಿಚಯ ಮಾಡಿಕೊಟ್ಟಾರೆಂದು ಆತಿಸೋಣ. ಅಸ್ವಾಭಾವಿಕ ಘಟನೆಗಳಿಂದ ಓದುಗರನ್ನು ದಿಗಿಲುಗೊಳಿಸುವುದನ್ನೂ ಅವರು ಮತ್ತೆ ಮತ್ತೆ ಮಾಡಲಿಕ್ಕಿಲ್ಲವೆಂದೂ ನಂಬುತ್ತೇವೆ. ಏಕೆಂದರೆ ತಮ್ಮ "ಅಭಿಮಾನಿಗಳಾದ ಓದುಗರಿಗೆ ಸ್ವಲ್ಪ ಅಸಮಾಧಾನವಾಗುತ್ತದೆ" ಎಂಬುದು ಅವರಿಗೆ ಆಗಾಗ ತಿಳಿಯುತ್ತದೆ.

ಪುಸ್ತಕದ ಮೈಕಟ್ಟು, ಮುದ್ರಣವೂ ಅಂದವಾಗಿವೆ. ತಪ್ಪುಗಳಿಲ್ಲದೆ ಪುಸ್ತಕವನ್ನು ಅಚ್ಚುಮಾಡುವುದು ಕನ್ನಡದಲ್ಲಿಯೂ ಸಾಧ್ಯವೆಂಬುವನ್ನು ತೋರಿಸಿಕೊಟ್ಟುದಕ್ಕಾಗಿ; ಉಷಾಪ್ರಕಟಣಾಲಯದವರು ಅಭಿನಂದನಾರ್ಹರು. ಅವರು ಈ ನಿರಾಭರಣ ಸೌಂದರ್ಯವನ್ನು ಕಾಯ್ದುಕೊಳ್ಳಲೆಂದು ಹಾರೈಸುತ್ತೇವೆ.

—ರಾ. ಕು.

೭. ಭಾವಫಲ ಬೋಧಿನೀ

(ಜ್ಯೋತಿಷಗ್ರಂಥ)

ಗ್ರಂಥಕರ್ತರು: ಶ್ರೀ ಸೀತಾರಾಮ ಶರ್ಮರು, ಕಲ್ಪಿಕರು

ಪ್ರಕಟನಾಲಯ, ಬಳೇಪೇಟೆ, ಬೆಂಗಳೂರು.

ಈಗಿನ ಕಾಲದಲ್ಲಿ ಜ್ಯೋತಿಷದ ಬಗೆಗೆ ಸುಶಿಕ್ಷಿತ ಯುವಕರಲ್ಲಿ ಅನಾದರ ಬಳೆಯುತ್ತಿದೆ. ಇಂತಹ ಕಾಲದಲ್ಲಿ ಬಳವಾಗಿ ಆ ಶಾಸ್ತ್ರವ್ಯಾಸಂಗ ಮಾಡಿದ ವಿದ್ವಾಂಸರ ಗ್ರಂಥಗಳು ಹೊರಬೀಳ

ಬೇಕಾಗಿದೆ. ಈ ಕಾರ್ಯವನ್ನು ಸೀತಾರಾಮು ಶರ್ಮರು ಯಶಸ್ವಿಯಾಗಿ ಮಾಡುತ್ತಲಿರುವರೆಂದು ಈ ಪುಸ್ತಕದ ವಾಚನದಿಂದ ಹೇಳಬಹುದು.

ಈಗ ಪಾಶ್ಚಾತ್ಯರ ಸಂಶೋಧಕದೃಷ್ಟಿಯ ವಿಕಾಸದ ಬಲದಿಂದ ಮುಗ್ದರಾಗಿ, ಕಾಲನಿರ್ಣಯದ ಬಗ್ಗೆ ಅನೇಕರು, ದಿನವರ್ಷ ಪದ್ಧತಿಯನ್ನೇ ಅವಲಂಬಿಸಹತ್ತಿದ್ದಾರೆ. ಏಕೆಂದರೆ ಆ ಪದ್ಧತಿಯಲ್ಲಿ ಸೊಗಸುಇದೆ, ಸೌಂದರ್ಯವಿದೆ, ಸತ್ಯವಿದೆ, ಸಾಕಲ್ಯವಿದೆ. ಹೀಗಾಗಿ ನಮ್ಮ 'ಪಾರಾಶರ ದಶಾಪದ್ಧತಿ' ಹಿಂದೆ ಬೀಳಹತ್ತಿತ್ತು. ಏಕೆಂದರೆ ಆ ಪದ್ಧತಿಯ ಸಮನ್ವಯ ಕಾಠಿನ್ಯ. ಆದರಿಂದ, ಮುಂಬಯಿಯಂ ಜ್ಯೋತಿರ್ವಿದರಾದ—ಪರಮಪರಿಣತ ಪ್ರಜ್ಞರಾಗಿದ್ದರೂ—ಯ. ಕೆ. ಪ್ರಧಾನರು, 'ದಶಾಪದ್ಧತಿಯಂತಹ ದುರ್ದಶೆಯನ್ನುಂಟುಮಾಡುವ ಪದ್ಧತಿ ಬೇರೊಂದಿಲ್ಲ' ಎಂದು ಉದ್ಗಾರ ತೆಗೆದಿದ್ದಾರೆ. ಶ್ರೀ. ನವಾಥೆಯವರಂತಹ ದೀರ್ಘಕಾಲ ವ್ಯಾಸಂಗಿಗಳು ಕೂಡ ಈ ಬೃಹತ್‌ಪಾರಾಶರದ ಬಗ್ಗೆ 'ಅನೇಕ ಪದ್ಧತಿಗಳ ಕೆಸಡಿ' ಎಂದರು. ಆದರೆ ಸೀತಾರಾಮುಶರ್ಮರು ದಶಾಪದ್ಧತಿಯ ಬಗೆಗೆ ಆದರ ಹುಟ್ಟುವಂತೆ ಗ್ರಂಥ ಬರೆದುದಕ್ಕಾಗಿ, ನಾವು ಅವರನ್ನು ಅಭಿನಂದಿಸಬೇಕಾಗಿದೆ.

ನಮ್ಮ ಸಂಸ್ಕೃತ ಗ್ರಂಥಗಳಲ್ಲಿರುವ ಮುಖ್ಯಗೊಂದಲವೆಂದರೆ: ಸಾವಿರ ನಿಯಮಗಳನ್ನೂ ಸಾವಿರ ಅಪವಾದಗಳನ್ನೂ ಹೇಳಿ, ಒಟ್ಟನಮೇಲೆ ಸತ್ಯನು ಕೈಗೆ ನಿಲುಕದಂತೆ ಮಾಡುವುದು. ಇದರಿಂದ ಓದ್ದಿವಂತರ ತಲೆ ಕೂಡ ಕೆಟ್ಟುಹೋಗಿ, ದಶಾಪದ್ಧತಿಯ ಬಗ್ಗೆ ಅನಾದರ ಹುಟ್ಟಹತ್ತುತ್ತದೆ. ಆದರಿಂದ ಶ್ರೀ. ಬಿ.ವಿ. ರಮಣರಂತಹ ವಿದ್ವಾಂಸರಾಗಲಿ, ಶ್ರೀ. ಸೀತಾರಾಮು ಶರ್ಮರಾಗಲಿ, ಸತ್ಯಶೋಧನೆಯ ಮಾರ್ಗವನ್ನು—ಶಕ್ಯವಿದ್ದಷ್ಟಿಗೆ ಸುಗಮವಾಗಿ ಮಾಡಿಹೇಳುವ ದಾರಿಯನ್ನು—ಹುಡುಕಬೇಕು. ಆಗ ಪಾಶ್ಚಾತ್ಯರ ಡೈರೆಕ್ಷನ್ ಪದ್ಧತಿಯನ್ನು ಬಿಟ್ಟು ನಮ್ಮ ದಶಾಪದ್ಧತಿಯ ಜೆನ್ನನ್ನು ಅಭ್ಯಾಸಿಗಳು ಹತ್ತುವರು.

ದಶಾಪದ್ಧತಿಯನ್ನು ಅನುಸರಿಸಲು ಆಯನಾಂಶವಾದವೊಂದು ತೊಡಕಿನ ಪ್ರಶ್ನೆ. ಆದರ ಬಗೆಗೆ ಮಹಾಮಹಾ ವಿದ್ವಾಂಸರಲ್ಲಿಯೂ ಮತೈಕ್ಯವಿಲ್ಲ. ಎಲ್ಲರೂ ತಮ್ಮದೇ ಸತ್ಯವೆಂದು ಸಾಧಿಸುವರು. ೧೯ರಿಂದ ೨೩ ಆಯನಾಂಶವಾದದಿಂದ, ಹಲವು ವರುಷಗಳ ಅಂತರವಿದೆ. ಮಾರಕಗ್ರಹವನ್ನು ಗೊತ್ತುಪಡಿಸಿ ಒಬ್ಬನು ೬೬ ವರುಷಕ್ಕೆ ಜಾತನನ್ನು ಕೊಂದರೆ, ಮತ್ತೊಬ್ಬ ಜ್ಯೋತಿಷಿ ಅವೇ ಮಾರಕಗ್ರಹದಿಂದ ೭೫ ವರುಷಕ್ಕೆ ಕೊಲ್ಲುವನು. ಆದುದರಿಂದ ಯಾವನದು ನಿಜವಾದ ಆಯನಾಂಶ? ಬಿಳಕ ಪಕ್ಷದವರದೋ, ಕೇತಕರ ಪಕ್ಷದವರದೋ, ಮದ್ರಾಸದವರದೋ? ಹೀಗಾಗಿ, ದಶಾಪದ್ಧತಿಯನ್ನೇ ಜನರು ಬಿಡಹತ್ತಿದ್ದಾರೆ. ದಶಾಪದ್ಧತಿಯನ್ನು ಸಾಯನಕ್ಕೆ ಏಕೆ ಸಮನ್ವಯಿಸಿಕೊಳ್ಳಬಾರದು? ಹಿಂದಕ್ಕೆ ಶ್ರೀ. ಜೀವನರಾವ ಚಿಟ್ಟಣಿಸರು 'ಜಾತಕ ಪಾರಿಜಾತ'ದ ಪದ್ಯಗಳನ್ನು ಸಾಯನ ಕುಂಡಲಿಗೇ ಸಮನ್ವಯಿಸಿ ಕೋರಿಸಿದ್ದರು.

ಪ್ರಸ್ತುತ ಗ್ರಂಥದ ಈ ದ್ವಿತೀಯ ಭಾಗದಲ್ಲಿ ಸೀತಾರಾಮು ಶರ್ಮರು, ಶುಲಾದಿಂದ ಮೀನದ ವರೆಗೆ—ಶುಭಾಶುಭ ಫಲಗಳನ್ನು ಕೊಡುವ ಗ್ರಹಗಳನ್ನು ಜೆನ್ನಾಗಿ ಪೃಥಕ್ಕರಿಸಿ ಭಾವಫಲಗಳನ್ನು ವಿವೇಚಿಸಿರುವುದರಿಂದ, ಗ್ರಂಥವು ಸುಲಭವೂ ಸಾಚನೀಯವೂ ಆಗಿದೆ. ಆದರೆ ಕೆಲವು ಪ್ರತ್ಯಕ್ಷ ಉದಾಹರಣೆ ಕೊಟ್ಟು ದಶಾಪದ್ಧತಿಯ ಸತ್ಯತೆಯನ್ನು ಜನರಿಗೆ ಮನಗಾಣಿಸಿ ಕೊಡಬೇಕಾಗಿತ್ತು. ಲಲಿಯು ತನ್ನ ಪ್ರಶ್ನಶಾಸ್ತ್ರದಲ್ಲಿ ಅನೇಕ ಪ್ರತ್ಯಕ್ಷ ಉದಾಹರಣೆಗಳಿಂದ ಗ್ರಂಥವನ್ನು ಬರೆದದ್ದರಿಂದ, ಅವನ ಗ್ರಂಥ ಹೆಚ್ಚು ಆದರಣೀಯವಾಗಿದೆ. ಆದರೆ ಇಂದು ನಾವು ರಾಮ-ಕೃಷ್ಣರಕುಂಡಲಿಗಳಿಂದ ಸಮಾಧಾನಪಡಬೇಕಾಗಿಲ್ಲ. ಈಗ ರಾಜಯೋಗವನ್ನು ಅನುಭವಿಸುವ ಅನೇಕರು ಅಧಿಕಾರಿಗಳು ಸಿಕ್ಕುವರು. ದಾರಿದ್ರ್ಯಯೋಗಕ್ಕೆ ಹೆಳ್ಳಯ ಜನರು ಸಾಕ್ಷಿಯಾಗಿದ್ದಾರೆ. ಪ್ರತ್ಯಕ್ಷ ಉದಾಹರಣೆಗಳು (ಶಾಸ್ತ್ರದ) ನಿಯಮಗಳ ಒರೆಗಲ್ಲಿಗೆ ಜತ್ತುವವು. ಮಾರಕಗ್ರಹಗಳಿಗಾಗಲಿ, ತಾರಕ ಗ್ರಹಗಳಿಗೆ ಅಗಲಿ, ಪ್ರತ್ಯಕ್ಷ ಉದಾಹರಣೆಗಳು ಬೇಕು.

ಶ್ರೀ. ಪರಾಂಡೆಯವರು 'ಲಘುಪರಾಶರಿ'ಗೆ ಮೊನ್ನೆ ಮೊನ್ನೆ ಒಂದು ಸರ್ವೋತ್ಕೃಷ್ಟ ಟೀಕೆಯನ್ನು ಬರೆದಿರುವರು. ಅವರ ಗ್ರಂಥವೂ ಇದೇ ಕೊರತೆಯಿಂದ ಕೂಡಿದೆ. ವಾಹನಯೋಗದಿಂದ ನಮಗೆ ಚಂದ್ರಾಪೀಡನ ಇಂದ್ರಾಯುಧ ಸಿಗುವುದು ಬೇಡ; ಕೊನೆಗೆ ಶ್ಯಾಮಭಟ್ಟರ ತಟ್ಟು ಸಿಕ್ಕರೂ ಅಡ್ಡಿಯಿಲ್ಲ. ವಾಹನಯೋಗದಲ್ಲಿ ಸತ್ಯತೆ ಬೇಕು. ಇದುವೆ ಇಂದಿನ ಜ್ಯೋತಿಷಶಾಸ್ತ್ರ ವಿಮರ್ಶಕರು ಮಾಡಬೇಕಾದ ಕಾರ್ಯ. ಬೃಹತ್ಪರಾಶರದಂತಹ ಮಾನ್ಯ ಗ್ರಂಥವಲ್ಲಿ ಹೇಳಿದ ತತ್ತ್ವಗಳು ವ್ಯರ್ಥವೆಂದು ನಾವು ಹೇಳುವದಿಲ್ಲ; ಅವರೆ ಆ ಋಷಿಯ ಹೆಸರಿನಿಂದ ಆದರಲ್ಲಿ ಕೂಡಿದ ಕಶ್ಮಲವನ್ನು ತೆಗೆದು, ಅದನ್ನು ಋಷಿಯ ಹೆಸರಿಗೆ ಒಪ್ಪುವಂತೆ ಶುದ್ಧಪಾಗಿಸುವುದು ಸಂಶೋಧಕರ ಕಾರ್ಯ.

ಸೀತಾರಾಮುಶರ್ಮರ ಕಾರ್ಯವು ಸ್ತುತ್ಯವಾಗಿದೆ. ವಾಚಕರು ಇದರ ಲಾಭವನ್ನು ಪಡೆಯಬೇಕು. ಪ್ರತಿಯೊಂದು ಲಗ್ನಕ್ಕೆ ಶುಭಾಶುಭ ಫಲಗಳನ್ನು ಪೃಥಕ್ಕರಿಸಿ ಹೇಳುವ ಅವರ ವಿವೇಚನಾಪದ್ಧತಿ ಸ್ಪೃಹಣೀಯವಾಗಿದೆ. ಅದನ್ನು ನಾವು ಮೆಚ್ಚುವೆವು. ೧೦-೮ ಅಧುನಿಕ ಉದಾಹರಣಗಳಿಂದ ಅವರೀ ತತ್ತ್ವಗಳನ್ನು ವಿವೇಚಿಸಿದ್ದರೆ, ಇನ್ನೂ ಜೆನ್ನಾಗುತ್ತಿತ್ತು. ಇರಲಿ, ಮಾರಕ ಗ್ರಹಗಳನ್ನು ತೋರಿಸುವಾಗ, ಪ್ರತ್ಯಕ್ಷ ಸತ್ತವರ ಕುಂಡಲಿಗಳನ್ನು ಉಪಯೋಗಿಸಬೇಕು. ರಾಜಯೋಗಗಳಿಗಂತೂ ಅನೇಕ ಉದಾಹರಣೆಗಳು ಸಿಕ್ಕುವವು. ಗ್ರಹಗಳಿಗೂ ಪರಿಸ್ಥಿತಿಯನ್ನು ಮಾರುವ ಶಕ್ತಿ ಇಲ್ಲವೋ? ಪರಿಸ್ಥಿತಿಯನ್ನೂ ವಿಚಾರಿಸಬೇಕೆಂದು ಎಲ್ಲರೂ ಹೇಳುವರು. ಈ ಮಾತಿನ ವಿವೇಚನೆಯಾಗಬೇಕು.

ಸಾದರ ಸ್ವೀಕಾರ

☆

೧೬. **ಮುಸುಕು ತೆರೆ** (ಗದ್ಯ-ಪದ್ಯ ಲೇಖನ ಸಂಕಲನ). ಬೇರೆಬೇರೆ ಲೇಖಕರು ಬರೆದುವುಗಳನ್ನು ರಾಯಚೂರಿನ 'ಸಂಗಡಿಗರ ಸಮಿತಿ'ಯು 'ಶಾಂತರಸ' ಅವರು ಸಂಪಾದನೆ ಮಾಡಿದ್ದಾರೆ. ಮಾರಾಟಗಾರರು: ಕರ್ನಾಟಕ ಸಾಹಿತ್ಯಮಂದಿರ, ಧಾರವಾಡ. ಕ್ರಾ. ಆ. ೧೩೦ ಪುಟಗಳು. ಬೆಲೆ ೧-೮-೦.

೧೬. **ಸಂಸ್ಕೃತ ನಾಟಕಕತೆಗಳು** (ಭಾಸ-ಕಾಲಿದಾಸ-ವಿಶಾಖದತ್ತರ ನಾಟಕಗಳ ಕಥಾಸಂಗ್ರಹ. ಭಾಗ ೨). ಬರೆದವರು ಆಸ್ಥಾನ ವಿದ್ವಾನ್ ಎಂ. ಎಸ್. ಸುಬ್ರಹ್ಮಣ್ಯ ಶಾಸ್ತ್ರಿಗಳು. ಪ್ರಕಟನಕಾರರು ಮತ್ತು ಮಾರಾಟಗಾರರು: ಎಸ್. ಎಸ್. ಎನ್. ಪುಸ್ತಕಾಲಯ, ಹೊಸ ಮಾರ್ಕೆಟ್ಟು, ಬೆಂಗಳೂರು ಸಿಟಿ. ಕ್ರಾ. ಆ. ೧೪೮ ಪುಟ. ಬೆಲೆ ೧-೮-೦.

೧೮. **ಮದ್ರಾಸು ಸಮಾಚಾರ** (ಮದ್ರಾಸ್ ಸರಕಾರದ ಪಕ್ಷಪತ್ರಿಕೆ). ಕ್ರಾ. ೧ ದ ೩೬ ಪುಟಗಳು. ಮದ್ರಾಸ್ ಸರಕಾರದ ಡೈರೆಕ್ಟರ್ ಆಫ್ ಇನ್‌ಫರ್ಮೇಶನ್ ಅಂಡ್ ಪಬ್ಲಿಸಿಟಿ. ಸಾರ್ವಜನಿಕರಲ್ಲಿ ಸರಕಾರದ ಚಟುವಟಿಕೆಗಳನ್ನು ಹರಡುವ ಉದ್ದೇಶದಿಂದ ಹೊರಟ ಪತ್ರಿಕೆಯಿದು. ಮದ್ರಾಸ್ ಸರಕಾರದವರು ಕನ್ನಡದ ಅಸ್ತಿತ್ವವನ್ನೂ ತಮ್ಮ ಪ್ರಾಂತದಲ್ಲಿ ಒಪ್ಪಿ, ಈ ಪತ್ರಿಕೆ ಹೊರಡಿಸಿದುದು ಸಂತೋಷದ ಸಂಗತಿ.

೧೯. **ಕನ್ನಡಲಿಪಿ ಸುಧಾರಣೆಯ ಯೋಜನೆ** (ಪರಿಚಯಾತ್ಮಕ ಕಿರುಹೊತ್ತಗೆ). ಬರೆದವರು ಡಾಕ್ಟರ್ ಕುವೆಂಪು. ಪ್ರಾಮಿ ಎಂ. ಎ ಡಿ.ಲಿಟ್. ಕಾರ್ಯದರ್ಶಿ ಕನ್ನಡ ಸಮಿತಿ; ಮೈಸೂರ ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು. ಕ್ರಾ. ಆ. ೨೪ ಪುಟ.

ಕನ್ನಡಲಿಪಿಯಲ್ಲಿ— ಅನುಕೂಲತೆಯ ದೃಷ್ಟಿಯಿಂದ— ಅಲ್ಪ ಸ್ವಲ್ಪ ಬದಲಾವಣೆಯಾಗಬೇಕೆಂಬ ಚಳವಳಿ ಹತ್ತೆಂಟು ವರ್ಷಗಳಿಂದ ನಡೆದಿದೆ. ಮಾಡಿದ ಒಂದು ಕಟ್ಟನಲ್ಲಿ ಕೂಡಿಸಬೇಕೆಂದು, ಮನುಷ್ಯನ ತಲೆ-ಕಾಲುಗಳನ್ನು ಕಡಿಯತೊಡಗಿದರೆ, ಅವನು ಅಂದಗೇಡಿಯಾಗುವನಲ್ಲದೆ, ಜೀವವೂ ಉಳಿಯುವುದು ಎಂತಹ ಮಾತೋ ಎನಿಸುವುದು. ಆ ನೈಸರ್ಗಿಕ ನಿಯಮವನ್ನು ಮನದಂದು, ಕನ್ನಡಲಿಪಿಯ ಬದಲಾವಣೆಗೆ ಕೈಹಾಕಬೇಕು. ಕೇವಲ ಒಂದು ಟೈಪ್‌ರೈಟರಿನ ಅನುಕೂಲತೆಯ ಸಲುವಾಗಿ, ಜಗತ್ತಿನ ಲಿಪಿಗಳಲ್ಲಿಯೆ ಜೆಲುವಿನ ಲಿಪಿಯೊಂದೆಂದು ಮನ್ನಣೆ ಪಡೆದ ಕನ್ನಡಲಿಪಿಯನ್ನು ರೂಪುಗೆಡಿಸಬಾರದಾಗಿ ನಮ್ಮ ಹಾರಯಿಕೆ.

೨೦. **ಹಿಂದುಗಳ ನಿಜಹಿತ** (ಪ್ರಚಾರಕ ಪದ್ಯಗಳ ಸಂಕಲನ). ರಚಿಸಿದವರು ಶ್ರೀ. ಗರುಡ ಸದಾಶಿವರಾಯರು. ಹಿಂದು ಸೇವಾ ಸಂಘ, ಗದಗ. ಫೂ ಕ್ಯಾ. ಆ. ೧೪ ಪುಟಗಳು. ಬೆಲೆ ೦-೪-೦.

೨೧. **ಅನಂತ ಜೀವನ** (ಕಥಾಸಂಕಲನ). 'ಸತ್ಯಕಾಮ' ಅವರು ಬರೆದುವನ್ನು ಗಲಗಲಿಯ ಆನಂದ ಸಾಹಿತ್ಯಮಂದಿರದವರು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಕ್ರಾ. ಆ. ೨೪ ಪುಟಗಳು. ಬೆಲೆ ೧-೪-೦.

KILL THE DUST DEVIL!
ಧೂಳಿ ನಿಮ್ಮ ಗಂಟಲಿಗೊಂದು ತೀಕ್ಷ್ಣವಾದ ಶತ್ರು. ಅದು ಅಲ್ಲಿ ನೆಲೆಯೂರಿ ತನ್ನ ಹಾವಳಿಯನ್ನು ಪ್ರಾರಂಭಿಸುತ್ತದೆ. ಇದರ ಪರಿಣಾಮವೆಂದರೆ ಅಸಹ್ಯವಾದ ನೋವು ಉರಿ, ಆರೋಗ್ಯಹಾನಿ. 'ಕಾಸ್ಫೊ' ಮಿಶ್ರಣಗಳನ್ನು ಸೇವಿಸಿ ನಿಮ್ಮ ಕೆಮ್ಮು ಕಳೆದುಕೊಳ್ಳಿರಿ. ಇವು ಗುಣಕಾರಿ. ಎಲ್ಲ ಔಷಧಿಗೂ ಸಿಕ್ಕುವುದು.
Kasfo
COUGH CURE TABLETS
AYURVEDASHRAM PHARMACY LTD., AHMEDNAGAR
AYD 9

೩೨. **ಜಾಗೃತಿ** (ಸಚಿತ್ರ ಕನ್ನಡ ಸಾಪ್ತಾಹಿಕ). ಸಂಪಾದಕರು ಶ್ರೀಯುತರುಗಳಾದ ಸಸಿಹಿತ್ಲು ವೆಂಕಟರಾಯರು ಮತ್ತು ಖಾದ್ರಿ ಶಾಮಣ್ಣ. ಪ್ರಕಾಶಕರು: ಕರ್ನಾಟಕ ನ್ಯೂಜ್ ಪೇಪರ್ಸ್ ಅಂಡ್ ಪಬ್ಲಿಕೇಶನ್ ಲಿಮಿಟೆಡ್, ೧೪, ಮಂಗಳೂರು ಸ್ಟ್ರೀಟ್, ಮುಂಬಯಿ ೧. ಫ್ರೂ. ಕ್ಯಾ. ಫೋಲಿಯೊ ೧೬ ಪುಟಗಳು. ವಾರ್ಷಿಕ ಚಂದಾ ೬ ರೂ. ಬಿಡಿಸಂಚಿಕೆಗೆ ೦–೩–೦.

ಮುಂಬಯಿಯಲ್ಲಿ ಹುಟ್ಟಿದ್ದರೂ, ಈ ಪತ್ರಿಕೆಯು ಧಾರವಾಡದಲ್ಲಿ ಬಂದು ಬಳೆಯುತ್ತಿದೆ. ಸಮತಾವಾದಿಗಳ ಮುಖಪತ್ರಿಕೆಯಿದು. ತನ್ನ ಜಾಗೃತ ವಾಣಿಯಿಂದ ಕರ್ನಾಟಕದಲ್ಲಿ ಸಮತೆಯನ್ನು ಉಂಟುಮಾಡಲಿ!

೩೩. **ಶ್ರೀರಮಣಲೀಲಾಮೃತ** (ಜೀವನ ಚರಿತ). ಬರೆದವರು: ಶ್ರೀ. ವೆಂಕಟಸೂರು ಎಂ. ನಂಜುಂಡ ಶಾಸ್ತ್ರಿಗಳು. ಪ್ರಕಾಶಕರು: ಶ್ರೀನಿರಂಜನಾನಂದ ಸ್ವಾಮಿ, ಸರ್ವಾಧಿಕಾರಿ 'ಶ್ರೀ. ರಮಣಾಶ್ರಮ' ತಿರುವಣ್ಣಾಮಲೆ (ಮದ್ರಾಸ). ಕ್ರೌ. ಅ. ೨೩೦ ಪುಟಗಳು. ಬೆಲೆ ೧–೧೬–೦.

೩೪. **ನ್ಯಾಯಮೂರ್ತಿ ಲೋಕೂರ ನಾರಾಯಣರಾಯರು** (ಸಚಿತ್ರ ವ್ಯಕ್ತಿ ಮತ್ತು ಜೀವನ ಪರಿಚಯ). ಪರಿಚಯಕಾರರು ಶ್ರೀಯುತರುಗಳಾದ ಎನ್ ಕೆ ಕುಲಕರ್ಣಿಯವರು, ಎಚ್. ವಿ. ಇಮಾರತಿ ಅವರು. ಪ್ರಕಾಶಕರು: ಕರ್ನಾಟಕ ಸಂಘ, ಸಾಂಯುಗಿರಿ ಸದನ, ಗಿರಗಾಂವ, ಮುಂಬಯಿ. ಕ್ರೌ. ಅ. ೧೬ ಪುಟಗಳು. ಬೆಲೆ ೧–೮–೦.

೩೫. **ವಿಜಾಪುರ ಜಿಲ್ಲಾ ಓದುಮನೆಗಳ ಸಮಿತಿಯ ಪರಿಪತ್ರ, ನಿಯಮ, ಸೂಚನೆಗಳು.** ಈ ಸಂಸ್ಥೆಯ ಕೇಂದ್ರ ಕಚೇರಿ ನಿಂಬಾಳದಲ್ಲಿದೆ. ಶ್ರೀ. ಬಿ. ಜಿ. ನಾಡಗೌಡರು ಅಧ್ಯಕ್ಷರು; ಶ್ರೀ. ಕೃ. ಅ ಗಂಡಮಾಲಿಯವರು ಕಾರ್ಯದರ್ಶಿಗಳು. ಡೆ. ಅ. ೨೦ ಪುಟಗಳು.

ಈ ಜಿಲ್ಲಾ ಸಮಿತಿಗೆ ಹೊಂದಿಕೊಂಡುವು ಬೇರೆ ಬೇರೆ ೫೪ ವಾಚನಾಲಯಗಳಿವೆ. ಜಿಲ್ಲೆಯಲ್ಲೆಲ್ಲ ಈ ಸಮಿತಿ ಸಂಘಟನಾ ಕಾರ್ಯ ನಡೆಯಿಸಿ, ಹಳ್ಳಿಹಳ್ಳಿಗಳಲ್ಲಿಯೂ ಓದುಮನೆಗಳು ನೆಲೆಗೊಳ್ಳುವಂತೆ ಮಾಡಬೇಕು.

೩೬. **ಅಗಸ್ಟ್ ಒಂಬತ್ತು** (ಕತೆಗಳ ಸಂಕಲನ). ಬರೆದವರು ಶ್ರೀ. ಬಸವರಾಜ ಕಟ್ಟಿಮನಿಯವರು. ಪ್ರಕಾಶಕರು: ಪ್ರಭಾತ ಸಾಹಿತ್ಯ, ಮಲ್ಲೇಶ್ವರ—ಬೆಂಗಳೂರು. ಕ್ರೌ. ಅ. ೧೧೮ ಪುಟಗಳು. ಬೆಲೆ ೧–೮–೦.

೩೭. **ಸ್ವರಾಜ್ಯಶಾಸ್ತ್ರ** (ರಾಜಕಾರ್ಯ ವಿಚಾರಗ್ರಂಥ). ಮೂಲ ಲೇಖಕರು ಆಚಾರ್ಯ ವಿನೋಬಾ. ಅನುವಾದಕರು ಶ್ರೀ. ಸಾಲಿ ರಾಮಚಂದ್ರರಾಯರು. ಪ್ರಕಾಶಕರು: ಪ್ರಭಾತ ಸಾಹಿತ್ಯ, ಮಲ್ಲೇಶ್ವರ, ಬೆಂಗಳೂರು ೩ಟಿ. ಕ್ರೌ. ಅ. ೫೪ ಪುಟ. ಬೆಲೆ ೦–೧೫–೦.

೩೮. **ಹಾಲಾಹಲ** (ಸಣ್ಣ ಕತೆಗಳ ಸಂಕಲನ). ಬರೆದವರು ಶ್ರೀ ಹಿರೇಮಲ್ಲೂರ ಈಶ್ವರನ್. ಪ್ರಕಾಶಕರು ಕಲ್ಪನಾ ಪ್ರಕಾಶನ ಮಂದಿರ, ಹಿರೇಮಲ್ಲೂರ. ಕ್ರೌ. ಅ. ೧೫೫ ಪುಟಗಳು. ಬೆಲೆ ೧–೧೭–೦.

೩೯. **ಅ. ನ. ಕೃ.** (ಅ. ನ. ಕೃಷ್ಣರಾಯರ ಸಾಹಿತ್ಯ ವ್ಯಕ್ತಿತ್ವ ರಸವಿಮರ್ಶೆ). ಬರೆದವರು: ಶ್ರೀ. 'ತ. ರಾ. ಸು.' ಅವರು. ಪ್ರಕಾಶಕರು ಶ್ರೀ. ಕ. ಬಾ: ಮಾಧೂರಾವ್, ಸಾಹಿತ್ಯಾಲಯ, ಚಿತ್ರದುರ್ಗ. ಕ್ರೌ. ಅ. ೨೧೬ ಪುಟಗಳು. ಬೆಲೆ ೩–೯–೦.

೪೦. **ರೇಖಾಚಿತ್ರಗಳು** (ವ್ಯಕ್ತಿ-ಚಿತ್ರಗಳ ಸಂಕಲನ). ಬರೆದವರು ಶ್ರೀ. 'ತ. ರಾ. ಸು.' ಅವರು. ಮೇಲಿನ ಸಾಹಿತ್ಯಾಲಯದವರ ಪ್ರಕಟಣೆ. ಫ್ರೂ. ಕ್ಯಾ. ಅ. ೬೦ ಪುಟಗಳು. ಬೆಲೆ ೦–೮–೦.

೪೧. **ಅನ್ಯೋನ್ಯ** (ಕಥಾಸಂಕಲನ). ಬರೆದವರು ಶ್ರೀ. ಮ. ಶ್ರೀಧರಮೂರ್ತಿ. ಮೇಲಿನ ಸಾಹಿತ್ಯಾಲಯದವರದೇ ಪ್ರಕಟಣೆ. ಫ್ರೂ. ಕ್ಯಾ. ಅ. ೬೦ ಪುಟಗಳು. ಬೆಲೆ ೦–೮–೦.

೪೨. **ನುಡಿ** (ನೂತನ ವಾರಪತ್ರಿಕೆ). ಸಂಪಾದಕರು: ಶ್ರೀ. ರಾ. ಶ್ರೀ. ಕಸ್ತೂರಿ, ಕೋಟ. ಪ್ರಕಾಶಕರು: ಅಸೋಸಿಯೇಟೆಡ್ ಪ್ರಿಂಟರ್ಸ್ ರೋಡ್, ಕೋಟೆ, ಮುಂಬಯಿ. ವಾರ್ಷಿಕ ಚಂದಾ ೬–೦–೦. ಬಿಡಿಸಂಚಿಕೆಗೆ ೨ ಆಣೆ. ಡೆಮಿ ಫೋಲಿಯೊ ೧೬ ಪುಟಗಳು.

ಇಂದಿನ ಮುಂಬಯಿನಗರ ಒಂದೆ ಭಾಷೆಯವರದಲ್ಲ. ೨ ೩ ಲಕ್ಷ ಜನ ಕನ್ನಡಿಗರೂ ಅಲ್ಲಿ ವಾಸವಾಗಿದ್ದು, ಅದರ ವಿಸ್ತಾರ-ವೈಭವಗಳಿಗೆ ಕಾರಣರಾಗಿದ್ದಾರೆ. ಇಷ್ಟು ಜನಸಂಖ್ಯೆಯಿದ್ದರೂ ಕನ್ನಡಿಗರ ಕಷ್ಟ-ಸುಖಗಳನ್ನರುಹುವುದಕ್ಕೆ ಇದುವರೆಗೆ ಒಂದೂ ಕನ್ನಡ ಪತ್ರಿಕೆಯಿರಲಿಲ್ಲ. ಈ ಮೊದಲು ಒಂದೆರಡು ಪ್ರಯತ್ನಗಳು ನಡೆದರೂ, ಉತ್ಕಟತೆಯ ಅಭಾವದ ಮೂಲಕ ಅವು ಫಲಿಸದೆ ಹೋದುವು. ಈಗ ಮುಂಬಯಿಯ 'ನುಡಿಕೂಟ' ಸಂಘಟಿತವಾಗಿ, ಅಭಿಮಾನದಿಂದ ಈ 'ನುಡಿ'ಯನ್ನು ಪ್ರಕಟಿಸುತ್ತಲಿದೆ. ಮುಂಬಯಿಯ ಕನ್ನಡಿಗರಲ್ಲಿಯೂ ಆತ್ಮಜಾಗೃತಿ ಸಾಕಷ್ಟಾಗಿದೆ. ಇವೆರಡೂ ಕಾರಣಗಳು 'ನುಡಿ'ಯ ಭವಿಷ್ಯವನ್ನು ಉಜ್ವಲವಾಗಿಸುವುವೆಂದು ನಮ್ಮ ಆಶೆ. 'ನುಡಿ' ಆದರ್ಶವಾದಿಯಾಗಿ, ಜನಹಿತವನ್ನೇ ಗುರಿಯಿಟ್ಟುಕೊಂಡು, ಅಭ್ಯಾಸ-ಅನುಭವಗಳ ಬಲದಿಂದ ಕಾರ್ಯ ಮಾಡುತ್ತ ಹೋಗಬೇಕು; ಎಂದರೆ ಯಶಸ್ಸು ಖಂಡಿತ.

ಚಿತ್ರಕಲಾ ಪ್ರವೇಶ

(ವಿದ್ಯಾಖಾತೆಯ ಚಿತ್ರಕಲೆಯ ನೂತನ ಅಭ್ಯಾಸಕ್ರಮವನ್ನನುಸರಿಸಿ ರಚಿತವಾಗಿದೆ.)

ಬರೆದವರು : ಶ್ರೀ. ಗೋಪಾಲ ಶ್ರೀನಿವಾಸರಾವ ಹುದ್ದಾರ,
ಚಿತ್ರಕಲಾಧ್ಯಾಪಕ

★

ಸಾದರಿಗಾಗಿ ಒಂದು ಚಿತ್ರ ಕೃಪೆಯಿದು

ಚಿತ್ರಕಲಾ ಶಿಕ್ಷಣದ ಬಗೆಗೆ
ಕನ್ನಡದಲ್ಲಿ
ಇಂತಹ ಪುಸ್ತಕ
ಇನ್ನೊಂದಿಲ್ಲ.

★

ಚಿತ್ರಪಟಗಳ ಪುಟಗಳಿ
ಲಿ ಇರುವುವು.

★

ಅಲ್ಲದೆ ಪುಟಪುಟದಲ್ಲಿಯೂ
ಅಭ್ಯಾಸಚಿತ್ರಗಳ
ಸೂರೆ !

★

ವಸ್ತುಚಿತ್ರ, ಪ್ರಕೃತಿಚಿತ್ರ,
ಸೃಷ್ಟಿಚಿತ್ರ, ಬಣ್ಣಗಳ
ಕೆಲಸ, ಮನುಷ್ಯಾಕೃತಿ,
ಸುಳುವಿನ ಕೆಲಸ
ಮೊದಲಾದ ವಿವರ ವಿವರ-
ಗಳು ಇದರಲ್ಲಿ ಬಂದಿವೆ.

★

ಬೇಗನೆ ಪೇಟೆಗೆ ಬಂದಿದೆ.

★

ಚಿತ್ರಕಲಾಭ್ಯಾಸಕ್ಕಾಗಿ
ಹೊಂದರೆ ಪಡಬೇಕಾದ
ಕಾರಣವಿಲ್ಲ.

★

'ಜಯಂತಿ'
ಕಾರ್ಯಾಲಯ,
ಧಾರವಾಡ.

* *
*

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿ. ಧಾರವಾಡ

ಹೆಡ್ ಆಫೀಸ್

ಧಾರವಾಡ

★ ನಿಮ್ಮ ಮೂಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಭರದಿಂದ ಬೆಳೆಯುತ್ತಿರುವ ಈ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!

★ ಹೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ನಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.

★ ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಳಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸಿರುವುದರಿಂದ, ಎಲ್ಲರ ನಂಬಿಗೆಗೂ ತಕ್ಕುದಾಗಿದೆ.

★ ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲೇಜೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ಮ್ಯಾನೇಜಿಂಗ್ ಡಾಯರೆಕ್ಟರ್
ಎ. ಎಸ್. ಕಣಿ

ಮ್ಯಾನೇಜರ್
ಎಮ್. ಗೋವರ್ಧನರಾವ



ರೀಟಾ: ತಲೆಯ ಕೂದಲನ್ನು ಬೆಳೆಸುವುದು.

ರೀಟಾ ಮೊದುಳಿಗೆ ಶಕ್ತಿಯನ್ನು ಕೊಟ್ಟು, ನಿಲ್ಲುವುದ ನೀಳವಾದ ಕೂದಲನ್ನು ಬೆಳೆಸಲು ಅದ್ಭುತವಾದ ಹೇರ್ ಟಾನಿಕ್.

ರೀ ಟಾ

ತಲೆಯ ಕೂದಲು ಉದುರುವುದು, ನೆರೆಯುವುದು. ಹೊಟ್ಟು, ಉದುರುವುದು, ಹಟ್ಟಿತಲೆ, ಹೇನಿನ ಬಾಧೆ, ಇವೇ ಮೊದಲಾದ ತಲೆಯ ಕೂದಲಿಗೆ ಸಂಬಂಧಿಸಿದ ಸಮಸ್ತ ವ್ಯಾಧಿಗಳಿಗೂ ರೀಟಾ ಅತ್ಯುತ್ತಮವಾದ ಗುಣಕಾರಿ.

ಈಗಾಗಲೆ ಸಾವಿರಾರು ಜನ ಉಪಯೋಗಿಸಿ ಗುಣವನ್ನು ಹೊಂದಿದ್ದಾರೆ. ನೀವು ಕೂಡ ಇಂದಿನಿಂದಲೇ ರೀಟಾವನ್ನು ಉಪಯೋಗಿಸಿರಿ.



RITA
HAIR TONIC

ರೀಟಾ ಹಿಂಬುಸ್ತಾನದಲ್ಲೆಲ್ಲಾ ದೊರಕುವುದು. ಬೆಲೆ:— ಸೀಸೆ ೧ಕ್ಕೆ ೧೫ ಆಣೆ.

Printed by Mr. V. Y. Jathar at the Karnatak Printing Works, Dharwar, and Published by the Proprietors Jayanti Publications, by M. V. Melligatti at the Jayanti Office, Dharwar.—

ಪ್ರಭಾವತಿ

ಸಂಪಾದಕರು :
ಬೆಟಗೇರಿ ಕೃಷ್ಣಶರ್ಮರು

ಆಗಸ್ಟ್
ಸಂಪುಟ ೧೦

೧೯೪೭
ಸಂಚಿಕೆ

" ಅಗ್ನಿಕೆಗಂಜುವನಲ್ಲ, ಬಲವಂತನಹನೀತಂಗೆ ನಂಜನೂಡಿಸಿ, ಕೊಲ್ಲ
ಉಪಾಯಮಂ ಮಾಳ್ಪೆನ್ನ "
(ಪಂಪಾ ಸಿಕ್ಚರ್ಸಿನವರ ' ಚಂದ್ರಹಾಸ 'ದಲ್ಲಿ ದುಷ್ಟಬುದ್ಧಿಯ ಪಾತ್ರವಹಿಸಿದ
ಶ್ರೀ. ಹೆಂದಿಗನೂರು ಸಿದ್ಧರಾಮಪ್ಪನವರು.)

ಎಂಟು
ಆಣೆ

ಸಂಪಾದಕರು : ಬೆಟಗೇರಿ ಕೃಷ್ಣಶರ್ಮರು

ಸಂಪುಟ ೧೦ ೧ನೆಯ ಆಗಸ್ಟ್ ೧೯೪೭ ಸಂಚಿಕೆ ೪

ಮುಖ್ಯ ವಿಷಯಗಳು

ಸಂವಚನಗಳು (ವಿಚಾರ ತರಂಗ)	..	'ಸಾಮಾಜಿಕ'	೭೫
ಪಾರತಂತ್ರ್ಯದಿಂದ ಸ್ವಾತಂತ್ರ್ಯಕ್ಕೆ (ಸಂಪಾದಕೀಯ)	..	ಸಂಪಾದಕರು	೭೪
ಬೀರಣ್ಣನ ಬಡಿನುಡಿಗಳು (ವ್ಯಂಗ್ಯಚಿಪ್ಪಣಿ)	..	'ಗುಡದಪ್ಪ'	೭೫
ಹತ್ತು ವರ್ಷಗಳು (ಸಣ್ಣಕತೆ)	..	ಶ್ರೀ. ಎ. ಎಸ್. ರಾಮಕೃಷ್ಣ, ಉಡುಪಿ	೭೭
ನಿವೃತ್ತ ಶಿಕ್ಷಣ (ಶೈಕ್ಷಣಿಕ ಚರ್ಚೆ)	..	ಶ್ರೀ. ರಾ. ಮ. ಹೆಗಡೆ, ಪರಂಧಾಮ, ವರ್ಧಾ	೮೧
ಮಿಲನ (ಕವಿತೆಗಳು)	..	ಶ್ರೀ. ಚಿದಂಬರ ದಿಕ್ಷಿತ, ಧಾರವಾಡ	೮೪
ನಾ ಕಂಡ ವಾರಣಾಸಿ (ಪ್ರವಾಸ ಪ್ರಬಂಧ)	..	ಶ್ರೀ. ಕೆ. ಎನ್. ರಾವ, ಶಿಸಿ	೮೬
ಬಾಳು ನೂರೇ ವರುಷವೆ ? (ವಿಚಾರ ಪ್ರಜೋದಕ ಪ್ರಬಂಧ)		ವೈದ್ಯ ಗೋಪಾಲಕೃಷ್ಣರಾವ, ಧಾರವಾಡ	೯೦
ರಾಯಾಪುರದಲ್ಲಿ ಸಂಗ್ರಾಹಕ (ಜಾನಪದ ಸಾಹಿತ್ಯ)	..	ಶ್ರೀ. ಶಿವೇಶ್ವರ ದೊಡ್ಡಮನಿ, ನವಿಲೂರು	೯೪
'ಬಡತನದ ಬಾಳು' (ಸಣ್ಣಕತೆ)	..	ಶ್ರೀ. ವ್ಯಾ. ವೆಂ. ಸುಬ್ಬರಾವ್, ಬೆಂಗಳೂರು	೯೫
ನುಗ್ಗಬೇಡಿರಿ (ಹರಟೆ)	..	ಶ್ರೀ. ಜ್ಞಾನೋಳಕರ ಶ್ರೀಧರರಾಯರು, ಪುಣೆ	೧೦೦
ಪ್ರೊ. ದೇವಳಾಲಕರರ ಸೇವಾನಿವೃತ್ತಿ (ಜೀವನವೃತ್ತ)	..	ಪ್ರೊ. ಕೆ. ಎಸ್. ಸವಣೂರ ಎಂ. ಎಸ್ ಸಿ. ಧಾರವಾಡ	೧೦೨
ಪುಸ್ತಕ ನಿಮರ್ಶೆ (೩ ಪುಸ್ತಕಗಳು)	..	ಬೇರೆ ಬೇರೆ ವಿಮರ್ಶಕರು	೧೦೪
ಸಾದರ ಸ್ವೀಕಾರ	..	....	೧೦೫

೭೭ ವರ್ಷಗಳಿಂದ ಅನುಭವಪಟ್ಟ
ಕರ್ಕ ಮತ್ತು ಕಂಪನಿಯ
ಜ್ವರಗಡ್ಡೆಯ ಗುಳಿಗೆಗಳು.
ಬಾಟ್ಲಿಗೆ ೧-೮-೦
ಎಂತಹ ಜ್ವರಗಡ್ಡೆಯನ್ನೂ ಕಳೆಯುವುದು.
ವಿಳಾಸ:—
ಗಣೇಶ ರಾಮಚಂದ್ರ ಕರ್ಕ ಮತ್ತು ಕಂಪನಿ
ಗಿರಗಾಂವ, ಮುಂಬಯಿ.

ಕನ್ನಡ ಸಾಹಿತ್ಯಕರಿಂದ ಮೆಚ್ಚುಗೆ ಪಡೆದ

ಕಾಂಚನಮೃಗ	ಖಾಂಡೇಕರ	೩-೪-೦
ರಕ್ತಾಂಜಲಿ	ವಿ. ಜಿ. ಭಟ್ಟ	೧-೦-೦
ಪಲಾಯನ	,,	೧-೪-೦
ಗೆಲುವಿನ ಗುಟ್ಟು	ಮ ಗ. ಕೆಟ್ಟಿ	೦-೮-೦

ಅಂಚಿಯು ವೆಚ್ಚ ಉಚಿತ. ವ್ಯಾಪಾರಿಗಳಿಗೆ ಧಾರಾಳ ಕಮಿಶನ್.
ಪುಸ್ತಕ ಸಿಕ್ಕುವ ಸ್ಥಳ
ಪಿ ಡಿ. ಪೆಹಾನೆ, ಅಂಕೋಲಾ (ಉ. ಕನ್ನಡ)

'ಜಯಂತಿ'ಗಾಗಿ ಅಲ್ಲಲ್ಲಿ
ಏಜಂಟರು ಬೇಕು !

★

ಮುಂಬೈ, ಮೈಸೂರು, ಮಡಿಕೆರೆ, ತುಮಕೂರು, ಹಾಸನ, ಚಿಕ್ಕಮಗಳೂರು, ದಾವಣಗೆರೆ, ಹರಿಹರ, ಉಡುಪಿ, ಕುಂದಾಪುರ, ಅಂಕೋಲಾ, ಹೊನ್ನಾವರ, ಕುಮಟಾ, ಆಫಣಿ, ಚಿಕ್ಕೋಡಿ, ಹುಕ್ಕೇರಿ, ರಬಕವಿ, ಜಮಖಂಡಿ, ಬಾದಾಮಿ, ಇಳಕಲ್ಲ, ಮೊದಲಾದ ಕನ್ನಡ ನಾಡಿನ ಪುರ-ಪಟ್ಟಣಗಳಲ್ಲಿ, ಜಯಂತಿಗಾಗಿ ಏಜನ್ಸಿ ನಡೆಯಿಸಿಕೊಂಡು ಹೋಗಲಿಕ್ಕೆ ಪ್ರಾಮಾಣಿಕರಾದ ಏಜಂಟರು ಬೇಕಾಗಿದ್ದಾರೆ. ಜೆನ್ನಾಗಿ ಕೆಲಸಮಾಡಿದರೆ ಕೈತುಂಬ ಹಣ ಸಿಕ್ಕುವುದು. ಅಪೇಕ್ಷೆಯುಳ್ಳವರು ಕರಾರುಗಳಿಗಾಗಿ ಪತ್ರ ಬರೆದುಕೊಳ್ಳಬೇಕು.

ಜಯಂತಿಯು ಲೋಕಪ್ರಿಯತೆಯ ಬಗೆಗೆ ಹೆಚ್ಚಿಗೆ ಹೇಳ ಬೇಕಾಗಿಲ್ಲ. ಮಧ್ಯಮ ವರ್ಗದ ಪ್ರತಿಯೊಂದು ಕುಟುಂಬದಲ್ಲಿಯೂ ಇರಬೇಕಾದ ಪತ್ರಿಕೆಯಿದು.

ಮ್ಯಾನೇಜರ್ : 'ಜಯಂತಿ' ಧಾರವಾಡ.



ವಾರ್ಷಿಕ ಚಂದಾ
೪—೮—೦

ಪ್ರತಿತಿಂಗಳ ೧ನೆಯ ತಾರೀಖಿಗೆ
ಪ್ರಕಟವಾಗುವುದು.

ಸಂಪುಟ ೧೦ | ೧ ನೆಯ ಆಗಸ್ಟ್ ೧೯೪೭ | ಸಂಚಿಕೆ ೨.

ಸಂಪಾದಕೀಯಗಳು

೧

ಎಲ್ಲೆಲ್ಲಿಯೂ ಇಹರು ಹಿರಿಯರಾದ ಕಿರಿಯ ಸಾಹಿತ್ಯಿಕರು; ಎಲ್ಲೆಡೆಗೂ ಇಹರು ಕಿರಿಯರಾದ ಹಿರಿಯ ಸಾಹಿತ್ಯಿಕರು! ಕಾಲಪ ಹಿರಿದು ಕಿರಿದುಗಳು ಒರೆಗಲ್ಲೆನಿಸವು ಕಾಣಾ, ಸಾಹಿತ್ಯಿಕರ ಪ್ರಪಂಚದಲ್ಲಿ! ಇಂತಿದನರಿತವರು, 'ಹುಡುಗರು' ಎಂದು ಹಿರಿಯರು ಹಿಯ್ಯಾಳಿಸಿ ನುಡಿಯಬೇಕಿಲ್ಲ; 'ಮುದಿಯರು' ಎಂದು ಮುದ್ದರು ಮೂದಲಿಕೆಯ ಮಾತನಾಡಬೇಕಿಲ್ಲ! ಹಿರಿಯ ಗರುಡನಂತೆ ಕಿರಿಯ ಗುಬ್ಬಚ್ಚಿ ಹಾರಲಾರದೆಂಬುದನೂ, ಮರಿಗಿಳಿಯಂತೆ ಮುದಿಹದ್ದು ಮಾತನಾಡಲಾರದೆಂಬುದನೂ ಮರೆತು ನಡೆಯಲಾಗದು ಕಾಣಾ, ಕನ್ನಡ ಜಾಣಾ!

೨

ಇದ್ದುದನು ಇದ್ದಂತೆಯೆ ಬರೆದೊರೆವುದು ಅದೆಂತಹ ಸಾಹಿತ್ಯವಯ್ಯಾ! ಅಯ್ಯಾ, ಸಾಹಿತ್ಯವೆನಿಸೀತೇ ಕರಣಿಕರ ಕರಣದ ಕಡತಂಗಳು; ಸಾಹಿತ್ಯವೆನಿಸೀತೇ ಹಿರಿಯರ ಮರಣದ ಶಾಸನಂಗಳು! ಸಾಹಿತ್ಯವೇನಯ್ಯಾ ಸರಕಾರಕ್ಕೆ ಬರೆದ ಬಿನ್ನವತ್ತಳೆ-ಮೊರೆಯೋಲೆಗಳು? ಸಾಹಿತ್ಯವದೇನಯ್ಯಾ ದಿನ-ವಾರ ಪತ್ರಿಕೆಗಳಲಿ ಸ್ತಂಭಗಳನು ತುಂಬುವ ಸುದ್ದಿಯೋಲೆಗಳು, ಜಾಹಿರಾತಿನ ಜಾಲಂಗಳು? ಸಾಹಿತ್ಯವೆನಿಸೀತೇನಯ್ಯಾ ಆಡಳಿತದ ಹುಕುಂ-ಫರ್ಮಾನು-ಜಾಹೀರ್‌ನಾಮಾಗಳು? ವಾಸ್ತವವನ್ನು ಆದರ್ಶದ ಕಡೆಗೆ ಒಲಿಪುವ—ಆದರ್ಶವನ್ನು ವಾಸ್ತವಪ್ರಪಂಚಕ್ಕೆ ಎಳೆಯುವ ಎದೆಯ ಮಾತುಗಳ ಸ್ರೋತವೇ ನಿಜವಾದ ಸಾಹಿತ್ಯವೆನ್ನವಳಯ್ಯಾ ನಮ್ಮ ಭಾವರಾಜ್ಯದ ರಾಣಿ ವಾಗೀಶ್ವರಿ!

೩

ಸಾಹಿತ್ಯಿಕಂಗೆ ಬೇಕು ಕರಗುವ ಹೃದಯ; ಸಾಹಿತ್ಯಿಕಂಗೆ ಬೇಕು ಆರಯುವ ಒಳಗಣ್ಣ! ಅಯ್ಯಾ ಬೇಕಾ ವ್ಯವಹಾರವಿದನಿಗೆ ಪರಿತವಾದ ಬುದ್ಧಿ; ಬೇಕಾ ನೆರೆಗಾರನಿಗೆ ಹಿಂಜಿ ಹಿಳಿದು ನೋಡುವ ಮನಸಿನ ಸಿದ್ಧಿ! ಆದರ್ಶಗಳನೆ ಕಾಣುವ ಕನಸುಗಣ್ ಬೇಕಾ ದೃಷ್ಟಾರಂಗೆ; ಚಿಲುವನ್ನು ಕಂಡುಹಿಡಿವ ಚಾತುರಿ ಬೇಕಾ ಜೀವನ ರಚನಾಶಿಲ್ಪಿಗೆ! ಭಾವ-ರಸಗಳನು ಕನ್ನಡಿಸಬಲ್ಲ ಪದಗಳ ಭಂಡಾರ ಬೇಕಾ ನುಡಿಜಾಣಂಗೆ; ರಸಿಕವೃಂದವನು ಸೆಳೆದುಕೂಡಬಲ್ಲ ಕಲೆಯು ವಿಲಾಸ ಬೇಕಾ ಕಲ್ಪನಾ ಚಿತ್ರಿಕಂಗೆ! ಇಂತಿವುಗಳಲಿ ಒಂದರ ಕೊರತೆಯಾದೊಡೆಯೂ ಚೆಲ್ವಮಾತೆನಿಸುವ ಸಾಹಿತ್ಯ ಹುಚ್ಚುನಮಾವಾಗಿ ನಿಲ್ವುದು ಕಾಣಾ, ಕನ್ನಡ ಜಾಣಾ!

೪

ಮತ-ಪಂಥಗಳ ಬೇಲಿಯಲ್ಲಿ ನಿಂತು ಹಲುಬಿ ಹಂಬಲಿಸುವ ಕುರುಡುನುಡಿ ಎಂತಹ ಸಾಹಿತ್ಯವಯ್ಯಾ? ಬಲ-ದಾಕ್ಷಿಣ್ಯಗಳಿಗೊಳಗಾಗಿ ಗಳಹುವ ಗಾಳಿಮಾತುಗಳು ಎಂತಹ ಸಾಹಿತ್ಯವಯ್ಯಾ! ನಿರ್ಬಲನಾಗಿ ನಿಸ್ಪ್ರಯನಾಗಿ ಕೂಗಿಕೊಂಡ ಭಕ್ತಿ-ವೈರಾಗ್ಯದ ಬಣ್ಣನೆಯ ಬರುಮಾತು ಸಾಹಿತ್ಯವೆನಿಸೀತೇನಯ್ಯಾ? ಸತ್ಯದ ಜೀವ-ಜೀವಾಳವಾಗಿರಬೇಕು ಸಾಹಿತ್ಯವೆಂಬುದು; ಮೈತ್ರಿ-ಕರುಣೆಗಳನ್ನು ತುಂಬಿಕೊಂಡಿರಬೇಕು ಸಾಹಿತ್ಯವೆನಿಪುದದು! ಅಯ್ಯಾ, ಸರ್ವರ ಶಾಂತಿ-ಪುಷ್ಟಿ-ತುಷ್ಟಿಗಳ ಇಪ್ಪ ತೇಪಲ್ಲವಿಯಾಗಿರಬೇಕಾ ಸಾಹಿತ್ಯಕ್ಕೆ! ಇವಿಲ್ಲದ ಸಾಹಿತ್ಯದ ರಾಶಿಯನೊಯ್ದು ಹೊಳೆಯಲ್ಲಿಕ್ಕು ಎಂದು ಬೇಡುವಳಯ್ಯಾ, ಕಲ್ಯಾಣವಾಣಿ ವಾಗೀಶ್ವರಿ!

ಪಾರತಂತ್ರ್ಯದಿಂದ ಸ್ವಾತಂತ್ರ್ಯಕ್ಕೆ

ಇದುವರೆಗೆ ದೂರದ ಆದರ್ಶವಾಗಿ ಇದ್ದ ಭಾರತದ ರಾಜಕೀಯ ಸ್ವಾತಂತ್ರ್ಯ ನಮ್ಮನ್ನಿಂದು ತೀರ ಬಳಿಸಾರಿ ಬಂದಿದೆ. ಕೇವಲ ಒಂದೆರಡು ವಾರಗಳಲ್ಲಿಯೆ ಆ ದೇವಿ ನಮ್ಮೆದುರು ಬಂದು ನಿಲ್ಲುವವಳಿದ್ದಾಳೆ; ನಮ್ಮಿಂದ ನಿತ್ಯಪೂಜೆಯನ್ನು ಅಪೇಕ್ಷಿಸುವವಳಿದ್ದಾಳೆ.

೧೯೪೭ನೆಯ ಆಗಸ್ಟ್ ೧೫ನೆಯ ತಾರೀಖು! ಅಹಹ! ಎಂತಹ ರೋಮಹರ್ಷಕ ದಿನವದು! ನೂರಾ ಐವತ್ತು ವರ್ಷಗಳಿಂದ ಭಾರತೀಯರ ಕೈಗೆ ಬಿದ್ದ ಪರಾಧೀನತೆಯ ಬೇಡಿ ಕತ್ತರಿಸಿ ಬೀಳುವ ದಿನ! ಆಳಾಗಿದ್ದ ಭಾರತೀಯನಲ್ಲಿ ಆಳುವ ಶಕ್ತಿ ಪ್ರವೇಶ ಮಾಡುವ ದಿನ! ಗುಲಾಮರಾಷ್ಟ್ರವೆಂದು ಪ್ರಪಂಚದ ಇನ್ನಿತರ ರಾಷ್ಟ್ರಗಳ ಬೀಳುಗಳೆತಕ್ಕೆ ಗುರಿಯಾದ ಭಾರತ, ಅವುಗಳ ಪೆಗಲಿಗೆ ಪೆಗಲು ಹಚ್ಚಿ ಸಮಾನಭಾವದಲ್ಲಿ ನಿಂತುಕೊಳ್ಳುವ ದಿನ! ಭಾರತೀಯ ಪಾರತಂತ್ರ್ಯಕ್ಕಾಗಿ ಹೋರಾಡಿ ತೀರಿ, ಆತೃಪ್ತಿಯಿಂದ ಅಂತರಪಿಶಾಚಿಗಳಾಗಿ ತಿರುಗುತ್ತಿದ್ದ ನಮ್ಮ ವೀರರ ಆತ್ಮಗಳು ತೃಪ್ತಿಪಟ್ಟು ಮುಕ್ತವಾಗುವ ದಿನ! ಭಾರತದ ಭಾಗ್ಯಕ್ಕಾಗಿ ಕರುಳಲ್ಲಿ ಕಿಚ್ಚನ್ನಿರಿಸಿಕೊಂಡು ಕೆಲಸಮಾಡುತ್ತಲಿದ್ದ ವೀರ-ಧೀರರು, ತಮ್ಮ ಉತ್ಕಟಭಾವದ ಕಾರ್ಯಕ್ಕೆ ತಕ್ಕ ಸಫಲವನ್ನು ಪಡೆವ ದಿನ! ಅಂದು ೧೯೪೭ನೆಯ ಆಗಸ್ಟ್ ಹದಿನೈದನೆಯ ತಾರೀಖಿನ ದಿನ ನಮ್ಮದನ್ನು ನಾವೇ ಸುಟ್ಟುಕೊಳ್ಳಲು ಸನ್ನದ್ಧರಾಗಿದ್ದ ಭಾರತೀಯರು, ಇಂದು ಐದು ವರುಷಗಳ ತರುವಾಯ, ನಮ್ಮದನ್ನೆಲ್ಲ ನಾವೇ ಕಟ್ಟಿಕೊಳ್ಳಲು ಸಿದ್ಧರಾಗಿ ನಿಂತಿದ್ದೇವೆ. ಒಳ್ಳೆಯ ಗುರಿಯನ್ನಿರಿಸಿ ಉತ್ಕಟ ಭಾವನೆಯಿಂದ ಮಾಡಿದ ಯಾವ ಕಾರ್ಯವೂ ಒಂದು ಶಕ್ತಿಯಾಗಿ ಪರಿಣಮಿಸಬಲ್ಲದು; ಆ ಶಕ್ತಿ ನಮ್ಮನ್ನು ಆದರ್ಶದ ಹತ್ತಿರಕ್ಕೆ ಕರೆದೊಯ್ಯಬಲ್ಲದು. ಈ ಸತ್ಯ ಸಿದ್ಧಾಂತಕ್ಕೆ ಪ್ರತ್ಯಕ್ಷವಾದ ಸಾಕ್ಷಿ ಭಾರತೀಯರಿಗೆ— ಬರಲಿರುವ—ಆಗಸ್ಟ್ ೧೫ನೆಯ ತಾರೀಖು

ನಾವು ಸ್ವಾತಂತ್ರ್ಯವನ್ನು ಪಡೆದರೂ ಅದರ ಅಭಿಮಾನದೇವತೆಯ ಪೂಜೆ-ನೈವೇದ್ಯ-ಹೋಮ-ಹವನಗಳನ್ನು ನಿತ್ಯನಿತ್ಯವೂ ಹದವನ್ನರಿತು ಸಾಧಿಸದೆ ಹೋದಲ್ಲಿ, ಆಕೆಯ ಪ್ರಸಾದವು ನಮಗೆ ನಿರಂತರವಾಗಿ ದೊರೆಯದು. ಈ ಪೂಜೆಗಾಗಿ ಮೊದಲನೆಯದಾಗಿ ಬೇಕು ರಾಷ್ಟ್ರದ ವಿಷಯಕವಾದ ಸಂಪೂರ್ಣ ಶ್ರದ್ಧೆ. ಎರಡನೆಯ ಮುಖ್ಯ ಸಾಧನ ಭಾರತೀಯ ಸಮಾಜದಲ್ಲಿ ಭಿನ್ನ-ಭೇದಗಳಿಲ್ಲದೆ ಬಂಧುಭಾವ. ಈ ರಾಷ್ಟ್ರಪ್ರೀತಿ-ಬಂಧುಭಾವಗಳ ಬಲದಿಂದ ರಾಷ್ಟ್ರೋಪಕವಾದ ಮಿಕ್ಕೆಲ್ಲ ಬಲಗಳನ್ನೂ ಸಹಜವಾಗಿ ಸಂಪಾದಿಸಿಕೊಳ್ಳಲಿಕ್ಕೆ ಬರುವುದು.

ಇಂದು ಭಾರತೀಯರೇ ಆದ ಮುಸಲ್ಮಾನ್ ಧರ್ಮೀಯರು, ತಮ್ಮದೇ ಒಂದು ಪ್ರತ್ಯೇಕ ರಾಷ್ಟ್ರ ಕಟ್ಟಿಕೊಂಡಿರಲು ಹೊರಟುದು ವಿಷಾದದ ವಿಷಯವಾಗಿದ್ದರೂ, ಸ್ವತಂತ್ರ ಭಾರತದ ವಿಧಾಯಕ ಶಕ್ತಿಯ ಚುಂಬಕ, ಮತ್ತೆ ಅದನ್ನು ಆಕರ್ಷಿಸಿಕೊಂಡು ತನ್ನಲ್ಲಿ ಒಂದುಗೂಡಿಸಿಕೊಳ್ಳುವ ಮಹತ್ತ್ವದ ಕಾರ್ಯಮಾಡಬೇಕಾಗಿದೆ. ಅದಕ್ಕಾಗಿ ಭಾರತ ರಾಷ್ಟ್ರೀಯರು ತಮ್ಮಲ್ಲಿ ಸರ್ವತೋಮುಖ ಶಕ್ತಿಸಾಧನಗಳನ್ನು ಅಣಿಮಾಡಿಕೊಳ್ಳದೆ ಹೋದರೆ, ಅಖಂಡಭಾರತವನ್ನು ಸೃಷ್ಟಿಸಿ ಸಂರಕ್ಷಿಸುವುದು ಒತ್ತಟ್ಟಿಗುಳಿದು, ಇದ್ದ ಸ್ವಾತಂತ್ರ್ಯಸೂತ್ರಗಳನ್ನೂ ಇನ್ನೊಬ್ಬರ ಕಡೆಗೆ ಒಪ್ಪಿಸಿಕೊಡಬೇಕಾದ ಪ್ರಸಂಗ ಬಂದೀತು. ಇದುವರೆಗಿನ ಭಾರತೀಯ ರಾಜಕೀಯ ಚರಿತ್ರೆ ಈ ಮಾತನ್ನು ಆಗಾಗ ನಮಗೆ ತಿಳುಹಿಸಿಕೊಡುತ್ತಲೆ ಬಂದಿದ್ದರೂ, ನಾವದನ್ನು ಕಡೆಗಣಿಸುತ್ತ ಬಂದು, ಅದರ ಕಟುಫಲಗಳನ್ನು ಸಾವಿರಾರು ವರ್ಷಗಳಿಂದ ಉಣ್ಣುತ್ತ ಬಂದಿದ್ದೇವೆ.

ವ್ಯಕ್ತಿಯ ಆತ್ಮನಿಕಾಸವನ್ನು ನಾವು ಆಧ್ಯಾತ್ಮಿಕ ರೀತಿಯಿಂದ ನೋಡೋಣ; ಆದರೆ ಸಮಾಜದ ಜೀವನಸ್ವಾಸ್ಥ್ಯವನ್ನು ನಾವು ಭೌತಿಕ ದೃಷ್ಟಿಯಿಂದಲೇ ನೋಡಬೇಕಾಗುವುದು. ವೈಯಕ್ತಿಕ ಆಧ್ಯಾತ್ಮಿಕದೃಷ್ಟಿ, ಸಾಮೂಹಿಕ ಭೌತಿಕದೃಷ್ಟಿ ಇವುಗಳ ಸಮನ್ವಯದಿಂದಲೆ ರಾಷ್ಟ್ರವನ್ನು ಬಲಶಾಲಿಯನ್ನಾಗಿ ಮಾಡಲು ಬಂದೀತಲ್ಲದೆ, ಬರೀ ಆಧ್ಯಾತ್ಮಿಕ ದೃಷ್ಟಿಯು ಸತ್ಯ-ಅಹಿಂಸೆ-ಅಸ್ತೇಯಗಳಿಂದಲೂ ಆದು ಸಾಧ್ಯವಿಲ್ಲ; ಭೌತಿಕ ದೃಷ್ಟಿಯು ಧನಬಲ-ಸೈನ್ಯಬಲದಿಂದಲೂ ಸಾಧ್ಯವಿಲ್ಲ. ಎರಡೂ ಸಮಾಂತರವಾಗಿ ಕಾರ್ಯಮಾಡುತ್ತಿದ್ದರೆಯೇ ನಮ್ಮ ಪ್ರಗತಿಗೆ—ಸುಖಜೀವನಕ್ಕೆ—ತಡೆಯೊಡ್ಡುತ್ತಿರುವ ವಿರೋಧಕ ಶಕ್ತಿಗಳನ್ನು ಅನುವರಿತು ಎದುರಿಸಲು ಬರುವುದು.

ಇಂದು ಜಗತ್ತಿನ ಎಲ್ಲ ರಾಷ್ಟ್ರಗಳೂ ಭೌತಿಕಬಲ ಬೆಳಸಿಕೊಂಡು, ಬಲಹೀನರನ್ನು ಮುರಿದು ನುಂಗಲು ಪಾರಿಕಾಯುತ್ತಲಿವೆ. ನಮ್ಮಲ್ಲಿಯ ಆಧ್ಯಾತ್ಮಿಕ ಬುದ್ಧಿಯನ್ನು ಇನ್ನಾರನ್ನೂ ಮುರಿದು ನುಂಗದಿರುವ ಕಾರ್ಯಕ್ಕೆ ಬಳಸಿಕೊಳ್ಳೋಣ; ಆದರಂತೆಯೆ ಪರಕೀಯರ ದುರಾಕ್ರಮಣವನ್ನು ನಮ್ಮ ಭೌತಿಕ ಸಾಮರ್ಥ್ಯದಿಂದ ಎದುರಿಸೋಣ; ನಮ್ಮ ಈಇಮ್ಮೊಗದ ಬಲದಿಂದ ಪ್ರಾಚೀನ ಭಾರತೀಯರಂತೆ—ಪ್ರಪಂಚದಲ್ಲೆಲ್ಲ—ನಮ್ಮ ಪ್ರಭೆ-ಪ್ರಭಾವಗಳನ್ನು ಮೆರೆಯಿಸೋಣ. ಯಾವಾಗಲೂ 'ದೇಹದ

(೭೬ ನೆಯ ಪುಟ ನೋಡಿರಿ)



ನಮ್ಮ ನರೇಂದ್ರರು

ಇಷ್ಟು ದಿನ 'ಕುರೇಂದ್ರ' ರಾಗಿದ್ದ ನಮ್ಮ ಸಂಸ್ಥಾನಿಕರು ಇಂದು 'ನರೇಂದ್ರ' ರಾಗಬೇಕೆಂದು, ನರರಾಯನ ಬಲೆಯಲ್ಲಿ ಸಿಕ್ಕಿ ಚತನ ಸೂತ್ರದಂತೆ ಕುಣಿಯುತ್ತಿದ್ದಾರೆ. ಬ್ರಿಟಿಷರ ಉರುಳುಗಣ್ಣಿಗೆ ನಮ್ಮನ್ನೆ ಕೊರಳನ್ನು ಕೊಟ್ಟು ಕುಳಿತಿದ್ದ 'ರಾಜಾಧಿರಾಜರು' ಈಗ ಯಾರಿಗೆ ಯಾರೋ ಕಷ್ಟಪಟ್ಟು ನೆತ್ತರು ಸವೆಯಿಸಿ ಭಾರತಕ್ಕೆ ಸ್ವಾತಂತ್ರ್ಯವನ್ನು ಒದಗಿಸಿಕೊಟ್ಟಾಗ, ಈ ವೀರಾಧಿವೀರರ ಮರಿಮಕ್ಕಳು ತಾವೂ ಸ್ವತಂತ್ರರಾದೆವೆಂದು ವಿಜೃಂಭಿಸಲು ತೊಡಗಿದ್ದಾರೆ. ಆದರೆ ಇದುವರೆಗಿನ ಇವರ ಸೀರನ್ನರಿತ ಭಾರತವೀರರು ಸುಮ್ಮನಿದ್ದಾರೆಯೆ? ಈ ಸೂತ್ರಗೊಂಬೆಗಳನ್ನು ಕುಣಿಸುವ ಸೂತ್ರಧಾರರನ್ನೇ ಭಾರತದಿಂದ ಎಬ್ಬಿಟ್ಟುವಾಗ, ಈ ಬೊಂಬೆಗಳ ಸೂತ್ರಗಳು ತಾವಾಗಿ ಕಳಚಿಬೀಳುವುವೆಂಬುದನ್ನು ಅವರು ಅರಿಯರೆ? 'ಕುರೀಂದ್ರ'ರು ಸಾಕಿದ ನಾಯಿಗಳು ಬೊಗಳಾಟಕ್ಕೆ ತೊಡಗಿವೆ; ಆದರೆ ಇವೇ ನಾಯಿಗಳು ತಮ್ಮ ಮೇಲೆಯೆ ತಿರುಗಬಹುದೆಂಬುದನ್ನು ಇವರಿಗೆ ತಿಳುಹಿಕೊಡುವವರಾರು? ತಿಳುಹಿಕೊಡಲು ಬಯಸಿದರೂ ಈ ಆರೆಬುದ್ಧಿಯ ಅರಸರಿಗೆ ತಿಳಿದುಕೊಳ್ಳುವ ಮೆದುಳನ್ನು ಬ್ರಿಟಿಷರು ಇಟ್ಟಿದ್ದಾರೆ ಎಲ್ಲಿ?

ಜಯಚಂದ' ದಿವಾಣ, ಸಿ. ಪಿ. ಯವರು

ಪೃಥ್ವೀರಾಜನ ಕಾಲದಲ್ಲಿ ಮಾತ್ರ ಮನೆಮುರುಕ ಜಯಚಂದನಿದ್ದನೆಂದು ಯಾರೂ ತಿಳಿದುಕೊಳ್ಳಬೇಕಾದ ಕಾರಣವಿಲ್ಲ. ಇಂದಿನ ಜವಾಹರ ವೀರನ ಕಾಲದಲ್ಲಿಯೂ ಸಿ. ಪಿ. ರಾಮಸ್ವಾಮಿಯಂತಹ ಅಧುನಿಕ ಜಯಚಂದರು ಇದ್ದೇ ಇರುವರು. ಭಾರತರಾಷ್ಟ್ರಕ್ಕೆ ಮೂಲದಲ್ಲಿಯೆ ವಿರೋಧಿಯಾಗಿ ಹೊರಟ ಜಿನ್ನಾ ನಾಹೇಬರ ಪಾಕಿಸ್ತಾನಕ್ಕೆ ಈ ರಾಮಸ್ವಾಮಿ ಅಯ್ಯರರ ಸಂತೋಷದ ಸಹಕಾರ. ಸ್ವಕೀಯರಾದ ಭಾರತೀಯರೊಂದಿಗೆ ಸ್ವಾತಂತ್ರ್ಯದ ಸ್ಪರ್ಧೆ. 'ಸ್ವಾತಂತ್ರ್ಯ' ಎಂಬ ರಬ್ಬರ್‌ನುಡಿಯಲಿಕ್ಕೂ ಒಂದು ಭಗೆಯ ಅಧಿಕಾರ ಬೇಕಾಗುತ್ತದೆಂಬುದು ಬ್ರಿಟಿಷರ ಬಾಲಂಗೋಚಿಯಾದ ಅಯ್ಯರಿಗೆ ಏನು ಗೊತ್ತು! ಕನ್ನಡನಾಡಿನ ಜೋಕುಮಾರನ ಕತೆಯನ್ನು ದಿವಾನ ಸಿ. ಪಿ. ಯವರು ಕೇಳಬೇಕು. ಅನಧಿಕಾರಿ ಸ್ವಾತಂತ್ರ್ಯ ಅನುಭವಿಸತೊಡಗಿದರೆ, ಎಂಟು ದಿನಗಳಲ್ಲಿಯೆ ಅಗಸರ ಮುದುಕಿ ಹೆಡಕು ಮುರಿದು ಹೊಳೆಯಲ್ಲಿ ಹಾಕಿದಳಂತೆ. ಅಧುನಿಕ ಜಯಚಂದರೆಲ್ಲ ಜೋಕುಮಾರನ ವ್ರತ-ಪೂಜೆ ಮಾಡಿ, ಅತನ ಪುಣ್ಯಕಥೆಯನ್ನು ಕೇಳಬೇಕು.

ಹಿಂದೂವೀರ ಭೋಪಟಕರ

ಬರಲಿರುವ ಭಾರತೀಯ ಸ್ವಾತಂತ್ರ್ಯ ಪುಣೆಯ ವಾಗ್ವೀರ ಭೋಪಟಕರರಿಗೆ ಸ್ವಾತಂತ್ರ್ಯವಲ್ಲ. ಆದರಂತೆಯೆ ಭಾರತೀಯರ ರಾಜ್ಯಘಟನಾ ಸಮಿತಿ ಏಕಮುಖದಿಂದ ನಿರ್ಣಯಿಸಿ ಒಪ್ಪಿಕೊಂಡ ರಾಷ್ಟ್ರಧ್ವಜ ಇವರಿಗೆ ರಾಷ್ಟ್ರೀಯ ಧ್ವಜವಲ್ಲ. ಆದುದರಿಂದಲೆ ಆಗಸ್ಟ್ ಹದಿನೈದರಂದು ಯಾರೂ ಸ್ವಾತಂತ್ರ್ಯೋತ್ಸವದಲ್ಲಿ ಭಾಗವಹಿಸಕೂಡದೆಂದೂ, ಅಂದು ಎಲ್ಲರೂ 'ಭಗವಾ ಝೆಂಡಾ' ವನ್ನು ತಂತಮ್ಮ ಮನೆಗಳ ಮೇಲೆ ಏರಿಸಬೇಕೆಂದೂ ತಮ್ಮ ಅನುಯಾಯಿಗಳಿಗೆ (ಯಾರಾದರೂ ಇದ್ದಾರೆಯೇ?) ವೀರಸಂದೇಶವನ್ನು ಕೊಟ್ಟಿದ್ದಾರೆ. 'ಊರೆಲ್ಲ ಉಗಾದಿ ಮಾಡಿದರೆ, ಉಡಕ ಶಿವರಾತ್ರಿ ಮಾಡಿತಂತೆ!' ಹೊಟ್ಟೆಯುಕೆಚ್ಚು ಎಲ್ಲೆಲ್ಲಿ ಯಾವ ಯಾವ ಬಗೆಯಲ್ಲಿ ಪ್ರಕಟವಾದೀತೆಂಬುದನ್ನು ಹೇಳಲಿಕ್ಕೆ ಬಾರದು.

ನಾತಾರ್ಥವಿಕೃತಿಗಳು

ತಿರುವಾಂಕೂರಿನ ಪ್ರಜೆಗಳ ಗೊಂದಲದಿಂದ ಕೊಲ್ಲಾಪುರದ ರಾಜರು ನಾತ ಕಲಿತರಂತೆ; ಅದುದರಿಂದಲೆ ಹಿಂದುಸ್ಥಾನದ ರಾಜ್ಯಘಟನೆಯನ್ನು ಸೇರಲು ಒಮ್ಮೆಲೆ ಒಪ್ಪಿಕೊಂಡರಂತೆ.

* * *

ರಾಷ್ಟ್ರಧ್ವಜದಲ್ಲಿ ಮಹಾರಾಷ್ಟ್ರದ ಚಿಹ್ನೆವಾದ ಕಾವಿಬಟ್ಟೆಗೆ ಸ್ಥಾನ ಸಿಕ್ಕಲಿಲ್ಲವಾದುದರಿಂದ ಸೊಂಡೂರಿನ 'ಮಹಾರಾಜ'ರು ಮುನಿದುಕೊಂಡು, ಏನು ಮಾಡುವರೋ ಎಂಬುದು ತಿಳಿಯದಾಗಿದೆಯಂತೆ.

* * *

ಜಮಖಂಡಿಯ ಪೋಲಿಸ್ ಮೇಲಧಿಕಾರಿಗಳಾದ ಶ್ರೀಮಾನ್ ಪುಸಾಳಕರರ ಕನಸಿನಲ್ಲಿ ನಿತ್ಯವೂ ದಿವಂಗತ ಸಾಬಡೆಯವರು ಬಂದು ಸಂದರ್ಶನ ಕೊಟ್ಟು ಹೋಗುತ್ತಾರಂತೆ.

ಶ್ರೀ ವಾಮನ್ ಮೂರ್ತಿ ಪಾಕ
ಇವರ
ನಿರಾಮಯ
ಅತ್ಯುತ್ತಮ ರಕ್ತಶುದ್ಧಿಕಾರಕ

(೭೪ ನೆಯ ಪುಟದಿಂದ ಮುಂದೆ ಸಾಗಿದ್ದು)

ಬೆಳೆವಣಿಗೆಗೆ ಅನ್ನ ಬೇಕು; ಆತ್ಮದ ಬೆಳೆವಣಿಗೆಗೆ ತಿಳಿವು ಬೇಕು' ಎಂಬ ನಿರಂತರ ಸತ್ಯವನ್ನು ಮರೆತು ನಡೆಯುವೆ ಇರೋಣ.

ಇನ್ನೊಂದು ನಮ್ಮಲ್ಲಿಂದು ಪ್ರಮುಖದೋಷವಾಗಿ ಕಾಣುತ್ತಿರುವುದು, ಸೇವಾಬುದ್ಧಿಗಿಂತ ಅಧಿಕಾರಲಾಲಸೆಯ ಕಾಲಾಟವನ್ನು ಹೆಚ್ಚಾಗಿ ನಡೆಯಗೊಟ್ಟುದು. ಅಡಳಿತವೆಂಬುದು ಅಧಿಕಾರದ ಕೇಂದ್ರವೆಂಬ ಭಾವನೆ ಅಳಿದುಹೋಗಿ ಅದೊಂದು ಸಮಾಜ ಕಲ್ಯಾಣದ ಸೇವಾಭೂಮಿಯೆಂಬ ಭಾವನೆ ಬೆಳೆಯಬೇಕು. ಅಧಿಕಾರಸೂತ್ರದ ಆಪೇಕ್ಷೆಯು ದುರ್ಭಾವನೆಯು ಮೂಲಕವೇ ಇಂದು ಭಾರತವು ಬಿರಿದು 'ಪಾಕಿಸ್ತಾನ' 'ಹಿಂದುಸ್ತಾನ'ಗಳಾಗಿ ನಿಂತುದು. ಇಷ್ಟೇ ಅಲ್ಲ; ಇಂದಿನ ಸೋಶಾಲಿಝಂ ಕಮ್ಯೂನಿಝಂ, ರಾಡಿಕ್ಯಾಲಿಝಂ ಮೊದಲಾದ ಪಕ್ಷಗಳ ನಾಯಕರು ಅಧಿಕಾರಸೂತ್ರದ ಆಶೆಯಿಂದಲೆ ತಂತಮ್ಮ ಪಕ್ಷಗಳನ್ನು ಕಟ್ಟುತ್ತಿದ್ದಾರೆ ಹೊರತು, ರಾಷ್ಟ್ರಕಲ್ಯಾಣಬುದ್ಧಿಯಿಂದೇನೂ ಅಲ್ಲ. ಈ ಮುಂದಾಳುಗಳಲ್ಲಿ ನಿಜವಾದ ರಾಷ್ಟ್ರಕಲ್ಯಾಣಬುದ್ಧಿಯಿದ್ದರೆ, ಎಲ್ಲರೂ ಒಂದುಗೂಡಿ ವಿಚಾರವಿನಿಮಯಮಾಡಬೇಕು. ಒಂದೆ ರಂಗದಲ್ಲಿ ನಿಂತು ಜನತೆಯ ಕಲ್ಯಾಣದ ಗುರಿಯಿಂದ ಕಾರ್ಯಮಾಡುತ್ತ, ಒಮ್ಮುಖವಾಗಿ ರಾಷ್ಟ್ರದ ಬಲವನ್ನು ಬಳೆಯಿಸಬೇಕು. ಈಗ ಬಹುಸಂಖ್ಯಾಕ ಪಕ್ಷದವರಾಗಿ ಅಧಿಕಾರ ಸೂತ್ರ ವಹಿಸಲಿರುವ ನಾಯಕರು, ಮಿಕ್ಕ ಪಕ್ಷದವರನ್ನೂ ಸಹಾನುಭೂತಿಯಿಂದ ಕಂಡು ಮುಂದೆ ಕರೆದು, ಅವರ ಮನವೊಲಿಸಬೇಕು. ಇದನ್ನೆಲ್ಲ ಬಿಟ್ಟು ಪಕ್ಷದ ಸತ್ಯಾಸತ್ಯತೆಗಳ ಅಭಾಸಜ್ಞಾನದಿಂದ ಯಾದವೀಯ ಕಲಹವು ಪ್ರಾರಂಭವಾದರೆ, ನಾವು ಶುಭಭವಿಷ್ಯವನ್ನು ಕಾಣುವ ದಿಸೆಗಳೇ ಬರಲಿಕ್ಕಿಲ್ಲ.

ಮೇಲೆ ಹೇಳಿದ ಎಲ್ಲ ಪಕ್ಷಗಳೂ ಇಂದು ಜನತೆಯ ಅಜ್ಞಾನವನ್ನು ಉಪಯೋಗಮಾಡಿಕೊಂಡು, ದೇಶ-ಕಾಲ-ಪರಿಸ್ಥಿತಿಗಳ ಅರಿವಿಲ್ಲದೆ, ಜನರೆದುರು ಏನೇನೋ ಆಮಿಷಗಳನ್ನೊಡ್ಡಿ, ವರ್ಗಕಲಹವನ್ನು ಹಬ್ಬಿಸಿ, ರಾಷ್ಟ್ರದ ಶಕ್ತಿಯನ್ನು ಕುಂದಿಸುತ್ತಿರುವುವು. ಹೊರರಾಷ್ಟ್ರಗಳ ರಾಜಕಾರ್ಯವು ನಮ್ಮ ಈ ವಿಘಾತಕಕಾರ್ಯಕ್ಕೆ-ತನ್ನ ಸ್ವಾರ್ಥಸಾಧಿಸುವ ಉದ್ದೇಶದಿಂದ-ಉತ್ತೇಜನವನ್ನು ಕೊಡುತ್ತಲಿದೆ. ಇಂತಹ ವಿಷಮಪರಿಸ್ಥಿತಿಯಲ್ಲಿ ನಮ್ಮ ಸದ್ಯದ ನಿಶ್ಯಕ್ತ-ನಿರ್ಧನಿಕ-ಭಾರತವನ್ನು ಶಕ್ತಿ-ಧನಗಳಿಂದ ತುಂಬಿ ಮುಂದುವರಿಸಬೇಕಾಗಿದೆ. ದೊರೆತಿರುವ ಸ್ವಾತಂತ್ರ್ಯವನ್ನು ಸಂರಕ್ಷಿಸಿಕೊಂಡು, ನಮ್ಮನ್ನು ತಿನ್ನಲಿಂದು ಬರುವ ವಿರೋಧಕಶಕ್ತಿಗಳ ಬಲವನ್ನು ಭಂಗಿಸಬೇಕಾಗಿದೆ. ಸ್ವಾತಂತ್ರ್ಯಪ್ರಾಪ್ತಿಯೊಂದಿಗೆ ಇಂದು ನಮ್ಮ ಹೊಣೆಗಾರಿಕೆ ಹೆಚ್ಚಿರುವುದು; ಇದರ ಜಾಗ್ರತಿಯನ್ನು ಹಗಲಿರುಳೂ ಇರಿಸಿಕೊಂದು, ನಮ್ಮಲ್ಲಿ ಶಿಸ್ತುಸಂಘಟನೆಗಳನ್ನು ಹೆಚ್ಚಿಸಿಕೊಳ್ಳಬೇಕು. ಭೀತಿ-ಆಲಸ್ಯಗಳ ಭೂತಗಳನ್ನು ಹೊಡೆದೋಡಿಸಬೇಕು. ಯಂತ್ರಗಳಂತೆ ಪ್ರತಿಯೊಬ್ಬನೂ ಪ್ರಾಮಾಣಿಕತನದಿಂದ ತನ್ನ ಕರ್ತವ್ಯಮಾಡುತ್ತಿರಬೇಕು. ಆಗಲೆ ನಮಗೆ ಸಿಕ್ಕ ಸ್ವಾತಂತ್ರ್ಯ ಸದಕ್ಕುವುದು. ಜಯ ಹಿಂದ!

—ಸಂಪಾದಕರು

ತಿದ್ದುಪಡಿ

೧

ಕಳೆದ ಸಂಚಿಕೆಯಲ್ಲಿ ಪ್ರಕಟವಾದ 'ಬೆಳುದಿಂಗಳ ರಾತ್ರಿಯಲ್ಲಿ' ಎಂಬ ಕತೆಯ ಮೇಲೆ, ಬರೆದವರೆಂದು 'ಶ್ರೀ. ಎಸ್. ಅನಂತ. ನಾರಾಯಣ ಬಿ.ಎ. (ಆನರ್ಸ್)' ಎಂದು ಕಣ್ತಪ್ಪಿನಿಂದ ಬಿದ್ದಿದೆ. ಆ ಕತೆಯನ್ನು ಬರೆದವರು 'ಅಕ್ರೂರಾನಂತ' ಎಂಬ ಮುಚ್ಚು ಹೆಸರಿನ ಮೈಸೂರಿನವರು.

೨

ಕಳೆದ ಸಂಚಿಕೆಯಲ್ಲಿ ಪ್ರಕಟವಾದ 'ಸಹಾಯಕಗಳು' ಎಂಬ ವೈಜ್ಞಾನಿಕ ಲೇಖನದಲ್ಲಿ ಕೆಲವು ದೋಷಗಳಾಗಿವೆಯೆಂದೂ ಅವುಗಳನ್ನು ತಿದ್ದಿಕೊಂಡು ಓದಬೇಕೆಂದೂ ಲೇಖಕರಾದ ಶ್ರೀ. ಹಿತ್ತಲಮನಿಯವರು ಕಾಗದ ಬರೆದು ತಿಳುಹಿದ್ದಾರೆ. ಅವರು ಬರೆದುದು ಹೀಗೆ:—

"೧. 'Enzymes' ಎಂದರೆ ಸೂಕ್ಷ್ಮಜೀವಿಗಳೆಂದು ಬರೆದಿದ್ದೇನೆ. ಆದರೆ ಅವು ಸೂಕ್ಷ್ಮಜೀವಿಗಳಾಗಿರದೆ, 'ಸೂಕ್ಷ್ಮಜೀವಿಗಳಿಂದ ಹುಟ್ಟಿದ ಪದಾರ್ಥ' ಎಂದಾಗಬೇಕು.

೨. ಹೈಡ್ರೋ ಕ್ಲೋರಿಕ್ ಆಸಿಡ್ (Hcl) ಎಂಬುದಕ್ಕೆ 'ಶಂಖದ್ರಾವ' ಎಂದು ಬರೆದಿದ್ದೇನೆ. ಆದರೆ ಅದು 'ಹರಿತ್ ಪೀತಾಮ್ಲ' ಎಂದಾಗಬೇಕು.

೩. ನೈಟ್ರಿಕ್ ಆಸಿಡ್ (Hno 3) ಎಂಬುದಕ್ಕೆ 'ಹರಿತ್ ಪೀತಾಮ್ಲ' ಎಂದು ಬರೆದಿದ್ದೇನೆ. ಅಲ್ಲಿ 'ಶಂಖದ್ರಾವ' ಎಂದಿರಬೇಕು.

ಹತ್ತು ವರ್ಷಗಳು

(ಸಣ್ಣಕತೆ)

ಶ್ರೀ. ಎ. ಎಸ್. ರಾಮಕೃಷ್ಣ, ಉಡುಪಿ

☆

ಕೂಲಿಯಾಗಿದ್ದ 'ಜಾನಿ' 'ಜಾನ್ ಫರ್ನಾಂಡಿಸ್' ಆಗುವಂತೆ ಮಾಡಿದುದು ಮಾನವಪ್ರೀತಿ. ಇಂತಹ ಪ್ರೀತಿ ಎಲ್ಲರ ಹೃದಯದಲ್ಲಿಯೂ ಬೆಳಗತೊಡಗಿದರೆ, ಜಗತ್ತಿನಲ್ಲಿಯ ಮೂರು-ದುಗುಡಗಳೆಷ್ಟೊ ಕಡಿಮೆಯಾಗುವುದು ಖಂಡಿತ!

ಆದರೆ....?

★

ಅಂದು ಬಸ್ಸು ಶಿವಮೊಗ್ಗಾ ತಲುಪುವಾಗ, ಘಂಟೆ ಆಗಲೇ ಏಳು ಆಗಿತ್ತು. ಬೆಂಗಳೂರಿಗೆ ಆದಷ್ಟು ಬೇಗನೆ ತಲುಪಬೇಕಾಗಿದ್ದುದರಿಂದ, ರಾತ್ರಿಯ ರೈಲಿನಲ್ಲೇ ಪ್ರಯಾಣಮಾಡುವುದೆಂದು ನಿಶ್ಚಯಿಸಿದ್ದೆ. ಆದರೆ ಬಸ್ಸಿನಿಂದ ಇಳಿಯುವಾಗ, ಒಂದೇ ಒಂದು ಜಟಕಾಗಾಡಿಯೂ ಸವೀಪದಲ್ಲಿರಲಿಲ್ಲ. ಅಷ್ಟೊಂದು ವಿಸ್ಮಯವೇ ಸರಿ! ಆದರೆ ಕೂಲಿಯವರ ಗುಂಪೊಂದು ನನ್ನನ್ನು ಮುತ್ತಿಗೆಯಾಗಿತ್ತು. ನನ್ನೊಡನಿದ್ದ ಸಾಮಾನೆಂದರೆ ಕೇವಲ ಒಂದು ಚಿಕ್ಕ ಸೂಟ್‌ಕೇಸು; ಅವರಲ್ಲಿ ಚಿಕ್ಕವನೊಬ್ಬನನ್ನು ಕರೆದು ಅದನ್ನು ಅವನ ಕೈಗಿತ್ತು "ಹೂಸ ಲೈಲೈ ಸ್ಟೇಷನ್‌ಗೆ; ಏನು ಕೊಡಬೇಕೋ?" ಎಂದು ಕೇಳಿದೆ.

"ಏನಾದರೂ ಕೊಡಿ ಬುದ್ಧಿ" ಎಂದು ಪೆಟ್ಟಿಗೆಯನ್ನು ತಲೆಗೆ ಏರಿಸಿದ. ಆದರೆ ಈ 'ಏನಾದರೂ ಕೊಡಿ ಬುದ್ಧಿ' ಯವರ ಜಾಣಾಕ್ಷತನದ ಅನುಭವ ನನಗೆ ಚೆನ್ನಾಗಿತ್ತು. ಈಗ ನುಣ್ಣಗೆ ಹಾಗೆ ಹೇಳಬಟ್ಟು, ಅನಂತರ ಕೂಲಿಕೊಡುವಾಗ ಚರ್ಚೆಮಾಡಿ, ಸಿಡುಕಿ, ಅಂಗಲಾಚಿ,— ಕೊನೆಗೆ ಕೈಕಾಲು ಹಿಡಿದಾದರೂ ಒಂದಕ್ಕೆ ನಾಲ್ಕು ಪಾಲು ಸುಲಿಯುವ ಚಾತುರ್ಯ ಅವರದು. ಹಾಗೆಂದೇ ನಾನು ಕೇಳಿದೆ: "ಅದೆಲ್ಲ ಆಗೋದಿಲ್ಲಪ್ಪಾ; ಏನು ಕೊಡಬೇಕು ಅಂತ ಈವಾಗಲೇ ತಿಳಿಸಿಬಿಡು!"

"ಎಷ್ಟಾದರೂ ಕೊಡಿ ಸ್ವಾಮಿ, ನೀವು ಕೊಟ್ಟಷ್ಟು ತೆಗೆದುಕೋತೇನೆ!" ಎಂದು ನನ್ನನ್ನೇ ನೋಡತೊಡಗಿದ. ಆ ನೋಟ. ಪಲ್ಲಿ, ಬೇಸತ್ತ ಜೀವಿಯ ದೀನತೆಯೊಡನೆ, ನಿರಾಶೆ ಬೆರೆತ ಉದಾಸೀನ ಭಾವವು ಒಡೆದು ಕಾಣುತ್ತಿತ್ತು.

"ಸರಿ; ಹಾಗಾದರೆ ಮೂರಾಣೆ ಕೊಡುತ್ತೇನೆ; ಬರ್ತೀಯೇನು?" ಎಂದು ಕೇಳಿದೆ.

"ನಾನು ಇಲ್ಲಾಂದ್ರೆ ಸ್ವಾಮೀ....." ಎಂದವನೇ ನಡೆಯತೊಡಗಿದ. ಮತ್ತೆ ಐದು ನಿಮಿಷದಲ್ಲಿ ನಾವು ವಾರ್ಕರೋಡಿನಲ್ಲಿ ಕಾಲುಡಾಕುತ್ತಿದ್ದೆವು.

ಆ ಹುಡುಗನಿಗೆ ಹತ್ತು ಅಥವಾ ಹನ್ನೆರಡು ವರ್ಷಗಳಿರಬಹುದು. ನೋಡುವುದಕ್ಕೆ ಲಕ್ಷಣವಾಗಿಯೆ ಇದ್ದ. ತಲೆಯ ಕ್ರಾಪು ಮಾತ್ರ ಕೆದರಿ, ಎಣ್ಣೆಗಾಣದ ಆ ಕೂದಲುಗಳು ಕೆಂಜಗಾಗಿದ್ದುವು. ಹಾಕಿದ್ದ ಬಟ್ಟೆಗಳು ತುಂಬ ಕೊಳೆಯಾಗಿದ್ದರೂ, ಕೊಂಚ ಬೆಲೆ ಬಾಳುವುವುಗಳೇ ಆಗಿದ್ದುವು. ಆತನ ಜೀವನದಲ್ಲಿ ಏನೋ ರಹಸ್ಯವಿದೆಯೆಂಬುದು, ಕೂಲಿಗಳಿಗೆ ಸಹಜವಲ್ಲದ ಆತನ ಮಾತಿನ ಬಗೆಯಲ್ಲಿ ಕಾಣುತ್ತಿತ್ತು. ಮಾತನಾಡುವಾಗ ಆತ 'ಬುದ್ಧಿ' 'ಸ್ವಾಮಿ' ಎಂದುದು ಪ್ರಯತ್ನಪಟ್ಟು ಕಲಿತು ಆಡಿದುದೆಂಬುದು, ಬಾಯ್ತಪ್ಪವರಿಕೆಯಲ್ಲಿ ವ್ಯಕ್ತವಾಗುತ್ತಿತ್ತು. ಸಾಮಾನ್ಯ ಕೂಲಿಗಳಂತೆ ನಾವಾನು ಇರಿಸಿಕೊಳ್ಳಲು ತಲೆಯ ಮೇಲೆ ಒಂದು ಬಟ್ಟೆಯ ತುಣುಕು ಕೂಡ ಇರಲಿಲ್ಲ! ನನಗೂ ಕೊಂಚ ಕುತೂಹಲವುಂಟಾಯಿತು. ಅಂತೆಯೇ ಕೇಳಿದೆ:

"ನಿನ್ನ ಹೆಸರೇನೋ?"

"ಜಾನಿ," ಎಂದು ಇಳಿದನಿಯಲ್ಲಿ ಹೇಳಿದ.

"ನಿನ್ನೂರು ಇದೇ ತಾನೇ?"

"ಅಲ್ಲ."

"ಮತ್ತೆಲ್ಲಿಯವನು ನೀನು?"

ಹುಡುಗ ಮೌನನಾಗಿದ್ದ; ದೃಷ್ಟಿ ಕಾಲಬುಡದಲ್ಲಿತ್ತು.

"ಯಾಕೋ ಮಾತನಾಡೋದಿಲ್ಲ? ಯಾವ ಊರು ಅಂತ ಹೇಳೋ!" ಎಂದು ತುಸು ನಕ್ಕು ಕೇಳಿದೆ.

ಆದಕ್ಕೂ ಉತ್ತರವಿಲ್ಲ. ನಾನೂ ಸುಮ್ಮನಾದೆ. ಆಗಲೇ ಸರ್ಕಲ್ ಸವೀಪ ಬಂದಿದ್ದೆವು.

"ನನಗೆ ಸ್ಪಷ್ಟದ ಕೆಳಗೆ" ಎಂದು ಕೊಂಚಹೊತ್ತು ತಡೆದು ಅವನೇ ಹೇಳಿದ. ನನ್ನ ಮೌನದಿಂದ, ನಾನು ಕೋಪಿಸಿಕೊಂಡೆನೆಂದು ಗ್ರಹಿಸಿದನೋ ಏನೋ!

"ಓ, ಹಾಗಾದರೆ ನೀನು ಕನ್ನಡ ಜಿಲ್ಲೆಯವನೇನು? ನಾನೂ ಅಲ್ಲಿಯವನೆ; ಈಗ ಯಾವ ಊರೆಂದು ಪೇಳು ನೋಡೋಣ!"

"ನಮ್ಮೂರು ಕಾರ್ಕಳ."

"ಹಾಗಾದರೆ ನಿನಗೆ ಕೊಂಕಣಿ ಮತ್ತು ತುಳು ಬರುತ್ತೆ ತಾನೇ?"

"ಹೌದು, ಮನೆಯಲ್ಲಿ ನಾವು ಕೊಂಕಣಿಯಲ್ಲೇ ಮಾತನಾಡುವುದು. ತುಳು ಸಹ ಬರುತ್ತವೆ!" ಈಗ ಆತನ ಧ್ವನಿಯಲ್ಲಿ ಪರಿಚಿತರೊಡನೆ ಮಾತನಾಡುವ ಸರಳತೆಯಿತ್ತು; ಅಳುಕು ಎಲ್ಲ ಮಾಯವಾಗಿತ್ತು. "ನಿಮ್ಮ ಊರು ಯಾವುದು?" ಎಂದು ಕೇಳಿದ.

'ಉಡುಪಿ' ಎಂದೆ. ಹುಡುಗನು ಕನ್ನಡದಲ್ಲಿ ಸ್ಪಷ್ಟನಾಗಿ ಮಾತನಾಡುತ್ತಿದ್ದುದರಿಂದ ನಾನೂ ಕನ್ನಡದಲ್ಲೇ ಹೇಳಿದೆ.

" ಕಾರ್ಕಳ ಬಿಟ್ಟು, ಇಲ್ಲಿ ಯಾಕೆ ಬಂದು ಕೂಲಿಯ ಕೆಲಸ ಮಾಡ್ತಾ ಇದ್ದೀಯ? "

ಉತ್ತರವಿಲ್ಲ.

ಆ ವಿಚಾರಬಿಟ್ಟು " ನೀನು ಸ್ಕೂಲಿಗೆ ಹೋಗಿಲ್ಲವೇನೋ ? " ಎಂದೆ. " ಹೋಗಿದ್ದೇನೆ." ಎಂದ.

" ಎಷ್ಟು ಕಲ್ತಿದ್ದೀಯ ? "

" ಫಸ್ಟ್ ಫಾರಂ. "

" ಮತ್ತೆ ಸ್ಕೂಲ್ ಬಿಟ್ಟದ್ದೇಕೆ ? "

ಮತ್ತೆ ಮೌನ.

" ಮನೆಯಲ್ಲಿ ಯಾರಿದ್ದಾರೆ ? "

" ತಂದೆ, ಅಣ್ಣ ಇದ್ದಾರೆ. "

" ಕಾಯ ? "

" ಕಳೆದ ವರ್ಷ ತೀರಿಕೊಂಡರು. ತಂದೆ ಬೇರೆ ಲಗ್ನ ವಾಗಿದ್ದಾರೆ. "

" ತಂದೆ ಏನು ಕೆಲಸ ಮಾಡುತ್ತಾ ಇದ್ದಾರೆ ? "

" ತಂದೆ ಅಣ್ಣ ಇಬ್ಬರಿಗೂ ಹೊಲಿಗೆಯ ಕೆಲಸ."

" ಮತ್ತೆ ನಿನ್ನನ್ನೇಕ ಇಲ್ಲಿಗೆ ಕಳುಹಿದರು ? "

ಸ್ವಲ್ಪ ಸುಮ್ಮನಿದ್ದು ಎಲ್ಲ ವಿಚಾರವನ್ನೂ ತಡವರಿಸಿ ತಡವರಿಸಿ ಹೇಳಿದ : ಚಿಕ್ಕಮ್ಮ ತುಂಬ ಸಿಡುಕಿಯಂತೆ. ಆಕೆಯು ಕಾಟ ತಾಳಲಾರದೆ ಮುಂಬಯಿಗೆ ಹೊರಟಿದ್ದ ಕೆಲವು ಮಂದಿ ಪರಿಚಯದವರೊಡನೆ ಒಂದು ತಿಂಗಳ ಹಿಂದೆ ಇಲ್ಲಿಗೆ ಬಂದನಂತೆ. ರಾತ್ರಿ ಇಲ್ಲಿ ಉಳಿದುಕೊಂಡಾಗ, ಎಷ್ಟುಅಂಗಲಾಚಿದರೂ ಕೇಳದೆ ಜೊತೆಯವರು ಇವನನ್ನು ಇಲ್ಲಿಯ ಒಂದು ಹೋಟಲಿಗೆ ಕೆಲಸಕ್ಕೆ ಸೇರಿಸಿ, ತಾವು ಮುಂಬಯಿಗೆ ಹೋದರಂತೆ. ಇಡಿ ದಿನ ಅಳುತ್ತಿದ್ದುದರಿಂದ, ಹೋಟಲಿನಿಂದ ಹೊರದಬ್ಬಿದ ಮೇಲೆ ಕೂಲಿಯ ಕೆಲಸ ಪ್ರಾರಂಭಿಸಿದನಂತೆ ... ಇಷ್ಟೆಲ್ಲ ಹೇಳುವಾಗ ರಸ್ತೆಯ ದೀಪಗಳ ಬೆಳಕು ಅವನ ಮುಖದ ಮೇಲೆ ಬೀಳಲು, ನೋಡಿದರೆ ಕಣ್ಣಿನಲ್ಲಿ ಹನಿಮೂಡಿತ್ತು. ನನಗೂ ತುಂಬ ಮರುಕ ಹುಟ್ಟಿತು. ಈಗ ಅವನು ನನಗೆ ಕೇವಲ ಕೂಲಿಯುವ ನಾಗರಿಲ್ಲ.

" ಪೆಟ್ಟಿಗೆ ಭಾರವಿದೆಯೇನೋ ? "

" ಇಲ್ಲ, ಭಾರನೇನೂ ಇಲ್ಲ ! "

ಆದರೂ ನನಗೆ ಮನಸ್ಸು ಕೇಳಲಿಲ್ಲ. ಅವನು ಬೇಡವೆನ್ನುತ್ತಿದ್ದಂತೆಯೆ ಬ್ಯಾಗನ್ನು ತೆಗದುಕೊಂಡು ನನ್ನ ಕೈಯಲ್ಲಿ ಹಿಡಿದುಕೊಂಡೆ. ಕೂಡಲೆ ಅವನು ಅಲ್ಲೇ ನಿಂತುಬಿಟ್ಟು " ಹಾಗಾದರೆ ನಾನು ಹೋಗಲೇನು ? " ಎಂದು ಗಲಿಬಿಲಿಗೊಂಡು ಕೇಳಿದ.

" ಯಾಕೋ ? " ನಾನೂ ವಿಸ್ಮಯಗೊಂಡು ಕೇಳಿದೆ.

" ಅಲ್ಲಾ, ಪೆಟ್ಟಿಗೆ ತೆಗೆದುಕೊಂಡಿರಿ....."

ಅತನ ಮುಗ್ಧತೆಯನ್ನು ನೋಡಿ ಕನಿಕರ ಉಂಟಾದರೂ ನಗು ಬಡಿಯಲಾಗಲಿಲ್ಲ " ಏಲ್ಲೇನೋ, ನಿನಗೆ ಭಾರವಾಗುತ್ತೇಂತ ನಾನು ಪೆಟ್ಟಿಗೇನ ತೆಗೆದುಕೊಂಡರೆ, ಕಾಸು ಬಿಟ್ಟು ಅರ್ಧದಲ್ಲಿ ವಾಪ್ಸು ಹೋಗುತ್ತಾರೇನೋ ? ಒಳ್ಳೆಯ ಕೂಲಿ ಕಣಯ್ಯಾ ನೀನು ! ಸ್ಟೇಷನ್‌ವರೆಗೆ ಬಾ, ಆಮೇಲೆ ಕಾಸು ತೆಗೆದುಕೊಂಡು ಹೋಗುವಿಯಂತೆ ! " ಎಂದೆ. ಮತ್ತೆ ನಡೆಯು ತೊಡಗಿದ.

" ಈಗ ಊಟ ಎಲ್ಲಿ ಮಾಡ್ತೀಯಾ ? "

" ಊಟ...."

" ಹೇಳು, ಪರವಾ ಇಲ್ಲ ! "

" ಹೋಟಲಲ್ಲಿ ಅನ್ನ ಕೊಟ್ಟರೆ, ಒಂದೊಂದು ದಿನ ಊಟ ಮಾಡುತ್ತೇನೆ. ಇಲ್ಲವಾದರೆ ಕೂಲಿಯ ಕಾಸಿನಲ್ಲಿ ಕಾಫಿ ಕುಡಿದೋ, ನೆಲಗಡಲೆಕಾಯಿ ತಿಂದೋ ಇರುತ್ತೇನೆ."

" ನಿಮ್ಮೂರಲ್ಲಿ ಹೀಗೆಯೇ ಇರುತ್ತಿದ್ದೆಯೇನೋ ನೀನು ? ಊಟ ಇಲ್ಲದೆ ಇರೋದಕ್ಕಿಂತ ಹೋಟಲಿನಲ್ಲಾದರು ಕೆಲಸ ಮಾಡಬಹುದಾಗಿತ್ತಲ್ಲ....."

" ಹೋಟಲ್ ಕೆಲಸ ನನಗೆ ಬರೋದಿಲ್ಲ."

" ಹಾಗಿದ್ದರೆ ಮನೆಗೆ ಹೀಗಾಗಿದೆ—ಅಂತ ಕಾಗದ ಬರೆಯ. ಬಹುದಿತ್ತಲ್ಲ ? " ಉತ್ತರವಿಲ್ಲ. ಏನೂ ಅರಿಯದ ಈ ಹಸುಳೆಯ ಮರವಸ್ಥಗ ನನ್ನೆದೆ ಕರಗಿತು.

ಅಷ್ಟರಲ್ಲಿ ಸ್ಟೇಷನ್ನಿಗೆ ತಲುಪಿದ್ದೆವು. ಸಾಗರದ ಕಡೆಯಿಂದ ರೈಲು ಬರಲು ಇನ್ನೂ ಕಾಲುಘಂಟೆಯಿತ್ತು. ಜನಸಂದಣಿಯು ಒತ್ತಡ ಬಹಳವಾಗಿತ್ತು. ಪ್ಲಾಟ್‌ಫಾರ್ಮಿನ ಒಂದು ಕಲಬದ ಬಳಿ ನನ್ನ ಬ್ಯಾಗನ್ನಿಟ್ಟು, ಹುಡುಗನನ್ನು ಅಲ್ಲೇ ಕಾಯ್ದಿರುವಂತೆ ಹೇಳಿದ ಟಿಕೆಟ್ ತೆಗೆದುಕೊಂಡು ಹಿಂದಿರುಗುವಾಗ ನೋಡಿದೆ; ಹುಡುಗ ಅಲ್ಲೇ ಕುಳಿತಿದ್ದ. ಚಳಿಗಾಳಿ ಬೀಸುತ್ತಿತ್ತು. ಗಲ್ಲಕ್ಕೆ ಕೈಗಳನ್ನೊತ್ತಿ ಮುದುಡಿ ಕುಳಿತು ಆತ ಕಣ್ಣು ಬಡುತ್ತಿದ್ದ ದೃಶ್ಯವನ್ನು ನಾನು ಎಂದಿಗೂ ಮರೆಯಲಾರೆ.

ಆರಾಣಿಯನ್ನು ತೆಗೆದು ಆತನ ಕೈಗಿತ್ತು ಹೇಳಿದೆ : " ಇಗೋ, ಇದನ್ನು ಕೊಟ್ಟು ರಾತ್ರಿ ಎಲ್ಲಾದರೂ ಊಟಮಾಡು. ಮತ್ತೆ, ಈ ಚೀಟಿ ತೆಗೆದುಕೊಂಡು, ಈ ವಿಳಾಸ ಬರೆದಿರುವ ಹೋಟಲಿಗೆ ಕೊಡು. ಅಲ್ಲಿ ನಿನಗೆ ತಿಳಿದ ಕೆಲಸವಮಾಡು. ಊಟ, ಕಾಫಿ ಕೊಡುತ್ತಾರೆ. ನಾಲ್ಕಾರು ದಿನವಲ್ಲಿ ನಿಮ್ಮ ತಂದೆ ಊರಿನಿಂದ ಬಂದು ನಿನ್ನನ್ನು ಕರೆದುಕೊಂಡು ಹೋಗುತ್ತಾರೆ. ಹಾಗೆಂದು ಅವರಿಗೆ ಕಾಗದ ಬರೆಯುತ್ತೇನೆ ! " ಎಂದು ನಮ್ಮ ಅಪ್ಪರೊಬ್ಬರ ಹೋಟಲಿಗೆ ಒಂದು ಚೀಟಿ ಕೊಟ್ಟೆ. ಹಾಗೆಯೇ ಒಂದು ಕಾಗದ ತೆಗೆದು ಹುಡುಗನ ವಿಚಾರ ಬರೆದು, ಆತನ ತಂದೆಗೊಂದು ಪತ್ರವನ್ನೂ ಹಾಕಿದೆ.

" ನಿನ್ನ ತಂದೆಯ ಹೆಸರು ಮತ್ತು ವಿಳಾಸ ಹೇಳು ನೋಡೋಣ ! " ಆಗ ಹುಡುಗ ಅಳುಮೊಗವನ್ನಾಡಿಕೊಂಡು ತಂದೆಗೆ ತಿಳಿಸುವುದು ಬೇಡವೆಂದು ಅಂಗಲಾಚತೊಡಗಿದ.

ನನಗೊಂದೂ ಅರ್ಥವಾಗಲಿಲ್ಲ. ಕೊಂಚ ಕೋಪಿಸಿಕೊಂಡು ಹೇಳಿದೆ : " ನೋಡು, ನೀನು ಇಲ್ಲಿಯೇ ಇದ್ದು ದಾದರೆ ಊ

ನಿದ್ರೆ ಸರಿಯಾಗಿಲ್ಲದೆ ಕಾಹಿಲೆ ಬೀಳುತ್ತಿ. ಆಗ ನಿನ್ನನ್ನು ನೋಡುವವರಿಲ್ಲ. ರಸ್ತೆಯ ಬಳಿಯಲ್ಲಿ ಉಪವಾಸವಿರಬೇಕಾದೀತು!" ಎಂದು ಮುಂತಾಗಿ ಗದರಿಸಿದೆ.

ಹುಡುಗನಿಗೆ ಏನೆನ್ನಿಸಿತೋ; ತಂದೆಯ ಹೆಸರನ್ನೂ ಹೇಳಿದ, ಏನೋ ಒಂದು ತಪ್ಪು ತಪ್ಪು ವಿಳಾಸವನ್ನೂ ಹೇಳಿದ. ಅಂತೂ ಬರೆದು ಪೋಸ್ಟ್ ಮಾಡಿದೆ.

ಅಷ್ಟರಲ್ಲಿ ರೈಲು ಬಂತು. ಇಳಿಯುವವರ ಹತ್ತುವವರ ನೂಕು ನುಗ್ಗಲಲ್ಲಿ ಹೇಗೂ ಒಂದು ಜಾಗ ಸಂಪಾದಿಸಿದೆ. ನನ್ನ ಪೆಟ್ಟಿಗೆಯನ್ನು ಹುಡುಗನು ಕಿಟಕಿಯಿಂದಲೆ ಒಳತೂರಿದ. ರೈಲು ಹೊರಡುವವರೆಗೂ ಆತನಿಗೊಂದು ಉಪನ್ಯಾಸ ಕೊಟ್ಟೆ. ತಂದೆ ಬರುವವರೆಗೂ ಹೋಟಲಲ್ಲೇ ಇದ್ದು, ಬಾದೊಡನೆ ಜೊತೆಗೆ ಊರಿಗೆ ಹೋಗಬೇಕೆಂದು ತಿಳಿಸಿದೆ. ಎಲ್ಲದಕ್ಕೂ ತಲೆಯಲ್ಲಾಡಿಸಿದ. ಅಷ್ಟರಲ್ಲಿ ರೈಲು ಹೊರಡುವ ಘಂಟೆಯಾಯಿತು. 'ಜಾಗ್ರತೆಯಾಗಿರು' ಎಂದು ಒಮ್ಮೆ ಆತನ ಬೆನ್ನು ತಟ್ಟಿ, ತಮ್ಮನನ್ನು ಕಳುಹಿಸುವಂತೆ ಕಳುಹಿಸಿದೆ. ಆರೆನಿಮಿಷದಲ್ಲಿ ಜನರ ಗುಂಪಿನಲ್ಲಿ ಆತ ಮಾಯವಾಗಿದ್ದ. ನಾನು ದಿನಪತ್ರಿಕೆಯನ್ನು ಬಿಡಿಸಿ ಓದುತ್ತ ಕುಳಿತೆ; ಅಷ್ಟರಲ್ಲಿ ರೈಲು ಹೊರಟಿತ್ತು.

ಎರಡು ಸ್ಟೇಷನ್ ದಾಟಿದ ಮೇಲೆ ಪತ್ರಿಕೆ ಮಡಿಸಿದೆ; ಮತ್ತೆ ಹುಡುಗನದೇ ಯೋಚನೆ: 'ನಾನೆಂದಂತೆ ಮಾಡುತ್ತಾನೋ, ಅಥವಾ ಇತರ ಹುಡುಗರೊಡನೆ ಸೇರಿ ಮತ್ತೆ ಈ ಕೂಲಿಯ ಜೀವನಕ್ಕೇ ಬೀಳುತ್ತಾನೋ!' ಎಂದು ಮುಂತಾಗಿ ಮೇಲೆ ಮೇಲೆ ಯೋಚನೆಗಳು ಬರಲಾರಂಭಿಸಿದುವು. ಆದರೆ ಆ ಘಾಟಿ ಆದಾವುದನ್ನೂ ಮಾಡಲಿಲ್ಲ!

ಭದ್ರಾವತಿ ಬಂದಿತು. ಕಿಟಕಿಯಲ್ಲಿ ತಲೆ ತೂರಿಸಿ ಜನಸಂದಣಿಯನ್ನು ನೋಡುತ್ತಿದ್ದೆ. ಅಷ್ಟರಲ್ಲಿ ಅದೇ ಹಳದಿ ಚಡ್ಡಿ! ಅದೇ ಅಚ್ಚ ನೀಲಿ ಷರಟು! ಚಿಕ್ಕ ಹುಡುಗನೊಬ್ಬ ಗುಂಪಿ. ನೊಡನೆ ಸೇರಿ ಸ್ಟೇಷನ್ ಕಡೆ ಹೋಗುತ್ತಿದ್ದ. ಬೆನ್ನು ಮಾತ್ರ ಕಾಣುತ್ತಿತ್ತು. ಜಾನಿಯೇ ಇರಬಹುದೇ? ನೋಡಿಯೇ ಬಿಡಬೇಕೆಂದು ಇಳಿಯುವವರ ಹತ್ತುವವರ ನಡುವೆ ದಾರಿಮಾಡಿಕೊಂಡು ಅತ್ತ ಧಾವಿಸಿದೆ ಹುಡುಗ ಆಗಲೇ ಗೇಟು ಸಮೀಪಿಸಿದ್ದ. ಮೆಲ್ಲನೆ ಹಿಂದಿನಿಂದ ಇಣಿಕಿದೆ. ಹೌದು! ಜಾನಿ! ಕತ್ತಿನ ಕಾಲರನ್ನು ಹಿಡಿದೆಳೆದು 'ಜಾನಿ!' ಎಂದೆ. ಹುಡುಗ ಬೆಚ್ಚಿಬಿದ್ದ. ಮುಖ ಅಳುವಿನ ಕಳೆಯಿಂದ ವ್ಯಾಪಿಸಿತು. 'ಬಾರೋ ಇಲ್ಲಿ' ಎಂದು ಕಾಲರ್‌ನಿಂದಲೇ ಪ್ಲಾಟ್‌ಫಾರ್ಮಿನ ನಡುವಿಗೆ ಎಳೆದು ತಂದೆ. ತುಟಿ ಪಿಟಕ್ಕೆನ್ನದೆ ಬಂದ.

ಹುಬ್ಬುಗಂಟಿಕ್ಕಿ ಕೇಳಿದೆ: "ಏನೋ ಇದು? ಜೋಟುದ್ದ ಇದ್ದೀಯಾ.. ಏನೋ ಮಾಡಿದ್ದು ನೀನು?"

"ತಪ್ಪಾಯ್ತು!"

"ತಪ್ಪಾಯ್ತು .... ನನ್ನೊಡನೆ ಎಲ್ಲಾ ಸುಳ್ಳೇ ಹೇಳಿ ಇಲ್ಲಿಗೆ ಬಂದಿದ್ದೀಯಾ. ಪೋಲೀಸಿಗೆ ಕೊಡಲೇನು!" ಎಂದು ಹುಬ್ಬುಗಂಟಿಕ್ಕಿ ಗದರಿಸಿದೆ. ಆಗಲೇ ಆತನ ಮೇಲೆ ನನಗೊಂದು ಅಧಿಕಾರ ಬಂದಂತಾಗಿತ್ತು!

"ಇಲ್ಲ.... ಕೀಮೊಗ್ಗಾಕ್ಕೆ ಹಿಂದೆ ಹೋಗ್ತೀನಿ...."

"ಮತ್ತೆ ಇಲ್ಲಿಗೆ ಯಾಕೋ ಬಂದೆ?"

"ನಾನು ರೈಲಲ್ಲಿ ಕುಳಿತಿರಲಿಲ್ಲ....ಕುಳಿತು ನೋಡೋಣಾಂತ ಬಂದೆ."

ಕೋಪದ ಮಧ್ಯದಲ್ಲೂ ನಗು ಉಕ್ಕಿ ಬಂತು. ಹೇಗೋ ಶಡೆದುಕೊಂಡು ಕೇಳಿದೆ: "ಟಿಕೇಟ್ ಎಲ್ಲಿದೆಯೋ ನಿಂದು?"

"ನನಗೆ ಗೊತ್ತಿಲ್ಲ."

"ಗೊತ್ತಿಲ್ಲ .... ಟಿಕೇಟ್ ತೆಗೆದುಕೊಳ್ಳದೆ ರೈಲು ಹತ್ತಿದರೆ, ಜೈಲಿಗೆ ಹಾಕ್ತಾರೆ....ಗೊತ್ತೇನು ನಿನಗೆ?"

ಹುಡುಗ ಬಿಕ್ಕಿ ಬಿಕ್ಕಿ ಅಳತೊಡಗಿದ. ತುಟಿ ಅದುರುತ್ತಿತ್ತು. ಸಿಟ್ಟೆಲ್ಲ ಮಾಯವಾಗಿ ನನಗೂ ಎದೆ ಕರಗಿತು. ಅಷ್ಟರಲ್ಲಿ ಮನಸ್ಸಿಗೆ ಏನೋ ಹೊಳೆಯಿತು:

"ಹಾಗಾದರೆ ನನ್ನೊತೆಗೆ ಬೆಂಗಳೂರಿಗೆ ಬರ್ತೀಯೇನೋ?" ಹುಡುಗ ಕಣ್ಣುಜ್ಜುತ್ತಾ ತಲೆಯಲ್ಲಾಡಿಸಿದ.

ಆಗಲೇ ರೈಲು ಹೊರಡುವ ಸಮಯವಾಗಿತ್ತು. ಆತನನ್ನು ಅಲ್ಲೇ ನಿಲ್ಲಿಸಿ, ಬೇಗನೆ ಟಿಕೇಟ್ ತೆಗೆದುಕೊಂಡು, ಪುನಃ ಹುಡುಗನೊಡನೆ ಗಾಡಿಯನ್ನು ಸೇರುವಾಗ, ನಾನು ಕುಳಿತಿದ್ದ ಜಾಗವನ್ನು ಯಾರೋ ಆಕ್ರಮಿಸಿದ್ದರು. ರೈಲು ಚಲಿಸಿತು. ಬೀರೂರಿನವರೆಗೆ ನಿಂತೇಬಂದೆವು. ಅಲ್ಲಿ ಬದಲಿಸಿದ ನಂತರ ಕೂರಲು ಜಾಗ ಸಿಕ್ಕಿತು. ಅರಸೀಕೆರೆಯಲ್ಲಿ ಕಾಫಿ, ಹಣ್ಣು ಇತ್ಯಾದಿಗಳನ್ನು ತೆಗೆದುಕೊಂಡೆವು. ಆದರೆ ನಡುವೆ ನಾವಿಬ್ಬರೂ ಒಂದೇ ಒಂದು ಮಾತನ್ನೂ ಆಡಿರಲಿಲ್ಲ.

ಹಗಲೆಲ್ಲ ಬಿಸಿಲಲ್ಲಿ ದಣಿದಿದ್ದುದರಿಂದ, ಜಾನಿಗೆ ಬೇಗನೆ ನಿದ್ದೆ ಹತ್ತಿತು. ಮೊದಲು ತೂಕಡಿಸಿ ತೂಕಡಿಸಿ, ಕೊನೆಗೆ ತಲೆ ನನ್ನ ಪಕ್ಕಕ್ಕೇ ಒರಗಿತು. ಆನಂತರ ನಾನೇ ತೊಡೆಯಮೇಲಿರಿಸಿಕೊಂಡೆ. ಆಗ ನೋಡಿದರೆ, ಗತಿಸಿದ್ದ ನನ್ನ ಕಿರಿಯ ತಮ್ಮನೇ ಮಲಗಿದಂತಿತ್ತು. ಆ ದುಂಡನೆಯ ನಸುಗೆಂಪು ಮುಖವು ಅತ್ತು ಕಣ್ಣೀರಿನಿಂದ ಮಲಿನವಾಗಿತ್ತು. ಕರವಸ್ತ್ರದಿಂದ ಚೆನ್ನಾಗಿ ಒರಸಿದೆ. ನಡು-ನಡುವೆ ನಿದ್ದೆಗಣ್ಣಿನಲ್ಲಿ ಬಿಕ್ಕುತ್ತಲೇ ಇದ್ದನು.

ಬೆಳಗಿನಲ್ಲಿ ಬೆಂಗಳೂರನ್ನು ಸೇರಿದೆವು. ನಮ್ಮಣ್ಣನ ಮನೆಯನ್ನು ತಲುಪಿದಾಗ, ಜೊತೆಗಿದ್ದ ಜಾನಿಯನ್ನು ನೋಡಿ ಎಲ್ಲರಿಗೂ ಕುತೂಹಲ. ವಿಚಾರವನ್ನೆಲ್ಲ ತಿಳಿಸಿದೆ. ಮೊದಲಿಗೆ ನಮ್ಮಣ್ಣನು ನನ್ನ ಜೊಂದು ಹುಡುಗಾಟವೆಂದೆಣಿಸಿದರೂ ಕೊನೆಗೆ ಅವನೇ ಹೇಳಿದ: "ನನ್ನ ಫಾರ್ಮಸಿಯಲ್ಲಿ ಇನ್ನೂ ಒಬ್ಬ ಹುಡುಗ ಬೇಕು; ಇವನೇ ನಿಲ್ಲುವಂತಿದ್ದರೆ ನಿಲ್ಲಲಿ. ಮನೆಯಲ್ಲೇ ಇರಲಿ!" ಎಂದು.

ನಾನೂ ಜಾನಿಯನ್ನು ಕರೆದು ವಿಚಾರ ತಿಳಿಸಿ "ಏನೋ?" ಎಂದೆ. ಎಂದಿನಂತೆ ಸಮ್ಮತಿಸೂಚಕವಾಗಿ ತಲೆಯಲ್ಲಾಡಿಸಿದ.

ಮನೋಹರ ಗ್ರಂಥಮಾಲೆ

★

ಇದೇ ಆಗಸ್ಟ್‌ದಿಂದ ಪ್ರಾರಂಭವಾಗುವ ಹೊಸ
ವರ್ಷದಿಂದ ಗ್ರಂಥಮಾಲೆಯ
ಚಂದಾಪಣವನ್ನು ೫-೧೦-೦
ಯಿಂದ ೬-೮-೦ ಗೆ ಹೆಚ್ಚಿಸಲಾಗಿದೆ.

ಗ್ರಂಥಮಾಲೆಗೆ ಚಂದಾದಾರರಾಗಲಿಚ್ಛಿಸುವವರು
ಇತ್ತ ಗಮನಿಸಬೇಕಾಗಿ ವಿನಂತಿ !

ಅವನು ತಲೆಯಲ್ಲಾಡಿಸಿದಾಗಲೆಲ್ಲ ನನಗೆ ನಗು. ಆ ಆಡಿಸುವ ರೀತಿ ಆಹ್ಲಾದಕರವಾಗಿತ್ತು. ಅದೊಂದು ಅತನ ವೈಶಿಷ್ಟ್ಯ.

ಈ ಎಂಟು ದಿನಗಳಲ್ಲಿ ಜಾನಿ ತುಂಬ ಸುಟಿಯಾಗಿದ್ದ. ಎಲ್ಲರಿಗೂ ಅಚ್ಚುಮೆಚ್ಚಿನವನಾದ. ಅತ್ತಿಗೆಗೂ ಜಾನಿಗೂ, ತುಳು ಭಾಷೆಯಿಂದಾಗಿ ಬಲು ಬೇಗನೆ ಸ್ನೇಹ ಬೆಳೆಯಿತು !

ಆಷ್ಟರಲ್ಲಿ ಕಾಲೇಜಿನ ಆರಂಭದ ಸಮಯವಾಗಿದ್ದುದರಿಂದ, ಮಂಗಳೂರಿಗೆ ಹೊರಡಲು ಸಿದ್ಧನಾದೆ. ಸ್ಟೇಷನ್ನಿಗೆ ಅಣ್ಣನೇ ಕಾರು ತಂದಿದ್ದ. ಸ್ಟೇಷನ್ ತಲುಪಿದ ಸ್ವಲ್ಪ ಹೊತ್ತಿನಲ್ಲಿ ಜಾನಿಯೂ ಬಂದ.

ಅಣ್ಣ ಮರೆಯಾದಾಗ ನನ್ನ ಹತ್ತಿರಕ್ಕೆ ಬಂದು ಏನೋ ಗೋಪ್ಯವಿಚಾರ ಹೇಳುವವನಂತೆ "ನನ್ನ ವಿಚಾರ ಮನೆಗೆ ತಿಳಿಸಬೇಡಿ," ಎಂದ.

"ಯಾಕೋ, ತಂದೆ ಬೇಡವೇನೋ ನಿನಗೆ?"

"ನಾನು ಬರುವಾಗ, ಕೇಳದೆ ಚಿಕ್ಕಮ್ಮನ ಬಳಿ ಮತ್ತು ಹತ್ತು ರೂಪಾಯಿ ತಂದಿದ್ದೇನೆ. ಈಗ ನಾನು ಅವರಿಗೆ ಸಿಕ್ಕಿದರೆ...."

"ಅದೆಲ್ಲ ಏನು ಮಾಡಿದೆಯೋ ಈಗ?"

"ರಿನನೊಗ್ಗಾದಲ್ಲಿ ಜೊತೆಗಿದ್ದವರು ಕಸಿದುಕೊಂಡು ಮುಂಬಯಿಗೆ ಹೋದರು.." ಇದುವರೆಗೆ ಮರಸಿದುದನ್ನು ಹೇಳಿ, ಏನೋ ತಪ್ಪು ಮಾಡಿದವನಂತೆ ನನ್ನ ಪಾದದ ಕಡೆ ನೋಡುತ್ತ ನಿಂತ.

"ಇಷ್ಟಿಲ್ಲ ಮಾಡಿದ್ದೀಯಾ? ಇರಲಿ, ಮುಂದಾದರೂ ಮನೆಗೆ ಕಾಗದ ಬರೆ; ನಿದ್ಯ ನಾನೇನೂ ಹೇಳುವುದಿಲ್ಲ!"

ಸಮಯವಾಗಿದ್ದುದರಿಂದ ಅಣ್ಣ ನನ್ನು ಬೀಳ್ಕೊಂಡು ಮೈಸೂರು ರೈಲನ್ನೇರಿದೆ. ರೈಲು ಹೊರಡುವ ಸಿಳ್ಳು ಕೇಳಿತು. ಕಿಟಕಿಯಿಂದ ಕೈ ತೆಗೆದು ಜಾನಿ ನನ್ನ ಕಡೆಗೆ ನೀಡಿದ ನಾನೂ ಕೈ ನೀಡಿ ಕುಲುಕಿದೆ. ಇಬ್ಬರ ರೆಪ್ಪೆಯಲ್ಲೂ ತೇವವಿತ್ತು. ಹೃದಯವೂ ಆಳುತ್ತಿದ್ದಂತೆ ಭಾಸವಾಯಿತು. ರೈಲು ಚಲಿಸಿತು. ಬಲು ದೂರದವರೆಗೆ ಜಾನಿಯ ಕರವಸ್ತ್ರ ಹಾರಾಡುವುದು ಕಾಣಿಸುತ್ತಿದ್ದು, ಕೊನೆಗೆ ಮರೆಯಾಯಿತು.

* * * *

ಅನಂತರ ವರ್ಷವರ್ಷವೂ ಬೆಂಗಳೂರಿಗೆ ಹೋಗುತ್ತಿದ್ದೆ. ಜಾನಿ ತುಂಬ ಅಂದವಾಗಿ ಬೆಳೆಯುತ್ತಿದ್ದ. ನಮ್ಮಿಬ್ಬರ ಹೃದಯಗಳು ಅಂದಿನಂತೆ ಇವೆ. ಸ್ಕೂಲಿನ ವಿದ್ಯೆ ಸಾಕಷ್ಟಿಲ್ಲದಿದ್ದರೂ ಸುಸಂಸ್ಕೃತರೊಡನೆ ಇದ್ದು ಬೆಳೆದು ಜಾನಿ ವಿದ್ಯಾವಂತನೇ ಆಗಿದ್ದನು. ಎಲ್ಲ ವಿದ್ಯೆಗಳಿಗಿಂತ ಅತನ ವಿನಯ ಮತ್ತು ಪರಿಷ್ಕಾರವಾದ ನಡತೆಗೆ ಯಾರೂ ಮನಸೋಲಬೇಕು. ಅತನ ಮತ್ತು ನಮ್ಮ ಮತವೇನೋ ಬೇರೆ; ಆದರೆ ನಾವು ಅಣ್ಣ-ತಮ್ಮಂದಿರ ನಡುವೆ, ಅಳಿದ ನಮ್ಮ ಕಿರಿಯ ತಮ್ಮನ ಸ್ಥಾನದಲ್ಲಿ ಬೆಳೆದ ಹುಡುಗ ಜಾನಿ.

ಮೊನ್ನೆ ತಾನೆ ಬೆಂಗಳೂರಿಗೆ ಹೋದಾಗ, ನೆಟ್ಟಗೆ ನಮ್ಮಣ್ಣ ಹೊಸದಾಗಿ ತೆರೆದಿದ್ದ ಔಷಧಿಗಳ ಸೇಲ್ಸ್ ಡಿಪಾರ್ಟ್‌ಮೆಂಟಿನ ಕಡೆಗೆ ಹೋದೆ. ಏಕೆಂದರೆ ಜಾನಿಯೇ ಅದರ ಸಂಚಾಲಕನಾದುದರಿಂದ, ಅವನು ಅಲ್ಲಿಯೇ ಇರುತ್ತಾನೆ. 'ಜಾನ್ ಫೆರ್ನಾಂಡಿಸ'ರ ನೇತೃತ್ವದಲ್ಲಿ ಎಲ್ಲವೂ ಭವ್ಯವಾಗಿಯೇ ಇತ್ತು.

ಮೊದಲು ತುಂಬ ಮಾತನಾಡಿದೆವು. ಕಡೆಗೆ "ಭದ್ರಾವತಿ ಜ್ಞಾಪಕವಿದೆಯೇನೋ?" ಎಂದು ಕೇಳಿದೆ.

ಜಾನಿ ನಕ್ಕ.

ಪಕ್ಕದಲ್ಲಿ ತೂಗ ಹಾಕಿದ್ದ ಕೋಟಿನ ಕಿಸೆಯಿಂದ, ಮೊರೊಕ್ಕೊ ಲೆದರಿನ ಮಡಿಕೆಯೊಂದನ್ನು ಬಿಡಿಸಿ ನನ್ನೆದುರು ಹಿಡಿದ. ಸೊಬಗಿನ ರಾಣಿಯೊಬ್ಬಳ ಭಾವಚಿತ್ರ. "ಓ, Mrs. ಫೆರ್ನಾಂಡಿಸ್?" ಎಂದು ಕೇಳಿದೆ.

"ಅಲ್ಲಾ, ನಿದ್ಯ ಮಿಸ್. ಕ್ಯಾಥರೀನ್ ರೆಜಿಲೋ, ಆಫ್ಟೆ" ಎಂದ ನಗುತ್ತಾ. ಜಾನಿಗೆ ತಕ್ಕವಳಾಗಿದ್ದಳು,— ಎಂದರೆ ಆಕೆಯ ಸೌಂದರ್ಯದ ವರ್ಣನೆ ಅನಾವಶ್ಯಕ. ಕೊನೆಗೆ ಕೇಳಿದೆ—"ಯಾವಾಗ?"

ಮತ್ತೊಂದು ಮಡಿಕೆಯನ್ನು ಬಿಡಿಸಿದ. ಅಲ್ಲಿದ್ದ ಮತ್ತೊಂದು ಚಿತ್ರವನ್ನು ಕೈಯಿಂದ ಮುಚ್ಚಿ ಚಿತ್ರದ ಕೆಳಗಿದ್ದ ತಾರೀಖನ್ನು ತೋರಿಸಿದ: "೩೦-೫-೧೯೩೭" "ಅದೇ ದಿನ" ಎಂದು ಕೈ ತೆಗೆದ. ಮೇಲೆ ನೋಡಿದರೆ ನನ್ನದೇ ಭಾವಚಿತ್ರ. ನಾನು ಅವಾಕ್ಕಾದೆ.

ಹದಿನೈದು ದಿನಗಳ ಅನಂತರ: ಇಂದು ತಾರೀಖು ೩೦-೫-೪೭. ೩೦-೫-೩೭ ರಂದು ಕೂಲಿಯ ಹುಡುಗ ಜಾನಿಯನ್ನು ನೋಡಿದೆ; ಈದಿನ ಅದೇ ಜಾನಿ ರೂಪಸಿಯೊಬ್ಬಳ ಕೈ ಹಿಡಿದುದನ್ನೂ ನೋಡಿದೆ.

ಈ ನಡುವೆ ಹತ್ತು ವರ್ಷಗಳು.

ನಿವೃತ್ತ ಶಿಕ್ಷಣ

ಶ್ರೀ. ರಾ ಮು ಹೆಗಡೆ 'ಪರಂಧಾಮ' ವರ್ಧಾ

★

[ಆಚಾರ್ಯ ವಿನೋಬಾ ಭಾವೆಯವರ ಹೆಸರನ್ನು ಕೇಳದವರಾರು? ಬಾಹ್ಯ ರಂಗದಲ್ಲಿ ಅವರ ಹೆಸರಿನ ಪ್ರಚಾರವಾಗದಿದ್ದರೂ ಜನರು ಅವರನ್ನು ಕಿಳಿದಿದ್ದಾರೆ. ಅವರ ವಿಚಾರಧಾರೆಯನ್ನು ಸವಿಯಲು ಆತುರಪಡುತ್ತಾರೆ. ವಿನೋಬಾಜಿಯವರು ಬಾಹ್ಯ ಜಗತ್ತಿನಿಂದ ಹೊರಗುಳಿಯಲು ಬಯಸುತ್ತಾರೆ; ಆದರೆ ಕಸ್ತೂರಿಯನ್ನು ಬಚ್ಚಿಟ್ಟಿರೆ ಪರಿಮಳಪ್ರು ಹೊರಸೂಸದಿರುವುದೆ? ಅವರ ಅಪಾರ ವಿದ್ವತ್ತಿನಿಂದ ಹುಂಬಿದ ವಿಚಾರಗಳು ಜನತೆಯನ್ನು ಆಕರ್ಷಿಸಿ, ಕ್ರಾಂತಿಯನ್ನುಂಟು ಮಾಡುತ್ತವೆ. ವರ್ಧಾ ಶಿಕ್ಷಣದ ಯೋಜಕರಲ್ಲೊಬ್ಬರು ವಿನೋಬಾ. ಸುಮಾರು ೨೫ ವರ್ಷಗಳ ಹಿಂದಿನ ಅವರ ಶಿಕ್ಷಣ ಸಂಬಂಧದ ವಿಚಾರಗಳಿವು. ಪ್ರಸಿದ್ಧ ಫ್ರೆಂಚ್ ಸಾಹಿತಿಯಾದ ರೂಸೋನು ಶಿಕ್ಷಣಶಾಸ್ತ್ರದ ಮೇಲೆ ಬರೆದ 'ಎಮಿಲೀ' ಎನ್ನುವ ಪುಸ್ತಕದ ವಿಷಯವಾಗಿ ಮಾಡಿದ ವಿಮರ್ಶೆಯಿದು. ಕನ್ನಡಿಗರು ಇದರ ಲಾಭಪಡೆಯಲೆಂದು ೧೯೨೬ ನೆಯ ಇಸ್ವಿಯ ವಿನೋಬಾರ 'ಮಹಾರಾಷ್ಟ್ರ-ಧರ್ಮ' ವಾಸಿಕದಿಂದ ಇದನ್ನು ಕನ್ನಡಿಸಿ ಕೊಡಲಾಗಿದೆ.] —ಅನುವಾದಕ

ಫ್ರಾನ್ಸ್‌ದೇಶದ ರಾಜ್ಯಕ್ರಾಂತಿಯು ಇತಿಹಾಸದಲ್ಲಿ ರೂಸೋ ಮತ್ತು ವಾಲ್ಟೇರ್ ಈ ಸಾಹಿತಿಗಳ ಹೆಸರು ತುಂಬ ಪ್ರಸಿದ್ಧವಾಗಿರುವುದು. ಇವರ ಭಾಷಾಶೈಲಿ, ವಿಚಾರಪ್ರವಾಹ ಮತ್ತು ತೇಜಸ್ವಿಯಾದ ಲೇಖನಪದ್ಧತಿ ಇವೆಲ್ಲ ಸಜೀವವಾಗಿದ್ದೂ ಕ್ರಾಂತಿಕಾರಕವಾಗಿಯೂ ಇರುವುವು. ಜನತೆಯ ಮೇಲೆ ಇವರ ಲೇಖನಿಕೆಯ ಪ್ರಭಾವವು ಬೀಳುವಷ್ಟು, ರಾಜ-ಮಹಾರಾಜರುಗಳ ಶಸ್ತ್ರಬಲಗಳ ಪ್ರಭಾವವೂ ಬೀಳುತ್ತಿರಲಿಲ್ಲ. ಫ್ರಾನ್ಸಿನ ರಾಜ್ಯಕ್ರಾಂತಿಯು ಇವರ ಲೇಖನಗಳ ಪರಿಣಾಮದ ಪ್ರತೀಕವೆಂದರೆ ತಪ್ಪಲ್ಲ. ಇವರಿಬ್ಬರಲ್ಲಿ ರೂಸೋನು ವಿಶೇಷ ಭಾವನಾಪ್ರಧಾನನಾಗಿದ್ದನು. ಇವನು ಲೇಖನವನ್ನು ಬರೆಯಲೆಂದು ಭಾವನಾಶಾಸ್ತ್ರವನ್ನು ಅಭ್ಯಸಿಸಿರಲಿಲ್ಲ. ಇವನ ವಿಚಾರಗಳು ಹೃದಯದಲ್ಲಿ ಹಿಡಿಸಲಾರದೆ ಹೊರಹೊಮ್ಮುತ್ತಿದ್ದುವು ಜ್ವಾಲಾಮುಖೀ ಪರ್ವತದೊಳಗಿನ ಬೆಂಕಿಯಂತಹ ಆವಾರ್ಯರಸದಂತೆ—ಆಥವಾ ಅದಕ್ಕಿಂತಲೂ ಹೆಚ್ಚಿಗೆ—ದಾಹಕವಾದ ವಿಚಾರ ಪ್ರವಾಹವು. ಆವನು ಬಯಸದೆಯೆ—ಅನಿಚ್ಛೆಯನ್ನಪಿ—ಹೊರಸೂಸುತ್ತಿತ್ತು. ಅವನ ಲೇಖನಗಳೆಂದರೆ ಅವನ ಹೃದಯದ ನುಡಿಗಳು. ಆದುದರಿಂದಲೇ ಅವು ಬೌದ್ಧಿಕ ಅಥವಾ ತಾರ್ಕಿಕ ವರೆಗಲ್ಲಿಗೆ ಹತ್ತಲಾರದೆ ಇದ್ದರೂ, ಪರಿಣಾಮದಿಂದ ಅವನ ಲೇಖನಗಳೆಂದರೆ 'ಪ್ರತ್ಯಕ್ಷ ಬೆಂಕಿ' ಎಂದು ಇತಿಹಾಸವು ಒಪ್ಪಿಕೊಂಡಿತು. ಅವನ ಲೇಖನಗಳ ಸೂತ್ರವು 'ಮೃತಜೀವನಕ್ಕಿಂತ ಜೀವಂತ ಮೃತ್ಯುವೇ ಲೇಸು,' ಎಂಬ ತತ್ತ್ವದಿಂದ ಕೂಡಿತ್ತು. ಇಂತಹ ಪ್ರಭಾವಶಾಲಿ— ಪ್ರತಿಭಾವಂತ— ಲೇಖಕನ ಶಿಕ್ಷಣವಿಷಯಕ ಅಭಿಪ್ರಾಯವನ್ನು ವಿಚಾರಪೂರ್ವಕ ಮನನ ಮಾಡುವುದು ಅವಶ್ಯ.

ರೂಸೋನ ಮತದಂತೆ ಶಿಕ್ಷಣದಲ್ಲಿ ಮೂರು ವಿಭಾಗಗಳು: (೧) ನಿಸರ್ಗ ಶಿಕ್ಷಣ, (೨) ವ್ಯಕ್ತಿ ಶಿಕ್ಷಣ ಮತ್ತು (೩) ವ್ಯವಹಾರ ಶಿಕ್ಷಣ—ಇವೇ ಆ ವಿಭಾಗಗಳು

ಶರೀರದ ಪ್ರತಿಯೊಂದು ಅವಯವಗಳ ಪೂರ್ಣ ಮತ್ತು ವ್ಯವಸ್ಥಿತ ವಿಕಾಸ, ಅಂಗಾಂಗಗಳ ಚುರುಕುತನ, ಚಟುವಟಿಕೆ, ಕಾರ್ಯಪಟುತ್ವ, ಭಿನ್ನ ಭಿನ್ನ ಮನೋವೃತ್ತಿಗಳ ಸರ್ವಾಂಗೀಣ ಸಂಪೂರ್ಣ ಬೆಳವಣಿಕೆ, ಸ್ಮೃತಿ, ಪ್ರಜ್ಞಾ, ಮೇಧಾ, ಧೃತಿ, ತರ್ಕ ಮೊದಲಾದ ಬೌದ್ಧಿಕ ಶಕ್ತಿಗಳು ಶ್ರೌಢ ಮತ್ತು ಪ್ರಖರವಾಗುವಿಕೆ—ಈ ಎಲ್ಲ ನೈಸರ್ಗಿಕ ಇಲ್ಲವೆ ಪ್ರಾಕೃತಿಕ ಪ್ರವೃತ್ತಿಗಳು, ನಿಸರ್ಗಶಿಕ್ಷಣದಲ್ಲಿ ಸೇರುವುವೆಂದು ಅವನ ಅಭಿಪ್ರಾಯ ಬೇರೆಯ ಶಬ್ದಗಳಿಂದ ಹೇಳಬೇಕಾದರೆ, ಮನುಷ್ಯನಲ್ಲಿ ಒಳಗಿನಿಂದೊಳಗೆಯೆ ಆಗುವ ಶಾರೀರಿಕ, ಮಾನಸಿಕ ಮತ್ತು ಬೌದ್ಧಿಕ ಬೆಳೆವಣಿಗೆಯೆ— ಆತ್ಮವಿಕಾಸವೇ— ನಿಸರ್ಗಶಿಕ್ಷಣವು. ಅದರಂತೆಯೆ ಮನುಷ್ಯನಿಗೆ ಬಾಹ್ಯಪರಿಸ್ಥಿತಿಯು ಬೇಲಿಂದ ಬೊರೆಯುವ ಜ್ಞಾನ. ವ್ಯವಹಾರದಿಂದುಂಟಾಗುವ ಅನುಭವ ಇವೇ ಮೊದಲಾದ ಪದಾರ್ಥಜ್ಞಾನ ಇಲ್ಲವೆ ಭೌತಿಕ ತಿಳಿವಳಿಕೆಗಳಿಗೆ ಅವನು 'ವ್ಯವಹಾರಶಿಕ್ಷಣ' ಎಂಬ ಹೆಸರನ್ನಿತ್ತಿದ್ದಾನೆ. ನಿಸರ್ಗಶಿಕ್ಷಣದಿಂದುಂಟಾದ ಆತ್ಮವಿಕಾಸದ ಉಪಯೋಗವನ್ನು. ವ್ಯವಹಾರಜ್ಞಾನದ ದೃಷ್ಟಿಯಿಂದ ಬಾಹ್ಯಜಗತ್ತಿನಲ್ಲಿ, ಮಾಡುವ ರೀತಿ ಯಾವುದೆಂಬುದರ ಬಗ್ಗೆ, ಎದೆದನೆಯವರ ಪ್ರಯತ್ನದಿಂದ ಮನುಷ್ಯನಿಗೆ ಸಿಗುವ ವಾಚಿಕ, ಸಾಂಪ್ರದಾಯಿಕ, ಇಲ್ಲವೆ ಶಾಲೀಯ (ಅಂದರೆ ಶಾಲೆಯಲ್ಲಿ ದೊರೆಯುವ) ಶಿಕ್ಷಣವನ್ನು ಅವನು 'ವ್ಯಕ್ತಿಶಿಕ್ಷಣ' ಎಂದು ಕರೆದಿದ್ದಾನೆ. ಅರ್ಥಾತ್, ಅವನ ದೃಷ್ಟಿಯಿಂದ, ವ್ಯಕ್ತಿಶಿಕ್ಷಣವೆಂದರೆ ವ್ಯವಹಾರಶಿಕ್ಷಣ ಮತ್ತು ನಿಸರ್ಗಶಿಕ್ಷಣಗಳೆನ್ನು ಒಂದುಗೂಡಿಸುವ ಸಂಕವು. ನಿಜವಾಗಿ ನೋಡಿದರೆ, ರೂಸೋನು ಶಿಕ್ಷಣದಲ್ಲಿ ಮಾಡಿದ ಭಾಗಗಳೆನ್ನೆಂಬ ಜೇನೂ ಮಹತ್ತ್ವದುದಲ್ಲ ಒಂದು ವಿಷಯದಲ್ಲಿ

ಇಂತಿಷ್ಟು ಭಾಗವಾಡಲೇಬೇಕೆಂಬ ನಿಯಮವೇನೂ ಇಲ್ಲ. ಇವೆಲ್ಲಾ ಅನುಕೂಲತೆಯ ಪ್ರಶ್ನೆಗಳು. ಆದುದರಿಂದ, ವೈಷ್ಟಿಭಿನ್ನತೆಯಿಂದ, ವಿಭಾಗಿಸುವಲ್ಲಿ ಹೆಚ್ಚು-ಕಡಿಮೆಗಳಾಗುವುದು ಸಹಜ. ರೂಸೋನು ಮಾಡಿದ ಈ ಮೂರೂ ಭಾಗಗಳು ಬೇಕೇ ಬೇಕೆನ್ನುವುದೇನೂ ಇಲ್ಲ. ಯಾಕೆಂದರೆ ಮನುಷ್ಯನಿಗೆ ವ್ಯಕ್ತಿ-ಶಿಕ್ಷಣ ಮತ್ತು ವ್ಯಾವಹಾರಿಕ ಶಿಕ್ಷಣಗಳು ಹೊರಗಿನಿಂದ ದೊರೆಯುವಂತಹವು, ಮತ್ತು ನಿಸರ್ಗಶಿಕ್ಷಣವು ಒಳಗಿನಿಂದ ದೊರೆಯುವಂತಹದು. ಈ ದೃಷ್ಟಿಯಿಂದ 'ಅಂತಃಶಿಕ್ಷಣ' ಮತ್ತು 'ಬಾಹ್ಯಶಿಕ್ಷಣ' ಎಂದು ಎರಡೇ ಭಾಗಗಳನ್ನು ಮಾಡುವುದಕ್ಕೇನಡ್ಡಿ ?

ಆಲ್ಲದೆ, ಇದಕ್ಕೂ ಮುಂದೆ ಹೋಗಿ ಬಾಹ್ಯಶಿಕ್ಷಣವು ಕೇವಲ 'ಅಭಾವಾತ್ಮಕಕ್ರಿಯೆ' ಎಂದೂ ಮತ್ತು ಅಂತಃಶಿಕ್ಷಣವು 'ಭಾವರೂಪಕ್ರಿಯೆ' ಎಂದೂ ಹೇಳಬಹುದು. ಎಂದ ಮೇಲೆ, ಇದೊಂದೇ ಶಿಕ್ಷಣದ ನಿಜವಾದ, ತಾತ್ತ್ವಿಕವಾದ ಭಾಗವು. ನಾವು ಎಂದು-ಕೊಂಡಿರುವ ಬಾಹ್ಯಶಿಕ್ಷಣವು, ಮನುಷ್ಯನಿಂದಲೇ ಅಥವಾ ಶಾಲೆಯೊಳಗಿಂದಲೇ ಸಿಗುವಂತಹದೆಂಬರ್ಥವಲ್ಲ. ಮನುಷ್ಯನಿಗೆ ಈ ಶಿಕ್ಷಣವು ಈ ಅನಂತವಿಶ್ವದಲ್ಲಿಯ ಪ್ರತಿಯೊಂದು ವಸ್ತುವಿನಿಂದಲೂ ಒಂದೇಸವನೆ ಸಿಕ್ಕುತ್ತಿರುವುದು. ಅದಕ್ಕೆ ಎಂದೂ ಭಂಗವಿಲ್ಲ. ಶೇಕ್ಸಪಿಯರನು ಹೇಳಿದಂತೆ: 'ಹರಿಯುತ್ತಿರುವ ಹೆಳ್ಳ-ಕೊಳ್ಳಗಳಲ್ಲಿ ಪ್ರಾಸಾದಿಕ ಗ್ರಂಥಗಳು ತುಂಬಿರುವುವು, ಕಲ್ಲು-ಬಂಡೆಗಳಲ್ಲಿ 'ದರ್ಶನ'ಗಳು ಹುದುಗಿರುವುವು; ಮತ್ತು ಪ್ರತಿಯೊಂದು ಪದಾರ್ಥದಲ್ಲಿ ಶಿಕ್ಷಣದ ಸರ್ವತತ್ತ್ವಗಳು ಸನ್ನಿಹಿತವಾಗಿರುವುವು.' ಮರ-ಬಳ್ಳಿ, ಪೊಗ್ಗು-ಮುಗುಳು, ಹೊಳೆ-ಹಳ್ಳ, ಗುಡ್ಡ-ಬೆಟ್ಟ, ಆಕಾಶ, ನಕ್ಷತ್ರ— ಎಲ್ಲವೂ ಮನುಷ್ಯನಿಗೆ ತಮ್ಮ ತಮ್ಮ ರೀತಿಯಿಂದ ಶಿಕ್ಷಣವನ್ನು ನೀಡುತ್ತಲಿರುವುವು. ವೈಜ್ಞಾನಿಕನ ಅಣುವಿನಿಂದ ಹಿಡಿದು ತಾರ್ಕಿಕನ ಮಹತ್ತತ್ತ್ವದ ವರೆಗೆ, ಭೂಮಿತಿಯ ಬಿಂದುವಿನಿಂದ ಹಿಡಿದು ಭೂಗೋಲದ ಸಿಂಧುವಿನ ವರೆಗೆ, ಅಥವಾ ಮುಕ್ಕಳ ಮಾತಿನಲ್ಲೇ ಹೇಳಬೇಕಾದರೆ ರಾಮನ ಚಂಡಿಕೆಯಿಂದ ಹಿಡಿದು ಕುಳಸಿಯ ಕೊಂಡಿಯ ವರೆಗೆ— ಎಲ್ಲಾ ಸಣ್ಣ ದೊಡ್ಡ, ಚಿಕ್ಕ ಪುಟ್ಟ ವಸ್ತುಗಳು ಮನುಷ್ಯನಿಗೆ ಗುರುಗಳಾಗಿರುವುವು. ವಿಜ್ಞಾನವಿಜ್ಞಾನವೇತ್ತನ ದೂರದೃಷ್ಟಿಯಲ್ಲಿ (ದುರ್ಬೀನು), ವ್ಯವಹಾರವಿಶಾರದನ ಚಾಕ್ಷುಷಜ್ಞಾನದಲ್ಲಿ ಮತ್ತು ತಾರ್ಕಿಕ ತತ್ತ್ವಜ್ಞಾನಿಯ ಬ್ರಾಹ್ಮಜ್ಞಾನದಲ್ಲಿ ತೋರುವ ಪದಾರ್ಥಗಳೆಲ್ಲವುಗಳಿಂದಲೂ—ಆಷ್ಟೇ ಏಕೆ, ತೋರದಿರುವ ಪದಾರ್ಥಗಳಿಂದಲೂ—ನಮಗೆ ನಿತ್ಯಪಾಠ ದೊರೆಯುತ್ತಿರುವುದು. ಸೃಷ್ಟಿಯು, ನಮ್ಮ ಅಭ್ಯಾಸಕ್ಕೆಂದು ಪರಮೇಶ್ವರನು ನಮ್ಮೆದುರಿಗೆ ತೆರೆದಿಟ್ಟ ಒಂದು ಶಾಶ್ವತ, ದಿವ್ಯ, ಆಶ್ಚರ್ಯಮಯವಾದ ಪರಮಪವಿತ್ರ ಗ್ರಂಥವಿರುವುದು. ಇದರ ಮುಂದೆ ವೇದವು ವ್ಯರ್ಥ, ಕುರಾಣವು ಕಃಪದಾರ್ಥ, ಬಾಯ್ಬಲ್ಲು ನಿರ್ಬಲ! ಆದರೆ ಈ ಗ್ರಂಥಗಂಗೆಯು ಎಷ್ಟೇ ಗಭೀರವಾಗಿದ್ದರೂ, ಅಳವಾಗಿದ್ದರೂ, ಮನುಷ್ಯನು ತನ್ನ ತಂಬಿಗೆಯಿಂದಲೇ ಅದರೊಳಗಿನ ಉದಕವನ್ನು ತೆಗೆದುಕೊಳ್ಳಬಹುದು. ಆದುದರಿಂದ ಈ ವಿಶ್ವದೊಳಗಿಂದ, ಯಾವ ಮತ್ತು ಎಷ್ಟು ಬೀಜಗಳು ನಮ್ಮ 'ಒಳಗೆ' ಸೇರಿರುವುವೋ ಅವೇ ಮತ್ತು ಆಷ್ಟೇ ವಿಷಯಗಳ ಶಿಕ್ಷಣವು ನಮಗೆ ಹೊರಗಿನಿಂದ ದೊರೆಯುವುದು. ಇದರ ಅನುಭವವು ಪ್ರತಿಯೊಬ್ಬನಿಗೆ ಇದ್ದೇ ಇರುವುದು. ನಾವು ಇಷ್ಟೊಂದು ವಿಷಯಗಳನ್ನು ಕಲಿಯುತ್ತೇವೆ, ಇಷ್ಟೆಲ್ಲ ಓದುತ್ತೇವೆ, ಎಷ್ಟೊಂದು ವಿಚಾರ ಕೇಳುತ್ತೇವೆ, ಎಷ್ಟೆಲ್ಲ ವಸ್ತುಗಳನ್ನು ನೋಡುತ್ತೇವೆ; ಆದರೆ ಅವೆಲ್ಲವುಗಳಲ್ಲಿ ಎಷ್ಟು ವಿಷಯಗಳು ನಮ್ಮ ನೆನಪಿನಲ್ಲಿ ಉಳಿಯುವುವು? ಸಾರಾಂಶವೇನೆಂದರೆ: ನಾವು ಬಾಹ್ಯಜಗತ್ತಿನಿಂದ ಕಲಿತಿರುವುದನ್ನೆಲ್ಲ ಮರೆಯುತ್ತೇವೆ; ಮತ್ತು ಅವುಗಳ ಜಾಗದಲ್ಲಿ ಬರೀ ಸಂಸ್ಕಾರವು ಮಾತ್ರ ಉಳಿಯುತ್ತದೆ. ಶಿಕ್ಷಣವೆಂದರೆ ತಿಳಿವಳಿಕೆ ಸತ್ತು ಆವಕ್ಕೆ ಬದಲು ಉಳಿದ ಸಂಸ್ಕಾರವು. ಇದಕ್ಕೆ ಮೇಲೆ ಹೇಳಿದ್ದೇ ಕಾರಣ. ಏನೆಂದರೆ ನಮ್ಮ 'ಒಳಗೆ' ಇಲ್ಲದಿರುವುದು ಹೊರಗಿನಿಂದ ಪ್ರಾಪ್ತವಾಗುವುದಶಕ್ಯ. ಬಾಹ್ಯಶಿಕ್ಷಣವೆಂಬುದು, ಯಾವುದೇ ಸ್ವತಂತ್ರ ಇಲ್ಲದೆ ತಾತ್ತ್ವಿಕ ಪದಾರ್ಥವಿರದೆ, ಅದು ಕೇವಲ ಅಭಾವಾತ್ಮಕಕಾರ್ಯವಿದೆ.

ಇಂತಹ ಪ್ರಸಂಗದಲ್ಲಿ ಯಾವಾಗಲೂ ದ್ವಿವಿಧಸಮಸ್ಯೆಗಳು ಎದುರಾಗುತ್ತವೆ. ಒಂದೊನ್ಮೆ, ಬಾಹ್ಯಶಿಕ್ಷಣವನ್ನು ಮಿಥ್ಯಾ ಎನ್ನೋಣವೆ? ಹಾಗಾದರೆ ಸಂಸ್ಕಾರವನ್ನುಂಟುಮಾಡಲಾದರೂ ಯಾವುದಾದರೊಂದು ಬಾಹ್ಯನಿಮಿತ್ತ ಅಥವಾ ಆಲಂಬನ ಇಲ್ಲವೆ ಆಧಾರವು ಬೇಕಾಗುತ್ತದೆ. ಅದಕ್ಕೆ ವಿರುದ್ಧವಾಗಿ, ಬಾಹ್ಯಶಿಕ್ಷಣವು ಸತ್ಯ ಅಥವಾ ಭಾವರೂಪವೆಂದು ತಿಳಿದೋಣವೆಂದರೆ, ಮೇಲೆ ತೋರಿಸಿದಂತೆ ಅದರ ಅಂತರ್‌ವಿಕಾಸಕ್ಕೆ ಅನುಕೂಲವಾಗುವಷ್ಟೇ ಅಂಶವು, ಅದುಕೂಡ ಸಂಸ್ಕಾರರೂಪವಾಗಿ ಉಳಿಯುತ್ತದೆ. ಎಂದರೆ ಇಲ್ಲಿ ಇಕ್ಕೆಲ ವಿಪ್ರತಿಪತ್ತಿ (dilemma) ಉದ್ಭವಿತವಾಗುವುದು. ಇಂತಹ ಪೇಚಿನ ಸ್ಥಿತಿಯಲ್ಲಿ ಈ ಎರಡು ಶಿಕ್ಷಣಗಳ ಪರಸ್ಪರ ಸಂಬಂಧವು ಏನೆಂಬುದನ್ನು ಅರಿತುಕೊಳ್ಳಬೇಕಾಗುವದು.

ಈ ವಾದವೇನೂ ನವೀನವಲ್ಲ ಆಂತೆಯೇ ಇದರ ನಿರ್ಣಯವೂ ಹೊಸದಲ್ಲ. ಎಲ್ಲಾ ಶಾಸ್ತ್ರಗಳಲ್ಲಿ ಇದೇ ರೀತಿಯ ವಾದಗಳು ಪ್ರೌಢೋರುತ್ತವೆ. ಮತ್ತು ಹಾಗೆಯೇ ಎಲ್ಲಾ ಕಡೆಯಲ್ಲೂ ಅವುಗಳ ನಿರ್ಣಯವೂ ಒಂದೇಬಗೆಯಾಗಿರುತ್ತವೆ. ಉದಾಹರಣೆಗಾಗಿ: 'ಬಾಹ್ಯಪದಾರ್ಥಗಳೊಡನೆ ಸುಖದ ಸಂಬಂಧವೇಸು?' ಎಂಬ ವೇದಾಂತದ ವಾದವನ್ನು ತಕ್ಕೊಳ್ಳಿರಿ. ಇಲ್ಲಿ ಕೂಡ ಅದೇ ತೊಪಕು: 'ಸುಖವು ಬಾಹ್ಯವಸ್ತುಗಳಲ್ಲಿಲ್ಲವೆ' ಎಂದರೆ, ಅವುಗಳಿಂದ ಯಾವಾಗಲೂ ಸುಖವು ಸಿಕ್ಕಲೇಬೇಕು; ಆದರೆ ಹಾಗೆಲ್ಲಾಗುವುದು? ಮನಸ್ಥಿತಿಯು ಕೆಟ್ಟಿದ್ದರೆ, ಉಳಿದ ವೇಳೆಯಲ್ಲಿ ಸುಖಕಾರಕವೆಂದು ಎನಿಸುವ ಪದಾರ್ಥಗಳು ಕೂಡ

ಸುಖವನ್ನೀಯಲು ಸಮರ್ಥವಾಗವು. ಇದಕ್ಕೆ ವ್ಯತಿರಿಕ್ತವಾಗಿ, 'ಬಾಹ್ಯಪದಾರ್ಥಗಳಲ್ಲಿ ಸುಖವಿಲ್ಲ. ಸುಖವು ಬರೀ ಮಾನಸಿಕ ಭಾವನೆಯು' ಎನ್ನೋಣವೆಂದರೆ, ಹಾಗೆ ಸದಾ ಅನುಭವವಾಗುವುದಿಲ್ಲ. ಶೇಕ್ಸಪಿಯರನೆಂದಂತೆ ಇಚ್ಛೆಯೇ ಅಶ್ವವಾಗುವುದಾಗಿದ್ದರೆ, ಪ್ರತಿಯೊಬ್ಬನೂ ಕುದುರೆಸವಾರನಾಗುತ್ತಿದ್ದ. ಆದರೆ ಹೀಗಾಗುವುದು ಅಸಂಭವ. ಇದು ನಿಷ್ಠುರಸತ್ಯ. ಹಾಗಾದರೆ ತೊಡಕನ್ನು ಬಿಡಿಸುವುದೆಂತು?

ಇದೇ ಪ್ರಕಾರವಾಗಿ, ನ್ಯಾಯಶಾಸ್ತ್ರದೊಳಗಿನ ಬೇರೊಂದು ಉದಾಹರಣೆಯನ್ನು ತಕ್ಕೊಳ್ಳಿರಿ: 'ಮಣ್ಣಿನ ಮತ್ತು ಮಡಕೆಯ ಸಂಬಂಧವೇನು?' ಎಂಬುದೊಂದು ಪ್ರಶ್ನೆ. 'ಮಣ್ಣು ಎಂದರೆಯೆ ಮಡಕೆ' ಎಂದರೆ, ಮಣ್ಣಿನಿಂದ ನೀರು ತುಂಬಲಿಕ್ಕಾಗುವುದೇ? ಹಾಗಾದರೆ 'ಮಣ್ಣು ಬೇರೆ, ಮಡಕೆ ಬೇರೆ!' ಎಂದು ಹೇಳೋಣವೆ? 'ನಮ್ಮ ಮಣ್ಣನ್ನು ನಮಗೆ ಕೊಟ್ಟು ನಿಮ್ಮ ಮಡಕೆಯನ್ನು ನೀವು ಒಯ್ಯಿರಿ' ಎಂದು ಹೇಳಿದರೆ ಏನು ಮಾಡಬೇಕು? ಇಂತಹ ಸ್ಥಿತಿಯಲ್ಲಿ ಇವೆರಡರ ಸಂಬಂಧವೇನು? 'ಇವುಗಳ ಸಂಬಂಧದ ಸ್ವರೂಪವನ್ನು ನಾವು ಹೇಳಲಾರೆವಪ್ಪಾ!' ಎಂದು ಮುದ್ದ ಕನ್ನಡದಲ್ಲಿ ಉಸಿರಿಬಿಟ್ಟರೆ, ಸುಮ್ಮನೆ ನಮ್ಮ ಅಜ್ಞಾನವನ್ನು ತೋಡಿಕೊಂಡಂತಾಗುವುದು. ಆದುದರಿಂದ ಈ ಸಂಬಂಧಕ್ಕೆ 'ಅನಿರ್ವಚನೀಯ ಸಂಬಂಧ'ಎಂದು ಭವ್ಯವಾದ—ಪ್ರಶಸ್ತವಾದ—ಸಂಸ್ಕೃತ ಹೆಸರಿದೆ. ಆದರೆ ಈ ಸಂಬಂಧವು ಅನಿರ್ವಚನೀಯವಿದ್ದರೂ ಕೂಡ 'ವಾಚಾರಂಭಣಂ ವಿಕಾರೋನಾಮಧೇಯಂ ಮೃತ್ತಿಕೇತ್ಯೇವ ಸತ್ಯಂ'—ಮಣ್ಣೇ ತಾತ್ತ್ವಿಕ, ಮಡಕೆ ಮಿಥ್ಯ—ಎಂದು ತಾರತಮ್ಯದಿಂದ ನಿರ್ಧಾರಮಾಡಬಹುದಾದ ಹಾಗೆಯೆ, ಇಲ್ಲಿಯೂ, ಎರಡನೆಯ ಪಕ್ಷದಲ್ಲ, ಅಂತಃಶಿಕ್ಷಣವು ಭಾವರೂಪ ಮತ್ತು ಬಾಹ್ಯಶಿಕ್ಷಣವು ಅಭಾವರೂಪ ಕಾರ್ಯವೆಂದು ಹೇಳಲು ಶಕ್ಯವಿದೆ.

ಆದರೆ ಹೀಗೆ ಹೇಳುತ್ತಲೆ,ಬುದಮೇಲು ಮಾಡುವ ಮತ್ತೊಂದು ಪ್ರಶ್ನೆಯು ಜನ್ಮತಾಳುತ್ತದೆ. ಶಿಕ್ಷಣದಲ್ಲಿ ಎರಡು ಭಾಗಗಳನ್ನು ನಾವು ಮಾಡಿದ್ದೇವೆ. ಅದರಲ್ಲಿ ಅಂತಃಶಿಕ್ಷಣ ಅಥವಾ ಆತ್ಮವಿಕಾಸವು ಭಾವರೂಪವಿದ್ದರೂ, ಪ್ರತಿಯೊಂದು ವ್ಯಕ್ತಿಗೆ ಅದು ಒಳಗಿನಿಂದ ಒಳಗೇ ಉಂಟಾಗುತ್ತಿರುತ್ತದೆ. ಈ ಬಗ್ಗೆ ನಾವು ಏನನ್ನೂ ಮಾಡಲಾರೆವು. ಅದಕ್ಕೆಂದು ಯಾವುದೇ ಪಠ್ಯಕ್ರಮವನ್ನು (curriculum) ಮಾಡಬರುವುದಿಲ್ಲ. ಒಂದೊಮ್ಮೆ ಮಾಡಿದೆನೆಂದಿಟ್ಟುಕೊಂಡರೂ, ಅದರ ಅಧಿಕಾರವನ್ನು ಹೆತ್ತಿಕ್ಕಲಿಕ್ಕೆ ಸಾಧ್ಯವಿಲ್ಲ. ಉಳಿದೆ ಬಾಹ್ಯಶಿಕ್ಷಣವು ಸಾಮಾನ್ಯತಃ ಮತ್ತು ವ್ಯಕ್ತಿಶಿಕ್ಷಣವು ವಿಶೇಷತಃ ಅಭಾವರೂಪವೆಂದು ನಿರ್ಣಯಿಸಿದೆ. ಇಂತಹ ಸಂದರ್ಭದಲ್ಲಿ, ಶಿಕ್ಷಣವಿಷಯಕವಾದ ಚರ್ಚೆಯೆಂದರೆ, 'ನಹಿಶಶಕ ವಿಷಾಣಂ ಕೋಽಪಿ ಕಸ್ಯೈದಪಾತಿ' ಈ ನ್ಯಾಯದಂತೆ, ಎಲ್ಲಾ ಮೂರ್ಖತೆಯ ಪ್ರದರ್ಶನವೋ ಹೇಗೆ? ಈ ಆಕ್ಷೇಪವು ನಮಗೆ ಮೊಟ್ಟಮೊದಲು ಮುಖಕಟ್ಟುವ ಇಲ್ಲವೆ ನಿರುತ್ತರ

ವಾದುದೆಂದು ಭಾಸವಾಗಬಹುದಾದರೂ, ವಸ್ತುಸ್ಥಿತಿಯು ಇದಕ್ಕೆ ಹೊರತಾಗಿದೆಯೆಂದು ಹೇಳುವುದು ಅವಶ್ಯವಿದೆ. ಯಾಕೆಂದರೆ ನಾವು (ಬಾಹ್ಯ) ಶಿಕ್ಷಣವು ಅಭಾವಾತ್ಮಕಕಾರ್ಯ (negative function) ವೆಂದು ಹೇಳುತ್ತೇವೆ. ಆದರೆ ಅದು ಕಾರ್ಯವೇ ಅಲ್ಲವೆಂದು ಹೇಳುವುದಿಲ್ಲ. 'ಅದು ಕಾರ್ಯವಿದೆ— ಇಷ್ಟೆ ಅಲ್ಲ, ಉಪಯುಕ್ತ ಕಾರ್ಯವಿದೆ; ಆದರದು ಅಭಾವಾತ್ಮಕ ಕಾರ್ಯವಿದೆ' ಎಂದಿಷ್ಟೇ ಹೇಳುವುದಿದೆ. ಶಿಕ್ಷಣದಿಂದ ಯಾವುದೊಂದು ಸ್ವತಂತ್ರ ತತ್ತ್ವವನ್ನು ಉತ್ಪಾದಿಸುವುದಿರದ, ಸುಪ್ತತತ್ತ್ವವನ್ನು ಜಾಗೃತವನ್ನಾಗಿ ಮಾಡುವುದಿರುತ್ತದೆ. ಆದುದರಿಂದ ಜನರು ಯಾವ ಅರ್ಥದಿಂದ ಶಿಕ್ಷಣದ ಉಪಯೋಗವನ್ನು ತಿಳಿಯುತ್ತಾರೋ ಆ ಅರ್ಥದಿಂದ ಅದರ ಉಪಯೋಗವಿರುವುದಿಲ್ಲ. ಇದಿಷ್ಟರಿಂದ 'ಶಿಕ್ಷಣವು ನಿರುಪಯೋಗಿ' ಎಂದರ್ಥವಲ್ಲ. ಉಗ್ರ ಸುಧಾರಕರ 'ವಿಧವಾವಿವಾಹೋತ್ತೇಜನ'ಕ್ಕೆ ಸಮಾಜಶಿಕ್ಷಕ ಕರ್ವೆಯವರ 'ವಿಧವಾವಿವಾಹ ಪ್ರತಿಬಂಧ ನಿವಾರಣ'ವು ಒಂದೊನ್ಮೊನಿರುಪಯೋಗಿ ಎಂದೆನಿಸಿದರೂ, ಮೂಲತಃ ಅದು ನಿರುಪಯೋಗಿಯಲ್ಲ, ಬದಲಾಗಿ ಉಪಯೋಗಿಯೇ ಇದೆ ಎನ್ನುವುದನ್ನು ಅಲ್ಲಗಳೆಯುವಂತಿಲ್ಲ. ಸಾರಾಂಶವೇನೆಂದರೆ ಶಿಕ್ಷಣವು ಉತ್ತೇಜಕ ಔಷಧಿ ಇರದೆ, ಪ್ರತಿಬಂಧ ನಿವಾರಕ ಉಪಾಯವಿದೆ. ಶಿಲ್ಪಕಲೆಯ ಬಗೆಗೂ ಇಂತಹದೇ ಒಂದು ವ್ಯಾಖ್ಯೆಯನ್ನು ರಸ್ಕಿನ್ನನು ಮಾಡಿದ್ದಾನೆ. 'ಶಿಲ್ಪಜ್ಞನಿಗೆ ಕಲ್ಲಿನಿಂದ ಅಥವಾ ಮಣ್ಣಿನಿಂದ ಬೊಂಬೆಯನ್ನು ಉತ್ಪನ್ನ ಮಾಡುವುದಿರುವುದಿಲ್ಲ; ಅದು ಅದರಲ್ಲೇ ಇದೆ; ಆದರೆ ಅದು ಅಡಗಿಕೊಂಡಿದೆ. ಅದನ್ನು ಪ್ರಕಟಿಸುವ ಕೆಲಸ ಶಿಲ್ಪಿಯದು.' ಇದರ ಮೇಲಿಂದ ಶಿಕ್ಷಣವು ಅಭಾವಾತ್ಮಕವಿದ್ದರೂ ಉಪಯುಕ್ತವಿದೆ, ಮತ್ತು ಪ್ರತಿಬಂಧ-ನಿವಾರಣವೆಂಬಿಷ್ಟೇ ಅರ್ಥದಿಂದಾದರೂ ಆಗಲೊಲ್ಲದೇಕೆ, ಅದು ತುಸು ಭಾವಾತ್ಮಕವೂ ಆಗಿದೆ— ಎಂದು ಕಂಡುಬರದಿರಲಾರದು ಇದೇ ಅರ್ಥವನ್ನು ಲಕ್ಷ್ಯದಲ್ಲಿಟ್ಟು, ತಾರತಮ್ಯದಿಂದ ಅಭಾವಾತ್ಮಕವೆಂಬ ಚುರುಕು ಭಾಷೆಯನ್ನು ಮೇಲೆ ಬಳಸಿದೆ. ಚಿತ್ತವಿಕಾಸದ ದೃಷ್ಟಿಯಿಂದ ಶಿಕ್ಷಣವು ಅಭಾವಾತ್ಮಕವು—ಎಂದರೆ ಅದರ ಭಾವವು ಅತಿ ಸ್ವಲ್ಪವಿರುವುದು.

ಆದರೆ ನಾವು ಶಿಕ್ಷಣದ ಭಾವವನ್ನು ಗಡಿಮೀರಿ ಜೆಳೆಯಿಸಿದುದರಿಂದ, ನಮ್ಮ ಈಗಿನ ಶಿಕ್ಷಣ ಪದ್ಧತಿಯು, ಅತ್ಯಂತ ಅಸ್ವಾಭಾವಿಕ, ವಿಪರೀತ ಮತ್ತು ಬಡಿವಾರದ್ದಾಗಿರುತ್ತದೆ. ಮಗುವಿನ ಸ್ಮರಣಶಕ್ತಿಯು ಸ್ವಲ್ಪ ತೀವ್ರವಿದೆ ಎಂಬ ಸುಳುವು ಸಿಕ್ಕಿರೆ ಸಾಕು; ಅವನ ಬೆನ್ನು ಜೆಪ್ಪರಿಸಿ ಹೆಚ್ಚು ಹೆಚ್ಚು ಪಾಠಮಾಡುವಂತೆ ಪುರುಸ್ಸಗೊಳಿಸಲಾಗುವುದು ಹಸುಳೆಯ ತಲೆಯಲ್ಲಿ ಎಷ್ಟು ಗಡಿಯಲಿ, ಎಷ್ಟು ಬಿಡಲಿ, ಎನ್ನುವಂತಾಗುತ್ತದೆ ತಂದೆಯ ಸ್ಥಿತಿ. ಶಾಲೆಗಳ ಶಿಕ್ಷಣಪದ್ಧತಿಯಲ್ಲೂ ಕೂಡ ಇಂತಹದೇ ರೀತಿಯನ್ನು ಸ್ವೀಕರಿಸಲಾಗಿರುತ್ತದೆ. ಇದರ ಬದಲಾಗಿ ವಿದ್ಯಾರ್ಥಿಯು

(೮೬ನೆಯ ಪುಟ ನೋಡಿರಿ)

ಮಿಲನ

ಶ್ರೀ. ಚಿದಂಬರ ದೀಕ್ಷಿತ, ಧಾರವಾಡ

೧

ಆಳದ ಪ್ರೀತಿ ಹುಡುಕಲೆಂದು,
ಬರಿ ನಿರಾಶೆಯನ್ನೆ ಕೊಂದು.
ಹುಲ್ಲುಮನೆಯ ಮೂಲೆ ಗೂಡ-
ನೊಂದು ವಿಡವೆ ಇಣುಕಿದೆ;

ಎನ್ನ ಗುಡಿಲು ಕಿರಿಯದಾಗಿ,
ಕಳೆದ ಕನಸು ಮರಳದಾಗಿ,
ನಾನು ಮಾತ್ರ ಮರುಳನಂತೆ
ಬಳಗೆ ಬೆಂದು ತಿಣುಕಿದೆ.

ಕೊನೆಗೆ ನಿನ್ನ ಭವನಕವಳು
ಅತಿಥಿಯಂತೆ ಬಂದೆ ಬಹಳು—
ಎಂದನಂತ ಮಂದಿರದೀ
ಬಾಗಿಲ ಬಳಿ ಬಂದೆನು;

ಸಂಜೆ-ಬಾನ ಹೊನ್ನ-ನೆಳಲ
ಪತ್ರದಡಿಗೆ ನಿಂತು, ತರಳ-
ಮೊಗವ ಮೆಲ್ಲನೆತ್ತಿ ಅಲ್ಲಿ
ಚಿತ್ರಲೀಲೆ ಕಂಡೆನು.

ಹಳೆಯ ಹಂಬಲದ ವಿಲಾಸ—
ಮುಂಜಿನಂಧ ಮುಖದ ಹಾಸ;
ಎಲ್ಲ ಮರೆದ, ನೋವೆ ಇರದ,
ಅಂಗಣಕ್ಕೆ ಇಳಿದೆನು.

ಅಲ್ಲಿ ಎನ್ನ ಮೊದಲ ಮಮತೆ,
ಮಿಂದು ಮಡಿಯನುಟ್ಟ ಸುಹತಿ
ವಿಶ್ವರೂಪದೊಳಗೆ ಮಿಲನ-
ವಾಗೆ, ಹಿಗ್ಗ ತಳೆದೆನು.

೨

ನನ್ನ ಅವನ ಕಲ್ಯಾಣ ಕಟ್ಟಲಿಕೆ
ಮುಗಿಲೆ ಹಂದರದ ಬಳ್ಳಿ;
ಅಂಡ ಗೊಂಜಲಲಿ ಅರಳು ಚುಕ್ಕೆಗಳು
ಕೊರಳ ತುಂಬಿದುವು, ಅಲ್ಲಿ.

ಇಳಿವ ಹೊತ್ತ ಇಬ್ಬನಿಯ ಮುತ್ತುಗಳು
ಗಳಿಗೆಬಟ್ಟಲನು ತುಂಬಿ,— ಗೋ-
ಧೂಳಿ ಕೆಂಪು ಕೈಕೈಯ ಹಿಡಿಯಿಸಿತು;
ನಡುವೆ ಕದಿರಿನಕಂಬಿ.

★

ನೆಲದ ಹಸಿರ ಹಸೆಯೇರಿ ಕುಳ್ಳಿರಲು
ಹೊಸದು ದಂಪತಿಯ ಜೋಡು,
ಪರ್ಣರಾಜಿಗಳು ಚವರಿ ಬೀಸಿದುವು
ಜತೆಗೆ ಹಕ್ಕಿಗಳ ಹಾಡು.

ಅವನು ಕೊಟ್ಟ ಒಡವೆಗಳ ಬಳಿವಳಿಗೆ
ಲೆಕ್ಕವೆಂಬುದೇ ಇಲ್ಲ;
ಪಡುವಲಂಚಿನಲಿ ಸಂಜೆಹೊನ್ನ-ಮುಳೆ
ಮೈಯ್ಯ ತೋಯಿಸಿದ, ನಲ್ಲ.

ನಂಟರಿಷ್ಟರನಗಾರು ಇಲ್ಲವೆಂ-
ದೊಪ್ಪಿ ಹೇಳಿದನು ಅತ—
ಅಂತೆ, ಅವನ ಕೈವಾರಿಯಾಗಿ, ನೆರೆ-
ದಿತ್ತು ಜೀವಿ-ಜಗ ಕೂಟ.

ಅವನ ನನ್ನ ಸಲ್ಲಾಪವೆಂದೆರೆಯೆ
ಉದುವೆ ಗಾಳಿಯಲಿ ಗೀತ
ಮುತ್ತು ಕೊಡುವ ಪ್ರಣಯದಾ ಮಾತಿರಲಿ;
ಹೃದಯ ಭೃಂಗವೇ ಅತ.

ನನ್ನ ಅವನ ಮಿಲನದ ಪರಿಯು ಈ
ಜಗದ ಜಂಜಡಕೆ ಹೊಲ್ಲ— ಬೆಳು-
ದಿಂಗಳಾಗಿ ಇಳಿದಂಧ ಬಾಳು; ಆ
ಸಾಕ್ಷಿ ಪುರುಷನೇ ಬಲ್ಲ!

೩

ಬೀಸುತಿದ್ದ ಉಸಿರಗಾಳಿ
ಗಕ್ಕು ನೊಮ್ಮೆ ನಿಲ್ಲಲು,
ಕಳ್ಳುಬಳ್ಳಿ ಮಳ್ಳು ಹಿಡಿದು
ಕಣ್ಣನೀರ ಕೋಡಿಯಾಡಿ
"ಅಯ್ಯೋ ಜೀವ!" ಎನ್ನಲು,
ಇದ್ದ ಹಿರಿಯ ಬುದ್ಧಿವಂತ,
ಸಂತವಿಸುತ ಹೇಳಿದ;
"ಭವನ ಲತ್ಮ ಲವನ ಸೇರಿ,
ಭಕ್ತಗಣದ ಪದಕೆ ಏರಿ
ದೇವ ಜನ್ಮ ತಾಳಿದ!"
ನೆರೆದ ಒಳಗ ಆದನೆ ಒಪ್ಪಿ,
"ಅಮರ ಮಿಲನ!" ಎಂದಿತು
(ನಾಶಕೆಂದು ಬೀಳುಗೊಡಲು
ಎದ್ಯಮಾನ ತೇರನೊಂದ
ಸಜ್ಜುಗೊಳಿಸಿ ತಂದಿತು!)

ರವೀಂದ್ರರ ಗೀತೆಯೊಂದನ್ನೋದಿ.— ಲೇ.

ಚರಮಸೀಮೆಯೊಳಗೆ, ಪ್ರೇತ
ಅಂತ್ಯಯೋಗ ಹೊಂದಲು,
ಒರ್ವ ಹಣಿಗೆ ಕೆಯ್ಯ ಹಚ್ಚಿ,
" ಮಣ್ಣು ಮೆಯ್ಯು, ಮಣ್ಣಿನೊಳಗೆ.
ಕೊನೆಗೆ ಹುಡಿಯು ಗೊಂದಲು! "—

ಎನ್ನಲಾಗ ಬೇರೆಯೊಬ್ಬ,
ಗಹಗಹಿಸುತೆ ಎಂದನು :
" ವಸುಂಧರೆಯ ಮಡಲಿನೊಳಗೆ,
ಆವಳ ಪ್ರೇಮ ಕುವರನೊರ್ವ,
ಪುನರ್ಮಿಲನ ಕಂಡನು! "

ಮುಗ್ಧನೊಬ್ಬ "ಪುಣ್ಯ-ಮಿಲನ!"
ಎಂದೆ ಅರ್ಥ ಹಚ್ಚಿದ;
ಅಷ್ಟರೊಳಗೆ ತೊಡಲಿ ತನ್ನ
ನಾಲಗೆಯನೆ ಕಚ್ಚಿದ!

೪

ಎಲೆಲೆ! ಕಡುಗಲಿಗಳಿರ, ಕೆಚ್ಚೆದೆಯ ಗಣಿಗಳಿರ,
ಹೆಣ್ಣು-ಗಂಡುಗಳೇನು; ಕುವರ-ಜರತರರೆಂದು;
ಪೌರುಷದ ಪಿಂಡಗಳೆ, ದಿವ-ದಿವಂಗತರೆಂಬ,
ದೇವದತ್ತವ ಮೊಳಗಿ ನಮ್ಮನೆಚ್ಚರಿಸುವಿರ?
ಬೀರತೆಯ ಅರ್ಕವನು ಕ್ಷಾತ್ರರಸದಲ್ಲಿ ಕಡೆದು,
ಜಸ ವಿಪಾಕವ ಮಾಡಿ, ಅಮರಲೋಕವ ನಿಲಿಸಿ,
ವೀರಗಲ್ಲಿನ ಬಳಿಯ ಸಾಸಿರದ ಚುಕ್ಕೆಗಳ,
ಭವ್ಯತೇಜವ ಬೀರಿ ಔತಣವ ಬೆಸಸುವಿರ?

ಆಯ್ತಾಯ್ತು! ಆ ಕರೆಯು ಮನ್ನಿಸಿದ ಅತಿಥಿಯಿದೋ!
ಆರರೆ! ಎಳೆವಳ್ಳ, ಬಾಳಿನ ವಿಳಾಸದ ಮೆರುಗು,
ನಾಡಡಿಗೆ ಮುಡಿಪಾದ, ಚಕ್ರವ್ಯೂಹವನೊಜೆವ
ಅದಟನಾ ಅಭಿಮನ್ಯು— ಹೂಬಳ್ಳಿ ನಾರಾಯಣ!
ನಿನಗಿದೋ ಬೀಳ್ಕೊಡುಗೆ; ಕೀರ್ತಿಕವಚದ ತೊಡುಗೆ!
ಶಾರೆ ಬಳಗವ ಸೇರಿ ಬೆಳಕ ಬೀರೀ ಗುಡಿಗೆ!

೫

ರೂಪ ಕುಡಿಯುವ ಮನಸು; ಒಳಗೆ ಕಸುಕಿನ ಕನಸು;
ಪ್ರೇಮಗಂಗೆಯು ಇಂಗಿ ಬೀಡು ಬಿಡಲು,
ಆ ಸ್ಥಾಯಿ ಬೀಡಿನಲಿ ಪ್ರಣಯದೋಕುಳಿಯಾಡಿ,
ಸುರೆಯ ಕಾರಂಜಿಯನೆ ಪುಟಿಸುತಿರಲು,

ಆ ಸವಿಗೆ ಜೊಲ್ಲಿಕ್ಕಿ, ಮುನ್ನೀಡಿ ಆಂಜಲಿಯ,
" ದೇಹಿ, ದೇಹೀ! " ಎಂದು ಕೂಗುತಿಹುದು.
ಮೈಗೆ ಮೈ ಜೋತಾಡಿ, ಕೊನೆಗೆ ಬರಿ ನೇತಾಡಿ,
ಭೂತನೃತ್ಯಕೆ ತಾಳ ಹಾಕುತಿಹುದು.

ಏನಿದೇನಿದು ಮತ್ತೆ, " ರ[illegible] ಮಿಲನವೆ! "ಎಂದು,
ಮುಜ್ಜುಜಾಗಿಣಕಾಗಿ ಕುರುಡು ಕೆಚ್ಚು!
ಕಮ್ಮಲರ ಸೂಸುತಿಹ ಕೇತಕಿಯು ಕೊಳೆದುಂಬಿ
ದುರ್ಗಂಧ ಬೀಸುತಿದೆ ಮೂಗ ಮುಚ್ಚು!

೬

ತವಸಿಯ ಎದೆಯಲಿ ಹೆಗಲಿರುಳೆನ್ನದೆ
ಜೀವವು ಬೇಯುತಿದೆ;
ಅನಂತದಾಳದಿ ನುಣ್ಣಗೆ ಕರಗಲು,
ಕಾವನು ಸೋವುತಿದೆ.

ಈ ಕುಲುಮೆಯ ಕಿಡಿ ನಿಗಿನಿಗಿ ಎನ್ನಲು
ಬೇಗೆಯ ಸಹಿಸದದು!
ಹರಿಯುವ ಹೊನಲಿನ ಬೆವರನೆ ಸುರಿದರು,
ಉರಿಯೇ ತಣಿಯದದು!

ತಣ್ಣನ ಗಾಳಿಯು ತಿಳ್ಳಗೆ ಸುಳಿದರು,
ಜ್ವಾಲೆಯು ಏರುತಿದೆ.
ದುಡಿತದ ನೆತ್ತರು—ಗಾಣದ ಎಣ್ಣೆಯು;
ಅದನೇ ಹೀರುತಿದೆ.

ಆ ಆವೇಶದ ಉಜ್ವಲಹೋಮದಿ
ರಸಸೆಲೆಯಾಡುತಿದೆ.
ಈ ಮಿಂಚಿನ ರಸದಾತ್ಮವಿಪಾಕದಿ
ಮನಸೇ ಸಾಗುತಿದೆ.

ಹುಡುಕುತೆ ನವೆದಿದೆ, ಈ ವಿಧ ಯಾಗವು
ಎಂದೆಂದಿಗು ಒಂದೆ!
ಕೆಣಕಿದೆ, ಕಿಣುಕಿದೆ, ಈ ಬಾಳಿನ ಕಣ
ಆ— ಮಿಲನಕಾಗಿಯೆಂದೆ!

ನಾ ಕಂಡ ವಾರಣಾಸಿ

(ಸ್ವತಾಸ ಪ್ರಬಂಧದ ಪೂರ್ವಾರ್ಧ) ★ ಶ್ರೀ. ಕೆ. ಎನ್. ರಾವ್, ಸಿಸಿ

ಕಂಡುದನ್ನೆಲ್ಲ ಕತೆಮಾಡಿ ಹೇಳುವುದಕ್ಕೂ ಒಂದು ಮಾತಿನ ಜಾತುರಿ ಬೇಕು; ಕೆಲಾತ್ಮಕ ಬುದ್ಧಿ ಬೇಕು. ಕಾಶಿಗೆ ಹೋಗಿ ಬರುವವರು ಬಹಳ ಜನರು; ಆದರೆ ಇಲ್ಲಿಯ ಚಿಕ್ಕಪ್ಪನಂತೆ ಕಂಡುದನ್ನು ರಸವತ್ತಾಗಿ ಹೇಳುವವರು ವಿರಳ!

卐

"ಯಾವಾಗ ನೋಡಿದ್ರೂ ನಿಮ್ಮುದೊಂಪು ಹುಡುಗಾಟಕೆಯಪ್ಪಾ; ಎಲ್ಲಾದರೂ ಹೋಗ್ಬಂಪ್ರೆ ಅಲ್ಲೀ ಕತೆ ಹೇಳ್ರೀ ಅಂತನ್ನೋದು. ನೀವು ಮೊನ್ನೆ ಹುಬ್ಬಳ್ಳಿಗೆ ಹೋಗಿ ಬಂದ್ರಲ್ಲಾ! ನನಗೇನು ಹೇಳಿದ್ರಿ? ಜಾಗೇ ಬನವಾಸಿ, ಜೋಗು, ಗೋಕರ್ಣ ಎಲ್ಲ ತಿರುಗಾಡಿ ಬಂದ್ರಿ....ನನಗೇನಾದ್ರೂ ಜೋಗಿನ ನೀರು ಹೀಗೇ ಬೀಳುತಿತ್ತು; ದೇವಲೋಕದ ದೇವತೆಯರೆಲ್ಲ ಭೂಲೋಕಕ್ಕೆ ಹೊರಟ್ಬಂದಿಗಿತ್ತು—ಗೋಕರ್ಣದ ಆತ್ಮಲಿಂಗ ಕೈಯಿಂದ ಮುಟ್ಟೋಕೆ ಸಿಗ್ತಿರಲಿಲ್ಲ— ಮ್ಹಾಬ್ಲೇಶ್ವರನ ಅಗ್ರಸಾಲಿಗೆ ನೀಲ್ಮನೆ ಇನ್ನೂ ಹಾಕಿರ್ಲಿಲ್ಲ, ಕೋಟಿತೀರ್ಥದಾಗ ಶ್ರಾದ್ಧ ಮಾಡ್ಸಿನ್ರು ಸಿಂಡಕ್ಕ ಕಾಗೀ ಹುಡ್ಕೂದೂ ಬೇಕಿಲ್ಲ—ಅಂತ ಏನಾದರೂ ಹೇಳಿದಿರೇನು? ಬನವಾಸಿಯ ಕಲ್ಯಾಂಜ ಬಸವನಿಗಿಂತ ಜೆಲೋ ಆನೆ—ಅಂತ ಹೇಳಿದಿರೇನು? ಏನೂ ಇಲ್ಲ! ಹಾಂಗಾದ್ರ ನಾಯಾಕ ಶುರು ಮಾಡ್ಲಪ್ಪಾ? ಸ್ವಲ್ಪ ದೂರ ಹೋಗಿ ಬಂದಿದ್ದೇನಂತೇನು? ಆಂ....ನಿಮಗೆ ಹೇಳ್ಕಿಕ್ಕ ಬರೂದಿಲ್ಲಾ ಅಂದ್ಬಾಯ್! ನಾನೇನು ದೊಡ್ಡ ಕಾಳಿದಾಸನೇ, ಭವಭೂತಿಯೆ? ಯಾಕ್ರಪ್ಪಾ ಹೀಗೆ ತೊಂದ್ರೆ ಕೊಡ್ತೀರಿ?" ಅಂತ ರಾಯರು ಮಾತು ಮುಗಿಸಿ, ಹೊರೆ ಹೆಗುರುಮಾಡಿಕೊಳ್ತ್ತ, ಇದ್ದಾಗ, ಒಳಗಿಂದ ಅತ್ತಿಗೆಯದೂ ಯಜಮಾನಿಯದೂ ಬೇರೆ ಬೇರೆ ಸ್ವರಗಳು ಒಂದೇ ಹೊತ್ತಿಗೆ ಕೇಳಿಬಂದುವು: "ಏನು ವೈಯಾರಾನೋ, ಹೇಳ್ಬಾರದೇ? ಕೇಳ್ಬೇಕೂ ಅಂತ ಆವರೂ ಬಂದಿದ್ದಾರೆ" ಅಂತೊಂದು. "ಹೇಳ್ಲಿಕ್ಕೆ ಬರ್ತದೆ ಅಂತ ಎಷ್ಟು ಜಂಭ! ತೀರಾ ಒಬ್ಬಿಗೆ ತಾತ್ರಸು ಕೊಡಜಾರದು" ಅಂತ ಇನ್ನೊಂದು. ಹೀಗಾಗಿ ರಾಯರು ಕತೆ ಹೇಳಲೇ ಬೇಕಾಯ್ತು.

ಇಷ್ಟರಲ್ಲಿ ಹುಡುಗರಿಗೆಲ್ಲ ಹಬ್ಬ. ಚಿಕ್ಕಪ್ಪನ ಪತ್ನೀರ 'ಕಾಶಿಯ ಕತೆ ಹೇಳೋ' ಅಂತ ಎಷ್ಟು ಸಾರೆ ಹೇಳಿ ಬಡಕೊಂಡ್ರೂ ಹೇಳಲಿಲ್ಲ. 'ನಾಳೆ ನಾಳೆ!' ಅಂತ ಕುಂಟುನೆವ ಹೇಳಿ ತಪ್ಪಿಸಿಕೊಳ್ಳುತ್ತಿದ್ದ. ಈವೊತ್ತು ಪ್ಯಾಗೆ ಪೂರಾಗುನ್ನೇಣು ಬಿಪ್ತು ನೋಡು. ರಾಮಚಂದ್ರ ಹುಶ್ಯಾರು! ಚಿಕ್ಕಪ್ಪನಿಂದ ಕತೆ ಹೇಳ್ಸಿದನಲ್ಲಾ...ಈತ ಅವನಿಗೆ ಒಂದು ಲೋಟಾ ಮಜ್ಜಿಗೆ ಬಿಜ್ಜಿಗೆ ಸನ್ಮಾನ ಆಯ್ತು. ಜೊಟ್ಟಲುಕೋಣೆಯಲ್ಲಿ ಪ್ರೇಮೆಯು ಲತೆಯನ್ನು ತೊಟ್ಟಿಲಲ್ಲಿಟ್ಟು ತೂಗಿದಷ್ಟಕ್ಕೂ ಅವಳು ತಲೆಯೆತ್ತಿ ರಾಗವಾಲಿಕೆ ಹಾಡುತಿದ್ದಳು. ಸರಿ ಪ್ರಾರಂಭವಾಯ್ತು. ಪ್ರೇಮೆಯ ಸಹಸ್ರನಾಮ ಪೂಜೆಗೆ: "ಕೆಟ್ಟ ಹುಡುಗರು, ಒಂದು ಕತೆ ಕೇಳಲಿಕ್ಕಿಲ್ಲ; ಒಂದು ವೇವರ ನಾವು ಹೇಳಲಿಕ್ಕಿಲ್ಲ! ಇಡೀ ದಿನ ಚೀರೋದು. ನಿದ್ರೆ ಬೇರೆ ಬರೂದಿಲ್ಲ ಇವಕ್ಕೆ" ಎನ್ನುತ್ತಿದ್ದಳು. ರಾಯರಿಗೆ ಲತೆಯನ್ನು ಒತ್ತಾಯದಿಂದ ಪುಲಗಿಸುವುದು ಬೇಡವಾಗಿತ್ತು. "ಲತೆಯೂ ಕತೆ ಕೇಳಲಿ, ಇಲ್ಲಿ ತಾ ಅವಳನ್ನ" ಎಂತ ರಾಯರು ಎಂದರು. ಲತೆಯನ್ನು ತಂದು ರಾಯರ ಕೈಯಲ್ಲಿ ಕೊಟ್ಟು, ಹೊಸ್ತಿಲಿನ ಆಚೆಯ ಕಡೆ ಕೂತುಕೊಂಡಳು ಪ್ರೇಮಾ

"ತಮ್ಮಾ, ಈಗ ಕತೇನ ಮನೆಮಾತಿಂದ ಹೇಳಲೋ ಆಥವಾ ಶಾಲೆಯ ಮಾತಿಂದ ಹೇಳಲೋ?" ಎಂದರು ರಾಯರು. ಕಿಡಿಗೇಡಿ ರಾಮದಾಸ "ಶಾಲೆಯ ಮಾತಿಂದೇ ಶುರಿ. ನಾನೂ ಮಾಸ್ತ್ರಿಗೆ ನಾಳೆ ಹೇಳ್ಬೇಕು" ಎಂದ. ಅಂತೂ ಕತೆ ಹೇಳುವ ಸಿದ್ಧಾರ್ಥರಾಯ್ತು. ಸರೋಜಿನಿ-ವಾಸುದೇವರಂತೂ ಕಾಗದ, ಪೆನ್ಸಿಲು ತೆಗೆದುಕೊಂಡೇ ಕುಳಿತಿದ್ದರು— ಚಿಕ್ಕಪ್ಪ ಹೇಳಿದ ಊರಿನ— ದೇವಸ್ಥಾನಗಳ— ಹೆಸರು ಬರೆದುಕೊಳ್ಳುವುದಕ್ಕೆ. "ಶಾಲೆಯ ಭಾಷೆಯಿಂದೇ ಹೇಳಿ" ಎಂತ ರಾಮಚಂದ್ರನೂ ದನಿಗೂಡಿಸಿದ. ಆತ್ಮಾರಾಮನು ಚಿಕ್ಕಪ್ಪ ಕತೆ ಹೇಳುವಾಗ ಅವರ ಕೈ, ಬಾಯಿ, ಭಾವ ಹೇಗಾಗುತ್ತದೆಂದು ಕಣ್ಣು ಮಿಟುಕಿಸದೆ ನೋಡುತ್ತ ಕುಳಿತುಕೊಂಡಿದ್ದ. ಅಂಜನೀ—ಶೇಷಗಿರಿಯರು ಅಮ್ಮನ ಮತ್ತು ಚಿಕ್ಕಮ್ಮನ ಮಡಿಲಲ್ಲಿ ಅವಿಸಿಕೊಂಡಿದ್ದರು. 'ಕಾಶಿಯ ಕತೆ ಹೇಳುತ್ತಾರಂತೆ' ಎಂದು ನೆರೆಮನೆಯಿಂದ ನಾಲ್ಕಾರು ಜನರೂ ಬಂದಿದ್ದರು.

"ಎಲ್ಲಿಂದ ಶುರು ಮಾಡ್ಲಿ ಕತೇನ? ಅಮ್ಮ, 'ಪಂಡರಾಪುರಕೆ ಕರಕೊಂಡು ಹೋಗು' ಎಂದಲ್ಲಿಂದ ಶುರು ಮಾಡ್ಲೇ? ಆಥವಾ ಜಮ್ಮ, ಹೋದಲಾಗಾಯ್ತು.... ಛೇ! ಹುಡುಗರು ಹೆದರಿಯಾರು... ಆಥವಾ ನಾ ಹುಟ್ಟಿದ ಲಾಗಾಯ್ತು ಶುರು ಮಾಡಲೇ? ಅಥವಾ ಯಾತ್ರೆ ಆರಂಭ ಆದಂದಿನಿಂದ ಆರಂಭಿಸೋಣವೇ? ಸರಿ. ಕಡೆಗೆ...."ಎನ್ನುತ್ತ, ನಿದ್ದೆಯ ಅಮಲಿನಲ್ಲಿರುವ ಲತ.

ಯನ್ನು ಕಂಡು "ಹುಡುಗಿಗೆ ನಿದ್ದೆ ಬರಹೆತ್ತಿದೆ. ಹೆಂಗುಸರಿಗೆ ಒಂದಿಷ್ಟು ಸಮಾಧಾನವಾಡಿಕೊಂಡು ಮಕ್ಕಳನ್ನು ಮಲಗಿಸಲಿಕ್ಕೂ ಅಹಂಕಾರ" ಎಂದರು. ಅಷ್ಟರಲ್ಲಿ ಸರೋಜಿನಿ "ಬಾಸ್ಟಾ, ನೀವು ಕತೆ ಬೇಗ ಹೇಳಬಾರದೇ?" ಎಂದಳು.

"...ಕಡೆಗೆ ಮೊಗಲಸರಾಯಿಯಿಂದ ಹೊರಟ ರೈಲು, ಕಾಶೀ ಕ್ಷೇತ್ರಕ್ಕಿಂತ ಮೊದಲೇ ಸಿಕ್ಕುವ ಗಂಗಾನದಿಯ ಸೇತುವೆಯಿಂದ ಒಂದು ಫರ್ಲಾಂಗ್ ದೂರದಲ್ಲಿ, ಸಿಗ್ನಲ್ಲಿಗಾಗಿ ಕಾದಿತ್ತು. ಎಲ್ಲರೂ ದಡಬಡನೆ ಎದ್ದು ಗಂಗಾನದಿಯನ್ನು ನೋಡಲನುವಾದರು. ಸೇತುವೆಗೂ ಮುಂದುಗಡೆ ನಿಲ್ಲಿಸಿದ ದೊಡ್ಡದಾದ ಬೋರ್ಡು ಕಾಣಿಸಿತು:

"SPEED 5 miles per hour, Over Bridge.
Passenger and mail Trains 7 minutes.
Single goods Trains 10 minutes.
Coupled goods Trains 14 minutes."

ಎಂದು ಬರೆದಿತ್ತು. ಮುಂದೆ ಗಂಗಾನದಿಯ ಸೇತುವೆ, ಎತ್ತರವಾದ ಬಹು ಭದ್ರವಾದ ಸೇತುವೆ. ಅದರ ಮೇಲೆ ಜೋಡು ರೈಲು ಹಳಿಗಳು. ಹಳಿಗಳ ಕೆಳಗಿಂದ ಗರ್ಡರುಗಳಿಗೆ ಬಣ್ಣ ಸಾರಿಸುವ ಮತ್ತು ಸರಿಮಾಡುವ ಕೆಲಸ ನಡೆದಿತ್ತು.

ಎಷ್ಟೋ ಜನರು ತಮ್ಮ ಶಕ್ತ್ಯನುಸಾರ ನಾಣ್ಯಗಳನ್ನು ಗಂಗೆಯಲ್ಲಿ ಎಸೆಯುತ್ತಿದ್ದರು. ಅದನ್ನು ಆರಿಸುವುದಕ್ಕಾಗಿ ಅನೇಕ ಜನ ಆರೆಬೆತ್ತಲೆಯ ಹುಡುಗರು, ಅತ್ತಿತ್ತ ಓಡಾಡುತ್ತಿದ್ದರು. ಕೆಳಗೆ ೫೦ ಅಡಿ ದೂರದಲ್ಲಿ ಪವಿತ್ರಗಂಗಾ ಮಾತೆಯು ಹರಿಯುತ್ತಿದ್ದಳು. ಮೇಲೆ ಭೂದೇವತೆಗಳಾದ ನಾವು ರೈಲಿನಲ್ಲಿ ಹೋಗುತ್ತಿದ್ದೆವು. "ಒಮ್ಮೆಯಾದರೂ ಗಂಗೆಯಲ್ಲಿ ಸ್ನಾನ ಮಾಡಿ ಜನ್ಮಸಾಫಲ್ಯ ಹೊಂದುವುದಕ್ಕಾಗಿ ಮನುಷ್ಯಜನ್ಮ ವನ್ನು ಕೊಡು ದೇವಾ!" ಎಂದು ದೇವತೆಗಳು ಬೇಡಿಕೊಳ್ಳುತ್ತಿರುವರಂತೆ. ಆದರೆ ನಮಗೆ "ಮನುಷ್ಯರಾಗಿ ಹುಟ್ಟಿದ್ದಕ್ಕೆ ಒಮ್ಮೆಯಾದರೂ ನಿನ್ನನ್ನು ಕಾಣುವ ಭಾಗ್ಯ ದೊರೆಯಿತಲ್ಲಾ" ಎಂದು ಎನಿಸುತ್ತಿತ್ತು. ಆದರೆ ಪೆಸೆಂಜರರು ಒಗೆದ ದುಡ್ಡನ್ನಾರಿಸುತ್ತ ಸ್ನಾನ-ಪಾನಗಳಿಗೆ ಗಂಗೆಯ ನೀರನ್ನು ದಿನವೂ ಉಪಯೋಗಮಾಡುತ್ತಿರುವ ಆ ಆರೆಬತ್ತಲೆಯ ಹುಡುಗರಿಗೂ, ಅಲ್ಲಲ್ಲಿ ಹರಕು ಬಟ್ಟೆಗಳನ್ನು ಹಾಸಿ, "बाबा कुछ खानेके लिये दीजिये; मुझे मार रहे हैं" ಎನ್ನುವವರಿಗೂ ಏನು ಎನ್ನಿಸುತ್ತಿರಬಹುದು? ಸಾವಕಾಶವಾಗಿ ರೈಲು ಹೋಗುತ್ತಿತ್ತು. ನದಿಯ ನಡುವಿಗೆ ಬಂದಾಗ, ಆಚೆಯ ದಂಡೆಯಲ್ಲಿ ಈಸಾಡುವ ಜನರೂ ಅಲ್ಲಿಯ ನೂರಾರು ದೇವಸ್ಥಾನಗಳೂ ಕಂಡುಬಂದುವು. ಮುಂದೆ "ಹಾಥಿ" ಎನ್ನುವ ಬೋರ್ಡೂ ಕಾಣಿಸಿತು. ಬಹಳ ಜನರು "ಹರ ಹರಹರ ಮ್ಹಾದೇವ!" ಎಂದರು, ಇನ್ನೂ ಕೆಲವರು "गंगा माइकी जै" ಎಂದರು. ಇವರ ಅಗ್ರಹಪ ಬಲುಮೆಗೆಂಬಂತೆ ರೈಲೂ ನಿಂತಿತು ಸುಭಾಸಚಂದ್ರ ಗುಪ್ತರೂ ನಿರಂಜನ ಸಿಂಗರೂ ನಾನೂ ಇಳಿದೆವು. ಇನ್ನೂ ಅನೇಕರೂ ಇಳಿದಿದ್ದರು.

ಹೋಗಿ ಪ್ರಯಾಗ್ದ ಘಾಟಿನಲ್ಲಿ ಒಂದು ಮನೆ ಗೊತ್ತುಮಾಡಿಕೊಂಡು, ಕ್ಲೋಕ್‌ರೂಮಿನಲ್ಲಿ ಸಾಮಾನಿಟ್ಟು, ಕರ್ಜ ಘಾಟಿನಿಂದ ಕೆಳಗಿಳಿದೆವು. ಅಲ್ಲಿ ಬ್ರಾಹ್ಮಣರಿಗೇನು ಕಡಿಮೆ? ಇಡಿ ಭಾರತಕ್ಕೆ 'ಸಪ್ಲ್ಯೆ' ಮಾಡುವಷ್ಟು ಪಂಡಾಗಳು ಅಲ್ಲಿದ್ದಾರೆ. ನಮಗೂ ಒಬ್ಬ ಮುದುಕ ಸಿಕ್ಕಿದ. ಅವನಿಗೆ ನಮ್ಮ ವಿಷಯವನ್ನೆಲ್ಲ ಹೇಳಿದೆವು. ಅದರಲ್ಲಿ ಶ್ರೀ ಗುಪ್ತ ಮತ್ತು ನಿರಂಜನ ಸಿಂಗರಿಗೆ ಅಂತಹ ಮಹತ್ವದ ಕೆಲಸವೇನೂ ಇರಲಿಲ್ಲ. ನನಗೆ ನಮ್ಮಮ್ಮನ ಅಸ್ಥಿವ್ಯಾಧ್ಯ ಮಾಡಿಸಬೇಕಿತ್ತು.

ಅಮ್ಮ ಹೋಗಿ ಒಂದು ತಿಂಗಳಾಗಿತ್ತು. ಮೊದಲನೆಯ ಮಾಸಿಕವನ್ನೇ ಕಾಶಿಯಲ್ಲಿ ಮಾಡಿಸಬೇಕೆಂದು, ಸಿಕ್ಕಿದ ರಜೆಯಲ್ಲೇ ಹೋಗಿಬಿಟ್ಟೆ. ನಾವೇನು ದುಡ್ಡು ಕೊಡಬೇಕೇ? ರೈಲ್ವೆ ಪಾಸು ಇದೆ.. ಇಂಟರ್ ಕ್ಲಾಸಿನದು. ಹೋಗಿ ಬಂದಿಟ್ಟೆ ಅಂತನ್ನಿ. ಇದ್ನೋಡೀ: ನಮ್ಮಮ್ಮ 'ಪಂಢರಾಪುರಕ್ಕೆ ಹೋಗಬೇಕೂ' ಎಂತ ನಾನು ವಾಸುದೇವನ ಉಪನಯನಕ್ಕೆ ಬಂದಾಗಲೇ ಹೇಳಿದ್ದರು. ಆದರೆ ಆ ಹೊತ್ತಿಗೆ ಸರಿಯಾಗಿ ಕೈಯಲ್ಲಿ ದುಡ್ಡಿರಲಿಲ್ಲ. 'ಇನ್ನೊಮ್ಮೆ ಕರಕೊಂಡು ಹೋಗ್ತೇನೆ' ಅಂದಿದ್ದೆ. ಅವರೂ ಒಪ್ಪಿದ್ದರು. ನನ್ನ ರಜೆ ಮುಗಿಸಿ ತಿರುಗಿ

(೬೩ನೆಯ ಪುಟದಿಂದ ಮುಂದೆಸಾಗಿದ್ದು)

ಸ್ವಲ್ಪ ದಡ್ಡನಿರುವನೆಂದು ಕಂಡುಬಂದರೆ, ಅವನ ಕಡೆಗೆ ಖಂಡಿತವಾಗಿ ದುರ್ಲಕ್ಷ್ಯವಾಗುವುದು; 'ಜಾಣ' ಎಂದು ಹೊಗಳಿಸಿಕೊಂಡ ವಿದ್ಯಾರ್ಥಿಗಳು, ಅಂತೂ ಇಂತೂ ಕಾಲೇಜಿನ ಮೆಟ್ಟಿಲು ಹತ್ತುವವರೆಗೆ ತಡೆಯುವರು ಮತ್ತು ಮುಂದೆ ಬಹುಶಃ ಹಿಂದೆ ಬೀಳುವರು. ಅಥವಾ ಒಂದೊಮ್ಮೆ ಕಾಲೇಜಿನಲ್ಲಿ ಹಿಂಬೀಳದಿದ್ದರೂ ಮುಂದೆ ವ್ಯವಹಾರದಲ್ಲಿ ನಿಃಸತ್ವವಾಗುವರೆಂಬುದೇನೋ ಕಟ್ಟಿಟ್ಟ ಮಾತು. ಇದರ ಕಾರಣವು ಅವರ ಎಳೆಯ ಬುದ್ಧಿಯ ಮೇಲೆ ಬಿದ್ದ ಅಳತೆಗೆಟ್ಟ ಭಾರವೇ ಕಾರಣ ಹೊರತು ಬೇರೆ ಏನೂ ಅಲ್ಲ. ಕುದುರೆಯು ಚುರುಕಾಗಿ ವ್ಯವಸ್ಥಿತರೀತಿಯಿಂದ ನಡೆಯುತ್ತಿದ್ದರೆ, ಅದರ ಗೊಡವೆಗೆ ಹೋಗಬಾರದು. ಪಾಗಿಲ್ಲವೆ 'ಕುದುರೆಯು ಚುರುಕಿದೆಯಲ್ಲ! ಹಾಗಾದರೆ ಏರಿಸು ಜಾಟಿಯ ಏಟು!' ಇದೆಂತಹ ರೀತಿ? ಪರಿಣಾಮವೇನಾಗಬಹುದು? ಕುದುರೆಯು ಹಾರಿಬಿದ್ದು ಹೊಂಡದಲ್ಲಿ ಉರುಳುವುದು, ಒಡೆಯನನ್ನೂ ಉರುಳಿಸುವುದು ಇಂತಹ ಮೂರ್ಖತನ ಮತ್ತು ಅನಾಗರಿಕತನಗಳು ಕೊನೆಗೆ ರಾಷ್ಟ್ರೀಯ ರಾಲೆಗಳಲ್ಲಾದರೂ ಇಲ್ಲದಂತಾಗಬೇಕು.

(ಈ ಲೇಖನದ ಉತ್ತರಾರ್ಧ ಇನ್ನೊಂದು ಸಂಚಿಕೆಯಲ್ಲಿ ಬರುವುದು

—ಸಂ. ಜ.)

ಡ್ಯೂಟಿಯ ಮೇಲೆ ಹೋದೆ. ಕೆಲವು ತಿಂಗಳು ದಾಟಿದುವು. 'Vitamin-B-Complexion' ಮಾತ್ರೆಗಳಿಂದ ಅಮ್ಮನ ಎದೆ ನೋವು ಕಡಿಮೆ ಇದೆ' ಎಂದು ಪತ್ರಗಳು ಬರುತ್ತಿದ್ದುವು. ಒಂದು ದಿನ ಸಾಯಂಕಾಲ ೬-೩೦ಕ್ಕೆ, ಕ್ಯಾಪ್ಟನ್ ಶರ್ಮಾರೊಡನೆ ಮಾತಾಡುತ್ತ ನಿಂತಿದ್ದೆವು. ಮಲೆಯಾಳ, ಕಾಶ್ಮೀರ, ಬಂಗಾಲ, ಬರ್ಮಾ ಸುದ್ದಿಗಳು ನಡೆದಿದ್ದುವು. ಹಾಗೆಯೇ ನಕ್ಕು ನಕ್ಕು ಹೊಟ್ಟೆ ಹುಣ್ಣಾಗಿತ್ತು. ಆದರೂ ನನ್ನ ಮನಸ್ಸು ಬೆಳಗಿನ ಜಾವದಲ್ಲಿ ಕಂಡ ಕನಸಿನ ಕಡೆಗಿತ್ತು. ಕನಸೆಂದರೆ: ಕೆಂಪುವಸ್ತ್ರದ ಮುದುಕಿಯೊಬ್ಬಳು ನನ್ನಳಾಗಿ ನಿರ್ಜೀವಿಯಾಗಿ ಬಿದ್ದಿದ್ದಳು. ನನಗದರ ಅರ್ಥವಾಗಲಿಲ್ಲ; ಆದರೆ ಅಂತರಂಗದಲ್ಲಿ ಕಸವಿಸಿಯಾಗುತ್ತಿತ್ತು. ಮೋರೆಯ ಮೇಲೆ ಉಲ್ಲಾಸವಿರಲಿಲ್ಲ. ಆದರೂ ನಗುತ್ತಿದ್ದೆ. ನಗದಿದ್ದರೆ ಹೊತ್ತು ಹೋಗಬೇಕಲ್ಲ! ಅಷ್ಟರಲ್ಲಿ ತಂತಿ ಬಂತು. ಆದೇ ತಂತಿ: "Mother expired at 2 A.M." ಎಂದು. ಕನಸು ನೆನಸಾಯಿತು. ಆಗಲೇ ನೆನೆದೆ: ಅಮ್ಮನ ಪುಟ್ಟಿನಿಂದ ಸಾವಿನ ವರೆಗೆ. ಅವರನ್ನು ಪಂಢರಪುರಕ್ಕೆ ನಾನು ಕರೆದುಕೊಂಡು ಹೋಗಬೇಕಾಗಿಲ್ಲ. ಅವರೇ ಹೊರಟರು.

"ನಾನು ೨೧ ದಿನ ರಜೆಸಡೆದು ಬಂದೆ. ಅಣ್ಣನ ಹುಡುಗರನ್ನೂ ಅತ್ತಿಗೆಯವರನ್ನೂ ಸಮಾಧಾನ ಮಾಡಿದೆ. ಕೆಲಸವನ್ನೆಲ್ಲ ಮುಗಿಸಿ, ಹೋಳಿಹುಣ್ಣಿಮೆಯ ಹೊತ್ತಿಗೆ ಸರಿಯಾಗಿ ಕಾಶಿಗೆ ಹೋದೆ. ಅದೇ ಹೇಳಿಕೆನಲ್ಲಾ; ಮುದುಕ ಸಿಕ್ಕಿದ ಅಂತ. ಅವನ ಹತ್ತಿರ ಅಸ್ಥಿಶ್ರಾದ್ಧದ ವಿಷಯ ಹೇಳಿದೆ. ಅವನ ಮಂತ್ರ ಮತ್ತು ಕೃತಿಗಳಿಗಿಂತ ದುಡ್ಡಿನ ಬೇಡಿಕೆಯೇ ಹೆಚ್ಚಾಗಿತ್ತು. ೩೬೦ ದಾನಗಳು, ೩೬೦ ದಕ್ಷಿಣೆ ಮುಂತಾಗಿ ಪಟ್ಟಿ ಹೇಳಿದ. ಕೊನೆಗೂ ಇಬ್ಬರೂ ಒಂದು ಗುತ್ತಿಗೆಗೆ ಬಂದು, ಶ್ರಾದ್ಧದ ಕೆಲಸ ಮುಗಿಸಿ, ಅಸ್ಥಿ ಕೈಯಲ್ಲಿ ಹಿಡಿದು ಗಂಗೆಯಲ್ಲಿಳಿದೆ. ಒಂದೊಂದೇ ಅಸ್ಥಿಯನ್ನು ಕೈಯಲ್ಲಿ ಹಿಡಿದು ಅಯಾ ಅಸ್ಥಿಗಳು ಒಂದಾಗಿ ರಕ್ತ, ಮಾಂಸ, ನರ, ಚರ್ಮಗಳಿಂದೊಡಗೂಡಿ ಜೀವವೆಂಬ ವಸ್ತು ವಿರುವಾಗ ಅವು ಸಲ್ಲಿಸಿದ ಋಣವನ್ನು ನೆನಸಿಕೊಂಡಾಗ, ಒಂದೆರಡು ಕಣ್ಣೀರ ಹನಿಗಳು ಉದುರಿದುವು. ಆಗ ನಾನೆಲ್ಲಿರುತ್ತೇನೆಂಬ ಎಚ್ಚರಾಯಿತು." ಕತೆ ಕೇಳುವವರಲ್ಲಿಯೂ ಅಮ್ಮನು ಕೊಡುತ್ತಿದ್ದ ಗಿಡಮೂಲಿಕೆ ಔಷಧಗಳದೂ, ಸಾವಿನ ಕ್ಷಣದವರೆಗೂ ಅವರು ವಹಿಸಿದ ಜವಾಬ್ದಾರಿಗಳದೂ, ಹೊತ್ತಿಗೆ ಸರಿಯಾಗಿ ಇದ್ದೊಬ್ಬ ಮಗನೂ ಮನೆಯಲ್ಲಿ ಇಲ್ಲದಿರುವುದಕ್ಕಾಗಿ ಪರಿತಪಿಸಿದುದೂ ನೆನಪಾಗಿ, ಕೆಲವರ ಕಣ್ಣುಗಳು ಒದ್ದೆಯಾಗಿದ್ದುವು. "ಗಂಗೆಯಲ್ಲಿ ಮುಳುಗುವಾಗ ಅಮ್ಮನು 'ನೀನು ಎಂಟು ತಿಂಗಳ ಗರ್ಭದಲ್ಲಿರುವಾಗ ನಾನು ಕೆರೆಯಲ್ಲಿ ಬಿದ್ದಿದ್ದೆ.' ಎಂದು ಎಂಪಂತಾಯ್ತು. ಅಸ್ಥಿಗಳನ್ನು ತೆಗೆದುಕೊಂಡು ಮುಳುಗಿದೆ. ಗಂಗೆಯು ಶೀತಲ ಪದರುಗಳು ಮಧ್ಯದಾರಿ ಇತ್ತುವು. ಅಮ್ಮ ಗಂಗೆ ಸೇರಿದರು. ಲಪ್ಪ್ಯಮ್ಮನ ಮೂರ್ತಿಯು ಕಣ್ಮರೆಯಾಯ್ತು." ಇಷ್ಟು ಹೇಳುವಾಗ ತೋಡೆಯಮೇಲಿದ್ದ ಲತೆಗೆ ನಿದ್ರೆ ಬಂತು. ಗುಣುಗುಡುತ್ತಿದ್ದ ಪ್ರೇನಿಗೆ ಕರುಣೆ ಬಂತು. "ಹುಡ್ಗಿನ್ನ ಇಲ್ಲಿ ಕೊಡಿ; ತೊಟ್ಲಲ್ಲಿ ಹಾಕಿಬರ್ತೀನಿ" ಎಂದಳು. ಹುಡುಗರೆಲ್ಲ ನಕ್ಕರು.

ಶ್ರಾದ್ಧದ ಕೆಲಸ ಮುಗಿದ ಮೇಲೆ, ಒಂದು ದೋಣಿಯನ್ನು ಗೊತ್ತುಪಡಿಸಿ ಹೊರಟೆವು. ನಮ್ಮ ಪುರೋಹಿತ ಮುದುಕನೂ ನಮ್ಮೊಟ್ಟಿಗೆ ಬಂದಿದ್ದ. ದೋಣಿ ಹೊರಟಿತು. ಅನಾನಸ ಮುಂತಾದ ಕೆಲವು ಹಂಪಲನ್ನು ತಿಂದೆವು. ಕಾಶಿಯಲ್ಲಿ ಒಟ್ಟಿಗೆ ೩೬೦ ಘಾಟುಗಳಿರುವುವಂತೆ. ಅವುಗಳನ್ನೆಲ್ಲ ದೋಣಿಯವನೂ ಪುರೋಹಿತರೂ ಹೇಳುತ್ತಿದ್ದರು. ನಾವು ಪುಸ್ತಕ ತೆಗೆದೆವು. ಕೆರ್ಕಿ, ರಾಜಾ, ರಾಣಿ, ಪ್ರಹ್ಲಾದ, ಸಿಂಧಿಯಾ, ಭೋಸಲೆ, ಹೋಳ್ಕರ, ಮೈಸೂರು, ಕನ್ನೂ, ಗ್ವಾಲೇರ, ಪಾಠಿಯಾಲಾ, ಜಗದೇವ, ವೇಣೀಮಾಧವ, ಬಿಂಧುಮಾಧವ, ಅಹಲ್ಯಾ ಸಾಕ್ಷಾತ್ಕಾರ,, ಲಾಕ್ಡೀ, ಭರಣಿ, ಪುಷ್ಕಳ, ಹನುಮಾನ್, ಹರಿಶ್ಚಂದ್ರ, ಮಣಿಕರ್ಣಿಕಾ ಘಾಟುಗಳನ್ನೆಲ್ಲ ನೋಡಿದೆವು. ಅಲ್ಲಲ್ಲಿ ದೋಣಿ ನಿಲ್ಲಿಸಿ ಕತೆ ಕೇಳಿ ಮುಂದೆ ಸಾಗಿದೆವು. ನದಿಯ ದಂಡೆಯುದ್ದಕ್ಕೂ ಕಲ್ಲಿನ ಪಾವಟಿಗೆಗಳೂ, ದೇವರ ಮೂರ್ತಿಗಳೂ ಇರುತ್ತವೆ. ಪಂಡಾಗಳೂ ಸಾಕಷ್ಟಿದ್ದಾರೆ. ನದಿಯ ದಂಡೆಯ ಮೇಲೆ ಅಲ್ಲಲ್ಲಿ ಬಿದಿರಿನ, ಹಲಗೆಯ ಜೌಕಟ್ಟುಗಳನ್ನು ಕಟ್ಟಿಕೊಂಡು, ಸುಮಾರು ೮ ಅಡಿ ವ್ಯಾಸದ ತಾಳೆಗರಿಯ ಕೊಡೆಯ ಆವರಣಗಳಿರುತ್ತವೆ. ಆ ಕೊಡೆಯ ಅಡಿಯಲ್ಲಿ ೮-೧೦ ಜನರು ಕುಳಿತುಕೊಳ್ಳಬಹುದು. ಯಾತ್ರಿಕರಿಗೆ ಅವರು ಸಂಕಲ್ಪ ಹೇಳಿ, ಗಂಗಾಸ್ನಾನ ಮಾಡಿಸಿ ಹೇಳುತ್ತಾರೆ. ಅಂತಹ ಸ್ಥಳಗಳು ಅವರ ತಾತ-ಮುತ್ತಾತಂದಿರ ಕಾಲದಿಂದ ನಡೆದುಬಂದುವಂತೆ. ಅದೇ ಅವರ ಜೀವನದ ದಾರಿ. ಆ ಆವರಣದ ಎದುರುಗಡೆ ಯಾರು ಸ್ನಾನ ಮಾಡಿದರೂ ಅವರಿಗೆ ದಕ್ಷಿಣೆ ಕೊಡಬೇಕು. ಇಲ್ಲವಾದರೆ ಅವರು ಜಗಳವಾಡುತ್ತಾರೆ. ಅವರು ಜಗಳವಾಡಲಾರಂಭಿಸಿದರೆ, ನಮ್ಮೂರ ಹೆಂಡಕುಡುಕರಿಗಿಂತ ಕಡೆಯಾಗಿರುತ್ತದೆ. ಆದರೆ ಇದೆಲ್ಲ ಯಾತ್ರಿಕರ ಕಣ್ಣಿಗೆ ಮಣ್ಣೆರಚುವ ಜಗಳ. ಸಾಯಂಕಾಲ ಅವರೆಲ್ಲರೂ ಒಂದು. ಕೋರ್ಟಿನಲ್ಲಿ ವಾದಿ-ಪ್ರತಿವಾದಿ ವಕೀಲರು ಜಗಳಾಡಿ ಸಂಜೆಗೆ ಒಂದಾದಂತೆ

ಕಾಶಿಯಕ್ಷೇತ್ರವು ಅನಾದಿ ಕಾಲದಿಂದ ಪುಣ್ಯಕ್ಷೇತ್ರವೆನಿಸಿಕೊಂಡಿದೆ. ಪರಮಪಾವನೆ ಗಂಗೆಯಲ್ಲಿ ಸ್ನಾನಮಾಡಿ ವಿಶ್ವನಾಥನ ದರ್ಶನಮಾಡಿದರೆ, ತಾನು ಹುಟ್ಟಿದ್ದಕ್ಕೆ ಸಾರ್ಥಕವಾಯಿತೆಂದು ಪ್ರತಿಯೊಬ್ಬ ಹಿಂದುವೂ ತಿಳಿದುಕೊಳ್ಳುತ್ತಾನೆ. ಗಂಗೆಯ ಸ್ನಾನಮಾಡುವ ಬದಲು— ಅಂತಹ ಯೋಗವಿಲ್ಲದವರು— 'ಯಾರಾದರೂ ಯಾತ್ರಿಕರು ತಂದ ಒಂದು ಬಿಂದು ಗಂಗಾಜಲವನ್ನು ಕುಡಿದರೆ ಅಷ್ಟೇ ಪುಣ್ಯಪ್ರಾಪ್ತಿ'ಎಂಬ ಭಾವನೆಯಿಂದ, ತಂದುಕೊಟ್ಟವರಿಗೆ ಸಹಸ್ರಾರು ಅಭಿನಂದನೆಗಳನ್ನು ಸಲ್ಲಿಸುತ್ತಾರೆ.

ಉದಾಹರಣೆಗಾಗಿ: ತೀರ್ಥಭಟ್ಟರಿಗೂ ನಮ್ಮ ತಂದೆಯವರಿಗೂ ಯಾವುದೋ ಕಾರಣದಿಂದ ಮನಸ್ತಾಪವಾಗಿ, ವರ್ಷಗಟ್ಟಲೆ

ಅವರು ಮಾತುಕತೆ ಕೂಡ ಬಿಟ್ಟಿದ್ದರು. ಒಂದೇ ನೆರೆಯಲ್ಲಿದ್ದರೂ ಬೆಳಗ್ಗೆ ಎದ್ದು ಒಬ್ಬರ ಮೋರೆ ಒಬ್ಬರು ನೋಡಿದರೆಂದರೆ ಸರಿ; ಇಡೀ ದಿನ ಆಗಬಹುದಾದ ಅನಿಷ್ಟಗಳೆಲ್ಲ ಬೆಳಿಗ್ಗಿನ ಸಂದರ್ಶನವೇ ಕಾರಣವೆಂದು ಗುಣುಗುಟ್ಟಿ ಬೈದಾಡಿ, ಬಿಡಿಸಲಿಕ್ಕೆ ಬೇರೆಯವರು ಬರಬೇಕಾಗುತ್ತಿತ್ತು. ಭಟ್ಟರು ತಮ್ಮ ಮನೆ, ಹಿತ್ತಲು ಎಲ್ಲ ನಗರ ವೆಂಕಟ್ರಾಯರಿಗೆ ಮಾರಿ, ಹಣ ಬ್ಯಾಂಕಿನಲ್ಲಿಟ್ಟು, ಸಾವುಕಾರರ ಖರ್ಚಿನಿಂದಲೇ ಸಕುಟುಂಬ ಯಾತ್ರೆ ಹೋಗಿದ್ದರು. ಅವರು ಕಾಶಿ, ರಾಮೇಶ್ವರಗಳ ಯಾತ್ರೆ ಮುಗಿಸಿ ಬಂದು, ಮಿಶನ್ ಸ್ಕೂಲಿನ ಅಶ್ವತ್ಥಕಟ್ಟೆಗೆ ಬರಬೇಕಾದರೆ, ಮೊದಲೇ ಹೋಗಿ ನಮ್ಮ ತಂದೆಯವರು ಅವರಿಗೆ ಆಲಿಂಗನ ಕೊಟ್ಟು ದಂಡವತ್ ನಮಸ್ಕಾರ ಹಾಕಿದ್ದರು. ಇದರಿಂದ ಭಟ್ಟರಿಗೆ ಯಾತ್ರೆಮಾಡಿದ್ದಕ್ಕಿಂತ ಹೆಚ್ಚು ಸಂತೋಷವಾಗಿತ್ತು. ಹೀಗಿದೆ ಗಂಗೆಯ ಪುಣ್ಯಪ್ರಭಾವ. ಆದುದರಿಂದ ಅಲ್ಲಿರುವ ಪಂಡಾಗಳು ಇಡಿ ದಿನ ಜಗಳಾಡಿ ಸಾಯಂಕಾಲ ಒಂದಾಗಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ.

ನದಿಯ ದಂಡೆಯಿಂದ ಊರು ಸುಮಾರು ೧೦೦ ಅಡಿ ಎತ್ತರದಲ್ಲಿದೆ. ಅಲ್ಲದೆ ಊರಿಗೆ ಹೋಗುವ ದಾರಿಗಳು ತೀರ ಆಗಲ ಕಿರಿದಾಗಿ, ಕೊಳೆ-ಕೊಳಕಿನಿಂದ ತುಂಬಿರುತ್ತವೆ. ಆದಕ್ಕಾಗಿ ಅಲ್ಲಿ ಯಾವಾಗಲೂ ಪ್ಲೇಗು, ಕಾಲರಾ ಮುಂತಾದ ರೋಗಗಳು ಇದ್ದೇ ಇರುತ್ತವೆ. ಅಲ್ಲಿಯ ಆಹಾರ ವಿಶೇಷನಾಗಿ ಅಕ್ಕಿ, ಗೋದಿ ಎರಡೂ ಸೇರಿರುತ್ತವೆ. ಕಾಶೀ ಕ್ಷೇತ್ರವು ಪ್ರಸಿದ್ಧ ಸ್ಥಳವೇನೋ ನಿಜ; ಆದರೆ ಇತರ ಊರುಗಳಿಗಿಂತಲೂ ಅಲ್ಲಿ ಹೆಚ್ಚಿನ ಕಳವು, ಮೋಸ, ಭಿಕ್ಷೆ, ಸುಳ್ಳಿನ ಜೀವನ ಮತ್ತು ಬಡತನ ಇವೆಲ್ಲ ಇವೆ. ಇದಕ್ಕೆ ಕಾರಣವೆಂದರೆ ಅಲ್ಲಿಯ ಜನರ ಆಲಸ್ಯವೆಂದು ಹೇಳಬಹುದು. ಈ ಆಲಸ್ಯತನವು ನಿರುದ್ಯೋಗದಿಂದ ಬರುತ್ತದೆ. ನಿರುದ್ಯೋಗವು ಪಂಡಾಗಳ ಮೂಲಕವಾಗಿದೆ. ಈ ಪಂಡಾಗಳಿಗಾದರೊ ವಿದ್ಯೆಯ ಗಂಧಗಾಳಿಯಿಲ್ಲ. ಅವರು ಹೇಳುವುದೆಂದರೆ' "ಗಂಗಾಸ್ನಾನ, ವಿಶ್ವನಾಥಜೀಕಾ ದರ್ಶನ, ಪಿತೃಕಾರ್ಯ, ಕ್ಷೇತ್ರದರ್ಶನ ಸಫಲ ಹೋನೇಕೇಲಿಯೆ, ಯೇ ಗಂಗಾಪುತ್ರ ಬ್ರಾಹ್ಮಣೊಂಕೋ ದಸ್ ರುಪಿಯಾ — ಬೋಲೋ-ಬೋಲೋ-ದಸ್ ರುಪಿಯಾ— ದಾನ ದೇತಾಹುಂ" ಎಂದು ಕರಾರು ಮಾಡಿಸಿ, ಹಣ ಸುಲಿದು. ಕೊಳ್ಳುವುದರಲ್ಲಿಯೇ ನಿರತರಾಗಿರುತ್ತಾರೆ ಯಾತ್ರಿಕರು ಎಷ್ಟು ಪವಿತ್ರ ಭಾವನೆಯಿಂದ ಪುಣ್ಯಕ್ಷೇತ್ರಗಳಿಗೆ ಹೋಗುತ್ತಾರೊ, ಆ ಭಾವನೆಯು ಈ ಮಹಾ ಪುಂಡಾಟಿಕೆಯ ಪಂಡಾಗಳನ್ನು ಕಂಡ ಕೂಡಲೆ ಇಲ್ಲದ ಸಿಟ್ಟು ಬಂದು "ಏಕೆ ಬಂದೆ?" ಎನ್ನಿಸುತ್ತದೆ.

ಸಿಂಧಿಯಾ ಘಾಟಿನ ಹತ್ತಿರ ಏನೋ ಒಂದು ಮನೆಯ ನೆಲಗಟ್ಟು ಇದ್ದಂತೆಯೂ, ಅದರ ಮೇಲೆ ಬಣ್ಣ ಸುರುವಿದಂತೆಯೂ ಕಂಡಿತು. ಅದೇನೆಂದು ಕೇಳಿದೆ "ಭೀಷ್ಮ ಪಿತಾಮಹನವನು! ಅವನೊಬ್ಬ ಬ್ರಹ್ಮಚಾರಿ— ಗಂಗೆಯಮಗ!" ಮುಂತಾಗಿ ಕತೆ ಹೇಳಲಾರಂಭಿಸಿದ ದೋಣಿಯ ಮುದುಕ. 'ದೋಣಿಯನ್ನು ದಡಕ್ಕೆ ಹಿಡಿ' ಎಂದೆ; ಹಿಡಿದ. ಕೆಳಗಿಳಿದು ನೋಡಿದೆವು. ಒಂದು ಐನೂರು ಗಾಡಿ ಮಣ್ಣು ಕಾಕಿ, ಅದರಿಂದ ಒಂದು ಮನುಷ್ಯನ ರೂಪುಮಾಡಿ ಮಲಗಿಸಿದ್ದಾರೆ. ಅದಕ್ಕೆ ಬಣ್ಣ ಬಳಿದು ಕಣ್ಣು, ಮೂಗು, ಬಾಯಿಗಳನ್ನು ಬಿಡಿಸಿಟ್ಟಿದ್ದಾರೆ. ಅದಕ್ಕೆ ಕಲೆಯ ಯಾವ ಸಂಕೇತವೂ ಇಲ್ಲ. ಭೀಷ್ಮನು ದೊಡ್ಡ ಮನುಷ್ಯನಾದುದರಿಂದ ಅವನ ಮೂರ್ತಿಯನ್ನು ದೊಡ್ಡದಾಗಿ ಮಾಡಿಟ್ಟಿದ್ದಾರೆ. ಇಡೀ ದಂಡೆಯಲ್ಲಿ ಇಂತಹ ಐದಾರು ಬೊಂಬೆಗಳವೆ. ಇದರ ಬದಲು ಪ್ರತಾಪೀ ಭೀಷ್ಮನ ವೀರ, ಧೀರ, ತ್ಯಾಗ, ವ್ರತನಿಷ್ಠ ಗುಣಗಳ ಭಾವನಾಪೂರ್ಣವಾದ- ಚಿತ್ರಗಳ— ಮೂರ್ತಿಗಳ ಮುಂದಿರವನ್ನೇ ರಚಿಸಿದ್ದರೆ ಒಳಿತಾಗುತ್ತಿತ್ತು." ಇಷ್ಟು ಹೇಳುವಷ್ಟರಲ್ಲಿ ರಾತ್ರಿ ಬಹಳವಾದುದರಿಂದ, ಆಂಜನಿ ಮತ್ತು ಗಿರಿ ಮಲಗಿದ್ದರು. ಅತ್ಮಾರಾಮನು "ಬಾಪ್ಪಾ! ನಾಳೆ ಹೇಳುವುದು ಕತೆ" ಎಂತ ನುಡಿದು ಆಕಳಿಸುತ್ತ ಕೂಕಡಿಸಲಾರಂಭಿಸಿದ್ದ. ರಾತ್ರಿಯೆಲ್ಲ ಪ್ರೇಮೆಯು ಕಾಶಿಯನ್ನು ನೋಡುತ್ತಿದ್ದಳೆಂದು ಮರುದಿನ ಹೇಳಿದಳು.

ಜಯಂತಿಯಲ್ಲಿ ಜಾಹೀರಾತನ್ನು ಕೊಟ್ಟರೆ ವ್ಯಾಪಾರಿಗಳಿಗೆ ಮನತುಂಬ ಲಾಭವಿದೆ !

ಡೆಲೋಂಗರೆ ಬಾಲಾಮೃತ
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ಬಾಳು ನೂರೇ ವರುಷವೇ?

ವೈದ್ಯ ಮಂ. ಗೋಪಾಲಕೃಷ್ಣರಾಯರು
'ಕಲಿಯುಗ' ಸಂಪಾದಕರು.

★

ಬಾಳಿನ ಬೀಗನ ಕೈ ಇರುವುದು ನಮ್ಮ ಆಹಾರ-ವಿಹಾರ-ಗಳಲ್ಲಿ! ಮನುಷ್ಯನನ್ನು ಕೂಡಲೆ ಕೊಲ್ಲುವುದು ಅವನ ಆಹಾರ–ವಿಹಾರ; ಬಯಸಿದಷ್ಟು ಕಾಲ ಬದುಕಿಸುವುದೂ ಅವನ ಆಹಾರ–ವಿಹಾರ!

★

'ಶತಾಯುರ್ವೈ', 'ಜೀವೇಮ ಶರದಃಶತಮ್' ಎಂಬ ಸನಾತನ ಪರಂಪರೆಯಲ್ಲಿ ಬೆಳೆದ ಭಾರತೀಯರಿಗೆ 'ಬಾಳು ನೂರೇ ವರುಷವೇ?' ಎಂಬ ಪ್ರಶ್ನೆಯು ಕೂಡ ದೈವದ್ರೋಹವೆನಿಸಬಹುದು. ಮನುಷ್ಯನು ನೂರು ವರುಷ ಮಾತ್ರ ಬಾಳಬೇಕೆಂದು ದೇವರ ನಿರ್ಬಂಧವಿದೆಯೆಂದು ಅವರ ತಿಳಿವಳಿಕೆ. ಆದುದರಿಂದ ನೂರರ ಬೇಲಿ ದಾಟಲಿಚ್ಛಿಸುವುದು ದೈವದ್ರೋಹವೆಂದು ಅವರ ಮತ. ಭಾರತೀಯರಲ್ಲಿಯೆ ಏಕೆ, ಜಗತ್ತಿನ ಪರಂಪರಾಪ್ರಿಯ ಜನಾಂಗಗಳಲ್ಲೆಲ್ಲ ಇಂತಹ ಸನಾತನಿಗಳಿರದೆ ಹೋಗಿಲ್ಲ. ಹದಿನೇಳನೆಯ ಶತಮಾನದಲ್ಲಿದ್ದ ಒಬ್ಬ ಡಚ್ ತತ್ತ್ವಜ್ಞಾನಿಯು ಸೂಕ್ಷ್ಮದರ್ಶಕ ಯಂತ್ರದ ಸಂಶೋಧಕರಲ್ಲಿ ಒಬ್ಬನಾಗಿದ್ದನು. ಒಮ್ಮೆ ಉಂಟಾದ ಆಧ್ಯಾತ್ಮಿಕ (?) ಲಹರಿಯಲ್ಲಿ, ಅವನು ತನ್ನ ವೈಜ್ಞಾನಿಕ ಟಿಪ್ಪಣಿಗಳನ್ನೆಲ್ಲ ಸುಟ್ಟು ಹಾಕಿಬಿಟ್ಟನು. ಮನುಷ್ಯನಿಗೆ ಕಾಣದಂತೆ ಇಟ್ಟಿರುವ ಪರಮಾತ್ಮನ ಗುಟ್ಟುಗಳನ್ನು ಬಹಿರಂಗಪಡಿಸುವುದು ದೈವದ್ರೋಹವಲ್ಲವೇ?

ಆದರೆ ಬಾಳಿನ ನೂರನ್ನು ಮಿಕ್ಕಿ ನುಂದುವರಿದವರು ಸಾವಿರಾರು ಜನರು, ಈಗಲೂ ಭಾರತದಲ್ಲಿ ಇದ್ದಾರೆ; ಹಿಂದಕ್ಕೂ ಇದ್ದರು. ತಪಶ್ಚರ್ಯೆಯಲ್ಲಿ ಯುಗಾಂತರಗಳನ್ನು ಕಳೆದು ಬಾಳಿದ ಶೇಜೋಜೀವಿಗಳು ಭಾರತೀಯರಿಗೆ ಅಪರಿಚಿತರಲ್ಲ. ಅವರೆಲ್ಲರೂ ದೈವದ್ರೋಹಿಗಳಲ್ಲವಷ್ಟೇ? ಮತ್ತೆ ಈಗ ನಮ್ಮೆಲ್ಲರ ಕಕ್ಕುಲತೆಗೆ ಪಾತ್ರರಾದ ವಿವೇಕಪೂರ್ಣ ದೇವಭಕ್ತರಾದ ಮಹಾತ್ಮಾಗಾಂಧಿಯವರು, ನೂರಾಇಪ್ಪತ್ತೈದು ವರುಷ ಬಾಳಲೆಳಸುತ್ತಿರುವುದೂ ದೈವದ್ರೋಹವಾಗಿರಲಿಕ್ಕೆಲ್ಲವಷ್ಟೇ? ಶತಾಧಿಕವಾಗಿ ಬಾಳುವ ಬಯಕೆಯು ದೈವದ್ರೋಹವಲ್ಲ; ಅನಂತ ಶಕ್ತಿಗಳ ಗೊಂಚಲಾದ ಮನುಷ್ಯನನ್ನು ನೂರರ ಮೇರೆಯಿಂದ ಸುತ್ತುವುದೇ ದೈವದ್ರೋಹವಾದೀತು. ಜೀವಿಗಳಲ್ಲಿ, ವ್ಯಕ್ತವಾಗಿ ಸುಖಕ್ಕಾಗಿ ಸೆಣಸಾಟ ನಡೆದಿದ್ದರೂ, ಅವರ ಮರೆಯಲ್ಲಿರುವುದು ಜೀವಿಸುವ ನೇಗ (ಹಂಬಲಿಕೆ) ಎಂಬುದು ಹಿಂದಣ ಬರಿಹದಲ್ಲಿ ವಿಶದವಾಗಿದೆ. ಮತ್ತೆ ಆ ಬದುಕಿನ ಬಯಕೆಯನ್ನು ಬಿತ್ತಿದವನು ದೇವನಲ್ಲನೇ? ಬದುಕನ್ನು ಬಿತ್ತಿದವನೇ ಸಾವಿನ ಸಂಕೋಲೆಯನ್ನು ತೊಡಿಸುವನೇ? 'ರಸೋವೈ ಸಃ' ಎಂದು ವೇದಾಂತಿಗಳ ಅಮರವಾದ ಉಸಿರಿದೆ. ರಸವೆಂದರೆ ಸುಖ. ಸುಖವೆಂದರೆ ಬದುಕು. ಬದುಕೇ ಭಗವಂತ. ಇಂತಹ ಸುವಿಚಾರಗಳ ಸರಪಣಿಯಲ್ಲಿಯೆ ಜೋತಾಡುವ ಸನಾತನಿಗಳಿಗೆ ಬಾಳುವುದು—ಹೆಚ್ಚಾಗಿ ಬದುಕುವುದು ಎಂದೂ ದೈವದ್ರೋಹವೆನಿಸಬಾರದು

'ಬಾಳಿಗೊಂದು ನಿಶ್ಚಿತಯುಂಟೇ?' ಎಂಬ ಪ್ರಶ್ನೆಯನ್ನು ಉತ್ತರಿಸುವುದಕ್ಕೆ ಮುಂಜಿ 'ಬಾಳೆಂದರೇನು?' ಎಂಬುದಕ್ಕೆ ಉತ್ತರ ಕೊಡುವುದಗತ್ಯವಿದೆ. ಮತ್ತೆ ಆ ಉತ್ತರವು ಸುಲಭವಾಗಬೇಕಾದರೆ, ಸಾವಿನಲ್ಲಿ ಉಂಟಾಗುವ ಸ್ಥಿತ್ಯಂತರಗಳನ್ನು ತಿಳಿಯುವುದು ಅವಶ್ಯಕ. ಸಾವು! ಎಂತಹ ಭೀಕರವಾದ ಶಬ್ದ! ಜೀವನವು ನಶ್ವರ; ಜೀವವು ಅಮರವೆಂದು ಪರಿಸುತ್ತಿರುವ ಸಾಧಕರೂ ಸಾವಿನ ಸದ್ದಿನಿಂದ ಕ್ಷಣಿಕವಾಗಿಯಾದರೂ ತತ್ತರಿಸುತ್ತಾರೆ. ಇನ್ನು ಸಾವು, ಹೆಣ, ದೆವ್ವ, ಭೂತಗಳನ್ನು ನಿರಂತರವಾಗಿ ಜೋಡಿಸುತ್ತಿರುವ ಸಾಮಾನ್ಯ ಜನರಂತೂ 'ಮರಣ' ಎಂಬ ಶಬ್ದವನ್ನು, ನಾಲಗೆ ತೊಡಕಿಸದೆ ನುಡಿಯುವ ಎದೆಗಾರರಾಗಿಲ್ಲ. ಆದರೆ ನಿಜವಾಗಿಯೂ ಸಾವು ಅಷ್ಟು ಭೀಕರವಾಗಿದೆಯೇ? ಸಾವೆಂದರೇನು?

'ಜೀವಾತ್ಮನು ಪರಮಾತ್ಮನಲ್ಲಿ ಲೀನವಾಗುವುದೇ ಸಾವು'; 'ದೇಹಪಂಜರದಿಂದ ಜೀವಪಕ್ಷಿಯು ಹಾರಿಹೋಗುವುದೇ ಮರಣ' ಎಂದು ಉದ್ದುದ್ದವಾದ ವ್ಯಾಖ್ಯೆಗಳನ್ನು ನಾವು ಕೇಳಿದ್ದೇವೆ. ಅವೆಲ್ಲ ದೊಡ್ಡವರ ಮಾತುಗಳಾದುವು. ನಮ್ಮಂತಹ ಪಾಮರರಿಗೆ ಅದರಿಂದ ತಿಳಿಯುವ ಸ್ಪಷ್ಟವಾದ ಸಂಗತಿಯಿಷ್ಟೆ:—ದೇಹವು ನಿಷ್ಕ್ರಿಯವಾಗುವುದೇ ಸಾವು; ಉಸಿರು ನಿಲ್ಲುವುದು.—ಹೃದಯವು ತಡೆಯುವುದು, ಮೈಯು ಅಲುಗಾಡದು, ಮನವು ಮಿಸುಕಾಡದು. ಇದುವರೆಗೆ ಸಮರಸವಾಗಿ ಜಾಳಿನ ಹಾಡನ್ನು ಕಟ್ಟುತ್ತ ಕುಣಿಯುತ್ತ ನಡೆದ ಮೈಯಲ್ಲಿಯ ಅಣು-ರೇಣುಗಳು ಒಂದೇ ಕ್ಷಣದಲ್ಲಿ ಗಕ್ಕನೆ ನಿಂತುಬಿಟ್ಟುವು. ಎಂತಹ ಅಸಂಬದ್ಧ ಪರಿಸ್ಥಿತಿಯಿದು! ಧಾತುಪೋಷಣೆಗೆಂದು ಹೊರಟ ರಕ್ತವು ನಿಂತಲ್ಲಿಯೆ ಕರಣೆಗಟ್ಟಿತು. ವಾಚಕರಸ ಸಂಯೋಗಪಡೆಯುತ್ತಿದ್ದ ಆಹಾರದ ಅಡುಗೆಯು ಜಠರದಲ್ಲಿ ಸ್ತಂಭಿತವಾಯಿತು. ಕಂಡ ವಸ್ತುವಿನ ವಿಶ್ಲೇಷಣವನ್ನು ನಯನೇಂದ್ರಿಯವು ನಡೆಯಿಸಲು ಪವಣಿಸುತ್ತಿರುವಾಗಲೆ, ಅ–ಭಾಸವೆ ಆವರಿಸಿತು. ಕನಸುತ್ತಿದ್ದ ಮನಸು ಶಾಶ್ವತವಾಗಿ ಮೂರ್ಛಿತವಾಯಿತು. ಒಂದೇ ಮಾತಿನಲ್ಲಿ ಹೇಳುವುದಾದರೆ

ಕೆಲಸಗಳೆಲ್ಲ ಅಲ್ಲಲ್ಲಿಯೆ ನಿಂತುಬಿಟ್ಟುವು. ಇದುವೆ ಸಾವಲ್ಲವೇ? ಹಾಗಾದರೆ ಸಾವು ಸಪ್ತಧಾತುಗಳನ್ನು ಅವರಿಸಿತೇ?

ಶರೀರದ ಘಟಕಗಳಿಗೆ ಆಯುರ್ವೇದದಲ್ಲಿ ಧಾತುಗಳು (Tissues) ಎನ್ನುತ್ತಾರೆ. 'ಪೂರ್ಣ'ವಾದ ಶರೀರಕ್ಕೆ ಸಾವು ಅವರಿಸಿದರೆ ಅಂಶಗಳಾದ ರಕ್ತ, ಮಾಂಸ, ನರಗಳೂ ಸಾಯುತ್ತವೆಯೋ? 'ಪೂರ್ಣವು ಸತ್ತಮೇಲೆ ಅಂಶವೂ ಸತ್ತಿರಲೇಬೇಕು' ಎಂದು ಯಾರಾದರೂ ತರ್ಕಬದ್ಧವಾದ ಸಿದ್ಧಾಂತವನ್ನು ಒಡ್ಡಬಹುದು. ಆದರೆ ಪ್ರಕೃತಿಯ ಕೈಗಾರಿಕೆಯು ಪರಪರಾವಧಿ ಸಿದ್ಧಿಯೆನಿಸಿದ ಮನುಷ್ಯಶರೀರಯಂತ್ರಕ್ಕೆ ಆ ತರ್ಕವು ಅನ್ವಯಿಸದು. ಪೂರ್ಣವು ಸತ್ತರೂ ಅಂಶಗಳು ಸಾಯದಿರುವ ಉದಾಹರಣೆಗಳುಂಟು. ಶರೀರವು ಬಾಹ್ಯ ಉಷ್ಣತೇಜನಕ್ಕೆ ಯಾವರೀತಿಯಿಂದಲೂ ಉತ್ತರ ಕೊಡಲಾರದಂತಹ ಪರಿಸ್ಥಿತಿಗೆ ಮುಟ್ಟಿದಾಗ 'ಅದು ಸತ್ತಿತು' ಎಂದು ನಾವೆನ್ನುತ್ತೇವೆ. ಅಕ್ಕರೆಯು ಕರೆಗೆ ಅದು ಓಗೊಡುವುದಿಲ್ಲ; ಬಿಸಿ ತಗಲಿಸಿದರೆ ಕೈ ಕೊಸರುವುದಿಲ್ಲ; ಹಿತಸ್ಪರ್ಶದಿಂದ ಹಿಗ್ಗುವುದಿಲ್ಲ. ಆದೀಗ ಪೂರ್ಣದ ಸಾವು. ಆದರೆ ಆ ಸತ್ತ ಶರೀರದ ರಸ, ರಕ್ತ, ಮಾಂಸಗಳನ್ನು ಪರೀಕ್ಷಿಸಿ ನೋಡಿರಿ. ಅದರಲ್ಲಿನ್ನೂ ಜೀವವು ಮಿಸುಕಾಡುವುದು ನಿದರ್ಶನಕ್ಕೆ ಬರುವುದು. ಸತ್ತೊಡನೆ ಅದರ ಮಾಂಸದ ತುಂಡೊಂದನ್ನು ತೆಗೆದು ಮಜ್ಜಿಗೆಯಲ್ಲಿಟ್ಟರೆ ಮತ್ತು ಕಾಲಕಾಲಕ್ಕೆ ಆ ಮಜ್ಜಿಗೆಯನ್ನು ಬದಲಿಸುತ್ತ ಹೋದರೆ, ಹಲವು ವರುಷಗಳಾದರೂ ಮಾಂಸವು ಕೆಡದಂತೆ ಉಳಯುವುದೆಂದು ಡಾಕ್ಟರ್ ಕೆಲವರು ಹೇಳುತ್ತಾರೆ. ಹಲವು ವರ್ಷಗಳನಂತರವೂ ಮಾಂಸವನ್ನು ಮಜ್ಜಿಗೆಯಿಂದ ಹೊರಗೆ ತೆಗೆದು ಅದಕ್ಕೆ ವಿದ್ಯುತ್ಶಕ್ತಿಯ (ವಿದ್ಯುತ್ಶಕ್ತಿನ) ಚುರುಕನ್ನು ಕೊಡಿ. ಕೂಡಲೆ ಅದು ಸಂಕುಚಿತವಾಗುತ್ತದೆ. ಮತ್ತ ಸಜೀವ ಶರೀರದಲ್ಲಿರುವಾಗಲೂ ನರಗಳ ವಿದ್ಯುಚ್ಛಕ್ತಿಯ ಉತ್ತೇಜನದಿಂದಲೂ ಹಾಗೆಯೆ ಅದು ಸಂಕುಚಿತವಾಗುತ್ತಿರಲಿಲ್ಲವೇ? ಶರೀರದಿಂದ ರಕ್ತವನ್ನು ತೆಗೆದು, ವರುಷಗಟ್ಟಲೆ ಗಂಡಾಂತರಕಾಲಕ್ಕೆ ದೊಗಿಗಳಿಗೆ ತುಂಬಲೆಂದು ರಕ್ಷಿಸಿಡುವ ರಕ್ತಭಾಂಡಾರಗಳಂತೂ ಈಗ ದೊಡ್ಡ ನಗರಗಳಲ್ಲಿ ಬೆಳೆಯುತ್ತಿವೆ. ವೀರ್ಯಭಾಂಡಾರಗಳೂ ರಶಿಯದಲ್ಲ ಮತ್ತು ಅಮೇರಿಕೆಯಲ್ಲ ತಲೆಯೆತ್ತುತ್ತವೆ. ಸಜೀವ ಶರೀರದಿಂದ ಬೇರ್ಪಡಿಸಿದ ಒಜೋಗ್ರಂಥಿಗಳು (Endocrine Glands) ಔಷಧರೂಪವಾಗಿ ಪ್ರಯೋಗಿಸಲ್ಪಡುತ್ತಿವೆ. ಸತ್ತವರ ಚರ್ಮವನ್ನು ಕಾಯ್ದಿಟ್ಟು ಗಾಯಾಳುಗಳ ಉಪನಾಹ (Giessing) ಕ್ರಿಯೆಗಳಿಗೆ ಅನುಕೂಲಿಸಿಕೊಳ್ಳುತ್ತಿದ್ದಾರೆ. ರಶಿಯದ ಪ್ರೊಫೆಸರ್ ವಿ. ಪಿ. ಫಿಲೆಟೋನರು ಎಣಿಸಿ ಕಣ್ಣುಗೊಂಬೆಯನ್ನು (Cornea) ಕುರುಡರಿಗೆ ಇಂಟಿಸುವುದರಲ್ಲಿ ಬಹು ಮಟ್ಟಿಗೆ ಯಶಸ್ಸನ್ನು ಪಡೆಯುತ್ತಿದ್ದಾರೆ. ಮತ್ತೆ ಇದೆಲ್ಲ ಪಾಶ್ಚಾತ್ಯರ ಪುರಾಣವೆಂದು ಬೇಸರಿಯಬೇಡಿ. ಭಾರತೀಯ ಯೋಗಿಗಳು ಶರ್ಕದೃಷ್ಟಿಗೆ ಪೂರ್ಣವಾಗಿ ಸತ್ತಂತೆ ಕೆಲವು ಸಮಯ ತೋರಿ, ಪುನರುಜ್ಜೀವಿತರಾದ ಉದಾಹರಣೆಗಳು ಬೇಕಾದಷ್ಟು ಇವೆ. ದಿವಂಗತ ಪಂಡಿತ ತಾರಾನಾಥಜಿಯವರು, ಒಬ್ಬ ಪಾಶ್ಚಾತ್ಯ ವ್ಯಾಯಾಮಪಟುವು ಭಾರತೀಯ ಯೋಗಶಾಸ್ತ್ರವನ್ನು ಹೀಗಳೆಯುತ್ತ ವ್ಯಾಖ್ಯಾನಕೊಡುತ್ತಿರುವಾಗ, ಅದೇ ಸಭೆಯಲ್ಲಿಯೆ ಯೋಗಬಲದಿಂದ ಹದಿನೈದು ನಿಮಿಷದವರೆಗೆ ನಾಡಿಗಳನ್ನು ನಿಲ್ಲಿಸಿ ಸತ್ತಂತೆ ಬಿದ್ದು ಬಿಟ್ಟರು. ಅದನ್ನು ಕಂಡು ಡಾಕ್ಟರರು ಪರೀಕ್ಷಿಸಿ, ಆ ಪಾಶ್ಚಾತ್ಯ ಪಂಡಿತರು 'ಯೋಗಿಯು ಸತ್ತ'ನೆಂದು ಮನಸ್ಸಿನಲ್ಲಿ ನಗುತ್ತಿರುವಷ್ಟರಲ್ಲಿ, ತಾರಾನಾಥಜಿಯವರು ತಮ್ಮ ಪ್ರಿಯ ಆಪ್ತ, ವಿದ್ಯಾರ್ಥಿಗಳ ದಿಗಿಲನ್ನು ಹೋಗಲಾಡಿಸುತ್ತ ನಸುನಗೆಯಿಂದ ಎದ್ದು ಕುಳಿತರು. ೧೯೩೬ನೆಯ ಇಸ್ವಿಯಲ್ಲಿ ಬರ್ಲಿನಿನಲ್ಲಿ ಒಬ್ಬ ಭಾರತೀಯ ಯೋಗಿಗಳು ಅಲ್ಲಿಯ ಡಾಕ್ಟರರ ಸಂಘದ ಮೇಲ್ವಿಚಾರಣೆಯಲ್ಲಿ, ಶರೀರದ ಕ್ರಿಯೆಗಳನ್ನೆಲ್ಲ ಸ್ತಂಭೀಕರಿಸಿ, ಎಂಟು ದಿನಗಳವರೆಗೆ ಭೂಮಿಯಲ್ಲಿ ಹೂಳಿಸಿಕೊಂಡರು. ಅನಂತರ ಪುನರುಜ್ಜೀವಿತರಾದರು. ಈ ಸಂಗತಿಯು ಅಲ್ಲಿಯ ಪೊಪ್ಯುಲರ್ ಮೆಕ್ಯಾನಿಕ್ಸ್‌ನಲ್ಲಿ ಪ್ರಸಿದ್ಧವಾಗಿತ್ತು.

ಮೇಲಿನ ಸಂಗತಿಗಳಿಂದ 'ಅಂಶಗಳು—ಘಟಕಗಳು ಸಜೀವವಾಗಿರುವಾಗಲೂ ಪೂರ್ಣವು ಸಾಯುವುದು ಸಾಧ್ಯವಿದೆ' ಎಂಬ ಆಶ್ಚರ್ಯಕರವಾದ ಸಿದ್ಧಾಂತಕ್ಕೆ ನಾವು ಬರಬೇಕಾಗುತ್ತದೆ. ಗಾಲಿ, ಮೊಳೆ, ಬೆಣೆಗಳೆಲ್ಲವೂ ಭದ್ರವಾಗಿದ್ದರೂ

ಕಳೆದ ಹನ್ನೆರಡು ವರ್ಷಗಳಿಂದ ಕನ್ನಡದ ಸೇವೆ ಮಾಡುತ್ತಿರುವ
ದಕ್ಷಿಣ ಕನ್ನಡ ಜಿಲ್ಲೆಯ ಒಂದೆ ಒಂದಾದ
ಸಾಹಿತ್ಯಿಕ—ವೈಕಪ್ರಿಯ—ಪ್ರಯೋಗಾಮಿ ಎಂದು ಹೆಸರಾದ

ಕನ್ನಡ ಮಾಸಪತ್ರಿಕೆ

ವಾ.ಚಂ ಆಂ.ಪೆ. ಸೇರಿ ೨-೪-೦ | ಧುರೀಣ | ಬಿಡಿಸಂಚಿಕೆಗೆ ೦-೩-೦

ಸಂಪಾದಕರು

ಶ್ರೀ ಆರ್ ಎಸ್. ಶೆಣೈ ....
ಶ್ರೀ. ಬನ್ನಂಜೆ ರಾಮಾಚಾರ್ಯ

ಕನ್ನಡನಾಡಿನ ಸಮರ್ಥ ಬರೆಹಗಾರರ ಕತೆ, ಕವನ, ಲೇಖನಗಳಿಂದ ತುಂಬಿದ ಸಂಚಿಕೆಗಳು. ಜಾಹೀರಾತು ಕೊಡಬೇಕೆನ್ನುವವರಿಗೆ ಅತ್ಯುತ್ತಮ ಸಾಧನ.

ಮ್ಯಾನೇಜರ್ :—
ಧುರೀಣ ಉಡುಪಿ (ದ. ಕ. ಜಿಲ್ಲಾ)

ಯಂತ್ರವು ನಿಲ್ಲುವುದುಂಟು. ಆ ಘಟಕಗಳೆಲ್ಲವನ್ನು ಸಮರಸವಾಗಿ ನಡೆಯಿಸುವ ತೊಗಲಪಟ್ಟಿಯನ್ನು ಜಾರಿಸಿದರೆ ಸಾಕಷ್ಟೆ? ಹಾಗೆ ದೇಹಯಂತ್ರದ ಧಾತುಗಳೆಲ್ಲವೂ ಸರಿಯಾಗಿದ್ದರೂ ಅವುಗಳನ್ನು ಹೊಂದಿಕೆಯಿಂದ ಸಾಗಿಸುವ ಪಟ್ಟಿಯಾವುದೋ ಜಾರಿದರೆ ದೇಹವು ಸಾಯುವುದು. ಆ ಪಟ್ಟಿಯು ಸರಿಯಾಗಿದ್ದು ಧಾತುಗಳೆಲ್ಲ ಕೊಳೆತು ಕೊರಗಿದರೂ, ದೇಹಯಂತ್ರವು ಹೇಗೋ-ಕತ್ತರಿಸುತ್ತ ಬದುಕುವುದು. ಧಾತುಗಳ ಕಡಿಪಾಣವನ್ನು ಕೈಯಲ್ಲಿಟ್ಟುಕೊಂಡು ದೇಹರಥವನ್ನು ನೂಕುತ್ತಿರುವ ಆ ಸವರಸ ಸೂತ್ರವಾವುದು? ಯಂತ್ರದ ಪಟ್ಟಿಯು ಕಟ್ಟರೆ ಹೊಸತನ್ನು ಕೂಡಿಸಲು ಬರುವಂತೆ, ಈ ಸಜೀವ ಸೂತ್ರವನ್ನು ಪುನರುಜ್ಜೀವಿಸಲು ಸಾಧ್ಯವೇ? ಸಾಧ್ಯವಾಗಿದ್ದರೆ ಬಾಳು ನೂರೇ ವರುಷವೇಕಾಗಬೇಕು?

ಶರೀರಶಾಸ್ತ್ರದ ವಿದ್ಯಾರ್ಥಿಗಳಿಗೆ ಆ ಸಜೀವಸೂತ್ರವಾವುದೆಂಬುದು ಗೊತ್ತೇ ಇದೆ. ಆ ಸೂತ್ರದ ಸರಿಯಾದ ಪರಿಚಯವಾಗಬೇಕಾದರೆ 'ಬದುಕುವುದು' ಮತ್ತು 'ಬಾಳುವುದು' ಎಂಬ ಶಬ್ದಗಳಲ್ಲಿಯ ಅಂತರವನ್ನು ಅರಿಯುವ ಅಗತ್ಯವಿದೆ. ನಾವು ಬರಿ ಬದುಕಿದರೆ ಸಾಲದು; ಬಾಳಬೇಕು, ತಾಳುವಂತೆ ಬಾಳಬೇಕು. ಆದುದರಿಂದ ಬಾಳಬೇಕಾದರೆ ಬದುಕಿನ ಜೊತೆಗೆ ತಾಳಿಕೆಯ ಗುಣವೂ ಬೇಕಾಗುವುದು. ಉಸಿರಾಡುತ್ತಿದ್ದರೆ ಬದುಕಿರಬಹುದು. ಆದರೆ ಪ್ರತಿಯೊಂದು ಉಸುರಿನಲ್ಲಿಯೂ ಅಮರತ್ವವನ್ನು ಧ್ಯಾನಿಸದೆ ಸಾವನ್ನು ಜಪಿಸುವುದು ಬಾಳಿನ ಗುರುತಲ್ಲ. ಹೃದಯವು ಸ್ಪಂದಿಸುತ್ತಿದ್ದರೆ ಬದುಕಬಹುದು. ಆದರೆ ಪ್ರತಿಯೊಂದು ಸ್ಪಂದನವೂ ದಿವ್ಯಭವಿಷ್ಯದ ನಲಿಯುವ ಗೆಲವಿನ ಗಾನಕ್ಕೆ ತಾಳವಾಗದಿದ್ದರೆ ಬಾಳುವ ಆಶೆಯಿಲ್ಲ. ದೇಹಯಂತ್ರಕ್ಕೆ ಬದುಕಬೇಕಾದರೆ ಉಸಿರು, ತಿನಿಸುಗಳೆರಡೇ ಸಾಕು; ಆದರೆ ಬಾಳಬೇಕಾದರೆ ಸದಾಹಾರ ಮತ್ತು ಸರಿಯಾದ ರೀತಿಯಲ್ಲಿ ಪ್ರಾಸೋಛ್ವಾಸಗಳು ನಡೆಯುವ ಅಗತ್ಯವಿದೆ. ಏಕೆಂದರೆ ಆಹಾರ-ಉಸಿರುಗಳೇ ಶರೀರದ ಧಾತುಗಳ ಸಾರಥಿಯಾದ ಸಜೀವಸೂತ್ರದ ಉಗಮಗಳಾಗಿವೆ.

ಪ್ರಾಣಿಗಳ ಶರೀರಯಂತ್ರವು ಸ್ವಯಂಜೀನಿಯಾಗಿದೆ. ದುಡಿಮೆಯಿಂದ ಸವೆದ ಧಾತುಗಳನ್ನು ಆಹಾರ, ಉಸಿರುಗಳಿಂದ ಆದುಪುನರ್ರಚಿಸಿಕೊಳ್ಳಬಲ್ಲದು. ಭೌತಿಕ ಯಂತ್ರಗಳಂತೆ ಆ ಕಾರ್ಯಕ್ಕಾಗಿ ಒಬ್ಬ ಯಾಂತ್ರಿಕನ ಅಗತ್ಯವಿಲ್ಲ. ಧಾತುಗಳ ಸವಕಳಿಯಿಂದ ಹಸಿವು, ಬಾಯಾರಿಕೆಗಳು ಹುಟ್ಟುತ್ತವೆ. ಆವಗಳ ಒತ್ತಾಯದಿಂದ ಅಂಗಾಂಗಗಳು ಆಹಾರ-ಗಾಳಿಗಳನ್ನು ಹುಡುಕಿ ಪಡೆಯುತ್ತವೆ. ಇದು ಪ್ರಾಣಿಸಾಮಾನ್ಯವಾದ ಜೀವನಪ್ರವೃತ್ತಿಯಾಗಿದೆ. ಇದರ ಜೊತೆಗೆ ಮನುಷ್ಯನಲ್ಲಿ ಬುದ್ಧಿಯು ಜಿಗಿದಿದೆ. ಜೀವನವೃತ್ತಿಯಿಂದ ಬರಿ ಬದುಕಿಕೊಂಡಿದ್ದ ಪ್ರಾಣಿಗಳಲ್ಲಿ, ಬುದ್ಧಿಯು ಉದಯವಾಗಿ ಬಾಳುವ ಮಾನವನನ್ನು ಕಲೆಯಿತ್ತಿದ್ದಾನೆ. ಬುದ್ಧಿಯು ಬದುಕಿಗೆ ಕೊಟ್ಟ ರೂಪ, ವರ್ಣಗಳಿಗೆ ಲೆಕ್ಕವಿಲ್ಲ. ಹಸಿವು ಹಿಂಗಿಸುವುದಕ್ಕೆ ಮಾತ್ರ ಅವಶ್ಯವಾಗಿದ್ದ ಆಹಾರವು ನಾಲಗೆಯ ರುಚಿಗೆ ಬಲಿಬಿದ್ದು ಹಲವು ಪರಿಷ್ಕಾರಗಳನ್ನು ಹೊಂದುತ್ತ ಬಂದಿದೆ; ಜೀವಯಂತ್ರಕ್ಕೆ ಪ್ರಾಣವನ್ನು ಊದುವುದಕ್ಕೆ ಮಾತ್ರ ಅವಶ್ಯವಿದ್ದ ಗಾಳಿಯು ಅರಮನೆ, ಸಿರಿಮನೆಗಳಲ್ಲಿ ಸಹಸ್ರಗಂಧಗಳ ಮತ್ತು ಬಡವರ ಕೊಳೆತ ಬೀದಿಗಳಲ್ಲಿ ದುರ್ವಾಸನೆ, ದುರ್ವಾಯುಗಳ ಸಂಸ್ಕಾರ ಪಡೆಯುತ್ತ ಬಂದಿದೆ. ಬದುಕನ್ನು ಬಾಳನ್ನಾಗಿಸುವ ಹಂಬಲದಿಂದ ಬುದ್ಧಿಯು ಆಹಾರ, ವಾಯುಗಳಲ್ಲಿ ತನ್ನ ಮಸಾಲೆಯನ್ನು ಬೆರಸಿತು. ಆದರೂ ಬಾಳು ನೂರು ಹೆಜ್ಜೆ ದೂರವೇ ಉಳಿಯಿತು. ಸಾವಿರಾರು ಬೇನೆಗಳು ನೂರಾರು ಶತಮಾನಗಳಿಂದ ಮಾನವ ಲೋಕದ ಮೇಲೆ ದಾಳಿಯಿಟ್ಟು, ಸಾವಿನ ಸುಗ್ಗಿ ನಡೆಸಿವೆ. ಭೂಕಂಪ-ಜ್ವಾಲಾಮುಖಿಗಳು ಮತ್ತು ಮನುಷ್ಯನ ಬೇಟೆಗಳಲ್ಲದಿದ್ದರೆ, ಮಿಕ್ಕ ಪ್ರಾಣಿಗಳ ಬದುಕಿಗೆ ಭಯವಿಲ್ಲ. ನಾಳೆಯದನ್ನು ನೆನಸಿ ನರಳುವ ಸ್ವಭಾವವು ಅವಕ್ಕಿಲ್ಲದಿರುವುದರಿಂದ ಅವು ವರ್ತಮಾನದ ಚಕ್ರವರ್ತಿಗಳಾಗಿ ಬಾಳುತ್ತಿವೆ.

ಪ್ರಾಣಿಶ್ರೇಷ್ಠನೆಂದು ಏನಾಸೆ ಹುರಿನೂಡಿ ಮೆರೆಯುವ ಮಾನವನು, ನೂರು ವರ್ಷದ ವರೆಗೆ ಬದುಕುವ ಆಶೆಯನ್ನು ಕೂಡ ಮಾಡದಿರುವಾಗ, ಮಿಕ್ಕ ಪ್ರಾಣಿಗಳು ಸಾವಿರದ ಆಟವಾಡುತ್ತಿವೆ. ಈಗ ಇಡಿ ಜಗತ್ತಿನ ಜನಾಂಗಗಳ ಆಯುರ್ಮಾನದ ಸರಾಸರಿಯು ನಲ್ವತ್ತಕ್ಕೆ ಮಿಕ್ಕಿಲ್ಲ. ಶೂರಶ್ರೇಷ್ಠನಾದ ಅಲೆಕ್ಸ್ಯಾಂಡರನು ಮಧ್ಯವಯಸ್ಸಿನಲ್ಲಿಯೆ ದೇಹವಿಟ್ಟನು. ಆದರೆ ಅವನಿಗೆ ಅನೇಕ ಯುದ್ಧಗಳಲ್ಲಿ ಸಹಕಾರಿಯಾಗಿದ್ದ ಒಂದು ಆನೆಯಿತ್ತು. ಅದನ್ನು ಗೌರವಿಸುವುದಕ್ಕಾಗಿ ಅದರ ಕೊರಳಿಗೆ ಒಂದು ಬಹುಮಾನದ ಪಟ್ಟಿಯನ್ನು ಕಟ್ಟಿ, ಅದನ್ನು ದಾಸ್ಯದಿಂದ ಮುಕ್ತಗೊಳಿಸಿದರು. ಅಲೆಕ್ಸ್ಯಾಂಡರನು ತೀರಿಕೊಂಡು ೩೦೦ ವರ್ಷಗಳನಂತರವೂ ಆ ಆನೆಯು ತನ್ನ ಬಹುಮಾನದ ಪಟ್ಟಿಯನ್ನು ನೆರಸುತ್ತ ಬಾಳಿಕೊಂಡಿತ್ತು. ಐವತ್ತನೆಯ ವಯಸ್ಸಿನಲ್ಲಿ ಕೂಡ ಸುದೃಢವಾಗಿದ್ದು ಕೆಲಸಮಾಡುತ್ತಿದ್ದ ಒಂದು ಕುದುರೆ ಮತ್ತು ಕತ್ತೆಯ ಉದಾಹರಣೆಯನ್ನು ಆರ್ಥರ್ ವಾಸ್ ಎಂ. ಡಿ. ಅವನು ಕೊಟ್ಟಿದ್ದಾನೆ. ಜಪೋನ್ ಎಂಬ ಪ್ರಾಣಿವಿಜ್ಞಾನಿಯು, ನೂರೈವತ್ತಕ್ಕೆ ಮಿಕ್ಕಿ ಬಾಳಿದ ಅನೇಕ ಮಾನಗಳನ್ನು ಸಂಗ್ರಹಿಸಿದ್ದನು. ಜರ್ಮನಿಯಲ್ಲಿ ಹಿಡಿದ ಒಂದು ಮೀನಿನ ಕೊರಳಿಗೆ ೨೬೧ ವರ್ಷದ ಹಿಂದಿನ ಮೀತಿಯ ಉಂಗುರವಿತ್ತಂತೆ. ಉತ್ತರಮಹಾಸಾಗರಗಳಲ್ಲಿರುವ ತಿಮಿಂಗಿಲುಗಳು ಸಾವಿರಾರು ವರ್ಷ ಬದುಕುವುವು. ಆದರೆ ಪ್ರಾಣಿಶ್ರೇಷ್ಠನಾದ ಮಾನವನಿಗೆ ಉಷ್ಟು ದೀರ್ಘವಾಗಿ ಬಾಳುವೆನೆಂಬ ಧೈರ್ಯವು ಕೂಡ ಇರಕೂಡದೆ?

ಮನುಷ್ಯಶರೀರದ ಘಟಕಗಳು ಸರಿಯಾದ ಪರಿಸ್ಥಿತಿಯಲ್ಲಿಡಲ್ಪಟ್ಟರೆ, ಅನಿಯಮಿತ ಕಾಲದ ವರೆಗೆ ಉಳಿಯುವುವೆಂದು ಹಿಂದೆ

ಹೊಸ ಹೊತ್ತಿಗೆ!

ಮಹಾತ್ಮಾ ಬಸವಣ್ಣನವರ

ಕ್ರಾಂತಿಕಾರ್ಯ

ರಾ. ಬ. ಫ. ಗು. ಹಳಕಟ್ಟಿ ಬಿ ಎ. ಎಲ್‌ಎಲ್. ಬಿ

ಅವರ ಮುನ್ನುಡಿಯೊಡನೆ

ಅವರ ಕ್ರಾಂತಿಯ ಸುರಮ್ಯ ವರ್ಣನೆ.

ಬೆಲೆ ೧೦ ಆಣೆ. ವ್ಹಿಪಿಯಿಂದ ೧೫ ಆಣೆ.

ವ್ಯಾಪಾರಿಗಳಿಗೆ ಕಮಿಶನ್

ಕೆ. ಕೆ. ಗಲಗಲಿ.

ಪೋ. ಸವದತ್ತಿ. ಜಿ. ಬೆಳಗಾವಿ.

ಹೇಳಿದೆ. ಪೂರ್ಣಶರೀರವು ಸತ್ತರೂ ಅದರ ಅಂಶ ಧಾತುಗಳಲ್ಲಿ ಜೀವವು ಮಿಸುಕಾಡುವುದೆಂದು ಕಂಡುಕೊಂಡಿದ್ದೇವೆ. ಅಂಶಗಳನ್ನು ಆಳುವ ಸೂತ್ರಶಕ್ತಿಯು ಅಳಿಯುವುದರಿಂದ ಸಾವು ಆವರಿಸುವುದೆಂದು ವಿವೇಚಿಸಲಾಗಿದೆ. ಆ ಶಕ್ತಿಯ ಉಗಮಗಳೆಂದರೆ ಆಹಾರ, ಗಾಳಿಗಳೆಂಬುದೂ ಸಿದ್ಧಾಂತವಾಗಿದೆ. ಹಾಗಾದರೆ ಬಾಳಿನ ಬೀಗದ ಕೈಯಿರುವುದು ನಮ್ಮ ಆಹಾರ-ವಿಹಾರಗಳಲ್ಲೆಂದು ಸ್ಪಷ್ಟವಾಗಲ್ಲಿಲ್ಲವೇ? ಸಂಕ್ಷಿಪ್ತವಾಗಿ ಹೇಳುವುದಾದರೆ, ಮನುಷ್ಯನನ್ನು ಕೊಲ್ಲುವುದೂ ಆಹಾರ-ವಿಹಾರಗಳು; ಬದುಕಿಸುವುದೂ ಆಹಾರ-ವಿಹಾರಗಳು. ಮತ್ತೆ ಬುದ್ಧಿಯ ಸದುಪಯೋಗವಾದರೆ ಆಹಾರ-ವಿಹಾರಗಳು ಶಕ್ತಿಯನ್ನು ನೀಡುವವು; ದುರುಪಯೋಗವಾದರೆ ಅವುಗಳೇ ಜೀವನವನ್ನು ಹಿಂಡುವ ವಿಷವನ್ನು ಉಗುಳುವವು. ಕೆಸರು ನೀರು, ಹೊಲಸು ಕಲ್ಲಿದ್ದಲಿನಿಂದ ಎಂಜಿನು ಕೆಟ್ಟು ಹಾಳಾಗುವುದು. ದುರಾಹಾರ-ವಿಹಾರಗಳಿಂದ ಮನುಷ್ಯನ ಮಾದರಿಯಂತ್ರವೂ ಕೂಡ ನಿಂತು ಬಿಡುವುದು.

ಇಂದ್ರಿಯಗಳ ಕ್ಷಣಿಕಸುಖಕ್ಕಾಗಿ ವಿಷಯಲಂಪಟನಾಗಿ ಮಾನವನು, ಶರೀರದ ಮೇಲೆ ಮಾಡುವ ಅನಾಚಾರಗಳಿಗೆ ಲೆಕ್ಕವುಂಟೆ? ಬಾಯಿರುಚಿಗಾಗಿ ಉಪ್ಪು, ಹುಳಿ, ಖಾರ, ಸಿಹಿ ಬೆರೆತ ಜಡವಿನಿಸುಗಳನ್ನು—ಕಾಲತಪ್ಪಿ ಮಿತಿಮೀರಿ—ಬಕ್ಕರಿಸಿ, ಜಠರವನ್ನು ಬೇನೆಗಳ ಜ್ವಾಲಾಮುಖಿಯನ್ನಾಗಿ ಮಾರ್ಪಡಿಸುತ್ತಿದ್ದಾನೆ. ದುರಾಹಾರದಿಂದ ಕಸುವುಗೆಟ್ಟ ನರ-ನಾಡಿಗಳನ್ನು ಹುರಿದುಂಬಿಸಲು ಚಹಾ, ಕಾಫಿ, ತಂಬಾಕು, ಸಸ್ಯ, ಹೆಂಡ, ಅಫೀಮುಗಳನ್ನು ಸೇವಿಸಿ, ಬದುಕಿನ ಸೂತ್ರಧಾರಿಗಳಾದ ಹೃದಯ, ಪುಪ್ಪುಸ, ವೃಕ್ಕ (ಕಿಡ್ನಿ), ಯಕೃತ್ (ಲಿವರ್) ಮಿದುಳುಗಳ ಪಾಣ ಹಾತಿಸುತ್ತಿದ್ದಾನೆ. ಆ ಜೀವಾಂಗಗಳು ಮುಗ್ಗರಿಸುವುದರಿಂದ ದೇಹದುರ್ಗವು ಬೇನೆಗಳಿಗೆ ತೆರೆಪಾಗಿಲು ಆಗಿರಲು ಅದಕ್ಕೆ ಮೈಲಿ, ಇನಾಕ್ಯುಲೇಶನ್, ಇಂಜೆಕ್ಶನ್, ಟಾನಿಕ್‌ಗಳ ಕೈಗಡದ ಕಾವಲನ್ನಿಡುತ್ತಿದ್ದಾನೆ. ಆ ಕಾವಲುಗಾರರು, ತಮ್ಮ ಪ್ರಭಾವವು ಕುಗ್ಗುವಾಗ ಬೇಲಿಯೆದ್ದು ಹೊಲ ಮೆಯ್ದಂತೆ ಶರೀರವನ್ನು ಇಮ್ಮಡಿಯಾದ ದೌರ್ಬಲ್ಯಕ್ಕೆ ಗುರಿಪಡಿಸುತ್ತಿನೆ. ಸೀತರೆ ಕ್ಯಾಲ್ಸಿಯಂ. ಹಸಿವುಗುಂದಿದರೆ ಲಿವರ್ ಎಕ್ಸ್‌ಟ್ರ್ಯಾಕ್ಟ್, ಕಜ್ಜಿಯಾದರೆ ಎಮ್. ಬಿ. ೬೯೩, ನೆಗಡಿಯಾದರೆ ಪೆನಿಸಿಲಿನ್, ಹೊಟ್ಟೆಕಡಿದರೆ ಆಪರೇಶನ್ ಹೀಗೆ ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರಗಳು ಬಿಡಲ್ಪಟ್ಟು, ತನು-ಮನಗಳಿಗೆ ಸ್ವಯಂಸತ್ವ (Resistenal) ವೇ ಇಲ್ಲದಂತಾಗಿದೆ. ಹೀಗೆ ನೂರಾರು ರೀತಿಗಳಿಂದ ದೇಹಧಾತುಗಳನ್ನು ಬುದ್ಧಿಯು ಜಜ್ಜಿ ಜರ್ಜರಿಸುತ್ತಿರಲು, ನಾವು ನೂರು ವರುಷದ ಕನಸನ್ನಾದರೂ ಕಾಣಬಹುದೇ?

ಬುದ್ಧಿಗೆ ಈಗಲಾದರೂ ತನ್ನ ತಪ್ಪು ತಿಳಿಯಬೇಕು. ನೈಸರ್ಗಿಕ ಜೀವನರಹಸ್ಯವು ಬಲಿತು ಬಲಗೊಂಡು ಭೋಗ್ಯರಿದು ಹರಿಯಲು ಕೃತ್ರಿಮ ಆಹಾರ-ವಿಹಾರಗಳ ವಿಘ್ನಗಳು ಬಾರದಂತೆ ಎಚ್ಚರ ಪಡಬೇಕು. ಒಗ್ಗದ ಶೀತೋಷ್ಣ ವಾತಾವರಣಗಳೊಡನೆ ಸಮಾಯೋಗ (Adjust) ಮಾಡಿಕೊಳ್ಳಬಲ್ಲ, ವಿಶ್ವದ ಗುಟ್ಟುಗಳನ್ನೊಡೆದು ಸಾಧನ-ಸೌಕರ್ಯಗಳನ್ನು ಕಲ್ಪಿಸಬಲ್ಲ, ಪ್ರಯೋಗ- ಪರೀಕ್ಷಾನುಭವಗಳಿಂದ ತನುಮನಗಳ ವೃತ್ತಿ-ಪ್ರವೃತ್ತಿಗಳನ್ನು ತಿಳಿದು ವಸುಧೈವಕುಟುಂಬತ್ವವನ್ನು ಕಟ್ಟಬಲ್ಲ ಬುದ್ಧಿಯು, ನಿಸರ್ಗದ ಒತ್ತಾಯದಿಂದ ಬದುಕುವ ಪ್ರಾಣಿಗಳಿಂದ ಕೀಳಾಗಿ ವರ್ತಿಸುವುದು ನಾಚಿಕೆಯ ಸಂಗತಿಯಲ್ಲವೇ? ದೇಹಧಾತುಗಳ ಮೇಲೆ ಬೀಳುತ್ತಿರುವ ದುರಾಹಾರ-ವಿಹಾರಗಳ ವಿಷ—ಮಾದಕತೆಗಳನ್ನು ಪರಿಹರಿಸಿ, ಪ್ರಕೃತಿದತ್ತವಾದ ಶಕ್ತಿಭಾಂಡಾರಗಳಾದ ಸದಾಹಾರ, ಸದಾಚಾರಗಳ ಬುಗ್ಗೆಗಳನ್ನು ತೋಡಲಿ; ಆಪರಿಂದ ತನು-ಮನುಗಳು ಭದ್ರವಾಗಿ ಬಲವಂತವಾಗಿ ನೂರು—ಸಾವಿರ— ವರುಷ ಬಾಳಿ ಮಾನವನಿಗೆ ಸಾರ್ವಭೌಮತ್ವದ ಸಿದ್ಧಿಯು ಕೈಗೂಡುವುದರಲ್ಲಿ ಸಂದೇಹವಿಲ್ಲ.

ಮನೋಹರ ಗ್ರಂಥಮಾಲೆಯ

ಗ್ರಂಥಗಳೆರಡು!

★

'ಬಿತ್ತಿದ ಬೆಳೆ' ತ್ರೀ ಕಾರಂತರ ನಾಟಕ

ಜುಲೈ ಕೊನೆಯ ವಾರದಲ್ಲಿ ಗ್ರಾಹಕರ ಕೈಸೇರುವುದು.

'ರಾಷ್ಟ್ರಪುರುಷ' ತ್ರೀ. ಮಿರ್ಜೀ ಅಣ್ಣಾರಾಯರ

೬೨೦ ಪುಟದ ಚಿತ್ತಾಕರ್ಷಕ ಕಾದಂಬರಿ!

ಆಗಸ್ಟ್‌ನಲ್ಲಿ ತಾರೀಖಿಗೆ ಪ್ರಕಟವಾಗುವುದು.

ರಾಯಾಪುರದಲ್ಲಿ ಸಂಗ್ರಾಹಕ

(ಜನಪದ ಸಾಹಿತ್ಯ ಸಂಗ್ರಹ)

ಶ್ರೀ. ಶಿವೇಶ್ವರ ದೊಡ್ಡಮನಿ, ನವಿಲೂರು.

★

ನುಡಿಯು ಭಕ್ತರೇ,

'ಜನಪದ ಸಾಹಿತ್ಯ ಕೀ ಜಯ್' ಎನ್ನಿರಿ ಮೊದಲು ಒಕ್ಕೊರಲಿನಿಂದ. ಆಮೇಲೆ ಸಂಗ್ರಾಹಕನ 'ಸಲಾಂ' ಸ್ವೀಕರಿಸಿರಿ! 'ಸಲಾಂ-ರೂಪಿ' ನಾನು ಹುಬ್ಬಳ್ಳಿಯ ಹಾಯ್‌ಸ್ಕೂಲಿನಲ್ಲಿ ಕಾರಕೂನನಾಗಿದ್ದಾಗ ಬಿತ್ತು. ಇನ್ನೂ ಮರೆಯುವುದಾಗಿಲ್ಲ. ಹೇಗೆ ಮರೆಯಲಿ?—ಅಲ್ಲಿ ನಾನು ಕೆಲಸಮಾಡುವ ಯೋಗ ಒದಗದಿದ್ದರೆ, ರಾಯಾಪುರದ ಹಾಡುಗಳ ಅರಿವು ನನಗಾಗುತ್ತಿರಲಿಲ್ಲ.

'ನವಿಲೂರೆಲ್ಲಿ? ರಾಯಾಪುರವೆಲ್ಲಿ? ಏನು ದೊಡ್ಡಮನಿಯು ಹೆಚ್ಚು?' ಎಂದೆಲ್ಲ ನಗೆಯಾಡಬೇಡಿ. ರಾಯಾಪುರ ನವಿಲೂರಿನಿಂದ ಮೂರೇ ಮೈಲು ದೂರ. ಆಪ್ತೇಷ್ಟರು ನಮ್ಮೂರಿಗೆ ಬರುವಿರಲ್ಲ!—ಆಗ ನಿಮಗೆ ರಾಯಾಪುರದ ದರ್ಶನ ಮಾಡಿಸುತ್ತೇನೆ.

೧೦-೫-೪೬. ನವಿಲೂರು ಬಿಟ್ಟು ಮುಂಜಾನೆ ವಾಯುವಿಹಾರಕ್ಕೆಂದು ಹೊರಟೆ ರಾಯಾಪುರದತ್ತ. ಬೆಳಿಗಿನ ವಾತಾವರಣಕ್ಕೆ ಮೆಚ್ಚಿ ರಾಯಾಪುರವನ್ನೂ ಮುಟ್ಟುವಷ್ಟು ದೂರ ನಡೆದಿದ್ದೆ. ನನಿಹದ ಹೊಲದಲ್ಲಿ 'ರಸಿಕ'ನೊಬ್ಬ ಹಾಡುತ್ತಿದ್ದ. ನೋಟಾಂ ಪಾಸ್ ಬುಕ್ಕು ಜೇಬಿನಲ್ಲಿತ್ತು. ಮನಸಿ ಕಡಿಮೆಯಾಗಿ ದಳದಳ ಇಳಿದು ಬಹುವಂತಹ ಸ್ಥಿತಿಯಲ್ಲಿದ್ದ Pen ನ್ನೇ ಉಪಯೋಗಿಸಿ ಬರೆದುಕೊಂಡೆ. ಹಾಳೆ ಬರೆಯುವಾಗ ಒಡೆದು ಹೋಯಿತು. ಇಂದು ತಿರುಗಿ ಹಾಡು ನಕಲು ಮಾಡುವಾಗ, ನನಗೆಷ್ಟು ತೊಂದರೆಯಾಗಿದೆಯೋ ನೀವೆ ಊಹಿಸಿ. ಹಾಳೆಯ ಒಡಲ ಗುಟ್ಟನ್ನು Research ಮಾಡಿದ್ದಕ್ಕಾಗಿ ನನಗೆ ನೀವು 'Fees' ಕೊಡುವುದಿಲ್ಲವೇ? ನಾನಂತೂ ಬಿಡುವುದಿಲ್ಲ!

ಜೀವನದ ಅಸರಕ್ಕೆ ಹಾಡುಗಾರನಿಗೆ–ಮೊದಲು ಹಾಡಿದವ–ಹೆಣ್ಣು ಜೀವನದ ನೆರವಿಲ್ಲ. ತಾಯಿಯೇ? ತಂಗಿಯೇ? ಮಡದಿಯೇ? ಇಲ್ಲ—ಒಬ್ಬರದೂ ಇಲ್ಲ. ಹುಟ್ಟಿನಿಂದಲೂ ಈ 'ಇಲ್ಲ' ಎನ್ನುವ ಕೊರಗವನಿಗೆ. ದಿನವಿಡೀ 'ಉಳಿದವರು ಜೀವನವನ್ನು ಸಂದನವನದ ಮಟ್ಟಕ್ಕೇರಿಸುವ' ಬಗೆಯನ್ನು ಅವನು ಕಂಡು, ಬಹಳವಾಗಿ ಹೈರಾಣಗೊಳ್ಳುತ್ತಿರುವನಾದರೂ 'ಹಾಗೆ ಇಲ್ಲ—ಹೀಗೆ ಇಲ್ಲ' ಎಂದು ತೋಡಿಕೊಳ್ಳುವುದರಲ್ಲಿಯೆ ತೊಡಗಿದ ಲವನ ಕದಡಿದ ಜೀವನ, ನುಡಿಗೆ ಬೆಡಗಿತ್ತು ಹಾಡಿಕೊಂಡಿದೆ—ಕೇಳಿ:

" ಕಳ್ಳೀ ಸಾಲ್ಯೊಲದಾಗs ಸುಣ್ಣಳ್ಳೀ ಬಿತ್ತೀರೋ
ಕಲ್ಲಾsರ ಬೈಲೋ—ವಾರ್ಯಾಗ ಹಾದ್ಯೋ,
ಕರ್ಯಕೊಂತs ನನ್ನs ಗುದ್ದಾದ ಕೆರಿ ದಾಟ್ಯೋ
ಗಂಟ್ಹೋತs ಕೊಂಡೋ—ಬರಸ್ಕಿಲ್ಲೋ ಬಾಲ್ಯೋ ॥ ೧ ॥

(ಅವಸರದಲ್ಲಿ ಮರೆತುಬಿಟ್ಟೆ, ಕ್ಷಮಿಸಿ; ನುಡಿಯೊಂದರ ೨–೩ನೆಯ ಸಾಲುಗಳನ್ನು ಎರಡೆರಡು ಸಲ ಎಳೆದು ಹೇಳಿ!)

' ಚೈಂಜಿಕ್ಕೀರೀ ಹೂವೋ, ಪಲಂಜ್ಯೇಲ್ಯೆಕ್ಕೀ ಹೂವೋ
ಕಡ್ಲೊsನಗಿ ಬಣ್ಣಾsದ್ದೂವಳ್ಳೀದಾಗೋ–
ಪಚ್ಚsನ ದಿಕ್ಕನ್ಯಾಗೋ ಹೂವಳ್ಳುವಾಗೋ–
ಮನಿಗೆ ಕರಕೊಣ್ಣೂ ಮಡದ್ಯಿಲ್ಲೋ ಜನವಾ. ೧
ಹರಿಹೊತ್ತಿನ್ಯಾಳೀವ್ಯs ಹೊಚ್ಚಲಾ ಹಾವೂವಾಗೋ
ಬಾಗಲಾ ತೊಳುವೂವು ಎಳಿದ್ಯೋಳಿಸವ್ವೋ—
ಕೈಶಿವಿ ತೊಟುಗೊಂಡೋ—ನವ್ವಲಗರಿ ಕುಬ್ಸೋ
ದೊರಿ ನೋಡನ್ನಾಕ್ಕೋ'!—ಸರಿ ನಾರ್ಕಿನಿಲ್ಲೋ ೨
' ಬಂದ್ಯೇನೋ ಮಗ' ನನ್ನ ಮನಿಯ್ಯಾಗ್ಹಾಯಿನ್ಕಿಲ್ಲೋ
ಏಂದ್ಯೇನೆsಂವಾರೋ–ಅಟ್ಟಡಗಿನಿಲ್ಲೋ–
ಕೇಳ್ಯೇನನ್ನಾಕೋ!—ಬಳಿ ಸಪ್ಪಾನಿಲ್ಲೋ–
ಬಾಳೀಯೊನದಾಗೋ—ಬಪಕಾಡ್ಯೋ–ಮುಳವಾ. ೪
'ಹೂವನs ತಾರಣ್ಣಯ್ಯಾ, ಅವ್ಯಾ–ಅವ್ವನ ಮುಂದೋ
ತಂಗೀ ನನ್ನೆಸರs ಹೇಳ್ಕೆ ಮಡದ್ಯೀಗೋ–
ಯಾತಡದು ತ್ವಾಟಾದs ಚಿಂತ್ಯಾಕ'ನುವಂತಾ
ತಂಗೆವ್ವಾನಿಲ್ಲೋ–ಕಂಗಾದ್ಯೋ–ಜನವಾ! ೫
ಹ್ಯೇಗಾರಾ ಹಿಡಕೊಣ್ಯೋ–ನುಂಗ್ಯಾಜೋದಿನಕೊವ್ಯೆ
ಲೋಕಾದ್ದಂಗಿರುವೂ–ಬಗಿದುಕ್ಯಾ ಜನವಾ.
ಚ್ಯಾತೂರಿ ಊರಾದ್ಯೋ ಇನ್ಯಾಡ್ಡೈಸs ವಿನಕೋ–
ಕಣ್ಣೀನ್ಹಾನಿಯಾಕೋ–ನಿನಗ್ಯಿಂದs ಜನವಾ? ೬

ಇದನ್ನೆಲ್ಲ ಬರೆದುಕೊಳ್ಳುವಾಗ್ಗೆನನ್ನ ಕಣ್ಣುಗಳಲ್ಲಿಯೂ ನೀರು ತುಂಬಿತು—ನನಗೂ ಅಕ್ಕ-ತಂಗಿ ಇಲ್ಲವೆಂದು ನಿಟ್ಟುಸಿರೆಳೆದೆ. ಊರಿಗೆ ಮರಳಿ ಬರುವಾಗ—ಮೂರು ದಿನ ಊಟಕಟ್ಟಿಕೊಂಡು ತಿರುಗಿದರೂ ದೊರೆಯಲಾಗದಂತಹ ಹಾಡು—ಅಕಸ್ಮಾತ್ತಾಗಿ ದೊರೆತ ಉಬ್ಬಿನ ಪರಿಣಾಮವಾಗಿ ನಾನೂ ಹಾಡಿಕೊಂಡೆ:—

' ನೋಪ ತುಂಬ ಇಡು, ನೂರು ಜನ್ಮಕೊಡು,
ಓ, ಆಳಿಸಲೆನ್ನ ಗೋಳು–
ಇಲ್ಲಿ ಹಾಡುವರು–ನನ್ನ ನಾಡವರು–
ನಾ ತುಂಬಿಕೊಳುವೆ ಬಾಳು!'

ದೇವರು ನನಗೆ ನೂರು ಜನ್ಮಕೊಟ್ಟಾಗ, ನನ್ನ ಹಾಡು ಸಾರ್ಥಕವಾದೀತು. ಹೋಗಲಿ, ನನ್ನ ಹಾಡು ನನಗಿರಲಿ. ಮೇಲಿನ ಹಾಡು ಕೇಳಿದಿರಾ? ಹಾಡುಗಾರನಿಗೆ ಧನ್ಯವಾದಗಳನ್ನರ್ಪಿಸಿ—ನನಗೆ ಬೇಡ. ಏಕೆನ್ನುವಿರಾ?—ನಾನು ಸಂಗ್ರಹಿಸಲೆಂದೇನೂ ಅಂದು Previous Programme ಇಟ್ಟುಕೊಂಡಿರಲಿಲ್ಲ. ಅದಕ್ಕೇ ಕೇಳುತ್ತೇನೆ—ನಾನು ಮಾಡಿದ 'ಕಸರತ್ತು' ಏನಿದೆ? ಎಂದು.

ಹರಕೆ ಕೊಡಿರಿ, ಬರುತ್ತೇನೆ—ಮತ್ತೆಲ್ಲಿಯಾದರೂ ಜನಪದ ಸಾಹಿತ್ಯದ ಬಾವುಟ ಏರಿಸಿ.

" ಇತಿ, ಇತಿವಿುತಿಯ " **ಸಂಗ್ರಾಹಕ.**

"ಬಡತನದ ಬಾಳು"

(ಒಂದು ಕತೆ)*

ಶ್ರೀ. 'ವ್ಯಾ. ವೆಂ. ಸು.' ಬೆಂಗಳೂರು

★

ನಮ್ಮ ನಾಡಿನಲ್ಲಿ ಈ ವಿಷದಿಂದ ವ್ಯಥೆ ಪಡದವರು ತೀರ ಕಡಿಮೆ ಜನರು. ಆದರೆ ಒಬ್ಬೊಬ್ಬರ ಬಡತನದ ಬಾಳಿನ ಕತೆ ಒಂದೊಂದು ವಿಧ. ಸುಮಿತ್ರಮ್ಮನಂತಹ ಸಾಧು-ಮುಹಿಳೆಯನ್ನೂ ಆಕೆಯ ಬಡತನ ಕಳ್ಳೆಯನ್ನಾಗಿಸಿತು. ಬಡತನನೇ ಇಂದು ಒಂದು ಮಹಾಪಾತಕವಾಗಿದೆ!

●

"ಅಮ್ಮಾ! ಅಮ್ಮಾ! ಹಸಿವಾಗುತ್ತೇ!! ಏನಾದರೂ ತಿಂಡಿ ಕೊಡಮ್ಮಾ! ಬೆಳಗ್ಗೆ ಸ್ಕೂಲು! ಬೇಗ ಕೊಡಮ್ಮಾ! ಹೊತ್ತಾಯ್ತು....! ಸಿಲ್ಕ್ ಫ್ಯಾಕ್ಟರೀಲಿ ಎಂಟು ಗಂಟೆ ಹೊಡೀತು!"

"ಈಗೇನೂ ಇಲ್ಲ! ಹತ್ತೂವರೆ ಗಂಟೆಗೇ ಬಂದು ಊಟ ಮಾಡಿ! ಸುಮ್ಮನೆ ಹೋಗಿ!"

"ರಾಗೀ ಹುರಿಟ್ಟು ಇದೆಯಲ್ಲಾ, ಕಲಿಸಿಕೊಡಮ್ಮಾ!"

"ಈಗ ಒಂದು ಪಿಡಿಜೆ ಹುರಿಟ್ಟು ಕಲಸಿ ಕೊಡುತ್ತೇನೆ; ತಿಂದು ಹೋಗಿ! ಹತ್ತುವರೆ ಗಂಟೆಗೆ ಬಂದು ಊಟಮಾಡಿ!" ಎಂದು ಹೇಳಿ, ಹುರಿಟ್ಟು ಕಲಸಿಕೊಟ್ಟರು ಸುಮಿತ್ರಮ್ಮನವರು. "ಅಮ್ಮಾ, ಹೋಗ್ಬಿಟ್ಟು ಬರ್ತೇವೆ!" ಎಂದು ಹೇಳಿ ಶೇಷು, ನಾಣಿ ಶಾಲೆಗೆ ಹೊರಟರು. ಇನ್ನೂ ಶಾಲೆಯ ಗಂಟೆ ಹೊಡೆದಿರಲಿಲ್ಲ. ಶೇಷು, ನಾಣಿ ಶಾಲೆಯ ಮುಂದೆ ತಿರುಗಾಡುತ್ತಿದ್ದರು. ಒಬ್ಬ ಸಾಬಿಯು ಗಾಳಿಪಟಗಳನ್ನು ಮಾರುತ್ತ ಶಾಲೆಯ ಮುಂದೆ—ದೀಪದಕಂಬದ ಕೆಳಗೆ—ಕುಳಿತಿದ್ದನು. ಇದನ್ನು ನೋಡಿದ ಶೇಷು ತಕ್ಷಣ ಓಡಿದ ಮನೆಗೆ. "ಅಮ್ಮಾ, ಮೂರ್ಕಾಸಿದ್ರೆ ಕೊಡು! ಗಾಳಿಪಟಕ್ಕೆ! ಮೂರ್ಕಾಸಿಗೆರಡು ಬರುತ್ತೇ!" ಎಂದು ಹೇಳುತ್ತ ಅಳುವುದಕ್ಕಾರಂಭಿಸಿದ. ಸುಮಿತ್ರಮ್ಮನವರ ಹತ್ತಿರ ಮೂರುಕಾಸೂ ಇರಲಿಲ್ಲ. "ಅಪ್ಪಾ ಬರಲೀ, ಕೊಡಿಸುತ್ತೇನೆ" ಎಂದು ಹೇಳಿ ಸಮಾಧಾನಮಾಡಿ ಕಳುಹಿದರು. ಶೇಷು "ಖಂಡಿತ ಕೊಡಿಸಬೇಕು" ಎಂದು ಹೇಳಿ ಶಾಲೆಗೆ ಓಡಿಹೋದ "ಅಯ್ಯೋ! ಕಂದ ಮೂರುಕಾಸು ಕೇಳಿದರೆ ಕೊಡಲಾರದೆ ಹೋದೆ! ನಮ್ಮಂಥ ದೀನರಿಗೆ ದೇವರು ಮಕ್ಕಳನ್ನ್ಯಾಕೆ ಕೊಡುತ್ತಾನೆ? ಅದೇ, ಸಿಲ್ಕ್‌ಮಿಲ್ಸ್ ಮ್ಯಾನೇಜರ್ ಹೆಂಡತಿ ಶಾಂತಾಬಾಯಿಗೆ ಕೊಡಬಾರದೇ! ಒಳ್ಳೆ ಸಿಲ್ಕ್ ಪಟ್ಟು ಹಾಕಿ, ಮುಖಮಲ್ ಟೋಪಿ ಹಾಕಿ, ಸ್ನೋ-ಪೌಡರ್ ಹಚ್ಚಿ, ದೇವರಿಗೆ ಅಲಂಕಾರ ಮಾಡುವ ಹಾಗೆ ಮಾಡ್ತಾರೆ....ಮೂರ್ಹೊತ್ತು ತುಪ್ಪ-ಹಾಲಿನಲ್ಲಿ ಕೈ ತೊಳೆಯಿಸುತ್ತಾರೆ! ಇದೇ ಇವರಿಬ್ಬರೂ ಅವರ್ಮನೇಲಿ ಹುಟ್ಟಿದ್ದರೆ, ಇಷ್ಟೊತ್ತಿಗಾಗಲೆ ಉಪ್ಪಿಟ್ಟು-ಕಾಫಿ ಕೊಡುತ್ತಿದ್ದರು! ಬಡತನ ಎಂಬೋದು ಕೆಟ್ಟದ್ದು!....ಇದು ತಾನೆ ಎಷ್ಟು ದಿವಸ ಇರುತ್ತೇ-? ಇವರಿಬ್ಬರೂ ದೊಡ್ಡವರಾಗುವ ತನಕ ನಮಗೆ ಕಷ್ಟ! ಆಮೇಲೆ ಹೇಗಾದರೂ ಮಕ್ಕಳು ಸಂಪಾದನೆಮಾಡ್ತಾರೆ!" ಎಂದು ದುಃಖಿಸಿ, ತಮಗೆ ತಾನೇ ಸಮಾಧಾನ ಮಾಡಿಕೊಂಡು, ಸುಮಿತ್ರಮ್ಮನವರು ಕಣ್ಣೀರಿಟ್ಟರು. "ಗೋಪಾಲರಾಯ ಇದಾನೇನಮ್ಮಾ!" ಎನ್ನುತ್ತಲೆ, ಇನ್ಶೂರೆನ್ಸ್ ಏಜೆಂಟ್ ನಾರಾಯಣರಾಯನು ಬಂದ, ಕಣ್ಣನ್ನು ಒರಸಿಕೊಳ್ಳುತ್ತಿದ್ದ ಸುಮಿತ್ರಮ್ಮನನ್ನು ನೋಡಿ "ಏನು! ಕಣ್ಣಲ್ಲೆಲ್ಲ ನೀರು!" ಎಂದು ಮುಖ ಮುಖ ನೋಡಿದ. ಧೂಳು ಬಿತ್ತೆಂದು ಸೆರಗಿನಿಂದ ಒರಸಿಕೊಂಡರು. "ನೀವು ಬರೋ ಹೊತ್ತಿನಲ್ಲಿ ಅವರು ಮನೇಲೇ ಇರೋದಿಲ್ಲ! ಆಪರೂಪವಾಗಿ ಬಂದಿದ್ದೀರಿ. ಕೂತ್ಕೊಳ್ಳಿ..! ಒಂದ್ಲೋಟ ಕಾಫೀ ಕುಡಿದುಕೊಂಡು ಹೋಗಿ!" ಎಂದು ಸುಮಿತ್ರಮ್ಮನವರು ಉಪಚರಿಸಿದರು. ನಾರಾಯಣರಾಯ ಕಾಫಿ ಕುಡಿದುಕೊಂಡು ತನ್ನ ಕೆಲಸಕ್ಕೆ ಹೊರಟ. ಇವನು ಹೊರಡುತ್ತಲೇ ಮುಸುರೆ ತೊಳೆದು, ಅನಂತರ ಮೈ ತೊಳೆದು ಕೊಂಡು ಅಡಿಗೆಗೆ ಪ್ರಾರಂಭಿಸಿದರು ಸುಮಿತ್ರಮ್ಮನವರು. ಅನ್ನ ಏನೋ ಬೇಗ ಆಯಿತು; ಆದರೆ ಸಾರಿಗೆ ತೊಗರಿಯ ಬೇಳೆಯೆ ಇರಲಿಲ್ಲ. 'ಸಿಲ್ಕ್‌ಮಿಲ್ಸ್ ಮ್ಯಾನೇಜರ್ ಮನೆಗೆ ಹೋಗಿ, ಶಾಂತಾಬಾಯಿಯನ್ನು ಕೇಳಿ ಒಂದು ಬಟ್ಟಲು ತೊಗರೀಬೇಳೆ ಸಾಲ ತರೋಣ!' ಎಂದು ಒಂದು ಬಟ್ಟಲು ತೆಗೆದುಕೊಂಡು ಹೊರಟರು.

ಸಿಲ್ಕ್‌ಮಿಲ್ಸ್ ರಾಮಚಂದ್ರರಾಯರು ಎಂದರೆ ಆ ಬೀದಿಗೆಲ್ಲ ಗೊತ್ತು; ಬೀದಿಗೊಂದಲ್ಲದೆ ಊರಿಗೆಲ್ಲ ಗೊತ್ತು. ಇವರ ಮನೆಯೇ ಊರಿಗೆಲ್ಲ ದೊಡ್ಡ ಮನೆ. ಹೊಸದಾಗಿ ಕಟ್ಟಿಸಿದ ಅಮೇರಿಕನ್ ಮಾದರಿಯ ಬಂಗಲೆ. ಕಾಂಪೌಂಡ್ ಒಳಗೆ ಹೂವಿನ ಗಿಡಗಳು. ಗೇಟಿನ ಬಳಿ ಎರಡು ಬುಲ್ಡಾಗ್‌ಗಳು, ತಮ್ಮ ರಾಯರ ಶೀವಿಯನ್ನು ತಾನೇ ತೋರಿಸುತ್ತಿದ್ದುವು. ರಾಯರ ಪತ್ನಿಯೇ ಶಾಂತಾಬಾಯಿ. ಮಹಿಳಾಸಮಾಜದ ಅಧ್ಯಕ್ಷೆಣಿಯಾಗಿದ್ದರು. ಇವರಿಗಾಗಿಯೇ ರಾಮಚಂದ್ರರಾಯರು ತಿಂಗಳಿಗೆ ಇನ್ನೂರು ರೂಪಾಯಿಯನ್ನು ವಿಾಸಲಾಗಿಟ್ಟಿದ್ದರು. ಮನೆಯ ಬೀರುಗಳಲ್ಲಿದ್ದ ಕುಟೀಕುರ ಪೌಡರ್ ಡಬ್ಬಿಗಳು, ಸ್ನೋ, ಹೇರಾಯಿಲ್, ಬಾಚಣಿಗೆ, ಲಿಪ್‌ಸ್ಟಿಕ್ಕು (Lipstick) ಇವು-

* ಜಯಂತಿಯ ಕತೆಗಳ ಮೇಲಾಟಕ್ಕೆ ಬಂದ ಒಳ್ಳೆಯ ಕತೆಯೊಂದಿದು.
ಸಂ. ಜ.

ಗಳನ್ನು ನೋಡಿದರೆ, ಅಂಗಡಿಯನ್ನೇ ತೆಗೆದು ತೋಡಿದ ಹಾಗೆ ಇರುತ್ತಿತ್ತು. ಬೋರ ಮನೆಯ ಮುಖ್ಯ ಜವಾನ. ಇವನ ಕಾರುಭಾರು ಮನೆಯ ವರಾಂಡದಿಂದ ಹಿಡಿದು ಹಿತ್ತಲಕಡೆಯ ಬಾಗಿಲವರೆಗೂ ಇತ್ತು. ರಾಮಚಂದ್ರರಾಯರು ಶಾಂತಾಬಾಯಿಗೆ ಜಲತರಂಗ ಹೇಳಿಸಲು ವಿದ್ವಾನ್ ವೆಂಕಟೇಶಯ್ಯನವರನ್ನು ನೇಮಿಸಿದ್ದರು. ವೆಂಕಟೇಶಯ್ಯನವರಿಗೆ ತಿಂಗಳಿಗೆ ೫೦ರೂಪಾಯಿ ಕೊಡುತ್ತಿದ್ದರು. ಪ್ರತಿದಿನ ಒಂಬತ್ತೂವರೆ ಗಂಟೆಗೆ ಬಂದು ಅವರು 'ಜಲತರಂಗ' ಬಾರಿಸುವುದನ್ನು ಹೇಳಿಕೊಡುತ್ತಿದ್ದರು ಸುಮಿತ್ರಮ್ಮನವರ ಗಂಡ ಗೋಪಾಲರಾಯನು, ಇವರ ಸಿಲ್ಕ್‌ಮಿಲ್ಸ್ ಆಫೀಸಿನಲ್ಲಿ ಗುಮಾಸ್ತೆಯಾಗಿದ್ದನು ಸಂಬಳ ಕೇವಲ ತಿಂಗಳಿಗೆ ೨೫ ರೂಪಾಯಿ; ಆದರೂ ಚೆನ್ನಾಗಿ ಕೆಲಸ ಮಾಡಿ, ರಾಮಚಂದ್ರರಾಯರ ವಿಶ್ವಾಸ ಪಡೆದಿದ್ದನು. ಇದರಿಂದಲೇ ಶಾಂತಾಬಾಯಿಗೂ ಸುಮಿತ್ರಮ್ಮನವರಿಗೂ ಸ್ನೇಹವಾದದ್ದು.

ಸುಮಿತ್ರಮ್ಮನವರು ಕೈಯಲ್ಲಿ ಬಿಸಿಯ ಬಟ್ಟಲನ್ನು ಹಿಡಿದು ಕೊಂತು ಗೇಟುಬಾಗಿಲನ್ನು ತೆಗೆದರು. ನಾಯಿಗಳು ಬೊಗಳಲಾರಂಭಿಸಿದುವು. ಬೋರ ಬಂದು ನಾಯಿಯನ್ನು ಕಟ್ಟಿಹಾಕಿದ. ಸುಮಿತ್ರಮ್ಮನವರು ಒಳಕ್ಕೆ ಹೋದರು. ಶಾಂತಾಬಾಯಿ ಎಣ್ಣೆನೀರು ಹಾಕಿಕೊಳ್ಳುತ್ತಿದ್ದರು. ಇವರು ಬಂದುದನ್ನು ಬೋರನಿಂದ ತಿಳಿದ ಶಾಂತಾಬಾಯಿ "ಕೂತ್ಕೊಳ್ಳೀ; ನೀರ್ಹಾಕಿಕೊಂಡು ಬರ್ತೇನೆ!" ಎಂದು ಬಚ್ಚಲುಮನೆಯಿಂದಲೆ ಗರ್ಜಿಸಿದರು. ಬೋರ ಬಂದು ಚಾಪೆಹಾಸಿದ. ಸುಮಿತ್ರಮ್ಮನವರು ಕುಳಿತುಕೊಂಡರು.

ಒಂಬತ್ತುವರೆ ಗಂಟೆ ಆಯಿತು. ವಿದ್ವಾನ್ ವೆಂಕಟೇಶಯ್ಯನವರು ಬಂದರು—ಪ್ರತಿದಿನದಂತೆ. 'ಮೇಷ್ಟ್ರು ಬಂದ್ರು' ಎಂದು ಕೂಗಿದ ಬೋರ. 'ಮಹಡಿಯ ಮೇಲೆ ರತ್ನಗಂಬಳ ಹಾಸಿ ಕುಳಿತುಕೊಳ್ಳೀ ಅಂತ ಹೇಳು' ಎಂದರು ಅಮ್ಮಾವ್ರು ಬೋರ ರತ್ನಗಂಬಳ ಹಾಸಿದ. ವೆಂಕಟೇಶಯ್ಯನವರು ಪೋರ್ಸಲಿನ್ ಬಟ್ಟಲುಗಳನ್ನು ಇಟ್ಟು, ನೀರು ಹಾಕಿ, ಬಾರಿಸಲು ಸಿದ್ಧರಾಗಿದ್ದರು. ಸ್ವಲ್ಪ ಹೊತ್ತಾದ ಮೇಲೆ ಬಚ್ಚಲುಮನೆಯ ಒಳಗಿನಿಂದಲೇ "ಬೋರಾ! ಇವತ್ತು ನನಗೆ ಆಯಾಸವಾಗಿದೆ; ಪಾಠ ಬೇಡಾ ಅಂತ ಹೇಳು" ಎಂದರು ಶಾಂತಾಬಾಯಿ. ಬೋರ ಬಂದು ವೆಂಕಟೇಶಯ್ಯನಿಗೆ ತಿಳಿಸಿದ. ಸರಿ, ತನ್ನ್ಮ್ಯವಲ್ಲಿಯನ್ನು ಭುಜದ ಮೇಲೆ ಹಾಕಿಕೊಂಡು ಎದ್ದರವರು. ಪಕ್ಕದಲ್ಲೇ ಇದ್ದ ಆಯರ್ನ್ ಸೇಫಿನ ಮೇಲೆ ಕಣ್ಣು ಬಿತ್ತು. ನೀರುಹಾಕಿಕೊಳ್ಳೋಕೆ ಹೋದಾಗ ಶಾಂತಾಬಾಯಿ ಬೆಂಡೋಲೇನ, ಮೂಗುಬಟ್ಟನ್ನು, ಕೊರಳಲ್ಲಿದ್ದ ಚಿನ್ನದ ಸರವನ್ನು ತೆಗೆದು ಇಟ್ಟಿದ್ದರು. ಸುತ್ತಲೂ ನೋಡಿದರು. ಯಾರೂ ಇರಲಿಲ್ಲ. ಇದೇ ಸಮಯವೆಂದು ಚಿನ್ನದ ಸರವನ್ನು ಮಾತ್ರ ಜೇಬಿನೊಳಗೆ ಇಟ್ಟುಕೊಂಡು, ಆ ಮೇಷ್ಟ್ರು ಮಹಡಿಯ ಮೆಟ್ಟಿಲನ್ನು ಇಳಿದರು. "ಹೋಗ್ಬಿಟ್ಟು ಬರ್ತೀನಿ ಅಂತ ಹೇಳು ಬೋರಾ" ಎಂದು ಹೇಳಿ ಹೊರಟುಹೋದರು. ಸ್ವಲ್ಪ ಹೊತ್ತಾದ ಮೇಲೆ ಶಾಂತಾಬಾಯಿ ನೀರ್ಹಾಕಿಕೊಂಡು, ಬಚ್ಚಲುಮನೆಯಿಂದ ಹೊರಗೆ ಬಂದರು.

"ಏನು! ಸುಮಿತ್ರಮ್ಮನವರೇ! ಇದೇನು ಅಪರೂಪವಾಗಿ! ಅದೂ ಬೆಳಗ್ಗೆ ಬಂದಿದ್ದೀರಿ?"

"ಏನು ಇಲ್ಲ! ಒಂದು ಬಟ್ಟಲು ತೊಗರೀಬೇಳೆ ಸಾಲ ತೆಗೆದುಕೊಂಡು ಹೋಗೋಣಾ ಅಂತ ಬಂದೆ! ಏನು? ಎಣ್ಣೆನೀರು ಹಾಕಿಕೊಂಡ್ರಾ?"

"ಹೂಂ. ಬಹಳ ದಿವಸ ಆಗಿತ್ತು ನೀರ್ಹಾಕಿಕೊಂಡು. ತ್ಹಾಳಿ, ನೀರೆ ಉಟ್ಟುಕೊಂಡು, ಬೆಂಡೋಲೆ ಮೂಗ್ಬಟ್ಟು ಇಟ್ಟುಕೊಂಡು ಬಂದು ಕೊಡಿಸುತ್ತೇನೆ; ಕೂತ್ಕೊಳ್ಳೀ!" ಎಂದು ಹೇಳಿ ಮೆಟ್ಟಲು ಹತ್ತಿದರು ಜಾರ್ಜೆಟ್ ಸೀರೆ ಉಟ್ಕೊಂಡ್ರು. ಆಯರ್ನ್‌ಸೇಫ್ (ಕಬ್ಬಿಣದ ಪೆಟ್ಟಿಗೆ) ಮೇಲೆ ಕಣ್ಣು ಬಿತ್ತು. ದಿಗ್ಭ್ರಾಂತರಾದರು. ಎದೆ ಡವಡವ ಎನ್ನಿಸಿತು. ಹಿಂದೆ ನೋಡಿದರು, ಮುಂದೆ ನೋಡಿದರು, ಪಕ್ಕದಲ್ಲಿ ನೋಡಿದರು; ಚಿನ್ನದ ಸರ ಇರ್ಲಿಲ್ಲ. ಬೆಂಡೋಲೆ ಮೂಗ್ಬಟ್ಟನ್ನು ಇಟ್ಟುಕೊಂಡು, ದಡದಡನೆ ಮಹಡಿಯಿಂದಿಳಿದರು.

"ಸುಮಿತ್ರಮ್ಮನೋರೇ, ಮಹಡಿಯ ಮೇಲೆ ಹೋಗಿದ್ದಿರಾ?!"

"ಇಲ್ಲಮ್ಮಾ ಇಲ್ಲ! ನಾನೇಕೆ ಹೋಗ್ಲಿ? ನನಗೇನು ಕೆಲಸ?"

"ಅಯ್ಯೋ, ಅಲ್ಲಿ ಬೆಂಡೋಲೆ, ಮೂಗ್ಬಟ್ಟು, ಚಿನ್ನದ ಸರ ಇಟ್ಟಿದ್ದೆ. ಬೆಂಡೋಲೆ ಮೂಗ್ಬಟ್ಟು ಇದೆ, ಸರ ಇಲ್ಲ.... ಮನೆಗೆ ಬಂದು ಏನಂತಾರೋ— ನಮ್ಯಯಜಮಾನರು!"

"ಹುಡುಕಿ, ಅಲ್ಲೇ ಎಲ್ಲೋ ಬಿದ್ದಿರುತ್ತೇ...ಎಲ್ಲಿಹೋಗುತ್ತೇ!"

"ಅಲ್ಲೂ ಇಲ್ಲ! ಇಲ್ಲೂ ಇಲ್ಲ! ನೀವು ಸ್ವಲ್ಪ ಇರಿ! ನಮ್ಮಯಜಮಾನರು ಬರೋತನಕ!"

"ಅಯ್ಯೋ, ಇರ್ತೀನಿ, ಅದಕ್ಕೇನು? ನಾನೇನು ಕಳ್ಕೀನೇ— ಓಡಿಹೋಗೋಕೆ?"

ಆಷ್ಟೊತ್ತಿಗೆ ಸರಿಯಾಗಿ ರಾಮಚಂದ್ರರಾಯರು ಬೂಡ್ಸಿನ ಶಬ್ದಮಾಡಿಕೊಂಡು ಬಂದರು. "ಇದೇನೇ ಶಾಂತಾ! ತಲೆ ಕೆದರ್ಕೊಂಡು ಹೀಗೆ ನಿಂತಿದ್ದಿ?" ಎಂದು ಕೇಳಿದರು. "ಇಲ್ಲಾ! ಈಗ್ತಾನೇ ನೀರ್ಹಾಕಿಕೊಂಡೇ!"

"ಅದ್ಯಾಕೆ ಮುಖ ಸಪ್ಪಗಿದೆ? ಏನು ಸಮಾಚಾರ?"

"ಏನೂ ಇಲ್ಲ, ರೂಮಿಗೆ ಬನ್ನಿ ಹೇಳ್ತೀನಿ!" ಎಂದು ಹೇಳುತ್ತ ರೂಮಿಗೆ ಕರೆದುಕೊಂಡು ಹೋದರು:

"ನೋಡಿ! ನೀರ್ಹಾಕಿಕೊಳ್ಳೋಣಾ ಅಂತ ಬೆಂಡೋಲೆ, ಮೂಗ್ಬಟ್ಟು, ಸರಾನ ತೆಗೆದು ಐರನ್‌ಸೇಫ್ ಮೇಲೆ ಇಟ್ಟಿದ್ದೆ. ಬೆಂಡೋಲೆ–ಮೂಗ್ಬಟ್ಟು ಇವೆ; ಸರ ಇಲ್ಲವೇ ಇಲ್ಲ!"

"ಐರನ್‌ಸೇಫ್ ಒಳಗೆ ಇಷ್ಟಾತ್ತೋ— ಮೇಲಿಡ್ತಾರೋ? ಅದಕ್ಕೆ ಬೇರೆ ದಂಡ ಇಟ್ಟಿ, ಆರ್ನೂರ್ರೂಪಾಯ್ನ!"

"ನೋಡಿ! ನಾ ನೀರು ಹಾಕಿಕೊಳ್ತಾ ಇರೋವಾಗ, ಸುಮಿತ್ರಮ್ಮನೋರು ಬಂದ್ರು. ಬೋರ ಹೊರಗೆ ಅಂಗಳಗುಡಿ-

ತ್ತಿದ್ದ. ಆ ಹೊತ್ತಿನಲ್ಲಿ ಸುಮಿತ್ರಮ್ಮ ಕದ್ದಿದ್ದರೂ ಕದ್ದಿರ-
ಹುದು!"

'ಇರಬಹುದು! ಆದ್ರೆ ಈಗ ಅವರ್ನ ಕೇಳೋದು ಹ್ಯಾಗೆ?!"

"ಹ್ಯಾಗೇನು! ತಗೊಂಡಿದ್ರೆ ಕೊಟ್ಟುಬಿಡಿ, ನಿಮ್ಮನ್ನೇನೂ
ಾಡೋಲ್ಲಾ ಅನ್ನಿ!.... ಕೊಡ್ತಾರೆ..."

"ಸರಿ! ಕೇಳೋಣಾ ಬಾ!" ಎಂದು ಹೊರಗೆ ಬಂದರು,
ನುಚಂದ್ರರಾಯರು. ಶಾಂತಾಬಾಯಿಯೂ ಅವರ ಹಿಂದೆ
ನುಸಿದರು. "ಸುಮಿತ್ರಮ್ಮೋರೇ! ಇವಳ ಸರಾನ ತಗೊಂಡಿದ್ರೆ
ಟ್ಟುಬಿಡಿ! ನಿಮ್ಮನ್ನೇನೂ ಮಾಡೋಲ್ಲ!" ಅಂತ ಅಂದ್ರು
ಯರು.

'ಅಯ್ಯೋ! ಶಾಂತಾಬಾಯಿ! ನಾ ಇಂಥ ಕೆಲಸ ಮಾಡ್ತೀನೇ?
ನು ನಿಮ್ಮ ಮನೆಗೆ ಬಂದಿದ್ದೇ ತಪ್ಪಾಯಿತು! ಬಡತನವೇ
ಕ್ಕೆ ಮೂಲ! ಅಯ್ಯೋ, ನಾ ಖಂಡಿತ ತಗೊಂಡಿಲ್ಲ....!
ಾದರೆ ನಿಮ್ಮ ಸೀರೆ ಕೊಡಿ, ಅದು ಉಟ್ಟುಕೊಂಡು ಇದನ್ನ
ಟ್ಟಕೊಡತೀನೆ..ಅಷ್ಟು ಅನುಮಾನ ಇದ್ರೇ....!"

ತಗೊಳ್ಳೀ ಸೀರೆ!" ಎಂದು ಶಾಂತಾಬಾಯಿ ಸೀರೆ ಕಂದ್ಕೊ
ು ಸರ! ಸುಮಿತ್ರಮ್ಮ, ತಮ್ಮ ಸೀರೆ ಬಿಚ್ಚಿ, ಅಳುತ್ತಾ
ತವಿದರು ಅನಂತರ ತಮ್ಮ ಸೀರೆ ತಾವು ಉಟ್ಟುಕೊಂಡು
ಸೀರೆ ಬಿಚ್ಚಿಕೊಟ್ಟರು. ಆಷ್ಟೊತ್ತಿಗೆ ಸರಿಯಾಗಿ ಶೇಷು,
"ನಮ್ಮಮ್ಮ ಇದ್ದಾರೆಯೆ?' ಅಂತ ಬಂದು "ಇದೇನೋ!
ೀ...! ಮನೆಗೆ ಹೋಗಿ" ಎಂದು ಸುಮಿತ್ರಮ್ಮ, ಆ ಹುಡು-
ಬಾಗಿಲಶನಕ ಬರುವುದಕ್ಕೆ ಮುಂಚೇನೇ ಗದರಿಸಿ ಕಳುಹಿ-
ಸಿ "ಬೇಗ ಬಾಮ್ಮಾ! ಹಸಿವಾಗುತ್ತೇ" ಎಂದವರು ಕೂಗಿ
ಹು ಹೋದರು. ಹುಡುಗರು ಬಂದರೂ ಭಯ ಪಾಪ!—
ತ್ರಮ್ಮನವರಿಗೆ. ಕಾರಣ 'ಹುಡುಗರ ಕೈಲಿ ಸರ ಕೊಟ್ಟು
ಸಿದರು' ಅಂತ ಎಲ್ಲಿ ಅನುಮಾನ ಪಡುತ್ತಾರೋ ಎಂದು.
ಗರನ್ನು ಗದರಿಸಿ ಅಟ್ಟಿಬಿಟ್ಟರು.

ಾಂತಾಬಾಯಿ, ಈಗಲಾದರೂ ಅನುಮಾನ ಹೋಯಿತೇ?
ಮನೆಗೆ ಹೋಗಲೇ?"

ೋಗಿ" ಎಂದು ಮುಖ ಗಂಟುಹಾಕಿಕೊಂಡು ನುಡಿದರು.
! ಒಂದು ಬಟ್ಟಲು ತೊಗರೆಯುಜೇಳೆ ಸಾಲ ತರಲು ಹೋಗಿ,
ಸರ ಆಪವಾದ ಹೊಂದಿ, ಮನೆಗೆ ಬಂದರು ಸುಮಿತ್ರಮ್ಮ
ಡುತ್ತ. "ಅಮ್ಮಾ! ಯಾಕಲ್ಲೀಯಮ್ಮಾ?" ಎಂದು
ೀಷ-ನಾಣಿ ತಾಯಿಯನ್ನು ಕೇಳಿದರು. "ನಿಮಗೇನ್ರೋ!
ಸ್ರಿ!" ಎಂದು ಗದರಿಸಿ ಕಣ್ಣೀರು ಒರಸಿಕೊಂಡರು.
ಹುಡುಗರು ಜೋರಾಗಿ ಉಸಿರಾಡಲಿಲ್ಲ. ಪುನಃ ತಾನೇ
ಸಿಕಾಯಿ ಹಾಕಿ ಕಲಸಿ ಉನ್ನತಿನ್ನಿ!" ಎಂದರು. ಶೇಷು,
ತಾವೇ ಹಾಕಿಕೊಂಡು ಉಂಡು, ಆಟಕ್ಕೆ ಹೊರಟರು.
ಸುಮಿತ್ರಮ್ಮ ಮಾತ್ರ ಊಟ ಮಾಡಲೇ ಇಲ್ಲ. ಈ
ಲ್ಲಿ ಇನ್ನ ದಾರಿಗೆ ಬೇಕು? "ಬಡತನಕ್ಕೆ ಅಳುವೆಯೋ
ಬ್ರಹ್ಮಹತ್ಯಕ್ಕೆ ಅಳುವೆಯೋ!" ಎಂಬ ಗಾದೆಯಂತೆ ಆಯಿತು.
ಸುಮ್ಮನೇ ಹಣೆಯಮೇಲೆ ಕೈಯೂರಿಕೊಂಡು ಕುಳಿತರು. ಬೆಳಿಗ್ಗೆ
ಬಂದಿದ್ದ ಇನ್ಶೂರೆನ್ಸ್ ನಾರಾಯಣರಾಯ ಪುನಃ ಬಂದ.

"ಏನು! ಸುಮಿತ್ರಮ್ಮನೋರೆ?! ಗೋಪಾಲರಾಯ
ಬಂದನಾ?"

"ಇಲ್ಲ! ಅದೇನು! ಪುನಃ ಬಂದ್ರಲ್ಲಾ!"

"ನನ್ನತ್ತಿರ ಒಂದು ಚಿನ್ನದ ಸರ ಇದೆ; ಅದನ್ನೆ ನಿಮ್ಮ
ಗೋಪಾಲರಾಯ ಖರೀದಿ ಮಾಡಿಸಿ ಕೊಡುತ್ತಾನೇನೋ ಅಂತ
ಬಂದೆ! ಬೆಲೇನೂ ಕಡಿಮೆ! ಸಾವಿರ ರೂಪಾಯಿ."

"ನಿಮಗೆಲ್ಲಿತ್ತು?"

"ನನ್ದಲ್ಲ ಅದು! ಆ ಸಂಗೀತದ ಮೇಷ್ಟು ಇದಾನಲ್ಲಾ
ವೆಂಕಟೇಶಯ್ಯ? ಅವನದು ಅದು. ಅವನು 'ಮಾರಿಕೊಡು,
ನಿನಗೆ ಐವತ್ತು ರೂಪಾಯಿ ಕೊಡುತ್ತೇನೆ' ಅಂತ ಕೊಟ್ಟ."

ತಕ್ಷಣ ಸುಮಿತ್ರಮ್ಮನವರಿಗೆ ಸತ್ತು ಬದುಕಿದಷ್ಟು ಆನಂದ-
ವಾಯಿತು "ನೋಡಿ. ನಾರಾಯಣರಾಯ್ರೇ, ಬೆಳಿಗ್ಗೆ ರಾಯರ
ಮನೆಗೆ, ಅದೇ ಸಿಲ್ಕ್ ಮಿಲ್ಸ್ ಮ್ಯಾನೇಜರ್..ಹೋಗಿದ್ದೆ..
ತೊಗರೀ ಬೇಳೆ ಸಾಲ ತರೋಕೆ!....ಅವರ ಮನೇಲಿ ಹೀಗೆ ಹೀಗೆ
ನಡೆಯಿತು.." ಎಂದು ಆದದ್ದನ್ನೆಲ್ಲಾ ಹೇಳಿದರು ಕಣ್ಣೀರಿಡುತ್ತ.
'ಅಯ್ಯೋ! ಅದಕ್ಯಾಕೆ ಅಳುತ್ತೀರಿ, ನಾ ಸರಿಮಾಡ್ತೀನಿ!....
ಬಡವರು ಅಂದ್ರೆ ಎಲ್ಲಾರೂ ಹೀಗೇನೇ.....ಎಂಥ ಕೆಲಸ ಮಾಡಿ-
ದಾನೆ ವೆಂಕಟೇಶಯ್ಯ...ಈಗಲೇ ಅವನ ಮನೆಗೆ ಹೋಗ್ತೀನಿ....
ನಿಮ್ಮ ಮಾನವನ್ನು ಉಳಸತೀನಿ!" ಎಂದು ಸಮಾಧಾನ
ಮಾಡಿ ಹೊರಟ ನಾರಾಯಣರಾಯ.

* * *

ವೆಂಕಟೇಶಯ್ಯನವರು "ಜಯ ಭಾರತ್" ಪೇಪರ್
ಓದುತ್ತಾ ಈಸೀಛೇರ್ಕೇಲೆ (ಆರಾಮು ಕುರ್ಚಿ) ಕುಳಿತಿದ್ದರು.
ದೇಶದ ವಿಷಾದ ಓದುವವರಲ್ಲೇ ನಿರವರಾಗಿದ್ದ ವೆಂಕಟೇಶಯ್ಯ,
ನಾರಾಯಣರಾಯನ ಬೂಡ್ಸಿನ ಶಬ್ದಕೇಳಿ ಬಾಗಿಲಕಡೆ ನೋಡಿ-
ದರು: "ಓಹೋ! ಬನ್ನಿ ಒಳಕ್ಕೆ! ನಾ ಬೆಳಿಗ್ಗೆ ಹೇಳಿದ್ದೇ-
ನಾಯ್ತು!?" ಎಂದರು ಆತುರದಿಂದ ನಾರಾಯಣರಾಯ
ಪಕ್ಕದಲ್ಲಿದ್ದ ಕುರ್ಚಿಯ ಮೇಲೆ ಕುಳಿತ ಪೇಪರ್ ಪೆಗೆದು-
ಕೊಂಡು ಓದಿದ. ಒಂದು ಮೂಲೆಯಲ್ಲಿ "ಕಳೆದು ಹೋಗಿದೆ"
ಎಂದು ತಲೆಬರೆಹ ಪ್ರಕಟವಾಗಿತ್ತು. ನೋಡಿದ! ಅದೇ ಸಿಲ್ಕ್
ಮಿಲ್ಸ್ ರಾಮಚಂದ್ರರಾಯರು, ಆಗಲೇ ಪೇಪರ್ನಲ್ಲೂ ಹಾಕಿಸಿ-
ದ್ದರೂ. ಸರಿ! ವೆಂಕಟೇಶಯ್ಯ ತನ್ನ ಮಾತಿಗಾರಂಭಿಸಿದ:

"ಅಂತೂ ನಿಮ್ಮಿಂದಲೇ ಈ ಕೆಲಸ ಆಗಬೇಕು!"

"ಮಾಡೇನೋ ಕೊಡ್ತೀನಿ; ಆ ಸರ ನಿಮಗೆಲ್ಲಿತ್ತು?"

"ಅದೇನು ಹಾಗೆ ಕೇಳ್ತೀರಿ?"

"ಯಾಕೇ ಅಂದ್ರೆ, ಸಿಲ್ಕ್ ಮಿಲ್ಸ್ ಮ್ಯಾನೇಜರ್ ಹೆಂಡತಿ

ಶಾಂತಾಬಾಯಿಯು ಹತ್ತಿರ ಈ ಸರ ಇತ್ತು. ಅವಶ್ಯನೇಲಿ ಬೆಳಗ್ಗೆ ಒಂಬತ್ತಗಂಟೆ ಸಮಯದಲ್ಲಿ ಕಳ್ಳತನವಾಯಿತಂತೆ, ನೀವು ಪಾಠ ಹೇಳೋದಕ್ಕೆ ಹೋದಾಗ!" ವೆಂಕಟೇಶಯ್ಯನ ಎದೆ ಡವ ಡವ ಎಂದಿತು. ಕಾಲು ನಡುಗಲಾರಂಭಿಸಿತು. ದಿಕ್ಕೇ ತೋಚದ ಹಾಗೆ ಆಯಿತು. ಪಣೆಯ ಮೇಲೆ ಕೈಹಚ್ಚಿಕೊಂಡ.

"ನಿಮಗೆ ಹ್ಯಾಗೆ ತಿಳೀತು! ಈ ವಿಷಯ?"

"ಮಧ್ಯಾಹ್ನ....ಆದೇ ಮಿಲ್‌ನಲ್ಲಿ ಗುಮಾಸ್ತೆಯಾಗಿದ್ದಾನಲ್ಲ ಆ ಗೋಪಾಲರಾಯ...ಅವನ ಮನೆಗೆ ಹೋಗಿದ್ದೆ. ಅವನ ಹೆಂಡತಿ ಸುಮಿತ್ರಮ್ಮ ಹೇಳಿದರು. ಆಕೆ ಬೆಳಗ್ಗೆ ನಿಮ್ಮಾಯರ ಮನೆಗೆ ತೊಗರೀಬೇಳೆ ಸಾಲಕ್ಕೆ ಹೋಗಿದ್ದರಂತೆ. ಆಗ ನೀವು ಪಾಠ ಹೇಳೋಕೆ ಹೋಗಿದ್ದಿರಂತೆ. ಆಗ ಕಳವು ಆಯ್ತಂತೆ. ಅಷ್ಟ್ಯಾಕೆ! ನೋಡಿ ಇಲ್ಲಿ!" ಎಂದು 'ಜಯಭಾರತ' ಪೇಪರನ್ನು ತೋರಿಸಿದ. ವೆಂಕಟೇಶಯ್ಯ ಓದಿ ನೋಡಿ, ಉಸಿರಾಡದೆ ಚಕಿತರಾದರು. ಇವರ ಮುಖ ನೋಡಿದ ನಾರಾಯಣರಾಯನಿಗೆ "ಇವನ್ದೇ ಕೆಲಸ" ಅಂತ ತಿಳಿಯಿತು. "ವೆಂಕಟೇಶಯ್ಯನವರೇ, ಏನಾದರೂ ಮಾಡಿ ಆ ಸರಾನ ರಾಯರ ಮನೆಗೆ ತಲುಪಿಸಿ! ಇದು ಜೆನ್ನಾಗಿರೋಲ್ಲ ನೀವು ಊರಲ್ಲೆಲ್ಲಾ ರ್ಯಾನೆಯಲ್ಲೂ ಪಾಠಹೇಳ್ತೀರಿ; ಈ ವಿಚಾರ ಹರಡಿದರೆ ನಿಮ್ಮಗೌರವಕ್ಕೆ ಕಡಿಮೆ. ನಾನು ಈ ರೀತಿ ಹೇಳ್ತೀನೀ ಅಂತ ಕೋಪಿಸಿಕೊಳ್ಳಬೇಡಿ. ಆಗಲೇ ಗೋಪಾಲರಾಯನ ಮನೆಗೂ ತಿಳಿದಿದೆ. ನಾನು ನಿಮಗೆ ಸಹಾಯಮಾಡ್ತೇನೆ!" ಎಂದು ಗಿಲೀಟ್ ಹಾಕಿದ ವೆಂಕಟೇಶಯ್ಯ ತೊದಲುತ್ತಾ "ನನಗೇನು ಕೋಪ ಇಲ್ಲಾ; ಆದರೆ ಅದನ್ನ ತಲಪಿಸುವುದು ಹೇಗೆ?" ಎಂದು ಕೇಳಿದ.

"ನಿಮಗ್ಯಾಕೆ? ನಾನು ಆ ಕೆಲಸ ಮಾಡ್ತೀನಿ, ಕೊಡಿ!"

"ಸರಾನೇನೋ ಕೊಡತೇನೆ; ಆದರೆ ಯಾರಿಗೂ ತಿಳಿಯದ ಹಾಗೆ ಹ್ಯಾಗೆ ಮಾಡ್ತೀರಿ?"

"ರಾಯರ ಮನೇಲಿ ಅಡಿಗೆ ಮಾಡ್ತಾನಲ್ಲಾ...ಆ ಅನಂತಾಚಾರ್ರು, ಅವನು ನನಗೆ ಗೊತ್ತು. ಅವನಿಗೆ ಹತ್ತುರೂಪಾಯಿ ಕೊಟ್ಟು, ಈ ಕೆಲ್ಸಾ ಮಾಡು ಅಂದ್ರೆ ಸದ್ದಿಲ್ಲದೆ ಮಾಡ್ತಾನೆ!"

"ಅವನು ಹ್ಯಾಗೆ ಗೊತ್ತು ನಿಮಗೆ?"

"ಅವನೇ? ಸರಿಹೋಯ್ತು! ಅವನಿಗೆ ೧೦೦೦ರೂ ಲಾಟರೀಲಿ ಬಂತು, ಎರಡು ವರ್ಷದ ಹಿಂದೆ. ಪೇಪರ್ನಲ್ಲಿ ಬಂದಿತ್ತು ಅವನ ಹೆಸರು—ಅಡ್ರೆಸ್ಸು! ಸರಿ! ನಾನು ಹೋದೆ. ಗೊತ್ತೇ ಇದೆಯಲ್ಲಾ ನನ್ನ ಕೆಲಸ; ಇನ್ಷೂರ್ ಮಾಡಿಸಿದೆ!"

"ಒಳ್ಳೆಯವನೇ ಸಿಕ್ಕಿದ. ಸರಾನ ತಗೊಳ್ಳಿ; ೧೦ ರೂಪಾಯಿ ತಗೊಳ್ಳಿ! ಈ ಕೆಲಸಾನ ಇನ್ಯಾರ ಕಿವೀಗೂ ಬೀಳಸಬೇಡಿ!" ಎಂದು ಹೇಳಿ, ಕಿಸೆಯಿಂದ ತೆಗೆದು ೧೦ ರೂಪಾಯಿ ಕೊಟ್ಟ.

"ನಿಮಗೆ ಯಾಕೆ ಅದರ ವಿಚಾರ? ನನಗಿರಲಿ!" ಎಂದು ಹೇಳಿ ಹೊರಟ ನಾರಾಯಣರಾಯ, ಅಡಿಗೆಯವನನ್ನು ಹುಡುಕಿಕೊಂಡು.

ಸಂಜೆಯ ಏಳು ಗಂಟೆ, ಕತ್ತಲು ಆಗುತ್ತಾ ಬಂತು. ರಾತ್ರಿಯ ಅಡಿಗೆಗೆ ತರಕಾರಿ ತರಲು ಅನಂತಾಚಾರ್ರು ಮಾರ್ಕೆಟ್ಟಿಗೆ ಬಂದಿದ್ದರು. ನಾರಾಯಣರಾಯನು ಮಾರ್ಕೆಟ್ಟಿನ ಬಳಿ ಹೋಗುತ್ತಾ ಇದ್ದ; ಇವನ ಧ್ವನಿ ಕೇಳಿಸಿತು: "ಹಾಗಲಕಾಯಿ ಹ್ಯಾಗೆ?" ಅಂತ. "ನಾರಾಯಣರಾಯ ನೋಡಿದ. ಒಳ್ಳೇ ಅನುಕೂಲವಾಯ್ತು" ಅಂತ ಮನಸ್ಸಿನಲ್ಲೇ ಅಂದುಕೊಂಡು ಮಾತನಾಡಲಾರಂಭಿಸಿದ:

"ಏನ್ ಆಚಾರ್ರೇ! ಇನ್ಯಾರೆನ್ಸ್ ಬೋನಸ್ ಬಂತೆ?!

"ಬಂತು ಸ್ವಾಮಿ!"

"ಈಗ ಹೋಗಿ ಅಡಿಗೆ ಮಾಡಬೇಕೇ?"

"ಹೊಂಸಪ್ಪ, ನನಗೂ ಬೇಜಾರಾಗಿದೆ! ಶಾಂತಾಬಾಯೀರ ಚಿನ್ನದ ಸರ ಕಳೆದು ಹೋಯ್ತಂತೆ. ನಾನಂತೂ ಕಣ್ಣಾರೆ ಕಾಣಲಿಲ್ಲ 'ನೀನೇನು ಮಾಡ್ತಿದ್ದೀಯೋ?' ಅಂತ ನನ್ನ ಬೈತಾರೆ! ಕೈಯಲ್ಲಿ ಒಂದು ಕಾಸು ಇಲ್ಲ! ಪಂಚೆ ಹರಿದು ಹೋಗಿದೆ!...." ಎಂದು ತನ್ನ ಕಷ್ಟವನ್ನು ಹೇಳಿಕೊಂಡ. ನಾರಾಯಣರಾಯ ಮಾತಿಗಾರಂಭಿಸಿದ:

"ಎಷ್ಟೊತ್ತಿನಲ್ಲಿ ಕಳೆದುಹೋಯ್ತು?"

"ಬೆಳಗ್ಗೆ ಒಂಬತ್ತೂವರೆ ಗಂಟೆ ಹೊತ್ನಲ್ಲೀ..! ಪಾಠ ಮೇಷ್ಟ್ರು ಬಂದಿದ್ದಾಗ..! ಅವನೇ ತಗೊಂಡ್ನೋ ಏನೋ!"

"ನೀನು ನನಗೊಂದುಪಕಾರ ಮಾಡಬೇಕು..ಮಾಡ್ತೀಯಾ?"

"ಏನು? ಅಡಿಗೇಗೋ? ಯಾರಾದರು ಸತ್ತರಾ? ಇದೆಯೇನು?.."

"ಅಲ್ಲಾ ಕಣಯ್ಯಾ! ಅಪಶಕುನದಮಾತಾಡ್ತೀಯಲ್ಲಾ.."

"ಇನ್ನೇನು? ನನ್ನ ಕರೆಯೋದು ಇನ್ಯಾತಕ್ಕೆ?"

"ಅದು ಬೇರೆ ವಿಷಯ; ಇಲ್ಲಿ ಬಾ! ತಿಥಿ ವಿಷಯವಲ್ಲಾ, ಸದ್ಯ ಯಾರೂ ಸತ್ತಿಲ್ಲ....ನೋಡು..! ವೆಂಕಟೇಶಯ್ಯ ಮಾಡಿರೋದು ಆ ಕೆಲಸ! ಅವನ್ದೇ ಈಗ ಹೆದರಿಕೆ ಆಗಿ ಅವನು ಈ ಸರವನ್ನ, ಹತ್ತೂರೂಪಾಯ್ನ ಕೊಟ್ಟಿದ್ದಾನೆ. ನೀನು ಸರವನ್ನ ತಗೋ! ಹತ್ತೂರೂಪಾಯ್ನ ನೀ ತಗೋ. ಸರವ ತುಂಡುಮಾಡಿ, ಐರನ್‌ಸೇಫ್ ಹಿಂದೆ ಹಾಕ್ಬಿಡು" ಎಂದು ಸರವನ್ನ ಹತ್ತೂರೂಪಾಯ್ನ ಕೊಟ್ಟು ನಡೆದ ವಿಷಯವನ್ನೆಲ್ಲ ತಿಳಿಸಿ ಅವನ ಜತೆಯಲ್ಲೇ ಅವರ ಮನೆತನಕ ಹೋಗಿ, ಆಮೇಲೆ ತನ್ನ ಮನೆಗೆ ಹೊರಟ. "ನಾನು ಇವತ್ತು ಬಲಮುಗ್ಗುಲಿನಲ್ಲಿ ಎದ್ದಿದ್ದು ನನ್ನ ಅದೃಷ್ಟವೇ ಅದೃಷ್ಟ. ಕಷ್ಟವಿಲ್ಲದೆ ಹತ್ತು ರೂಪಾಯಿ ಸಿಕ್ಕಿತು" ಎಂದು ಮನಸ್ಸಿನಲ್ಲೇ ಅಂದುಕೊಂಡು, ಹಿಗ್ಗಿ ಹಿರಿಹಿರಿ ಕಾಯಿ ಆದ. ರಾತ್ರಿ, ಸಮಯವನ್ನು ತಿಳಿದು, ಸರವನ್ನ ತುಂಡು ಮಾಡಿ ಐರನ್‌ಸೇಫ್ ಹಿಂದೆ ಹಾಕಿದ.

ರಾಯರ ಮನೇಲಿ ರಾಯರಿಗೂ ನಿದ್ದೆಯಿಲ್ಲ; ಶಾಂತಾಬಾಯಿಗೂ ನಿದ್ದೆಯಿಲ್ಲ. ಸರವನ್ನು ಕಳೆದುಕೊಂಡ ದುಃಖ ಪಾಪ! ರಾಯರಿಗೆ 'ಏನಾದರೂ ಮಾಡಿ ಸುಮಿತ್ರಮ್ಮನವರಿಂದ ಸರ ತೆಗೆಯಿಸಬೇಕು!'—ಅಂತ ಯೋಚನೆ. ಇಲ್ಲ ಗೋಪಾಲರಾಯನ ಮನೇಲಿ ಸುಮಿತ್ರಮ್ಮನವರಿಗೆ ನಿದ್ದೆಯಿಲ್ಲ. ಗೋಪಾಲರಾಯ ಊರಲ್ಲಿರಲಿಲ್ಲ. ಅವನಿದ್ದಿದ್ದರೆ ಈ ಕತೆಯೆ ಬೇರೆಯಾಗುತ್ತಿತ್ತು. 'ಬೆಳಗಾದರೆ ಸಾಕು' ಎಂದು ಜಾತಕಪಕ್ಷಿಯು ಹಾಗೆ ಕಾದು ಕುಳಿತಿದ್ದ ರಾಮಚಂದ್ರರಾಯ. ಬೆಳಗಾದೊಡನೆಯೆ ತನ್ನ ಕಾರಿನಲ್ಲಿ ಕುಳಿತುಕೊಂಡು, ಪೋಲೀಸ್ ಇನ್ಸ್‌ಪೆಕ್ಟರ್ ಮನೆಗೆ ಹೊರಟ. ಇನ್ಸ್‌ಪೆಕ್ಟರಿಗೆ ಗಿಲೀಟುಹಾಕಿ ಜವರಿಗೆ ಖಾಕೀಡ್ರೆಸ್ ತಾಕಿಕೊಳ್ಳೀ ಅಂತ ಹೇಳಿ, ಅವರ ಕೈಯನ್ನು ಬೆಚ್ಚಗೆ ಮಾಡಿಸಿ, ತನ್ನ ಕಾರಿನಲ್ಲಿ ಕೂಡಿಸಿಕೊಂಡು ಸುಮಿತ್ರಮ್ಮನವರ ಮನೆಗೆ ಬಂದರು. ಪೋಲೀಸ್ ಇನ್ಸ್‌ಪೆಕ್ಟರು 'ಟಪ್ ಟಪ್' ಎಂದು ಬೂಟ್ಸನ್ನು ಶಬ್ದಮಾಡುತ್ತ ಕಾರಿನಿಂದಿಳಿದು, ರಾಮಚಂದ್ರರಾಯರ ಜತೆಯಲ್ಲಿ ಒಳಗೆ ಬಂದರು.

"ನೋಡಿ! ಸುಮಿತ್ರಮ್ಮನವರೇ! ತಗೊಂಡಿದ್ರೆ ಕೊಟ್ಟು ಬಿ. ನಿಮ್ಮನ್ನೇನೂ ಮಾಡೋದಿಲ್ಲ! ಇಲ್ಲದಿದ್ದರೆ ಪೋಲೀಸ್-ರು ನಿಮ್ಮನೇನೆಲ್ಲಾ ಶೋಧಿಸುತ್ತಾರೆ!" ಎಂದು ಹೆದರಿಸು-ದ್ದಾರೆ; ಆಷ್ಟೊತ್ತಿಗೆ ರಾಯರ ಮನೆಯ ಅಡಿಗೆಯವರಾದ ಶಾಂತಾಚಾರ್ರು ಓಡಿಬಂದ್ರು. ಮನೆಯ ಮುಂದೆ ನೆರೆದಿದ್ದ ಜನರ ಗುಂಪನ್ನು ಚೆದರಿಸಿಕೊಂಡು ಒಳಗೆ ನುಗ್ಗಿದರು.

"ಏನೋ! ನೀನ್ಯಾಕೋ ಬಂದೀ!" ಎಂದರು ರಾಯರು.

"ಸಿಕ್ಕಿತು ಸ್ವಾಮಿ! ಚಿನ್ನದಸರ! ಮಹಡಿಯಮೇಲಿರೋ ಬಟ್ಟೆ-ಸ್ನೆಲ್ಲಾ ತೆಗೆದು ಮಂಚ, ಕುರ್ಚಿ, ಎಲ್ಲ ತೆಗೆದು ಕಸಗೂಡಿಸಿ ಬಿಡಿದೆವು, ಸಿಕ್ಕಲಿಲ್ಲ. ಆ ಮೇಲೆ ನಾನು, ಬೋರ, ಶಾಂತಾ-ಯಮ್ಮ ಮೂರು ಜನವೂ ಸೇರಿ, ಐರನ್‌ಸೇಫ್‌ನ್ನ ಜರಗಿ-ಸ್ತೆ. ಆದರ ಕೆಳಗೆ ತುಂಡಾಗಿ ಬಿದ್ದಿತ್ತು" ಎಂದು ಹೇಳಿದ ಶಾಂತಾಚಾರಿ. ರಾಮಚಂದ್ರರಾಯರು, ಪೋಲೀಸ್ ಇನ್ಸ್-ಪೆಕ್ಟರು, ಅನಂತಾಚಾರಿ ಕಾರಿನಲ್ಲಿ ಕುಳಿತು ಮನೆಗೆ ಬಂದರು. ಚಿನ್ನದ ಸರವನ್ನು ಅಕ್ಕಸಾಲಿಗನಿಗೆ ರಿಪೇರಿಮಾಡಲು ಕೊಟ್ಟರು. ಪೋಲೀಸ್ ಇನ್ಸ್‌ಪೆಕ್ಟರಿಗೆ ಸ್ವಲ್ಪ ಕೋಪವೇ ಬಂತು. ರಾಯರನ್ನು ಇಂಗ್ಲಿಷಿನಲ್ಲಿ ಬೈದು ಹೊರಟು ಹೋದ. ಇವರು ಹೊರಟ ತಕ್ಷಣವೇ, ಹೊರಗೆ ನೆರೆದಿದ್ದ ಜನಗಳ ಗುಂಪು ಚೆದರಿತು. ಸುಮಿತ್ರಮ್ಮನವರಿಗೆ ಸ್ನೇಹಿತರಾಗಿದ್ದವರೆಲ್ಲರೂ ಒಬ್ಬರಾಗು-ತ್ತಲೂ ಒಬ್ಬರು ಬಂದು 'ಏನ್ರೀ! ಸುಮಿತ್ರವ್ವೋರೆ! ನೀವು ಏನು ಕದ್ದಿರಿ? ಯಾಕೆ? ಎಲ್ಲಿ?' ಎಂದು ಮನಸ್ಸು ಬಂದಂತೆ ಸಿಕ್ಕಾಪಟ್ಟೆ ಕೂಗಲಾರಂಭಿಸಿದರು. ಇಷ್ಟೆಲ್ಲಾ ನಡೆಯೋ ಹೊತ್ತಿಗೆ ಮಧ್ಯಾಹ್ನ ಮೂರು ಗಂಟೆ ಆಯಿತು. ಈ ಸುದ್ದಿ ಊರಲ್ಲೆಲ್ಲಾ ಹಬ್ಬಿತು. "ಜಯ ಭಾರತ್" ಪೇಪರ್ನಲ್ಲೇ ವಿಸ್ತಾರವಾಗಿ ದೊಡ್ಡ ದೊಡ್ಡ ಅಕ್ಷರಗಳಲ್ಲಿ ಪ್ರಕಟವಾಗಿತ್ತು. ಆಟಕ್ಕೆ ಹೋಗಿದ್ದ ಶೇಷು, ನಾಣಿ, ಬೀದಿಯಲ್ಲಿ ಯಾರೋ ಪೇಪರ್ ಓದುತ್ತಿದ್ದಾಗ, ತಮ್ಮ ತಾಯಿಯ ಹೆಸರು ಪ್ರಕಟವಾ-ಗುವುದನ್ನು ಕಂಡು, ಅವರನ್ನು ಕೇಳಿ ಪೇಪರ್ ತೆಗೆದುಕೊಂಡು ಮನೆಗೆ ಬಂದು, ತಾಯಿಯ ಮುಂದೆ ಸವಿಸ್ತಾರವಾಗಿ ಓದಿದರು. ಸುಮಿತ್ರಮ್ಮನವರಿಗೆ ಬಹಳ ಅವಮಾನವಾಗಿತ್ತು, ಈಗ ಇನ್ನೂ ಅವಮಾನವಾಯಿತು. "ಇಷ್ಟಕ್ಕೂ ಕಾರಣ ಬಡತನ. ಶ್ರೀಮಂತ-ರಾಗಿದ್ದರೆ ತೊಗರೀಬೇಳೆಯ ಸಾಲಕ್ಕೆ ಹೋಗಬೇಕಾಗಿತ್ತೇ? ಈ ಅಪವಾದ, ಅವಮಾನಹೊಂದಬೇಕಾಗಿತ್ತೇ?...." ಎಂದು ನಿಟ್ಟುಸಿರಿಟ್ಟರು.

ಅಂದಿನಿರುಳೆಲ್ಲ ಸುಮಿತ್ರಮ್ಮ ನಿದ್ದೆಯಿಲ್ಲದೆ ಕಳವಳಿಸುತ್ತಿ-ದ್ದರು. ಆಗಿರುವ ಅವಮಾನಕ್ಕಿಂತ ಮರಣವೇ ಲೇಸು—ಎಂದು ವಿಷಪಾನಮಾಡಲೂ ಒಂದೆರಡು ಸಲ ಮನಸ್ಸು ಮಾಡಿದರು. ಆದರೆ ಪ್ರೀತಿಯ ಗಂಡ, ಅಕ್ಕರೆಯ ಮಕ್ಕಳು ಮುಂದೆ ಬಂದು, ಅವರ ಮನಸ್ಸನ್ನು ತಿರುಗಿಸಿದರು. ಆದರೆ ಈ ಹೃದಯ ವಿಹೀನ ಸಿರಿವಂತರ ಸೇವೆಬೇಡವೆಂದು, ಗಂಡನನ್ನು ಅಲ್ಲಿಯಂ ನೌಕರಿಯಿಂದ ಬಿಡಿಸಿ ಎಲ್ಲಿಗೋ ಹೊರಟುಹೋದರು. ಶಾಂತಾ-ಬಾಯಿ-ರಾಮಚಂದ್ರರಾಯರಿಗೆ ಇದಾವುದರ ಅರಿವೇ ಇರಲಿಲ್ಲ.

ರಕ್ಷಣೆಯುಕಾಲ ಸಮನಿಸಿದಾಗ

(ವಚನ)

ಗುಡಿಗಳು ಗರುಡಿಗಳಾಗಬೇಕು. ಭಕ್ತರು ಭಟರುಗಳಾಗ-ಬೇಕು. ಮೇವಸಂಗಳು ಧ್ವಜ-ಪತಾಕೆಗಳಾಗಬೇಕು. ಅರ್ಚಕರು ಆಹವ ನಿಪುಣರುಗಳಾಗಬೇಕು ಭಕ್ತ ಜಾಮರ-ಗಳು ಅಸ್ತ್ರಶಸ್ತ್ರಗಳಾಗಬೇಕು. ಪೂಜೋಪಕರಣಗಳು ಸಮರೋಪಕರಣಗಳಾಗಬೇಕು. ರಕ್ಷಣೆಯುಕಾಲ ಸಮ-ನಿಸಿದಾಗ— ಬಸವಲಿಂಗ ಪ್ರಿಯ ಕಟ್ಟಿಯ ಬಸವೇಶ್ವರಾ!

ನುಗ್ಗಬೇಡಿರಿ!

(ಹರಟೆ)

ಶ್ರೀ. ಹಾನೋಳಕರ ಶ್ರೀಧರರಾಯರು, ಪುಣೆ.

★

ನಾನೊಮ್ಮೆ ಬಸ್ಸಿನಲ್ಲಿ ಕುಳಿತುಕೊಂಡೆ. ಬಸ್ಸಿಂದರೆ ಸಣ್ಣ ಮೋಟಾರು. ಪುಣೆಯಲ್ಲಿ ಈ ಸೌಕರ್ಯ ಇತ್ತೀಚೆಗೆ ಮೂರು ನಾಲ್ಕು ವರ್ಷಗಳಿಂದ ಉಂಟಾಗಿದೆ ದೊಡ್ಡ ಪಟ್ಟಣಗಳಲ್ಲಿ ಒಂದು ಸ್ಥಳದಿಂದ ಮತ್ತೊಂದು ಸ್ಥಳ ಮುಟ್ಟಬೇಕಾದರೆ ಬಹಳ ಪ್ರಯಾಸ ಈಗಿನವರಿಗೆ! ಒಂದೆರಡು ಮೈಲು ನಡೆಯುವ ಶಕ್ತಿ ಮೈಯೊಳಗಿಲ್ಲ, ಕೈಯಲ್ಲಿ ದುಡ್ಡು ಜಣಜಣ, ಕೆಲಸಗಳೋ ನಾವಿರಾರು; (ಕೆರಕ್ಕೆ ನಾಲು ಬಡಿಯುವುದರಿಂದ ಮೊದಲು ನೂಡಿ, ಮುಂಜಿ-ಮದುವೆಗಳ ಕನಕ) ಎಂದ ಮೇಲೆ ಈ ಸೌಕರ್ಯವಾದದ್ದು ಯಾರಿಗೆ ತಾನೇ ಬೇಡ? ದುಡ್ಡು ಹೋದರೆ ಹೋಗಲಿ, 'ಎಲ್ಲಿ ಅರೋಗ್ಯವು ಮೈಮೇಲೆ ಕಡಕೊಂಡು ಬೀಳುವುದೋ, ಒಂದೆರಡು ಮೈಲು ನಡೆಯುತ್ತ ಹೋದರೆ' ಎಂಬುದೇ ಮಹಾ ಸಂಕಟ! ಮಾನವನ ಸ್ವಭಾವವೇ ವಿಚಿತ್ರವಾದದ್ದು. ಆದಷ್ಟು ಎಲ್ಲವೂ ಸುಲಭವಾಗಿಯೂ ಹಗುರಾಗಿಯೂ ಆಗಬೇಕು. ಕಾಲಿಗೆ ತಿಂಡಿಯಾದರೆ ಬಗ್ಗಿ ಕೈಯಿಂದ ತುರಿಸುವವರೆಷ್ಟು ಜನ? ಅಲ್ಲಿಂದಲ್ಲೇ ಕಾಲಿನ ಕೆರದಿಂದ ಸ್ವಲ್ಪು ಹೆವುರಗಾಗಿ ಕೆದರಿಕೊಂಡರೆ ಕೆಲಸವಾಗುವುದು. ನಾಳೆ, ನಾರೂ ಆನ್ನ ಕಲಿಸಿ ಹುತ್ತು ನೂಡಿ, ತುತ್ತಿನ ಮೇಲೊಂದು ಉಪ್ಪಿನಕಾಯಿ ಹೋಳನ್ನಾಗಲಿ ಪಲ್ಲೆಯ ಹೋಳನ್ನಾಗಲಿ ಇಟ್ಟು ಒನ್ಮೈಲೆ ಬಾಯಲ್ಲಿ ಹಾಕಿ ನುಂಗಿಸುವ ಸಾಮರ್ಥ್ಯವುಳ್ಳ ಯಂತ್ರವೊಂದು ಬಂದರೆ, 'ನಾ ಮುಂದೆ ನೀ ಮುಂದೆ' ಎಂದು ಯಾರು ಕೊಳ್ಳಲಿಕ್ಕಿಲ್ಲ? ನೀವೂ? ಓಹೋ, ನಾನೂ! ನಾನಂತೂ 'ನನಗೆ ಮುಂಚೆ ಸಿಗಲಿ' ಎಂದು, ಒಂದು ಪಗಾರದ ಹತ್ತಿಪ್ಪತ್ತಾದರೂ ಲಂಚವನ್ನಾದರೂ ಕೊಡಲಿಕ್ಕೆ ಸಿದ್ಧನಾದೇನು!

ಇರಲಿ! ಏನೋ ಹೇಳಬೇಕೆಂದು ಹೊರಟೆನ್ನೆ; ಏನನ್ನೋ ಹೇಳಿಬಿಟ್ಟೆ. ಹರಟೆಯ ಪ್ರಪಂಚವೇ ಹೀಗೆ! ಒಮ್ಮೆ ಮನಸು ಪಡಲಿ 'ಸಿಇಂದು ಹರಟೆ ಬರೆಯಬೇಕು' ಎಂದು ಯೋಚನೆಗೈದ ಕೂಡಲೆ, ಮಿದುಳಿನೊಳಗಿನ-- ಸ್ಪ್ರಿಂಗುಗಳೆಲ್ಲ ಬಿಚ್ಚಿಹೋಗುವುವು. ನಾನು ಬಸ್ಸಿನಲ್ಲಿ ಕುಳಿತುಕೊಂಡೆ, ಎಷ್ಟೋ ಜನರು ಹತ್ತಿದ್ದರು. ಕೆಲವರು ಹತ್ತುತ್ತಲಿದ್ದರು. ಪದಿನೆಂಟು (ಹೊಲೆಯ ಪದಿನೆಂಟು) ಜಾತಿಯ ಸ್ವಭಾವದ ಜನರಿಂದ ಗಾಡಿ ತುಂಬುತ್ತಲೇ, ಕಂಡಕ್ಟರನು (ಗಾಡಿಯ ಮೇಲ್ವಿಚಾರಕನು) ಎರಡು ಗಂಟೆ ಹೊಡೆದನು. ಡ್ರಾಯವ್ವರನು ಹೊತ್ತಿಸಿದ್ದ ಸಿಗರೇಟನ್ನು ಸೇದುತ್ತಲೇ ಗಾಡಿಯನ್ನು ಸಾವಕಾಶವಾಗಿ ಬಿಟ್ಟನು. ಗಾಡಿಯಲ್ಲಿ

'ತನ್ನಂತೆ ಪರರ ಬಗೆವುದೇ ಕೈಲಾಸ ವಿನ್ಯಾಣ', ಎ
ಸರ್ವಜ್ಞ ಹೇಳಿದ್ದಾನೆ. ಕೈಲಾಸನಿಜ್ಞಾನವಾವುದೋ ಆ
ಸಮಾಜವಿಜ್ಞಾನ! ಸಮಾಜದಲ್ಲಿಯ ಪ್ರತಿಯೊಂದು ವ್ಯ
ತನ್ನಂತೆ ಪರರ ಬಗೆದರೆಯೇ ಸುಖ--ಶಾಂತಿಗಳು!

★

ಯಾರೋ ಸಿಗರೇಟು ಸೇದುತ್ತಿರುವರೆಂದು ಕಂಡಕ್ಟ
ಸಂಶಯ ಬಂತು. ರಾತ್ರಿಯ ಹೊತ್ತು. ಸ್ವಲ್ಪ ಕಣ್ಣಿಗೆ ಕೈ
ನೋಡಿದ ಒಬ್ಬರು ಹಗುರಾಗಿ ಝುರಕೆ ಹೊಡೆಯುತ್ತಿದ್ದ
ಕಂಡಕ್ಟರನು: "ಓ, ರಾಯರೇ ಸಿಗರೇಟನ್ನು ಹೊರಗೆ ಜೆಲ್ಲಿ
ಎಂದು ನಮ್ರತೆಯಿಂದ ಹೇಳಿದನು. ರಾಯರು "ನ
ಸಿಗರೇಟು ಜೆಲ್ಲೆಂದು ಹೇಳಲಿಕ್ಕೆ ನೀನಾರು ಗೋಮಾ
ಗಣೇಶಾ?" (ನಮ್ಮ ಕಡೆಗಿದ್ದಿದ್ದರೆ ಗೋಮಾಜೀ ಕಾಪು
ಅಂತಿದ್ದ.) ಎಂದ. ಕಂಡಕ್ಟರನು ಮತ್ತೆ "ಗಾಡಿಯಲ್ಲಿ ಸಿಗರೆ
ಸೇದಬಾರದೆಂದು ನೇಮವಿರುತ್ತದೆ" ಎಂದ. ರಾಯರು "ಇ
ನೇಮ ಮಾಡಿದವ ಮಹಾಮೂರ್ಖನಿರಬೇಕು" ಎಂದು ಗ
ಸಿದರು ಕಂಡಕ್ಟರು "ನಿಮಗೆ ಬೇಕಾದರೆ ಇಳಿಯಬಹು
ನಾನಂತೂ ನಿಮಗೆ ಈ ಗಾಡಿಯೊಳಗೆ ಸಿಗರೇಟು ಸೇದಗೊಡ
ದಿಲ್ಲ" ಎಂದ. "ನಾನೂ ನೋಡತೀನಿ, ನೀ ಏನು ಮಾಡ
ಆನ್ನೋದು!" ಎಂದರು ರಾಯರು. ನಾನು ನಡುವೆ ಬಾ
ಹಾಕಬೇಕೆಂದೆ. ಆದರೆ ನಾನೂ ನಸ್ಯದ ಚಿಮುಟೆಯ ಪ
ಚಿಮುಟೆಹೊಡೆಯುತ್ತಿದ್ದೆ. 'ಸಿಗರೇಟಿನಿಂದ ಅಪಾಯ; ಗ
ಬೆಂಕಿ ಹತ್ತಬಹುದು! ಆದರೆ ನಸ್ಯದಿಂದೇನು?--ಎಂತ ಕೇಳು
ನಸ್ಯವನ್ನು ಸೇದುತ್ತಿರುವಾಗ ಒಂದು ಚಿಮುಟೆಯೂ
ಸಹಸ್ರಾಂಶದಷ್ಟಾದರೂ ವ್ಯಾಸೆಂಜರ ಕಣ್ಣೊಳಗೆ ಹೋದರೆ
ಕಣ್ಣಿಗೆ ಬೆಂಕಿಯನ್ನು ಹಚ್ಚಿದಂತಾಗುವುದು; ನಾ ಬಲ್ಲೆ! ಆದ್ದ
ನಾನು ಸುಮ್ಮನೇ ಕೆವಿಹಚ್ಚಿ ನನ್ನ ಕಾರ್ಯವನ್ನು ಸಾಗಿ
ಗಾಡಿ ನಿಂತಿತು. 'ಮುಂದೆ ಗಾಡಿ ಹೋಗುವುದಿಲ್ಲ'
ಕಂಡಕ್ಟರು. ರಾಯರಿಗೆ ಅವಸರದ ಕೆಲಸವಿತ್ತು. ಸು
ಸಿಗರೇಟು ಹೊರಗೆಒಕ್ಕೊಟ್ಟು, ಕೆರತಿಂದ ಮೋರೆಯಂತೆ
ಮಾಡಿಕೊಂಡು ಕುಳಿತುಬಿಟ್ಟರು ಗಾಡಿ ಹೊರಟಿತು.

ವಿಚಾರಮಾಡಬೇಕಾದ ವಿಷಯ. ಸಮಾಜಕ್ಕೆ ಥಕ್ಕೆ
ದಂತೆ ನೋಡಿಕೊಳ್ಳುವದೊಂದು ಸರಕಾರದ ಕೆಲಸವಿ
ಆ ನಿಯಮದ ಮೇರೆಗೆ ಆಲ್ಲಲ್ಲಿ ಹಲಗೆಗಳನ್ನು ಬಡಿದಿರು
ವಿದ್ಯುದ್ದೀಪದ ನಿಲ್ದಾಣಕ್ಕೆ ಹೋಗಿ ನೋಡಿರಿ! ಅಯ್ಯದ
ಒಂದು ಕಂಪಾದ ಹಲಗೆಯ ಮೇಲೆ, ಒಂದು ದೊಡ್ಡ ಹೂ
ದೆವ್ವ ನಿಂತಿರುತ್ತದೆ. ಬರೇ ಎಲುಬಿನಿಂದ ಮಾಡಿದ್ದು.
ಹೇಳುವುದು: "ನಾನು ದೆವ್ವ, ದೂರದಿಂದ ಸಾಗಿರಿ! ಇಲ್ಲೆ
ನನ್ನನ್ನು ಮುಟ್ಟಿದ ಕೂಡಲೇ ನನ್ನಂತೆಯೇ ನೀವೂ ಆ

ಮುಕ್ಕಳಿರಾ'' ಎಂದು. ಉತ್ತರ ಹಿಂದುಸ್ತಾನದಲ್ಲಿ ಪ್ರವಾಸ ಮಾಡುವ ಪ್ರಸಂಗ ಬಂತು ನನಗೆ, ನನ್ನ ಸುದೈವದಿಂದ. ಅಲ್ಲಿ ಉಗೆಬಂಡಿಯ ಡಬ್ಬಿಯಲ್ಲಿ : ''ಉಗುಳಬೇಡಿರಿ, ಉಗುಳಬೇಡಿರಿ'' ಎಂದು ಬರೆದಿತ್ತು. ನಾನು ಪಾಂಥಸ್ಥರನ್ನು ನಿರೀಕ್ಷಿಸಿದೆ: ಗುಡಾಖೂ ಸೇದಿ, ಲೋಳೆಯಾದ ಕೆಟ್ಟನಾರುವ ಉಗುಳನ್ನು ಅಲ್ಲೇ ಕಾಲಲ್ಲೇ ಉಗುಳಿಬಿಡುತ್ತಿದ್ದರು. ಅದರ ಮೇಲೆ ಯಾರ ಕಾಲಾದರೂ ದುರ್ದೈವದಿಂದ ಬಿದ್ದರೆ, ಈ ಬಾಗಿಲದಿಂದ ಮುಂದೆ ಜಾರಿ, ಹಲ್ಲು ಕಳೆದುಕೊಂಡು ಬೀಳುವ ಪ್ರಸಂಗ. ಆದುದರಿಂದಲೇ 'ಸಮಾಜದಲ್ಲಿ ಓಡಾಡುವ ಪ್ರತಿಯೊಬ್ಬನಿಗೂ ತೊಂದರೆಯಾಗದಂತೆ ಪ್ರತಿಯೊಬ್ಬರೂ ನಡೆಯಬೇಕು' ಎಂದು ಸರಕಾರದ ಮತ.

ಸಮಾಜವು ಸುಲಭವಾಗಿ ಸಾಗಬೇಕಾದರೆ, ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಹಿತಾಂಶವನ್ನು ಪರರ ಹಿತಕ್ಕಾಗಿ ಬಲಿಕೊಡಬೇಕಾಗುತ್ತದೆ. ವ್ಯಕ್ತಿಯು ಹೆಚ್ಚೋ, ಸಮಾಜವು ಹೆಚ್ಚೋ? ಸಮಾಜದ ಹಿತಕ್ಕಾಗಿ ಎಂದರೆ ಅಜ್ಜನಿಂದ ತುಂಬಿರುವ ಸಮಾಜದ ಹುಚ್ಚುನಡತೆಗೆ ವ್ಯಕ್ತಿಯು ಸುಮ್ಮನೇ ತಲೆಬಾಗಬೇಕೋ? ಎಂಬುದೊಂದು ಬಲವಾದ ಪ್ರಶ್ನೆ ಸಮಾಜಶಾಸ್ತ್ರದಲ್ಲಿ. ಇದೇ ನಿಜವಾಗಿದ್ದರೆ, ಸಮಾಜಸುಧಾರಣೆಯೊಂದು ವ್ಯರ್ಥಜಲವೇ ಸೈ.

ವ್ಯಕ್ತಿಗಳಿಂದಲೇ ಸಮಾಜವಾಗಿರುವುದೇನೋ ನಿಜ; ಒಬ್ಬ ವ್ಯಕ್ತಿಯೇ ಜಗತ್ತಿನಲ್ಲಿರುತ್ತಿದ್ದರೆ ಅವನು ಮಾಡುವುದೇ ಧರ್ಮವಾಗುತ್ತಿತ್ತು, ಅವನ ನಡತೆಯೇ ಸದಾಚಾರವಾಗುತ್ತಿತ್ತು. ಏಕೆಂದರೆ ನೇಮಗಳನ್ನು ಮಾಡುವವನು ಅವನೇ; ನೋಡುವವನು ಅವನೇ; ಆ ನಡತೆಗೆ ಒಳಿತು, ಕೆಡುಕು ಎನ್ನುವವನು ಅವನೇ. ಜಗತ್ತಿನಲ್ಲಿ ಎಲ್ಲ ಹೋಗಿ ನೋಡಿದರೂ ಮನುಷ್ಯನೆಂದರೆ ಆನೆಗಳಂತೆ ಗುಂಪುಗೂಡಿರುವ ಪ್ರಾಣಿಯೆಂದು ಕಂಡುಬರುವುದು. 'ಗುಂಪು' ಎಂದ ಕೂಡಲೆ ನೇಮ ಬಂತು. ಒಬ್ಬರನ್ನೊಬ್ಬರು ಕೊಲ್ಲಬಾರದು– ಅಹಿಂಸಾ. ಒಬ್ಬರನ್ನೊಬ್ಬರು ಮೋಸಗೊಳಿಸಬಾರದು– ಅಸ್ತೇಯ. ತಾನು ಇದ್ದಂತೆಯೆ ತನ್ನ ರೂಪವನ್ನು ತೋರಿಸುತ್ತಿರಬೇಕು– ಸತ್ಯ. ತನ್ನ ದೇಹ ಮತ್ತು ಆತ್ಮಗಳು ನಿಚ್ಚಳವಾಗಿರಬೇಕು– ಶುದ್ಧಿ. ಒಬ್ಬರಿಗೊಬ್ಬರು ತೊಂದರೆ ಕೊಡಬಾರದು– ಇಂದ್ರಿಯನಿಗ್ರಹ. ಈ ಪಂಚಧರ್ಮಗಳು ಮನುಷ್ಯಜಾತಿಯ ಅರ್ಕವೆಂದು ಹೇಳಬಹುದು. ಇವು ಎಲ್ಲರಿಗೂ ಸಾಮಾನ್ಯವಾದ ನೇಮಗಳೆಂದು– ಜಿಜ್ಞಾಂತಾಖಾತ್ ಸನೋದ್ಧರ್ಮಃ– ಎಂದು ಹೇಳಿರುವನು. ಇವು ಎಷ್ಟರ ಮಟ್ಟಿಗೆ ಸಮಾಜದಲ್ಲಿ ಪಾಲಿಸಲ್ಪಡುವುವೋ ಅಷ್ಟರ ಮಟ್ಟಿಗೆ ಸಮಾಜದಲ್ಲಿ ಸುಖ. ಯಾವನೋ ಒಬ್ಬ ಮಹಾತ್ಮನು ಪಾಲಿಸಿದರಲ್ಲ; ಪ್ರತಿಯೊಬ್ಬನೂ– ಹೊಲೆಹದಿನೆಂಟು ಜಾತಿಯವರೂ– ಪಾಲಿಸಬೇಕಾಗಿ ಬಂತು

ಬಸ್ಸಿನವನು 'ಟಣ್' ಎಂದು ಒಂದು ಗಂಟೆ ಬಾರಿಸಿದನು. ಒಬ್ಬನಿಗೆ ಇಳಿಯುವುದಿತ್ತು. ಅವನು ಇಳಿದ ಕೂಡಲೇ, ಹೊರಗಿನವರು ಐವತ್ತುಮಂದಿ ಒಳನುಗ್ಗಿದರು. ಈ ಮಹಾಸಾಗರವನ್ನು ಕಂಡಕ್ಟರನೊಬ್ಬನೇ ಹೇಗೆ ತಡೆಯಬೇಕು? ಅವನು ಒದರುತ್ತಾ ಸುಮ್ಮನೆ ನಿಂತ. ಗಾಡಿಯೊಳಗಿಂದ ಒಬ್ಬ ಎದ್ದ, ಎತ್ತರನ್ನ ಆಳು, ಗಡುತರವಾದ ದೇಹ, ಪುಷ್ಟವಾದ ಮೈ. ಅವನು ಹೋಗಿ ಬಾಗಿಲಿಗೆ ನಿಂತ—ಕೈ ಅಡ್ಡ ಹಿಡಿದು. ಒಳನುಗ್ಗುವವರನ್ನೆಲ್ಲ ನಿಂದಿರಿಸಿದ. ಒಳಗಿನವರಿಗೂ ಹೊರಗಿನವರಿಗೂ ಮಹಾಭಾರತವಾಯಿತು. ಹೆಂಗುಸರು ಚೀರಹತ್ತಿದರು (ಕಂಠಾಸ್ಫೋಟದಿಂದ). ಅಂತೂ ಇಂತೂ ಹತ್ತುಮಂದಿ ಬಲವಾಗಿ ಹತ್ತೇಬಿಟ್ಟರು. ಮತ್ತೆ ಬಸ್ಸು ಸಾಗಿತು.

ಕಂಡಕ್ಟರನು ಒಬ್ಬನಿಗೆ ಟಿಕೇಟು ಕೇಳಿದ. "ಹಾ! ನಾನು ರೊಕ್ಕಾ ಕೊಟ್ಟೆ. ನೀನೇ ಟಿಕೇಟು ಕೊಡಲಿಲ್ಲ ಗಡಿಬಿಡಿಯೊಳಗೆ! ನಾ ಏನು ಮಾಡಲಿ? ಈಗ ಕೊಡು ಟಿಕೇಟು." ಎಂದ. ಕಂಡಕ್ಟರನು ಅವನನ್ನು ಟಿಕೇಟಿಲ್ಲದಲೆ ಒಯ್ಯಬೇಕಾಯಿತು. ಇಲ್ಲವಿದ್ದರೆ ನುತ್ತಿ ಜಗಳ! 'ಪಬ್ಲಿಕ್' ಎಂದರೆ ದನದ ಜಾತಿ. 'ಸರಿ' ಎಂದರೆ ಜಗಳ, 'ಸರಿಯಜೀಡ' ಎಂದರೂ ಜಗಳ. ಜಾಗ ಸಿಕ್ಕದವರು ಒಬ್ಬರೊಬ್ಬರ ತೊಡೆಯಮೇಲಾದರೂ ಕುಳಿತಿದ್ದರು. (ಗಂಡುಸರು ಗಂಡುಸರ ತೊಡೆಯಮೇಲೆಯೇ; ಅದರೂ ಏನಾಯಿತು?) ಕಂಡಕ್ಟರು ಅವರಿಗೆ ಕೆಳಗೆ ಕೂಡಲಿಕ್ಕೆ ಹೇಳಿದನು. ಜಾಗವೆಲ್ಲಿದೆ? "ಅದು ಒಳಗೆ ಬರುವಾಗ ತಿಳಿಯಲಿಲ್ಲವೇನು?" ಒಳಗೆ ಬರುವ ಮುಂದೆ ಪ್ರತಿಯೊಬ್ಬರಲ್ಲಿ ದೇವತೆ ಬಂದು ನಿಂತಿದ್ದಳು. 'ಸತ್ಕೃವು ಆದರೆ ಒಳಗೆ ಹೊಕ್ಕೃವು'! ಒಳಗೆ ಬಂದಮೇಲೆ ಜಾಗದ ನೆನಪು. ಅಂತೂ ಇಂತೂ ಮಾಡಿ ಈ ಹೆನುಮಾಯನವು ಮುಗಿಯಿತು.

ಸಮಾಜದಲ್ಲಿಯಾಗಲಿ, ಕುಟುಂಬದಲ್ಲಾಗಲಿ, ವ್ಯಕ್ತಿಯಲ್ಲಾಗಲಿ, ಸುಖವುಂಟಾಗಬೇಕಾದರೆ ಪ್ರತಿ ಅವಯವದಲ್ಲಿಯೂ ಸ್ವಲ್ಪ ಸೇವಾವೃತ್ತಿ ಬೇಕು. ಒನ್ಮೆಲೆ ಎಲ್ಲಿಯಾದರೂ ಲಾಟರಿಯಲ್ಲಿ ೪೦,೦೦೦ ಸಾವಿರ ಸಿಕ್ಕರೆ ಸುಖವುಂಟಾಯಿತೆನ್ನುವಹಾಗಿಲ್ಲ. ಕಳ್ಳರಿಂದ ತುಂಬಿದ ಪಟ್ಟಣದೊಳಗೆ ಪ್ರಧಾನಿತನವಾದರೂ ಸುಖವು ಬಂದಹಾಗಾಗಲಿಲ್ಲ; ದುಃಖವೇ ಎದುರುಬಂದು ನಿಂತಂತೆ. ಅಂಗಡಿಯ ವ್ಯಾಪಾರದಲ್ಲಿ, ರೇಲ್ವೆ ಸ್ಟೇರನ್ನಿನಲ್ಲಿ, ಉಗೆಬಂಡಿಯ ಡಬ್ಬಿಯಲ್ಲಿ, ಕಚೇರಿಯಲ್ಲಿ, ಬಾಲಗಳ ಆಟದ ಭೂಮಿಯ ಮೇಲೆ, ಉದ್ಯಾನಗಳಲ್ಲಿ, ಎಲ್ಲಿ ನೋಡಿದಲ್ಲಿ ಸುಖ-ಸೌಕರ್ಯಗಳುಂಟಾಗಬೇಕಾದರೆ, ಅಲ್ಲಿ ಬರಬೇಕಾಗುವ ಪ್ರತಿಯೊಬ್ಬನ ಮನಸ್ಸಿನಲ್ಲಿಯೂ, 'ನಾನು ಸಮಾಜದ ಘಟಕವೊಂದು; ನನ್ನಂತೆಯೇ ಎಲ್ಲರೂ! ನನಗೆ ಆಗಬೇಕಾದಷ್ಟು ಸುಖವು ಪ್ರತಿಯೊಬ್ಬರಿಗೂ ಆಗಬೇಕು, ಪರರ ಸುಖಕ್ಕಾಗಿ ನನ್ನದೊಂದಿಷ್ಟು ಸುಖವು ಕದಿಮೆಯಾದರೂ ಚಿಂತೆಯಿಲ್ಲ' ಎಂಬ ಭಾವನೆಯು ಮೊಳೆತಿದ್ದರೆ, ಸಮಾಜದಲ್ಲಿ ಸುಖವುಂಟಾಗುವುದರಲ್ಲಿ ಸಂದೇಹವಿಲ್ಲ. ಶಿಕ್ಷಣದ ಪ್ರಾರಂಭದಲ್ಲಿಯೇ ನಮ್ಮ ಜನರಿಗೆ ಇದರ ನಾತ ದೊರೆಯಬೇಕು.

ಪ್ರೊಫೆಸರ್ ದೇವಳಾಲಕರರ ಸೇವಾನಿವೃತ್ತಿ

ಪ್ರೊ. ಕೆ. ಎಸ್. ಸವಣೂರ, ಎಮ್. ಎಸ್ಸಿ. ಕರ್ನಾಟಕ ಕಾಲೇಜ್, ಧಾರವಾಡ.

★

ಕರ್ನಾಟಕ ಕಾಲೇಜಿನ ಪ್ರಾರಂಭದಿಂದ ಎಂದರೆ ಕಳೆದ ೫೦ ವರುಷಗಳಿಂದ ಇಲ್ಲಿಯ ವರೆಗೆ, ಮುಖ್ಯವಾಗಿ ಕನ್ನಡನಾಡಿನ ವಿದ್ಯಾರ್ಥಿಗಳನ್ನೇ ತಯಾರು ಮಾಡುವವರಲ್ಲಿ ತಮ್ಮ ಜನ್ಮವನ್ನೇ ಸವೆಯಿಸಿರುವ ಶ್ರೀ. ದೇವಳಾಲಕರರವರು, ಈ ದಿನದಿಂದಲೇ (೩೪-೬-೧೯೪೬) ಸೇವಾನಿವೃತ್ತರಾಗಲಿದ್ದಾರೆ. ಇಂದು ನಮ್ಮ ಕನ್ನಡನಾಡಿನ ಯಾವುದೇ ದೊಡ್ಡ ಊರಲ್ಲಿ ಹುಡುಕಿದರೂ, ಇವರ ಬಳಿ ಕಲಿತ ಒಬ್ಬನಾದರೂ ವಿದ್ಯಾರ್ಥಿಯು ನಮಗೆ ಸಿಕ್ಕೇ ಸಿಕ್ಕುವನು. ಇವರ ವಿದ್ಯಾರ್ಥಿವೃಂದವು ತುಂಬ ದೊಡ್ಡದಿದ್ದು, ಮುಂಬಯಿ ಇಲಾಖೆಯಲ್ಲಿಯೇ ಬೇರೆ ಬೇರೆ ವಿಭಾಗಗಳಲ್ಲಿ ಕೆಲಸ ಮಾಡುತ್ತಿರುವುದು ನಮಗೆ ಹೆಮ್ಮೆಯ ವಿಷಯವಾಗಿದೆ. ಮುಂಬರುವ ಹಿಂದುಸ್ಥಾನದಲ್ಲಿ ಪ್ರಮುಖ ವ್ಯಕ್ತಿಯಾಗಿ ತಮ್ಮ ಕರ್ತೃತ್ವಶಕ್ತಿಯಿಂದ ಕನ್ನಡನಾಡಿನ ಲಕ್ಷ್ಮೀವನ್ನೇ ತಮ್ಮ ಕಡೆಗೆ ನೆಳೆದಿರುವ ಮಾನ್ಯ ಬಿ. ಪಿ. ಕರವಾರಕರ-ರವರು, ಶ್ರೀ. ದೇವಳಾಲಕರರ ವಿದ್ಯಾರ್ಥಿ-ಗಳು. ಮುಂಬಯಿ ಇಲಾಖೆಯ ವಿದ್ಯಾಧಿ-ಕಾರಿಗಳಾದ ರ್ಯಾಂಗ್ಲರ್ ಹಾವಟೆಯವರು, ಮುಂಬಯಿ ಹಾಯ್‌ಕೋರ್ಟಿನ ನ್ಯಾಯಾ-ಧೀಶರಾದ ಜಸ್ಟಿಸ್ ಗಜೇಂದ್ರಗಡಕರ, ಬಸವೇಶ್ವರ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ. ನ ವೀರಪಂತ, ವೀರಸನಗರ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಗೋಕಾಕ ಮುಂತಾದವರೆಲ್ಲರೂ ಶ್ರೀ. ದೇವಳಾಲಕರರವರ ವಿದ್ಯಾರ್ಥಿಗಳೇ. ನಮ್ಮ ಕರ್ನಾಟಕ ಕಾಲೇಜಿನ ವಿಜ್ಞಾನ-ವಿಭಾಗದಲ್ಲಿಯ ಇವರ ವಿದ್ಯಾರ್ಥಿವಿಶ್ಲೇಷವೃಂದವಂತೂ—ಬಾಳೆಯ ಗಿಡದ ಮರಿಗಳಂತೆ—ದಿನೇ ದಿನೇ ಬೆಳೆಯುವುದರ-ಲ್ಲಿಯೆ ಇವೆ. ಬೆಟ್ಟದಂತಹ ಕಾರ್ಯವನ್ನು ಮಾಡಿರುವ ಇವರ ಅಲ್ಪ ಪರಿಚಯವನ್ನು ಮಾಡಿಕೊಡಲಿರುವ ನಾನಾದರೂ ಇವರ ವಿದ್ಯಾರ್ಥಿಯೆ ಇದ್ದು, ಇಂದು ನೇರವಾಗಿ ಅವರ ಕೆಳಗೇ ಅಲ್ಲದೆ, ಅವರ ವಿಭಾಗದಲ್ಲಿಯೇ ಕೆಲಸಮಾಡುವ ಸುಯೋಗವು ಪೂರೆ-ತುದರಿಂದಲೇ, ನಾನು ಈ ಕೆಲಸದಲ್ಲಿ ಕೈಯಾಡಿಸಿದ್ದೇನೆ.

ಪ್ರೊ. ದೇವಳಾಲಕರರು.

ಶ್ರೀ. ದೇವಳಾಲಕರರವರು ನಾಸಿಕ ಜಿಲ್ಲೆಯ ಇಗತಪುರಿ ಎಂಬ ಊರಲ್ಲಿ, ೧೮೯೩ನೆಯ ಇಸ್ವಿ ಜುಲೈ ೩೫ನೆಯ ತಾರೀಖಿನ ದಿನ ಜನ್ಮವೆತ್ತಿದರು. ಇವರ ತಂದೆಯವರು ಮಧ್ಯಮವರ್ಗದ ಕುಟುಂ-ಬಸ್ಥರಿದ್ದು, ಇಂಗ್ಲೀಷನ್ನು ಕೂಡ ಬಲ್ಲವರಿರಲಿಲ್ಲ. ಶ್ರೀಯುತರು ಇಂಗ್ಲಿಷ್ ಶಿಕ್ಷಣದ ಈಯತ್ತೈಯ ವರೆಗೆ ತಮ್ಮ ಜನ್ಮಸ್ಥಳದಲ್ಲಿಯೆ ಇದ್ದು, ಮುಂದೆ ನಾಸಿಕ ಹಾಯ್‌ಸ್ಕೂಲಿಗೆ ಹೋಗಿ, ಅಲ್ಲಿಂದಲೇ ೧೯೧೦ನೆಯ ಇಸ್ವಿಯಲ್ಲಿ ಮ್ಯಾಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ಮುಂದಿನ ತಮ್ಮ ವಿದ್ಯಾಭ್ಯಾಸವನ್ನು ಪುಣೆಯ ಫರ್ಗ್ಯುಸನ್ ಕಾಲೇಜಿನಲ್ಲಿ ಮುಂದುವರಿಸಿ, ೧೯೧೩ರಲ್ಲಿ ಬಿ. ಎ. ಪರೀಕ್ಷೆಯಲ್ಲಿ ಒಂದನೆಯ ತರಗತಿಯಲ್ಲಿ ಉತ್ತೀರ್ಣರಾದರಲ್ಲದೆ, ಭೌತಿಕಶಾಸ್ತ್ರ ಹಾಗು ರಸಾಯನ ಶಾಸ್ತ್ರಗಳಲ್ಲಿ ಪ್ರತ್ಯೇಕವಾಗಿ ಹಾಗು ಕೂಡಿಯೆ ಯುನಿವರ್ಸಿಟಿಯಲ್ಲಿ ಮೊದಲಿಗರೆನಿಸಿದರು. ಒಂದು ವರ್ಷದ ಕಾಲ ಅಲ್ಲಿಯೆ ಅಧ್ಯಾಪಕವೃತ್ತಿಯನ್ನೆಲ್ಲೋ ಎಂದಿದ್ದು, ಆಮೇಲೆ ೧೯೧೪ನೆಯ ಇಸ್ವಿಯಲ್ಲಿ ಮುಂಬಯಿಯ ಸೆಂಟ್ ಝೇವಿಯರ್ ಕಾಲೇಜಿನಿಂದ ಎಮ್.ಎ. ಪರೀಕ್ಷೆಯಲ್ಲಿ ತೇರ್ಗಡೆಯಾ-ದರು, ಮತ್ತು ಮುಂದೆ ೧೯೧೬ರಲ್ಲಿ ಬಿ. ಎಸ್ಸಿ. ಪರೀಕ್ಷೆಯನ್ನು ಪೂರೈಸಿ ಭೌತಿಕ ಶಾಸ್ತ್ರದಲ್ಲಿ ಅಸಿಸ್ಟಂಟ್ ಪ್ರೊಫೆಸರ್ ಎಂದು ನಿಯೋಜಿಸಲ್ಪಟ್ಟರು. ಆಗಸ್ಟ್ ೧೯೧೬ರಿಂದ ಮಾರ್ಚ್ ೧೯೧೭ರ ವರೆಗೆ ಎಂದರೆ, ಕರ್ನಾ-ಟಕ ಕಾಲೇಜಿನಲ್ಲಿ ನಿಯಮಿಸಲ್ಪಡುವವರೆಗೆ, ಅಹ್ಮದಾಬಾದಿನ ಗುಜರಾಥ ಕಾಲೇಜಿನಲ್ಲಿ ಇದ್ದರು. ೧೯೧೭ ಮಾರ್ಚಿಯಿಂದ ಇಂದಿನ ವರೆಗೆ ಇವರು, ಅವ್ಯಾಹತವಾಗಿ ಕರ್ನಾಟಕ ಕಾಲೇಜಿನ ಮುಖಾಂತರ ಕರ್ನಾಟಕದ ಸೇವೆಯನ್ನು ಮಾಡಿದ್ದಾರೆ.

ಕಳೆದ ೩೦ ವರುಷಗಳಲ್ಲಿ ಇವರು ತಮ್ಮ ವಿಭಾಗದ ಉನ್ನ-ತಿಯ ಬಗೆಗೆ ವಿಶೇಷ ಪರಿಶ್ರಮವನ್ನು ವಹಿಸಿರುವರಲ್ಲದೆ, ಇತರ ವಿಜ್ಞಾನ ವಿಭಾಗಗಳ ಬೆಳೆವಣಿಗೆಯ ವಿಷಯದಲ್ಲಿಯೂ ತಮ್ಮ ಬೆಲೆಯುಳ್ಳ ಸಲಹೆಯನ್ನು ನೀಡಿದ್ದಾರೆ. ಶ್ರೀಯುತರು ಕೆಲಸ ಮಾಡುತ್ತಿರುವಷ್ಟು ಭೌತಿಕ ಶಾಸ್ತ್ರದ ವಿಭಾಗವಾದರೂ, ಕರ್ನಾ-ಟಕ ಕಾಲೇಜಿನ ವಿಜ್ಞಾನವಿಭಾಗವೆಂದೊಡನೆ ಎಲ್ಲರೆದುರೂ ನಿಲ್ಲುವ ವ್ಯಕ್ತಿಯೆಂದರೆ ಶ್ರೀಯುತರೇ. ಇಂದು ಕರ್ನಾಟಕ ಕಾಲೇಜಿನ ವಿಜ್ಞಾನವಿಷಯಕ್ಕೆ ಸಂಬಂಧಪಟ್ಟ ಎಲ್ಲ ತರಗತಿ-ಗಳಲ್ಲಿ ಹಾಗೂ ವಿಭಾಗಗಳಲ್ಲಿ, ಸಾಧಾರಣವಾಗಿ ಆರುನೂರರಷ್ಟು ವಿದ್ಯಾರ್ಥಿಗಳು ಶಿಕ್ಷಣಪಡೆಯುತ್ತಿರುವರು. ಪ್ರಾರಂಭದತೆಯ!

ಇವರು ಮಾಡಿದ ಕಾರ್ಯವೆ ಈ ಎಲ್ಲದರ ಕಳಹೆದಿಯೆಂದು ಹೇಳಿದಲ್ಲಿ, ಏನೂ ಅತಿಶಯೋಕ್ತಿಯೆನಿಸದು.

ಶ್ರೀಯುತರು ಕಲಿಸಲು ಅನುಸರಿಸುವ ಪದ್ಧತಿಯು ಎಲ್ಲರ ನೆಟ್ಟಿಗೆಗೆ ಪಾತ್ರವಾದಂತಹದು. ಕೇವಲ ಪರೀಕ್ಷೆಗೆಂದೇ ಕಲಿಸುವಂತಹರ ಜಾತಿಗೆ ಸೇರಿದವರು ಇವರಲ್ಲ. ಇವರಿಗೆ ಮುಖ್ಯವಾದುದು ವಿಷಯಪ್ರತಿಪಾದನೆ ಹಾಗೂ ಅದರ ನಿಜವಾದ ತಿಳುವಳಿಕೆಯಾಗಬೇಕೆಂಬ ಬಯಕೆ. ಹೀಗಾದುದರಿಂದ ಎಷ್ಟೋ ಸಲ ಇವರು, ಕೆಳಗಿನ ತರಗತಿಯಲ್ಲಿ ಮೇಲಿನ ತರಗತಿಯ ವಿಷಯ ದಿಗ್ದರ್ಶನವನ್ನು ಮಾಡುತಿರುವುದು ಕಂಡುಬರುವುದು. ಇವರ ವಾಗ್ಝರಿಯು ಶ್ರಮದಿಂದ ಬಳಲಿದುದನ್ನು ನಾನು ಎಂದೂ ಕಂಡಿಲ್ಲ. ಎಷ್ಟೋ ಸಲ ನಾಲ್ಕು ಘಂಟೆಗಳ ಕಾಲ ಮಾತನಾಡಿದುದು ಕೂಡ ಉಂಟು.

ಶ್ರೀ. ದೇವಳಾಲಕರು ಕರ್ತವ್ಯನಿಷ್ಠರು. ಕೈಕೊಂಡ ಕಾರ್ಯದಲ್ಲಿ ಅತ್ಯಂತ ದಕ್ಷರು ಹಾಗು ಕೆಲಸದ ಪ್ರಾರಂಭದಿಂದ 'ಕರ್ಮಣ್ಯೇವಾಧಿಕಾರಸ್ತೇ' ಎಂಬ ಗೀತಾವಾಕ್ಯದ ಅರ್ಥವನ್ನು ತಮ್ಮ ಕಾರ್ಯಕ್ಕೆ ಹಿನ್ನೆಲೆಯಾಗಿರಿಸಿಕೊಂಡವರು ಇವರಿಗೆ ಕೆಲಸವನ್ನು ತಪ್ಪಿಸುವ ಇಲ್ಲವೆ ಜಾಗರೂಕತೆಯಿಂದ ಕೆಲಸ ಮಾಡದಿರುವ ವ್ಯಕ್ತಿಗಳನ್ನು ಕಂಡರೆ ಆಗದು. ಇವರು ಎಂದೂ ತಪ್ಪನ್ನು ಮಾಡದವರೆಂಬುದು ನನ್ನ ಅಭಿಪ್ರಾಯವಲ್ಲ. ಎಷ್ಟೋ ಸಲ ತಮ್ಮ ಅಭಿಪ್ರಾಯವು ತಪ್ಪಾದುದೆಂದು ತಿಳಿದೊಡನೆಯೆ ಒಪ್ಪುವ ಸ್ವಭಾವದವರು. ಇವರು ತಮ್ಮ ಕರ್ತವ್ಯಪಾಲನೆ ಹಾಗು ಶಿಸ್ತಿನ ವಿಷಯದಲ್ಲಿ ಅನುಸರಿಸುವ ಧೋರಣೆಯು, ಇವರ ನಿಜವಾದ ಶಾಂತ ಹಾಗು ಸುಸ್ವಭಾವಕ್ಕೆ ಮುಸುಕುಹಾಕಿದಂತಾಗಿ, ಇಂದಿನ ವಿದ್ಯಾರ್ಥಿಗಳಲ್ಲಿ ಸಹ 'ಏನಪಾ, ದೇವಳಾಲಕರ ಸಂಗತಿ ಬಹಳ ಕಠಿಣೋ! ಹೋದ ಕೂಡಲೆ ಆಂಜಿಕೇನಽ ಬರತದಪಾ!' ಎನ್ನುವಷ್ಟು ಇದ್ದುದು, ಸಾಮಾನ್ಯರ ಅನುಭವದ ಮಾತಾಗಿದೆ. ಸಾಮಾನ್ಯವಾಗಿ, ನಿಕಟ ಪರಿಚಯವಿಲ್ಲದವರಲ್ಲಿ ಬಹುಜನರು, ಇವರ ನಿಜವಾದ ಸ್ವಭಾವವನ್ನು ಸರಿಯಾಗಿ ಅರಿತುಕೊಂಡಿಲ್ಲವೆಂದು ಹೇಳಬಹುದು.

ಶ್ರೀಯುತರು ಕರ್ತವ್ಯಕಠೋರರಿದ್ದಷ್ಟೇ ಕೋಮಲರೂ ಆಗುದು. ಅವರು ಬಡ ವಿದ್ಯಾರ್ಥಿಗಳಿಗೆ ಬಹಳ ಸಹಾಯವನ್ನು ನೀಡಿದ್ದಾರೆ. ಕಾಲೇಜಿನಲ್ಲಿದ್ದಾಗ ಇಲ್ಲವೆ ಇಲ್ಲಿಯ ವಿದ್ಯಾರ್ಥಿಗಳು ಬೇರೆಡೆಗೆ ಕಲಿಯಲು ಹೋದಾಗ, ಇವರು ಸಹಾಯವನ್ನು ಸಲ್ಲಿಸಿದ್ದುಂಟು. ಎಷ್ಟೋ ವಿದ್ಯಾರ್ಥಿಗಳು ಇವರಲ್ಲಿ ವಾರವನ್ನು ಕೇಳಲು ಬಂದ ವೇಳೆಯಲ್ಲಿ ಇವರು ಹೇಳಿದ ಮಾತುಗಳು ಅತ್ಯಂತ ಮನನೀಯವಿದ್ದು, ಅನುಕರಣೀಯವೂ ಇವೆ ವಾರಕ್ಕೆಂದು ಹುಡುಗರು ಬಂದರೆ, ಆ ಹುಡುಗರು ಮನೆಯವರ ಕೆಲಸದಲ್ಲಿಯೇ ವೇಳೆಯನ್ನು ವ್ಯಯಿಸಬೇಕಾಗುವುದೆಂಬ ಭಯದಿಂದ ಅವರಿಗೆ ಹಣವನ್ನು ಸಲ್ಲಿಸಿ, ಹೊರಗೆ ಕ್ಲಬ್ಬುಗಳಲ್ಲಿ ಊಟಮಾಡಲು ಇವರು ಉಪದೇಶಿಸಿದ ಪಂದರ್ಭಗಳು ಅನೇಕ ವಿವೆ. ವಿಜ್ಞಾನ ವಿಚಾರಗಳನ್ನು ಇನ್ನೂ ಮುಂದುವರಿಸಿ, ಇವೆಲ್ಲವುಗಳನ್ನು ನಡೆಯಿಸಲಿರುವ 'ಶಕ್ತಿ'ಯಲ್ಲಿ ವಿಶ್ವಾಸವಿದ್ದವರು.

ಕರ್ನಾಟಕ ಕಾಲೇಜಿನಲ್ಲಿ, ೧೯೩೪ನೆಯ ಇಸ್ವಿಯಲ್ಲಿ ನಾನು ಸೊದಲು ಸಲ ಕೆಲಸಕ್ಕೆ ಸೇರಿದೊಡನೆ, ಇವರು ನನಗೆ ಗುಟ್ಟಿನಲ್ಲಿ ಹೇಳಿದ ಮತ್ತು ಇಂದು ನಾನು ಅವುಗಳನ್ನು ಸಾರ್ವಜನಿಕವಾಗಿ ಹೇಳುವ—ಮುತ್ತಿನಂತಹ ಮೂರು ಮಾತುಗಳು, ಇವರ ವಿಷಯದ ನಮ್ಮ ಆದರವನ್ನು ಹೆಚ್ಚಿಸುವಂತಿವೆ. ಆ ಮೂರು ಮಾತುಗಳೆಂದರೆ "ವೇಳೆಗೆ ಸರಿಯಾಗಿ ಕಾಲೇಜಿಗೆ ಬರುವುದು, ದಕ್ಷತೆಯಿಂದ ಕೆಲಸಮಾಡುವುದು ಹಾಗು ಯಾವ ವಿಷಯಕ್ಕಾಗಿಯೂ ಒನಾಪತ್ಯಕನಾಗಿ ಅಭಿಪ್ರಾಯ ವ್ಯಕ್ತಮಾಡುವುದನ್ನು ತ್ಯಜಿಸುವುದು." ಈ ಮಾತುಗಳು ನವಕರಿಯಲ್ಲಿ ಸೇರಿರುವವರಿಗೆ ಎಂದಿಗೂ ಅನುಭವದ ಮಾತುಗಳೆಂದು ಉಳಿಯುವಂತಿವೆ.

ಕರ್ನಾಟಕ ಕಾಲೇಜಿನ ಭೌತಿಕಶಾಸ್ತ್ರ ವಿಭಾಗದಲ್ಲಿ ಪದವಿಯ ವರೆಗೆ ಕಲಿಸುವ ಯೋಜನೆಯನ್ನು ಕಾರ್ಯರೂಪಕ್ಕೆ ಇಳಿಸಬೇಕೆಂಬುದು ಇವರ ಹೆಬ್ಬಯಕೆಯಾಗಿತ್ತು. ಯುದ್ಧಪೂರ್ವದಲ್ಲಿಯೆ ಪ್ರಾರಂಭವಾಗಬೇಕಾಗಿದ್ದ ಈ ವಿಭಾಗವು ಇನ್ನೂ ಯೋಜನೆಯ ರೂಪದಲ್ಲಿಯೇ ಉಳಿದಿದೆ. ಶ್ರೀಯುತರು ಕರ್ನಾಟಕ ಕಾಲೇಜಿನಿಂದ ದೂರವಾದರೂ ಅವರ ಅನುಭವದ ಉಡುಗರೆಗಳು ನಮಗೆ ಈ ನೊವಲೇ ದೊರೆತಿವೆ. ಈ ಉಡುಗರೆಗಳೆಂದರೆ ಈಗಾಗಲೇ ಐದು ಸಲ ಪುನರ್ಮುದ್ರಿತವಾದ ಪ್ರೀನ್ಡಿಯಸ್ ಕ್ಲಾಸಿನ ಪುಸ್ತಕವೊಂದು ಮತ್ತು ಇನ್ನು ಒಂದೆರಡು ತಿಂಗಳುಗಳಲ್ಲಿ ಪೂರ್ತಿಯಾಗಿ ಹೊರಬೀರುವ ಅವರ ಇಂಟರ್ ಕ್ಲಾಸಿನ ಪುಸ್ತಕವೊಂದು. ವಿದ್ಯಾಧನವನ್ನೇ ತಮ್ಮ ಜೀವನದ ಧ್ಯೇಯವನ್ನಾಗಿರಿಸಿದ ಇವರು, ಇನ್ನು ಮೇಲೆ ನಮ್ಮ ಕಾಲೇಜಿನಲ್ಲಿ ಕರ್ನಾಟಕದ ವಿದ್ಯಾರ್ಥಿಗಳಗೋಸುಗ ಪುಸ್ತಕರೂಪದಲ್ಲಿ—ಹಾಗೂ ತಾವೇ ತಯಾರುಮಾಡಿ ತಮ್ಮ ಕೆಲಸವನ್ನು ಪೂರ್ತಿಮಾಡಬೆಂದು ಇಟ್ಟಿರುವ ನನ್ನಂತಹ ತಮ್ಮ ವಿದ್ಯಾರ್ಥಿ-ಶಿಕ್ಷಕರ ಪಾಠಿಯಲ್ಲಿ—ಇರುವವರಿದ್ದಾರೆ.

ಶ್ರೀಯುತರಿಗೆ ಕನ್ನಡದಲ್ಲಿ ಮಾತನಾಡಬೇಕೆಂಬ ಬಯಕೆಯು ಬಹಳ. ನನಗಂತೂ ಅವರೊಂದಿಗೆ ಕನ್ನಡದಲ್ಲಿ ಹೊರತುಪಡಿಸಿ ಬೇರೆ ಭಾಷೆಯಲ್ಲಿ ಮಾತನಾಡಿ ಗೊತ್ತೇ ಇಲ್ಲ. ಇಷ್ಟೇ ಅಲ್ಲದೆ ತಮಗೆ ಬರುವ ಕನ್ನಡ ಮಾತಿಗೆ ನಾನೇ ಮುಖ್ಯ ಕಾರಣನೆಂದು ಅವರು ಅನೇಕರಿಗೆ ಹೇಳಿದುದೂ ಉಂಟು. ತಾವು ಕನ್ನಡ ನಾಡಿನ ಉಪ್ಪನ್ನುಂಡಿದ್ದೇವೆಂಬ ಅರಿವಾದರೂ ಅವರಿಗೆ ಜೆನ್ನಾಗಿಯೆ ಇದ್ದು, ನಮ್ಮ ಹಿಂದಣ ಇತಿಹಾಸವನ್ನು ಓದಿ ಅವರು ಸಂತೋಷಿಸಿದುದೂ ಉಂಟು. ಪ್ರಾರಂಭದಲ್ಲಿ ಕನ್ನಡದ ಶಬ್ದವನ್ನು ಸಹ ಅರಿಯದ ಇವರು, ನಮ್ಮ ಸಾರ್ವಜನಿಕ ಜೀವನದಲ್ಲಿ ಪ್ರೇಮದಿಂದ ಬೆರೆದು ಅನೇಕ ಕನ್ನಡ ಮಿತ್ರರನ್ನು ಸಂಪಾದಿಸಿರುವುದೇ ಇವರ ಶ್ರೇಯಸ್ಕರವು. ನಿವೃತ್ತರಾಗಲಿರುವ ಶ್ರೀಯುತರು ಸದ್ಯಕ್ಕಂತೂ ಧಾರವಾಡದಲ್ಲಿಯೇ ಇರುವವರಿದ್ದಾರೆ. ಮುಂಬರುವ ಕನ್ನಡ ಪ್ರಾಂತ ಹಾಗು ಅದರ ಅಂಗವಾಗಿ ಹೆರೆಯಲಿರುವ ಕರ್ನಾಟಕ ವಿಶ್ವವಿದ್ಯಾಲಯದ ಕಾರ್ಯದಲ್ಲಿ ಇವರ ಅನುಭವದ ನೆರವನ್ನು ನಾವು ಪಡೆಯಲೆ ಬೇಕು. ಕನ್ನಡಮಾತೆಯು ಅವರಿಗೆ ದೀರ್ಘಾಯುರಾರೋಗ್ಯವನ್ನು ದಯಪಾಲಿಸಲಿ ಹಾಗು ಶ್ರೀಯುತರು ಕನ್ನಡನಾಡಿನ ಸೇವೆಯನ್ನು ಇನ್ನೂ ಹೆಚ್ಚಿಚ್ಛಾಗಿ ಮಾಡುವಂತಾಗಲಿ—ಎಂದು ಹಾರೈಸಿ, ಈ ತನಕ ಅವರು ಮಾಡಿದ ಸೇವೆಗೆ ನಮ್ಮ ಹೃತ್ಪೂರ್ವಕ ಧನ್ಯವಾದಗಳನೂ ಹಾಗು ಕೃತಜ್ಞತೆಯನ್ನೂ, ಹಿಂದಿನ ಹಾಗು ಇಂದಿನ ವಿದ್ಯಾರ್ಥಿಗಳ ಪರವಾಗಿ ಅರ್ಪಿಸುತ್ತಿದ್ದೇನೆ.



ಮುಂಬಯಿ ಪ್ರಾಂತದ ಮಾರಾಟಕರ ಕಾಯಿದೆ

ಕನ್ನಡದಲ್ಲಿ. ಭಾಷಾಂತರಕಾರರು: ಶ್ರೀ. ಕೆ. ಎಸ್. ಗದಗಕರ ಬಿ. ಎ. (ಆನರ್ಸ್) ಎಲ್‌ಎಲ್. ಬಿ. ಧಾರವಾಡ.

ದೇಶದಲ್ಲಿಯ ಪ್ರತಿಯೊಬ್ಬ ನಾಗರಿಕನಿಗೂ ಆ ದೇಶದ ರಾಜಕೀಯ ಕಾಯಿದೆಗಳ ಜ್ಞಾನವಿರಬೇಕಾದುದು ಅನಿವಾರ್ಯ. ಕಾಯಿದೆಗಳು ಸಮಾಜದ ಕಲ್ಯಾಣಕ್ಕಾಗಿ ಇವೆಯೆ ?—ಕೆಲವೊಂದು ವಿಶಿಷ್ಟ ಗುಂಪು-ವ್ಯಕ್ತಿಗಳ ಹಿತಸಾಧನೆಗಾಗಿ ಇವೆಯೇ ?—ಎಂಬ ಮಾತು ಪ್ರತಿಯೊಬ್ಬ ಸಾಮಾಜಿಕನಿಗೂ ತಿಳಿದಿರಬೇಕಾದುದು ಅತ್ಯಗತ್ಯ. ಬಹುಜನರ ಕ್ಷೇಮಕ್ಕಾಗಿ ಇರುವ ಕಾಯಿದೆಗಳನ್ನು ಎಲ್ಲರೂ ಅನುಸರಿಸಲೆ ಬೇಕು. ಮಾನವನ ಮೂಲಭೂತ ಹಕ್ಕಿನ ಮೇಲೆ ಗದೆತರುವಂತಹ ಮತ್ತು ಸಮಾಜದಲ್ಲಿಯ ಬಹುಜನರ ಹಿತದ ಮೇಲೆ ಆಘಾತವನ್ನೊಡ್ಡುವಂತಹ ಕಾಯಿದೆಗಳನ್ನು ಪ್ರತಿಭಟಿಸುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯ. ಆದುದರಿಂದ, ಕಾಯಿದೆಗಳೇ ತಿಳಿಯದಂತಿರುವಾಗ ಅವುಗಳನ್ನು ಅನುಸರಿಸುವುದು ಹೇಗೆ ? ಪ್ರತಿಭಟಿಸುವುದು ಹೇಗೆ ? ಇದುವರೆಗಿನ ಪರಾಧೀನಭಾರತದಲ್ಲಿ ಒತ್ತಾಯದ ಆಳಿಕೆ ನಡೆದುದರಿಂದ, ಸಮಾಜದ ಹಕ್ಕಿನ ಲಕ್ಷ್ಯವೆ ಇರುತ್ತಿರಲಿಲ್ಲ. ಆದುದರಿಂದಲೆ ಬೇರೆ ಬೇರೆ ಭಾಷೆಯು ಜನರಿಗೆ ತಿಳಿಯುವಂತೆ, ಪ್ರಾದೇಶಿಕ ಭಾಷೆಯಲ್ಲಿ ಸರಕಾರದವರು ಕಾಯಿದೆಗಳನ್ನು ಪ್ರಕಟಿಸುತ್ತಲೆ ಇರಲಿಲ್ಲ ಸಂಕ್ರಮಣಕಾಲದಲ್ಲಿರುವ ಇಂದಿನ ರಾಷ್ಟ್ರೀಯ ಸರಕಾರಗಳಿಗೂ, ತಾವು ರಚಿಸಿದ ಕಾಯಿದೆಗಳನ್ನು ದೇಶೀಯ ಭಾಷೆಯಲ್ಲಿ ಪ್ರಕಟಿಸಲು ಇದುವರೆಗೆ ಸಾಧ್ಯವಾಗಿಲ್ಲ. ಆದುದರಿಂದ ಸಮಾಜ ಹಿತದ ಬುದ್ಧಿಯಿಂದ—ಸರ್ವಜನರೂ ತಿಳಿದುಕೊಳಲೇಬೇಕಾದ— ಈ 'ಮಾರಾಟಕರ ಕಾಯಿದೆ'ಯನ್ನು ಸುಲಭಭಾಷೆಯಲ್ಲಿ ಕನ್ನಡಿಸಿ. ನಾಡಿಗರಿಗೆ ಒದಗಿಸಿಕೊಟ್ಟ ಶ್ರೀಮಾನ್ ಕೆ. ಎಸ್. ಗದಗಕರರು ನಮ್ಮೆಲ್ಲರ ಅಭಿನಂದನೆಗೆ ಪಾತ್ರರಾಗಿದ್ದಾರೆ.

ಪ್ರಸ್ತಾವನೆಯಲ್ಲಿ ಸಾಧಕ-ಬಾಧಕ ಪ್ರಮಾಣಗಳೊಂದಿಗೆ ಈ ಕಾಯಿದೆಯ ಪರಿಚಯವನ್ನು—ಸ್ವಲ್ಪಪರಲ್ಲಿಯೆ— ಸುಂದರವಾಗಿ ಮಾಡಿಕೊಡಲಾಗಿದೆ. ಸರಕಾರದವರಿಂದ ಸಮಾಜವು ಸುಖ-ಸೌಕರ್ಯಗಳನ್ನು ಆಪೇಕ್ಷಿಸುತ್ತಿದ್ದಲ್ಲಿ, ಅದಕ್ಕೆ ಬೇಕಾಗುವ ಆರ್ಥಿಕಭಾರವನ್ನು ಆ ಸಮಾಜ ತನ್ನ ತಲೆಯ ಮೇಲೆ ವಹಿಸಿಕೊಳ್ಳಲೇ ಬೇಕಾಗುವುದು. ಸಾಗರದ ಉಪ್ಪು ನೀರನ್ನು ಕುಡಿದು ನೋಡಗಳು ಲೋಕಕ್ಕೆ ಸವಿನೀರನ್ನು ಒದಗಿಸುತ್ತಿರುವಂತೆ, ಅಜಳಿತ ಎಲ್ಲರಿಂದಲೂ ಕರ-ಕಂದಾಯಗಳನ್ನು ಎತ್ತಿ, ಅವರಿಗೆ ವಿವಿಧಬಗೆಯ ಸುಖ-ಸೌಕರ್ಯಗಳನ್ನು ಒದಗಿಸಬೇಕಾಗುವುದು. 'ಕೊಡುವುದು ಬೇಡ; ಬೇಕಾದುದು ಮಾತ್ರ ಬೇಕೇಬೇಕು!' ಎಂದರೆ ಹೇಗೆ ನಡೆಯಬೇಕು ? ವೈಷಮ್ಯಮಯ ಸಮಾಜದಲ್ಲಿ ಎಲ್ಲ ಬಗೆಯಿಂದಲೂ ಸಮತೆಯನ್ನು ತಂದು ಒದಗಿಸುವುದು ಸಮಂಜಸ ಸರಕಾರದ ಕರ್ತವ್ಯ; ಇಂತಹ ಸರಕಾರಕ್ಕೆ ಎಲ್ಲ ಬಗೆಯಿಂದ ಸಹಕಾರ ಕೊಡುವುದು ವ್ಯಕ್ತಿಯ ಮತ್ತು ಸಮಾಜದ ಕರ್ತವ್ಯ. ಈ ವಿಷಯದ ಜ್ಞಾನವಾಗಬೇಕಾದರೆ, ಪ್ರತಿಯೊಬ್ಬ ಸಾಮಾಜಿಕ ಇಂತಹ ಆರ್ಥಿಕ ಕಾಯಿದೆಗಳನ್ನು ಅರಿತುಕೊಳ್ಳುವುದು ಅತ್ಯಂತ ಅವಶ್ಯವಾಗಿದೆ.

ಪುಸ್ತಕದ ಮೊದಲಿನ ೫೬ ಪುಟಗಳಲ್ಲಿ ಕಾಯಿದೆಯ ಪರಿಭಾಷೆಗಳ ಸ್ಪಷ್ಟೀಕರಣವೂ, ಈ ಕಾಯಿದೆಯನ್ನು ಅಮಲಿನಲ್ಲಿ ತರುವುದರ ಬಗೆಗೆ ಸರಕಾರ ಏರ್ಪಡಿಸಿದ ತಂತ್ರ ವಿಚಾರವೂ, ಮಹತ್ವದ ನಮೂನೆಯ ಬಗೆಗೆ ಟೀಕೆ-ಟಿಪ್ಪಣಿಗಳೂ, ಶುದ್ಧವಾದ ಸುಲಭವಾದ ಕನ್ನಡದಲ್ಲಿವೆ. ಆ ಮೇಲೆ ೫೬ ರಿಂದ ಲಂಡ ವರೆಗಿನ ಪುಟಗಳಲ್ಲಿ ಮಾರಾಟಕರ ಕಾಯಿದೆಯ ೧೪ ಪ್ರಕರಣಗಳು ಕ್ರಮವಾಗಿ— ೧ ಸಂಕ್ಷಿಪ್ತ ಹೆಸರು ಮತ್ತು ವ್ಯಾಪ್ತಿಗಳು. ೨ ಮಾರಾಟಕರದ ಅಧಿಕಾರಿಗಳು, ೩ ಕರಕ್ಕೆ ವಾತ್ರವಿರುವ ಉತ್ಪನ್ನದ ಲೆಕ್ಕ ಹಾಕುವುದು, ೪ ವ್ಯಾಪಾರಾಸ್ಥರ ನೋಂದಣಿ, ೫ ಪತ್ರಕಗಳನ್ನು ಸಾದರಪಡಿಸುವುದು, ೬ ಕರಕೊಡುವುದು, ೭ ಕರ ಮತ್ತು ದಂಡದ ವಸೂಲಿ, ೮ ಹೆಚ್ಚುತ್ತುಂಬಿದ ರಕಮನ್ನು ಮರಳಿ ಪಡೆಯುವುದು, ೯ ಲೆಕ್ಕಪತ್ರಗಳ ತಪಾಸಣೆ, ೧೦ ಅಪೀಲು ಮತ್ತು ಪುನರ್ವಿಚಾರಣೆ. ೧೧ ನೋಟೀಸುಗಳು, ೧೨ ಫೀಗಳು, ೧೩ ಖುಟ್ಟಿಗಳು ರಾಜೀಯಾಗುವುದು, ೧೪ ಅಪರಾಧಗಳು ಮತ್ತು ಶಿಕ್ಷೆ—ಭಾಷಾಂತರಿತವಾಗಿ ಬಂದಿವೆ ಕೊನೆಯ ನಾಲ್ಕು ಪುಟಗಳಲ್ಲಿ ಈ ಕಾಯಿದೆಗೆ ಸಂಬಂಧಿಸಿದ ನಮೂನೆ ೨ ಮತ್ತು ನಮೂನೆ ೬ ಈ ಪತ್ರಿಕೆಗಳ ಭಾಷಾಂತರಗಳಿರುವುವು.

ಪ್ರತಿಯೊಬ್ಬ ವರ್ತಕನೂ ಗಿರಾಕಿಯೂ ಈ ಕಾಯಿದೆಯ ಪರಿಚಯ ಮಾಡಿಕೊಳ್ಳಲೆ ಬೇಕು. ಇಂದಿನ ಅನಿಯಂತ್ರಿತವಾದ ಹುಚ್ಚುಪೇಟೆಯಲ್ಲಿ, ಪ್ರತಿಯೊಬ್ಬ ವ್ಯಾಪಾರಿಯೂ ಪ್ರತಿಯೊಂದಕ್ಕೂ 'ಸೇಲ್ಸ್ ಟ್ಯಾಕ್ಸ್' ಎಂದು ಹೆಚ್ಚಿಗೆ ಹಣ ವಸೂಲ್ ಮಾಡುವುದು ನಡೆದಿದೆ. ಕೊಟ್ಟ ಹಣ ಸರಕಾರಕ್ಕೆ ತಲ್ಪುವುದೊ, ನಡುವಿನವರೇ ಹೊದೆಯುವರೋ ಎಂಬುದು ಪ್ರತಿಯೊಬ್ಬ ಗಿರಾಕಿಗೆ ಗೊತ್ತಾಗಬೇಕಾದರೆ, ಈ ಕಾಯಿದೆಯ ಜ್ಞಾನವಾಗಿರಬೇಕು. ಅದರಂತೆಯೆ ವರ್ತಕರು ಅಧಿಕಾರಿಗಳ ಮಾಯಾಜಾಲದಲ್ಲಿ ಸಿಲುಕದಿರುವಂತೆ ಎಚ್ಚರಿಕೆಯಿಂದಿರಲು.

ಅವರೂ ಈ ಕಾಯಿದೆಯನ್ನು ಅರಿತುಕೊಳ್ಳಬೇಕು. ಎಲ್ಲರಿಗೂ ತಿಳಿಯುವಂತಹ ಕನ್ನಡದಲ್ಲಿಯೆ ಅದನ್ನು ತಿಳುಹಲು ಸಮರ್ಥವಾದ ಈ ಪುಸ್ತಕದ ಉಪಯೋಗವನ್ನು ಎಲ್ಲರೂ ಮಾಡಿಕೊಳ್ಳುವರೆಂದು ನಮ್ಮ ಹಾರೈಕೆ. --ಸಂಪಾದಕ

೪೫. ಅಸ್ಥಿಪಂಜರ

ಸ್ವತಂತ್ರ ಸಾಮಾಜಿಕ ಕಾದಂಬರಿ. ಬರೆದವರು ಶ್ರೀಮಾನ್ ಆರ್ಬಿಕ ವೆಂಕಟೇಶರು. ಬೆಲೆ ೩-೦-೦.

'ಉಷಾ ಸಾಹಿತ್ಯಮಾಲೆ'ಯ ಪ್ರಕಟನೆಯಾದ ಈ ಕಾದಂಬರಿ, ಶ್ರೀ. ಆರ್ಬಿಕರ ಕಾದಂಬರಿಗಳಲ್ಲಿ ಎರಡನೆಯದು. ಮೊದಲಿನ ಕಾದಂಬರಿಯಲ್ಲಿ ರಾಜಕೀಯ ಹಿನ್ನೆಲೆ ಇದ್ದರೆ, ಇಲ್ಲಿಯ ಕಥಾನಕ ಸಾಮಾಜಿಕವಾಗಿದೆ.

ಕಥಾನಕವು ಬ್ರಾಹ್ಮಣ ಸಮಾಜದ ಸಾಮಾನ್ಯ ಕುಟುಂಬಕ್ಕೆ ಸಂಬಂಧಿಸಿದ್ದು. ಹಾವೇರಿಯಲ್ಲಿ— ಲೇಖಕರ ಮೂಲ ಸ್ಥಳ— ಭೀಮಾಚಾರ್ಯರು ತಮ್ಮ ಕಠೋರ ಸ್ವಭಾವಕ್ಕೆ ಎಂದಿನಿಂದಲೂ ಪ್ರಸಿದ್ಧರು! ಅವರ ಮಹತ್ವಾಕಾಂಕ್ಷೆ ಚಿರಂಜೀವನೇ ಕೃಷ್ಣಮೂರ್ತಿ. ಸಣ್ಣವನಿರುವಾಗಲೇ ತಾಯಿಯು ವಿದ್ಯತ್ತೆಯ ನೆರಳುಬಿದ್ದು, ಓದುವ ಚಟ ಕೆಡಹಿಕೊಂಡಿದ್ದನು ದಿನಗಳೆದಂತೆ ಪ್ರಾಥಮಿಕ ಮಾಧ್ಯಮಿಕ ಶಾಲೆಗಳಲ್ಲಿ,' ಜೋಶಿ' ಮಾಸ್ತರರಿಗೆ ನುಮತೆಯ ಆಗರವಾಗಿ ಪರಿಣಮಿಸಿದನು. ಆಗಾಗ ಸಾಹಿತ್ಯಾಭಿರುಚಿ ಹೆಚ್ಚಿಸಿಕೊಂಡು ಗಣ್ಯವ್ಯಕ್ತಿಯಾಗಬೇಕೆಂದು ಅವನು ಹಂಬಲಿಸಿದರೆ, ಮನೆಯಲ್ಲಿ ತಂದೆಯ ಕಠಾಳಸ್ವಭಾವಕ್ಕೆ ಗುರಿಯಾಗಿ ಕಷ್ಟಪಡಬೇಕಾಗುತ್ತಿತ್ತು. ಹಾಗೂ ಹೀಗೂ ಬುದ್ಧಿಬಲದಿಂದ ಮೂರ್ತಿಯು ಮ್ಯಾಟ್ರಿಕ್ ಪಾಸಾಗಿ, ಧಾರವಾಡದ ಕರ್ನಾಟಕ ಕಾಲೇಜಿಗೆ ಬರುವನು. ತಂದೆಯವರು ಆಗ ಮಗನ ಶಿಕ್ಷಣದಲ್ಲಿ ಅಪೂರ್ವ ಉತ್ಸಾಹ ತೋರಿದರೂ, ಸೊಸೆಯೊಬ್ಬಳನ್ನು ತಂದು ಮನೆಯ ತಾಪತ್ರಯ ತಪ್ಪಿಸಬೇಕೆಂಬ ಇಚ್ಛೆಯಿಂದ ವಿವಾಹಕ್ಕೆ ಒತ್ತಾಯಪಡಿಸುವರು. ಆದರೆ ಆದರ್ಶವಾದಿಯಾಗಲು ಹವಣಿಸುವ ಮೂರ್ತಿ, ಈಗಲೇ ಕೊರಳಿಗೆ ಗುದ್ದಿ ಕಟ್ಟಿಕೊಳ್ಳುವನೆ? ಅಂತೂ ವೈಮನಸ್ಸಿನ ಮೂಲಕ ಮೂರ್ತಿ ಧಾರವಾಡಕ್ಕೆ ಶರಣುಹೊಡೆಯಬೇಕಾಯಿತು. ಮುಂದೆ ಬೆಂಗಳೂರಲ್ಲಿ ಸತ್ಕಾವ್ಯವಸಾಯಕ್ಕೆ ನಿಲ್ಲಬೇಕೆಂದು ನಿಶ್ಚಯಿಸಿ ಪತ್ರವ್ಯವಹಾರ ಮಾಡಿದಾಗ, ಅಲ್ಲಿಯ ಪತ್ರಿಕೆಯೊಂದರ ಸಂಪಾದಕರು ಮೂರ್ತಿಗೆ ಸಹಾನುಭೂತಿ ತೋರಿ—ಹಣವಿದ್ದಲ್ಲ— ತಮ್ಮಲ್ಲಿಟ್ಟುಕೊಳ್ಳಲು ಮಾತು ಕೊಡುವರು. ಆದರೆ ಸಂಸಾರಕ್ಕೂ ಪೂರ್ತಿಯಾಗದ ಗಳಿಕೆಯಿಂದ ಮೂರ್ತಿ ಆ ಕೆಲಸ ಬಿಡಬೇಕಾಯಿತು. ಕೆಲಸ ಬಿಡುವ ದಿನ ಅಚ್ಚುಕೂಟದ ಕೆಲಸಗಾರರೆಲ್ಲ ಮೂರ್ತಿಗಾಗಿ ಅಸದೃಶ ಸಹಾನುಭೂತಿ ತೋರಿದರು. ಮೂರ್ತಿಯು ಪಾನಿಯಾಗಿದ್ದುದೂ ನಿಜ. ಕಾರಖಾನೆಯಲ್ಲಿ ಹೆಚ್ಚು ಹಣ ದೊರೆಯುವಂತಿದ್ದುದರಿಂದ ಅವನು ಮುರಗೋಡದಿಂದ ಹೆಂಡತಿಯನ್ನು ಕರೆದುಕೊಂಡುಬಂದು, ಬೆಂಗಳೂರಿನಲ್ಲಿ ಹೊಸ ಸಂಸಾರ ಹೂಡಿದನು. ಇದ್ದುದರಲ್ಲಿಯೆ ತನ್ನ ಸಾಹಿತ್ಯಿಕ ಆಶೆ-ಆಕಾಂಕ್ಷೆಗಳನ್ನು ಪೂರಯಿಸಿಕೊಂಡು ಸುಖದ ಜೀವನ ಸಾಗಿಸಬೇಕೆಂದರೆ ಅವನಿಗೆ ತಿಳಿಗೇಡಿ ಹೆಂಡತಿಯೊಬ್ಬಳು ಗಂಟುಬಿದ್ದಿದ್ದಳು. ತನ್ನ ಸಿಂಗರದ ಗಲಭೆಯಲ್ಲಿ ಗಂಡನ ಉದಾತ್ತಧ್ಯೇಯ ಅಕೆಗೆ ಹೊಳೆಯಲಿಲ್ಲ. ಮೂರ್ತಿಯು ಆಕೆಗಾಗಿ ವಿಷಾದಿಸುವುದು ಅಚ್ಚರಿಯಲ್ಲ. ದಿನಾಲು ಕಾರಖಾನೆಗೆ ಎಂಟು ಮೈಲು ನಡೆದು-ಹೋಗುತ್ತಿದ್ದುದರಿಂದ, ಮೂರ್ತಿಗೆ ಭಯಂಕರ ಕಾಯಿಲೆಯಾಯಿತು. ಸೊರಗಿ ಸೊರಗಿ 'ಅಸ್ಥಿಪಂಜರ'ವಾದನು. ಎಲ್ಲ ಹಿತಚಿಂತಕರು ಕೈಜಿಲ್ಲೆ ಕುಳಿತಾಗ 'ಮೂರ್ತಿಯು ಜೀವಹಿಡಿಯಲು ಸಾಧ್ಯವಿದೆ' ಎಂದು ಕುಶಲ ವೈದ್ಯರು ಆಶ್ವಾಸನೆ ಕೊಡುವರು. ಇಷ್ಟಕ್ಕೆ ಕತೆ ಮುಗಿಯುವುದು.

ಕಾದಂಬರಿಯಲ್ಲಿರಬೇಕಾದ ಪಾತ್ರರಚನಾಕೌಶಲವು, ಎರಡು ಮೂರು ವ್ಯಕ್ತಿಗಳಲ್ಲಿ ಮಾತ್ರ ಕಂಡುಬರುವುದು. ಉಳಿದುವೆಲ್ಲ ಹಿನ್ನೆಲೆಯಲ್ಲಿ ಅವರಿಗಾಗಿ ಅಷ್ಟೊಂದು ಕಳಕಳಿ ತಳೆಯಬೇಕೆಂದು ಓದುಗನನಿಸಿಸುವುದಿಲ್ಲ. ಕಥಾನಾಯಕನಾದ ಮೂರ್ತಿಯೊಬ್ಬನ ಹಂಬಲು ಮಾತ್ರ ಅಕಾಶಕ್ಕೆ ಮುಟ್ಟುವಂತಿದೆ; ಅವನ ಮುಖಮಯ ಜೀವನಕ್ಕಾಗಿ ಯಾರೂ ಕಣ್ಣೀರು ಮಿಡಿಯಬಹುದು; ಆದರೆ ಅವನ ಶಿಕ್ಷಣಕ್ರಮದಲ್ಲಿ ತಲೆದೋರುವ ಅತಿಶಯೋಕ್ತಿ, ಯಾವ ಸಹೃದಯ ಓದುಗನನ್ನೂ ಕೆಣಕದೆ ಹೋಗದು. ಅವನೊಬ್ಬ ಆದರ್ಶಜೀವಿಯೆಂದು ಕಾದಂಬರಿಕಾರರು ಉತ್ತರಿಸಿದರೂ, ಅವನು 'ಎನ್‌ಸಾಯಕ್ಲೋಪೀಡಿಯಾ' ಆಗಿ ಪರಿಣಮಿಸಿ ಜೀವಂತವ್ಯಕ್ತಿಯಾಗಲು ಸಾಧ್ಯವಿಲ್ಲವೆನಿಸುವುದು. ಒಬ್ಬ ಯುಗಪುರುಷನಿಗೆ ಅಸಾಧ್ಯವೆನಿಸಬಹುದಾದ ಬಹುಮುಖ ಜ್ಞಾನವಿರುವುದು ಸ್ವಲ್ಪ ಕುಂದೇ ಆಹುದು. ಇನ್ನು ಮೂರ್ತಿಯ ತಂದೆ ಭೀಮಾಚಾರ್ಯರಂತಹ ಕಟುಕ ತಂದೆಗಳು ಎಲ್ಲ ಮುಂದರಿದ ರಾಷ್ಟ್ರಗಳಲ್ಲಿ ದೊರೆಯದಿದ್ದರೂ ಭಾರತದಲ್ಲಿ ದೊರೆಯಬಹುದು. ಅಷ್ಟು ವಾಸ್ತವತೆಯನ್ನು ಆ ಪಾತ್ರದಲ್ಲಿ ಕಾಣಬಹುದು! ಕಾರಖಾನೆಯ ನೌಕರರ ಸಹಾನುಭೂತಿ, ಹಾವೇರಿಯಿಂದ ಬೆಂಗಳೂರಿಗೆ ಒಬ್ಬ ಮಹತ್ವಾಕಾಂಕ್ಷೆಯುವಕ ತನ್ನ ಸಾಹಿತ್ಯಿಕ ಜೀವನದ ಪ್ರಗತಿಗಾಗಿ ಹೊರಡುವುದು, ಪತ್ರಿಕಾಪ್ರಪಂಚದ ಸುಖ-ದುಃಖ, ಸಿರಿವಂತರ ದಬ್ಬಾಳಿಕೆ, ಭಿನ್ನ ಭಿನ್ನ ಸಾಹಿತಿಗಳ ವಿಸ್ತೃತಪರಿಚಯ, ಲೇಖಕರ ಬೇಕು ಬೇಡ— ಮೊದಲಾದುವನ್ನು ಪರಿಣಾಮಕಾರಿಯಾಗಿ ನಿರೂಪಿಸಿ ಲಕ್ಷ್ಯಸೆಳೆದರೂ, ಒಂಬೇ ವ್ಯಕ್ತಿಯ ಹೋರಾಟದ ಚಿತ್ರ ಯಾವಾಗಲೂ ನಮ್ಮ ಕಣ್ಣುಟ್ಟುವುದರಿಂದ, ಕಾದಂಬರಿಗಿರಬೇಕಾದ ಸನುಗ್ರಬಣ್ಣನೆ-ಲೋಕಾನುಭವಗಳ ಕೊರತೆ ಕೊನೆಗೆ ಎನಿಸದಿರದು.

ಅಂದವಾಗಿ ಕತೆಹೇಳುವಷ್ಟು ಆರ್ಬಿಕರ ಶೈಲಿ ಉತ್ತಮವಾಗಿದೆ; ಆದರೆ 'ಕರುಳುಗಳು ಮುರಿಗೆಗೊಳ್ಳುವವು' 'ಆನಂದತುಂದಿಲ'ಗಳಂತಹ ಪ್ರಯೋಗಗಳ ಪುನರುಕ್ತಿ ಬೇಜಾರುಗೊಳಿ-

ಸುವುದು. ಕಾದಂಬರಿಯ ಪರಿಪೂರ್ಣ ಸೌಂದರ್ಯಕ್ಕೆ ಅವಶ್ಯಕವಾದ ಚಿತ್ರಕತೆ ಇಲ್ಲಿಯ ಶೈಲಿಯಲ್ಲಿ ಹೆಚ್ಚಾಗಿ ಕಂಡುಬಾರದಿದ್ದರೂ, ಕೆಲ ಸನ್ನಿವೇಶಗಳಲ್ಲಿಯ ಮಾತಿನ ರಭಸ, ಹೃದಯದ ಕಳಕಳಿಗೆ ಕಡಿಮೆ ಇಲ್ಲ. ಮುಕ್ತಾಯವೂ ಅಷ್ಟು ಮನಾರ್ಹಕವಾಗಿಲ್ಲ. ಓದುಗನನ್ನು ಕಣ್ಕಟ್ಟಿನಂತೆ ಮಾಡಿ, ಈ ಕಾದಂಬರಿಯು ಮೂರ್ತಿಯ ಇತಿಹಾಸ ಇಲ್ಲವೆ ಚರಿತ್ರೆಕ್ಕಷ್ಟೇ ಸಂಬಂಧಿಸಿರುವುದೆಂಬ ನಿಲಕ್ಷಣ ಅರಿವನ್ನು ಉಂಟುಮಾಡುವುದು.

'ಅಸ್ಥಿಪಂಜರ'ಎಂಬ ತಲೆಬರೆಹವು ಇಂದಿನ ನವ್ಯ ಸಮಾಜದ– ಯುಗದ ದೈನ್ಯಾವಸ್ಥೆ, ವಾಸ್ತವತೆಗಳನ್ನು ಬೊಟ್ಟು ಮಾಡಿ ತೋರಿದರೂ, ಸಾಕಷ್ಟು ಭಯಾನಕತೆಯ ಕಲ್ಪನೆಯನ್ನೇ ಅದು ತಂದೊಡ್ಡುವುದು. ಕತೆಯ ಪ್ರಮುಖ ಪಾತ್ರವಾದ ಮೂರ್ತಿಯ ಕರುಣಾಜನಕ ಸ್ಥಿತಿಯನ್ನು ಈಗಿದ್ದ ತಲೆಬರೆಹವು ಅಚ್ಚುಕಟ್ಟಾಗಿ ತೋರಿಸುವುದಾದರೂ ಆದನ್ನೇ ಪುಸ್ತಕದ ಮೇಲೋಲೆಯ ನೇಲಿರಿಸುವುದು ಅಷ್ಟು ಸಾಧುವೆನಿಸದು. ಪ್ರತಿಸೃಷ್ಟಿಯನ್ನೇ ನಿರ್ಮಿಸಲು ಹಾತೊರೆದು, ತನ್ನ ಜೀವನವನ್ನು ದಲಿತರ ಉದ್ಧಾರಕ್ಕೆಂದು ಮೀಸಲಿಡಬೇಕೆಂದು ನಿಶ್ಚಯಿಸಿದ 'ಮೂರ್ತಿ'ಯನ್ನೇ ತಲೆಬರೆಹವಾಗಿ ಮಾಡಬಹುದಿತ್ತು.

ವಾಕ್ಪ್ರವೃತ್ತಿ ವಿಧ್ಯ, ಕಾದಂಬರಿಯ ಭವ್ಯ ಪ್ರಪಂಚದ ಪ್ರಶ್ನೆ ಬದಿಗಿರಿಸಿದರೂ, ಕೇವಲ ಪರಿಣಾಮಕಾರಕ ನಿರೂಪಣೆ, ಶೈಲಿಯ ರಭಸಕ್ಕಾದರೂ ಅರ್ಚಿಕರ ಕಾದಂಬರಿಯನ್ನು ಮನಸ್ಸುಗೊಟ್ಟು ಓದಿ ಆನಂದಿಸಬಹುದು. ಉಷಾ ಸಾಹಿತ್ಯಮಾಲೆಯ ಅಂದವಾದ ಅಚ್ಚು-ಕಟ್ಟಿಂಕೂ ಎಂದಿನಂತೆ ಇದ್ದೇ ಇನೆ.

—ಎನೆಸ್.

೧೮೨ ಮನೆಮದ್ದು (Home Remedies)

(ಔಷಧಿಯ ವಿಚಾರ)

ಬರೆದವರು : ಡಾ. ಕೊರಡ್ಕಲ್ ವೆಂಕಟರಾವ್, ಎಲ್. ಸಿ. ಎಂ. ಪ್ರಕಾಶಕರು : ನವಭಾರತ ಪುಸ್ತಕ ಭಂಡಾರ, ಉಡುಪಿ. ೧೪೪ ಪುಟಗಳು ಬೆಲೆ ೨–೦–೦.

ಮದ್ರಾಸ್ ಸರಕಾರದ ಆಯುರ್ವೇದ ಕಾಲೇಜಿನ ನಿವೃತ್ತ, ಮಹಾಮಹೋಪಾಧ್ಯಾಯ (ಪ್ರಿನ್ಸಿಪಾಲ್) ರಾದ ಕ್ಯಾಪ್ಟನ್ ಜಿ. ಶ್ರೀನಿವಾಸ ಮೂರ್ತಿ ಬಿ ಎ., ಬಿ. ಎಲ್., ಎಂ ಬಿ ಸಿ. ಎಂ. ಅವರು ಇವಕ್ಕೆ ಮುನ್ನುಡಿ ಬರೆದಿದ್ದು ಅದರಲ್ಲಿ :

" ಮನೆಮದ್ದುಗಳನ್ನು ಮಾಡಿಕೊಳ್ಳಲಿಕ್ಕೂ ರೋಗಿಗಳ ಅನುಪಾನ ಆರಯಿಕೆಗಳನ್ನು ನೋಡಿಕೊಳ್ಳಲಿಕ್ಕೂ ಬೇಕಾದ ಪ್ರಯೋಗಜ್ಞಾನಾನುಭವಗಳು ನಮ್ಮ ಅಜ್ಜಿಯಂದಿರಲ್ಲಿ ತುಂಬ ಇದ್ದು, ತಾಯಂದಿರಲ್ಲಿ ಕಡಿಮೆಯಾಗಿ, ಈಗ ನಮ್ಮ ಅಕ್ಕ-ತಂಗಿ-ಮಗಳಂದಿರಲ್ಲಿ ಅತ್ಯಲ್ಪ ಅಥವಾ ಏನೂ ಇಲ್ಲವೆಂಬಂತಾಗಿದೆ. ಈ ಅವನತಿಯನ್ನು ತಡೆಗಟ್ಟಿ, ನಮ್ಮ ಅಜ್ಜಿಯಂದಿರ ಕಾಲದ ಜ್ಞಾನಾನುಭವಗಳನ್ನು ಪುನರುದ್ಧರಿಸಿ, ಇಂದಿಗೆ ತಕ್ಕಂತೆ ಸುಧಾರಿಸಿಕೊಳ್ಳುವುದು ಅತಿ ಅವಶ್ಯವೂ ಅತ್ಯಂತ ಆವಶ್ಯಕವೂ ಆಗಿದೆ. ಈ ಉದ್ದೇಶ ಸಾಧನೆಗೆ ಇಂತಹ ಪುಸ್ತಕಪ್ರಕಟನೆಯು ಸರಿಯಾದ ಹಾದಿ, ತಕ್ಕುದಾದ ಹೆಜ್ಜೆ. ಹೇಗೆಂದರೆ ಈ ಪುಸ್ತಕವು ಹಳೆಯ ಮದ್ದುಗಳನ್ನು ವೈದ್ಯಕೀಯ ಶಾಸ್ತ್ರಜ್ಞಾನಾನುಭವಗಳ ದೃಷ್ಟಿಗಳಿಂದ ಅತ್ಯಾಧುನಿಕವಾಗಿ ಸುಧಾರಿಸಿಕೊಂಡು, ಇಂದಿಗೆ ಪ್ರಯೋಜನಕಾರಿಯಾಗುವಂತೆ ಚೆನ್ನಾಗಿ ಬರೆಯಲ್ಪಟ್ಟಿದೆ....."

ಎಂದು ಈ ಪುಸ್ತಕವನ್ನು ಪ್ರಶಂಸಿದ್ದಾರೆ. ಪ್ರಸ್ತಾವನೆಯಲ್ಲಿ ಲೇಖಕರು ಈ ಪುಸ್ತಕದಲ್ಲಿ ಹೇಳಿರುವ ಮದ್ದು (ಔಷಧಿ) ಗಳ ಬಗೆಗೆ "....ಇವು ಆಯುರ್ವೇದ ಶಾಸ್ತ್ರಸಮ್ಮತವಾದ ಹಾಗೂ ಪ್ರಯೋಗಾನುಭವಗಳಲ್ಲಿ ಒಳ್ಳೆಯ ಪರಿಣಾಮಕಾರಿಯೆಂದು ತಿಳಿದು ಬಂದ ಚುಟುಕುಮದ್ದುಗಳು. ಏನೋ ಎಂತಪದೋ ಏನಾಗುವುದೋ–ಎಂದು ಅಳುಕದೆ, ನಿರ್ಭೀತಿಯಿಂದ ಪ್ರಯೋಗಿಸಬಹುದಾದ ನಿರ್ಬಾಧಕವಾದ ಒಳ್ಳೆಯ ಮದ್ದುಗಳವು ಎಂಬುದನ್ನು ಇಲ್ಲಿಯೂ ಒತ್ತಿಹೇಳಲು ಬಯಸುತ್ತೇನೆ. ವಿಶೇಷತಃ ಗೃಹರಾಜ್ಞಿಯ ಒಡತಿಯರಾದ ಮಹಿಳೆಯರು, ಈ ಮನೆಮದ್ದಿನ ಕೈಪಿಡಿಯನ್ನು ಮನೆಯಲ್ಲಿಟ್ಟುಕೊಂಡು ಉಪಯೋಗಿಸುತ್ತಿದ್ದರೆ ಪ್ರಯೋಜನ ಹೆಚ್ಚು, ವೆಚ್ಚ ಕಡಿಮೆ. ಮನೆಯಲ್ಲೊಬ್ಬ ವೈದ್ಯನಿದ್ದಷ್ಟು ಧೈರ್ಯ....." ಎಂದು ಹೇಳಿದ್ದಾರೆ.

ಈ ಪುಸ್ತಕದಲ್ಲಿ ಮೂರು ಮುಖ್ಯ ಭಾಗಗಳಿದ್ದು, ಮೊದಲನೆಯ ಭಾಗದಲ್ಲಿ 'ಮಕ್ಕಳ ಕಾಯಿಲೆ ಮತ್ತು ಆರಯಿಕೆ' ಎಂಬ ವಿಷಯದ ನಿವರಣೆಯಿದೆ. ಮಕ್ಕಳಿಗೆ ಸಂಬಂಧಿಸಿದ ಬೇರೆ ಬೇರೆ ರೋಗಗಳ ನಿದಾನ, ಸುಲಭಚಿಕಿತ್ಸೆ, ಉಪಚಾರ, ಸಂಗೋಪನ ವಿಧಾನ ಇವುಗಳಿಗೆ ಸಂಬಂಧಿಸಿದ ೭೩ ಸಂಗತಿಗಳ ವಿವೇಚನೆ ಈ ಭಾಗದಲ್ಲಿದೆ. ಎರಡನೆಯ ಭಾಗದಲ್ಲಿ 'ಹೆಂಗಸರ ಕಾಹಿಲೆ ಮತ್ತು ಗರ್ಭಿಣಿ, ಪ್ರಸವ, ಬಾಣಂತಿತನದ ಆರಯಿಕೆ ಮತ್ತು ಸೌಂದರ್ಯಸಾಧನಗಳು' ಎಂಬ ವಿಷಯಗಳು ಬಂದಿವೆ. ಹೆಣ್ಣುಮಕ್ಕಳಿಗೆ ಸಂಬಂಧಿಸಿದ ಪ್ರತಿಯೊಂದು ವಿಕಾರವನ್ನು ಕುರಿತೂ ನಿಧಾನ, ಚಿಕಿತ್ಸೆ, ಉಪಚಾರಗಳವೆ ೩ನೆಯ ಭಾಗದಲ್ಲಿ 'ಎಲ್ಲ ಸಾಮಾನ್ಯ ಕಾಹಿಲೆಗಳು, ಅವುಗಳ ಲಕ್ಷಣಗಳು ಮತ್ತು ಚಿಕಿತ್ಸೆಗಳು' ಎಂಬ ವಿಷಯವು ಅಡಕವಾಗಿದ್ದು, 'ಅಗ್ನಿಮಾಂದ್ಯ' ಮೊದಲು ಮಾಡಿ 'ಹಲ್ಲುಜ್ಜಲಿಕ್ಕೆ ಚೂರ್ಣ'ದ ವರೆಗೆ ೫೦ ವಿವಿಧ ರೋಗಗಳ ಲಕ್ಷಣ ಮತ್ತು ಉಪಾಯಯೋಜನೆಗಳವೆ ಪರಿಶಿಷ್ಟದಲ್ಲಿ ಹೇಳಿರುವಂತೆ 'ಈ ಪುಸ್ತಕದಲ್ಲಿ ಸುಮಾರು ೨೦೦ ಕಾಹಿಲೆ ಯಾ ಆರೋಗ್ಯರಕ್ಷಣೆಯ ವಿಚಾರದಲ್ಲಿ ಸುಮಾರು ೧೦೦೦ ಮನೆಮದ್ದುಗಳನ್ನು ಹೇಳಲಾಗಿದೆ, ಎಲ್ಲ ಕುಟುಂಬಗಳಲ್ಲಿಯೂ ಇರಬೇಕಾದ ಪುಸ್ತಕ.

—ವಿಜ್ಞಾನಿ

ಸಾದರ ಸ್ವೀಕಾರ

★

೩೩. **ಗರ್ಜನೆ** (ಮಾಸಪತ್ರಿಕೆ). ಸಂಪಾದಕರು ಶ್ರೀ. : ಲೋ. ಬಂಕಾಪುರ ಗದಗ ಅವರು. ಪ್ರಕಾಶಕರು ಶ್ರೀ. ಎಚ್. ಎಲ್. ದಂಡಿ, 'ಗರ್ಜನೆ' ಕಾರ್ಯಾಲಯ, ಗದಗ-ಬೆಟಗೇರಿ. ಡೆ. ಅ. ೪೮ ಪುಟಗಳು. ವಾ. ಚಂ. ೩ ರೂ. ಬಿಡಿ ಸಂಚಿಕೆಗೆ ೪ ಆಣೆ.

ಗದಗ-ಬೆಟಗೇರಿಯ ಕನ್ನಡ ಯುವಕರು 'ಕನ್ನಡದ ಯುವವಾಣಿ' ಎಂದು ಹೊಸತಾಗಿಯೆ ಈ ಪತ್ರಿಕೆಯನ್ನು ಹೊರಡಿಸಿದ್ದಾರೆ. ಪುಟ-ಪುಟದಲ್ಲಿಯೂ ಯುವಜನ ಸಹಜ ಉತ್ಸಾಹದ ಕಾವು ಕಾಣುತ್ತದೆ; ಆದರೆ ಆ ಕಾವನ್ನು ಆದರ್ಶ-ಅಭ್ಯಾಸ-ಅನುಭವಗಳ ಔಚಿತ್ಯದೃಷ್ಟಿಯಿಂದ ಉಪಯೋಗ ಮಾಡಿದರೆ, 'ಗರ್ಜನೆ'ಯಲ್ಲಿ ನಿಜವಾದ ಜೀವ ತುಂಬೀತು.

ಗರ್ಜನೆಯು ಯುವವಾಣಿ ಕನ್ನಡಿಗರನ್ನು ಬಡಿದೆಬ್ಬಿಸಲಿ. ಬಹುಕಾಲ ಬಾಳಿ ಗುರಿಯನ್ನು ಸಾಧಿಸಲಿ!

೩೪. **ಮಹಾದ್ವಾರ** (ಮರಾಟಿ ಮಾಸಪತ್ರಿಕೆಯ ವಿಮಾ ವಿಶೇಷ ಸಂಚಿಕೆ). ಸಂಪಾದಕರು ಶ್ರೀಮಾನ್ ವ್ಯಂ. ನ. ಕುಲಕರ್ಣಿ, ಮಹಾದ್ವಾರ ಪ್ರೆಸ್, ಕೊಲ್ಹಾಪುರ. ಕ್ರೌ. ಅ. ೧೯೦ ಪುಟಗಳು.

ವಿಮೆಗೆ ಸಂಬಂಧಿಸಿದ ವಿವಿಧ ವಿಷಯಗಳನ್ನು ಕುರಿತು ಅಧಿಕೃತ ಲೇಖಕರು ಬರೆದ ಒಳ್ಳೆಯ ಲೇಖನಗಳು ಇದರಲ್ಲಿ ಪ್ರಕಟವಾಗಿವೆ; ಅಲ್ಲದೆ ಭಾರತೀಯ ವಿಮಾವ್ಯವಸಾಯದಲ್ಲಿಯ ಸುಪ್ರಸಿದ್ಧ ವ್ಯಕ್ತಿಗಳ ಪರಿಚಯ-ಸಂದರ್ಶನಗಳು ಬಂದಿವೆ. ವಿಮೆಯ ಪ್ರಯೋಜನವನ್ನು ಪ್ರಜ್ಞೋದಿಸುವಂತಹ ಸೂಚಕ ವ್ಯಂಗ್ಯ ಚಿತ್ರಗಳಲ್ಲದೆ ವಿಮಾಲೋಕದ ಕೆಲಸಗಾರರನೇಕರ ಛಾಯಾಚಿತ್ರಗಳೂ ಇದರಲ್ಲಿ ಪ್ರಕಟವಾಗಿವೆ. ಈ ಸಂಚಿಕೆಗಾಗಿ ಸಂಪಾದಕರು ಪಟ್ಟ ಪರಿಶ್ರಮವು ಸಾರ್ಥಕವಾಗಿದೆಯೆಂದು, ಈ ಸಂಚಿಕೆಯನ್ನು ಕಂಡವರೆಲ್ಲ ಹೇಳಬಹುದು

೩೫. **ಪ್ರೇತಸಂಹಾರ** (ಹಾಸ್ಯಕತೆಗಳ ಸಂಕಲನ) ಬರೆದವರು ಶ್ರೀಮಾನ್ ದಾಶರಥಿ ದೀಕ್ಷಿತರು, ಪ್ರಕಾಶಕರು ದೀಕ್ಷಿತ ಅಂಡ್ ಕೋ. ಬಸವನಗುಡಿ, ಬೆಂಗಳೂರು ಸಿಟಿ. ಕ್ರೌ ಅ. ೧೦೦ ಪುಟಗಳು; ಬೆಲೆ ೧-೦-೦.

೩೬. **ಮುರುಕುಮಂಟಪ** (ಸ್ವತಂತ್ರ ಸಾಮಾಜಿಕ ಕಾದಂಬರಿ): ಬರೆದವರು ಶ್ರೀ. ಎಸ್. ಅನಂತನಾರಾಯಣ, ಮೈಸೂರು. ಧಾರವಾಡದ ಲಲಿತಸಾಹಿತ್ಯಮಾಲೆಯ ೪ನೆಯ ವರ್ಷದ ೩ನೆಯ ಕುಡಿ. ಕ್ರೌ.ಅ. ೧೪೦ಪುಟಗಳು ಬೆಲೆ೧-೧೩-೦.

೩೭. **ಉಷಾ** (ಮಾಸಪತ್ರಿಕೆಯ ವಿಶೇಷ ಸಂಚಿಕೆ). ಸಂಪಾದಕರು ಶ್ರೀಮಾನ್ ಎಸ್. ನಂಜಪ್ಪ, ಉಷಾಪ್ರಕಟನ ಮಂದಿರ, ೫೬, ಗಾಂಧೀನಗರ, ಬೆಂಗಳೂರು ಸಿಟಿ. ಕ್ರೌ. ಥಿದ ೧೩೦ ಪುಟ

ಮೇಲೋಲೆಯ ಮೂರುಬಣ್ಣದ ಸುಂದರ ಚಿತ್ರ, ಕನ್ನಡ ಚಂದ್ರಹಾಸ ಚಿತ್ರದಲ್ಲಿ ಅಭಿನಯಿಸಿದ—ಕನ್ನಡದ ಉದಿತೋದಿತ—ನಟಿ ಶ್ರೀಮತಿ ಶ್ಯಾಮಲಾ ಅವರದು. ಎಂದಿನಂತೆ ಕತೆ-ಕವನ-ಪ್ರಬಂಧ-ಹರಟೆ-ಚಲನಚಿತ್ರವಾರ್ತೆ ಇವೆಲ್ಲವನ್ನೂ ಒಳಗೊಂಡಿದೆ.

೩೮. **ಮಹಾತ್ಮರ ಸ್ವತಂತ್ರಭಾರತದ ರಾಜ್ಯಭಟನೆ** (ರಾಜಕೀಯ ವಿಚಾರಗ್ರಂಥ). ಮೂಲ ಲೇಖಕರು ಶ್ರೀ. ನಾರಾಯಣ ಅಗರವಾಲಾ, ಆಚಾರ್ಯ 'ಗೋವಿಂದರಾಮ' ಕಾಮರ್ಸ್ ಕಾಲೇಜ್, ವರ್ಧಾ. ಅನುವಾದಕರು ಶ್ರೀ. ಜೆ. ವಿ. ನಾರಾಯಣಮೂರ್ತಿ, ಬಿ ಎ. ದೇಶೀಯ ವಿದ್ಯಾಪೀಠ, ಚಿಕ್ಕನಾಯ್ಕನಹಳ್ಳಿ. ಕ್ರೌ. ಅ. ೧೦೮ ಪುಟಗಳು. ಬೆಲೆ ೧-೪-೦.

೩೯. **ಕತೆಗಾರ್ತಿ** (ಹತ್ತು ಸಣ್ಣ ಕತೆಗಳ ಸಂಕಲನ) ಬೇರೆ ಬೇರೆ ಹತ್ತು ಜನ ಕತೆಗಾರರ ಕತೆಗಳನ್ನು ಶ್ರೀಯುತರು ಗಳಾದ ಮಣೂರ ಜಯತೀರ್ಥಾಚಾರ್ಯ ಸುರಪುರ ಮತ್ತು ಸಗರ ಕೃಷ್ಣಾಚಾರ್ಯ ಶಹಪೂರ ಅವರು ಸಂಪಾದಿಸಿ ಪ್ರಕಟಿಸಿದ್ದಾರೆ, ಹೈದರಾಬಾದ್ ಸಂಸ್ಥಾನದ ಗದ್ವಾಲದ ಭಾಗ್ಯೋದಯ ಗ್ರಂಥಮಾಲೆಯ ೧೩ನೆಯ ಕೆರಣವಿದು. ಕ್ರೌ. ಅ. ೮೦ ಪುಟಗಳು. ಬೆಲೆ ೧-೪-೦.

೪೦. **ವೀಣಾನಾರಿ** (ಪದ್ಯಗ್ರಂಥ). ದಿವಂಗತ ಪುಲಿಮನೆ ಕಾಳೆ ತಿಮ್ಮಪ್ಪನವರು ಬರೆದುದು. ಮಾರಾಟಗಾರರು ಮಹಾನಂದಾ ಸ್ಟೋರ್ಸ್, ಸಾಗರ—ಶಿವಮೊಗ್ಗಾ. ಡೆ. ಗಿತ್ತಿದ ೧೬ ಪುಟಗಳು. ಬೆಲೆ ೦-೪-೦.

೪೧. **ಶ್ರೀ.** (ಹೊಸ ಮಾಸಪತ್ರಿಕೆ). ಸಂಪಾದಕರು ಪಂಡಿತ ಕೇಶವ ಶರ್ಮ ಗಲಗಲಿ, ಮತ್ತು ಶ್ರೀ. ಜಿ. ಸಿ. ಇನಾಮದಾರ ಬಿ. ಎ., ಬಿ. ಟಿ. ಧಾರವಾಡ. ಪ್ರಕಾಶಕರು ಶ್ರೀ. ಎ ಕೆ. ಶಹಪೂರ, ಶ್ರೀ ಕಾರ್ಯಾಲಯ, ಪೋಷನೀಸ ಗಲ್ಲಿ, ಧಾರವಾಡ. ಡೆ. ಅ. ೪೦ ಪುಟಗಳು. ವಾ. ಚಂ. ೩ ರೂಪಾಯಿಗಳು. ಬಿಡಿ ಸಂಚಿಕೆಗೆ ೦-೪-೦.

ಒಳ್ಳೆಯ ಸಾಹಿತ್ಯವನ್ನು ಕನ್ನಡಿಗರಿಗೆ ಒದಗಿಸಿಕೊಡಬೇಕೆಂಬ ಉದ್ದೇಶವಿರಿಸಿಕೊಂಡು ಹೊರಟ ಈ ಹೊಸ ಪತ್ರಿಕೆ ಬಹು ಕಾಲ ಬಾಳಲಿ!

೪೨. **ಕಿಡಿ** (ವಿಜಾಪುರ ಜಿಲ್ಲಾ ಬಬಲೇಶ್ವರ ಗ್ರಾಮದ ಕಾಂಗ್ರೆಸ್ ಸೇವಾದಲದ ಕೈಬರೆಹದ ಪತ್ರಿಕೆ.) ೧ನೆಯ ವರ್ಷದ ೧ನೆಯ ಸಂಚಿಕೆ. ಸಂಪಾದಕರು ಶ್ರೀ. ಶಂ. ಗು ಬಿರಾದಾರ 'ಕನ್ನಡ ಜಾಣ'. ಸಹ ಸಂಪಾದಕರು ಬಿ. ನಿ. ಗು. ಮತ್ತ್ ಶಾಂತವೀರ ಕಬ್ಬಿನ ಅವರು. ಸಲಹೆಗಾರರು: ಶ್ರೀ. ಒಡೆಯರವರು. ಚಿತ್ರಕಾರರು ಬಿ. ರಮೇಶ ಮತ್ತು ಎಸ್. ಮಹೇಶ ಅವರು. ಫೂಲ್‌ಸ್ಕ್ಯಾಪ್ ಫೋಲಿಯೋ ೭೨ ಪುಟಗಳು.

ಇದೀಗ ವೈದ್ಯರ ಸಲಹೆ
ಎಲ್ಲರೂ ಹೇಳುತ್ತಾರೆ: 'ಗಂಟಲನ್ನು ಬೆಚ್ಚಗೆ ಇರಿಸಬೇಕು' ಎಂದು. ವಿಷಾದದ ಸಂಗತಿ: 'ಕಾಸ್ಕೊ ಸೇವಿಸಿರಿ' ಎಂದು ಯಾರೂ ಹೇಳುತ್ತಿಲ್ಲ. ಕೆಮ್ಮಿನ ಮೇಲಿದು ರಾಮಬಾಣ!
COUGH CURE TABLETS
AYURVEDASHRAM PHARMACY LTD., AHMEDNAGAR-3
AYD 10

ಕಿರಿಯ ಲೇಖಕರು ಬರೆದ ಕತೆ-ಕವನ-ಪ್ರಬಂಧ-ಹರಟೆಗಳೂ ಸಂಪಾದಕೀಯ ವಿಚಾರಗಳೂ ಇದರಲ್ಲಿವೆ. ಕಿರಿಯರಲ್ಲಿ ಲೇಖನಪ್ರೀತಿ, ವಾಚನಾಭಿರುಚಿ ಬೆಳೆಯುವುದಕ್ಕೆ ಪ್ರತಿಯೊಂದು ಹಳ್ಳಿಯಲ್ಲಿಯ ವಿದ್ಯಾರ್ಥಿಗಳೂ ಇಂತಹ ಪ್ರಯತ್ನಗಳನ್ನು ಕೈಕೊಳ್ಳಬೇಕು. ಬಲಲೇಶ್ವರದ ವಿದ್ಯಾರ್ಥಿಗಳಿಗೆ ಸಲಹೆಗಾರರಾದ ಶ್ರೀ. ಒಡೆಯರಂತೆಯೆ—ಎಲ್ಲ ಶಿಕ್ಷಕರೂ ವಿದ್ಯಾರ್ಥಿಗಳ ಮನೋವಿಕಾಸದ ಸಮಾಜವಶುಭವಿಷ್ಯದ—ಆದರ್ಶವನ್ನಿರಿಸಿಕೊಂಡು ಕೆಲಸ ಮಾಡುತ್ತಿದ್ದರೆ, ನಾಡಿಗರ ಸಂಸ್ಕೃತಿಯ ಮುಟ್ಟ ಖಂಡಿತ ಮೇಲಕ್ಕೇರಬಹುದು.

೪೩. **ವಾಣಿ** (ಮಾಸಪತ್ರಿಕೆಯ ವಿಶೇಷ ಸಂಚಿಕೆ) ಸಂಪಾದಕರು ಶ್ರೀ. ಬಿ ಎಸ್. ಪಾಂಡುರಂಗರಾಯರು. ವಾಣಿ ಪ್ರಕಾಶನ ಮಂದಿರ, ೧೧೦ ಹೊಸ ಬಡಾವಣೆ, ವೇಣಾದ್ರಿಪುರ. ಬೆಂಗಳೂರು ನಗರ. ಡೆ. ಆ ೧೭೪ ಪುಟಗಳು. ಬೆಲೆ ೦-೧೨-೦.

ಬೇರೆ ಬೇರೆ ವಿಭಾಗಗಳನ್ನು ಮಾಡಿ, ಆದಕ್ಕನುಗುಣವಾದ ಲೇಖನಗಳನ್ನು ಆ ಆ ವಿಭಾಗದಲ್ಲಿ ಸೇರಿಸಿಕೊಟ್ಟುದು ಈ ಸಂಚಿಕೆಯ ವೈಶಿಷ್ಟ್ಯ. ಒಳ್ಳೆಯ ಬರೆಹಗಳನ್ನೇ ವಾಚಕರಿಗೆ ಒದಗಿಸಿಕೊಡಬೇಕೆಂಬ ಉದ್ದೇಶವೇನೋ— ಅನುವಾದಿತ ಕತೆ-ಪ್ರಬಂಧಗಳಿಗೂ ಈ ಸಂಚಿಕೆಯಲ್ಲಿ ಸಾಕಷ್ಟು ಪುಟಗಳನ್ನು ಕೊಡಲಾಗಿದೆ.

೪೪. **ಘಟನಾಸಮಿತಿ** (ಪರಿಚಯಾತ್ಮಕ ಪುಸ್ತಕ). ಬರೆದವರು ಶ್ರೀಮಾನ್ ಕೃಷ್ಣಾಚಾರ್ಯ ಜೋಶಿ, ಬಿ. ಎ., ಎಲ್ ಎಲ್. ಬಿ. ಅಡ್ವೊಕೇಟ್, ಹೈದರಾಬಾದ್. ಪ್ರಕಾಶಕರು: ರಾಜಕೀಯ ಗ್ರಂಥಪ್ರಕಾಶನಸಮಿತಿ, ಕಾಚೀಗುಡಾ, ಹೈದ್ರಾಬಾದ. ಕ್ರಾ. ಅ. ೧೧೬ ಪುಟಗಳು. ಬೆಲೆ ೧-೦-೦.

೪೫. **ಅಸ್ಥಿಪಂಜರ** (ಸ್ವತಂತ್ರ ಸಾಮಾಜಿಕ ಕಾದಂಬರಿ). ಲೇಖಕರು ಶ್ರೀಮಾನ್ ಆರ್ಜಿಕ ವೆಂಕಟೇಶ, ಬೆಂಗಳೂರು ಮೈಸೂರಿನ ಉಷಾ ಸಾಹಿತ್ಯಮಾಲೆಯ ೪-ನೆಯ ಗ್ರಂಥ. ಕ್ರಾ. ಅ. ೨೩೪ ಪುಟಗಳು. ಬೆಲೆ ೩-೦-೦.

೪೬. **ಮುಕ್ಕಳ ಪದ್ಯಾವಳಿ** (ಶಿಶುಗೀತ ಸಂಗ್ರಹ). ಬರೆದವರು ಶ್ರೀಯುತರುಗಳಾದ ಜೆ. ಬ. ಪಾವಟೆ ಮತ್ತು ಬಸವರಾಜ ಅಂಗದಿ ಅವರು. ಪ್ರಕಾಶಕರು: ಬಿ ಸಿ. ಕಾಳೆ, ಮದಿಹಾಳ, ಧಾರವಾಡ. ಪೂ. ಕ್ಯಾ. ಅ. ೬೪ ಪುಟಗಳು. ಬೆಲೆ ೦-೨೧-೦.

೪೭. **ಮುಂಜಾವು** (ಕಥಾಸಂಕಲನ). ಬರೆದವರು ಶ್ರೀ. ಕುಲಕರ್ಣಿ ಬಿಂದುಮಾಧವರು. ಮಾರಾಟಗಾರರು ಶ್ರೀ. ಶಂ. ವಿ. ಶ್ರೇಷ್ಠಿ, ಸಿಟಿ. ಬುಕ್‌ಸ್ಟಾಲ್, ಹುಬ್ಬಳ್ಳಿ. ಕ್ರಾ. ಅ. ೨೨ ಪುಟ. ಬೆಲೆ ೦-೮-೦.

೪೮. **ದಿಬ್ಬಿಯಿಂದ ಪಳ್ಳಿಗೆ** (ನಾಲ್ಕು ಅಂಕಗಳ ಸಾಮಾಜಿಕ ನಾಟಕ). ಬರೆದವರು ಶ್ರೀಮಾನ್ ಕೈವಾರ ರಾಜಾರಾವ್. ಪ್ರಕಾಶಕರು ಶರತ್ ವಿಜನ್ಸ್‌ಗೇಜ್, ಬಸವನಗುಡಿ, ಬೆಂಗಳೂರು ನಗರ. ಪೂ. ಕ್ಯಾ. ಅ. ೧೩೬ ಪುಟಗಳು. ಬೆಲೆ ೧-೮-೦.

೪೯. **ಸಾಹಿತ್ಯವಿಹಾರ** (ಗದ್ಯಪದ್ಯ ಸಂಕಲನ). ಬೇರೆ ಬೇರೆ ಸುಪ್ರಸಿದ್ಧ ಕನ್ನಡ ಲೇಖಕರ ಗದ್ಯ-ಪದ್ಯಭಾಗಗಳನ್ನು ಸಂಗ್ರಹಿಸಿ, ವಿಜಾಪುರದ ಶಿಕ್ಷಣಪ್ರಚಾರ ಸಾಹಿತ್ಯ ಸಮಿತಿಯವರು ಪ್ರಕಟಿಸಿದ್ದಾರೆ. ಮಾರಾಟದ ಪೂರ್ಣಾಧಿಕಾರಿಗಳು: ಯುನಿಕ್ ಸ್ಟೋರ್ಸ್, ವಿಜಾಪುರ. ಕ್ರಾ. ಅ. ೧೧೦+೮೪ ಪುಟಗಳು. ಬೆಲೆ ೧-೧೪-೦.

ಚಿತ್ರಕಲಾ ಪ್ರವೇಶ

ಮುಂಬೈ ವಿದ್ಯಾಖಾತೆಯವರು ಹೊಸತಾಗಿ ನಿರ್ಧರಿಸಿದ ಅಭ್ಯಾಸಕ್ರಮವನ್ನು ಅನುಸರಿಸಿ ರಚಿತವಾದುದು.

ಬರೆದವರು : ಶ್ರೀ. ಗೋಪಾಲ ಶ್ರೀನಿವಾಸರಾವ ಹುದ್ದಾರ
ಚಿತ್ರಕಲಾಧ್ಯಾಪಕ, ಬೆಳಗಾಂವಿ

ಮಾಡರಿಗಾಗಿ ಒಂದು ಚಿತ್ರಪುಟವಿದು.

★

ಚಿತ್ರಕಲಾ ಶಿಕ್ಷಣದ ಬಗೆಗೆ ಕನ್ನಡದಲ್ಲಿ ಇಂತಹ ಪುಸ್ತಕವು ಇನ್ನೊಂದಿಲ್ಲ.

★

ಚಿತ್ರಪಟಗಳ ಪೂರ್ಣ ಪುಟಗಳೆ ೩೦ ಇರುವುವು.

★

ಅಲ್ಲದೆ ಪುಟಪುಟದಲ್ಲಿಯೂ ಅಭ್ಯಾಸಚಿತ್ರಗಳ ಸೂರೆ!

★

ವಸ್ತುಚಿತ್ರ, ಪ್ರಕೃತಿಚಿತ್ರ, ಸ್ಮೃತಿಚಿತ್ರ, ಬಣ್ಣಗಳ ಕೆಲಸ, ಮನುಷ್ಯಾಕೃತಿ, ಸುಳುವಿನ ಕೆಲಸ ಮೊದಲಾದ ವಿವರ ವಿವರಗಳು ಇದರಲ್ಲಿ ಬಂದಿವೆ.

ಮೂರಾಟಕ್ಕೆ ಸಿದ್ಧವಾಗಿದೆ. ಕ್ರೌನ್ ೪ ದ ೧೦೦ ಪುಟಗಳು. ಮೂರು ಬಣ್ಣದ ಚಿತ್ರವೊಂದು.
ಬೆಲೆ ಎರಡೇ ರೂಪಾಯಿ

★

ದೊರೆಯುವ ಸ್ಥಳ :
'ಜಯಂತಿ' ಕಾರ್ಯಾಲಯ,
ಧಾರವಾಡ.

* *
*

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿ. ಧಾರವಾಡ

ಹೆಡ್ ಆಫೀಸ್ ಧಾರವಾಡ

★ ವಿಮೆ ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಭರವಿಂದ ಬೆಳೆಯುತ್ತಿರುವ ಈ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!

★ ಮೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.

★ ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಲಂಬವಿಲ್ಲದೆ ಹಕ್ಕಿನ ಪಣ (Claim) ವನ್ನು ಸಲ್ಲಿಸಿರುವುದರಿಂದ, ಎಲ್ಲರ ನಂಬಿಗೆಗೂ ತಕ್ಕುದಾಗಿದೆ.

★ ಕರ್ನಾಟಕದ ಏಜೆಂಟರಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲೇಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ಮ್ಯಾನೇಜಿಂಗ್ ಡಾಯರೆಕ್ಟರ್
ಎ. ಎಸ್. ಕಣಿ

ಮ್ಯಾನೇಜರ್
ಎಮ್. ಗೋವರ್ಧನರಾವ



ರೀಟಾ: ತಲೆಯ ಕೂದಲನ್ನು ಬೆಳೆಸುವುದು.

ರೀ ಟಾ

ರೀಟಾ ಮೆದುಳಿಗೆ ಶಕ್ತಿಯನ್ನು ಕೊಟ್ಟು, ನಿರುಗುನ ನೀಳವಾದ ಕೂದಲನ್ನು ಬೆಳೆಸಲು ಅಮೃತವಾದ ಹೇರ್ ಟಾನಿಕ್.

ತಲೆಯ ಕೂದಲು ಉದುರುವುದು, ನೆರೆಯುವುದು, ಹೊಟ್ಟು, ಉದುರುವುದು, ಪಟ್ಟಿಕಲೆ, ಹೇನಿನ ಬಾಧೆ, ಇವೇ ಮೊದಲಾದ ತಲೆಯ ಕೂದಲಿಗೆ ಸಂಬಂಧಿಸಿದ ಸಮಸ್ತ ವ್ಯಾಧಿಗಳಿಗೂ ರೀಟಾ ಅಮೋಘವಾದ ಗುಣಕಾರಿ.

ಈಗಾಗಲೆ ಸಾವಿರಾರು ಜನ ಉಪಯೋಗಿಸಿ ಗುಣವನ್ನು ಹೊಂದಿದ್ದಾರೆ. ನೀವು ಕೂಡ ಇಂದಿನಿಂದಲೇ ರೀಟಾವನ್ನು ಉಪಯೋಗಿಸಿರಿ.

RITA
HAIR TONIC

ರೀಟಾ ಒಂದುಸ್ತಾನದಲ್ಲೆಲ್ಲಾ ದೊರಕುವುದು. ಬೆಲೆ:— ಸೀಸೆ ಒಕ್ಕೆ ೧೫ ಆಣೆ.

Printed by Mr. V. Y. Jathar at the Karnatak Printing Works, Dharwar, and Published for the Proprietor Jayanti Publications, by M. V. Malligatti at the Jayanti Office, Dharwar.—226-47.

೧೯೪೭
ಸಪ್ಟೆಂಬರ

ಎಂಟು ಆಣೆ

ಕೆ. ಎನ್. ಉದಾಧ್ಯ

ಉದಯ

ಸಂಚಿಕೆ

ಸಂಪಾದಕರು : ಬೆಟಗೇರಿ ಕೃಷ್ಣಶರ್ಮರು

ಸಂಪುಟ ೧೦ ೧೯ನೆಯ ಸಪ್ಟಂಬರ್ ೧೯೪೭ ಸಂಚಿಕೆ ೪

ಮುಖ್ಯ ವಿಷಯಗಳು

ಬಿಡುಗಡೆಯ ಹಾಡು (ಕವನ)	..	' ಅಂಬಿಕಾತನಯ ದತ್ತ '	೫
ವಿರಿತು ಗಗನಕೆ ನಮ್ಮ ಧ್ವಜ ! (ಕವನ)	...	' ಆನಂದಕಂದ '	೫
ಹಿಂದುಸ್ತಾನಕ್ಕೆ ಹೊಂಬೆಳಗು (ಸಂಪಾದಕೀಯ)	..	ಸಂಪಾದಕರು	೫
ನಾಡಗುಂಡಿ (ಕವನ)	..	ಶ್ರೀ. ನಾಲಿ ರಾಮಚಂದ್ರರಾಯರು	೫
ಬೀರಣ್ಣನ ಬಡಿನುಡಿಗಳು (ವ್ಯಂಗ್ಯಚಿತ್ರಣ)	..	' ಗುಡದಪ್ಪ '	೫
ಅನುಭವ (ಕಲ್ಪಿತ ಕತೆ)	..	ಶ್ರೀ. ನೀಲಕಾಂತ ಹೆಜಮಾಡಿ, ಮುಂಬಯಿ	೫
ಬಾಡಿಗೆಯ ಭಟ್ಟ ! (ವ್ಯಂಗ್ಯ ಕವನ)	..	ಶ್ರೀ. ವಿ ಜಿ. ಭಟ್ಟ, ಎಂ. ಎ. ಧಾರವಾಡ	೫
ಮರಣಕ್ಕೆ ಮುಂಜೆ (ವಿ.ಪ್ರ. ಪ್ರಬಂಧ)	..	ಶ್ರೀ. ಸೋಮಶೇಖರ ಪಾರ್ವತೀಯ, ಕಾಶಿ	೬
ನಾ ಕಂಡ ವಾರಣಾಸಿ (ಪ್ರವಾಸ ಪ್ರಬಂಧ)	..	ಶ್ರೀ. ಕೆ. ಎನ್. ರಾವ್, ಶಿರ್ಸಿ	
ವಿಜಯಿಸಲ್ಕೆ ಭಾರತ ! (ಕವನ)	..	ಪಂಡಿತ ವಿಘ್ನೇಶ್ವರ ಶರ್ಮ, ಗೋಕರ್ಣ	೭
ಅಂಜು--ಇಂದು (ಕವಿತೆ)	..	ಶ್ರೀ. ಪಿ ವೆಂಕೋಬಾಚಾರ್ಯ, ಬಿ.ಎ ,ಬಿ.ಟಿ. ಹುಬ್ಬಳ್ಳಿ	೭
ಹಸಿರು ನೋಟು (ಜೀವನಕತೆ)	..	ಶ್ರೀ. ನಿ ಸಿ. ಹಿತ್ತಲಮನಿ, ಹುಣಸಿ	೮
ಕೊನೆಯ ಪಾದು (ಕವನ)	..	ಶ್ರೀ. ಕೊಟ್ಟಲಗಿ ರಾಮಚಂದ್ರ, ಬೆಳಗಾಂವಿ	೯
ಮುರಿದ ಯುದ್ಧ (ಸಾಹಿತ್ಯ ವಿಮರ್ಶೆ)	..	ಶ್ರೀ. ಡಿ. ಎಚ್. ಕೊಪ್ಪರ, ಬಿ.ಎ. ಹುಬ್ಬಳ್ಳಿ	೯
ಆಗಸ್ಟ್ ಹದಿನೈದು (ವಿಚಾರ ಪ್ರಬಂಧ)	..	ಶ್ರೀ. ಸಿ. ಬಿ. ಬೆಲ್ಲದ, ಇಟಗಿ	೧೦
ಪ್ರತಿಬಿಂಬ (ಅನುವಾದಿತ ಸಣ್ಣಕತೆ)	..	' ಮೋ. ಶ್ರೀ. ' ವಿಜಾಪುರ	೧೨
ಕನ್ನಡದ ಉದ್ಯಮಿ ವಿಜ್ಞಾನ ವಿಶಾರದರು (ಪರಿಚಯ)	..	....	೧೫
ಪುಸ್ತಕ ವಿಮರ್ಶೆ (೩ ಪುಸ್ತಕಗಳು)	..	ಶ್ರೀ. ಮಿರ್ಜಿ ಅಣ್ಣಾರಾಯರು, ಧಾರವಾಡ	೧೫
ಸಾದರ ಸ್ವೀಕಾರ		....	೧೮

ಸ್ವಾತಂತ್ರ್ಯೋತ್ಸವದ ವಿಶೇಷ ಸಂಚಿಕೆಗಳು

ಕಳೆದ ಆಗಸ್ಟ್ ೧೫ರಂದಿನ ಸ್ವಾಂತ್ರ್ಯೋತ್ಸವದ ಸಂಭ್ರಮಕ್ಕಾಗಿ ಹಲವು ಸೋದರ ಪತ್ರಿಕೆಗಳು ವಿಶೇಷ ಸಂಚಿಕೆಗಳನ್ನು ಹೊರಡಿಸಿವೆ. ಕೆಳಗೆ ಕಾಣಿಸಿದ ವಿಶೇಷ ಸಂಚಿಕೆಗಳು ನಮ್ಮ ಕಾರ್ಯಾಲಯಕ್ಕೆ ಬಂದಿವೆ. ಅದರ ಸ್ವಾಗತ.

ವಾರಪತ್ರಿಕೆಗಳು

ಕರ್ಮವೀರ, ಜಯ್‌ಹಿಂದ್, ಕರ್ನಾಟಕ ವೈಭವ, ನುಡಿ, ಕನ್ನಡ ನುಡಿ, ತಾಯಿನಾಡು, ಕೇಸರಿ, ನವಯುಗ, ರಾಷ್ಟ್ರಬಂಧು, ಜನಶಕ್ತಿ, ತರುಣ ಭಾರತ (ನುರಾಠಿ), ಸೋವಿಯಲ್ ವೆಲ್ಫೇರ್ (ಇಂಗ್ಲಿಷ್), ವೀಪಲ್ಸ್ ರಾಜ (ಇಂಗ್ಲಿಷ್), ಆನಂದಜ್ಯೋತಿ (ಹೊಸ ವಾರಪತ್ರಿಕೆ).

ಮಾಸಪತ್ರಿಗಗಳು

ಚೊರವಂಜಿ, ಪುಸ್ತಕ ಪ್ರಪಂಚ, ಸಮಾಜ, ಕಿರ್ಲೋಸ್ಕರ್ (ಮರಾಠಿ).



ವಾರ್ಷಿಕ ಚಂದಾ
೪—೮—೦

ಪ್ರತಿತಿಂಗಳ ೧ನೆಯ ತಾರೀಖಿಗೆ
ಪ್ರಕಟವಾಗುವುದು.

ಸಂಪುಟ ೧೦ | ೧ನೆಯ ಸಪ್ಟಂಬರ್ ೧೯೨೭ | ಸಂಚಿಕೆ ೩

ಬಿಡುಗಡೆಯ ಹಾಡು

' ಅಂಬಿಕಾತನಯದತ್ತ '

ಬಂತು ಬಿಡುಗಡೆ ಬಿಡುಗಡೆ!
ಕಾದು ಬೇಡಿದ ಬಿಡುಗಡೆ— ಮುನ-
ಸೋತು ನೀಡಿದ ಬಿಡುಗಡೆ!
ಈಶ್ವರನ ದಯೆ ಬಿಡುಗಡೆ....
ತಲೆ–ಹೊರೆಯನಿಳುಹಿದ ಬಿಡುಗಡೆ,
ನೆಲೆ–ಹೊರೆಯ ಬಿಡಿಸಿದ ಬಿಡುಗಡೆ,
ಸೆರೆ–ಕೊರೆಯ ಕಳೆದಿಹ ಬಿಡುಗಡೆ...
ಹಿಂದಿಯರನೊಂದಾಗಿ ಮಾಡುವೆ-
ನೆಂದು ಬಂದಿಹ ಬಿಡುಗಡೆ. ೧
ವಿಶ್ವಮಾತೆಯ ಬಿಡುಗಡೆ...
ಜನ–ಶಕ್ತಿ ಬಲಿಸಿದ ಬಿಡುಗಡೆ,
ತನು–ಭಕ್ತಿ ಮಿಡಿಸಿದ ಬಿಡುಗಡೆ,
ಮನ–ರಕ್ತ ಕುದಿಸಿದ ಬಿಡುಗಡೆ....
ದಾಸ-ದಾಸರ ತಪವೆ ಮೈವೆ-
ತ್ತಂತೆ ಮೂಡಿದ ಬಿಡುಗಡೆ. ೨
ಶಾಶ್ವತದ ನೆಲೆ ಬಿಡುಗಡೆ....
ಮೈ–ಮಣ್ಣು ನೂಡಿದ ಬಿಡುಗಡೆ,
ಕೈ–ಕಣ್ಣು ತೆರೆಸಿದ ಬಿಡುಗಡೆ,
ನೈ–ತನ್ನಗೊಲಿದಿಹ ಬಿಡುಗಡೆ....
ಕೋಟಿ ಕೋಟಿ ಪ್ರತಾಪವಂತರ
ಕೈಗೆ ತಾಗಿದ ಬಿಡುಗಡೆ. ೩

ಏರಿತು ಗಗನಕೆ ನಮ್ಮ ಧ್ವಜ!

' ಆನಂದಕಂದ '

ಏರಿತು ಗಗನಕೆ ನಮ್ಮ ಧ್ವಜ—
ಭಾರತ ಭಾಗ್ಯ ರವಿಯ ತೇಜ!
ಮರವೆಯಿಂದ ಜನಮನ ಜಾಗರಿಸಿ,
ಪರದಾಸ್ಯದ ಜಾಲದ ಭಯ ದರಿಸಿ,
ಹುರುಳಿ ಹುರುಪನೀ ಜಾಳಿ ಬೆಗಸಿ,
ಏರಿತಾಗಸಕೆ ನಮ್ಮ ಧ್ವಜ—
ಭಾರತ ಶಕ್ತಿಯ ವೀರಭುಜ! ೧
ಎಲ್ಲಿದೆ ಬಂಧನ ಬಲದಾಕ್ರಮಣ?
ಎಲ್ಲಿದೆ ಶಾಸನ ರಾಳುಗ್ರಹಣ?
ಎಲ್ಲವ ನಿಲ್ಲಿಸಿ ಬಿಡುವೆನೀಕ್ಷಣ....
ನಾರುಪದೀತೆರ ನನ್ನ ಧ್ವಜ—
ಭಾರತ ಪೌರುಷ ಸುರಭೂಜ! ೨
ದೇಶ-ದೇಶಗಳ ಜನತೆಗೆ ಅನ್ಯ,
ಪಾಶನ ಹಿಂಸೆಯ ತಡೆಯುವ ತತ್ತ್ವಾಣ,
ತೋಷದಿ ಬಾಳುವ ಸಮತೆಯ ಜ್ಞಾನ,
ಬೀರಲು ಏರಿದೆ ನಮ್ಮ ಧ್ವಜ—
ಭಾರತ ರಾಷ್ಟ್ರೋದಯ ತೇಜ! ೩

* *

ಏರಿತು ಗಗನಕೆ ನಮ್ಮ ಧ್ವಜ—
ಭಾರತ ಭಾಗ್ಯದ ರವಿತೇಜ!

ಹಿಂದುಸ್ತಾನಕ್ಕೆ ಜೊಂಬೆಳಗು

ಪಾರತಂತ್ರ್ಯದ ಕಗ್ಗತ್ತಲೆಯಲ್ಲಿ ಬಿದ್ದ ಹಿಂದುಸ್ತಾನಕ್ಕೆ, ಆಕಾಶದಲ್ಲಿಯ ಸೂರ್ಯನ ಮೂರು–ಮುಳುಗುಗಳು, ಬೆಳಗು–ಬೈಗುಗಳಿನಿಸಿರಲಿಲ್ಲ. ಹಗಲೆನ್ನಬೇಕೇ ? ದೂರದಲ್ಲಿ ದೃಷ್ಟಿಗಳು ಹರಿಯುವ ಅಜ್ಞಾನದ ತಮಸ್ಸು ಅಖಂಡವಾಗಿ ನೆಲೆಯೂರಿತ್ತು; ರಾತ್ರಿಯೆನ್ನಬೇಕೆ ? ಯಾರ ಯಾರ ಹೊಳ್ಳುಗಳನ್ನು ಬಳಿಯಿ. ಸುವುದಕ್ಕೋ ಬೇಹವನ್ನು ಹುಡಿಯಾಗಿಸಿ ದುಡಿಯಬೇಕಾಗಿತ್ತು. ಹಗಲಿನ ಬೇಕು ಇರಲಿಲ್ಲ; ರಾತ್ರಿಯ ನಿಶ್ಚಿಂತವಾದ ವಿಶ್ರಾಂತಿ ಇರಲಿಲ್ಲ. ಇಂತಹ ಪರಿಸ್ಥಿತಿಯು ಮೂಲಕ ಭಾರತದ ಜನತೆ, ಇನ್ನೂರು ವರ್ಷಗಳ ದೀರ್ಘಾವಧಿಯನ್ನು ಪ್ರಳಯದ ಸಂಕಟದಲ್ಲಿ ಕಳೆಯಿಸಿತು. ಭಾರತದ ಭಾಗ್ಯವಿಧಾತ, ನಿಜವಾದ ತಾರಕಪುರುಷನನ್ನು ಕಳಿದು ತಂದ. ಕತ್ತಲೆಯಲ್ಲಿಯೆ ದೂರದ ಅವಕಾಶದ ಪರಿಚಯ ಮಾಡಿಕೊಟ್ಟ. ಮಾನವತೆಯ ಸ್ವತ್ವ ಸಂಪಾದನೆಗಾಗಿ ದುಡಿಯಬೇಕೆಂಬ ಅರಿವನ್ನು ಮೂಡಿಸಿದ. ಕೆಲವೆ ಜನ ಭಾರತೀಯರು ಎಚ್ಚರುಗೊಂಡು ಕೆಲಸಮಾಡಿದ್ದಾದರೂ, ಭಾರತಕ್ಕೆ ಸ್ವಾತಂತ್ರ್ಯದ ಹೊಂಬೆಳಗನ್ನು ಎಳೆದು ತಂದರು. ಎಲ್ಲರ ಕಣ್ಣುಗಳನ್ನೂ ತೆರೆಯಿಸಿ, 'ತಾವಾರು ?' 'ತಮ್ಮ ಕರ್ತವ್ಯವಾವುದು ?' ಎಂಬುದರ ಕಲ್ಪನೆ ಮಾಡಿಕೊಟ್ಟರು.

ಆಗಸ್ಟ್ ೧೪ನೆಯ ತಾರೀಖಿನ ಸಂಜೆ ಪರಾಧೀನವಾಗಿದ್ದ ಹಿಂದುಸ್ತಾನ, ಮುರುದಿನದ ಬೆಳಗಿನಲ್ಲಿ ಸ್ವತಂತ್ರವಾಗಿ ನಿಂತಿದೆ. ಇನ್ನು ಹಿಂದುಸ್ತಾನದ ಸುಖ–ದುಃಖದ ಜೀವನಸೂತ್ರಗಳೆಲ್ಲ ಹಿಂದೀಯರ ಕಡೆಗೆ. 'ಹೊರಟು ಹೋಗಿರಿ !' ಎಂಬ ಭಾರತೀಯರ ಕೂಗಿನಲ್ಲಿಯ ಸತ್ವದ ಅರಿವು ಬ್ರಿಟಿಷರಿಗಾಯಿತು. ಇಂದು ನಮ್ಮ ಎದುರು ಚಾಚಿದ ಅವರ ಹಸ್ತ ಅಧಿಕಾರದ ದರ್ಪದುದಲ್ಲ; ಸ್ನೇಹಯಾಚನೆಯದು. ಭಾರತೀಯರ ಸಂಪತ್ತನ್ನು ಸುಲಿಯುವುದಲ್ಲ; ಕೊಡು-ಕೊಳ್ಳುವ ಸಹಕಾರಬುದ್ಧಿಯದು. ನಮ್ಮ ಭೀತಿಗೆ ಕಾರಣವಾಗಿದ್ದ ಬ್ರಿಟಿಷರ ಸೈನ್ಯಶಕ್ತಿ ಹಡಗವನ್ನೇರಿ ಕನ್ನ ದೇಶಕ್ಕೆ ಹೊರಟಿತು. ಅಧಿಕಾರಿಗಳಾಗಿ ಹೆಮ್ಮೆಯಿಂದ ಆಳಿದ ಬ್ರಿಟಿಷರಿಂದು, ಭಾರತೀಯರನ್ನು ಸೇವಿಸಿ ಧನ್ಯರಾಗಬೇಕೆಂಬ ಹಂಬಲದಿಂದ ಭಾರತ ಸ್ವತಂತ್ರ ಸರಕಾರದಲ್ಲಿ ಆಳುಗಳಾಗಿರಲು ಸಿದ್ಧರಾಗಿದ್ದಾರೆ. ಈ ವಿಚಿತ್ರ ಪರಿವರ್ತನೆಗೆ ಕಾರಣ ಯಕ್ಷಿಣಿಯ ಮಾಯೆಯೆನ್ನಬೇಕೆ ? ದೈವದ ಕೃಪೆಯೆನ್ನಬೇಕೆ ? ನಮ್ಮ ಪೌರುಷ ಪ್ರಯತ್ನವೆನ್ನಬೇಕೆ ? ಹೇಗೆ ಬಂದೊದಗಿತು ಇಂತಹ ಬಂಗಾರದ ಬೆಳಗು ?

ಬಂದು ದುಃಸ್ವಪ್ನದಿಂದ ಎಚ್ಚೆತ್ತಂತಾಗಿದೆ ಭಾರತದ ಜನತೆಗೆ. 'ನಾವು ಸ್ವತಂತ್ರರಾಗಿದ್ದೇವೆ !' ಎಂಬ ಸತ್ಯವಾದ ಕೂಗನ್ನು ಉತ್ಸಾಹದಿಂದ ಕೂಗುತ್ತಿದ್ದರೂ, ಅನುಭವಿಸಿದ ಸ್ವಪ್ನಾಭಾಸ 'ನಮಗೆ ಸ್ವಾತಂತ್ರ್ಯ ದೊರೆತಿದೆಯೆ ?' ಎಂಬ ಸಂದೇಹದ ಮೂಲಕ ಅವರ ಅಂತಃಕರಣವನ್ನು ಛೇದಿಸುತ್ತಲಿದೆ. ಇದಕ್ಕೆ ಕಾರಣ ಸ್ವಾತಂತ್ರ್ಯಸಂಪಾದನೆಗೆ ಮಾಡಬೇಕಾಗಿರುವ ಹೋಮ–ಹವನಗಳನ್ನೂ ಕೊಡಬೇಕಾಗಿರುವ ಬಲಿದಾನಗಳನ್ನೂ ತಾವು ಮಾಡಿಲ್ಲವೆಂದೂ ಕೊಟ್ಟಿಲ್ಲವೆಂದೂ ಇವರಿಗೆ ಎನಿಸುವುದು. ಸಹಜವಾಗಿಯೆ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿದೆಯೆಂಬುದು ಇವರ ವಿಸ್ಮಯ–ಸಂದೇಹಗಳಿಗೆ ಕಾರಣವಾಗಿದೆ. ಆದರೆ ಈ ವಿಸ್ಮಯ–ಸಂದೇಹಗಳಿಗೆ ಸ್ವಲ್ಪವೂ ಅವಕಾಶವಿಲ್ಲ. ಭಾರತದ ಸ್ವಾತಂತ್ರ್ಯವಿಂದು ಅಂಗೈನೆಲ್ಲಿ. ಹೀಗಾಗಿಸಿದವರಾರೆಂಬುದನ್ನು ನಮ್ಮ ಜನ ಅರಿತುಕೊಳ್ಳಬೇಕಾಗಿದೆ. ದೊರೆತಿರುವ ಸ್ವಾತಂತ್ರ್ಯವನ್ನು ಸಂರಕ್ಷಿಸಿಕೊಳ್ಳಲಿಕ್ಕೆ ಅವಶ್ಯವಿರುವ ತ್ಯಾಗ–ತಪ–ವ್ರತ–ದೀಕ್ಷೆಗಳಿಗೆ ಸಿದ್ಧರಾಗಿ ನಿಲ್ಲಬೇಕಾಗಿದೆ.

ಸ್ವಾತಂತ್ರ್ಯ ಸುಮ್ಮನೆ ದೊರೆಯಿತೇ ಭಾರತಕ್ಕೆ? ಭಾರತದ ೫೦೦೦ ವರ್ಷಗಳ ತೇಜಸ್ವಿಯಾದ ಇತಿಹಾಸ–ಸಂಸ್ಕೃತಿಗಳು ಅಖಂಡವಾಗಿ ಕಾರ್ಯಮಾಡಿವೆ ಇದಕ್ಕಾಗಿ! ಭಾರತೀಯರ ನರ-ಮಾಂಸಗಳಲ್ಲಿ ಸುಪ್ತವಾಗಿದ್ದ ಕೃಶುಶಕ್ತಿ–ಕ್ಷಾತ್ರಶಕ್ತಿಗಳು ಅಜ್ಞಾತವಾಗಿ–ಅವಿರತವಾಗಿ–ಕಾರ್ಯ ಮಾಡಿವೆ ಇದನ್ನು ದೊರೆಕಿಸಿಕೊಡಲಿಕ್ಕೆಂದು ! ಅವುಗಳ ವ್ಯಕ್ತ-ರೂಪುಗಳೆ ೧೮೫೭ನೆಯ ಇಸ್ವಿಯ ಭಾರತವೀರರ ಸ್ವಾತಂತ್ರ್ಯಯುದ್ಧ; ೧೯೦೨ರ ಪಂಗಭಂಗ ಚಳವಳಿ; ಲೋಕಮಾನ್ಯರ ಹೋಮರೂಲ್ ಚಳವಳಿ; ಮಹಾತ್ಮರ ಅಸಹಕಾರ–ಸತ್ಯಾಗ್ರಹಗಳ ಚಳವಳಿ; ೧೯೪೨ರ ವಿಧ್ವಂಸಕ ಕ್ರಾಂತಿ! ಭಾರತದ ಭಾಗ್ಯವಿಧಾತನ ಸಂದೇಶವಾಹಕರಾಗಿಯೆ ದಿವಂಗತ ದಾದಾಭಾಯಿ ನವರೊಜಿ, ಗೋಪಾಲಕೃಷ್ಣ ಗೋಖಲೆ, ಬಿಪಿನಚಂದ್ರಪಾಲ, ಲಾಲಾಲಜಪತರಾಯ, ಲೋಕಮಾನ್ಯ ತಿಲಕ, ಚಿತ್ತರಂಜನದಾಸ, ಮೋತಿಲಾಲ ನೆಹರು. ಮೊದಲಾದ ಪ್ರವಾದಿಗಳು ಬಂದು, ಭಾರತೀಯರ ಹೃದಯದ ಹೊಲವನ್ನು ಕೃಷಿಮಾಡಿ, ಸ್ವಾತಂತ್ರ್ಯಪ್ರೇಮದ ಸಸಿಯನ್ನೂರಿ ಹೋದರು. ಮಹಾತ್ಮಾ ಗಾಂಧಿಜಿಯವರು ಅದನ್ನು ತಮ್ಮ ಕಾರ್ಯಹಸ್ತದ ಅಮೃತಸಿಂಚನದಿಂದ ಬೆಳೆಯಿಸತೊಡಗಿದರು. ಪ್ರಾಂತ-ಪ್ರಾಂತಗಳ ಹಿರಿಯ ಧುರೀಣರು ಮಹಾತ್ಮರ ಕಾರ್ಯಕ್ಕೆ ಪ್ರಕಾಶಕರಣಪೂರ್ವಕವಾಗಿ ನೆರವಾದರು. ಸುಭಾಷಭೋಸರಂತಹ ವೀರಪವಾಡ, ಭಾರತದಲ್ಲಿಯ ಕ್ಷಾತ್ರಶಕ್ತಿಯ ಜಾಗೃತಿಯನ್ನು ಅನುಭವಕ್ಕೆ ತಂದುಕೊಟ್ಟಿತು. ೧೯೪೨ರ ವಿಧ್ವಂಸಕವೀರರು ಉತ್ಸಾಹದ ಹೊಳೆಯನ್ನು ಹರಿಸಲು ಕಾರಣರಾದರು. ಇವರೆಲ್ಲರ ತಪಸ್ಸಿನ ಫಲವೇ ಭಾರತದ ಇಂದಿನ ಸ್ವಾತಂತ್ರ್ಯ. ಇದಕ್ಕೆ ತೆರಬೇಕಾದುದನ್ನೆಲ್ಲ ಭಾರತ ಜನತೆ ತೆತ್ತಿದೆ. ಆದರೆ ತಲೆಗಳ ಬದಲಾವಣೆಯ ಮೂಲಕ ಇಂದಿನ ಜನಸಾಮಾನ್ಯರಿಗೆ ರಾಷ್ಟ್ರವು ತೆತ್ತ ಬಲಿದಾನದ ಅರಿವು ಇಲ್ಲದಂತಾಗಿದೆ. ಆದುದರಿಂದಲೆ ನಾವಿಂದು ನೆನೆಯಬೇಕು ೧೮೫೭ರ ಸ್ವಾತಂತ್ರ್ಯವೀರರನ್ನು; ನಾವಿಂದು ಸ್ಮರಿಸಬೇಕು ಚಿ-

೫೨ ವರ್ಷಗಳಿಂದ ಅನುಭವಪಟ್ಟ
ಕರ್ಕ ಮತ್ತು ಕಂಪನಿಯ
ಜ್ವರಗಡ್ಡೆಯ ಗುಳಿಗೆಗಳು.
ಬಾಟ್ಲಿಗೆ ೧-೮-೦
ಎಂತಹ ಜ್ವರಗಡ್ಡೆಯನ್ನೂ ಕಳೆಯುವುದು.
ವಿಳಾಸ:—
ಗಣೇಶ ರಾಮಚಂದ್ರ ಕರ್ಕ ಮತ್ತು ಕಂಪನಿ
ಗಿರಗಾಂವ, ಮುಂಬಯಿ.

ಗಾಂಗದ ಕ್ರಾಂತಿವೀರರ ಕತೆಯನ್ನು. ನಾವಿಂದು ಜ್ಞಾಪಕಕ್ಕೆ ತಂದುಕೊಳ್ಳಬೇಕು ಭಗತಸಿಂಗ, ದತ್ತರಂತಹ ಅಮರ ವೀರರ ಚರಿತ್ರೆಗಳನ್ನು. ಸ್ವಾತಂತ್ರ್ಯಸಂಪಾದನೆಯ ಈ ಮಂಗಲ ಸಮಾರಂಭದ ಪ್ರಾರಂಭದಲ್ಲಿ ನಾಂದೀಶ್ರಾದ್ಧ ಮಾಡಿ, ದೇಶಕ್ಕಾಗಿ ದೇಹ-ಪ್ರಾಣಗಳ ಬಲಿಯನ್ನು ತೆತ್ತ ನಮ್ಮ ಹಿರಿಯ ವೀರರಿಗೆ ನಾವು ತರ್ಪಣಗಳನ್ನು ಸಲ್ಲಿಸಬೇಕಾಗಿದೆ. ಈ ತರ್ಪಣದಾನದ ಮೂಲಕ ನಮಗೆ ಸ್ವಾತಂತ್ರ್ಯದ ಅಮೂಲ್ಯಮೂಲ್ಯ ಗೊತ್ತಾಗುವುದಲ್ಲದೆ, ಅದರ ಸಂರಕ್ಷಣೆಯ ಜಾಗೃತಿ ಅಖಂಡವಾಗಿ ನೆಲೆಯೂರುವುದು.

ನಮ್ಮ ನೇತಾರರಾದ ಪಂಡಿತ ಜವಾಹರಲಾಲ, ಸರದಾರ್ ಪಟೇಲ, ಬಾಬುರಾಜೇಂದ್ರ ಪ್ರಸಾದ, ಸರದಾರ್ ಬಲದೇವಸಿಂಗ, ಜಾನ್‌ಮಥಾಯಿ, ಮೌಲಾನಾ ಅಬ್ದುಲ್ ಕಲಾಂ ಆಜಾದ, ಅಭಿಜ್ಞ ಭಾಭಾ, ಅರ್ಥಶಾಸ್ತ್ರವಿಶಾರದ ಷಣ್ಮುಖಂ ಚೆಟ್ಟಿ ಮೊದಲಾದವರೆಲ್ಲ ಭಾರತದ ಸ್ವಾತಂತ್ರ್ಯಧ್ವಜವನ್ನೆತ್ತಿ ಹಿಡಿದು, ರಾಷ್ಟ್ರದಲ್ಲಿ ಶಾಂತಿ-ಸುಖಗಳನ್ನು ನೆಲೆಗೊಳಿಸಲು ಸಿದ್ಧರಾಗಿ ಹೊರಟಿದ್ದಾರೆ. ಬ್ರಿಟಿಷರ ಸ್ನೇಹದ ಪ್ರತಿನಿಧ್ಯ ವಹಿಸಿ ಮೌಂಟ್‌ಬ್ಯಾಟನರೂ ಭಾರತದ ಸ್ವಾತಂತ್ರ್ಯಧ್ವಜಕ್ಕೆ ಶರಣಾಗಿ ಸೇವೆ ಮಾಡಲು ನಿಂತಿದ್ದಾರೆ. ಮಹಾತ್ಮಾಗಾಂಧಿಯವರ ಅಧ್ಯಾತ್ಮಿಕ ತೇಜವಂತೂ ದೇಶದ ಸ್ವಾತಂತ್ರ್ಯ-ಸೌಖ್ಯಗಳ ಸಂರಕ್ಷಣೆಗೆಂದು ಸುದರ್ಶನ ಚಕ್ರವಾಗಿ ಸುತ್ತುತ್ತಲಿದೆ. ಈಗ ಜನತೆಯಲ್ಲಿ ಮೂಡಬೇಕಾಗಿದೆ ಈ ಸುಖವನ್ನು ಅನುಭವಿಸಬೇಕಾದ ಸಾಮರ್ಥ್ಯ. ಆ ಸಾಮರ್ಥ್ಯ ದೊರೆಯಬೇಕಾದರೆ ಮೊದಲನೆಯದಾಗಿ ರಾಷ್ಟ್ರನಿಷ್ಠೆ ಬೇಕು; ಎರಡನೆಯದಾಗಿ ಸ್ವಜನ ಸಹೋದರಭಾವ ತಲೆಯೆತ್ತಬೇಕು. ಸತ್ಯ-ಪ್ರಾಮಾಣಿಕತನ-ಕರ್ತವ್ಯಜಾಗೃತಿಗಳು ಅಚ್ಚಳಿಯದೆ ನೆಲೆಗೊಳ್ಳಬೇಕು. ಮುಂದಾಳುಗಳೂ ಜನಸಾಮಾನ್ಯರೂ ಒಂದುಗೂಡಿ ಕೊಗಿದಾಗಲೆ ' ಜಯಹಿಂದ್ ' ಎಂಬ ಅಕ್ಷರಗಳಲ್ಲಿ ಮಂತ್ರಶಕ್ತಿ ಪ್ರವಹಿಸಬಲ್ಲದು.

—ಸಂಪಾದಕರು

ನಾಡಗುಡಿ !

ಶ್ರೀ. ಸಾಲಿ ರಾಮಚಂದ್ರರಾಯರು, ಧಾರವಾಡ

ಮಿಳಿರುತಿದೆ ಹೊಸ ಬಾಳ
ಹೊಳಪಿನಲಿ ನಾಡಗುಡಿ,
ತುಳುಕುತಿದೆ ಶಕ್ತಿ, ಕರ್ಮ-
ಗೊಳಿಸುತಿದೆ ನಾಡಗುಡಿ ‖೧‖

ತನಗೆ ಜನ್ಮವ ತಪ್ಪೋ-
ಧನರ ನಾಡಿನಲೆಂದು
ನೆನೆನೆನೆದು ನಲಿಯುತಿದೆ
ಮನವುಬ್ಬಿ ನಾಡಗುಡಿ ‖೪‖

ಗೆಲವ ನಾಡಿಗೆ, ಸತ್ಯ-
ದೊಲವ ನಾಡಿನ ಜನಕೆ,
ನಲಿವಬಿಲ ಲೋಕಕೆಂ-
ದುಲಿಯುತಿದೆ ನಾಡಗುಡಿ ‖೭‖

ಘಡಘಡನೆ ಹಾರುತಿದೆ,
ತಡೆಯಿಲ್ಲ ತನ್ನ ಮು-
ನ್ನಡೆಗೆಂದು ನುಡಿಯುತಿದೆ
ಸಡಗರದೆ ನಾಡಗುಡಿ ‖೨‖

ಪ್ರಗತಿಪಥವನು ತೋರಿ
ಜಗಕೆ ಹೊಸ ಒಸಗೆಯನು
ಹೊಗರೇರಿ ಸಾರುತಿದೆ
ನಗೆಮೊಗದ ನಾಡಗುಡಿ ‖೫‖

ಭಾರತದ ಬಾಳುಸಿರು,
ಭಾರತದ ಕಡುನೆರವು,
ಭಾರತದ ಜೀವನದ
ಸಾರವಿದು ನಾಡಗುಡಿ ‖೮‖

ತನ್ನಿಂದೆ ಶಾಂತಿಯಾ-
ಪನ್ನ ಜಗಕಹುದು ಸಂ-
ಪನ್ನತೆಯ ಭಾಗ್ಯವೆಂ-
ದೆನ್ನುತಿದೆ ನಾಡಗುಡಿ ‖೩‖

ಹೃದಯ ನೈರ್ಮಲ್ಯವ-
ನ್ನೆದಕ ಸೊಕ್ಕಿಗೆ ಮದ್ದ-
ನೊದವಿಸುವುದೆಂದುಸಿರು-
ತಿದೆ ನಮ್ಮ ನಾಡಗುಡಿ ‖೬‖

ಮಿಳಿರುತಿದೆ ಹೊಸಬಾಳ
ಹೊಳಪಿನಲಿ ನಾಡಗುಡಿ
ತುಳುಕುತಿದೆ ಶಕ್ತಿ, ಕ-
ರ್ಮೊಳಿಸುತಿದೆ ನಾಡಗುಡಿ ‖೯‖

ಮಾತಾರ್ಥವಿಚಾರಗಳು

ಜರ್ಚಿಲ್ ಅಂಡ್ ಕಂಪನಿಯವರು ಮಾಡಿದ ಉಪಕಾರಕ್ಕಾಗಿ, ಪಾಕಿಸ್ತಾನ್ ಗವರ್ನರ್ ಜನರಲ್ ಜಿನ್ನಾಸಾಹೇಬರು, ಅದಳಿತದ ಅಧಿಕಾರ ಸ್ಥಾನಗಳಲ್ಲಿ ಅರ್ಧಕ್ಕಿಂತ ಹೆಚ್ಚಾಗಿ ಬ್ರಿಟಿಷರನ್ನೆ ನಿಯಮಿಸಿಕೊಂಡಿದ್ದಾರಂತೆ ಆ ಅಧಿಕಾರಗಳು ತಮಗೆ ದೊರೆತಾವೆಂಬ ಅಶೆಯಿಂದ ಜೋತು-ಕೊಂಡು ಉಳಿತ 'ಖಾಕೀ' ಜನರು, ಒಳಗೊಳಗೇ ಮುದುಗುತ್ತಲಿದ್ದಾರಂತೆ. ಪಾಕಿಸ್ತಾನವನ್ನು ಜಿನ್ನಾರೇ ಕಾಪಾಡಬೇಕು.

* * *

ಮುಸ್ಲಿಂ ಲೀಗಿನ ಅಧ್ಯಕ್ಷರು ಜಿನ್ನಾಸಾಹೇಬರು; ಪಾಕಿಸ್ತಾನ್ ಘಟನಾ ಸಮಿತಿಯ ಅಧ್ಯಕ್ಷರು ಜಿನ್ನಾಸಾಹೇಬರು; ಪಾಕಿಸ್ತಾನ್ ಗವರ್ನರ್ ಜನರಲರು ಜಿನ್ನಾಸಾಹೇಬರು; ಇನ್ನೂ ಏನೆಲ್ಲಾ ಜಿನ್ನಾಸಾಹೇಬರು ಇದನ್ನು ಕೇಳಿದ ಪರದೇಶಗಳಲ್ಲಿಯಂ ವ್ಯಾಪಾರವಜ್ಜರು, ಪಾಕಿಸ್ತಾನದ ಜನತೆಯಲ್ಲಿ ಮೆದಳಿನ ಶಕ್ತಿ ಬಳೆಯಿಸುವಂತಹ ವಿಟಾವಿನುಗಳನ್ನು ರಫ್ತು ಮಾಡುವ ಯೋಚನೆಯಲ್ಲಿದ್ದಾರಂತೆ. ಆದರೆ ಜಿನ್ನಾಸಾಹೇಬರು ಇವರ ಅಮದು ವ್ಯಾಪಾರಕ್ಕೆ ಒಪ್ಪಿಗೆ ಕೊಡಲಾರರೆಂಬ ಸುದ್ದಿ ವೀರಣ್ಣನ ಕವಿಯ ವರೆಗೆ ಬಂದಿದೆ.

* * *

ವಸಂತಕಾಲದ ಪರೀಕ್ಷಾಸ್ಪುಸಂಗ ಬಂದಾಗ, ಶಾಗೆ-ಕೋಗಿಲೆಗಳ ವಾಸ್ತವರೂಪು ಹೊರಬೀಳುವುದೆಂದು ಉಪಮೆ ಕೊಟ್ಟು, ಮಹಾತ್ಮಾ-ಕಾಯಿದೆ ಅಜವರ ವಿಷಯ ಜನ ಮಾತನಾಡತೊಡಗಿದೆ: ಇದುವರೆಗೆ ಗಾಂಧೀಜಿ ಆಡಿದಂತೆ-ಮಾಡಿದಂತೆ ಜಿನ್ನಾಸಾಹೇಬರು ಆಡುತ್ತಲಿದ್ದರು-ಮಾಡುತ್ತಲಿದ್ದರು ಆದರೆ ಗಾಂಧೀಜಿ ಈಗ ಎಂದಿನಂತೆ ಕೌಪೀನಧಾರಿ ಸಂನ್ಯಾಸಿಯಾಗಿ ಹಿಂದು-ಮುಸಲ್ಮಾನ್ ಸೌಹಾರ್ದ ಭಾವಕ್ಕಾಗಿ ಸವೆಯುತ್ತಿದ್ದಾರಂತೆ; ಜಿನ್ನಾಸಾಹೇಬರು ಅಧಿಕಾರಾರೂಢರಾಗಿ ಪಾಕಿಸ್ತಾನದ ನೆಪದಿಂದ ನೈಭವ ಅನುಭವಿಸುತ್ತಿದ್ದಾರಂತೆ; ಜಾತೀಯ ವೈಷಮ್ಯಕ್ಕೆ ವೀರೆದೆಯುತ್ತಲಿದ್ದಾರಂತೆ. ಕೋಗಿಲೆ ಕೋಗಿಲೆಯೆ; ಕಾಗೆ ಕಾಗೆಯೆ!

* * *

ಸರ್.ಸಿ.ಪಿ. ರಾಮಸ್ವಾಮಿಯವರು, ಪೂರ್ವ-ಬಂಗಾಲದ ಗವರ್ನರ್‌ರಾಗಲು ಜಿನ್ನಾಸಾಹೇಬರ ಕೋರಿಕೆಗೆ ಒಪ್ಪಿಗೆ ಕೊಟ್ಟಿದ್ದಾರಂತೆ. ಹಿಂದೂಗಳಲ್ಲಿಯ ದಲಿತ ವರ್ಗದವರ ಬಗೆಗೆ ಮುಗುಳ ತೋರಿಸುವ ಜಿನ್ನಾಸಾಹೇಬರು, ಶ್ರೇಷ್ಠ ವರ್ಗದ ಮದರಾಸೀ ಆಯ್ಯರ್ ಬ್ರಾಹ್ಮಣರನ್ನು ಗವರ್ನರನ್ನಾಗಿ ಕರೆದುವರ ರಹಸ್ಯ ಅನೇಕರಿಗೆ ತಿಳಿಯದಾಗಿದೆಯಂತೆ. ಆದರೆ ವೀರಣ್ಣ ಇವರ ರಹಸ್ಯವನ್ನು ಪೂರ್ಣವಾಗಿ ಅರಿತಿದ್ದಾನೆ. ಹಿಂದುಸ್ತಾನಕ್ಕೆಲ್ಲ ಬೇಡವಾಗಿ ಏಂತ ಸಿ.ಪಿ ಯವರು ಹಿಂದೀ ಜನರಿಂದ ದಲಿತರಾವಂತೆಯೆ ಅಲ್ಲವೆ? ಎಂತಲೇ ಸತಿತೋದ್ಧಾರಕನಾದ ಪಾಕಿಸ್ತಾನ್ ಪ್ರಭುವು ಅವರನ್ನು ಕೈಯೆತ್ತಿ ಮೇಲಕ್ಕೇರಿಸಿದ್ದಾನೆ. ಸಿ-ಸಿ-ರಾಮಸ್ವಾಮಿ ಬಿಂದಾಬಾದ್!

* * *

ಭೋಪಾಳದ ನವಾಬರು ಸಂಸ್ಥಾನದ ಸುರಕ್ಷಿತತೆಯ ಸಲುವಾಗಿ ಫಕೀರರಾಗಿ ರಾಜ್ಯತ್ಯಾಗ ಮಾಡಬೇಕೆಂದು ಅವರ ಕುಟುಂಬ-ಪರಿವಾರದವರೇ ಗಂಟು ಬಿದ್ದಿದ್ದಾರಂತೆ. ಅದಕ್ಕಾಗಿ ಅವರು ಸರದಾರ್ ವಲ್ಲಭಭಾಯಿ ಪಟೇಲರನ್ನು ಮೊರೆ ಹೊಕ್ಕಿದ್ದಾರಂತೆ. ಸಿಂಧೆ-ಹೋಳಕರರನ್ನು ನಂಬಿದ ಪೇಶವೆಯರಂತೆ ತಮ್ಮ ಪಾಡಾಗಿದೆಯೆಂದು ಆ ನವಾಬರು ಹಗಲು-ರಾತ್ರಿ ಬಿಸಿಯುಸಿರು ಹಾಕುತ್ತಿದ್ದಾರಂತೆ. ಆಂತೂ ಸಿಂಧೆ-ಹೋಳಕರರು ವಂಶದ ಕೀರ್ತಿಯನ್ನು ಉಳಿಸಿದರು. 'ಗತವೀ ಅಮುಚಾ ಕಾಯಾ' ಎಂದೂ ಹೇಳುವ ಅಸ್ಸಲ್ ಮರಾಟಗರಲ್ಲವೇ ಅವರು?

* * *

ಒಂದು ಕಾಲದಲ್ಲಿ ಜಿನ್ನಾ-ಜಯಕರರ ಹೆಸರನ್ನು ಜೊತೆಯಾಗಿಯೆ ಉಚ್ಚರಿಸಲಾಗುತ್ತಿತ್ತು. ಈ ವಹಿವಾಟೀ ಹಕ್ಕಿನ ಕ್ರಯಕ್ಕಾರ, ಪಾಕಿಸ್ತಾನದಲ್ಲಿ ಜಿನ್ನಾರವರಿಗಿದ್ದ ಸ್ಥಾನಮಾನಗಳು ಹಿಂದುಸ್ತಾನದಲ್ಲಿ ತಮಗೆ ದೊರೆಯಬೇಕೆಂದು ಕಾಯಿದೆ ತಜ್ಞರಾದ ಸ್ಯಾಯಮೂರ್ತಿ ಜಯಕರರ ಅಪೇಕ್ಷೆಯಂತೆ. ಈ ಅಪೇಕ್ಷೆಯನ್ನು ಹಿಂದುಸ್ತಾನ್ ಪೂರೈಸದೆ ಹೋದರೆ, ಇನ್ನೊಂದು 'ಸ್ತಾನ್' ಸ್ಥಾಪಿಸುವ ವಿಚಾರ ಜಯಕರರದಂತೆ. ಪೊನ್ನೆ-ಪೊನ್ನೆಯೆ ಇಂಗ್ಲಂಡಿನಿಂದ ಸುದ್ದಿ ಬಂದಿದ್ದಾರೆ. ಚರ್ಚಿಲ್ ಸಾಹೇಬರು ಇವರಿಗೂ ಏನಾದರೂ ಕವಿಮಾತನ್ನು ಬೇಳಿಕಳುಹಿದ್ದಾರೋ ಏನೋ!

* * *

ಧಾರವಾಡ ಜಿಲ್ಲೆಯಲ್ಲಿಯ ಶಾಲೆಯ ವಿದ್ಯಾರ್ಥಿಗಳೆಲ್ಲ ಕೆನ್ನೆನ ಬಾಧೆಯಿಂದ ಬಳಲುತ್ತಿದ್ದಾರಂತೆ. ಸ್ವಾತಂತ್ರ್ಯೋತ್ಸವದ ಬಿನ ಶಾಲೆಗಳಲ್ಲಿ ನಂಟಿಬ 'ಮಿಠಾಯಿ' ತಿಂದುದೇ ಈ ರೋಗಕ್ಕೆ ಕಾರಣವೆಂದು ದಾಕ್ಟರ್ ಜನರು ಅಭಿಪ್ರಾಯ ಪಡುತ್ತಿದ್ದಾರಂತೆ. ಏತಳ್ಳೂ ಬಾರದೆ ಬಿದ್ದಿದ್ದ ಕಳಿಸೇಂಗಾ ಕಾಳುಗಳಿಗೆ ಸ್ವಾತಂತ್ರ್ಯೋತ್ಸವದಲ್ಲಿ ಬೆಲೆ ಬಂದಿತು. ದಾಕ್ಟರ್ ಜನರ ಆದಾಯ ಹೆಚ್ಚಿತು. ಭಾರತ ಸ್ವಾತಂತ್ರ್ಯಕ್ಕೆ ಜಯ್! ಲಾಭದ ವ್ಯಾಪಾರ್ ಜಿರ್ಜಯ್!

* * *

ಪ್ರತಿಯೊಬ್ಬ ಹುಡುಗನಿಗೆ ನಮೂರು ಆರು ಆಣೆ ಬೆಲೆಯ ಏ ರಾಯಿ ಕೊಡಬೇಕೆಂದು ಸರಕಾರ ನಿರ್ಧರಿಸಿದ್ದಿತಂತೆ. ನ್ಯಾಯಾಧಾರ ಬಾಧ್ಯಿಯ ಪಾಲಕರು ಮನೆಗೆ ಮಕ್ಕಳು ತಂದ ಮಿಠಾಯಿಯ ಬೆಲೆಯನ್ನು ಮಾಡಿ ನೋಡಿದರಂತೆ. ಇಂದಿನ ಬ್ಲಾಕ್ ಮಾರ್ಕೆಟ್ಟಿನ ಬೆಲೆ ಹಿಡಿದರೂ ಅದು ಮೂರು ಆಣೆಗಿಂತ ಹೆಚ್ಚಿನ ಬೆಲೆಯದಾಗಿ ತೋರಲಿಲ್ಲವಂತೆ. ಹಾಗಾದರೆ ಹೆಚ್ಚಿನ ಮೂರಾಣೆಯ ವಿಚಾರ ಬಾಯಿಗೆ ಬಿದ್ದಂತಾಯಿತು? ಲಂಡನ್ ಪೋಡ ನೌಕರರ ಬಾಯಲ್ಲಿಯೋ, ಲಾಭಬಡವರ್ತಕರ ಬಾಯಲ್ಲಿಯೋ? ಈ ವಿಷಯ ಶೋಧಿಸಿ ಕಡಿದು ಹಿಡಿಯಬೇಕೆಂದು ನಮ್ಮ ಪಾಲಕರೆಲ್ಲ ಸಭೆ ಸೇರಿ, ಮೇಲಿನ ಅಧಿಕಾರಿಗಳ ಕಡೆಗೆ ಶಿಷ್ಟಮಂಡಲಿ ಕಳುಹಿಸಿದ್ದಾರಂತೆ.

ಸ್ವಾತಂತ್ರ್ಯದ ಹಬ್ಬ ಮಾಡಿದ
ಬೀರಣ್ಣನು
ಬಡಿಗೆಯೆತ್ತಿ ಎಲ್ಲರಿಗೂ ಹೇಳುತ್ತಾನೆ:
'ಜಯ್ ಹಿಂದ್!'

ಅನುಭವ ★ (ಒಂದು ಕಲ್ಪಿತ ಕಥೆ)

ಶ್ರೀ. ನೀಲಕಾಂತ ಹೆಬ್ಬಮಾಡಿ, ಮುಂಬಯಿ

ಮಾನವತೆಯನ್ನು ಮರೆಯಿಸಿಬಿಡುವಂತೆ ಮತ್ಸರ-ಈರ್ಷೆಗಳನ್ನು ಹಬ್ಬಿಸುವ ಮತಧರ್ಮಗಳು ಎಂದೂ ಆತ್ಮವಿಕಾಸವನ್ನು ಮಾಡಲಾರವು. ಜಗತ್ತಿನ ತಾಯಿಯಾದ ಹೆಣ್ಣನ್ನು ಕಾಮದ ಕೈಗೊಂಬೆಯನ್ನಾಗಿ ಗಣಿಸುವ ಪಾಶವವೃತ್ತಿ ಧರ್ಮವೆನಿಸೀತೆ ?

★

ಹೃತ್ತು ಮಾಸದ ಕೊನೆಯ ದಿನಗಳು. ಮಟ ಮಟ ಮಧ್ಯಾಹ್ನ. ದಿನಕರನು ನಡುನೆತ್ತಿಯ ಮೇಲೇರಿ, ಇನ್ನ ಪ್ರಚಂಡ ತಾಪವನ್ನು, ಉದಾರ ಮನಸ್ಸಿನಿಂದ. ಧಾರಾಳ ನೀಡುತ್ತಿದ್ದನು. ಧರೆಯು ಮಿತಿಮೀರಿದ ಉಷ್ಣತೆಯಿಂದಾಗಿ ಬೆಂದು ಬೇಗುದಿಗೊಂಡು, ಬಿಸಿಯುಸಿರು ಬಿಡುವಂತೆ ಭಾಸವಾಗುತ್ತಿತ್ತು. ಬೆಂಗಳೂರಿಂದ ಹೊರಟ ರೈಲುಬಂಡಿಯು ಸಾವಧಾನವಾಗಿ ಮುಂದೋಡುತ್ತಿತ್ತು. ಅದರ ಚಿಕ್ಕದೊಂದು ಡಬ್ಬೆಯಲ್ಲಿ ಕಾಲೂರಲೂ ಸ್ಥಳವಿರಲಿಲ್ಲ.....ಪ್ರಯಾಣಿಕರ ದಬ್ಬುವಿಕೆಯಿಂದಾಗಿ! ದುರ್ದೈವ ವಶಾತ್ ನಾನೂ ಅದರಲ್ಲಿ ಒರ್ವ ಪ್ರಯಾಣಿಕ. ಕೆಲವೇ ದಿನಗಳ ಮೊದಲು ನನ್ನ ಯಜಮಾನರು ಕಂಪನಿಯ ಕಾರ್ಯನಿಮಿತ್ತ, ನನ್ನನ್ನು ಮದ್ರಾಸಿನ ಬ್ರ್ಯಾಂಚ್ ಆಫೀಸಿಗೆ ಕಳುಹಿಸಿದ್ದರು. ಇತ್ತಲಾಗಿ ರೈಲುಬಂಡಿಯ ಪ್ರಯಾಣವೇ ನನ್ನ ದಿನಚರಿಯಾಗಿತ್ತು.

ಕಂಪನಿಯ ಪ್ರಮುಖ 'ಸೇಲ್ಸ್‌ಮನ್' ಶ್ಯಾಮುಲಾಲ್ ಪಂಜಾಬಿ ತರುಣ. ವಿವಾಹಿತನಾಗಿದ್ದರೂ ತನ್ನ ಕುಟುಂಬವನ್ನು ಊರಲ್ಲೇ ಬಿಟ್ಟಿದ್ದ. ಕಾರಣ, ಮುಂಬಯಿಯಲ್ಲಿ 'ಪಗ್ರಿ'ಯ ರೂಪದಲ್ಲಿ ಹೇರಳ ಧನ ಸುರಿಸಿದೆ ಬಿಡಾರ ದೊರೆಯುವುದೇ ದುಸ್ತರ. ಅತನ ಹುಟ್ಟೂರಲ್ಲಿ ಲೀಗ್ ಆಳ್ವಿಕೆಯಾಯಿಗಳು ರಾಜಕೀಯ ಒಂದೋಲನದ ಮುಸುಕಿನಲ್ಲಿ 'ಲಂಕಾದಹನ' ನಾಟಕ (?) ವಾಡುತ್ತಿದ್ದರು! ಈ ದಳ್ಳುರಿಯ ಕೊಳ್ಳಿಯು ತನ್ನವರನ್ನೂ ಸ್ವಾಹಾ ಮಾಡಿತೋ ಏನೋ—ಎಂದು ತಿಳಿಯಲು, ಆತನು ಒಂದು ಮಾಸಕ್ಕೆ ಮೊದಲೇ ಅತ್ತ ಕಡೆಗೆ ಧಾವಿಸಿದ್ದ. ಶ್ಯಾಮುಲಾಲ ಇನ್ನು ಮರಳಿ ಬರುವ ಲಕ್ಷಣ ತೋರಲಿಲ್ಲ. ಕೆಲವೇ ದಿನಗಳ ಹಿಂದೆ ಕಂಪನಿಗೆ ಅವನ ಒಂದು ಪತ್ರ ಬಂದಿತ್ತು. ಅದರಲ್ಲಿ, ತನ್ನ ಮನೆ-ಮಠಗಳು ಲೀಗ್ ಆಳ್ವಿಕೆಯಾಯಿಗಳ ಉದಾತ್ತ ಕೃತಿಯಿಂದಾಗಿ ಧರಾಶಾಯಿಯಾಗಿರುವುದಾಗಿಯೂ, ತನ್ನ ಮುದಿ ತಂದೆ ಹಾಗೂ ಹಿರಿಯ ಮಗನು ಅದರೊಂದಿಗೆ ಅಗ್ನಿಸಂಸ್ಕಾರ ಹೊಂದಿರುವುದಾಗಿಯೂ, ತನ್ನ ಮುದ್ದು ಮಡದಿಯ ಅದರಂತೆಯೆ ಪುಟ್ಟ ಕೂಸಿನ ಪತ್ತೆ ಇಲ್ಲವಾಗಿಯೂ, ತಾನಿನ್ನು ಯಾರ ಉದರಪೋಷಣೆಗಾಗಿ ದುಡಿಯಲು ಮುಂಬಯಿಗೆ ಮರಳಬೇಕೆಂದೂ, ತನ್ನ ದುರಂತ ದುರ್ದೈವದ ದಯನೀಯ ವಾರ್ತೆಯನ್ನು ಎದೆ ಕರಗುವಂತೆ ಬರೆದು ಕಳುಹಿಸಿದ್ದನು. ಹೀಗಾಗಿ, ನಾಲ್ಕಾರು ಭಾಷೆಗಳ ಅಲ್ಪ ಪರಿಜಯವಿದ್ದ ನನಗೇ ಈ ನಾಲ್ಕೂರು ಮತ್ತಾಡುವ ಕಾರ್ಯವು ಮಹಿಸಲ್ಪಟ್ಟಿತ್ತು.

ಮದ್ರಾಸಿನಲ್ಲಿ ನನ್ನ ಕೆಲಸವನ್ನು ತೀರಿಸಿ, ಬೆಂಗಳೂರಿಗೆ ಬಂದಿದ್ದೆ. ಅಲ್ಲಿಯ ಕಾರ್ಯ ಮುಗಿಸಿ, ಒಂದೆರಡು ದಿನ ವಿಶ್ರಾಂತಿ ಪಡೆದು, ನಾವಕಾತವಾಗಿ ಮುಂಬಯಿಗೆ ಬರುವ ಆಶೆಯಿತ್ತು. ಅದಕ್ಕಾಗಿ, 'ಬೇಹಕ್ಕೆ ಸುಖವಿಲ್ಲ; ಎರಡು ದಿನ ತಡೆದು ಆಫೀಸಿಗೆ ಬರುತ್ತೇನೆ!' ಎಂಬಾಶಯದ ತಂತಿಯೊಂದನ್ನು ಕಳುಹಿಸಿಕೊಟ್ಟಿದ್ದೆ. ಆಷ್ಟರಲ್ಲೇ ಬೆಂಗಳೂರಲ್ಲೂ ಜಾತೀಯ ಕಲಹದ ಕಾಡ್ಗಿಚ್ಚು ಒಮ್ಮೆಲೇ ಧಗಧಗಿಸತೊಡಗಿತು. ಇನ್ನು ಇಲ್ಲಿ ಅಲ್ಪ ವಿಶ್ರಾಂತಿ ತೆಗೆದುಕೊಳ್ಳುವದರೊಡನೆ ಎಲ್ಲಿ ಪ್ರಾಣಕ್ಕೆ ಸಂಚುಕಾರ ಬಂದು ಅನಂತ ವಿಶ್ರಾಂತಿ ಪ್ರಾಪ್ತವಾಗುವುದೋ — ಎಂದು ಬೆದರಿ, ಕೂಡಲೆ ಮುಂಬಯಿಗೆ ಹೊರಡುವ ಬಂಡಿಯಲ್ಲಿ ನುಗ್ಗಿಬಿಟ್ಟೆನು. ಇದೀಗ ಹದಿಹರೆಯ ಸ್ಟೇಶನಿನಲ್ಲಿ ಬಂಡಿ ತಂಗಿತ್ತು. ಯಾವ ಸ್ಟೇಶನಾದರೇನು? ಅಲ್ಲಿ ಇಳಿಯುವವರು ಮೂರು ಮುಂದಿಗಾದರೆ ಹತ್ತುವವರು ಹತ್ತಾರು ಮಂದಿ! ಮೊದಲೇ ಡಬ್ಬೆಯಲ್ಲಿ ಮೈ ಸಿಮಿಟಿಸಲೂ ಅವಕಾಶವಿದ್ದಿಲ್ಲ. ಈ ಮುದ್ದೆ, ಪ್ರತಿಯೊಂದು ಸ್ಟೇಶನಿನಲ್ಲೂ ಮುಂದೆ ಪ್ರಯಾಣ ಬೆಳಸುವ ಉದ್ದಿಶ್ಯ ಮುಂಗಡ ಕಾಣ ತೆಗೆದು ಮೊದಲೇ ಟಿಕೀಟು ಪಡೆಕೊಂಡಿರುವ ಪ್ರಯಾಣಿಕರಿಂದ ಜೊಯ್ದಾಟ. ವಿಪರೀತ ಬೇಗೆಗೆ ಬಳಲಿ, ಬೆಂಡಾಗಿ, ನೀರಡಿಕೆಯಿಂದ ನಾಲಗೆಯೊಣಗಿ, ಒಂದಿಷ್ಟು ನೀರಿಗಾಗಿ ಹಾತೊರೆಯುತ್ತಿರುವ ಮಂದಿಗಳ—ಮುಖ್ಯವಾಗಿ ಮಕ್ಕಳು-ಮರಿಗಳ ಚೀರಾಟವ್ಯ ಕರುಣಾಜನಕವಿತ್ತು. ರೈಲ್ವೆ ನಿಲ್ದಾಣದಲ್ಲಿ ನೀರಿನ ನಲ್ಲಿಯು ಅನತಿದೂರದಲ್ಲಿ ಕಾಣುತ್ತಿದ್ದರೂ, ಅಲ್ಲಿಂದ ನನಗೆ ಹೋಗಿ ನೀರು ತರುವ ಧೈರ್ಯ ಯಾರಿಗೂ ಇದ್ದಿಲ್ಲ; ಕಾರಣ, ತಾನಿದ್ದ ಸ್ಥಳವನ್ನು ಬಿಡಲು ಬರುವಂತಿಲ್ಲ. ಬಾಗಿಲಿನ ವರೆಗೆ

ಹೋಗಲು ಸಾಧ್ಯವಿಲ್ಲ. ಆ ಸಣ್ಣ ಕಿಟಕಿಯಿಂದಲೇ ಹೊರಗೆ ಹಾರಬೇಕು, ಅದರ ಮೂಲಕವೇ ಒಳಗೆ ತೂರಿಕೊಳ್ಳಬೇಕು. ಒಮ್ಮೆ ತನ್ನ ನಿಶ್ಚಿತ ಸ್ಥಳವನ್ನು ಬಿಟ್ಟರೆ, ಮತ್ತೆ ಅದು ತನಗೆ ದೊರೆಯುವ ನಿಶ್ಚಯವಿಲ್ಲ. ಅಷ್ಟು ಒತ್ತಾಟ, ತಿಕ್ಕಾಟ.

ನಾನು ಸುದೈವ ವಶಾತ್ ಡಬ್ಬಿಯ ಮೂಲೆಯಲ್ಲಿ, ಕಿಟಕಿಗೆ ತಾಗಿ, ಬೆಂಚಿನ ಮೇಲೆ ಕುಳಿತಿದ್ದೆ. ನನ್ನ ಮಗ್ಗುಲಲ್ಲಿ, ಕಡೂರು ಸ್ಟೇಶನ್ನಿನಲ್ಲಿ ಹತ್ತಿದ ಮಂಗಳೂರು ಕಡೆಯ ನಾಲ್ಕಾರು ಜನ ಯುವಕರಿದ್ದರು. ಅವರೆಲ್ಲರೂ ಮುಂಬಯಿಗೆ ಹೋಗುವವರು. ಹಾದಿಯುದ್ದಕ್ಕೂ ನಾವೆಲ್ಲರೂ ಅಲ್ಲಿ ಇಲ್ಲಿಯ ಸುಖದುಃಖತೆಯಾಡುತ್ತ, ಕೊನೆಗೆ ರಾಜಕೀಯ ಅಶಾಂತತೆಯ ವಾತಾವರಣದ ಕುರಿತು ಪ್ರಸ್ತಾಪಿಸತೊಡಗಿದವು. ಗಾಂಧೀಪಾದವನ್ನು ಹೊಗಳುವವನೊಬ್ಬ; ಅದನ್ನು ಖಂಡಿಸಿ, ತುಂಡಿಸಿ ತೆಗಳುವವನೊಬ್ಬ. ಸಾಮ್ಯವಾದವನ್ನು ಪುರಸ್ಕರಿಸುವವನೊಬ್ಬ, ಸದ್ಯದ ಕಾಂಗ್ರೆಸ್ ಸರಕಾರವನ್ನು ಹೀಯಾಳಿಸುವವನೊಬ್ಬ. "ಸರಕಾರವು ಪಕ್ಷಪಾತ ತೋರಿಸುತ್ತಿದೆ. ಇಲ್ಲವಾದರೆ, ಅಂದು ಕೇವಲ ರಾಷ್ಟ್ರೀಯ ಧ್ವಜ ಹಿಡಿದುಕೊಂಡ ಮಾತ್ರಕ್ಕೆ ಯಾ 'ಇಂಕಿಲಾಬ್ ಜಿಂದಾಬಾದ್' ಅಥವಾ 'ಗಾಂಧಿಜೀ ಕೀ ಜಯ್' ಎಂದು ಕೂಗಿದ ಅಪರಾಧಕ್ಕಾಗಿ, ಅಶೇ ಪೂಜೆ ಮಾಡಿ, ಜೈಲುರಂಗಕ್ಕೆ ತುರುಬುತ್ತಿದ್ದ ಪೋಲೀಸರು, ಇಂದು ದೇಶದ ಎಲ್ಲೆಡೆಗಳಲ್ಲೂ ಜನರನ್ನು ತಿವಿಯುತ್ತಿರುವ ಪುಂಡರನ್ನು ಹಿಡಿದು, ಕಠಿಣ ಶಿಕ್ಷೆ ವಿಧಿಸುವ ನಿಜವಾದ ಪ್ರಯತ್ನವನ್ನು ಯಾಕೆ ಮಾಡುವುದಿಲ್ಲ? ಅಂತೆಯೇ ಕೆಲವೆಡೆಗಳಲ್ಲಿ ನ್ಯಾಯವಾದ ಸರಕಾರವನ್ನು ಅಲ್ಲಗಳೆದು, ತಾವೇ ಶಾಸನಾಧಿಕಾರಿಗಳಂಬಂತೆ ಶಸ್ತ್ರಧಾರಿಗಳಾಗಿ, ನಿರಾಧಾರಿ ತಥಾ ನಿರುಪದ್ರವಿ ಅನಾಥ ಮುಂದಿಗಳ ಮೇಲೇರಿ ಹೇಯವಾದ ನರಬೇಟೆಯನ್ನಾಡುತ್ತಿರುವ ಪುಂಡರನ್ನು ದಸ್ತಗಿರಿ ಮಾಡಿ, ಅವರ ಮುಂದಾಳುಗಳನ್ನು ಶೈದು ಮಾಡಿ, ವಿಸಾಪುರದಲ್ಲೂ, ಅಹಮ್ಮದ್‌ನಗರದಲ್ಲೂ, ಲಾಲ್‌ಕಿಲ್ಲೆಯಲ್ಲೂ, ಅಂದಮಾನಿನಲ್ಲೂ ತುಂಬಿಸಿ, ಅವರಿಗೆ ತಕ್ಕ ಶಾಸನ ಯಾಕೆ ಮಾಡುವುದಿಲ್ಲ?" ಎಂದು ಮುಂತಾಗಿ ಜೋಬ್ಬಡುವವನು ಮತ್ತೊಬ್ಬ. "ಮಿತ್ರರೇ, ಹಾಗೆಲ್ಲ ಅನ್ಯಥಾ ತಿಳಿಯಬಾರದು. ನಮ್ಮದು ದೊಡ್ಡ ದೇಶ ವಿಭಿನ್ನ ಮತ-ಪಂಥಗಳ ಜನರು ನಮ್ಮಲ್ಲಿ ಕಳೆದ ೨ ಶತಮಾನಗಳಲ್ಲಿ ಪರಾಧೀನರಾಗಿದ್ದುದರಿಂದ, ನಮ್ಮಲ್ಲಿ ಆತ್ಮಾಭಿಮಾನವೇ ಮಾಯವಾಗಿದೆ. ನಮಗೆ ದೊರೆಯುವ ವಿದ್ಯಾಭ್ಯಾಸವೂ, ಇರಿಸಿರುವ ವಾತಾವರಣವೂ ಗುಲಾಮಗಿರಿಯ ಪ್ರಸಾರಕ್ಕೇ ಆಗಿರುತ್ತದೆ. ನಮ್ಮಲ್ಲಿ ಇನ್ನೂ ಆತ್ಮಶಕ್ತಿಯು ವಿಶ್ವಾಸವಿಲ್ಲ. ಮೂರನೆಯ ಪಂಗಡವೊಂದು ಇಲ್ಲಿದ್ದುದರಿಂದಲೇ ನಮ್ಮೊಳಗಣ ಆಂತರಿಕ ಅವಿಶ್ವಾಸದ ಬೀಜವು ಇಂದು ಮರವಾಗಿ, ಬೇರೂರಿ, ಬಲವಾಗಿ ನಿಂತಿದೆ. ನಾವು ಒಗ್ಗಟ್ಟಾದರೆ, ಒಮ್ಮತದಿಂದ ನಮ್ಮ ಜನ್ಮಸಿದ್ಧ ಹಕ್ಕಿಗಾಗಿ ಪ್ರಯತ್ನಪಟ್ಟರೆ, ಆ ಮೂರನೆಯ ಪಂಗಡದ ಬೇಳೆಯು ಇಲ್ಲಿ ಬೇಯಲು ಸಾಧ್ಯವಿಲ್ಲ. ಆದುದರಿಂದಲೇ ನಮ್ಮಲ್ಲಿ ಮೊದಲಿನಿಂದಲೂ ಇಕ್ಕಟ್ಟಿನ ಬೀಜಮಂತ್ರವನ್ನು ಊದಿ ಬಿಟ್ಟು, ಮಂಥ್ರಮುಗ್ಧ ಮಂಕುಗಳನ್ನಾಗಿ ಮಾಡಿ, ತಮ್ಮ ರಾಗಕ್ಕೆ ಸರಿಯಾಗಿ ಕುಣಿಸುತ್ತಿದ್ದಾರೆ ನಮ್ಮನ್ನು. ಆದುದರಿಂದ ಇನ್ನಾದರೂ ನಾವು ಜಾಗೃತರಾಗಬೇಕು. ನಮ್ಮ ಆಂತರಿಕ ಭಿನ್ನಾಭಿಪ್ರಾಯಗಳು ಏನಿದ್ದರೂ ನಾವು ಮತ್ತೆ ನೋಡೋಣ. ನಮ್ಮ ಗೃಹಕಲಹವನ್ನು ನಾವೇ ಹಿಂದಿನಿಂದ ಇತ್ಯರ್ಥಿಸೋಣ. ಮೊದಲಾಗಿ ನಮಗೆ ಬೇಡವಾದ, ನಮ್ಮ ಸ್ವಾತಂತ್ರ್ಯ ಘಾತಕಿಯಾದ, ನಮ್ಮ ಉನ್ನತಿಗೆ ತಡೆಯಾದ ಆ ಮೂರನೆಯ ಪಂಗಡವನ್ನು ಇಲ್ಲಿಂದ ಹೊರಗೆ ಹಾಕೋಣ. ನಾವು ಏಕಕಂಠರಾಗಿ ನಮ್ಮ ಹಕ್ಕು ಬಾಧ್ಯತೆಗಳನ್ನು ಕೇಳುವಾಗ, ಅದನ್ನು ಅಲ್ಲಗಳೆಯಲು ಯಾವ ಶಕ್ತಿಗೂ ಧೈರ್ಯ ಸಾಲದು. ಆ ಉಜ್ವಲ ಧ್ಯೇಯವನ್ನು ಮುಂದಿಟ್ಟು, ಪೂಜ್ಯ ಗಾಂಧೀಜಿಯವರೂ, ಕಾಂಗ್ರೆಸೂ ಕಾರ್ಯ ಮಾಡುತ್ತಿದೆ. ಇಲ್ಲವಾದರೆ, ಸಂಹಾರಶಕ್ತಿಯು ತೈಲಲಿಖಿರವನ್ನೇ ಸರಿರುವ ಆಧುನಿಕ ಸಾಮ್ರಾಜ್ಯ ಸತ್ತಾಧಾರಿಗಳು 'ನಗ್ನ ಫಕೀರ' ನೊರ್ವನ ಅಹಿಂಸಾವಾದದ ಆತ್ಮಶಕ್ತಿಯ ಮುಂದೆ ಮಣಿಯುತ್ತಿದ್ದರೇ? ಎಂದೂ ಇಲ್ಲ. ಅದಕ್ಕಾಗಿಯೆ ಕಾಂಗ್ರೆಸ್ ಸರಕಾರವು ಶಾಂತಿ, ಸಮಾಧಾನ, ಉದಾರತೆಯಿಂದ, ಮುಂದಾಲೋಚನೆಯಿಂದ ಕೆಲಸಮಾಡುತ್ತಿದೆ. ಅದರ ಉಜ್ವಲ ಧ್ಯೇಯವನ್ನು ಅಲ್ಲಗಳೆದು, ಅದರ ಪುರೋಗಾಮಿ ಕಾರ್ಯಗಳಿಗೆ ನಾವು ತಡೆಮಾಡಬಾರದು. ಕಾಂಗ್ರೆಸು ಮಹಾ ಮಹಾ ಮೇಧಾವಿಗಳಿಂದ, ಪಂಡಿತರಿಂದ, ತತ್ತ್ವವೇತ್ತರಿಂದ ಕೂಡಿರುತ್ತದೆ. ಅವರ ಅಭಿಪ್ರಾಯಗಳಿಗೆ ಅನುಕೂಲವಾಗಿ ನಾವು ವರ್ತಿಸಬೇಕು. ಎಂದರೇ ಸದ್ಯದಲ್ಲೇ ದೊರೆಯಲಿರುವ ಸ್ವಾತಂತ್ರ್ಯವು ನಮಗೆ ದಕ್ಕುವುದು. ಆದರ ಸಿಹಿಫಲವನ್ನು ಸ್ವಾದಿಸಲು ನಾವು ಅರ್ಹರಾಗುವೆವು. ನಮ್ಮ 'ರಾಮರಾಜ್ಯ'ದ ಕನಸು ನೆನಸಾಗುವುದು" ಎಂದು ನಾನೂ ವೇದಾಂತ ಶುರು ಮಾಡಿದೆ.

ನನ್ನ ಎದುರಿನಲ್ಲೇ ಸಾಧಾರಣ ಮಧ್ಯಮವಯಸ್ಸಿನ ಮುಸಲ್ಮಾನ್ ದಂಪತಿಗಳು ಆಸೀನರಾಗಿದ್ದರು. ಸ್ತ್ರೀಯ ಕೈಯಲ್ಲಿ ಚಿಕ್ಕ ಕೂಸೊಂದಿತ್ತು. ಅದು ಒಂದೇ ಸವನೆ ಚೀರಾಡುತ್ತಿತ್ತು. ಸ್ಟೇಶನ್ ಬಂದೊಡನೆ ಆ ಮುಸಲ್ಮಾನನು ತಂಬಿಗೆ ಹಿಡಿದುಕೊಂಡು ನೀರು ತರಲಕ್ಕಾಗಿ ಕಿಟಕಿಯಿಂದ ಹೊರಗೆ ದುಮುಕಿದನು. ಆ ಸ್ತ್ರೀಯು ನಮ್ಮ ಮಾತುಕತೆಗಳನ್ನು ಅಪರ್ಯಂತವಾಗಿ ಕೇಳಿದ್ದಳು. ಅವಳು ಘೋಷಾ ತೆಂಗುಸಾಗಿದ್ದರೂ ಮಧ್ಯೆ ಮಧ್ಯೆ ಜಯದ ಮುಖವು ತೋರುತ್ತಿತ್ತು. ಆಗಾಗ ಭೀತಿಗೊಂಡಂತಿತ್ತು, ನಿಸ್ತೇಜವಾದಂತಿತ್ತು. ಆಗಾಗ ಕಣ್ಣುಗಳೂ ತುಂಬಿಬರುತ್ತಿದ್ದುವು. ಅವಳೊಟ್ಟಿಗಿದ್ದ ಪುರುಷನು ಹೊರಗೆ ಹೋದೊಡನೆಯೆ, ಆಕೆಯು ನಡುಗುವ ಕೈಯಿಂದ ನನಗೆ ಒಂದು ಕಾಗದದ ಚೂರನ್ನು ಕೊಟ್ಟಳು. ನಾನು ನೋಡಿ

ವುದೇನನ್ನು? ನನ್ನ ಕಣ್ಣುಗಳನ್ನೇ ನಾನು ನಂಬದಾದೆನು. ಆದಲ್ಲಿ "Mr. Shamlal Sharma, Chief Salesman, Jai Hind Industries Bombay" ಎಂದು ಛಾಪಿಸಿತ್ತು. ಅದನ್ನು ನೋಡಿ ನಾನು ಅವಾಕ್ಕಾದೆನು. ನನ್ನಲ್ಲಾದ ಮಾರ್ಪಾಟನ್ನು ಕಂಡು ಆಕೆಯು ಧೈರ್ಯಗೊಂಡು, 'ನಿಮಗೆ ಅವರ ಪರಿಚಯ ವಿದೆಯೇ?' ಎಂದು ಕೇಳಿದಳು. 'ಯಾಕೆ, ನಾನವರನ್ನು ಜೈನ್ಯಾಗಿ ಬಲ್ಲೆ. ನಾನವರ ಸಹೋದ್ಯೋಗಿ. ನನ್ನ ಹೆಸರು ಮೋಹನ್‌ರಾವ್' ಎಂದೆ. ಆಕೆಯು ಮತ್ತೊಮ್ಮೆ ಅಶ್ರುಪೂರ್ಣಳಾದಳು. 'ಅಣ್ಣಾ, ನಾನವರ ಆಭಾಗಿನಿ ಮಡದಿ, ಇದು ಅವರ ಕೂಸು. ಅವರು ಮುಂಬಯಿಯಿಂದ ಬರೆದ ಪತ್ರದಲ್ಲಿ ನಿಮ್ಮ ಹೆಸರನ್ನು ಬರೆದುದು ನನಗೆ ಜ್ಞಾಪಕವಿದೆ. ಈಗ ಅವರು ಎಲ್ಲಿದ್ದಾರೆ?' ಎಂದು ಪ್ರಶ್ನಿಸಿದಳು. 'ಅವರು ಸಾಧಾರಣ ಒಂದು ಮಾಸದ ಹಿಂದೆ ಪಂಜಾಬಿಗೆ ಹೋಗಿರುವರು. ಆದರೆ ಆ ವುರುಷನಾರು? ನೀವು ಎಲ್ಲಿಗೆ ಹೋಗುತ್ತಿದ್ದೀರಿ?' ನನ್ನ ಪುರುಪ್ರಶ್ನೆ. 'ನಮ್ಮ ಮನೆಯನ್ನು ಸುಟ್ಟರು. ನನ್ನ ಮುದುಕ ಮಾವ, ದೊಡ್ಡ ಮಗ ಆದರೊಳಗೇ ಭಸ್ಮರಾದರು. ನನ್ನನ್ನು ಎತ್ತಿಕೊಂಡು ಎಲ್ಲೆಲ್ಲೋ ಹೋದರು. ಆದೊಂದು ಕಡೆ ಮಸೀದೆಯಲ್ಲಿ ನನಗೆ ಕುರಾನು ಕೊಟ್ಟರು, ಕಲ್ಮಾ ಓದಿಸಿದರು. ಈಗ ಎಲ್ಲಿಗೆ ಹೋಗುವುದೆಂದು ನನಗೇ ಗೊತ್ತಿಲ್ಲ.' ಮುಂದೆ ಅವಳಿಂದ ಮಾತನಾಡಲಾಗಲಿಲ್ಲ. ಬಿಕ್ಕಿ ಬಿಕ್ಕಿ ಅಳಲಾರಂಭಿಸಿದಳು. ನನಗೆ ಪರಿಸ್ಥಿತಿಯು ಅರಿವಾಯಿತು. ಹೆಚ್ಚು ಮಾತನಾಡಲು ಅವಕಾಶವಿದ್ದಿಲ್ಲ. ಆ ಮುಸಲ್ಮಾನನು ನೀರು ಹಿಡಕೊಂಡು ಹಿಂತಿರುಗುತ್ತಿದ್ದ. 'ಭಗಿನೀ, ನೀನು ನಿಶ್ಚಿಂತಳಾಗು. ನಿನ್ನ ರಕ್ಷಣೆಯ ಭಾರವು ನನ್ನದು. ನೀನು ನಿನ್ನ ಪತಿದೇವನನ್ನು ಸೇರುವಂತೆ ನಾನು ಪ್ರಯತ್ನ ಮಾಡುವೆನು. ಸಂಶಯಕ್ಕೆಡೆಗೊಡಬೇಡ' ಎಂದಿಷ್ಟೇ ಉಸುರಿ ಸುಮ್ಮನಾದೆ. ಅಷ್ಟರಲ್ಲಿ ಆ ಪುರುಷನು ಕಿಟಕಿಯು ಮಾರ್ಗವಾಗಿಯೇ ಒಳಹೊಕ್ಕ. ಗಾಡಿಯು ಮುಂದೆ ಹೊರಟಿತು.

ಬಿಸಿಲಿನ ಜಳವು ದೇಹವನ್ನು ದಣಿಸಿ, ನಖಶಿಖಾಂತ ಜಲಧಾರೆಯನ್ನು ಹೊರಡಿಸಿ, ಅಯಾಸಪಡಿಸುತ್ತಿರುವಂತೆಯೆ ಈ ಅನಾಥ ಅಬಲೆಯನ್ನು ರಕ್ಷಿಸುವ ಮಹತ್ತರವಾದ ಯೋಜನೆಯು ನನ್ನ ತಲೆಯನ್ನೂ ತಿರುಗಿಸತೊಡಗಿತು. ಶಾಂತ ಸ್ವರದಿಂದ ಆ ಮುಸಲ್ಮಾನನೊಡನೆ ಮಾತಿಗೆ ಮೊದಲು ಮಾಡಿದೆ. 'ಬಹಳ ಆಯಾಸಗೊಂಡವರಂತೆ ಕಾಣುತ್ತಿದ್ದೀರಿ. ಎಷ್ಟು ದೂರ ಪ್ರಯಾಣ ಮಾಡಬೇಕಾಗಿದೆ?'

'ನನ್ನ ಆಯಾಸವನ್ನು ಕುರಿತು ಕೇಳಬೇಡಿರಿ. ವಿಹಾರಿನ ಒಂದು ಚಿಕ್ಕ ಹಳ್ಳಿಯಲ್ಲಿ, ದೊಡ್ಡ ಪರಿವಾರದೊಡನೆ ಸುಖವಾಗಿ ದಿನಗಳೆಯುತ್ತಿದ್ದೆ. ಬಹಳ ವರುಷಗಳಿಂದ, ನನ್ನ ತಾತ ಮುತ್ತಾತರಿಂದ, ನಮ್ಮ ಜೀವಮಾನ ಅಲ್ಲೇ ಕಳೆಯಿತು. ಅಕಸ್ಮಾತ್ ಜಾತೀಯ ಗಲಭೆ ಉಂಟಾಯಿತು. ನಮ್ಮ ಮನೆ-ಮಾರುಗಳು ನಷ್ಟ ಮಾಡಲ್ಪಟ್ಟುವು. ಜಿಂಗುಸರು ಮಕ್ಕಳು ಕೊಲ್ಲಲ್ಪಟ್ಟರು. ಬಹಳ ಪ್ರಯಾಸದಿಂದ ಈ ನನ್ನ ಬೀಬಿಯನ್ನೂ ಮಗುವನ್ನೂ ಕಪ್ಪಿಸಿ, ಅಲ್ಲಿ ಇಲ್ಲಿ ಅಲೆದಾಡಿ, ಎಲ್ಲಾದರೂ ಸುರಕ್ಷಿತ ಸ್ಥಳವನ್ನು ಸೇರಲೆಂದು ಹೊರಟಿರುತ್ತೇನೆ. ಇನ್ನು ಅಲ್ಲಾನ ಈಚ್ಛೆ ಹೇಗುಂಟೋ ಗೊತ್ತಿಲ್ಲ. ಕೈಯಲ್ಲಿ ಸಾಕಷ್ಟು ಹಣವೂ ಇಲ್ಲ.'

'ಮನುಷ್ಯರು ನಿಜವಾಗಿಯೂ ಪಶುಗಳಾಗಿ ಬಿಟ್ಟಿದ್ದಾರೆ. ಇಲ್ಲವಾದರೆ, ಒಂದೇ ಊರಲ್ಲಿ ಜನ್ಮವೆತ್ತಿ, ಒಂದೇ ಜಾವಿಯ ನೀರು ಕುಡಿದು, ಅಕ್ಕಪಕ್ಕದಲ್ಲಿ ಅಣ್ಣತಮ್ಮಂದಿರಂತೆ ಬೆಳೆದು, ಒಟ್ಟಿಗೆ ಆಟ-ಕೂಟದಲ್ಲಿ ಭಾಗವಹಿಸಿದ ಮಂದಿಗಳೇ ಈಗಲೀಗ, ತಮ್ಮ ಅಸ್ತಿತ್ವವನ್ನೇ ಮರೆತು, ಮನುಷ್ಯತ್ವವನ್ನೇ ಕೊರೆದು, ಒಬ್ಬರು ಇನ್ನೊಬ್ಬರ ಕುತ್ತಿಗೆ ಕೊಯ್ಯಲು ಹೊರಟಿರುವುದೆಂದರೆ, ಇದಕ್ಕಿಂತ ಹೇಯ, ಅನಾಗರಿಕ, ಅಮಾನುಷ ಆಕೃತ್ಯವು ಇನ್ನೊಂದಿರದು. ಮನುಷ್ಯನು ಇಷ್ಟು ಅಧೋಗತಿಗೆ ಇಳಿಯಬಹುದೆಂದು ಊಹಿಸುವುದೂ ಅಸಂಭವ. ನಿಮ್ಮ ಸ್ಥಿತಿಯನ್ನು ನೋಡಿ ನನಗೆ ತುಂಬ ಯಾತನೆಯಾಗುತ್ತಿದೆ. ನಿಮ್ಮ ನಮ್ಮೊಳಗೆ ಮಾನವಕೃತ ಧರ್ಮಭೇದವಿದ್ದರೂ ನಾವೆಲ್ಲರೂ 'ರಾಮ' ಯಾ 'ರಹೀಮ' ಎಂದು ಕರೆಯಲ್ಪಡುವ ಆ ಏಕಮಾತ್ರ ದೇವರ ಮಕ್ಕಳು. ಅವನ ಇದಿರಿನಲ್ಲಿ ನಾವೆಲ್ಲರೂ ಸಮಾನರು ಹೀಗಿದ್ದೂ ಮಾನವನು ಜ್ಞಾನಶೂನ್ಯನಾಗಿ ದಾನವನಂತೆ ವರ್ತಿಸುವುದು ನಿಜವಾಗಿಯೂ ಅವನ ಅಧಃಪತನದ ಚಿಹ್ನೆಯಾಗಿದೆ. ನಿಮ್ಮ ಕಷ್ಟನಷ್ಟವನ್ನು ಪರಿಹರಿಸಲು ನನ್ನಿಂದೇನಾದರೂ ಸಾಧ್ಯವಿರುವುದಾದರೆ, ಹಾಗೆ ಮಾಡಲು ನಾನು ಸಿದ್ಧನಿರುವೆನು.'

'ನಿಮ್ಮದು ದೊಡ್ಡ ಹೃದಯ. ನಿಮಗೆ ಖುದಾನು ಒಳ್ಳೆಯದನ್ನು ಮಾಡಲಿ! ನನ್ನ ದೂರದ ಆತ್ಮೀಯನೊಬ್ಬನು ಮುಂಬಯಿಯಲ್ಲಿದ್ದಾನೆ. ಸದ್ಯ ಆತನಿದ್ದಲ್ಲಿಗೇ ನಾನು ಹೋಗುತ್ತಿದ್ದೇನೆ. ಅವನು ನನಗೆ ನೆರವಾಗುವನೆಂಬ ಭರವಸೆ ಇದೆ.'

'ಮುಂಬಯಿಯು ದೊಡ್ಡ ನಗರ. ಅಲ್ಲಿ ಸಾವಿರಾರು ಕಟ್ಟಡಗಳಿವೆ, ನೂರಾರು ರಸ್ತೆಗಳಿವೆ. ಅವುಗಳ ಸರಿಯಾದ ಅನುಭವವಿಲ್ಲದೆ ಬೇಕಾದೆಡೆ ಹೋಗುವುದೂ ಅಸಾಧ್ಯ. ಮೇಲಾಗಿ ಅಲ್ಲಿ ಬೇಕಷ್ಟು ದುಷ್ಟ ಜನರೂ ಇರುವರು. ಅವರೆಲ್ಲ ಪಳಗಿದ ಪುಂಡರು. ನವಾಗಂತುಕರೆಂದು ತಿಳಿದೊಡನೆ ಸಹಾಯ ಮಾಡುವವರಂತೆ ನಟಿಸಿ, ಕೊನೆಗೆ ವಿಪತ್ತಿಗೆ ಗುರಿಮಾಡಲೂ ಹೇಸದವರು. ಪ್ರಯುಕ್ತ ನೀವು ಸ್ವಲ್ಪ ಜಾಗ್ರತೆಯಲ್ಲಿರಬೇಕು. ನಿಮಗೆ ಮುಂಬಯಿಯ ಪರಿಚಯವಿದ್ದಿರಬೇಕಷ್ಟೇ? ಹಾಗಿದ್ದರೆ ನೀವು ಮೋಸ ಹೋಗಲಾರಿರಿ!'

'ಇಲ್ಲ, ನಾನೀವರೆಗೆ ಮುಂಬಯಿ ಕಂಡವನಲ್ಲ. ನನ್ನ ಸಂಬಂಧಿಯು ಭೆಂಡೀ ಬಜಾರಿನಲ್ಲಿದ್ದಾನೆ. ಅವನಿದ್ದಲ್ಲಿಗೆ ಹೋಗಲು ಭಾಯುಕಳಾ ಸ್ಟೇಶನ್‌ನಲ್ಲಿಳಿದು, ಟ್ರಾಮುಗಾಡಿಗೆ

ಒಂದಾಣೆ ತೆಕ್ಕು ಹೋಗಬೇಕೆಂದು ಆತನು ಹಿಂದೊಮ್ಮೆ ಪತ್ರದಲ್ಲಿ ಬರೆದಿದ್ದ. ಅವನ ನಿಲಾನವು ನನ್ನಲ್ಲಿದೆ; ಬೇಕಾಗಿದ್ದರೆ ನೋಡಿಕೊಳ್ಳಿ!'

'ಸರಿ, ಸರಿ, ಇನ್ನು ನೀವು ಚಿಂತಿಸಬೇಕಾಗಿಲ್ಲ. ನಾನು ಭಾಯಕಳಾ ದಾಟಿ ಬೋರಿಬಂದರಿಗೆ ಹೋಗುವವನು. ಭಾಯಕಳಾ ಸ್ಟೇಶನಿನಲ್ಲಿ ಇಳಿದು, ನಿಮ್ಮ ನಿಶ್ಚಿತ ಸ್ಥಳಕ್ಕೆ ಹೋಗಲು ತಕ್ಕ ವ್ಯವಸ್ಥೆ ಮಾಡಿಯೇ ನಾನು ಮುಂದೆ ಹೋಗುವೆನು. ಎಂದರೆ ನಿಮಗೆ ಒಂದಿಷ್ಟೂ ತೊಂದರೆಯಾಗದು.'

'ನಿಮ್ಮದು ದೊಡ್ಡ ಉಪಕಾರ. ಬಹುಶಃ ಖುದಾನೇ ನನಗೆ ನಿಮ್ಮ ಭೆಟ್ಟಿ ಮಾಡಿಸಿರಬೇಕು. ನನ್ನ ತಲೆಯಿಂದ ದೊಡ್ಡದೊಂದು ಹೊರೆಯನ್ನು ಇಳಿಸಿದಂತಾಯಿತು.'

ನನಗೆ ಬೇಕಾಗಿದ್ದ ಮಾಹಿತಿಯನ್ನೆಲ್ಲ ಉಪಾಯದಿಂದ ತಿಳಿದುಕೊಂಡದ್ದರಿಂದ, ಮುಂದಿನ ಕಾರ್ಯವು ಸುಗಮವಾಯಿತು. ಹೀಗಾಗಿ ನನ್ನ ತಲೆಯಿಂದಲೂ ದೊಡ್ಡದೊಂದು ಹೊರೆಯನ್ನು ಇಳಿಸಿದ ಅನುಭವವು ನನಗೂ ಆಯಿತು. ಮುಂಬೆ ಹುಬ್ಬಳ್ಳಿ ಸ್ಟೇಶನಿನಲ್ಲಿ ಬಂಡಿ ತಂಗಿದಾಗ, ಜಹಾಪಾನ ಮಾಡಲಿಕ್ಕೆಂದು ಹೊರಗೆ ಹೋದೆನು. ಅಲ್ಲಿಂದಲೇ ಎರಡು ತಂತಿ ಕಳುಹಿಸಿಕೊಟ್ಟೆನು. ಒಂದು ಶ್ಯಾಮಲಾಲನಿಗೆ, 'ನಿನ್ನ ಪತ್ನಿಯು ಮುಂಬಯಿಯಲ್ಲಿರುವಳು; ಕೂಡಲೆ ಹೊರಟು ಬಾ' ಎಂದು. ಇನ್ನೊಂದು ನನ್ನ ಯಜಮಾನರಿಗೆ, 'ಪೂನಾ ಪೆಸೆಂಜರ್‌ನಲ್ಲಿ ನಾನು ಬರುತ್ತೇನೆ. ಸಿ ಆಯ್. ಡಿ. ಪೋಲೀಸಿನೊಡನೆ ಭಾಯಕಳಾ ಸ್ಟೇಶನಿನಲ್ಲಿ ದಯೆಮಾಡಿ ನನ್ನನ್ನು ನಿರೀಕ್ಷಿಸಿರಿ' ಎಂದು.

ಬೆಂಗಳೂರ ಬಂಡಿಯು ಪುಣೆಯನ್ನು ಕಲ್ಪಿದ್ದಾಯಿತು. ನಾವೆಲ್ಲರೂ ಆದರಿಂದ ಇಳಿದು, ಮುಂಬಯಿಗೆ ಹೊರಡುವ 'ಪೂನಾ ಪೆಸೆಂಜರ್' ಗಾಡಿಯ ಡಬ್ಬಿಯನ್ನು ಪ್ರವೇಶಿಸಿದೆವು. ಯಥಾಸಮಯ ಭಾಯಕಳಾ ಸ್ಟೇಶನನ್ನೂ ಮುಟ್ಟಿದೆವು. ನನ್ನ ತಂತಿಯ ಆದೇಶದಂತೆ ನನ್ನ ಯಜಮಾನರೂ ಸಿ. ಆಯ್. ಡಿ. ಯೊಡನೆ ಅಲ್ಲಿ ಹಾಜರಿದ್ದರು. ವಿಷಯವನ್ನು ತಿಳಿಸಿದ ಮೇಲೆ ಆ ಮುಸಲ್ಮಾನನ ದಸ್ತ್ಗಿರಿಯೂ ಆಯಿತು. ಎರಡು ದಿವಸಗಳ ಮೇಲೆ ಶ್ಯಾಮಲಾಲನು ಮುಂಬಯಿಗೆ ಬಂದು, ತನ್ನ ಆಳಿದುಳಿದ ಪತ್ನೀ-ಪುತ್ರರನ್ನು ಕಾಣುವಂತಾಯಿತು. ಈಗ ಮತ್ತೆ ನಾನೂ ಶ್ಯಾಮಲಾಲನೂ ಸಹೋದ್ಯೋಗಿಗಳಾಗಿರುತ್ತೇವೆ. ಆ ಆಘಟಿತ ಅನುಭವದಿಂದಾಗಿ, ನಮ್ಮ ಸ್ನೇಹವು ಮತ್ತಿಷ್ಟು ನಿಕಟವಾಗಿ, ಎರಳ ಹೊಯ್ದಂತಾಗಿದೆ.

ಬಾಡಿಗೆಯ ಭಟ:

ಶ್ರೀ. ವಿ. ಜಿ. ಭಟ್ಟ, ಎಂ. ಎ. ಧಾರವಾಡ

ಇಲ್ಲ ಎದುರು ಬಂದ ಹಗೆಯ
ಕೊಂದೆ ಬಿಡುವೆನೆಂಬ ಹಟ!
ಇಲ್ಲ ಅವರ ಭೀತಿಯು,
ನಾನು ಹಣಕೆ ದುಡಿವ ಭಟ!
ಇಲ್ಲ ನನ್ನ ಬೆನ್ನಿಗಿರುವ
ಮುಂದಿಯಲೂ ಪ್ರೀತಿಯು!

ನನಗಾಗಿಯೆ ತೆರೆಯಬಹುದು
ಸ್ವರ್ಗದಲ್ಲಿ ದಿಡ್ಡಿಯು;
ಈ ಬಣಗಳು ಗೆಲೆಯರಾದ-
ರೇನು ಇಲ್ಲ ಅಡ್ಡಿಯು,
ಹರಿಯತಿಹುದು ಹೊಸತಾಗಿಯೆ
ತೊಟ್ಟ ಹಳೆಯ ಜಡ್ಡಿಯು!

ಈ ಹಗೆಗಳು ಒಬ್ಬರೊಬ್ಬ-
ರನ್ನು ತುಳಿದು ಮೆಟ್ಟಲಿ,
ನಾನು ಬಚಾವಾಗುವಂಥ
ಯುಕ್ತಿಯೊಂದು ಹುಟ್ಟಲಿ!
ನನ್ನ ಹೆಣವು ಬಿದ್ದರೂ
ಮನೆಗೆ ಹಣವು ಮುಟ್ಟಲಿ!

ಪ್ರಾಮಾಣಿಕ ತನಕೆ ನೆಲದಿ
ಹುಟ್ಟದಿಂದು ಬಾಡಿಗೆ,
'ವೀರ, ಶೂರ, ಮಹಾಯೋಧ!'
ಎಂಬ ಹೆಸರು ಹೇಡಿಗೆ;
'ಓಂ ಶಾಂತಿ ಶಾಂತಿ' ಎಂಬ
ಶಾಪ ಜಗದ ಕೇಡಿಗೆ!

ಎಲ್ಲೆಲ್ಲೂ ಇಂಥ ಭಟನೆ
ಇಲ್ಲ ಎನಿಸುವಂಥ ನಟನೆ
ಕಂಗೊಳಿಸಲಿ ಮೆರೆಯಲಿ!
ಇಂದು ಕೊಲೆ ಒಂದು ಕಲೆ
ಆಗಿರುವುದು ಧರೆಯಲಿ—
ಇದನೆಲ್ಲರು ಅರಿಯಲಿ!

ನಾನು ಗೆದ್ದೆ ತೀರಬೇಕು
ಎಂಬುದಿಲ್ಲ ಕಾಯಿದೆ;
ಹುರುಪಿನಿಂದ ಅರಿಯ ಕೊಂದ-
ರೇನು ಬಂತು ಫಾಯಿದೆ?
ತೀರುವನಕ ವಾಯಿದೆ
ಉಳಿದರಾಯ್ತು ನಾಯದೆ!

ಮರಣಕ್ಕೆ ಮುಂಚೆ

(ಒಂದು ವಿಚಾರಪ್ರಚೋದನೆ)

ಶ್ರೀ. ಸೋಮಶೇಖರ ಪಾರ್ವತೀಯ, ಬನಾರಸ

ಸಾವು ಒಂದೇ ಇದ್ದರೆ ಸಂಸಾರವಿಲ್ಲ; ಹುಟ್ಟು ಒಂದೇ ಇದ್ದರೆ ಸಂಸಾರಕ್ಕೆ ಆದರ್ಶವಿಲ್ಲ, ನಿಯಮನವಿಲ್ಲ. ಸಾವು–ಹುಟ್ಟುಗಳ ಸೇರುವೆಯೇ ಸಂಸಾರ! ಆದುದರಿಂದಲೆ ಸಾವಿಗಾಗಿ ಯಾರೂ ಪೆದರಬೇಕಾಗಿಲ್ಲ; ಕುತೂಹಲದಿಂದ ಎದುರಿಸಬೇಕು.

❁

" I have loved life so much,
Why should I not love death
even more ? "

—ರವೀಂದ್ರನಾಥ ಟಾಗೋರ

ಒಂದು ವಿಷಯವನ್ನು ಎಲ್ಲರೂ ತಮ್ಮ ಜೀವನದಲ್ಲಿ ಚರ್ಚಿಸಲೇ ಬೇಕು. ಜೀವನವು ಎಷ್ಟೇ ಸಣ್ಣದಿರಲಿ ಈ ವಿಷಯದ ಕಡೆಗೆ ಎಷ್ಟೋ ಸಲ ಸಾಮಾನ್ಯ ಮನುಷ್ಯನೂ ಎಳೆಯಲ್ಪಡುತ್ತಾನೆ. ಅನನು ಇಚ್ಛಿಸಿಯೋ, ಇಚ್ಛಿಸದೆಯೋ ಈ ವಿಷಯದ ಬಗ್ಗೆ ವಿಚಾರಿಸುವುದುಂಟು. ಜಗತ್ತಿನಲ್ಲಿ ಹುಟ್ಟಿ ಬಂದ ಮೇಲೆ ಮನುಷ್ಯನ ಲಕ್ಷ್ಯವೇನು? ಅವನು ಮಾಡಬೇಕಾದ ಕರ್ತವ್ಯವೇನು? ಮರಣವೇಕೆ ಬರುತ್ತಿದೆ? ಬಂದ ನಂತರ ಏನು?— ಇತ್ಯಾದಿ ಅಳತೆಯಿಲ್ಲದ ಶಂಕೆಗಳು ತಲೆದೋರಿ, ಸಾಮಾನ್ಯ ಮನುಷ್ಯನನ್ನು ಎಂದೂ ಸಮಾಧಾನದಿಂದ ಇರಗೊಡುವುದಿಲ್ಲ. ನಿಜವಾಗಿಯೂ ಅವು ಅಳತೆಯಿಲ್ಲದ ಶಂಕೆಗಳು; ಆದರೂ ಯೋಚಿಸುವವನಿಗೆ ಅವು ಆಶ್ಚರ್ಯವನ್ನುಂಟುಮಾಡದೆ ಇರವು.

ಮನುಷ್ಯನ ಸಾಧಾರಣ ಜೀವನವನ್ನೆ ತೆಗೆದುಕೊಂಡರೂ, ಒಂದೇ ರೀತಿಯ ನಿಯಮಗಳನ್ನು ಕಾಣುತ್ತೇವೆ; ಮಗುವಾಗಿ ಹುಟ್ಟುತ್ತಾನೆ. ಜೊಂದದ ಆಟಗಳನ್ನು ಆಡುತ್ತಾನೆ ಸ್ವಲ್ಪ ಬೆಳೆದ ನಂತರ ಶಾಲೆಗೆ ಹೋಗುತ್ತಾನೆ. ಶಾಲೆಗೂ ಮನೆಗೂ ಎಡತಾಕುವಷ್ಟರಲ್ಲಿ ಯೌವನ ಬಂದು ಹೋಗುತ್ತದೆ. ಅನಂತರ ವಿವಾಹ. ಅನಂತರ ಮಕ್ಕಳು. ಬಳಿಕ ಸಂಸಾರ ತಾಪತ್ರಯ. ತಾಪತ್ರಯದಲ್ಲಿಯೇ ನುಗ್ಗಾಗಿ ' ಅಯ್ಯೋ ಶಿವನೇ! ' ಎನ್ನುವಷ್ಟರಲ್ಲಿ ಮುದಿತನವು ಬರುತ್ತದೆ. ಆ ಮೇಲೆ ಮಕ್ಕಳ ವಿವಾಹ; ಅನಂತರ ಮೊಮ್ಮಕ್ಕಳ ಸುಖ. ಸುಖ–ದುಃಖಗಳ ವಿರಾಟದಲ್ಲಿ ವೈದ್ಯಾಪ್ಯವೂ ಕೊನೆಗೊಳ್ಳುತ್ತದೆ. ಅನಂತರ? ಅನಂತರ?.... ಅನಂತರ?....

ಅನಂತರದ ವಿಷಯವನ್ನು ಬರಿ ಚ್ಞಾಪಿಸಿಕೊಂಡರೂ ಭಯವೆನಿಸುತ್ತದೆ. ಏಕೆ? ಈ ಭಯವೇಕೆ? ಜೀವನದಲ್ಲಿ ನಾವು ಎಲ್ಲವನ್ನೂ ಬಯಸುತ್ತೇವೆ. ಒಳ್ಳೆಯದು ಬಂದರೆ ಹಿಗ್ಗುತ್ತೇವೆ; ಕೆಟ್ಟದು ಬಂದರೆ ನಿರ್ವಾಹವಿಲ್ಲದೆ ' ಪರವಾ ಇಲ್ಲ ' ಎನ್ನುತ್ತೇವೆ. ಆದರೆ ಇದಕ್ಕೆ ಮಾತ್ರ ಅಷ್ಟು ಅಂಜುತ್ತೇವೆ. ಇದರಲ್ಲೇನು ಅಷ್ಟು ಮಹತ್ವ? ಅಷ್ಟು ಶಕ್ತಿ?

ಮನುಷ್ಯ ಮರಣಕ್ಕಾಗಿ ಹೆದರುವಷ್ಟು ಬೇರೆ ಯಾವುದಕ್ಕೂ ಹೆದರುವುದಿಲ್ಲ. ಹಾಗಾದರೆ ಮರಣವು ಎಲ್ಲರನ್ನೂ ಹೆದರಿಸುತ್ತದೆಯೇ? ಹಾಗೂ ಇಲ್ಲ. ನಾವು ಕೇಳಿದ್ದೇವೆ—ನೋಡಿದ್ದೇವೆ; ಕೆಲವರು ಆದಕ್ಕೆ ಹೆದರುವುದಿಲ್ಲ. ಅವರನ್ನು ಹುಡುಕಲು ಬಹಳ ದೂರ ಹೋಗಬೇಕಾಗಿಲ್ಲ. ನಮ್ಮ ಸಮಚಿತ್ತರಾದ ಸಂತರು ಅಥವಾ ಮಹಾತ್ಮರು ಮರಣಕ್ಕೆ ನಿರ್ಭೀತರು. ಹೀಗೆ ಏಕೆ? ಅವರೂ ಮನುಷ್ಯರಲ್ಲವೇ? ಅವರಿಗೆ ಮಾತ್ರ ಆ ಭಯವಿಲ್ಲ, ನಮಗೆ ಮಾತ್ರ—ಸಾಮಾನ್ಯರಿಗೆ—ಏಕೆ ಇದೆ?

ಈ ಪ್ರಶ್ನೆ ಜಟಿಲ. ಆದರಂತೆಯೆ ಇದು ಎಂದಿನಿಂದಲೂ ನಡೆದುಕೊಂಡು ಬಂದ ಪ್ರಶ್ನೆ. ಜಗತ್ತಿನ ಆದಿಯಿಂದಲೂ ಈ ಪ್ರಶ್ನೆ ಕೇಳಲ್ಪಡುತ್ತಿದೆ; ಇದಕ್ಕೆ ಸಮಾಧಾನವೂ ಹುಡುಕಲ್ಪಟ್ಟಿದೆ. ಇನ್ನೂ ಲೋಕ ಇದನ್ನು ಹುಡುಕುವುದರಲ್ಲಿದೆ. ಹುಟ್ಟಿದ ಮನುಷ್ಯನು ಸಾವಿನ ಕಡೆಗೆ ನಡೆಯುತ್ತಾನೆ, ' One day he must die ' ಈ ತತ್ತ್ವದಲ್ಲಿ ಯಾರದೂ ವಿರೋಧವಿಲ್ಲ. ಕಳೆದ ಮೂರು ಶತಮಾನಗಳಲ್ಲಿ ಬೆಳೆದ ಆಂಗ್ಲ ಸಾಹಿತ್ಯವನ್ನು ತೆಗೆದುಕೊಂಡರೂ ' ಮರಣ'ದ ರೂಪರೇಷೆಗಳನ್ನು ಅದರಲ್ಲಿ ಕಾಣಬಹುದು. ಈ ಅವಧಿಯಲ್ಲಿ ಬಾಳಿದ ಎಲ್ಲ ಕವಿಗಳ ಮೇಲೆಯೂ ಇದರ ಪ್ರಭಾವ ಬಿದ್ದಿದೆ. ಅವರ ಪದ್ಯಾವ್ಯದಲ್ಲಿ ಇದಕ್ಕಾಗಿ ಗೋಳಾಡಿದನ್ನು, ಮುತ್ತಿನ್ನಾವುದಕ್ಕೂ ಅವರು ಗೋಳಾಡಿಲ್ಲ. ಶೆಲ್ಲಿಯ Lament ತೆಗೆದುಕೊಂಡರೆ, ಎಂಥವರನ್ನೂ ಕರಗಿಸಬೇಕು. ಹುಟ್ಟಿದ ಮಗುವು ಬೆಳೆಯುವುದೆಂದರೆ ಅದರ ಅರ್ಥವೇನು? ಯಾರಾದರೂ ಇದರ ಬಗ್ಗೆ ಯೋಚಿಸಿದ್ದಾರೆಯೇ? ಮಗುವು ಬೆಳೆದಂತೆಲ್ಲಾ ಹಿಗ್ಗುವವರು ಈ ವಿಷಯ ತಿಳಿದುಕೊಂಡಿದ್ದಾರೆಂದು ನಂಬಬಹುದೇ? ನಿಜವಾದ ತಿಳಿವಳಿಕೆಯು ಒಂದೊಂದು ಸಲ ವ್ಯಾವಹಾರಿಕ ಪ್ರವಾಹದಲ್ಲಿ ಹರಿದು ಹೋಗುತ್ತದೆ. ಹುಟ್ಟಿದ ಮಗುವು ಬೆಳೆಯುವುದೆಂದರೆ ' ಅದು ಮರಣವನ್ನು ಸಮೀಪಿಸುತ್ತಿದೆ ' ಎಂದು ಅರ್ಥ. ಹೀಗೆಂದರೆ ಸಾಮಾನ್ಯ ಮನುಷ್ಯ ಆಶ್ಚರ್ಯ

ಪಡಬಹುದು. ಬೇರೆ ರೀತಿಯಲ್ಲಿ ಹೇಳಬೇಕಾದರೆ ಜೀವನಕ್ಕೆ ಹುಟ್ಟು ಒಂದು ಕೊನೆಯಾದರೆ ಮರಣ ಮತ್ತೊಂದು ಕೊನೆ. ಮೊದಲ ಕೊನೆಯಿಂದ ಎರಡನೆಯ ಕೊನೆ ಸಮೀಪವಾಗುವುದಿಲ್ಲವೇ? ಗಣಿತಜ್ಞರ ವಿಚಾರದಂತೆ ಜೀವನದಲ್ಲಿ 'ಪ್ಲಸ್' ಗಿಂತ 'ಮೈನಸ್' ಮಾತ್ರ ಹೆಚ್ಚಾಗಿ ಅನುಭವಕ್ಕೆ ಬರುತ್ತದೆ. ಎಂದ ಮೇಲೆ ನಾವು ಸಂತೋಷಪಡುವುದು ಸರಿಯೇ? ಮನುಷ್ಯನು ಹುಟ್ಟಿದನಂತರ ಆಯುಷ್ಯವು ನಷ್ಟವಾಗುತ್ತಲೆ ಇದ್ದರೆ ಅವನು ಸುಖಪಡುವುದಾದರೂ ಏಕೆ? 'We are running to words the Death' ಎಂದು ಕೇಳಿದರೆ ಎಲ್ಲರ ಮೈಯೂ ಜುಮ್ಮೆನ್ನುತ್ತದೆ. ಲಾಭವಿದ್ದರೆ ಶಾಂತಿಯು ಬಾಳು. ಅದಕ್ಕಾಗಿ ನಮ್ಮ ಬೆಳವಣಿಗೆಯಲ್ಲಿ ನಾವು ಅಭಿಮಾನ ಪಟ್ಟುಕೊಳ್ಳುವಂತಿಲ್ಲ. ಆದರೆ ಅಭಿಮಾನವಾರಿಗೆ ಇಲ್ಲ? ಸಮಸ್ತ ಸಂಸಾರವೂ ಅದರಲ್ಲಿ ನಿಂತಿದೆ. ತಿಳಿದೂ ತಿಳಿಯದೆಯೂ ಅದನ್ನು ಬಿಡಲು ಇಷ್ಟ ಪಡುವುದಿಲ್ಲ.

ಈ ರೀತಿಯ ಕ್ರಮವನ್ನು ನೋಡುವಾಗ, ಜೀವನವೂ ಕೆಲವು ನಿಯಮಗಳಿಂದ ಕೂಡಿದೆ. 'ಹುಟ್ಟಿದವನು.....ಕೊನೆಗೆ ಸಾಯುತ್ತಾನೆ; ಸತ್ತವನು....ಪುನಃ ಹುಟ್ಟುತ್ತಾನೆ!' ಏಕೆ ಸಾವು? ಹುಟ್ಟು ಒಂದೇ ಇದ್ದರೆ ಸಾಲದೇ? ಈ ಸಾವೇಕೆ? ಸಾವು ಒಂದೇ ಇದ್ದರೆ ಸಂಸಾರವಿಲ್ಲ. ಹುಟ್ಟು ಒಂದೇ ಇದ್ದರೆ ಸಂಸಾರಕ್ಕೆ ಆದರ್ಶವಿಲ್ಲ, ನಿಯಮವಿಲ್ಲ. ಇವೆರಡೂ ಸೇರಿ ಸಂಸಾರವಾಗುತ್ತದೆ. ಹುಟ್ಟಿದವನು ಮರಣಕ್ಕೆ ಅಂಜುತ್ತಾನೆ. ಮರಣವಿಲ್ಲದಿದ್ದರೆ ಅವನ ಹುಟ್ಟುವಿಕೆಗೆ ಅರ್ಥವಿಲ್ಲ. "ಸಸ್ಯಾಃ ಇವ ಮರ್ತ್ಯಾಃ ಜಾಯಂತೇ, ಸಸ್ಯಾಃ ಇವ ಮರ್ತ್ಯಾಃ ಪಚ್ಯಂತೇ." ಇದೊಂದು ಚಕ್ರ. ಇದನ್ನು ನೋಡುವಾಗ ಒಂದು ವಿಷಯ ನೆನಪಾಗುತ್ತದೆ: ಹುಟ್ಟಿದವನಿಗೆ ಏನೋ ಕರ್ತವ್ಯವಿದೆ. ಆ ಕರ್ತವ್ಯಕ್ಕೆ ಏನೋ ಉದ್ದೇಶವಿದೆ. ಆ ಉದ್ದೇಶ ಸಾಧಿಸಲು ಕರ್ತವ್ಯವನ್ನು ಸಾಗಿಸುತ್ತಾನೆ. ಕರ್ತವ್ಯವನ್ನು ಪಾಲಿಸಲು ಪುನಃ ಪುನಃ ಹುಟ್ಟುತ್ತಾನೆ. ಪ್ರತಿಯೊಬ್ಬ ಹುಟ್ಟಿದವನಿಗೂ ಉದ್ದೇಶವಿದೆ, ಅದನ್ನು ಹೊಂದಲು ತನ್ನ ಜೀವನದಲ್ಲಿ ಅವನು ಕರ್ತವ್ಯ ಪಾಲಿಸಬೇಕಾಗಿದೆ. ಈ ಬಗೆಯ ನಿರ್ಣಯಕ್ಕೆ ಬರುವಾಗ, ಇನ್ನೊಂದು ಶಂಕೆಯನ್ನೂ ಬಿಡಿಸಬೇಕಾಗುತ್ತದೆ. ಅದೇನು ಉದ್ದೇಶ? ಉದ್ದೇಶವೆಂದರೆ ಗುರಿ ಅಥವಾ ಲಕ್ಷ್ಯ (Aims) ಎಂದು ಸಾಮಾನ್ಯವಾಗಿ ತಿಳಿದುಕೊಳ್ಳಬಹುದು. ಹಾಗಿದ್ದಲ್ಲಿ ಮನುಷ್ಯನ ಜೀವನದ ಗುರಿಯೇನು?

'Life is short but aims are several' ಎಂದು ಕೆಲವರ ಅಭಿಪ್ರಾಯ. ಅವರ ಅಭಿಪ್ರಾಯಕ್ಕೆ ಏನೇ ಹೇಳುವಾಗಿರಲಿ, ಹೆಚ್ಚು ಜನರ ಅಭಿಪ್ರಾಯದಲ್ಲಿ ಗುರಿಗಳು ಎಷ್ಟಿದ್ದರೂ ಪ್ರಧಾನ ಗುರಿಯೊಂದೇ! ಅದನ್ನು ಕಂಡು ಹಿಡಿಯುವುದು ಸಾಮಾನ್ಯವಲ್ಲ; ಆದರೂ ಕಂಡರಿ ಹಿಡಿಯಲೇಬೇಕು. ಜೀವನದಲ್ಲಿ ಒಂದೇ ಗುರಿಯೆನ್ನುವುದರಲ್ಲಿ ಸಂದೇಹವೇ ಇಲ್ಲ, ಅದನ್ನೇ ಸುತ್ತಿಕೊಂಡು ಅನೇಕ ಚಿಕ್ಕ ಪುಟ್ಟ ಗುರಿಗಳು ನಿಂತಿವೆ. ನಾವು ಅವಸರದಲ್ಲಿ ಮೂಲ ಗುರಿಯನ್ನು ಗಣಿಸದೆ 'ಗುರಿಗಳು ಅನೇಕ' ಎನ್ನುತ್ತೇವೆ.

'ಹಾಗಾದರೆ ಮುಖ್ಯ ಗುರಿಯೇನು?' ಈ ಪ್ರಶ್ನೆಗೆ ಸಮಾಧಾನ ಹೇಳುವುದಕ್ಕಿಂತ ಮುಂಚೆ ಇನ್ನೊಂದು ವಿಷಯ ತಿಳಿದುಕೊಳ್ಳಬೇಕು. 'ಸತ್ತ ನಂತರ ನಾನು ಇರುತ್ತೇನೋ?--ಇಲ್ಲವೋ? ಮರಣದ ತರುವಾಯ ನಾನು ಇಲ್ಲವಾದರೆ ನನ್ನ ಜೀವನದಲ್ಲಿ ಉದ್ದೇಶಪ್ರಾಪ್ತಿಗಾಗಿ ಹೋರಾಡಬೇಕಾಗಿಲ್ಲ. ಒಳ್ಳೆಯದು ಕೆಟ್ಟದು ಎಂಬುದನ್ನೆಲ್ಲಾ ತಿಳಿದುಕೊಂಡು ನಡೆಯಬೇಕಾಗಿಲ್ಲ. ಇನ್ನು ಇರುತ್ತೇನೆ—ಎಂದರೆ ಹೇಗೆ? ಎಲ್ಲಿ?—ಈ ಪ್ರಶ್ನೆಗೆ ಸಮಾಧಾನ ಬೇಕು.

ನಮ್ಮ ಶಾಸ್ತ್ರದ ಪ್ರಕಾರ ಜೀವನಿಗೆ ಶರೀರಗಳು ಮೂರು—ಸ್ಥೂಲ, ಸೂಕ್ಷ್ಮ ಮತ್ತು ಕಾರಣ. ಮರಣವೆಂದರೆ ಸ್ಥೂಲ ಶರೀರದ ನಾಶನೆಂದು ಅರ್ಥ. ಇನ್ನೂ ಎರಡು ಶರೀರಗಳಿವೆ. ಮರಣದ ನಂತರ ಸೂಕ್ಷ್ಮಶರೀರದಲ್ಲಿ ಜೀವನು ಇರುತ್ತಾನೆ. ನಮ್ಮ ಸ್ಮೃತಿಗಳೆಲ್ಲಾ ಆಗಲೂ ಇರುತ್ತವೆ. ಆದರೆ ಇರುವಿಕೆ ಮತ್ತು ಅನುಭವದಲ್ಲಿ ಮಾತ್ರ ಭೇದ. ಸ್ಥೂಲ ಶರೀರದಲ್ಲಿ ಅನುಭವ ಬಹು ತೀಪ್ರವಾಗಿರುತ್ತದೆ. ಆನಂದವೆಂದರೆ ಅತ್ಯಾ-

ನಂದ (ಪರಮಾನಂದ); ದುಃಖವೆಂದರೆ ಅತಿ ದುಃಖ (ಪರಮ ದುಃಖ). ಇವು ನಮ್ಮ ಸ್ಥೂಲಶರೀರದ ಕಾಲದ ಕೆಲಸಗಳನ್ನು ಅವಲಂಬಿಸಿರುತ್ತವೆ. ಸ್ಥೂಲ ಶರೀರದ ನಂತರ ಸೂಕ್ಷ್ಮ ಶರೀರದಲ್ಲಿರುವುದು ನಮಗೆ ದೃಢವಾಗಿ ಗೊತ್ತಿದ್ದರೂ, ಆ ಅವಸ್ಥೆಯಲ್ಲಿ ಯಾವ ಸ್ಥಳದಲ್ಲಿ ಇರುತ್ತೇವೆ, ಎನ್ನುವುದು ದೃಢವಾಗಿ ತಿಳಿದು ಬಂದಿಲ್ಲ. ಭೂಮಿಯ ಮೇಲೆಯೆ ಅದೃಶ್ಯಾವಸ್ಥೆಯಲ್ಲಿ ಇರುತ್ತೇವೆಯೇ ಅಥವಾ ಪರಮಾಣುಗಳ ರೂಪದಲ್ಲಿ ಆಕಾಶದಲ್ಲಿ ನೆಲಸುತ್ತೇವೆಯೇ? ಮೊದಲಿನ ಸ್ಥಳವನ್ನು ನಮ್ಮ ಶಾಸ್ತ್ರಕಾರರೂ ಮತ್ತು ಆಧುನಿಕರೂ--ಯಾರೂ ಒಪ್ಪುವುದಿಲ್ಲ. ಎರಡನೆಯ ಸ್ಥಳವೇ ಹೆಚ್ಚು ಸಂಭವವಿದ್ದು, ಅದರಲ್ಲಿಯೇ ಎಷ್ಟೋ ಮತಾಭಿಪ್ರಾಯಗಳಿವೆ.

ಅಂತೂ ಎನೇ ಇರಲಿ, ಮನುಷ್ಯನು ಮರಣದ ನಂತರವೂ ಕೆಲವು ಕಾಲ ಬೇರೆ ಲೋಕದಲ್ಲಿ ಇರುತ್ತಾನೆ. ಅವನಿಗೆ ಎಲ್ಲವೂ ಜ್ಞಾಪಕವಿರುತ್ತದೆ.* ತನ್ನ ಜನರ ಬಗ್ಗೆ ಚಿಂತಿಸುತ್ತಾನೆ. ಅದರೂ ತನ್ನ ಜನರ ಬಗ್ಗೆ ಚಿಂತಿಸುತ್ತಾನೆ. ಅದರೂ ಸ್ಥೂಲ ಶರೀರದ ನಾಶದಿಂದ ನಿಸ್ಸಾಹಯಕನಾಗಿರುತ್ತಾನೆ. ಕಾರ್ಯಗಳ ವೇದನೆಗಳನ್ನು ಅನುಭವಿಸುತ್ತಾನೆ. ಪುನಃ ಸ್ಥೂಲ ಶರೀರದಲ್ಲಿ ಪ್ರವೇಶವಾಗುವ ವರೆಗೂ ಈ ಕ್ರಮವಿರುತ್ತದೆ. ಈ ಎರಡರ ಅವಧಿಯಲ್ಲಿ ಕಾರಣಶರೀರವೊಂದು ಬಂದು ಹೋಗುತ್ತದೆ. ಅನಂತರ ಸ್ಥೂಲ ಶರೀರದ ಸಂಸರ್ಗದಿಂದ ಎಲ್ಲವನ್ನೂ ಮರೆಯುತ್ತಾನೆ. ಆದರೂ ಸಂಸ್ಕಾರವು ಅವನ ಹಿಂದೆ ಇರುತ್ತದೆ. ಮನುಷ್ಯನು ಪ್ರಯತ್ನ ಪಟ್ಟರ ಹಿಂದಿನದನ್ನೂ ಜ್ಞಾಪಿಸಿಕೊಳ್ಳಬಹುದು.

ಅಂತೂ ಮನುಷ್ಯನಿಗೆ 'ಹಿಂದೆ' ಇದೆ, 'ಹಿಂದೆ' ಇದ್ದರೆ 'ಮುಂದೆ' ಇರಲೇಬೇಕು. ಎಂದ ಮೇಲೆ ಜೀವನು ಸುತ್ತುತ್ತಲೇ ಇರುತ್ತಾನೆ. 'Death means the transformation from one body to another.' ಜೀವನು ನಾಶವಿಲ್ಲದವನು. ಮರಣದ ನಂತರವೂ ಅವನು ಬೇರೆ ಲೋಕದಲ್ಲಿರುತ್ತಾನೆಂದು ನಮ್ಮ ಶಾಸ್ತ್ರಗಳು ಹೇಳುತ್ತವೆ. ಆಧುನಿಕ ವಿಜ್ಞಾನಿಗಳೂ ಕೆಲವರು ಇದನ್ನು ಒಪ್ಪಿಕೊಂಡಿದ್ದಾರೆ. 'ಬೇರೆ ಲೋಕದಲ್ಲಿ ಜೀವನು ಇರುವುದು ಖಂಡಿತ, ಅವನನ್ನು ಹಿಡಿದು ಪುನಃ ತರಬಹುದು, ಅದರೆ ಸಾಧ್ಯವಾಗಿಲ್ಲ. ಹಾಗೆ ಸಾಧ್ಯವಾದರೆ ಅಕಾಲಮೃತ್ಯುವನ್ನು ತಪ್ಪಿಸಬಹುದು.' ಮುಂತಾಗಿ ನಾವು ಕೇಳಿದ್ದೇವೆ. ಒಬ್ಬ ವಿಜ್ಞಾನಿಯು ಕೆಲವು ನಿಮಿಷಗಳಿಗಾಗಿ ಸತ್ತವನನ್ನೂ ಬದುಕಿಸಿದ್ದು ಎಲ್ಲರಿಗೂ ಗೊತ್ತಿದೆ. ಈ ವಿಷಯದಲ್ಲಿ ನಮ್ಮ ಮಹರ್ಷಿಗಳೂ ಆಧುನಿಕ ವಿಜ್ಞಾನಿಗಳೂ ಒಂದೆ ಬಗೆಯ ಅಭಿಪ್ರಾಯ ಪಟ್ಟಿದ್ದಾರೆ.

ಹಾಗಾದರೆ 'ಸತ್ತನಂತರ ಏನಿದೆ?' ಎನ್ನುವುದು ಎಷ್ಟು ಭ್ರಮೆ. 'ಸತ್ತನಂತರವೂ ಇದೆ, ನೀನು ಸೂಕ್ಷ್ಮ ಶರೀರದಲ್ಲಿದ್ದು ನಿನ್ನ ಕೆಟ್ಟ ಕಾರ್ಯಗಳಿಗಾಗಿ ಪಶ್ಚಾತ್ತಾಪ ಪಡುವಿ,' ಎಂದರೆ ಎಷ್ಟು ಜನ ಈಗಿನವರು ನಂಬಬಹುದು?

ಕೊನೆಗೆ ಮನುಷ್ಯನ ಜೀವನದಲ್ಲಿ ಗುರಿಯು ಸ್ವತಃ ಸಿದ್ಧವಾಗುತ್ತದೆ. ಗುರಿಯಿಲ್ಲದ ಜೀವನ ಕಾಡು. ದೇವರಿಲ್ಲದ ಗುಡಿ. ಆ ಗುರಿ ಉನ್ನತಸ್ಥಿತಿಯನ್ನು ಹೊಂದುವುದೇ. 'Highest position' ಅಥವಾ ಸಂಪೂರ್ಣತೆಯನ್ನು (Perfect) ಹೊಂದುವುದು. ಇದನ್ನು ಪಡೆಯಲು ಮನುಷ್ಯನು ನಿಜ ತತ್ತ್ವವನ್ನು ತಿಳಿದು ಕೆಲವು ನಿಯಮಗಳನ್ನು ಪಾಲಿಸಬೇಕಾಗುತ್ತದೆ.

ಮನುಷ್ಯನು ಹುಟ್ಟಿದ ನಂತರ ತಿಳಿದುಕೊಳ್ಳಬೇಕಾದದ್ದು ಮೂರು ಪದಾರ್ಥಗಳನ್ನು ಕುರಿತು. ಈ ಮೂರು ಪದಾರ್ಥಗಳನ್ನು ಸರಿಯಾಗಿ ತಿಳಿದುಕೊಂಡು ನಡೆದರೆ, ಆ ಮೇಲಿನದು ಏನೂ ಇಲ್ಲ. 'ನಾನು', 'ಜಗತ್ತು', 'ದೇವರು' ಎನ್ನುವುದೇ ಈ ಮೂರು ಪದಾರ್ಥಗಳು. ಇವು ಪರಸ್ಪರ ಸಂಬಂಧವಿಟ್ಟಿವೆ. ಸಮತ್ರಿಕೋಣವನ್ನು ಬರೆದು, ಮೂರು ಕೋಣಗಳಲ್ಲಿ ಕ್ರಮಶಃ ಈ ಮೂರು ಪದಾರ್ಥಗಳನ್ನು ಇರಿಸಿ ನೋಡಿದರೆ, ಈ ಸಂಬಂಧ ತಿಳಿಯುವುದು. ಜೀವನನ್ನು (ನಾನು) ತೆಗೆದುಕೊಂಡರೆ ಈ ಕಡೆ ಸಂಸಾರಕ್ಕೂ ಸಂಬಂಧಿಸಿದ್ದಾನೆ; ಆ ಕಡೆಗೆ ದೇವರಿಗೂ ಸಂಬಂಧಿಸಿದ್ದಾನೆ. ಈ ಎರಡನ್ನೂ ಮರೆಯುವಂತಿಲ್ಲ. ಸಂಸಾರವನ್ನು ತೆಗೆದುಕೊಂಡರೆ ಈಕಡೆ ಜೀವನಿಗೂ ಸಂಬಂಧಿಸಿದೆ, ಆಕಡೆ ದೇವರಿಗೂ ಸಂಬಂಧಿಸಿದೆ— ಎರಡನ್ನೂ ಬಿಡುವಂತಿಲ್ಲ. ಹಾಗೆಯೆ ದೇವರನ್ನು ತೆಗೆದುಕೊಂಡರೆ ಈಕಡೆ ಜೀವನಿಗೂ ಸಂಬಂಧಿಸಿದ್ದಾನೆ, ಆಕಡೆ ಸಂಸಾರಕ್ಕೂ ಸಂಬಂಧಿಸಿದ್ದಾನೆ— ಎರಡನ್ನೂ ಬಿಡುವಂತಿಲ್ಲ.

---

* ಈ ವಿಧಾನವನ್ನು ನಮ್ಮ ಪರಂಪರಾಗತ ಶಾಸ್ತ್ರಗಳು ಬೇರೆರುವ ಹೊರತು, ಪ್ರತ್ಯಕ್ಷ ಪ್ರಮಾಣ ಬಯಸುವ ಭೌತಿಕ ವಿಜ್ಞಾನ ಪೂರ್ಣವಾಗಿ ಒಪ್ಪಿಲ್ಲ.

—ಸಂ. ಜ.

ಮನೋಹರ ಗ್ರಂಥಮಾಲೆ

★

ಇದೇ ಆಗಸ್ಟ್‌ದಿಂದ ಪ್ರಾರಂಭವಾಗುವ ಹೊಸ ವರ್ಷದಿಂದ ಗ್ರಂಥಮಾಯ ಚಂದಾಹಣವನ್ನು ೫-೧೦-೦ ಯಿಂದ ೬-೪-೦ ಗೆ ಹೆಚ್ಚಿಸಲಾಗಿದೆ.

ಗ್ರಂಥಮಾಲೆಗೆ ಚಂದಾದಾರರಾಗಲಿಚ್ಛಿಸುವವರು ಇತ್ತ ಗಮನಿಸಬೇಕಾಗಿ ವಿನಂತಿ!

ಬಾಳಿಕೆಯಲ್ಲಿ ನಿಯಮಗಳಿಲ್ಲವೆಂದು ಹೇಳಬಹುದೇ? ದೇವರಿಗೂ ನಿಯಮಗಳಿವೆ. ಭೂಮಿಯು ಸುತ್ತುತ್ತಿದೆ. ಅದರ ಮಧ್ಯೆ ಸೂರ್ಯನು ಸುತ್ತುತ್ತಿದ್ದಾನೆ. ಬೆಂಕಿಯುಂಡೆಯನ್ನು ಮಣ್ಣುಂಡೆಯು ಸುತ್ತುತ್ತಿದೆ. ಇದು ನಿಯಮವಲ್ಲವೆ? ಏಕೆ ಸುತ್ತಬೇಕು ಹಾಗೆ?

ಮನುಷ್ಯನು ಶುದ್ಧ ಜೀವನ ನಡೆಯಿಸಬೇಕಾದ ನಿರ್ಬಂಧ ಬರುತ್ತದೆ. ಸಂಸಾರದಲ್ಲಿ 'ನಾನು ಮಾತ್ರ ಕೇವಲ ದೊಡ್ಡವನಲ್ಲ; ನನಗಿಂತಲೂ ದೊಡ್ಡವನು ಸರ್ವಾಂತರ್ಯಾಮಿ ಈಶ್ವರನಿದ್ದಾನೆ; ಅವನು ನಿಯಮಿಸುತ್ತಾನೆ, ನಾವು ಜೀವನ ನಡೆಯಿಸುತ್ತೇವೆ.' ಎನ್ನುವ ವಿಚಾರವು ಬಾಳಿಕೆಯನ್ನು ಶುದ್ಧವಾಗಿ ನಡೆಯಿಸಲು ಕಾರಣವಾಗುತ್ತದೆ. ಜಗತ್ತಿನ ಸಾಧನಗಳೆಲ್ಲಾ ಅದಕ್ಕಾಗಿಯೇ. ನಾವು ಓದುವ ಓದಿನಿಂದ ಶುದ್ಧ ಬಾಳಿಕೆಯನ್ನು ನಡೆಯಿಸಲು ಜ್ಞಾನವು ಸಿಕ್ಕಲಿಲ್ಲವಾದರೆ, ಆ ರೀತಿಯ ಓದನ್ನು ನಾವು ಅವಶ್ಯವಾಗಿ ಬದಲಿಸಬೇಕು. ನಮ್ಮ ಓದು ಜ್ಞಾನಕ್ಕಾಗಿ ಇದ್ದು, ಶುದ್ಧ ಜ್ಞಾನವು ಬಾಳಿಕೆಯ ಗುರಿಯನ್ನು ತೋರಿಸುತ್ತದೆ. ಪುಸ್ತಕ ಓದುವುದು ಜ್ಞಾನವಲ್ಲ, ಆದರೆ ತತ್ತ್ವತಃ ತಿಳಿದದ್ದನ್ನು ಆಚರಿಸುವುದು. ಕೆಲವು ಮನುಷ್ಯರು ಉದ್ದೇಶವಿಲ್ಲದೆ ಜೀವನ ಸಾಗಿಸುವುದನ್ನು ಕಾಣುತ್ತೇವೆ. ಊಟ ನಿದ್ರೆ— ಊಟ ನಿದ್ರೆ! ಇಲ್ಲವಾದರೆ ಕೆಲವು ಕ್ಷುದ್ರ ಕಾರ್ಯಗಳು. ಜೀವನವೆಲ್ಲಾ ಇಷ್ಟರಲ್ಲೇ ಕಳೆಯುತ್ತದೆ. ಇಂಥವರಿಗೆ ಮರಣವೆಂದರೆ ಬಹು ಭಯ. ಉದ್ದೇಶದಿಂದ ಬಾಳಿಕೆ ನಡೆಯಿಸುವವನು ಮರಣಕ್ಕೆ ಹೆದರುವುದಿಲ್ಲ.

ಮನುಷ್ಯನಿಗೆ ಮೂರು ಶಕ್ತಿಗಳಿವೆ—ಜ್ಞಾನ, ಕ್ರಿಯಾ ಮತ್ತು ಇಚ್ಛಾಶಕ್ತಿಗಳು. ಮನುಷ್ಯನು ಅರಿತುಕೊಳ್ಳುತ್ತಾನೆ, ತನಗೆ ಬೇಕಾದುದನ್ನು ತಿಳಿದುಕೊಳ್ಳಲು ಪ್ರಯತ್ನಿಸುತ್ತಾನೆ. ಇದು ರೂಪವುಳ್ಳದ್ದು ಇದು ರೂಪವಿಲ್ಲದ್ದು ಎನ್ನುವುದನ್ನು ತಿಳಿದು ಕಾಮಕ್ರೋಧಗಳನ್ನು ಅನುಭವಿಸುತ್ತಾನೆ—ಈ ಶಕ್ತಿಗಳು ಎಲ್ಲರಿಗೂ ಸಾಮಾನ್ಯ. ಮನುಷ್ಯನು ತನ್ನ ಜೀವನದಲ್ಲಿ ಜ್ಞಾನಶಕ್ತಿಯನ್ನು ಹೆಚ್ಚಿಸಬೇಕಾದುದೂ ಎಲ್ಲಕ್ಕ ಎರಡು ಶಕ್ತಿಗಳನ್ನು ತನ್ನ ಅಂಕಿತದಲ್ಲಿ ಇಟ್ಟುಕೊಳ್ಳುವುದೂ ಮುಖ್ಯ ಕರ್ತವ್ಯ. ಈ ಶಕ್ತಿಗಳ ಸಂಪಾದನೆ, ಏಕೀಕರಣ ಮತ್ತು ತಾರತಮ್ಯಗಳ ಭೇದದಿಂದಲೇ ಮನುಷ್ಯರಲ್ಲಿ ಉಚ್ಚ ನೀಚ ಭೇದವನ್ನು ಕಲ್ಪಿಸಬೇಕಾಗುತ್ತದೆ.

ಜೀವನದಲ್ಲಿ ಒಳ್ಳೆಯದನ್ನು ಏಕೆ ಮಾಡಬೇಕು, ಶುದ್ಧ ಜೀವನವನ್ನು ಏಕೆ ನಡೆಯಿಸಬೇಕು? ಈ ವಿಷಯದಲ್ಲಿ ಬಹು ಜನರ ಅನುಭವಗಳನ್ನು ಪರೀಕ್ಷಿಸಿದ ನಂತರ ನಾನು ಮಾಡಿಕೊಂಡ ನಿರ್ಧಾರವನ್ನು ಹೇಳುತ್ತೇನೆ:— ನನಗೊಬ್ಬ ಸ್ನೇಹಿತನಿದ್ದಾನೆ. ಅತನು ತುಂಬಾ ವಿನೋದಪ್ರಿಯನು. ದಿನವೂ ಸ್ನೇಹಿತರೊಡನೆ ನದಿಯಲ್ಲಿ ಈಸುವುದು ಅತನಿಗೆ ವಿನೋದ. ಒಂದು ದಿನ ಎಲ್ಲರೂ ತೀರಕ್ಕೆ ಬಂದರೂ, ಅತನು ಮಧ್ಯ ನದಿಯಲ್ಲಿ ಈಸುತ್ತಲೇ ಇದ್ದ. ಅತನ್ಕೈಕಾಲುಗಳು ಸೋತು ಹೋದುವು. ಅತನ ಉಸಿರು ಕಟ್ಟಿತು, ನಿಸ್ಸಹಾಯಕನಾದ. ಸಹಾಯಕ್ಕಾಗಿ ತೀರದಲ್ಲಿದ್ದವರಿಗೆ ಕೈಮಾಡಿದ. ಸ್ನೇಹಿತರು ತಮಾಷೆಯೆಂದು ನಕ್ಕರು. ಅತನು ತೀರ ಮರಣಾವಸ್ಥೆಗೆ ಬಂದಾಗ ಅತನನ್ನು ಹೊರಗೆ ತರಬೇಕಾಯಿತು. ಬಹು ಉಪಚಾರವಾದ ನಂತರ ಅತನಿಗೆ ಎಚ್ಚರಿಕೆ ಬಂದಿತು, ಸ್ವಲ್ಪ ಸ್ವಸ್ಥವಾದ ನಂತರ ಅತನು ಹೇಳಿದ ಮಾತುಗಳಿವು:

"ಕೊನೆಯ ಅವಸ್ಥೆಯಲ್ಲಿ ನಾನು ಹೌಹಾರಿದೆ. 'ಧಿಗಿಲ್' ಎಂದು ನನ್ನ ಕಣ್ಣು ಮುಂದೆ ಪ್ರಕಾಶವೊಂದು ದಿವ್ಯವಾಗಿ ಕಾಣಿಸಿತು. ನನ್ನ ಬಾಲ್ಯದಿಂದ ಆರಂಭಿಸಿ ಕೊನೆಯ ವರೆಗೂ ನಾನು ಮಾಡಿದ ಕೃತಿಗಳೆಲ್ಲಾ ಸರಸರನೇ ಕಣ್ಣ ಮುಂದೆ ಬಂದುವು ನನಗೆ ಎಂದೂ ನೆನಪಿರದ ವಿಷಯಗಳೂ ಆಗ ಸ್ಪಷ್ಟವಾಗಿ ತೋರಿದುವು: ಆ ಒಂದೆರಡು ನಿಮಿಷಗಳಲ್ಲಿ ನನ್ನ ಬಾಳಿಕೆಯ ಸಂಪೂರ್ಣ ಚಿತ್ರವನ್ನು 'ಸಿನೆಮಾ ರೀಲುಗಳಂತೆ' ನೋಡಿದೆ. ಹೃದಯವು ನಡುಗಿತು."

ಈ ಸ್ನೇಹಿತನು ಇನ್ನೂ ಜೀವಿಸಿದ್ದಾನೆ. ಈತನ ಈಗಿನ ಸಂನ್ಯಾಸ ಜೀವನ ನೋಡಿದರೆ, ಎಂಥವರಿಗೂ ಶುದ್ಧಿ ಹುಟ್ಟಬೇಕು.

ಎಂದರೆ ಒಂದು ಮಾತು ಮಾತ್ರ ನಿಜ; ಮನುಷ್ಯನು ಸಾಯುವ ಮುಂಚಿನ ನಿಮಿಷದಲ್ಲಿ ತನ್ನ ಬಾಳಿಕೆಯ ಚಿತ್ರ ಪಟವನ್ನು ಕಾಣುತ್ತಾನೆ. ಅವನ ಬಾಳಿಕೆ ಶುದ್ಧವಾಗಿದ್ದರೆ ಅವನಿಗೆ ಭಯವೇ ಇಲ್ಲ. ಇಲ್ಲವಾದರೆ?—ಅವನ ವೇದನೆಯಾಂದಲೂ ವರ್ಣಿಸಲು ಸಾಧ್ಯವಿಲ್ಲ.

ಈ ಸಂದರ್ಭದಲ್ಲಿ ಒಂದು ವಿಷಯ ನೆನಪಿಗೆ ಬರುತ್ತದೆ. ಮರಣಕ್ಕೆ ಮುಂಚೆ ಆಗುವ ವೇದನೆ ಎಷ್ಟು ಭಯಂಕರವೆಂದು ಇದರಿಂದ ನಾನು ತಿಳಿದಷ್ಟು ಬೇರೆ ಯಾವುದರಿಂದಲೂ ತಿಳಿದಿಲ್ಲ. ಶಾಂತಿನಿಕೇತನದಲ್ಲಿ ವಾಸಿಸುತ್ತಿದ್ದವರಿಗೆಲ್ಲಾ ಗೊತ್ತಿದ್ದಿತು: ಗುರುದೇವರ (ರವೀಂದ್ರರ) ಜೀವನವು ಎಷ್ಟು ಶುದ್ಧವಾಗಿದ್ದಿತೆಂದು. ಅವರು ತಮ್ಮ ಕುಟಿಯಲ್ಲಿ ಕೊನೆಯ ಜೀವನವನ್ನು ಮಹರ್ಷಿಯಂತೆ ಪೂರ್ತಿಗೊಳಿಸಿದ್ದರು. ಅವರ ಶಿಷ್ಯರೆಲ್ಲ ಅವರನ್ನು ದೇವರಂತೆ ಪೂಜಿಸುತ್ತಿದ್ದರು. ಆದರೂ ರವೀಂದ್ರರು ಮರಣಾವಸ್ಥೆಯಲ್ಲಿ ಸಾಕಷ್ಟು ವೇದನೆಯನ್ನನುಭವಿಸಿದರು. ಕೆಳಗಿನ ಮಾತುಗಳು ಆ ಸಮಯದ ಬರೆದಿಟ್ಟು ಆನಂತರ ಮುದ್ರಿತವಾದ ದಿನಚರಿಯಿಂದ ಆರಿಸಲ್ಪಟ್ಟಿವೆ:

೨೩ ಜುಲೈ: ಅವರು (ರವೀಂದ್ರರು) ಹೇಳಿದರು: "ಕಾಲನ್ನು ಸೋಲಿಸಿಕೊತ್ತುವುದು ಕಷ್ಟವಾಗಿದೆ. ಹಾಗೇ ತಲೆ ಎತ್ತುವುದೂ ಸಾಧ್ಯವಿಲ್ಲ ಈ ದಿನಪರ್ಯಂತವೆಗೂ ಈ ತಲೆ ಯಾರ ಮುಂದೆಯೂ ಬಗ್ಗಿಲ್ಲ. ಇಂದು ವೈದ್ಯರು ಹೇಳುತ್ತಾರೆ: 'ನಿನ್ನ ತಲೆ ತಗ್ಗಿಸು, ನಿನ್ನ ಕಾಲು ಎತ್ತು.' ಹ! ಎಂತಹ ಪತನ!"

೩೧ ಜುಲೈ: ಕಳೆದ ರಾತ್ರಿ ಅವರು ಶಾಂತಿಯಲ್ಲಿದ್ದರು. ಇಂದು

ಸಾಯಂಕಾಲ ಅವರು ಒಂದೆರಡು ವಾಕ್ಯಗಳನ್ನು ಹೇಳಿದರು: "ಹ! ನೋವು!... ಭಯಂಕರ ನೋವು." ಅನಂತರ ಶಾಂತಿಯಿಂದ ಮಲಗಿದಂತೆ ಇದ್ದಿತು.

೧ ಆಗಸ್ಟ್: ಕಳೆದ ರಾತ್ರಿ ಅವರಿಗೆ ಸಮಾಧಾನವಿಲ್ಲ. ಬೆಳಗಿನಿಂದ ಒಂದು ಮಾತನ್ನೂ ಹೇಳಲಿಲ್ಲ. ಆಗಾಗ್ಗೆ "ಒಹೋ! ಒಹೊ!" ಎಂದು ವೇದನೆಯನ್ನು ಅನುಭವಿಸುವ ರೀತಿಯಲ್ಲಿ ಹೇಳುತ್ತಿದ್ದರು. ಯಾರಾದರೂ ಏನಾದರೂ ಕೇಳಿದರೆ, ಅವರು ತಲೆ ಮಾತ್ರ ಅಲ್ಲಾಡಿಸುತ್ತಿದ್ದರು. ಕಣ್ಣು ತೆರೆದಿದ್ದುವು, ಆದರೆ ಬಾಯಿ ಮುಚ್ಚಿದ್ದಿತು. ಅವರು ಎಡೆಬಿಡದೆ ನಿಟ್ಟಿಸುತ್ತಿದ್ದರು. ಅವರು ಏನನ್ನು ಕುರಿತು ಯೋಚಿಸುತ್ತಾರೆ ಎನ್ನುವುದು ಯಾರಿಗೂ ತಿಳಿಯಲಿಲ್ಲ ಮತ್ತು ಹೊಳೆಯಲಿಲ್ಲ. ಒಂದು ನಿಸ್ಸಹಾಯಕ ಮಗುವಿನಂತೆ ಅವರು ನಿಟ್ಟಿಸುತ್ತಿದ್ದರು.

೨ ಆಗಸ್ಟ್: ಆಗಾಗ ಅವರು ನರಳುತ್ತಾರೆ. ಅವರಿಗೆ ಊಟ ಮಾಡಿಸಲು ಯಾರಾದರೂ ಹೋದರೆ ಅವರು ಕೋಪದಿಂದ ಹೇಳುತ್ತಿದ್ದರು: "ದಯೆಮಾಡಿ ನನ್ನನ್ನು ಪೀಡಿಸಬೇಡಿ." ಈ ದಿನ ಅವರನ್ನು ಕೋಪದಲ್ಲಿ ನೋಡಿದೆವು. ವೈದ್ಯರು ಅವರನ್ನು ವಿಚಾರಿಸಿದರು: "ಯಾವ ನೋವು ನಿಮಗಾಗುತ್ತದೆ?" ಅವರು ಸ್ವಲ್ಪ ಕಷ್ಟ ಹೇಳಿದರು: "ಅದನ್ನು ವಿವರಿಸುವುದು ಸಾಧ್ಯವೇ ಇಲ್ಲವೆ?"

೪ ಆಗಸ್ಟ್: ಅವರು ಬಲಗೈಯನ್ನು ಮೇಲಕ್ಕೆತ್ತಿ ಬೆರಳುಗಳನ್ನು ಆಡಿಸುತ್ತ ನಡುಗುವ ಸ್ವರದಲ್ಲಿ ಹೇಳುತ್ತಾರೆ: "ಈಗೇಗಬಹುದು? ನಾನರಿಯೆ.— ಏನು ಸಂಭವಿಸಬಹುದು? ಒಹೋ! ಇಲಿ ನೋಡುವಾ ಏನು ನಡೆಯುತ್ತದೆ.."

೫ ಆಗಸ್ಟ್: ಕಳೆದ ರಾತ್ರಿಯಿಂದ ಅವರು ನಿಟ್ಟಿಸುತ್ತಿದ್ದಾರೆ. ಇದರಲ್ಲಿ ಏನನ್ನು ನಿಟ್ಟಿಸುತ್ತಾರೆಂಬುದು ಯಾರಿಗೂ ತಿಳಿಯದು. ಇದು ಭಯಂಕರವಾಗಿದೆ. ಬೆಳಿಗ್ಗೆ ಒಂದು ಸಲ ಬೋಧನ್. ಅವರಲ್ಲಿಯ ಸನಿಮಾಪಕ್ಕೆ ಹೋಗಿ ಕರೆದಾಗ, ಅವರು ಆಕಳಿಸಿ ಕಡೆಗೆ ನೋಡಿ ಅಸ್ಪಷ್ಟ ಸ್ವರದಲ್ಲಿ ಮಾತನಾಡಿದರು: "ಎಹ!". ಅದರಿಂದ ಮಾತ್ರ ಗೊತ್ತಾಯಿತು. ಅವರಿಗೆ ಎಲ್ಲವೂ ತಿಳಿಯುತ್ತದೆ; ಆದರೆ ಹೆಚ್ಚು ಮಾತನಾಡುವಂತಿಲ್ಲ.

೭ ಆಗಸ್ಟ್: ೧೨-೩೦ ಮಧ್ಯಾಹ್ನ ಗುರುದೇವರು ವೇದನೆಯಿಂದ ಮುಕ್ತರಾಗಿ ಕೊನೆಯ ಸಲ ಕಣ್ಣು ಮುಚ್ಚಿದರು.

ರವೀಂದ್ರರು ಮರಣಕ್ಕೆ ಎಂದೂ ಹೆದರಿದ್ದಿಲ್ಲ. ಒಬ್ಬ ಪ್ರಶಾಂತಿಯಂತೆ ಮರಣವನ್ನು ಸ್ವಾಗತಿಸಿದರು.

"ಓಂ ಪಿತಾನೋಸಿ ಪಿತಾನೋ | ಬೋಧಿ ನಮಸ್ತೇಸ್ತು
ಮಾಮಾಮಾ ಹಿಂಸ್ಯಃ |"

ರವೀಂದ್ರರು ಈ ಮಂತ್ರವನ್ನು ಎಷ್ಟೋ ಸಲ ಉಚ್ಚರಿಸಿದ್ದನ್ನು ಜನರು ಕೇಳಿದ್ದರು. ಅವರೇ ಸ್ವತಃ ಕೆಳಗಿನಂತೆ ಇದನ್ನು ವಿವರಿಸಿದ್ದರು:

"ನೀನು ನಮ್ಮ ತಂದೆ, ಸತ್ಯದ ಬೆಳಕಿನಲ್ಲಿ ನಮ್ಮನ್ನು ಜಾಗೃತಗೊಳಿಸು! ಸತ್ಯವು ನೀನು! ನಾವು ನಿನ್ನನ್ನು ವಂದಿಸುತ್ತೇವೆ. ಮರಣ ಬಾಧೆಗೆ ಗುರಿಮಾಡಬೇಡ!" ಆದರೂ ಸಾಂಸಾರಿಕ ಪದ್ಧತಿಯಂತೆ ಸ್ಥೂಲ ಶರೀರವನ್ನು ಅವರು ಬಿಡುವಾಗ ಬಾಧೆಯನ್ನು ಅನುಭವಿಸಲೇ ಬೇಕಾಯಿತು. ಇನ್ನೂ ಸಾಮಾನ್ಯ ಜನರ ಮಾತನ್ನು ತೆಗೆದುಕೊಳ್ಳಬೇಕಾಗಿಲ್ಲ.

ನಾವು ನಮ್ಮ 'ಮುಕ್ತಿತ್ವ'ವನ್ನು ಸಂಪೂರ್ಣ (Perfect) ಗೊಳಿಸಬೇಕು. ಹೊರಗಿನ ಸೌಂದರ್ಯವು ಎಷ್ಟು ಆವಶ್ಯಕವೋ ಅದಕ್ಕೆಂತಲೂ ಹೆಚ್ಚಿಗೆ ಆಂತರಿಕ ಸೌಂದರ್ಯವು ಆವಶ್ಯಕ. ಉಡಿಗೆ, ರೂಪು, ಮಾತು, ಹೃದಯ ಮತ್ತು ಕಾರ್ಯ— ಈ ಐದು ಶುದ್ಧವಾಗಿರಬೇಕು. ಹೃದಯವನ್ನು ಶುದ್ಧವಾಗಿ ಇಡುವುದನ್ನು ಕಲಿತವನು ಶಾಂತಿಯು ಬಾಳಿಕೆಯನ್ನು ಬಾಳುತ್ತಾನೆ. ಅವನ ಹೃದಯದಲ್ಲಿ ಹರಿದ ಪ್ರೇಮವು ಅವನ ಮುಖದಲ್ಲಿ ಪ್ರತಿಬಿಂಬಗೊಳ್ಳುತ್ತದೆ. ಶುದ್ಧ ಜೀವನವೆಂದರೆ ಸಂನ್ಯಾಸಿಯ ಜೀವನವೆಂದು ಅರ್ಥವಿರದೆ, ಸಂಸಾರದಲ್ಲಿ ಸಾಮಾನ್ಯ ಮನುಷ್ಯನೂ ನಡೆಯಿಸಬೇಕಾದದ್ದು ಎಂದು ಅರಿತುಕೊಳ್ಳಬೇಕು. ಅದು ಅವನವನ ಉನ್ನತ ಸ್ವಾರ್ಥಕ್ಕಾಗಿಯೇ.

ನಮ್ಮ ಪ್ರಾಚೀನ ಪುಸ್ತಕಗಳಲ್ಲಿ ಕೆಲವು ವಿಷಯಗಳೂ ಹೇಳಲ್ಪಟ್ಟಿವೆ. ಸೂರ್ಯೋದಯಕ್ಕಿಂತ ಮುಂಜೆ ಎದ್ದು 'ನಮ ಚಿತ್ತ' ಅವಸ್ಥೆಗಾಗಿ ಧ್ಯಾನಿಸುವುದೂ ಒಳಿತು. ಆದರ್ಶ ಉದ್ದೇಶದ ಬಗ್ಗೆಯೂ ಯೋಚಿಸಲು ಅದೇ ಸರಿಯಾದ ಅವಕಾಶ. ಸೂರ್ಯೋದಯದ ಜೊತೆಗೆ ಜಗತ್ತಿನ ಮಾಯೆಯು ಜಾಗೃತವಾಗುತ್ತದೆ.

ರಾತ್ರಿ ಮಲಗುವ ಮುಂಜೆ ತನ್ನ ಗುಣ ಮತ್ತು ಕೃತಿಗಳ ಬಗ್ಗೆ ಧ್ಯಾನಿಸುವುದು ಯೋಗ್ಯವಾದದ್ದು. ನಾವು ಮಾಡಿದ್ದು ಸರಿ ಅಥವಾ ತಪ್ಪು ಎಂದು ಬುದ್ಧಿ ತಿಳಿಯಬೇಕಾದರೆ ನಾವು ಸಮಾಧಾನದಿಂದ ಕುಳಿತು ಅಂತರ್ಮುಖಿಗಳಾಗಿ ಯೋಚಿಸಬೇಕಾಗುತ್ತದೆ. ಮನುಷ್ಯನು ತನ್ನ ದುರ್ಬಲತೆಯಿಂದ ಘಟಿಸಿದ ಕಾರ್ಯಗಳನ್ನು ತಿದ್ದಲು ಪ್ರಯತ್ನ ಪಟ್ಟರೆ ಅವನು ದೇವನಾಗುತ್ತಾನೆ. ನಮ್ಮ ಕಾರ್ಯಗಳಿಗೆ ನಮ್ಮ ಮನಸ್ಸೇ ಸಾಕ್ಷಿ. ಎಷ್ಟೋ ಸಲ ಕೆಲವು ಕಾರ್ಯಗಳನ್ನು ಮಾಡುವಾಗ 'ನಮ್ಮ ಬುದ್ಧಿಯು ಎಚ್ಚರಿಸುತ್ತದೆ.' ಆದರೆ ನಾವು ನಮ್ಮ ದುರ್ಬಲತೆಯಿಂದ ಗಮನಿಸುವುದಿಲ್ಲ. ಗಮನಿಸುವವನಿಗೆ ಎಲ್ಲವೂ ಇದೆ. ಮನುಷ್ಯನು ದಯೆಯಿಂದ ತುಂಬಿರಬೇಕು. ಪರರಿಗೆ ಸೇವೆ ಸಲ್ಲಿಸುವ ನಿಸ್ವಾರ್ಥ ಬುದ್ಧಿ ಬೇಕು. ಸಮಾನ ದಯೆ, ನಿಸ್ವಾರ್ಥ ಸೇವೆ— ಮನುಷ್ಯನ ಜಾತಿಕೆಯನ್ನು ಆದರ್ಶಗೊಳಿಸುತ್ತವೆ. ಅಂಧವನು ಮರಣಕ್ಕೆ ಮುಂಜೆ ಸಾಂಸಾರಿಕ ವೇದನೆ ಅನುಭವಿಸಿದರೂ ಆಂತರಿಕ ಶಾಂತತೆಯನ್ನನುಭವಿಸುತ್ತಾನೆ.

ನಾ ಕಂಡ ವಾರಣಾಸಿ

(ಪ್ರವಾಸ ಪ್ರಬಂಧದ ಉತ್ತರಾರ್ಧ) ★ ಶ್ರೀ. ಕೆ. ಎನ್. ರಾವ್, ಶಿರಸಿ

ಸ್ವಾರ್ಥ, ಅಧಿಕಾರದ ದುರುಪಯೋಗ, ಲಂಚದ ಆಶೆ ಇವೆಲ್ಲ ನಮ್ಮ ಇದ್ದೂರಂತೆಯೆ. ಪುಣ್ಯಕ್ಷೇತ್ರಗಳಲ್ಲಿಯೂ ಇರುವುವು. ನಿಸರ್ಗ ಸೌಂದರ್ಯ, ದೇವಾಲಯ ಇವು. ಗಳಿಂದಲೆ ನಾವು ಪುಣ್ಯಕ್ಷೇತ್ರವೆನ್ನಬೇಕಲ್ಲದೆ, ಅಲ್ಲಿಯ ಮನುಷ್ಯರು ಪಾಪದ ಮೂರ್ತಿಗಳಿ!

★

ಮರುದಿನ ಕತೆ ಕೇಳುವವರ ಸಂಖ್ಯೆ ಸ್ವಲ್ಪ ಹೆಚ್ಚಾಯಿತು. ಕೆಲವರು ಮೊದಲಿಂದ ಶುರುಮಾಡಬೇಕಂತಲೂ ಕೆಲವರು ನಿನ್ನೆ ನಿಲ್ಲಿಸಿದಲ್ಲಿಂದ ಹೇಳಬೇಕೆಂದೂ ಹೇಳಿದರು. ಮನೆಯಲ್ಲಿ ಜಾಗ ಹೆಚ್ಚಿದ್ದಿಲ್ಲವಾದ್ದರಿಂದ ಒಬ್ಬರಿಗೊಬ್ಬರು ಮೈ ತಾಗಿ ಕೂಡು-ಕೊಳ್ಳಬೇಕಾಗಿತ್ತು. ಮಿಸ್ತುಗಾರ್ರು, ದರ್ಜಿಯವರು, ನಮ್ಮವರು, ಗಾಡಗಳು ಎಲ್ಲರೂ ಒಟ್ಟಿಗೆ ಕೂತಿದ್ದರು. ಈ ಜಾತಿಭೇದ ಗಂಡಸರಲ್ಲಿ ವಿಶೇಷ ಇರುವುದಿಲ್ಲ. ಹೆಂಗುಸರು ಮಾತ್ರ ಮೂರು ಜಾತಿಯವರು ನಾಲ್ಕು ಜನ ಸೇರಿದರೆ ಏಳು ಜಗಳಗಳು ಹುಟ್ಟು-ತ್ತವೆ. "ಮುಟ್ಟಬೇಡೇ ಮಾರಾಯಿತ್ತಿ!" ಎಂದಳು ಒಬ್ಬಳು. "ಇರ್ಲಿ ಬಿಡ್ರಿ ನಿಮ್ಮೂ —ಕಾಶೀಗಂಗೆಯ ಕತೀ ಕೇಳ್ವಾಗ್ಲೂ ನಿಮ್ಮೊಂದು ಮಡೀರವ್ವಾ" ಎಂದಳು ಇನ್ನೊಬ್ಬಳು. ಆಗ ಅವರಿಗೆಲ್ಲಾ ಜ್ಞಾನೋದಯವಾದುದ್ದು. "ಗಂಗಾದರ್ಶನ ಮಾಡಿ-ದ್ರಿಂದ ಪುಣ್ಯ ಬರ್ತದಂತೆ. ನಾವು ಒಂದಿಷ್ಟು ಕತೆ ಕೇಳಿ ಹೋಗ್ವಾಗ ಭಾಗವತರಿಂದ ಭಾಗೀರಥಿ ಬೇಡಿಕೊಂಡು, ನಮ್ಮ ಪಾಲಿಗೆ ಬಂದಷ್ಟು ಪುಣ್ಯ ನಾವೂ ಪಡ್ಕೊಂಬೋಣ" ಅಂತ ಒಬ್ಬಳು ಮುದುಕಿ ಹೇಳಿದಳು; ಎಲ್ಲರೂ ಸುಮ್ಮನಾದರು.

"ಹಾಗೇ ಆ ಭೀಷ್ಮನನ್ನು ನೋಡಿ ಪುನಃ ದೋಣಿ ಹತ್ತಿದೆವು. ಅಷ್ಟರಲ್ಲಿ ಸವಿಾಪದಲ್ಲಿ ಇನ್ನೊಂದು ದೋಣಿ ಹೋಗುತ್ತಿತ್ತು. ಅದರಲ್ಲಿ ಕೆಲವರು ಅಳುತ್ತಿದ್ದರು; ಕೆಲವರು ಸಮಾಧಾನ ಮಾಡುತಿದ್ದರು. ಅದೆಲ್ಲ ಏನೆಂದು ಕೇಳಿದೆ. ಯಾರೋ ತೀರಿ-ಕೊಂಡಿದ್ದಾರೆಂದೂ ಶವಸಂಸ್ಕಾರಕ್ಕಾಗಿ "ಮಣಿಕರ್ಣಿಕಾ" ಘಾಟಿಗೆ ಹೋಗುತ್ತಾರೆಂದೂ ತಿಳಿದು ಬಂತು. ಹೋಳೀಹುಣ್ಣಿ-ಮೆಯ ದಿನ ಕಾಶೀಕ್ಷೇತ್ರದಲ್ಲಿ ಪ್ರಾಣ ಬಿಡುವವನೇ ಧನ್ಯನೆಂದು ಎಂದುಕೊಂಡೆ. ಅವರ ದೋಣಿ ಮುಂದಿರಿಯಿತು. ಭೋಸಲೆ ಘಾಟಿನ ಹತ್ತಿರ, ಆರದಿ ಎತ್ತರದ ಕಸಿಷ್ಟರಿಲಂ ಪೌಂಡು ತೂಕದ ಒಬ್ಬನು, ಮೈಗೆಲ್ಲಾ ಸಾಬೂನು ಹಚ್ಚಿಕೊಳ್ಳುತ್ತಿದ್ದ. ನಮ್ಮ ಮೈಕ ಸುಭಾಸಚಂದ್ರ ಗುಪ್ತ ತೀರ ತೆಳ್ಳಗಿನ ಮನುಷ್ಯ. ಸ್ವಲ್ಪ ಪಪ್ಪನಾಗಿರುವವರನ್ನು ಕಂಡಕೂಡಲೆ ಸ್ವಲ್ಪ ಆಶ್ಚರ್ಯ. ಗುಪ್ತ ನಿಗೆ ನಾವೆಲ್ಲ "ಮಚ್ಲಿ" (Machli) ಎಂದು ಕರೆಯುತ್ತಿದ್ದೆವು. "ಮಿಸ್ಟರ್, ಈ ಮನುಷ್ಯ ತೆಳ್ಳಗೆ ಬಿದ್ದರೆ ಏನಾಗಬಹುದು ಅವನ ಅವಸ್ಥೆ?" ಅಂತ ಗುಪ್ತ ಕೇಳಿದ ಮಾತಿನಲ್ಲೆಲ್ಲರೂ ಜಗತ್ತಿನ ವಪ್ಪ-ನಾಗಿದ್ದವರ ಸ್ಥಿತಿಯ ಬಗ್ಗೆ ವಿಮರ್ಶೆ ನಡೆಯಿಸಿ "ಇಂತವರು ಹೊಳೆ-ಯಲ್ಲಿ ಬಿದ್ದರೆ ಟಾಟಾ ಕಂಪನಿಯು ಕ್ರೇನ್ ತರಿಸಬೇಕಾದೀತು." ಎಂದು ಹೇಳಿದ್ದೆಲ್ಲಿ ಅವನಿಗೆ ಕೇಳಿತೋ ಏನೋ! — ದುರುದುರನೆ ನಮ್ಮನ್ನು ನೋಡಿದ. 'ದುಡ್ಡುಂ' ಅಂತ ನೀರಲ್ಲಿ ಹಾರಿ, ಸುಮಾರು ಅರ್ಧ ನದಿಯನರೆಗೆ ಈಸಿ ಹೋಗಿ ತಿರುಗಿದ. ಆಗ ಗುಪ್ತ "ಆಪ್ಕೊ ಆಪ್ಕೊ' ಎನ್ನುತ್ತ ಕೆನ್ನೆ ಮುಟ್ಟಿಕೊಂಡ. ಕಾರಣ ಏನೆಂದರೆ ಗುಪ್ತ ತೆಳ್ಳಗಿದ್ದರೂ ಅವನಿಗೆ ಈಸಲಿಕ್ಕೆ ಬರುತ್ತಿರಲಿಲ್ಲ.

ಮಣಿಕರ್ಣಿಕಾ ಘಾಟಿನ ಮುಂದುಗಡೆಯಲ್ಲಿ ವಿಶ್ವನಾಥ ದೇವ. ಸ್ಥಾನಕ್ಕೆ ಹೋಗುವ ದಾರಿ. ಸುತ್ತಲೂ ಸಾಕಷ್ಟು ದೇವರ ಮೂರ್ತಿಗಳು. ಕಾಶಿಯಲ್ಲಿ ಮೂವತ್ತು ಮೂರು ಕೋಟಿ ದೇವಾಧಿ-ದೇವತೆಗಳಿರುವರಂತೆ. ಇರಲಿ, ಘಾಟಿನ ಮೇಲ್ಗಡೆಯಲ್ಲಿ ಸಾಕಷ್ಟು ಕಟ್ಟಿಗೆ ಕೂಡಿಸಿದ್ದರು. ಅದು ಅಲ್ಲಿಯ ಶವಗಳ ವಿನಿ-ಯೋಗಕ್ಕೆಂದರು. ದೋಣಿ ದಡಹತ್ತಿದ ಕೂಡಲೆ ೮-೧೦ ಶವಗಳು ಕಂಡುವು. ದಹನಕ್ಕಾಗಿ ತಮ್ಮ ನಂಬರು ಎಂದು ಬರುವುದೋ ಎಂದು ಕಾಯುತಿದ್ದುವು. ಅಲ್ಲಿ ಶವತಂದೊಡನೆ, ಅಕ್ಕಿ, ಕಾಯಿ, ಎಣ್ಣೆಗಳಿಗಾಗಿ ನಿಯಮಿತ ಜನರು ಕಾಯು-ತಿದ್ದರು. ಕೆಲವರು ಸಂಸ್ಕಾರವಿಧಿಯ ಮುಂದಿನ ಯೋಚನೆ ಯಲ್ಲಿದ್ದರು. ಕೆಲವರು ಹೋದವರಿಗಾಗಿ ಅಳುತಿದ್ದರು. ಕೆಲವರು 'ಸತ್ತವರಂತೂ ಹೋದರು, ಅವರ ದಹನ ವಿಧಿ ಆಗುವನರೆಗೆ ನಾವು ಸಾಯುತ್ತೇವೆ' ಎನ್ನುವಂತಿತ್ತು ಅವರ ಭಾವ. ಚಿತೆದು "ಸ್ನಾನ ಕಾಣಿಕೆ" ಕೊಟ್ಟು, ನೀರಿಗೆ ತಾಗಿಟ್ಟು ಗಂಗಾಜಲವನ್ನು ಆಗಾಗ ಸೋಂಕಿಸುತಿದ್ದರು. ಅಲ್ಲಿಂದ ಮುಂಜೆ ಹೋದರೆ ಆಗಲೇ ಪ್ರಾಣ ಬಿಟ್ಟ ಒಬ್ಬ ಕೂಲಿಯವ. ಕಾಲರಾ (ಸಾಂಕ್ರಾಮಿಕ ವ್ಯಾಧಿ) ಬೇನೆಯಿಂದ ಇವನು ನರಳುತಿದ್ದನಂತೆ. ಸರಿ, ಮುನಸಿಪಾಲಿಟಿ ಯವರೇ ಇವನಿಗೆ ಗತಿ.

ಮುಂಜೆ ಹೋದಂತೆ ಸೂರ್ಯನ ಬೆಳಕೂ ಕಾಣದಂತಹ ಒಡೆ ಗಳು. ಹೆಜ್ಜೆಗೊಂದು ಲಿಂಗವಿದೆ. ಪೂಜೆ ಇಲ್ಲದೆ ಎಷ್ಟು ಶತ-ಮಾನಗಳು ಕಳೆದಿದ್ದುವೋ ಏನೋ! ಹಂತೂ ಇದ್ದಂತೇ ಇದೆ. ನೈವೇದ್ಯಕ್ಕೆ ಯಾವುದೋ ಕಾಲಕ್ಕೆ ಅವಕ್ಕೆ ಉಂಬಳಿಯಿತ್ತಂತೆ. ಈಗ ಈ ರೇಶನ್ನಿನ ಕಾಲದಲ್ಲಿ ಕಲ್ಲಿಗೆಲ್ಲಿಯ ನೈವೇದ್ಯ? ಅಲ್ಲಲ್ಲಿ ಗಣಪತಿ-ಪಂಚಮುಂತರು ಕಂಡಲ್ಲಿ ದೊರಕುತಿದ್ದರು. ಇನ್ನೊಂದು

ವಿಶೇಷವೆಂದರೆ ನಮ್ಮ ಗುರು ಬಂಟ್ವಾಳ ರಘುನಾಥರಾಯರು, ಅಕ್ಷರ ತಿಳಿಯುಬಾರದೆಂದು ಹೇಳಿದ್ದರು. ಇದು ಕಾಶಿಯಲ್ಲಿ ಸಾಧ್ಯವಿಲ್ಲ. ಏಕೆಂದರೆ ಯಾತ್ರಿಕರನ್ನೇಕರು ತಮ್ಮ ಸ್ಮರಣಾರ್ಥ ಒಂದೊಂದು ಸಂಗಮರವರೇ ಕಲ್ಲಲ್ಲಿ ತಂತಮ್ಮ ಹೆಸರು ಬರೆಯಿಸಿ ಹೆಜ್ಜೆ ಹೆಜ್ಜೆಗೂ ಹಾಸಿದ್ದಾರೆ. ಹೀಗಿರುವಾಗ ಕಾಲು ತಲೆಯ ಮೇಲಿಟ್ಟುಕೊಂಡು ಹೋಗಬೇಕಾದೀತು. ಇದೂ ಒಂದು ಕಾಲದ ಹುಚ್ಚಾಗಿತ್ತೋ— ಎಂದು ಭಾಸವಾಗುತ್ತದೆ.

ಗೋಪಾದಲಿಂಗದ ಎದುರುಗಡೆ "ಸಾಕ್ಷಾತ್ಕಾರ" ಲಿಂಗ. ಸರಿ. ನಾನೂ ಪೂಜೆಗೆ ಆರಂಭಮಾಡಿದೆ. ಅಲ್ಲಿ ಬಹಳ ಹೊತ್ತು ಪೂಜೆಗೆ ಅವಕಾಶವಿಲ್ಲ. ಬಲು ಅವಸರ. ಅಭಿಷೇಕ ಮಾಡಿ ಹೂವಿಟ್ಟು ದಕ್ಷಿಣೆ ಕೊಟ್ಟು ಹೊರಡಬೇಕು. ನನಗೇನೋ ಅನುಮಾನವಾಯಿತು. 'ಯಾವ ಕಡೆಯಲ್ಲೂ ಇಷ್ಟು ಅವಸರವಿಲ್ಲ. ಇಲ್ಲೇಕೆ ಹೀಗೆ?' ಎಂದು.

ಅಭಿಷೇಕ ಮಾಡುತ್ತ ಲಿಂಗದ ಮೂಲ ಹುಡುಕಹತ್ತಿದೆ. ಪಂಡಾ ಏನೋ ಕೂಗುತ್ತಿದ್ದ. ನನಗೆ ಲಿಂಗದ ತಲೆಯ ಹಿಂಬದಿಗೆ ಒಂದೆರಡು ಬೋಲ್ಟ್ ನಟ್ಟುಗಳು (Bolts and Nuts) ಕೈಗೆ ಹತ್ತಿದುವು. ಹೂವೇರಿಸಿ ಹೊರಗೆ ಬಂದು ನೋಡಿದೆ. ಅದೂ ಒಂದು ನೀರಿನ ನಲ್ಲಿಯಾಗಿತ್ತು. ಸುಮಾರು ೬ ಅಂಗುಲ ವ್ಯಾಪಿಸಿದ್ದಿತ್ತು. ಕೆಳಗಿನಿಂದ ಬಂದು ಮುಂದಿನ ಮನೆಗೆ ಕನೆಕ್ಷನ್ ಕೊಡುವ ಜೊಯಿಂಟ್ ಪಾಯಿಪ್ (Joint Pipe) ಆಗಿತ್ತು. ನೆಲಗಟ್ಟಿಗೆ ತಾಗಿ ಬಗ್ಗಿಸಿದುದರಿಂದ ಅದರ ಭಾಗವೆಲ್ಲ ಲಿಂಗದಂತೆಯೇ ಇತ್ತು. ಅದಕ್ಕಾಗಿಯೇ ಅಲ್ಲಿ ಬಹಳ ಹೊತ್ತು ಯಾರಿಗೂ ಇರಗೊಡುವುದಿಲ್ಲ. ಹಳೆಯ ಲಿಂಗಗಳು ಕತ್ತಲೆಯಲ್ಲಿರುವುದರಿಂದ ಅಲ್ಲಿಗೆ ಜನರನ್ನೊಯ್ಯಲು ಅವರೇ ಒಪ್ಪುತ್ತಿರಲಿಲ್ಲ. ಇದು ರಸ್ತೆಯ ಬದಿಯಲ್ಲೇ ಇರುವುದರಿಂದ ಸಾಕಷ್ಟು ಉತ್ಪನ್ನದ ದಾರಿಯಾಗಿತ್ತು. ಆಗಲೇ ೬೫ತಿಳಿಕೊಂಡೆ; ಈಗ ದೇವತೆಗಳ ಸಂಖ್ಯೆ ನಾಲ್ಕಾತ್ತು ಕೋಟಿಗೇರಿರಬೇಕೆಂದು.

ವಿಶ್ವನಾಥ ದೇವಸ್ಥಾನ: ಕಂಡಕಂದಲ್ಲಿ ನೂರಾರು ಲಿಂಗಗಳು. ಕಾಶೀಕ್ಷೇತ್ರವನ್ನು ಲಿಂಗಸ್ಥಾನವೆಂದು ಕರೆದರೂ ನಲ್ಲುತ್ತದೆ. ಮಧ್ಯದಲ್ಲಿ ಬಹು ಎತ್ತರ ಗೋಪುರದ ಮೇಲೆ ಬಂಗಾರದ ಧ್ವಜ-ಪತಾಕೆಗಳುಳ್ಳ— ಗೋಡೆಗೆ ಬೆಳ್ಳಿಯ ತಗಡು ಕೊದ್ದಿಸಿದ್ದ—ದೇವಸ್ಥಾನ. ನೆಲಕ್ಕೆ ಅಲ್ಲಲ್ಲಿ ರೂಪಾಯಿಗಳನ್ನೂ ಬೆಳ್ಳಿಯ ಗೋಲಗಳನ್ನೂ ಹೂಡೆಯಿಸಿದ್ದಾರೆ. ವಿಶ್ವನಾಥನ ಎದುರುಗಡೆಯಲ್ಲಿ ಯಾರೋ ೧೧ ಪವನಗಳನ್ನು ಹೊನೆಯಿದ್ದಾರೆ. ದೇವಸ್ಥಾನಕ್ಕೆ ಬರಬೇಕಾದರೆ ವಿಭೂತಿಯ, ಕಣ್ಣು, ಹೂ, ಕಾಯಿ, ಕರ್ಪೂರ, ಮಾಲೆಗಳನ್ನು ತಂದಿದ್ದೆವು. ಮೂರಡಿ ಚೌಕದ ೧೪ ಅಡಿ ಆಳದ ಒಂದು ಕುಂಡ. ಮಧ್ಯದಲ್ಲಿ ಕೋಟ್ಯಂತರ ಜನರಿಗೆ ಮನದಿಷ್ಟ ಪಾಲಿಸಿದ, ನೂರಾರು ರೋಗಿಗಳಿಗೆ ಮುಕ್ತಿಯನ್ನಿತ್ತ— ಇಂದಿಗೂ ಕೋಟ್ಯಂತರ ಜನರನ್ನು ತನ್ನೆಡೆಗೆ ಕರೆಸಿಕೊಳ್ಳುವ—ಜಗದೇಕ ಮೂರುತಿ "ವಿಶ್ವನಾಥ". ನಾನು ಪೂಜೆ ಮಾಡಬೇಕಾದರೆ ಒಬ್ಬನೆ ಇರಬೇಕು. ಅದು ಅಲ್ಲಿ ಹೇಗೆ ಸಾಧ್ಯ? ಅಂತೂ ಅಭಿಷೇಕ ಮಾಡಿ ಅಮ್ಮನನ್ನು ನೆನೆದೆ. "ನೀನೂ ಇಂದು ಸಜೀವವಾಗಿದ್ದು ನನ್ನೊಡನೆ ಬಂದಿದ್ದರೆ — ನಿನಗೆಷ್ಟು ತೃಪ್ತಿಯಾಗುತ್ತಿತ್ತು!" ಅದಕ್ಕೆಲ್ಲ ಋಣ ಬೇಕೆಂದು ಹೇಳುತ್ತ, ಒಂದೆರಡು ಕಂಬನಿಗಳುದುರಿದುವು. ವಿಭೂತಿಯ ಹಂಚಿ ಮುಂದಿರಿದೆ. ಮಹಾಲಿಂಗ ದರ್ಶನ ಮಾಡಿ ಮುಂದಿರಿದೆವು. ಪುರೋಹಿತರು "ಸುಖಭೋಗ"ದ ಕಡೆಗೆ ಕರೆದುಕೊಂಡು ಹೋದರು. ಅಲ್ಲಿ ಒಂದು ಮಾಳಿಗೆಯಿಂದ ಕೆಳಗಿರುವ ಪೂರ್ಣಶೃಂಗಾರದ ಲಿಂಗಮೂರ್ತಿಯನ್ನು ನೋಡುವುದಿತ್ತು. ಅದು "ಪಾತಾಳಲಿಂಗ" ವಂತೆ. ಅದು ಪುನರಾವೃತ್ತಿ ಪೂರಯಿಸುವ ಮಹಾಸ್ಥಾನವಂತೆ. ಎಲ್ಲ ದರ್ಶನಗಳು ಮುಗಿದ ನಂತರ, ಗುತ್ತಿಗೆ ಹಣ ಅಲ್ಲದೆ 'ದರ್ಶನ ದಕ್ಷಿಣೆ' ಎಂದು ಇನ್ನೆರಡು ರೂಪಾಯಿ ತೆಗೆದುಕೊಂಡು, ಪುರೋಹಿತ ಹೊರಟ.

ಪುನಃ ಸಾಯಂಕಾಲ ನಾಲ್ಕು ಗಂಟೆ ಹೊತ್ತಿಗೆ ಮಣಿಕರ್ಣಿಕೆಗೆ ಬಂದೆವು. ನಾವು ಹೋಗುವಾಗ ಮಲಗಿಸಿದ ಶವಗಳೆಲ್ಲವೂ ಇನ್ನೂ ತಮ್ಮ ನಂಬರು ಬಾರದೆ ಹಾಗೆಯೆ ಮಲಗಿದ್ದುವು. ಆಮೇಲೆ ಬಂದ ಎಷ್ಟೋ ಶವಗಳ ದಹನವಾದರೂ ಇವುಗಳನ್ನು ಕೇಳುವವರೇ ಇರಲಿಲ್ಲ. ಅಲ್ಲಿ ಸ್ವಲ್ಪ ಮಿಲಿಟ್ರಿ ಬಟ್ಟೆ ಉಪಯೋಗಿಸಿದೆ. ಗುಪ್ತನ ಸಿವಿಲ್ ಹ್ಯಾಟು ಹಾಕಿಕೊಂಡೆ. ಹೋಗಿ ಘಾಟ್ "ಕುಳಾರಿ" (ಕಂಟ್ರಾಕ್ಟರ)ಯನ್ನು ಕೇಳಿದೆ: ಯಾಕೆ ಈ ಶವಗಳ ಸಂಸ್ಕಾರವಾಗಲಿಲ್ಲವೆಂದು. ಅವನೇ!! ನಮ್ಮಂತಹ ಸೂರಾರು ಹ್ಯಾಟುಗಳನ್ನು ಕಂಡವ. "ಯಾಕ್ರೀ— ನೀವೂ" ಎಂತ ಎಲೆ ಅಗುಳುತ್ತ ಮೀಸೆ ಸರಿಮಾಡಿಕೊಂಡು ಜೋರಾಗಿಯೇ ಹಿಂದಿಯಲ್ಲಿ ಕೇಳಿದ. ಅವನಿಗೆ ಜುಪ್ಪೆಂದರೆ ಪ್ಯಾಟಿನ ಮರ್ಯಾದೆ ಹೋಗುತ್ತದಲ್ಲ. ಅದಕ್ಕಾಗಿ ಗುಪ್ತನನ್ನು ಕರೆದೆ. "ಜೀ ಸಾಬ್" ಎಂದು ಪಟ್ಟೇಪಾಲನಾದ. ನಿರಂಜನ್‌ಸಿಂಗ್ ಮುನಸಿ ಆದ. "ಇನ್ಸಾ ನಾಮ ಲಿಖ್‌ಲೇನ್" ಎಂದೆ. ನಿರಂಜನ್‌ಸಿಂಗ್ "ಧನಿರಾಮು" ಎಂತ ಬರಕೊಂಡ. ಹಾಗೆಯೇ ಕಟ್ಟಿಗೆಯವರ ಮುತ್ತು "ಸ್ಥಾನ ತೆರಿಗೆ" ಯವರ ಹೆಸರನ್ನು ಬರಕೊಂಡು, ಸಮೀಪದಲ್ಲಿಯೇ ನಿಂತಿದ್ದ ಪೋಲೀಸನ ಬಕ್ಕಲ್ ನಂಬರು ತೆಗೆದುಕೊಂಡು ಪಂಚನಾಮೆಗೆ ಪ್ರಾರಂಭಿಸಿದೆವು. "ಬನಾರಸ್ ಮುನಿಸೀಪಾಲಿಟಿ ನೋಟೀಸ್ ಸಂಬ್ರು—ನೇ ಪ್ರಕಾರ, ಮಣಿಕರ್ಣಿಕಾ ಘಾಟಿನಲ್ಲಿಯ ದಹನ ವಿಧಿ ಕಂಟ್ರಾಕ್ಟರ್ ಧನೀರಾಮನು ನೋಟೀಸ್ ಹುಕುಮಿನ ನಿರುದ್ಧ ಬೆಳಗಿನಿಂದ ಸಾಯಂಕಾಲದ ವರೆಗೆ ಶವಗಳನ್ನು ಹಾಗೆಯೇ ಇಟ್ಟು, ಹೆಚ್ಚು ಹಣ ಕೊಟ್ಟವರ ಶವಗಳನ್ನು ಬಂದಬಂದಂತೆ ಸುಡಿಸುತ್ತಾನೆ. ಈ ರೀತಿ ಶವಗಳನ್ನು ಇಡುವುದರಿಂದ ಆರೋಗ್ಯ ಕೆಡುತ್ತದೆ. ಅದರಲ್ಲಿಯೂ ಈಗಿನ ಕಾಲದಾ ಬೇನೆ ಊರಲ್ಲಿರುವ ಸಮಯ ಈತನು ಹೀಗೆ ಮಾಡಿ-

ದ್ದಾದರೆ ರೋಗವು ಇನ್ನೂ ಹೆಚ್ಚಾಗುವ ಸಂಭವವಿದೆ," ಎಂದು ಮುಂತಾಗಿ ಇಂಗ್ಲೀಷಿನಿಂದ ಬರೆದು, ನಮ್ಮ ದೋಣಿಯ ಸಂಗಡ ಬಂದ ಆ ಕುಟುಂಬದವರ ಸಹಿ ತೆಗೆದುಕೊಂಡು, ಪೋಲೀಸರ ಮುಖಾಂತರ "ಧನೀರಾಮ್"ನನ್ನು ದಬಾಯಿಸಿ-ಬಾರಂಭಿಸಿದೆವು. ಆಗ ಹೆಚ್ಚು ಹಣ ಕೊಡಲಿಕ್ಕಿಲ್ಲದೆ ನಂಬರು ಕಾಯುತ್ತಿದ್ದ ಹೆಣಗಳೊಂದೊಂದೇ ಚಿತೆಯೇರಹತ್ತಿದುವು. ಅಷ್ಟರಲ್ಲಿ ಒಂದಿನ್ನೂರು ಜನರು ಸೇರಿದ್ದರು. ಎಲ್ಲರೂ ಹೆಲ್ತ್ ಇನ್ಸ್‌ಪೆಕ್ಟರರನ್ನು ಬಹಳ ಅಭಿನಂದಿಸಿದರು. ದೋಣಿಯವನೂ ದೋಣಿಯಲ್ಲಿ ಕಸಗೂಡಿಸಿ ಜೊಕ್ಕವಾಗಿರಿಸಿದ. ಕನ್ನ ದೋಣಿ ಪಂಚನಾಮೆ ಆಗದಿದ್ದರೆ ಸಾಕೆಂದು.

ಹಿಂದೂ ಯುನಿವರ್ಸಿಟಿ: ಕಾಶೀ ಕ್ಷೇತ್ರದಲ್ಲಿ ಪಟ್ಟ ಅಸ-ಮಾಧಾನ-ಅಶಾಂತತೆಗಳನ್ನು ಹೋಗಲಾಡಿಸುವ ಸ್ಥಾನವೆಂದರೆ ಇದೇ ಸರಿ. ವಿಶ್ವವಿದ್ಯಾನಿಲಯವು ಊರಿಂದ ಒಂದೂವರೆ ಮೈಲು ದೂರವಿರುತ್ತದೆ. ಉತ್ತಮ ಹವೆಯ ಸ್ಥಳದಲ್ಲಿ ಕಟ್ಟಡ-ಗಳಿವೆ. ಅಲ್ಲಿ ಪಂಡಿತ ಮದನಮೋಹನ ಮಾಲವೀಯರ ಕಲಾ, ಮತ್ತು ಆರ್ಯ ಸಂಸ್ಕೃತಿಯ ಪ್ರೇಮಭಾವವು ಮೂರ್ತಿಮತ್ತಾ-ಗಿದೆ. ಭಾರತಿಯು ತನ್ನ ಶಾರದೆಯ ಅವತಾರವನ್ನು ಅಲ್ಲಿ ತಳೆದು ನಿಂತ ಭಾಸವಾಗುತ್ತದೆ. ವಿಶ್ವವಿದ್ಯಾನಿಲಯದಲ್ಲಿ ಶಾಂತಿನಿ-ಕೇತನದ ಮಾದರಿಯಂತೆ ಮರದ ಕೆಳಗೆ ಕ್ಲಾಸುಗಳಲ್ಲವಾದರೂ ಸಂಸ್ಕೃತ ಸಾಹಿತ್ಯಕ್ಕೆ ಹೆಚ್ಚಿನ ಪ್ರಾಶಸ್ತ್ಯವಿತ್ತಿದ್ದಾರೆ. ಇನ್ನು ವೈಶಿಷ್ಟ್ಯವೆಂದರೆ.....ಶಾಂತಿನಿಕೇತನದಲ್ಲಿ ಹಣಗಾರರಿಗೆ ಮಾತ್ರ ಅನುಕೂಲಗಳಿರುತ್ತವೆ. ಅಲ್ಲಿಯ ಉಡಿಗೆ, ತೊಡಿಗೆ, ಆಹಾರೋಪಚಾರಗಳು 'ತಾನೊಬ್ಬ ಶ್ರೀಮಂತನೇ ಸರಿ' ಎಂಬ ಭಾವನೆಗೆ ಆಸ್ಪದ ಕೊಡುತ್ತಿವೆ. ಮನೆಗೆ ಬಂದರೆ ಶಾಂತಿನಿ-ಕೇತನದ ವಿದ್ಯಾರ್ಥಿಗೆ ತನ್ನ ಗುಡಿಸಲಿನಲ್ಲಿರುವುದಕ್ಕೆ ಸ್ವಲ್ಪ ಸಂಕೋಚವಾಗುತ್ತದೆ. ಆದರೆ ಹಿಂದೂ ಯುನಿವರ್ಸಿಟಿಯಲ್ಲಿ ಬಡವರಿಗೂ ಸೌಲಭ್ಯವಿರುತ್ತದೆ. ಜನಪಿತಕ್ಕಾಗಿ, ಸಂಸಾರ-ಕೋಟಲೆಗಳಿಗೆ ದೀಕ್ಷೆಯಿತ್ತು ದೂರ ಕಾಡಿಗೆ ಹೋಗಿ ತಪ-ಸ್ಸನ್ನಾಚರಿಸಿ ದೇಶಕಲ್ಯಾಣ ಬೇಡುತ್ತಿರುವ ಮಹಾಯೋಗಿ-ಯಂತೆ, ಕ್ಷೇತ್ರದ ಅನ್ಯಾಯ, ಮೋಸಗಳಿಗೆ ಕಿವಿಗೊಡದೆ ಕಾಶಿ, ತನ್ನ ಮೂಲಕ ಭಾರತಕ್ಕೆ ಆರ್ಯಸಂಸ್ಕೃತದಾಯಿನಿಯಾಗಿ "ಹಿಂದೂ ವಿಶ್ವವಿದ್ಯಾನಿಲಯ"ವಾಗಿ ನಿಂತಿದ್ದಾಳೆ.

ಹಗಲು ನೋಡಿದ ಕಾಶೀಕ್ಷೇತ್ರವನ್ನು ರಾತ್ರಿ ನೋಡ-ಬೇಕೆಂಬ ಆಸೆಯಿಂದ ಪುನಃ ದೋಣಿ ಗೊತ್ತು ಮಾಡಿ ಇನ್ನೊಮ್ಮೆ ಗಂಗೆಯಲ್ಲಿ ಹೊರಟೆವು. ಹೋಳೀಹುಣ್ಣಿಮೆ-ಯಾದುದರಿಂದಲೋ ಏನೋ!—ಚಂದಿರನು ತನ್ನ ಅಂದಕ್ಕೆ ಒಪ್ಪಗೊಟ್ಟು, ನೀಲಾಕಾಶದಲ್ಲಿ ದೂರದೂರ ಹಾರಿಸುವ ಮೋಡ-ಗಳಿಂದ ಮೋಡಕ್ಕೆ ಈಸುತ್ತಿದ್ದನು. ಆದರಲ್ಲಿಯೂ ತಾನು ಗಂಗಾ ನದಿಯ ಮೇಲ್ಗಡೆಯಲ್ಲಿ ಬಂದಿರುವೆನೆಂದು ತಿಳಿದ ಕೂಡಲೆ, ಗತಿಯನ್ನು ಮಂದವಾಗಿಟ್ಟುಕೊಂಡು, ಗಂಗೆಯ-ಲ್ಲಿಯೂ ಕಾಶೀ ಕ್ಷೇತ್ರದಲ್ಲಿಯೂ ಏನು ಕಾರಭಾರ ನಡೆಯುತ್ತ-ದೆಂದು ನೋಡಿ "ಕಾಶೀಪತಿ ವಿಶ್ವನಾಥ"ನಿಗೆ ವರದಿಯೊಪ್ಪಿ-ಸುವ ಹವಣಿಕೆಯಲ್ಲಿದ್ದನು. ಗಂಗೆಯೂ ಕೂಡ ತನ್ನ ಒಳ-ಗುಟ್ಟನ್ನು ಚಂದ್ರನಿಗೆ ತಿಳಿಯುಗೊಡಬಾರದೆಂದು, ಭಗೀರಥ-ನಿಗೊಲಿದು ಭೂಮಿಗಿಳಿದು ಬಂದ ದರ್ಪದಲ್ಲಿಯೇ ಹರಿಯು-ತ್ತಿದ್ದಳು. ತನ್ನ ಜಲವಾತ್ರದಲ್ಲಿ ಪ್ರತಿಬಿಂಬಿಸುವ ದೀಪಗಳಿಂ-ದಾತಾಳ ಲೋಕದ ದೀಪೋತ್ಸವವನ್ನು ಪ್ರದರ್ಶಿಸುವಂತಿದ್ದಳು. ದಂಡೆಯಲ್ಲಿ ಎಷ್ಟು ಎತ್ತರ ಕಟ್ಟಡಗಳಿರುತ್ತವೋ ಅಷ್ಟೇ ಆಳ-ದಲ್ಲಿ ದೀಪಗಳು ಪ್ರತಿಬಿಂಬಿಸುತ್ತಿದ್ದುವು. ಮಣಿಕರ್ಣಿಕೆಯ ಸ್ಮಶಾನದೀವಿಗೆಯು ಅರ್ಧ ನದಿಯನ್ನು ಶೃಂಗರಿಸಿತ್ತು. ದೂರದಲ್ಲಿ ಯುನಿವರ್ಸಿಟಿಯ ಹೊರಗಿನ ವಿದ್ಯುದ್ದೀಪದ ಬೆಳಕು ನೀರಲ್ಲಿ ಬಿಳ್ಳಿಕಂಬವನ್ನು ತೇಲಿಬಿಟ್ಟಂತಿತ್ತು.

Floating Bridge (ತೇಲುವ ಸೇತುವೆ): ಇದು ದೊಡ್ಡ ದೊಡ್ಡ ರಿವೀಟೆಡ್ ಬ್ಯಾರೆಲ್ಸ್ (Reveted Barrels) ಗಳನ್ನು ಕ್ರಮವಾಗಿ ಜೋಡಿಸಿ, ಅವುಗಳ ಮೇಲೆ ಬಿದಿರು, ಹಲಗೆಗಳಿಂದ ಸೇತುವೆ ಕಟ್ಟಿಸಿದ್ದಾರೆ. ಇದಕ್ಕೆ ಮೂರು ಲಕ್ಷ ರೂಪಾಯಿ ಹಿಡಿದಿರುವುದಂತೆ. ರಾಮನಗರ ಮಹಾರಾಜರು ಇದನ್ನು ಕಟ್ಟಿ-ಸಿದ್ದಾರಂತೆ. ಆ ಸೇತುವೆಯು ಮೇಲೆ ಸಾಮಾನ್ಯ ಮೋಟಾರು-ಗಳೂ ಕೂಡ ಓಡಾಡಬಹುದು. ಅದೊಂದು ದೊಡ್ಡ ಕ್ಷೇತ್ರ-ವಾದುದರಿಂದ, ಅಲ್ಲಿ ತೇಲುವ ಸೇತುವೆಯು ವ್ಯವಸ್ಥೆಯಾಯಿತು. ಆದರೆ ನಮ್ಮ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ಹೊಳೆ (ಶರಾವತಿಗೆ) ಇದೇ ರೀತಿ ಒಂದು ಸೇತುವೆ ಇದ್ದರೆ ಸಾಕಷ್ಟು ಉಪಯೋಗವಾಗುತ್ತಿತ್ತು. ಗಂಟೆಗಟ್ಟಲೆ ದೋಣಿ ದಾಟಿ ಪೆಸೆಂಜರರು ಅಷ್ಟು ತೊಂದರೆ ಪಡುವುದನ್ನು ತಪ್ಪಿಸುವುದಕ್ಕೆ ಒಳಿತಾಗುತ್ತಿತ್ತು. ಆದರೆ ಮಾಡುವವರಾರು? ನಮ್ಮ ಕರ್ನಾ-ಶ್ರೀಮಂತರೇ!! ಬ್ಲ್ಯಾಕ್ ಮಾರ್ಕೆಟು ನುಡ್ಲಿಕ್ಕೆ ಹೇಳಿ! ತೀರು-ಪತಿ ಯಾತ್ರಿ ಇನ್ನೊಮ್ಮೆ ಮಾಡುತ್ತಾರೆ; ಕಾಶೀ ಕ್ಷೇತ್ರದಲ್ಲಿ ಇನ್ನೂ ಒಂದು ಕಲ್ಲು ಹಾಕಿಸುತ್ತಾರೆ; ಆದರೆ ನಾಲ್ಕು ಜನ-ರೊಂದಾಗಿ ಇಂತಹ ಸಾರ್ವಜನಿಕೋಪಯೋಗಿ ಕೆಲಸ ಮಾಡ-ಲಾರರು. ಅವರ ಹಣಕ್ಕಾಗಿ ಮೋಟಾರ್ ಕಂಪನಿಗಳ ಮೇಲೆ Ferry Tax ಹಾಕಿ ವಸೂಲು ಮಾಡಿಕೊಳ್ಳಬಹುದಾಗಿತ್ತು. ಆದರೆ ಈ ಬುದ್ಧಿ ಬರುವುದು ಮಳೆ-ನೆತ್ತಿಹಾವಳಿಗಳಲ್ಲಿ, ಹೊಳೆ-ಯಲ್ಲಿ ಒದ್ದಾಡಿದ ಪೆಸೆಂಜರರಿಗಲ್ಲದೆ ರಾ.ರಾ. ಶ್ರೀ—ಶ್ರೀಮಂತ-ರಿಗಲ್ಲ. ಇರಲಿ. ಆ ಸೇತುವೆಯನ್ನು ಮಧ್ಯ ಬಿಡಿಸಿ ಗೇಟಿನ ಹಾ-ಮಾಡಲಾಗುತ್ತದೆಂದು ಕೇಳಿ, ಪೂರುದಿನ ಬಿಡಿಸಿದ್ದನ್ನೂ ನೋಡಿ-ಆದರೆ ಈ ಕತೆಯನ್ನು ಕೇಳಲಿಕ್ಕೆ ಅಮ್ಮ ಮಾತ್ರ ಇಲ್ಲ. ಅಮ್ಮ ನೀನೇ ಲಕ್ಷ್ಮಿಯಾಗಿದ್ದು ಆದಿಲಕ್ಷ್ಮಿಯನ್ನು ಸೇರಿದೆಯಾ ಎನ್ನುವಾಗ ಎದೆ ತುಂಬಿ ಕಣ್ಣೀರು ಕೋಡಿಯಾಯಿತು. ಸೇರಿದ ಮದುಕಿಯರೆಲ್ಲ ಸಮಾಧಾನ ಹೇಳಿ, ತಂತಮ್ಮ ಮನೆ ಸೇರಿದರು. ಹೀಗೆ ಕಾಮತರು ತಮ್ಮ ಸರಳ ರೀತಿಯಲ್ಲಿ ಮಕ್ಕಳಿಗೆ ಹೇಳಿದ ಕತೆಯಲ್ಲಿ "ನಾ ಕಂಡೆ ವಾರಣಾಸಿ."

ವಿಜಯಿಸಲ್ಕೈ ಭಾರತ !

ಶ್ರೀ. ಪಂಡಿತ ವಿಘ್ನೇಶ್ವರಶರ್ಮಾ, ಗೋಕರ್ಣ

೧

ಬನ್ನಿ ಬಂತು ಕಲಿಗಳೇ—
ರಾಷ್ಟ್ರಕಿಂದು ಹೊಸ ಕಳೆ !
ವಿಜಯ ಸಿರಿಯ ಸೆರೆಗೊಳೆ
ಕನ್ನಿ ನಿಮ್ಮ ತೋಳ್ಬಲೆ.
ಬನ್ನಿ ಬನ್ನಿ ಕಲಿಗಳೆ !

೨

ಹರಿಯಿತೀಗ ಸುತ್ತಲು
ದಾಸ್ಯದ ಕಗ್ಗತ್ತಲು !
ವೇದವ ನೂಕತ್ತಲು
ಹರುಷವು ಗುಡಿಕಟ್ಟಲು—
ಬನ್ನಿ ಬನ್ನಿ ಕಲಿಗಳೆ !

೩

ಹಾಳುರೋಷಕೆಗೆ ತಡೆ,
ಮಾಡು ದಲಿತರಿಂಗೆಡೆ !
ನಾಡಿಗಿಂದು ಬಿಡುಗಡೆ
ಬೆಳಕು ಮುಂದೆ; ಕಲಿ ನಡೆ !
ಬನ್ನಿ ಬನ್ನಿ ಕಲಿಗಳೆ !

೪

ಘಡಘಡಿಸಲಿ ಧ್ವಜಪಟ;
ಬರೆ ಗೆಲುವಿನ ಹೊಸ ಪುಟ!
ಛಲವಿರೆ ಎದೆಯಲಿ ದಿಟ
ನಾಡ ಭಾಗ್ಯ ನಿಚ್ಚಟ !
ಬನ್ನಿ ಬನ್ನಿ ಕಲಿಗಳೆ !

೫

ಮತ-ಮತಗಳ ಮತ್ಸರ
ತೊಡೆ ನಸು ಉಳಿಯದ ತೆರ !
ನಾಡಿಗೆ—ಬಿಡು ಬೇಸರ—
ತೊಡಿಸು ಜಸದ ಪೂಸಕ.
ಬನ್ನಿ ಬನ್ನಿ ಕಲಿಗಳೆ !

೬

ಗಣಿಸಲೇಕೆ ಅಡೆತಡೆ
ರೂಢಿಯ ಹುಸಿ ಬೇಗಡೆ !
ಸಾಳು ಬೇಡ ಕೋಟೆಲೆ,
ಇನ್ನು ಜಯದ ಮುನ್ನಡೆ !
ಬನ್ನಿ ಬನ್ನಿ ಕಲಿಗಳೆ !

೭

ನಡಲು ನಾಡ ಕೇತನ
ನಹಿಪತಿ ಯಮಯಾತನ,
ತೆತ್ತ ಕ್ಷಣಿತೊ ಬುಧಜನ—
ಜ್ಞಾನ-ತಪದ ನೇತನ !
ಬನ್ನಿ ಬನ್ನಿ ಕಲಿಗಳೆ !

೮

ಬಸಿದರೆಷ್ಟೊ ನೆತ್ತರ
ಕಲಿಗಳಿದಕೆ, ಎಚ್ಚರ !
ಧ್ವಜವ ಬಾನಿನೆತ್ತರ
ಹಾರಿಸಲಿದೆ ಅವಸರ !
ಬನ್ನಿ ಬನ್ನಿ ಕಲಿಗಳೆ !

೯

ಸೊಲ್ಲಡಗಿಸೆ ಸೊಲಿನ—
ಗೆಳೆಯರೆಲ್ಲ ಈ ದಿನ
ಮಾಡಿ ಪಣವ ಧೀರನ
ಕ್ಷಾತ್ರಬಲವೆ ಸಾಧನ—
ಬನ್ನಿ ಬನ್ನಿ ಕಲಿಗಳೆ !

೧೦

ಸ್ಥಿರವಗೊಳಿಸಿ ನೀವ್ ಮನ
ನೆರವ ಬೇಡಿ ದೇವನ
ಭಾರತವಿದು ಪಾವನ
ಅಗಲಿ ನಂದನವನ.
ಬನ್ನಿ ಬನ್ನಿ ಕಲಿಗಳೆ !

೧೧

ಇನ್ನು ಪರರ ಕೈವಶ
ಆಗಲೊ ತಾಯ್ನುಬ್ಬಸ;
ಹೇದಿತನದ ಕೊಳೆಕಸ
ಉಡುಗಿ, ತರಲು ಸಂತಸ—
ಬನ್ನಿ ಬನ್ನಿ ಕಲಿಗಳೆ !

೧೨

ಮಾಡಿ ಭಯವ ಭೂಗತ
ಕ್ಷಾತ್ರಕೆ ಸುಸ್ವಾಗತ !
ತೇಜಬಲವಿರಾಜಿತ
" ವಿಜಯಿಸಲ್ಕೈ ಭಾರತ ! "
ಬನ್ನಿ ಬನ್ನಿ ಕಲಿಗಳೆ !

ಅಂದು-ಇಂದು

ಶ್ರೀ. ಪಿ. ವೆಂಕೋಬಾಚಾರ್ಯ, ಬಿ.ಎ.,ಬಿ.ಟಿ. ಹುಬ್ಬಳ್ಳಿ

ಜಯವೆಂದೆವು ಭಾರತಮಾತೆಗೆ
ಸುಖವೆಂದೆವು ಕನ್ನಡನಾಡಿಗೆ
ಅದೊ ಬಂದೆವು ನಿನ್ನಯ ಸೇವೆಗೆ
ನೆರೆಮನೆಯಲಿ ಕದುಬಾಳನು ಅನುಭವಿಸಿದೆವಂದೂ
ಬರೆ ಕೊಡುತಲಿ ತನುಮನಗಳ ಬಹು ಹಿಗ್ಗಿ ನಲಂದೂ.

ಜಯನಾಯಿತು ನಮಗಿನ್ನಿಂದೂ
ಸುಖವಾಯಿತು ನೆರೆ ನಮಗಿಂದೂ
ಇದೊ ಬರುವೆವು ಬಾಗುತಲಿಂದೂ
ಬರಮಾಡಿಕೊ ಹರಸೆಮ್ಮನು ಹಿರಿಹಿಗ್ಗುತ ಇಂದೂ
ವರ ದೇವಿಯೆ ದಯಪಾಲಿಸು ಸುಖಬಾಳನು ಎಂದೂ!

ಹಸಿರು ನೋಟು

ಶ್ರೀ. ವಿ. ಸಿ. ಹಿತ್ತಲಮನಿ, ಒಕ್ಕಲುತನದ ಕಾಲೇಜು, ಧಾರವಾಡ

(ಒಂದು ಜೀವನ ಕಥೆ)

ಹೃದಯ, ಮನಸ್ಸು, ಬುದ್ಧಿಗಳೇ ಮಾನವನನ್ನು ನಿಜವಾಗಿ ಪಾರತಂತ್ರ್ಯಕ್ಕೆ ಎಳೆಯುವುವಲ್ಲದೆ, ರಾಜಕೀಯ ಕಾಯಿದೆಗಳು ಎಳೆಯಲಾರವು. ಉಳ್ಳ ಕುಮಾರ ಲೆಟ್ಟಯಂಧನರು, ಇಲ್ಲದ ತಿರುಕನಂಧವರಿಗೆ ಕೊಡುತ್ತ ಹೋದರೆ, ಎಂತಹ ವರದಾಸ್ಯ ಏನು ಮಾಡಬಲ್ಲದು?

★

೧

"ಅದೃಷ್ಟ ನೆಟ್ಟಗಿತ್ತು!"

"ದೈವ ತೆರೆಯಿತು"

"ಪೂರ್ವಜನ್ಮದ ಪುಣ್ಯ!"

"ಮುಖ್ಯ, ದೇವರು ಕೃಪೆಮಾಡಿದ!"

"ಯೋಗ್ಯತೆಗಿಂತ ಹೆಚ್ಚಿನದೇನೂ ಅಲ್ಲ."

"ಮಾಕರಾಯ! ಆಪತ್ತಿನಲ್ಲಿ ನೆನೆಯಿಸಬೇಕು!"

ದೇವನೂರಿನವರೆಲ್ಲರೂ ಬಾಯಿಮುಚ್ಚಿಕೊಂಡು ಮೌನವಾಗಿದ್ದರೂ, ಸುತ್ತುಮುತ್ತಲಿನ ಊರವರೆಲ್ಲರೂ ಬಗೆಬಗೆಯಾಗಿ ಕೊಂಡಾಡಿದರು. ನಾಡಿಗೆ ನಾದೇ ಕುಮಾರದೇವಪ್ಪನ ಗುಣವರ್ಣನೆ ಮಾಡುತ್ತಿತ್ತು. ಕುಮಾರದೇವಪ್ಪನು ಭಾಗ್ಯಶಾಲಿಯೊಂಬುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ಇನ್ನೂ ಮೂವತ್ತು ವಸಂತಗಳನ್ನು ದಾಟದ ತರುಣವಯಸ್ಸಿನಲ್ಲಿ ಅಪಾರ ಮುರ್ಯಾದೆ! ಒಂದು ಚಿಕ್ಕ ಅಂಗಡಿಯ ಒಡೆಯನು, ವಿಶ್ವಸಂಗ್ರಾಮ ಕೊನೆಗೊಳ್ಳುವುದರಲ್ಲಿ ಲಕ್ಷಾಧೀಶನಾಗಿ ಘನವಂತನಾದುದೇನೂ ದೊಡ್ಡ ಮಾತಾಗಿರದಿದ್ದರೂ, ದೇವನೂರು ಜಿಲ್ಲೆಯ 'ವರ್ತಕ' ಸಂಘದ ಅಧ್ಯಕ್ಷನಾಗಿ ಗೌರವಿಸಲ್ಪಟ್ಟುದು ಸಾಮಾನ್ಯ ಸಂಗತಿಯೆ? ನಮ್ಮ ಸಾರ್ವಭೌಮರ ಹುಟ್ಟಿದ ದಿನಸ, ಅವರ ಪ್ರತಿನಿಧಿಗಳಾದ ವೈಸ್‌ರಾಯ್ ಸಾಹೇಬರಿಂದ 'ರಾವ್‌ಸಾಹೇಬ್' ಬಿರುದು ದೇವನಹಳ್ಳಿಗೆ ಬಂತು! ಸಾಸಿರ ರೂಪಾಯಿ ಬೆಲೆಬಾಳುವ ರಾಜನಿಷ್ಠೆಗೆ ಒಪ್ಪಿ ಸಾರ್ವಭೌಮ ಸರಕಾರದವರು ಮನ್ನಣೆ ಮಾಡಿದರು. ದೇವನೂರು ಮಹಾರಾಜರು, ತಮ್ಮ ಚಿರಂಜೀವರ ಹುಟ್ಟುಹಬ್ಬದ ನಿಮಿತ್ತವಾಗಿ ಏರ್ಪಡಿಸಿದ ಮಹಾಸಭೆಯಲ್ಲಿ 'ರಾಜಸೇವಾಸಕ್ತ' ಎಂಬ ಬಿರುದನ್ನು ದಯೆಪಾಲಿಸಿದರು; ಸಾರ್ವಭೌಮರು-ಮಹಾರಾಜರುಗಳಿಗಿಂತಲೂ ಕಡಿಮೆಯವರು ತಾವೇನೂ ಅಲ್ಲವೆಂದು ತೋರಿಸಿಕೊಡಲು ಜಗದ್ಗುರುಗಳು, ದೇವಪ್ಪನನ್ನು ತಮ್ಮಲ್ಲಿಗೆ ಕರೆಯಿಸಿಕೊಂಡು, ಸಮಸ್ತ ದೇವತೆಗಳನ್ನು ದೇವಪ್ಪನ ಕಾವಲಿಗಿಟ್ಟು, 'ಧರ್ಮವೀರ' ನಾಮಾಂಕಿತ ದಯೆಪಾಲಿಸಿದರು. ಈ ಮೊದಲು ಕುಮಾರದೇವಪ್ಪ ಧರ್ಮವೀರನಾಗಿರಲಿಲ್ಲವೆಂದಲ್ಲ: ಊರಲ್ಲಿ ಜೀರ್ಣಹೊಂದಿದ ದೇಗುಲ, ಸಾರ್ವಜನಿಕ ಮಂದಿರಗಳನ್ನು ಕಾಂಟ್ರ್ಯಾಕ್ಟ್ ಹಿಡಿದು ಉದ್ಧಾರ ಮಾಡಿದ್ದಾನೆ. ಮನೆಯಲ್ಲಿ ಆರ್ಚಕರನ್ನಿರಿಸಿ ದೇವರ ಪೂಜೆ ನಡೆಯಿಸುತ್ತಾನೆ. ನಗರಸಭೆಯ ಚುನಾವಣೆ ಇತ್ಯಾದಿ ಸಂದರ್ಭಗಳಲ್ಲಿ ಸ್ವಜಾತಿಯವರಲ್ಲಿ ಬಿಕ್ಕಟ್ಟು ಬಂದಾಗ, ಚಾಣಾಕ್ಷತನದಿಂದ ಧರ್ಮಾಧಿಕಾರಿಗಳನ್ನು ಕರೆತಂದು, ಊರಿಗೆಲ್ಲ ಅನ್ನಸಂತರ್ಪಣೆ ಮಾಡಿಸಿ, ಧರ್ಮದ ಉದ್ಧಾರಕ್ಕೆ ಕಣ್ಣುಮುಚ್ಚಿ ಉದಾರದಾನ ಮಾಡಿದ್ದಾನೆ. ಸಮೀಪದ ಆಪ್ತರಾಗಿದ್ದ ಜನತೆಯ ಮುಂದಾಗಳೊಬ್ಬರು "ಬಡವರಾಧಾರಿ" ಎಂಬ ಬಿರುದನ್ನು ಬೇರೆ ಕೊರಳಿಗೆ ತೊಡಕಿಸಿದ್ದರು! ಇಷ್ಟೆಲ್ಲ ಮನ್ನಣೆಗಳಿಂದ ದೇವಪ್ಪನಿಗೆ ಸದಾ ಸಂತಸವೇ ಎಂದು ಹೇಳುವಂತಿಲ್ಲ. 'ತನ್ನ ಯೋಗ್ಯತೆಗೆ ಕೆಲವು ಸಲ್ಲವು' ಎಂದು ಮೂಗುಮುದುರಿಕೊಂಡಿರಬೇಕು. ಆದರೇನು? "ಭಕ್ತ ಅರ್ಪಿಸಿದ್ದನ್ನು ದೇವರು ನಿರಾಕರಿಸಲು ಅಧಿಕಾರವಿದೆಯೆ?" ದೇವನಹಳ್ಳಿಯ ನಗರಸಭೆಯ ಅಧ್ಯಕ್ಷಸ್ಥಾನ ಕುಮಾರದೇವಪ್ಪನನ್ನು ಬಯಸಿತು. ಇಂತಹ ಮಹಾತ್ಮರನ್ನು ಬಯಸಿದ ಬಯಕೆ ಬರಿದೆ ಹೋಗುವುದೇ? ದೇವಪ್ಪರಾಯರು ದುಡ್ಡನ್ನು ನೀರಿನಂತೆ ಹರಿಬಿಟ್ಟು, 'ಬಡವರಾಧಾರಿ' ಎಂಬುದನ್ನು ಪ್ರತ್ಯಕ್ಷತೋರಿಸಿ, ನಗರಸಭೆಯ ಅಧ್ಯಕ್ಷಸ್ಥಾನದ ಬಯಕೆಯನ್ನು ಈಡೇರಿಸಿದ್ದರು.

೨

ಧರ್ಮಾಧಿಕಾರಿಗಳಿಂದ ಮೊದಲು ಮಾಡಿಕೊಂಡು ಸಾರ್ವಭೌಮರೂ ಗೌರವಿಸಿದ್ದ ಕುಮಾರದೇವಪ್ಪನ ಐದಂತಸ್ತಿನ ಅರಮನೆಯ ಎದುರಿನಲ್ಲಿ ಜನಜಂಗುಳಿ 'ಹಾ, ಹಾ' ಎನ್ನುವಷ್ಟರಲ್ಲಿ ನೆರೆದುಬಿಟ್ಟಿತು; ತಳವಾರ ತಿರುಕನ ಅರೆಬೆತ್ತಲೆಯಾದ ಬಡಕು ದೇಹ ಧೂಳಿಯಲ್ಲಿ ಬಿದ್ದಿತ್ತು! ಅದೇ ಆಗ ಜೀವ ಹೋಗಿದ್ದುದರಿಂದ ಇನ್ನೂ ಕಣ್ಣು ತೆರೆದೇ ಇದ್ದುವು. ತೆರೆದ ಕಣ್ಣುಗಳು ಗಾಬರಿಯಾದ ಕಣ್ಣುಗಳಿಂದ ನೋಡುತ್ತ ನಿಂತ ಕುಮಾರದೇವಪ್ಪನಲ್ಲಿ ನೆಟ್ಟಿದ್ದುವು. ಅತನ ಹೆಂಡತಿ ದುರುಗಿ ಮೃತದೇಹದ ಮೇಲೆ ಬಿದ್ದು ಜೋರಳಾಡುತ್ತಿದ್ದಾಳೆ; ಜಾಲಿಯ ಕೆಚ್ಚೆನಪ್ಪು ಕವ್ವಾದ—ಆರೇ ಆರು ತಿಂಗಳ—ಕೂಸನ್ನು ಧೂಳಿಯಲ್ಲಿ ಹಿಗೆದಿದ್ದಳು. ಆ ಕೂಸಿನ ದೇಹದಲ್ಲಿ ಇದ್ದುವೆಂದರೆ ಎಲುವು-ಚರ್ಮಗಳೆರಡೆ! ಒಂದು ಸರ್ವಸಾಧಾರಣ ಹೆಗ್ಗಣವು ಆ ಕೂಸಿಗಿಂತ ದೊಡ್ಡದಿರಬಹುದೆಂದು ಹೇಳಿದರೆ, ಇಡಿಯ ಮಾನವ ಸಮಾಜಕ್ಕೇನೇ ಅಪಮಾನದ ಸಂಗತಿ! ಅದೂ ಸಹಿತ 'ಈಗ

ಸಾಯುತ್ತಿದೆಯೊ ಇನ್ನೊಂದು ಕ್ಷಣಕ್ಕೆ ಸಾಯುತ್ತಿದೆಯೊ' ಎನ್ನುವ ಸ್ಥಿತಿಯಲ್ಲಿತ್ತು! ದುರುಗಿಗೆ ಅಳಲಿಕ್ಕೆ ಕಂಠದಲ್ಲಿ ಧ್ವನಿಯಿರಲಿಲ್ಲ; ಮಾತನಾಡಲು ಶಕ್ತಿಯಿರಲಿಲ್ಲ. ಆಗಾಗ ಅಕೆಯ ಮುಖದಿಂದ ನಿಟ್ಟುಸಿರು ಹೊರಡಲಾರದೆ, ಮಾರ್ಗದಲ್ಲಿ ನಾಲ್ಕಾರು ಕಡೆಗೆ ತಂಗಿ, ಆಯಾಸದಿಂದ ಬರುತ್ತಿತ್ತು!! ಸುತ್ತಲೂ ನೆರೆದ ನೆರವಿಯನ್ನು ಕಣ್ಣು ಹೊರಳಿಸಿ ನೋಡಿದಳು; ಒಬ್ಬೊಬ್ಬರನ್ನೇ ನಿಟ್ಟಿಸಿದಳು. ಆಕೆಯ ಕಂಗೆಟ್ಟ ಕಣ್ಣುಗಳು ಏನನ್ನೋ ಕೇಳುತ್ತಿದ್ದುವು; ಯಾರೂ ಅವಕ್ಕೆ ಉತ್ತರ ಹೇಳಲಿಲ್ಲ; ಕುಮಾರದೇವಪ್ಪ ಕಾಲಿನಿಂದ ಒದೆದು, ಕೈಯೊಳಗಿನ ಬಡಿಗೆಯಿಂದ ಹೊಡೆದುದನ್ನು ಸಾಸಿರ ಕಣ್ಣುಗಳು ನೋಡಿವೆ; ಹೊಡೆತ ಆಯಕ್ಕೆ ಬಿತ್ತು! ಮಣ್ಣಿನಲ್ಲಿ 'ವಿಲಿವಿಲಿ' ಒದ್ದಾಡಿ, ಜನ್ಮಕೊಟ್ಟ ದೇವನನ್ನು ಶಪಿಸಿ, ಮನೆಯಲ್ಲಿ ತನ್ನ ಬರುವನ್ನೇ ನಿರೀಕ್ಷಿಸುತ್ತ ಕುಳಿತ—ಅರ್ಧ ಜೀವ ಹಾರಿ ರೋಗವಿಡಿದು ದಿನಗಳನ್ನು ಎಣಿಸುತ್ತಿದ್ದ—ಹೆಂಡತಿ-ಮಕ್ಕಳನ್ನು ನೆನೆದು, ತಿರುಕ ಕೊನೆಯುಸಿರನ್ನು ಬಿಡುವುದನ್ನು ಎಲ್ಲರೂ ಕಂಡು ಕಳವಳಗೊಟ್ಟಿದ್ದಾರೆ. ಆದರೂ ಯಾರೂ ಅಕೆಗೆ ಉತ್ತರವೀಯಲಿಲ್ಲ. ಸಾಯುವ ಮನುಷ್ಯನು ನಿರಾಶ್ರಿತನಾಗಿ ಮೃತ್ಯುದೇವನನ್ನೇ ಮೊರೆಹೋಗುವಂತೆ, ಆಕೆ ಕುಮಾರದೇವಪ್ಪನನ್ನೇ ಒಮ್ಮೆ ಆಪಾದಮಸ್ತಕವಾಗಿ ನಿಟ್ಟಿಸಿದಳು! ಇನ್ನೂ ಅವನ ಕಂಗಳಲ್ಲಿ ಕಿಡಿಗಳು ಹಾರುತ್ತಿದ್ದುವು. ದುರುಗಿ ಎದ್ದು ತನ್ನ ಕೊಳೆಯಾದ—ಹರಿದು ಚಿಂದಿಯಾದ—ಸೀರೆಯ ಅರ್ಧ ಸೆರಗನ್ನೇ ಹರಿದು ತಿರುಕನ ಅರೆಬೆತ್ತಲಾದ ದೇಹಕ್ಕೆ ಹೊಚ್ಚಿದಳು. ಈ ಲೋಕದ ಬಿಸಿಲು, ಚಳಿ, ಗಾಳಿಗಳಿಂದ ರಕ್ಷಿಸಲೆಂಬಂತೆ!

೩

ಮುಗಿದ ಮಹಾಯುದ್ಧ ಯಾರಿಗೂ ಹಿತ ಮಾಡಲಿಲ್ಲವೆಂದು ಬಲ್ಲವರು ಹೇಳುತ್ತಾರೆ. ಜನತೆಯನ್ನು ಸುಖಿಯಾಗಿರಿಸಿ, ಸನ್ಮಾರ್ಗಕ್ಕೆಳೆದು, ಸುಜ್ಞಾನಿಗಳನ್ನಾಗಿ ಮಾಡುವ ಎಷ್ಟೋ ಸುಧಾರಣೆಗಳು ಇಂದಿಗೂ ಹಳ್ಳಿಗೆ ಹೋಗಲು ಪಂಜರಿಯುತ್ತಿವೆ. ಆದರೆ ಕುದಿಯುವುದು, ತಂಬಾಕು ಸೇದುವುದು ಮೊದಲಾದ ಸಣ್ಣಟಗಳು ಧೈರ್ಯದಿಂದ ಒಳನುಗ್ಗಿ, ತೀರ ಚಿಕ್ಕ ಹಳ್ಳಿಗಳಲ್ಲಿಯೂ ತಮ್ಮ ಕೈವಾಡ ನಡೆಯಿಸಿ ಬಿಟ್ಟಿವೆ. ಆಹಾರಂತೆಯೆ ಮರ್ಧರ ಯುದ್ಧದ ಬೇಗೆಯೂ ಎಂತಹ ಹಳ್ಳಿಪಳ್ಳಿಗಳನ್ನೂ ಬಿಡಲಿಲ್ಲ. ಜನರು ಅದರ 'ಜಳ'ಕ್ಕೆ ಕಮರಿ ಹೋದರು. ಎಷ್ಟೋ ಸುರ್ಯೋವಿಗಳು ಯುದ್ಧ ಮಾಡುವ ಮಹಾತ್ಮರನ್ನು ನೆನೆಯುತ್ತ ಉಪದೇವನ ಸನ್ನಿಧಾನ ಪಡೆದರು! ನೇಲಾಗಿ ನಿಸರ್ಗರಾಜನೂ ಇದೇ ಸಮಯಕ್ಕೆ ಕೈತೋರಿಸಿ ಬಿಡಬೇಕೆ? ಅತಿವೃಷ್ಟಿ, ಅನಾವೃಷ್ಟಿಗಳು ಕರ್ತವ್ಯನಿಷ್ಠ ದೂತರಂತೆ ಬಂದು, ಜಮ್ಮ ಕೈವಾಡ ತೋರಿಸಿಯೇ ಬಿಟ್ಟುವು.

ದೇವನೂರ ಪಕ್ಕದಲ್ಲಿರುವ ಕೋಣನೂರು ಇವುಗಳಿಂದೇನೂ ವಿರತಾಗಲಿಲ್ಲ. ನಿತ್ಯೋಪಯೋಗಿ ಪದಾರ್ಥಗಳ ಬೆಲೆ ಏರಿತು. ತಿನ್ನಲಿಕ್ಕೆ ಅನ್ನ ಸಿಕ್ಕುವುದು ದುರ್ಲಭವಾಯಿತು! ಮೈಗೆ ಬಟ್ಟೆ ಸಿಕ್ಕಲಿಲ್ಲ. ಎಲ್ಲದಕ್ಕೂ 'ಕಂಟ್ರೋಲ್' ಆಯಿತು; ಆದರೆ ಮಾನವರ ಹೊಟ್ಟೆಗಳಿಗೆ ಕಂಟ್ರೋಲ್ ಆಗಲಿಲ್ಲ. ತಳವಾರ ತಿರುಕ ಒಂದಿಷ್ಟು ಗಟ್ಟಿಳ್ಳ 'ಆಸಾಮಿ'ಯೇ ಎಂದು ಹೇಳಬೇಕು. ಅವರಿವರ ಜೊಲಗಳನ್ನು ಪಾಲಿನಿಂದ ಹಿಡಿದುಕೊಂಡು, ಅದರೊಂದಿಗೆ ತನ್ನ ಸಾಲ್ಕು ಎಳರೆ ಜೊಲವನ್ನು ಸಾಗುಮಾಡುತ್ತಿದ್ದನು; ಒಂದು ಜೊತೆ ಎತ್ತು ಕಟ್ಟಿದ್ದನು. ಅವಗಿನ್ನೂ ಗೊತ್ತಿರಲಿಲ್ಲ—ಯುರೋಪ್ ಖಂಡದಲ್ಲಿ ಯುದ್ಧ ನಡೆದ ಸಂಗತಿ! ಐದುನೂರು ರೂಪಾಯಿ ತೆರ ತೆತ್ತು ದುರುಗಿಯನ್ನು ಬೇರೆ ಗಂಟು ಹಾಕಿಕೊಂಡಿದ್ದನು.

ಒಂದು ಹಿಂಡುವ ಎಮ್ಮೆ, ಒಂದು ಹೋರಿ, ಮೂರು ಆಡು ಮತ್ತು ಒಂದು ಟಗರು—ದುರುಗಿಯ ತಂದೆಗೆ ಕೊಡ ಬೇಕಾದ ತೆರಕ್ಕಾಗಿ ಸಾವುಕಾರರ ಮನೆ ಮತ್ತು ಒಡಲು ಸೇರಿದ್ದುವು. ದುರುಗಿ ಬಂದ ಹೊಸ ಉಬ್ಬಿನಲ್ಲಿ ಅವನನ್ನು ಹಿಡಿದವರೇ ಇಲ್ಲ! ಕೆಲದಿನ ಅವರಿಬ್ಬರೂ ಕೋಣನೂರ 'ರಾಜ-ರಾಣಿ' ಯರಾಗಿ ಮೆರೆದರು.

ಮೂರು ವರುಷಗಳು ಕೋಣನೂರಿನಲ್ಲಿ ಮೂರು ಯುಗಗಳಂತಾದುವು! ಆ ಮೂರು ವರುಷಗಳ ಸ್ಥಿತಿಯನ್ನು ದೇವರೇ ಬಲ್ಲ!!

ಮೊದಲ ವರುಷ! ಒಂದು ಹನಿಯೂ ಮಳೆ ಬೀಳಲಿಲ್ಲ ಕೋಣನೂರಿನಲ್ಲಿ. ಒಕ್ಕಲಿಗರೆಲ್ಲರು ಹೌಹಾರಿದರು; ಹೂನ ಮಾರಿಕೊಂಡು ಜೀವಕ್ಕೆ ಬೇರೆ ಕಡೆಗೆ ನಡೆದರು; ಊರಿಗೆ ಊರೇ ಗುಳೆಕಟ್ಟಲನುವಾಯಿತು. ಜೊಲದಲ್ಲಿ ಒಂದು ಕಾಳು ಸಹಿತ ಬೆಳೆಯಲಿಲ್ಲ; ಒಂದು ಹಿಡಿ ಮೇವೂ ದನಗಳಿಗೆ ಸಿಕ್ಕಲಾರದಾಯಿತು. ಕೊಳ್ಳಲು ದುಡ್ಡು ಬೇರೆ ಸೊನ್ನೆ! ತಿರುಕನ ಎತ್ತುಗಳು ಸೊರಗಿ ಸಾಯಲಾದುವು; ತಿರುಕ-ದುರುಗಿಯರು ದೇವನೂರಿನಲ್ಲಿ ಅವರಿವರ ಕೆಲಸ ಮಾಡಿ ಉದರ ಕಾರ್ಯ ನಿರ್ವಹಿಸಿಕೊಂಡರು; ಮುಮ್ಮತಿಯಿಂದ ಜೋಸಾನ ಮಾಡಿ, ದುಡಿದು ಕೊಡುವ ಎತ್ತುಗಳನ್ನು ನಿರ್ದಯತನದಿಂದ ಕಟುಕರಿಗೆ ಕೊಟ್ಟು, ಬಂದ ಐವತ್ತು ರೂಪಾಯಿಗಳಲ್ಲಿ ತನಗೆ ಎರಡು ಧೋತರ, ಎರಡು ಆಂಗಿ, ದುರುಗಿಗೆ ಎರಡು ಸೀರೆ, ಕುಪ್ಪುಸಗಳನ್ನು ತರಬೇಕಾದರೆ ಕುರಿ-ಕೋಣ ಬಿದ್ದು ಹೋದುವು. ಒಂದಕ್ಕೆ ಹತ್ತರಷ್ಟು ಬೆಲೆ! ಅದರಲ್ಲಿಯೂ ಆರಿವೆಯ ವ್ಯಾಪಾರಸ್ಥರನ್ನು ಕೇಳಬೇಕೆ?

ಮಾರನೆಯ ವರುಷ!! ತಿರುಕ ಒಕ್ಕಲುತನವನ್ನೇ ಇಡಲಿಲ್ಲ. ದಿನಗೂಲಿಗೆ ಕೋಣನೂರಿನಲ್ಲಯೇ ಮೊದಲು ಸಾಗಿದನು. ಸರಿಯಾಗಿ ಮಳೆಯಾಗಿ ಬೆಳೆಗಳು ಜನ್ನಾಗಿದ್ದುವು. ಗುಳೆಕಟ್ಟಿಕೊಂಡು ಹೋದವರೆಲ್ಲ ಮರಳಿ ಒಂದು ನೆಲಸಿದರು. ಬೆಳೆದು ನಿಂತ ಬೆಳೆಯನ್ನು ನೋಡಿ ತಿರುಕ ದುರುಗಿಯರು ತಾನೇಕೆ ಒಕ್ಕಲುತನ ಮಾಡಲಿಲ್ಲವೆಂದು ಮರಮರನೆ ಮರುಗಿದರು.

ಇನ್ನು ಒಂದು ತಿಂಗಳಿಗೆ ಕೋಣನೂರಿನಲ್ಲಿ ಕಾಳೇ ಕಾಳು! ಅನ್ನವೇ ಅನ್ನ!! ನಿಸರ್ಗರಾಣಿ ಊರವರ ಉತ್ಸಾಹಕ್ಕೆ ಇಂಬು-ಗೊಡಲಿಲ್ಲ. ಮೇಘರಾಜ ಮುನಿದನು. ಭಯಂಕರ ಮಳೆ ಬಿತ್ತು! ಅಂತಹ ಮಳೆಯನ್ನು ಆ ಊರವರು ಎಂದೂ ನೋಡಿ-ರಲಿಲ್ಲವಂತೆ; ಎಷ್ಟೋ ಮನೆಗಳು ಕತ್ತರಿಸಿ ಬಿದ್ದುವು; ಗುಡಿಸಲು-ಗಳು ತೇಲಿದುವು; ತಿರುಕನ ಮನೆಯ ಮುಂದಿನ ಕಟ್ಟೆಯೂ ಕುಪ್ಪಳಿಸಿತು. ಹೊಲದಲ್ಲಿ ಒಡ್ಡುಗಳು ಒಡೆದುವು; ಬೆಳೆ ನೆಲಕ್ಕೆ ಬಿತ್ತು! ಎಷ್ಟೋ ಬೇರುಸಹಿತ ಕಿತ್ತು ತೇಲಿದುವು; ಕೆರೆ-ಕಟ್ಟೆ-ಗಳು ತುಂಬಿ ಕೋಡಿಬಿದ್ದುವು; ಹಳ್ಳ-ಹೊಳೆಗಳು ಭೋರ್ಗರೆ-ದುವು. ಒಂದು ಹಿಡಿ ಮೇವು, ಒಂದು ಪಡಿಕಾಳು ಕೈಗೆ ಹತ್ತಲಿಲ್ಲ. ಜನರ ಸ್ಥಿತಿ ದೇವರೇ ಬಲ್ಲ! ಮಣ್ಣಲ್ಲಿ ಚೆಲ್ಲಿದ ಕಾಳೂ ಕೈಗೆ ಹತ್ತಬೇಡವೆ? ಎಷ್ಟೋ ಜನರು ಆರೆಹೊಟ್ಟೆ-ಯುಂಡರು; ಹಲವರು ಒಂದೇ ಹೊತ್ತು ಉಂಡು ಇದ್ದರು! ಮತ್ತೆ ಕೆಲವರು ಗಡ್ಡೆ-ಗೆಣಸು, ಸೊಪ್ಪು-ಸದೆ ತಿಂದರು! ಹಿಂದಿನ ವರುಷದಂತೆ 'ಗುಳೆ' ಸಾಗಿತು ಬೆಳೆದ ನಾಡಿಗೆ! ಒಕ್ಕಲುತನ ಮಾಡದೆ ಬಿಟ್ಟುದು ಒಳ್ಳೆಯದಾಯಿತೆಂದು ತಿರುಕ-ದುರುಗಿಯರು ಒಂದಿನಿತು ಹರುಷಪಟ್ಟರು. 'ಮುಂದಿನ ವರುಷ ಖಂಡಿತ ಹೇಗಾದರೂ ಮಾಡಿ ಒಕ್ಕಲುತನವಿಡುವುದೇ' ಎಂದು ನಿರ್ಣಯಿಸಿದ ಅವರ ದೃಢನಿರ್ಧಾರವು ಕೊಚ್ಚಿಕೊಂಡು ಹೋಯಿತು.

ಮೂರನೆಯ ವರುಷ!! ದೇವರು ಒಂದಿನಿತು ಕೃಪೆಮಾಡಿದ. ನೆಂದೇ ಹೇಳಬೇಕು. ಸಾಕಷ್ಟಿಲ್ಲದಿದ್ದರೂ ರೈತರು, ಒಂದಿಷ್ಟು ಕಾಳು-ಕಡಿ, ಮೇವು-ಸೊಪ್ಪೆಗಳು ಕೈಗೆ ಹತ್ತಬಹುದೆಂದು ಅಂದಾಜು ಮಾಡಿದರು. ಇನ್ನೇನು ಸುಖದಿಂದಿರಬಹುದೆಂಬುವ ಹೊತ್ತಿಗೆ ಸರಕಾರದವರ 'ಲೇವಿ' ಪ್ರಾರಂಭವಾಯಿತು. ನಾನಾ ಬಗೆಯಿಂದ ಉಪದ್ರವ ಕೊಟ್ಟು ಒಂದು ಬಿಡಿಕಾಳನ್ನೂ ಬಿಡದೆ ದೋಚಿಕೊಂಡು ಹೋದರು. ಊರಲ್ಲಿ ಇಷ್ಟು ದಿವಸವಿಲ್ಲದವರು ಈಗ 'ಅಗ್ಗದರದ' ಅಂಗಡಿ ತೆರೆದರು. ಎರಡು ವರುಷಗಳಿಂದ ಫೀಕರ ಬರಗಾಲ! ಕೈಯಲ್ಲಿ ದುಡ್ಡಿಲ್ಲ; ಮನೆಯಲ್ಲಿ ಕಾಳಿಲ್ಲ. ಕೋಣನೂರಿನಲ್ಲಿ ಕೆಲಸ ಸಿಕ್ಕದಾಯಿತು; ದೇವನೂರಿನಲ್ಲಿಯೂ ಕೂಲಿ-ಪಾಲಿ ದೊರೆಯುವುದು ದುರ್ಲಭವಾಯಿತು. ತಿರುಕ-ದುರುಗಿಯರ ಸ್ಥಿತಿ ಚಿಂತಾಜನಕವಾಯಿತು. ದುರುಗಿ ಬೇರೆ ತುಂಬಿದ ಗರ್ಭಿಣಿ; ದುಡಿಯುವಂತಿಲ್ಲ. ತಿರುಕನೊಬ್ಬನೇ ಆಗಾಗ ಎಲ್ಲಿಯಾದರೂ ಕೆಲಸ ಸಿಕ್ಕರೆ ದುಡಿಯಲು ಹೋಗ-ಬೇಕು; ಹೀಗಾಗಿ ಮೊದ-ಮೊದಲು ಒಪ್ಪೊತ್ತಿನ ಊಟದಿಂದ ಮೊದಲು ಮಾಡಿ, ಮುಂದೆ ಕೆಲವು ದಿನಗಳಲ್ಲಿ 'ಎರಡು ದಿನ-ಗಳಿಗೆ ಒಮ್ಮೆಯಾದರೂ ಊಟ ದೊರೆಯಲಾರದೆ?' ಎನ್ನಿಸಿತು. ಬಾಣಂತಿಯ ಆರಯಿಕೆ ಸರಿಯಾಗಿ ಆಗಲಿಲ್ಲ; ಕೂಸು ಅಶಕ್ತ-ವಾಯಿತು; ದುರುಗಿ ಬೇನೆ ಬಿದ್ದಳು. ಕೂಸು ಸಾಯಲೂ ಇಲ್ಲ, ಬದುಕಲೂ ಯೋಗ್ಯವಿಲ್ಲವೆಂಬುವ ಸ್ಥಿತಿಯಲ್ಲಿಯೇ ಆರು ತಿಂಗಳು ಕಳೆದುವು. ಆರು ತಿಂಗಳ ಕೂಸು ಆರು ದಿನಗಳ ಕೂಸಿನಷ್ಟಿತ್ತು! ದುರುಗಿಯ ಮೈಯಲ್ಲಿಯೂ ಎಲುವು-ಚರ್ಮ-ಗಳು ಮಾತ್ರ ಉಳಿದುವು. ಹೊತ್ತಿಗೆ ಸರಿಯಾಗಿ ಅನ್ನವಿಲ್ಲ; ರೋಗಕ್ಕೆ ತಕ್ಕ ಮದ್ದು ಇಲ್ಲ! ಚಳಿ-ಗಾಳಿಗಳಿಂದ ಸಂರಕ್ಷಿಸಿ-ಕೊಳ್ಳಲು ಸಾಕಷ್ಟು ಬಟ್ಟೆಯಿಲ್ಲ. ತಿರುಕ ಕಂಗೆಟ್ಟನು. ಹೆಂಡತಿ-ಮಕ್ಕಳ ಸ್ಥಿತಿ ನೋಡಿ ಇಳಿದುಹೋಗಿದ್ದನವನು. ಕೊನೆಗೆ ತನ್ನಲ್ಲಿ ಉಳಿದ ಆ ನಾಲ್ಕು ಎಕರೆ ಹೊಲವನ್ನು ಮಾರಿಬಿಡಲು ನಿಶ್ಚಯಿಸಿದನು. ಅಂತಹ ಸ್ಥಿತಿಯಲ್ಲಿಯೂ ದುರುಗಿ ಒಡಂಬಡ-ಲಿಲ್ಲ; ಹಿರಿಯರು ಮಾಡಿದ ಆಸ್ತಿಯನ್ನು ಕಳೆಯಲು ಇಷ್ಟ-ಪಡಲಿಲ್ಲ; ಜೀವ ಉಳಿದರೆ ತಾನೇ ಆಸ್ತಿಯು ಮಮತೆ! ತಿರುಕ ಅದನ್ನು ಕಾಣಿಸಿಬಿಡಲು ನಿಶ್ಚಯಿಸಿದನು. ದುರುಗಿ ಕೊನೆಯಲ್ಲಿ ಒತ್ತೆ ಹಾಕಲಿಕ್ಕೆ ಹೇಳಿದಳು.

ಯುದ್ಧವು ಮುಗಿಯಿತಂತೆ! ಆದರೂ ಪರಿಸ್ಥಿತಿ ಸ್ವಮಿತಕ್ಕೆ ಬರಲಿಲ್ಲ. ಯುದ್ಧದ ಕಾಲ ಮತ್ತು ಅನಂತರದ ದಿನಗಳಲ್ಲಿ ಯಾವ ಅಂತರವೂ ಕಾಣಿಸಲಿಲ್ಲ. ಇನ್ನೂ ಅಷ್ಟು ಕಷ್ಟಗಳೇ ಹೆಚ್ಚಾದುವು! ಆಗಲೇ ಕುಮಾರ ದೇವಪ್ಪ ದೇವನೂರ ಆರಾಧ್ಯ ದೇವನಾದದ್ದು! ಕಮಾರದೇವಪ್ಪನಂತಹ ಸಾವಿರಾರು ಶೆಟ್ಟಿ-ಸಾವುಕಾರರು ಮಾತ್ರ, ಸಂಕ್ರಾಂತಿಯ ಕಾಲದಲ್ಲಿ, ತಾವು ಯುದ್ಧಕಾಲದಲ್ಲಿ ತಿಂದುದನ್ನು ಆರಗಿಸಿಕೊಳ್ಳುವ ಹವಣಿಕೆ-ಯಲ್ಲಿದ್ದರು. 'ಹೊಟ್ಟೆ ತುಂಬಿದರೂ ಹುಲಿ ಮುರಿಯುವು-ದಂತೆ!' ಸೆಟ್ಟರುಗಳೆಲ್ಲರ ದೇಹಗಳು ಕೊಬ್ಬಿದ್ದುವು!! ಹೊಟ್ಟೆ-ಗಳು ಬಿರಿತು ಬಾಯ್ಬಿಡುತ್ತಿದ್ದುವು! ಕಣ್ಣು ನೆತ್ತಿಗೇರಿದ್ದುವು!! ಬಡವರೆಂದರೆ ಅವರ ಕಣ್ಣುಗಳೇ ಕಾಣುತ್ತಿದ್ದಿಲ್ಲ; ಮೆದುಳ್ನು ಅವರಿಗಾಗಿ ಏಚಾರಿಸಲು ಕೂಡ ಸಿದ್ಧವಿರಲಿಲ್ಲ!

ತಿರುಕ ಕೋಣನೂರಿನಿಂದ ದೇವನೂರಿಗೆ ಬಂದಾಗ, ಇನ್ನೂ ನಸುಕಿತ್ತು! ಸಿದ್ರಾಮಶೆಟ್ಟರು ಇನ್ನೂ ಅಂಗಡಿಯ ಮುಳಿಗೆ ತೆಕೆದಿರಲಿಲ್ಲ. ಅಲ್ಲಯೇ ಕುಳಿತನು. ಶೆಟ್ಟರು ಬಂದರು; ಮಾತುಗಳಾದುವು. ಹತ್ತು ವರುಷ ಒತ್ತೆ ಹಾಕಿ ಎರಡು ನೂರು ರೂಪಾಯಿಗಳಿಗೆ ಕಾಗದ ಬರೆಯಿಸಿದರೂ, ತಿರುಕನ ಕೈಯಲ್ಲಿ ಬಂದದ್ದು ಬರಿಯ 'ಹಸಿರು ನೋಟು!'. ಬೆಳಗಿನಿಂದಲೂ ತಿರುಕನು ಕನಸು ಕಂಡದ್ದೇ ಕಂಡದ್ದು, 'ದುರುಗಿ, ಕರಿಯ (ಮಗನ ಹೆಸರು)ರಿಗೆ ಸರಿಯಾದ ಆರಯಿಕೆ....ಹೊಟ್ಟೆತುಂಬ ಅನ್ನ....ಮೈತುಂಬ ಬಟ್ಟೆ....ಮೊದಲಿನಂತೆ ಮಗುವನ್ನು ಮುಂದಿಟ್ಟುಕೊಂಡು ತಾನು ಮತ್ತು ದುರುಗಿ ಮೆರೆಯು-ವುದು....' ಕೈಯಲ್ಲಿ ನೋಟು ಬರುವಷ್ಟರಲ್ಲಿ ಆಗಲೇ ನಿಳಿಂಟು ತಾನು ಹೊತ್ತು ಏರಿತ್ತು! ಮನೆಯಲ್ಲಿಯ ದುರುಗಿ ಮತ್ತು ಮಗನಿಗಾಗಿ ತಿನ್ನಲಿಕ್ಕೆ ಏನಾದರೂ ಕೊಂಡು-ಕೊಂಡು ತೀವ್ರ ಊರಿಗೆ ಹೋಗಬೇಕೆಂದು, ಸವಿಾಪದ ರಾಮ-ಣ್ಣನ ಮಿಠಾಯಿಯ ಅಂಗಡಿಗೆ ಹೋದನು; ಅವನು ಅಷ್ಟು ಚಿಲ್ಲರೆ ತನ್ನಲ್ಲಿಲ್ಲವೆಂದನು. 'ಚಿಲ್ಲರೆಯನ್ನು ತಂದರೆ ಮಾತ್ರ

ಸಾಮಾನು! ಎಂದು ತೂಗು ಹಾಕಿದ ಹಲಗೆಯನ್ನು ನಿರಕ್ಷರಿ. ಯಾದ ತಿರುಕನಿಗೆ ತೋರಿಸಿದನು.

ರಾಮಣ್ಣನ ಸಲಹೆಯಂತೆ ತಿರುಕನು ಒಂದು ದೊಡ್ಡ ಕಿರಾಣಿ ಅಂಗಡಿಯ ಕಟ್ಟೆ ಹತ್ತಿದನು....ಚಿಲ್ಲರೆಗಾಗಿ! 'ಗಲ್ಲೆ'ಯು ಬಳಿಯಲ್ಲಿ ಪೊಡ್ಡದೊಂಡು ಕುರ್ಚಿಯ ಮೇಲೆ, ಜರಿಯ ರುಮಾಲು ಸುತ್ತಿಕೊಂಡು—ಆಗಾಗ ಹೆಗಲ ಮೇಲಿನ್ನಸೆಲ್ಲೆಯನ್ನು ಏರಿಸಿ ತೀಡುತ್ತ—ತಂಬಾಕನ್ನು 'ಪೀಕದಾನಿ'ಗೆ ಉಗುಳುತ್ತ, ಗಂಭೀರವಾದ ಶೈಲಿಯಲ್ಲಿ ಶ್ರೀಮಂತ 'ರಾವಸಾಹೇಬ್, ರಾಜಸೇವಾಸಕ್ತ, ಧರ್ಮವೀರ, ಬಡವರಾಧಾರಿ' ದೇವನೂರ ಕುಮಾರ ದೇವಪ್ಪನವರು ಕುಳಿತಿದ್ದರು. ತಿರುಕನ ಬದಲು ಯಾರಾದರೂ ರಸಿಕರು ನೋಡಿದ್ದರೆ, ಹೋಳಿಹುಣ್ಣಿಮೆಯ ಕಾಮಣ್ಣನಂತೆ ಎಂದು ಹೇಳುತ್ತಿದ್ದರು. ಸುತ್ತಲೂ ಹತ್ತಾರು ಜನ ಕಾರಕೂನರು ಲೆಕ್ಕ ಬರೆಯುತ್ತಿದ್ದಾರೆ! ದೊಡ್ಡ ಅಂಗಡಿ ಬೇರೆ! ಎಷ್ಟೋ ಜನ ಮುಕ್ಕಳು ಗಿರಾಕಿಗಳಿಗೆ ಸಾಮಾನು ಕೊಡುವದರಲ್ಲಿ ನಿಮಗ್ನರಾಗಿದ್ದಾರೆ. ಅಂಗಡಿಯಲ್ಲಿ ಸಾಮಾನು ನಿಟ್ಟುನಿಟ್ಟಾಗಿ ಕಟ್ಟಿದ್ದಾರೆ. ತಿರುಕ ರಾಯರಿಗೆ ನಮಸ್ಕರಿಸಿ, ಕೈಯಲ್ಲಿಯ ನೋಟನ್ನು ಮುಂದೆಮಾಡಿ 'ನೋಟಿಗೆ ಚಿಲ್ಲರೆ ಕೊಡು ಯವ್ವಾಕ, ಕೃಪ್ಯಾ ಬರಚೈತಿ' ಎಂದು ಬೇಡಿದನು. ರಾಯರು ಕಣ್ಣೆತ್ತಿ ನೋಡಿದರು; ಸೋಜಿಗವೆನಿಸಿತು. ತಿರುಕನ ಅವತಾರದಂತಿರುವ 'ತಿರುಕ'ನು ಎದುರಿನಲ್ಲಿ ಕೈಯಲ್ಲಿ ನಿಜವಾಗಿಯೂ ನೂರು ರೂಪಾಯಿಯ ನೋಟನ್ನು ಹಿಡಿದುಕೊಂಡು ನಿಂತಿದ್ದಾನೆ. ಉಟ್ಟುಡೊಂದು ಹೊಲಸಾದ ಹರಿದು ಹೋದ ಪಂಚೆ, ಕಾಣಕಾಲುಗಳನ್ನೂ ಮುಚ್ಚಲು ಅಸಮರ್ಥವಾಗಿತ್ತು! ಮೈಯಲ್ಲಿ ಹೊಟ್ಟುಕೊಂಡ ಅಂಗಿ ಹತ್ತಾರು ಕಡೆಯಲ್ಲಿ ಹರಿದು, ಹೊಗೆಗಳೆದ್ದ ದೇಹವನ್ನು ಬಯಲುಗಿರಿಸಿತ್ತು; ತಲೆಯ ಮೇಲಿನ ರುಮಾಲವೆಂದು ಸರಿಯಾಗಿ ಹೇಳುವದು ಸಾಹಸದ ಮಾತೇ ಸರಿ! ಅದರ ಬಣ್ಣ ಹೊಸದಿದ್ದಾಗ ಯಾವುದಿತ್ತೋ ದಿರಲಿ; ಸದ್ಯದ ಬಣ್ಣವನ್ನು ಹೇಳುವದು ಸರ್ವಸಾಧಾರಣ ಮನುಷ್ಯನಿಗೆ ಸಾಧ್ಯವಿರಲಿಲ್ಲ; ತಿರುಕನನ್ನು ನೋಡುತ್ತಲೇ ರಾಯರಿಗೆ—ಇವನ ಬಳಿಯಲ್ಲಿ ಹೇಗೆ ನೂರು ರೂಪಾಯಿಗಳ ನೋಟು ಬಂದಿತೆಂಬ ಸಂಶಯ ಬಂತು! ತತ್‌ಕ್ಷಣ ತಲೆಯಲ್ಲಿ ವಿಚಾರವು ಸಿದ್ಧವೇ ಆಗಿತ್ತು: 'ಎಲ್ಲಿಯಾದರೂ ತುಡುಗು ಮಾಡಿರಬೇಕು' ದುಡ್ಡು ಧನಿಕರ ಸ್ವತ್ತು! ಬಡವರ ಕೈಯಲ್ಲಿಗೆ ಬಂದೀತು! ಅದನ್ನು ಕೈವಶ ಮಾಡಿಕೊಳ್ಳಲು ತುಡುಗೇ ಅವರಿಗೆ ಸಾಧನ!' ಪೋಲೀಸರಿಗೆ ತಿಳುಹಿ ಶಿಷ್ಟಾಚಾರ ಮಾಡಿಸಿ ಬಿಡಬೇಕೆನಿಸಿತೇ ಹೊರತು ಅದು ಹೇಗೆ ತಿರುಕನಿಗೆ ಸೇರಿತೆಂದು ವಿಚಾರಿಸಬೇಕೆಂಬ ವಿಚಾರವೇ ರಾಯರ ತಲೆಯಲ್ಲಿ ಸುಳಿಯಲಿಲ್ಲ. ಮರುಕ್ಷಣದಲ್ಲಿ ಮತ್ತೇನೋ ಹೊಳೆಯಿತು. ತಮ್ಮಲ್ಲಿಯ ನೋಟನ್ನು ಇಸಿದುಕೊಂಡು ಅಲ್ಲಿಯೇ ಸ್ವಲ್ಪ ಹೊತ್ತು ಕೂಡಲು ಹೇಳಿದರು. ತಿರುಕ ಅಂಗಡಿಯ ಪಾವಟಿಗೆಗಳ ಮೇಲೆ ಕುಳಿತನು. ಅಂಗಡಿಯಲ್ಲಿಯ ಗಿರಾಕಿಗಳ ಕಡೆಗೇ ಅವನ ಲಕ್ಷ್ಯವಿತ್ತು! ಅವರು ಒಯ್ಯುವ ಸಾಮಾನುಗಳನ್ನೇ ನಿಟ್ಟಿಸುತ್ತಿದ್ದನು. ತಾನೂ ಅವುಗಳಲ್ಲಿ ಏನೇನು ಒಯ್ಯಲು ಬೇಕೆಂದು ಲೆಕ್ಕ ಹಾಕುತ್ತಿದ್ದನೋ ಏನೋ—ಹೊತ್ತು ಹೋಳಾತದುದು ತಿಳಿಯಲೇ ಇಲ್ಲ. ಬಾಯಿ ತೆರೆದುಕೊಂಡು ಕುಳಿತಿದ್ದನು; ಜೊಲ್ಲದ ಮೇಲಿನ ನೊಣಗಳು ನಿರಾಯಾಸವಾಗಿ ಅವನ ಬಾಯಲ್ಲಿ ಹೊಕ್ಕು ಹೊರಗೆ ಬರುತ್ತಿದ್ದುವು. ಕುಳಿತು ಒಂದು ತಾಸಾಯಿತು; ರಾಯರು ಬೇರೆ ಮಾತನಾಡಲಿಲ್ಲ. ನೇಸರು ಮುಳುಗಲನ್ನುವಾದನು; ಅಂಗಡಿಯ ಮುಂದಿನ ನೆರಳು ದೂರ ದೂರ ಸರಿಯುತ್ತ ನಡೆಯಿತು. ರಾಯರು ಕೈಯಲ್ಲಿಯ ಬಡಿಗೆ ಹಿಡಿದುಕೊಂಡು ಎದ್ದರು....ತಿರುಗಾದಿಕೊಂಡು ಬರುವದಕ್ಕೆಂಬಂತೆ ತೋರುತ್ತದೆ. ತಿರುಕ ಕೇಳಿದನು:

"ಯಪ್ಪಾಕ, ರುಪಾಯಿ ಕೊಡಲಿಲ್ಲಕ...."

"ಎಲ್ಲಿಯವ್ವ?" ರಾಯರು ಸಹಜಧ್ವನಿಯಲ್ಲಿ ಕೇಳಿದರು.

"ನೂರು ರೂಪಾಯಿ ಲೋಟಿನವ್ವ! ಇದೂ ಈಗ ಹೊತ್ತು ಹೋಳಾದಾಗ ಕೊಟ್ಟಿದ್ದುವ...."

"ಏನು? ತಿಳಿಯುವ ಹಾಗೆ ಸರಿಯಾಗಿ ಹೇಳು!" ರಾಯರು ಗದ್ದರಿಸಿದರು.

"ಯವ್ವಾಕ, ಚಿಲ್ಲರ ಬೇಕಂತಾ ಲೋಟ ಕೊಟ್ಟಿದ್ದ.... ಮಿಠಾಯಿ ಅಂಗಡೀ ರಾಮಣ್ಣ ಹೇಳಿದ್ದಾ: ನಿಮ್ಮ ಹಂತ್ಯಾಕ ಹೋಗು ಅಂತ...." ಮಾತು ಸರಿಯಾಗಿ ಬರಲಿಲ್ಲ; ಹೌಹಾರಿದ್ದನವನು.

"ಯಾವ ನೋಟು? ಯಾರೂ ನನ್ನ ಕೈಯಲ್ಲಿ ಕೊಡಲಿಲ್ಲ. ಯಾರ ಕೈಯಲ್ಲಿ ಕೊಟ್ಟದ್ದು?—ಏ ಶಂಕರಾ, ಗಲ್ಲೆ ನೋಡು! ನೂರು ರೂಪಾಯಿ ನೋಟೂ ಅಂತ ಹೇಳತಾನ ಇವನು.... ಯಾರ ಕೈಯಲ್ಲಿ ಕೊಟ್ಟಿದ್ದನು?" ನಟನೆಯು ಪರಿಪೂರ್ಣವಾಗಿತ್ತು.

ಶಂಕರನು ಎದ್ದು ಬರುವ ಮೊದಲೇ, ರಾಯರು ಗಲ್ಲೆ ಎಳೆದು ನೋಡಿದಂತೆ ನಟಿಸಿ, ತಲೆ ಅಲ್ಲಾಡಿಸಿಬಿಟ್ಟರು.

"ರಾಯರೇ, ಇದೂ ಈಗ ಒಂತಾಸಿನ ಕೆಳಗ, ನಿಮುಕೈಯಾಗ ಕೊಟ್ಟೆ.... ನೀವs ಒಂದೀಟು ಕೂಸುಗೋ ಅಂದ್ರಿಕ.... ನಾ ಹಂಗs...." ಕಣ್ಣಲ್ಲಿ ನೀರು ನಿಂತಿತ್ತು. ಧ್ವನಿ ನಡುಗುತ್ತಲಿತ್ತು.

"ಯಾರೋ ನೀನು? ಹುಚ್ಚು ಬ್ಯಾರೆ ಹಿಡಿದಿಲ್ಲವಲ್ಲ? ನೂರು ರೂಪಾಯಿ ನೋಟಂಕ! ಅದೂ ನನ್ನ ಕೈಯಲ್ಲಿಯೇ ಕೊಟ್ಟನಂತ!!.... ಎಷ್ಟು ಧೈರ್ಯ ಈ —— ಮಗನಿಗೆ.... ಜಂಡಿಗೆ ಕೈಕೊಟ್ಟು ದಬ್ಬೀ" ಸಾವುಕಾರರು ಪಾವಟಿಗೆಗಳನ್ನು ಇಳಿದು ತಮ್ಮ ಮೊಚ್ಚಿಗಳನ್ನು ಸಪ್ಪಳ ಮಾಡುತ್ತ ನಡೆದುಬಿಟ್ಟರು. ತಿರುಕ ಅವರ ಹಿಂದೆಯೇ ಹೆಜ್ಜೆದನು, ದಾರಿಯುದ್ದಕ್ಕೂ ಅಂಗಲಾಚುತ್ತಲೇ ನಡೆದಿದ್ದನು. ಪೈಕಾಲು

ಹಿಡಿದು ಜೇಡಿಕೊಂಡನು. ತನ್ನ ಸ್ಥಿತಿ-ಗತಿ ತೋಡಿಕೊಂಡನು. ರಾಯರ 'ಬೆಣ್ಣೆ'ಯಂತಹ ಹೃದಯ ಬೇರೆ ಕರಗಲಿಲ್ಲ. ರಾಯರು ತಮ್ಮ ಅರಮನೆಯ ಹೆಬ್ಬಾಗಿಲನ್ನು ತೆರೆದು ಒಳಗೆ ಹೊರಟರು. ತಿರುಕನೂ ಹಿಂಬಾಲಿಸಿದನು. ರಾಯರಿಗೆ ಮಿತಮೀರಿದ ಕೋಪ ಬಂತು! ಜಂಡಿಗೆ ಕೈಕೊಟ್ಟು ನೂಕಿದರು; ತಿರುಕ ಹೋಗಿ ಬಂದು ಕಲ್ಲಿಗೆ ಅಪ್ಪಳಿಸಿ ಬಿದ್ದನು. ಹಣೆಯೊಡೆಯಿತು; ನೋವಿಗೆ ಗಟ್ಟಿಯಾಗಿ ಕೂಗಿದನು. ಕಿರುಚಿದನು ಒಸಜಂಗುಳಿ ನೆರೆ-ಯಿತು. ತಿರುಕ ಇನ್ನೂ ತಂಗಲಾಜುತ್ತಲೆ ಇದ್ದನು. ರಾಯರು ಒಂದೆರಡು ಸಲ ಧೂಳಿಯಲ್ಲಿ ಬಿದ್ದವನನ್ನು ಬದ್ದು ಕೈಯೊಳಗಿನ ಬಡಿಗೆಯಿಂದ ತಳಿಸಿದರು :

* * * *

ಹೊಲ ಒತ್ತೀ ಮಾಕಿ ಬರುವೆನೆಂದು ಹೊರಗೆ ಹೋದ ತಿರುಕ ಬರಲಿಲ್ಲವೆಂದು ದುರುಗಿ ಕೂಸನ್ನು ಕಟ್ಟಿಕೊಂಡು ಬಂದಿದ್ದಳು; ಯಾರೋ ಅಳಿಗೆ ಹೇಳಿರಬೇಕು. ದುರುಗಿ ಅಲ್ಲಿಗೆ ಧಾವಿಸಿದಾಗ, ತಿರುಕ ಈ ಲೋಕ ಬಿಟ್ಟಿದ್ದನು. ರಾಯರು ನಿಂತ ನೆರವಿಯನ್ನು ಉದ್ದೇಶಿಸಿ, ಅಹಂಕಾರದಿಂದ ಹೇಳಿದರು :

" ಹುಡುಗ! ಹಾಡ ಹಗಲೇ ಮನೆಯ ಕಳವಿಗೆ ಬಂದಿದ್ದ! ಕಳ್ಳ ಸೂಳೇಮಗನ....ಪೋಲೀಸರ ಕೈಗೆ ಕೊಡಬೇಕು ಈ ಬದ್ಮಾಷ್ ಸೂಳೇಮಕ್ಕಳನ್ನು.. " ಥರಗುಟ್ಟಿ ನಡಗುತ್ತಿದ್ದರು. ಯಾವ ಸುಸಂಸ್ಕೃತ ಮನುಷ್ಯನೂ ಉಚ್ಚರಿಸಲು ಹಿಂದ ಮುಂದೆ ನೋಡಬಹುದಾದ ನುಡಿಗಳನ್ನು ಪಯೋಗಿಸಿ, ರಾಣಾ ಕೆರೆದಂತೆ ಕೆರೆದನು.

೪

ರಾತ್ರಿ ರಾಯರು ತಮ್ಮ ಚಿಕ್ಕ ಹೆಂಡತಿಯೊಂದಿಗೆ ಎಲೆ-ಅಡಿಕೆ ಮೆಲ್ಲುತ್ತ ಕುಳಿತಿದ್ದರು; ಕಾರಕೂನನು ಲೆಕ್ಕದ ಪುಸ್ತಕ ತಂದು ಎದುರಿಗಿಟ್ಟು, ತಿಲಕು ರೂಪಾಯಿಗಳನ್ನು ಎದುರಿನಲ್ಲಿಟ್ಟು ಏನೋ ಹೇಳುವುದಕ್ಕೆ ಹವಣಿಸಿದನು. ರಾಯರು ಅವನನ್ನು ವಿನಾಕಾರಣ ಬಾಯಿಗೆ ಬಂದಂತೆ ಬಯ್ದು, ತೆರೆದ ಅಫೀ ಬಾಯನ್ನು ಮುಚ್ಚಿಸಿದರು.

ಅಂದೇ ರಾತ್ರಿ ದೇವನೂರ ಪೋಲಿಸ್ ಸಬ್‌ಇನ್‌ಸ್ಪೆಕ್ಟರ್ ಸುಮಾರಪ್ಪನವರ ಮನೆಯಿಂದ ನಡುರಾತ್ರಿಯಲ್ಲಿ ಹೊರ ಬಿದ್ದರು. ಏನನ್ನೋ ತಮ್ಮ ಕೋಟಿನ 'ಕಿಸೆ'ಯಲ್ಲಿ ಭದ್ರ-ವಾಗಿ ಇಡಲು ಹವಣಿಸುತ್ತಿದ್ದರು....ಬಹಳ ಮಾಡಿ ಅದು ಹಸಿರು ನೋಟಾಗಿರಬೇಕು!

ಮರುದಿವಸ ಪತ್ರಿಕೆಯಲ್ಲಿ, ಕಳ್ಳನೊಬ್ಬನನ್ನು ಧೈರ್ಯದಿಂ ಹಿಡಿದ ಬಗ್ಗೆ, ರಾಯರ ಪ್ರಶಂಸೆ ಎರಡು ಸ್ತಂಭಗಳಲ್ಲಿ ಅಚ್ಚಾ ಗಿತ್ತು!

ಕೊನೆಯ ಹಾಡು :— ★

ಶ್ರೀ. ಕೊಟ್ಟಲಗಿ ರಾಮಚಂದ್ರ, ಬೆಳಗಾಂವಿ

ನಾನು ನಿನ್ನವನಲ್ಲ—ನೀನಲ್ಲ ನನ್ನವನು,
ನಾವಿನ್ನು ದೂರ ದೂರ!
ಇನಿತು ದಿನಗಳ ಕೆಳೆಯು ಮುಖವಾಡ ಬಯಲಾಗಿ
ಹೊರಬಂತು ನಿಜದ ಸಾರ!!

ನಿನ್ನ ಕಣ್ಣಿನ ಕಾಂತಿ—ಒಗುಮಿಗುವ ನಗೆಯಾಜೆ
ನಾಗರವು ಹೆಡೆಯನೆತ್ತಿ
ಸವಿನುಡಿಯ ಒಡಲಿನಲಿ ಅಡಗಿಕೊಂಡಿತ್ತೇನೊ
ವಂಚನೆಯ ಬಚ್ಚುಗತ್ತಿ!

ಮನದ ತೆರೆಯನು ಸರಿದು ಒಂದಾದೆವೆಂದಾಗ
ಸೂಳ್‌ವರಿದು ಬಂದ ಸರಳು
ನೆಟ್ಟನೆದೆಯಲಿ ನೆಟ್ಟು ಬಾಳ ಹೋಳಾಗಿಸಿತು
ಛಿದ-ಛಿದ್ರವಾಗಿ ಕರುಳು!

ಹಾಲೆರೆದು ಸಾಕಿರುವ ಹಕ್ಕಿಯೇ ಹಾಸಾಗಿ
ಸುತ್ತಿರುವುದೇನು ಹೊಗಳು?
ಎದೆಯ ನೀರನು ಬಸಿದು ನಾ ಬೆಳಸಿದೀಬಳ್ಳಿ
ಕೊನೆನೆಗಾಯಿತೇನು ಉರುಳು?

ನಿನ್ನ ಸಂತಸಕೆಂದು ಪಟ್ಟ ಪಾಡೆಣಿಸಿದರೆ
ಮನದ ಮಡಿ ಮಾಸಬಹುದು!
ಕಾಮವಿರಹಿತ ಪ್ರೇಮದೋಜೆ ಕುಂದಿಸಲೆಂದು
ನೆರಳು ತೆರೆಹಾಸಬಹುದು!

ವಿರಹದಾವಾನಲದ ಕಿಚ್ಚಿನಲ್ಲೆ ನೆಯುವುದೆ
ಎಳಜೀವ ಸುಮನಮಾಲೆ!
ಮತ್ತೆ ಕಂಬನಿಗರೆವ ಕಪಟನಾಟಕವೇಕೆ?
ಇದು ಎಂಥ ವಿಕಟ ಲೀಲೆ?

ಹಗಲಿನಲೆ ನಸುನಗುತ ಅಸಿಯ ಬೀಸುವುದಿತ್ತು
ಎದೆದೆರೆದು ನಿಲ್ಲುತಿದ್ದೆ!
ನನ್ನ ಹರಣವ ಹೀರಿ ನೀ ಬೆಳೆಯ ಬಯಸಿದರೆ
ಜೀವಬಲಿ ಹೆಲ್ಲುತಿದ್ದೆ!

ಇಂದು ನಂದಿತು ಗೆಳೆಯ! ಪ್ರೀತಿನಂದಾದೀಪ,
ಕುದಿಯಲಿದೆ ಇನಿಸು ಕೆಂಡ—
ಸಂದ ಗೆಳೆತನ ಗುರುತಿಗೆಂದು ಇರಿಸುವೆನಿದನು
ಇರುವನಕ ದೇಹಪಿಂಡ!

ಮುಗಿದ ಯುದ್ಧ

(ಒಂದು ಕಾದಂಬರಿಯ ಅವಲೋಕನ)

ಶ್ರೀ. ಡಿ. ಎಚ್. ಕೊಪ್ಪರ, ಬಿ. ಎ. ಹುಬ್ಬಳ್ಳಿ

★

ಶ್ರೀ. ಕಾರಂತರ 'ಮುಗಿದ ಯುದ್ಧ' ಮುಗಿದರೂ ಜಗತ್ತಿನ ಮಹಾಯುದ್ಧ ಮುಕ್ತಾಯವಾದರೂ, ಜನರ ಯುದ್ಧ ಕೊನೆಗೊಳ್ಳುವಂತಿಲ್ಲ. ಅಚ್ಯುತನ ಸಂಸಾರದ ಯುದ್ಧ ಮುಗಿದರೂ, ಅಚ್ಯುತನಂಥವರ ಸಂಸಾರವೊಂದು ಮುಗಿಯದ ಯುದ್ಧ. ಇಲ್ಲಿ ಅಚ್ಯುತನು ಬಲಿಯಾದರೆ, ಬಲಿಯಾಗಲೇ ಬೇಕಾದ ಇನ್ನೂ ಅನೇಕರ ಚಿತ್ರ ಯಾರ ಮನಸ್ಸಿನಲ್ಲಿಯೂ ಮೂಡುವ ಮಾತಾಗಿದೆ ಯುದ್ಧದಿಂದುಂಟಾಗುವ ಅಗುಹೋಗುಗಳನ್ನು ಸ್ಥೂಲವಾಗಿ ರಾಜಕಾರಣಿಗಳು ಮಾತನಾಡುತ್ತಿದ್ದರೆ, ಸಾಹಿತ್ಯದ ಪರಿಣಾಮವಾಗಿ ಕಾರಂತರು ಯುದ್ಧದ ಪರಿಣಾಮಕ್ಕೆ ಆಹುತಿಯಾದ ಒಂದು ಸಂಸಾರವನ್ನೇ ಒಳಹೊಕ್ಕು ನೋಡಿದ್ದಾರೆ; ಎಲ್ಲರಿಗೂ ತೋರಿಸಿದ್ದಾರೆ. ಈ ದೃಷ್ಟಿಯಿಂದ ಕಾರಂತರ ಸಾಹಿತ್ಯಕ್ಕೆ ಇದೊಂದು ಹೊಸ ಸಾಮಗ್ರಿಯೆನ್ನಬೇಕು.

ಕೃಷ್ಣರಾಯರಿಗೆ ಅಚ್ಯುತನೊಬ್ಬನೇ ಗಂಡು ಮಗ; ಸೀತೆ ಅವನ ಅಕ್ಕ. ಅಚ್ಯುತ ತನ್ನ ಮನೆತನಕ್ಕೆ ಕುಲದೀಪಕನಾಗಿದ್ದರೆ, ಸೀತೆಯು ಅರುಂಧತಿ. ತಾಯಿ ಲಕ್ಷ್ಮಮ್ಮ ಭಾಗ್ಯದ ಭೂದೇವಿಯಾಗಿದ್ದಳು. ಅಚ್ಯುತನಿಂದ ತಮ್ಮ ಕುಲದೀಪ ಪ್ರಖರವಾಗಬೇಕೆಂದೂ, ಸೀತೆಯಿಂದ ವನವಾಸ ಕಾಣಬಾರದೆಂದೂ, ತಂದೆ-ತಾಯಿಗಳು ಯೋಚಿಸುವುದು ವಿಶೇಷ ಆಶ್ಚರ್ಯವಿರದಿದ್ದರೂ, ವಿಪರೀತ ಅಂಜಿಕೆಯೊಂದು ಅವರಲ್ಲಿ ಅಳುಕುತ್ತಿತ್ತು. ಅಯ್ಯನವರು ತಮ್ಮ ಆಸ್ತಿಯನ್ನು ಅಡವಿಟ್ಟಾಗಲೇ ಅವರ ಮನೆಗೆ ಧೂಮಕೇತುವು ಮೂಡಿತ್ತೆನ್ನಬಹುದು. ಅದು ಅಯ್ಯನವರನ್ನು ಕೊಚ್ಚಿಕೊಂಡು ಹೋದರೂ, ತನ್ನ ವಕ್ರದೃಷ್ಟಿಯನ್ನು ಇಡಿ ಮನೆತನಕ್ಕೇನೆ ಹಬ್ಬಿಸಿತ್ತು.

ಅಚ್ಯುತ ಒಬ್ಬ ಕನ್ನಡ ಶಾಲಾ ಮಾಸ್ತರನು. ಅವನ ಜೀವನದ ರೌದ್ರ ನಾಟಕದ ಪ್ರದರ್ಶನವೇ ಇಲ್ಲಿಯ ಮುಖ್ಯ ವಸ್ತು. ಆ ನಾಟಕವನ್ನು ಪೂರ್ತಿಗೊಳಿಸಲು ಅವನ ಸುತ್ತಲೂ ಸಮಾಜವನ್ನೇ ಹೆಣೆಯಲಾಗಿದೆ. ಅಚ್ಯುತನು ಸರಳ ಜೀವಿ. ತನ್ನದೇ ಆದ ಆದರ್ಶವನ್ನು ಕಲ್ಪಿಸಿಕೊಂಡಿದ್ದ. ಅದೆಲ್ಲವೂ ತನ್ನ ಮನೆತನದ ದೀಪವನ್ನು ಉರಿಸುವುದಕ್ಕಾಗಿ. ಅದಕ್ಕಾಗಿ ಅವನು ಮಾಡದ ಪ್ರಯತ್ನವಿಲ್ಲ; ತಿರುಗದ ದಾರಿಯಿಲ್ಲ; ವಿಚಾರ ಮಾಡದ ದಿನವಿಲ್ಲ. ಆದರೂ ಜಣತೆ ಇದ್ದಾಗ ಬತ್ತಿ ಇಲ್ಲದಾಯಿತು. ಆಗಲೇ ಅಚ್ಯುತನ ಜೀವನವು ವಿರಸವಾದದ್ದು. ಬರುಬರುತ್ತ ಅದು ವಿಷಮತೆಗಿಟ್ಟಿತು. ಅಂದಾಗ ಜಗತ್ತು ಅವನಿಗೆ ಶೂನ್ಯವಾಯಿತು. ಅಚ್ಯುತನು ತನ್ನ ಜನ್ಮವನ್ನೇ ನೀಗಿಕೊಂಡ. ಅಯ್ಯನವರಿಂದ ಪುರುವಾದ ಬಾಳ ಯುದ್ಧದ ಝಳವು ಅಚ್ಯುತನನ್ನೂ ಸೋಂಕಿತು. ಅವನ ಗಾಯಗೊಂಡ ಬಾಳಿಗೆ ನೆಮ್ಮದಿಯಾಗಲಿಲ್ಲ. ಹತ್ತಿದ ಉರಿಯು ಆರಲಿಲ್ಲ. ಅದಕ್ಕೆ ಗಾಳಿಯು ಅನುಕೂಲವಿದ್ದರೆ ಆರಬಹುದಾಗಿತ್ತೇನೋ! ಇತ್ತ ಸೀತೆಯ ಬಾಳಿಗೂ ಕತ್ತಲು ಕವಿದಿತ್ತು. ಕಂಡ ದಾರಿಯಿಂದ ನುಗ್ಗಿ, ಆಡವಿಯ ಪಾಲಾಗಬೇಕಾಯಿತು. ಅಯ್ಯನವರಿಗೆ ಇಳಿದಿದ್ದ ಧೂಮಕೇತುವು ಸಂಪೂರ್ಣವಾಗಿ ಇವರ ನಡುಮನೆಯಲ್ಲಿಯೆ ಇಳಿದುಬಿಟ್ಟಿತು. ಇಷ್ಟಕ್ಕೆ ಸಾಲದೆ ಮಹಾಯುದ್ಧದ ಶೂಲವೊಂದು ಇವರನ್ನು ಇರಿದು ಹಾಕಿತು.

'ಮುಗಿದ ಯುದ್ಧ'ದಲ್ಲಿ ಕಾರಂತರದು ಎತ್ತಿದ ಕೈ. ಅವರ ಅನುಭವದ ಪರಿಪಾಕವೇ ಇಲ್ಲಿ ಇಳಿದಿದೆ. ಕಾದಂಬರಿಕಾರರು ಮೊದಲೇ ಅರಿಕೆಮಾಡಿಕೊಂದಂತೆ, ಎಲ್ಲವೂ ಯಥಾತ್ಮಕವಾಗಿದೆ. ಕಥಾವಸ್ತುವು ತೀರ ತೆಳ್ಳಗಿದ್ದರೂ, ಅದರ ನೆಯ್ಗೆಯು ಹುರಿಕಟ್ಟಾಗಿದೆ. ಪಾತ್ರಚಿತ್ರಣವೆಯಂತೂ ತನ್ನ ಶಿಖರವನ್ನು ಮುಟ್ಟಿದೆ.

ಬಸ್ಸಿನಲ್ಲಿ ಎಡೆಯಿಲ್ಲವೆಂದರೂ, ತನ್ನಲ್ಲಿ ಕಾಸಿಲ್ಲವೆಂದರೂ, ಅಚ್ಯುತನು ಮಾಮುಂಜಿಯನ್ನು ಕಾಣಲು ಹೋದ. ಗೆಳೆಯನೊಬ್ಬನಿಂದ ನಾಲ್ಕಾಣೆ ಎರವಲಾಗಿ ತಂದಿದ್ದ. ಮುಂದಿನದನ್ನು ಕಂಡರೆ ಆಪ್ತ ಮಹೋತ್ಸವ ಅವನಿಗೆ. ಮಾಮುಂಜಿಯನ್ನು ಕಂಡರೆ ತೀರು ಎಳೆದಷ್ಟು ಹಿಗ್ಗು ಬರುತ್ತಿತ್ತು. ತನಗೊದಗಿಬರುವ ಕೊರತೆಗಳನ್ನು ತನ್ನ ಸುಮತಿ-ಸ್ನೇಹಗಳಿಂದ ತುಂಬಿಕೊಳ್ಳುತ್ತಿದ್ದ. ಸ್ನೇಹಬಾಹುಳ್ಯದ ಜೊತೆಗೆ ವಿಶ್ವಾಸಪೂರ್ವಕವಾದ ಒಂದು ಪ್ರೇಮ ಅವನಿಗೆ ಗೆಲುವಿನ ಗೆರೆಯನ್ನು ಹಾಕಿತ್ತು. ಅಚ್ಯುತ ವಕೀಲನಾಗಬೇಕೆಂದು ಕೃಷ್ಣರಾಯ ಪಂಬಲಿಸಿದ್ದರೆ ಅದು ಅವರ ತಪ್ಪಲ್ಲ. ಮಗನನ್ನು ಎದುರು ಕುಳ್ಳಿರಿಸಿಕೊಂಡು ರಾಯರು ಕಾಣುತ್ತಿದ್ದ ಸ್ವಪ್ನರಾಜ್ಯವದು. ಅಚ್ಯುತನ ಮನಸ್ಸಿಗೆ ಬಾರದ ಯಾವ ಕೆಲಸವನ್ನೂ ಅವರು ಮಾಡಿಲ್ಲ. ಅವನಿಗಿನ್ನೂ ಹದಿನಾರಾಗದಿದ್ದಾಗಲೇ ತಂದೆಗೆ ಅವನ ಲಗ್ನದ ಭ್ರಮೆಯುಂಟಾಗಿರುತ್ತ. ಓದಿಗೆ ಕೊನೆಯೆಂದು?— ಎಂಬ ಪ್ರಶ್ನೆ ಬಂದಾಗ, ಅಚ್ಯುತ

ಮನೋಹರ ಗ್ರಂಥಮಾಲೆಯ ಗ್ರಂಥಗಳಿವೆಯು!

'ಬಿತ್ತಿದ ಬೆಳೆ' ಶ್ರೀ. ಕಾರಂತರ ನಾಟಕ

ಜುಲೈ ಕೊನೆಯ ವಾರದಲ್ಲಿ ಗ್ರಾಹಕರ ಕೈಸೇರಿರುವುದು.

'ರಾಷ್ಟ್ರಪುರುಷ' ಶ್ರೀ. ನಿರ್ಜೀ ಅಣ್ಣಾರಾಯರ

೬೫೦ ಪುಟದ ಚಿತ್ತಾಕರ್ಷಕ ಕಾದಂಬರಿ!

ಆಗಸ್ಟ್‌ನೆಯ ತಾರೀಖಿಗೆ ಪ್ರಕಟವಾಗಿರುವುದು.

'ನೀವು ಬೇಡವೆಂದರೆ ಬೇಡ, ಇರಲಿ ಎಂದರೆ ಇರಲಿ' ಎಂದು ಬಿಟ್ಟ. ಅಷ್ಟು ತ್ಯಾಗ ಅವನಲ್ಲಿ ಆಗಲೇ ಬೆಳೆದುಬಂದಿತ್ತು.

ಅಚ್ಯುತ ತೀವ್ರವಾಗಿ ಯಾರನ್ನೂ ನಂಬುವ ಪ್ರಾಣಿ. 'ಮೈದುಕುಟ್ಟಿಗೆ ಗೇಣಿಗೆ ಕೊಡಬಹುದಲ್ಲ!' ಎಂದು ಅಚ್ಯುತ ತಾಯಿಯನ್ನು ಕೇಳಿದಾಗ, 'ಮನುಷ್ಯ ತನ್ನ ಬಾಯಿಯಂತಿದ್ದರೆ, ಊರು ಅಮರಾವತಿಯಾಗುತ್ತಿತ್ತು' ಎನ್ನುವ ಲಕ್ಷ್ಮಮ್ಮನ ಮಾತು ಕೇಳಿ, ತೀರ ವ್ಯವಹಾರ ಚತುರನಂತೆ ನಗುತ್ತ ಗೋಣು ಹಾಕುತ್ತಿದ್ದ. ಯಾರನ್ನೂ ಯಾವ ಕಾಲಕ್ಕೂ ನಂಬುವಷ್ಟು ನಿಷ್ಕಪಟಿಯವನು. ಅಚ್ಯುತನ ಬುದ್ಧಿಯ ಬೆಳೆವಣಿಗೆಗೆ ಅವನ ಸುತ್ತಲಿನ ವಾತಾವರಣ ತಕ್ಕುದಾಗಿರಲಿಲ್ಲ. ಭವಿಷ್ಯದಲ್ಲಿ ಅವನೊಬ್ಬ ಶಾಳಾ ಮಾಸ್ತರನಾಗಿದ್ದರೂ, ವರ್ತಮಾನದಲ್ಲಿ ಅವನದು ಸಾಹಿತಿಯ ವ್ಯಕ್ತಿತ್ವ. ಅದನ್ನು ಕಂಡು ಅಭಿಮಾನಪಡುವವರಿಲ್ಲ; ಅದಕ್ಕೆ ನೀರೆರೆಯುವ ಹಿರಿಯರಾರೂ ಇದಿರಲಿಲ್ಲ. ಯಾರೋ ಕುಡಿ ಚಿವುಟಿದ್ದಾರೆ. ಯಾವುದೋ ಕಾಣದ ಕೈವಾಡವಿಲ್ಲಿದೆ. ಅಗೋಚರವಾದ ಶಕ್ತಿಯ ಪ್ರಭಾವಕ್ಕೆ ಕುಂದಿದ; ಆದರೂ ಅಚ್ಯುತನ ತಾಳ್ಮೆ ಅಪೂರ್ವವಾದುದು. ಅದಕ್ಕೊಪ್ಪುವ ಪ್ರತಿಭಾ ಸಂಪನ್ನನಾಗಿದ್ದಾನೆ. ಇದ್ದೂ ಇಲ್ಲದಂತಾಗುವುದೂ, ಆಗಲು ಹೋಗಿ ಆಗಲಾರದುದೂ, ತರಹೋಗಿ ಕೊಳ್ಳದಲ್ಲಿ ಬೀಳುವುದೂ,—ಇವೆಲ್ಲವೂ ದೈವೀಶಕ್ತಿಯ ವಿಕಟ. ಪಾಶ್ಯದ ಹೆಗ್ಗುರುತುಗಳಾಗಿದ್ದರೆ, ಇಲ್ಲಿಯ ದೇವರೆಲ್ಲ ಅಚ್ಯುತನ ಪಾಲಿಗೆ ದೆವ್ವಗಳಾಗಿ ಪರಿಣಮಿಸಿವೆ. ಅಚ್ಯುತನ ಸಮಸ್ಯೆ ಕೇವಲ ಅಚ್ಯುತನ ಸಮಸ್ಯೆಯಾಗಿ ಉಳಿದಿಲ್ಲ. ಅದು ಬರಿ ಒಂದು ಹೊಟ್ಟೆಯ ಸಮಸ್ಯೆಯಾಗಿ ಉಳಿದಿಲ್ಲ. ಜಾಳ ದೇಗುಲದಲ್ಲಿ ಅಚ್ಯುತನಂತಹರ ಜೀವಗಳು ಎದುರಿಸಬೇಕಾದ ಒಂದೂ ನಿರಂತರವಾದ ಪ್ರಶ್ನೆಯದು. ಇಂಥ ಒಂದು ಪ್ರಶ್ನೆಗೆ ಕಾರಂತರು—ತಿಳಿದೋ, ತಿಳಿಯದೆಯೋ—ಮತ್ತೊಂದು ಚಿಹ್ನವನ್ನು ಕೊಟ್ಟಿದ್ದಾರೆ. ಒಂದು ವ್ಯಕ್ತಿಯ ಜೀವನದ ಸಮಸ್ಯೆಯು ಎಲ್ಲ ವ್ಯಕ್ತಿಗಳ ಸಮಸ್ಯೆಯಾಗಿದೆಯೆಂದು ತೋರಿಸುವ ಕೆಲಸ ಅಷ್ಟಿಷ್ಟಲ್ಲ. ಅವರ ಜೀವನದ ಹೋರಾಟದ ಜೊತೆಗೆ ಉದ್ಭವಿಸುವ ಕೆಲವು ಶಾಶ್ವತ ಸಾಮಾನ್ಯಗಳೂ ಸಾಮಾನ್ಯವಾದುವಲ್ಲ. ಅಚ್ಯುತನ ಸಮಸ್ಯೆ ಬಿಡಿಸುವುದಿಷ್ಟೇ ಅಲ್ಲ, ಅವನನ್ನು ಮೀರಿದ ಕೆಲವು ಪ್ರಶ್ನೆಗಳನ್ನು ಬಿಡಿಸಲು ಪ್ರಯತ್ನಿಸಿದಾಗ, ಕಾದಂಬರಿಯು ಜಗತ್ತಿನ ಕಾದಂಬರಿಯಾಗುವುದು. ಇಲ್ಲಿ ಅಚ್ಯುತನ ಸಮಸ್ಯೆ ಬಿಟ್ಟಿಲ್ಲ. ಆದುದರಿಂದ ಅಂಥವರ ಪ್ರಶ್ನೆಗೂ ಉತ್ತರ ಸಿಕ್ಕಿಲ್ಲ.

ಕಾರಂತರು ತಾವು ಕಂಡದ್ದಕ್ಕೆ ಕೆಂಡವನ್ನು ಕಾರಿಲ್ಲ; ಅಂಥವರ ಗೋಳನ್ನು ಕೇಳಿ ಮರುಗಿ ಅದಕ್ಕಾಗಿ ವಕಾಲತ್ತನ್ನು ವಹಿಸಲೂ ಹೊರಟಿಲ್ಲ. ಕಂಡದ್ದನ್ನು ಆಡಿದ್ದಾರೆ. ಆದರೂ ತಾವು ಕಂಡದ್ದನ್ನು ಸುಮ್ಮನೆ ಚಿತ್ರಿಸಿಲ್ಲ. ಅಚ್ಯುತನ ಹೊಟ್ಟೆಯ ಪ್ರಶ್ನೆಯನ್ನು ಬಿಡಿಸಹೋಗಿ, ಅವನ ಜೀವನದ ಹೊರೆಯನ್ನು ಹೊರುವುದು ಅನಿವಾರ್ಯವಾದುದು. ಆದರೆ ಇಡಿಯ ಪ್ರಶ್ನೆಯನ್ನು ಬಿಡಿಸುವ ಮನಸ್ಸು ಕಾರಂತರಿಗಿಲ್ಲ. ಸುಮಾರು ಇಪ್ಪತ್ತು ವರುಷಗಳ ವರೆಗೆ ಹೋರಾಡಿದರೂ ಪ್ರಶ್ನೆಯು ಪ್ರಶ್ನೆಯಾಗಿಯೇ ಉಳಿದಿದೆ.

ಈ ಪ್ರಶ್ನೆಯ ಒತ್ತಡ ಅಚ್ಯುತನ ಲಗ್ನವಾದ ಮೇಲೆ. ಆಗ ಅಚ್ಯುತನಿಗೆ ಸಾಹಿತಿಯಾಗುವ ಲಕ್ಷಣಗಳು ತೋರಹತ್ತಿದ್ದುವು. ಈ ಅವಧಿಯಲ್ಲಿ ಅಚ್ಯುತನು 'ಅಚ್ಯುತರಾವ್ ಕೊಂಬಾರ' ಆಗಿದ್ದ. ಸಂಘ-ಸಂಸ್ಥೆಗಳಲ್ಲಿಯೂ, ಯಕ್ಷಗಾನಗಳಲ್ಲಿಯೂ ಭಾಗವಹಿಸಿ ಒಳ್ಳೆ ಹೆಸರಾದ. ಆದರೆ ಇವನ ಗೋಳು ಬಗೆಹರಿಯಲಿಲ್ಲ. ಅವನ ಸಾರ್ವಜನಿಕ ಚಟುವಟಿಕೆಗಳಲ್ಲಿ ಮನೆಯ ಮಗುವಿಗೆ ಪಾಲಿಲ್ಲದಂತಾಯಿತು. ನಿಸರ್ಗದ ನಿಷ್ಕರುಣ ನೋಟ ಅವನ ದುಃಖವನ್ನು ಇಮ್ಮಡಿಸಿತು. ಅವನಿಗೆ ಜೀವನದ ಸಾಹಿತ್ಯವಿದ್ದರೆ, ಸಾಹಿತ್ಯದಲ್ಲಿಯೂ ಅವನು ಒಂದು ಜೀವನವನ್ನು ಬೆಳೆಯಿಸಬಹುದಾಗಿತ್ತು.

ಕಾದಂಬರಿಕಾರರು ಸ್ವತಂತ್ರ ಜೀವಿಯೆಂದು ಹೇಳುವಷ್ಟು ಸ್ವತಂತ್ರ ಜೀವನ ಅಚ್ಯುತನದಾಗಿರಲಿಲ್ಲ. ಇಲ್ಲವಾದರೆ ಅವನು ತನಗೊದಗಿದ ಅನ್ಯಾಯಕ್ಕೆ ಸಿಡಿದೇಳಬೇಕಾಗಿತ್ತು. ತಾನು ಕಲ್ಪಿಸಿದ ಆದರ್ಶಗಳು ಮೂರ್ತಸ್ವರೂಪವನ್ನು ತಾಳಿದ್ದರೆ, ಅವನಲ್ಲಿ ಕ್ರಾಂತಿಯಾಗಬಹುದಾಗಿತ್ತು. ಅಚ್ಯುತನ ವರ್ಗವಾಗಿ ಹೋದ ಒಂದೊಂದು ಊರು ಅವನಿಗೆ ಒಂದೊಂದು ಹೊಸ ಅನುಭವವನ್ನು ತಂದುಕೊಟ್ಟುವು. ಅದರಿಂದ ಅವನ ಮನಸು ಮುತ್ತಿಷ್ಟೂ ಬೇಸರಗೊಂಡಿತೇ ವಿನಾ ಅಂಟಿದ ಉದಾಸೀನತೆ ಹೋಗಲಿಲ್ಲ. ಜೀವನದಲ್ಲಿ ದಣಿವು ಅವನನ್ನು ನೆಲಕ್ಕಪ್ಪಳಿಸಿತು. 'ಇನ್ನಕ್ಕೆ ಬಂದುದೇ ಕಷ್ಟತಾಳಲು' ಎಂಬ ರುಕ್ಮಿಣಿಯ ಪೂರ್ವಸಿದ್ಧಾಂತಕ್ಕೆ ಹೂಂಗುಟ್ಟಿದ.

ಸುಬ್ಬಿಯ ಪ್ರಕರಣವೊಂದು ಅಚ್ಯುತನಿಗೆ ಕಳಂಕ ತರುವಂತಿದೆ. ಬರು-ಬರುತ್ತ 'ಸುಬ್ಬಿಯ ಕನವರಿಕೆಯೇ ಅವನ

ಉಳಿಗಾಲದ ಹಾದಿ' ಆಯಿತು. ಇದು ಮನುಷ್ಯ ಸಹಜ. ನಾದದ್ದಾದರೂ, ಅಚ್ಯುತನ ನೈತಿಕಜೀವನದ ಅಸಪ್ರಕರಣ. ನೇಸರಿ. ಲಕ್ಷ್ಮಮ್ಮ ಭಾಗ್ಯದ ಭೂಸೇವಿ. ಅವಳಲ್ಲಿದ್ದ ಅಪೂರ್ವ. ಬಾದ ತಾಳ್ಮೆಯೆ ಅಳೆಗೆ ಊರುಗೋಲಾಗಿತ್ತು. ಲಕ್ಷ್ಮಮ್ಮನ ನೇತೃತ್ವದಲ್ಲಿ ಅಚ್ಯುತನ ಬಾಳ್ವೆ ಸುಖಮಯವಾಗಿತ್ತು. ಸೀತೆ ಇಲ್ಲಿ ಒಂದು ಆರುಣಾಜನಕ ನೂರ್ತಿಯಾಗಿದ್ದಾಳೆ. ಬಡತನ. ದಲ್ಲಿಯೆ ಒಂದು ಸುಖಮಯವಾದ ಜೀವನವನ್ನು ಕಾಣುವ ಜೀವಿ ಅವಳು.

ಜಾನ್‌ಸನ್ ಮಾಸ್ತರರು ಒಬ್ಬ ಉತ್ತಮ ಹಾಸ್ಯಕಾರರು. ಅವರು ಕಾರಂತರ ಒಂದು ಭಾಗವಾಗಿದ್ದಾರೆ. ನಕ್ಕು ನಗಿಸುವ ನಗೆಗಾರರವರು. ಅವರ ಪಾತ್ರರಚನೆಯಲ್ಲಿ ಒಂದು ವಿಡಂಬ. ನೆಯ ಪರಿಯಿದೆ. ಕೊನೆಗೂ ಅವರು ಕೇವಲ ಹಾಸ್ಯಕಾರ. ರಾಗಿಯೇ ಉಳಿದಿದ್ದಾರೆ. ಅವರು ಯುದ್ಧದಲ್ಲಿ ಸೇರಿದ್ದು ಹಾಸ್ಯಕ್ಕಾಗಿಯೇ ಏನೋ! ಉಳಿದ ವ್ಯಕ್ತಿಗಳು ಅಚ್ಯುತನ ಸಮಾಜವನ್ನು ಪೂರ್ತಿಗೊಳಿಸುತ್ತವೆ.

ತಾಂತ್ರಿಕ ದೃಷ್ಟಿಯಂದ ಕಾರಂತರದು ಪಳಗಿದ ಕೈ. ಯಾವ ಭಾಗದಲ್ಲಿಯೂ ಕೃತ್ರಿಮತೆ ಕಂಡು ಬರುವುದಿಲ್ಲ. ಎಲ್ಲವೂ ಸಹಜವಾದದ್ದು; ಸ್ವಾಭಾವಿಕವಾದದ್ದು. ವಿವಿಧಸನ್ನಿ. ವೇಶಗಳನ್ನು ಒಂದೇ ಮುಷಿ ಯಲ್ಲಿ ಹಿಡಿದು ಕಾದಂಬರಿ. ಯಲ್ಲಿ ಸಮಗ್ರತೆಯನ್ನುಂಟು ಮಾಡಿದ್ದಾರೆ. 'ಮುಗಿದ. ಯುದ್ಧ' ದಲ್ಲಿ ಕಾರಂತರು ಸಮಾಜದ ತೇರೆಳೆದಿದ್ದಾರೆ. ಮುಂದೆ ಸರಿಯುವುದು ಒಂದು ವ್ಯಕ್ತಿಯಲ್ಲ; ಒಂದು ಸಮಾಜ. ಸಮಾಜದ ನಡಿಗೆ ಅನೆಯ ನಡಿಗೆ; ಕುದುರೆಯ ಓಟವಲ್ಲ. ಆ ನಡಿಗೆಯಲ್ಲಿ ಒಂದು ಸಮಗ್ರತೆಯಿದೆ ಎಲ್ಲಿಯೂ ತಗ್ಗು. ದಿನ್ನೆಗಳಿಲ್ಲ; ಸಮನಾದ ನೆಲ. ಆ ನೆಲದ ಮೇಲೆ ಸಾಗಿದ್ದು ಸಮಾ. ಜದ ತೇರು. ಅದರ ಗಾಲಿಗೆ ಸಿಕ್ಕುವ ಅಚ್ಯುತ. ಸಮಾಜದ ನೋಟ ನಿಷ್ಕರುಣ ನೋಟ. ತಾಯಿ ನೋಟವಲ್ಲ. ಕಾರಂತರ ತಂತ್ರ ಕಲಿಬಿಡಲ್ಲ. ಓದಿದುದಲ್ಲ. ಅಳವಾದ ಅನುಭವದಿಂದ ಬಂದ ಒಂದು ನಿರರ್ಗಳವಾದ ಝರಿ. ಇವರ ಗುರಿ ಚೇಡನ ಗುರಿ.

ಮುಗಿದ ಯುದ್ಧದಲ್ಲಿ ನಿಜವಾಗಿಯೂ ಕಾರಂತರು ಒಂದು ಖಂಡವಾದ ಮುಗಿಯದ ಯುದ್ಧವನ್ನೇ ಹೂಡಿದ್ದಾರೆ. 'ಏನು, ಒಳ್ಳೆಯತನದಿಂದ? ಮನುಷ್ಯನಿಗೆ ಒಳ್ಳೆಯತನವಿದ್ದರೇನು, ಬಾಳಿನಲ್ಲಿ ಅದೃಷ್ಟವಿಲ್ಲದಿರುವಾಗ? ಲಕ್ಷ್ಮಿ ಒಲಿಯದಿದ್ದ ಮನೆಗೆ ಇನ್ನೇನು ಸೌಖ್ಯವೂ ಉಳಿಯದು,' ಎಂಬುದೇ ಇಲ್ಲಿಯ ಮುಗಿಯದ ಯುದ್ಧ; ತಿಳಿಯದ ಒಗಟು. ಅಚ್ಯುತನು ಮಡಿದರೂ ಅವನ ಯುದ್ಧ ಮುಗಿದಿಲ್ಲ. ಸಾವಿರ ಸೇನೆಗಳು ಹೋದರೂ, ಸಾವಿರ ವಿಮಾನಗಳು ಉರುಳಿದರೂ, ನಗರಕ್ಕೆ ನಗರಗಳೇ ಧ್ವಂಸವಾದರೂ, ಅಚ್ಯುತನಿಗೆ ಅದರ ಭೀಕರತೆ ಕಾಣಿಸಲಿಲ್ಲ. ಅವನಿಗೆ ಯುದ್ಧದ ಉರಿ ಜೀನ್ನಾಗಿ ನಾಟಿದುದು ಬೆಲೆಗಳ ಏರಿಕೆಯಿಂದ. ಬಡತನ-ಶ್ರೀಮಂತತನಗಳ ತೀಕ್ಷ್ಣ ವ್ಯತ್ಯಾಸವು ಇಲ್ಲಿ ತುಂಬ ಕೊರೆಯುತ್ತಿದೆ. ಜಾನಸನ್‌ರು ಯಾವಾಗಲೂ 'ಇದಕ್ಕೆಲ್ಲ ದಕ್ಕಾ ಬರಬೇಕಯ್ಯಾ' ಎನ್ನುತ್ತಾರೆ. ಈ ರೀತಿ ಕಾರಂತರು ಹಿಂದುಸ್ತಾನಕ್ಕೆ ದಕ್ಕಾವನ್ನು ಆಮಂತ್ರಿಸುತ್ತಿದ್ದಾರೆ.

ಈ ಕಾದಂಬರಿಯು ಮೊದಲನೆಯ ವರ್ಗಕ್ಕೆ ಸೇರತಕ್ಕುದಾಗಿದೆ. ಅಳವಾದ ಅನುಭವ, ಹದವಾದ ರೀತಿ, ಸಂಭಾಷಣಾ. ಚಾತುರ್ಯ, ಕಾದಂಬರಿಕಾರನ ನೋಟ, ವೈಶಾಲ್ಯ ಇವೆಲ್ಲವೂ ಕಾರಂತರೊಂದಿಗೆ ಹೊಂದಿಕೊಂಡು ಬಂದಿವೆ. ಕಾರಂತರು ತಮ್ಮ 'ಮುಗಿದ ಯುದ್ಧ'ದಲ್ಲಿ ತಮ್ಮ 'ಎತ್ತರದಲ್ಲಿ' ಇದ್ದಾರೆ. ಬುದ್ಧಿ-ವಿಚಾರದ ಛತ್ರದಲ್ಲಿ ತಮ್ಮ ಅನುಭವದ ಎಳೆಯನ್ನು ಬಿಜ್ಜುತ್ತಿದ್ದಾರೆ. ಇನ್ನು ಮುಂದೆ ಬರುವ ಕಾದಂಬರಿಗಳು ಇದಕ್ಕೂ ಹೆಚ್ಚಿನ ಮಟ್ಟಕ್ಕೇರಲು ಅರ್ಹವಾಗುವುದರಲ್ಲಿ ಸಂಶಯವಿಲ್ಲ. 'ಕನ್ನಡಕ್ಕೊಬ್ಬನೇ ಕೈಲಾಸಂ' ಎಂಬಂತೆ 'ಕಾದಂಬರಿಗೊಬ್ಬನೇ ಕಾರಂತ' ಎಂದು ತೀರ್ಮಾನವಾಗದೇ?

ಸಂಜೀವಿನೀ ಪ್ರಕಾಶನ
ಹುಬ್ಬಳ್ಳಿ
ಸುಪರಿಚಿತ ಸಾಹಿತ್ಯಿಕರಾದ
ಶ್ರೀಮಾನ್ ಕಲಿವಂದಾನಿ ಗುರುರಾಜರಾಯರ
ಸಂಪಾದಕತ್ವದಲ್ಲಿ ಹೊರಬೀಡೆ.
೬೦೦ ಪುಟಗಳಷ್ಟು ಸರಸ ಸಾಹಿತ್ಯದ ಗ್ರಂಥಗಳನ್ನು ಜ
ರೂಪಾಯಿ ವಾರ್ಷಿಕ ವರ್ಗಣಿಯಲ್ಲಿ ಒದಗಿಸಲಾಗುವುದು.
ಬೇಗನೆ ಚಂದಾದಾರರಾಗಿರಿ!

ಬೆಳಗಾಂವಿಯಲ್ಲಿ ನಮ್ಮ ಏಜಂಟರು
ಎನ್. ಎಸ್. ಪ್ಯಾಟಿ
'ಕಥಾಕುಂಜ'
ಪುಸ್ತಕ ಭಾಂಡಾರ

ನಿಪ್ಪಾಣಿಯಲ್ಲಿ ನಮ್ಮ ಏಜಂಟರು:
ಶ್ರೀ. ಕೆ. ಎಸ್. ಬಳಗುರಗಿ
ನ್ಯೂಜ್ ಏಜಂಟ್
ಮತ್ತು ಪುಸ್ತಕ ವ್ಯಾಪಾರಿ

ಆಗಸ್ಟ್ ಹದಿನೈದು

ಶ್ರೀ. ಸಿ. ಬಿ. ಬಿಲ್ಲದ, ಇಟಗಿ

ಸ್ವಾತಂತ್ರ್ಯವನ್ನು ಸಂಪಾದಿಸಿದ ಬರಿಗೈಯ ಭಾರತವಿನ್ನು ಯಾವ ದಾರಿಯಿಂದ ಮುಂದುನರೆದು ತನ್ನ ಸುಖ–ಶಾಂತಿಗಳನ್ನು ಸಂವಾದಿಸಿಕೊಳ್ಳಬೇಕು? ಇದರ ವಿಚಾರವನ್ನು ಪ್ರತಿಯೊಬ್ಬ ಭಾರತೀಯನೂ ನಿಃಸ್ವಾರ್ಥಿಯಾಗಿ ಮಾಡಬೇಕು!

ಒಂದುವರೆ ಶತಕಕ್ಕಿಂತಲೂ ಹೆಚ್ಚು ಕಾಲ ಪರದಾಸ್ಯಾಂಧಕಾರದಲ್ಲಿ ಕಂಗೆಟ್ಟ ಭಾರತದ ಜನತೆ, ಇದೀಗ ಬಿಡುಗಡೆ ಹೊಂದಿ, ಹರ್ಷೋತ್ಸಾಹಗಳಿಂದ ಆಗಸ್ಟ್ ೧೫ರ ಸ್ವಾತಂತ್ರ್ಯ ಸೂರ್ಯನ ದರ್ಶನ ಪಡೆಯಿತು. ಅದೋ ಮೂಡಣದಿಶೆಯಲ್ಲಿ ಅರುಣೋದಯದ ಕೆಂಬಣ್ಣವು ಹರಿದು ಹೋಗಿ, ಬಾಲರವಿಯು ಒಡಮೂಡುತ್ತಲಿದ್ದಾನೆ. ಮಾತೃಭೂಮಿಯ ದಾಸ್ಯಶೃಂಖಲೆಗಳನ್ನು ಕಡಿದೊಗೆಯಲು ಯತ್ನಿಸಿ ಹುತಾತ್ಮರಾದ ಭಾರತ ವೀರರು ಅಂತರಿಕ್ಷದಲ್ಲಿ ನಿಂತುಕೊಂಡು, ತಮ್ಮ ಮನೋರಥವು ಸಿದ್ಧಿಸುವ ಈ ಭವ್ಯತಯೋಗವನ್ನು ಕಂಡು ಆನಂದ ಬಾಷ್ಪಗಳನ್ನುದುರಿಸುತ್ತಿದ್ದಾರೆ. ಪುಣ್ಯಭೂಮಿಯಾದ ಈ ಆರ್ಯಾವರ್ತದ ಬಿಡುಗಡೆಯು, ಪಾಶವೀ ಶಕ್ತಿಯನ್ನೆದುರಿಸಿದ ಆಧ್ಯಾತ್ಮಿಕ (ನೈತಿಕ) ಬಲದ ವಿಜಯವೆಂದು, ದೇವತೆಗಳು ಸಮಾಧಾನದ ಉಸಿರ್ಗರೆಯುತ್ತಿದ್ದಾರೆ. ಇಂದಿನ ಸ್ವತಂತ್ರ ಭಾರತದಲ್ಲಿ ಸುಳಿಯುವ ಮಂದಮಾರುತನು, ಭಾರತದ ದಿವ್ಯ ಸಂದೇಶವನ್ನು ಜಗತ್ತಿನ ಮೂಲೆ-ಮೂಲೆಗಳಿಗೂ ಮುಟ್ಟಿಸಿ, ಪಾಶವೀ ಶಕ್ತಿಗಳ ಸ್ವಾರ್ಥದ ಹೋರಾಟದಲ್ಲಿ ಸಿಲುಕಿ ಬಳಲಿ ಮೂರ್ಛಿತವಾದ ಮಾನವತೆಗೆ ಜೈತನ್ಯವೀಯಲೆಂದು ಹರಸುತ್ತಿದ್ದಾನೆ!

ಮಾತೃಭೂಮಿಯ ದಾಸ್ಯವಿಮೋಚನೆಗಾಗಿ ಅವಿಶ್ರಾಂತವಾಗಿ ಹೋರಾಡಿದ ನರಕೇಸರಿ ನೇತಾಜಿ ಸುಭಾಷರ ಆಝಾದ್ ಹಿಂದ್ ಸೈನ್ಯದ ಮೇಲೆ ಗುಂಡಿನ ಮಳೆಗರೆದ ಲಾರ್ಡ್ ಮೌಂಟ್ ಬ್ಯಾಟನ್‌ರ ಕೈಗಳಿಂದು ನಮ್ಮ ರಾಷ್ಟ್ರಧ್ವಜಕ್ಕೆ ವಂದನೆ ಸಲ್ಲಿಸುತ್ತಿವೆ. ಸನ್ ೧೮೫೭ರ ಸ್ವಾತಂತ್ರ್ಯ ಯುದ್ಧದ ಕಾಲದಿಂದಲೂ 'ಚಲೋ ದಿಲ್ಲಿ' ಎಂದು ಪರಿಸುತ್ತಿದ್ದ ಸ್ವಾತಂತ್ರ್ಯಯೋಧರ ಮಂತ್ರವಿಂದು ಫಲಪ್ರದವಾಗಿ, ಪೌರಾಣಿಕ ಕಾಲದಿಂದಲೂ ಭಾರತದ ರಾಜಧಾನಿಯಾಗಿ ಮೆರೆದ ದಿಲ್ಲಿ ಪಟ್ಟಣವಿಂದು ನಮ್ಮ ಹಸ್ತಗತವಾಗಿದೆ!! ಅದೇ ದಿಲ್ಲಿಯ ಇತಿಹಾಸ ಪ್ರಸಿದ್ಧವಾದ ಕೆಂಪುಕೋಟೆಯ ಮೇಲೆ—ಭಾರತದ ಹಿರಿಮೆಯನ್ನು ಜಗತ್ತಿಗೆ ಸಾರುವಂತೆ—ಸ್ವತಂತ್ರ ಭಾರತದ ಧ್ವಜವಿಂದು ಆಢ್ಯತೆಯಿಂದ ಹಾರುತ್ತಿದೆ! ಇದನ್ನು ಕಂಡು ಪೂಜ್ಯ ಗಾಂಧೀಜಿ, ಪಂ. ನೆಹರು, ಮೌಲಾನಾ ಆಝಾದ್, ಸರದಾರ ಪಟೇಲ್ ಮೊದಲಾದ ಮುಖಂಡರ ಹೃದಯದ ಸಾಗರಗಳಲ್ಲಿ ಸಂತೃಪ್ತಿಯ ಅಲೆಗಳು ಏಳುತ್ತಿವೆ! ಪ್ರತಿಯೊಬ್ಬ ಭಾರತೀಯನ ಕಣ್ಣುಗಳಲ್ಲಿಯೂ ಆನಂದಾಶ್ರುಗಳು ಉಕ್ಕುತ್ತಿವೆ!

ಆದರೆ ಸದ್ಯ ನಾವು ಈ ಸಂತೋಷ-ಸಂಭ್ರಮಗಳಲ್ಲಿಯೇ ಮೈಮರೆಯುವಂತಿಲ್ಲ. ಏಕೆಂದರೆ ನಾವಿನ್ನೂ ಕ್ರಮಿಸಲಿರುವ ಮಾರ್ಗವು ಈಗ ನಡೆದು ಬಂದುದಕ್ಕಿಂತ, ಹೆಚ್ಚು ಕಂಟಕಮಯವಾಗಿದೆ! ಬೀಕರವಾಗಿದೆ!! ಆಡಿಗಡಿಗೆ ಎಡರು-ತೊಡರುಗಳನ್ನೆದುರಿಸುತ್ತ, ಇಂದಿನ ದರಿದ್ರ-ಬಲಹೀನ ಭಾರತವನ್ನು ಸುಸಂಪನ್ನ—ಬಲಿಷ್ಠ ರಾಷ್ಟ್ರವನ್ನಾಗಿ ಮೂರ್ಪಡಿಸಬೇಕಾಗಿದೆ. ಇನ್ನೂ ನಮ್ಮಲ್ಲಿಯ ಜಾತೀಯ ಭಾವನೆ ಸಂಪೂರ್ಣವಾಗಿ ಅಳಿದು ಹೋಗಿಲ್ಲ. ಬಹುಜನ ಸಮಾಜವಾದರೋ ನಿರಕ್ಷರಿ ಹಾಗೂ ರಾಜಕೀಯ ದೃಷ್ಟಿಯಿಂದ ತೀರ ಅಪ್ರಬುದ್ಧವಿದೆ, ಹಾಗೂ ನಮ್ಮಲ್ಲಿಯ ಬಹುಸಂಖ್ಯಾಕ ಕಾರ್ಯಕರ್ತರು ಜನತೆಯ ಹಿತಕ್ಕಿಂತ ವೈಯಕ್ತಿಕ ಪ್ರತಿಷ್ಠೆ, ಸ್ಥಾನ-ಮಾನಗಳಿಗೆ ಹೆಚ್ಚು ಮಹತ್ತ್ವವನ್ನೀಯುವಾಗಿದೆ. ಇದರ ಪರಿಣಾಮವಾಗಿ ಪ್ರತಿಸ್ಪರ್ಧಿ ಸಂಘ-ಸಂಸ್ಥೆಗಳು ಅಲ್ಲಲ್ಲಿ ತಲೆಯೆತ್ತುತ್ತಿವೆ. ಇದು ಅರಿತ ಹಲವರು, ಜನಸಾಮಾನ್ಯರಲ್ಲಿಯ ಜಾತೀಯ ಭಾವನೆಯನ್ನು ಉದ್ರೇಕಗೊಳಿಸಿ, ತಮಗಾಗಿ ಸ್ಥಾನ-ಮಾನಗಳನ್ನು ಗಳಿಸಿಕೊಂಡಂತೆ, ಇನ್ನು ಮುಂದೆ ಜನತೆಯಲ್ಲಿಯ ವರ್ಗೀಯ ಭಾವನೆಯನ್ನು ಉದ್ರೇಕಗೊಳಿಸಿ, ವರ್ಗಕಲಹಗಳನ್ನೆಬ್ಬಿಸಿ ತಮ್ಮ ಬೇಳೆ ಬೇಯಿಸಿಕೊಳ್ಳುವ ಪ್ರಯತ್ನಗಳಾಗುವುದು ತೀರ ಸಂಭವನೀಯವಿದೆ. ಈಗಾಗಲೇ ಅಲ್ಲಲ್ಲಿ ಸಂಘಟಿಸಲ್ಪಡುತ್ತಿರುವ ಸಂಪ್ರದಾಯಗಳು ಇದರ ಪೂರ್ವಸೂಚನೆಯಾಗಿವೆ. ದೇಶಹಿತವನ್ನಲಕ್ಷಿಸಿ, ಕೇವಲ ವರ್ಗಹಿತಕ್ಕಾಗಿ ನಡೆಯಿಸಲ್ಪಡುತ್ತಿರುವ ಇಂತಹ ಚಟುವಟಿಕೆಗಳನ್ನುದ್ದೇಶಿಸಿ, ಮಹಾತ್ಮಾಜಿಯವರು ತಮ್ಮ ಇತ್ತೀಚಿಗಿನ ಪ್ರಾರ್ಥನೋತ್ತರ ಭಾಷಣದಲ್ಲಿ ತೆಗೆದ ಉದ್ಗಾರಗಳು ಮನನೀಯವಾಗಿವೆ.

ರಷ್ಯದಂತೆ ಇಲ್ಲಿಯೂ ಜನತಾಕ್ರಾಂತಿಯನ್ನುಂಟುಮಾಡಿ ಸಮಾಜ ಸತ್ತಾವಾದವನ್ನು ಪ್ರಸ್ಥಾಪಿಸುವ ಕನಸು ಕಾಣುತ್ತಿರುವ ರಷ್ಯದ ಅಂಧಾನುಯಾಯಿಗಳಾದ ಉಗ್ರವಾದಿಗಳೂ, ನಮ್ಮಲ್ಲಿದ್ದಾರೆ. ಆದರೆ ನಮ್ಮಲ್ಲಿಯ ಬಹುಜನ ಸಮಾಜದ ರಾಜಕೀಯ ಅನಭಿಜ್ಞತೆ ಹಾಗೂ ದೇಶದ ಎಲ್ಲೆಡೆಗಳಲ್ಲಿಯೂ ವ್ಯಾಪಿಸಿರುವ ಪ್ರತಿಗಾಮಿ ಸಂಸ್ಥಾನಗಳ ಅಸ್ತಿತ್ವ, ರಷ್ಯದ ಸಂಪರ್ಕವು ಭಾರತಕ್ಕೆ ಒದಗದಂತೆ ಪಾಕಿಸ್ತಾನದಲ್ಲಿ ಮಂಡೆಯೂರಿ ಕುಳಿತ ಬ್ರಿಟಿಷ್ ಸತ್ತೆ, ಹಾಗೂ ಅಮೇರಿಕೆಯ ಆಂತರಾಷ್ಟ್ರೀಯ ವರ್ಚಸ್ಸು—ಇವುಗಳನ್ನೆಲ್ಲ ಗಮನಿಸಿದರೆ, ನಮ್ಮ ಮಿತ್ರರು ಭಾವಿಸಿದಂತೆ ರಷ್ಯದ ಹೆಜ್ಜೆಯಲ್ಲಿ ಹೆಜ್ಜೆಯಿ

ನ್ನಿಟ್ಟು ಯಶಸ್ವಿಯಾಗುವುದು ಮುನ್ನವರಿಕೆಯಾಗದಿರದು. ನಾವು ಈ ತರದ ಪ್ರಯತ್ನದಲ್ಲಿ ತೊಡಗಿದರೆ, ನಮ್ಮ ರಾಷ್ಟ್ರದ ಪುನರ್ನಿರ್ಮಾಣಕ್ಕೆ ಅವಶ್ಯವಿರುವ ಸಹಾಯ-ಸಲಕರಣೆಗಳನ್ನು ಅಮೇರಿಕೆ ಹಾಗೂ ಇನ್ನಿತರ ಪಾಶ್ಚಿಮಾತ್ಯ ರಾಷ್ಟ್ರಗಳಿಂದ ದೊರೆಕಿಸುವುದು ದುಸ್ಸಾಧ್ಯವಾದೀತು. ಅಲ್ಲದೆ ಈ ತರದ ಅಂತಃಕಲಹದಿಂದ, ಮೊದಲೇ ದುರ್ಬಲವಾದ ಭಾರತವು ಮತ್ತಷ್ಟು ಜರ್ಜರಿತವಾಗಿ, ಯಾವುದೊಂದು ಭುಜ ಕ್ಷೀಣ ಬಲಾಢ್ಯ ರಾಷ್ಟ್ರದ ಕೈಗೊಂಬೆಯಾಗಬಹುದು. ನೆರೆಯ ಚೀನಾ ರಾಷ್ಟ್ರದ ದುರವಸ್ಥೆಯನ್ನು ನೋಡಿದರೆ ಸಾಕು; ಇದಕ್ಕೆ ಬೇರೆ ದೃಷ್ಟಾಂತಗಳೇ ಬೇಕೆನಿಸುವುದಿಲ್ಲ!

ಮೇಲಿನ ವಿವೇಚನೆಯಿಂದ ನಮ್ಮ ದೇಶದ ಪ್ರಕೃತ ಪರಿಸ್ಥಿತಿಗೆ ಕ್ರಾಂತಿಗಿಂತ (Revolution) ಉತ್ಕ್ರಾಂತಿಯೇ (Evolution) ಹೆಚ್ಚು ಸರಿಹೋಗುವಂತೆ ತೋರುತ್ತದೆ. ಅದಕ್ಕಾಗಿ ಎಲ್ಲ ವರ್ಗಗಳಲ್ಲಿಯ ಪುರೋಗಾಮಿ ವಿಚಾರಗಳನ್ನೊಡಗೊಂಡ, ರಾಷ್ಟ್ರಹಿತಕ್ಕೆ ಪ್ರಾಧಾನ್ಯ ಕೊಟ್ಟು ಮುನ್ನಡೆಯಿಸುವ—ಒಂದು ಸಂಸ್ಥೆಯ ಆವಶ್ಯಕತೆಯೆನಿಸುತ್ತಿದೆ. ಈ ಭಾರ ಹೊರಲು ಕಾಂಗ್ರೆಸ್ ಸಂಸ್ಥೆಯೇ ಕಾಯಕಲ್ಪ ಹೊಂದಿ ಮುಂದಾಗದೆ ವಿಧಿಯಿಲ್ಲ! ತಾರ್ಕಿಕ ದೃಷ್ಟಿಯಿಂದ ಈ ವಿಚಾರ ಸರಣಿಯು, ಹಲ-ಕೆಲವರಿಗೆ ಸಮರ್ಪಕವೆನಿಸಲಿಕ್ಕಿಲ್ಲ. ಏಕೆಂದರೆ ಪರಸ್ಪರ ವಿರೋಧಕ ಹಿತಸಂಬಂಧಗಳುಳ್ಳ ವರ್ಗಗಳನ್ನೊಡಗೊಂಡ ಸಂಸ್ಥೆಯ ಮುನ್ನಡೆ ಹಾಗೂ ಯಶಸ್ವಿತೆಗಳ ಬಗೆಗೆ ಸಂದೇಹವುಂಟಾಗುವುದು ಸಹಜವಿದೆ. ಆದರೆ ನಿಃಶಸ್ತ್ರ ಭಾರತವೆಂದು, ಜಗತ್ತಿನ ಇತಿಹಾಸದಲ್ಲಿ ಎಲ್ಲಿಯೂ ನೋಡದ ಕೇಳದ ವಿಶಿಷ್ಟ ರೀತಿಯಲ್ಲಿ, ಬಲಾಢ್ಯ ಸಾಮ್ರಾಜ್ಯ ಸತ್ತೆಯನ್ನು ಎದುರಿಸಿ ಯಶಸ್ವಿಯಾದುದನ್ನು ನೆನೆದರೆ, ಈ ನವಪ್ರಯೋಗದಲ್ಲಿಯೂ ನಾವು ಸಂಪೂರ್ಣ ಯಶಸ್ವಿಗಳಾಗಬಲ್ಲೆವೆಂದು ಅನಿಸಬಹುದಾಗಿದೆ!

ನವಭಾರತದ ನಿರ್ಮಾಣಕಾರ್ಯಕ್ಕೆ ಕೇವಲ ಜನಬಲವೊಂದೇ ಸಾಲದು! ಅದಕ್ಕೆ ಧನಬಲ-ಬುದ್ಧಿಬಲಗಳ ಜೋಡು ಬೇಕು! ಅದರಿಂದ ಧನಿಕವರ್ಗವೂ, ಬುದ್ಧಿಜೀವಿಗಳೂ ಈ ರಾಷ್ಟ್ರೀಯ ಸಂಸ್ಥೆಯ ಮುಖಾಂತರವಾಗಿ ಸೇವೆ ಸಲ್ಲಿಸಲು ಮುಂದಾಗಬೇಕು! ಯಾವುದೇ ಕಾರಣದಿಂದ ಈ ಸಂಸ್ಥೆಯ ಕಡೆಗೆ ಧನಿಕರು ಸಾಶಂಕದೃಷ್ಟಿಯಿಂದ ನೋಡುವ ಕಾರಣವಿಲ್ಲ! ಏಕೆಂದರೆ ಈ ಸಂಸ್ಥೆಯ ಉದ್ದೇಶವು ದ್ವೇಷಭಾವನೆಯಿಂದ ಯಾವುದೊಂದು ವರ್ಗದ, ಮೂಲೋತ್ಪಾಟನ ಮಾಡುವುದಿರದೆ, ಜನಸಾಮಾನ್ಯರ ಹೊಟ್ಟೆಬಟ್ಟೆಯ ಸಮಸ್ಯೆಯನ್ನು ಬಿಡಿಸುವುದಿದೆಯೆಂಬುದನ್ನು, ಹಾಗೂ ಈ ಸಮಸ್ಯೆಯ ಪರಿಹಾರಕ್ಕೆ ಅತ್ಯವಶ್ಯವೆನಿಸಿದ ತ್ಯಾಗವನ್ನು ಮಾತ್ರ ಅದು ಧನಿಕರಿಂದ ಅಪೇಕ್ಷಿಸುವುದೆಂಬುದನ್ನು ಗಮನದಲ್ಲಿಡಬೇಕು! ಧನಿಕವರ್ಗವು ಸತ್ತೆ-ಸಂಪತ್ತುಗಳ ಬಲದಿಂದ ಸಾಮಾನ್ಯ ವರ್ಗವನ್ನು ಕೆಲ ದಿನಗಳ ಮಟ್ಟಿಗೆ ತಮ್ಮ ಆಧೀನದಲ್ಲಿಟ್ಟುಕೊಳ್ಳಬಹುದು; ಆದರೆ ಜನರ ಹತ್ತಿಕ್ಕಲ್ಪಟ್ಟ ಆಶೆ-ಆಕಾಂಕ್ಷೆಗಳು ಒಂದಿಲ್ಲೊಂದು ದಿನ ಸ್ಫೋಟವಾಗದಿರವು. ಇದಲ್ಲದೆ ಜನತೆಯು ಈ ಬಗೆಯ ಅತೃಪ್ತ ಭಾವನೆಗಳನ್ನೇ ತಮ್ಮ ಆಯುಧವನ್ನಾಗಿರಿಸಿಕೊಂಡು, ಸಮಾಜವಿರೋಧಿಗಳು ವರ್ಗಕಲಹಗಳನ್ನೆಬ್ಬಿಸಿ, ಸಮಾಜದ ನೆಮ್ಮದಿಗೆ ಭಂಗತರುವರಲ್ಲದೆ, ದೇಶದ ಪ್ರಗತಿಯನ್ನು ಕುಂಠಿತಗೊಳಿಸಬಹುದು. ಈ ತರದ ದುಃಸ್ಥಿತಿಯೊದಗಬಾರದೆಂದು ಅಚ್ಛಿಸುತ್ತಿದ್ದರೆ, ಸಮೃದ್ಧಭಾರತ ಕಟ್ಟುವ ಕಾರ್ಯದಲ್ಲಿ ಧನಿಕರೂ, ಬುದ್ಧಿಜೀವಿಗಳೂ ಪ್ರಧಾನಪಾತ್ರ ವಹಿಸಿ ಜನತೆಯ ವಿಶ್ವಾಸ ಸಂಪಾದಿಸಬೇಕು. ತಮ್ಮ ತಮ್ಮ ಪಾಲಿನ ಸೇವೆ ಸಲ್ಲಿಸಿ, ರಾಷ್ಟ್ರವನ್ನು ಸಮೃದ್ಧಗೊಳಿಸುವುದರಲ್ಲಿಯೆ ಸಮಗ್ರದೇಶದ ಹಿತವಿದೆ ಎಂಬುದನ್ನೂ ಹಾಗೂ ಇದರಲ್ಲಿಯೆ ಪ್ರತಿಯೊಂದು ವರ್ಗದ ಹಿತವೂ ಅಡಕವಾಗಿದೆ ಎಂಬುದನ್ನೂ ಎಲ್ಲರೂ ಗಮನದಲ್ಲಿಡಬೇಕು!

ನಾವು ಈ ಸಮಯದಲ್ಲಿ ಆಂತರರಾಷ್ಟ್ರೀಯ ಪರಿಸ್ಥಿತಿಯನ್ನು ಕಡೆಗಣಿಸುವಂತಿಲ್ಲ. ಈಗಿನ ಕಾಲಕ್ಕೆ 'ನಮ್ಮಷ್ಟಕ್ಕೆ ನಾವು' ಎಂಬ ಕೂಪ ಮಂಡೂಕ ವೃತ್ತಿಯು ಅತ್ಯಘಾತಕವೆನಿಸುವುದು. ಇದೀಗ ಇನ್ನೂ ದ್ವಿತೀಯ ಮಹಾಯುದ್ಧದ ಜ್ವಾಲೆಗಳು ಆರುತ್ತಿರುವಾಗಲೇ, ತೃತೀಯ ಯುದ್ಧದ ಕಾರ್ಮೋಡಗಳು ಜಾಗತಿಕ ಅಂತರಿಕ್ಷದಲ್ಲಿ ಕಲೆಯುತ್ತಿವೆ. ಶಾಂತಿ, ಸಂರಕ್ಷಣೆಯ ಹೆಸರಿನಲ್ಲಿ ಒಂದೆಡೆಗೆ ಅಮೇರಿಕೆ ಹಾಗೂ ಆದರ ಪ್ರಭಾವಳಿಯೊಳಗಿನ ರಾಷ್ಟ್ರಗಳು ಯುದ್ಧದ ಪೂರ್ವಸಿದ್ಧತೆ ನಡೆಯಿಸಿದ್ದರೆ, ಇನ್ನೊಂದೆಡೆಗೆ ರಷ್ಯ ಹಾಗೂ ಆದರ ಬೆಂಬಲಿಗ ಬಾಲ್ಕನ್ ರಾಷ್ಟ್ರಗಳು ಸ್ವಸಂರಕ್ಷಣೆಯ ಹೆಸರಿನಲ್ಲಿ ಇದೇ ಬಗೆಯ ಯುದ್ಧ ಸನ್ನಾಹ ನಡೆಯಿಸಿವೆ. ಜಗತ್ತಿನಲ್ಲಿಯ ಈ ಎರಡೂ ಪ್ರಮುಖ— ಪರಸ್ಪರ ವಿರೋಧಿ— ತತ್ತ್ವಗಳಾದ ಸರ್ವಾಧಿಕಾರಿ-ಸಮಾಜ ಸತ್ತಾತ್ಮಾವಾದ ಹಾಗೂ ಭಾಂಡನಲುರಾಹಿತ್ಯ-ಪ್ರಜಾಪ್ರಭುತ್ವ ಇವುಗಳ ಸುವರ್ಣಮಧ್ಯವನ್ನು ಸಾಧಿಸಿ, ಸ್ವತಂತ್ರ ಭಾರತವಿಂದು, ಜಗತ್ತಿನ ಮಾನವತೆಯ ಅಧಃಪತನವನ್ನು ತಡೆಯುವ ಶಾಂತಿದೂತನ ಉದಾತ್ತ ಪಾತ್ರವನ್ನು ವಹಿಸಬೇಕಾಗಿದೆ.

ಈ ಬಗೆಯಾಗಿ ಪ್ರಬಲ ನವಭಾರತದ ನಿರ್ಮಾಣ ಕಾರ್ಯದ ಜೊತೆಗೇ ಸಿಡಿದು ಹೋದ ಭಾರತದ ಭಾಗಗಳನ್ನು ಒಂದುಗೂಡಿಸಲು ಯತ್ನಿಸಬೇಕಾಗಿದೆಯಲ್ಲದೆ, ಒಂದು ಘನತೆವೆತ್ತ ರಾಷ್ಟ್ರದ ನಾಗರಿಕರೆಂದು ಜಗತ್ತಿನಲ್ಲಿ ಶಾಂತಿ ಸಂಸ್ಥಾಪನೆಗಾಗಿ ಸಲ್ಲಬೇಕಾದ ಸೇವೆಯು ಗುರುತರವಾದ ಹೊಣೆಯೂ ನಮ್ಮ ಮೇಲಿದೆ ಎಂಬುದನ್ನು ಸ್ಮರಿಸಿ, ನಮ್ಮ ಮಾತೃಭೂಮಿಯ ಉಜ್ವಲ ಪರಂಪರೆಗೆ ಕಲಂಕವೊದಗದಂತೆ, ಧೀರೋದಾತ್ತ ಭಾವನೆಯಿಂದ ಮುಂದಡಿ ಇಡಲು, ಇಂದಿನ ಈ ಶುಭಸಮಯದಲ್ಲಿ, ಸ್ವತಂತ್ರ ಭಾರತದ ನಾಗರಿಕರಾದ ನಾವೆಲ್ಲರೂ ಪ್ರತಿಜ್ಞಾಬದ್ಧರಾಗೋಣ.

ಜಯ್ ಹಿಂದ್!

ಪ್ರತಿಬಿಂಬ ★

"ಮೋಕ್ಷೀ" ವಿಜಾಪೂರ

(ಸಣ್ಣಕತೆ)*

ಕಾಣದ ಕಣ್ಣು ಸತ್ಯದ ಸಂದರ್ಶನಕ್ಕಾಗಿ ಹಾರಯಿಸುತ್ತದೆ. ಸತ್ಯವನ್ನು ಕಂಡ ಕಣ್ಣು ಜೀವನದ ಸದುಪಯೋಗವನ್ನು ಬಯಸುತ್ತದೆ. ಸತ್ಯದ ಆಭಾಸ ಜೀವನನಾಶಕ್ಕೆ ಕಾರಣವಾಗುತ್ತದೆ....ಈ ಮೂರು ಮಾತುಗಳನ್ನು ಹೇಳಿವೆ ಇಲ್ಲಿಯ ಮೂರು ಕನ್ನಡಿಗಳು!

★

ನಾನೊಬ್ಬ ಪುರಾಣವಸ್ತುಗಳ ಅಂಗಡಿಕಾರ. ನನ್ನ ಆಯುಷ್ಯವನ್ನೆಲ್ಲ ಈ ವ್ಯವಸಾಯದಲ್ಲಿಯೇ ಹಾಕಿದುದರಿಂದ, ಇಷ್ಟೀ ಜೆಗೆ ಈ ನಿರ್ಜೀವ ವಸ್ತುಗಳ ಭಾಷೆ ನನಗೆ ತಿಳಿಯಹತ್ತಿದೆ. ಈ ಭಾಷೆ ಪ್ರತಿಯೊಬ್ಬ ಸಹೃದಯ ಮತ್ತು ಸಂವೇದನಶೀಲ ಮನುಷ್ಯನಿಗೆ ಅಲ್ಪಾಯಾಸದಿಂದಲೇ ತಿಳಿಯಬಹುದು—ಎಂದು ನನ್ನ ಮತ. ಹೀಗೆಯೆ ಒಂದು ದಿನ ನಾನು ನನ್ನ ಅಂಗದಿಯಲ್ಲಿ ಗ್ರಾಹಕರ ಹಾದಿಯನ್ನು ಕಾಯುತ್ತ ಕುಳಿತಿದ್ದೆ. ಜೀಸಗೆಯ ದಿನಗಳಿದ್ದುದರಿಂದ ಮತ್ತು ಪಕ್ಕದ ಹಳ್ಳಿಯಲ್ಲಿ ಜಾತ್ರೆಯಿದ್ದು. ದರಿಂದ ಬೀದಿಯು ಮೇಲೆ ವಿಶೇಷ ಜನಸಂದಣಿ ಇರಲಿಲ್ಲ. ನನ್ನ ಅಂಗಡಿಯಂತೂ ಒಂದು ಸಂದಿಯಲ್ಲಿದ್ದಿತು. ಹನ್ನೆರಡು ಗಂಟೆಗಳನ್ನು ಹೂಡೆದ ಗಂಟೆಯು ಧ್ವನಿ ಇನ್ನೂ ವಾತಾವರಣದಲ್ಲಿ ವಿಲೀನವಾಗಿದ್ದಿಲ್ಲ. ಬೀದಿಯಲ್ಲಿ ಹೋಗಿ ನೋಡಿದೆ. ಸವಿಾಪದಲ್ಲಿ ಎಲ್ಲಿಯೂ ಮನುಷ್ಯನ ವಾಸನೆ ಇದ್ದಿಲ್ಲಿ. ಹಗಲಿನಲ್ಲೆಲ್ಲ "ಕಾವ್, ಕಾವ್" ಎಂದು ಕೂಗುವ ಕಾಗೆಗಳು ಕೂಡ ವಿಶ್ರಾಂತಿಗಾಗಿ ನೆರಳಿನಲ್ಲಿ ಕುಳಿತಿದ್ದುವು. ಮತ್ತೆ ನಾನು ನನ್ನ ಸ್ಥಳದಲ್ಲಿ ಬಂದು ಕುಳಿತೆ. ನನ್ನ ಅಂಗಡಿಯ ಒಳಗಿನ ಕೋಣೆಯಲ್ಲಿ ಯಾರೋ ಗುಜುಗುಜು ಮಾತನಾಡತೊಡಗಿದಂತೆ ಕೇಳಿಸಿತು. ಆ ಕೋಣೆಯಲ್ಲಿ ಹಳೆಯ ಕುರ್ಚಿಗಳು, ಕಟ್ಟಿಗೆಯ ಸಾಮಾನುಗಳು ಇವನ್ನೆಲ್ಲ ಬಗೆದಿದ್ದೆ. ಕಾಲು ಸಪ್ಪಳವಾಗದಂತೆ ನಾನು ಅಲ್ಲಿಯೇ ನಿಂತು ಮಾತುಗಳನ್ನು ಕೇಳಹತ್ತಿದೆ. ಬಾಗಿಲ ಸಂದಿಯಿಂದ ಒಳಗೆ ಹಣಿಕಿಕ್ಕಿ ನೋಡಿದೆ. ಒಳಗೆ ಯಾರೂ ಇರಲಿಲ್ಲ. ಹಾಗಾದರೆ ಈಗ ಮಾತನಾಡುವವರು ಯಾರು?

ನಾನು ಶಕ್ಯವಿದ್ದಷ್ಟು ಕಣ್ಣು ಹಿಗ್ಗಿಸಿ ನೋಡಿದೆ. ಗ್ರಾಹಕರ ಆಕರ್ಷಣೆಗೆಂದು ಅಲ್ಲಿ ಮೂರು ಕನ್ನಡಿಗಳನ್ನು ಇಟ್ಟಿದ್ದೆ. ಒಂದರಿಂದೊಂದು ಹತ್ತಿರ ಇರಿಸಿದುದರಿಂದ, ತಮ್ಮತಮ್ಮಲ್ಲಿಯೇ ಅವು ಮಾತನಾಡಹತ್ತಿದ್ದುದು ನನಗೆ ಆ ಮೇಲೆ ತಿಳಿದು ಬಂದಿತು.

ಮೊದಲನೆಯ ಕನ್ನಡಿಯು ಹಳೆಯದೇ ಇದ್ದಿತು. ಹದಿನಾರನೆಯ ಲುಯಿಯು ಕಾಲದ ಕನ್ನಡಿ ಇದ್ದುದರಿಂದ, ಅದಕ್ಕೊಂದು ಐತಿಹಾಸಿಕ ಮಹತ್ತ್ವವಿದ್ದಿತು. ಅಲ್ಲದೆ ಅದನ್ನು ಮಹಪ್ರಯಾಸದಿಂದ ದೊರಕಿಸಿದ್ದೆ. ಈ ಕನ್ನಡಿಗಾಗಿ ನಾನು ಬಹಳ ದುಡ್ಡನ್ನು ಸುರಿದಿದ್ದೆ. ಈ ಕನ್ನಡಿಯ ರಚನೆ ತುಂಬ ಕುಶಲತೆಯದಿದ್ದಿತು. 'ಒಂದು ಸುಂದರವಾದ ರಂಗಮಹಲಿನಲ್ಲಿ, ಒಬ್ಬ ಸೌಂದರ್ಯಕಾಲಿನಿಯು ಹತ್ತಿರ ಈ ಕನ್ನಡಿಯು ಬಲವು ವರ್ಷಗಳಂತೂ ವಾಸಮಾಡಿದಲೇ ಬೇಕು' ಎಂದು ನೋಡಿದವರಿಗೆ ಎನಿಸದೆ ಇರುತ್ತಿರಲಿಲ್ಲ. ಕನ್ನಡಿಯ ಚೌಕಟ್ಟು ಲಕಿಲಕಿಯಾಗಿದ್ದರೂ, ಅದರ ಮೇಲಿನ ಬಂಗಾರದ ಕೆಲಸ ಯಾರನ್ನಾದರೂ ಆಕರ್ಷಿಸುವಂತಿತ್ತು. ಉಳಿದ ಎರಡು ಕನ್ನಡಿಗಿಂತ ವಯಸ್ಸಿನಿಂದಿದು ಹಿರಿಯದು; ಎದರೆ ಆಕಾರದಲ್ಲಿ ಮಧ್ಯಮ. ಎರಡನೆಯದು ಆ ಮಾನದಿಂದ ಕಣ್ಣಿದಿತ್ತು. ಇದರ ಸ್ಥಾಪನೆಯನ್ನು ಒಂದು ವೇಷಭೂಷಣದ ಮೇಜಿನ ಮೇಲೆ ಮಾಡಿತ್ತು. ಇದರ ಆಕಾರವು ದೀರ್ಘಗೋಲಾಕಾರವಿದ್ದಿತು. ಈ ಕನ್ನಡಿಯಾದರೂ ಎಷ್ಟೋ ಸಂಸ್ಮರಣೀಯ ಲಲನಾಮಣಿಗಳಿಗೆ ತನ್ನ ಹೃದಯದಲ್ಲಿ ಸ್ಥಾನವನ್ನು ಕೊಟ್ಟಿತ್ತು. ಮೂರನೆಯ ಕನ್ನಡಿಯು ಎಕಾರದಲ್ಲಿ ಈ ಎರಡೂ ಕನ್ನಡಿಗಳ ಅಜ್ಜನೆನಿಸಿಕೊಳ್ಳಲಿಕ್ಕೆ ಒಪ್ಪುವಂತಿತ್ತು. ಆದರೆ ಅದರ ಚೌಕಟ್ಟು, ವೇಷಭೂಷಣ, ಮತ್ತು ಸ್ಥೂಲಶರೀರ ಇವುಗಳನ್ನು ನೋಡಿದರೆ, ಸ್ತ್ರೀ ಸೌಂದರ್ಯದ ಸಹವಾಸ ಇದಕ್ಕೆ ವಿಶೇಷವಾಗಿರಲಿಲ್ಲವೆಂದು ಭಾವಿಸುವಂತಿತ್ತು.

ತಮ್ಮತಮ್ಮ ಹಳೆಯ ನೆನಪುಗಳನ್ನು ಹೇಳುವುದರಲ್ಲಿ ಈ ದರ್ಪಣತ್ರಯವು ಮೈಮರೆತು ಬಿಟ್ಟಿದ್ದಿತು. ಹಗುರಾಗಿ ತಿರುಗಿದೆ; ಸವಿೀಪದಲ್ಲಿ ಇರುವ ಒಂದು ಆರಾಮ ಕುರ್ಚಿಯ ಮೇಲೆ ಪವಡಿಸಿದೆ. ನಮಗೆ ನಿರ್ಜೀವವೆನಿಸುವ ಈ ವಸ್ತುಗಳ ಹೃದಯ, ಜೀವಸೃಷ್ಟಿಯ ರಾಜನೆಂದು ಹೆಸರು ಪಡೆದಿರುವ ಮಾನವನ ಹೃದಯಕ್ಕಿಂತಲೂ ವಿಶಾಲ ಮತ್ತು ಸಂವೇದನಶೀಲ ಇರುತ್ತದೆಂಬುದು, ನನ್ನ ಮನಸ್ಸಿನಲ್ಲಿ ಬಾರದೆ ಹೋಗಲಿಲ್ಲ.

* *

ವಯಸ್ಸಿನಿಂದಲೂ ಮತ್ತು ಆಕಾರದಲ್ಲಿಯೂ ಕಿರಿಯದಿದ್ದ ಪ್ರಸಾಧನಪೀಠದ ಮೇಲಿರುವ ಕನ್ನಡಿಯು ಮೊದಲು ಮಾತನಾಡತೊಡಗಿತು. ವಯಸ್ಸು ಮತ್ತು ವೃತ್ತಿ ಈ ಎರಡರಲ್ಲಿ ಇರುವ

---

* ಪ್ರಸಿದ್ಧ ಪೋರ್ತುಗೀಜ್ ಕತೆಯೊಂದರ ಅನುವಾದವಿದು.
—ಲೇ.

ವಿರೋಧ ನನಗೆ ತಟ್ಟನೆ ಹೊಳೆಯಿತು. "ಆಲ್‌ಗ್ರೇಡಿನ ಜಮೀನ್‌ದಾರನು ನನ್ನನ್ನು ಮೊದಲು ಫ್ರಾನ್ಸ್ ದೇಶದಿಂದ ಪೋರ್ತುಗಾಲಿಗೆ ತಂದನು. ಒಂದು ಸುಶೋಭಿತವಾದ ದಿವಾಣಖಾನೆಯಲ್ಲಿ ಎರಡು ಕಿಟಕಿಗಳ ಮಧ್ಯದಲ್ಲಿ ನನ್ನನ್ನು ಸ್ಥಾಪಿಸಿದನು. ಜಮೀನ್‌ದಾರನಿಗೆ ಒಂದೇ ಒಂದು ಹಕ್ಕು ಹನ್ನೆರಡು ವರ್ಷದ ಹೆಣ್ಣು ಹುಡುಗಿ ಇದ್ದಿತು. ಅವಳಿಗೆ ಸಂಗೀತ ಕಲಿಸಲು ಒಬ್ಬ ಮುದುಕಿ ಬರುತ್ತಿದ್ದಳು. ಆ ಮುದುಕಿ ಸತ್ತದ್ದು ನನಗೆ ತಿಳಿಯಿತು. ಸ್ವಲ್ಪ ದಿನಗಳಲ್ಲಿಯೆ ಅವಳ ಸ್ಥಾನದಲ್ಲಿ ಒಬ್ಬ ಸುಂದರ ಯುವತಿ ಬಂದಳು. ಅವಳ ವಯಸ್ಸನ್ನು ಇಪ್ಪತ್ತರಿಂಳ-ಹೊರಗೆ ಇದ್ದಿರಬಹುದು. ಅಂತಹ ಅಭಿಜಾತ ಸೌಂದರ್ಯವನ್ನು ನಾನು ನನ್ನ ಆಯುಷ್ಯದಲ್ಲಿ ನೋಡಿರಲಿಲ್ಲ. ಆ ರೂಪದರ್ಶನದಿಂದ ನನಗೆ ಧನ್ಯನಾದಂತೆ ಎನಿಸಿತು. ಫ್ರಾನ್ಸ್-ದೇಶಕ್ಕೆ ತನ್ನ ಸ್ತ್ರೀಯರ ಸೌಂದರ್ಯದ ವಿಷಯಕ್ಕೆ ಇರುವ ಗರ್ವ ಸಕಾರಣವಿದೆ. ಇಷ್ಟು ಇದ್ದರೂ, ಇಂತಹ ಪವಿತ್ರ ಮತ್ತು ಅಪ್ರತಿಮ ಸೌಂದರ್ಯವನ್ನು—ನಾನು ಆ ದೇಶದಲ್ಲಿ ಎಷ್ಟೊ ವರ್ಷಗಳನ್ನು ಕಳೆದಿದ್ದರೂ—ಕಂಡಿರಲಿಲ್ಲ. ಮೊದಲನೆಯ ದಿನವೇ ಬಂದಳು; ಅವಳ ವಿದ್ಯಾರ್ಥಿನಿಯು ಕೈದೋಟದಲ್ಲಿ ಆಡುತ್ತಿದ್ದಾಳೆಂದು, ಮನೆಯ ದಾಸಿಯು, ನನ್ನ ದಿವಾಣಖಾನೆಯಲ್ಲಿ ಅವಳನ್ನು ಕುಳಿತುಕೊಳ್ಳಲು ಹೇಳಿದಳು. ಅವಳ ಸೌಂದರ್ಯಕ್ಕೆ ಒಪ್ಪುವ ಅವಳ ನಿಜವಾಸುಂದರ ಕಣ್ಣುಗಳನ್ನು ನೋಡಿದನಂತರ, ಅವಳು ಕುರುಡಿ ಎಂದು ಯಾರಾದರೂ ಹೇಳಿದ್ದರೆ, ಯಾರಿಗೂ ನಿಜವೆನಿಸುತ್ತಿದ್ದಿಲ್ಲ.

"ಇಂಥ ಸುಂದರ ಯುವುಗಿಗೆ ದೇವರು ದೃಷ್ಟಿಯನ್ನು ಕೊಟ್ಟಿಲ್ಲ; ಇದು ಎಂತಹ ದುಃಖದಾಯಕ ಸಂಗತಿ!" ಎಂದು ನನ್ನೆಡೆಗೆ ನೋಡುತ್ತ ದಾಸಿಯಂದಳು: "ಅಕ್ಕಾ, ಇಲ್ಲಿ ಕನ್ನಡಿ ಎಲ್ಲಿದೆ?" ಎಂದು ಆ ದಾಸಿಯನ್ನು ಯುವತಿಯು ಕೇಳಿದಳು.

"ಇಲ್ಲಿಯೇ ಇದೆ!" ಎಂದು ದಾಸಿಯು ಅವಳನ್ನು ಕನ್ನಡಿಯ ಹತ್ತಿರ ಕರೆದುಕೊಂಡು ಹೋದಳು. ಆ ಯುವತಿಯು ತೆನೆಗಿಂತಲೂ ಕೋಮಲವಾಗಿರುವ ತನ್ನ ಕರಗಳನ್ನು ನನ ಮೇಲೆ ಆಡಿಸಿದಳು.

"ಆದರೆ, ನಾನು ಮಾಡುವುದೇನು ಕನ್ನಡಿಯನ್ನು ತೆಗ್ಕೊಂಡು!" ಎಂದು ಅಕ್ಕೆದೀನಮುದ್ರೆಯಿಂದ ಪುಟಪುಟನೆ ಮಾತನಾಡಿದಳು. ಸ್ವಲ್ಪ ವೇಳೆಯಲ್ಲಿಯೇ ಆ ದಾಸಿಯು ಜಮೀನ್‌ದಾರನ ಮಗಳನ್ನು ಕರೆದುಕೊಂಡು ಬರಲು ಹೋದಳು. ಆ ಅಂಧಯುವತಿಯು ತನ್ನ ಹತ್ತಿರವಿರುವ ವಾದ್ಯದ ಸ್ವರಬೊಂಬಿಗೆ ಹಾಡಲು ತೊಡಗಿದಳು. ಆಕೆಯ ಅನುಪಮ ಮುಖ, ಸೌಂದರ್ಯದ ಕೂಡ ತಾದಾತ್ಮ್ಯಹೊಂದುವ ಅವಳ ಕರುಣ ಸ್ವರ ಆ ಪ್ರಶಾಂತ ದಿವಾಣಖಾನೆಯಲ್ಲಿ ತುಂಬಿ ಹೋಯಿತು. ಕಿಟಕಿಯಿಂದ ಬರುವ ವಾಯುಲಹರಿಗಳು ತಮ್ಮ ಬೊಗಸೆಗೈಗಳಿಂದ ಕೈದೋಟದಲ್ಲಿರುವ ಸುಗಂಧವನ್ನು ಈ ಅಂಧಮೂರ್ತಿಯ ಬಳಿ ಎರಚುತಿದ್ದುವು. ಅವಳು ಮೀಟುತ್ತಿದ್ದ ಕರುಣಸ್ವರ ಮತ್ತು ಅವಳ ಮುಖದ ಮೇಲಿರುವ ಅದೇ ಭಾವ, ಇವೆರಡರಲ್ಲಿ ಯಾವುದು ಹಚ್ಚು ಪ್ರಭಾವಶಾಲಿ ಎಂಬುದನ್ನು ಹೇಳುವುದು ಕಠಿನ.

ಇಷ್ಟರಲ್ಲಿ ಅವಳ ಗಾಯನ ಮುಗಿಯಿತು. ಅವಳು ತನ್ನ ಕಣ್ಣುಗಳನ್ನು ಹಿಗ್ಗಿಸಿದಳು. ಅವಳ ಕಣ್ಣುಗಳಲ್ಲಿ ಆದೇನೋ ಮಿನುಗುತ್ತಿತ್ತು. 'ಹತ್ತಿರದಿಂದ ನೋಡಿದೆ—ಕಂಬನಿಗಳದ್ದುವು! ನಿಷ್ಠುರ ದೈವದ ಬಗೆಗೆ—ಅದಕ್ಕಿಂತಲೂ ಅವಳ ನಿರ್ದಯ ದೈವದ ಬಗೆಗೆ — ಸಂತಾಪವೆನಿಸಿತು. ಇಂತಹ ಸುಂದರ ಕಣ್ಣುಗಳ ಅದೃಷ್ಟದಲ್ಲಿ ಕಂಬನಿಗರೆಯುವುದರ ಹೊರತು ಏನೂ ಇರಬಾರದೆ? ಈ ಸಂಗತಿಯಿಂದ ಯಾವ ಸಹೃದಯನಿಗೆ ತಾತ್ಕ್ಷಿಕ ಸಂತಾಪವಾಗಲಿಕ್ಕಿಲ್ಲ!

ಏನೋ ನೆನಪಾಗುವಂತೆ ಅವಳು ಎದ್ದಳು ಮತ್ತು ನನ್ನನ್ನು ಎದುರಿಸತೊಡಗಿದಳು.

ಪಾಪ! ನನ್ನಿಂದೇನಾಗಬೇಕಾಗಿದ್ದಿತು ಅವಳಿಗೆ? ಮುಕ್ತ ಭಾವದಿಂದ, ಬಂದವರಲ್ಲ. ಭೇದಭಾವವನ್ನೆಣಿಸದೆ, ಅವಂವರ ಸ್ವರೂಪವನ್ನು ತೋರಿಸುವುದರಲ್ಲಿ ನಾನೇನೂ ಕರ್ತವ್ಯಚ್ಯುತನಾಗಲಿಲ್ಲ. ಇದರ ಆ ಕಾರುಣ್ಯ ಮೂರ್ತಿಗೆ, ಸೌಂದರ್ಯದ ಅಧಿದೇವತೆಗೆ, ಅವಳ ಅನುಪಮ ಲಾವಣ್ಯವನ್ನು ತೋರಿಸಲು ನನ್ನಿಂದ ಹೇಗಾದೀತು? ನನ್ನ ಉಪಯೋಗ ಅವಳಿಗೆ ಏನಾದರೂ ಆಗಬಾರದೆ? ಪಾಪ! ನಿರಾಶೆಯಿಸುತ್ತ ನನ್ನನ್ನು ಅವಳು ಮುಟ್ಟಿದಳು. ತನ್ನ ಸುಕುಮಾರ ಕೈಗಳಿಂದ ನನ್ನನ್ನು ಹಿಡಿದು, ತನ್ನ ಮುಸ್ತಕವನ್ನು ನನ್ನ ಹತ್ತಿರ ತಂದು, ತನ್ನ ಸೌಂದರ್ಯ ನೋಡುವ ವಿಫಲಪ್ರಯತ್ನ ಮಾಡಿದಳು. ಊನಗೆ ನಿರಾಶಳಾಗಿ ನನ್ನ ಮೇಲೆ ತನ್ನ ಮುಸ್ತಕವಿಟ್ಟು ಕಂಬನಿಗರೆಯುತ್ತಿದ್ದಳು. ಅವಳ ಆಳವಾದ, ಉಷ್ಣಶ್ವಾಸೋಚ್ಛ್ವಾಸದಿಂದ ನನ್ನ ಹೃದಯ ಮತ್ತು ಕಣ್ಣುಗಳು ತುಂಬಿ ಬಂದುವು.

"ನನಗೆ ನೋಡಬೇಕಾಗಿದೆ; ನನ್ನ ಸ್ವರೂಪವನ್ನು ಒಮ್ಮೆಯಾದರೂ ನನಗೆ ನೋಡಬೇಕಾಗಿದೆ!" ಎಂದು ನುಡಿದು, ನಿರಾಶಾತಿರೇಕದಿಂದ ನಿಟ್ಟುಸಿರು ಬಿಟ್ಟಳು.

ಸ್ವಂತವ ಸೌಂದರ್ಯಕ್ಕೆ ಹೊರತಾಗಿರುವ ಬಡಪುಡುಗಿ! ನಿಸರ್ಗ ಕೊಡಲಾರದ್ದನ್ನು ನಾನು ಹೇಗೆ ಕೊಡಬಲ್ಲೆ? ನನ್ನ ಮೈಮೇಲೆಯೆ ಬಿದ್ದುಬಿಟ್ಟಳು. ಆ ಸಮಯದಲ್ಲಿ ಅವಳ ಕಣ್ಣುಗಳನ್ನು ಒರಸಬೇಕು, ಅವಳ ಸಾಂತ್ವನ ಮಾಡಬೇಕು, ಅವಳ ಮೈಮೇಲೆ ಕೈಯಾಡಿಸಬೇಕು— ಎಂದು ನನಗೆ ತುಂಬ ಎನಿಸಿತು. ಆದರೆ ನನ್ನ ದೈವವು ನನಗೆ ಆ ಭಾಗ್ಯ ಕೊಟ್ಟಿರಲಿಲ್ಲ. 'ನನಗೆ ಕೈಗಳಿಲ್ಲ' ಎಂಬ ಜೀವ ಸುಡುವ ಸಂಗತಿ ಅಂದು ನನಗೆ ತಿಳಿಯಿತು. ಆ ರಾತ್ರಿಯನ್ನು ನಾನು ಅಳುವಿನಲ್ಲೆ ಕಳೆದೆ. ಬೆಳಗಿನಲ್ಲಿ ನೋಡಿದಾಗ, ನನ್ನ ಮೈಮೇಲೆ

ಇದ್ದ ಕಣ್ಣೀರ ಹನಿಗಳು, ಆ ಅಂಧ ಯುವತಿಯಬ್ಬೋ ಏನು ನನ್ನವ್ವೋ—ನನಗೆ ತಿಳಿಯಲೆ ಇಲ್ಲ.

* * * *

ಹದಿನಾರನೆಯ ಲುಯಿಯ ಕಾಲದ ಕನ್ನಡಿ ಮಾತನಾಡತೊಡಗಿತು: "ನಮ್ಮ ಕನ್ನಡಿಜಾತಿಯ ಗುಣವೇನೆಂದರೆ, ಸತ್ಯವಷ್ಟನ. ತಪ್ಪಿಯಾದರೂ ನಾವು ಸುಳ್ಳು ಮಾತಾಡುವುದಿಲ್ಲ—ಇದು ನಮ್ಮ ಹುಟ್ಟುಗುಣ. ಬೇಕಾದರೆ ಇದೇ ಒಂದು ದೋಷವೆನ್ನಿರಿ. ಜಾತಿವಂತ ಕನ್ನಡಿಯು ಈ ಧ್ಯೇಯವನ್ನು ಅಮರಣ ಪಾಲಿಸುವುದು. ಎಷ್ಟೋ ವೇಳೆ ಕಟುವೆನಿಸುವ ಸತ್ಯವನ್ನು ನಾವು ಮೊರೆಯ ಮೇಲೆಯೇ ಹೇಳಬೇಕಾಗುತ್ತದೆ. ಯಾವಳಾದರೊಬ್ಬ ಸುಂದರ ಲಲನೆಗೆ "ನೀನು ಮುದುಕಿಯಾಗಲು ತೊಡಗಿದ್ದೀಯೆ" ಎಂದು ತಿಳಿಹೇಳುವುದು ಎಷ್ಟು ಕಷ್ಟದ ಕಾರ್ಯ? ಒಬ್ಬ ಏವತ್ತು ವರುಷ ದಾಟಿದ ಗೃಹಸ್ಥ ಕನ್ನಡಿಯಲ್ಲಿ ತನ್ನ ಮುಖ ನೋಡತೊಡಗಿದನೆಂದರೆ, ನಮಗೆ ಹೇಳಬೇಕಾಗುತ್ತದೆ: "ಅಪ್ಪಾ, ನಿನ್ನ ಇಪ್ಪತ್ತೈದು ವರ್ಷ ಹಿಂದಿನ ಡೌಲು ಈಗಿಲ್ಲ!"

ತರುಣಿಯರಿಗೆ, ಅವರ ಮಾದಕಸೌಂದರ್ಯದ ಪ್ರಥಮ ಪರಿಚಯ ನಾವೇ ಮಾಡಿಕೊಡುತ್ತೇವೆ. ನಿರ್ವಿಕಲ್ಪ ಅಜ್ಞಾನದಲ್ಲಿ ಈ ಸೌಂದರ್ಯದ ತಿಳಿವಿನ ಚಿತ್ರವನ್ನು ನಾವು ಮೂಡಿಸಬೇಕಾಗುತ್ತದೆ. ನಾವು ಇದ್ದಿಲ್ಲವೆಂದರೆ ಸ್ತ್ರೀಯರಿಗೆ ಅವರ ಸೌಂದರ್ಯ ಸಾಮರ್ಥ್ಯದ ಕಲ್ಪನೆಯು ಎಂದೂ ಆಗುತ್ತಿದ್ದಿಲ್ಲ.

ನೂರು ವರ್ಷಗಳಾದರೂ ಆ ನೆನಪು ನನ್ನ ಅಂತಃಕರಣದಲ್ಲಿ ಇಂದಿಗೂ ಇದೆ.

ಒಂದು ದಿವಸ ನಮ್ಮ ಮನೆಗೆ ಒಬ್ಬ ವೃದ್ಧ ಸಂನ್ಯಾಸಿನಿಯು, ಸಂಚಾರಾರ್ಥವಾಗಿ ಬಂದಳು. ಯಾವುದೋ ಮಠದಲ್ಲಿ ಅವಳು ಒಬ್ಬ ಸ್ವಾಮಿನಿಯಾಗಿ ಇದ್ದಳು. ಅವಳ ಕೂಡ ಒಬ್ಬ ತರುಣಿ ಇದ್ದಳು. ಹದಿನೆಂಟು ಇಪ್ಪತ್ತು ವರ್ಷದ ಹಿಂದೆ ಆ ಸಂನ್ಯಾಸಿನಿ ಒಂದು ಅನಾಥ ಅರ್ಭಕನನ್ನು ಜೋಪಾನ ಮಾಡಿದ್ದಳು. ಆ ಅರ್ಭಕನೇ ಈ ತರುಣಿ. ಅರ್ಭಕಾವಸ್ಥೆಯಲ್ಲಿ ಇದ್ದಂತೆಯೇ ಇನ್ನೂ ಅವಳು ನಿಷ್ಪಾಪಳಾಗಿದ್ದಳು. ಮಠದಲ್ಲಿಯ ತುಷ್ಟಜೀವನದಲ್ಲಿ ಸಂಸಾರದ ಸುಖ-ದುಃಖದ ಕಲ್ಪನೆಯು ಅವಳಿಗಿರಲಿಲ್ಲ. ಆದರಿಂದ ನಿಸರ್ಗವು ಮುಕ್ತಹಸ್ತದಿಂದ ಸೌಂದರ್ಯವನ್ನು ದಯೆಪಾಲಿಸಿತ್ತು. ಇಷ್ಟೇ ಅಲ್ಲ, ಅವಳ ಸೌಂದರ್ಯದಲ್ಲಿ ಎಳ್ಳಷ್ಟು ಕಡಿಮೆಯಾಗಿರಲಿಲ್ಲ. ಆವಳಿಗೆ ತನ್ನ ಅನುಪಮ ಲಾವಣ್ಯದ ಅಭಿಮಾನವಂತೂ ಇರಲೇ ಇಲ್ಲ; ಅಲ್ಲದೆ ಅವಳಿಗೆ ತನ ಲಾವಣ್ಯದ ಅರಿವು ಕೂಡ ಇರಲಿಲ್ಲ. ಮಠದಲ್ಲಿ ಕನ್ನಡಿಯು ಎಲ್ಲಿ ಬರಬೇಕು? ಅವಳು ತನ್ನ ಸೌಂದರ್ಯವನ್ನು ಒಮ್ಮೆಯಾದರೂ ಕನ್ನಡಿಯಲ್ಲಿ ನೋಡಿದ್ದಿಲ್ಲ. ನೀರಿನಲ್ಲಿ ಮೂಡಿರುವ ತನ್ನ ಪ್ರತಿಬಿಂಬವನ್ನು ಮಾತ್ರ ಅವಳು ನೋಡಿರಬಹುದು; ಆದರೆ ಅವಳಿಗೆ ಕಷ್ಟದ ಮೇಲಿಂದ ತನ್ನ ಅಸಾಮಾನ್ಯ ರೂಪಸಂಪತ್ತಿಯ ಕಲ್ಪನೆ ಹೇಗೆ ಬರಬೇಕು?

ಕತ್ತಲಾಯಿತು. ನಾನಿರುವ ದಿವಾಣಖಾನೆಯಲ್ಲಿ ರುಗ. ರುಗ ಬೆಳಕು ಬೀಳುವ ದೀಪವನ್ನು ಹಚ್ಚಲಾಯಿತು. ಎಲ್ಲ ಕಡೆಗೆ ಸುವ್ಯವಸ್ಥಿತವಾಗಿ ಸಾಮಾನುಗಳನ್ನು ಇರಿಸಲಾಗಿತ್ತು. ಎರಡು ಸುಂದರವಾದ ಮಂಚಗಳನ್ನು ಅಲ್ಲಿ ಮಂಡಿಸಿದ್ದರು.

"ಇಲ್ಲಿ ಮಲಗಿಕೊಳ್ಳಲು ಯಾರು ಬರುವರು?" ಎಂದು ನನ್ನನ್ನು ನಾನೇ ಕೇಳಿದೆ. ಆಳುಮನುಷ್ಯನು ಶಯ್ಯೆಯನ್ನು ಸಿದ್ಧಮಾಡಿ, ದೀಪದ ಬತ್ತಿಯ ಮೇಲಿನ ಕುಡಿಯ ಮುಕ್ಕನ್ನು ತೆಗೆದು, ಹೆಚ್ಚು ಪ್ರಜ್ವಲಿತಮಾಡಿದನು. ಇನ್ನು ಈ ಖೋಲಿಯಲ್ಲಿ ಯಾರು ಬರುವರೆಂದು ನನ್ನ ಮನಸ್ಸು ಆತುರಗೊಂಡಿತು. ಆದರೆ ನನಗೆ ಬಹಳ ಹೊತ್ತು ಹಾದಿ ಕಾಯಬೇಕಾಗಲಿಲ್ಲ. ಬಾಗಿಲು ತೆರೆಯಿತು; ಆ ವೃದ್ಧ ಸಂನ್ಯಾಸಿನಿ ಮತ್ತು ಅವಳ ತರುಣ ಶಿಷ್ಯೆ ಇಬ್ಬರೂ ಒಳಗೆ ಬಂದರು. 'ಸೋರರ್' ಎಂದು ಆ ತರುಣಿಗೆ ಹೆಸರು. ಅವಳನ್ನು ನೋಡಿದ ಕೂಡಲೆ ನಾನು ಸ್ತಿಮಿತನಾದೆ. ಅವಳಲ್ಲಿ ಅಪ್ರತಿಮ ಲಾವಣ್ಯ ಹೊರಚಿಮ್ಮುತ್ತಿತ್ತು. ಇದೇ ಮಹಲಿನಲ್ಲಿ, ಒಂದು ಸಮಯದಲ್ಲಿ ಒಬ್ಬ ನವವಧುವು ತನ್ನ ಪ್ರಿಯತಮನ ಕೂಡ ವಿಲಾಸ ಮಾಡಿದುದನ್ನೂ ನೋಡಿದ್ದೆ. ಆದೇ ನಿರ್ವಿಕಾರ ಬುದ್ಧಿಯಿಂದಲೇ ಇಂದು ಆ ವೃದ್ಧೆಯನ್ನು — ಮಲಗಿಕೊಳ್ಳುವ ಮುಂದೆ — ನಾನು ನೋಡಿದ. ಆ ವೃದ್ಧೆಯು ಹಾಸಿಗೆಯ ಮೇಲೆ ಬಿದ್ದಳು. 'ಸೋರರ್' ಮೊಳಕಾಲೂರಿ ಪ್ರಾರ್ಥನೆಯನ್ನು ಮಾಡತೊಡಗಿದಳು. ಅವಳ ಪ್ರಾರ್ಥನೆ ಮುಗಿಯುವಷ್ಟರಲ್ಲಿಯೆ ಮುದುಕಿ ಗೊರಕೆ ಹೊಡೆಯುತ್ತಿದ್ದಳು. 'ಸೋರರ್'ಳ ಪ್ರಾರ್ಥನೆ ಮುಗಿಯಿತು; ತನ್ನ ವಸ್ತ್ರಗಳನ್ನು ತೆಗೆಯತೊಡಗಿದಳು. ಒಂದೊಂದೇ ವಸ್ತ್ರ ಅವಳ ಕಾಲಕೆಳಗೆ ಬೀಳಲಾರಂಭಿಸಿದುವು. ಆ ಅಮಂಗಲ ಕಂಯ ವಸ್ತ್ರದ ಜಾಳಿಗೆಯಲ್ಲಿ, ಜಗತ್ತಿಗೆ ಹುಚ್ಚು ಹಿಡಿಸುವ ರಮ್ಯ, ಸೌಷ್ಠವ ಮೂರ್ತ ತನ್ನ ನಿಸರ್ಗರಮ್ಯ ಸೌಂದರ್ಯದಿಂದ ಹೊಳೆಯಹತ್ತಿತು. ನನ್ನ ಕಾಯವು ಕಲ್ಲಾಗಿದ್ದರೂ, ಕರಗಿದ ಅಂತಃಕರಣದಿಂದ ಅವಳ ಸೌಂದರ್ಯವನ್ನು ನನ್ನ ಹೃದಯದಲ್ಲಿ ಸಂಗ್ರಹಿಸಿದೆ.

ವಿವಸ್ತ್ರಳಾದವಳೇ ಹಾಸಿಗೆಯ ಕಡೆಗೆ ಹೊರಟಳು. ಆದರೆ ಮಾಡಿನಲ್ಲಿರುವ ಪ್ರಣತಿಗಳು ಇನ್ನೂ ನಂದಿದ್ದಿಲ್ಲ. ನೋಡ್ಡು ಮತ್ತೆ ತಿರುಗಿದಳು. ತಿರುಗುವ ಮುಂದೆ ಪಾದಿಯಲ್ಲಿ ತನ ಪ್ರತಿಬಿಂಬ ನನ್ನಲ್ಲಿ ಮೂಡಿದುದನ್ನು ಅವಳು ಕಂಡಳು ಬೆದರಿದಳು—ಬೆಚ್ಚಿಬಿದ್ದಳು. ತನ್ನ ದೇಹವನ್ನು ಅಕೆ ಎಂದೂ ಕನ್ನಡಿಯಲ್ಲಿ ನೋಡಿರಲಿಲ್ಲ. ಆದರಿಂದ ಅವಳಿಗೆ ಸುತ್ತಿಹ್ಯ ಸ್ತ್ರೀಯು ತನ್ನನ್ನು ನೋಡುವಳೆಂದೆನಿಸಿತು. ತನ್ನ ವಿವಸ್ತ್ರ ಕಾಯದ ಮೂಲಕ ಸ್ವಲ್ಪ ಸಂಕೋಚವೆನಿಸಿತು. ಆಗ ತನ್ನ ಕೈಗಳಿಂದ ವಿಕಸಿತ ವಕ್ಷಸ್ಥಳವನ್ನು ಮುಚ್ಚಿಕೊಂಡಳು, ಅವಳ ಪ್ರತಿಬಿಂಬ ಕೂಡ ಅವಳ ಅನುಕರಣ ಮಾಡಿದ ಕೂಡಲೆ

ಶುದ್ಧಿಯ ಮೇಲೆ ಬಂದಳು. ಅದು ತನ್ನ ಪ್ರತಿಬಿಂಬವೆಂದು ಅವಳಿಗೆ ಅಮೇಲೆ ಹೊಳೆಯಿತು.

ನಾನು ಮಾಡಿದ ಕೆಟ್ಟ ಕೆಲಸವೇನೆಂದರೆ ಅವಳಿಗೆ ನಾನು ಮಾಡಿಕೊಟ್ಟ ಸ್ವಂತದ ಸೌಂದರ್ಯದ ಅರಿವು. ದೀಪ ನಂದಿಸುವ ಕೆಲಸವನ್ನು ಮರೆತೇ ಬಿಟ್ಟಳು. ಸ್ವಂತದ ಅಜ್ಞಾತ ಸೌಂದರ್ಯವನ್ನು ನಿರೀಕ್ಷಿಸುವುದರಲ್ಲಿ ಎಷ್ಟು ವೇಳೆ ಕಳೆದಳೋ ಅವಳಿಗೇ ಗೊತ್ತಾಗಲಿಲ್ಲ. ಅವಳಿಗೆ ತನ್ನ ಬಗೆಗೆ ಅಭಿಮಾನವೆನಿಸಿತು. ತನ್ನ ಪ್ರತಿಬಿಂಬವನ್ನು ಮುದ್ದಿಸಿದಳು. ಸ್ವಂತದ ಸಾಮರ್ಥ್ಯದ ಕಿವಿಮಾತನ್ನು ಯಾವುದೋ ಒಂದು ಅವ್ಯಕ್ತ, ಅಜ್ಞಾತ ಶಕ್ತಿ ಹೇಳಿತು.

ಮಾರನೆಯ ದಿನ ಅವರು ತಮ್ಮ ಸಂಚಾರ ಮುಗಿಸಿ ಹೊರಟುಹೋದರು. ಆದರೆ ನಾನು ಮಾತ್ರ ಅವರ ನೆನಪನ್ನು ಎಷ್ಟೋ ದಿನ ಮಾಡುತ್ತಿದ್ದೆ. ಒಂದು ದಿವಸ ಕೈದೋಟದಲ್ಲಿ ಹೂಗಳು ಎಂದಿನಂತೆ ತಮ್ಮ ಸುವಾಸನೆಯನ್ನು ಬೀರುತ್ತಿದ್ದುವು. ಸುಗಂಧವು ಮುಟ್ಟಾಟವಾಡುತ್ತಿತ್ತು. ಸೂರ್ಯ ಕಿರಣಗಳ ತಾಂಡವ ನೃತ್ಯ ನಡೆದಿತ್ತು. ಇಂತಹ ವೇಳೆಯಲ್ಲಿ ಚರ್ಚಿನ ಗಂಟೆ ಅಕಸ್ಮಾತ್ತಾಗಿ ಹೊಡೆಯಿತು. ಗಂಟೆಯ ಕಾರಣ ಹೇಳಲಾಯಿತು, ಮತದಿಂದ ಯಾರೋ ಓಡಿ ಹೋಗಿದ್ದರು.

ಓಡಿ ಹೋದವಳು 'ಸೋರರ್' ಆಗಿದ್ದಳು. ನನಗೆ ಆನಂದವಾಯಿತು. ಇಂತಹ ದಿವ್ಯ ಲಾವಣ್ಯ ಮತದಲ್ಲಿಯ ಭಯಾನಕ ಏಕಾಂತದಲ್ಲಿ ಕೊಳೆಯಬೇಕೆಂದು ಯಾವ ಸಹೃದಯನಿಗೆ ಎನಿಸುವುದು ?

* * * *

ಕೊನೆಗೆ, ಆ ದೊಡ್ಡ ಕನ್ನಡಿಯು—ಉಳಿದೆರಡು ಕನ್ನಡಿಗಳಿಗೆ ಮುತ್ತಜ್ಜನಂತೆ ಶೋಭಿಸುವ ಕನ್ನಡಿಯು—ತನ್ನ ಕೈಚಳಕವನ್ನು ಸಾದರಪಡಿಸಿತು. ಈ ದೊಡ್ಡ ಕನ್ನಡಿಯು ಮಾತಿನಲ್ಲಿ ಉಳಿದೆರಡು ಕನ್ನಡಿಗಳಂತೆ ಔತ್ಸುಕ್ಯ ನುತ್ತು ಆನಂದವಿರಲಿಲ್ಲ. ಎರಡೂ ಕನ್ನಡಿಗಳು ತಮ್ಮ ತಮ್ಮ ರಹಸ್ಯ ಹೇಳಿದುದರಿಂದ, ಕರ್ತವ್ಯವೆಂದು ಇದೂ ಮಾತನಾಡತೊಡಗಿತು. ಆದರ ನೆನಪು ಅದೊಂದು ಶೋಕಕಥೆ:

"ನಮ್ಮ ಜಾತಿಗೆ ಸತ್ಯಪ್ರಿಯ ಮತ್ತು ಸ್ಪಷ್ಟ ಮಾತಾಡುವವರೆಂದು ಗರ್ವವಿದೆ. ಆದರೆ ನಾವು ಕೂಡ ಸುಳ್ಳು ಮಾತಾಡುತ್ತೇವೆ. ಏನೂ ಕಾರಣವಿಲ್ಲದೆ ನಿಷ್ಪಾಪಜೀವಿಗಳನ್ನು ಮೋಸಮಾಡುತ್ತೇವೆ. ಎಷ್ಟೋ ದಿವಸಗಳಿಂದ ನನ್ನ ಮೇಲಿರುವ ಈ ರಕ್ತದ ಹನಿಗಳು....ಎರಡು ನಿಷ್ಪಾಪ ಜೀವಿಗಳ ವಂಚನೆ ಮಾಡಿದ್ದರಿಂಪಲೇ ಈ ರಕ್ತಲಾಂಛನಕ್ಕೆ ಕಾರಣ. ನನ್ನ ಮೇಲಿರುವ ಈ ರಕ್ತದ ಹನಿಗಳ ಶೋಕಕಥೆಯನ್ನು ಹೇಳುತ್ತೇನೆ. ಈ ಹನಿಗಳು ಆ ನಿಷ್ಪಾಪ ಜೀವಿಗಳದೋ ಏನು ನನ್ನ ಪಶ್ಚಾತ್ತಾಪದಿಂದ ಹೊರಟ ರಕ್ತಾಶ್ರುಗಳದೋ ಎಂದು ಈಗಲೂ ನಾನು ಯೋಚಿಸುತ್ತಿರುವೆನು. ಈ ಮಾತಿಗೆ ಎಷ್ಟೋ ವರ್ಷಗಳು ಸಂದುವು. ಆದರೂ ಆ ಪ್ರಸಂಗದ ನೆನಪು ಇನ್ನೂ ನಿನ್ನೆ ಮೊನ್ನೆ ಆದಂತೆ ಅಚ್ಚಳಿಯದೆ ನನ್ನ ಮನಸ್ಸಿನಲ್ಲಿದೆ. ನಾನೂ ನಿಮ್ಮ ಹಾಗೆಯೇ ಒಬ್ಬ ದೊಡ್ಡ ಜಮೀನ್‌ದಾರನ ಮನೆಯಲ್ಲಿದ್ದವನು. ಆ ಭವ್ಯ ಪ್ರಾಸಾದದ ಒಡೆಯರು, ನಗರದಲ್ಲಿಯ ತಮ್ಮ ಬಂಗಲೆಯಲ್ಲಿಯೇ ಇರುತ್ತಿದ್ದರು; ವರ್ಷ ಎರಡು ವರ್ಷಕ್ಕೊಮ್ಮೆ ನೆನಪಾದರೆ ಆ ಪ್ರಾಸಾದಕ್ಕೆ ಬರುತ್ತಿದ್ದರು. ಉಳಿದ ಸಮಯದಲ್ಲೆಲ್ಲ ನಾನು ಅಲ್ಲಿರುವ ಹಳೆಯ ಪುರಾಣವಸ್ತು ಸಂಗ್ರಹಾಲಯದಲ್ಲಿಯೆ ಇರುತ್ತಿದ್ದೆನು. ನಿಮ್ಮ ಹಾಗೆ ನನ್ನ ಸ್ಥಾನ ಕಿಟಕಿಯ ಬಳಿ ಇರಲಿಲ್ಲ. ಮೇಲಟ್ಟದ ಮೇಲೆ, ಒಂದು ಕಿಟಕಿಯ ಎದುರು ನನ್ನ ಸ್ಥಾನವಿತ್ತು. ವಸಂತ ಋತುವಿನಲ್ಲಿ ಮೇಲ್ಮಚ್ಚಿನ ಇರುವ ಮಲ್ಲಿಕಾ ಮಂಟಪದ ಸಾನ್ನಿಧ್ಯದಲ್ಲಿ ಕೆಲವು ಕಾಲ ಕಳೆಯುತ್ತಿದ್ದೆ. ಉಳಿದ ವೇಳೆ, ಕ್ಷಣಕ್ಕೊಮ್ಮೆ ಬದಲಿಸುವ ಮುಗಿಲಿನ ಬಣ್ಣವನ್ನು ನನ್ನ ಹೃದಯದಲ್ಲಿ ಮೂಡಿಸುತ್ತಿದ್ದೆ. ಋತುಮಾನದಂತೆ ಬದಲಾಗುವ ವನರಾಜಿಯ ಸ್ವರೂಪವನ್ನು ನಿರೀಕ್ಷಿಸುವುದು, ಮತ್ತು ಶುಕ್ಲಪಕ್ಷದಲ್ಲಿ ಚಂದ್ರನ ಶೀತಲ ಬೆಳುದಿಂಗಳಲ್ಲಿ ಸಮರಸ ಹೊಂದುವುದು—ಇದರ ಹೊರತು ನನ್ನ ದೈನಂದಿನ ಕಾರ್ಯಕ್ರಮದಲ್ಲಿ ಏನೂ ವಿಶೇಷ ಬದಲಾಗಲಿಲ್ಲ. ಹೋದ ಎಷ್ಟೋ ವರ್ಷಗಳಲ್ಲಿ ಮನೆಯೊಡೆಯರು ಬಂದಿದ್ದಿಲ್ಲವಾದುದರಿಂದ, ಅಲ್ಲಿ ಗುಬ್ಬಿಗಳು ತುಂಬಿದ್ದುವು. ಆ ಗುಬ್ಬಿಗಳ ಕೂಡುವಿಕೆ, ಹಾರುವಿಕೆ, ಚಿಂವ್‌ಚಿಂವ್ ಉಲಿಯುವಿಕೆ—ಇದೆಲ್ಲವನ್ನು ನೋಡುವುದರಲ್ಲಿಯೇ ನನಗೆ ಆನಂದವೆನಿಸುತ್ತಿತ್ತು.

ಒಂದು ದಿವಸ ಆಕಸ್ಮಾತ್ತಾಗಿ ನಮ್ಮ ಮನೆಯ ಯಜಮಾನ ಬಂದ. ಮನೆಯಲ್ಲಿ ಹೊಸ ಚೈತನ್ಯ ಬಂದಂತಾಯಿತು. ಎಲ್ಲ ಸಾಮಾನುಗಳ ಮೇಲಿನ ಧೂಳನ್ನು ಕೊಡಹಿ ಆಯಿತು. ಒಲೆಗೆ ಬೆಂಕಿಯನ್ನಿಕ್ಕಿ ಅಡುಗೆ ಸಿದ್ಧವಾಯಿತು. ನನಗೆ ಕೂಡ ಯಜಮಾನರು ಬಂದದ್ದರಿಂದ ಆನಂದವಾಗಿತ್ತು. ಇಂತಹ ಆನಂದಾತಿರೇಕದಿಂದಲೋ ಏನೋ, ಒಂದು ಗುಬ್ಬಿಯ ಜೋಡು ಹಾರುತ್ತ ಹಾರುತ್ತ ನನ್ನ ಎದುರಿಗಿರುವ ಕಿಟಕಿಯ ಮೇಲೆ ಬಂದು ಕುಳಿತುವು. ಇಷ್ಟು ದಿನ ಅವುಗಳ ಕ್ರೀಡೆಯನ್ನು ನಾನು ದೂರದಿಂದಲೇ ನೋಡುತ್ತಿದ್ದೆ. ಈವೊತ್ತಿನಷ್ಟು ಸಮೀಪ ನಾನು ಎಂದೂ ನೋಡಿರಲಿಲ್ಲ. ನನ್ನ ಹರ್ಷ ಇಮ್ಮಡಿಸಿತು. ಆದರೆ ಏನಾಯಿತೋ ಏನೋ, ಅವು ಭರ್ರನೆ ಹಾರಿ ನನ್ನ ಪಾದದ ಕೆಳಗೆ ಬಿದ್ದು ಬಿಟ್ಟುವು. ಏನಾಯಿತೆಂದೋ ನನಗೇ ತಿಳಿಯಲಿಲ್ಲ. ಆದರೆ ನನಗೆ ಬೇಗನೆ ತಿಳಿದುಬಂದಿತು: ನನ್ನಲ್ಲಿ ಒಡಮೂಡಿರುವ ಸುಂದರವಾದ ಆಗಸದ ಪಡಿನೆಳಲಿನಿಂದ ನೋಸಹೋಗಿದ್ದುವೆಂದು. ಅವುಗಳ ಕಲ್ಪನೆ: ನಾನು ಕಿಟಕಿಯೆಂದು! ಪಾಪ, ಮಹುನ ಸಹಿಯ ಮಾಯೆಯು ಪರಿಜಯ ಅವಕ್ಕೇನು? ಆ

(೧೪೪ನೆಯ ಪುಟ ನೋಡಿರಿ)

ಕನ್ನಡ ತರುಣ ಉದ್ಯಮ-ವಿಜ್ಞಾನ ವಿಶಾರದರು

ಮುಂದಿನ ಸಾಲು (ಎಡದಿಂದ ಬಲಕ್ಕೆ)

೧. ಶ್ರೀ. ಬಿ.ಎಸ್. ಜೋಶಿ—ಇವರು ಧಾರವಾಡದ ಸುಪ್ರಸಿದ್ಧ ಸಂಶೋಧಕರಾದ ಶ್ರೀ. ಶಂ.ಬಾ. ಜೋಶಿಯವರ ಹಿರಿಯ ಮಗ. ಧಾರವಾಡ ವಿಕ್ಟೋರಿಯಾ ಹೈಸ್ಕೂಲಿನಿಂದ ಮ್ಯಾಟ್ರಿಕ್ ಪಾಸಾಗಿ, ಕರ್ನಾಟಕ ಕಾಲೇಜ್—ಪುಣೆಯ ಫರ್ಗ್ಯುಸನ್ ಕಾಲೇಜುಗಳಲ್ಲಿ ಓದಿ ಬಿ. ಎಸ್ಸಿ. ಎರಡನೆಯ ತರಗತಿಯಲ್ಲಿ ಪಾಸಾದರು. ಮುಂದೆ ಮುಂಬಯಿಯ ಡಿಪಾರ್ಟ್‌ಮೆಂಟ್ ಆಫ್ ಕೆಮಿಕಲ್ ಟೆಕ್ನಾಲಜಿಯಿಂದ B. Sc. (Tech.) in Dyes, ಪರೀಕ್ಷೆಯಲ್ಲಿ ೧ನೆಯ ವರ್ಗದಲ್ಲಿ ಉತ್ತೀರ್ಣರಾಗಿರುವರು.

೨. ಶ್ರೀ. ಎಚ್, ಜೆ. ವೆಂಕಟೆಕೃಷ್ಣ—ಇವರು ಬೆಂಗಳೂರಿನವರು. ಮ್ಯಾಟ್ರಿಕ್ ಪಾಸಾದುದು ಬೆಂಗಳೂರಿನ ಗವ್ಹರ್ನ್‌ಮೆಂಟ್ ಸೆಂಟ್ರಲ್ ಹಾಯ್‌ಸ್ಕೂಲಿನಿಂದ. ಗವ್ಹರ್ನ್‌ಮೆಂಟ್ ಸೆಂಟ್ರಲ್ ಕಾಲೇಜಿನಿಂದ ಬಿ.ಎಸ್‌ಸಿ. ಪಾಸ್ ಆದದ್ದಲ್ಲದೆ, ಕೆಮಿಸ್ಟ್ರಿಯಲ್ಲಿ ಬಂಗಾರದ ಪದಕವನ್ನು ಪಡೆದರು. ಮುಂದೆ ಮುಂಬಯಿಯ ಡಿಪಾರ್ಟ್‌ಮೆಂಟ್ ಆಫ್ ಕೆಮಿಕಲ್ ಟೆಕ್ನಾಲಜಿಯಿಂದ B.Sc. (Tech.) in Dyes, ಪರೀಕ್ಷೆಯಲ್ಲಿ ೧ನೆಯ ವರ್ಗದಲ್ಲಿ ಪಾಸ್ ಆಗಿದ್ದಾರೆ.

೩. ಪದ್ಮನಾಭ ಭೀಮರಾವ ಪದಕಿ—ಇವರು ಹುಬ್ಬಳ್ಳಿಯವರು. ಹುಬ್ಬಳ್ಳಿಯ ನ್ಯೂ ಇಂಗ್ಲಿಷ್ ಸ್ಕೂಲಿನಿಂದ ಮ್ಯಾಟ್ರಿಕ್ ಪಾಸ್ ಆಗಿ, ಧಾರವಾಡ ಕರ್ನಾಟಕ ಕಾಲೇಜಿನಿಂದ ಬಿ. ಎಸ್‌ಸಿ. ೧ನೆಯ ವರ್ಗದಲ್ಲಿ ಪಾಸ್ ಆದರಲ್ಲದೆ, ಕಾಲೇಜಿಗೆ ೧ನೆಯ ನಂಬರು ಬಂದರು. ಮುಂದೆ ಮುಂಬಯಿಯ ಡಿಪಾರ್ಟ್‌ಮೆಂಟ್ ಆಫ್ ಕೆಮಿಕಲ್ ಟೆಕ್ನಾಲಜಿಯಿಂದ B.Sc. (Tech.) in Chemical Engineering ಪರೀಕ್ಷೆಯಲ್ಲಿ ೧ನೆಯ ವರ್ಗದಲ್ಲಿ ಪಾಸ್ ಆದರು.

ಹಿಂದಿನ ಸಾಲು (ಎಡದಿಂದ ಬಲಕ್ಕೆ)

೧. ಶ್ರೀ. ಎನ್. ರಾಘವೇಂದ್ರರಾವ್—ಇವರು ಸೇಲಂ ನಗರದವರು. ಬೆಂಗಳೂರಿನ St. Joseph ಕಾಲೇಜಿನಲ್ಲಿ I.Sc. ವರೆಗೆ ಅಭ್ಯಾಸ ಮಾಡಿ, ಅನಂತರ B.Sc. ಸಲುವಾಗಿ Presidency College, Madrasಕ್ಕೆ ಹೋದರು. ಅಲ್ಲಿ ಬಿ.ಎಸ್‌ಸಿ. ಮುಗಿದ ನಂತರ, ಮುಂಬಯಿಯ ಡಿಪಾರ್ಟ್‌ಮೆಂಟ್ ಆಫ್ ಟೆಕ್ನಾಲಜಿಯಿಂಯಿಂದ B.Sc. (Tech.) in dyes ಪರೀಕ್ಷೆಯಲ್ಲಿ ೧ನೆಯ ವರ್ಗದಲ್ಲಿ ಉತ್ತೀರ್ಣರಾದರಲ್ಲದೆ, ಆದರಲ್ಲಿ ೧ನೆಯ ನಂಬರಿನವರಾಗಿ ಬಂದರು.

೨. ಶ್ರೀ. ಗೋಪೀಜಂಪ ವೆಂಕಟರಾವ್ ಶಿರೂರ—ಇವರು ಹುಬ್ಬಳ್ಳಿಯವರು. ಹುಬ್ಬಳ್ಳಿಯ ನ್ಯೂ ಇಂಗ್ಲಿಷ್ ಸ್ಕೂಲ್‌ನಿಂದ ಮ್ಯಾಟ್ರಿಕ್ ಪರೀಕ್ಷೆ ಪಾಸಾದರು. I.Sc. ಕರ್ನಾಟಕ ಕಾಲೇಜಿನಲ್ಲಿ ಮುಗಿಸಿ, ಅನಂತರ ಫರ್ಗ್ಯುಸನ್ ಕಾಲೇಜಿಗೆ ಹೋದರು. ಅಲ್ಲಿಂದ ಬಿ. ಎಸ್‌ಸಿ. ಪರೀಕ್ಷೆಯನ್ನು ೧ನೆಯ ವರ್ಗದಲ್ಲಿ ಪ್ಯಾಸ್ ಮಾಡಿದರು. ಬಳಿಕ ಮುಂಬಯಿಯ ಡಿಪಾರ್ಟ್‌ಮೆಂಟ್ ಆಫ್ ಕೆಮಿಕಲ್ ಟೆಕ್ನಾಲಜಿಯಿಂದ B.Sc. (Tech.) in Chemical Engineering ಪರೀಕ್ಷೆಯಲ್ಲಿ ಪ್ರಶಸ್ತಿ ಪಡೆದು ಪಾಸಾದರು.

ಎಲ್ಲರೂ ಈಗ Research ಸಲುವಾಗಿ ಕೆಲಸಮಾಡುತ್ತಿದ್ದಾರೆ. ಇವರೆಲ್ಲರ ವಿಜ್ಞಾನತಜ್ಞತೆಯು ಲಾಭ ನಾಡಿಗೆ ಒದಗಲಿ



ಪಯಣದ ಹಾದಿಯಲ್ಲಿ

(ಸಾಮಾಜಿಕ ಕಾದಂಬರಿ)

ಎಸ್. ಅನಂತನಾರಾಯಣ ಬಿ. ಎ. (ಆನರ್ಸ್) ; ಉಷಾ ಸಾಹಿತ್ಯ ಮಾಲೆ ಮೈಸೂರು; ಪುಟ, ೧೫೪; ಬೆಲೆ: ೧—೦೨—೦.

ಸಂಪಾದಕರು ಹೇಳಿದಂತೆ ' ಪಯಣದ ಹಾದಿಯಲ್ಲಿ '— ಮುಲಮಗನೊಬ್ಬನ ದುಃಖಜೀವನ ಚಿತ್ರಿತವಾಗಿದೆ. ಕಾದಂಬರಿಯ ಹೆಸರೇ ಸೂಚಿಸುವಂತೆ ಮೂರ್ತಿಯು—ಕಾದಂಬರಿಯ ನಾಯಕ ವ್ಯಕ್ತಿ—ಬಾಳ ಪಯಣದಲ್ಲಿ ಎದುರಿಗೆ ಬಂದು ಹಿಂದೆ ಸರಿದ ವಿವಿಧ ವ್ಯಕ್ತಿಗಳ ಚಿತ್ರಪಟದಂತಿದೆ ಈ ಕೃತಿ. ಮೂರ್ತಿಗೆ ಚಿಕ್ಕಂದಿನಲ್ಲಿಯೇ ಮನೆಯಲ್ಲಿ ಮಲತಾಯಿ ಲಕ್ಷ್ಮಮ್ಮನ ಅನುದಾರ ವರ್ತನೆ, ತಂದೆ ರಾಮಣ್ಣನ ನಿಷ್ಕ್ರಿಯತೆಗಳಿಂದ ಕಷ್ಟ ಒದಗುತ್ತದೆ. ಆದರೆ ತಂದೆಯಿಂದ ಕೇಳಿ ತಿಳಿದ, ತನ್ನ ಸತ್ತುಹೋದ ತಾಯಿಯ ಆಶೆ-ಆಕಾಂಕ್ಷೆಗಳು ಅವನಲ್ಲಿ ಧ್ಯೇಯದ ಬೀಜವನ್ನು ಬಿತ್ತುತ್ತವೆ. ತಾಯಿಯ ನೆನಪಿನಲ್ಲಿದ್ದಾಗ—ತಾಯಿ ಇದ್ದಿದ್ದರೆ ತನ ಬಾಳು ಹೀಗಾಗುತ್ತಿತ್ತೇ ?—ಎಂದು ಚಿಂತಿಸುತ್ತಿರುವಾಗ, ಹುಚ್ಚನೊಬ್ಬ ಹುಚ್ಚು ಪುಚ್ಚಾಗಿ ಅರಚಿದ, " ಪ್ರಪಂಚ ಬಹಳ ಕೆಟ್ಟದ್ದು. ನಿನಗೆ ಬೇಕಾದುದನ್ನು ಕಿತ್ತುಕೊಳ್ಳುತ್ತದೆ. ನಿನ್ನನ್ನು ಮೋಸಗೊಳಿಸುತ್ತದೆ: ಹುಚ್ಚು ಪ್ರಪಂಚದಲ್ಲಿ ಯಾವುದೂ ಸರಿಯಿಲ್ಲ! " ಎಂಬ ಮಾತು ಬಹಳ ಸಮರ್ಪಕವೆನಿಸುತ್ತದೆ. ಮೂರ್ತಿಗೆ. ಇವೆ ಮಾತುಗಳನ್ನು ಮುಂದೆ ಒಂದು ಹೆಣ್ಣಿಗಾಗಿ ಜೀವನವನ್ನೇ ತೀರಸವಾಗಿಸಿಕೊಂಡ ಅವನ ಕಕ್ಷ ನಾರಾಯಣಪ್ಪನ ಬಾಯಿಂದಲೂ ಕೇಳುತ್ತಾನೆ. ಆದರಂತೆ ತನಗೆ ಒಲಿದ ಸರೋಜ ದೂರವಾದಾಗಲೂ ಇವೇ ಮಾತುಗಳನ್ನು ನೆನೆಯುತ್ತಾನೆ. ಹೀಗೆ ಮೂರ್ತಿ " ಬಾಳಿನ ಪಯಣದ ಹಾದಿಯಲ್ಲಿ ಹೀಗೆಯೇ ವಿವಿಧ ಅನುಭವಗಳೂ ಬಂದೇ ತೀರುವುವು. ಬಂದು ಪಾಸು-ಪಾಗುವುವು. ಆದರೆ ನಿರ್ವಾಣ ಮುಟ್ಟುವ ಕಸುವು ಮಾತ್ರ ಇರಬೇಕು" ಎಂದು ಒಂದು ನಿರ್ಣಯಕ್ಕೆ ಬರುವ. ಬಾಳೆಂಬುದು ರೈಲಿನ ಪ್ರಯಾಣವಿದ್ದಂತೆ. ಕಿಟಕಿಯ ಎದುರಿಗೆ ಹೋಗೆ ನೋಡುತ್ತ ಕುಳಿತ ವ್ಯಕ್ತಿಯು ಮುಂಜೆ ಒಂದೊಂದಾಗಿ ಹೊಲಗಳು, ಬೇಲಿಗಳು, ಕಾಡುಗಳು, ನದಿ, ಸೇತುವೆಗಳೆಲ್ಲಾ ಬಂದು ಮಾಯವಾಗುವಂತೆ, ಜೀವನದಲ್ಲಿ ವಿವಿಧ ವ್ಯಕ್ತಿ, ವಿವಿಧ ಪ್ರಸಂಗಗಳು ಬಂದು ಹೋಗುತ್ತವೆ.

ಮೂರ್ತಿಯ ಜೀವನದಲ್ಲಿ ಲಕ್ಷ್ಮಮ್ಮ, ರಾಮಣ್ಣ, ಪಾಸ್ಟರ್, ಅನಂತ, ಮೂರ್ತಾಚಾರ್ಯ, ಸರೋಜ, ಕಾಮಲೋಲುಪ ಕಮಲೆ, ಸೇಡು ತೀರಿಸಿಕೊಳ್ಳುವ ಸ್ವಭಾವದ ಮ್ಯಾನೇಜರ್ ಮೊದಲಾದವರು ಕಟು ಅನುಭವವನ್ನು ತಂದು ಕೊಟ್ಟಿದ್ದರೆ ನಾರಾಣಪ್ಪ, ಆದರ್ಶವನ್ನು ತೋರಿಸಿದ ಗುರು ಶಂಕರ, ವಾತ್ಸಲ್ಯವನ್ನು ತೋರಿಸಿದ ಗೆಳೆಯ ಶೇಷ ಇವರೆಲ್ಲರೂ ಸಹಾನುಭೂತಿಯನ್ನೂ ಜೀವನದಲ್ಲಿ ಕೆಚ್ಚನ್ನೂ ಬಿತ್ತಿದ ವ್ಯಕ್ತಿಗಳು. ಈ ಎಲ್ಲ ವ್ಯಕ್ತಿಗಳೂ ಮೂರ್ತಿಯ ಬಾಳಿನಲ್ಲಿ—ಲೇಖಕರಿಗೆ ಅವಶ್ಯವೆನಿಸಿದ ಕಾಲದಲ್ಲಿ—ಬಂದು, ಮಾಯವಾಗಿ ಹೋಗುವುವು. ಶಂಕರನು ಓದುಗರಿಗೆ ಮೊದಲೊಮ್ಮೆ ಕಂಡು, ಮುಂದೆ ಕಾದಂಬರಿಯ ಕೊನೆಯ ಭಾಗಕ್ಕೇನೇ ಮತ್ತೆ ಮುಖ ತೋರಿಸುವನು. ನಡು ನಡುವೆ ಮೂರ್ತಿಯ ನೆನಪಿನಿಂದಲೂ ಗೆಳೆಯರಲ್ಲಿಯ ಸಂಭಾಷಣೆಗಳಿಂದಲೂ ಶಂಕರನ ಪಾತ್ರವನ್ನು ಲೇಖಕರು ಅರಳಿಸಲು ಯತ್ನಿಸಿದ್ದಾರೆ; ಆದರೆ ಆದು ಮೂರ್ತಿಯ ಬಾಳಪಯಣದ ಓಟದಲ್ಲಿ ಕಂಡೂ ಕಾಣದಂತೆ ಏಂಚಿ ಮಾಯವಾಗಿ ಬಿಡುತ್ತದೆ. ಇದರಂತೆ—ರಾಮಣ್ಣನ ಪಾತ್ರವೂ ಹರಕು ಪರಕಾಗಿದೆ. ಮೊದಲಿದ್ದ ಪುತ್ರಪ್ರೇಮಿ ರಾಮಣ್ಣ ಮುಂದೆ ಉಳಿಯುವುದಿಲ್ಲ. ಚಿಕ್ಕ ಹೆಂಡತಿಯ ಆಳುಕಿಗೆ ಒಳಗಾಗಿ, ಮಗ ಮೂರ್ತಿಯನ್ನು ತಮ್ಮನ ಮನೆಗೆ ಕಳಿಸಿದ ತಂದೆಯು, ನಾಲ್ಕು ವರ್ಷ ಕಳೆದರೂ ಮಗನ ನೆನಪು ಇಲ್ಲದೆ ಬಾಳುತ್ತಾನೆ. ಮಗನು ಮನೆಗೆ ಬಂದಾಗ ತಟ್ಟನೆ ಗುರುತೂ ಹಿಡಿಯಲಾರ. ಮೊದಲು ಎತ್ತರದಲ್ಲಿ ಇದ್ದ ರಾಮಣ್ಣ, ಎರಡನೆಯ ಸಲ ನಮ್ಮ ಮುಂದೆ ಬರುವಾಗ ತೀರ ಕೆಳಗಿಳಿದಿರುತ್ತಾನೆ. ಇದೇ ರಾಮಣ್ಣ ನನ್ನು ತಮ್ಮನ ಮನೆಯಲಿಟ್ಟ ಮಗನ ಭೆಟ್ಟಿಗೆ ಕಳಿಸಿ, ನಡುನಡುವೆ ಸಕ್ರಮಗಳನ್ನು ಬರೆಯಿಸಿ. ಲೇಖಕರು ಇನ್ನೂ ಅರಳಿಸಬಹುದಿತ್ತು; ಆ ಪಾತ್ರದಲ್ಲಾದ ಮಾರ್ಪಾಡನ್ನು ಮೆಟ್ಟಲು ಮೆಟ್ಟಲಾಗಿ ತೋರಿಸಲೂ ಬಹುದಿತ್ತು.

ಕಾದಂಬರಿಯ ಪಾತ್ರರಚನೆಯಲ್ಲಿ, ಒಂದು ಮುಖ್ಯ ಪಾತ್ರದ ಸುತ್ತಲೂ ಆಗಾಗ ಹಲವು ವ್ಯಕ್ತಿಗಳು ಸುಳಿದು ಹೋದರೆ ಅಷ್ಟು ಚೆನ್ನಾಗಿರುವುದಿಲ್ಲ. ವಿಶಿಷ್ಟ ಸ್ವಭಾವದ—ವಿರೋಧ ಸ್ವಭಾವದ ಮೂರು ನಾಲ್ಕು ವ್ಯಕ್ತಿಗಳಾದರೂ ಮೊದಲಿನಿಂದ ಕೊನೆಯವರೆಗೆ ಬೆಳೆದು ಬಂದರೆ ಕೃತಿಗೆ ಹೆಚ್ಚಿ ಕಳೆಕಟ್ಟುತ್ತದೆ. ಇಲ್ಲಿ ಮೂರ್ತಿಯ ಜೊತೆಗೆ ಕೂಡಿ ಬಾಳುವಂತಹ ವ್ಯಕ್ತಿಗಳೆಲ್ಲ ಅವನಂತಹ ಒಲವಿನವರೇ ಆಗಿರುವರು. ತನಗೆ ಒಗ್ಗದ ವ್ಯಕ್ತಿಗಳಿಂದ ಮೂರ್ತಿಯೇ ಸಿಡಿದು ದೂರ ಸರಿದು ನಿಂತಿದ್ದಾನೆ. ಆದರಿಂದ ಕಾದಂಬರಿಯ ವಸ್ತುವಿನಲ್ಲಿ ಒಂದು ಬರಬೇಕಾದ

ಜಕಮಕಿಯು ಕಾವು ಬರುವುದಿಲ್ಲ. ಆದರ್ಶ ಸಾಧಕ ವ್ಯಕ್ತಿಯಾದ ಮೂರ್ತಿ, ಸಮಾಜದೊಡನೆ ಹೋರಾಡಿ ಮುಂದುವರಿಯುವೆ, ಮಗ್ಗುಲಾಗಿ ಮುಂದೆ ಹೋಗುವನು.

ಲೇಖಕರು ಮೊದಲಿನಿಂದಲೂ " ಬಾಳಿರುವುದು ಬಾಳುವುದಕ್ಕಾಗಿ. ಬಾಳನ್ನು ಬಾಳಬೇಕೇ, ಪೂರ್ಣವಾಗಿ ಬಾಳಬೇಕು. ನಿನ್ನೆ ನಡೆದುದಕ್ಕೆ ಪಶ್ಚಾತ್ತಾಪ ಪಡುವ ಬಾಳು ಬೇಡ. ಹೆಜ್ಜೆಯಿಟ್ಟುದನ್ನು ಹಿಂತೆಗೆಯಬೇಕಾಯಿತೆನ್ನುವ ಹೇಡಿ ಹೃದಯದ ಬಾಳು ಬಾಳಲ್ಲ! ತಾನು ನಡೆಸಿದುದಕ್ಕೆ ತಾನೇ ಹೊಣೆ, ತಾನು ಆದರ ಫಲವನ್ನನುಭವಿಸಲು ಸಿದ್ಧನೆನ್ನುವ ಕೆಚ್ಚೆದೆ ಬೇಕು.... ಅದೇ ಆದರ್ಶಬಾಳು! ಈ ಆದರ್ಶದ ನಡುವೆ ಎಡರು-ತೊಡರು ನೂರಾರು, ಹೆಜ್ಜೆಹೆಜ್ಜೆಗೂ ಹಾವು ಹೆಡೆ ತೋರಬಹುದು; ಹೂಂಕರಿಸಬಹುದು. ಆದರೆ ಕೆಚ್ಚೆದೆಯ ವೀರ, ತಾನು ನಂಬಿದ ಆದರ್ಶಕ್ಕಾಗಿ ಜೀವವನ್ನೇ ತನ್ನ ರಕ್ತದಲ್ಲಿ ತರ್ಪಣ ಬಿಡುವನೇ ಹೊರತು ಹಿಂದೆ ಬೀಳುವುದಿಲ್ಲ." ಎಂಬ ತತ್ತ್ವವನ್ನು ಶಂಕರ, ಮೂರ್ತಿ, ಶೇಷ ಈ ಮೂವರ ಬಾಳಿನಲ್ಲಿ ತೋರಿಸಲೆಳಸಿದ್ದಾರೆ. ಜಿನ್ನಾಗಿ ತೋರಿಸಿದ್ದಾರೆ ಕೂಡ. ಆದರೆ " ಸತ್ತ ಕತ್ತೆ ಕೂಡ ಪ್ರವಾಹದಗುಂಟ ಮುಂದುವರಿಯಬಹುದು; ಆದರೆ ಪ್ರವಾಹದ ವಿರುದ್ಧ ಈಜಲು ಧ್ಯೇಯವಾದಿಯಾದ ಮನುಷ್ಯನೇ ಬೇಕು " (೬೩-೧೦೭-೧೭) ಎಂಬ ಮಾತನ್ನು ಸತತ ಕಣ್ಣು ಮುಂದೆ ಇಟ್ಟುಕೊಂಡು ಸಾಗಿದ್ದಾರೆ. ಜಗತ್ತು ಸಮಾಜದ ವಿರುದ್ಧ ಹೋಗುವುದೇ ಒಂದು ಧ್ಯೇಯಸಾಧನೆ ಎನ್ನುವಂತೆ ಓದುಗರಿಗೆ ಭಾಸವಾಗುವಂತಿದೆ. ಇದಕ್ಕಿಂತ ಸ್ಪಷ್ಟವಾದ ಒಂದು ಆದರ್ಶವನ್ನು ಮೂರ್ತಿಯು ಎದುರಿಗೆ ಇಟ್ಟು, ಅದಕ್ಕಾಗಿ ಅವನನ್ನೂ ಅವನ ಗೆಳೆಯರನ್ನೂ ಪ್ರಯತ್ನಿಸಿ ಪಟ್ಟಿದ್ದರೆ ಇನ್ನೂ ಒಳ್ಳೆಯದಿತ್ತೇನೋ!

ಆದರೂ ಶ್ರೀ. ಎಸ್ ಅನಂತನಾರಾಯಣರ ಕಥೆಗಾರಿಕೆಯೂ, ಶೈಲಿಯು ಲಾಲಿತ್ಯವೂ ಯಾರೂ ಮೆಚ್ಚತಕ್ಕಂತಹವು. ಕಾದಂಬರಿಯು ಉದ್ದಕ್ಕೂ ಅಲ್ಲಲ್ಲಿ ತೋರುವ ಧ್ವನಿರಮ್ಯತೆಯು ಬಹು ಮನೋಹರವಾಗಿದೆ, ಭಾವಪೂರ್ಣವಾಗಿದೆ. ಲಕ್ಷ್ಮಮ್ಮ ಮಲಮಗನಾದ ಮೂರ್ತಿಯನ್ನು ಮನೆಯಿಂದ ಹೊರಗೆ ಹಾಕುವ ಸಂದರ್ಭದಲ್ಲಿ, ನೆರೆಮನೆಯ ಕಾವೇರಮ್ಮನಿಂದ, ನಿನ್ನೆ ಗುಡಿಯಲ್ಲಿ ನಡೆದ ಪುರಾಣವೆಂದು ರಾಮು ಕಾಡಿಗೆ ಹೊರಟಾಗ ಕೈಕೇಯಿಯು ಹತ್ತರ ಬಂದು ಕೌಸಲ್ಯೆ ಪರಿಪರಿ ಬೇಡಿಕೊಂದ ಕಥೆಯನ್ನು ವಿವರಿಸಿದುದೂ (೬೩) ಮುಂದೆ ಗೆಳೆಯ ಶಂಕರ ಆಗಲುವ ಸಂದರ್ಭ ಬರುವ ಸಮಯದಲ್ಲಿ ಮಾವಿನ ಮರದ ಮೇಲಿನ ಹಕ್ಕಿಗಳಲ್ಲೊಂದು ಮಾಯವಾಗುವುದೂ, ಉಳಿದ ಹಕ್ಕಿ ಕಳೆದುಹೋದ ಗೆಳೆಯನಿಗಾಗಿ ನೋವಿನಿಂದ ಕೂಗುವುದೂ (೧೪೩) ತುಂಬ ಅರ್ಥಪೂರ್ಣವಾದ ಚಿತ್ರಣಗಳು. ಇಂತಹ ಸಂದರ್ಭಗಳು ಕಾದಂಬರಿಯ ಉದ್ದಕ್ಕೂ ಹಲವಿವೆ, ಶ್ರೇಷ್ಠ ಕಲೆಗಾರಿಕೆಯ ಗುರುತಾಗಿವೆ, ಪಳಗಿದ ಲೇಖಣಿಕೆಯ ನಿದರ್ಶನಗಳಾಗಿವೆ

ಹೀಗೆಯೇ ಕಾದಂಬರಿಕಾರರಲ್ಲಿ ಬಾಳನ್ನು ಇಡಿಯಾಗಿ—ಸಮಷ್ಟಿ ದೃಷ್ಟಿಯಲ್ಲಿ ಕಾಣುವ ದೃಷ್ಟಿ ಬೆಳೆಯಲಿ; ಅದಕ್ಕೆ ಕನ್ನಡ ವಾಚಕರು ಕೊಂಡು ಓದಿ ಸಹಕಾರವನ್ನೀಯಲಿ.

—ಮಿರ್ಜಿ ಅಣ್ಣಾರಾಯ.

ಮಕ್ಕಳ ಪದ್ಯಾವಳಿ

ಬರೆದವರು: ಕೀಯುತರಂಗಳಾದ ಚಿನ್ನಪ್ಪ ಬಸವಲಿಂಗಪ್ಪ ಪಾವಟೆ, ಬಸವರಾಜ ಅಂಗಡಿ. ಪುಟ, ೬೪; ಬೆಲೆ: ೦-೪-೦.

ಕನ್ನಡದಲ್ಲಿ ಮಕ್ಕಳ ಸಾಹಿತ್ಯ ಈಗೀಗ ಬೆಳೆಯುತ್ತಿದೆ. ಅದನ್ನು ಬೆಳೆಯಿಸುವುದರಲ್ಲಿ ಮುಖ್ಯವಾಗಿ ಮುಂದಾಗಬೇಕಾದವರು ಪ್ರಾಥಮಿಕ ಶಿಕ್ಷಕರು; ಯಾಕೆಂದರೆ ಅವರು ದಿನದ ಹೆಚ್ಚು ಭಾಗವನ್ನು ಮಕ್ಕಳ ಸಹವಾಸದಲ್ಲಿಯೆ ಕಳೆಯುವುದರಿಂದ ಅವರ ಒಲವು, ಬುದ್ಧಿಯ ಮಟ್ಟಿಗಳನ್ನು ಅರಿತು ಬರೆಯಲು ಅವರಿಗೇ ಹೆಚ್ಚು ಅನುಕೂಲ. ಈ ಅನುಕೂಲತೆಯನ್ನು ಉಪಯೋಗಿಸಿಕೊಂಡವರಲ್ಲಿ ' ಮಕ್ಕಳ ಪದ್ಯಾವಳಿ ' ಯನ್ನು ರಚಿಸಿದ ಈ ಇಬ್ಬರು ಶಿಕ್ಷಕರು.

ಈ ಸಂಗ್ರಹದಲ್ಲಿ ಐವತ್ತು ಪದ್ಯಗಳು ಸೇರಿವೆ. ಪ್ರಾಥಮಿಕ ಶಾಲೆಯ ಕೆಳಗಿನ ತರಗತಿಗಳಿಗೆ ಅನುಕೂಲವಾಗುವ ಕೆಲವು ಪದ್ಯಗಳೂ ಮೇಲಿನ ತರಗತಿಗೆ ಹೇಳಿಕೊಡಲು ಅನುಕೂಲವಾಗುವ ಹಲವು ಪದ್ಯಗಳೂ ಇವೆ. " ಗುಬ್ಬಿಯ ಮದುವೆ " " ಆಟ " ಗಳನ್ನು ಹಿಡಿದುಕೊಂಡು " ಜೋಗದ ಜಲಪಾತ " " ಶಾಂತಿದೀಪ "ದವರೆಗೆ ವಿವಿಧ ಮಾದರಿಯ ಪದ್ಯಗಳಿವೆ. ಆದರಲ್ಲೂ ಪಠ್ಯಪುಸ್ತಕಗಳಲ್ಲಿ ಮಕ್ಕಳು ಕಲಿತ " ದೇವಗೆಂದು ಗುಡಿಯನೊಂದು ಕಟ್ಟುತಿರುವೆಯಾ ? " ಎಂಬ ಮಾದರಿಯ ಪದ್ಯದ ಮೇಲೆಯೇ ಹೆಣೆದ " ಮುಕ್ತಿಯೆಂದು ? " ಎನ್ನುವಂತಹ ಪದ್ಯಗಳೂ ಸೇರಿವೆ. ಮಕ್ಕಳು ಸಹಜವಾಗಿ ಹಾಡಿ ಕುಣಿಯಲು ಅನುಕೂಲವಾಗಿವೆ. ಚಿಕ್ಕ ಮಕ್ಕಳ ಶಿಕ್ಷಣ ಸಂತೋಷ-ಸಮಾಧಾನಗಳಿಂದ ಸಾಗಬೇಕಾದರೆ ಇಂಥ ಪದ್ಯಾವಳಿಗಳು ಅನೇಕ ಬೇಕು. ಅವುಗಳನ್ನು ಈ ಲೇಖಕರು ಇನ್ನೂ ಹೆಚ್ಚು ಹೆಚ್ಚಾಗಿ ನೀಡಲೆಂದು ನಮ್ಮ ಹಾರೈಕೆ.

—ಮಿರ್ಜಿ ಅಣ್ಣಾರಾಯ.

ಸಾದರ ಸ್ವೀಕಾರ

★

೫೦. **ಚಿತ್ರಕಲಾ ಶಿಕ್ಷಕ** (ಡ್ರಾಯಿಂಗ್ ಕಲಿಸುವುದರ ಸಲುವಾಗಿ ಬರೆದ ಗ್ರಂಥ). ಬರೆದವರು: ಶ್ರೀ. ಗೋಪಾಲ ಶ್ರೀನಿವಾಸರಾವ್ ಹುದ್ದಾರ, ಬಿ. ಕೆ. ಮಾಡೆಲ್ ಸ್ಕೂಲ್ ಬೆಳಗಾಂವಿ. ಪ್ರಕಾಶಕರು: ಕಾರ್ಯದರ್ಶಿ ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ. ಪುಸ್ತಕ ದೊರೆಯುವ ಸ್ಥಳ: 'ಜಯಂತಿ' ಕಾರ್ಯಾಲಯ, ಧಾರವಾಡ. ಕ್ರೌನ್ ಕ್ವಿದ ೧೦೦ ಪುಟಗಳು. ಬೆಲೆ ೩—೦—೦.

೫೧. **ಮೈಸೂರು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಯ ಸಚಿತ್ರ ವಾರ್ಷಿಕ ವರದಿ.** ಸಮಿತಿಯ ಕಾರ್ಯದರ್ಶಿಗಳಿಂದ ಬಂದಿದೆ. ಡೆ. ೪. ೪೮ ಪುಟಗಳು. ಕಳೆದ ವರ್ಷದ ಆದಾಯ-ವೆಚ್ಚದ ಪಟ್ಟಿಯೂ ಮುಂದಿನ ವರ್ಷದ ಮುಂಗಡ ಪತ್ರಿಕೆಯೂ (ಇಂಗ್ಲಿಷಿನಲ್ಲಿ) ಜೊತೆಗೆ ಇವೆ.

ಸಂಸ್ಥಾನದಲ್ಲಿ ಬೇರೆ ಬೇರೆ ಜಿಲ್ಲಾ ಸಮಿತಿಗಳನ್ನು ಮಾಡಿ, ಅವುಗಳ ಮುಖಾಂತರವಾಗಿ ವಯಸ್ಕರ ಶಿಕ್ಷಣ ಕಾರ್ಯವನ್ನು ವಿಧಾಯಕವಾಗಿ ಈ ಕೇಂದ್ರ ಸಂಸ್ಥೆ ನಡೆಯಿಸಿರುತ್ತದೆ. ವರದಿಯ ವರುಷದಲ್ಲಿ ಗಂಡಸರಿಗಾಗಿ ೩೭೦೬ ತರಗತಿಗಳು ಹೆಂಗಸರಿಗಾಗಿ ೩೩೫ ತರಗತಿಗಳು. ಹೊಸದಾಗಿ ಸ್ಥಾಪನೆಯಾದ ಪುಸ್ತಕ ಭಾಂಡಾರಗಳು ೩೭೬. ಜೊತೆಗೆ ಹಿಂದಿನ ವರ್ಷಗಳಲ್ಲಿ ಸ್ಥಾಪಿತವಾಗಿರುವ ೧೩೬೮ ಪುಸ್ತಕಭಂಡಾರಗಳನ್ನು ನಡೆಸಿಕೊಂಡು ಬಂದಿದೆ. ಗ್ರಾಮಪುಸ್ತಕ ಭಂಡಾರಗಳಿಗೆ ಒದಗಿಸಲು ೪ ಕೇಂದ್ರ ಪುಸ್ತಕಭಂಡಾರಗಳನ್ನು ಏರ್ಪಡಿಸಿದೆ. ಹಳ್ಳಿಯ ಕಾಲೇಜ್ ಒಂದನ್ನು ನಡೆಯಿಸುತ್ತಿದೆ. ಕಳೆದ ನೂರ್ತ ತಿಂಗಳಿಗೆ ಯುಗಿಯುವ ೯ ತಿಂಗಳಲ್ಲಾದ ಆದಾಯ ವೆಚ್ಚದ ಹಣ ೫, ೬೦, ೫೯೫ ರೂಪಾಯಿ ೭ ಪೈಗಳಿದೆ. ಹೊಸ ವರ್ಷದ ಮುಂಗಡ ಪತ್ರಿಕೆ ೬, ೭೮೦೦೦ ರೂಪಾಯಿ ಆದಾಯ-ವೆಚ್ಚಗಳದಿದೆ. ನಮ್ಮ ನಾಡಿನ ಒಂದು ಪ್ರಮುಖ ಪ್ರದೇಶದಲ್ಲಿ ಅಕ್ಷರಪ್ರಚಾರ ಕಾರ್ಯ ಇಷ್ಟೊಂದು ಭರದಿಂದ ನಡೆದುದು, ಕನ್ನಡಿಗರೆಲ್ಲ ಹೆಮ್ಮೆ ಪಡುವಂತಹ ಸಂಗತಿ.

೫೨. **Mysore shall be Literate** (ಪರಿಚಯಾತ್ಮಕ ಪ್ರಬಂಧ). ಬರೆದವರು: 'S. V. S.' ಮೈಸೂರು ಸ್ಟೇಟ್ ಅಡಲ್ಟ್ಸ್ ಎಜ್ಯುಕೇಶನ್ ಕೌನ್ಸಿಲ್, ಸರಸ್ವತೀ ಪುರಂ, ಮೈಸೂರು ಸಿಟಿ. ಡೆ. ೮. ೪ ಪುಟಗಳು.

ಅಖಿಲ ಭಾರತ ಪ್ರೌಢ ವಿದ್ಯಾದಾನ ಸಂಸ್ಥೆಯ ಸಮ್ಮೇಳನದ ನೆಯ ಅಧಿವೇಶನದಲ್ಲಿ ಓದಿದ ಪ್ರಬಂಧವಿದು. ಮೈಸೂರು ಸಂಸ್ಥಾನ ಈ ಶಿಕ್ಷಣ ಕ್ಷೇತ್ರದಲ್ಲಿ ಮಾಡಿದ ಪ್ರಗತಿಪರ ಕಾರ್ಯದ ಮಾದರಿಯನ್ನು ಇದರಿಂದ ಅರಿತುಕೊಳ್ಳಬಹುದು.

೫೩. **ಅಗಡಿಯ ಸಾಧುಗಳು** (ಸರಳ ರಗಳೆಯಲ್ಲಿ ವ್ಯಕ್ತಿ ಚಿತ್ರಣ) ಬರೆದವರು: ಶ್ರೀಮಾನ್ 'ಶ್ರೀನಿವಾಸ' ಅವರು. ದೊರೆವ ಸ್ಥಳ: ಶ್ರೀಶೈಪಾಜಲ ಗ್ರಂಥಮಾಲಾ, ಆನಂದವನ (ಧಾರವಾಡ ಜಿಲ್ಲಾ). ಕ್ರೌ. ಅ. ೩೦ ಪುಟಗಳು ಬೆಲೆ ೦-೪-೦.

೫೪. **ಶ್ರೀಶೈಷಾಜಲ ಸದ್ಗುರೂತ್ತಮರು** (ಜೀವನ ಪರಿಚಯ). ಲೇಖಕರು: ದಿವಂಗತ ವೆಂ. ತೀ. ಕುಲಕರ್ಣಿ, ಗಳಗನಾಥ ಅವರು. ಸಂಪಾದಕರು: ಶ್ರೀ. ಶಾಂತಾರಾಮ ಜೋಶಿ, ಆನಂದವನ. ಮೇಲಿನ ಶ್ರೀಶೈಪಾಜಲ ಸಾಹಿತ್ಯ ಸೇವಾ ಗ್ರಂಥಮಾಲೆಯ ಪ್ರಕಟನೆ. ಕ್ರೌ. ಅ. ೨೨ ಪುಟಗಳು. ಬೆಲೆ ೦—೪—೦.

೫೫. **ಪಂಚವರ್ಣ** (ಕಥಾಸಂಕಲನ) ಲೇಖಕರು: ಶ್ರೀ. ಕೆ. ಕೇಶವ, ಕುಮಾರ, ಉಡುಪಿ. ಪ್ರಕಾಶಕರು: ನವಭಾರತ ಪುಸ್ತಕ ಭಾಂಡಾರ, ಉಡುಪಿ. ಕ್ರೌ. ಅ. ೬೮ ಪುಟ. ಬೆಲೆ ೦—೬—೦.

೫೬. **ವಿಶ್ವಮೇಧ** (ರೂಪಕ) ಬರೆದವರು: ಶ್ರೀ. ಡಿ. ರೇಣುಕಾಚಾರ್ಯ, ಬಿ. ಎ. (ಆನರ್ಸ್) ಬೆಂಗಳೂರು. ಪ್ರಕಾಶಕರು: ಭಾರತೀ ಪ್ರಕಟನಾಲಯ, ಅವಿನ್ಯೂ ರೋಡ್, ಬೆಂಗಳೂರು ಸಿಟಿ. ಕ್ರೌ. ಅ. ೧೦೮ ಪುಟಗಳು. ಬೆಲೆ ೧-೮-೦.

೫೭. **ಕವಲಕೊಪ್ಪ** (ಉ. ಕನ್ನಡ) **ಗಜಾನನ ವಾಚನಾಲಯದ** (೧೯೪೬-೪೭) ವಾರ್ಷಿಕ ವರದಿ. ಗೌರವ ಕಾರ್ಯದರ್ಶಿ: ಶ್ರೀ. ಮಹಾಬಲೇಶ್ವರ ಗಣಪಭಟ್ಟ ಅಗ್ಗೆರೆ ಅವರು.

ವರದಿಯ ವರ್ಷದಲ್ಲಿ ಆದಾಯ ೯೧-೧೪-೦; ವೆಚ್ಚ ೯೦-೩-೦ ಚಿಕ್ಕದಿದ್ದರೂ ಅಚ್ಚುಕಟ್ಟಾಗಿ ನಡೆದಿದೆ. ಅಭಿನಂದನೆ.

೫೮. **ಜೊಟ್ಟಿಲು ತೂಗಿತು** (ಕತೆಗಳ ಸಂಕಲನ). ಬರೆದವರು: 'ತ. ರಾ. ಸಾ.' ಹೈದರಾಬಾದಿನ ಪದ್ಮಾ ಪ್ರಕಟನಾಲಯದ ಪ್ರಕಾಶನ. ನಿಜಾಂ ಕರ್ನಾಟಕ ವಿದ್ಯಾರ್ಥಿ ಸೇವಾ ಸಂಘದವರ ಪ್ರಕಾಶನ ಶಾಖೆಯಿದು ಕ್ರೌ. ಅ. ೭೪ ಪುಟಗಳು. ಬೆಲೆ ೧—೦—೦.

೫೯. **ಕಥಾವಳಿ** (ಮಾಸಪತ್ರಿಕೆಯ ವಾರ್ಷಿಕ ಸಂಚಿಕೆ). ಸಂಪಾದಕತ ಮತ್ತು ಪ್ರಕಾಶಕರು: ಶ್ರೀ. ಓಲೇಟೀ ವಿ ಗುಪ್ತ, ಬಳೇಪೇಟೆ, ಬೆಂಗಳೂರು ನಗರ. ಕ್ರೌ. ಅ. ೨೩೦ ಪುಟಗಳು. ಬೆಲೆ ೧—೦—೦.

ವಿಶೇಷ ಸಂಚಿಕೆಯನ್ನು ಪ್ರಕಟಿಸುವುದರಲ್ಲಿ ಕಥಾವಳಿಯ ಸಂಪಾದಕರು ಯಾವಾಗಲೂ ತಮ್ಮದೇ ಆದ ಒಂದು ವೈಶಿಷ್ಟ್ಯವನ್ನು ತೋರಿಸುತ್ತಿರುವರು. ಸಂಚಿಕೆಯ ಬಾಹ್ಯಾಂಗ ಸೌಂದರ್ಯ, ವಿಧವಿಧದ ಚಿತ್ರಗಳು, ಮುಖ್ಯ ಲೇಖಕ ಇತರೆಲ್ಲ ಚಿತ್ತಾಕರ್ಷಕವಾಗುವ ಸ್ಪರ್ಧೆಯನ್ನು ಏರ್ಪಡಿಸಿ, ಒಮ್ಮಮ್ಮಾನ ಪರಿಪರಿ ಕತೆಗಳನ್ನು ಇದರಲ್ಲಿ ಪ್ರಕಟಿಸಲಾಗಿದೆ. ನೋಡಿದರೆ ಬಿಡಲಾರದಂತಹ ಮೋಹಕತೆ ಈ ವಿಶೇಷ ಸಂಚಿಕೆಗುಂಟು.

ಆಕೆ ಕನ್ನಡಿಯೆದುರು ಬಹಳಕಾಲ ನಿಲ್ಲುತ್ತಾಳೆ.
ಆಕೆಯ ಕೂದಲು ಸುಂದರವಾಗಿರಲಿಕ್ಕೆ ಕಾರಣವೆಂದರೆ 'ಮುಕುಲ' ತೈಲವನ್ನು ಉಪಯೋಗಿಸತೊಡಗಿದುದು. ಕನ್ನಡಿಯೆದುರು ನಿಂತು ತನ್ನ ಜೆಲುವನ್ನು ಪಾನೇ ನೋಡಿ-ಪುದು ಆಕೆಗೊಂದು ಕೆಲಸ. ನೀವೂ ನಿಮ್ಮ ಕೂದಲಿಗೆ 'ಮುಕುಲ'ದ ಗಾಡಿಕೆ ಕಟ್ಟಿರಿ ! ಜೆಲುವನು ಗಳಿಸಿರಿ !
MUKUL
MOTHUSTA HAIR OIL BUT A HAIR TONIC TOO
AYURVEDASHRAM PHARMACY LTD., AHMEDNAGAR
AYD 13

ಡಿಪೊ, ಗಾಂಧೀ ಚೌಕು, ಧಾರವಾಡ. ಕ್ರೌ. ಅ. ೬೮ ಪುಟಗಳು. ಬೆಲೆ ೧—೦—೦.

೬೩. ಅಂತರಾತ್ಮ (ಕನ್ನಡ ಧಾರ್ಮಿಕ ಮಾಸಪತ್ರಿಕೆ). ಸಂಪಾದಕರು: ಸಂಜಾಲಕ 'ಅಂತರಾತ್ಮ' ೧೩೨ ನಾನೂ ಹೌಸ್, ಅಪೋಲೋ ಸ್ಟ್ರೀಟ್. ಫೋರ್ಟ್—ಮುಂಬಯಿ. ಡೆ. ೧೧ ೪೪ ಪುಟಗಳು. ವಾ. ಚಂ. ೬ ರೂಪಾಯಿಗಳು. ಬಿಡಿ ಸಂಚಿಕೆಗೆ ೦—೮—೦.

ಇದೇ ಮೊದಲನೆಯ ಸಂಚಿಕೆ. ಲೇಖನ ಪುದ್ಧಿ, ಮುದ್ರಣಶುದ್ಧಿಗಳ ಕಡೆಗೆ ಸ್ವಲ್ಪವೂ ಲಕ್ಷ್ಯ ಕೊಟ್ಟಿಲ್ಲ. ಕೊಡಬೇಕೆಂಬುದನ್ನು ನಾವೇನೂ ಹೇಳಬೇಕಾಗಿಲ್ಲ. ಸಂಸ್ಕೃತ ಅಪತ್ರಣಗಳೆಲ್ಲಂತೂ ಭಯಂಕರ ದೋಷಗಳಾಗಿವೆ. ಇದಲ್ಲವನ್ನೂ ಸರಿಪಡಿಸಿಕೊಂಡು, 'ಅಂತರಾತ್ಮ' ಬಹುಕಾಲ ಬಾಳಿ, ಕನ್ನಡಕ್ಕಾಗಿ ಕೆಲಸ ಮಾಡುತ್ತಿರಲಿ.

೬೪. ಭಾರತ ಸ್ವಾತಂತ್ರ್ಯಮಹೋತ್ಸವ ಕವನ ಮಾಲಾ (ಕವಿತೆಗಳು) ಬರೆದವರು: ಕರ್ನಾಟಕಾಂಧ್ರಕವಿ ಬಿ. ಭೀ ಮರಾಜು, ಚಿತ್ರದುರ್ಗ (ಮೈಸೂರು ಸಂಸ್ಥಾನ). ಲೇಖಕರೇ ಪ್ರಕಾಶಕರು. ಪೂ. ಅ. ೮ ಪುಟಗಳು.

೬೫. ಮುಂಬಯಿ ಮೊಗವೀರ ಯುವಕ ಸಂಘದ ೧೩ನೆಯ ವಾರ್ಷಿಕ ವರದಿ. ಕಾರ್ಯಾಲಯದ ವಿಳಾಸ: ಮೋಗವೀರ ಯುವಕ ಸಂಘ, ೬೯ ಜಟ್ಕರ್ ಗೇಟ್ ಸ್ಟ್ರೀಟ್, ಕೋಟೆ—ಮುಂಬಯಿ. ಡೆ. ಅ. ೬೮ ಪುಟಗಳು.

೬೬. ಬಸವಣ್ಣನವರ ಕ್ರಾಂತಿಕಾರ್ಯ (ಸರಿಜಯಾತ್ಮಕ ಗ್ರಂಥ). ಬರೆದವರು: ಶ್ರೀ. ಕ. ಕೆ. ಗಲಗಲಿ, ಸವದತ್ತಿ. ಪ್ರಕಾಶಕರು: ಶ್ರೀ. ಬಿ. ಜಿ. ಜೋಶಿ, ಭುವನೇಶ್ವರಿ ಮುದ್ರಣಾಲಯ, ಬೆಳಗಾಂವಿ. ಕ್ರೌ. ಅ. ೪೨ ಪುಟಗಳು; ಬೆಲೆ ೧೦—೦—೦.

೬೦. ಸಂಸಾರ ಚಿತ್ರ (ಕತೆಗಳ ಸಂಕಲನ ೨ನೆಯ ಆವೃತ್ತಿ). ಬರೆದವರು: 'ಆನಂದಕಂದ'ರು. ಪ್ರಕಾಶಕರು: ಶ್ರೀ. ರಂ. ರಾ. ದಿವಾಕರ, ಕಾರ್ಯದರ್ಶಿ ಕರ್ನಾಟಕ ಶಿಕ್ಷಣ ಸಮಿತಿ, ಹುಬ್ಬಳ್ಳಿ. ಕ್ರೌ. ಅ. ೧೬೮ ಪುಟ. ಬೆಲೆ ೨—೦—೦.

೬೧. ಕಿರ್ಲೋಸ್ಕರ್ (ಮರಾಠಿ ಮಾಸಪತ್ರಿಕೆಯ ಡಾಕ್ಟರ್ ಲೇಖಕ ವಿಶೇಷಾಂಕ). ವರ್ಷಾರಂಭದ ವಿಶೇಷಸಂಚಿಕೆಯಿದು. ಸಂಪಾದಕರು: ಶ್ರೀ. ಶಂ. ವಾ. ಕಿರ್ಲೋಸ್ಕರ್; ಪ್ರಕಾಶಕರು: ಕಿರ್ಲೋಸ್ಕರ್ ಬಂಧು ಲಿಮಿಟೆಡ್, ಕಿರ್ಲೋಸ್ಕರ್ ವಾಡಿ. ಡೆ. ೧೧ ೭೮ ಪುಟ; ಬೆಲೆ ೦—೧೨—೦.

'ಕಿರ್ಲೋಸ್ಕರ್' ಮಾಸಪತ್ರಿಕೆಯ ಡಾಕ್ಟರ್ ಲೇಖಕರೇ ಬರೆದ ಲೇಖನಗಳು, ಅವರ ಸಂಕ್ಷಿಪ್ತ ಸಚಿತ್ರ ಪರಿಚಯಗಳು ಇದರಲ್ಲಿ ಬಂದಿವೆ.

೬೨. ಗೋವಾಯಾತ್ರೆ ಮತ್ತು ಇತರ ಪರಟಿಗಳು (ಹರಟೆಗಳ ಸಂಕಲನ). ಬರೆದವರು: ಶ್ರೀವಾನ್ ಎನ್. ಎಸ್. ಗದಗಕರ, ಧಾರವಾಡ. ಪ್ರಕಾಶಕರು: ಭಾರತ ಬುಕ್-

---

(೧೪ನೆಯ ಪುಟದಿಂದ ಮುಂದುವರಿದುದು)

ಗುಬ್ಬಿಗಳು ತಮ್ಮ ಮಿಂಚುಗಣ್ಣನ್ನು ಕಸುವಿನಿಂದ ಅಪ್ಪಳಿಸಿದುವು. ಅವೇ ಈ ರಕ್ತದ ಹನಿಗಳು.

ಮುಗಿಯುತು ನನ್ನ ಕಥೆ. ನನ್ನ ಹೃದಯ ಸತ್ಯಪ್ರದರ್ಶಕ ಪೆಂದು ನನಗೆ ವ್ಯರ್ಥಾಭಿಮಾನವಿತ್ತು. ಅದು ಕೂಡ ನನ್ನನ್ನು ನಾನೇ ಮೋಸಗೊಳಿಸಿಕೊಂಡಿದ್ದೆ.

*

ಈ ಕರುಣಕಥೆಯ ಮೂಲಕರ್ತೃ ಏನೋ, ಎಲ್ಲಿಡೆಗೆ ನಿಶ್ಯಬ್ದ ಶಾಂತತೆ ಹಬ್ಬಿತ್ತು.

ಚಿತ್ರಕಲಾ ಪ್ರವೇಶ

ಮುಂಬೈ ವಿದ್ಯಾಖಾತೆಯವರು ಹೊಸತಾಗಿ ಏರ್ಪಡಿಸಿದ ಅಭ್ಯಾಸಕ್ರಮವನ್ನು ಅನುಸರಿಸಿ ರಚಿತವಾದುದು.

ಬರೆದವರು : ಶ್ರೀ. ಗೋಪಾಲ ಶ್ರೀನಿವಾಸರಾವ ಹುದ್ದಾರ
ಚಿತ್ರಕಲಾಧ್ಯಾಪಕ, ಬೆಳಗಾಂವಿ

ಮಾದರಿಗಾಗಿ ಒಂದು ಚಿತ್ರ ಪುಟವಿದು.







★

ಚಿತ್ರಕಲಾ ಶಿಕ್ಷಣದ ಬಗೆಗೆ
ಕನ್ನಡದಲ್ಲಿ
ಇಂತಹ ಪುಸ್ತಕವು
ಇನ್ನೊಂದಿಲ್ಲ.

★

ಚಿತ್ರಪಟಗಳ ಪೂರ್ಣ
ಪುಟಗಳೆ ೭೦ ಇರುವುವು.

★

ಅಲ್ಲದೆ ಪುಟಪುಟದಲ್ಲಿಯೂ
ಅಭ್ಯಾಸಚಿತ್ರಗಳ
ಸೂರೆ !

★

ವಸ್ತುಚಿತ್ರ, ಪ್ರಕೃತಿಚಿತ್ರ,
ಸ್ಮೃತಿಚಿತ್ರ, ಬಣ್ಣಗಳ
ಕೆಲಸ, ಮನುಷ್ಯಾಕೃತಿ,
ಸುಳುವಿನ ಕೆಲಸ
ಮೊದಲಾದ ವಿವರ ವಿಸರ-
ಗಳು ಇದರಲ್ಲಿ ಬಂದಿವೆ.

★

ಮಾರಾಟಕ್ಕೆ ಸಿದ್ಧವಾಗಿದೆ.
ಕ್ರೌನ್ ೧/೪ ೧೦೦ ನಟ
ಗಳು. ಮೂರು ಬಣ್ಣದ
ಚಿತ್ರವೊಂದು.
ಬೆಲೆ ಎರಡೇ ರೂಪಾಯಿ

★

ದೊರೆಯುವ ಸ್ಥಳ :
'ಜಯಂತಿ'
ಕಾರ್ಯಾಲಯ,
ಧಾರವಾಡ.

* *
*

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿ. ಧಾರವಾಡ

ಹೆಡ್ ಆಫೀಸ್ ಧಾರವಾಡ

★ ನಿಮ್ಮ ಮೂಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಭರದಿಂದ ಬೆಳೆಯುತ್ತಿರುವ ಈ ಕನ್ನಡ ಕಂಪನಿಯು ಪಾಲಿಸಿಯನ್ನೇ ಪಡೆಯಬೇಕು!

★ ಮೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.

★ ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಲಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸಿರುವುದರಿಂದ, ಎಲ್ಲರ ನಂಬಿಗೆಗೂ ತಕ್ಕುದಾಗಿದೆ.

★ ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲೇಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ಮ್ಯಾನೇಜಿಂಗ್ ಡಾಯರೆಕ್ಟರ್
ಎ. ಎಸ್. ಕಣಿ

ಮ್ಯಾನೇಜರ್
ಎಮ್. ಗೋವರ್ಧನರಾವ



ರೀಟಾ: ತಲೆಯ ಕೂದಲನ್ನು ಬೆಳೆಸುವುದು.

ರೀಟಾ ಮೆದುಳಿಗೆ ಶಕ್ತಿಯನ್ನು ಕೊಟ್ಟು, ಮಿರುಗುವ ನೀಳವಾದ ಕೂದಲನ್ನು ಬೆಳೆಯಲು ಆಶ್ಚರ್ಯವಾದ ಹೇರ್ ಟಾನಿಕ್.

ರೀ ಟಾ

ತಲೆಯ ಕೂದಲು ಉದುರುವುದು, ನೆರೆಯುವುದು, ಹೊಟ್ಟು, ಉದುರುವುದು, ಪಟ್ಟೆತಲೆ, ಹೇನಿನ ಬಾಧೆ, ಇವೇ ಮೊದಲಾದ ತಲೆಯ ಕೂದಲಿಗೆ ಸಂಬಂಧಿಸಿದ ಸಮಸ್ತ ವ್ಯಾಧಿಗಳಿಗೂ ರೀಟಾ ಆಶ್ಚರ್ಯವಾದ ಗುಣಕಾರಿ.

ಈಗಾಗಲೆ ಸಾವಿರಾರು ಜನ ಉಪಯೋಗಿಸಿ ಗುಣವನ್ನು ಹೊಂದಿದ್ದಾರೆ. ನೀವು ಕೂಡ ಇಂದಿನಿಂದಲೇ ರೀಟಾವನ್ನು ಉಪಯೋಗಿಸಿರಿ.

RITA
HAIR TONIC

ರೀಟಾ ಹಿಂದುಸ್ತಾನದಲ್ಲೆಲ್ಲಾ ದೊರಕುವುದು. ಬೆಲೆ:— ಸೀಸೆ ಒಕ್ಕೆ ೧೫ ಆಣೆ.

Printed by Mr. V. Y. Jathar at the Karnatak Printing Works, Dharwar, and Published for the Proprietors Jayanti Publications, by M. V. Melligatti at the Jayanti Office, Dharwar.—290-47.